ಸಂಪುಟ - ೨೩

ಸಂಚಿಕೆ - ೧, ೨, ೩, ೪

# ಪ್ರಬುದ್ಧ ಕರ್ಣಾಟಕ

ಸಂಪುಟ ೨೫ 

(ಸ್ವಭಾನು ಸಂವತ್ಸರ)



ಮೈಸೂರು:
ಮೈಸೂರು ವಿಶ್ವವಿದ್ಯಾನಿಲಯ
೧೯೪೪

ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸ್
ಮೈಸೂರು

# ವಿಷಯ ಸೂಚಿಕೆ

## ೧. ಕವನಗಳು—

## ೬. ಹರಟೆ— ಪುಟ

ಶ್ರೀ ಗಳಾದ



## ೭. ವಚನಗಳು—



## ೮. ಕಲೆ-ಕ್ರೀಡೆ—



## ೯. ಇತಿಹಾಸ ಸಂಶೋಧನೆ—



## ೧೦. ಜೀವನಚಿತ್ರ—



## ೧೧. ಕಾವ್ಯಾವಲೋಕನ—

i. ಖಗೇಂದ್ರ ಮಣಿದರ್ಪಣ (ಎನ್. ಅ), ಕೈವಲ್ಯದರ್ಪಣ (ಕೆ. ಜಿ. ಕುಂ), ರಾಜ್ಯಾದಾಯವೂ ಬಡತನವೂ (ಎಸ್. ಜಿ), ಗತಕಾಲದ ಗುರುತುಗಳು (ಎಸ್. ಎಸ್. ರಾ), ಆಯ್ದಕ್ಕಿಯ ಮಾರಯ್ಯ (ಕೆ. ವಿ).

ii. ಹೂವಿನ ಹಾಸಿಗೆ (ಎಂ. ವಿ. ಸೀ), ಬೆಟ್ಟದ ಜೀವ (ಆರ್. ಎಸ್. ರಾ).

iii. ಕನಸಿನ ಕೆಳದಿ (ಜಿ. ವ) ಮುದ್ದಿನ ಕಣಿ ಮತ್ತು ಬೇರೆ ಕತೆಗಳು (ಎಂ. ಎನ್. ಶಾಸ್ತ್ರಿ) ರೋಹಿಣಿ (ಎನ್. ಪ್ರ.ರಾ.).

iv. ಸಾಹಿತ್ಯರತ್ನ (ಕೋ. ಶಿ. ಕಾರಂತ), ಅಕ್ಕ ತಂಗಿ (ಎಸ್. ವಿ. ಪ. ಭಟ್ಟ), ವಿದ್ಯಾರ್ಥಿ ವಿಚಾರವಿಲಾಸ (ಮಂ.)



ಮಲೆನಾಡಿನ ಒಂದು ದೃಶ್ಯ

ಪ್ರಬುದ್ಧ
ಕರ್ಣಾಟಕ
215
ಸ್ವಭಾನು ಸಂವತ್ಸರ — ೯೫ — ವಿನಾಯಕನ ಸಂಚಿಕೆ

## ದೇವನೀನೈತಂದೆ

ಎನ್ನೆದೆಯ ಬಾಗಿಲನು ಮುಚ್ಚಿ ನಿದ್ರಿಸುತಿರ್ದೆ
ಜೀವನದಿ ತಿರುಳಿಲ್ಲವೆಂಬ ಭ್ರಮೆಯೊಳಗೆ;
ದೇವ ನೀನೈತಂದು ಬಾಗಿಲನು ಒಡಿಯೆ, ನಾಂ
ಸಿಡುಕಿನಿಂದಲಿ ಕೇಳ್ದೆ 'ಆರು ಅದು' ಎಂದು.—

ಮೌನದಲಿ ಮತ್ತೊಮ್ಮೆ ಶಬ್ದಮಾಡಲು ನೀನು
ನಾನೆದ್ದು ಕೋಪದಲಿ ಕೆಂಡದಂತಾಗಿ
'ಆರಿವನು ನಿದ್ರೆಯಲಿ ಭಂಗತಂದಿಹ ಧೂರ್ತ!'
ಎಂದು ಚಿಂತಿಸಿ ಬಂದು ಬಾಗಿಲನು ತೆರೆದೆ.—

ನಿನ್ನ ನೋಡುತಲೆನ್ನ ಕೋಪ ಕಣ್ಣೀರಾಯ್ತು,
ನಿನ್ನ ಮುಗುಳ್ನಗೆ ಮಿಂಚಿ ಎನ್ನಮನ ಸೆಳೆಯೆ
ಮೌನದಲಿ ಹೃದಯದಲಿ ತಳಮಳದಿ ತಪಿಸಿದೆನು
ನೀನೊಳಗೆ ಬರಬೇಕು ಎಂಬುದೆನ್ನಿಚ್ಛೆ.—

ನಸುನಕ್ಕು ಚಣಕಾಲ ಒಳಗೆ ದಿಟ್ಟಿಸಿನೋಡಿ
ಮುಂದಕ್ಕೆ ಹೊರಟೆ ನೀಂ, ದೇವದೇವ,
ನಿನ್ನ ಪುನರಾಗಮನಕಾಗಿ ಕಾಯುತಲಿರುವೆ
ಎದೆಯ ಬಾಗಿಲ ತೆರೆದು ಹೊಸ್ತಿಲಲಿ ನಿಂದು.—

## ಲಾಸ್ಯವಾಡುತಲಿತ್ತು—ಕವನ ನಾಲಿಗೆಯಾಗ

ಹೆಣ್ಣೀನ ಕುಡಿನೋಟ ಕಣಸಾಗ ಕುಣಿಧಂಗ
ನಾರಿಮೋರೆಮೇಲೆ ಕುರುಳು ಕೂದಲಿನ್ಹಾಂಗ
ಎಸಳೆಳೆ ನಗು-ಕೂಸು ತುಟಿಮೇಲೆ ಸುಳಿಧಂಗ
ಲಾಸ್ಯವಾಡುತಲಿತ್ತು—ಕವನ ನಾಲಿಗೆಯಾಗ.—

ಅಂತರ ಗಂಗೆಯು ಒಳಒಳಗೆ ಹರಿಯುತ್ತ
ಹೊಸಲು ಹೊಸಲ ರೂಪ ಹೊಂದಿ ಚಿಮ್ಮಿದಹಾಂಗ
ಎದೆಯಿಂದ ಹೊರಗಿಣಿಕಿ ಬುಗ್ಗಿಬುಗ್ಗಿಯು ಆಗಿ
ಲಾಸ್ಯವಾಡುತಲಿತ್ತು—ಕವನ ನಾಲಿಗೆಯಾಗ.—

ಬಾನಿನ ನಡುಗೆಜ್ಜೆ ಮೋಡಗಳ ಸರಪಣಿಯು
ಘುಲಿಘಾಲಿರೆಸುತಿರಲು—ಸವಿನವಿರಾಗಿರಲು
ಮೈಮಿಂಚಿ ಬೆಳಗಿರಲು—ಎದೆಯು ತುಂಬುತಲಿರಲು
ಲಾಸ್ಯವಾಡುತಲಿತ್ತು—ಕವನ ನಾಲಿಗೆಯಾಗ.—

## ಕವಿಯ ಕಣ್ಣು ತೆರೆಯುತಿತ್ತು

ಮನಸಿನಾಗಿನ ಭಾವಗಳಂತೆ
ಮರದ ಮೇಲಿನ ಚಿಗುರೆಲೆಯೆಲ್ಲ
ತೂರಿಬಂದ ಗಾಳಿಯಲ್ಲಿ
ಕುಣಿಯುತಿತ್ತು—ಬಳುಕಿ ಬಳುಕಿ—ಕುಣಿಯುತಿತ್ತು.

ತುಟಿಯು ಮೇಗಣ ಮುಗುಳಿನ ತೆರದಿ
ಸುತ್ತ ಹಾಸಿದ ಹಸುರಿನ ಮೇಲೆ
ಹಾರಿಬಂದ ಚಿಟ್ಟೆದಂಡು
ಜಿಗಿಯುತಿತ್ತು—ನಲಿದು ನಲಿದು—ಜಿಗಿಯುತಿತ್ತು.

ಮೋರೆಮೇಲಿನ ಕುರುಳಿನ ಹಾಗೆ
ಗಾಳಿಯಲ್ಲಿನ ಪದರದ ಮೇಲೆ
ಗಿಡದ ಪೊಟರೆ ಕೊಟ್ಟನಾದ
ಸಾರುತಿತ್ತು—ಅತ್ತ ಇತ್ತ—ಸಾರುತಿತ್ತು.

ಹೆಣ್ಣಿ ಕಣ್ಣಿನ ಕರುಣೆಯ ಭರದಿ
ಬಣ್ಣವಾಸಿದ ಭೂಮಿಯ ಮೇಲೆ
ರವಿಯ ಕಿರಣ ಹೊಳೆಯುತಿರಲು
ತೆರೆಯುತಿತ್ತು—ಕವಿಯ ಕಣ್ಣು—ತೆರೆಯುತಿತ್ತು.

## ಅರಿತವರು ಆರು?

ಜಗವೊಂದು ಬಂದರೀ ಜೀವಸಾಗರದಲ್ಲಿ
ಹಡಗುಗಳು ಐತಂದು ಕೂಡುವುವು ದಿನವು
ತೆರತೆರದ ಜನರಿಹರು, ವಿಧವಿಧದ ಭಾಷೆಗಳು
ಸಂಧಿಸುತ ಚಣಕಾಲ ಮೆರೆಯುವುವು ಅಲ್ಲಿ.—

ನಾಲ್ಕು ದಿನಗಳ ಜೀವ, ಒಂದಿರುಳ ಪ್ರೇಮ
ಮುಂದೆಲ್ಲಿಗೋ ಪಯಣ, ಎಂದೊ ಮಿಲನ?
ಪಯಣದಲಿ ಸಾಗರದಿ ಕಡು ತೆರದ ಕಷ್ಟಗಳು
ಆಗುವುದು ಮುಂದೇನೊ ಅರಿತವರು ಆರು?—

ಅನಂತ.

# ನಿಜದನುಡಿ

ಪರಿಪರಿಯ ಲೋಕದಲಿ ಪರಿದು ಪಲವಿಷಯಗಳ
ತಿರುಹಿನಲಿ ತೂರಿ ತಿಗ್ಮಾಂಶು ಬಾಧಿತನಂತೆ
ಬರಮಾಡಿಕೊಂಬೆಯೆಂಬೊಂದು ಬಯಕೆಯೊಳಿಂದು
ಕರು ತಾಯ ಕಾಂಬ ತೆರದಿ |

ತಿರುಗಿ ನಿನ್ನಯ ನೆಳಲನಾಶ್ರಯಿಸ ಬಂದೆನಿದೊ
ತೆರೆದೆದೆಯೊಳಿಲೆ ಗೆಳೆಯ ಹಸಿದು ನೇಹದ ನುಡಿಗೆ
ಹೆರರ ಹಾರೈಸಿದೊಡೆ ಬರಿನೀರ ಕಡೆದಂತೆ
ಎಂಬ ಸೊಲ್ಲೆನ್ನದಾಯ್ತು ||

ಅಳಿನಂಟು ಬೇಕೆಂದರೆಲ್ಲೆಲ್ಲಿಯೂ ಉಂಟು
ಉಳಿನಂಟು ದಿವಿಜರಿಗು ವಿರಳವೈ ಕರಣಗಳು
ಕಳವಳಿಸಿ ಕತ್ತಲೆಯನಾಳುತಿರೆ ಬಂದೆನಿದೊ
ಜೀವನಾಧಾರಕಾಗಿ |

ತಿಳಿವು ಚೆಲುವುಗಳೆಲ್ಲ ದೊರೆಕೊಂಡರಿಲ್ಲಿ ತಿಂ
ಗಳವೊಲಾತ್ಮಕೆ ಶಾಂತಿಯೀವ ಸಹೃದಯಭಾವ
ದೊಳುವಾತು ಕಾಣದಾಯ್ತಯ್ಯ ನೇಹಿಗರರಸ
ಹುಡುಕಿ ಹುಚ್ಚಾಗಿಹೋದೆ ||

ಅರಸಿದರು ನನ್ನೆದೆಯ ಮಿಡಿತಕನುಗುಣವಪ್ಪ
ಸರಸಿ ಕಾಣನು ನಿನ್ನನುಳಿದು ಜೀವಕೆ ಜೀವ
ಬೆರಸಿಮಾತಾಡಲೆಂದಿತ್ತ ಹರಿದೈತಂದೆ
ಬಾ ಗೆಳೆಯ ಕರೆವೆನೊಲಿದು |

ನೆರವೆನಗೆ ನೀನು ನಿನಗಾನೆಂದು ಬಗೆದು ಒಂ-
ಧುರವಾಗಿ ಸಂಸೃಷ್ಟಿಯಂತೆ ಬಾಳುವ ಬಾರ
ಧರೆ ಮುಗಿಲು ರವಿ ಚಂದ್ರ ತಾರೆಗಳನೊಡಗೊಂಡು
ಹರ್ಷಸಂಫುಲ್ಲರಾಗಿ ||

ಬಿ. ಎಚ್. ಶ್ರೀಧರ.

# ‘ಧ್ವನಿ’

ಸಂಸ್ಕೃತ ಸಾಹಿತ್ಯವಿಮರ್ಶೆಯ ಐದು[1] ಪ್ರಸ್ಥಾನಗಳಲ್ಲಿ ಧ್ವನಿ ಪ್ರಸ್ಥಾನಕ್ಕೆ ಅತ್ಯಂತ ಪ್ರಾಶಸ್ತ್ಯವು ದೊರಕಿದೆ. ಈ ವಿಮರ್ಶನ ಮಾರ್ಗವು ಸುಮಾರು ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿ ಪ್ರಾಚುರ್ಯಕ್ಕೆ ಬಂದು ಅಲ್ಲಿಂದೀಚೆಗೆ ಎಲ್ಲರ ಮೆಚ್ಚುಗೆಯನ್ನೂ ಪಡೆದಿದೆಯೆನ್ನಬಹುದು.[2] ಧ್ವನಿ ಎಂದರೇನು? ಸಾಹಿತ್ಯವಿಮರ್ಶೆಯಲ್ಲಿ ಧ್ವನಿಮಾರ್ಗವು ಹೇಗೆ ಹುಟ್ಟಿತು? ಇದು ಇಷ್ಟು ಮಟ್ಟಿನ ಮೆಚ್ಚುಗೆಯನ್ನು ಪಡೆಯಲು ಕಾರಣಗಳೇನು? ಈ ಮಾರ್ಗಕ್ಕೂ ಮಿಕ್ಕ ನಾಲ್ಕು ಪ್ರಸ್ಥಾನಗಳಿಗೂ ಇರುವ ಸಂಬಂಧವೇನು? ಎಂಬಿವೇ ಮೊದಲಾದ ವಿಷಯಗಳನ್ನೊಳಗೊಂಡ ‘ಧ್ವನಿ’ಮಾರ್ಗದ ಚರಿತ್ರೆಯನ್ನೂ ಅದರಲ್ಲಿ ಪ್ರತಿಪಾದಿಸಲ್ಪಟ್ಟಿರುವ ಕಾವ್ಯತತ್ವವನ್ನೂ ಈ ಲೇಖನದಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ.

ಸಾಮಾನ್ಯ ವ್ಯವಹಾರದಲ್ಲಿ ‘ಧ್ವನಿ’ ಎಂದರೆ ‘ಸದ್ದು’ ಎಂದು ಅರ್ಥವಾಗುತ್ತದೆ.[3] ಆದರೆ ಸಾಹಿತ್ಯವಿಮರ್ಶೆಯಲ್ಲಿ ‘ಧ್ವನಿ’ ಶಬ್ದಕ್ಕೆ ಬಹಳ ವಿಶಾಲವೂ ಹೃದಯಂಗಮವೂ ಆದ ಅರ್ಥವು ಬಳಕೆಯಲ್ಲಿದೆ. ವ್ಯಾವಹಾರಿಕವಾದ ಅರ್ಥಕ್ಕೂ ವಿಮರ್ಶಕರ ಅರ್ಥಕ್ಕೂ ಸಂಬಂಧವಿಲ್ಲದೆ ಇಲ್ಲ. ಘಂಟೆಯನ್ನು ಬಾರಿಸಿದಾಗ ಮೊದಲು ಹೊರಟ ಸದ್ದು ಅನುರಣನ ರೂಪದಲ್ಲಿ ಬಹಳ ಹೊತ್ತು ಕೇಳಿಬರುವುದಷ್ಟೆ. ಆ ಅನುರಣನಕ್ಕೆ ಕಾವ್ಯದ ಮುಖ್ಯಾರ್ಥದಿಂದ ಹೊರಪಡುವ ವ್ಯಂಗ್ಯಾರ್ಥವನ್ನು ಹೋಲಿಸಿ ಅದನ್ನು ‘ಧ್ವನಿ’ಯೆಂದು ವ್ಯವಹರಿಸುತ್ತಾರೆ.

‘ಧ್ವನಿ’ ಎಂದರೆ ಏನೆಂಬುದನ್ನು ಒಂದು ಉದಾಹರಣೆಯ[4] ಮೂಲಕ ಸುಲಭ

---

[1] ರಸ, ಅಲಂಕಾರ, ರೀತಿ, ವಕ್ರೋಕ್ತಿ ಮತ್ತು ಧ್ವನಿ.

[2] ಮಹಿಮಭಟ್ಟ, ಪ್ರತೀಹಾರೇಂದುರಾಜ, ಭಟ್ಟನಾಯಕ ಮೊದಲಾದ ಕೆಲವರು ಈ ಮತವನ್ನು ಖಂಡಿಸಿರುತ್ತಾರೆ. ಆದರೂ ಸಾಮಾನ್ಯವಾಗಿ ಈ ಕಾವ್ಯತತ್ವವು ಎಲ್ಲರಿಗೂ ಒಪ್ಪಿದೆಯೆನ್ನಬಹುದು.

[3] ಉದಾಹರಣೆ—ಘಂಟೆಯ ಧ್ವನಿ, ಶಂಖಧ್ವನಿ, ಪಟಹಧ್ವನಿ, ಇತ್ಯಾದಿ.

[4] ಸೌಕರ್ಯಕ್ಕಾಗಿ ಸಂಸ್ಕೃತದ ಉದಾಹರಣೆಯನ್ನೇ ಆರಿಸಿಕೊಳ್ಳಲಾಗಿದೆ. ಆದರೆ ಈ ವಿಧವಾದ ಪ್ರಯೋಗಗಳು ಎಲ್ಲ ಭಾಷೆಗಳಲ್ಲೂ ಕಂಡುಬರುತ್ತವೆ. ಕನ್ನಡದ ಉದಾಹರಣೆಗಳಿಗೆ “ಕನ್ನಡ ಕೈಪಿಡಿ” ಪುಟ ೩೧೯ ನೋಡಿ. ಶ್ರೀಮಾನ್ ಕೆ. ವಿ. ಪುಟ್ಟಪ್ಪನವರ “ನವಿಲು” ಎಂಬ ಗ್ರಂಥದ—(೬೫ ನೆಯ ಪುಟ)—“ಪವನಮಾರ್ಗದ ಪುಣ್ಯಯಾತ್ರಿಕ, ನಿನ್ನ ಕಾಶಿಯದಾವುದು?” ಎಂಬ ವಾಕ್ಯವು ಒಂದು ಉದಾಹರಣೆ.

ವಾಗಿ ತಿಳಿದುಕೊಳ್ಳಬಹುದು. ಸಂಸ್ಕೃತದಲ್ಲಿ 'ಗಂಗಾಯಾಂ ಘೋಷಃ' ಎಂಬ ವಾಕ್ಯಕ್ಕೆ 'ಗಂಗೆಯಲ್ಲಿ ಹಳ್ಳಿ' ಎಂಬುದು ಪದಶಃ ಅರ್ಥ. ಯಾವುದೋ ಒಂದು ಹಳ್ಳಿಯ ವಿಚಾರವಾಗಿ ಒಬ್ಬನು ಹೀಗೆ ಹೇಳಿದ ಎಂದುಕೊಳ್ಳೋಣ. ಆಗ ಇದನ್ನು ಕೇಳಿದವನು "ಇದೇನು; ಗಂಗೆಯಲ್ಲಿ ಹಳ್ಳಿ ಎಂದರೇನು? ಇದು ಶುದ್ಧ ಅಸಂಬದ್ಧವಲ್ಲವೆ?" ಎಂದು ಯೋಚಿಸಿ ಆ ವಾಕ್ಯದಿಂದ "ಗಂಗೆಯ ತೀರದಲ್ಲಿ" ಹಳ್ಳಿಯಿದೆಯೆಂದು ಅರ್ಥಮಾಡಿಕೊಳ್ಳುತ್ತಾನೆ. ಗಂಗೆಯ ಪ್ರವಾಹದಲ್ಲಿ ಹಳ್ಳಿ ಇರುವುದು ಅಸಂಭವವಾದ್ದರಿಂದ ಆ ಹಳ್ಳಿಯು ಗಂಗೆಗೆ ಅತ್ಯಂತ ಸಮೀಪದಲ್ಲಿ, ಎಂದರೆ ತೀರದಲ್ಲಿ ಇರಬೇಕು ಎಂಬ ಆಲೋಚನೆಯೇ ಈ ರೀತಿಯಾಗಿ ಅರ್ಥಮಾಡಿಕೊಳ್ಳುವುದಕ್ಕೆ ಕಾರಣವೆನ್ನಬಹುದು. ಈಗ ಒಂದು ವಿಚಾರವಿದೆ. ಗಂಗೆಯ ಸಮೀಪದಲ್ಲಿ ಹಳ್ಳಿಯಿದೆಯೆಂದು ಹೇಳುವ ಅಭಿಪ್ರಾಯವಿರುವಾಗ 'ಗಂಗೆಯಲ್ಲಿ ಹಳ್ಳಿ' ಎಂದು ಏಕೆ ಹೇಳಬೇಕು? ಶಬ್ದಪ್ರಯೋಗವು ನಮ್ಮ ಅಧೀನದಲ್ಲಿ ತಾನೆ ಇರುವುದು! ಎಂಬ ಆಶಂಕೆಯು ಹುಟ್ಟುತ್ತದೆ. "ಗಂಗಾತೀರದಲ್ಲಿ ಹಳ್ಳಿ" ಯಿದೆಯೆಂದು ತಿಳಿಸುವುದಕ್ಕೋಸ್ಕರ "ಗಂಗಾಯಾಂ ಘೋಷಃ" ಎಂದು ಶಬ್ದ ಪ್ರಯೋಗಮಾಡುವುದರಲ್ಲಿ ಒಂದು ಪ್ರಯೋಜನವಿದೆ 'ಗಂಗಾಯಾಂ ಘೋಷಃ' ಎಂದು ಹೇಳುವವನು ಹಳ್ಳಿಯ ವಿಚಾರವಾಗಿ ಯಾವುದೋ ಒಂದು ಭಾವನೆಯನ್ನು ಮನಸ್ಸಿನಲ್ಲಿಟ್ಟಿರುತ್ತಾನೆ. ಅದನ್ನು ಈ ಶಬ್ದಗಳಿಂದ ಸಾಕ್ಷಾತ್ತಾಗಿ ತಿಳಿಸಲು ಸಾಧ್ಯವಿಲ್ಲ. ಬೇರೆ ಶಬ್ದಗಳಿಂದ ತಿಳಿಸಲು ಪ್ರಯತ್ನಪಟ್ಟಲ್ಲಿ ಆ ಭಾವನೆಯ ಬೆಲೆಗೂ ರಮ್ಯತೆಗೂ ಕುಂದು ಬರುತ್ತದೆ. ಆದಕಾರಣ ತನ್ನ ಮನಸ್ಸಿನಲ್ಲಿರುವ ಭಾವನೆಯು ಅದೇ ರೀತಿ ಇತರರ ಮನಸ್ಸಿನಲ್ಲಿಯೂ ಉಂಟಾಗಬೇಕೆಂಬ ಅಭಿಪ್ರಾಯದಿಂದ ವಕ್ತೃವು ಅದಕ್ಕನುಕೂಲವಾಗುವಂತೆ ಶಬ್ದಪ್ರಯೋಗವನ್ನು ಮಾಡಿ ಆ ಅಮೂಲ್ಯವಾದ ಭಾವನೆಯನ್ನು ಪ್ರತಿಪಾದಿಸುತ್ತಾನೆ. "ಗಂಗೆಯಲ್ಲಿ ಹಳ್ಳಿ"! ಗಂಗೆಯಲ್ಲೇ ಇದ್ದಹಾಗೆ; ಅಷ್ಟು ಹತ್ತಿರ; ಅದರಿಂದಲೇ ಆ ನಿರತಿಶಯವಾದ ಪವಿತ್ರತೆ ಮತ್ತು ಶೀತಲತ್ವ, ಇತ್ಯಾದಿ ಭಾವನೆಗಳು "ಗಂಗಾಯಾಂ ಘೋಷಃ" ಎಂಬ ಒಂದೇ ಒಂದು ವಾಕ್ಯದಿಂದ ಶ್ರೋತೃವಿನ ಮನಸ್ಸಿಗೆ "ಶೀಘ್ರವಾಗಿ ಬರುತ್ತವೆ. ಗಂಗಾತೀರದಲ್ಲಿ ಹಳ್ಳಿಯಿದೆಯೆಂದು ಯಥಾವತ್ತಾಗಿ ಹೇಳಿದರೆ ಈ ಭಾವನೆಗಳು ಬರುತ್ತವೋ ಇಲ್ಲವೋ. ಮೈಸೂರು ಕಾವೇರಿ ತೀರದಲ್ಲಿದೆಯೆಂದರೆ ತಪ್ಪಾಗಲಾರದು; ಹಾಗೆ ಹೇಳುವುದೂ ಉಂಟು. ಆದರೆ ಕಾವೇರಿಯಲ್ಲೇ ಇದೆಯೆನ್ನಬಹುದಾದದ್ದು ಶ್ರೀರಂಗಪಟ್ಟಣವೇ ಹೊರತು ಮೈಸೂರಲ್ಲ ಎಂದ ಮೇಲೆ 'ಗಂಗೆಯ ತೀರದಲ್ಲಿ ಹಳ್ಳಿ' ಎನ್ನುವುದಕ್ಕೂ 'ಗಂಗೆಯಲ್ಲಿ ಹಳ್ಳಿ' ಎನ್ನುವುದಕ್ಕೂ ಎಷ್ಟು ವ್ಯತ್ಯಾಸವಿದೆಯೆನ್ನುವುದನ್ನು ಸುಲಭವಾಗಿ ಮನಗಾಣಬಹುದು.

ಹಳ್ಳಿಯ ವಿಚಾರದಲ್ಲಿ ವಕ್ತೃವಿನ ಮನಸ್ಸಿನಲ್ಲಿರುವ ಆದರೆ ಪ್ರಯುಕ್ತವಾದ ಶಬ್ದಗಳ ಸಾಮಾನ್ಯವಾದ ಶಕ್ತಿಯಿಂದ ಹೊರಪಡದಿರುವ 'ಶೀತಲತ್ವ' 'ಪಾವನತ್ವ' ಗಳಿಗೆ 'ಧ್ವನಿ' ಅಥವಾ ವ್ಯಂಗ್ಯಾರ್ಥವೆಂದು ಹೆಸರು. "ಗಂಗಾಯಾಂ ಘೋಷಃ" ಎಂಬ ವಾಕ್ಯಕ್ಕೆ ಮೊದಲು ತೋರುವ "ಗಂಗೆಯಲ್ಲಿ ಹಳ್ಳಿ" ಎಂಬ ಅರ್ಥಕ್ಕೆ ವಾಚ್ಯಾರ್ಥವೆಂದು ಹೆಸರು. ವಾಚ್ಯಾರ್ಥದಲ್ಲಿನ ವಿರೋಧದಿಂದ ಹೊರಡುವ ಪರಿಷ್ಕೃತವಾದ 'ಗಂಗಾತೀರದಲ್ಲಿ ಹಳ್ಳಿ' ಎಂಬ ಅರ್ಥಕ್ಕೆ ಲಕ್ಷ್ಯಾರ್ಥವೆಂದು ಹೆಸರು. ಶಬ್ದಪ್ರಯೋಗವು ನಮ್ಮ ಅಧೀನವಾಗಿರುವಾಗ ಗಂಗಾತೀರದಲ್ಲಿ ಹಳ್ಳಿ ಯಿದೆಯೆನ್ನುವುದಕ್ಕೆ ಬದಲಾಗಿ 'ಗಂಗೆಯಲ್ಲಿ ಹಳ್ಳಿ' ಇದೆಯೆಂದು ಹೇಳುವುದರ ಪ್ರಯೋಜನ ಶಂಕೆಯಿಂದ ತೋರುವ, 'ಶೀತಲತ್ವ, ಪಾವನತ್ವ' ರೂಪವಾದ ಅರ್ಥಕ್ಕೆ ಧ್ವನಿ, ವ್ಯಂಗ್ಯಾರ್ಥ, ಗಮ್ಯಾರ್ಥ, ಪ್ರತೀಯಮಾನಾರ್ಥ ಎಂದು ಅನೇಕ ವಿಧ ವಾಗಿ ವ್ಯವಹಾರವಿದೆ. ವಾಚ್ಯಾರ್ಥ, ಲಕ್ಷ್ಯಾರ್ಥ ಮತ್ತು ವ್ಯಂಗ್ಯಾರ್ಥಗಳ ಸ್ವರೂಪವನ್ನೂ ಪರಸ್ಪರ ಭೇದವನ್ನೂ ಕಡೆಯವರೆಗೂ ಮನಸ್ಸಿನಲ್ಲಿಡಬೇಕಾದ್ದು ಆವಶ್ಯಕ. ಇದರ ಜೊತೆಗೆ ಇನ್ನೊಂದು ವಿಚಾರವನ್ನೂ ಗಮನಿಸಬೇಕು. ಒಂದು ಪದದಿಂದ ಒಂದು ಅರ್ಥವು ಹೊರಡಬೇಕೆಂದು ಸಾಮಾಜಿಕ ಸಂಕೇತವೋ ಈಶ್ವ ರೇಚ್ಛೆಯೋ[1] ಇದೆ. ಭಾಷೆಗಳೆಲ್ಲವೂ ಈ ನಿಬಂಧನೆಗೆ ಒಳಪಟ್ಟಿವೆ. ಈ ವಿಧವಾದ ಸಂಕೇತಕ್ಕನುಸಾರವಾಗಿ ಹೊರಡುವ ಅರ್ಥಕ್ಕೆ 'ಅಭಿಧೇಯ' ಅಥವಾ ವಾಚ್ಯಾರ್ಥ ವೆಂದು ಹೆಸರೆಂಬುದನ್ನು ಮೇಲೆ ತಿಳಿಸಿದೆ. ಒಂದು ಫಲವು ಉತ್ಪನ್ನವಾಗಬೇಕಾದರೆ ಒಂದು 'ವ್ಯಾಪಾರ' ಅಥವಾ ಕ್ರಿಯೆಯು ಆವಶ್ಯಕ. ಕಾರ್ಖಾನೆಗಳಲ್ಲಿ ಪದಾರ್ಥಗಳು ತಯಾರಾಗಬೇಕಾದರೆ ಯಂತ್ರಗಳ ಚಲನವು ಹೇಗೆ ಆವಶ್ಯಕವೋ ಹಾಗೆ ಅಭಿಧೇಯಾ ರ್ಥವು ಹೊರಡಬೇಕಾದರೆ ಒಂದು ವ್ಯಾಪಾರವು ಆವಶ್ಯಕ. ಈ ಅರ್ಥ ಹೊರಡಿಸುವ ವ್ಯಾಪಾರಕ್ಕೆ 'ಅಭಿಧಾವೃತ್ತಿ'ಯೆಂದು ಹೆಸರು. ಹೀಗೆಯೇ ಲಕ್ಷಣಾವೃತ್ತಿಯಿಂದ ಲಕ್ಷ್ಯಾರ್ಥವು ಹೊರಪಡುತ್ತದೆ. ಇದೇ ರೀತಿ ವ್ಯಂಗ್ಯಾರ್ಥವು ಹೊರಪಡಬೇಕಾದರೂ ಒಂದು ವ್ಯಾಪಾರವು ಇರಲೇಬೇಕು. ಇದಕ್ಕೆ 'ವ್ಯಂಜನಾವೃತ್ತಿ' ಎಂದು ಹೆಸರು.

ಈಗ ಮತ್ತೊಂದು ಯೋಚನೆ ಹುಟ್ಟುವುದು. ಅಭಿಧಾವೃತ್ತಿಯಿಂದ ವಾಚ್ಯಾ ರ್ಥವು ಹೊರಡಬೇಕಾದರೆ ಒಂದು ನಿಯಮವಿದೆ; ಒಂದು ಸಂಕೇತವಿದೆ. ಈ ಪದಕ್ಕೆ ಇದೇ ಅರ್ಥ ಎಂದು ಹಿಂದಿನ ಬಳಕೆಯಿಂದ ಗೊತ್ತಿದೆ; ಹಾಗೆಯೇ, ವಾಚ್ಯಾರ್ಥದಲ್ಲಿ ವಿರೋಧವು ಕಂಡುಬಂದಾಗ ಅದಕ್ಕೆ ಸಂಬಂಧಿಸಿದ ಅವಿರುದ್ಧವಾದ ಲಕ್ಷ್ಯಾರ್ಥವು

[1] ವಿಕಲ್ಪವು ಮತಭೇದವನ್ನು ಸೂಚಿಸುತ್ತದೆ. ಈಶ್ವರೇಚ್ಛೆಯೆಂದು ಹೇಳುವವರು ನೈಯಾಯಿಕರು.

ರೂಢಿಯಿಂದಲೋ ಪ್ರಯೋಜನವಿರುವುದರಿಂದಲೋ ಹೊರಡುವುದಕ್ಕೂ ಒಂದು ನಿಯಮವಿದೆಯೆನ್ನಬಹುದು. ಇದೇ ಲಕ್ಷ್ಯಾರ್ಥವು ಈ ಸಮಯದಲ್ಲಿ ವಿವಕ್ಷಿತವೆಂದು ನಿರ್ಣಯಿಸಲೂ ಸಾಧ್ಯ. ಆದರೆ ವ್ಯಂಗ್ಯಾರ್ಥಕ್ಕೆ ಏನೂ ಸಂಕೇತವಿಲ್ಲ; ಮತ್ತು ವಾಚ್ಯಾರ್ಥದಲ್ಲಿ ವಿರೋಧವಿದ್ದರೂ ಸರಿ, ಇಲ್ಲದಿದ್ದರೂ ಸರಿ, ವ್ಯಂಗ್ಯಾರ್ಥವು ಗೋಚರವಾಗಬಹುದು. ಹೀಗಿರುವಾಗ ಯಾವ ಸಂದರ್ಭದಲ್ಲಿ ಯಾವ ವ್ಯಂಗ್ಯಾರ್ಥವು ಹೊರಪಡುತ್ತದೆಯೆಂದು ಹೇಗೆ ಹೇಳಲು ಸಾಧ್ಯ? ವಕ್ತೃವು ಏನನ್ನೋ ತಿಳಿಸಬೇಕೆಂದು ಪ್ರಯತ್ನಪಟ್ಟರೆ ಶ್ರೋತೃವು ಮತ್ತೇನನ್ನೋ ತಿಳಿದುಕೊಳ್ಳಬಹುದಲ್ಲವೆ? ಎಂದು ಕೇಳಬಹುದು. ಬುದ್ಧಿವಂತನಲ್ಲದ ಶ್ರೋತೃವು ವಕ್ತೃವಿನ ವ್ಯಂಗ್ಯವಾದ ಅಭಿಪ್ರಾಯವನ್ನು ಗ್ರಹಿಸದಿರುವುದು ಪ್ರಾಪಂಚಿಕ ವ್ಯವಹಾರದಲ್ಲಿ ಅನೇಕ ವೇಳೆ ಸ್ವಾಭಾವಿಕವೇ. ಆದರೆ ಕಾವ್ಯಪ್ರಪಂಚದಲ್ಲಿ ಪ್ರತಿಭಾಶಾಲಿಯಾದ ಕವಿಯು ಯಾವ ವ್ಯಂಗ್ಯಾರ್ಥವನ್ನು ರಮಣೀಯವಾದ ಶಬ್ದಾರ್ಥಗಳ ಸಹಾಯದಿಂದ ಪ್ರತಿಪಾದಿಸಲು ಪ್ರಯತ್ನಿಸುತ್ತಾನೋ ಅದನ್ನೇ ಸಹೃದಯರಾದ ವಾಚಕರು ಸ್ವಲ್ಪವೂ ತಪ್ಪಿಲ್ಲದೆ ಗ್ರಹಿಸಲು ಸಾಧ್ಯ. ಮತ್ತು ಈ ವಿಧವಾದ ಅಭಿಪ್ರೇತವಾದ ವ್ಯಂಗ್ಯಾರ್ಥವು ಹೊರಪಡುವುದಕ್ಕೆ ಅನುಕೂಲತಮವಾದ ಸನ್ನಿವೇಶವನ್ನು ಚಿತ್ರಿಸುವುದೂ ಆ ಅರ್ಥವನ್ನು ಸನ್ನಿವೇಶ ಪರಿಶೀಲನಾಪೂರ್ವಕವಾಗಿ ಪೂರ್ಣವಾಗಿ ಗ್ರಹಿಸುವುದೂ ಕ್ರಮವಾಗಿ, ಕವಿಗೂ ವಿಮರ್ಶಕನಾದ ಸಹೃದಯನಿಗೂ ಸಂತೋಷದ ಕೆಲಸವೆನ್ನಬಹುದು. ಇದೇ ಕಾವ್ಯರಸಾಸ್ವಾದ. ಅಂತೂ ವ್ಯಂಗ್ಯಾರ್ಥಗ್ರಹಣದಲ್ಲಿ ವಕ್ತೃ, ಹೇಳಲ್ಪಡುವ ವಿಷಯ, ಹೇಳುವ ರೀತಿ, ಶ್ರೋತೃವಿನ ಸ್ವರೂಪ, ಸಂದರ್ಭ ಇವೇ ಮೊದಲಾದುವು ಸಹಕರಿಸುತ್ತವೆ. ಉದಾಹರಣೆಗೆ, 'ಸೂರ್ಯನು ಮುಳುಗಿದನು' ಎಂಬ ಒಂದೇ ಒಂದು ವಾಕ್ಯವು ಆಯಾ ಸಂದರ್ಭಕ್ಕೆ ತಕ್ಕಂತೆ ಒಬ್ಬೊಬ್ಬನಿಗೆ ಒಂದೊಂದು ಅರ್ಥವನ್ನು ಕೊಡುತ್ತದೆ. ಹಸುಕಾಯುವವನಿಗೆ ಇದನ್ನು ಹೇಳಿದರೆ 'ಹಸುಗಳನ್ನು ಮನೆಗೆ ಅಟ್ಟಿಕೊಂಡು ಹೋಗಬೇಕು' ಎಂಬ ವಿಷಯವನ್ನು ಸೂಚಿಸುತ್ತದೆ. ಪ್ರೇಯಸಿಯನ್ನು ಕಾಣುವ ಏರ್ಪಾಡನ್ನು ಇಟ್ಟುಕೊಂಡಿರುವವನಿಗೆ ಇತರರಿಗೆ ತಿಳಿಯದ ರೀತಿಯಲ್ಲಿ ಆ ವಿಷಯವನ್ನು ಜ್ಞಾಪಕಕ್ಕೆ ತರುತ್ತದೆ. ವೈದಿಕನಾದ ಬ್ರಾಹ್ಮಣನಿಗೆ ಸಂಧ್ಯಾವಂದನೆಗೆ ಹೊತ್ತಾಯಿತೆಂಬುದನ್ನು ಸೂಚಿಸುತ್ತದೆ. ಕಳ್ಳನಿಗೆ ಕನ್ನಹಾಕುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದು ಎಚ್ಚರಿಕೆ ಕೊಡುತ್ತದೆ. ಈ ನಾಲ್ವರೂ ಮುಖ್ಯ ಪಾತ್ರಗಳಾಗಿ ಎಲ್ಲರೂ ಸೇರಿ ಕಥಾಸಂದರ್ಭವನ್ನು ಮುಂದುವರಿಸುವಂತೆ ಒಂದು ಸನ್ನಿವೇಶವನ್ನು ಕವಿಯು ಚಿತ್ರಿಸಿ ಅಲ್ಲಿ ಈ ವಾಕ್ಯವನ್ನು ಪ್ರಯೋಗಮಾಡಿಸಿದ್ದೇ ಆದರೆ ಅದರಿಂದ ಒಬ್ಬೊಬ್ಬರಿಗೆ ಒಂದೊಂದು ಅರ್ಥವು ಲಭಿಸಿ ಸ್ವಲ್ಪ ಸ್ವಲ್ಪ

ಸಂತೋಷವನ್ನುಂಟುಮಾಡಿದರೂ ಸಹೃದಯನಾದ ವಾಚಕನಿಗೆ ನಾಲ್ಕು ವಿಧವಾದ ವ್ಯಂಗ್ಯಾರ್ಥಗಳೂ ಗೋಚರವಾಗಿ ಅತಿಶಯವಾದ ಸಂತೋಷವುಂಟಾಗುತ್ತದೆ. ಆದ್ದರಿಂದ ಸಂದರ್ಭಕ್ಕೆ ತಕ್ಕಂತೆ ಒಂದೇ ಒಂದು ವ್ಯಂಗ್ಯಾರ್ಥವು ಹೊರಪಡುತ್ತದೆ ಯೆಂದು ಸಾಮಾನ್ಯವಾಗಿ ಹೇಳಬಹುದಾದರೂ ಕೆಲವು ಸಮಯ ಕವಿಗೂ ಗೋಚರ ವಾಗದ ರಮಣೀಯವಾದ ಬೇರೊಂದು ಅರ್ಥವು ವಿಮರ್ಶಕನಿಗೆ ಗೋಚರವಾಗುವು ದುಂಟು. ಔಚಿತ್ಯವನ್ನು ಮೀರದೆ, ಅವಿರುದ್ಧವಾದ ಅನೇಕ ವ್ಯಂಗ್ಯಾರ್ಥಗಳನ್ನು ಕಂಡು ಅವನ್ನು ಇತರರಿಗೂ ತಿಳಿಸಿ ಸಂತೋಷಪಡುವುದೂ ಪಡಿಸುವುದೂ ಸೂಕ್ತ ವಾದರೂ ಕವಿಯು ಯಾವುದನ್ನು ಪ್ರತಿಪಾದಿಸಲು ಪ್ರಯತ್ನಪಡುತ್ತಾನೋ ಅದನ್ನು ಮಾತ್ರ ಬಿಡಲು ಸಾಧ್ಯವಿಲ್ಲ. ಕವಿಯ ಅಭಿಪ್ರಾಯವನ್ನು ಗ್ರಹಿಸದ ವಿಮರ್ಶಕನ ವ್ಯಂಗ್ಯಾರ್ಥದ ಬೇಟೆಯ ಚಾತುರ್ಯವು ಅಷ್ಟು ಶ್ಲಾಘನೀಯವಲ್ಲ.

[ಧ್ವನಿಯ ವಿಚಾರವಾಗಿ ಅತಿ ಮುಖ್ಯವೂ ಪ್ರಾಚೀನವೂ ಆದ ಗ್ರಂಥವು “ಧ್ವನ್ಯಾಲೋಕ”ವೆಂಬುದು. ಈ ಗ್ರಂಥವು ಕಾರಿಕೆ, ವೃತ್ತಿ ಮತ್ತು ಉದಾಹರಣೆಯ ಶ್ಲೋಕಗಳಿಂದ ಕೂಡಿದ್ದಾಗಿದೆ. ವೃತ್ತಿಯಲ್ಲಿ ಕೆಲವು ಕಡೆ ಪರಿಕರ ಶ್ಲೋಕಗಳು ಉದ್ಧೃತವಾಗಿವೆ. ಅಲ್ಲಲ್ಲಿ ಹಿಂದೆ ಹೇಳಿದ ಅರ್ಥವನ್ನು ಸಂಗ್ರಹಿಸುವ ಸಂಗ್ರಹ ಶ್ಲೋಕಗಳೂ ಕಂಡುಬರುತ್ತವೆ. ಒಟ್ಟು ಗ್ರಂಥವು ಶ್ರೀ ಆನಂದವರ್ಧನಾಚಾರ್ಯ ರಿಂದ ರಚಿತವಾದದ್ದೆಂದು ಕೆಲವರೂ,[1] ಅದರ ಕಾರಿಕೆಗಳು ಮಾತ್ರ ಅನ್ಯಕರ್ತೃಕವೆಂದು ಮತ್ತೆ ಕೆಲವರೂ[2] ಅಭಿಪ್ರಾಯಪಡುತ್ತಾರೆ. ‘ಧ್ವನ್ಯಾಲೋಕ’ಕ್ಕೆ ವ್ಯಾಖ್ಯಾನವನ್ನು ಬರೆದಿರುವ ಅಭಿನವಗುಪ್ತಾಚಾರ್ಯರು ‘ಕಾರಿಕಾಕಾರೇಣ’, ‘ವೃತ್ತಿಕೃತ್ತು’ ಎಂದು ಪ್ರತ್ಯೇಕತೆಯನ್ನು ಸೂಚಿಸುವಂತೆ ಕೆಲವೆಡೆಗಳಲ್ಲಿ ವ್ಯಾಖ್ಯಾನಮಾಡಿರುತ್ತಾ ರೆಂಬುದೇ ಕರ್ತೃಭೇದವನ್ನು ಸಾಧಿಸುವ ಪಕ್ಷದವರ ಮುಖ್ಯವಾದ ವಾದವೆನ್ನ ಬಹುದು. ಈ ವಿಧವಾದ ಬರವಣಿಗೆಯು ಪ್ರತ್ಯೇಕತೆಯನ್ನು ಸೂಚಿಸುವುದಿಲ್ಲವೆಂದು ಏಕತಾವಾದಿಗಳು ವಾದಿಸುತ್ತಾರೆ. ಇದಕ್ಕೆ, ಹಿಂದಿನ ಗ್ರಂಥಗಳಲ್ಲಿ ಆಧಾರವಿದೆ ಯಂತೆ. ಅಭಿನವಗುಪ್ತರ ಇತರ ಗ್ರಂಥಗಳಲ್ಲಿಯೇ[3] ಈ ರೀತಿಯಾಗಿ ಕಾರಿಕೆ ವೃತ್ತಿಗಳು ಏಕಕೃತವಾದರೂ ಅವಸ್ಥಾಭೇದವನ್ನು ಸೂಚಿಸಿ ಬೇರೆಬೇರೆಯೆಂಬಂತೆ ವ್ಯವಹರಿಸುವ ವಾಡಿಕೆಯು ಕಂಡುಬರುತ್ತದೆಯೆಂದು ಡಾ|| ಕೆ. ಸಿ. ಪಾಂಡೆಯವರು ತೋರಿಸಿರು ತ್ತಾರೆ.[4] ಆದುದರಿಂದ ‘ಕಾರಿಕಾಕಾರೇಣ,’ ‘ವೃತ್ತಿಕಾರೇಣ’ ಎಂದು ಮೊದಲಾಗಿ

---

[1] ಡಾ|| ಎಸ್. ಕೆ. ದೇ., ಎಚ್. ಯಾಕೋಬಿ., ಡಾ|| ಬ್ಯೂಹ್ಲರ್ ಇವರು.

[2] ಮ|| ಮ|| ಕುಪ್ಪುಸ್ವಾಮಿಶಾಸ್ತ್ರಿ, ಡಾ|| ಶಂಕರನ್, ಕೆ. ಸಿ. ಪಾಂಡೆ ಇವರು.

[3] “ಈಶ್ವರ ಪ್ರತ್ಯಭಿಜ್ಞಾವಿಮರ್ಶಿನೀ” ಎಂಬ ಗ್ರಂಥವನ್ನು ನೋಡಬಹುದು.

[4] Abhinavagupta—*A Historical and Philosophical Study.*

ವ್ಯಾಖ್ಯಾನ ಮಾಡುವಾಗ ಅಭಿನವಗುಪ್ತರು ಮನಸ್ಸಿನಲ್ಲಿ ಬೇರೆ ಬೇರೆ ವ್ಯಕ್ತಿಗಳನ್ನು ಉದ್ದೇಶಿಸಿರಲಿಲ್ಲವೆಂದು ಏಕತಾವಾದಿಗಳ ಅಭಿಪ್ರಾಯ. ಕಾರಿಕೆಗೂ ವೃತ್ತಿಗೂ ಕೆಲವು ಕಡೆಗಳಲ್ಲಿ ವಿರೋಧವಿದೆಯೆಂಬ ವಾದಕ್ಕೂ ಪ್ರತಿಪಕ್ಷದವರ ಉತ್ತರವಿದ್ದೇ ಇದೆ. ಕಾರಿಕೆಯಲ್ಲಿ ಹೇಳಿರುವುದಕ್ಕಿಂತ ವೃತ್ತಿಯಲ್ಲಿ ಕೆಲವು ಕಡೆ ಹೆಚ್ಚು ವಿಚಾರ ಗಳು ಹೇಳಲ್ಪಟ್ಟಿವೆಯೇ ಹೊರತು ಅಭಿಪ್ರಾಯದಲ್ಲಿ ವಿರೋಧವಿಲ್ಲವೆಂದೂ, ಹೆಚ್ಚು ವಿಷಯಗಳ ನಿರೂಪಣವು ಕರ್ತೃಭೇದಕ್ಕೆ ಸಾಧಕವಾಗುವುದಿಲ್ಲವೆಂದೂ ಏಕತಾ ವಾದಿಗಳು ಉತ್ತರಕೊಟ್ಟಿರುತ್ತಾರೆ. ಇದಲ್ಲದೆ, ಏಕತಾವಾದಿಗಳು ಇನ್ನೂ ಕೆಲವು ವಾದಗಳನ್ನು ಮುಂದಿಡುತ್ತಾರೆ. ಮುಖ್ಯವಾದುವನ್ನು ಮಾತ್ರ ಗಮನಿಸಬಹುದು. ಅಭಿನವಗುಪ್ತರು ತಮ್ಮ "ಅಭಿನವಭಾರತೀ"[1] ಎಂಬ ಗ್ರಂಥದಲ್ಲಿ ಆನಂದವರ್ಧನ ರದೆಂದು ಹೇಳಿ ಧ್ವನ್ಯಾಲೋಕದ ಎರಡು ಕಾರಿಕೆಗಳನ್ನು[2] ಉದಾಹರಿಸಿದ್ದಾರೆ. ಮತ್ತು ಕಾರಿಕೆ ಅನ್ಯಕರ್ತೃಕವಾಗಿದ್ದಲ್ಲಿ ಅದಕ್ಕೇ ಬೇರೆ ಮಂಗಳವಿರಬೇಕೆಂದೂ ಹಾಗಿಲ್ಲದೆ ಒಂದೇ ಒಂದು ಮಂಗಳ ಶ್ಲೋಕವು ವೃತ್ತಿಗ್ರಂಥದಲ್ಲಿರುವುದರಿಂದ ಕಾರಿಕೆ, ವೃತ್ತಿ ಎರಡೂ ಒಬ್ಬರದೇ ಎಂದೂ ಏಕತಾವಾದಿಗಳ ಇನ್ನೊಂದು ಯುಕ್ತಿ. ಇದೂ ಅಲ್ಲದೆ, ಅಭಿನವಗುಪ್ತ, ಉತ್ತುಂಗೋದಯ[3] ಮೊದಲುಗೊಂಡು ಈಚಿನ ಮಹಿಮ ಭಟ್ಟ, ಕುಂತಕ ಮೊದಲಾದವರೆಲ್ಲರೂ ಆನಂದವರ್ಧನರನ್ನೇ 'ಧ್ವನಿಕಾರ'ರೆಂದು ವ್ಯವಹರಿಸಿ ಕರ್ತೃವು ಒಬ್ಬನೇ ಎಂಬ ವಿಷಯಕ್ಕೆ ಸಮರ್ಥನೆಯನ್ನು ದೊರಕಿಸುತ್ತಾರೆ. ಹಿಂದಿನ ಒಬ್ಬರಿಗಾಗಲೀ ಕರ್ತೃಭೇದಶಂಕೆಯೂ ಉಂಟಾದಂತೆ ತೋರುವುದಿಲ್ಲ. ಆದ್ದರಿಂದ ಕಾರಿಕೆ ಮತ್ತು ವೃತ್ತಿ ಇವೆರಡನ್ನೂ ಶ್ರೀ ಆನಂದವರ್ಧನಾಚಾರ್ಯರೇ ರಚಿಸಿದರೆಂದು ಸಾಧಿಸಿ 'ಧ್ವನಿಕಾರ'[4]ರು ಆನಂದವರ್ಧನರಲ್ಲವೆಂಬುದನ್ನೂ ಅವರ ಹೆಸರು 'ಸಹೃದಯ'[5] ಎಂದು ಇದ್ದಿರಬೇಕೆಂಬ ಊಹೆಯನ್ನೂ ನಿರಾಧಾರವಾದು ದೆಂದು ಖಂಡಿಸಿರುತ್ತಾರೆ. ಈ ವಿಚಾರದಲ್ಲಿ ಬಹಳ ದೊಡ್ಡ ಚರ್ಚೆಯು ನಡೆದಿದೆ. ಅದರ ವಿವರವನ್ನೆಲ್ಲ ನಿರೂಪಿಸುವುದು ಅಪ್ರಕೃತ.[6] ನಿರ್ಣಯದ ವಿಚಾರದಲ್ಲಿ ಮಾತ್ರ

[1] ಇದು ಭರತನ 'ನಾಟ್ಯಶಾಸ್ತ್ರ'ಕ್ಕೆ ವ್ಯಾಖ್ಯಾನ. ಇನ್ನೂ ಸಂಪೂರ್ಣವಾಗಿ ಮುದ್ರಿತವಾಗಿಲ್ಲ.

[2] ಮೂರನೆಯ ಉದ್ಯೋತದ 16 ನೆಯ ಕಾರಿಕೆ, ಎರಡನೆಯ ಉದ್ಯೋತದ 19 ನೆಯ ಕಾರಿಕೆ.

[3] ಇವರು ಅಭಿನವಗುಪ್ತರ 'ಲೋಚನ'ವೆಂಬ ವ್ಯಾಖ್ಯಾನಕ್ಕೆ "ಕೌಮುದೀ" ಎಂಬ ಉಪವ್ಯಾಖ್ಯಾನವನ್ನು ರಚಿಸಿರುತ್ತಾರೆ.

[4] 'ಧ್ವನಿಕಾರಿಕಾಕಾರರು'.

[5] ಮ|| ಮ|| ಪಿ. ವಿ. ಕಾಣೆ ಅವರ ಅಲಂಕಾರಶಾಸ್ತ್ರದ ಚರಿತ್ರೆಯನ್ನು ನೋಡಿ (Introduction to *Sahityadarpana.*)

[6] ಡಾ|| ಎಸ್.ಕೆ. ದೇ. ಅವರ *Sanskrit Poetics*, vol I. ಡಾ|| ಶಂಕರನ್ ಅವರ *Rasa and Dhvani*, ಡಾ|| ಕೆ. ಸಿ. ಪಾಂಡೆ ಅವರ Abhinavagupta—*A Historical and Philosophical Study* ಮೊದಲಾದ ಗ್ರಂಥಗಳಲ್ಲಿ ವಿವರಗಳು ಸಿಕ್ಕುತ್ತವೆ.

ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಕರ್ತೃಭೇದವನ್ನು ಸೂಚಿಸುವ ಅಭಿನವ ಗುಪ್ತರ ವಾಕ್ಯಗಳು ಬಹಳ ಮಟ್ಟಿಗೂ ಸ್ಪಷ್ಟವಾಗಿರುವುದರಿಂದಲೂ,[1] ಗ್ರಂಥದ ಮಂಗಳವು ಕಾರಿಕಾರೂಪವಾಗಿ ಇಲ್ಲದಿರುವುದರಿಂದಲೂ[2] ಏಕತಾವಾದವನ್ನು ಅಂಗೀಕರಿಸಲು ಸಾಧ್ಯವಿಲ್ಲ. ಭೇದವಾದವನ್ನು ಒಪ್ಪಬಹುದಾದರೂ ಕಾರಿಕೆಗಳೆಲ್ಲವೂ ಅನ್ಯಕೃತವೆನ್ನುವುದಕ್ಕಿಂತ ಕೆಲವು ಕಾರಿಕೆಗಳು ಮಾತ್ರ ಅನ್ಯಕೃತವೆನ್ನುವುದು ಸೂಕ್ತ ತರವೆಂದು ತೋರುತ್ತದೆ. 'ಧ್ವನಿ' ತತ್ತ್ವವು ಹಿಂದೆಯೇ ಸ್ಫುರಿಸಿದ್ದರೂ ಅಸತ್ತರ್ಕಗಳ ದೆಸೆಯಿಂದ ಪ್ರಸುಪ್ತವಾಗಿತ್ತೆಂದು ಆನಂದವರ್ಧನರ ವೃತ್ತಿಯ ಕಡೆಯ ಶ್ಲೋಕ ದಿಂದ ತಿಳಿದುಬರುತ್ತದೆ. ಈ ವಿಧವಾದ ಧ್ವನಿಯ ವಿಚಾರವಾಗಿ ಒಬ್ಬರಿಂದಲೋ ಅನೇಕರಿಂದಲೋ[3] ರಚಿತವಾದ ಕೆಲವು ಕಾರಿಕೆಗಳು ಗ್ರಂಥರೂಪವನ್ನು ಹೊಂದದೆ[4] ಮುಕ್ತಕಗಳಂತೆ ಅಲ್ಲಲ್ಲಿ ಪ್ರಚುರವಾಗಿದ್ದಿರಬಹುದೆಂದೂ, ಅವನ್ನೆಲ್ಲ ಸಂಗ್ರಹಿಸಿ ವೃತ್ತಿರೂಪವಾದ ವ್ಯಾಖ್ಯಾನದಿಂದ ಒಟ್ಟುಗೂಡಿಸಿ ಕೆಲವು ಕಾರಿಕೆಗಳನ್ನು ತಾವೂ ರಚಿಸಿ ಆನಂದವರ್ಧನರು 'ಧ್ವನಿ' ತತ್ತ್ವವನ್ನು ಗ್ರಂಥರೂಪದಲ್ಲಿ ಪ್ರತಿಪಾದಿಸಿರ ಬೇಕೆಂದೂ ಒಂದು ಆಧಾರೋಕ್ತಿಯನ್ನು (hypothesis) ಅಂಗೀಕರಿಸಿದಲ್ಲಿ ಹಿಂದೆ ಹೇಳಿದ ಎರಡು ಪಕ್ಷಗಳ ಮುಖ್ಯವಾದ ಆಧಾರಗಳಿಗೆಲ್ಲ ಸಮಂಜಸವಾಗಿ ಉಪಪತ್ತಿ ಯನ್ನು ಕಲ್ಪಿಸಬಹುದು. ಮತ್ತು ಸಿದ್ಧಾಂತಗಳ ಆವಿರ್ಭಾವ ಮತ್ತು ಅಭಿವೃದ್ಧಿ ಪ್ರಕಾರವನ್ನೂ ಸಾಮಾನ್ಯವಾಗಿ ಪರಿಶೀಲಿಸಿದಲ್ಲಿ ಈ ಆಧಾರೋಕ್ತಿಯ ಅಧಿಕ

---

[1] ಧ್ವನ್ಯಾಲೋಕ—ಚೌಖಾಂಬಾ ಪ್ರತಿ. ಪುಟ 162-3 (ಏವಂ ತ್ರಿಪ್ರಕಾರಮಭಾವವಾದಂ— ಎನ್ನುವಲ್ಲಿಂದ—ಮೂಲವಿಭಾಗಮಮೋಚತ್ ಎನ್ನುವವರೆಗೂ, ಪುಟ 165-6. "ವೃತ್ತಿಕಾರಃ ಸಂಗತಿಮುದ್ಯೋತಸ್ಯ' ಎನ್ನುವಲ್ಲಿಂದ—ಕಾರಿಕಾಕಾರಸ್ಯಾಪಿ ಸಮಂತಮೇವೇತಿಭಾವಃ" ಎನ್ನುವ ವರೆಗೂ ನೋಡತಕ್ಕದ್ದು. ಈ ವಿಚಾರದಲ್ಲಿ ಡಾ|| ಪಾಂಡೆಯವರ ಸಮಾಧಾನವು ಸಮರ್ಪಕವಲ್ಲ. ಅವರು ಹೇಳಿರುವ ಉಪಪತ್ತಿಯು ಧ್ವನ್ಯಾಲೋಕಕ್ಕೆ ಅನ್ವಯಿಸುವುದಿಲ್ಲವೆಂದು ತೋರುತ್ತದೆ.

[2] ಕಾರಿಕೆ, ವೃತ್ತಿ ಎರಡೂ ಏಕಕರ್ತೃಕವಾದಲ್ಲಿ ಸಾಮಾನ್ಯವಾಗಿ ಮಂಗಳವು ಕಾರಿಕಾರೂಪ ವಾಗಿರುವುದು ಅನುಭವಸಿದ್ಧ. ಇಲ್ಲಿ ಹಾಗಿಲ್ಲ; ಅದು ಕಾರಿಕೆಯೇ ಎಂದರೆ ಅದಕ್ಕೆ ವೃತ್ತಿ ಇರಬೇಕು. ಅದೂ ಇಲ್ಲ. ಆದುದರಿಂದ ಅದು ವೃತ್ತಿಗೇ ಸೇರಿದ್ದು.

[3] ಪ್ರಾಯಃ ಈ ಕಾರಣದಿಂದಲೇ ಆನಂದವರ್ಧನರು ಪ್ರತ್ಯೇಕವಾಗಿ ಕರ್ತೃಗಳಿಗೆ ಕೃತಜ್ಞತೆ ಯನ್ನು ಸೂಚಿಸುವುದಕ್ಕಾಗಿಲ್ಲವೆಂದು ತೋರುತ್ತದೆ. ಇದೂ ಅಲ್ಲದೆ, ಕೆಲವು ಕಾರಿಕೆಗಳ ಕರ್ತೃಗಳು ಅವರಿಗೂ ತಿಳಿಯದಿರಬಹುದು. ಆದ್ದರಿಂದ ಅವರಿಗೆ ಕೃತಘ್ನತೆಯ ಆರೋಪಮಾಡಿದಂತಾಗುವುದಿಲ್ಲ.

[4] ಹಾಗೆ ಕಾರಿಕೆಗಳು ಏಕಕೃತವಾಗಿ ಗ್ರಂಥರೂಪವನ್ನು ಹೊಂದಿದ್ದರೆ (ಏಕತಾವಾದಿಗಳು ಹೇಳುವಂತೆ) ಅದಕ್ಕೇ ಒಂದು ಮಂಗಳವಿರಬೇಕಾಗುತ್ತಿತ್ತು. ಹಾಗಿಲ್ಲದುದರಿಂದಲೇ ಮಂಗಳ ವಿಲ್ಲದಿರುವುದು.

ಸಂಭವತೆಯು ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದ ಧ್ವನಿಯ ಅಸ್ತಿತ್ವ ಮತ್ತು ಪ್ರಾಮುಖ್ಯಕ್ಕೆ ಸಂಬಂಧಪಟ್ಟ ಕಾರಿಕೆಗಳು ಹಿಂದಿನವರಿಂದ ರಚಿತವಾದುವೆಂದೂ ಅದರ ಅವಾಂತರ ವಿಭಾಗವೇ ಮೊದಲಾದ ಸಿದ್ಧಾಂತದ ಪರಿಷ್ಕಾರಕ್ಕೆ ಸಂಬಂಧಪಟ್ಟ ಕಾರಿಕೆಗಳು ಆನಂದವರ್ಧನರವೆಂದೂ ಹೇಳಬಹುದು. ಎಂದರೆ, ಸ್ಥೂಲವಾಗಿ,[1] ಮೊದಲನೆಯ ಮತ್ತು ನಾಲ್ಕನೆಯ ಉದ್ಯೋತಗಳ ಅನೇಕ ಕಾರಿಕೆಗಳು ಪೂರ್ವಿಕರವೆಂದೂ, ಮಿಕ್ಕ ಕಾರಿಕೆ, ವೃತ್ತಿ ಎಲ್ಲವೂ ಆನಂದವರ್ಧನಕೃತವೆಂದೂ ಹೇಳಿದ ಹಾಗಾಗುತ್ತದೆ. ಅಭಿನವಗುಪ್ತರಿಗೂ ಈ ವಿಷಯ ತಿಳಿದಿದ್ದಿರಬೇಕೆಂದು ಭಾವಿಸಿದಲ್ಲಿ ಅವರು ಒಂದುಕಡೆ ಐಕ್ಯವನ್ನೂ ಮತ್ತೊಂದುಕಡೆ ಭೇದವನ್ನೂ ಸೂಚಿಸುವಂತೆ ವ್ಯಾಖ್ಯಾನಮಾಡಿರುವುದನ್ನೂ ಸಮನ್ವಯಗೊಳಿಸಬಹುದು.[2] ಅಭಿನವಭಾರತಿಯಲ್ಲಿ ಆನಂದವರ್ಧನರವೆಂದು ಉದ್ಧೃತವಾಗಿರುವ ಕಾರಿಕೆಗಳೂ ಡಾ|| ಶಂಕರನ್‌ಅವರು ಹೇಳುವ 'ಲ್ಯಬಂತ' ಪ್ರಯೋಗಗಳೂ[3] ಎರಡು ಮತ್ತು ಮೂರನೆಯ ಉದ್ಯೋತಗಳಲ್ಲೇ ಬರುವುದೂ, ಈ ಭಾಗದಲ್ಲಿ ಕರ್ತೃಭೇದವನ್ನು ಸೂಚಿಸುವ ವಾಕ್ಯಗಳು ಇಲ್ಲದಿರುವುದೂ ನಮ್ಮ ಪಕ್ಷಕ್ಕೆ ಸಮರ್ಥನೆಯನ್ನು ದೊರಕಿಸುತ್ತವೆ. ಹಾಗೆಯೇ ಭೇದವನ್ನು ಸೂಚಿಸುವ ಸ್ಪಷ್ಟವಾದ ವಾಕ್ಯಗಳು ಮೊದಲನೆಯ ಉದ್ಯೋತದ ಕೊನೆಯಲ್ಲೂ ಎರಡನೆಯ ಉದ್ಯೋತದ ಮೊಟ್ಟಮೊದಲಲ್ಲೂ ಬರುವುದೂ ಈ ಪಕ್ಷವನ್ನೇ ಪೋಷಿಸುತ್ತವೆ.[4]

ಆನಂದವರ್ಧನಾಚಾರ್ಯರು ಕಾಶ್ಮೀರದ ರಾಜನಾದ ಅವಂತಿವರ್ಮನ (ಕ್ರಿ.ಶ. ೮೫೫-೮೩) ಆಸ್ಥಾನವನ್ನು ಅಲಂಕರಿಸಿದ್ದು ಪ್ರಸಿದ್ಧಿಹೊಂದಿದರೆಂದು

---

[1] ಇದರಿಂದ ಎರಡನೆಯ ಉದ್ಯೋತದ ಮೊದಲಿನ ಒಂದೆರಡು ಕಾರಿಕೆಗಳೂ ಹಿಂದಿನವೆಂದು ಅಭಿಪ್ರಾಯ.

[2] ಆದ್ದರಿಂದ ಡಾ|| ಕೆ. ಸಿ. ಪಾಂಡೆಯವರು ಹೇಳಿರುವಂತೆ ಅಭಿನವಗುಪ್ತರ ವಾಕ್ಯಗಳು ಅನಿಶ್ಚಯತೆಯಿಂದ ಕೂಡಿಲ್ಲ. ಅವರು ಅಭಿಪ್ರಾಯಪೂರ್ವಕವಾಗಿಯೇ ಹಾಗೆ ವ್ಯಾಖ್ಯಾನಮಾಡಿರುವರೆಂದೂ, ಅವರ ಐಕ್ಯಸೂಚಕ ಮತ್ತು ಭೇದಸೂಚಕ ವಾಕ್ಯಗಳನ್ನು ಯಥಾವತ್ತಾಗಿ ಗ್ರಹಿಸಬೇಕೆಂದೂ ಹೇಳಬಹುದು.

[3] ಲ್ಯಬಂತ ಪ್ರಯೋಗ—ಊಟಮಾಡಿ ನಿದ್ದೆಹೋಗುತ್ತಾನೆ. ಇಲ್ಲಿ ಊಟ ಮತ್ತು ನಿದ್ದೆ ಎಂಬ ಎರಡು ಕ್ರಿಯೆಗಳಿಗೂ ಕರ್ತೃ ಒಬ್ಬನೇ. ಈ ವಿಧವಾದ ಪ್ರಯೋಗವನ್ನು ಕಾರಿಕೆ ಮತ್ತು ವೃತ್ತಿಗೆ ಸಂಬಂಧಿಸಿದಂತೆ ಅಭಿನವಗುಪ್ತರು ಮಾಡಿರುತ್ತಾರೆ.

[4] ಮೊದಲನೆಯ ಉದ್ಯೋತದ ಕಾರಿಕೆಗಳನ್ನು ಒಟ್ಟುಗೂಡಿಸಿ ನೋಡಿದರೆ ಕೆಲವು ಕಾರಿಕೆಗಳಿಗೆ ಪರಸ್ಪರ ಸಂಬಂಧವಿಲ್ಲದಿರುವಿಕೆ, ಕೆಲವು ಕಾರಿಕೆಗಳು ಬೇರೆ ಛಂದಸ್ಸಿನಲ್ಲಿರುವುದು, ಮತ್ತು ಕೆಲವು ಅಭಿಪ್ರಾಯಗಳು ಬೇರೆಬೇರೆ ರೀತಿಯಲ್ಲಿ ಪುನರುಕ್ತಿ ಹೊಂದುವುದು, ಇವೆಲ್ಲವೂ ಮಿಕ್ಕ ಆಧಾರಗಳು.

‘ರಾಜತರಂಗಿಣೀ’ ಎಂಬ ಗ್ರಂಥದಿಂದ ತಿಳಿದುಬರುತ್ತದೆ.[1] ಹಿಂದಿನ ‘ಧ್ವನಿಕಾರಿಕೆ’ಗಳು ಸು. ಕ್ರಿ.ಶ. ೮೦೦-೮೧೫ರಲ್ಲಿ ರಚಿತವಾಗಿರಬಹುದೆಂದು ಊಹಿಸಲಾಗಿದೆ.]

ಕ್ರಿ.ಶ. ಹನ್ನೆರಡನೆಯ ಶತಮಾನಕ್ಕೆ ಹಿಂದೆ ಎಲ್ಲಾ ಶಾಸ್ತ್ರಗಳೂ ಸಾಮಾನ್ಯವಾಗಿ ವ್ಯಾಕರಣ ಶಾಸ್ತ್ರದ ಮೇಲ್ಮೆಯನ್ನು ಒಪ್ಪಿ, ಅದರಿಂದ ಸ್ಫೂರ್ತಿಯನ್ನು ಹೊಂದುತ್ತಿದ್ದುವೆಂದೂ ಅಲ್ಲಿಂದೀಚೆಗೆ ಆ ಗಣ್ಯತೆಯು ನ್ಯಾಯಶಾಸ್ತ್ರಕ್ಕೆ ದೊರಕಿತೆಂದೂ ಹೇಳುವುದು ವಾಡಿಕೆ. ಇದಕ್ಕೆ ತಕ್ಕಂತೆ, ‘ಧ್ವನಿ’ ತತ್ವವೂ ವ್ಯಾಕರಣ ಶಾಸ್ತ್ರದಿಂದ ಪ್ರಥಮ ಸ್ಫೂರ್ತಿಯನ್ನು ಹೊಂದಿತೆನ್ನಬಹುದು.[2] ವೈಯಾಕರಣ ಮತಪ್ರಕ್ರಿಯೆಯಲ್ಲಿ ‘ಸ್ಫೋಟ’ವೆಂಬ ಒಂದು ತತ್ವವಿದೆ. ಒಂದು ಶಬ್ದವನ್ನು ಉಚ್ಚರಿಸಿದರೆ ಅದು ಒಂದು ಅರ್ಥವನ್ನೂ ತನ್ಮೂಲಕ ಒಂದು ವಸ್ತುವನ್ನೂ ಹೇಗೆ ನಿರ್ದೇಶಿಸುತ್ತದೆ? ಎಂಬ ಮೀಮಾಂಸೆಯಲ್ಲಿ ಸ್ಫೋಟವಾದಕ್ಕೆ ಮುಖ್ಯವಾದ ಸ್ಥಾನವಿದೆ. ಆಚಾರ್ಯ ಭರ್ತೃಹರಿ ಎಂಬವರು ಸ್ಫೋಟವನ್ನು ಪರಮೋತ್ಕೃಷ್ಟವಾದ ಬ್ರಹ್ಮತತ್ವದಂತೆ ಪರಿಗಣಿಸಿ, ಒಂದು ವೇದಾಂತಶಾಸ್ತ್ರವನ್ನೇ ಪ್ರತಿಪಾದಿಸಿರುತ್ತಾರೆ. ಈ ಸ್ಫೋಟತತ್ವವನ್ನು ಸಂಕ್ಷೇಪವಾಗಿ ನಿರೂಪಿಸಿ, ‘ಧ್ವನಿ’ ತತ್ವಕ್ಕೆ ಇದರಿಂದ ಯಾವ ರೀತಿ ಸ್ಫೂರ್ತಿಯು ಬಂದಿತೆಂಬುದನ್ನು ತಿಳಿಯುವುದು ಆವಶ್ಯಕ.

‘ಹಸು’ ಎಂದು ಎರಡು ಅಕ್ಷರಗಳನ್ನು ಒಟ್ಟಿಗೆ ಉಚ್ಚರಿಸಿದರೆ ನಾದರೂಪವಾದ ಈ ಶಬ್ದವು (ಈಗ ನಮಗೆ ಅದರಿಂದ ತಿಳಿಯುವ) ಪ್ರಾಣಿರೂಪವಾದ ಅರ್ಥವನ್ನು ಹೇಗೆ ಬುದ್ಧಿಗೆ ತರುತ್ತದೆ? ಎಂಬುದೇ ಪ್ರಶ್ನೆ. ಈ ಪ್ರಶ್ನೆಗೆ ಒಂದೊಂದು ಶಾಸ್ತ್ರವೂ ಒಂದೊಂದು ವಿಧವಾಗಿ ಉತ್ತರ ಕೊಡುತ್ತದೆ. ವ್ಯಾಕರಣಶಾಸ್ತ್ರದ ಉತ್ತರವೇ ಸ್ಫೋಟವಾದವೆನ್ನಬಹುದು. ಹಸು ಎಂಬ ಎರಡು ಅಕ್ಷರಗಳಲ್ಲಿ ಯಾವ ಒಂದಕ್ಷರವಾಗಲಿ,[3] ಎರಡು ಅಕ್ಷರಗಳ ಸಮುಚ್ಚಯವಾಗಲಿ[4] ಪ್ರಾಣಿರೂಪವಾದ ಅರ್ಥವನ್ನು ಬೋಧಿಸಲು ಸಾಧ್ಯವಿಲ್ಲವೆಂದು ವಾದಿಸಿ, ‘ಸ್ಫೋಟ’ವೆಂಬ ನಿತ್ಯಶಬ್ದವು ಆ ಕೆಲಸವನ್ನು ಮಾಡುತ್ತದೆಯೆಂದೂ, ಆ ‘ಸ್ಫೋಟ’ವನ್ನು ‘ಹಸು’ ಮೊದಲಾದ

---

1 ರಾಜತರಂಗಿಣೀ—೫-೩೪.

2 ಇದನ್ನು ಆನಂದವರ್ಧನರೇ ವ್ಯಕ್ತಪಡಿಸಿರುತ್ತಾರೆ. “ಪ್ರಥಮೇಹಿ ವಿದ್ವಾಂಸೋ ವೈಯಾಕರಣಾಃ” ಎಂದು ಮೊದಲಾಗುವ ಗ್ರಂಥಭಾಗವನ್ನು ನೋಡಬಹುದು. ಪುಟ ೧೩೭-೩.

3 ಯಾವ ಒಂದು ಅಕ್ಷರವು ಬೋಧಿಸುತ್ತದೆಯೆಂದರೂ ಮಿಕ್ಕ ಅಕ್ಷರಗಳು ವ್ಯರ್ಥವಾಗುತ್ತದೆ. ಎಂದರೆ ಒಂದೇ ಅಕ್ಷರ ಸಾಕು ಮಿಕ್ಕದ್ದು ಬೇಡ ಎನ್ನಬೇಕಾಗುತ್ತದೆ.

4 ಶಬ್ದ, ಬುದ್ಧಿ, ಕರ್ಮ ಇವು ಎರಡು ಕ್ಷಣಮಾತ್ರ ಇರುತ್ತವೆಯೆಂಬ ಒಂದು ಸಾಮಾನ್ಯ ಸಿದ್ಧಾಂತವಿರುವುದರಿಂದ ಹಸು ಎಂಬಲ್ಲಿ ಎರಡನೆಯ ಅಕ್ಷರವನ್ನು ಉಚ್ಚರಿಸುವ ವೇಳೆಗೆ ಮೊದಲನೆಯದು ವಿನಷ್ಟವಾಗುತ್ತದೆ. ಆದ್ದರಿಂದ ಎರಡು ಅಕ್ಷರಗಳ ಸಮುಚ್ಚಯವೇ ಸಾಧ್ಯವಿಲ್ಲ.

ಅಕ್ಷರ ಸಂಘಟಿತವಾದ ಶಬ್ದಗಳು ಪ್ರಕಾಶಗೊಳಿಸುತ್ತವೆಯೆಂದೂ ಸ್ಫೋಟವಾದಿಗಳು ಅಭಿಪ್ರಾಯಪಡುತ್ತಾರೆ. 'ಸ್ಫೋಟ'ವನ್ನು ಪ್ರಕಾಶಿಸುವುದರಲ್ಲಿಯೂ 'ಹಸು' ಎಂಬ ಎರಡಕ್ಷರಗಳಲ್ಲಿ ಯಾವ ಒಂದಾಗಲಿ ಎರಡರ ಸಮುಚ್ಚಯವಾಗಲಿ ಕೆಲಸ ಮಾಡಲು ಸಾಧ್ಯವಿಲ್ಲವೆಂದು ಮೊದಲಿನಂತೆ ಆಕ್ಷೇಪಣೆಗಳು ಬರುವುದು ಸಹಜ. ಇದಕ್ಕೋಸ್ಕರವೇ ಸ್ಫೋಟದ ಆವಿಷ್ಕರಣ ಪ್ರಕಾರವನ್ನು ಬಹಳ ಯುಕ್ತಿಯಿಂದ ವಿವರಿಸಲಾಗಿದೆ. ಅನೇಕವರ್ಣಸಂಘಟಿತವಾದ ಶಬ್ದದ ಮೊದಮೊದಲಿನ ವರ್ಣಶ್ರವಣದಿಂದುಂಟಾದ ಅನುಭವದ ಸಂಸ್ಕಾರದಿಂದೊಡಗೂಡಿದ ಕಡೆಯ ವರ್ಣದ ಶ್ರವಣದಿಂದ 'ಸ್ಫೋಟ'ವು ಅಭಿವ್ಯಕ್ತವಾಗುತ್ತದೆಯೆಂದು ಸ್ಫೋಟವಾದಿಗಳು ಹೇಳುತ್ತಾರೆ. ಇದಕ್ಕೆ ಒಂದು ಉತ್ತಮವಾದ ನಿದರ್ಶನವೂ ಸಿಕ್ಕುತ್ತದೆ. ವೇದವನ್ನು ಬಾಯಿಪಾಠ ಮಾಡುವಾಗ ಮೊದಮೊದಲು ಅನೇಕಾವರ್ತಿ ಉರುಹಾಕಿದ ಸಂಸ್ಕಾರವೆಲ್ಲ ಸೇರಿಕೊಂಡು ಕ್ರಮೇಣ ಅದು ಮನಸ್ಸಿನಲ್ಲಿ ನಿಂತು ಕಡೆಯುಸಲ ಹೇಗೆ ಒಂದು ತಪ್ಪೂ ಇಲ್ಲದೆ ಎಲ್ಲವೂ ಕಂಠಗತವಾಗುತ್ತದೆಯೋ ಹಾಗೆಯೇ 'ದೇವದತ್ತ' ಎಂದು ಹೇಳಿದಾಗ ಪ್ರತಿಯೊಂದು ವರ್ಣವೂ ಸ್ಫೋಟವನ್ನು ಒಂದೊಂದು ಸಲ ಆವಿಷ್ಕರಿಸಿ, ಒಂದೊಂದು ಹೆಜ್ಜೆ ಮುಂದೆಹೋಗಿ, ಕಡೆಯ 'ತ್ತ' ಎಂಬ ಅಕ್ಷರದ ಶ್ರವಣವಾದ ಕೂಡಲೆ ಒಟ್ಟು ಪದದ ಸ್ಫೋಟವು ವಿಶದವಾಗಿಯೂ ಸಂಪೂರ್ಣವಾಗಿಯೂ ಆವಿಷ್ಕೃತವಾಗುತ್ತದೆ. ಮೊದಮೊದಲಿನ ಅಕ್ಷರಗಳಿಂದ ಒಂದೊಂದುಸಲ 'ಸ್ಫೋಟ'ವು ಆವಿಷ್ಕೃತವಾದರೂ ಆ ಸ್ಫೋಟಕ್ಕೆ ಅರ್ಥಕೊಡುವಷ್ಟು ಶಕ್ತಿಯಿಲ್ಲ. ಆದರೆ 'ಸ್ಫೋಟ'ವು ಸಂಪೂರ್ಣವಾಗಿ ಆವಿಷ್ಕೃತವಾದ ಮೇಲೆ, ಅದರಿಂದ ಪರಾಮೃಷ್ಟನಾದ ವ್ಯಕ್ತಿಯ ಜ್ಞಾನವುಂಟಾಗುತ್ತದೆ. ಇದೇ ಸ್ಫೋಟವಾದದ ಸಂಗ್ರಹ.[1]

'ಸ್ಫೋಟ'ವಾದದಲ್ಲಿ 'ಧ್ವನಿ' ಶಬ್ದಕ್ಕೆ ನಾನಾವಿಧವಾದ ವ್ಯುತ್ಪತ್ತಿಯಿಂದ ನಾಲ್ಕು ಅರ್ಥಗಳು ಹೇಳಲ್ಪಟ್ಟಿವೆ.

(೧) ಘಂಟೆಯನ್ನೋ ನಗಾರಿಯನ್ನೋ ಬಾರಿಸಿದಾಗ ಶಬ್ದವು ಅಲೆಗಳ

[1] ಸ್ಫೋಟವಾದದ ಅಡಿಗಲ್ಲಾದ ನಿತ್ಯಶಬ್ದದ ಭಾವನೆಯನ್ನು ಅನೇಕರು ಖಂಡಿಸಿರುತ್ತಾರೆ. ಮೀಮಾಂಸಕರು ಕೂಡ ಶಬ್ದದ ನಿತ್ಯತ್ವವನ್ನು ಒಪ್ಪಿದರೂ ಸ್ಫೋಟವಾದವನ್ನು ಅಂಗೀಕರಿಸುವುದಿಲ್ಲ. ಅವರಿಗೆ ಶಬ್ದವೆಲ್ಲವೂ ನಿತ್ಯ. ಆದರೆ ಸ್ಫೋಟವಾದಿಗಳಿಗೆ 'ಸ್ಫೋಟ'ವು ಮಾತ್ರ ನಿತ್ಯ. ಮಿಕ್ಕ ಶಬ್ದಗಳು ಅನಿತ್ಯ. ಅನಿತ್ಯಶಬ್ದದಿಂದ ನಿತ್ಯಶಬ್ದದ ಆವಿಷ್ಕರಣವಾಗುತ್ತದೆ. ಉಚ್ಚರಿಸಿದ ಯಾವ ಶಬ್ದವೇ ಆಗಲಿ ಕ್ಷಣಮಾತ್ರದಲ್ಲಿ ವಿನಷ್ಟವಾಗುವುದನ್ನು ಪ್ರತ್ಯಕ್ಷವಾಗಿ ಕಂಡೂ ಅದರಿಂದ ಚಿರಸ್ಥಾಯಿಯಾದ ಶಬ್ದದ ಆವಿಷ್ಕರಣವಾಗುತ್ತದೆಯೆಂದು ಹೇಳುವುದು ಸರಿಯೇ ಎನ್ನಿಸಬಹುದು. ವೈಜ್ಞಾನಿಕ ದೃಷ್ಟಿಯಿಂದ, ಶಬ್ದದ 'ವಿಭುತ್ವ'ವು (ಉದಾ. ರೇಡಿಯೋ ಯಂತ್ರ) ಸಿದ್ಧವಾದಂತೆ ನಿತ್ಯತ್ವವೂ ಸ್ಥಾಪಿತವಾಗಬಹುದು.

ರೂಪದಲ್ಲಿ ಹೊರಟು ಕಡೆಕಡೆಯ ಅನುರಣನಗಳು ನಮ್ಮ ಕಿವಿಯನ್ನು ಮುಟ್ಟು ತ್ತವೆಂಬುದು ಸರ್ವವಿದಿತವಾದ ವಿಷಯ. ಹಾಗೆಯೇ ಶ್ರವಣಗೋಚರವಾದ ಶಬ್ದ ಗಳಿಂದ ಅನುರಣನರೂಪದಲ್ಲಿ ಪ್ರಕಾಶಹೊಂದುವ 'ಸ್ಫೋಟ'ವೆಂಬ ನಿತ್ಯಶಬ್ದಕ್ಕೆ 'ಧ್ವನಿ' ಎಂದು ಹೆಸರು.

(೨) ಆ ಸ್ಫೋಟವನ್ನು ಪ್ರಕಾಶಗೊಳಿಸುವ ನಾದರೂಪವಾದ ವರ್ಣಗಳಿಗೂ ಧ್ವನಿಯೆಂದು ಹೆಸರು.

(೩) ಆ ವರ್ಣಗಳ ಮಧ್ಯೆ ಇರುವ ಅನಿರ್ವಚನೀಯ ಸ್ವರೂಪವುಳ್ಳ ಮತ್ತು ಸ್ಫೋಟಾಭಿವ್ಯಂಜನಕ್ಕೆ ಸಹಾಯಮಾಡುವ ಪ್ರತ್ಯಯಗಳೇ ಮೊದಲಾದುವುಗಳಿಗೂ 'ಧ್ವನಿ' ಎಂದು ವ್ಯವಹಾರವಿದೆ.

(೪) ಕಡೆಯದಾಗಿ, ವರ್ಣಮಾತ್ರದ ಯಾವ ಪ್ರಸಿದ್ಧವಾದ ಉಚ್ಚಾರಣ ವ್ಯಾಪಾರವಿದೆಯೋ ಅದಕ್ಕಿಂತಲೂ ಅಧಿಕವಾದ ಬೇಗಬೇಗನೆ ಹೇಳುವಿಕೆ, ನಿಧಾನ ವಾಗಿ ಹೇಳುವಿಕೆ, ಕಾಕು, ಇವೇ ಮೊದಲಾದ ಯಾವ ವಿಶೇಷ ವ್ಯಾಪಾರವಿದೆಯೋ ಅದಕ್ಕೂ "ಧ್ವನಿ' ಎಂದು ಹೆಸರು.

ಮೇಲ್ಕಂಡ ಚತುರ್ವಿಧವಾದ ಧ್ವನಿಶಬ್ದವ್ಯುತ್ಪತ್ತಿಗೆ ಸರಿಹೊಂದುವಂತೆ ಸಾಹಿತ್ಯವಿಮರ್ಶೆಯಲ್ಲಿಯೂ 'ಧ್ವನಿ' ಶಬ್ದಕ್ಕೆ ಸಮಾನವಾದ ಅರ್ಥವನ್ನು ವಿಮರ್ಶ ಕರು ಕಲ್ಪಿಸಿರುತ್ತಾರೆ. ಇದೇ ಸ್ಫೋಟವಾದದಿಂದ ಬಂದ ಸ್ಫೂರ್ತಿ ಅಥವಾ ಮೇಲ್ಪಂಙ್ಕ್ತಿ. ವಿಮರ್ಶಕರ ಸಮನ್ವಯ ಸರಣಿಯನ್ನು ಈ ರೀತಿ ನಿರೂಪಿಸಬಹುದು.

(೧) ಕಾವ್ಯವನ್ನು ಕೇಳಿದಾಗ ವಾಚ್ಯಾರ್ಥದಿಂದ ಘಂಟೆಯ ಅನುರಣನದಂತೆ ವ್ಯಕ್ತವಾಗುವ (ಸ್ಫೋಟಸ್ಥಾನೀಯವಾದ) ವ್ಯಂಗ್ಯಾರ್ಥಕ್ಕೆ 'ಧ್ವನಿ' ಎಂದು ಹೆಸರು.

(೨) ಆ ವ್ಯಂಗ್ಯಾರ್ಥವನ್ನು ಪ್ರಕಾಶಪಡಿಸುವ (ವರ್ಣಸ್ಥಾನೀಯವಾದ) ವ್ಯಂಜಕಶಬ್ದವೂ 'ಧ್ವನಿ' ಎಂದು ಕರೆಯಲ್ಪಟ್ಟಿದೆ.

(೩) ವ್ಯಂಗ್ಯಾರ್ಥದ ಪ್ರಕಾಶನದಲ್ಲಿ ಸಹಕರಿಸುವ (ಪ್ರತ್ಯಯಸ್ಥಾನೀಯ ವಾದ) ವ್ಯಂಜಕಾರ್ಥವೂ 'ಧ್ವನಿ'ಯೇ.

(೪) ಹಿಂದೆ ಹೇಳಿದ ಅಭಿಧಾ, ಲಕ್ಷಣಾ, ತಾತ್ಪರ್ಯಾದಿ ವ್ಯಾಪಾರಗಳಿಂದ ಭಿನ್ನವಾದ (ವಿಶೇಷವಾದ ಉಚ್ಚಾರಣ ವ್ಯಾಪಾರಸ್ಥಾನೀಯವಾದ) ವ್ಯಂಜನಾ ವ್ಯಾಪಾರಕ್ಕೂ 'ಧ್ವನಿ' ಎಂದು ಹೆಸರಿಡಲಾಗಿದೆ.[1]

---

[1] ಇದರಿಂದ ವ್ಯಂಗ್ಯಾರ್ಥ, ವ್ಯಂಜಕಶಬ್ದ, ವ್ಯಂಜಕಾರ್ಥ, ವ್ಯಂಜನಾವ್ಯಾಪಾರ, ಈ ನಾಲ್ಕಕ್ಕೂ 'ಧ್ವನಿ' ಎಂದು ಹೆಸರಾದಂತಾಯಿತು. ಕಡೆಯದಾಗಿ ಎಲ್ಲವನ್ನೂ ಒಳಕೊಂಡ ಯಾವ ಕಾವ್ಯ ವಿದೆಯೋ ಅದಕ್ಕೂ 'ಧ್ವನಿ' ಎಂದು ಹೆಸರು. ಹೀಗೆ 'ಧ್ವನಿ' ಶಬ್ದಕ್ಕೆ ಐದು ಅರ್ಥಗಳು.

ವಾದಿಸಿದಲ್ಲಿ ಅಭಾವವಾದದ ಎರಡನೆಯ ಅಸ್ತ್ರವು ಹೊರಡುವುದು. ಗುಣಾಲಂಕಾರ ಭಿನ್ನವಾದ ಧ್ವನಿಯು ಇದೆಯೆನ್ನುವಲ್ಲಿ ಅದು ಕಾವ್ಯಕ್ಕೆ ಶೋಭಾಕಾರಿಯಲ್ಲವೇ ಅಲ್ಲ. ಏಕೆಂದರೆ, ಕಾವ್ಯಕ್ಕೆ ಯಾವ ಯಾವ ಅಂಶವು ಜೀವಕೊಡುತ್ತದೆಯೋ ಯಾವ ಯಾವುದು ಅಲಂಕಾರಪ್ರಾಯವೋ ಅವೆಲ್ಲವೂ ಸಂಪೂರ್ಣವಾಗಿ ಶೋಧಿಸಲ್ಪಟ್ಟಿರುವುದರಿಂದ ಪ್ರಸಿದ್ಧವಾದ ಗುಣಾಲಂಕಾರಗಳನ್ನು ಬಿಟ್ಟು ಮತ್ತಾವುದೂ ಕಾವ್ಯಕ್ಕೆ ಭೂಷಣವೇ ಅಲ್ಲ ಎಂಬುದಿರಲಿ, ಅದರಿಂದ ಕಾವ್ಯತ್ವಕ್ಕೇ ಕುಂದು ಬಂದರೂ ಬಂದೀತು. ಎಂಬುದೇ ಎರಡನೆಯ ವಿಕಲ್ಪ. ಎಲ್ಲಿ ಧ್ವನಿಯೂ ಶೋಭಾಕಾರಿಯೋ ಆ ಕಾವ್ಯವೇ ನಮ್ಮ ದೃಷ್ಟಿಯಿಂದ ಕಾವ್ಯವೆನ್ನಿಸಿಕೊಳ್ಳುತ್ತದೆಯೆಂದು ಧ್ವನಿವಾದಿಗಳು ಹೇಳಿದ್ದೇ ಆದರೆ ಅದಕ್ಕೆ ಬಹಳ ಸ್ವಾರಸ್ಯವಾದ ಉತ್ತರವನ್ನು ಅಭಿನವಗುಪ್ತರು ವ್ಯಾಖ್ಯಾನದಲ್ಲಿ ನಿರೂಪಿಸುತ್ತಾರೆ. "ಖಡ್ಗದ ಲಕ್ಷಣವನ್ನು ಹೇಳಯ್ಯ ಎಂದು ಒಬ್ಬನನ್ನು ಕೇಳಿದರೆ "ಹಾಸು ಹೊಕ್ಕುಗಳಿಂದ ಕೂಡಿದ್ದು, ಬಣ್ಣಬಣ್ಣದ ದಾರಗಳಿಂದ ಮಾಡಿದ್ದು, ದೇಹವನ್ನು ಮುಚ್ಚತಕ್ಕದ್ದು" ಎಂದು ಮೊದಲಾಗಿ ಹೇಳಿದನಂತೆ; "ಅಲ್ಲಯ್ಯಾ, ನೀನು ಹೇಳುವುದು ಬಟ್ಟೆಯ ಲಕ್ಷಣವಲ್ಲವೆ" ಎಂದಾಗ "ಈ ಲಕ್ಷಣಗಳುಳ್ಳದ್ದನ್ನೇ ನಾವು ಖಡ್ಗವೆಂದು ಕರೆಯುವುದು" ಎಂದು ಹೇಳಿದಂತಾಯಿತು—"ನಿಮ್ಮ ವಾದ" ಎಂದು ಅಭಾವವಾದಿಗಳು ಪರಿಹಾಸ್ಯಮಾಡುತ್ತಾರೆ. ಅಂದರೆ, ಎಲ್ಲರೂ ಯಾವುದನ್ನು ಕಾವ್ಯವೆಂದು ಕರೆಯುತ್ತಾರೊ ಅದು ಕಾವ್ಯವೇ ಹೊರತು ನೀವು ಹೇಳಿದಂತೆ "ಧ್ವನಿಭೂಷಿತವಾದ ಕಾವ್ಯವೇ" ಕಾವ್ಯವಾಗುವುದಿಲ್ಲವೆಂದೂ, ಎಲ್ಲರಿಗೂ ಯಾವುದು ಕಾವ್ಯವೆಂದು ಸಮ್ಮತವೋ ಅದಕ್ಕೆ ಗುಣಾಲಂಕಾರಗಳು ಭೂಷಣವೇ ಹೊರತು 'ಧ್ವನಿ'ಯಲ್ಲವೆಂದೂ ಇವರ ತಾತ್ಪರ್ಯ.

ಈ ವಾದಕ್ಕೂ ಸಿಕ್ಕದೆ "ಧ್ವನಿ" ಎಂಬುದು ಶೋಭಾಕಾರಿಯೇ ಆಗಿದೆಯೆಂದು ಧ್ವನಿವಾದಿಗಳು ವಾದಿಸಿದರೆ, ಮೂರನೆಯ ವಿಕಲ್ಪವು ಹೊರಡುತ್ತದೆ. ಧ್ವನಿಯು ನಿಜವಾಗಿಯೂ ಶೋಭಾಕಾರಿಯೇ ಆಗಿದೆಯೆಂದು ನೀವು ಪ್ರತಿಜ್ಞೆ ಮಾಡಿದಲ್ಲಿ ಅದು ಇದುವರೆಗೆ ಹೇಳಲ್ಪಟ್ಟಿರುವ ಗುಣಾಲಂಕಾರಗಳಿಗೆ ವ್ಯತಿರಿಕ್ತವಲ್ಲ. ಆದ್ದರಿಂದ ಅದು ಸಾವಿರಾರು ಭೇದಗಳುಳ್ಳ ಗುಣಾಲಂಕಾರಗಳ ಯಾವುದೋ ಒಂದು ಸಣ್ಣ ಪ್ರಕಾರ ಮಾತ್ರವಾಗಿರಬೇಕು. ಅಂತೂ ಅದೇನೂ ಹೊಸದಲ್ಲ. ಮತ್ತು ಆ ಪ್ರಕಾರ ಲೇಶವನ್ನು ಇಷ್ಟು ಮಟ್ಟಿಗೆ ದೊಡ್ಡದುಮಾಡಿ ಹೊಗಳುವುದರಲ್ಲೂ ಅರ್ಥವಿಲ್ಲವೆಂಬುದೇ ಅಭಾವವಾದದ ಮೂರನೆಯ ಪ್ರಕಾರ. ಒಟ್ಟಿನಲ್ಲಿ, ಗುಣಾಲಂಕಾರ ಭಿನ್ನವಾದ ಬೇರೆ ಯಾವ ಕಾವ್ಯಶೋಭಾಕಾರಿಯೂ ಇಲ್ಲವೆಂಬುದೇ ಇವರೆಲ್ಲರ ಮುಖ್ಯಸಿದ್ಧಾಂತ.

ಈ ವಾದಗಳನ್ನು ಖಂಡಿಸಿ ಧ್ವನಿಯೆಂಬುದಿದೆಯೆಂದು ತೋರಿಸಿದಲ್ಲದೆ ಅದರ ಸ್ವರೂಪ, ಭೇದ ಮತ್ತು ಪ್ರಭೇದಗಳನ್ನು ಎಷ್ಟು ವಿವರಿಸಿದರೂ ಫಲವಿಲ್ಲವೆಂಬುದನ್ನರಿತು ಶ್ರೀ ಆನಂದವರ್ಧನರು ಮೊಟ್ಟಮೊದಲಲ್ಲಿಯೇ ಧ್ವನಿಯ ಸದ್ಭಾವವನ್ನು ಪ್ರಮಾಣ ಪೂರ್ವಕವಾಗಿ ಸ್ಥಾಪಿಸುತ್ತಾರೆ. ಇಲ್ಲಿಯೂ ಅವರು ಪ್ರಶಂಸನೀಯವಾದ ಮಾರ್ಗವನ್ನನುಸರಿಸಿ ಧ್ವನಿ ಸಿದ್ಧಾಂತಕ್ಕೆ ಅಡಿಗಲ್ಲಾದ 'ವ್ಯಂಗ್ಯಾರ್ಥ'ದ ಸದ್ಭಾವವನ್ನು ಅನುಭವವೇದ್ಯವಾಗುವಂತೆ ನಿರ್ವಿವಾದವಾದ ರೀತಿಯಿಂದ ಸಾಧಿಸಿ ಅನಂತರ ಮಿಕ್ಕ ವಿಚಾರಗಳಿಗೆ ಪ್ರವೇಶಿಸುತ್ತಾರೆ.

ವಾಚ್ಯಭಿನ್ನವಾದ ವ್ಯಂಗ್ಯಾರ್ಥವಿದೆಯೆನ್ನುವುದಕ್ಕೆ ಮೂರು ಮುಖ್ಯವಾದ ಕಾರಣಗಳನ್ನು ಕೊಡಲಾಗಿದೆ. ಮೊದಲಾಗಿ, ವಸ್ತು, ರಸ, ಅಲಂಕಾರ ಎಂದು ಮೂರು ವಿಧವಾದ ವ್ಯಂಗ್ಯವೂ ವಾಚ್ಯವೂ ಸ್ವರೂಪತಃ ಭಿನ್ನವಾಗಿವೆ. ಎಂದರೆ, ವಾಚ್ಯಾರ್ಥದ ಸ್ವರೂಪವೇ ಬೇರೆ; ವ್ಯಂಗ್ಯಾರ್ಥದ ಸ್ವರೂಪವೇ ಬೇರೆ. ಹೇಗೆಂದರೆ, ವಾಚ್ಯ ವ್ಯಂಗ್ಯಗಳೆರಡೂ ಇರುವ ಕೆಲವು ಕಡೆಗಳಲ್ಲಿ ವಾಚ್ಯಾರ್ಥವು ಒಂದು ವಿಧಿಯನ್ನು ನಿರೂಪಿಸುವಾಗ ವ್ಯಂಗ್ಯಾರ್ಥವು ನಿಷೇಧವನ್ನು ನಿರೂಪಿಸುತ್ತದೆ. ಒಬ್ಬಳು ಅಸತಿಯು ಪ್ರಿಯನ ಸಮಾಗಮಕ್ಕಾಗಿ ಗೋದಾವರೀ ತೀರದಲ್ಲಿ ಕಾಯುತ್ತಿದ್ದಾಗ ಯಾವನೋ ಒಬ್ಬ ಸನ್ಯಾಸಿಯು ಅಲ್ಲಿಗೆ ಬಂದನಂತೆ. ಆಗ ಅವಳು ಅವನನ್ನು ಕುರಿತು "ಧಾರ್ಮಿಕನೇ! ಇನ್ನು ಮೇಲೆ ನೀನಿಲ್ಲಿ ನಿರಾಳವಾಗಿ ಸಂಚರಿಸಬಹುದು; ಏಕೆಂದರೆ, ಆ ಹಾಳು ನಾಯಿ ಇದೆಯಲ್ಲ; ಅದನ್ನು ಇಲ್ಲಿ ವಾಸಿಸುವ ಸಿಂಹವೊಂದು ಕೊಂದುಹಾಕಿತು" ಎಂದು ಹೇಳಿದಳಂತೆ. ಪಾಪ, ಬ್ರಾಹ್ಮಣನಾದ ಧಾರ್ಮಿಕನು ನಿತ್ಯವೂ ಹೂವು ಕುಯ್ಯಲು ಬರುತ್ತಿದ್ದಾಗ ಒಂದು ನಾಯಿಯು ತೊಂದರೆಕೊಡುತ್ತಿದ್ದಿರಬೇಕು. ಆ ನಾಯಿ ಈಗ ಸತ್ತಿತು, ಇನ್ನು ಮೇಲೆ ಪರವಾ ಇಲ್ಲವೆಂದು ಧಾರ್ಮಿಕನ ಸಂಚಾರಕ್ಕೆ ಅಡ್ಡಿಯಿಲ್ಲವೆಂಬ ವಾಚ್ಯಾರ್ಥವಿರುವಲ್ಲಿ ತನ್ನ ಪ್ರೇಮಕ್ರೀಡೆಗೆ ಭಂಗತರುವ ಈ ಬ್ರಾಹ್ಮಣನನ್ನು ಓಡಿಸಬೇಕೆಂದು ಆ ಬುದ್ಧಿವಂತೆ "ನಾಯನ್ನು ಸಿಂಹ ಕೊಂದಿತು" ಎಂದು ಹೇಳಿ "ಇಲ್ಲಿ ನಾಯಿಗೂ ಭಯಂಕರವಾದ ಸಿಂಹವಿದೆ. ನಾಯಿ ನಿನ್ನ ಮಡಿಗೆ ಭಂಗ ತರುತ್ತಿತ್ತು. ಆದರೆ ಸಿಂಹ ನಿನ್ನನ್ನೇ ಮುಗಿಸುತ್ತದೆ. ಆದ್ದರಿಂದ ನೀನು ಬೇಗ ಹೊರಡು" ಎಂಬ ಪ್ರತಿಷೇಧರೂಪವಾದ ಅರ್ಥವನ್ನು ವ್ಯಂಗ್ಯರೀತಿಯಲ್ಲಿ ಸೂಚಿಸುತ್ತಾಳೆ. ಧಾರ್ಮಿಕನ ಪುಷ್ಪಶೇಖರಣಕ್ಕೆ ಅಡ್ಡಿಪಡಿಸಿ ಅವನನ್ನು ಕಟುವಾದ ಮಾತಿನಿಂದ ಓಡಿಸಲು ಇಷ್ಟವಿಲ್ಲ. ಮತ್ತು "ಇಲ್ಲಿ ಸಿಂಹವಿದೆ, ನೀನು ಹೊರಡು" ಎಂದು ಸ್ಪಷ್ಟವಾಗಿ ಹೇಳಿದರೆ "ನಿನಗೆ ಹೆದರಿಕೆಯಿಲ್ಲವೆ? ನೀನೇಕೆ ಇಲ್ಲಿರುತ್ತಿಯೆ?" ಎಂಬ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾ

ದೀತೆಂಬ ಹೆದರಿಕೆ. ಪ್ರಿಯನ ಸಮಾಗಮವನ್ನು ಮುಂದುಹಾಕುವ ಯೋಚನೆಯಂತೂ ಇಲ್ಲವೇ ಇಲ್ಲ. ಆದ್ದರಿಂದಲೇ "ನೀನು ನಿಸ್ಸಂಕೋಚವಾಗಿ ತಿರುಗು" ಎಂದು ಸ್ಪಷ್ಟವಾಗಿ ಹೇಳಿ, ತದ್ವ್ಯತಿರಿಕ್ತವಾಗಿ "ಬೇಡ, ಈಕ್ಷಣ ಇಲ್ಲಿಂದ ಹೊರಡು" ಎಂದು ವ್ಯಂಗ್ಯವಾಗಿ ಸೂಚಿಸುತ್ತಾಳೆ.[1] ಇದೇ ರೀತಿ ವಾಚ್ಯವು ಪ್ರತಿಷೇಧರೂಪವಾಗಿರುವಾಗ ವ್ಯಂಗ್ಯವು ವಿಧಿರೂಪವಾಗಿರುವುದಕ್ಕೂ,[2] ವಾಚ್ಯವು ವಿಧಿರೂಪವಾಗಲಿ[3] ಪ್ರತಿಷೇಧರೂಪವಾಗಲಿ[4] ಆಗಿರುವಾಗ ವ್ಯಂಗ್ಯವು ವಿಧಿಯೂ ಅಲ್ಲ, ಪ್ರತಿಷೇಧವೂ ಅಲ್ಲ, ಆರೀತಿ ಇರುವುದಕ್ಕೂ ಉದಾಹರಣೆಗಳನ್ನು ನಿರೂಪಿಸಿ ವ್ಯಂಗ್ಯಕ್ಕೂ ವಾಚ್ಯಕ್ಕೂ ಇರುವ ಸ್ವರೂಪಭೇದವನ್ನು ಸ್ಪಷ್ಟಪಡಿಸಲಾಗಿದೆ. ಎರಡನೆಯದಾಗಿ, ವ್ಯಂಗ್ಯಾರ್ಥಕ್ಕೂ ವಾಚ್ಯಾರ್ಥಕ್ಕೂ ವಿಷಯಭೇದವಿದೆಯೆಂಬುದನ್ನು ಒಂದು ರಮ್ಯವಾದ ಶ್ಲೋಕದ[5] ಉದಾಹರಣೆಯಿಂದ ಸ್ಥಾಪಿಸಲಾಗಿದೆ. ವಿಷಯಭೇದವೆಂದರೆ ಒಬ್ಬೊಬ್ಬರ ವಿಷಯದಲ್ಲಿ ಒಂದೊಂದು ಅರ್ಥದ ಅನ್ವಯಿಸುವಿಕೆ. ನಾಲ್ಕಾರು ಜನರು ಸೇರಿರುವ ಒಂದು ಸನ್ನಿವೇಶದಲ್ಲಿ ಉಚ್ಚರಿಸಲ್ಪಟ್ಟ ವಾಕ್ಯದ ವಾಚ್ಯಾರ್ಥವು ಒಬ್ಬರಿಗೂ ವ್ಯಂಗ್ಯಾರ್ಥವು ಮತ್ತೊಬ್ಬರಿಗೂ (ಅನೇಕ ವ್ಯಂಗ್ಯಾರ್ಥಗಳಿದ್ದಲ್ಲಿ ಒಂದೊಂದೂ ಬೇರೆಬೇರೆಯಾಗಿ ಒಬ್ಬೊಬ್ಬರಿಗೂ) ತಿಳಿಯುವುದೂ, ಒಬ್ಬರಿಗೆ ತಿಳಿಯಬೇಕೆಂದು ಅಪೇಕ್ಷಿತವಾದ ವ್ಯಂಗ್ಯಾರ್ಥವು ಇನ್ನೊಬ್ಬರಿಗೆ ತಿಳಿಯದಿರುವುದೂ ಅನುಭವಸಿದ್ಧವಾಗಿದೆ. ಹೀಗೆ ವಾಚ್ಯಾರ್ಥಕ್ಕೆ ಒಬ್ಬರು ವಿಷಯವಾಗಿ ವ್ಯಂಗ್ಯಾರ್ಥಕ್ಕೆ ಮತ್ತೊಂದು ವ್ಯಕ್ತಿಯು ವಿಷಯವಾಗಿರುವಂತೆ ಅನೇಕ ಸಂದರ್ಭಗಳಲ್ಲಿ ಕಂಡುಬರುವುದರಿಂದ ವಾಚ್ಯಾರ್ಥಕ್ಕೂ ವ್ಯಂಗ್ಯಾರ್ಥಕ್ಕೂ ಬಹಳ ವ್ಯತ್ಯಾಸವಿದೆಯೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಮೂರನೆಯ ಕಾರಣವನ್ನು ನಿರೂಪಿಸುವಾಗ, ವ್ಯಂಗ್ಯಾರ್ಥದ ಜ್ಞಾನವು ಪ್ರತಿಪಕ್ಷದವರಿಗೆ ಏಕೆ ಉಂಟಾಗಿಲ್ಲವೆಂಬುದೂ, ವ್ಯಂಜನಾವ್ಯಾಪಾರದ ಸದ್ಭಾವವೂ ಪ್ರಾಸಂಗಿಕವಾಗಿ ವ್ಯಕ್ತಪಡುತ್ತವೆ. ವ್ಯಂಗ್ಯವೂ ವಾಚ್ಯವೂ ಬೇರೆ ಬೇರೆ ಉಪಾಯ (ಸಾಮಗ್ರಿ) ಗಳಿಂದ ವೇದ್ಯವಾಗುತ್ತವೆ. ಅಂದರೆ ಮೇಲೆ ಹೇಳಿದಂತೆ, ವಾಚ್ಯಾರ್ಥವು

[1] ಭಮ ಧಮ್ಮಿಅ ವೀಸದ್ಧೋ—ಎಂಬ ಶ್ಲೋಕವನ್ನು ನೋಡಬಹುದು. ಧ್ವ. ಪುಟ ೫೨.

[2] ಅತ್ತಾ ಏತ್ಥ ಣಿಮಜ್ಜಇ—ಎಂಬ ಶ್ಲೋಕ. ಪುಟ ೭೧.

[3] ವಚ್ಚ ಮಹಪ್ಪಿಅ ಏಕ್ಕೇ—ಇತ್ಯಾದಿ. ಪುಟ ೭೩.

[4] ದೇ ಆ ಪಸಿಅ ಣಿವತ್ತಸು—ಇತ್ಯಾದಿ. ಪುಟ ೭೪. ಈ ಶ್ಲೋಕಗಳ ವಿವರಣೆಯನ್ನು ಗ್ರಂಥತಃ ತಿಳಿಯಬಹುದು.

[5] ಕಸ್ಸ ವ ಣಹೋಇ ರೋಸೋ—ಎಂಬ ಶ್ಲೋಕ. ಪುಟ ೭೬.

ಶಬ್ದದ ಅಭಿಧಾಶಕ್ತಿಯಿಂದ ತಿಳಿಯುತ್ತದೆ. ಆದರೆ ವ್ಯಂಗ್ಯಾರ್ಥವು ವ್ಯಂಜನಾ ವೃತ್ತಿಯಿಂದ ವೇದ್ಯವಾಗುತ್ತದೆ. ಆದ್ದರಿಂದ, ಸಂಗೀತವನ್ನು ಸ್ವಲ್ಪವೂ ಅಭ್ಯಾಸ ಮಾಡದೆ ಪುಸ್ತಕವನ್ನೋದಿ ಸ್ವರ, ಶ್ರುತಿ ಮೊದಲಾದುವುಗಳ ಸ್ವರೂಪವನ್ನು ತಿಳಿಯಲಪೇಕ್ಷಿಸುವ ವಿದ್ವಾಂಸರಿಗೆ ಹೇಗೆ ಜ್ಞಾನೋದಯವಾಗುವುದಿಲ್ಲವೋ ಹಾಗೆ ಕೇವಲ ಶಬ್ದದ ಮೂಲರೂಪ, ನಿಷ್ಪತ್ತಿ, ಅರ್ಥ ಇವುಗಳನ್ನು ಚರ್ಚಿಸುವವರಿಗೆ ವ್ಯಂಗ್ಯಾರ್ಥದ ಜ್ಞಾನವು ಉಂಟಾಗುವುದಿಲ್ಲವೆಂದು ಆನಂದವರ್ಧನರು ಪ್ರತಿಪಾದಿಸಿರುತ್ತಾರೆ.

ಹೀಗೆ ಸ್ವರೂಪಭೇದ, ವಿಷಯಭೇದ, ಭಿನ್ನಸಾಮಗ್ರೀವೇದ್ಯತ್ವವೆಂಬ ಮೂರು ಪ್ರಮಾಣಗಳಿಂದ ವಾಚ್ಯಭಿನ್ನವಾದ ವ್ಯಂಗ್ಯಾರ್ಥವೂ ವ್ಯಂಗ್ಯಾರ್ಥ ಪ್ರಕಾಶನಕ್ಕೆ ಆವಶ್ಯಕವಾದ ವ್ಯಂಜನಾ ವ್ಯಾಪಾರವೂ ಇದೆಯೆಂದು ಪ್ರತ್ಯಕ್ಷವಾಗಿ ತೋರಿಸಿ ಅನಂತರ ಈ ಪ್ರತೀಯಮಾನ, ಅಥವಾ ವ್ಯಂಗ್ಯಾರ್ಥವೇ ಕಾವ್ಯದಲ್ಲಿ ಸಾರಭೂತವಾದದ್ದೆಂದು ಇತಿಹಾಸಬಲದಿಂದಲೂ, ಅನುಭವನಿದರ್ಶನದಿಂದಲೂ ತಿಳಿಸುತ್ತಾರೆ. ಅಂಗನೆಯರ ಲಾವಣ್ಯಕ್ಕೆ ಸಮಾನವಾದ ವಾಚ್ಯಭಿನ್ನವಾದ ವ್ಯಂಗ್ಯವು ಇದೆಯೆಂಬುದು ಸಿದ್ಧವಾದ ಕೂಡಲೆ 'ಧ್ವನಿ'ಯ ಸದ್ಭಾವವು ಸಿದ್ಧವಾಗಿ ಅಭಾವ ವಾದಿಗಳ ಬಾಯಿಮುಚ್ಚಿದಂತಾಯಿತು. ಆದರೆ ಭಾಕ್ತವಾದಿಗಳಿಗೆ ಇನ್ನೂ ಉತ್ತರ ಕೊಟ್ಟಂತಾಗಲಿಲ್ಲ. ಇವರ ವಾದದ ಸರಣಿಯೇ ಬೇರೆ. ವ್ಯಂಗ್ಯಾರ್ಥವೆಂಬುದು ಇದೆಯೆನ್ನುವ ವಿಚಾರದಲ್ಲೂ ಅದು ಅಭಿಧಾವೃತ್ತಿಯಿಂದ ಹೊರಪಡುವುದಿಲ್ಲವೆಂಬುದರಲ್ಲೂ ಇವರಿಗೆ ಸಂಶಯವೇ ಇಲ್ಲ. ಆದರೆ ಲಕ್ಷಣಾವೃತ್ತಿಯಿಂದ ಹೊರಪಡುವ ಲಕ್ಷ್ಯಾರ್ಥದಲ್ಲಿಯೇ ಧ್ವನಿಯು ಅಂತರ್ಭವಿಸುತ್ತದೆಯೆಂದು ಇವರ ವಾದ. ['ಭಕ್ತಿ' ಎಂದರೆ ಉಪಚಾರ (ಪ್ರಯೋಜನವಿವಕ್ಷೆಯಿಲ್ಲದ ಲಕ್ಷಣಾ) ಎಂದು ಅರ್ಥ. ಭಾಕ್ತವೆಂದರೆ, ಭಕ್ತಿ ಅಥವಾ ಪ್ರಯೋಜನ ವಿವಕ್ಷೆಯಿಲ್ಲದಂತೆ ಲಕ್ಷಣಾ ವೃತ್ತಿಯಿಂದ ಹೊರಪಟ್ಟದ್ದು ಎಂದು ತಾತ್ಪರ್ಯ.] ಆದ್ದರಿಂದ ವ್ಯಂಗ್ಯಾರ್ಥವನ್ನೂ ವ್ಯಂಜನಾವೃತ್ತಿಯನ್ನೂ ಲಕ್ಷ್ಯಾರ್ಥ ಲಕ್ಷಣಾವೃತ್ತಿಗಳಿಂದ ಭಿನ್ನವಾದದ್ದೆಂದು ಹೇಳಿ ಅನಾವಶ್ಯಕವಾದ ಮೂರನೆಯ ವೃತ್ತಿಯನ್ನು ಸ್ವೀಕರಿಸುವ ಲಾಘವ[1]ಕ್ಕೆ ಎಡೆಗೊಡಬೇಕಾಗಿಲ್ಲವೆಂಬುದೇ ಭಾಕ್ತವಾದಿಗಳ ಅಭಿಪ್ರಾಯ. 'ಧ್ವನಿ'ಯು

1 ಲಾಘವ, ಗೌರವ ವಿಚಾರವು ಎಲ್ಲಾ ಶಾಸ್ತ್ರಗಳಲ್ಲೂ ಬಹು ಮುಖ್ಯವಾದುದು. ಎರಡೇ ವೃತ್ತಿಗಳನ್ನು ಸ್ವೀಕರಿಸಿ ವಾಚ್ಯ, ಲಕ್ಷ್ಯ, ವ್ಯಂಗ್ಯಾರ್ಥಗಳೆಲ್ಲದರ ಹೊರಪಡುವಿಕೆಯನ್ನು ಪ್ರತಿಪಾದಿಸಿದರೆ 'ಗೌರವ,' ಮೂರು ವೃತ್ತಿಗಳನ್ನು ಸ್ವೀಕರಿಸಿದರೆ 'ಲಾಘವ,' ಎಂದು ಸ್ಥೂಲವಾಗಿ ವಿವರಿಸಬಹುದು.

'ಭಾಕ್ತ'ವೆಂದು ಒಪ್ಪಿದರೆ ಅನೇಕ ತೊಂದರೆಗಳು ಬರುತ್ತವೆಂದು ಆನಂದವರ್ಧನರು ಪ್ರತಿಪಾದಿಸಿ, ಧ್ವನಿಯಿರುವಲ್ಲಿ ಲಕ್ಷಣಾರ್ಥವಿಲ್ಲದಿರುವಿಕೆಗೂ,[1] ಲಕ್ಷಣಾರ್ಥವಿದ್ದರೂ ಧ್ವನಿಯಿಲ್ಲದಿರುವಿಕೆಗೂ[2] ಉದಾಹರಣೆಗಳನ್ನು ನಿರೂಪಿಸಿ 'ಭಕ್ತಿ'ಯು ಧ್ವನಿಯ ಒಂದು ಭೇದಕ್ಕೆ ಮಾತ್ರ ಉಪಲಕ್ಷಣವೆಂದು ಸ್ಪಷ್ಟಪಡಿಸುತ್ತಾರೆ. ಇದೂ ಅಲ್ಲದೆ, ಯಾವ ಫಲಪ್ರಯೋಜನವನ್ನುದ್ದೇಶಿಸಿ ಲಕ್ಷಣಾವೃತ್ತಿಯು ಲಕ್ಷ್ಯಾರ್ಥವನ್ನು ಕೊಡುತ್ತದೆಯೋ ಆ ಪ್ರಯೋಜನದ ಪ್ರತೀತಿಯ ವಿಷಯದಲ್ಲಿ ಲಕ್ಷಣಾವೃತ್ತಿಯು ಕೆಲಸಮಾಡುವುದಿಲ್ಲವೆಂದೂ ವ್ಯಂಗ್ಯಾರ್ಥದ ಪ್ರಕಾಶನಕ್ಕೆ ಬೇರೆ ಒಂದು ವ್ಯಾಪಾರವು ಆವಶ್ಯಕವೆಂದೂ ಆನಂದವರ್ಧನರು ನಿರೂಪಿಸುತ್ತಾರೆ. ಆದ್ದರಿಂದ ಲಕ್ಷ್ಯಾರ್ಥವೇ ಬೇರೆ, ವ್ಯಂಗ್ಯಾರ್ಥವೇ ಬೇರೆ. ಹೀಗೆಯೇ ತಾತ್ಪರ್ಯವೃತ್ತಿಯೆಂಬ ಬೇರೊಂದು ವ್ಯಾಪಾರವನ್ನು ಅಂಗೀಕರಿಸುವ ಮೀಮಾಂಸಕರೂ ವ್ಯಂಜನಾವೃತ್ತಿಯನ್ನು ಒಪ್ಪಲೇಬೇಕೆಂದು ಸೂಚಿಸುವುದಕ್ಕೋಸ್ಕರ ಯಾವ ಯಾವ ವೃತ್ತಿಯು ಎಷ್ಟೆಷ್ಟು ಮಟ್ಟಿಗೆ ಕೆಲಸಮಾಡುತ್ತದೆಯೆಂಬುದನ್ನೂ ನಿರ್ಣಯಿಸಿ ತಾತ್ಪರ್ಯವೃತ್ತಿ ಅಭಿಧಾವೃತ್ತಿಯು ಉಪರತವಾದನಂತರ ಕೆಲಸಮಾಡುತ್ತದೆಯೆಂದೂ ಇದು ವಾಚ್ಯಾರ್ಥದ ಆವಿಷ್ಕರಣಕ್ಕೆ ಮಾತ್ರ ಸಹಾಯಕವೆಂದೂ ತೋರಿಸುತ್ತಾರೆ. ಆದ್ದರಿಂದ ಅಭಿಧಾ, ತಾತ್ಪರ್ಯ, ಲಕ್ಷಣಾ ಮತ್ತು ವ್ಯಂಜನಾವೃತ್ತಿಗಳು ಇದೇ ಕ್ರಮದಲ್ಲಿ ಕೆಲಸಮಾಡಿ ಒಂದೊಂದೂ ಅದರದರ ಕೆಲಸವನ್ನು ಮಾಡಿದನಂತರ ವಿಶ್ರಾಂತಿ ಹೊಂದುತ್ತದೆಂದೂ ಮುಂದಿನ ವ್ಯಾಪಾರದಲ್ಲಿ ಅದು ಸಹಕರಿಸುವುದಿಲ್ಲವೆಂದೂ ತಿಳಿಸಿ ವ್ಯಂಗ್ಯಾರ್ಥದ ಪ್ರಕಾಶನವು ಅಭಿಧಾ, ತಾತ್ಪರ್ಯ ಮತ್ತು ಲಕ್ಷಣಾವೃತ್ತಿಗಳು ವಿಶ್ರಾಂತಿಹೊಂದಿದ ಮೇಲೆ ವ್ಯಂಜನಾವೃತ್ತಿಯೆಂಬ ಬೇರೊಂದು ಹೊಸ ವ್ಯಾಪಾರದಿಂದಲೇ ನೆರವೇರುತ್ತದೆಯೆಂದು ನಿರ್ಣಯಿಸಲಾಗಿದೆ.

ಹೀಗೆ ಧ್ವನಿಯ ಲಕ್ಷಣಕ್ಕೆ ಭೂಮಿಕೆಯ ರೂಪವಾಗಿ ವ್ಯಂಗ್ಯಾರ್ಥದ ಸದ್ಭಾವವನ್ನೂ ಪ್ರಾಶಸ್ತ್ಯವನ್ನೂ ಉದಾಹರಣೆಗಳ ಮೂಲಕ ವಿವರಿಸಿ ಬಳಿಕ ಮೂರನೆಯದಾದ ಅನಿರ್ವಚನೀಯತ್ವವಾದವನ್ನು ಖಂಡಿಸುವುದಕ್ಕೋಸ್ಕರ ಧ್ವನಿಯ ಲಕ್ಷಣವನ್ನು ಈ ರೀತಿ ರಚಿಸಲಾಗಿದೆ.[3]

---

[1] ಅಭಿಧಾಮೂಲಧ್ವನಿ.

[2] ಧ್ವ. ಪುಟ, ೧೪೩.

[3] ಧ್ವನಿಯ ಲಕ್ಷಣವನ್ನು ಹೇಳುವುದಕ್ಕಾಗುವುದಿಲ್ಲ; ಆದುದರಿಂದ ಧ್ವನಿಯು ಅನಿರ್ವಚನೀಯವೆಂದು ಹೇಳುವ ವಾದಕ್ಕೆ ಧ್ವನಿಯ ಲಕ್ಷಣವನ್ನು ಹೇಳುವುದೇ ಖಂಡನವೆಂಬುದು ಸ್ಪಷ್ಟವಾಗಿದೆ. ಇದನ್ನು ಬಿಟ್ಟು ಬೇರೆ ಯಾವ ಚರ್ಚೆಗೂ ಅವಕಾಶವಿಲ್ಲ.

"ಯತ್ರಾರ್ಥಃ ಶಬ್ದೋವಾ ತಮರ್ಥಮುಪಸರ್ಜನೀಕೃತಸ್ವಾರ್ಥೌ|
ವ್ಯಂಜ್ತಃ ಕಾವ್ಯವಿಶೇಷಃ ಸ ಧ್ವನಿರಿತಿ ಸೂರಿಭಿಃ ಕಥಿತಃ||

(ಧ್ವ. ಪುಟ. ೧೦೩).

"ಎಲ್ಲಿ ಶಬ್ದವೋ ಅರ್ಥವೋ (ಕ್ರಮವಾಗಿ) ತನ್ನ ಅರ್ಥವನ್ನೂ, ತನ್ನನ್ನೂ ಅಪ್ರಧಾನವನ್ನಾಗಿಸಿಕೊಂಡು (ಆ ವ್ಯಂಗ್ಯ) ಅರ್ಥವನ್ನು ಪ್ರಕಾಶಿಸುತ್ತವೆಯೋ, ಆ ವಿಧವಾದ ಕಾವ್ಯ ಧ್ವನಿಯೆಂದು ವಿದ್ವಾಂಸರಿಂದ ಹೇಳಲ್ಪಟ್ಟಿದೆ."

ಈ ಲಕ್ಷಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಧ್ವನಿ ತತ್ವದ ಮುಖ್ಯವಾದ ಅಂಶಗಳು ತಿಳಿಯುತ್ತವೆ. ಶಬ್ದವೂ, ಅದರ ವಾಚ್ಯ (ಅಂದರೆ ಅಭಿಧಾವೃತ್ತಿಯಿಂದ ಹೊರಡುವ) ಅರ್ಥ ಇವೆರಡೂ ಸೇರಿಯೇ ವ್ಯಂಗ್ಯಾರ್ಥವನ್ನು ಹೊರಪಡಿಸುತ್ತವೆ. ಆದರೆ ಕೆಲವು ಕಡೆಗಳಲ್ಲಿ ಶಬ್ದವು ಪ್ರಧಾನವಾದ ವ್ಯಂಜಕವಾಗಿಯೂ ಕೆಲವು ಕಡೆ ಅರ್ಥವು ಪ್ರಧಾನವಾದ ವ್ಯಂಜಕವಾಗಿಯೂ ಇರುತ್ತದೆ. ಶಬ್ದವು ತನ್ನ ವಾಚ್ಯಾರ್ಥವನ್ನು ಅಪ್ರಧಾನವನ್ನಾಗಿಸಿ ವ್ಯಂಗ್ಯಾರ್ಥವನ್ನು ಕೊಡುತ್ತದೆ. ಆದರೆ ಅರ್ಥವು ತನ್ನನ್ನೇ ಅಪ್ರಧಾನವನ್ನಾಗಿಸಿಕೊಂಡು ಸಹೃದಯಶ್ಲಾಘ್ಯವಾದ ಪ್ರತೀಯಮಾನಾರ್ಥವನ್ನು ಹೊರಪಡಿಸುತ್ತದೆ. ಹೀಗೆ ವಾಚ್ಯಾರ್ಥವು ಅಪ್ರಧಾನವಾಗಿ ಎಲ್ಲಿ ವ್ಯಂಗ್ಯವು ಪ್ರಕಾಶಹೊಂದುತ್ತದೆಯೋ ಆ ಕಾವ್ಯಕ್ಕೆ 'ಧ್ವನಿ' ಎಂದು ಹೆಸರು. ಧ್ವನಿಕಾವ್ಯವೇ ಎಲ್ಲಕ್ಕಿಂತಲೂ ಮೇಲು ಎಂದು ಧ್ವನಿವಾದಿಗಳ ಸಿದ್ಧಾಂತ. ಈಗ ಮತ್ತೊಂದು ಮುಖ್ಯವಾದ ವಾದವು ಆರಂಭವಾಗುತ್ತದೆ. ಇದರಲ್ಲಿ ಆಲಂಕಾರಿಕರೇ ಪ್ರತಿಪಕ್ಷವನ್ನು ವಹಿಸುತ್ತಾರೆ. ಈ ಸಂದರ್ಭದಲ್ಲೇ ಧ್ವನಿಯ ವಿಚಾರವಾಗಿ ಅನೇಕ ಮುಖ್ಯವಿಷಯಗಳು ಚರ್ಚಿಸಲ್ಪಟ್ಟು ಧ್ವನಿಯ ಮುಖ್ಯತೆಯೂ ಮಹಾವಿಷಯತ್ವವೂ ಸ್ಥಾಪಿಸಲ್ಪಟ್ಟಿರುವುದು. ಈ ಚರ್ಚೆಯನ್ನು ಚೆನ್ನಾಗಿ ಗ್ರಹಿಸಬೇಕಾದರೆ ಅಲಂಕಾರಗಳ ಬೆಳವಣಿಗೆಯನ್ನೂ ಸ್ವರೂಪವನ್ನೂ ತಿಳಿಯುವುದು ಆವಶ್ಯಕ. ಪ್ರಾಚೀನಾಲಂಕಾರಿಕರಿಗೆ 'ಧ್ವನಿ' 'ರಸ' ಇವೇ ಮೊದಲಾದ ಸಿದ್ಧಾಂತಗಳು ತಿಳಿದಿರಲಿಲ್ಲವಾದರೂ ಆ ಪದಾರ್ಥಗಳ[1] ಜ್ಞಾನವೂ ಬೆಲೆಯೂ ಸ್ವಲ್ಪಮಟ್ಟಿಗೆ ತಿಳಿದೇ ಇದ್ದಿತೆಂದು ಹೇಳುವುದುಂಟು. ಆಧುನಿಕರಿಗೂ ಪ್ರಾಚೀನರಿಗೂ ಈ ವಿಚಾರದಲ್ಲಿ ಇರುವ ವ್ಯತ್ಯಾಸವನ್ನು ಈ ರೀತಿ ನಿರೂಪಿಸಬಹುದು. ಹಿಂದಿನವರು (ಅಲಂಕಾರಿಕರು) ಎಲ್ಲವನ್ನೂ

---

[1] ಇಲ್ಲಿ 'ಧ್ವನಿ' 'ರಸ' ಇವುಗಳಿಗೂ ಧ್ವನಿಸಿದ್ಧಾಂತ, ರಸಸಿದ್ಧಾಂತ, ಇವುಗಳಿಗೂ ಇರುವ ವ್ಯತ್ಯಾಸವನ್ನು ತಿಳಿಯುವುದು ಆವಶ್ಯಕ. ಕಾವ್ಯದಲ್ಲಿ 'ಧ್ವನಿ' 'ರಸ'ಗಳಿಗೆ ಉಚ್ಚಸ್ಥಾನವನ್ನು ಕೊಡುವ ವಿಮರ್ಶನ ಮಾರ್ಗಕ್ಕೆ ಸಿದ್ಧಾಂತಗಳೆಂದು ಹೆಸರು. ಈ ಸಿದ್ಧಾಂತಗಳು ಕಾಲತಃ ಈಚಿನವಾದುದರಿಂದ ಹಿಂದಿನವರಿಗೆ ಅವು ತಿಳಿಯದಿರಬಹುದು. ಆದರೆ 'ಧ್ವನಿ' ಎಂಬ ಪದಾರ್ಥ ಗೊತ್ತಿದ್ದಿರಬೇಕು.

ಅಲಂಕಾರಗಳಲ್ಲೇ ಸೇರಿಸಲು ಪ್ರಯತ್ನಪಟ್ಟು, ಆ ಅಲಂಕಾರಗಳ ಸರಿಯಾದ ಪ್ರಯೋಗದಿಂದ ಕಾವ್ಯದಲ್ಲಿ ರಸ, ಧ್ವನಿ, ವಾಚ್ಯವೈಚಿತ್ರ್ಯ ಎಲ್ಲವೂ ಬರುವಂತೆ ಮಾಡಲು ಪ್ರಯತ್ನಪಟ್ಟರು. ಸಾಣೆ ಹಿಡಿದ ವಜ್ರ, ಕೆಂಪು, ಪಚ್ಚೆಗಳನ್ನು ಕೊಟ್ಟಂತೆ ಅನೇಕ ಅಲಂಕಾರಗಳನ್ನು ಕವಿಯ ಕೈಯಲ್ಲಿಟ್ಟು, ಅವುಗಳನ್ನು ಸರಿಯಾಗಿ ಜೋಡಿಸಿ, ಮೆರುಗು ಕೊಟ್ಟು ಕಾವ್ಯವೆಂಬ ರತ್ನಹಾರವನ್ನು ನಿರ್ಮಿಸುವಂತೆ ಕವಿಗೆ ಸಹಾಯ ನೀಡುವುದೇ ಅವರ ಉದ್ದೇಶವಾಗಿದ್ದಂತೆ ತೋರುತ್ತದೆ. ಕವಿಯ ದೃಷ್ಟಿಯಿಂದ ಇವರ ಪ್ರಯತ್ನವು ಶ್ಲಾಘನೀಯವೇ ಸರಿ. ಆಧುನಿಕರು, ಯಾವ ಯಾವ ಅಂಶಕ್ಕೆ ಎಷ್ಟೆಷ್ಟು ಬೆಲೆ ಕೊಡಬೇಕೆಂಬ ವಿಮರ್ಶೆಗೆ ತೊಡಗಿ ಒಟ್ಟು ಕಾವ್ಯದ ಬೆಲೆಯನ್ನು ನಿರ್ಣಯಿಸುವುದು ಯಾವ ಆಧಾರದ ಮೇಲೆ? ಎಂಬ ಪ್ರಶ್ನೆಯು ಬರಲಾಗಿ, ಧ್ವನಿಯೇ ಪರಮೋತ್ಕೃಷ್ಟವಾದ ಅಂಶವಾದ್ದರಿಂದ ಅದರ ಒರೆಗಲ್ಲಿನಿಂದಲೇ ಕಾವ್ಯದ ಬೆಲೆಯನ್ನು ನಿರ್ಣಯಿಸಬೇಕೆಂದೂ 'ಧ್ವನಿ' ಮಾರ್ಗದ ನಿಯಮಗಳಿಗನುಸಾರವಾಗಿಯೇ ಅಲಂಕಾರ, ಗುಣ, ಮೊದಲಾದುವು ಪ್ರಯೋಗಿಸಲ್ಪಡಬೇಕೆಂದೂ ನಿರ್ಣಯಿಸಿದರು. ವಿಮರ್ಶಕರ ದೃಷ್ಟಿಯಿಂದ ಈ ಕಾವ್ಯತತ್ವಕ್ಕೆ ಹೆಚ್ಚು ಬೆಲೆ ಬರುತ್ತದೆಯೆಂಬುದನ್ನು ವಿವರಿಸಬೇಕಾಗಿಲ್ಲ. ಪ್ರಕೃತ, ಹಿಂದಿನವರು ಹೇಳಿರುವ ಕೆಲವು ಅಲಂಕಾರಗಳಲ್ಲಿ ವ್ಯಂಗ್ಯಾರ್ಥಕ್ಕೆ ಒಂದು ಮುಖ್ಯವಾದ ಸ್ಥಾನವಿದೆ. ವ್ಯಂಗ್ಯವಿಲ್ಲದೆ ಹೋದಲ್ಲಿ ಆ ಅಲಂಕಾರಗಳಲ್ಲಿಯ ಚಮತ್ಕಾರವು ಹೋಗುತ್ತದೆ. ಆದರೆ ವ್ಯಂಗ್ಯಾರ್ಥ ಮಾತ್ರದಿಂದಲೇ ಆ ಚಮತ್ಕಾರವು ಉಂಟಾಗುತ್ತದೆಯೆಂದೂ ಹೇಳಲಾಗುವುದಿಲ್ಲ. ಇಲ್ಲಿ ವ್ಯಂಗ್ಯಾರ್ಥವು ಗುಣೀಭೂತ, ಅಂದರೆ ವಾಚ್ಯಾರ್ಥಕ್ಕಿಂತ ಪ್ರಾಮುಖ್ಯದಲ್ಲಿ ಕಡಿಮೆಯಾದುದು. ವಾಚ್ಯಾರ್ಥವೇ ಚಾರುತರವೂ ಪ್ರಧಾನವೂ ಆದದ್ದು. ಆದರೂ ಆ ವಾಚ್ಯಾರ್ಥದ ಸೊಬಗನ್ನು ವ್ಯಂಗ್ಯಾರ್ಥದ ಸಂಸ್ಪರ್ಶವು ಹೆಚ್ಚಿಸುತ್ತದೆ. ಆದುದರಿಂದ ಈ ವಿಧವಾದ ಗುಣೀಭೂತವ್ಯಂಗ್ಯಕಾವ್ಯದಲ್ಲಿ ವ್ಯಂಗ್ಯಸಂಸ್ಪೃಷ್ಟವಾದ ವಾಚ್ಯವೇ ಚಮತ್ಕಾರಕರವಾದುದೆಂದು ಹೇಳಬಹುದು. ಇದನ್ನು ಜ್ಞಾಪಕದಲ್ಲಿಟ್ಟು ಆಲಂಕಾರಿಕರ ಮುಖ್ಯವಾದ ಆಕ್ಷೇಪಣೆಯನ್ನು ಈ ರೀತಿ ಸಂಗ್ರಹಿಸಿ ಪರಿಶೀಲಿಸಬಹುದು.


"ನೀವು ವ್ಯಂಗ್ಯಾರ್ಥದ ಪ್ರಾಮುಖ್ಯವನ್ನು ಹೊಸದಾಗಿ ಕಂಡುಹಿಡಿದಂತೆ ಭಾವಿಸಿ ಅದೇ ಕಾವ್ಯದ ಆತ್ಮವೆಂದು ಸಾರಿ ಆ ವ್ಯಂಗ್ಯಾರ್ಥಕ್ಕೆ ಪ್ರಾಧಾನ್ಯವಿದ್ದರೆ ಕಾವ್ಯವು ಉತ್ತಮ ದರ್ಜೆಯದಾಗಿ ಧ್ವನಿಕಾವ್ಯವೆನ್ನಿಸಿಕೊಳ್ಳುತ್ತದೆಯೆಂದು ಸಾರಿದಿರಿ. ಆದರೆ ನೀವು ಹೇಳಿರುವ ಧ್ವನಿಕಾವ್ಯವು ಹೊಸದೇನೂ ಅಲ್ಲ. ಅದನ್ನು ಅಲಂಕಾರ ಪ್ರಪಂಚದಲ್ಲೇ ಸೇರಿಸಬಹುದು. ನಾವು ಇದನ್ನು ಹಿಂದೆಯೇ ಮನಗಂಡು ಕೆಲವು

ಅಲಂಕಾರಗಳಲ್ಲಿ ಧ್ವನಿಗೆ ಮುಖ್ಯವಾದ ಸ್ಥಾನವಿರುವುದರಿಂದ ಆ ಅಲಂಕಾರಗಳನ್ನು 'ಧ್ವನಿ' ಎಂದೇ ಕರೆದಿರುತ್ತೇವೆ.[1] ಆದ್ದರಿಂದ ನಿಮ್ಮ ಧ್ವನಿ ಎಂಬುದು ಒಂದು ವಿಧವಾದ ಕಾವ್ಯವೆಂದೂ ಅದರಲ್ಲಿ ಒಂದು ವೈಶಿಷ್ಟ್ಯವಿದೆಯೆಂದೂ ಒಪ್ಪಿದರೂ ಅದು ಅಲಂಕಾರ ಪ್ರಪಂಚದಲ್ಲಿ ಅಂತರ್ಭವಿಸುತ್ತದೆ" ಎಂದು ಮೊದಲಾಗಿ ಆಲಂಕಾರಿಕರು ವಾದಿಸಬಹುದು. ಈ ವಾದವು ಹಿಂದೆ ನಿರೂಪಿಸಲ್ಪಟ್ಟ ಅಭಾವವಾದದ ಮೂರನೆಯ ಪ್ರಕಾರದ ಪರಿಷ್ಕರಣವೆನ್ನಬಹುದು. ಧ್ವನಿಯನ್ನು ವಿಶಾಲವಾದ ಕಾವ್ಯತತ್ವವೆಂದು ಹೇಳಿ ಅದರಲ್ಲಿ ಅಲಂಕಾರಾದಿಗಳನ್ನು ಸೇರಿಸಬೇಡಿ; ಅಲಂಕಾರವೇ ವಿಶಾಲತರವಾದ ಕಾವ್ಯತತ್ವ; ಧ್ವನಿಯು ಆ ಅಲಂಕಾರಗಳ ಪ್ರಕಾರವಿಶೇಷವಾಗಿ ಕೆಲವು ಅಲಂಕಾರಗಳಲ್ಲಿ ಕಂಡುಬರುತ್ತದೆಯಾದ್ದರಿಂದ ಕಾವ್ಯತ್ವಕ್ಕೆ 'ಧ್ವನಿ'ಯು ಲಕ್ಷಣವಲ್ಲವೆಂಬುದೇ ಆಲಂಕಾರಿಕರ ಅಭಿಪ್ರಾಯವೆನ್ನಬಹುದು. ಅಂದರೆ ಒಟ್ಟಿನಲ್ಲಿ ಧ್ವನಿಗಿಂತ ಅಲಂಕಾರಕ್ಕೆ ಪ್ರಾಧಾನ್ಯ ಹೆಚ್ಚು ಎಂಬುದೇ ಇವರ ತಾತ್ಪರ್ಯ. ಆದರೆ "ವ್ಯಂಗ್ಯ ವ್ಯಂಜಕಭಾವವನ್ನೇ ಪ್ರಾಣವನ್ನಾಗಿ ಉಳ್ಳ ಧ್ವನಿಯನ್ನು ವಾಚ್ಯವಾಚಕಭಾವಲಕ್ಷಿತವಾಗಿರುವ ಅಲಂಕಾರದಲ್ಲಿ ಹೇಗೆ ಸೇರಿಸುತ್ತೀರಿ? ನಿಮ್ಮ ಉಪಮಾ ರೂಪಕ ಮೊದಲಾದ ಅಲಂಕಾರಭೂಷಿತವಾದ ಕಾವ್ಯವು ಧ್ವನಿಯಲ್ಲವೇ ಅಲ್ಲ, ಮತ್ತು ಅಲಂಕಾರಗಳಲ್ಲಿ ಅನೇಕಕಡೆ ವ್ಯಂಗ್ಯವು ಸ್ಫುಟವಾಗಿ ತೋರುವುದೇ ಇಲ್ಲ" ಎಂದು ಧ್ವನಿವಾದಿಗಳು ಹೇಳಿದರೆ ಇದಕ್ಕೆ ಪ್ರತಿಯಾಗಿ "ಎಲ್ಲಿ ವ್ಯಂಗ್ಯವು ಸ್ಫುಟವಾಗಿ ತೋರುವುದಿಲ್ಲವೋ ಆ ಕಾವ್ಯಗಳು ಧ್ವನಿಗೆ ವಿಷಯವಾಗದಿರಬಹುದು; ಆದರೆ ಕೆಲವು ಅಲಂಕಾರಗಳಲ್ಲಿ (ಸಮಾಸೋಕ್ತಿ, ಆಕ್ಷೇಪ, ಪರ್ಯಾಯೋಕ್ತ, ಅಪಹ್ನುತಿ ಮೊದಲಾದುವು) ವ್ಯಂಗ್ಯದ ಸ್ಫುಟಪ್ರತೀತಿಯಿದೆಯಾದ್ದರಿಂದ ಆ ಅಲಂಕಾರಗಳಲ್ಲಿ 'ಧ್ವನಿ'ಯು ಅಂತರ್ಭಾವವನ್ನು ಹೊಂದುತ್ತದೆ"ಯೆಂದು ಆಲಂಕಾರಿಕರು ವಾದಿಸುತ್ತಾರೆ. ಇದಕ್ಕೂ ಧ್ವನಿಕಾರರು ಉತ್ತರ ಹೇಳುತ್ತಾರೆ. "ಸಮಾಸೋಕ್ತಿ, ಆಕ್ಷೇಪ ಮುಂತಾದ ಅಲಂಕಾರಗಳೂ 'ಧ್ವನಿ'ಯೆನ್ನಿಸಿಕೊಳ್ಳುವುದಿಲ್ಲ. ವ್ಯಂಗ್ಯವು ಪ್ರಧಾನವಾಗಿದ್ದರೆ ಧ್ವನಿಯೆಂಬ ಹೆಸರು ಸಲ್ಲುವುದರಿಂದಲೂ ಮತ್ತು ಇಲ್ಲೆಲ್ಲ ಪ್ರತೀಯಮಾನವಾದ ವ್ಯಂಗ್ಯವಿದ್ದರೂ ವಾಚ್ಯವೇ ಪ್ರಧಾನವಾಗಿ ಎಂದರೆ ಚಮತ್ಕಾರದ ನೆಲೆಯಾಗಿ ಇರುವುದರಿಂದಲೂ ಈ ಅಲಂಕಾರಗಳಿರುವ ಕಾವ್ಯಕ್ಕೆ 'ಧ್ವನಿ'ಯೆಂಬ ಹೆಸರು ಬರುವುದಿಲ್ಲ. ಇದೂ ಅಲ್ಲದೆ ಗುಣೀಭೂತವಾದ ವ್ಯಂಗ್ಯವನ್ನುಳ್ಳ ಈ ವಿಧವಾದ ಕಾವ್ಯವು ಸಹೃದಯರಿಗೆ ಸಂತೋಷವನ್ನುಂಟುಮಾಡಿದರೂ ಧ್ವನಿಕಾವ್ಯಕ್ಕಿಂತ ಅದು

[1] ಅಗ್ನಿಪುರಾಣದಲ್ಲಿ ವ್ಯಂಗ್ಯಸಂಸ್ಪರ್ಶವಿರುವ ಪರ್ಯಾಯೋಕ್ತ, ಆಕ್ಷೇಪ ಮೊದಲಾದ ಕೆಲವು ಅಲಂಕಾರಗಳನ್ನು 'ಧ್ವನಿ' ಎಂದು ಕರೆಯಲಾಗಿದೆ.


ಎಷ್ಟಾದರೂ ಕೀಳು.'' ಹೀಗೆಂದು ಧ್ವನಿವಾದಿಗಳು ವಿವರಿಸಿದರೂ ಆಲಂಕಾರಿಕರ ಗಂಟು ವ್ಯಾಜ್ಯವು ನಿಲ್ಲುವಂತೆಯೇ ಇಲ್ಲ. "ಪರ್ಯಾಯೋಕ್ತದ ಕೆಲವು ಉದಾಹರಣೆಗಳಲ್ಲಿ ವ್ಯಂಗ್ಯವೇ ಪ್ರಧಾನವಾಗಿರುವುದುಂಟೆಂದೂ ಆ ಅಲಂಕಾರದಲ್ಲೇ ಧ್ವನಿಯನ್ನು ಸೇರಿಸಬಹುದೆಂದೂ" ಆಲಂಕಾರಿಕರು ವಾದಿಸುತ್ತಾರೆ. ಅಂತೂ ಇವರು ಕಡೆಕಡೆಗೆ ದೊಡ್ಡ ದಾರಿಯನ್ನು ಬಿಟ್ಟು ಸಂದುಗೊಂದುಗಳನ್ನು ಆಶ್ರಯಿಸುವ ದಣಿದ ಓಡುವವ ನಂತೆ, ಕುಂಟುಯುಕ್ತಿಗಳನ್ನೂ ತಮ್ಮ ಸಿದ್ಧಾಂತಕ್ಕೆ ಬಲವನ್ನು ನೀಡದ ವಿತಂಡ ವಾದಗಳನ್ನೂ ಮುಂದಿಡುತ್ತಿರುವುದು ಸ್ಪಷ್ಟವಾಗಿದೆ. ಈ ಆಕ್ಷೇಪಣೆಗೆ ಉತ್ತರ ವನ್ನು ಹೇಳುವಾಗಲೇ ಧ್ವನಿಯ ಮಹಾವಿಷಯತ್ವವು ಸ್ಥಾಪಿಸಲ್ಪಟ್ಟಿರುವುದು. ಪರ್ಯಾಯೋಕ್ತದಲ್ಲಿಯೂ ಸಾಮಾನ್ಯವಾಗಿ ವಾಚ್ಯವೇ ಪ್ರಧಾನವಾಗಿರುತ್ತದೆ ಯಾದ್ದರಿಂದ ಅದರಲ್ಲಿಯೂ ಧ್ವನಿಯನ್ನು ಒಳಗೂಡಿಸಲು ಸಾಧ್ಯವಿಲ್ಲವೆಂದೂ ಒಂದು ಪಕ್ಷ ಅಲ್ಲಿ ವ್ಯಂಗ್ಯವು ಪ್ರಧಾನವಾಗಿದ್ದರೂ 'ಧ್ವನಿ'ಯಲ್ಲಿ ಅದು ಅಂತರ್ಭವಿಸು ತ್ತದೆಯೇ ಹೊರತು ಅದರಲ್ಲಿ ಧ್ವನಿಯು ಅಂತರ್ಭವಿಸುವುದಿಲ್ಲವೆಂದು ಧ್ವನಿಕಾರರ ನಿರ್ಣಯ. ಏಕೆಂದರೆ, ಧ್ವನಿಯು ವಿಶಾಲತರವಾದ ತತ್ವ; ಅದು ಇಡಿಯ ಶರೀರವಿದ್ದ ಹಾಗೆ; ಗುಣ, ಅಲಂಕಾರ ಮೊದಲಾದುವು ಆ ಶರೀರದ ಅಂಗಗಳಿದ್ದ ಹಾಗೆ; ಆದ್ದರಿಂದ ಧ್ವನಿಯು ಅಲಂಕಾರಗಳಲ್ಲಿ ಅಂತರ್ಭವಿಸುವುದಿಲ್ಲ. ಅದು ಅಸಾಧ್ಯವೆಂದು ಸ್ಪಷ್ಟವಾಗಿ ತೋರಿಸಿದ ಹಾಗಾಯಿತು. ಆಲಂಕಾರಿಕರ ದೃಷ್ಟಿಯಿಂದ ಕಾವ್ಯದಲ್ಲಿ 'ಧ್ವನಿ'ಗೆ ಯಾವ ಸ್ಥಾನವಿದೆಯೆಂಬುದನ್ನೂ, ಧ್ವನಿಮತದವರ ದೃಷ್ಟಿಯಿಂದ ಅಲಂಕಾರಗಳಿಗೆ ಯಾವ ಸ್ಥಾನವೆಂಬುದನ್ನೂ ಈ ರೀತಿ ಚಿತ್ರಿಸಬಹುದು.

(1) ಆಲಂಕಾರಿಕರ ದೃಷ್ಟಿಯಿಂದ ಕಾವ್ಯದಲ್ಲಿ ಧ್ವನಿಯ ಸ್ಥಾನ.




ಒಟ್ಟು ವರ್ತುಳವು ಅಲಂಕಾರ ಪ್ರಪಂಚವನ್ನು ನಿರ್ದೇಶಿಸುತ್ತದೆ.

(2) ಧ್ವನಿ ವಾದಿಗಳ ದೃಷ್ಟಿಯಿಂದ ಅಲಂಕಾರಗಳ ಸ್ಥಾನ.




ದೊಡ್ಡ ವರ್ತುಳವು ಧ್ವನಿ ಗುಣೀಭೂತ ವ್ಯಂಗ್ಯ ಪ್ರಪಂಚವನ್ನೂ ಚಿಕ್ಕದು ಅಲಂಕಾರ ಪ್ರಪಂಚವನ್ನೂ ನಿರ್ದೇಶಿಸುತ್ತದೆ. ರಸಧ್ವನಿಯ ಪ್ರಾಮುಖ್ಯವೂ, ಅನೇಕ ಅಲಂಕಾರಗಳು ವ್ಯಂಗ್ಯದ ಪ್ರಾಧಾನ್ಯದಿಂದಲಾಗಲಿ ಸಂಸ್ಪರ್ಶದಿಂದಲಾಗಲಿ ‘ಧ್ವನಿ’ ಪ್ರಪಂಚದಲ್ಲೇ ಸೇರುವುದೂ ಸ್ಪಷ್ಟವಾಗಿದೆ. ವಸ್ತುತಃ ಖಚಿತವಾದ ವಿಭಾಗವು ಸಾಧ್ಯವಿಲ್ಲ. ಈ ವಿಚಾರವು ಮುಂದೆ ತಿಳಿಯುತ್ತದೆ. ಮತ್ತು, ಕೇಂದ್ರಕ್ಕೆ ಸಾಮೀಪ್ಯವು ಉತ್ಕರ್ಷವನ್ನೂ ವಿಪ್ರಕರ್ಷವು ಅಪಕರ್ಷವನ್ನೂ ಸೂಚಿಸುತ್ತದೆಯೆಂದೂ ತಿಳಿಯತಕ್ಕದ್ದು.

ಇನ್ನು, ಕಾವ್ಯದಲ್ಲಿ ವ್ಯಂಗ್ಯಾರ್ಥವು ಯಾವ ರೂಪವನ್ನು ಹೊಂದಿರಬೇಕು? ವ್ಯಂಗ್ಯವು ಅಪ್ರಧಾನವಾಗಿರುವ ಅಥವಾ ಇಲ್ಲದೇ ಇರುವ ಕಾವ್ಯಗಳಿಗೇನು ಗತಿ? ಅವು ಕಾವ್ಯಜಾತಿಗೆ ಸೇರುತ್ತವೆಯೇ ಇಲ್ಲವೇ? ಎಂಬೀ ವಿಚಾರಗಳನ್ನು ಪರಿಶೀಲಿಸುವುದು ಆವಶ್ಯಕ. ವ್ಯಂಗ್ಯಾರ್ಥವು ಪ್ರಧಾನವಾಗಿದ್ದರೆ ಕಾವ್ಯವು ಮೊದಲನೆಯ ದರ್ಜೆಯದಾಗುತ್ತದೆಂದು ಈಗಾಗಲೇ ವಿವರಿಸಿಯಾಗಿದೆ. ವ್ಯಂಗ್ಯಾರ್ಥವು ಅಪ್ರಧಾನವಾಗಿ ವಾಚ್ಯಾರ್ಥವೇ ಪ್ರಧಾನವಾಗಿದ್ದಲ್ಲಿ ಕಾವ್ಯವು ಎರಡನೆಯ ದರ್ಜೆಗೆ ಸೇರುತ್ತದೆ. ಹೀಗೂ ಇಲ್ಲದೆ, ವ್ಯಂಗ್ಯಾರ್ಥವು ಸ್ಫುಟವಾಗಿ ಕಾಣದೆಯೋ ಅಥವಾ ಇಲ್ಲದೆಯೋ ಇದ್ದರೆ ಆ ಕಾವ್ಯವು ಮೂರನೆಯ ದರ್ಜೆಗೆ ಸೇರುತ್ತದೆ. ಈ ಮೂರನೆಯ ದರ್ಜೆಯ ಕಾವ್ಯಗಳಿಗೆ ಚಿತ್ರಕಾವ್ಯವೆಂದು ಹೆಸರು. ಚಿತ್ರಕಾವ್ಯವು ಕೂಡ ಯಾವುದೋ ಒಂದು ಬಾಹ್ಯಚಮತ್ಕಾರದ ದೆಸೆಯಿಂದ ಅಲ್ಪಸ್ವಲ್ಪ ಸಂತೋಷವನ್ನು ಕೊಡಬಹುದು. ಆದರೆ ಆ ಸಂತೋಷವು ಸತ್ಕಾವ್ಯರಸಾಸ್ವಾದದಿಂದ ಉಂಟಾಗುವ ನಿಜವಾದ ಅಲೌಕಿಕಾನಂದಕ್ಕೆ ಸಮವಲ್ಲ. ಆದ್ದರಿಂದ ಈ ವಿಧವಾದ ಕಾವ್ಯದ ವಿಷಯದಲ್ಲಿ ಕಾವ್ಯವ್ಯವಹಾರವು ಗೌಣವೆಂದೇ ಧ್ವನಿವಾದಿಗಳ ಅಭಿಪ್ರಾಯ.

ಕಾವ್ಯದಲ್ಲಿ ಧ್ವನಿಯು ಮೂರು ವಿಧವಾಗಿ ಪ್ರಕಾಶಿತವಾಗಬಹುದು. ಯಾವುದಾದರೊಂದು 'ವಸ್ತು' ಅಂದರೆ ಸಾಮಾನ್ಯವಾದ ವಿಷಯವು ಧ್ವನಿತವಾಗಬಹುದು;[1] ಒಂದು ಅಲಂಕಾರವು ಧ್ವನಿತವಾಗಬಹುದು[2]; ಅಥವಾ ರಸವು ಧ್ವನಿತವಾಗಬಹುದು.[3] ಇಲ್ಲಿ ಒಂದು ಸೂಕ್ಷ್ಮವಾದ ವಿಚಾರವಿದೆ. ಅಲಂಕಾರವು ಧ್ವನಿತವಾಗಿ, ಕಾವ್ಯದಲ್ಲಿ ವ್ಯಂಗ್ಯಾರ್ಥಕ್ಕೆ ಪ್ರಾಧಾನ್ಯವಿದ್ದರೆ ಅದು ಧ್ವನಿಯಲ್ಲೇ ಸೇರುತ್ತದೆ. ಹಾಗಿಲ್ಲದೆ ವ್ಯಂಗ್ಯವಾದ ಅಲಂಕಾರವಿದ್ದೂ ವಾಚ್ಯಾರ್ಥಕ್ಕೇ ಪ್ರಾಧಾನ್ಯವಿದ್ದರೆ ಆ ಕಾವ್ಯವು ಗುಣೀಭೂತವ್ಯಂಗ್ಯವಾಗಿ ಎರಡನೆಯ ದರ್ಜೆಯದಾಗುತ್ತದೆ.[4] ಅಲಂಕಾರವು ಹೇಗಿದ್ದರೆ ಧ್ವನಿತವೆಂದು ಪರಿಗಣಿಸಬೇಕೆಂಬ ವಿಚಾರದಲ್ಲಿ ಕೂಡ ಒಂದು ದೊಡ್ಡ ಚರ್ಚೆಯಿದೆ. ಅದನ್ನು ಸಂಕ್ಷೇಪವಾಗಿ ವಿವರಿಸುವುದು ಆವಶ್ಯಕ. ಅಲಂಕಾರಗಳ ಚರಿತ್ರೆಯನ್ನೂ ಲಕ್ಷಣಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದರೆ, ಎಲ್ಲಾ ಅಲಂಕಾರಗಳೂ ಉಪಮೆ ಮತ್ತು ಯಮಕಗಳಿಂದ ಹುಟ್ಟಿದವೆಂದು ಹೇಳಬಹುದು.[5] ಅರ್ಥಾಲಂಕಾರಗಳಿಗೆಲ್ಲ ಉಪಮಾಲಂಕಾರವೂ ಶಬ್ದಾಲಂಕಾರಗಳಿಗೆಲ್ಲ ಯಮಕವೂ ತಾಯಿಯಂತೆ ಪರಿಗಣಿಸಲ್ಪಟ್ಟಿದೆ. ಈ ದೃಷ್ಟಿಯಿಂದ ಯಾವ ಅಲಂಕಾರವನ್ನೇ ಆಗಲಿ ವಿಭಜನೆಮಾಡಿ ನೋಡಿದರೆ ಔಪಮ್ಯವು ಮೂಲಭೂತವಾಗಿ ಕಂಡುಬರುತ್ತದೆ. ಅಂದರೆ, ಅಲಂಕಾರಗಳೆಲ್ಲ 'ಉಪಮಾಪ್ರಪಂಚ'ಕ್ಕೆ ಸೇರಿದವು ಮತ್ತು ಉಪಮಾಗರ್ಭವಾದುವು. ಹೀಗೆ ಔಪಮ್ಯದ ಅಡಿಗಲ್ಲಿನ ಮೇಲೆ ನಿಂತಿದ್ದ ಮಾತ್ರಕ್ಕೆ ಅಲಂಕಾರಗಳಲ್ಲಿ ಉಪಮೆಯು 'ಧ್ವನಿತ'ವೆಂದು ಹೇಳಲಾಗದೆಂಬುದೇ ಆನಂದವರ್ಧನರ ವಾದ. ವಾಚ್ಯವಾದ ಅಲಂಕಾರವು ವ್ಯಂಗ್ಯಾಲಂಕಾರವನ್ನು ಪ್ರಕಾಶಿಸುವಂತಿದ್ದು ಕಾವ್ಯಸೌಂದರ್ಯದ ಆಸ್ವಾದವು ಆ ವ್ಯಂಗ್ಯಾಲಂಕಾರದ ಮೂಲಕವಾಗಿಯೇ ಆಗುವ ಹಾಗಿದ್ದರೆ ಅಲ್ಲಿ ಅಲಂಕಾರಧ್ವನಿಯಿದೆಯೆಂದೂ ಹಾಗಿಲ್ಲದೆ ವಾಚ್ಯಾಲಂಕಾರವೇ ಹೆಚ್ಚು ಚಮತ್ಕಾರವನ್ನುಂಟುಮಾಡುವಂತಿದ್ದು ವ್ಯಂಗ್ಯಾಲಂಕಾರವಿದ್ದೂ ಅದು ಪ್ರಕಾಶಹೊಂದದೆ ಅಪ್ರಧಾನವಾಗುವ ಹಾಗಿದ್ದರೆ ಆ ಕಾವ್ಯವು ಗುಣೀಭೂತ ವ್ಯಂಗ್ಯವೆಂದೂ ವಿಷಯವಿಭಾಗವನ್ನು ಮಾಡಲಾಗಿದೆ.

---

[1] ಉದಾ.—ಭಮ ಧಮ್ಮಿಅ ವೀಸದ್ಧೋ—ಎಂಬ ಶ್ಲೋಕ.

[2] ಲಾವಣ್ಯಕಾಂತಿ ಪರಿಪೂರಿತ, ಚಕ್ರಾಭಿಘಾತಪ್ರಸಭಾಜ್ಞಯೈವ ಮೊದಲಾದುವು.

[3] ಶೂನ್ಯಂ ವಾಸಗೃಹಂ; ಯಾತೆ ಗೋತ್ರವಿಪರ್ಯಯೆ—ಇತ್ಯಾದಿ.

[4] ಹಿಂದೆ ಕೊಟ್ಟಿರುವ ಚಿತ್ರವನ್ನು ನೋಡಿದರೆ ವಿಷಯವು ಸ್ಪಷ್ಟವಾಗುತ್ತದೆ.

[5] ಉಪಮೆಯ ವಿಚಾರದಲ್ಲಿ ಅಪ್ಪಯ್ಯದೀಕ್ಷಿತರು ಹೇಳಿರುವ ಶ್ಲೋಕವನ್ನು ಗಮನಿಸಬಹುದು.—ಉಪಮೈಕಾ ಶೈಲೂಷೀ ಇತ್ಯಾದಿ. ಚಿತ್ರಮೀಮಾಂಸಾ, ಪುಟ ೫.

ಎಂದರೆ 'ಅಲಂಕಾರ ಧ್ವನಿ'ಯಲ್ಲಿ ವ್ಯಂಗ್ಯಮುಖೇನ ಕಾವ್ಯರಸಾಸ್ವಾದವಾಗುವುದರಿಂದ ಅದು ಉತ್ಕೃಷ್ಟವೆಂದೂ ಉಪಮೆಯು ಅಡಿಗಲ್ಲಿನ ಮೇಲೆ ನಿಂತಿದ್ದರೂ ಅಲಂಕಾರಭೂಷಿತವಾದ ಕಾವ್ಯದ ಸೌಂದರ್ಯವು ವಾಚ್ಯಮುಖೇನ ಆಗುವುದರಿಂದ ಆ ಕಾವ್ಯವು ಅಪಕೃಷ್ಟವೆಂದೂ ನಿರ್ಣಯ.[1]

ವಸ್ತು, ರಸ ಮತ್ತು ಅಲಂಕಾರಧ್ವನಿಗಳಲ್ಲಿ ರಸಧ್ವನಿಯೇ ಮುಖ್ಯವಾದುದೆಂದು ಧ್ವನಿಮಾರ್ಗದವರು ಒಪ್ಪಿರುತ್ತಾರೆ. ರಸಧ್ವನಿಯೇ ಕಾವ್ಯದ ಆತ್ಮವೆಂದೂ ವಸ್ತ್ವಲಂಕಾರಧ್ವನಿಗಳೆರಡೂ ರಸಧ್ವನಿಯಲ್ಲೇ ಪರ್ಯವಸಾನ ಹೊಂದುತ್ತವೆಯೆಂದೂ ಅಭಿನವಗುಪ್ತರು ಪ್ರತಿಪಾದಿಸಿರುತ್ತಾರೆ. ಇದೂ ಅಲ್ಲದೆ ರಸವು ಯಾವಾಗಲೂ ಧ್ವನಿತವೇ ಆಗಬೇಕೆಂದೂ, ವಾಚ್ಯವಾಗಲು ಸಾಧ್ಯವೇ ಇಲ್ಲವೆಂದೂ ಹೇಳಿ, ಭಟ್ಟನಾಯಕನ ಮತವನ್ನು ಖಂಡಿಸಿಯೂ ಇರುತ್ತಾರೆ. ಇದರಿಂದ ಧ್ವನಿಗೆ ಯಾವ ವಿಧವಾದ ಪ್ರಾಶಸ್ತ್ಯ ಬಂದಿತೆಂಬುದನ್ನು ಸುಲಭವಾಗಿ ಮನಗಾಣಬಹುದು. ರಸವೇ ಕಾವ್ಯದ ಮುಖ್ಯತತ್ವ, ಅಥವಾ ಆತ್ಮ. ಆ ರಸವು ವಾಚ್ಯವಾಗಲು ಸಾಧ್ಯವಿಲ್ಲ. ವ್ಯಂಗ್ಯವಾಗಬೇಕಾದರೆ 'ಧ್ವನಿ' ತತ್ವದ ಸತ್ಯತೆಯನ್ನು ಒಪ್ಪಬೇಕಾಯಿತು. ಅಂತೂ, ಧ್ವನಿ ಇಲ್ಲವೇ ಇಲ್ಲ ಎನ್ನುವವರಿಗೆ ರಸವೂ ಇಲ್ಲದೆಹೋಗಬೇಕಾಗುತ್ತದೆ. ಇದರಿಂದ ವ್ಯಂಜನಾವೃತ್ತಿಯನ್ನು ಒಪ್ಪುವುದಿಲ್ಲ ಎಂದು ಮೊದಲಾಗಿ ಹೇಳುವವರ ವಾದಗಳು ಮುರಿದುಬಿದ್ದ ಹಾಗಾಯಿತು.

ಈ ರೀತಿ, ಧ್ವನಿ ತತ್ವವನ್ನು ಅತ್ಯಾವಶ್ಯಕವನ್ನಾಗಿ ಮಾಡಿ, ಅದಿಲ್ಲದಿದ್ದರೆ ಕಾವ್ಯಸೌಂದರ್ಯವನ್ನು ಒರೆಹಚ್ಚಿ ನೋಡುವುದಕ್ಕೂ ಅನುಭವಿಸುವುದಕ್ಕೂ ಸಾಧ್ಯವೇ ಇಲ್ಲ ಎನ್ನುವಂತೆ ಅದರ ಪ್ರಾಮುಖ್ಯವನ್ನು ಪ್ರಕಾಶಗೊಳಿಸಿ, ಅನಂತರ ಅದರ ವಿವಿಧ ಭೇದಗಳನ್ನು ಉದಾಹರಣೆಗಳ ಸಹಿತ ತಿಳಿಸಲಾಗಿದೆ. ಆನಂದವರ್ಧನರಿಗಿಂತ ಈಚಿನ ಗ್ರಂಥಕರ್ತರು ಈ ವಿಚಾರದಲ್ಲಿ ತಮ್ಮ ವಿಭಜನ ಕೌಶಲವನ್ನೂ ಗಣಿತಶಾಸ್ತ್ರದ ಜ್ಞಾನವನ್ನೂ ಪ್ರದರ್ಶಿಸಿ ಒಟ್ಟು ೫,೩೫೫ ! ಧ್ವನಿ ಭೇದಗಳನ್ನು ಗುರುತಿಸಿರುತ್ತಾರೆ. ಈ ಜಟಿಲವಾದ ಸಮಸ್ಯೆಯನ್ನು ಬಿಟ್ಟು ಮುಖ್ಯವಾದ ಪ್ರಕಾರಗಳನ್ನು ಮಾತ್ರ ತಿಳಿಯಲು ಪ್ರಯತ್ನಿಸಬಹುದು.

ಮೊದಲಾಗಿ, ಧ್ವನಿಯು, ಅವಿವಕ್ಷಿತವಾಚ್ಯ, ವಿವಕ್ಷಿತಾನ್ಯಪರವಾಚ್ಯ ಎಂದು ಎರಡು ವಿಧ. ಎಲ್ಲಿ ವಾಚ್ಯಾರ್ಥವು ಅವಿವಕ್ಷಿತವೋ, ಎಂದರೆ ಅನುಪಯುಕ್ತವೋ ಆ ಧ್ವನಿಪ್ರಭೇದಕ್ಕೆ ಅವಿವಕ್ಷಿತವಾಚ್ಯವೆಂದು ಹೆಸರು. ಧ್ವನಿಯು ಲಕ್ಷ್ಯಾರ್ಥದ

---

[1] ಉದಾಹರಣೆಗಳ ಸಹಿತ ಈ ವಿಷಯವು ವಿಶದವಾಗಿ ಪ್ರತಿಪಾದಿಸಲ್ಪಟ್ಟಿರುವುದನ್ನು ಧ್ವ. ಪು. ೨೫೯—೨೭೭ ನೋಡಬಹುದು.


ಮೂಲಕ ಪ್ರಕಾಶಿಸಲ್ಪಟ್ಟು ಅಭಿಧಾವೃತ್ತಿಯಿಂದ ಲಬ್ಧವಾಗುವ ಮುಖ್ಯಾರ್ಥವು ಕಾವ್ಯಸೌಂದರ್ಯಾಸ್ವಾದಕ್ಕೆ ಸಂಪೂರ್ಣವಾಗಿ ಅನಾವಶ್ಯಕವಾದರೆ ಅಲ್ಲಿ ಅವಿವಕ್ಷಿತ ವಾಚ್ಯ ಧ್ವನಿಯಿದೆಯೆಂದು ತಾತ್ಪರ್ಯ. ಇದನ್ನು ಅರ್ಥಾಂತರ ಸಂಕ್ರಮಿತವಾಚ್ಯ, ಅತ್ಯಂತ ತಿರಸ್ಕೃತವಾಚ್ಯ ಎಂದು ಮತ್ತೆ ಎರಡು ವಿಧವಾಗಿ ವಿಭಾಗಿಸಬಹುದು. ಮುಖ್ಯಾರ್ಥವು ಅನುಪಯುಕ್ತವಾದರೂ ಅದನ್ನು ಒಂದು ವಿಶೇಷರೂಪವಾದ ಅರ್ಥದೊಡನೆ ಸ್ವೀಕರಿಸಿದಲ್ಲಿ ಉಪಯುಕ್ತವಾಗುವಂತಿದ್ದರೆ ಅಲ್ಲಿ ಅರ್ಥಾಂತರ ಸಂಕ್ರಮಿತ ವಾಚ್ಯಧ್ವನಿ. ಅತ್ಯಂತ ತಿರಸ್ಕೃತ ವಾಚ್ಯಧ್ವನಿಯಿರುವಲ್ಲಿ (ಹೆಸರೇ ಸೂಚಿಸುವಂತೆ) ವಾಚ್ಯವು ಸರ್ವಥಾ ತಿರಸ್ಕೃತ, ಅಥವಾ ಅನುಪಯುಕ್ತ. ಹೇಗೂ ಅದನ್ನು ಸಂದರ್ಭಕ್ಕೆ ತಕ್ಕಂತೆ ಅಲ್ಪಸ್ವಲ್ಪ ಮಾರ್ಪಡಿಸಿ ಸ್ವೀಕರಿಸಲು ಸಾಧ್ಯವಿಲ್ಲ. ಸಂಪೂರ್ಣವಾಗಿ ಲಕ್ಷ್ಯಾರ್ಥದ ಮೂಲಕವೇ ವ್ಯಂಗ್ಯಾರ್ಥಪ್ರತೀತಿಯಾಗುವುದರಿಂದ ಮುಖ್ಯಾರ್ಥಕ್ಕೂ ವ್ಯಂಗ್ಯಾರ್ಥಕ್ಕೂ ಪರಸ್ಪರ ಸಂಬಂಧವೇ ಇಲ್ಲವೆನ್ನಬಹುದು.

ವಿವಕ್ಷಿತಾನ್ಯಪರವಾಚ್ಯವೆಂಬ ಎರಡನೆಯ ಮುಖ್ಯಭೇದವಿರುವಲ್ಲಿ, ವಾಚ್ಯಾರ್ಥವು ಸರ್ವಥಾ ಅನುಪಯುಕ್ತವಾಗದೆ ತಾನೂ ಒಂದು ವಿಧವಾದ ಪ್ರಯೋಜನವನ್ನು ಹೊಂದಿ ವ್ಯಂಗ್ಯಾರ್ಥದ ಪ್ರತಿಪಾದನಕ್ಕೂ ಸಹಾಯ ಮಾಡುವ ರೀತಿಯಲ್ಲಿ ಅಪ್ರಧಾನತೆಯನ್ನು ಹೊಂದುತ್ತದೆ. ಎಂದರೆ, ವಾಚ್ಯಕ್ಕೂ ಒಂದು ಕೆಲಸವಿದೆ, ಅದನ್ನು ನೆರವೇರಿಸಿ ವಾಚ್ಯವು ಕೃತಾರ್ಥತೆಯನ್ನು ಹೊಂದಬಹುದು. ಆದರೆ ಕಾವ್ಯಕ್ಕೆ ಅದೇ ಪರಮೋದ್ದೇಶವಲ್ಲ. ಈ ವಿಧವಾದ ವಿವಕ್ಷಿತಾನ್ಯ ಪರವಾಚ್ಯ ಧ್ವನಿಯಲ್ಲೂ, ಸಂಲಕ್ಷ್ಯಕ್ರಮ ವ್ಯಂಗ್ಯ ಅಸಂಲಕ್ಷ್ಯಕ್ರಮ ವ್ಯಂಗ್ಯವೆಂದು ಎರಡು ವಿಧ. ವ್ಯಂಗ್ಯಾರ್ಥದ ಪ್ರತೀತಿ ಅಂದರೆ ತಿಳಿಯುವ (ಜ್ಞಾನಗೋಚರವಾಗುವ) ರೀತಿಯಲ್ಲಿ ಒಂದು ಕ್ರಮವಿದೆಯೆನ್ನುವುದರಲ್ಲಿ ಯಾರಿಗೂ ಸಂದೇಹವಿಲ್ಲ. ಈ ಕ್ರಮವು ಕೆಲವು ಕಡೆಗಳಲ್ಲಿ ಗೋಚರವಾಗುತ್ತದೆ. ಕೆಲವು ಕಡೆಗಳಲ್ಲಿ ಗೋಚರವಾಗುವುದಿಲ್ಲ. ಈ ದೃಷ್ಟಿಯಿಂದ ಮೇಲ್ಕಂಡ ವಿಭಾಗವನ್ನು ಮಾಡಲಾಗಿದೆ. ರಸಧ್ವನಿಯಿರುವೆಡೆಗಳಲ್ಲೆಲ್ಲ ವ್ಯಂಗ್ಯ ಪ್ರತೀತಿಯ ಕ್ರಮವು ಗೋಚರವಾಗುವುದಿಲ್ಲವಾದ್ದರಿಂದ ಅಸಂಲಕ್ಷ್ಯಕ್ರಮಧ್ವನಿಯೆಂಬ ಭೇದವು ಒಂದೇ ವಿಧವೆಂದು ಹೇಳಬಹುದು. ಸಂಲಕ್ಷ್ಯಕ್ರಮವಾದ ಧ್ವನಿಯು ಶಬ್ದಶಕ್ತಿಯಿಂದ ಹುಟ್ಟಿದ್ದು, ಅರ್ಥಶಕ್ತಿಯಿಂದ ಹುಟ್ಟಿದ್ದು, ಮತ್ತು ಎರಡರ ಶಕ್ತಿಯಿಂದಲೂ ಹುಟ್ಟಿದ್ದು ಎಂದು ಮೂರು ವಿಧವಾಗಿ ವಿಭಾಗಿಸಲ್ಪಟ್ಟಿದೆ. ಇದೇರೀತಿ ಶಬ್ದಶಕ್ತಿಧ್ವನಿಯು ಎರಡು [1]ವಿಧವೆಂದೂ ಅರ್ಥಶಕ್ತಿ ಧ್ವನಿಯು ಹನ್ನೆರಡು ವಿಧವೆಂದೂ[2]

---

1-2 ಸಾಹಿತ್ಯದರ್ಪಣ, ಪುಟ 212-215, ನೋಡಬಹುದು.

ಎರಡರ ಶಕ್ತಿಯಿಂದ ಹುಟ್ಟಿದ್ದು ಒಂದೇ ವಿಧವೆಂದೂ ಹೇಳಲ್ಪಟ್ಟಿದೆ. ಧ್ವನಿಯ ಮುಖ್ಯವಾದ ಭೇದಗಳನ್ನು ಈ ರೀತಿ ಚಿತ್ರಿಸಬಹುದು.[1]




ಸಾಹಿತ್ಯ ವಿಮರ್ಶೆಯಲ್ಲಿ ಧ್ವನಿಮಾರ್ಗಕ್ಕೂ ಇತರ ಮಾರ್ಗಗಳಿಗೂ ಇರುವ ಸಂಬಂಧವನ್ನು ನಿಷ್ಕರ್ಷಿಸುವುದು ಬಹಳ ಮುಖ್ಯವಾದ ಕೆಲಸ. ಕಾವ್ಯಕ್ಕೆ ಆತ್ಮ ಭೂತವಾದ ಧ್ವನಿಯೆಂಬುದು ಬೇರೊಂದಿದೆಯೆಂದು ಕಂಡುಹಿಡಿದ ಕಾವ್ಯಜ್ಞರು ಹಿಂದಿನವರಿಂದ ಹೇಳಲ್ಪಟ್ಟಿದ್ದ ರಸ, ರೀತಿ, ಗುಣ, ಅಲಂಕಾರ ತತ್ವಗಳನ್ನು ಮರೆತೇ ಬಿಟ್ಟರೆ? ಅಥವಾ ಅವುಗಳಲ್ಲಿನ ಮುಖ್ಯ ವಿಷಯಗಳನ್ನೂ ಧ್ವನಿ ತತ್ವದಲ್ಲಿ ಸಂಗ್ರಹಿಸಿರುತ್ತಾರೆಯೆ ಎಂಬ ವಿಚಾರವನ್ನು ಚರ್ಚಿಸಿದಲ್ಲದೆ ಧ್ವನಿ ಸಿದ್ಧಾಂತದ ಬೆಲೆಯು ತಿಳಿಯುವಂತಿಲ್ಲ. ಏಕೆಂದರೆ ಕಾವ್ಯದ ಸೌಂದರ್ಯವು ಸಹೃದಯರಾದ ಎಲ್ಲರಿಗೂ ಗೋಚರವಾಗತಕ್ಕುದು. ಧ್ವನಿಮತದ ಸ್ಥಾಪಕರಾದ ಆನಂದವರ್ಧನರು ಎಷ್ಟು ಮಟ್ಟಿಗೆ ಅದನ್ನು ಅರಿತಿದ್ದರೋ ಅಷ್ಟೇ ಮಟ್ಟಿಗೆ ಹಿಂದಿನವರಾದ ಭಾಮಹ, ದಂಡಿ, ವಾಮನ ಮೊದಲಾದವರೂ ಅದನ್ನು ಅರಿತಿದ್ದರೆನ್ನುವುದರಲ್ಲಿ ಸಂದೇಹವಿಲ್ಲ. ಇಪ್ಪತ್ತನೆಯ ಶತಮಾನದಲ್ಲಿರುವುದರಿಂದ, ನಮಗೆ ಪುರಾತನರಾದ ಕಾಳಿದಾಸ, ಬಾಣ, ಅಭಿನ

[1] ಧ್ವನಿಯ ಭೇದ ಪ್ರಭೇದಗಳಿಗೆಲ್ಲ ಸಂಸ್ಕೃತದ ಉದಾಹರಣೆಗಳನ್ನು ಸಾಹಿತ್ಯ ದರ್ಪಣದಲ್ಲಿ ಕೊಡಲಾಗಿದೆ. ಅವುಗಳ ಪರಿವರ್ತನಕ್ಕೂ ವಿವರಣಕ್ಕೂ ಸ್ಥಳ ಸಾಲದುದರಿಂದ ಉದಾಹರಣೆಗಳನ್ನು ಇಲ್ಲಿ ಕೊಟ್ಟಿಲ್ಲ.

ವಗುಪ್ತ ಮೊದಲಾದವರಿಗಿಂತ ಚೆನ್ನಾಗಿ ಸಾಹಿತ್ಯಸುಧೆಯನ್ನು ಸವಿಯುವ ಶಕ್ತಿಯಿದೆಯೆಂದು ಹೇಳಿಕೊಳ್ಳಲು ಎಂತಹ ನಾಗರಿಕನಾದರೂ ಹಿಂಜರಿಯಲೇ ಬೇಕು. ಆದರೆ ಹೃದಯಕ್ಕೆ ಗೋಚರವಾದರೂ ಬುದ್ಧಿಗೆ ಸಿಲುಕದ ಆ ಸೌಂದರ್ಯದ ಸ್ವರೂಪವನ್ನು ವೈಜ್ಞಾನಿಕದೃಷ್ಟಿಯಿಂದ ವಿವರಿಸುವಾಗ ಆಧುನಿಕರಾದ ಒಬ್ಬೊಬ್ಬರೂ ಒಂದೊಂದು ಹೆಜ್ಜೆ ಮುಂದೆಹೋಗಲು ಅವಕಾಶವಿದೆ. ಹಾಗೆಯೇ ಹಿಂದೆ ಬರಲೂಬಹುದು; ಇಲ್ಲವೆನ್ನುವ ಹಾಗಿಲ್ಲ. ಮುಂದೆಮುಂದೆ ಹೋಗುವವರಿಗೆ ಹಿಂದಿನವರ ಸಂಶೋಧನೆಯೆಂಬ ಕಲ್ಪವೃಕ್ಷದ ಫಲವೇ ಜೀವನ. ಆದ್ದರಿಂದ ಧ್ವನಿತತ್ವವು ಹಿಂದಿನ ಸಿದ್ಧಾಂತಗಳ ವಿಚಾರದಲ್ಲಿ ಅಸಮ್ಮತಿಯಿಂದ ಹೊಸದಾಗಿ ಸ್ಥಾಪಿಸಲ್ಪಟ್ಟರೂ ಅವುಗಳ ಮೂಲ ತತ್ವಗಳನ್ನು ಬಿಟ್ಟಿಲ್ಲವೆಂದು ಹೇಳಬಹುದು. ವಿವಾದವು ಪ್ರಾಮುಖ್ಯದ ವಿಷಯದಲ್ಲಿ ಮಾತ್ರ ಅಥವಾ ಕೆಲವು ಸಣ್ಣ ವಿಷಯಗಳಲ್ಲಿ ಮಾತ್ರ ಎಂದು ಧಾರಾಳವಾಗಿ ಹೇಳಬಹುದು.

ಧ್ವನಿ ಸಿದ್ಧಾಂತಕ್ಕೂ ರಸ ಸಿದ್ಧಾಂತಕ್ಕೂ ಇರುವ ನಿಕಟವಾದ ಸಂಬಂಧದ ವಿಚಾರವಾಗಿ ಈಗಾಗಲೇ ಅನೇಕ ಮುಖ್ಯ ವಿಷಯಗಳನ್ನು ಗಮನಿಸಿಯಾಗಿದೆ. ಧ್ವನಿ ತತ್ವಜ್ಞರು ಮಾಡಿದ ಅತಿಮುಖ್ಯವಾದ ಕೆಲಸವೆಂದರೆ ರಸತತ್ವದ ಪುನರುಜ್ಜೀವನವೆನ್ನಬಹುದು. ಭರತನಿಂದ ಪ್ರತಿಪಾದಿಸಲ್ಪಟ್ಟ ರಸತತ್ವವು ನಾಟ್ಯಕ್ಕೆ ಮಾತ್ರ ಸಂಬಂಧಪಟ್ಟಂತೆ ಪ್ರಚುರವಾಗಿದ್ದು, ಈಚಿನ ಭಾಮಹ, ದಂಡಿ, ವಾಮನ ಇವರಿಂದ ಸರಿಯಾದ ಪುರಸ್ಕಾರಹೊಂದದೆ ಅಲ್ಲಲ್ಲೇ ವಿಲುಪ್ತವಾಗುವಂತಿದ್ದಿತು. ಆದರೆ ಭಾರವಿ, ಮಾಘ ಮೊದಲಾದ ಕೆಲವು ಕವಿಗಳೂ ರುದ್ರಟನೇ ಮೊದಲಾದ ಕೆಲವು ವಿಮರ್ಶಕರೂ ರಸದ ಪ್ರಭಾವವನ್ನು ಮರೆಯದೆಯೋ ಎಂಬಂತೆ ಅವರವರ ಗ್ರಂಥಗಳಲ್ಲಿ ಅದನ್ನು ಜ್ಞಾಪಕಕ್ಕೆ ತರಲು ಪ್ರಯತ್ನಿಸುತ್ತಿದ್ದರು. ಇದೂ ಅಲ್ಲದೆ ರಸದ ಆಸ್ವಾದಪ್ರಕಾರದ ವಿಚಾರದಲ್ಲೂ ದೊಡ್ಡ ವಿವಾದವು ಪ್ರಾರಂಭವಾಗಿ ಮೂರು ಮುಖ್ಯವಾದ ಮತಗಳು ನೆರವೇರಿದ್ದು ಆಗಲೇ ಏರ್ಪಟ್ಟಿದ್ದುವು. ಈ ತೊಡಕುಗಳಿಗೆ ಸಿಕ್ಕಿದ್ದ ರಸತತ್ವದ ಪುನರುದ್ಧಾರವು ಆನಂದವರ್ಧನರ ಆಸಕ್ತಿಯಿಂದಲೇ ಎಂದು ಹೇಳಿದರೆ ತಪ್ಪಾಗಲಾರದು. ಇದಲ್ಲದೆ ಇವರ ವ್ಯಾಖ್ಯಾನಕಾರರಾದ ಅಭಿನವಗುಪ್ತರು ರಸದ ಸ್ವರೂಪ ಮತ್ತು ಆಸ್ವಾದ ಪ್ರಕಾರ ಇವುಗಳ ವಿಚಾರದಲ್ಲಿ ನಡೆಯುತ್ತಿದ್ದ ಚರ್ಚೆಯಲ್ಲಿ ಭಾಗವಹಿಸಿ ಹೊಸದಾದ ಒಂದು ಸಿದ್ಧಾಂತವನ್ನು ಸ್ಥಾಪಿಸಿದರು. ಭಟ್ಟಲೊಲ್ಲಟ, ಭಟ್ಟಶಂಕುಕ ಮತ್ತು ಭಟ್ಟನಾಯಕ ಇವರುಗಳಿಂದ ಪ್ರತಿಪಾದಿಸಲ್ಪಟ್ಟಿದ್ದ ಉತ್ಪತ್ತಿ, ಅನುಮಿತಿ, ಮತ್ತು ಭುಕ್ತಿವಾದಗಳನ್ನು ಖಂಡಿಸಿ ಧ್ವನಿಮಾರ್ಗದ ಸ್ಥಾಪನೆಗೆ ಅನುಕೂಲವಾಗುವಂತೆ ಅಭಿವ್ಯಕ್ತಿವಾದವನ್ನು ಪ್ರತಿಪಾದಿಸಿದರು. ಹೀಗೆ ರಸತತ್ವವನ್ನು ಎತ್ತಿಹಿಡಿದು

ದರಿಂದ ಎರಡು ಕೆಲಸಗಳನ್ನು ನೆರವೇರಿಸಿದಂತಾಯಿತು. ರಸತತ್ವಕ್ಕೆ ನ್ಯಾಯವಾಗಿ ಸಲ್ಲಬೇಕಾದ ಪುರಸ್ಕಾರವು ದೊರಕಿತು. ಹಾಗೆಯೇ ಹಿಂದಿನ ಸಿದ್ಧಾಂತದ ಆಧಾರದ ಮೇಲೆ ನಿಂತಂತೆ ಪ್ರತಿಪಾದಿಸಲ್ಪಟ್ಟ ಈ ಹೊಸ ಸಿದ್ಧಾಂತಕ್ಕೆ ಸುಲಭವಾಗಿ ಅಂಗೀಕಾರವೂ ಸಿಕ್ಕಿತು. ಒಟ್ಟಿನಲ್ಲಿ, ರತ್ನಕ್ಕೆ ಚಿನ್ನದ ಕುಂದಣವು ಸಿಕ್ಕಿದಂತೆ ರಸಕ್ಕೆ 'ಧ್ವನಿ'ಯ ಬೆಂಬಲವು ದೊರೆಕಿತೆಂದರೆ ಅತಿಶಯೋಕ್ತಿಯಾಗಲಾರದು.

ರಸತತ್ವಕ್ಕೂ ಧ್ವನಿಸಿದ್ಧಾಂತಕ್ಕೂ ವಿರೋಧವು ಪ್ರಾಯಶಃ ಎಲ್ಲಿಯೂ ಬರುವಂತಿಲ್ಲ. ವಸ್ತುಧ್ವನಿ, ಅಲಂಕಾರಧ್ವನಿ ಇವೆರಡೂ ರಸಧ್ವನಿಯಲ್ಲೇ ಪರ್ಯವಸಿತವಾಗುತ್ತವೆಂದು ಹೇಳಿ ಧ್ವನಿಕಾರರು ರಸಧ್ವನಿಯ ಸರ್ವೋತ್ಕರ್ಷವನ್ನು ಒಪ್ಪಿರುವುದರಿಂದ ಕಾವ್ಯದಲ್ಲಿ ರಸಕ್ಕೆ ರಸತತ್ವಜ್ಞರು ಕೊಡುವ ಸ್ಥಾನವನ್ನೇ ಧ್ವನಿಮಾರ್ಗದವರೂ ಕೊಟ್ಟಂತಾಯಿತು. ಇದಲ್ಲದೆ, ದೋಷ ಗುಣ ಇವುಗಳ ವಿಚಾರ ಬಂದಾಗ, ರಸಾಸ್ವಾದಕ್ಕೆ ಅಡ್ಡಿತರುವಂತಿದ್ದರೆ ಅದು ಮುಖ್ಯವಾದ ದೋಷವೆಂದೂ ಗುಣಗಳು ರಸದ ಪರಿಪೋಷಕ್ಕೆ ಸಹಾಯಕವೆಂದೂ ಹೇಳಿರುವುದೂ ಇದನ್ನೇ ಸಮರ್ಥಿಸುತ್ತದೆ.

'ರೀತಿ'ಯು ಕಾವ್ಯಕ್ಕೆ ಆವಶ್ಯಕವೆನ್ನುವುದರಲ್ಲಿ ಆನಂದವರ್ಧನರ ಆಕ್ಷೇಪಣೆಯೇನೂ ಇಲ್ಲ. ಆದರೆ 'ರೀತಿಯೇ ಕಾವ್ಯದ ಆತ್ಮ' ಎನ್ನುವಷ್ಟುಮಟ್ಟಿನ ಪ್ರಾಧಾನ್ಯವನ್ನು ಅದಕ್ಕೆ ಕೊಡುವುದು ಅವರಿಗೆ ಸಮ್ಮತವಲ್ಲ. ರೀತಿಯನ್ನು ಶರೀರದ ಅವಯವಗಳ ಸಂಘಟನೆಗೆ ಹೋಲಿಸಲಾಗಿದೆ. ಶಬ್ದಾರ್ಥವೇ ಕಾವ್ಯದ ಶರೀರ, ಧ್ವನಿಯೇ ಆತ್ಮ. ಗುಣವು ಮನುಷ್ಯನ ಆತ್ಮಕ್ಕೆ ಸಂಬಂಧಪಟ್ಟ ಶೌರ್ಯ, ಧೈರ್ಯ ಮೊದಲಾದ ಗುಣಗಳಿದ್ದಂತೆ. ಅಲಂಕಾರಗಳು ದೇಹದ ವೇಷಭೂಷಣಗಳನ್ನು ಹೋಲುತ್ತವೆ. ಎಂದಮೇಲೆ, ಕಾವ್ಯದ ಶರೀರರೂಪವಾದ ಶಬ್ದಾರ್ಥಗಳ ಅವಯವ ಜೋಡಣೆಗೆ ಸಮಾನವಾದ ರೀತಿಗೆ ಒಂದು ಸ್ಥಾನವುಂಟು. ಅದಿಲ್ಲದಿದ್ದರೆ ಕಾವ್ಯವು ಹೇಗಿರಬೇಕೋ ಹಾಗಾಗುವುದಿಲ್ಲ. ಗುಣಗಳ ವಿಷಯದಲ್ಲೂ ಹೀಗೆಯೇ. ಮನುಷ್ಯನಿಗೆ ಒಳ್ಳೆಯ ಗುಣಗಳಿಲ್ಲದಿದ್ದರೆ ಹೇಗೆ ಅವನಿಗೆ ಮಾನ್ಯತೆಯಿಲ್ಲವೋ ಹಾಗೆ ಆತ್ಮವಾದ ಧ್ವನಿಯ ಪ್ರಕಾಶಕ್ಕನುಗುಣವಾದ ಒಳ್ಳೆಯ ಗುಣಗಳಿಲ್ಲದಿದ್ದರೆ ಕಾವ್ಯಕ್ಕೆ ಮೇಲ್ಮೆ ಬರದಿರಬಹುದು.

ಹೀಗೆಯೇ, ಅಲಂಕಾರಗಳನ್ನು ದೇಹದ ವೇಷಭೂಷಣಗಳಿಗೆ ಹೋಲಿಸಿರುವುದರಲ್ಲೂ ಒಂದು ಅರ್ಥವಿದೆ. ಸುಸಂಘಟಿತವಾದ ಅವಯವಗಳುಳ್ಳ ದೇಹವನ್ನು ಹೊಂದಿ ಗುಣಪರಿಪೂರ್ಣವಾದ ಆತ್ಮವುಳ್ಳ ಮನುಷ್ಯನು ಕೂಡ ತನ್ನ ವೇಷಭೂಷಣಗಳ ವಿಚಾರದಲ್ಲಿ ಹೇಗೆ ಸಮಾಜದ ನಿಯಮವನ್ನೂ ಔಚಿತ್ಯವನ್ನೂ ಮೀರಲು

ಸಾಧ್ಯವಿಲ್ಲವೋ ಹಾಗೆ ಕಾವ್ಯವು ಕೂಡ ರಸ, ಗುಣ, ರೀತಿ ಇವೆಲ್ಲವನ್ನೂ ಹೊಂದಿದ್ದರೂ ಅನಲಂಕೃತವಾಗಿರಲು ಸಾಧ್ಯವಿಲ್ಲ. ಒಂದು ಪಕ್ಷಹಾಗೆ ಇರಲು ಸಾಧ್ಯವಾದರೂ ಅದು ಉಚಿತವಲ್ಲ ಮತ್ತು ಅತಿಶಯಾವಹವಲ್ಲ. ಆದ್ದರಿಂದ ಕಾವ್ಯವು ಅನಲಂಕೃತವಾಗಿದ್ದರೂ ಕಾವ್ಯವೆಂಬ ಹೆಸರನ್ನು ಹೊಂದಬಹುದಾದರೂ, ಅಲಂಕೃತವಾಗಿರುವುದೇ ಇಷ್ಟವೆಂದು ಹೇಳಿದ ಹಾಗಾಯಿತು. "ನಕಾಂತಮಪಿ ನಿರ್ಭೂಷಂ ವಿಭಾತಿ ವನಿತಾಮುಖಂ" (ಮನೋಹರವಾಗಿದ್ದರೂ, ಕಾಮಿನಿಯ ಮುಖವು ಅಲಂಕಾರಗಳಿಲ್ಲದೆ ಶೋಭಿಸುವುದಿಲ್ಲ) ಎಂಬ ಭಾಮಹನ ವಾಕ್ಯವು ಧ್ವನಿಕಾರರಿಗೂ ಸಮ್ಮತವೇ ಆಗಿದೆಯೆಂದು ಹೇಳಬಹುದು. ಆದರೆ ಅಲಂಕಾರಗಳು ಹೇಗಿದ್ದರೆ ಸೌಂದರ್ಯವು ಹೆಚ್ಚುತ್ತದೆಯೆಂಬ ವಿಚಾರದಲ್ಲಿ ಆನಂದವರ್ಧನರ ಸಲಹೆಗಳು ಆಲಂಕಾರಿಕರ ದೃಷ್ಟಿಯಿಂದಲೂ ಅಮೂಲ್ಯವಾದುವೆನ್ನಬಹುದು. ವಿಷಯಲೋಲುಪನೂ ಚಾರ್ವಾಕನೂ ಆದವನಿಗೆ ತೇಜಸ್ವಿಯಾದ ಯತಿಯ ವೇಷವು ಸಲ್ಲದು. ಪ್ರೇಯಸಿಯೊಡನೆ ಕ್ರೀಡೆಗೆ ಸನ್ನದ್ಧನಾಗಿರುವವನಿಗೆ ಸಂಗ್ರಾಮಕಾಲದ ತೊಡವು ಅನುಚಿತ. ಗಹನವಾದ ವಿಷಯವನ್ನು ಚರ್ಚಿಸುವುದಕ್ಕಾಗಿ ಸೇರಿರುವ ಸಮ್ಮೇಳನದ ಸಮಯಕ್ಕೆ ಕೇವಲ ವಿಶ್ರಾಂತಿಕಾಲದ ವೇಷವು ಅನುಪಯುಕ್ತ. ಹೀಗೆ ಜೀವನದಲ್ಲೇ ಎಲ್ಲೆಲ್ಲಿಗೆ ಯಾವ ಯಾವ ಸಮಯಕ್ಕೆ ಯಾವ ವೇಷ ಭೂಷಣಗಳು ಬೇಕೆಂಬುದರಲ್ಲಿ ಒಂದು ನಿರ್ದಿಷ್ಟವಾದ ನಿಯಮವೂ ರುಚಿಯೂ ಕಂಡುಬರುತ್ತವೆ. ಹಾಗಿರುವಲ್ಲಿ ಕಾವ್ಯ ಪ್ರಪಂಚದಲ್ಲಿ ಇನ್ನೂ ಖಚಿತವಾದ ನಿಯಮಗಳಿಗೆ ಅವಕಾಶವಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಅಲಂಕಾರಗಳು ಅತಿಯಾಗಿ ಪ್ರಯೋಗಿಸಲ್ಪಡಬಾರದು. ಪ್ರಯೋಗಿಸಲ್ಪಟ್ಟಾಗ ಅವು ಕಾವ್ಯದ ಆತ್ಮಕ್ಕೆ ಹೊಂದುವಂತೆ ಇರಬೇಕು. ಅಂದರೆ, ಅಲಂಕಾರಗಳು ವಾಚ್ಯವಾಗಿರುವುದಕ್ಕಿಂತ ವ್ಯಂಗ್ಯವಾಗಿದ್ದರೆ ಸೌಂದರ್ಯವು ಹೆಚ್ಚೆಂದು ಅಭಿಪ್ರಾಯ. ಇಲ್ಲಿನ ಕೆಲವು ನಿರ್ಣಯಗಳನ್ನು ಹಿಂದೆಯೇ ಸೂಚಿಸಿದೆ. ಆದರೂ ಪುನಃ ಕ್ರೋಡೀಕರಿಸಿಕೊಳ್ಳುವುದು ಆವಶ್ಯಕ. ಕಾವ್ಯದಲ್ಲಿ ಅಲಂಕಾರವು ಧ್ವನಿತವಾಗಿದ್ದರೆ, ಆ ಕಾವ್ಯವು ಧ್ವನಿಕಾವ್ಯ (ಉತ್ತಮ) ವಾಗುತ್ತದೆ. ಅಲಂಕಾರವು ವಾಚ್ಯವಾದರೂ ವ್ಯಂಗ್ಯ ಸಂಸ್ಪರ್ಶವಿದ್ದರೆ ಆಗಬಹುದು. ಎಂದರೆ ವಾಚ್ಯಕ್ಕೆ ಪ್ರಾಧಾನ್ಯವಿದ್ದರೂ ವ್ಯಂಗ್ಯವು ಸ್ಫುಟವಾಗಿ ಗೋಚರವಾಗುವಂತೆ ಇರಬೇಕು. ಈ ವಿಧವಾದ ಗುಣೀಭೂತ ವ್ಯಂಗ್ಯ ಕಾವ್ಯವನ್ನೂ ಎರಡನೆಯ ದರ್ಜೆಯದನ್ನಾಗಿ ಅಂಗೀಕರಿಸಬಹುದು. ಆದರೆ ಅಲಂಕಾರವು ಕೇವಲ ವಾಚ್ಯವಾಗಿ ವ್ಯಂಗ್ಯದ ನೆರಳೂ ಗೋಚರವಾಗದಿದ್ದಲ್ಲಿ ಆ ಕಾವ್ಯಕ್ಕೆ 'ಕಾವ್ಯ'ವೆಂಬ ಹೆಸರು ಸಲ್ಲುವುದು ಕಷ್ಟ. ಗೌಣವಾದ ಅರ್ಥದಲ್ಲಿ ಅದನ್ನು 'ಕಾವ್ಯ'ವೆಂದು ಕರೆಯ

ಬೇಕಾಗುತ್ತದೆಯೆಂದು ಅಭಿಪ್ರಾಯಪಟ್ಟಿರುತ್ತಾರೆ. ಈ ರೀತಿ ಹೇಳಿರುವುದರಿಂದ ಬಹಳ ಕಾವ್ಯಗಳಿಗೆ ಕಾವ್ಯತ್ವವು ಹೋಗುತ್ತದೆಂದು ಭಾವಿಸಕೂಡದು. ಆನಂದವರ್ಧನರು ಬಹಳ ಶ್ರಮವಹಿಸಿ ವಾಚ್ಯವೈಚಿತ್ರ್ಯವೇ ಪ್ರಧಾನವಾಗಿರುವ ಕಾವ್ಯಗಳಲ್ಲೂ ವ್ಯಂಗ್ಯ ಸಂಸ್ಪರ್ಶವು ಸೂಕ್ಷ್ಮವಾಗಿಯಾದರೂ ಇದ್ದೇ ಇರುತ್ತದೆಯೆಂದೂ ಕೇವಲ ವಾಚ್ಯವೈಚಿತ್ರ್ಯಯುತವಾದ ಕಾವ್ಯಗಳು ಬಹಳ ಕಡಿಮೆಯೆಂದೂ ತೋರಿಸಿರುತ್ತಾರೆ. ನೀರಸವಾದ ಪ್ರಬಂಧದಲ್ಲಿ ಎಷ್ಟು ಅಲಂಕಾರಗಳಿದ್ದರೂ ಪ್ರಯೋಜನವಿಲ್ಲವೆಂಬ ವಿಚಾರದಲ್ಲಿ ಮಾತ್ರ ಅವರಿಗೆ ಎಳ್ಳಷ್ಟೂ ಸಂಶಯವಿಲ್ಲ. ಕಾವ್ಯದಲ್ಲಿ ಮೊದಲಿನಿಂದ ಯಾವುದಾದರೊಂದು ರಸವನ್ನು ಪೋಷಿಸುತ್ತಾ ಬಂದು ರಸಾಸ್ವಾದವಾಗುವ ವೇಳೆಗೆ ಸರಿಯಾಗಿ ಯಮಕವನ್ನೋ ಅನುಪ್ರಾಸವನ್ನೋ ಅಥವಾ ಜಟಿಲವಾದ ಶ್ಲೇಷೆಯನ್ನೋ ಪ್ರಯೋಗಿಸಿದರೆ ಅದುವರೆಗೆ ಮಾಡಿದ ಪ್ರಯತ್ನವೆಲ್ಲವೂ ವ್ಯರ್ಥವೆನ್ನುವುದರಲ್ಲೂ ಸಂಶಯಕ್ಕೆ ಆಸ್ಪದವಿಲ್ಲ. ಯಮಕ, ಅನುಪ್ರಾಸಗಳಿಂದಲೂ ಒಂದು ವಿಧವಾದ ಚಮತ್ಕಾರವುಂಟಾಗಬಹುದು. ಆದರೆ ಆ ಚಮತ್ಕಾರವನ್ನು ಸ್ಥಳವರಿತು ಪ್ರದರ್ಶಿಸಿದರೆ ಕಾವ್ಯಕ್ಕೆ ಅಲಂಕಾರರೂಪವಾಗಿ ಪರಿಣಮಿಸುತ್ತದೆ. ಇಲ್ಲದಿದ್ದರೆ ಶೂಲಪ್ರಾಯವಾಗುತ್ತದೆ. ಅಂತೂ, ಅಲಂಕಾರಗಳನ್ನು ವ್ಯಂಗ್ಯಪರವಾಗುವಂತೆ ಪ್ರಯೋಗಿಸಿದರೆ ಕಾವ್ಯದ ಸೌಂದರ್ಯವು ಹೆಚ್ಚುತ್ತದೆಯೆಂದೂ ಈ ವಿಧವಾದ ಪ್ರಯೋಗವು ಕಾವ್ಯಕ್ಕೆ ಆವಶ್ಯಕವೆಂದೂ ಅಂಗೀಕರಿಸಿ ಧ್ವನಿಕಾರರು ಅಲಂಕಾರಗಳ ಮುಖ್ಯತೆಯನ್ನು ಒಪ್ಪಿದರು. ಆದರೆ ಅವುಗಳ 'ವಿನಿವೇಶನ'ದಲ್ಲಿ ಅಗತ್ಯವಾಗಿ ಬೇಕಾದ 'ಸಮೀಕ್ಷೆ'ಯನ್ನೂ ಸ್ಪಷ್ಟಪಡಿಸಿದರು.

ಇಷ್ಟೆಲ್ಲ ಮುಖ್ಯವಾದ ಸಲಹೆಗಳನ್ನು ಕೊಟ್ಟು ಕಾವ್ಯವಿಮರ್ಶೆಯು ಸರಿಯಾಗಿ ನಡೆಯಲು ಬೇಕಾಗುವ ನಿಯಮಗಳನ್ನು ಒದಗಿಸಿಕೊಟ್ಟ ಆನಂದವರ್ಧನರಿಗೆ ಕವಿಗಳೂ ವಿಮರ್ಶಕರೂ ಎಷ್ಟು ಋಣಿಗಳಾದರೂ ಸಾಲದು. ಕಡೆಯದಾಗಿ, ಇದನ್ನೆಲ್ಲ ಮಾಡಿರುವುದು ಸಹೃದಯರಿಗೆ ಆನಂದವನ್ನುಂಟುಮಾಡುವುದಕ್ಕಾಗಿ—ಎಂದು ಅವರೇ ಹೇಳಿಕೊಂಡಿರುವರು. ಗ್ರಂಥದಲ್ಲೂ ಪದೇಪದೇ ಸಹೃದಯರ ಅನುಭವವನ್ನೇ ಪ್ರಮಾಣವನ್ನಾಗಿ ಸ್ವೀಕರಿಸಿರುತ್ತಾರೆ. ಎಲ್ಲ ವಿಚಾರಗಳಲ್ಲಿಯೂ ಸಹೃದಯರ ಅನುಭವವೇ ಅವರಿಗೆ ಮುಖ್ಯತಮ. ಸಹೃದಯರೇ ಅವರ ದೇವರೆನ್ನಬಹುದು. ಕವಿಯ ಹೃದಯಕ್ಕೆ ಸಮಾನವಾದ ಹೃದಯವುಳ್ಳವರೇ ಸಹೃದಯರು. ಅವಿರತವಾದ ಕಾವ್ಯಾನುಭವದಿಂದ ಕನ್ನಡಿಯಂತೆ ಪಾರದರ್ಶಕವಾದ ಅವರ ಹೃದಯದಲ್ಲಿ ಕವಿಯ ಅನುಭವವು ಪ್ರತಿಫಲಿಸುತ್ತದೆ. ಅದನ್ನು ಅನುಭವಿಸಿ ಕವಿಗೆ ಸಹಾನುಭೂತಿಯನ್ನು ತೋರಿಸಿ ಅವನ ಕಾವ್ಯವನ್ನು ವಿಮರ್ಶಿಸುವವರೇ ನಿಜವಾದ ವಿಮರ್ಶ

ಕರು. ಈ ವಿಧವಾದ ಪ್ರಜಾಪ್ರಭುತ್ವ ನಿಯಮಕ್ಕೆ ಒಳಪಟ್ಟಂತಿರುವ ಕಾವ್ಯತತ್ವಕ್ಕೆ ಯಾರುತಾನೆ ಸಹಿ ಹಾಕಲಾರರು? ಇಂತಹ ಗಭೀರವಾದ ಧ್ವನಿತತ್ವವನ್ನು ಮೊಟ್ಟ ಮೊದಲು ಪ್ರತಿಪಾದಿಸಿದ ಆನಂದವರ್ಧನರು ಯಾರ ಸಂತೋಷದ ಪ್ರವಾಹವನ್ನು ತಾನೆ ಉಕ್ಕಿಸುವುದಿಲ್ಲ?.

ಧ್ವನಿನಾತಿಗಭೀರೇಣ ಕಾವ್ಯತತ್ವ ವಿಧಾಯಿನಾ |
ಆನಂದವರ್ಧನಃ ಕಸ್ಯ ನಾಸೀದಾನಂದವರ್ಧನಃ ||

ಎಸ್. ವಿ. ಶ್ರೀನಿವಾಸರಾಘವಾಚಾರ್.

# ದೊರವಡಿ

ಸ್ವಸ್ತಿ ಶ್ರೀಮತು ಯಾದವನಾರಾಯಣಂ ಭುಜಬಳ ಪ್ರೌಢಪ್ರತಾಪ ಚಕ್ರವರ್ತಿ ಶ್ರೀ ವೀರರಾಮದೇವ ವಿಜಯ ರಾಜ್ಯೋದಯ ೧೪ನೆಯ ಚಿತ್ರಭಾನು ಸಂವತ್ಸರದ ಚೈತ್ರ ಸು ೧೫ ಆದಿತ್ಯವಾರ ಶ್ರೀಮನ್ಮಹಾಮಂಡಲೇಶ್ವರ ಸಕಲ ಸೈನ್ಯಾಧಿಪತಿ ಕನ್ನರದೇವನು ಮುಂಮಡಿಸಿಂಗೆಯ ನಾಯಕನಮೇಲೆ ದೊರವಡಿಗೆ ನಡೆದು ಕಾದಿದಲ್ಲಿ ಶ್ರೀಮನ್ಮಹಾಪ್ರಧಾನಂ ರಾಯದಂಡನಾಥ ಪೇಸಣಹನ್ನ ಶರಣಾಗತವಜ್ರ ಪಂಜರಂ ಕೊಚರ್ಸರ ಮಗ ವಣದೇವರ್ಸರು ಕಾದಿ ಹಲವಾಳು ಕುದುರೆಯಂ ಕೊಂದು ಸುರಲೋಕ ಪ್ರಾಪ್ತನಾದನು.[1]

ಕನ್ನರದೇವನು ಮುತ್ತಿಗೆಹಾಕಿದ ದೊರವಡಿ ಕೋಟೆಯು ಈಗ ಇರುವುದಿಲ್ಲ. ಈ ಕೋಟೆಗೆ ಬೇರೆ ಹೆಸರೇನಾದರೂ ಇದೆಯೆ? ಈ ಕೋಟೆಯು ಇದ್ದ ಸ್ಥಳವಾದರೂ ಎಲ್ಲಿದೆ ಎಂಬುದನ್ನು ನಿರ್ಧರಿಸಬೇಕಾಗಿದೆ. ಇನ್ನೊಂದು ವೀರಗಲ್ಲಿನಲ್ಲಿ ಮಹಾಪ್ರಧಾನ ಚೌಡರಸನು ಮುಂಮ್ಮಡಿ ಸಿಂಗೆಯನಾಯಕನ ಮೇಲೆ ಕುರುಗೋಡು ನಾಡಿನ ದೊರವದೆಗೆ ನಡೆದು ಕಾದಿ ಹಲವಾಳು ಕುದುರೆಯಂ ಕೊಂದು ಶಿವಲೋಕ ಪ್ರಾಪ್ತವಾದನು ಎಂದು ಹೇಳಿದೆ.[2]

ದೊರವಡಿಯನ್ನೊಳಗೊಂಡ ಕುರುಗೋಡುನಾಡು ಬೆಂಗಳೂರು ಜಿಲ್ಲೆಯಲ್ಲಿರುವ ದೊಡ್ಡಕುರುಗೋಡು ಆಗಿರಬಹುದೆ? ಎಂದು ಮೈಸೂರು ಶಾಸನ ಇಲಾಖಾ ಅಧಿಕಾರಿಗಳು ಅಭಿಪ್ರಾಯಪಟ್ಟಿರುತ್ತಾರೆ.[3] ಆದರೆ ಈ ದೊಡ್ಡಕುರುಗೋಡು ಯಾವಾಗಲಾದರೂ ರಾಜಧಾನಿಯಾಗಿತ್ತೆ? ಮತ್ತು ಆ ನಾಡಿನಲ್ಲಿ ದೊರೆವಾಡಿ ಎಂಬ ಕೋಟೆ ಇದೆಯೆ? ಎಂಬ ವಿಷಯದಲ್ಲಿ ಅವರು ಏನನ್ನೂ ಹೇಳದೆ ಮೌನವಾಗಿರುತ್ತಾರೆ.

ಕುರುಗೋಡು ಎಂಬ ಸುಮಾರು ೩,೦೦೦ ಪ್ರಜಾಸಂಖ್ಯೆಯುಳ್ಳ ಒಂದು ಗ್ರಾಮವು ಬಳ್ಳಾರಿ ಜಿಲ್ಲೆಯಲ್ಲಿದೆ. ಇದು ಇತಿಹಾಸ ಪ್ರಸಿದ್ಧವಾದ ಸ್ಥಳ. ಒಮ್ಮೆ ಇದು ದೊಡ್ಡ ಪಟ್ಟಣವಾಗಿತ್ತು. ಕ್ರಿ.ಶ. 609-642 ರ ವರೆಗೆ ಆಳಿದ ಬಾದಾಮಿ

---

[1] *M.A.R.* for 1935: Inscription, No. 39.

[2] ಚನ್ನಗಿರಿ ೨೪.

[3] Doravadi is a village said to be situated in Kurugod-nad (E.C. VII, Channagiri 24). . . Kurugod may probably be connected with Dodkurugod in Doddaballapur Taluk, Bangalore District. *M.A.R.* 1935. page 117.

ಚಾಲುಕ್ಯರ ಪುಲಿಕೇಶಿಗೆ ಅಧೀನವಾಗಿತ್ತು ಎಂದು ಒಂದು ಶಾಸನದಿಂದ ತಿಳಿಯು ಬರುತ್ತದೆ. ಆಗ್ಗೆ ಬಲ್ಲಕುಂದಿ ೩೦೦ ರಾಜ್ಯದ ನೆಲೆವೀಡಾಗಿತ್ತು. ಈ ಕುರುಗೋಡು ಬಳಿ ಕ್ರಿ.ಶ. 1027, 1030, 1048 ನೆಯ ಸಂವತ್ಸರಗಳ ಶಿಲಾಶಾಸನಗಳಿವೆ. ಕ್ರಿ.ಶ. 1148 ರಲ್ಲಿ ಜಗದೇಕಮಲ್ಲನ ಸಾಮಂತ ಇಮ್ಮಡಿ ರಾಚಮಲ್ಲನು ಇಲ್ಲಿ ಆಳುತ್ತಿದ್ದನು. ಕ್ರಿ.ಶ. 1185 ರಲ್ಲಿ ಕಲ್ಯಾಣದ ಚಾಲುಕ್ಯವಂಶದ ಕೊನೆಯ ಅರಸನಾದ ಸೋಮೇಶ್ವರನ ನೆಲೆವೀಡಾಗಿತ್ತು. ಕ್ರಿ.ಶ. 1191 ರಲ್ಲಿ ಇಮ್ಮಡಿ ವೀರಬಲ್ಲಾಳರಾಯನು ಸ್ವಾಧೀನ ಪಡಿಸಿಕೊಂಡ ಅನೇಕ ಕೋಟೆಗಳಲ್ಲಿ ಕುರುಗೋಡೂ ಒಂದು ಮುಖ್ಯವಾದ ಕೋಟೆ ಯಾಗಿತ್ತು ಎಂದು ಈ ಕೆಳಗಿನ ಪದ್ಯದಿಂದ ವ್ಯಕ್ತವಾಗುತ್ತದೆ.

ಪೊಟ್ಟಜೆವಿುಕ್ಕು ಸೊರ್ಕಿ ಕಱುಗಟ್ಟದ ವೈರಿನೃಪಾಳಕರ್ಚ್ಚಲಂ |
ಬಟ್ಟರೆ ಸಂದೆರಂಬರೆಗೆ ಮಾನಿ ವಿರಾಟನ ಕೋಟೆ ಗುತ್ತಿ ಬೆ
ಳ್ಳಿಟ್ಟಗೆ ಉಟ್ಟಪಳ್ಳಿ ಸೊರಟೂರ್ಕುಱುಗೋಡೊಳಗಾದ ದುರ್ಗಮಂ
ತೊಟ್ಟನೆ ಮುತ್ತಿಕೊಂಡಳವನೇವೊಗಳ್ವೆಂ ಗಿರಿದುರ್ಗಮಲ್ಲನಾ ||[1]

ಈ ರೀತಿ ಹೊಯಿಸಳ ವೀರಬಲ್ಲಾಳನು ಕುರುಗೋಡು ಕೋಟೆಯನ್ನು ಸಾಧಿಸಿದಾಗ್ಯೂ, ಅಲ್ಲಿ ಇಮ್ಮಡಿ ರಾಚಮಲ್ಲನ ಮಗ ಕಲಿದೇವನು ಇಲ್ಲಿಯೇ ಸಾಮಂತನಾಗಿದ್ದು ಕ್ರಿ.ಶ. 1199 ರಲ್ಲಿ ಹಂಪೆಯ ಪಂಪಾಪತಿಗೆ ದತ್ತಿಯನ್ನು ಬಿಟ್ಟಿರು ವುದಾಗಿ ಹೇಳುವ ಶಾಸನದಲ್ಲಿರುವ ಪದ್ಯಗಳು.[2]

ವಾರಾಶಿಪರೀತೋದ್ಯ | ದ್ಧಾರುಣಿ ಮಧ್ಯಮೆನಲೆವ ಮೇರುವ ತೆಂಕಲ್ |
ರಾರಾಜಿಪ ಕುಂತಳ ಧರೆ | ಗೋರನ್ತಿರ **ಬಲ್ಲಕುಂದಿ** ನಾಡೆಸೆದಿರ್ಕುಂ ||
ಆ ನಾಳ್ಕೆ ಪಟ್ಟಣಂ ಲ | ಕ್ಷ್ಮೀನಿಳಯಂ ತಾನೆನಿಪ್ಪ **ಕುರುಗೋಡ**ದನು |
ರ್ವ್ವೀನುತ ಕಲಿದೇವನೃಪ | ತಾನೊಲವಿ ಪಾಳಿಸುತ್ತಿರೆ ಮಣಿವಂಶಂ ||

ಪಳಿತ ಸುರಕುಜದ ಚೆಲ್ವಂ | ತಳೆದಿರ್ದಾ ಬಲ್ಲಕುಂದೆ ನಾಡೋಳ್ತೊಳ್ತೊಂ |
ದೆಳ್ಗೊಂಬಿನ್ **ದೊರವದಿ** ನಾ | ಡೆಳೆಯೋಳ್ ರಂಜಿಪುದುನೋಡೆ ನಾಡುಗಳರಸಂ ||
ಆ ದೊರವಡಿನಾಡೊಳ್ಪಂಪಾತೀರ್ಥವಿುಪ್ಪುದನ್ತೆನೆ ||

ಮೇರುವಿನ ತೆಂಕಲಿನಲ್ಲಿರುವ ಕುಂತಳ ದೇಶದಲ್ಲಿ ಬಲ್ಲಕುಂದಿನಾಡು ರಾಜಿಸು ವುದು; ಆ ನಾಡಿಗೆ ಕುರುಗೋಡು ಲಕ್ಷ್ಮೀನಿವಾಸವಾದ ರಾಜಧಾನಿ, ಬಲ್ಲಕುಂದೆ ನಾಡಿನಲ್ಲಿ ದೊರವದಿ ಒಂದು ಒಳನಾಡು; ಆ ಒಳನಾಡಿನಲ್ಲಿ ಪಂಪಾತೀರ್ಥವು ಇದೆ ಎಂದು ಮೊಳಗುವುವು.

---

[1] ದಾವಣಗೆರೆ ೨೫.

[2] *South Indian Inscriptions*, Vol. IX, Part II, 595.

ಮೇಲೆ ಉಕ್ತವಾಗಿರುವ ವಿಷಯಗಳನ್ನೆಲ್ಲ ವಿಮರ್ಶಿಸುವುದರಿಂದ ಮುಮ್ಮಡಿ ಸಿಂಗೆಯನಾಯಕನಿಗೆ ಸೇರಿದ್ದ ಕುರುಗೋಡು ಮತ್ತು ದೊರವಡಿಗಳು ಹಂಪೆಯ ಬಳಿ ಇವೆ ಎಂಬುದು ಅಂಗೈ ನೆಲ್ಲಿಕಾಯಿಯಂತೆ ವ್ಯಕ್ತವಾಗಿದೆ.

ಮುಮ್ಮಡಿ ಸಿಂಗೆಯನಾಯ್ಕನು ಮಡಿದ ಮೇಲೆ ವೀರಕಂಪಿಲರಾಯನು ರಾಜನಾದನು. ಈ ರಾಜನ ಅಪ್ಪಣೆಯಂತೆ ಇವನ ಪ್ರವರ್ಧಮಾನ ಮಗನಾದ ಕುಮಾರರಾಮನು ಕಾಕತೀಯ ರಾಜಧಾನಿಯಾದ ಓರಗಲ್ಲಿಗೆ ಮುತ್ತಿಗೆ ಹಾಕಲು ದಂಡೆತ್ತಿಹೋದನು. ಈ ಮಾರ್ಗವನ್ನು ಕೆಳಗಿನ ಪದ್ಯಗಳಲ್ಲಿ[1] ವಿವರಿಸಿದೆ:—

(೧) ಎಪ್ಪತ್ತೈದು ಮನ್ನೆಯರು ತಾ ಸಹವಾಗಿ| ಒಪ್ಪದಿಂದೂರ ಹೊರಗಣ|
ಮುಪ್ಪುರ ವೈರಿಯ ಗುಡಿಯ ಮುಂದಿಳಿದರು | ಒಪ್ಪುವ ರಾಮೈಯ ಸಹಿತ||

(೨) ಕುಂಮಟದಿಂದಲಿ ಹೊರಟು ಬಂದರು ಬೇಗ| ಗಮ್ಮನೆ ಕಂಪಿಲಿಯ ಬಳಿಗೆ|
ಉಂಮಯದಿಂದ ಸೋಮೇಶಗೆ ಶರಣೆಂದು | ಎಮ್ಮಿಗನೂರ ದಾಂಟಿದರು ||

(೩) ಬರುತ ಕಂಡರು ಹೊರ ಮಾಲೆಯ ದುರ್ಗವ| ಉರುತರ ದೊಡ್ಡ ಬಸವನ|
ಪುರ ಕುರಗೋಡು ಪ್ರಯಾಣ ಗತಿಯೊಳು ರಾಮು | ಭರದಿಂದ ತನ್ನ ಮನ್ನೆಯರ||

(೪) ಕರೆದು ವೀಳ್ಯವನಿತ್ತು ಹರುಷದಿ ರಾಮೈಯ| ನೆರೆಗಲಿಗಳನು ಸಂತೈಸಿ|
ಪರಿವಾರವನೆಲ್ಲ ಇರದೆ ಬೋಳೈಸುತ| ಕರೆದು ವೀಳ್ಯಗಳ ತಾ ಕೊಡಿಸಿ||

(೫) ಧರೆಯು ಭೋರೆಂಬಂತೆ ದಾರಿಪ್ರಯಾಣವ| ಸಾರಿ ತೆರಳಿದನು ಆಕ್ಷಣಕೆ|
ಗುರು ರಾಮೇಶನೆ . . . ? ಗತಿಯೆಂದು| ಗುರುರಾಮೈಯ ವಂದಿಸಿದ||

(೬) ಕುರುಗೋಡನುಳಿದು ಮುಂದಕೆ ದಾಂಟಿ ನಡೆದರು| ತರಣಿ ಕಲ್ಲೂರ ಮುಂದಿಳಿದ|
ಹರಿವಾ ನದಿ ದಾಂಟಿ ಬಂದನು ರಾಮೈಯ| ನಿಬ್ಬರದಲಿ ತಾನು ನಡೆದ||

ಕುಮಾರ ರಾಮನು ೭೫ ಮನ್ನೆಯರೊಡನೆ ಕುಮ್ಮಟದಿಂದ ಪ್ರಯಾಣ ಹೊರಟು ಕಂಪಿಲಿಯನ್ನು ಸೇರಿ ಸೋಮೇಶ್ವರನಿಗೆ ಶರಣುಮಾಡಿ ಮುಂದಕ್ಕೆ ನಡೆದನು. ಎಮ್ಮಿಗನೂರನ್ನು ದಾಟಿ ಕುರುಗೋಡು ಬಳಿಯ ದೊಡ್ಡಬಸವನನ್ನು ಕಂಡು ವಂದಿಸಿದನು. ಜಟ್ಟಂಗಿ ರಾಮೇಶ್ವರನನ್ನು ವಂದಿಸುತ್ತಾ ಕುರುಗೋಡಿನಿಂದ ಹೊರಟು ಕಲ್ಲೂರನ್ನು ಸೇರಿ ಮುಂದಕ್ಕೆ ಹೋಗುವಾಗ ದಾರಿಯಲ್ಲಿ ಅಡ್ಡಬಂದ ಹಗರಿ ನದಿಯನ್ನು ದಾಟಿ ಯಾದವಗಿರಿಗೆ ಬಂದು ತಲಪಿದನು.

ತುಂಗಭದ್ರಾ ದಡದಲ್ಲಿರುವ ಕಂಪಿಲಿಯಿಂದ ಹಗರಿನದಿಯ ದಡದಲ್ಲಿರುವ ಕಲ್ಲೂರು ವರೆಗೆ ಇರುವ ಊರುಗಳೆಲ್ಲಾ ಬಳ್ಳಾರಿ ಜಿಲ್ಲೆಯಲ್ಲಿವೆ. ಈ ಕುರುಗೋಡಿನಲ್ಲಿರುವ

[1] ನಾಗಸಂಗಯ್ಯನ 'ಕುಮಾರ ರಾಮನ ಸಾಂಗತ್ಯ', ಸಂಧಿ ೮, ಪದ್ಯಗಳು ೧೪ರಿಂದ ೧೯. (ಇದರ ಕೈಬರಹದ ಒಂದು ಗ್ರಂಥವು ಈ ಲೇಖಕನ ಬಳಿ ಇದೆ).

ದೊಡ್ಡಬಸವನ ವಿಗ್ರಹವು ಹನ್ನೆರಡು ಅಡಿ ಎತ್ತರವಿದೆ. ಒಂದೇ ಕಲ್ಲಿನಲ್ಲಿ ಕೊರೆದಿದೆ.[1] ಇದರಿಂದಲೂ ಕನ್ನರದೇವನು ಮುತ್ತಲು ಬಂದ ಕುರುಗೋಡು ನಾಡು ಬಳ್ಳಾರಿ ಪ್ರಾಂತದಲ್ಲಿದೆ ಎಂದೂ, ಇಲ್ಲಿಂದ ೧೦೦ ಮೈಲಿಗಳಿಗಿಂತ ದೂರದಲ್ಲಿರುವ ದೊಡ್ಡ ಕುರುಗೋಡು ಅಲ್ಲವೆಂದೂ ವ್ಯಕ್ತವಾಗುವುದು. ಕುರುಗೋಡು ನಾಡಿನಲ್ಲಿರುವ ದೊರವಾಡಿಯು ಕ್ರಿ.ಶ. ೧೬ ನೆಯ ಶತಮಾನದಲ್ಲಿಯೂ ಪ್ರಸಿದ್ಧವಾಗಿತ್ತು. ಅಚ್ಯುತ ರಾಯನು (ಕ್ರಿ.ಶ. 11-12-1539 ರಲ್ಲಿ) ವಿಕಾರಿ ಸಂವತ್ಸರದ ಪುಷ್ಯ ಶು. ೧ರಲ್ಲು **ದೊರವಡಿ** ಸೋಮಲಾಪುರದ ಭೂಮಿಯನ್ನು ದಾನಮಾಡಿರುವನು.[2]

ಹಂಪೆಯ ಬಳಿ ದಾರೋಜಿ ಎಂಬ ರೈಲುಮಾರ್ಗದ ನಿಲ್ದಾಣವಿದೆ. ದಾರೋಜಿ ಎಂಬುದೇ ದೊರವಾಡಿಯಾಗಿದ್ದಿರಬಹುದೆಂದು ಊಹಿಸಬಹುದಾಗಿದೆ. ಇದು ಬರಿಯ ಊಹೆಯಲ್ಲ. ಹಸ್ತಿನಾವತಿ ವಳಿತದ ದೊರವಾಡಿ ವೇಂಟೆಗೆ ಕೂರಕುಪ್ಪೆ ಎಂಬ ಅಗ್ರಹಾರವು ಸೇರಿತ್ತು. ಈ ಕೂರಕುಪ್ಪೆ ಅಗ್ರಹಾರದ ಬಳಿಯೇ ದಾರೋಜಿ ಇದೆ.[3]

ಹುಲ್ಲೂರು ಶ್ರೀನಿವಾಸ ಜೋಯಿಸ

---

[1] *Bellary District Gazetteer.*

[2] *South Indian Inscriptions*, Vol. IV, 260.

[3] *M.E.R.* 727 of 1922; also *Origin of the City and the Empire of Vijayanagara*, page 168.

## ಬನವೆ ನನ್ನಯ ದೇಗುಲ

ಹಣ್ಣು ಕಾಯ್ಗಳ ನಿತ್ತು ದೇವಗೆ
   ಹಲರು ಪೂಜೆಯ ಗೈವರು,
ಅನ್ನ ಪಾನವನುಣಿಸಲಾತಗೆ
   ಮತ್ತೆ ಕೆಲವರು ಒಯ್ವರು.

ಗುಡಿಯ ಮಂಟಪದಲ್ಲಿ ನೆರೆವರು,
   ಮಂಗಳಾರತಿ ಪಡೆವರು;
ಕಾಸನೆಸೆವರು, ಕೈಯ ಮುಗಿವರು,
   ಬೇಡಿ ಹರಕೆಯ ಕೆಡೆವರು.

ನಾನು ಬೇರೆಯ ಗುಡಿಗೆ ಹೋಗೆನು,
   ಬನವೆ ನನ್ನಯ ದೇಗುಲ,
ದೇವರಲ್ಲಿಯ ಎಲ್ಲ ಚೆಲ್ವಿಕೆ
   ವರ್ಣ ಸುಂದರ ಸಂಕುಲ.

ಅಲ್ಲಿ ಕರ್ತನು ನುಡಿವನೆನ್ನೊಡ-
   ನಿನಿಯ ಹಕ್ಕಿಯ ಕೊರಲಲಿ,
ಕರುಣೆ ತೋರಿಸಿ, ಮಾತನಾಡಿಸಿ
   ಬಂದು ನಿಲುವನು ಕರದಲಿ.

ಹೂಗಳೆರಡನು ತಿರಿದು ತಾರೆನು
   ನಾನು ದೇವಗೆ ಬನದಲಿ,
ಹೂವೆ ಅವನಾಗಿರೆ ಅದೇತಕೆ?
   —ಪೂಜೆಗೈವೆನು ಮನದಲಿ.

ಗುಡಿಯ ಗೋಪುರ ನೀಲಿಯಾಗಸ,
   ಮುಗಿಲು ಕೆತ್ತನೆ-ಚಿತ್ತರ;
ಆತ್ಮ ತೋಷವೆ ಮಂತ್ರಘೋಷವು
   ನನ್ನ ದೇವರ ಹತ್ತಿರ.

ಜನರು ಹೋಹರು ಹಬ್ಬಹರಿದಿನ
ಮಾತ್ರ ಪೂಜಿಸೆ ದೇವನ;
ನನ್ನ ಪೂಜೆಯು ಸಲುವುದಾತಗೆ
ಚಾಚು ತಪ್ಪದೆ ದಿನದಿನ.

ಅವರು ನಂಬಿಹರೆಂದೊ ಮುಂದಕೆ
ಕಾಂಬೆವಾತನ ಎನ್ನುತ,
ನಾನು ಕಂಡಿಹೆನವನನಾಗಲೆ
ಸೃಷ್ಟಿ ಸೊಬಗನು ತಿನ್ನುತ.

ನನ್ನ ದೇವರು ದಯೆಯ ಮೂರುತಿ,
ಆಪ್ತನಿಷ್ಟನು, ಗೆಳೆಯನು;
ಎಲ್ಲ ಸಮಯದಿ ನೀಡಿ ಸೊಗವನು
ನನ್ನ ಬಳಿಯಲೆ ಸುಳಿವನು.

## ಎದೆಯ ಹಕ್ಕಿ

ಎದೆಯ ಹಕ್ಕಿ ಬಲೆಗೆ ಸಿಕ್ಕಿ
ದಿಕ್ಕುಗಾಣದೆ
ತೊಳಲುತಿಹುದು, ದೇವ, ಬಾರ,
ನೀನು ಮಾಣದೆ.

ಕಿರಿಯ ಮರಿಗೆ ಕ್ರೂರವಿಧಿಯ
ಸೆರೆಯ ತಪ್ಪಿಸು,
ನಭದ ನೀಲಿಯಾಳಕದನು
ಮತ್ತೆ ಒಪ್ಪಿಸು.

ಮರಿಯು ಮುನ್ನ ಮೆರೆದ ತನ್ನ
ಹಾಡ ಸುರಿಸಲಿ,
ನೊಂದ ಬುವಿಯ ಜನಕೆ ಸವಿಯ
ಸೊಗವ ಬರಿಸಲಿ.

ಮತ್ತೆ ಬಾನ ಬಿತ್ತರದಲಿ
ಹಾರಿ ಹಾಡಲಿ,
ಮತ್ತೆಯೊಮ್ಮೆ ಗೆಳೆಯರೊಡನೆ
ಗಾನ ಮಾಡಲಿ.

## ‘ಬೇತೂರಿನ ಹಳ್ಳ’ದ ಮೇಲೆ

ಬಾಂದಳದಲಿ ಬಂಧನದಲಿ
ನಿಂದಾಳುವ ರವಿಯು,
ಬುವಿ ಬನಗಳ ಏಕಾಂತದಿ
ನಲಿ ನಲಿಯುವ ಕವಿಯು !

ಪಡುಬಾನಿನ ಕಡುನೀಲಿಯ
ಹಿರಿಯಾಳದ ಮೇಲೆ
ಬಿಳಿ ಮುಗಿಲಿನ ಕಿರುದೋಣಿಗ-
ಳಲೆದಾಡುವ ಲೀಲೆ !

ಹಸುರ್ಬಯಲಿನ ಹೊಸಪೈರಿನ
ತಲೆದೂಗುವ ನೋಟ.
ಖಗ ತತಿಗಳು ಕಿವಿಗೀಯುವ
ಸಂಗೀತದ ಊಟ !

ಕೊಳಲೂದುತ ಮುಂದೈದುವ
ಕುರಿಕಾಯ್ವರ ಹಿಂದೆ
ಹುಲ್ಗಾವಲ ಹಸುರಲೆಗಳ
ಮೇಲೋಡುವ ಮಂದೆ !

ಕಲ್ಬೊರಜಲಿ ಸುಸುಳುಲಿಯುವ
ಹೊಸ ನೀರಿನ ವಾಣಿ,
ತಂಬೆಲರಲಿ ಸುಳಿಸುಳಿಯುವ
ಕಿರುದೆರೆಗಳ ಶ್ರೇಣಿ !

ತೊರೆ ತೀರದ ನವಹಾರದಿ
ಹೊಸಹೂಗಳ ಗಂಧ!
ಇದ ನೋಡದ ನರಮನುಜನು
ಕಣ್ಕಾಣುವ ಅಂಧ!

ಕಣ್ದಿಟ್ಟಿಯು ಹರಿವನ್ನೆಗು
ಹಸುರ್ಗಡಲನು ಹೋಲಿ
ತಿರೆಯಿರುವಳು ದಿಗ್ದೇಶದ
ಪರ್ಯಂತರ ತೇಲಿ!

ಶಿವಸೃಷ್ಟಿಯ ರಸವೃಷ್ಟಿಯು
ಮಳೆಬೀಳುತಲಿಹುದು!
ಹೊಸ ಜೀವದ ಸಂತೋಷವು
ಹೊರಹೊಮ್ಮುತಲಿಹುದು!

ಬುವಿಬಾನಲಿ, ನೆಲಜಲದಲಿ,
ಇಂದಾವುದೊ ಒಂದು
ಹೊಸಕಾಂತಿಯ ಮಾಧುರ್ಯವು
ಮನೆಮಾಡಿದೆ ಬಂದು!

ಎಂ. ರಾಮರಾವ್.

# ಹಗರೆಯ ಕೋಲಾಟ

"ಇನ್ನು ಒಂದು ಗಂಟೆಯಲ್ಲಿ ಬೆಳದಿಂಗಳು ಪರಿಷ್ಕಾರವಾಗುವುದು. ಆ ಹೊತ್ತಿಗೆ ಹಗರೆ ಹಳ್ಳಿಯವರ ಕೋಲಾಟ ನಡೆಯುವಂತೆ ಏರ್ಪಟ್ಟಿದೆ. ಬೇಗ ಊಟ ಮಾಡಿ ಸಿದ್ಧರಾಗಿರಿ" ಎಂದು 'ಅವರು' ಹೇಳಿದರೆ ನಾವು ಒಬ್ಬರಾದರೂ ಉತ್ಸುಕತೆಯನ್ನು ತೋರಬೇಕಲ್ಲ. ಚಳಿ ಎಂದೊಬ್ಬರು. ನಡೆದು ಸುಸ್ತಾಗಿದೇವೆ; ದಿಂಬಿಗೆ ತಲೆಕೊಟ್ಟರೆ ಸಾಕು ಎಂದೊಬ್ಬರು. ಸೊಂಟನೋವು ಎಂದು ನೆಪ ತೆಗೆದವರು ಮತ್ತೊಬ್ಬರು. ಏನು ಕೋಲಾಟವೋ ಎಂದು ಹಳಿಯುವರು ಇನ್ನೊಬ್ಬರು. 'ಅವರಿಗೆ' ಸಿಟ್ಟುಬಂದಿತು. "ನೀವು ನೋಡಿದರೆ ನೋಡಿ, ಬಿಟ್ಟರೆ ಬಿಡಿ. ನಾವಂತೂ ನೋಡುವವರಿದ್ದೇವೆ" ಎಂದು ಊಟಕ್ಕೆ ಹೊರಟರು. ಇನ್ನು ಇವರ ಮನಸ್ಸಿಗೆ ವಿರುದ್ಧವಾಗಿ ನಡೆವುದು ತಕ್ಕುದಲ್ಲ. ಐದು ಹತ್ತು ಮಿನಿಟುಗಳ ಕಾಲ ನೋಡಿದ ಶಾಸ್ತ್ರಮಾಡಿ ಮಲಗಿದರಾಯಿತು ಎಂದು ನಮ್ಮನಮ್ಮಲ್ಲಿ ತೀರ್ಮಾನಿಸಿಕೊಂಡು ಊಟಕ್ಕೆ ಹೊರಟೆವು.

ಊಟ ಮುಗಿಸಿ ಸಿದ್ಧವಾಗುವ ಹೊತ್ತಿಗೆ ರಂಗವು ಸಜ್ಜಾಗಿತ್ತು. ಅಂದರೆ ಡೇರೆಯ ಮುಂದಿನ ಬಯಲನ್ನು ಕಲ್ಲುಮುಳ್ಳುಗಳಿಲ್ಲದಂತೆ ಚೊಕ್ಕಟಮಾಡಿದ್ದರು. ರಾತ್ರೆ ಒಂಬತ್ತರ ಸಮಯ. ಶಿಬಿರದ ಅಗ್ನಿಕುಂಡದಿಂದ ಜಾಜ್ವಲ್ಯಮಾನವಾದ ಉರಿಯು ಏಳುತ್ತ ತಗ್ಗುತ್ತ ಕಿಡಿಗಳನ್ನು ಸೂಸುತ್ತ ರಂಗಸ್ಥಳಕ್ಕೊಂದು ವಿಲಕ್ಷಣವಾದ ಶೋಭೆಯನ್ನು ಕೊಟ್ಟಿತ್ತು. ಚಂದ್ರಮನು ಶಿಬಿರದ ಮುಂದಿನ ಸಾಲುಮರಗಳನ್ನೇರಿ ದೂರ ಸಾಗಿ ಬೆಳ್ಳಿಯ ತಗಡಿನಂತೆ ಹೊಳೆಯುತ್ತಿದ್ದ ಹಿಮಕಣಗಳು ತೆಳ್ಳಗೆ ಹನಿಯತೊಡಗಿದ್ದುವು.

ಆಗ ಮೊದಲಿಡಬಹುದೆಂದು ಸಂಜ್ಞೆಮಾಡುತ್ತಲೇ ಕೋಲಾಟಗಾರರು ತಾವಿದ್ದೆಡೆಯಿಂದೆದ್ದುಬಂದು ಮೇಲುಹೊದಿಕೆಯ ಮುಸುಕಿನೊಳಗಿಂದ ಎರಡೆರಡು ಕೋಲುಗಳನ್ನು ಹೊರಗೆಡವಿದರು. ಗುಂಪಿನ ಮುಖಂಡನು ಅವರೆಲ್ಲರೊಡಗೂಡಿ ಬಂದು ನಮಗೆ ಅಡ್ಡಬಿದ್ದು ಕೋಲನ್ನು ಕಣ್ಣಿಗೊತ್ತಿಕೊಂಡು ಮೇಲುಹೊದಿಕೆಯನ್ನು ಕಳಚಿ ರಂಗ ಮಧ್ಯದಲ್ಲಿ ನಿಂತ. ಮಿಕ್ಕವರೂ ಅದರಂತೆಯೇ ಮಾಡಿ ಆತನ ಸುತ್ತಲೂ ಅನುವಾಗಿ ನಿಂತು ಕಾರ್ಯಕ್ರಮದ ರೀತಿಯನ್ನು ತಮ್ಮತಮ್ಮಲ್ಲಿ ನಿರ್ಧರಿಸಿಕೊಳ್ಳಹತ್ತಿದರು.

ಗುಂಪೆಲ್ಲ ಆದಿಕರ್ಣಾಟಕರವರದು. ಅವರು ರೊಕ್ಕಕ್ಕಾಗಿ ಆಸೆಬಿದ್ದು ಆಡ ಬಂದವರಲ್ಲ. ಕೆಲದಿನಗಳ ಹಿಂದೆ ನೆರೆಯೂರಿನವರು ಅವರ ಮುಂದೆ ಕೋಲು

ಚಮತ್ಕಾರವನ್ನು ತೋರಿದ ಪರಿಣಾಮವಾಗಿ ಇವರಿಗೂ ಹುಮ್ಮಸ್ಸು ಅಂಟಿತಂತೆ. ಪರ ಊರಿನವರಿಂದ ತಾವೂ ಸೈ ಅನಿಸಿಕೊಳ್ಳಬೇಕೆಂದು ಆಸೆಯಾಯಿತಂತೆ. ಸದ್ಯದಲ್ಲಿ ನಮ್ಮ ಶಿಬಿರ ಸಮೂಹವೇ ಅವರಿಗೆ ಪರವೂರಾಗಿತ್ತು. ನಾವು, ಆಳುಗಳು, ಜೊತೆಗೆ ಎದುರಿನ 'ಟಿ.ಬಿ.'ಯಲ್ಲಿ ಇಳಿದಿದ್ದ ಜಮಾಬಂದಿಯ ಪರಿವಾರ ಅವರಿಗೆ ಮಾನ್ಯ ಪ್ರೇಕ್ಷಕರಾದೆವು.

ನನಗೇನೋ ಅವರು ಕೋಲು ಹಿಡಿದುದನ್ನು ನೋಡಿ ಮರುಕವೆನಿಸಿತು. ನಾನು ಇದುವರೆಗೆ ಪ್ರತ್ಯಕ್ಷ ಜಗತ್ತಿನಲ್ಲಿ ಗಂಡಸರೇ ಸೇರಿ ಆಡಿದ ಕೋಲಾಟ ನೋಡಿರಲಿಲ್ಲ. ಛಾಯಾ ಜಗತ್ತಿನಲ್ಲಿ ಮಾತ್ರ, ಅಂದರೆ ಒಂದೆರಡು ಹಿಂದೀ ಚಿತ್ರಗಳಲ್ಲಿ ನೋಡಿದಂತೆ ಜ್ಞಾಪಕ. ನನಗೆ ಚೆನ್ನಾಗಿ ಪರಿಚಿತವಾದುವೆಂದರೆ ಸ್ಕೂಲು ಹುಡುಗಿಯರ, ಅದಕ್ಕಿಂತ ಮಿಗಿಲಾಗಿ ಸಿನೆಮಾ ತಾರೆಯರ ಕೋಲಾಟ. ಅವಕ್ಕೂ ಹಗರೆಯ ಗುಂಪಿಗೂ ಎಲ್ಲಿಯ ಸಾಮ್ಯ? ಆ ಕಿಶೋರವಯಸ್ಸಿನ ತಿದ್ದಿದ ಗೌರಿಯರೆಲ್ಲಿ! ಆ ರಜತ ಪ್ರಪಂಚದ ಸುಂದರ ಗೋಪಿಯರೆಲ್ಲಿ! ಅವರ ಗೆಜ್ಜೆಯ ಗಲುಗೆಲ್ಲಿ! ಹಿಮ್ಮೇಳ ವಾದ್ಯಗಳ ಮೃದುಮಧುರನಾದವೆಲ್ಲಿ! ಈ ಹರುಕುಮುರುಕು ಗುಂಪೆಲ್ಲಿ! ಪಾಪ, ಗೆಜ್ಜೆ ಸಿಕ್ಕಲಿಲ್ಲವೆಂದು ಬರಿಗಾಲಲ್ಲೇ ನಿಂತಿದ್ದರು. ಕೋಲುಗಳು ರಂಗಿನವೂ ಅಲ್ಲ. ಮಾಟದವೂ ಅಲ್ಲ. ಎಲ್ಲೆಲ್ಲಿನ ಕಾರೆಕವಳಿಗಿಡಗಳ ಟೊಂಗೆಗಳೇ ಸಭ್ಯರೂಪವನ್ನು ತಾಳಿ ಅವರ ಕೈಪಾಲಾಗಿದ್ದುವು. ಇನ್ನವರ ವೇಷವೋ! ಒಬ್ಬನ ತಲೆಯ ಮೇಲೆ ಮಣುಕಾದ ಹಾಸನಟೋಪಿ. ಕೊಳಕುಪಂಚೆಯ ಮೇಲೆ ಕರಿಯ ಕೋಟುಹಾಕಿದ್ದ. ಇನ್ನೊಬ್ಬ ತಕ್ಕಮಟ್ಟಿಗೆ ಅನುಕೂಲಸ್ಥನಿದ್ದಿರಬೇಕು. ಕೈಯಲ್ಲಿ ಚಿನ್ನದ ಬಂದಲಿ ಹಾಕಿಕೊಂಡು, ತಲೆಯ ಮೇಲೆ ರುಮಾಲು ಧರಿಸಿದ್ದ. ಒಬ್ಬ ಆಧುನಿಕನ ತಲೆಯಲ್ಲಿ ಕ್ರಾಪು. ಇನ್ನೊಬ್ಬನ ತಲೆಯಿಂದ ಸುಮಾರು ಎಂಟು ಹತ್ತು ದಿನದ ಕೆಳಗೆ ಬಾಚಿ ಹೆಣೆದ ಇಲಿಬಾಲದಂತಹ ಜೋಡು ಜಡೆ ಇಳಿಬಿದ್ದಿತ್ತು. ಅವನು ತಲೆಯಾಡಿಸಿದಾಗೆಲ್ಲ ಅದು ಹಾರಾಡುವುದನ್ನು ನೋಡಿದರೆ ಯಾರಿಗಾದರೂ ನಗುಬರುವಂತಿತ್ತು. ಇನ್ನೊಬ್ಬನ ಬನೀನು ಬನೀನಿನಾಕಾರ ಕಳೆದುಕೊಂಡು ಚಿಂದಿಯಾಗಿತ್ತು. ಇನ್ನೂ. . . .

ಆಟ ಮೊದಲಿಟ್ಟಿತು. ಪದ್ಧತಿಯಂತೆ ಮೊದಲು ಗಣೇಶನ ನುತಿ.

[1]ಶರಣು ಶರಣುವಯ್ಯ ಗಣನಾಯಕ
ನಮ್ಮ ಕರುಣಮೂರುತಿ ಕಾಯಿ ಗಣನಾಯಕ
ಹಾ! ನಮ್ಮ ಕರುಣಮೂರುತಿ ಕಾಯಿ ಗಣನಾಯಕ||
ಒಡಗಾಯಿ ಇಡಗಾಯಿ ಗಣನಾಯಕ
ಒಡೆದ ತೆಂಗಿನಕಾಯಿ ಗಣನಾಯಕ||

---

[1] ಇದು "ಹುಟ್ಟಿದಹಳ್ಳಿ—ಹಳ್ಳಿಯ ಹಾಡಿ"ನಲ್ಲಿ ಪ್ರಕಟವಾಗಿದೆ.

ಊದ್ಕಡ್ಡಿ ಸಾಂಬ್ರಾಣಿ ಗಣನಾಯಕ
ನೆನೆಯಕ್ಕಿ ನೆನೆಗಡಲೆ ಗಣನಾಯಕ ||
ಗೊನೆ ಮುದ್ದ ಬಾಳೆಹಣ್ಣು ಗಣನಾಯಕ
ನಾವು ತಪ್ಪದೆ ತಂದೊಪ್ಪಿಸುವೆ ಗಣನಾಯಕ ||

ಈ ಪದವನ್ನು ಹೇಳುತ್ತ ಕೋಲನ್ನು ಹಾಕುತ್ತ ಗುಂಪಿನ ಎಂಟು ಜನರೂ ಬಲದಿಂದ ಎಡಕ್ಕೆ ಸುತ್ತುತಿರುಗಿದರು. ಅಲ್ಲಿಗೆ ಗಣೇಶನ ದಯೆಯಿಂದ ಅವರ ಗಂಟಲು ಸ್ವಲ್ಪ ಸಡಿಲಿರಬೇಕು; ಕಾಲಿನಗತಿ ಕುದುರಿರಬೇಕು. ಆ ದೇವತೆಯನ್ನು ಇನ್ನಿಷ್ಟು ಹೊಗಳಿದರೆ ಮೇಲೆಂದು ತೋರಿತೇನೋ,

ಮತ್ತೆ,

ಶರಣೋ ಶ್ರೀಹರಿ, ಗರುಡಾವಾಹನೆ
ಸ್ವಾಮಿಾ ಯೆಂಗಟ ನಾಯಕಾ ||
ಅಣ್ಣಾ ಇದ್ದರೆ ತಮ್ಮನ ಧೊರೆತನ
ಹೊಗಳೋ ಶ್ರೀಗಣನಾಯಕಾ ||

ಎಂದು ಮುಂತಾಗಿ ಹೇಳಿ, ಮುಕ್ತಾಯವಾಗಿ

ಕೋಲೇ ರನ್ನದ ಕೋಲೆನ್ನ
ಕೋಲೇ ಚಿನ್ನದ ಕೋಲೆನ್ನ
ಕೋಲೇ ಮುತ್ತಿನ ಕೋಲೇ

ಎಂದು ದ್ರುತಗತಿಯಲ್ಲಿ ನುಡಿದು, ಒಂದು ನಿಮಿಷಕಾಲ ನಿಲ್ಲಿಸಿ ಮತ್ತೆ ಪ್ರಾರಂಭಿಸಿದರು.

ರಂಗಾ ನೀ ಚೆಲುವೋ
ಚಿನ್ನಾದ ಭೋಗದಲ್ಲಿರುವೋ ||
ರಂಗರಂಗನೇ ರಂಗ ನಮ್ಮಯ್ಯನೇ
ರಂಗ ನಮ್ಕಡೆಗೆ ದಯವಾಗೋ ||
ಅಡ್ಡಾಗುಡ್ಡದ ಮೇಲೆ ದೊಡ್ಡೆಮ್ಮೆ ಕಾಯಾನೆ
ಬೆಳ್ಳೀ ಕೋಲಿನ ಬಿಳಿಗಿsರಿ ||
ಬೆಳ್ಳೀ ಕೋಲಿನ ಬಿಳಿಗಿರಿ ನಿಮ್ಮೆಮ್ಮೆ
ಎಲ್ಲೀ ಮೇದಲ್ಲಿ ತಳಿಗಾದು ||
ಎಲ್ಲಿ ಮೇದಲ್ಲಿ ತಳಿಗಾದು ನಿಮ್ಮೆಮ್ಮೆ
ತುಂಬೇ ಗಿಡದಲ್ಲಿ ತಳಿಗಾದು ||
ಹೊಡೆ ಹುಲ್ಲ ಮೇದವು, ಮಡಿನೀರ ಕುಡಿದವು
ಕಾರೆಂಬ ಮಡುವ ಕಲಿಕ್ಯಾವು ||

ಕಾರೆಂಬ ಮಡುವ ಕಲಿಕೆ ಲಕ್ಷ್ಮೀದೇವಿ
ಬೋರೆಂಬ ಹಾಲಾ ಕರೆದಾವು ||
ಬೋರೆಂಬ ಹಾಲಾ ಕರೆದು ಲಕ್ಷ್ಮೀದೇವಿ
ತೂಕಾದ ಬೆಣ್ಣೆ ತೆಗೆದಾಳು ||
ತೂಕಾದ ಬೆಣ್ಣೆ ತೆಗೆದು ಲಕ್ಷ್ಮೀದೇವಿ
ಆತ ರಂಗಯ್ಯಗೆ ಅಭಿಷಾಕಾ ||
ಆತ ರಂಗಯ್ಯಗೆ ಏನೇನೊ ಅಭಿಷಾಕ
ತಾವರೆ ಗೆಣಸು ಬಿದಿರಕ್ಕಿ ||
ತಾವರೆ ಗೆಣಸು ಬಿದಿರಕ್ಕಿ ಬೆಲ್ಲದ ಪಾಷ
ಆತ ರಂಗಯ್ಯಗೆ ಅಭಿಷಾಕಾ ||

ಇಷ್ಟು ಹೊತ್ತಿಗೆ ಆಟಗಾರರಿಗೆ ರಂಗೇರಿತು; ಕೋಲಿನೇಟಿಗೆ ಸರಿಯಾಗಿ ಕಾಲು ಕುಣಿಯಿತು; ಕಾಲು ಕುಣಿತಕ್ಕೆ ಸರಿಯಾಗಿ ಕೋಲಿನೇಟು ಬಿತ್ತು.

ತಂದನೋ ತಾನಾನ ತಾನು ತಂದೇ ನಾನಾನ
ತಂದನೋ ತಾನಾನ ತಾನು ತಂದೆ ನಾನಾನ
ತಂದನೋ ತಾನಾನ ತಾನು ತಂದೆಯ ನಾನಾನ
ತಂದನೋ ತಾನ ತಾನು ತಂದೆನು ನಾನಾನ
ಸ್ವಾಮಿಗೆ ಶರಣೋ ||
ಮಂಗಳೀ ಕೂಗಾಲಿ, ಮೂಡ ಕೆಂಪು ಹರಿಯಾಲಿ
ಹೆಮ್ಮಕ್ಕಳೇಳಾಲಿ ಎಮ್ಮೆಗಳು ಕರೆಯಾಲಿ
ಎದೆಮ್ಯಾಗಳ ಲಿಂಗ ಎದ್ದು ಪೂಜ್ಯಾಗಲಿ
ತಂದೆನೋ ತಾನಾನ ತಾನು ತಂದೆ ನಾನಾನ
ಸ್ವಾಮಿಗೆ ಶರಣೋ ||

ಎಷ್ಟಾದರೂ ಮಾನುಷದೇಹ; ಎಲ್ಲರೂ ಸಾಕಾದರು. ಊಸಿರು ಏದುತ್ತ ಬಂದಿತು. ಆ ಕುಳಿರಲ್ಲಿಯೂ ಹಣೆ ಬೆವರೊಡೆಯಿತು. ದಣಿವಾರಿಸಿಕೊಳ್ಳಲೆಂದು 'ತತ್ವಪದ'ವನ್ನು ಹೇಳುತ್ತ ತಿರುಗಿದರು.

ತತ್ವಪದವನ್ನು ಹೇಳುವ ಕ್ರಮ ಹೀಗಿದೆ: ಎಂಟುಮಂದಿಯ ಗುಂಪು ನಾಲ್ಕಕ್ಕೊಂದರಂತೆ ಎರಡು ಭಾಗವಾಗುವುದು. ಮೊದಲನೆಯ ಗುಂಪು ಮುಂದೆ, ಎರಡನೆಯದು ಅದರ ಹಿಂದೆ ಸಾಲಿಟ್ಟು, ಎಡಗೈಲಿ ಕೋಲುಹಿಡಿದು, ಬಲಗೈಯಿಂದ ಅಭಿನಯಮಾಡುತ್ತ ರಂಗದ ಒಂದು ಕೊನೆಯಿಂದ ಇನ್ನೊಂದರೆಡೆಗೆ ಸಾವಕಾಶವಾಗಿ ಸಾಗುವರು. ರಂಗದ ಕೊನೆಯನ್ನು ಮುಟ್ಟುತ್ತಲೇ, ಹಿಂದಿನ ಗುಂಪು ಚಟ್ಟನೆ ಮುಂದಕ್ಕೆ ತಿರುಗಿ ನಿಲ್ಲುವುದು. ಈಸಲ ಮಾರ್ಗತೋರುವ, ಹಾಡಿನ ನುಡಿ ಪ್ರಾರಂಭಿಸುವ, ಸರತಿ ಅದರದು.

## ತತ್ವಪದ

ಆ ಕಾಲ ಕಳೆದೇನಲ್ಲಾ
ಜ್ಞಾನ ಬರುವೋಣಿಲ್ಲಾ ||
ಕಾಲದೂತರು ಕರೆಯಾಕೆ ಬಂದರೆ
ಏನು ಹೇಳಲಿ ಸೊಲ್ಲ ||
ಆ ಮಕ್ಕಳಾದುವೆನಗೇ
ಸಿಟ್ಟೇ ದೇವರ ಬಲಿಗೇ
ಆ ಕಾಲ ಕಳೆದೇನಲ್ಲಾ ||
ಚೆಂಡ ಬುಗುರಿನಾಡಿಕೊಂಡು
ಚೆಲುವನೂಟವ ಬೇಡಿದೇ
ಕಾಲ ಕಳೆದೇನಲ್ಲಾ ||

ಈ ಹಾಡನ್ನು ಹೇಳಿದ ಧಾಟಿಯಲ್ಲಿ ಬರಿಯ ಪಶ್ಚಾತ್ತಾಪದ ಬೆಂಗುದಿಗೆ ಬದಲಾಗಿ ಕಾಲವನ್ನೇನೋ ಕಳೆದೆ, ಜ್ಞಾನವೂ ಬರುವುದಿಲ್ಲ, ಬಿಡಣ್ಣ ಬಂಡಿಯ ಎಂಬ ನಿಶ್ಚಿತ ಮನೋಭಾವವಿತ್ತು.

## ಕೋಲುಪದ

ಮಾಧವೇ ಮಧುಸೂದವೇ ನಿಮ್ಮ
ಪಾದಪೂಜೆಯ ಮಾಡುವೇ ||
ಕಟ್ಟೆ ಹಿಂದಕೆ ಪೋಗುವೇ
ಪುಟ್ಟ ಮಲ್ಲಿಗೆ ತಾರುವೇ
ಪುಟ್ಟ ಮಲ್ಲಿಗೆ ತಾರುವೇ
ನಿಮ್ಮ ಬೆಟ್ಟು ಪೂಜೆ ಮಾಡುವೇ ||
ಏರಿ ಹಿಂದಕೆ ಪೋಗುವೆ
ಜಾಜಿಪುಷ್ಪವ ತಾರುವೆ
ಜಾಜಿಪುಷ್ಪವ ತಾರುವೆ
ನಿಮ್ಮ ಪಾದಪೂಜೆ ಮಾಡುವೆ ||

## ಕೋಲುಪದ

ಕೋಲಾಡಿರೋ ಆ ಕೋಲಾಡಿರೋ
ನಮ್ಮ ಮಾವ ಮುದ್ದುಮಾಲಕೀನ ಕೋಲಾಡಿರೋ ||
ಎಲ್ಲಾ ದೇವರಿಗೂ ಹುವ್ವಿನ ಚಪ್ಪರ
ನಮ್ಮ ಬಾಬಾಬುಡ್ನ ಸಾಮಿಗೆ ನೋಡೊ ಬ್ಯಾಗಡೆ ಚಪ್ಪಾರ
ಕೋಲಾಡಿರೋ ||

ಎಲ್ಲಾ ದೇವರಿಗೂ ನೆಲ್ಲಕ್ಕಿ ಪಾಷಗಳು
ನಮ್ಮ ಬಾಬಾಬುಡ್ನ ಸಾಮಿಗೆ ನೋಡೊ ಗೋರಿಕಲ್ ಪಾಷಗಳು
ಕೋಲಾಡಿರೋ ||
ಎಲ್ಲಾ ದೇವರಿಗೂ ನೆಲ್ಲಕ್ಕಿ ಅನ್ನಗಳು
ನಮ್ಮ ಬಾಬಾಬುಡ್ನ ಸಾಮಿಗೆ ನೋಡೊ ಬ್ರೇಂಜಿ ಅನ್ನಗಳು
ಕೋಲಾಡಿರೋ ||
ಎಲ್ಲಾ ದೇವರಿಗೂ ಕುರಿ ಕೋಣಗಳು
ನಮ್ಮ ಬಾಬಾಬುಡ್ನ ಸಾಮಿಗೆ ನೋಡೊ ಕೊಂಬಿನ ಟಗ್ರುಗಳು
ಕೋಲಾಡಿರೋ ||
ಎಲ್ಲಾ ದೇವರಿಗೂ ಹಳ್ಳೆಣ್ಣೆ ದೀವಿಗೆ
ನಮ್ಮ ಬಾಬಾಬುಡ್ನ ಸಾಮಿಗೆ ನೋಡೊ ನೀರಿನ ದೀವಿಗೆ
ಕೋಲಾಡಿರೋ ||

ಸುತ್ತಮುತ್ತಲ ಹಳ್ಳಿಯವರನ್ನು ಹಾಸ್ಯಮಾಡುವ ಕೋಲಾಟಪದವಿದು.

ಸದ್ದಮುಕ್ಕಿ ಸಂಗೀತಂ
ಸದ್ದಮುಕ್ಕಿತಂ ||
ಹಳ್ಳು ಬೆಳೆಯೋದು ಹಾರನಹಳ್ಳಿ
ಎಳ್ಳು ಬೆಳೆಯೋದು ಚಿಗಟಿಹಳ್ಳಿ
ಕೊಳ್ಳಿ ಬೆಣಕಲ್ ತಿಂತಾರಣ್ಣ ಕೋಡಿಹಳ್ಳ್ಯೋರು ||
ಎತ್ತಿಗೀಟ ಹುಲ್ಲಕೊಡರು
ಬತ್ತಿಗೀಟ ಎಣ್ಣೆಕೊಡರು
ಒಪ್ಪಗಾತ್ಯರಾರಿದಾರಣ್ಣ ವಡ್ರಹಳ್ಳೀಲಿ ||
ಹೋತನಮೇಲೆ ಕೂತುಕೊಂಡು
ತೂತುಕಾಳೆ ಹಿಡಿದುಕೊಂಡು
ಮಾತುಮಾತಿಗೆ ಬರ್ತಾರಣ್ಣ ಮಾದಿಹಳ್ಳ್ಯೋರು ||
ಒಲೆಯಮೇಲೆ ಒಡಕಲಹಾಕಿ
ಕಲ್ಲಮೇಲೆ ಖಾರ ಅರೆದು

. . . . . . . . .

ಸೀಗೆಸೊಪ್ಪಿಗೆ ಹೋಗ್ತ್ಯಾಳಣ್ಣ ಚಿಗಟಿಹಳ್ಳ್ಯೋಳು ||
ಸುಟ್ಟರೊಟ್ಟಿ ಸುಟ್ಟುಕೊಂಡು
ಕೆಟ್ಟದ ಬುತ್ತಿ ಕಟ್ಟಿಕೊಂಡು
ಹಾಸನದ ಜಾತ್ರೆಗೆ ಹೋಗ್ತಾರಣ್ಣ ಹಗರೆ ಹಳ್ಳ್ಯೋರು ||

ಹರಕ ಸೀರೆ ಉಟ್ಕೊಂಡು
ತರಕ ತಲೆ ಬಿಟ್ಕೊಂಡು
ತಿಟ್ಟಹತ್ತಿ ನೋಡುತಾಳೆ ತಟ್ಟಗೇರಿಯೋಳು ||
ಹೂಡಿದ್ಕಲ್ಲ ಗೆರಸೆಬಿಟ್ಟು
ಮಾಡಿದರಾಗಿ ಮಡಿಲಾಗೆ ಕಟ್ಟಿ
ಓಡಿ ಓಡಿ ಹೋಗ್ತಾರಣ್ಣ ಎಲಗುಂದೋರು ||
ಕೋಲೇ ರನ್ನದ ಕೋಲನ್ನ
ಕೋಲೇ ಚಿನ್ನದ ಕೋಲನ್ನ
ಹಾ ! ಕೋಲೇ ಮುತ್ತಿನ ಕೋಲನ್ನ
ಹಾ ! ಧತಾತ್ತಧಿಗಿಧಿಗಿಧಿತಾತ್ತ.

## ತತ್ವಪದ

### ಮಕ್ಕಳಿಲ್ಲದವನ ಹಂಬಲ

ಅವರು ಹಾಡಿದ ರಾಗಗಳಲ್ಲೆಲ್ಲ ಗಂಡು ಗೊಡಲಿಯ ಕಿಚ್ಚು ವಿಶೇಷ; ಮಾರ್ದವವು ಕಡಮೆ. ಆದರೆ ಇದೊಂದು ಹೊರತು ದೈನ್ಯ, ನಿರಾಶೆ, ಮರುಕಗಳನ್ನು ಹೊರಸೂಸುತಿದ್ದ ಈ ಪದದ ಧಾಟಿಯು ಅತ್ಯಂತ ಹೃದಯ ಸ್ಪರ್ಶಿಯಾಗಿತ್ತು.

ಬಂಜೇಯನ್ನುಟ್ಟಲೀ
ಬಳೆ ಉಂಗಾರದ ಕಲುಕಟ್ಟಿ
ಬಂದು ಕೂರೋಕೇ ನೆರಳಿಲ್ಲ ಶಿವನೇ
ಆರು ವ್ಯಾರವ ಕೊಟ್ಟು
ಒಳ್ಳೆ ಹೋರಿಗಿಡ್ಡ ನಾ ತಂದೆ
ಹೇರಾಡಕೊಬ್ಬಾ ಮಗನಿಲ್ಲ ಶಿವನೇ
ನಿಂಬೆಗೆ ಫಲವುಂಟು ಬದನಿಗೆ ಫಲವುಂಟು
ಬಾಳೆಗೆ ಫಲವುಂಟು ನಮಗಿಲ್ಲ ಶಿವನೇ

* * * *

ಹೀಗೆಯೇ ಹಲವಾರು ಪದಗಳನ್ನು ಹಾಡಿಕೊಂಡು ಕುಣಿದರು; ಕುಣಿವಾಗ ಅನೇಕ ವರಸೆಗಳನ್ನೂ ತೋರಿದರು. "ಬಾಲನೇ ಗೋಪಾಲನೇ ನಿನ್ನ ಮಗ" ಪದವನ್ನು **ಮನೆಗೋಲು** ರೀತಿಯಲ್ಲಿ ಆಡಿದರು. ಅಂದರೆ ಎಂಟು ಜನಗಳ ಪೈಕಿ, ನಾಲ್ಕು ಮಂದಿ ಒಳಗಡೆ, ನಾಲ್ಕು ಮಂದಿ ಹೊರಗಡೆ, ಚೌಕೋನದ ಆಕೃತಿಯಲ್ಲಿ ನಿಲ್ಲುತ್ತಾರೆ. ಒಳಗಿನ ನಾಲ್ಕು ಮಂದಿ ಒಬ್ಬೊಬ್ಬರಾಗಿ ಹೊರಗಿನ ಚೌಕೋನಕ್ಕೆ ಬಂದು ಸೇರುತ್ತಾರೆ. ಹೊರಗಿನವರು ಅದರಂತೆಯೇ ಒಳಚೌಕೋನವನ್ನು ಸೇರುತ್ತಾರೆ.

"ಸದ್ದಮುಕ್ಕಿ ಸಂಗೀತಂ" ಪದವನ್ನು **ಬೆನ್ನುಗೋಲು** ವರಸೆಯಲ್ಲೂ,

"ಶರಣುಶರಣುವಯ್ಯ ಗಣನಾಯಕ" ಪದವನ್ನು **ಸುತ್ತುಗೋಲು** ವರಸೆಯಲ್ಲೂ ಆಡಿ ತೋರಿಸಿದರು.

"ಒಂದು ತಿಂಗಳ ಭ್ರಮೆಯು ಒಂದೆಲೆ ಭ್ರಮಿಪಳು" ಎಂಬ ಹಾಡು **ರಾಟೆಗೋಲು** ವರಸೆಯನ್ನು ಉದಾಹರಿಸುತ್ತದೆ. ಅಂದರೆ ಎಂಟು ಜನರಲ್ಲಿ ಇಬ್ಬರು ಸಂಕೇತಸ್ಥಳವನ್ನು ಗೊತ್ತುಮಾಡಿಕೊಳ್ಳುವರು. ಆಟವು ಮುಂಬರಿದಾಗ ಒಬ್ಬನು ಒಳಗಿನ ಆವೃತ್ತದಲ್ಲಿ ಸಿಕ್ಕಿದವರಿಗೆಲ್ಲ ಕೋಲುಕೊಟ್ಟುಕೊಂಡು, ಅವನ ಜತೆಗಾರ ಹೊರಗಿನ ಆಟಗಾರರಿಗೆಲ್ಲ ಕೊಟ್ಟುಕೊಂಡು, ತಮ್ಮ ಸಂಕೇತಸ್ಥಳವನ್ನು ಮುಟ್ಟುವರು.

ಇನ್ನೊಂದು ವರಸೆಯ ಹೆಸರು ಗೊತ್ತಿಲ್ಲ. ಅದರಲ್ಲಿ ಕಾಲೆತ್ತಿ ಕೈಯಕೋಲನ್ನು ಅದರೊಳಗಿನಿಂದ ಬಳಸಿಕೊಂಡು ಬಂದು ಏಟು ಕೊಡುವರು. ಇದು ಕಷ್ಟಕರವಾದ ಪ್ರಯೋಗ. ಆಟದಲ್ಲಿ ಚೆನ್ನಾಗಿ ಸುರಿತವರಿಂದ ಮಾತ್ರ ಸಾಧ್ಯ. ಇನ್ನೊಂದರಲ್ಲಿ ಆ ವೃತ್ತದ ಮಧ್ಯೆ ನಿಂತ ಒಬ್ಬ ಒಳಗಿನವರಿಗೆಲ್ಲಾ ಕೋಲು ಕೊಡುವನು. ಒಂದೊಂದು ಕೋಲಿಗೆ ಮೂರು ಮೂರು ಏಟುಗಳು ತಗುಲಿ ಜತೆಗೋಲನ್ನು ಮುಟ್ಟುತ್ತಿದ್ದಿತು.

ಈ ವರಸೆಯಲ್ಲಿ ಒಬ್ಬ ಆಳು ಅದ್ಭುತವಾದ ಕೈಚಳಕ ಪ್ರದರ್ಶಿಸಿದ. ಅವನ ರಂಗ ಎಂಬ ಹೆಸರಿಗೆ ಹಕ್ಕಿ ಎಂಬ ವಿಶೇಷಣ ಯಾಕೆ ಕೂಡಿತೆಂಬುದು ನಮಗೆ ಅದುವರೆಗೆ ಹೊಳೆದಿರಲಿಲ್ಲ. ಬಹುಶಃ ಚಿಕ್ಕಂದು ಕವಣೇ ಕಲ್ಲಿನಿಂದ ಹಕ್ಕಿಗಳನ್ನು ಹೊಡೆಯುವುದರಲ್ಲಿ ನೈಪುಣ್ಯ ಸಾಧಿಸಿದುದರಿಂದ ಇರಬಹುದು ಎಂದು ತಿಳಿದಿದ್ದೆವು. ಆ ದಿನ ನಮಗೆ ನಿಜಸ್ಥಿತಿಯ ಅರಿವುಂಟಾಯಿತು. ಹಕ್ಕಿ ರಂಗನದು ಅನ್ವರ್ಥನಾಮ. ಮಧ್ಯೆ ಸೇರಿ ಮಂಡಿ ಮಡಿಸಿ ಕುಳಿತಿದ್ದ ಅವನು ಹಕ್ಕಿಯಂತೆಯೇ ಹಾರಿ ಹಾರಿ ಒಬ್ಬೊಬ್ಬರ ಕೋಲಿಗೂ ಏಟುಕೊಡುತ್ತ ಚಕ್ರಾಕಾರದಲ್ಲಿ ಸುತ್ತುತ್ತಿದ್ದ. ಅಬ್ಬ! ಅವನ ಆಟ ನೋಡುವಂತಿತ್ತು. ನಾವೆಲ್ಲ ಬೆಕ್ಕಸಬೆರಗಾದೆವು. ಕೋಲಾಟದಭಿಮಾನಿ ದೇವತೆಯೇ ಅವನಲ್ಲಿ ಅಂದು ಮೂರ್ತೀಭವಿಸಿದ್ದಿರಬೇಕು. ಒಮ್ಮೆ ಏನಾಯಿತು, ಎಡಗೈಯ ಕೋಲು ಮುರಿದು ಹೋಯಿತು. ಆಟ ಮುಗಿವವರೆಗೆ ಬಲಗೈಯನ್ನೇ ಎಡಗೈಗೋಲ ಚಲನೆಗೆಲ್ಲ ಉಪಯೋಗಿಸಿಕೊಂಡ. ಹದ ಒಂದಿಷ್ಟೂ ಕೆಡಲಿಕ್ಕೆ ಬಿಡಲಿಲ್ಲ.

ಹೀಗೆ ಒಂದೆರಡು ಗಂಟೆಗಳು ಕಳೆದು ಹೋದುವೆಂದು ಗಡಿಯಾರ ತೋರಿಸಿತು. ಆ ವೇಳೆಯಲ್ಲಿ ಚಂದ್ರಮನು ಏರುತ್ತ ನಡೆದಿದ್ದ. ಮಂಜು ದಟ್ಟವಾಗಿ ಬೀಳ ತೊಡಗಿದ್ದಿತು. ಅಗ್ನಿಕುಂಡದಲ್ಲಿನ ಕೊರಡುಗಳು ಉರಿದುಹೋಗಿ ಕಾರುವ ಕೆಂಡಗಳಾಗಿದ್ದುವು. ಆದರೇನು! ಆಟವು ನಿಲ್ಲುವವರೆಗೆ ನಮಗೆ ಚಂದ್ರನ ಸೊಬಗಾಗಲಿ, ಚಳಿಯ ಕೊರೆತವಾಗಲಿ, ಹೊತ್ತಿನ ಓಟವಾಗಲಿ, ಯಾವುದರ ಅರಿವೂ ಆಗಲಿಲ್ಲ. ನಿದ್ರೆಯ

ನೆಪ ತೆಗೆದವರ ಕಣ್ಣುಗಳು ಆನಂದದಿಂದ ಅರಳಿದ್ದುವು. ಸುಸ್ತು ಎಂದವರು ಇನ್ನಿಷ್ಟು ಆಡಬಾರದೆ ಎಂದು ಬಯಸುತ್ತಿದ್ದರು. ಆಶ್ಚರ್ಯ! ಸೊಂಟಸೋವಿನ ಹಿರಿಯರು ನೆಟ್ಟಗೆದ್ದು ಕುಳಿತಿದ್ದರು. ಕಲೆಯ ಸಾಧನೆಯೆಂದರೆ ಎಲ್ಲ ಪ್ರೇಕ್ಷಕರ ಮನವನ್ನೆಳೆದು ಕೊಳ್ಳುವುದಾದರೆ, ಅಂದಿನ ಆಟ ಹದಿನಾರಾಣೆಯ ಕಲೆಯೇ ನಿಜ. ಆಟದಲ್ಲಿನ ಹುಮ್ಮಸ್ಸು, ಕೆಚ್ಚು, ವೀರಾವೇಶ ನಮ್ಮಲ್ಲೂ ಹರಿಯುತ್ತಿತ್ತು.

ನಮ್ಮ ನೋಟದ ಮುಂದಿದ್ದುದು ಒಂದೇ ಚಿತ್ರ. ಕುಣಿವ ಪಾದಗಳು, ಚಲಿಸುವ ಮಾನ ಖಂಡಗಳು, ಬಾಗಿ ಮಣಿಯುವ, ತೆರೆಯುಬ್ಬಿ ಬರುವಂತೆ ಹಾಯ್ದು ಬರುವ ದೇಹಗಳು; ಮತ್ತು ಕಿವಿಗೆ ಕೇಳುತ್ತಿದ್ದುದು ಸತ್ವಭರಿತವಾದ ಹಾಡುಗಳು, ಹಾಗೂ ಕೋಲುಗಳ ಏಕಕಾಲಿಕ ಕಟ್ ಕಟ್ ಶಬ್ದ. ಒಬ್ಬನಾದರೂ ಒಂದು ಹೆಜ್ಜೆ ತಪ್ಪಲಿಲ್ಲ. ಒಂದು ಹುಸಿಯೇಟು ಹೊಡೆಯಲಿಲ್ಲ. ಆಟವು ಪರಿಪೂರ್ಣವಾಗಿತ್ತು. ಅಂತೆಯೇ ಹುಂಬಮಂದಿ ಆಳುಕಾಳುಗಳು ಮೊದಲ್ಗೊಂಡು ನಾಗರಿಕರೆನಿಸಿಕೊಳ್ಳುವ ನಮ್ಮಗಳ ಪರ್ಯಂತ ಎಲ್ಲರೂ ಪರವಶರಾದೆವು.

ತನ್ನ ಕಡೆಯವರು ಕೊಂಚ ದಣಿವಾರಿಸಿಕೊಂಡಮೇಲೆ ಗುಂಪಿನ ಗೊತ್ತುಗಾರ "ಇನ್ನು ಕಡೆಯ ಆಟವನ್ನು ಪರಾಂಬರಿಸಿ" ಎಂದು ಹೇಳಿ **ಕೊರವಿಯ ಆಟಕ್ಕೆ** ಮೊದಲಿಟ್ಟ. ಇದೊಂದು ಭರತನಾಟ್ಯದ **ಬೇಡ-ಬೇಡಿತಿ, ಹಾವಾಡಿಗ** ಮೊದಲಾದ ನೃತ್ಯಕತೆಗಳ ಸಾಮಾನ್ಯರೂಪ. ಕೊರಮಪ್ರಣಯಿಗಳ ವಿಯೋಗ, ಅನಂತರ ಸಮ್ಮಿಲನವನ್ನು ಚಿತ್ರಿಸುತ್ತದೆ.

ಕೊರಮಿ ನಲ್ಲನನ್ನು ಬಿಟ್ಟು ಎಲ್ಲೋ ಓಡಿಹೋಗಿರುತ್ತಾಳೆ; ಹಾಗೆಯೇ ತನ್ನದೋ, ಯಾರದೋ, ಒಂದು ಮಗುವನ್ನು ಕರೆದೊಯ್ದಿರಬೇಕೆಂದು ಕತೆಯಲ್ಲಿ ಸೂಚಿತವಾಗುತ್ತದೆ. ಕೊರಮನು ಅವಳನ್ನು ಅರಸುತ್ತ ನಡೆದಿರುತ್ತಾನೆ.

ಮುಂದೆ ನಡೆವ ಸಂಗತಿಯನ್ನು ಹಿಮ್ಮೇಳದವರು ಹಾಡುವರು. ಅಂದರೆ ನಾಲ್ಕರಂತೆ ಎರಡು ತಂಡದವರು ಸಾಲಿಟ್ಟು ಎದುರುಬದುರಾಗಿ ನಿಲ್ಲುವರು. ನಿಂತು ಕೋಲುಹಾಕುತ್ತ ಹಾಡುವರು.

ಕೊರಮಜ್ಜೀ ಕೊರಮಜ್ಜಿ ಬಾರೆ ನಮ್ಮನೆಗೆ
ಹಾ! ಕೊರಮಜ್ಜೀ ಕೊರಮಜ್ಜಿ ಬಾರೆ ನಮ್ಮನೆಗೆ

[ಕೊರವಿಯು (ಅಂದರೆ ಪಾತ್ರವಹಿಸಿದವನು) ಎರಡುಸಾಲಿನ ಮಧ್ಯೆ ಬಂದು ನಿಲ್ಲುವಳು ಹಿಮ್ಮೇಳದವರು ಮುಂದುವರಿಸುವರು].

ಬಾಗುತಾ ಬಳಕುತ ಬಂದಳೇ ಕೊರವಿ

[ಕೊರವಿ ಬಿನ್ನಾಣದಿಂದ ಹೆಜ್ಜೆಯಿಕ್ಕುವಳು]

ಯಾವ ದೇಸಾದಿಂದ ಹುಟ್ಯಳೇ ಕೊರವಿ
ಯಾವ ದೇಸಾದಿಂದ ಬೆಳೆದಳೇ ಕೊರವಿ
ಮೂಡಲಾ ದೇಸದಲ್ಲಿ ಹುಟ್ಯಳೇ ಕೊರವಿ
ಕಟ್ಟೆಯಾ ಹಿಂದಕೇ ಹೋದಳೇ ಕೊರವಿ
ಬೆಟ್ಟುದ್ದ ನದಿಗಳ ಜಡಿದಳೇ ಕೊರವಿ

[ಕೊರವಿ ಹಿಂದಕ್ಕೆ ಹೋಗಿ, ಮತ್ತೆ ಮುಂದೆ ಬಂದು ಹಾರುವಳು]

ಹಾಲಿಗೇ ತಗಲಾದ ನೆಲುವನೂ ಹೆಣೆದು

[ಕೊರವಿ ಕುಳಿತು ನೆಲುವನ್ನು ಹೆಣೆಯುವಂತೆ ಅಭಿನಯಿಸುವಳು]

ಹಾದರಾ ಬೀದಿಯ ಒಳಗೆಲ್ಲ ಕೊರವಿ
ಹಾವೇರಿಯಾ ಹಿಂದಕೇ ಹೋದಳೂ ಕೊರವಿ
ಮಾರುದ್ದ ನದಿಗಳಾ ಜಡಿದಳೇ ಕೊರವಿ
ಉತ್ತರಾ ಬೀದಿಯ ಒಳಗೆಲ್ಲ ಕೊರವಿ
ಬಡಗಲಾ ದೇಸಾಕೆ ಹೋದಳೇ ಕೊರವಿ
ಬಾಳೇಯ ಮರದಡ್ತ ಮನ್ಯಗಳೇ ಕೊರವಿ

[ಕೊರವಿ ಮಲಗುವಳು]

ಬಾಳೇಯ ದೈಯಾ ಹಿಡಿದತೇ ಕೊರವಿ

[ಕೊರವಿ ಎದ್ದು ನಿಂತು ದೈಯ ಹಿಡಿದ ಚೇಷ್ಟೆ ಮಾಡುವಳು]

ಬಾಳೂವ ಹುಡುಗಾ ಬಿಡಿಸನೇ ಕೊರವಿ

[ಮೂಲೆಯಿಂದ ಕೊರಮನ ಆಗಮನ, ಅವನು
"ಎಗ್ಗೊ ಸಿಂಗಿ ಮಗುವೆಲ್ಲೆ
ಲಗಾಟಿ ಕೊರ್ತ್ರ ಬರ್ತಾನೆ" ಎಂದು ಉಗ್ಗಡಿಸುವನು]

ಹಿಮ್ಮೇಳ

ತೆಂಕಲಾ ಸೀಮೀಗೆ ಹೋದಳೇ ಕೊರವಿ
ತ್ಯಾಗಾದಾ ಮರದಡ್ತ ಮನ್ಯಗಳೇ ಕೊರವಿ
ತ್ಯಾಗಾದಾ ದೈಯಾ ಹಿಡಿದತೇ ಕೊರವಿ
ತೆಂಕದಾ ಹುಡುಗಾ ಬಿಡಿಸನೇ ಕೊರವಿ.
ಮೂಡಲಾ ಸೀಮೀಗೆ ಹೋದಳೇ ಕೊರವಿ
ಮುತುಕದಾ ಮರದಡ್ತ ಮನ್ಯಗಳೇ ಕೊರವಿ
ಮುತುಕದಾ ದೈಯ ಹಿಡಿದತೇ ಕೊರವಿ
ಮೂಡಲಾ ಹುಡುಗಾ ಬಿಡಿಸನೇ ಕೊರವಿ

[ಕೊರಮ ಎರಡು ಸಾಲಿನ ಹೊರಗೆ ಕೊರವಿಯಯನ್ನು ಹುಡುಕುವಂತೆ ನಟಿಸುತ್ತಿರುವನು. ಕೊರವಿ ಅವನೊಂದು ಮೂಲೆಗೆ ಹೋದರೆ ತಾನೊಂದು ಮೂಲೆಯಲ್ಲಿ ಅವಿತುಕೊಳ್ಳುವಳು. ಕೊರಮನಿಗೆ ಇದ್ದಕ್ಕಿದ್ದಂತೆ ಉದ್ರೇಕವಾಗಿ]

ಈ ಎಗ್ಗು ಸಿಂಗಿ ಮಗುವೆಲ್ಲಿ ಲಗಾಡಿ ಕೊರಮ
ಬರ್‍ತಾನೆ. ಕೈತರೆ ಕೊರವಿ, ಮಾಯಕಾರ ದುಂಡಿ
ಕೈತರೆ ಕೊರವಿ, ಕೈತರೆ ಕೊರವಿ

[ಎಂದು ಹೇಳುತ್ತ ಅವಳಿಗಾಗಿ ಭ್ರಮೆಪಟ್ಟು ಹುಡುಕುವನು. ಅತ್ತಿಂದಿತ್ತ ಹಾರಾಡುವನು. ಇವಳು ಒಳಸಾಲಿನಲ್ಲಿ ಅಡಗಿಕೊಳ್ಳುವಳು.]

ಹಿಮ್ಮೇಳ

ಬಾಗುತಾ ಬಳುಕೂತ ಬಂದಳೇ ಕೊರವಿ
ಎಂಟಳಾ ನಡುವೀಗೆ ಬಂದಳೇ ಕೊರವಿ
ಮಾಯದಾ ಚೀಟನ್ನು ಬರೆದಳೇ ಕೊರವಿ

[ಕೊರವಿಯು ನೆಲದ ಮೇಲೆ ಗೆರೆ ಎಳೆಯುತ್ತ ಚೀಟು ಬರೆಯುವಂತೆ ಅಭಿನಯಿಸುವಳು.]

ಮಂತ್ರದಾ ಚೀಟನ್ನು ಬರೆದಳೇ ಕೊರವಿ
ಮಕ್ಕಳಿಗೆ ಚೀಟನ್ನು ಬರೆದಳೇ ಕೊರವಿ
ಮಟ್ಟು ಮಂಗಳವಾರದಿನ ಮನೆ ಸಾರಿಸಿ ಕೊರವಿ
ಕರಿಯ ಕಂಬಳಿಯೂ ಗದಿಗಾಗುಬೇಕು.

[ಕೊರವಿ ನೆಲ ಸಾರಿಸಿ, ನಾಲ್ಕು ಕಂಬಳಿಯ ದಾರವನ್ನು ನೆಲದ ಮೇಲೆ ಚೌಕ ಬರೆದು ನಾಲ್ಕು ಮೂಲೆಗೆ ಇಡುವಳು.]

ನಾಕು ಮೂಲೆಗೆ ನಾಕು ಕಾಯಾಗಬೇಕು
ನಾಕು ಮೂಲೆಗೆ ನಾಕು ದುಡ್ಡಾಗಬೇಕು
ನಾಕು ಮೂಲೆಗೆ ನಾಕು ಹಣ್ಣಾಗಬೇಕು.

[ಕೊರವಿ ಇವನ್ನೆಲ್ಲಾ ಅಣಿ ಮಾಡುವಳು]

ಕೊಂಬಿನಾ ಟಗರೂ ಮೊದಲಾಗಬೇಕು
ಮಾಯಾದ ಮಂತ್ರಾವ ಬಿಡಿಸ್ಯಳೇ ಕೊರವಿ
ಚಾಡಿಕಾರರ ಮಾತು ಕೇಳಳೇ ಕೊರವಿ

[ಕೊರಮನ ಧ್ವನಿ! ಅದನ್ನು ಕೇಳಿ ಕೊರವಿ ಧಿಗ್ಗನೇಳುವಳು; ಕೊರಮ ಸಾಲಿನೊಳಗೆ ನುಗ್ಗುವನು. ಅವಳು ಹೊರಗೆ ಓಡುವಳು. ಅವಳು ಹೋದ ಮನೆಯಲ್ಲಿ ಅಂದರೆ ಎರಡಾಳಿನ ಮಧ್ಯೆ ಇರುವ ಜಾಗದಲ್ಲಿ ಇವನು ನುಸುಳಕೂಡದು. ಹೀಗೆ ಕಣ್ಣುಮುಚ್ಚಾಲೆ ಜೂಟಾಟವನ್ನು ಅಭಿನಯಿಸುವರು. ಅವನು ಮಧ್ಯೆ ಮಧ್ಯೆ]

ಈ ಎಗ್ಗು ಸಿಂಗೀ ಮಗುವೆಲ್ಲೆ, ಲಗಾಟಿ ಕೊರಮ ಬಗ್ತಾನೆ.
ಮಗ್ಗುವ ಸಾಕುವ ನಿಜವೇನೇ
ಕೈತರೆ ಕೊರಮಿ, ಮಾಯಕಾರ ದುಂಡಿ
ಮಗುವ ಸಾಕದ್ನಿಜವೇನೇ
ಮಗೀನ ಕಾಲ ಗೆಜ್ಜೆಲ್ಲೆ ?

ಎಂದು ಹೇಳುತ್ತ ಅಟ್ಟಿಸಿಕೊಂಡು ಬರುವನು. ಹಿಮ್ಮೇಳದವರು ಮಧ್ಯೆ ಮಧ್ಯೆ "ಕೊರಮಜ್ಜೀ ಕೊರಮಜ್ಜಿ ಬಾರೆ ನಮ್ಮನೆಗೆ" ಎಂದು ಕೋಲಿನ ತಾಳಕ್ಕನುಸಾರವಾಗಿ ಹಾಡುತ್ತಿರುವರು.

ಬಹಳ ಹೊತ್ತು ಈ ಅವೇಶದ ಜೂಟಾಟವಾದ ಮೇಲೆ ಕೊರಮ ದಣಿದು ಒಂದೆಡೆ ನಿಲ್ಲುವನು. ಕೊರಮಿ ಒಂದು ಮೂಲೆಯಲ್ಲಿ ಬಚ್ಚಿಟ್ಟುಕೊಳ್ಳುವಳು. ಕೊರಮ ಅಲ್ಲಿ ಇಲ್ಲಿ ನೋಡಿ ಕೊರಮಿಯನ್ನು ಕಾಣದೆ, ಸಾಲಿನ ಪ್ರತಿಯೊಬ್ಬರನ್ನೂ ಭುಜ ಹಿಡಿದು "ನೀ ನೋಡಿದಾ, ಕೊರಮೀನ ನೀ ನೋಡಿದಾ" ಎಂದು ಕೇಳುವನು. ಅವರು "ನಾವು ಕಾಣ್ರೆಪಾ, ನಾ ಕಾಣಲಿಲ್ಲಪಾ" ಎಂದು ಉತ್ತರ ಕೊಡುವರು. ಕೊನೆಯಲ್ಲಿ ನಿಂತ ಹುಡುಗ ಮಾತ್ರ "ಸಣ್ಣ ಸಣ್ಣ ಹೆಜ್ಜೆ ಕಾಣ್ತಾವಪ್ಪಾ, ಪುಟ್ಟ ಪುಟ್ಟ ಹೆಜ್ಜೆ ಕಾಣ್ತಾವಪ್ಪಾ" ಎಂದು ಆಸೆ ತೋರುವನು. ಕೊರಮ ಉತ್ಸಾಹದಿಂದ "ಇಲ್ಲೇ ಹೋದಳು ನಮ್ಮ ಕೊರಮಿ ನೀವು ಕಾಣ್ರಪ ನಮ್ಮ ಕೊರಮಿ" ಎಂದು ಸಾಲಿನ ನಡುವೆ ನುಗ್ಗುವನು. ಮತ್ತೆ ಜೂಟಾಟ ಆರಂಭವಾಗುವುದು.

ಕೊನೆಗೆ ಕೊರಮಿಯ ಮನಸ್ಸು ಕರಗಿತೆಂದು ಕಾಣುತ್ತದೆ. ಕೊರಮ "ಕೈತರೆ ಕೊರಮಿ, ಕೈತರೆ ಕೊರಮಿ ಮಾಯ್ಕರ ದುಂಡಿ ಮಗೀನ ಕಾಲಾಗೆ ಗೆಜ್ಜೆಲ್ಲಿ?" ಎಂದು ಕಾತರನಾಗಿ ಕೇಳಿದಾಗ ಅವಳು "ನನ್ನ ಕಾಲಾಗೇ ಇದ್ದೈತೆ" ಎನ್ನುವಳು. ದನಿಯ ಗುರುತನ್ನು ಹಿಡಿದು ಅವನು ದೈನ್ಯದಿಂದ

ದಮ್ಮಯ್ಯ ಕಾಣೆ ದತ್ತವ್ವ
ನಿನ್ನಕಾಲಿಗೆ ಬಿದ್ದೆನು ಕೊರಮಜ್ಜಿ
ಒಂದು ಗಳಿಗ್ಗೆ ಬಾರೆ ಕೊರಮಜ್ಜಿ
ಒಂದು ಚಣಾಕೆ ಬಾರೆ ಕೊರಮಜ್ಜಿ

ಎಂದು ಬೇಡಿಕೊಳ್ಳುವನು. ಕೊರಮಿಯು ಕಾಣಿಸಿಕೊಂಡು ಅವನ ಬಳಿ ನಿಲ್ಲುವಳು. ಅವನು ಕುಣಿಯುತ್ತ ಬಂದು ಅವಳ ಕೈ ಹಿಡಿಯುವನು. ಇಬ್ಬರೂ ಕೊಂಚಹೊತ್ತು ಕುಣಿಯುವರು. ಜಗಳ ತೀರ್ಮಾನವಾಗುವುದು.

ಹಿಮ್ಮೇಳ
ಕೋಲೇ ರನ್ನದ ಕೋಲನ್ನ
ಕೋಲೇ ಚಿನ್ನದ ಕೋಲನ್ನ

ಹಾ ! ಕೋಲೇ ಬಣ್ಣದ ಕೋಲನ್ನ
ಹಾ ! ಕೋಲೇ ಮುತ್ತಿನ ಕೋಲನ್ನ
ಹಾ ! ಧತ್ತಾ ಧಿಗಿಧಿಗಿಧಿತ್ತಾ.

ಅಂದಿನ ಆಟವು ಕೊನೆಗಂಡಿತು. ಕೋಲಿನವರು ಒಟ್ಟಿಗೆಸೇರಿ ನಮಸ್ಕರಿಸಿ ನಾವು ಕೊಟ್ಟ ಇನಾಮನ್ನು ಪಡೆದು ಹೊರಟುಬಿಟ್ಟರು.

*  *  *  *  *

ತಿರುಗಿ ಬೇಲೂರ ಕ್ಯಾಂಪಿನಲ್ಲಿ ನಾವು ಕೋಲಾಟ ಸೇರಿಸಬೇಕೆಂದು ಪ್ರಯತ್ನ ಪಟ್ಟೆವು. ಅದೇ ಹಕ್ಕಿರಂಗನಿಗೇ ಎಂಟು ಆಳುಗಳನ್ನು ತರಪೇತುಮಾಡಲಿಕ್ಕೆ ಹೇಳಿದ್ದೆವು. ಅವನು ಮಳವಳ್ಳಿಯ ಆಳುಗಳಿಬ್ಬರು, ಬೇಲೂರಿನವರಿಬ್ಬರು, ತುಮಕೂರಿನವನೊಬ್ಬ ಹೀಗೆ ಸೇರಿ ವಿರಾಮ ದೊರೆತಾಗ ಆಟ ಕಲಿತು ಒಂದುದಿನ ಪ್ರದರ್ಶನವನ್ನೇರ್ಪಡಿಸಿದರು. ಆಟ ರಂಗನ ಮುಂದೆ ಸಿಂಗನೇ, ಕುಣಿವ ನವಿಲಿನ ಮುಂದೆ ಬಡ ಕೆಂಬೂತವೇ ಎಂಬ ನಾಣ್ಣುಡಿಯನ್ನು ನಿಜವೆನಿಸಿತು. ಹಗರೆಯವರದು ಒಕ್ಕೂಟ, ಕುಣಿತ, ಏಟು, ಹಾಡು ಎಲ್ಲ ಎಷ್ಟು ಏಕೀಭವಿಸಿತ್ತೆಂದರೆ ಒಂದೇ ವ್ಯಕ್ತಿಯ ಹಲವು ಅವತಾರವಿಶೇಷಗಳೇನೋ ಎಂಬ ಭ್ರಾಂತಿಯನ್ನು ಹುಟ್ಟಿಸುತ್ತಿತ್ತು. ಇಲ್ಲಿ ಎತ್ತು ಎರೆಗೆ ಎಳೆದರೆ ಕೋಣ ಕೆರೆಗೆ ಎಳೆಯುತ್ತಿತ್ತು. ಹಕ್ಕಿ ರಂಗನಂತೂ ತನ್ನ ಗುಂಪಿನಿಂದಗಲಿದಮೇಲೆ ಬಾತುಗಳನಡುವೆ ಸೇರಿದ ಹಂಸದಂತೆ ನಿರುತ್ಸಾಹಿಯಾಗಿಬಿಟ್ಟ. ಆಟ ಕೆಟ್ಟಿತು. ಕೋಲಿನೇಟು ಕೋಲಮೇಲೆ ಬೀಳುವುದರ ಬದಲು ಕೈಗಿಣ್ಣಿನ ಮೇಲೆ ಬೀಳಲಾರಂಭಿಸಿತು. ಅದರ ಫಲವಾಗಿ ಹಾಡಿಸಬದಲು "ಏ ಮೂದೇವಿ, ಕೈಮೇಕೆ ಪೆಟ್ಟುಹಾಕ್ತೀಯಾ?" "ನಾನೇನುಮಾಡ್ಲಪಾ. ನೀನೇ ಅತ್ತಿಂದಿತ್ತ ಬೇಡಬೇಡಾ ಅಂದರೂ ಬತ್ತೀಯ" "ನಿನ್ನ ಸೊಟ್ಟಗಾಲಲ್ಲಿ ಕುಣಿದಂಗೇ ಆಯ್ತು ಜಿಡಪ"— ಈ ಪರಿಯ ವಾಕ್ಯಗಳನ್ನು ನಾವು ಕೇಳುವಂತಾದೆವು.

ಇದರಿಂದ ನಮಗೆ ಇಷ್ಟು ನಿರ್ಧರವಾಯಿತು. ಪ್ರಾಂತಪ್ರಾಂತದ ಕೋಲಾಟದ ರೀತಿಯಲ್ಲಿ, ಹಾಡಿನ ಧಾಟಿಯಲ್ಲಿ ವ್ಯತ್ಯಾಸವಿರುತ್ತದೆ. ಬೆರೆತು ಆಡುವಂತೆ ಅವರಿಗೆ ಹೇಳಿದುದು ನಮ್ಮ ತಪ್ಪು ಎಂದು ತಿಳಿಯಿತು.

ಇದರೊಡನೆ ಇನ್ನೊಂದು ಆಲೋಚನೆಯೂ ಹೊಳೆಯಿತು. ಒಂದೇ ಊರಿನವರ ಪದಸಂಗ್ರಹವಾದರೆ ಸಾಲದು. ಪ್ರಾಂತಪ್ರಾಂತಗಳ ಪದಸಂಕಲನವು ಆವಶ್ಯಕವಿರುತ್ತದೆ. ಪದಸಂಕಲನವಷ್ಟೇ ಆದರೂ ಸಾಲದು. ಕೋಲಾಟವನ್ನು ಆಡುವ, ಆಡಿದುದನ್ನು ನೋಡುವ, ನೋಡಿದುದನ್ನು ಮೆಚ್ಚುವ ಅಭಿರುಚಿ ನಾಡಿನಲ್ಲೆಲ್ಲ ಹರಡಬೇಕು. ಅಂತಾದರೆ ಕಳೆದು ಹೋಗಲಿರುವ ನಿಧಿಯೊಂದನ್ನು ಕಾಪಿಟ್ಟಂತಾಗುವುದು.

ಎಂ. ಆರ್. ಲ.

## ದೊರೆಯ ಕಾಣಲಳನೆ

ಹಕ್ಕಿ ಹಾರತಾವ ಹಾರಿ ಆಡತಾವ ಚಿಕ್ಕಮಕ್ಕಳ್ಹಾಂಗ
ಅಕ್ಕ ನೋಡು ಭೋರಂಗಿ ಭೃಂಗಿ ಮದರಂಗಿ ಗಿಡದ ವ್ಯಾಗ.

ಮಾವು ಹೂತು ಮೂಜಾವ ಮರಸತಾವ ನಸಕು ಬಣ್ಣ ಅದಕ
ಬೇವು ಜಾರಿ ಬರಿ ಗಂಧ ಬೀರತಾವ ಸುತ್ತುಮುತ್ತು ಬನಕ.

ಕಾಡು ಮಲ್ಲಿಗಿ ಜಾಡಹಿಡಿದು ಬೆಳೆದಾವ ಕೊಳ್ಳದಾಗ
ಜೋಡಿ ಜೋಡಿಲೆ ಹಾಡ ಹೇಳತಾವ ಹಕ್ಕಿ ಮ್ಯಾಳದಾಗ.

ಬೆಳ್ಳಿನೀರು ಬೆಳದಿಂಗಳಂತೆ ಬಂದಿಳಿದು ಮುಗಿಲಿನಿಂದ
ಹಳ್ಳಕೊಳ್ಳ ಹೊರಸೂಸಿ ತಬ್ಬತಾವ ತೆವರ ಉಬ್ಬಿನಿಂದ.

ಅತ್ತಕೇದಿಗೆ ಹತ್ತಿ ಹಾದಿ ಕೈಯೆತ್ತಿ ಕೋರತಾವ ಬರವ
ಎತ್ತ ಹೋದರೂ ಮತ್ತ ನೋಡಿದರು ಚಂದ ಇಲ್ಲಿಯು ಇರವ.

ಯಾರ ತೋಟವಿದು ಯಾರ ಆಟವಿದು ಮತ್ಯಾರ ಮಾಟವಿದುವೆ
ತೋರಿಸುತ್ತ ಐಸಿರಿಯ ಮರೆಯಲಿಹ ದೊರೆಯ ಕಾಣಲಳವೆ.

ಗೀತಾಪ್ರಿಯ

# ಕದಂಬರು

ಪ್ರಾಚೀನ ಕಾಲದ ಇಂಡಿಯಾ ದೇಶದ ಚರಿತ್ರೆಯಲ್ಲಿ ದಖನ್ ಚರಿತ್ರೆಗೆ ಎಷ್ಟು ಪ್ರಾಮುಖ್ಯತೆ ಸಿಕ್ಕಬೇಕೊ ಅಷ್ಟು ಪ್ರಾಮುಖ್ಯತೆ ದೊರಕಿಲ್ಲ. ಭಾರತೀಯ ಚರಿತ್ರೆ ಎಂದರೆ ಉತ್ತರ ಇಂಡಿಯಾದಲ್ಲಿನ ಅನೇಕ ರಾಜ್ಯಗಳ ಹುಟ್ಟು, ಬೆಳವಣಿಗೆ ಮತ್ತು ಆ ರಾಜ್ಯಗಳ ಸಂಸ್ಕೃತಿ, ಕಲೆಯ ಅಭಿವೃದ್ಧಿ ಮುಂತಾದ ವಿಷಯಗಳ ಪರಿಶೀಲನೆಯೇ ಆಗಿತ್ತು. ಇವುಗಳೇ ಚರಿತ್ರಕಾರರ ವಿಷಯಗಳಾಗಿದ್ದುವು. ಕೆಲವು ಕಾಲದಿಂದ ಈಚೆಗೆ ಪ್ರಖ್ಯಾತ ಚರಿತ್ರೆಯ ವಿದ್ವಾಂಸರಾದ ಮದರಾಸಿನ ಡಾ|| ಕೃಷ್ಣ ಸ್ವಾಮಿ ಅಯ್ಯಂಗಾರ್ಯ ಮತ್ತು ನೀಲಕಂಠಶಾಸ್ತ್ರಿ ಇವರುಗಳು ತಮಿಳು ದೇಶದ ಚೋಳರು ಮತ್ತು ಅವರ ಸಂಸ್ಕೃತಿ, ಆಡಳಿತ ಮೊದಲಾದ ವಿಷಯಗಳಲ್ಲಿ ಹೇರಳ ವಾಗಿ ಶೋಧನೆ ನಡಸಿ ಆ ಪ್ರಾಂತದ ಚರಿತ್ರೆಯನ್ನು ಬೆಳಕಿಗೆ ತಂದಿದ್ದಾರೆ. ಆದರೆ ದಖನಿನ ಚರಿತ್ರೆಯನ್ನು ಅದೇ ರೀತಿಯಲ್ಲಿ ಶೋಧನೆಗೆ ಒಳಪಡಿಸಿಲ್ಲ. ಇತ್ತೀಚೆಗೆ ಈ ಕುಂದು ವಿದ್ವಾಂಸರ ಗಮನಕ್ಕೆ ಬರುತ್ತಿದೆ. ದಖನ್ ದೇಶವು ದೊಡ್ಡದೊಡ್ಡ ರಾಜ್ಯಗಳ ಮನೆಯಾಗಿತ್ತು. ಅನೇಕ ಸಣ್ಣಪುಟ್ಟ ರಾಜ್ಯಗಳು ಕೂಡ ಇಲ್ಲಿ ಹುಟ್ಟಿ ಬೆಳೆದುವು. ಪ್ರಾಚೀನ ಕಾಲದಲ್ಲಿ ವೈಭವಕ್ಕೂ, ಕಲೆಯ ಸೊಬಗಿಗೂ ದಖನ್ ನೆಲೆಯಾಗಿತ್ತು. ಕೇವಲ ಸಣ್ಣಸಣ್ಣ ರಾಜ್ಯಗಳು ಸಂಸ್ಕೃತಿಯನ್ನು ಬಲಪಡಿಸಿ ಇಡಿಯ ಇಂಡಿಯಾ ದೇಶದ ಸಂಸ್ಕೃತಿಯ ತಳಹದಿಯನ್ನೇ ಹಾಕಿದುವು. ಒಂದು ಸಣ್ಣ ಉದಾಹರಣೆಯು ಇದನ್ನು ವಿಶದಪಡಿಸುವುದು. ಚಾಂಡೇಲರು ದಖನ್ ಪ್ರಸ್ಥ ಭೂಮಿಯ ಒಂದು ಸಣ್ಣ ರಾಜ್ಯದ ಅರಸರು. ಅವರು ರಾಜಕೀಯ ರಂಗದಲ್ಲಿ ಹೆಚ್ಚು ಯಶಸ್ಸನ್ನು ಪಡೆಯಲಿಲ್ಲ. ಉನ್ನತಸ್ಥಿತಿಗೇರಲಿಲ್ಲ. ಆದರೆ ಅವರು ಅತಿ ಸೊಗಸಾದ ಕಾಜುರಹೊ ದೇವಸ್ಥಾನವನ್ನು ಕಟ್ಟಿಸಿ ಭಾರತೀಯ ಶಿಲ್ಪಶಾಸ್ತ್ರದ ಮಹತ್ವವನ್ನು ಮುಗಿಲಿಗೇರಿಸಿದರು. ಕದಂಬರು ಈ ದಖನ್ ಚರಿತ್ರೆಗೆ ಸಂಬಂಧ ಪಟ್ಟವರು. ಒಂದು ಕಾಲದಲ್ಲಿ ಅವರು ಇಡಿಯ ದಖನನ್ನೆ ತಮ್ಮ ವಶದಲ್ಲಿ ಇಟ್ಟು ಕೊಂಡಿದ್ದರು. ಅವರು ಗಂಗರ ಸ್ನೇಹಿತರಾಗಿದ್ದರು. ಚಾಲುಕ್ಯರು ಉನ್ನತಸ್ಥಿತಿಗೆ ಬರುವುದಕ್ಕಿಂತ ಮುಂಚೆ ಅಂದರೆ ಸುಮಾರು ಒಂದನೆಯ ಪುಲಿಕೇಶಿಯ ಕಾಲದ ವರೆಗೂ ಕದಂಬರ ಆಜ್ಞಾಧಾರಕರಾಗಿದ್ದರು. ಹೊಯಿಸಳರು ಮತ್ತು ಮಾಳ್ವದ ಪರಮರರು ಕದಂಬರ ಕೈಯಲ್ಲಿ ಸಿಕ್ಕಿ ನರಳಿದರು. ಹೀಗೆ ಕದಂಬರು ದರ್ಪದಿಂದಲೂ ಶಿಸ್ತಿನಿಂದಲೂ ದಖನಿನಲ್ಲಿ ಸುಮಾರು ಕ್ರಿ.ಶ. ಏಳನೆಯ ಶತಮಾನದವರೆಗೂ ಆಳಿದರು.

ಕದಂಬರು ರಾಜಕೀಯ ರಂಗದಲ್ಲಿ ಯಶಸ್ಸನ್ನು ಗಳಿಸಿದುದಲ್ಲದೆ ದಖನಿನ ಸಂಸ್ಕೃತಿಯ ಬೆಳವಣಿಗೆಗೆ ಸಹಾಯಕರಾದರು. ಅವರು ಸಾಹಿತ್ಯ, ಕಲೆ, ವಾಸ್ತು ಶಾಸ್ತ್ರ, ಶಿಲ್ಪಶಾಸ್ತ್ರ ಇವುಗಳಿಗೆ ಬಹಳ ಉತ್ತೇಜನವನ್ನು ಕೊಟ್ಟರು. ಇವರ ಬಳಿಕ ಬಂದ ಚಾಲುಕ್ಯರು, ರಾಷ್ಟ್ರಕೂಟರು ಮತ್ತು ಹೊಯಿಸಳರು ಇವುಗಳನ್ನು ಬಹಳ ಮಟ್ಟಿಗೆ ಬೆಳಸಿಕೊಂಡು ಬಂದರು.

ಕದಂಬರ ಚರಿತ್ರೆಯನ್ನು ಕಟ್ಟಲು ಹೆಚ್ಚಾಗಿ ಸಮಗಿರುವ ಸಾಧನ ಶಾಸನಗಳು. ಇವುಗಳಲ್ಲಿ ಕೆಲವು ಕಲ್ಲಿನ ಬಂಡೆಗಳ ಮೇಲೂ ಮತ್ತು ಕಂಬಗಳ ಮೇಲೂ ಕೆತ್ತಿವೆ. ಮತ್ತೆ ಕೆಲವು ತಾಮ್ರದ ಶಾಸನಗಳು. ಹಲಸಿಯ ತಾಮ್ರಶಾಸನ, ತಗರೆಯ ತಾಮ್ರಶಾಸನ ಮತ್ತು ಶಿವಮೊಗ್ಗಿಯ ತಾಮ್ರಶಾಸನ ಇವು ಮುಖ್ಯವಾದುವು. ಇವುಗಳಿಂದ ಕದಂಬರ ಚರಿತ್ರೆಯ ಅನೇಕ ಅಂಶಗಳು ನಮಗೆ ಗೊತ್ತಾಗಿವೆ. ಕಲ್ಲಿನ ಶಾಸನಗಳಲ್ಲಿ ಮುಖ್ಯವಾದುವು ಮಳವಳ್ಳಿಯ ಶಾಸನಗಳು, ತಾಲಗುಂದದ ಕಲ್ಲಿನ ಕಂಬದ ಶಾಸನ, ಹಲ್ಮಿಡಿಯ ಶಾಸನ ಮತ್ತು ಚಂದ್ರವಳ್ಳಿಯ ಶಾಸನ. 1929 ನೆಯ ಇಸವಿಯಲ್ಲಿ ನಡೆದ ಚಂದ್ರವಳ್ಳಿಯ ಭೂಶೋಧನೆಯಲ್ಲಿ ಈ ಶಾಸನವು ಭೈರವೇಶ್ವರನ ಗುಡಿಯ ಮುಂದಿನ ದೊಡ್ಡ ಕಲ್ಲುಬಂಡೆಯ ಮೇಲೆ ಶಾಸನದ ಇಲಾಖೆಯ ಡೈರೆಕ್ಟರಾದ ಡಾ|| ಕೃಷ್ಣರವರಿಂದ ಕಂಡುಹಿಡಿಯಲ್ಪಟ್ಟಿತು. ಮಳೆಯ ನೀರು ಈ ಬಂಡೆಯ ಮೇಲೆ ಧಾರಾಕಾರವಾಗಿ ಹರಿದು ಶಾಸನದ ಅಕ್ಷರಗಳು ಸವೆದು ಹೋಗಿದ್ದರೂ ಈ ಶಾಸನವು ಓದಲ್ಪಟ್ಟು ಕದಂಬರ ಚರಿತ್ರೆಯ ಒಂದು ದೊಡ್ಡ ಸಮಸ್ಯೆಯನ್ನು ಬಗೆಹರಿಸಿತು. ಅದುವರೆಗೆ ಸಿಕ್ಕಿದ ಯಾವ ಶಾಸನದಲ್ಲೂ ಕದಂಬರ ಮೂಲ ಪುರುಷನಾದ ಮಯೂರಶರ್ಮನ ಹೆಸರೇ ಸಿಕ್ಕಿರಲಿಲ್ಲ. ಅನೇಕ ವಿದ್ವಾಂಸರು ಮಳವಳ್ಳಿಯ ಕಲ್ಲುಕಂಬದ ಶಾಸನದ ಕಾರಣಕರ್ತನು ಮಯೂರಶರ್ಮನೇ ಎಂದು ಊಹಿಸಿದ್ದರು. ಆದರೆ ಇದು ಒಂದು ತೀರ್ಮಾನಕ್ಕೆ ಬಂದಿರಲಿಲ್ಲ. ಹೀಗೆ ನಾವು ಈ ಶಾಸನಗಳ ಸಹಾಯದಿಂದ ಕದಂಬರ ರಾಜ್ಯವು ಹೇಗೆ ಹುಟ್ಟಿತು ? ಅದರ ಮೂಲಪುರುಷನಾರು ? ಕದಂಬ ಅರಸರ ಆಳಿಕೆಯ ಕಾಲ ಯಾವುದು ಮುಂತಾದ ಮುಖ್ಯ ವಿಷಯಗಳನ್ನು ಸಂಗ್ರಹಿಸಬಹುದು.

ಕದಂಬರು ಆರ್ಯರ ಗುಂಪಿಗೆ ಸೇರಿದವರೆಂದೂ ಅವರು ಉತ್ತರ ಇಂಡಿಯದಿಂದ ದಖನಿಗೆ ಬಂದು ನೆಲಸಿದರೆಂದೂ ಕೆಲವು ಚರಿತ್ರಕಾರರ ಅಭಿಪ್ರಾಯ. ಆದರೆ ಕದಂಬರು ದಖನಿನ ಸ್ವಂತ ನಿವಾಸಿಗಳೆಂಬುದಕ್ಕೆ ಹೆಚ್ಚು ಆಧಾರಗಳಿವೆ. ಅವರು ಮೌರ್ಯ, ಶಾತವಾಹನರ ಅನಂತರ ಬಂದ ಚುಟು ವಂಶಕ್ಕೆ ಸೇರಿದವರು. ಚುಟು ಅರಸರ ಮುಖ್ಯ ಪಟ್ಟಣವಾದ ಬನವಾಸಿಯೆ ಇವರ ಮುಖ್ಯಪಟ್ಟಣವಾಯಿತು.

ಚುಟು ಅರಸರು ಶಿಕಾರಿಪುರ ತಾಲ್ಲೋಕು ಮಳವಳ್ಳಿ ಗ್ರಾಮದ ದೇವರಿಗೆ ಬಿಟ್ಟಿದ್ದ ತಸ್ತೀಕು, ಜಮೀನು ಮುಂತಾದುವನ್ನು ಅವರ ಇಷ್ಟದಂತೆಯೇ ಕದಂಬರು ನಡಸಿ ಕೊಟ್ಟರು. ಆದರೆ ಚುಟು ವಂಶವು ಕ್ಷೀಣದೆಸೆಗೆ ಬಂದ ತಕ್ಷಣವೇ ಕದಂಬರು ಅವರ ಸ್ಥಾನಕ್ಕೆ ಬರಲಾಗಲಿಲ್ಲ. ಪ್ರಚಂಡರಾದ ಪಲ್ಲವರು ಅವರ ಸ್ಥಾನವನ್ನು ಆಕ್ರಮಿಸಿದರು. ಪಲ್ಲವರ ಸೊಕ್ಕು ಮುರಿದು ಅವರ ಕೈಯಿಂದ ರಾಜ್ಯವನ್ನು ಕಿತ್ತು ಕೊಂಡವನು ಮಯೂರಶರ್ಮ—ಅವನೇ ಕದಂಬರ ಮೂಲಪುರುಷ.

ಇವರಿಗೆ ಕದಂಬರೆಂಬ ಹೆಸರು ಹೇಗೆ ಬಂದಿತೆಂದು ತಾಲಗುಂದದ ಕಲ್ಲಿನ ಶಾಸನದಿಂದ ಗೊತ್ತಾಗುತ್ತದೆ. ಅನೇಕರು ಇವರ ಮೂಲಪುರುಷನ ಹೆಸರೇ ಕದಂಬ ಎಂದು ಇದ್ದುದರಿಂದ ಈ ವಂಶಕ್ಕೆ ಆ ಹೆಸರು ಬಂದಿತೆಂದು ಅಭಿಪ್ರಾಯಪಡುತ್ತಾರೆ. ಇದಕ್ಕೆ ಯಾವ ಆಧಾರವೂ ಇಲ್ಲ. ಇವರು ಬ್ರಾಹ್ಮಣರು. ವೇದಪಾಠಗಳನ್ನು ಪಠನಮಾಡುವುದರಲ್ಲಿಯೂ ಯಜ್ಞಯಾಗಾದಿಗಳನ್ನು ಮಾಡುವುದರಲ್ಲಿಯೂ ನಿರತ ರಾಗಿದ್ದರು. ಇವರ ವಾಸಸ್ಥಳ ಸ್ಥಾನಕುಂದುರ ಅಥವಾ ತಾಲಗುಂದ, ಇವರ ಆಶ್ರಮದ ಪಕ್ಕದಲ್ಲಿಯೇ ಒಂದು ಕದಂಬ ವೃಕ್ಷವು ಬೆಳೆದಿತ್ತು. ಅದನ್ನು ಅವರು ಅತಿ ಅಕ್ಕರೆಯಿಂದ ಕಾಪಾಡುತ್ತಿದ್ದರು. ಮತ್ತು ತಮಗೆ ರಾಜ್ಯ ಪ್ರಾಪ್ತಿಯಾದಾಗ ಮೂಲಪುರುಷನಾದ ಮಯೂರನು ಆ ವೃಕ್ಷದ ಜ್ಞಾಪಕಾರ್ಥವಾಗಿ 'ಕದಂಬ' ಎಂಬ ಹೆಸರನ್ನೆ ತನ್ನ ಹೊಸ ರಾಜ್ಯಕ್ಕೂ, ತಮ್ಮ ವಂಶಕ್ಕೂ ಇಟ್ಟುಕೊಂಡನೆಂದು ತಿಳಿಯಬರುತ್ತದೆ.

ಮಯೂರಶರ್ಮನು ಒಬ್ಬ ಬಡಬ್ರಾಹ್ಮಣ. ಇವನು ವೇದಗಳನ್ನು ಕಲಿಯಲು ಆಗ್ಗೆ ಬಹಳ ಪ್ರಸಿದ್ಧವಾದ ಕಾಂಚಿ ವಿಶ್ವವಿದ್ಯಾನಿಲಯಕ್ಕೆ ತನ್ನ ಗುರುವಾದ ವೀರಶರ್ಮನೊಂದಿಗೆ ಹೋದನು. ಕಾಂಚಿ ನಗರಿಯು ಪಲ್ಲವರ ರಾಜಧಾನಿಯಾಗಿತ್ತು. ಕಾಂಚಿಯಲ್ಲಿ ಮಯೂರನಿಗೂ ಒಬ್ಬ ಪಲ್ಲವ ಕುದುರೆ ಸವಾರನಿಗೂ ಜಗಳವಾದುದರ ಫಲವಾಗಿ ಮಯೂರನು ಬ್ರಾಹ್ಮಣ ಮತವನ್ನೇ ತ್ಯಜಿಸಿ ಕ್ಷತ್ರಿಯನಾದನು. ಪಲ್ಲವರ ಜಂಬ, ಅತ್ಯಾಚಾರ ಅವರ ಹಾವಳಿ ಮುಂತಾದುವು ಇವನ ಕೈಯಿಂದ ದರ್ಭೆಯನ್ನು ಬೀಸಾಡಿಸಿ ಖಡ್ಗವನ್ನು ಹಿಡಿಯುವಂತೆ ಮಾಡಿಸಿದುವು. ಹೀಗೆ ಮಯೂರನು ಕ್ಷತ್ರಿಯನಾದನು. ಇವನಿಗೂ ಪಲ್ಲವರಿಗೂ ತಿಕ್ಕಾಟಕ್ಕೆ ಪ್ರಾರಂಭ ವಾಯಿತು. ಪಲ್ಲವರು ಇವನ ಹೊಡೆತವನ್ನು ತಾಳಲಾರದೆ ಹೋದರು. ಅವರು ಇವನನ್ನೆ ಮೊದಲು ತಮ್ಮ ಸೇನಾಪತಿಯನ್ನಾಗಿಯೊ ಅಥವಾ ದಂಡನಾಯಕ ನನ್ನಾಗಿಯೊ ಮಾಡಿಕೊಂಡು, ಇವನು ರಾಜನೆಂಬ ಬಿರುದನ್ನು ಧರಿಸಲು ಅನುಮತಿ ಯನ್ನು ಸಹ ಕೊಟ್ಟರು. ಬೃಹದ್ಬಾಣ ಮತ್ತು ಇತರ ರಾಜರುಗಳ ಸಹಾಯದಿಂದ

ಮಯೂರನು ಹೀಗೆ ರಾಜ್ಯಕಟ್ಟಿದನು. ಬಹುಶಃ ಗುಪ್ತಚಕ್ರವರ್ತಿಯಾದ ಸಮುದ್ರಗುಪ್ತನ ದಂಡಯಾತ್ರೆಯಿಂದ ದಖನಿನಲ್ಲಿ ಸ್ವಲ್ಪಮಟ್ಟಿಗೆ ಹತೋಟಿ ತಪ್ಪಿ ಅನಾಯಕತ್ವವು ಹರಡಿದುದರಿಂದಲೇ ಮಯೂರನಿಗೆ ರಾಜ್ಯಕಟ್ಟಲು ಬಹಳ ಅನುಕೂಲವಾಯಿತೆಂದು ಊಹಿಸಬೇಕಾಗಿದೆ. ತಾನು ಕ್ಷತ್ರಿಯನಾದ ಗುರುತಿಗೆ ಮಯೂರನು 'ಶರ್ಮ' ಎಂಬ ತನ್ನ ಹೆಸರಿನ ಕೊನೆಯನ್ನು 'ವರ್ಮ' ಎಂಬುದಾಗಿ ಬದಲಾಯಿಸಿದನು. ಮೊದಮೊದಲಿನ ಆತನ ಶಾಸನಗಳಲ್ಲಿ ಮಯೂರಶರ್ಮನೆಂದೇ ಆತನ ಹೆಸರನ್ನು ಓದಬಹುದು. ಆತನ ಅಂತ್ಯಕಾಲದ ಶಾಸನಗಳಲ್ಲಿ ಮಯೂರವರ್ಮನೆಂಬ ಹೆಸರೇ ನಮಗೆ ಗೋಚರವಾಗುತ್ತದೆ. ಅವನ ಬಳಿಕ ಆಳಿದ ಉಳಿದ ಆತನ ವಂಶಿಕರೆಲ್ಲರೂ ವರ್ಮನೆಂಬ ಪದವನ್ನೇ ತಮ್ಮ ಹೆಸರಿನ ಕೊನೆಗೆ ಸೇರಿಸಿಕೊಂಡರು. ಕಂಗವರ್ಮ, ಕಾಕುತ್ಸವರ್ಮ, ಶಾಂತಿವರ್ಮ, ಮೃಗೇಶವರ್ಮ, ಮಾಂಧಾತೃವರ್ಮ, ಹರಿವರ್ಮ, ಅಜವರ್ಮ, ವಿಷ್ಣುವರ್ಮ, ಇವೆಲ್ಲಾ ವರ್ಮಶಬ್ದದಿಂದ ಮುಕ್ತಾಯವಾಗುತ್ತವೆ. ಮಯೂರಶರ್ಮನು ತನ್ನ ರಾಜ್ಯವನ್ನು ಹೇಗೆ ವಿಸ್ತರಿಸಿದನೆಂಬ ವಿಷಯವು ನಮಗೆ ಚಂದ್ರವಳ್ಳಿಯ ಶಿಲಾಶಾಸನದಿಂದ ತಿಳಿಯಬರುತ್ತದೆ. ಆಭೀರ, ಪಲ್ಲವ, ತ್ರಿಕೂಟ, ಪಾರಿಯಾತ್ರಿಕ, ಶಕಸ್ಥಾನ, ಸೈಂದ್ರಕ, ಪುನ್ನಾಟ, ಮೌಖರಿ, ಮುಂತಾದ ದೇಶಗಳು ಮಯೂರನಿಂದ ಗೆಲ್ಲಲ್ಪಟ್ಟು ಕದಂಬರ ರಾಜ್ಯಕ್ಕೆ ಸೇರಿದುವು. ಇವನ ರಾಜ್ಯವು ಮಾಲ್ವದವರೆಗೆ ಹಬ್ಬಿದಂತೆ ಕಾಣುತ್ತದೆ. ಮಯೂರನು ಈ ರಾಜ್ಯಗಳನ್ನೆಲ್ಲ ಗೆದ್ದುದರ ಫಲವಾಗಿ ಅಶ್ವಮೇಧಯಾಗವನ್ನು ಮಾಡಿದನು.

ಮಯೂರನ ಮಗ ಕಂಗವರ್ಮನು ಅವನ ತರುವಾಯ ಪಟ್ಟಕ್ಕೆ ಬಂದವನು. ಇವನು ಕದಂಬರಾಜ್ಯವನ್ನು ವಿಸ್ತರಿಸುವುದರ ಫಲವಾಗಿ ಅನೇಕ ಯುದ್ಧಗಳನ್ನು ಮಾಡಿದನೆಂದು ನಮಗೆ ತಾಲಗುಂದದ ಶಾಸನದಿಂದ ತಿಳಿಯಬರುತ್ತದೆ. ಕಂಗವರ್ಮನು ತನ್ನ ಸಮಕಾಲೀನನಾದ ವಾಕಾಟಕ ರಾಜಪೃಥಿವೀಸೇನನಿಂದ ಸೋಲಿಸಲ್ಪಟ್ಟರೂ ರಾಜ್ಯವನ್ನು ಹತೋಟಿಯಲ್ಲಿ ಇಟ್ಟಿದ್ದನು. ಆಶ್ರಿತರಾಜರು ಇವನ ಆಜ್ಞಾವರ್ತಿಗಳಾಗಿದ್ದರು. ಈತನು ಸುಮಾರು ಕ್ರಿ.ಶ. 360 ರಿಂದ 385 ರ ವರೆಗೂ ಆಳಿದನು.

ಕಂಗವರ್ಮನ ತರುವಾಯ ಭಗೀರಥ ಮತ್ತು ರಘು ಇವರು ಪಟ್ಟಕ್ಕೆ ಬಂದು ಆಳಿದರು. ಕಾಕುತ್ಸವರ್ಮನೇ ಪ್ರಾಚೀನ ಕದಂಬರಲ್ಲಿ ಬಹಳ ಪ್ರಖ್ಯಾತನಾದ ರಾಜ; ಅಣ್ಣನಾದ ರಘು ದೊರೆಯಾಗಿದ್ದಾಗಲೇ ಕಾಕುತ್ಸವರ್ಮನು ಯುವರಾಜ ಪದವಿಯನ್ನಲಂಕರಿಸಿದ್ದನು. ಈತನ ಕಾಲದಲ್ಲೆ ಕದಂಬರ ರಾಜ್ಯವು ಅದರ ಎಲ್ಲೆಯನ್ನು ಮುಟ್ಟಿತು. ತಾಲಗುಂದದ ಶಾಸನದಿಂದ ದೇಶವು ಇವನ ಕೈಕೆಳಗೆ ಶಾಂತಿಯಿಂದಲೂ ಐಶ್ವರ್ಯದಿಂದಲೂ ಕೂಡಿತ್ತೆಂದು ಗೊತ್ತಾಗುತ್ತದೆ. ಇವನು ದೊರೆಗಳಲ್ಲಿ

ಸೂರ್ಯನಂತೆಯೂ, ಕದಂಬಕುಲಕ್ಕೆ ಆಭರಣದಂತೆಯೂ ಇದ್ದನೆಂದು ಅದೇ ಶಾಸನವು ತಿಳಿಸುತ್ತದೆ. ಕದಂಬರ ಯಶಸ್ಸು, ಪ್ರಾಬಲ್ಯ ಇತರ ಭಾರತೀಯ ರಾಜರುಗಳ ಮನಸ್ಸನ್ನು ಆಕರ್ಷಣೆಮಾಡಿತು. ಅನೇಕರು ಅವರ ಸಂಬಂಧವನ್ನೂ ಸ್ನೇಹವನ್ನೂ ಸಂಪಾದಿಸಲು ಉದ್ಯುಕ್ತರಾದರು. ಪ್ರಸಿದ್ಧ ಗುಪ್ತಚಕ್ರವರ್ತಿಯಾಗಿದ್ದ ಎರಡನೆಯ ಚಂದ್ರಗುಪ್ತ ವಿಕ್ರಮಾದಿತ್ಯನು ಕದಂಬರ ನಾಡಾದ ಕುಂತಲ ದೇಶಕ್ಕೆ ಕಾಳಿದಾಸನನ್ನು ತನ್ನ ರಾಯಭಾರಿಯಾಗಿ ಕಳುಹಿಸಿದುದು ಇದೇ ಆಸೆಯಿಂದಲೇ. ಕದಂಬರು ಗುಪ್ತಚಕ್ರವರ್ತಿಗಳ ಸಮಾನಸ್ಕಂಧರಾಗಿದ್ದರೆಂದು ಈ ಆಧಾರದ ಮೇಲೆ ನಾವು ಊಹಿಸಬಹುದಾಗಿದೆ. ಕಾಕುತ್ಸನು ಬಿರಾರಿನ ವಾಕಾಟಕ ರಾಜನಾದ ನರೇಂದ್ರಸಿಂಹನಿಗೆ ತನ್ನ ಒಬ್ಬ ಮಗಳನ್ನು ಮದುವೆಮಾಡಿಕೊಟ್ಟು ವಾಕಾಟಕರ ಸಂಬಂಧವನ್ನು ಬೆಳಸಿದನು. ಇನ್ನೊಬ್ಬ ಮಗಳನ್ನು ಗುಪ್ತ ಸಾರ್ವಭೌಮನಾದ ಸ್ಕಂದಗುಪ್ತನಿಗೆ ಮದುವೆ ಮಾಡಿಕೊಟ್ಟು ಗುಪ್ತರ ಸಂಬಂಧವನ್ನೂ ಮಾಡಿದನು. ಕಾಕುತ್ಸನು ಸುಮಾರು (ಕ್ರಿ.ಶ. 425, 450 ರ ವರೆಗೆ ಅಂದರೆ) 25 ವರ್ಷಗಳು ಆಳಿದನು. ಶಾಂತಿವರ್ಮನು ಕಾಕುತ್ಸನು ಕಾಲವಾದ ಮೇಲೆ ರಾಜ್ಯಕ್ಕೆ ಬಂದನು. ಶಾಂತಿವರ್ಮನು ತನ್ನ ತಂದೆಯ ಮೇಲ್ಪಂಕ್ತಿಯನ್ನು ಅನುಸರಿಸಿ ಆಳಿದನು. ಕ್ರಿ.ಶ. 7 ನೆಯ ಶತಮಾನದಿಂದ ಈಚೆಗೆ ಕದಂಬರ ಪ್ರಾಬಲ್ಯ ಮುರಿದುಹೋಯಿತು. ಚಾಲುಕ್ಯರು ಪ್ರಬಲರಾಗಿ ಬನವಾಸಿಯನ್ನೇ ಆಕ್ರಮಿಸಿದರು.

ಪ್ರಾಚೀನ ಕದಂಬರ ನಾಶವು ಚಾಲುಕ್ಯರ ಎರಡನೆಯ ಪುಲಿಕೇಶಿಯಿಂದ ಆಯಿತೆಂದು ನಮಗೆ ಐಹೊಳೆ ಶಾಸನದಿಂದ ಗೊತ್ತಾಗಿದೆ. ಆದರೆ ಸುಮಾರು ಕ್ರಿ. ಶ. 14 ನೆಯ ಶತಮಾನದವರೆಗೂ ಕದಂಬರು ಚರಿತ್ರೆಯಿಂದ ಪೂರ್ತಿಯಾಗಿ ಕಾಣದಂತಾಗಲಿಲ್ಲ. ಇವರು ಅಲ್ಲಲ್ಲೆ ಪ್ರಾಂತಗಳಲ್ಲಿ ಉಳಿದು ಎಂದರೆ ವಿಜಯನಗರವು ಪ್ರಾಬಲ್ಯಕ್ಕೆ ಬರುವವರೆಗೂ ಆಳಿದರು. ಕಳಿಂಗ, ನಾಗರಖಂಡ, ಬೇಲೂರು, ಬಯಲನಾಡು, ಉಚ್ಚಂಗಿ, ಬಂಕಾಪುರ, ಗೋವ ಈ ಪ್ರಾಂತಗಳಲ್ಲಿ ಮಾತ್ರ ಕದಂಬರು ಸಣ್ಣಪುಟ್ಟ ರಾಜರಂತೆ 14 ನೆಯ ಶತಮಾನದವರೆಗೆ ಉಳಿದುಕೊಂಡರು. ಹೀಗೆ ಪ್ರಾಚೀನ ಕದಂಬ ಕುಲವು ಕವಲುಗಳಾಗಿ ಒಡೆದುಹೋಯಿತು.

ಕದಂಬರು ಕಲೆಗೆ ಉತ್ತೇಜನವನ್ನು ಕೊಟ್ಟರೆಂದು ಹಿಂದೆ ತಿಳಿಸಿದೆ. ಅನೇಕ ದೇವಸ್ಥಾನಗಳು ಕದಂಬ ಅರಸರ ಆಳಿಕೆಯಲ್ಲಿ ಕಟ್ಟಲ್ಪಟ್ಟುವು. ವಾಸ್ತುಶಿಲ್ಪದಲ್ಲಿ ಪಲ್ಲವರು, ಚೋಳರು, ಚಾಲುಕ್ಯರು, ಹೊಯಿಸಳರಂತೆಯೇ ಕಟ್ಟಡ ಕಟ್ಟುವುದರಲ್ಲಿ ತಮ್ಮದೇ ಒಂದು ಸ್ವಂತ ನೂತನ ರೀತಿಯನ್ನು ಕದಂಬರು ಬಳಕೆಗೆ ತಂದರೆಂದು ಅನೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಹಲಸಿಯಲ್ಲಿ ಕದಂಬರ ಕಾಲದ

ತೀರ ಹಳೆಯ ಕಟ್ಟಡಗಳಿವೆ. ತಾಲಗುಂದದ ಪ್ರಣವೇಶ್ವರ ದೇವಸ್ಥಾನವು ಅತಿ ಪುರಾತನವಾದ ಕದಂಬ ಕಟ್ಟಡ. ಶಿಲ್ಪಿ ಕೆಲಸದಲ್ಲೂ ಕದಂಬರಿಗೆ ಹೆಚ್ಚು ಆಸಕ್ತಿ ಇದ್ದಂತೆ ಕಾಣುತ್ತದೆ. ಕದಂಬಕಾಲದ ವಿಗ್ರಹಗಳು ಸೊರಬ ತಾಲ್ಲೂಕಿನ ಜಂಬೆ ಹಳ್ಳಿಯಲ್ಲೂ, ಹಾನಗಲ್ಲು, ಹಲಸಿ ಮೊದಲಾದ ಸ್ಥಳಗಳಲ್ಲಿಯೂ ಸಿಕ್ಕಿವೆ. ಹಲಸಿಯ ಲಕ್ಷ್ಮೀನಾರಾಯಣ ವಿಗ್ರಹವು ಅದರ ಗಾಂಭೀರ್ಯಕ್ಕೂ ಸೊಬಗಿಗೂ, ಲಕ್ಷಣಕ್ಕೂ ಹೆಸರುವಾಸಿಯಾಗಿದೆ. ಜಂಬೆ ಹಳ್ಳಿಯ ದುರ್ಗಿಯ ವಿಗ್ರಹವು ಕಾಂತಿಯಿಂದ ಕೂಡಿದೆ.

ಕದಂಬ ಕಾಕುತ್ಸವರ್ಮನ ಕಾಲದಲ್ಲಿ ಬಳಕೆಯಲ್ಲಿದ್ದ ಕನ್ನಡ ಭಾಷೆಯ ಪರಿಚಯುವು ನಮಗೆ ಹಲ್ಮಿಡಿಯ ಕನ್ನಡ ಶಾಸನದಿಂದ ಆಗಿದೆ. ಈ ಶಾಸನವು ಪೂರ್ವ ಹಳಗನ್ನಡ ಭಾಷೆಯಲ್ಲಿದೆ. (ಇದೇ ಕನ್ನಡದಲ್ಲಿನ ಅತ್ಯಂತ ಪ್ರಾಚೀನ ಶಾಸನ.) ಈ ಶಾಸನದಿಂದ ನಮಗೆ ಆಗಿನ ಕನ್ನಡ ಭಾಷೆಯ ಚರಿತ್ರೆಯ ತಿಳಿವು ಸ್ವಲ್ಪ ಮಟ್ಟಿಗೆ ಉಂಟಾಗುತ್ತದೆ. ಇದರಿಂದ ಕ್ರಿ. ಶ. 5 ನೆಯ ಶತಮಾನದ ಮಧ್ಯದಲ್ಲಿ ಇದ್ದ ಕನ್ನಡ ಭಾಷೆಯ ಸ್ಥಿತಿಯು ಗೊತ್ತಾಗುತ್ತದೆ. ಈ ಕನ್ನಡದಲ್ಲಿ ಹೆಚ್ಚಾಗಿ ಸಂಸ್ಕೃತ ಪದಗಳು ಉಪಯೋಗಿಸಲ್ಪಡುತ್ತಿದ್ದುವು. ಮತ್ತು ಸಂಸ್ಕೃತವು ಕನ್ನಡ ಭಾಷೆಯ ಮೇಲೆ ತನ್ನ ಪ್ರಭಾವವನ್ನು ಅಷ್ಟು ಹಿಂದಿನ ಕಾಲದಲ್ಲಿಯೇ (ಅಂದರೆ ಕ್ರಿ.ಶ. 5 ನೆಯ ಶತಮಾನದ ಮಧ್ಯದಲ್ಲಿ) ಬೀರಿತು ಎಂಬ ವಿಷಯವು ಚರಿತ್ರೆಗೆ ಬಹಳ ಮುಖ್ಯವಿಷಯವಾಗಿದೆ.

ಕದಂಬರ ಚಿನ್ನದ ನಾಣ್ಯಗಳಿಗೆ ಪದ್ಮಟಂಕಗಳೆಂದು ಹೆಸರು. ಕಮಲ ಅಥವಾ ಪದ್ಮವು ಈ ನಾಣ್ಯಗಳ ಕೇಂದ್ರಭಾಗವನ್ನು ಆವರಿಸಿರುವುದರಿಂದ ಈ ಹೆಸರು ಕದಂಬರ ನಾಣ್ಯಕ್ಕೆ ಬಂದಿದೆ. ಗೋವೆಯ ಕದಂಬರ ನಾಣ್ಯಗಳ ಮೇಲೆ ಸಿಂಹದ ಆಕೃತಿಯಿದೆ. ಚಾಲುಕ್ಯರೂ ವಿಜಯನಗರದ ರಾಜರೂ ಕದಂಬರ ನಾಣ್ಯಗಳ ಮೇಲಿನ ಚಿಹ್ನೆ, ಅವುಗಳ ಆಕಾರ ಮುಂತಾದುವನ್ನು ತಮ್ಮ ನಾಣ್ಯಗಳಲ್ಲಿ ಉಪಯೋಗಿಸಿಕೊಂಡರು. ಹೀಗೆ ಕದಂಬರ ಕಾಲವು ರಾಜಕೀಯ ಯಶಸ್ಸಿಗೂ ಸಂಸ್ಕೃತಿಯ ಪ್ರತಿಭೆಗೂ ತವರುಮನೆಯಾಗಿತ್ತು.

ಎಂ. ಶೇಷಾದ್ರಿ,

# ಸಾರಜನಕದ ಸ್ಥಿರೀಕರಣ

**(Fixation of Nitrogen)**

ಜೀವೋತ್ಪತ್ತಿಯಾಗಿ ಅಭಿವೃದ್ಧಿಹೊಂದಿದ ವಾತಾವರಣದಲ್ಲಿನ ಒಂದು ಮುಖ್ಯ ಮೂಲಧಾತು ಸಾರಜನಕ. ಅಥವಾ, ಆದಿಯಲ್ಲಿ ಸಾರಜನಕವೇ ಇತರ ಕೆಲವು ಮೂಲಧಾತುಗಳೊಂದಿಗೆ ಸೇರಿ ಜೀವಕೋಶದ ಉತ್ಪತ್ತಿಗೆ ಕಾರಣವಾಯಿತು ಎಂದು ಹೇಳಿದರೂ ಹೇಳಬಹುದು. ಹೀಗೆ ಹುಟ್ಟಿದ ಜೀವಕೋಶವು ಸಾಧಾರಣ ವಾದದ್ದೇ ಆದರೂ ಬೆಳೆವಣಿಗೆ ಪುನರಾವರ್ತನ ಮತ್ತು ವಿಕಾಸಗಳನ್ನು ಹೊಂದುವ ಚೈತನ್ಯವುಳ್ಳದ್ದಾಗಿದ್ದಿತು. ಜೀವವು ಹೇಗೇ ಹುಟ್ಟಿರಲಿ ನಮಗೆ ಈಗ ತಿಳಿದಿರುವ ಮಟ್ಟಿಗೆ ಜೀವದ ಅಸ್ತಿತ್ವಕ್ಕೆ ಸಂಬಂಧಪಟ್ಟ ರಾಸಾಯನಿಕಕ್ರಿಯೆಗಳೆಲ್ಲ ಸಾರಜನಕಕ್ಕೆ ಸಂಬಂಧಪಟ್ಟುವೇ ಆಗಿವೆ. ಒಂದಲ್ಲ ಒಂದು ವಿಧದಲ್ಲಿ ಸಾರಜನಕವು ಜೀವಕೋಟಿಗೆ ಒದಗದೆ ಹೋದರೆ ಅದು ಉಳಿಯಲಾರದು.

ಸಾರಜನಕವು ಪ್ರಾಣಿವರ್ಗದ ಅಸ್ತಿತ್ವವೊಂದರ ದೃಷ್ಟಿಯಿಂದಲೇ ಆವಶ್ಯಕ ವಾದ ವಸ್ತುವಲ್ಲ. ಅದರ ನಾಶಕ್ಕೂ ಅದು ಸಹಕಾರಿ. ಆಧುನಿಕ ಯುದ್ಧದಲ್ಲಿ ಉಪಯೋಗಿಸುವ ಮದ್ದುಗುಂಡುಗಳಲ್ಲೆಲ್ಲ ಸಾರಜನಕ ಒಂದು ಮುಖ್ಯ ಪಾತ್ರ ವಹಿಸಿಯೇ ಇರುತ್ತದೆ. ಒಂದು ದೇಶ ಯುದ್ಧಕ್ಕಿಳಿಯಬೇಕಾದರೆ ಅದಕ್ಕೆ ಸಾರಜನಕ ಪದಾರ್ಥಗಳ ಸರಪರಾಜು ಯಥೇಚ್ಛವಾಗಿರಲೇ ಬೇಕು.

ಸಾರಜನಕವು ಈ ಸೃಷ್ಟಿ, ಲಯಗಳಲ್ಲಿ ಮುಖ್ಯಪಾತ್ರ ವಹಿಸಿರುವುದೊಂದು ಮಾತ್ರವೇ ಅಲ್ಲ. ಸ್ಥಿತಿಯಲ್ಲಿನ ಅದರ ಪಾತ್ರವೂ ಅಷ್ಟೇ ಮುಖ್ಯವಾದದ್ದಾಗಿದೆ. ನಾಗರಿಕ ಜೀವನದ ಆವಶ್ಯಕತೆಗಳನೇಕವನ್ನು ಸಾರಜನಕವು ಒದಗಿಸಿದೆ. ಅನೇಕ ಬಣ್ಣಗಳು, ಕೃತಕನೀಲಿ, ಔಷಧಿಗಳು, ಸುಗಂಧದ್ರವ್ಯಗಳು, ಇತ್ಯಾದಿ ವಸ್ತುಗಳಲ್ಲಿ ಸಾರಜನಕವು ಒಂದು ಮುಖ್ಯಪದಾರ್ಥವಾಗಿದೆ. ಗಾಜಿನ ತಯಾರಿಕೆಯಲ್ಲಿ, ಉಕ್ಕಿಗೆ ಹದಕೊಡುವುದರಲ್ಲಿ, ದ್ರವರಹಿತವಾದ ವಿದ್ಯುಚ್ಛಕ್ತಿಯ ಬ್ಯಾಟರಿಗಳನ್ನು ತಯಾರಿಸು ವುದರಲ್ಲಿ, ಕೃತಕವಾದ ಹಿಮದ ಗಡ್ಡೆಯನ್ನು ತಯಾರಿಸುವುದರಲ್ಲಿ ಸಾರಜನಕದ ಉಪಯೋಗವಿದೆ.

ಸಸ್ಯಗಳಲ್ಲಿ ಸಾರಜನಕವಿದ್ದೇ ಇರಬೇಕಾದ್ದರಿಂದ ಭೂಮಿಯಲ್ಲಿಯೂ ಇದು ಇರಬೇಕು. ಆದುದರಿಂದ ವ್ಯವಸಾಯ ಮಾಡುತ್ತಿರುವ ಭೂಮಿಗೆ ಬೇಕಾಗುವ

ಗೊಬ್ಬರಗಳಲ್ಲಿ ಇದು ಬಹು ಮುಖ್ಯವಾದುದು. ಸಾರಜನಕ ಜನ್ಯ ವಸ್ತುಗಳು ಗೊಬ್ಬರದ ಕೈಗಾರಿಕೆಯಲ್ಲಿ ಮುಖ್ಯವಾಗಿ ಗಮನಿಸಲ್ಪಡುತ್ತವೆ.

ವಾಯುಮಂಡಲದಲ್ಲಿ ಮುಕ್ಕಾಲುಭಾಗ ಸಾರಜನಕವಿದೆ. ಒಟ್ಟು ವಾಯುಮಂಡಲದಲ್ಲಿ ಸುಮಾರು ೩,೨೦೦ ಕೋಟಿ ಕೋಟಿಮಣಗಳಷ್ಟು ಸಾರಜನಕವಿದೆಯೆಂದು ಅಂದಾಜುಮಾಡಲ್ಪಟ್ಟಿದೆ. ಎಂದರೆ ಭೂಮಂಡಲದ ಮೇಲಿನ ಪ್ರತಿ ಎಕರೆಗೂ ೨೩ಲಕ್ಷ ೬೦ಸಾವಿರ ಮಣಗಳಷ್ಟು ಸಾರಜನಕವಿದ್ದಂತಾಯಿತು. ಭೂಮಂಡಲದಲ್ಲಿ ಮುಕ್ಕಾಲುಪಾಲು ನೀರೇ ಇರುವುದರಿಂದ ಪ್ರತಿ ಎಕರೆ ಭೂಮಿಗೂ ೧ಕೋಟಿ ೧೮ಲಕ್ಷ ೪೦ಸಾವಿರ ಮಣಗಳಷ್ಟು ಸಾರಜನಕವಿದ್ದಂತಾಯಿತು. ಎಂದರೆ ಈ ಮೂಲಧಾತುವು ಪ್ರಪಂಚದಲ್ಲಿ ಯಥೇಚ್ಛವಾಗಿದೆಯೆಂದು ಅರ್ಥವಾಗುತ್ತದೆ. ಇದಕ್ಕೆ ಎಂದೆಂದಿಗೂ ಅಭಾವವುಂಟಾಗಲಾರದು. ಆದರೆ ಇಲ್ಲಿ ಒಂದು ಮುಖ್ಯಾಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ವಾಯುಮಂಡಲದಲ್ಲಿರುವ ಸಾರಜನಕವೆಲ್ಲ 'ಸ್ವತಂತ್ರ' ಸಾರಜನಕ. ಎಂದರೆ ಇತರ ಮೂಲಧಾತುಗಳೊಂದಿಗೆ ಸೇರದೆ ಇರುವ ಮೂಲಧಾತುರೂಪದ ಸಾರಜನಕ. ಅಲ್ಲದೆ ಇದು ಇತರ ಮೂಲಧಾತುಗಳೊಡನೆ ಸೇರುವುದೂ ಸ್ವಲ್ಪ ಕಷ್ಟವೇ. ಆದರೆ ಪ್ರಾಣಿಗಳ ಮತ್ತು ಸಸ್ಯಗಳ ಜೀವಾಧಾರಕ್ಕೂ ಕೈಗಾರಿಕೆಗಳಿಗೂ ಉಪಯೋಗಕ್ಕೆ ಬರಬೇಕಾದರೆ ಅದು ಇತರ ಧಾತುಗಳೊಂದಿಗೆ ಸಂಯುಕ್ತವಾಗಿರಬೇಕು. ಉದಾಹರಣೆಗೆ ಜಲಜನಕದೊಂದಿಗೆ ಸೇರಿ ಅಮೋನಿಯಾ ಆಗುವುದು. ಜಲಜನಕ ಆಮ್ಲಜನಕಗಳೊಂದಿಗೆ ಸೇರಿ ಸಾರಜನಕಾಮ್ಲವಾಗುವುದು. ಹೀಗೆ ಸಂಯೋಗಹೊಂದುವ ಕಾರ್ಯಕ್ಕೆ ಸ್ಥಿರೀಕರಣವೆಂದು ಹೆಸರು. ಆದ್ದರಿಂದ ಸಾರಜನಕದ ಸರಪರಾಜಿನ ಮುಖ್ಯ ಸಮಸ್ಯೆ ಅದರ ಅಭಾವವಲ್ಲ. ಅದರ 'ಸ್ಥಿರೀಕರಣ.' ಈ ಬಗೆಯ ಸಂಯೋಜನ ಕಾರ್ಯವು ಪ್ರಕೃತಿಯಲ್ಲಿ ಸದಾ ನಡೆಯುತ್ತಲೇ ಇರುತ್ತದೆ. ಭೂಮಿಯಲ್ಲಿರುವ ಸಾರಜನಕ ಸಂಬಂಧ ವಸ್ತುಗಳು ಕಲ್ಲಿದ್ದಲಿನಲ್ಲಿರುವ ಸಾರಜನಕ, ಅಲ್ಲಲ್ಲಿ ಸಿಕ್ಕುವ ನೈಟ್ರೇಟ್ ಎಂಬ ಸಾರಜನಕ ಸಂಬಂಧ ಲವಣಗಳು ಎಲ್ಲಾ ಈ ಸ್ವಾಭಾವಿಕ ವಿಧಾನಗಳಿಂದಲೇ ಆದುವು. ಈ ಬಗೆಯ ವಿಧಾನಗಳಲ್ಲಿ ಮಾನವನ ಕೈವಾಡವೇನೂ ಇರುವುದಿಲ್ಲ. ಆದುದರಿಂದ ವಾಯುಮಂಡಲದ ಸಾರಜನಕವನ್ನು 'ಸ್ಥಿರೀಕರಿಸು'ವುದು ಬಹಳ ದಿವಸಗಳಿಂದ ಮಾನವನ ಮಹತ್ವಾಕಾಂಕ್ಷೆಯಾಗಿದ್ದಿತು. ಲಾಭದಾಯಕವಾದ ರೀತಿಯಲ್ಲಿ ಸಾರಜನಕವನ್ನು 'ಸ್ಥಿರೀಕರಿಸುವ' ಉದ್ಯಮದಲ್ಲಿ ಈಗ ಯಶಸ್ಸುದೊರತಿದೆ. ಯಾವ ಕಾಲಕ್ಕಾದರೂ ಸ್ವಾಭಾವಿಕ ವಿಧಾನಗಳೇ ನೆಲಕ್ಕೆ ಸಾರಜನಕವನ್ನೊದಗಿಸುವುದರಲ್ಲಿ ಮುಖ್ಯವಾದುವುಗಳಾದರೂ ಈಗ ಆ ಸ್ವಾಭಾವಿಕ ಸರಪರಾಜಿಗೆ

ಕೃತಕ ವಿಧಾನಗಳಿಂದ ಒತ್ತಾಸೆ ಕೊಡಬಹುದು. ಕೈಗಾರಿಕೆಗಳಿಗೆ, ಭೂಮಿಯಲ್ಲಿ ಸಿಗುವ ನೈಟ್ರೇಟ್ ಮೊದಲಾದ ವಸ್ತುಗಳನ್ನು ಪಯೋಗಿಸುವುದೇ, ಅಥವಾ ಕೃತಕ ಮಾರ್ಗಗಳಿಂದ ತಯಾರಿಸಿದ ಸಾರಜನಕ ಸಂಬಂಧ ಪದಾರ್ಥಗಳನ್ನು ಪಯೋಗಿಸುವುದೇ ಎಂಬಂಶವು ಆಯಾ ವಸ್ತುಗಳ ಬೆಲೆಯ ಮೇಲೆ ನಿರ್ಧರವಾಗುತ್ತದೆ. ಸ್ವಾಭಾವಿಕ ಸಾರಜನಕ ಖನಿಜಗಳಿಲ್ಲದಿರುವ ದೇಶಗಳು ಯುದ್ಧಕಾಲದಲ್ಲಿಯಾದರೂ ಕೃತಕವಿಧಾನಗಳಿಂದ ತಮ್ಮ ಸಾರಜನಕದ ಆವಶ್ಯಕತೆಯನ್ನು ಪೂರ್ತಿಗೊಳಿಸಬೇಕಾಗುತ್ತದೆ. ಹೀಗೆ ಯುದ್ಧಕಾಲದಲ್ಲಿ ಸ್ಥಾಪಿತವಾದ ಕಾರ್ಖಾನೆಗಳೂ ಶಾಂತಿ ಕಾಲದಲ್ಲಿಯೂ ಸಾರಜನಕ ಪದಾರ್ಥಗಳನ್ನು ಒದಗಿಸುತ್ತವೆ.

೧೯೩೦ನೆಯ ಇಸವಿಯಲ್ಲಿ, ಜರ್ಮನಿಯಲ್ಲಿ, ಎಂಟೂವರೆಕೋಟಿ ಮಣ, ಫ್ರಾನ್ಸಿನಲಿ ಎರಡೂಕಾಲುಕೋಟಿ ಮಣ, ಅಮೇರಿಕಾ ಸಂಯುಕ್ತಸಂಸ್ಥಾನಗಳಲ್ಲಿ, ಮೂರು ಕೋಟಿ ಮಣ, ಜಪಾನಿನಲ್ಲಿ ಒಂದೂಕಾಲುಕೋಟಿ ಮಣ, ಕೃತಕ ಸಾರಜನಕ ರಸಾಯನ ವಸ್ತುಗಳು ತಯಾರಾಗುತ್ತಿದ್ದುವು. ಹಿಂದಿನ ಯುದ್ಧದಲ್ಲಿ ಅಮೇರಿಕಾ ದೇಶದ ಚಿಲಿ ಪ್ರಾಂತದಿಂದ ಬರುತ್ತಿದ್ದ ಸಾರಜನಕ ಲವಣಗಳು ಜರ್ಮನಿಗೆ, ಬರದೆ ಹೋಗಿ, ಯುದ್ಧ ಮುಗಿಯುವ ಹೊತ್ತಿಗೆ ಜರ್ಮನಿ ತನಗೆ ಬೇಕಾದ ಸಾರಜನಕವನ್ನೆಲ್ಲ ಕೃತಕಮಾರ್ಗಗಳಿಂದಲೇ ಒದಗಿಸಿಕೊಳ್ಳುತ್ತಿತ್ತು. ಅಲ್ಲಿಂದೀಚೆಗೆ — ಅದು ಈ ವಸ್ತುಗಳಿಗಾಗಿ ಪರರ ಹಂಗಿಗೆ ಸಿಕ್ಕಿಲ್ಲದಿರುವುದರಿಂದಲೇ — ಧೈರ್ಯವಾಗಿ ಈಗಿನ ಯುದ್ಧಕ್ಕಿಳಿಯಿತೆನ್ನಬಹುದು.

**ಸ್ವಾಭಾವಿಕ ವಿಧಾನಗಳು.** ಮಳೆಯ ನೀರಿನಲ್ಲಿ ಮತ್ತು ಮಂಜಿನಲ್ಲಿ ಸಾರಜನಕವು ಸ್ವಲ್ಪ ಪ್ರಮಾಣದಲ್ಲಿ ತನ್ನ ಸ್ಥಿರರೂಪದಲ್ಲಿರುತ್ತದೆ. ಇದರಲ್ಲಿ ಬಹುಭಾಗ ಭೂಮಿಯಲ್ಲಿನ ರಾಸಾಯನಿಕ ಕ್ರಿಯೆಗಳಿಂದ ಹೊರಬಿಡಲ್ಪಟ್ಟ ಸಾರಜನಕವೇ ಆಗಿರುತ್ತದೆ. ಮಿಂಚಿನಲ್ಲಿ ವಿದ್ಯುಚ್ಛಕ್ತಿಯ ಪ್ರವಾಹದಿಂದ ಸ್ವಲ್ಪ ಸಾರಜನಕ ಆಮ್ಲಜನಕದೊಂದಿಗೆ ಸಂಯೋಗ ಹೊಂದಿ ಮಳೆಯೊಂದಿಗೆ ಭೂಮಿಗಿಳಿಯುತ್ತದೆ. ಈ ತೆರನಾಗಿ ಭೂಮಿಗಿಳಿಯುವ ಸ್ಥಿರಸಾರಜನಕದಿಂದ, ಅದು ಭೂಮಿಯಿಂದಲೇ ಹೊರಟಿರಲಿ ಇಲ್ಲ ವಾಯುಮಂಡಲದಲ್ಲಿಯೇ ಉತ್ಪತ್ತಿಯಾಗಿರಲಿ, ಭೂಮಿಗೆ ಪ್ರಯೋಜನವುಂಟೇ ಉಂಟು. ವರ್ಷಕ್ಕೆ ಎಕರೆಗೆ ಸುಮಾರು ಹತ್ತು ಸೇರಿನಷ್ಟು ಸಾರಜನಕ ಈ ರೀತಿಯಲ್ಲಿ ಭೂಮಿಗಿಳಿಯುತ್ತದೆ. ಆದರೆ ಉಳಿದ ವಿಧಾನಗಳೊಡನೆ ಹೋಲಿಸಿದರೆ ಇದು ಅಲ್ಪವೇ ಸರಿ.

**ಅಣುಜೀವಿಗಳು—ಜೀವಾಣುಗಳು.** ಸಾರಜನಕವು ಎಲ್ಲ ಪ್ರಾಣಿಗಳ ಮತ್ತು ಸಸ್ಯಗಳಲ್ಲಿರುವ ಮುಖ್ಯ ಪದಾರ್ಥವಾದರೂ ಮೇಲ್ತರಗತಿಯ ಸಸ್ಯ ಮತ್ತು

ಪ್ರಾಣಿಗಳಿಗೆ ಇದನ್ನು ನೇರವಾಗಿ ವಾಯುಮಂಡಲದಿಂದ ತೆಗೆದುಕೊಳ್ಳುವ ಶಕ್ತಿಯಿರುವುದಿಲ್ಲ. ನೆಲದಲ್ಲಿಯೂ ಮೇಲ್ಮಟ್ಟದ ನೀರಿನಲ್ಲಿಯೂ ಕೆಲವು ಅಣುಜೀವಿಗಳು (Bacteria) ಮತ್ತು ಜೀವಾಣುಗಳು (Micro-organisms) ಇರುತ್ತವೆ. ಇವು ತಮ್ಮ ಜೀವಪರಿವರ್ತನದಲ್ಲಿ ವಾಯುವಿನಿಂದ ಸಾರಜನಕವನ್ನು ತೆಗೆದುಕೊಂಡು ಅದನ್ನು ರಾಸಾಯನಿಕ ಕ್ರಿಯೆಗಳಿಂದ ಸ್ಥಿರೀಕರಿಸುತ್ತವೆ. ಈ ಅಣುಜೀವಿಗಳಲ್ಲಿ ಅನೇಕ ಜಾತಿಗಳಿವೆ. ಒಂದು ಜಾತಿಯದು ನೆಲದಲ್ಲಿ ಇತರ ಅಣುಜೀವಿಗಳಂತೆ ಸ್ವತಂತ್ರವಾಗಿ ಜೀವಿಸಬಲ್ಲುದು. ನೆಲದಲ್ಲಿ ಸಾಕಷ್ಟು ಸಾರಜನಕ ಸಂಬಂಧ ವಸ್ತುಗಳು ಸಿಗದೆ ಹೋದರೆ ವಾಯುವಿನಿಂದ ಸಾರಜನಕವನ್ನು ತೆಗೆದುಕೊಂಡು ಅದನ್ನು ಸ್ಥಿರೀಕರಿಸಿ Proteins ಎಂಬ ಪದಾರ್ಥವನ್ನು ಬೆಳೆಯಿಸಲು ಉಪಯೋಗಿಸಿಕೊಳ್ಳುತ್ತದೆ. ಇನ್ನೊಂದು ಜಾತಿಯದು ಇದರಂತೆಯೇ ಸ್ವತಂತ್ರವಾಗಿ ಜೀವಿಸಬಲ್ಲುದಾದರೂ ಸ್ವತಂತ್ರವಾಗಿ ಸಾರಜನಕವನ್ನು ಪಯೋಗಿಸಿಕೊಳ್ಳುವ ಶಕ್ತಿ ಅದಕ್ಕಿರುವುದಿಲ್ಲ. ಆದರೆ ಇದು ಮೇಲ್ಜಾತಿಯ ಸಸ್ಯಗಳ ದೇಹವನ್ನು ಸೇರಿ ಪರಸ್ಪರ ಸಹಕಾರದಿಂದ ಸಾರಜನಕವನ್ನು ಸ್ಥಿರಗೊಳಿಸಬಲ್ಲುದು. ಮೊದಲನೆಯ ಪಂಗಡದಲ್ಲಿ Azotobacter ಎಂಬುದು ಮುಖ್ಯವಾದುದು. ಎರಡನೆಯ ಪಂಗಡದಲ್ಲಿ Rhigobia ಎಂಬುದು ಮುಖ್ಯವಾದುದು.

ಕೆಲವು ದ್ವಿದಳಧಾನ್ಯಗಳ ಜಾತಿಗೆ ಸೇರಿದ ಸಸ್ಯಗಳಿಗೆ ಈ ರೀತಿಯ ಸ್ಥಿರೀಕರಣ ಶಕ್ತಿಯಿದೆ. ಮೇಲೆ ಹೇಳಿದ ಎರಡನೆಯ ಜಾತಿಯ ಜೀವಾಣುಗಳು ಇವುಗಳ ಬೇರನ್ನು ಕಡಿದು ಗ್ರಂಥಿಗಳನ್ನುಂಟುಮಾಡುತ್ತವೆ. ಅಲ್ಲಿಂದ ಅವು ಬೇರುಗಳನ್ನು ಪ್ರವೇಶಿಸಿ ಕೋಶದಿಂದ ಕೋಶಕ್ಕೆ ವ್ಯಾಪಿಸಿಕೊಳ್ಳುತ್ತವೆ. ಆಗ ಆ ಸಸ್ಯಗಳು ಈ ಜೀವಾಣುಗಳ ಸಹಾಯದಿಂದ ಸಾರಜನಕವನ್ನು ಸ್ಥಿರೀಕರಿಸುತ್ತವೆ. ಕೆಲವು ಸಸ್ಯಗಳಿಗೆ ತಮ್ಮದೇ ಆದ ಜೀವಾಣುಗಳ ಗುಂಪು ಇದೆ.

ಇವಲ್ಲದೆ ಪಾಚಿಯ ಜಾತಿಗೆ ಸೇರಿದ ಕೆಲವು ಸೂಕ್ಷ್ಮಸಸ್ಯಗಳೂ ಈ ಶಕ್ತಿಯನ್ನು ಪಡೆದಿವೆ. ಇಲ್ಲಿಯೂ ಸ್ವತಂತ್ರಜೀವಿಗಳೂ ಪರಾಶ್ರಯ ಜೀವಿಗಳೂ ಇವೆ.

ಕೆಲವು ಹಸುರು ಗಿಡಗಳೂ ಸಾರಜನಕವನ್ನು ನೇರವಾಗಿ ಉಪಯೋಗಿಸಿಕೊಳ್ಳುವುವು.

ಈ ರೀತಿಯಲ್ಲಿ ಸ್ವಾಭಾವಿಕವಿಧಾನಗಳಿಂದ ಕೋಟ್ಯಂತರ ಮಣಗಳ ಸಾರಜನಕವು ಸ್ಥಿರೀಕರಿಸಲ್ಪಡುತ್ತದೆ. ದ್ವಿದಳಧಾನ್ಯಗಳ ಗುಂಪಿನ ಸಸ್ಯಗಳಿಂದ ವರ್ಷಕ್ಕೆ ಪ್ರತಿ ಎಕರೆಗೂ ಸುಮಾರು ಏಳು ಮಣಗಳಷ್ಟು ಸಾರಜನಕವು ದೊರೆಯುವುದೆಂದು ಹೇಳಲಾಗಿದೆ.

**ಪ್ರಕೃತಿಯಲ್ಲಿ ದೊರೆಯುವ ಉಪ್ಪುಗಳು.** ಹಿಂದೂದೇಶವು ಮೊದಲಿನಿಂದಲೂ ಪೊಟ್ಯಾಸ್ಸಿಯಂ ನೈಟ್ರೇಟ್ ಎಂಬ ಸಾರಜನಕ ಸಂಬಂಧ ಲವಣಕ್ಕೆ ಪ್ರಸಿದ್ಧಿ ಪಡೆದಿದೆ. ಒಂದಾನೊಂದು ಕಾಲದಲ್ಲಿ ಪ್ರಪಂಚಕ್ಕೆಲ್ಲ ಇಲ್ಲಿಂದಲೇ ಇದು ಒದಗಿಸಲ್ಪಡುತ್ತಿತ್ತು. ಇದು ನೆಲದಲ್ಲಿ ದೊರೆಯುವುದೂ ಜೀವಾಣುಗಳ ಸಹಾಯದಿಂದಲೇ. ಈ ಜೀವಾಣುಗಳ ಸಹಾಯದಿಂದ ಸ್ಥಿರೀಕರಿಸಲ್ಪಟ್ಟ ಸಾರಜನಕವು ಪೊಟ್ಯಾಸ್ಸಿಯಂ ನೈಟ್ರೇಟ್ ಆಗಿ ರೂಪಾಂತರಹೊಂದಿ, ನೆಲದ ಅಂತರ್ಜಲದಿಂದ ಕರಗಿಸಲ್ಪಟ್ಟು ಭೂಮಿಯ ಮೇಲಕ್ಕೆ ಬರುತ್ತದೆ. ಅಲ್ಲಿ ಸೂರ್ಯನ ಶಾಖದಿಂದ ನೀರೆಲ್ಲ ಆವಿಯಾಗಿ ಹೊರಟುಹೋಗಲಾಗಿ ಬರಿಯ ಉಪ್ಪು ಉಳಿದುಕೊಳ್ಳುತ್ತದೆ. ಇದು ಮಣ್ಣಿನ ಜೊತೆಗೆ ಬೆರೆತಿರುವುದರಿಂದ ಇದನ್ನು ಪುನಃ ನೀರಿನಲ್ಲಿ ಕರಗಿಸಿ, ಶೋಧಿಸಿ, ಉಪ್ಪುಕರಗಿದ ನೀರನ್ನು ಕಾಯಿಸಿದರೆ ನೀರು ಆವಿಯಾಗಿ ಉಪ್ಪು ಉಳಿಯುತ್ತದೆ. ಸಾರಜನಕ ಪದಾರ್ಥಗಳು ಉಪಯೋಗಕ್ಕೆ ಬರುವ ಕೈಗಾರಿಕೆಗಳಲ್ಲೆಲ್ಲ ಮೊದಲು ಇದೇ ಉಪಯೋಗಿಸಲ್ಪಡುತ್ತಿತ್ತು. ಈಚೆಗೆ ಚಿಲಿ ದೇಶದಲ್ಲಿ ಸೋಡಿಯಂ ನೈಟ್ರೇಟ್ ಯಥೇಚ್ಛವಾಗಿ ಸಿಕ್ಕಿರುವುದರಿಂದ ಇದರ ಪ್ರಾಶಸ್ತ್ಯ ಕಡಿಮೆಯಾಗಿರುವುದಾದರೂ, ಇದರಲ್ಲಿ ಪೊಟ್ಯಾಸ್ಸಿಯಂ ಎಂಬ ಇನ್ನೊಂದು ಮುಖ್ಯ ಮೂಲಧಾತುವಿರುವುದರಿಂದ ಇನ್ನೂ ಇದರ ಉಪಯೋಗ ತಗ್ಗಿಲ್ಲ.

**ಚಿಲಿದೇಶದ ನೈಟ್ರೇಟ್.** ದಕ್ಷಿಣ ಅಮೇರಿಕಾದ ಚಿಲಿ ದೇಶದಲ್ಲಿ ಅಪಾರವಾದ ಉಪ್ಪಿನ ರಾಶಿಯ ಶೇಖರವಿದೆ. ಈ ಖನಿಜವು ಈಗ ಒಂದು ನೂರು ವರ್ಷಗಳ ಹಿಂದೆ ಕಂಡುಹಿಡಿಯಲ್ಪಟ್ಟಿತು. ಇಲ್ಲಿ ಇದುವರೆಗೆ ಶೋಧನೆ ನಡಸಿರುವ ಸ್ಥಳಗಳಲ್ಲಿಯೇ ಸುಮಾರು ೧೪೧ ಕೋಟಿ ಮಣಗಳಷ್ಟು ನೈಟ್ರೇಟ್ ಇದೆಯೆಂದು ಊಹಿಸಲ್ಪಟ್ಟಿದೆ. ಇನ್ನೂ ಪರಿಶೋಧನೆ ನಡಸದಿರುವ ಸ್ಥಳಗಳೆಷ್ಟೋ ಇವೆ. ಈ ಶೇಖರಣೆಯಿಂದ ಇನ್ನೂ ಒಂದು ಶತಮಾನಕಾಲ ಪ್ರಪಂಚಕ್ಕೆ ಸಾರಜನಕವಸ್ತುಗಳನ್ನು ಒದಗಿಸಬಹುದು. ಇದನ್ನು ಭೂಮಿಯಿಂದ ಅಗೆದು ಶುದ್ಧಿಮಾಡಿ ತಯಾರಿಸಲು ಅನೇಕ ಕಾರ್ಖಾನೆಗಳಿವೆ. ನೆಲದಿಂದ ತೆಗೆದ ಅದರನ್ನು ಪುಡಿಮಾಡಿ ನೀರಿನಲ್ಲಿ ಕರಗಿಸಿ, ಶೋಧಿಸಿ, ಉಳಿದ ಲವಣಗಳಿಂದ ಪ್ರತ್ಯೇಕಗೊಳಿಸಿ ವ್ಯಾಪಾರಕ್ಕೆ ಸಿದ್ಧಗೊಳಿಸುವರು. ಈಗೀಗ ಕೃತಕ ಸಾರಜನಕವಸ್ತುಗಳು ಇದರೊಂದಿಗೆ ಸ್ಪರ್ಧೆ ನಡಸುತ್ತಿವೆ.

**ಕಲ್ಲಿದ್ದಲಲ್ಲಿರುವ ಸಾರಜನಕ.** ಒಂದಾನೊಂದು ಕಾಲದಲ್ಲಿ ನೆಲದೊಳಗೆ ಹೂತುಹೋದ ಮರಗಳು ಕಲ್ಲಿದ್ದಲಾಗಿ ಮಾರ್ಪಾಟು ಹೊಂದಿವೆಯೆಂದು ವೈಜ್ಞಾನಿಕರ

ಮತ. ಅದೇ ಕಾರಣದಿಂದ ಕಲ್ಲಿದ್ದಲೊಳಗೆ ಸಾರಜನಕವಿದೆ. ಕಲ್ಲಿದ್ದಲನ್ನು ಸುಡುವಾಗ ಇದು ಬಿಡುಗಡೆ ಹೊಂದುತ್ತದೆ. ಹೀಗೆ ಬಿಡುಗಡೆ ಹೊಂದಿದ ಸಾರಜನಕದಲ್ಲಿ ಅಮೋನಿಯ ರೂಪದಲ್ಲಿರುವ ಸಾರಜನಕವನ್ನು ಗಂಧಕಾಮ್ಲದಲ್ಲಿ ಕರಗಿಸಿ ಅಮೋನಿಯಂ ಸಲ್ಫೇಟ್ ಎಂಬ ಉಪ್ಪನ್ನು ಮಾಡುತ್ತಾರೆ. ಈ ರೀತಿಯಾಗಿ ಅಮೋನಿಯಂ ಸಲ್ಫೇಟ್ ತಯಾರಿಕೆಯು ಒಂದು ಉಪಕೈಗಾರಿಕೆ ಮಾತ್ರವಾಗಿರುವುದರಿಂದ ತಯಾರಿಸಲ್ಪಟ್ಟ ವಸ್ತುವಿನ ಪ್ರಮಾಣವು ಮುಖ್ಯ ಕೈಗಾರಿಕೆಯ ಪ್ರಮಾಣವನ್ನವಲಂಬಿಸಿರುತ್ತದೆ.

**ಕೃತಕ ವಿಧಾನಗಳು.** ಕೃತಕ ವಿಧಾನಗಳಲ್ಲಿ ಮುಖ್ಯವಾದುವು ಮೂರು: (೧) ಆರ್ಕ್ ವಿಧಾನ, (೨) ಅಮೋನಿಯಾ ವಿಧಾನ, (೩) ಸೈಯನಮೈಡ್ ವಿಧಾನ.

**ಆರ್ಕ್ ವಿಧಾನ.** ಬಹಳ ಶಕ್ತಿಯುತವಾದ ವಿದ್ಯುಚ್ಛಕ್ತಿಯು ಪ್ರವಹಿಸುವ ದಾರಿಯಲ್ಲಿ ಸ್ವಲ್ಪ ತುಂಡಾದರೆ ಅಲ್ಲಿ ವಿದ್ಯುಚ್ಛಕ್ತಿಯು ಬಳ್ಳಿಯಂತೆ ಹರಿಯುತ್ತದೆ. ಆ ಬಳ್ಳಿ ಹರಿಯುವಾಗ ಅದರ ಮೇಲೆ ಗಾಳಿಯನ್ನು ಹಾಯಿಸಿದರೆ ಗಾಳಿಯಲ್ಲಿನ ಸ್ವಲ್ಪಭಾಗ ಸಾರಜನಕ ಅಲ್ಲಿಯೇ ಇರುವ ಆಮ್ಲಜನಕದೊಡನೆ ಸಂಯೋಜಿತವಾಗುತ್ತದೆ. ಹೀಗೆ ಬಂದ ಸಂಯುಕ್ತವಸ್ತುವನ್ನು ಇನ್ನೂ ಸ್ವಲ್ಪ ಆಮ್ಲಜನಕದೊಂದಿಗೆ ಸೇರುವಂತೆ ಮಾಡಿ ನೀರಿನಲ್ಲಿ ಹೀರಿದರೆ ಆಗ ಸಾರಜನಕಾಮ್ಲ ದೊರೆಯುತ್ತದೆ. ಇದನ್ನು ನೇರವಾಗಿಯೇ ಆಗಲಿ, ಸುಣ್ಣದೊಡನೆ ಸೇರಿಸಿ ಕ್ಯಾಲ್ಸಿಯಂ ನೈಟ್ರೇಟ್ ಎಂಬ ರೂಪದಲ್ಲಿಯೇ ಆಗಲಿ ಉಪಯೋಗಿಸಬಹುದು. ಒಂದನೆಯದಾಗಿ ಈ ವಿಧಾನಕ್ಕೆ ವಿದ್ಯುಚ್ಛಕ್ತಿ ಸುಲಭವಾಗಿ ದೊರೆಯಬೇಕು. ಆದರೆ ಹೀಗೆ ವಿದ್ಯುಚ್ಛಕ್ತಿ ಸುಲಭವಾಗಿ ದೊರೆಯುವ ಸ್ಥಳಗಳಲ್ಲಿ ಸಹ ಇದರ ಬದಲಾಗಿ ಅಮೋನಿಯಾ ವಿಧಾನವನ್ನೇ ಅನುಸರಿಸುತ್ತಾರೆ. ಏಕೆಂದರೆ ಆ ವಿಧಾನ ಇದಕ್ಕಿಂತ ಸುಲಭ. ಆದ್ದರಿಂದ ಈ ವಿಧಾನ ಈಗ ಎಲ್ಲ ಕಡೆಗಳಲ್ಲೂ ಹಿಂದೆ ಬೀಳುತ್ತಿದೆ.

**ಅಮೋನಿಯಾ ವಿಧಾನ.** ಒಂದು ಭಾಗ ಸಾರಜನಕವೂ, ಮೂರು ಭಾಗ ಜಲಜನಕವೂ ಸೇರಿದರೆ ಎರಡು ಭಾಗ ಅಮೋನಿಯಾ ಆಗುತ್ತದೆ. ನವಾಸಾಗರವು ಅಮೋನಿಯಾವನ್ನೊಳಗೊಂಡ ಒಂದು ಪದಾರ್ಥ. ನವಾಸಾಗರದ ಜೊತೆಗೆ ಸೋಡಾ ಹಾಕಿ ತಿಕ್ಕಿದರೆ ಈ ಅಮೋನಿಯಾ ಗಾಳಿಯು ಬರುತ್ತದೆ. ನಗಡಿಯಾದರೆ ಆಸ್ಪತ್ರೆಯಲ್ಲಿ ಮೂಸುವುದಕ್ಕೆ ಕೊಡುವ ಪದಾರ್ಥದಲ್ಲಿ ಅಮೋನಿಯಾ ಇರುತ್ತದೆ. ಈ ಅಮೋನಿಯಾವನ್ನು ವಾಯುವಿನೊಂದಿಗೆ ಸೇರಿಸಿ ಕಾದ ಪ್ಲಾಟಿನಂ ತಂತಿಗಳ ಮೇಲೆ ಹಾಯಿಸಿದರೆ ಸಾರಜನಕ ಆಮ್ಲಜನಕಗಳು ಸೇರಿರುವ ಗಾಳಿಯು ಬರುತ್ತದೆ. ಈ ವಿಧಾನದಿಂದ ಈ ಗಾಳಿಯನ್ನು ತಯಾರಿಸಿ ಅದನ್ನು ನೀರಿನಲ್ಲಿ ಕರಗಿಸಿ ಸಾರಜನಕಾಮ್ಲ ಮಾಡುವ ವಿಧಾನವು ವಿಶೇಷವಾಗಿ ಆಚರಣೆಯಲ್ಲಿದೆ.

ಈ ಸಾರಜನಕವೂ ಜಲಜನಕವೂ ಸಾಮಾನ್ಯ ಸಂದರ್ಭಗಳಲ್ಲಿ ಒಂದರೊಡನೊಂದು ಸೇರುವುದಿಲ್ಲ. ಹೆಚ್ಚಿನ ಒತ್ತಡವನ್ನು ಉಪಯೋಗಿಸಿದರೆ ಮತ್ತು ಅನುಗುಣವಾದ ಶಾಖವು ಇದ್ದರೆ ಇವು ಸೇರುತ್ತವೆ. ಹೀಗೆ ಇವು ಸೇರುವ ವೇಗವನ್ನು ಹೆಚ್ಚಿಸಲು 'ಕೆಟಲಿಸ್ಟ್' ಎಂಬ ಮಧ್ಯವರ್ತಿ ಪದಾರ್ಥವನ್ನು ಉಪಯೋಗಿಸಬೇಕು. ಈ 'ಕೆಟಲಿಸ್ಟ್' ಅನ್ನು ಕೃತಯುಗದ ಮಧ್ಯಸ್ಥಗಾರನಿಗೆ ಹೋಲಿಸಬಹುದು. ಇದು ತಾನು ಏನನ್ನೂ ಪಡೆಯುವುದೂ ಇಲ್ಲ, ಕಳೆದುಕೊಳ್ಳುವುದೂ ಇಲ್ಲ. ಆದರೆ ಎರಡು ಪದಾರ್ಥಗಳ ಪರಸ್ಪರ ಸಂಯೋಜನವನ್ನು ಕುದುರಿಸುತ್ತದೆ, ಅಷ್ಟೇ. ಅಮೋನಿಯಾ ಸಂಯೋಜನ ಕಾರ್ಯದಲ್ಲಿ ಕಬ್ಬಿಣದ ಪುಡಿಯನ್ನು 'ಕೆಟಲಿಸ್ಟ್' ಆಗಿ ಉಪಯೋಗಿಸುತ್ತಾರೆ.

ಈ ವಿಧಾನಕ್ಕೆ ಆವಶ್ಯಕವಾದ ಜಲಜನಕವನ್ನು ಉತ್ಪತ್ತಿಮಾಡಲು ಅನೇಕ ವಿಧಾನಗಳು ಸೂಚಿಸಲ್ಪಟ್ಟಿವೆ. ಮುಖ್ಯವಾದುವು ಮೂರು ವಿಧಾನಗಳು: (೧) ನೀರ್ಗಾಳಿಯ ವಿಧಾನ, (೨) ಕಲ್ಲಿದ್ದಲ ಒಲೆಯ ಗಾಳಿಯ ವಿಧಾನ, (೩) ವಿದ್ಯುಚ್ಛಕ್ತಿಯ ವಿಧಾನ.

**ನೀರ್ಗಾಳಿಯ ವಿಧಾನ.** (Watergas Method). ನೀರಿನ ಹಬೆಯನ್ನು ಕೆಂಪಗೆ ಕಾದ ಇಂಗಾಲದ ಮೇಲೆ ಕಾಯಿಸಿದರೆ ಇಂಗಾಲಾಮ್ಲವೂ ಜಲಜನಕವೂ ಉತ್ಪತ್ತಿಯಾಗುತ್ತವೆ. ಇದಕ್ಕೂ 'ಕೆಟಲಿಸ್ಟ್' ಬೇಕು. ಈ ಇಂಗಾಲಾಮ್ಲವು ಹೆಚ್ಚಿನ ಒತ್ತಡದ ಉಪಯೋಗದಿಂದ ನೀರಿನಲ್ಲಿ ಕರಗುತ್ತದೆ. ಇದಕ್ಕೆ ಸಾಮಾನ್ಯವಾಗಿ ಗಾಳಿಯ ಒತ್ತಡದ ಇಪ್ಪತ್ತೈದರಷ್ಟು ಒತ್ತಡವನ್ನು ಉಪಯೋಗಿಸುವರು. ಈ ಇಂಗಾಲಾಮ್ಲವನ್ನು ಸೋಡಾದ ತಯಾರಿಕೆಗೂ, ಯೂರಿಯ ಎಂಬ ಇನ್ನೊಂದು ಮುಖ್ಯವಸ್ತುವಿನ ತಯಾರಿಕೆಗೂ ಉಪಯೋಗಿಸಿಕೊಳ್ಳುತ್ತಾರೆ. ಈ ವಿಧಾನದಲ್ಲಿ ಬಹಳ ಸೂಕ್ಷ್ಮಶುದ್ಧೀಕರಣ ವಿಧಾನಗಳನ್ನು ಅನುಸರಿಸಬೇಕು.


**ಕಲ್ಲಿದ್ದಲ ಒಲೆಯ ಗಾಳಿಯ ವಿಧಾನ.** ಕಲ್ಲಿದ್ದಲ ಒಲೆಯ ಗಾಳಿಯಲ್ಲಿ ಸಾಮಾನ್ಯ ಅರ್ಧದಷ್ಟು ಜಲಜನಕವೂ ಆರನೆಯ ಒಂದು ಭಾಗದಷ್ಟು ಸಾರಜನಕವೂ ಇತರ ಗಾಳಿಗಳೂ ಇರುತ್ತವೆ. ಈ ಮಿಶ್ರಗಾಳಿಯನ್ನು ಶುದ್ಧಿಮಾಡಲು ಅದನ್ನು ತಣಿಸುವ ವಿಧಾನವನ್ನು ಉಪಯೋಗಿಸುವರು. ಒಂದೊಂದು ಬಗೆಯ ಗಾಳಿಯು ಬೇರೆ ಬೇರೆ ಉಷ್ಣಾಂಶದಲ್ಲಿ ದ್ರವರೂಪಕ್ಕೆ ಬರುತ್ತವೆ. ಈ ರೀತಿ ದ್ರವರೂಪಕ್ಕೆ ಅದನ್ನು ಪರಿವರ್ತಿಸಿ ಬೇಕಾದ ಉಷ್ಣಾಂಶದಲ್ಲಿ ಗಾಳಿಯಾಗಿ ಪರಿವರ್ತಿಸಿದರೆ ಒಂದೊಂದನ್ನೂ ಬೇರೆಯಾಗಿ ಪ್ರತ್ಯೇಕಗೊಳಿಸಬಹುದು. ಗಾಳಿಯನ್ನು ದ್ರವರೂಪಕ್ಕೆ ತರಬೇಕಾದರೆ ಹಿಮದಗಡ್ಡೆಯ ಶೈತ್ಯಕ್ಕಿಂತ ಹೆಚ್ಚು ಶೈತ್ಯವನ್ನು ಪಯೋಗಿಸಬೇಕು.

ಈ ಶೈತ್ಯವನ್ನು ಉತ್ಪತ್ತಿಮಾಡಲು ಜೂಲ್-ಥಾಂಪ್ಸನ್ ಪರಿಣಾಮ ಎಂಬ ಮಾರ್ಗವನ್ನು ಉಪಯೋಗಿಸಬೇಕು.

ಈ ಪರಿಣಾಮದಂತೆ ಒಂದು ಗಾಳಿಯನ್ನು ಹೆಚ್ಚಾಗಿ ಸಂಕೋಚನಗೊಳಿಸಿ, ವಿಕಾಸಗೊಳಿಸಿದರೆ ಆಗ ಶೈತ್ಯವುತ್ಪತ್ತಿಯಾಗುವುದು. ಈ ಪರಿಣಾಮದ ಸಹಾಯದಿಂದ ಗಾಳಿಗಳು ದ್ರವರೂಪಕ್ಕೆ ಬರುವವರೆಗೂ ಶೈತ್ಯವನ್ನೇರ್ಪಡಿಸಬಹುದು. ಒಂದೊಂದು ದ್ರವವೂ ಬೇರೆ ಬೇರೆ ಉಷ್ಣಾಂಶದಲ್ಲಿ ಕುದಿದು ಗಾಳಿಯಾಗಿ ರೂಪಾಂತರ ಹೊಂದುತ್ತದೆ. ಅದು ಹಾಗೆ ರೂಪಾಂತರ ಹೊಂದುತ್ತಿರುವಾಗ ಬೇರೆ ಗಾಳಿಗಳು ರೂಪಾಂತರ ಹೊಂದಿ ಇದರೊಂದಿಗೆ ಬೆರೆಯುವುದಿಲ್ಲ. ಈ ಪರಿಣಾಮವನ್ನು ಉಪಯೋಗಿಸುವುದರ ಮೂಲಕ ಕಲ್ಲಿದ್ದಲ ಗಾಳಿಯಲ್ಲಿ ಸಾರಜನಕ ಮತ್ತು ಜಲಜನಕದ ವಿನಾ ಉಳಿದ ಗಾಳಿಗಳನ್ನೆಲ್ಲ ಬೇರ್ಪಡಿಸಿ ಉಪಯೋಗಿಸುತ್ತಾರೆ.

**ವಿದ್ಯುಚ್ಛಕ್ತಿಯ ವಿಧಾನ.** ನೀರು ಆಮ್ಲಜನಕ ಮತ್ತು ಜಲಜನಕ ಸೇರಿ ಆದ ವಸ್ತು ನೀರಿನಲ್ಲಿ ವಿದ್ಯುಚ್ಛಕ್ತಿಯು ಪ್ರವಹಿಸಿದರೆ ನೀರು ಒಡೆದು ಜಲಜನಕವೂ ಆಮ್ಲಜನಕವೂ ಬೇರೆಬೇರೆಯಾಗುತ್ತವೆ. ಆದರೆ ಶುದ್ಧ ನೀರಿನಲ್ಲಿ ವಿದ್ಯುಚ್ಛಕ್ತಿ ಪ್ರವಹಿಸುವುದಿಲ್ಲ. ಆದ್ದರಿಂದ ನೀರಿನಲ್ಲಿ ಕಾಸ್ಟಿಕ್ ಸೋಡಾ ಎಂಬ ಕ್ಷಾರವನ್ನು ಶೇಕಡ ಸುಮಾರು ೨೦ ರ ಪ್ರಮಾಣದಲ್ಲಿ ಕರಗಿಸುತ್ತಾರೆ. ಇದನ್ನು ದೊಡ್ಡ ದೊಡ್ಡ ಕಬ್ಬಿಣದ ತೊಟ್ಟಿಗಳಲ್ಲಿ ತುಂಬಿ ಸಾಲಾಗಿಟ್ಟು ಇದರ ಮೂಲಕ ಸುಮಾರು ಹತ್ತುಸಾವಿರ ಆಂಪೀರು ಪ್ರಮಾಣದ (ಮನೆಯ ದೀಪದ ಪ್ರಮಾಣ ಸುಮಾರು ಐದು ಆಂಪೀರುಗಳು) ವಿದ್ಯುಚ್ಛಕ್ತಿಯನ್ನು ಪ್ರವಹಿಸುತ್ತಾರೆ. ಈ ವಿದ್ಯುಚ್ಛಕ್ತಿಯು ನಿಕ್ಕಲ್ ಬಳಿದಿರುವ ಕಬ್ಬಿಣದ ಹಲಗೆಯ ಮೂಲಕ ತೊಟ್ಟಿಗಳನ್ನು ಪ್ರವೇಶಿಸಿ ಕಬ್ಬಿಣದ ಇನ್ನೊಂದು ಹಲಗೆಯ ಮೂಲಕ ನಿರ್ಗಮಿಸುತ್ತದೆ. ನಿಕ್ಕಲ್ ಹಲಗೆಯ ಹತ್ತಿರ ಆಮ್ಲಜನಕವೂ ಕಬ್ಬಿಣದ ಹಲಗೆಯ ಹತ್ತಿರ ಜಲಜನಕವೂ ಉತ್ಪತ್ತಿಯಾಗುತ್ತವೆ. ಇವು ಒಂದರೊಡನೊಂದು ಬೆರೆದರೆ ಸಿಡಿತವುಂಟಾಗುತ್ತದೆ. ಅವು ಬೆರೆಯದಂತೆ ಎರಡು ಹಲಗೆಗಳ ನಡುವೆ ಕಲ್ನಾರಿನಿಂದ ನೇದ ಬಟ್ಟೆಯನ್ನು ಕಟ್ಟಿರುತ್ತಾರೆ. ಹೀಗೆ ಉತ್ಪತ್ತಿಯಾದ ಜಲಜನಕವನ್ನು ಕಬ್ಬಿಣದ ಕೊಳವೆಗಳ ಮೂಲಕ ಸಾಗಿಸುತ್ತಾರೆ. ಈ ವಿಧಾನವನ್ನು ಅನುಸರಿಸಬೇಕಾದರೆ ವಿದ್ಯುಚ್ಛಕ್ತಿ ಸುಲಭದರದಲ್ಲಿ ದೊರೆಯುವಂತಿರಬೇಕು. ಜಲಪಾತಗಳು ವಿಶೇಷವಾಗಿರುವ ದೇಶಗಳಲ್ಲಿ ಈ ವಿಧಾನದಿಂದಲೇ ಹೆಚ್ಚಾಗಿ ಜಲಜನಕವು ತಯಾರಿಸಲ್ಪಡುತ್ತದೆ.

**ಸಾರಜನಕದ ತಯಾರಿಕೆ.** ಗಾಳಿಯಲ್ಲಿ ಮುಕ್ಕಾಲುಭಾಗ ಸಾರಜನಕವೂ ಕಾಲುಭಾಗ ಆಮ್ಲಜನಕವೂ ಇರುವುದರಿಂದ ಸಾರಜನಕ ಬೇಕಾದರೆ ಆಮ್ಲಜನಕವನ್ನು





ಚಿತ್ರ ೧. ವಿದ್ಯುಚ್ಛಕ್ತಿಯಿಂದ ಜಲಜನಕದ ಉತ್ಪತ್ತಿ (ಪು. ೭೨)

A. ನಿಕ್ಕಲ್ ಬಳಿದ ಕಬ್ಬಿಣದ ಹಲಗೆ.

B. ಕಬ್ಬಿಣದ ಹಲಗೆ.

C. ಕಲ್ನಾರಿನ ಬಟ್ಟೆ.




A. ಜಲಜನಕ—ಆಮ್ಲಜನಕಗಳ ಉರಿ

B. ಮಿಶ್ರಗಾಳಿಯನ್ನು ಸಂಕೋಚಗೊಳಿಸುವ ಕಂಪ್ರೆಸರ್.

C. ಮಿಶ್ರಗಾಳಿಯು ಅಮೋನಿಯಾ ಆಗಿ ಪರಿವರ್ತಿಸುವ ಕನ್ವರ್ಟರ್.

D. ನೀರಿನಿಂದ ಅಮೋನಿಯಾ ಮಿಶ್ರಗಾಳಿಯನ್ನು ತಣಿಸುವ ಕೂಲರ್.

E. ಅಮೋನಿಯಾವನ್ನು ಮಿಶ್ರಗಾಳಿಯಿಂದ ಪ್ರತ್ಯೇಕಿಸುವ ಸೆಪರೇಟರ್.

F. ಪರಿವರ್ತನೆ ಹೊಂದದಿರುವ ಮಿಶ್ರಗಾಳಿಯನ್ನು ಪುನಃ ಕನ್ವರ್ಟರಿಗೆ ಕಳಿಸುವ ಸರ್ಕ್ಯುಲೇಟರ್.

ಚಿತ್ರ ೨. ಅಮೋನಿಯಾ ವಿಧಾನದಿಂದ ಸಾರಜನಕದ ಸ್ಥಿರೀಕರಣ (ಪು. ೭೧)

ಬೇರ್ಪಡಿಸಬೇಕು. ಒಂದು ವಿಧಾನದಲ್ಲಿ ವಾಯುವನ್ನು ತಣಿಸಿ ದ್ರವರೂಪಕ್ಕೆ ತಂದು ಬೇರೆಬೇರೆ ಉಷ್ಣಾಂಶದಲ್ಲಿ ಗಾಳಿಯಾಗಿ ರೂಪಾಂತರ ಹೊಂದಿಸುವುದರಿಂದ ಸಾರಜನಕವನ್ನು ಆಮ್ಲಜನಕದಿಂದ ಬೇರ್ಪಡಿಸುವರು.

ಇನ್ನೊಂದು ವಿಧಾನದಲ್ಲಿ ಜಲಜನಕವನ್ನು ವಾಯುವಿನಲ್ಲಿ ಉರಿಸುವರು. ಹೀಗೆ ಉರಿಸಿದರೆ ಜಲಜನಕ ಆಮ್ಲಜನಕದೊಂದಿಗೆ ಸೇರಿ ನೀರಾಗುವುದು. ಹೆಚ್ಚು ಜಲಜನಕವನ್ನು ಉಪಯೋಗಿಸಿ ಆಮ್ಲಜನಕವನ್ನು ಬೇರ್ಪಡಿಸಿದ ಮೇಲೆ ಬರುವ ಗಾಳಿಯಲ್ಲಿ ಸಾರಜನಕ ಜಲಜನಕಗಳು ಸರಿಯಾದ ಪ್ರಮಾಣದಲ್ಲಿರುವಂತೆ ಮಾಡಬಹುದು.

ಕಲ್ಲಿದ್ದಲ ಒಲೆಯ ಗಾಳಿಯಲ್ಲಿಯೂ ಈ ಪ್ರಮಾಣವನ್ನು ಸರಿಯಾದ ರೀತಿಯಲ್ಲಿ ಹೊಂದಿಸಬಹುದು. ಹೀಗೆ ಬರುವ ಮಿಶ್ರಗಾಳಿಯಲ್ಲಿ ಮೂರುಭಾಗ ಜಲಜನಕವೂ ಒಂದುಭಾಗ ಸಾರಜನಕವೂ ಇರುತ್ತದೆ. ಮೊದಲು ಈ ಮಿಶ್ರಗಾಳಿಯು ವಾಯುಮಂಡಲದ ಒತ್ತಡದ ಮುನ್ನೂರರಷ್ಟು ಒತ್ತಡದಿಂದ ಸಂಕೋಚಗೊಳಿಸಲ್ಪಡುವುದು. ಈ ಸಂಕುಚಿತ ಗಾಳಿಯು ಕಾದ ಕಬ್ಬಿಣದ ಪುಡಿಯ ಮಧ್ಯೆ ಹಾದುಹೋಗುವುದು. ಈ ಪುಡಿಯ ಉಷ್ಣಾಂಶ ಸುಮಾರು ೫೦೦ ಡಿಗ್ರಿಗಳಷ್ಟಿರುವುದು (ನೀರು ೧೦೦ ಡಿಗ್ರಿ ಉಷ್ಣಾಂಶದಲ್ಲಿ ಕುದಿಯುತ್ತದೆ). ಆಗ ಮಿಶ್ರಗಾಳಿಯ ಕಾಲುಭಾಗ ಅಮೋನಿಯಾ ಆಗಿ ಪರಿವರ್ತಿಸುವುದು. ಈ ಆಮೋನಿಯಾ ಕೂಡಿದ ಗಾಳಿಯನ್ನು ತಣಿಸಿದರೆ ಅಮೋನಿಯಾ ಬೇರ್ಪಡುವುದು. ಉಳಿದ ಮಿಶ್ರಗಾಳಿಯು ಪುನಃ ಇನ್ನೂ ಸ್ವಲ್ಪ ಸಂಕುಚಿತ ಮಿಶ್ರಗಾಳಿಯೊಂದಿಗೆ ಕಬ್ಬಿಣದ ಪುಡಿಯುಮೂಲಕ ಹಾಯಿಸಲ್ಪಡುವುದು. ಇಲ್ಲಿ ಕಬ್ಬಿಣದ ಪುಡಿ 'ಕೆಟಲಿಸ್ಟ್' ಆಗುವುದು. ಜಲಜನಕ ಸಾರಜನಕದೊಂದಿಗೆ ಸೇರುವುದರ ವೇಗವನ್ನು ಇದು ಹೆಚ್ಚಿಸುತ್ತದೆ. ಹೀಗೆ ಬಂದ ಆಮೋನಿಯಾವನ್ನು ಸಾರಜನಕಾಮ್ಲದ ತಯಾರಿಕೆಗೋ ಆಮೋನಿಯಂ ಸಲ್ಫೇಟ್ ಎಂಬ ಗೊಬ್ಬರದ ತಯಾರಿಕೆಗೋ ಇಲ್ಲ ಶೈತ್ಯೋತ್ಪಾದಕಯಂತ್ರಗಳ ಉಪಯೋಗಕ್ಕೋ ಉಪಯೋಗಿಸುವರು.

**ಸೈಯನಮೈಡ್ ವಿಧಾನ.** ಸೈಕಲ್ ಲ್ಯಾಂಪುಗಳಿಗೆ ಕ್ಯಾಲ್ಸಿಯಂ ಕಾರ್ಬೈಡ್ ಎಂಬ ಒಂದು ಪದಾರ್ಥವನ್ನುಪಯೋಗಿಸುತ್ತಿದ್ದರು. ಇದರಮೇಲೆ ನೀರು ಹನಿತರೆ ಅಸಿಟಲೀನ್ ಎಂಬ ಗಾಳಿಯು ಉತ್ಪತ್ತಿಯಾಗುತ್ತಿತ್ತು. ಇದು ದೀಪದಂತೆ ಹತ್ತಿಕೊಂಡು ಉರಿಯುತ್ತಿತ್ತು. ಕಾದ ಈ ಕ್ಯಾಲ್ಸಿಯಂ ಕಾರ್ಬೈಡ್ ಮೇಲೆ ಸಾರಜನಕವನ್ನು ಹಾಯಿಸಿದರೆ ಅದು ಸಾರಜನಕವನ್ನು ಹೀರಿಕೊಂಡು ಕ್ಯಾಲ್ಷಿಯಂ ಸೈಯನಮೈಡ್ ಎಂಬ ವಸ್ತುವು ಉತ್ಪತ್ತಿಯಾಗುತ್ತದೆ. ಈ ಕ್ಯಾಲ್ಸಿಯಂ ಸೈಯನಮೈಡಿನಿಂದ ಯೂರಿಯಾ ಎಂಬ ವಸ್ತುವನ್ನೋ ಅಮೋನಿಯವನ್ನೋ ತಯಾರಿಸಲು ಬರುತ್ತದೆ.

**ವ್ಯವಸಾಯದಲ್ಲಿ ಸಾರಜನಕದ ಉಪಯೋಗ.** ಒಂದುದೇಶದ ಜನಸಂಖ್ಯೆ ಹೆಚ್ಚಿದಷ್ಟೂ ಆಹಾರಪದಾರ್ಥಗಳನ್ನು ಹೆಚ್ಚಾಗಿ ಬೆಳೆಯಬೇಕಾಗುತ್ತದೆ. ಹೆಚ್ಚುಹೆಚ್ಚು ಆಹಾರವಸ್ತುಗಳನ್ನು ಬೆಳೆದಂತೆಲ್ಲ ಭೂಮಿಯು ತನ್ನಲ್ಲಿರುವ ಸಾರಜನಕವನ್ನು ಹೆಚ್ಚುಹೆಚ್ಚು ಕಳೆದುಕೊಳ್ಳುತ್ತದೆ. ಆ ಕಳೆದುಕೊಂಡ ಸಾರಜನಕವನ್ನು ಸ್ವಾಭಾವಿಕ ವಿಧಾನಗಳು ಭರ್ತಿಮಾಡಲಾರವು. ಆಗ ಕೃತಕ ಗೊಬ್ಬರಗಳನ್ನು ಉಪಯೋಗಿಸಬೇಕಾಗುತ್ತದೆ.

ಭೂಮಿಗೆ ಹಾಕುವ ಹಿಂಡಿ ಮೊದಲಾದ ಪದಾರ್ಥಗಳಲ್ಲಿ ಸಾರಜನಕವಿರುತ್ತದೆ. ಈಚೆಗೆ ಈ ಪದಾರ್ಥಗಳು ದನಕರುಗಳ ಆಹಾರವಾಗಿ ಉಪಯೋಗಿಸಲ್ಪಡುತ್ತಿರುವುದರಿಂದ ಇವು ವ್ಯವಸಾಯಕ್ಕೆ ದೊರೆಯುತ್ತಿಲ್ಲ.

ನಮ್ಮ ದೇಶದಲ್ಲಿ ಕೃತಕ ಗೊಬ್ಬರಗಳ ಉಪಯೋಗ ಈಗೀಗ ಪ್ರಾರಂಭವಾಗಿದೆ. ನಮ್ಮದು ವ್ಯವಸಾಯ ಪ್ರಧಾನದೇಶವಾದರೂ ನಮ್ಮ ಬೆಳೆಯು ಬೆಳೆಯುತ್ತಿರುವ ಜನಸಂಖ್ಯೆಗೆ ಯಥೇಷ್ಟವಾಗಿ ಆಹಾರಪದಾರ್ಥಗಳನ್ನೊದಗಿಸಲಾರದು.

ನಮ್ಮ ನಾಡಿನ ಸ್ಥಿತಿಗತಿಗಳು ಸುಧಾರಿಸಿ, ಜನತೆಯ ಜೀವನಮಟ್ಟವು ಮೇಲೇರಿದಾಗ ನಮಗೆ ಇನ್ನೂ ಹೆಚ್ಚಾಗಿ ಆಹಾರಪದಾರ್ಥಗಳು ಆವಶ್ಯಕವಾಗುತ್ತವೆ. ಭೂಮಿಯು ಬಹುಕಾಲದ ವರೆಗೆ ಬೆಳೆಯನ್ನು ಬೆಳೆಯುತ್ತಾ ಹೋಗಲಾರದು. ಈ ಕಾರಣಗಳಿಂದ ಕೃತಕ ಗೊಬ್ಬರಗಳ ಭವಿಷ್ಯವು ಬಹಳ ಆಶಾದಾಯಕವಾಗಿದೆ. ಕೃತಕ ಗೊಬ್ಬರಗಳಲ್ಲಿ ಮುಖ್ಯವಾದುವು ಸಾರಜನಕ ಸಂಬಂಧ ವಸ್ತುಗಳು. ಕೃತಕ ಗೊಬ್ಬರಗಳನ್ನು ಉಪಯೋಗಿಸುವುದರಿಂದ ಶ್ರಮಕ್ಕೆ ಪ್ರತಿಫಲ ವಿಶೇಷವಾಗಿ ದೊರೆಯುತ್ತವೆ.

ಹಿಂದೂದೇಶದಲ್ಲೆಲ್ಲ ಮೊದಲನೆಯ ಕೃತಕ ಗೊಬ್ಬರಗಳ ತಯಾರಿಕೆಯ ಅತ್ಯಾಧುನಿಕ ಕಾರ್ಖಾನೆಯು ಈಗ ಮೂರು ವರ್ಷಗಳಿಂದ ಮೈಸೂರು ದೇಶದಲ್ಲಿ ಯಶಸ್ವಿಯಾಗಿ ನಮ್ಮ ಜನರ ಬುದ್ಧಿಬಲದಿಂದಲೇ ಕೆಲಸಮಾಡುತ್ತಿರುವುದು ಕನ್ನಡ ಜನರ ಹೆಮ್ಮೆಯ ವಿಷಯ.

ಎಚ್. ಅನಂತಭಟ್ಟ

# ಹೊಸ ರಸಾಯನಶಾಸ್ತ್ರ

(ಚಿತ್ರಭಾನು—ಕಾಮನ ಸಂಚಿಕೆಯಲ್ಲಿ ಪ್ರಕಟವಾದ ಲೇಖನದ ಕೊನೆಯ ಭಾಗ)

### ಕೆಲವು ಪರಿವರ್ತನೆಗಳು

ಪ್ರಬಲ ಒತ್ತಡದ ಸಲಕರಣೆಗಳ ಮೂಲಕ ಹೆಚ್ಚಿನ ಶಕ್ತಿಯ ಕಣಗಳನ್ನು ಸಿಡಿಯಿಸಬಹುದು. ತಗುಲಾಟಕ್ಕಾಗಿ ಸಾಮಾನ್ಯವಾಗಿ ಧನವಿದ್ಯುತ್ಕಣ ಮತ್ತು ಡ್ಯೂಟರಾನ್ ಉಪಯೋಗಿಸುವರು. ಡ್ಯೂಟರಾನ್ ಕಣದಲ್ಲಿ ಒಂದು ಧನಕಣ ಮತ್ತು ಒಂದು ಶೂನ್ಯಕಣವಿರುತ್ತದೆ. ಶೂನ್ಯಕಣದಲ್ಲಿ ವಿದ್ಯುದಂಶವು ಇರುವುದಿಲ್ಲ ವಾದುದರಿಂದ ಪರಮಾಣು ಕೇಂದ್ರವನ್ನು ನೇರವಾಗಿ ತಗುಲಿ ಭೇದಿಸಬಹುದು. ಶೂನ್ಯಕಣದ ಜೊತೆಯಲ್ಲಿ ಧನಕಣವು ಸೇರಿರುವುದರಿಂದ ಪರಮಾಣುವಿನ ಹೊರಗಿನ ವೃತ್ತದಲ್ಲಿಯ ಋಣವಿದ್ಯುತ್ಕಣಗಳು ಡ್ಯೂಟರಾನ್ ಕಣವನ್ನು ಸಹಜವಾಗಿ ಆಕರ್ಷಿ ಸುವುವು. ಮುಂದೆ ಋಣಕಣಗಳ ವಿದ್ಯುತ್‌ಕ್ಷೇತ್ರವನ್ನು ಶೂನ್ಯಕಣವು ಯಾವ ಆತಂಕವಿಲ್ಲದೆ ಭೇದಿಸಿ ಒಳನುಗ್ಗುವುದು.

ಕೇಂಬ್ರಿಜ್‌ಅಲ್ಲಿ ದಿವಂಗತ ರದರ್‌ಫೋರ್ಡರ ನೇತೃತ್ವದಲ್ಲಿ ಮತ್ತು ಅಮೇರಿಕೆಯ ಕ್ಯಾಲಿಫೋರ್ನಿಯದಲ್ಲಿ ಲಾರೆನ್ಸರವರ ನೇತೃತ್ವದಲ್ಲಿ ಬೇರೆ ಬೇರೆ ಲೋಹಗಳ ಪರಿ ವರ್ತನೆಯ ಪ್ರಯೋಗಗಳು ನಡೆದವು. ಈ ಪ್ರಯೋಗಗಳಲ್ಲಿ ೩, ೪ ಮತ್ತು ೫ ಪರಮಾಣು ಸಂಖ್ಯೆಯ ಲಿಥಿಯಂ, ಬೆರಿಲಿಯಂ ಮತ್ತು ಬೊರಾನ್ ಲೋಹಗಳನ್ನು ಉಪಯೋಗಿಸಿದಾರೆ. ಈ ಮೂರು ಲೋಹಗಳಿಗೆ ಎರಡೆರಡು ಸಕ್ಷೇತ್ರಗಳಿವೆ. ಏಳು ಸಕ್ಷೇತ್ರದ ಲಿಥಿಯಂ ಪರಮಾಣುವಿನ ಕೇಂದ್ರಕ್ಕೆ ಧನಕಣವು ತಗುಲಿದರೆ ಅರ್ಕಾ ನಿಲದ ಎರಡು ಕೇಂದ್ರಗಳು ಹುಟ್ಟುವುವು.

$$\overset{7}{\underset{3}{Li}} + \overset{1}{\underset{1}{H}} \longrightarrow 2\,\overset{4}{\underset{2}{He}}$$

ಈ ಪ್ರಯೋಗದಿಂದ ಹೊರಬೀಳುವ ಅರ್ಕಾನಿಲದ ಕೇಂದ್ರಗಳನ್ನು ವಿಲ್ಸನ್ ಮೇಘಮಂದಿರದಲ್ಲಿ ಸೇರಿಸಿ ಅವುಗಳ ಪಥದ ಉದ್ದಳತೆಯಿಂದ ಲೆಕ್ಕಾಚಾರ ಮಾಡಿ ದರೆ, ತೂಕದಲ್ಲಿಯ ಬದಲಾವಣೆ ಐನ್‌ಸ್ಟೀನನ ಸಮೀಕರಣ ($E = Mc^2$) ದಂತೆ ಶಕ್ತಿಯ ರೂಪದಲ್ಲಿ ಹೊರಸೂಸುತ್ತದೆ.

ಇದೇ ಕೇಂದ್ರಕ್ರಿಯೆಯಿಂದ ಬೆರಿಲಿಯಂ ಮತ್ತು ಗ್ಯಾಮಾ ಕಿರಣಗಳು ಹುಟ್ಟಿ

ವುವೆಂದು ಕ್ರೆನ್ (Crane) ಮತ್ತು ಲಾರಿಟ್ಸೆನರು (Lauritsen) ಪ್ರತಿಪಾದಿಸಿದ್ದಾರೆ. ಅದನ್ನು ಹೀಗೆ ಬರೆಯಬಹುದು.

$$^{7}_{3}Li + ^{1}_{1}H \longrightarrow ^{8}_{4}Be + \gamma$$

ಡೀ (Dee) ಮತ್ತು ವಾಲ್ಟನ್ (Walton) ರವರು ಲಿಥಿಯಂದ ಇನ್ನೊಂದು ಸಕ್ಷೇತ್ರದ ಮೇಲೆ ಆಗುವ ಪರಿಣಾಮವನ್ನು ಕೆಳಗಿನ ಸಮೀಕರಣದಂತೆ ಎಂದು ತೋರಿಸಿದ್ದಾರೆ.

$$^{6}_{3}Li + ^{1}_{1}H \longrightarrow ^{4}_{2}He + ^{3}_{2}He$$

ಸಮೀಕರಣದಲ್ಲಿಯ $^{3}_{2}He$, ಅಕರ್ಾನಿಲದ ಒಂದು ಹೊಸ ಸಕ್ಷೇತ್ರವಿದೆ. ಅದನ್ನು ಈ ಪ್ರಯೋಗದಿಂದಲೇ ಗುರುತಿಸಲಾಗಿದೆ.

ಬೋರಾನ್ ಮತ್ತು ಧನಕಣದ ತಗುಲುವಿಕೆಯಿಂದ ಮೂರು ಆಲ್ಫಾಕಣಗಳು ಸಿಡಿದು ಬರುವುವು.

$$^{11}_{5}B + ^{1}_{1}H \longrightarrow 3\, ^{4}_{2}He$$

ಮೇಲೆ ಕಾಣಿಸಿದ ಸಮೀಕರಣಗಳಿಂದ ಒಂದು ನಿಯಮವನ್ನು ಕಾಣಬಹುದಾಗಿದೆ. ಸಮೀಕರಣದ ಒಂದು ಭಾಗದ ಲೋಹಗಳ ಮೇಲ್ಸಂಖ್ಯೆಗಳ ಒಟ್ಟು ಇನ್ನೊಂದು ಭಾಗದಲ್ಲಿಯ ಲೋಹಗಳ ಮೇಲ್ಸಂಖ್ಯೆಗಳ ಒಟ್ಟಿಗೆ ಸರಿಯಾಗುವುದು. ಇದೇ ನಿಯಮವು ಕೆಳಸಂಖ್ಯೆಗಳಿಗೂ ಅನ್ವಯಿಸುವುದು.

ಡ್ಯೂಟ್‌ರಾನ್‌ಗಳನ್ನು ತಗುಲಿಸಿದರೆ ಕೇಂದ್ರ ಕ್ರಿಯೆಗಳಲ್ಲಿ ಮಾರ್ಪಾಟಾಗಿ ಬೇರೆ ಪರಮಾಣುಗಳು ಹುಟ್ಟುವುವು. ಭಾರವಾದ ಜಲಜನಕ ಮತ್ತು ಡ್ಯೂಟ್‌ರಾನ್ ತಗಲುವಿಕೆಯನ್ನು ರದರ್‌ಫೊರ್ಡ್, ಹಾರ್ಟೆಕ್ ಮತ್ತು ಆಲಿಫಂಟ್‌ರವರು, ನಿರೀಕ್ಷಿಸಿ ಕೆಳಗಿನ ಸಮೀಕರಣವನ್ನು ತೋರಿಸಿದ್ದಾರೆ.

$$^{2}_{1}H + ^{2}_{1}H \dashrightarrow ^{1}_{1}H + ^{3}_{1}H$$

ಡೀ ಎಂಬ ವೈಜ್ಞಾನಿಕನು, ಮೇಘಮಂದಿರ ಪ್ರಯೋಗದಿಂದ ಮೇಲಿನ ಸಮೀಕರಣವನ್ನು ಸರಿಯಿದೆಂದು ತೋರಿಸಿ ಐನ್‌ಸ್ಟೀನನ ನಿಯಮದ ಪಾಲನೆಯನ್ನು

ಕಂಡುಹಿಡಿದಿದ್ದಾನೆ. ಈ ಕೇಂದ್ರಕ್ರಿಯೆಯಲ್ಲಿ ಜಲಜನಕದ ಇನ್ನೊಂದು ಹೊಸ ಸಕ್ಷೇತ್ರವು ಹೊರಬಿದ್ದಿದೆ.

ಇದೆ ಕೇಂದ್ರಕ್ರಿಯೆ ಬೇರೊಂದು ವಿಧದಿಂದ ನಡೆದರೆ ಅರ್ಕಾನಿಲದ ಒಂದು ಹೊಸ ಸಕ್ಷೇತ್ರವು ಹೊರಬಿದ್ದು, ಒಂದು ಶೂನ್ಯಕಣವು ಸಿಡಿದುಬರುವುದು.

$$ {}^{2}_{1}H + {}^{2}_{1}H \longrightarrow {}^{3}_{2}He + {}^{1}_{0}n $$

ಮೇಲೆ ಕಾಣಿಸಿರುವ ಸಮೀಕರಣಗಳಲ್ಲಿ ಎರಡು ಪರಮಾಣುಗಳ ಕೇಂದ್ರಕ್ರಿಯೆಯಿಂದ ಬೇರೊಂದು ಪರಮಾಣು ಹುಟ್ಟುವುದು. ಮತ್ತು ಕೆಲವೆಡೆಯಲ್ಲಿ ಆಂತರಿಕ ಶಕ್ತಿಯ ಭೇದವು ಗ್ಯಾಮಾಕಿರಣ, ಅಥವಾ ಶೂನ್ಯಕಣವಾಗಿ ಪರಿಣಮಿಸುವುದು.

ಬೇರೆ ಹಲವು ಪರಿವರ್ತನೆಗಳಲ್ಲಿ ತಗುಲುವ ಕಣಗಳು ಹಾಗೆಯೆ ಉಳಿದು, ಅವುಗಳ ಶಕ್ತಿಯ ಕೆಲಭಾಗವು ಕೇಂದ್ರ ವಿಭಜನೆಯಲ್ಲಿ ಉಪಯೋಗವಾಗುವುದು. ಭಾರವಾದ ಜಲಜನಕ ಮತ್ತು ಆಲ್ಫಾಕಣಗಳ ತಗುಲುವಿಕೆಯಿಂದ ಇಂತಃ ವ್ಯತ್ಯಾಸವು ಆಗುವುವು.

$$ {}^{4}_{2}He + {}^{2}_{1}H \longrightarrow {}^{4}_{2}He + {}^{1}_{1}H + {}^{1}_{0}n $$

ಹೊಸ ರಸಾಯನಶಾಸ್ತ್ರದ ಈ ವ್ಯತ್ಯಾಸಗಳಲ್ಲಿ ಐನ್‌ಸ್ಟೀನರ ತೂಕ, ಶಕ್ತಿಯ ನಿಯಮದ ಪಾಲನೆಯಾಗುವದಲ್ಲದೆ ಹೊಸ ಸಕ್ಷೇತ್ರಗಳ ಗುರುತು ಹಿಡಿಯಲಾಗಿದೆ.

## ಕೃತಕಪ್ರಭೆ—(Artificial Radioactivity)

ಹತ್ತು ವರ್ಷಗಳಿಗೆ ಹಿಂದೆ ಸ್ವಯಂಪ್ರಭೆಯು ಕೆಲವೇ ಅತಿ ಭಾರವಾದ ಲೋಹಗಳ ಗುಣವಾಗಿದ್ದಿತು. ರೇಡಿಯಂ ಯುರೇನಿಯಂ ಮತ್ತು ಥೋರಿಯಂ ಮುಂತಾದ ಭಾರವಾದ ಲೋಹಗಳ ವಿಭಜನೆ (Disintegration) ಯಾಗಿ, ಆಲ್ಫಾ, ಅಥವಾ ಋಣಕಣಗಳು ಸಿಡಿದುಬಂದು ಬೇರೆ ಲೋಹಗಳ ಉತ್ಪತ್ತಿಯಾಗುವುದು. ಈ ರೀತಿಯ ಪರಿವರ್ತನೆಯು ಒಂದೇ ಸವನೆ ನಡೆದು ಕೊನೆಗೆ ಪ್ರಭೆಯಿರಲಾರದ ಸೀಸು ಹುಟ್ಟುವುದು. ಈ ಪರಿವರ್ತನೆಯ ಕಾಲವು ಬಹಳ ಹೆಚ್ಚಾಗಿರುತ್ತದೆ. ಒಂದು ಗ್ರಾಮ ಸ್ವಯಂ ಪ್ರಭೆಯುಳ್ಳ ಲೋಹವು ಪರಿವರ್ತನೆಹೊಂದಿ ಅರ್ಧ ಗ್ರಾಮವಾಗಬೇಕಾದರೆ ಒಂದು ಸಾವಿರ ಕೋಟಿ($೧೦^{೧೦}$) ವರ್ಷಗಳ ಅವಧಿಯಾಗಬೇಕು. ಈ ಕಾರಣದಿಂದಲೇ ಇಂಥ ಲೋಹಗಳು ಅಸ್ತಿತ್ವದಲ್ಲಿವೆ. ಸ್ವಯಂಪ್ರಭೆಯ ಲೋಹಗಳ ಪರಿವರ್ತನೆಯ ವಿಧಾನವನ್ನೂ, ವೇಗವನ್ನೂ, ಪ್ರಯೋಗಗಳಿಂದ ಮಾರ್ಪಡಿಸಲು ಬರುವುದಿಲ್ಲ. ಅಂತಹ

ಸುಖಕ್ಕಾಗಿಯೇ ಉಪಯೋಗಿಸಿದರೆ ಲೋಹಪರಿವರ್ತಕರ ಪ್ರಯತ್ನವು ಫಲಕಾರಿಯಾದಂತೆಯೇ ಸರಿ.

ಪದ್ಮನಾಭ ಪುರಾಣಿಕ.

ಅರ್ಧ ಜೀವನಕಾಲ = Half life period.
ಕೃತಕಪ್ರಭೆ = Artificial Radioactivity.
ರಂಜಕ = Phosphorus

## ಪ್ರಮಾಣಗ್ರಂಥಗಳು

1. *The Mechanism of Nature.*—By Andrade.
2. *The New Chemistry.*—By Andrade.
3. *Electron.*—By Millikan.

# ಭಿಕ್ಷೆ

ಕನಲಿ ಬೆದರಿಹೆ ಕೆಟ್ಟ ಕನಸಲಿ
ಯಾವುದೀ ಹೊಸ ಶಿಕ್ಷೆಯು?
ಚಿತ್ತ ಸಿಕ್ಕಿದೆ ಭಯದ ಸುಳಿಯಲಿ
ಏತಕೀ ಕಟು ಶಿಕ್ಷೆಯು?

ವಿರಹ, ನಿಷ್ಫಲ, ಅಳಲ ಭರದಲಿ
ಕಂದಿ ಕುಂದಿದೆ ನನ್ನೆದೆ.
ಕ್ರೋಧ, ಮತ್ಸರ, ಭೇದ ಹಗೆಯಲಿ
ಬದುಕು ಕೊರಗುತ ಕುಗ್ಗಿದೆ.

ಸತ್ಯ ಸಾರವನೆತ್ತಿ ತೋರುವ
ಹಗಲು ಬಹಳ ಕಠೋರವು.
ಇಹದೊಳಿದ್ದೀ ಬಾಳ ಮರಸುವ
ನಿದ್ರೆ ಲೋಕವೆ ವಂದ್ಯವು.

ನಿಶೆ ಸಹೋದರಿ! ನಿದ್ರೆ ದೇವಿಯೆ!
ಸಾಕು, ಕರುಣಿಸು ಪೋಷಿಸು,
ನಿನ್ನ ಬಾಗಿಲ ಹೊಸಲ ಬಳಿಯೇ
ಬಂದು ಕಾದಿಹೆ ರಕ್ಷಿಸು.

ಬಯಕೆ, ಬಳಲಿಕೆ, ಹರಕೆ, ಕೋರಿಕೆ
ಎಲ್ಲ ಸಲ್ಲಲಿ ನಿಲ್ಲಲಿ.
ನಿನ್ನ ಬೆಚ್ಚನೆ ಮಡಿಲ ಹೊದ್ದಿಕೆ
ನಿತ್ಯ ಶಾಂತಿಯನೀಯಲಿ.

ಎದೆ ವಿಕಂಪನವಿನ್ನು ನಿಲ್ಲಲಿ
ಸಾಕು ಭೀಕರ ಶಿಕ್ಷೆಯು.
ಸೊಗದ ಕನಸಿನ ಸೋನೆ ಸುರಿಯಲಿ
ಇದುವೆ ನನ್ನೆದೆ ಭಿಕ್ಷೆಯು!

## ಶಂಕೆ

ನಿನ್ನ ಹನಿಗಣ್ಣು ಕಂಡೊಡನೆ ಬಲು ಬೆದರಿದೆನು
ನನ್ನೆದೆಯೆ ಕಂಪಿಸಿತು ನಡುಗಿ.
ಏನು ತಪ್ಪಿದೆನೆಂದು ಬಲುನೊಂದು ಅಳುಕಿದೆನು
ಮಂಕು ಕವಿದುದು ಶಂಕೆ ಮಸಗಿ.

ನುಡಿನುಡಿದು ನಗುನಗುತ ಕಳೆದ ಗಂಟೆಯ ಹೊತ್ತು
ನಿಮಿಷದಲಿ ನಂಜಿಡಿದು ಹೋಯ್ತು.
ಮುಗುಳುನಗೆ ಮರೆಯಾಯ್ತು, ಅಹಿತ ಆವರಿಸಿತ್ತು
ಮನವೆಲ್ಲ ಮರುಭೂಮಿಯಾಯ್ತು.

ನೋಡಲಾರೆನು ನಿನ್ನ ಕೆಂಪಿಡಿದ ಕಂಗಳನು
ನಿನ್ನ ಬಗೆ ಕದಡಿರುವ ಪರಿಯು.
ತಾಳಲಾರೆನು ನಾನು ನಿನ್ನೆದೆಯ ಬೇಸೆಯನು
ನಿನ್ನೊಡಲ ಬೇಗುದಿಯ ಬಿಸಿಯು.

ನೂರಾರು ಹೆಣ್ಣುಗಳು ನೊಂದು ಬೆಂದಿರುವುದನು
ಕಂಡಿರುವೆ ಕೇಳಿರುವೆ ನಾನು.
ಸುಳಿಯುಗೊಡೆನೆಂದು ಸಂಕಟದ ನಿಶ್ವಾಸವನು
ಹಟತೊಟ್ಟು ಬಂದಿರುವೆ ನಾನು.

ನಿನ್ನ ಸಂತಸಕೆಂದು ಅಸುವ ಮುಡಿಪಿಟ್ಟಿರುವೆ
ನೀನಿಂತು ಕುದಿವುದನು ಒಲ್ಲೆ.
ನನ್ನ ತೋಳ್ ಬಲವೆಲ್ಲ ಮೀಸಲಾಗಿಟ್ಟಿರುವೆ
ಹೆಣ್ಣು ಬಾಳಿನ ನೋವ ಬಲ್ಲೆ.

ಕಷ್ಟ ಸಷ್ಟಗಳೆಲ್ಲ ದೂರು ದೂಷಣೆಯೆಲ್ಲ
ತೃಣಸಮವು ನಿನ್ನ ಬಲವಿರಲು.
ಯುಗಯುಗದ ನನ್ನ ಧೈರ್ಯ ಸ್ಥೈರ್ಯಗಳೆಲ್ಲ
ನುಚ್ಚಾಗುವುವು ನೀನೆ ಅಳಲು.

ಜಿ. ವರದರಾಜರಾವ್.

# ಊಟದಲ್ಲಿ ಉಪಚಾರ

೧

ಸಂಸಾರಿಯಾದರೆ ಸುಖ, ಸಂನ್ಯಾಸಿಯಾದರೆ ಕಷ್ಟ ಎನ್ನುವುದು ಸುಳ್ಳು. ಕಷ್ಟಸುಖಗಳೆಲ್ಲಾ ಅವರವರ ಅದೃಷ್ಟ—'ಪ್ರಾರಬ್ಧ.' ಸುಖಪ್ರಾರಬ್ಧವಿರುವ ಸಂನ್ಯಾಸಿ ಕಾಡಿಗೆ ಹೋದರೂ ನಿತ್ಯ ಅಭ್ಯಂಗನ ಔತಣ ಉಪಚಾರ ತಪ್ಪುವುದಿಲ್ಲ. ಸುಖಪ್ರಾಪ್ತಿ ಇಲ್ಲದಿರುವವನು ಸಂಸಾರ ಕಟ್ಟಿಕೊಂಡರೆ ಅದು ದಕ್ಕುವುದಿಲ್ಲ; ದಕ್ಕಿದರೆ ಏಕೆ ಕಟ್ಟಿಕೊಂಡೆ, ಎಂದಿಗೆ ಬಿಟ್ಟುಹೋದೇನು, ಹೇಗೆ ತಪ್ಪಿಸಿಕೊಳ್ಳಲಿ ಎನ್ನಿಸಿಬಿಡುತ್ತದೆ. ಮಿಕ್ಕ ವಿಷಯಗಳು ಹೋಗಲಿ, ದಿನಗಟ್ಟಲೆಯ ಊಟವನ್ನೇ ತೆಗೆದುಕೊಳ್ಳೋಣ; ನಾನು ನೋಡಿರುವವರಲ್ಲೆಲ್ಲಾ ಊಟದಲ್ಲಿ ಸುಖಪಡುತ್ತಿರುವ ವ್ಯಕ್ತಿ ಒಬ್ಬ ಸಂನ್ಯಾಸಿ. ಒಂದು ಆರು ತಿಂಗಳೋ ವರ್ಷವೋ ಹಾಗೆ ಊಟದಲ್ಲಿ ಸುಖಪಡುವುದಕ್ಕಾದರೂ ಸಂನ್ಯಾಸ ತೆಗೆದುಕೊಂಡು ಆ ಸ್ಥಾನದಲ್ಲಿ ಹೋಗಿ ಕುಳಿತುಕೊಳ್ಳೋಣವೆನ್ನಿಸುತ್ತದೆ— ಅವರನ್ನು ನೋಡಿದಾಗಲೆಲ್ಲ, ನೆನಸಿಕೊಂಡಾಗಲೆಲ್ಲ! ಆದರೆ ಆ ವೈರಾಗ್ಯವನ್ನು ಅವರು ಇತರರಿಗೆ ಅಷ್ಟು ಹೆಚ್ಚಾಗಿ ಬರಗೊಡಿಸುವುದಿಲ್ಲ. ಏಕೆಂದರೆ ಸಂಸಾರಿಗಳಾರಾದರೂ ಅವರ ದರ್ಶನಕ್ಕೆ ಹೋದರೆ, ಅಂಥವರಿಗೆ ಅವರು ತಮ್ಮ ದರ್ಶನಲಾಭದ ಜೊತೆಗೆ ಭೋಜನಲಾಭವನ್ನೂ ಕೊಡುತ್ತಾರೆ, ಪಂಕ್ತಿಲಾಭವನ್ನೂ ಕೊಡುತ್ತಾರೆ. ಆದ್ದರಿಂದ ಸ್ವಾಮಿಗಳಿಗೆ ಲಭಿಸುವ ಆದರ ಉಪಚಾರ ಅಡಿಗೆಗಳೆಲ್ಲಾ, ಅವರ ಜೊತೆಗೇ ಮಿಕ್ಕವರಿಗೂ ಅವರವರ ಪ್ರಾಪ್ತಿಗೆ ತಕ್ಕ ಪ್ರಮಾಣದಲ್ಲಿ ದೊರೆಯುತ್ತವೆ. ಅವರಂತೆಯೇ ಎಲ್ಲರ ಮುಖದಲ್ಲಿಯೂ ನಗು ನಲಿವು ತಾಂಡವವಾಡುತ್ತಿರುತ್ತವೆ.

ಸ್ವಾಮಿಗಳು ಭವ್ಯವೂ ವಿಶಾಲವೂ ಆದ ಭೋಜನಮಂದಿರವೊಂದರೊಳಗೆ ಅಗ್ರಸ್ಥಾನದಲ್ಲಿ ಪರಿಷ್ಕಾರವಾಗಿ ಕುಳಿತುಕೊಳ್ಳುತ್ತಾರೆ. ಅವರ ಮುಂದೆ ನೂರಾರು ಜನ ಶಿಷ್ಯರೂ ಭಕ್ತರೂ ಯಾತ್ರಿಕರೂ ಅವರನ್ನು ಮೆಚ್ಚಿಕೆಯಿಂದ ನೋಡುತ್ತ ಸಾಲುಸಾಲಾಗಿ ಕುಳಿತಿರುತ್ತಾರೆ. ಎಲ್ಲರಿಗೂ ಮುಂದೆ ಒಂದೊಂದು ದೊಡ್ಡ ಅಗ್ರದ ಬಾಳೆ ಎಲೆ. ಸ್ವಾಮಿಗಳಿಗೆ ಒಂದುಮೊಳ ಅಗಲ ಎರಡುಮೊಳ ಉದ್ದವಿರುವ ಎರಡು ಅಗ್ರದ ಬಾಳೆ ಎಲೆಗಳು. (ಮದುವೆಯ ಭೂಮದ ಊಟದಲ್ಲಿಯೂ ಅಂಥವು ದೊರಕಲಾರವು!) ಅವುಗಳ ಮೇಲೆ ಒಂದು ತುದಿಯಿಂದ ಇನ್ನೊಂದು ತುದಿಯ

ವರೆಗೆ ಜಲತರಂಗದಲ್ಲಿ ಜೋಡಿಸಿರುವಂತೆ ಓರಣವಾಗಿ ಇಟ್ಟ ಬಾಳೆಯೆಲೆಯ ನಾನಾ ಗಾತ್ರದ ಹಸುರು ದೊನ್ನೆಗಳು. ಅವುಗಳಲ್ಲಿ ಘಮಘಮಿಸುವಂಥ ಏನೇನೋ ಪರ ಮಾನ್ನ ಪಾನೀಯಾದಿಗಳು. ಸ್ವಾಮಿಗಳು ಮಂಡಿಸುವುದಕ್ಕೆ ಚಿನ್ನದ ಮಲ್ಲಿಗೆಯ ಹೂವುಗಳನ್ನು ಕೆತ್ತಿರುವ ಕರಿಯಮರದ ಮಿರುಗುಮಣೆ. ಎರಡು ಕಡೆಯೂ ತುಪ್ಪದ ದೀಪ ಉರಿಯುತ್ತಿರುವ ಬೆಳ್ಳಿಯ ಕಂಬಗಳು. ಒಂದು ಪಕ್ಕದಲ್ಲಿ ಲಂಬೋದರನಾದ ಒಬ್ಬ ವ್ಯಕ್ತಿ ಗೆರಸಿಯಂತೆ ವಿಶಾಲವಾಗಿರುವ ಲಾವಂಚದ ಬೀಸಣಿಗೆಯೊಂದನ್ನು, ಐರಾವತವು ತನ್ನ ರತ್ನಾಭರಣಮಂಡಿತವಾದ ಕಿವಿಯನ್ನು ಚಲಿಸುತ್ತಿರುವಂತೆ, ಚಲಿಸುತ್ತ ಗಾಳಿ ಹಾಕುತ್ತಿರುತ್ತಾನೆ. ಸ್ವಾಮಿಗಳು ಉತ್ತರೀಯ ಹೊದ್ದೂ ಹೊದೆಯದಂತೆ, ಪದ್ಮಾಸನ ಹಾಕಿಕೊಂಡು, ಕುಳಿತಿರುವುದರಿಂದ ಅವರಿಗೆ ಊಟದಿಂದ ಆಗುವ ಆಯಾಸ, ಬೀಸಣಿಗೆಯ ಉಪಚಾರದಿಂದ ಆಗುವ ಅದರ ಪರಿಹಾರ, ಇವೆಲ್ಲಾ ಪ್ರತ್ಯಕ್ಷವಾಗಿ ಗೋಚರವಾಗುತ್ತಿರುತ್ತವೆ. ಮತ್ತೊಂದು ಪಕ್ಕದಲ್ಲಿ, ಒಬ್ಬ ಪಂಡಿತ ವ್ಯಕ್ತಿ ಕಾಮಧೇನುವಿನಂತೆ ಚಚ್ಚೌಕವಾಗಿ ಕುಳಿತು ಮುಂದೆ ವ್ಯಾಸಪೀಠದ ಮೇಲೆ ಇಟ್ಟ ಶ್ರೀಮದ್ರಾಮಾಯಣದಿಂದ ಸುಂದರಕಾಂಡವನ್ನು ಮೃದುಗಂಭೀರವಾದ ಸ್ವರದಲ್ಲಿ ಪಾರಾಯಣಮಾಡುತ್ತಿರುತ್ತಾನೆ. ಹಿಂದೆ ವೀಣಾಗಾನವಾಗುತ್ತಿರುತ್ತದೆ. ಸ್ವಾಮಿಗಳ ಎಲೆಯ ಮುಂದೆಯೇ, ಬೆಳ್ಳಗೆ ಬೆಳಗಿದ ಸಣ್ಣಸಣ್ಣ ಪಾತ್ರೆಗಳಲ್ಲಿ—ಅವೇನು ಐವತ್ತೇ ಇರುತ್ತವೆಯೋ ನೂರೇ ಇರುತ್ತವೆಯೋ—ಪಾಕಗಳು ಸಿದ್ಧವಾಗಿ ಸುಖೋಷ್ಣವಾಗಿ ಇಟ್ಟಿರುತ್ತವೆ. ಇಬ್ಬರು ಪರಿಚಾರಕರು ಎರಡು ಬೆಳ್ಳಿಯ ಚಮಚಗಳನ್ನು ಹಿಡಿದುಕೊಂಡು ಆಚೆ ಈಚೆ ಸೊಂಟಕಟ್ಟಿಕೊಂಡು ನಿಂತಿರುತ್ತಾರೆ. ಊಟಕ್ಕೆ ಮೊದಲು ಮಾಡಿದ್ದೇ ತಡ, ಅವನ್ನು ಒಂದೊಂದಾಗಿ ಅವರೆಲೆಗೆ ಬಡಿಸುತ್ತಾರೆ—ಭೋಕ್ತರು ಇಂಥ ಪದಾರ್ಥ ಬೇಕೆಂದು ಕೇಳುವುದಿಲ್ಲ; ಕೇಳಲು ಅವಕಾಶವಿರುವುದಿಲ್ಲ; ಆವಶ್ಯಕತೆಯೂ ಇರುವುದಿಲ್ಲ. ಅವರು ಬಡಿಸಿದವೆಲ್ಲವನ್ನೂ ನಿಷ್ಪಕ್ಷಪಾತವಾಗಿ ರುಚಿನೋಡುತ್ತಾರೆ — ತಿನ್ನುವುದಿಲ್ಲ; ಅದು ಸಾಧ್ಯವಲ್ಲ. (ಅದು ಆಮೇಲೆ ನಮಗೆ ಗೊತ್ತಾಗುತ್ತದೆ.) ಅವೆಲ್ಲವನ್ನೂ ಅದೇ ರೀತಿ ಮಿಕ್ಕವರಿಗೂ, ಅವರವರಿಗೆ ಪ್ರಾಪ್ತಿ ಇದ್ದಷ್ಟು, ಬಡಿಸಿಸಿ ರುಚಿನೋಡಿಸುತ್ತಾರೆ. ಅಡಿಗೆ ಯಾವುದೂ ಕೆಟ್ಟಿರುವುದಿಲ್ಲ; ಎಲ್ಲವೂ ಹದವಾಗಿ ಇಳಿದಿರುತ್ತದೆ; ಪರಿಷ್ಕಾರವಾಗಿರುತ್ತದೆ; ಒಂದರಂತೆ ಒಂದು ಇರುವುದಿಲ್ಲ; ಒಂದನ್ನು ಬಾಯಲ್ಲಿ ಇಟ್ಟುಕೊಳ್ಳುವ ಹೊತ್ತಿಗೆ ಇನ್ನೊಂದು ಬರುತ್ತದೆ; ಸ್ವಲ್ಪ ಹೊತ್ತಿನಲ್ಲಿ ದೊಡ್ಡ ಅಗ್ರದ ಬಾಳೆಯೆಲೆಯೆಲ್ಲಾ ಚಿತ್ತಾರ ಬರೆದಂತೆ ಬಣ್ಣಬಣ್ಣದ ಅಡಿಗೆಗಳಿಂದ ಅಂದವಾಗಿ ತುಂಬಿಹೋಗುತ್ತದೆ; ಬಲುಬೇಗ ಆತರ ಅಡಗಿ, ಕುತೂಹಲ ಮಾತ್ರ ಉಳಿಯುತ್ತದೆ. ಅದೂ ಹೆಚ್ಚುಹೊತ್ತು ಇರುವುದಿಲ್ಲ. ದುಂಡು

ದುಂಡಗೆ ಮಿರುಮಿರುಗುತ್ತ ತೃಪ್ತಿ ತುಳುಕಾಡುತ್ತ ಕುಳಿತಿರುವ ಸ್ವಾಮಿಗಳನ್ನು ನೋಡಿದರೇ ಸಾಕು, ಸಂತೋಷವಾಗುತ್ತದೆ. ಸಂನ್ಯಾಸದ ಕಟ್ಟಿಲ್ಲದೆ ಈ ಸೌಖ್ಯವನ್ನು ಅನುಭವಿಸುವುದಾದರೆ ಸಂಸಾರವೇ ವಾಸಿಯಲ್ಲವೇ? ಆದರೆ ಒಪ್ಪತ್ತಿನ ಆ ಊಟದ ಸೌಖ್ಯಕ್ಕೂ ಸಂಸಾರಿಗೆ ಪ್ರಾಪ್ತಿ ಬೇಕು. ಒಂದುಸಾರಿಯೂ ಇದು ದೊರೆಯದ ನನ್ನ ಸ್ನೇಹಿತರು ಅನೇಕರಿದ್ದಾರೆ. ನಾನೂ ಒಂದುಸಾರಿ ಪಡೆದ ಆ ಸ್ವಪ್ನ ಸಂತೋಷವನ್ನು ಇನ್ನೊಂದು ಸಾರಿ ಪಡೆಯಬೇಕೆಂದು ಮಾಡಿರುವ ಪ್ರಯತ್ನಗಳೆಲ್ಲ ವಿಫಲವಾಗಿವೆ.

ಸಂಸಾರದಲ್ಲಿ ಸೌಖ್ಯವಿಲ್ಲವೆಂದಲ್ಲ; ಇರುವಷ್ಟಿದೆ, ಇರುವವರಿಗಿದೆ. ಇರಬೇಕೆಂಬುದೇ ಸಂಸಾರ ಕಟ್ಟುವುದರ, ಕಟ್ಟಿಕೊಳ್ಳುವುದರ, ಉದ್ದೇಶ. ಆದರೆ ನಾವು ಒಲಿದರೆ ಅದು ಒಲಿಯಬೇಕಲ್ಲ! ಪ್ರಾಪ್ತಿ ಇಲ್ಲದ್ದಕ್ಕೆ ಬಾಯಿ ಬಾಯಿ ಬಿಟ್ಟರೆ ಬರುತ್ತದೆಯೇ? ಮಿಕ್ಕ ಅನುಕೂಲ, ಸುಖ, ಹಾಗಿರಲಿ; ಸಂತೋಷದಿಂದ ಊಟ ಮಾಡುವುದಕ್ಕೂ ಪಡೆದುಬಂದಿರಬೇಕು. ಭಾಗ್ಯವಿರಬಹುದು, ಬೇಕಾದವರು ಇರಬಹುದು; ಫಲ ಮಾತ್ರ ಪಡೆದಷ್ಟೇ. ಬಾಯಿಗೆ ರುಚಿಯಾಗಿ, ಹೊಟ್ಟೆ ತುಂಬ, ದಿನಕ್ಕೆ ಎರಡು ಹೊತ್ತು, ಸಂತೋಷವಾಗಿ ಊಟಮಾಡುತ್ತಿದ್ದೇನೆಂದು ಹೇಳಬಲ್ಲ ಸಂಸಾರಿ ಪುಣ್ಯವಂತ; ಇದು ಸಂಸಾರಿಯೊಬ್ಬನ ಊಟದ ವೈಖರಿ—

೨

"ಎಲೆ ಹಾಕ್ಕೊಳ್ತೀರೇನು?"

"ಆಗಲೇ ಅಡಿಗೆ ಆಯಿತೇ?"

"ಇಷ್ಟುಹೊತ್ತಿನ ತನಕ ಆಗದೆ ಇರುತ್ತೆಯೇ?"

"ಇನ್ನೂ ಮಡಿ ಉಟ್ಟುಕೊಂಡು ಒಂದು ಘಂಟೆಯಾಗಿಲ್ಲ!"

"ಆದರೇನು, ಅಡಿಗೆ ಆಗುವುದು ಎಷ್ಟುಹೊತ್ತು? ಒಲೇಮುಂದೆ ಘಂಟೆಗಟ್ಲೆ ಕೂತುಕೊಂಡಿದ್ದರೇ ಅಡಿಗೆ, ಇಲ್ಲದಿದ್ದರೆ ಅಲ್ಲವೇ?"

"ಬೇಳೆಯಾದರೂ ಬೇಯಬೇಕೋ ಇಲ್ಲವೋ?"

"ಹಾಗಾದರೆ ಬೇಳೆ ಬೇಯಿಸದೇನೇ ಎಷ್ಟೆಷ್ಟುದಿನ ಅಡಿಗೆಮಾಡಿ ಹಾಕಿದೀನಿ?"

* * *

"ಈ ಲೋಟಾಕ್ಕೆ ಸ್ವಲ್ಪ ನೀರು ಹಾಕು!"

"ಅಲ್ಲೇ ಎಲ್ಲೋ ಚೊಂಬಿನಲ್ಲಿ ಇದೆ ಅಂತ ಕಾಣುತ್ತೆ; ಹಾಕಿಕೊಳ್ಳಿ."

"ಸಾದಿನ ಬಟ್ಟಲು ಎಲ್ಲಿದೆ?"

"ಹುಡುಗರು ಎಲ್ಲಿ ತಗೊಂಡು ಹೋಗಿ ಹಾಕಿಬಿಟ್ಟರೋ! ಇಲ್ಲದಿದ್ದರೆ ಇಲ್ಲ. ಈಗಿನ ಕಾಲದಲ್ಲಿ ಯಾರು ಹಣೆಗೆ ಇಟ್ಟುಕೊಳ್ಳುತ್ತಾರೆ!"

* * *

"ಅದೇಸು ಅನ್ನ ಹಾಗೆ ಹಿಸುಕಿ ಹಿಸುಕಿ ನೋಡುತ್ತೀರಿ? ಮಿಡ್ಡೆಯೋ? ಸ್ವಲ್ಪ ನೀರು ಹೆಚ್ಚಾಗಿಬಿಟ್ಟಿತೇನೋ!"

"ಇಲ್ಲ."

"ಅಕ್ಕಿಅಕ್ಕಿಯೋ? ಸರಿಯಾಗಿ ಆಗಿಲ್ಲವೋ?"

"ಆಗಿದೆ."

"ಮತ್ತೆ? ಇನ್ನೂ ಒಬ್ಬೊಬ್ಬರ ಮನೆಯ ಅನ್ನ ನೋಡಬೇಕು;—ಕೆಳಗೆ ಅಂಗಾರ, ಮೇಲೆ ಮಂತ್ರಾಕ್ಷತೆ, ಮಧ್ಯ ಗೋಪಿಚಂದನ ಅನ್ನುವಹಾಗೆ ಇರುತ್ತೆ."

"ತುಪ್ಪ ಹಾಕಿದ್ದೆಯೋ ಇಲ್ಲವೋ ಅಂತ ನೋಡಿದೆ."

"ನಿನ್ನೆ ರಾತ್ರಿಯೇ ಇದ್ದಬದ್ದದ್ದನ್ನೆಲ್ಲಾ ಕರಗಿಸಿ ಹಾಕಿಬಿಟ್ಟೆನಲ್ಲ!"

"ಹಾಗಾದರೆ ಇವೊತ್ತು ಬೆಳಗ್ಗೆಯಾದರೂ ಬೆಣ್ಣೆ ತರಿಸಬಹುದಾಗಿತ್ತು."

"ತರಿಸಲೂಬಹುದಾಗಿತ್ತು, ಮುಗಿಸಲೂಬಹುದಾಗಿತ್ತು. ಒಂದು ಹೊತ್ತು ತುಪ್ಪವಿಲ್ಲದೆ ತಿಂದರೆ ಏನಾಗುತ್ತೆ? ಅಷ್ಟು ಮೈ ಬೆಳೆಯುವುದು ಕಮ್ಮಿಯಾದರೆ ಆಗಲಿ!"

"ಇಷ್ಟು ಸಂಪಾದನೆಮಾಡಿಯೂ ತುಪ್ಪವಿಲ್ಲದೆ ತಿನ್ನುವಂಥದೇನು ಬಂದಿದೆ?"

"ಸಂಪಾದನೆ ಮಾಡಿದಾಕ್ಷಣ, ಬಂದದ್ದನ್ನೆಲ್ಲಾ ತಿಂದುಹಾಕಿಬಿಡಬೇಕೆಂದು ಹೇಳಿದೆಯೇನು?"

"ಹೊಟ್ಟೆಗೆ ತಿನ್ನದೆ ಮಿಗಿಸಿ ಮಾಡಬೇಕಾದದ್ದೇನು?"

"ದುಡ್ಡು ಮಿಕ್ಕರೆ ತಪ್ಪೆ? ಕಷ್ಟಕಾಲಕ್ಕೆ ದುಡ್ಡು ಆಗದೆ ಮನುಷ್ಯರು ಆಗುತಾರೆಯೆ?"

"ಮನುಷ್ಯರು ಇರುವ ತನಕ ತಿಂದು ಉಂಡು ಗಟ್ಟಿಯಾಗಿದ್ದರೆ ತಾನೆ ಆಗೋದು?"

"ಆಗದಿದ್ದರೆ ಹೋಗಲಿ; ಇವೊತ್ತೇ ಎಲ್ಲಾ ಖರ್ಚುಮಾಡಿ. ನಾಳಿನಿಂದ ವಾರಕ್ಕೆ ಒಂದು ಧಡಿಯ ತುಪ್ಪ ಕುಡೀರಿ! ತುಪ್ಪ ತಿಂದರೆ ಹೊಟ್ಟೆ ತುಂಬುತ್ತದೆಯೆ? ಇಷ್ಟು ಒಪ್ಪವಾಗಿ ಸಂಸಾರ ಮಾಡಿದ್ದರೆ ಮತ್ತೊಬ್ಬರ ಮನೆಯಲ್ಲಿ ಎಷ್ಟು ಸಂತೋಷಪಡುತ್ತಿದ್ದರೋ!"

"ನೀನು ಒಪ್ಪಮಾಡಲಿಲ್ಲ ಅಂತ ನಿನ್ನನ್ನು ಯಾರು ಆಕ್ಷೇಪಣೆಮಾಡಿದವರು?"

"ಮಾಡಿದ್ದಕ್ಕೆ ಸಂತೋಷವಿಲ್ಲ; ಒಳ್ಳೇದಕ್ಕೂ ಆಕ್ಷೇಪಣೆ, ಕೆಟ್ಟದ್ದಕ್ಕೂ ಆಕ್ಷೇಪಣೆ!"

"ಹೋಗಲಿ ಬಿಡು!"

“ ಈಗ ನೀವುತಾನೇ ತುಪ್ಪ ಹಾಕಲಿಲ್ಲ ಅಂತ ವ್ಯಾಜ್ಯ ತೆಗೆದೋರು ? ”

“ ಹಾಗಂತ ಊಟ ಬಿಟ್ಟೇಳುವುದಕ್ಕಾಗುತ್ತದೆಯೇ ? ”

“ ಬೇಡಿ ! ಎಲ್ಲಾದರೂ ತಂದುಹಾಕ್ತೀನಿ ! ಅಲ್ಲಿಯತನಕ ಹಾಗೇ ಕೂತಿರಿ ! ”

* * *

“ ಏನದು ? ”

“ ಏನು, ಕಾಣುವುದಿಲ್ಲವೇ ? ಸಾರು ! ”

“ ಸಾರೋ ಹುಳಿಯೋ ಎಂತ ಕೇಳಿದೆ.”

“ ಹುಳಿ ಮಾಡಿದಹಾಗೆಯೇ ಇದೆ ! ಬೇಳೆ ನೋಡಿದರೆ ರೂಪಾಯಿಗೆ ಒಂದು ಸೇರು ; ತೆಂಗಿನಕಾಯಿ ನೋಡಿದರೆ ಎರಡಾಣೆಗೆ ಒಂದು ; ತರ್ಕಾರಿ ನೋಡಿದರೆ ನಾಲ್ಕಾಣೆ ಕೊಟ್ಟರೂ ಒಪ್ಪತ್ತಿಗಾಗುವಷ್ಟು ಬರುವುದಿಲ್ಲ ! ”

“ ಹೋಗಲಿ, ಏನುಮಾಡಿದ್ದೀಯೋ ಅದನ್ನೇ ಹಾಕು ! . . . ಸಾಕು, ಸಾಕು ! ”

“ ಎರಡೇ ಸೌಟು ಸಾಕೇ ? ಅದೇನು, ನಾವು ಮಾಡಿದ ಸಾರು ಕಹಿಯಾಗಿರುತ್ತೆಯೇ ? ”

“ ಸಾರೆಲ್ಲಾದರೂ ಕಹಿಯಾಗಿರುತ್ತೆಯೇ ? ”

“ ಮತ್ತೆ, ಹುಳಿ ಹೆಚ್ಚೇನೋ ! ”

“ ಹುಂ.”

“ ನಿಮಗೆ ಸ್ವಲ್ಪ ಹುಳಿ ಹೆಚ್ಚಾಗಕೂಡದು ! ಹುಳಿ ಮುಂದಾಗಿಲ್ಲದೆ ಬರಿಯ ಸಪ್ಪೆ ಸಾರು ತಿನ್ನುವುದು ಯಾರ ಕೈಲಾದೀತು ? ”

“ ಈಗ ಅದನ್ನೂ ತಿಂದಾಯಿತಲ್ಲ ! ಚೆಲ್ಲಲಿಲ್ಲವಲ್ಲ, ಹೋಗಲಿ ಬಿಡು ! ”

“ ಹೇಗೆ ಬಿಡುವುದು ? ನಿತ್ಯ ಇದೇ ರಾಮಾಯಣ ! . . . ಏಕೆ ಸುಮ್ಮನೆ ಕೂತುಕೊಂಡುಬಿಟ್ಟಿರಿ ? ”

“ ಆಗಲಿ, ನಿನ್ನ ಮಾತೆಲ್ಲ ಆಡಿ ಮುಗಿಯಲಿ ! ”

“ ಮಾತೂ ಆಡಕೂಡದು ಹಾಗಾದರೆ ! ಮೂಗೆತ್ತಿನ ಹಾಗೆ ಬಾಯಿ ಮುಚ್ಚಿಕೊಂಡು ದುಡಿಯುತ್ತಿರಬೇಕು ! ಮನೆಗೆ ಮುಖ ತೋರಿಸುವುದೇ ಕಷ್ಟ ; ಬಂದಾಗ, ಇದ್ದಾಗ, ಒಂದೆರಡು ಮಾತೂ ಆಡಕೂಡದು ಅಲ್ಲವೆ ? ”

“ ಅದಕ್ಕೇ ಆಡು ಎಂದು ಹೇಳಿದೆನಲ್ಲ ! ಆಡು, ಕೇಳುತ್ತೇನೆ.”

“ ಈ ಮಾತಿಗೇನು ! ”

* * *

“ ಮಜ್ಜಿಗೇ ! ”

"ಅಷ್ಟರೊಳಗಾಗಿ ಅವಸರವೇ? ಸ್ವಲ್ಪ ತಾಳಿ; ಅಡಿಗೆಮನೆ ತೊಳೆದು ಬರ್‍ತೀನಿ!"

"ಎಷ್ಟು ಹೊತ್ತಿನಿಂದ ಕೂತಿದೀನಿ! ಅನ್ನವೆಲ್ಲ ಒಣಗಿಹೋಯಿತು!"

"ಅಯ್ಯೋ ಪಾಪ! ಮೂರುದಿನ ಆಗಿಹೋಯಿತು! ಗಂಟಲಲ್ಲಿ ಇಳಿಯುವುದಿಲ್ಲ!—ಹೂ, ಹಿಡಿಯಿರಿ!"

"ಸಾಕು, ಸಾಕು!"

"ಏನು, ಹುಳಿಯೋ?"

"ಅಷ್ಟೇನೂ ಹುಳಿಯಿಲ್ಲ."

"ಹಾಲು ಬೇಕೇನೋ!"

"ಹಾಕಿದರೆ ಬೇಕು!"

"ಹಾಲಿಗೆ ಹಾಲೂ ಖರ್ಚು, ಮಜ್ಜಿಗೆಗೆ ಮಜ್ಜಿಗೆಯೂ ಖರ್ಚು. ಯಾವುದಾದರೂ ಒಂದು ಹಾಕಿಸಿಕೊಳ್ಳುವುದಕ್ಕೇನು?"

"ಹಾಗಾದರೆ ಹಾಲೇ ಹಾಕು, ಇನ್ನು ಮೇಲೆ!"

"ಹುಳಿಮಜ್ಜಿಗೆ ಏನುಮಾಡಬೇಕು?—ನಿತ್ಯ ಒಂದೊಂದು ಕೊಡ ಮಿಗುತ್ತದಲ್ಲ?"

"ಮಜ್ಜಿಗೆ ಮಾಡಲೇಬೇಡ! ಮೊಸರೇ ಹಾಕು!"

"ಮಜ್ಜಿಗೆ ಮಾಡದಿದ್ದರೆ ಹೇಗೆ? ಮನೆಗೆ ಯಾರಾದರೂ ತಟ್ಟನೆ ಬಂದರೆ ಒಂದು ಬಟ್ಟಲು ಮಜ್ಜಿಗೆ ಇರಬೇಡವೇ?"

"ಬಂದರೆ ಮಜ್ಜಿಗೆ ಮಾಡುವುದು!"

"ಬರುವವರು ಹೇಳಿ ಕಳುಹಿಸಿ ಬರುತ್ತಾರೇನು?"

"ಹಾಗೇಂತ ಯಾಕೆ ಮಜ್ಜಿಗೆ ಮಾಡಿ ಮಾಡಿ ಮಿಗಿಸಬೇಕು?"

"ಮಿಕ್ಕರೆ ಮಿಗಲಿ, ಮಜ್ಜಿಗೆಯ ಹುಳಿ ಮಾಡುವುದು!"

"ಅದು ನನಗೆ ಸೇರುವುದಿಲ್ಲ; ನಾನು ಹಾಕಿಸಿಕೊಳ್ಳುವುದಿಲ್ಲವೋ, ಮಜ್ಜಿಗೆಯ ಹುಳಿಮಾಡಿದರೆ ನಮ್ಮ ಮನೆಯಲ್ಲಿ ಖರ್ಚಾಗುವುದಿಲ್ಲವೋ ಎನ್ನುತ್ತೀಯೆ!"

"ನೀವೊಬ್ಬರೇ ಏನು ಮನೆಯಲ್ಲಿ ತಿನ್ನುವವರು?"

"ಹಾಗಾದರೆ ಮಾಡು!"

"ಅದೇನು ಹಾಗೆ ಮುಖ ಸಿಂಡರಿಸಿಕೊಳ್ಳುತ್ತೀರಿ?"

"ಸ್ವಲ್ಪ ಚಟ್ಣಿ ಬೇಕು."

"ಹಾಲೂ ಹಾಕಿಸಿಕೊಂಡು ಇನ್ನು ಚಟ್ಣಿ ಬೇರೇ ಯಾಕೆ?"

“ ಸ್ವಲ್ಪ! ”

“ಹೂ, ತಗೊಳ್ಳಿ.”

“ಸಾಕು, ಸಾಕು ! ”

“ ಅಷ್ಟು ಸ್ವಲ್ಪ ಸಾಕೇ ? ”

“ ಮಜ್ಜಿಗೆಯನ್ನಕ್ಕೆ ನಂಜಿಕೊಳ್ಳುವುದಕ್ಕೆ ಇನ್ನೆಷ್ಟು ಬೇಕು ? ”

“ ಇಷ್ಟು ಸ್ವಲ್ಪವೇ ? ಈ ಭಾಗ್ಯಕ್ಕೆ ಯಾಕೆ ಹಾಕಿಸಿಕೊಳ್ಳಬೇಕು ? ”

“ನನಗೇನು ಬೇಕೇಬೇಕೆಂಬ ಚಪಲವಿಲ್ಲ; ನಂಜಿಕೊಳ್ಳದೆ ಹಾಗೇ ಊಟ ಮಾಡಿಯೂ ಅಭ್ಯಾಸವಿದೆ.”

“ ಅಯ್ಯೋ, ಎಲೆಯ ಕೆಳಗೆಲ್ಲಾ ಎಷ್ಟು ಮಜ್ಜಿಗೆ ಕೋಡಿಹೋಗಿಬಿಟ್ಟಿದೆ ! ”

“ ನಾನೇನು ಮಾಡಲಿ ? ಎಲೆಯೆಲ್ಲಾ ಹರುಕು.”

“ ಇದಕ್ಕೇ ಎಂಟಾಣೆ ನೂರಕ್ಕೆ ! ಇನ್ನು ಸ್ವಲ್ಪ ಒಳ್ಳೆಯದು ಬೇಕೂಂದ್ರೆ ಹನ್ನೆರಡಾಣೆ ಕೇಳ್ತಾನೆ.”

“ ಕೊಡುವುದು ; ಇನ್ನೇನು ಮಾಡುವುದು ಮತ್ತೆ ! ”

“ ಈ ಎಲೆ ತೆಗೆದು ಗೋಮೆ ಇಡುವುದಕ್ಕೇ ನನ್ನ ಸೊಂಟ ಬಿದ್ದುಹೋಗುತ್ತೆ ; ಇನ್ನು ಊರಗಲ ಎಲೆ ತಂದು ಹಾಕಿಕೊಂಡರೆ ಏನೂ ಇಲ್ಲ; ಮೂರು ದಿನಕ್ಕೆ ಹಾಸಿಗೆ ಹತ್ತಿ ಮಲಗಿ ಬಿಡೋದೆ ! ”

“ ಅಯ್ಯೊ, ಅಯ್ಯೊ, ಹಾಗೆ ಮಾತ್ರ ಮಾಡಬೇಡ ! ”

“ ಹಾಳು ಖಾಯಿಲೆಯೂ ಬರುವುದಿಲ್ಲವಲ್ಲ, ಎರಡು ದಿನ ಹಾಯೆಂತ ಇರೋಣ ಎಂದರೆ ! ನಾವು ನಾಲ್ಕುದಿನ ಖಾಯಿಲೆಬಿದ್ದು ಪಟ್ಟಾಗಿ ಮಲಗಿದರೆ ಗಂಡಸರ ಹಾಂಕಾರ ಮುರಿಯುತ್ತೆ ; ಹೆಂಗಸರ ಕಷ್ಟ ಏನೂಂತ ಗೊತ್ತಾಗುತ್ತೆ ! ”

“ ಅದೂ ಗೊತ್ತಿರುವುದು ತಾನೇ ! ತಿಂಗಳಿಗೆ ಮೂರು ದಿನ ಅಭ್ಯಾಸವಾಗಿದೆಯಲ್ಲ ! ”

“ ಈ ಮಾತಿಗಿನ್ನೇನು ! ಓದು ಬಲ್ಲೋಳಿಗೆ ಗಂಡ ಬೇಡ, ಅಡಿಗೆ ಬಲ್ಲೋನಿಗೆ ಹೆಂಡತಿ ಬೇಡ ಅಂತ ! ”

“ ಪುಣ್ಯಕ್ಕೆ, ನಿನಗೆ ಓದು ಬರೋದಿಲ್ಲವಲ್ಲ ! ”

“ ಅದಕೇ ಹೀಗೆ ಪರಾಧೀನವಾಗಿರೋದು ; ಒಂದು ತುತ್ತು ಅನ್ನಕ್ಕೆ ಚಾಕರಿ ಬಡಿಯಬೇಕಾಗಿರೋದು ! ನಾವೂ ಓದಿದ್ದರೆ, ಮತ್ತೊಬ್ಬರ ಹಂಗಿಲ್ಲದೆ ‘ ಧಿಂ ರಂಗ ! ’ ಅಂತ ಇರಬಹುದಾಗಿತ್ತು ! ”

"ಓದು ಬಾದೋರೆಲ್ಲ ದಿವಾನಗಿರಿ ಮಾಡುತ್ತಿದ್ದಾರೇನು?"

"ಮಾಡೋದೆ!"

"ಕೊಡೋರು ಮಾತ್ರ ಇಲ್ಲ!"

"ಆಳು, ಕಾಳು, ಅಡಿಗೆಯವರು ಪರಿಚಾರಕರು ಆದರೂ ಇರುತ್ತಾರೆ!"

"ನೀನೂ ಅಡಿಗೆಗೆ ಪರಿಚಾರಿಕೆಗೆ ಯಾರನ್ನಾದರೂ ಗೊತ್ತುಮಾಡಿಕೊ! ದುಡ್ಡು ಕೊಟ್ಟರೆ ಯಾವುದು ಸಿಕ್ಕುವುದಿಲ್ಲ!"

"ಅಯ್ಯೋ ಹುಚ್ಚೇ! ದುಡ್ಡಿನ ಆಸೆಗೆ ಯಾರಾದರೂ ಕೆಲಸಮಾಡುತ್ತಾರೆಯೆ?"

"ಮತ್ತೆ?"

"ಹೆದರಿಕೆ ಇರಬೇಕು."

"ಹಾಗೆಂದರೆ?"

"ಆಫೀಸಿನ ಜವಾನರಾದರೆ, ಸರ್ಕಾರದ ಕೆಲಸ ಹೋದೀತಲ್ಲ ಅಂತ ಅವರಿಗೆ ಹೆದರಿಕೆ ಇರುತ್ತೆ. ಅನ್ನಲಿ, ಆಡಲಿ, ಬಾಯಿಮುಚ್ಚಿಕೊಂಡು ಕೆಲಸಮಾಡುತ್ತಾರೆ. ಕೈಸಂಬಳ ಕೊಟ್ಟಿಟ್ಟುಕೊಂಡವರಿಗೆ ಹೆದರಿಕೆ ಏನಿರುತ್ತೆ?"

"ಸರ್ಕಾರದಿಂದ ಅಡಿಗೆಯವನನ್ನೂ ಕೊಡುತ್ತಾರೆಯೇ!"

"ಅಡಿಗೆಯವನು ಅಂತ ಕೊಡುವುದಿಲ್ಲ; ಆಳು ಅಂತಲೇ ಕೊಡುವುದು! ಆ ಕೆಲಸಕ್ಕೆ ಒಬ್ಬ ಬ್ರಾಹ್ಮಣನನ್ನೇ ಇಟ್ಟುಕೊಂಡರೆ, ಅಡಿಗೆಯವನಿಗೆ ಅಡಿಗೆಯವನು, ಆಳಿಗೆ ಆಳು, ಪರಿಚಾರಕನಿಗೆ ಪರಿಚಾರಕ, ಕಾವಲಿಗೆ ಕಾವಲು ಎಲ್ಲಾ ಆಗುತ್ತೆ. ನಾರಾಯಣ ರಾಯರ ಮನೆಯ ಅಡಿಗೆಯವನನ್ನು ನೋಡಿ; ಅವನಿಗೆ ಸರ್ಕಾರದ ಸಂಬಳವಂತೆ; ಅವನು ಮನೆಯಲ್ಲಿ ಅಡಿಗೆಮಾಡಿ ಬಡಿಸಿ, ಮಧ್ಯಾಹ್ನ ಆಫೀಸಿಗೆ ಕಾಫಿ ತಿಂಡಿ ತಗೊಂಡು ಹೋಗಿ, ಅವರ ಸಾಹೇಬರಿಗೆ ಎಲೆಯಡಿಕೆಯನ್ನೂ ಕೂಡ ಮಡಿಸಿ ಕೊಟ್ಟುಬರುತ್ತಾನಂತೆ; ಸಾಯಂಕಾಲ ಮಕ್ಕಳನ್ನು ಆಟಕ್ಕೆ ಕರೆದುಕೊಂಡು ಹೋಗುತ್ತಾನೆ; ರಾತ್ರಿ ಮನೆಯಲ್ಲಿ ಕಾವಲು ಕಾದುಕೊಂಡು ಮಲಗಿರುತ್ತಾನೆ."

"ಸರ್ಕಾರದ ಸಂಬಳಕ್ಕಿಂತ ಇನ್ನೆರಡು ರೂಪಾಯಿ ಹೆಚ್ಚಾಗಿ ಕೊಟ್ಟರೆ ಎಂಥವರು ಬೇಕಾದರೂ ಬರುತ್ತಾರೆ!"

"ಮತ್ತೆ ಅದೇ ಮಾತನಾಡುತೀರಲ್ಲ! ಅದನ್ನೂ ನೋಡಲಿಲ್ಲವೇ? ತಿಂಗಳಿಗೆ ಹತ್ತು ಹತ್ತು ರೂಪಾಯಿ ಕೊಟ್ಟು ಅಡಿಗೆಗೆ ಇಟ್ಟುಕೊಂಡಿದ್ದದ್ದಾಯಿತು! ಕೈಯಿಂದ ದುಡ್ಡುತೆತ್ತು ಕಷ್ಟಕೊಂಡುಕೊಳ್ಳಬೇಕು, ಅಷ್ಟೆ. ಅವರ ಕೈಯಲ್ಲಿ ಯಾರು ಬೆಂದಾರು! ಅವರಿಗೆ ಒಂದು ಮಾತಾಡಿದರೆ ಹೆಚ್ಚು, ಒಂದು ಮಾತಾಡಿದರೆ ಕಮ್ಮಿ. ಮೂರು ಮೂರು ದಿನಕ್ಕೆ ಓಡಿಹೋಗುತ್ತಾರೆ."

"ಎಲ್ಲವೂ ಕಷ್ಟವೇಯೆ; ಅದಕ್ಕೇನುಮಾಡುವುದು? ಊಟಮಾಡುವುದು ಕಷ್ಟವಲ್ಲವೇ?"

"ಅಯ್ಯೋ ಪಾಪ! ಮಾಡಿ ಹಾಕಿದರೆ ಊಟ ಮಾಡುವುದೂ ಕಷ್ಟ! ನೀವು ಆಗುವ ಹೊತ್ತಿಗೆ ಈ ಕಷ್ಟಪಡುತ್ತೀರಿ!"

* * *

"ಸರಿಯಾಗಿ ಬಳಿದುಕೊಂಡು ಊಟ ಮಾಡುವುದಕ್ಕೇನು? ಎಲೆ ಎತ್ತುವವರು ಹೇಗೆ ಎತ್ತಬೇಕು? ದಾರಿಯುದ್ದಕ್ಕೂ ಎಂಜಲು ಜೋರಿಸಿಕೊಂಡು ಹೋಗಬೇಕೇ?"

"ಇನ್ನು ಬಳಿದರೆ ಕೈಬಾಯಿ ತುಂಬ ಬರೀ ಎಲೆ ಕಡ್ಡಿ ಇವೇ ಬರುತ್ತವೆ!"

"ಆಗಲಿ ಹೋಗಿ ಸಾಕು; ಇವೊತ್ತಿನ ಕಥೆ ಕಳೀತಲ್ಲ!"

* * *

"ಅದೇನು ಹುಡುಕುತ್ತಾ ಇದ್ದೀರಿ?"

"ಬೆಲ್ಲ ಎಲ್ಲಿದೆ?"

"ಬೆಲ್ಲ ಯಾಕೆ?"

"ತಿನ್ನೋಕೆ!"

"ಬೆಲ್ಲ ಯಾಕೆ ತಿನ್ನಬೇಕು, ಈಗತಾನೆ ಊಟಮಾಡಿ ಕೈಗೆ ನೀರುಬಿಟ್ಟುಕೊಂಡು?"

"ಇನ್ನೇನು ಮಾಡುವುದು? ಹಣ್ಣಿಲ್ಲ, ಹಂಪಲಿಲ್ಲ, ಸೀಯಾಗಿ ಏನಾದರೂ ತಿಂಡಿಯಿಲ್ಲ."

"ಇನ್ನೂ ಊಟವಾಗುತಿದ್ದ ಹಾಗೇ, ತಿಂಡಿ ಯಾರು ಹುಡುಕಿಕೊಂಡು ಹೋಗುತ್ತಾರೆ, 'ಬಿರಿಯ ಉಂಡ ಬ್ರಾಹ್ಮಣ ಭಿಕ್ಷಕ್ಕೆ ಹೋದ ಅಂತ'? ಏನೋ ಬಾಯಿ ಚಪಲಕ್ಕೆ ಖಾರವಾಗಿ ಏನಾದರೂ ಹಾಕಿಕೊಳ್ಳುವವರು ಹಾಕಿಕೊಳ್ಳುತ್ತಾರೆ. ನಿಮಗೆ ಖಾರ ಎಂದರೆ ಆಗದು! ಬೇಕಾದರೆ ಅಲ್ಲಿ ಇನ್ನೂ ಎರಡು ಸಂಡಿಗೆ ಇದೆ ತಗೊಳ್ಳಿ."

"ಅದು ಹಲ್ಲಿಗೇ ಹರಿಯುವುದಿಲ್ಲ."

"ಬೇಡದೆ ಹೋದರೆ ಹಾಗೇ; ಏನಾದರೂ ಒಂದೊಂದು ಆಕ್ಷೇಪಣೆ. ಈಸಲ ಮಾಡಿದ ಸಂಡಿಗೆ ಮಳೇಲಿ ಸೆಂದುಹೋಯ್ತು. ಸರಿಯಾಗಿ ಒಣಗಲಿಲ್ಲ; ಕಲ್ಲಾಗಿ ಬಿಟ್ಟಿತು. ಊಟದ ಜೊತೆಗೆ ಏನಾದರೂ ಖಾರವಾಗಿರಲಿ ಅಂತ, ಇದ್ದ ಎರಡು ಮಿಳ್ಳೆ ಎಣ್ಣೆ ಹಾಕಿ ಹುರಿದೆ; ಅದು ಒಂದುಕಡೆ ಸ್ವಲ್ಪ ಕಪ್ಪಾಯ್ತು; ಇನ್ನೊಂದುಕಡೆ

ಬೆಳ್ಳಗಾಯ್ತು. ಅಂತೂ, ಇದು ಕಲ್ಲು ಅದು ಮಣ್ಣು, ಇದು ಬೆಂದಿಲ್ಲ ಅದು ಹೊತ್ತಿ ಹೋಯ್ತು, ಅದಕ್ಕೆ ಹುಳಿ ಹೆಚ್ಚು ಇದಕ್ಕೆ ಖಾರ ಹೆಚ್ಚು — ಹೀಗಂತ ಮೂರು ಹೊತ್ತೂ ಆಕ್ಷೇಪಣೆ ಮಾಡಿದ್ದೇ ಹೊರತು, ಇಷ್ಟುಮಟ್ಟಿಗೆ ಮಾಡುತ್ತಾಳಲ್ಲ ಅಂತ ಒಂದು ದಿನವಾದರೂ ಸಂತೋಷಪಟ್ಟಿದ್ದಿಲ್ಲವೊ! ಅದು ಬೇಡದಿದ್ದರೆ ಹೋಗಲಿ, ಎಲೆಯಡಕೆ ಹಾಕಿಕೊಳ್ಳುವುದು ತಾನೇ!"

"ಆಯೆಲೆ ಗೋಣಿ ಎಲೆ ಇದ್ದಹಾಗೆ ಇದೆ — ಕಹಿ, ಖಾರ. ಅದನ್ನು ಯಾರು ಮೆಯ್ದಾರು!"

"ಇಲ್ಲ, ನಿಮಗೆ ಒಂದೊಂದು ಎಲೆ ಒಂದೊಂದು ಬಿಡಿಕಾಸಿನ ಅಗಲಕ್ಕೆ ಇರಬೇಕು; ಐವತ್ತೆಲೆ ಹಾಕಿಕೊಂಡರೂ ಒಂದು ಬಾಯಿಗೆ ಸಾಕಾಗಬಾರದು! ಅದರಲ್ಲಿ ರುಚಿಯಿರಬಾರದು, ರಸವಿರಬಾರದು!"

"ಹೋಗಲಿ, ಅದಾದರೂ ಎಲ್ಲಿದೆ?"

"ಎಲ್ಲಿರುತ್ತೆ? ಎಲ್ಲಾ ಇರುವ ಕಡೆಯೇ ಇವೆ. ಯಾವುದುತಾನೇ ನಾವು ಇರುವ ಕಡೆಗೆ ಬರುತ್ತೆ? ಅದಕ್ಕೇನು ಕೈಕಾಲಿದೆಯೆ? ಬೇಕಾದವರು ಅದಿರುವಕಡೆಗೆ ಹುಡುಕಿಕೊಂಡು ಹೋಗಬೇಕು! . . . ನಾನು ಊಟ ಮಾಡಿಕೊಂಡು ಬರುವ ತನಕ ತಡೆದರೆ ಹುಡುಕಿಕೊಡುತ್ತೇನೆ."

"ಹೋಗಲಿ ಬಿಡು, ಅದೇ ಬೇಡ; ನಿನಗೆ ಯಾಕೆ ಕಷ್ಟ!"

"ಬೇಡದೆ ಇದ್ದರೆ ಬಿಡಿ! ಈಗ ಹೊರಟುಹೋದರೆ ಸಂಜೆಯತನಕ ಹಾಯಾಗಿರಬಹುದಲ್ಲ!"

ಶಾಮಣ್ಣ

---

# ಅಟ್ಲಾಂಟಿಕ್ ಘೋಷಣೆ

ಧನದಾಸೆ, ನೆಲದಾಸೆಗಳಿಗೆ ಮನಸೋತು ಯುದ್ಧವನ್ನು ಹೂಡಿ ಜಗವನ್ನು ತಲ್ಲಣಿಸುವಂತೆ ಮಾಡಿರುವ ಹಿಟ್ಲರನ್ನು ಸದೆಬಡಿದು ಶಾಶ್ವತ ಶಾಂತಿಯನ್ನು ಪ್ರಪಂಚದಲ್ಲಿ ಸ್ಥಾಪಿಸುವ ಉದ್ದೇಶದಿಂದ ಮಿತ್ರರಾಷ್ಟ್ರಗಳ—ಇಂಗ್ಲೆಂಡ್, ಅಮೇರಿಕ, ರಷ್ಯ—ಸಮಿತಿಯು ೨೫-೯-೧೯೪೧ ರಲ್ಲಿ ಹೊರಡಿಸಿರುವ ಸಂಯುಕ್ತ ಘೋಷಣೆಗೆ ಅಟ್ಲಾಂಟಿಕ್ ಘೋಷಣೆಯೆಂದು ಹೆಸರು. ಇದಕ್ಕೆ ೨೬ ಸ್ವತಂತ್ರರಾಷ್ಟ್ರ ಪ್ರತಿನಿಧಿಗಳ ಸಹಿಯೂ ಇತರ ೩೪ ರಾಷ್ಟ್ರಗಳ ಅನುಮತಿಯೂ ದೊರೆತಿರುವುದು. ಈ ಘೋಷಣೆಯಲ್ಲಿ ಅಡಗಿರುವ ನೀತಿಯ ಆಧಾರದ ಮೇಲೆ ನಾಳಿನ ಪ್ರಪಂಚದ ಸ್ಥಿತಿಗತಿಗಳು ನಿಲ್ಲುವುವಾದುದರಿಂದ ಇದರ ಸಾರಾಂಶವನ್ನು ಸಂಕ್ಷೇಪವಾಗಿ ತಿಳಿಸುವುದು ಈ ಲೇಖನದ ಉದ್ದೇಶ.

I. "ಮಿತ್ರರಾಷ್ಟ್ರಗಳು ರಾಷ್ಟ್ರಾಕಾಂಕ್ಷೆ ಮೊದಲಾದ ಮಹತ್ವಾಕಾಂಕ್ಷೆಗಳಿಗೆ ಮನಸೋಲುವುದಿಲ್ಲ".

ಈ ಪ್ರತಿಜ್ಞೆ ಧರ್ಮಸಮ್ಮತವಾಗಿರುವುದು ನಿಜ. ಅತ್ಯಾಚಾರಕ್ಕೆ ಮುಟ್ಟುಗೋಲು ಹಾಕಬೇಕೆಂಬ ದೃಢಪ್ರತಿಜ್ಞೆಯಿಂದ ಯುದ್ಧಮಾಡುತ್ತಿರುವ ಮಿತ್ರರಾಷ್ಟ್ರಗಳು ರಾಷ್ಟ್ರಾಕಾಂಕ್ಷೆಗೆ ಬಹಿಷ್ಕಾರ ಹಾಕುವುದು ಹೆಚ್ಚಲ್ಲ. ಆದರೆ ಪ್ರಪಂಚದ ಶಾಂತಿಗೆ ಮಿತ್ರರಾಷ್ಟ್ರಗಳ ನೀತಿ ಒಂದಿದ್ದರೆ ಸಾಲದು. ಮಿತ್ರರು ಸಭ್ಯರಾಗಿದ್ದ ಮಾತ್ರಕ್ಕೆ ಇತರರೆಲ್ಲರೂ ಸಭ್ಯರಾಗಿರುವರೆಂದು ಹೇಳುವುದು ತಪ್ಪು. ಪ್ರಪಂಚದ ಯಾವ ಕಡೆಯಿಂದ ಅತ್ಯಾಚಾರ ತಲೆಹಾಕಿದರೂ ಅದನ್ನು ಮೊಳಕೆಯಲ್ಲಿಯೇ ಮುರಿಯುವುದಕ್ಕೂ, ಆಕಸ್ಮಿಕವಾಗಿ ಶಾಂತಿಗೆ ತೊಂದರೆ ಬಂದರೆ ಅದನ್ನು ನಿವಾರಣೆಮಾಡುವುದಕ್ಕೂ ತಕ್ಕ ಅಧಿಕಾರ ಶಕ್ತಿಗಳನ್ನುಳ್ಳ ಒಂದು ಅಂತರ ರಾಷ್ಟ್ರೀಯ ಸಂಸ್ಥೆ ಅತ್ಯಾವಶ್ಯಕ.

ಯುದ್ಧದ ಪರಿಸ್ಥಿತಿಯನ್ನು ನೋಡಿದರೆ ಶತ್ರುಗಳಿಗೆ ಅಪಜಯವಾಗುವುದೆಂದು ತೋರುವುದು. ಯುದ್ಧದಲ್ಲಿ ಜಯಶೀಲರಾದವರು ಸೋತವರ ಮೇಲೆ ಸೇಡನ್ನು ತೀರಿಸಿಕೊಳ್ಳುವ ನೆಪದಿಂದ ಅವರ ರಾಷ್ಟ್ರಗಳ ಕೆಲವು ಭಾಗಗಳನ್ನು ಕಿತ್ತುಕೊಳ್ಳಬೇಕೆಂದು ಅಪೇಕ್ಷಿಸುವುದು ಸ್ವಾಭಾವಿಕ. ಉದಾಹರಣೆಗಾಗಿ ಜಗದ್ವಿಖ್ಯಾತವಾದ ಸಾಹಸ, ತಾಳ್ಮೆ, ದಕ್ಷತೆ ಇವುಗಳನ್ನು ತೋರಿ ಈಗಲೂ ಕಾದುತ್ತಿರುವ ರಷ್ಯನರು

ಫಿನ್‌ಲೆಂಡ್, ಬಾಲ್ಟಿಕ್ ಪ್ರಾಂತಗಳ ಕೆಲವು ಭಾಗಗಳನ್ನು ತಮಗೆ ಕೊಡಿಸಬೇಕೆಂದು ಸೂಚಿಸಿದರೆ ಅವರ ಅಪೇಕ್ಷೆಯನ್ನು ನಿರಾಕರಿಸುವುದು ಸಾಧ್ಯವೆ? ಇದೇ ರೀತಿಯಲ್ಲಿ ಗ್ರೀಕರು ಆಲ್ಬೇನಿಯದ ಕೆಲವು ಭಾಗವನ್ನು ಅಪೇಕ್ಷಿಸುವುದೂ ಬ್ರಿಟಿಷ್ ಸಾಮ್ರಾಜ್ಯದ ಅಭಿಮಾನಿಗಳು ಎಥಿಯೋಪಿಯಾದ ಮೇಲೆ ತಮ್ಮ ಅಧಿಕಾರವಿರಬೇಕೆಂದು ಇಚ್ಛೆಪಡುವುದೂ ಹೆಚ್ಚಲ್ಲವೆಂದೇ ಹೇಳಬಹುದು. ಒಟ್ಟಿನಲ್ಲಿ ಮೇಲೆ ತಿಳಿಸಿದ ನೀತಿಯು ಆಚರಣೆಗೆ ಬರಬೇಕಾದರೆ ಒಂದು ಅಂತರರಾಷ್ಟ್ರೀಯ ಸಂಸ್ಥೆಯ ಸಹಾಯದಿಂದಲೇ ಅದರ ಸಮಸ್ಯೆಗಳು ಪರಿಹಾರವಾಗಬೇಕೆಂದು ತೋರುವುದು.

II. "ಪ್ರಜೆಗಳ ವ್ಯಕ್ತವಾದ ಸಮ್ಮತಿಯಿಲ್ಲದೆ ಅವರ ರಾಷ್ಟ್ರವನ್ನು ಹೆಚ್ಚು ಕಡಮೆ ಮಾಡಲು ಮಿತ್ರರಾಷ್ಟ್ರಗಳು ಅಪೇಕ್ಷಿಸುವುದಿಲ್ಲ."

ಈ ಅಂಶದಲ್ಲಿ ಅಡಗಿರುವ ನೀತಿಗೆ ಸ್ವಯಂನಿರ್ಣಯ ತತ್ವವೆಂದು ಹೆಸರು. ಪರಕೀಯರ ಅಧಿಕಾರದಿಂದ ಜನರನ್ನು ತಪ್ಪಿಸಿ ಜನರ ಇಷ್ಟದಂತೆ ರಾಜ್ಯವನ್ನು ಅವರ ಕೈವಶಮಾಡುವುದು ಈ ಯುದ್ಧದ ಧ್ಯೇಯ. ಈ ಅಂಶದಲ್ಲಿ ವಾದವೇ ಇಲ್ಲ. ಆದರೆ ಸ್ವಯಂ ನಿರ್ಣಯತತ್ವವನ್ನು ಆಚರಣೆಗೆ ತರುವುದು ಸುಲಭವಲ್ಲ. ಅದರಲ್ಲಿ ತೊಡಕುಗಳನೇಕವಿರುವುವು. ಈ ತತ್ವವು ಇಂದಿನದಲ್ಲ. ಬಹಳ ಹಳೆಯದು. ೧೯ನೆಯ ಶತಮಾನದಿಂದೀಚೆಗೆ ಇದರ ಪ್ರಾಬಲ್ಯ ಅಧಿಕವಾಗಿ ಇಟಲಿ, ಜರ್ಮನಿ ದೇಶಗಳಲ್ಲಿ ಇದು ಮುಗಿಲುಮುಟ್ಟಿತು. ಅಲ್ಲಿ ವಕ್ರಮಾರ್ಗಕ್ಕೆ ಬಿದ್ದ ಸ್ವಯಂ ನಿರ್ಣಯತತ್ವವೇ ಈಗಿನ ಪ್ರಪಂಚದ ವಿಷಮ ಪರಿಸ್ಥಿತಿಗೆ ಮುಖ್ಯ ಕಾರಣವೆಂದು ಹೇಳುವುದು ಅತಿಶಯೋಕ್ತಿಯಲ್ಲ. ಈ ತತ್ವ ಅನರ್ಥಕಾರಿ ಎಂಬ ಹೆದರಿಕೆಯಿಂದ ಇದನ್ನು ಬಿಡುವ ಹಾಗೂ ಇಲ್ಲ. ಜೀವನದಲ್ಲಿ ಕಷ್ಟಸುಖಗಳು ಮಿಳಿತವಾಗಿರುವಂತೆ ಈ ತತ್ವದಲ್ಲಿ ಮಹತ್ತರವಾದ ಬಲ, ಅನರ್ಥಗಳು ಸೇರಿಕೊಂಡಿರುವುವು. ಈ ತತ್ವವು ಜನರನ್ನು ಒಟ್ಟುಕೂಡಿಸಿ ಜನಜೀವನವನ್ನು ಸದುದ್ದೇಶದ ಕಡೆಗೆ ತಿರುಗಿಸಬಲ್ಲದು. ಜನರ ಆರ್ಥಿಕ ಜೀವನ, ಸಾಹಿತ್ಯ, ಕಲೆ ಮೊದಲಾದವುಗಳಿಗೆ ಹೊಸ ಜೀವಕಳೆಯನ್ನು ತುಂಬಬಲ್ಲದು. ದೇಶಾಭಿಮಾನ, ತ್ಯಾಗಬುದ್ಧಿ ಮೊದಲಾದ ಸದ್ಗುಣಗಳಿಗೆ ಪ್ರೋತ್ಸಾಹಕೊಡಬಲ್ಲದು. ಸ್ವಯಂ ನಿರ್ಣಯತತ್ವವೆಂಬುದು ಒಂದು ವಿಧವಾದ ದೇಶದ ಮೇಲಿನ ಅಭಿಮಾನ, ಸ್ವಾಧೀನತೆಯ ಹೆಮ್ಮೆ. ಇದು ಜನರಲ್ಲಿ ಮೂಡುವುದು ಕಷ್ಟ. ಮೂಡಿದ ಮೇಲೆ ಈ ಉರಿಯನ್ನು ಆರಿಸುವುದು ಕಷ್ಟ. ಹಿಂದೆ ಇದ್ದಂತೆ ಯುದ್ಧವಾದ ಬಳಿಕವೂ ಈ ತತ್ವ ಪ್ರಪಂಚವನ್ನು ಆವರಿಸದೆ ಬಿಡದು. ಆದರೆ ಈ ತತ್ವಾಚರಣೆಯನ್ನು ಹತೋಟಿಯಲ್ಲಿಡದೆ ಸ್ವೇಚ್ಛೆಯಾಗಿ ವರ್ತಿಸುವಂತೆ ಮಾಡುವುದು ವಿವೇಕವಾಗುವುದಿಲ್ಲ. ಇಟಲಿ, ಜರ್ಮನಿ ದೇಶಗಳಲ್ಲಿ ಅನುಸರಿಸಿದ

ವಕ್ರಮಾರ್ಗವನ್ನು ಇದು ಅನುಸರಿಸುವುದಾದರೆ ಈಗಿನ ಅನರ್ಥಗಳು ಪುನಃ ತಲೆದೋರುವುದರಲ್ಲಿ ಸಂದೇಹವೇ ಇಲ್ಲ. ಮುಖ್ಯವಾಗಿ ಈ ತತ್ವ ಎಲ್ಲ ದೇಶಗಳಲ್ಲಿಯೂ ಆಚರಣೆಗೆ ಬರಬೇಕಾದರೆ ಒಂದು ಅಂತರರಾಷ್ಟ್ರೀಯ ಸಂಸ್ಥೆಯು ಹತೋಟಿಯು ಅತ್ಯಾವಶ್ಯಕವಾಗಿ ಬೇಕು. ಇಂತಹ ಅಧಿಕಾರವಿಲ್ಲದಿದ್ದರೆ ಸಮಸ್ತ ರಾಜ್ಯಗಳ ಸ್ವತಂತ್ರತೆಯಾಗಲಿ ಸ್ವಯಂ ನಿರ್ಣಯತತ್ವದ ಆಚರಣೆಯಾಗಲಿ ಸಾಧ್ಯವಾಗಲಾರದು.

ಇನ್ನೊಂದು ವಿಷಯ ; ಸ್ವಯಂ ನಿರ್ಣಯದ ಹಕ್ಕನ್ನು ಪ್ರತಿ ಒಂದು ದೇಶಕ್ಕೂ ಕೊಡುವುದು ಸೂಕ್ತವೇ ಎಂಬ ಸಂದೇಹ. ಈ ತತ್ವವನ್ನು ಆಚರಣೆಗೆ ತರಲು ಹಿಂತೆಗೆದರೆ ಮಿತ್ರರಾಷ್ಟ್ರಗಳ ವ್ರತಭಂಗವಾಗುವುದು. ಇದರ ಆಚರಣೆಗೆ ಪ್ರೋತ್ಸಾಹಕೊಟ್ಟರೆ ಪ್ರಪಂಚ ಪರಿಸ್ಥಿತಿ ಹದಗೆಡುವುದು. ಉದಾಹರಣೆಗಾಗಿ ಈ ತತ್ವದ ಪ್ರಕಾರ ಝೆಕೊಸ್ಲವೋಕಿಯಾ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡುವುದು ನ್ಯಾಯ. ಆದರೆ ಈ ದೇಶಕ್ಕೆ ಸೇರಿದ ಒಂದು ಭಾಗದಲ್ಲಿರುವ—ಸುಡೇಟೆನ್—ಪ್ರಜೆಗಳಲ್ಲಿ ಜರ್ಮನರೇ ಅಧಿಕ. ಪ್ರಜಾಮತಕ್ಕೆ ಮರ್ಯಾದೆ ಕೊಟ್ಟರೆ ಈ ಜರ್ಮನರು ಜರ್ಮನಿ ದೇಶವನ್ನು ಸೇರಲು ಅಪೇಕ್ಷಿಸುವರೆಂದೇ ಹೇಳಬಹುದು. ಇಂತಹ ಒಂದು ಸನ್ನಿವೇಶದಲ್ಲಿಯೇ ಈ ಸಲದ ಯುದ್ಧ ಅನಿವಾರ್ಯವಾದ್ದು; ಝೆಕೊಸ್ಲವೋಕಿಯಾ ಮೇಲೆ ದಾಳಿಯಾಗಿ ಅದರ ಆಕ್ರಮಣ ನಡೆದದ್ದು. ಒಟ್ಟಿನಲ್ಲಿ ಈ ಭಾಗವನ್ನು ಝೆಕೊಸ್ಲವೋಕಿಯಾ ಕೈಸೇರಿಸುವುದು ಒಂದು ಕಷ್ಟ, ಸೇರಿಸದಿರುವುದು ಮತ್ತೊಂದು ಕಷ್ಟ. ಇದರಂತೆ ಜರ್ಮನಿ, ಪೋಲೆಂಡ್ ಗಡಿನಾಡಿನಲ್ಲಿರುವ ಪ್ರದೇಶಗಳ ಗತಿಯೂ ಹೀಗೆಯೇ ತೊಡಕಿಗೆ ಸಿಕ್ಕಿರುವುದು. ಇಂತಹ ಸಂದರ್ಭದಲ್ಲಿ ಸ್ವಯಂ ನಿರ್ಣಯ ತತ್ವವನ್ನು ಬಹು ಸೂಕ್ಷ್ಮವಾಗಿ, ಪೂರ್ವಾಪರ ವಿವೇಚನೆಯಿಂದಲೂ, ಪ್ರಪಂಚ ಶಾಂತಿಯ ದೃಷ್ಟಿಯಿಂದಲೂ ಆಚರಣೆಗೆ ತರಬೇಕಾಗುವುದು. ಈ ಮಹತ್ಕಾರ್ಯವನ್ನು ಯಾವ ಒಂದು ದೇಶಕ್ಕೆ ವಹಿಸುವುದು ಸಾಧ್ಯ? ಎಲ್ಲರನ್ನೂ ಸಮದೃಷ್ಟಿಯಿಂದ ಕಾಣಬೇಕಾದರೆ ಎಲ್ಲರ ಹಿತವನ್ನೂ ಕಾಪಾಡುವ ಅಂತರರಾಷ್ಟ್ರೀಯ ಸಂಸ್ಥೆ ಆವಶ್ಯಕವಲ್ಲವೆ? ಈ ಸಂಸ್ಥೆಯ ಸದಸ್ಯರಿಗೆ ಅಪಾರವಾದ ಬುದ್ಧಿಶಕ್ತಿ ನ್ಯಾಯಾನ್ಯಾಯ ವಿವೇಚನೆಗಳು ಹೇಗೆ ಆವಶ್ಯಕವೋ ಹಾಗೇ ಎಲ್ಲಾ ರಾಜ್ಯಗಳನ್ನು ಹತೋಟಿಯಲ್ಲಿಡುವಂತಹ ಎಲ್ಲ ಬಗೆಯ ಶಕ್ತಿ, ಅಧಿಕಾರ ಬೇಕು. ಈ ವಿಷಯಗಳು ತೀರ್ಮಾನವಾಗುವವರೆಗೆ ಮಿತ್ರರಾಷ್ಟ್ರಗಳ ಅಭಿಲಾಷೆಯು ಈಡೇರುವುದು ಕಷ್ಟ.

III. "ಪ್ರಜೆಗಳ ಅಭಿಮತಕ್ಕನುಸಾರವಾದ ಸರ್ಕಾರವನ್ನು ಸ್ಥಾಪಿಸುವುದು, ಆ ಸರ್ಕಾರದ ಆಶ್ರಯದಲ್ಲಿ ಜನರು ನೆಮ್ಮದಿಯಾಗಿ ಬಾಳುವುದು ಎಂಬ ಹಕ್ಕು ಎಲ್ಲ ಜನರಿಗೆ ಸೇರಿದ್ದು ಎಂಬುದನ್ನು ಮಿತ್ರರಾಷ್ಟ್ರಗಳು ಗೌರವಿಸುವುವು;

ಯಾವ ಯಾವ ಜನರ ಸ್ವತಂತ್ರಾಧಿಕಾರದ ಹಕ್ಕಿಗೆ ಧಕ್ಕೆ ತಗಲಿರುವುದೋ ಅಂತಹವರ ಹಕ್ಕನ್ನು ಅವರಿಗೆ ಹಿಂದಕ್ಕೆ ದೊರಕಿಸಬೇಕೆನ್ನುವುದು ಮಿತ್ರರಾಷ್ಟ್ರಗಳ ಅಪೇಕ್ಷೆ."

ಎಲ್ಲ ಜನರ ಸ್ವತಂತ್ರಾಧಿಕಾರದ ಹಕ್ಕನ್ನು ಮಿತ್ರರಾಷ್ಟ್ರಗಳು ಗೌರವಿಸುವುವೆಂದ ಮೇಲೆ ಚಕ್ರಾಧಿಪತ್ಯಕ್ಕೆ ಸೇರಿರುವ ನಮ್ಮ ದೇಶದ ಹಕ್ಕನ್ನೂ ಗೌರವಿಸುವುವು ಎಂದರ್ಥವಾಗುವುದು. ಆದರೆ ಇಂಗ್ಲೆಂಡಿನ ಪ್ರಧಾನಮಂತ್ರಿ ಅಟ್ಲಾಂಟಿಕ್ ಪ್ರವಾಸದಿಂದ ಹಿಂತಿರುಗಿದ ಕೂಡಲೆ ಈ ವಿಷಯವನ್ನು ಟೀಕೆಮಾಡಿ ಸ್ವತಂತ್ರಾಧಿಕಾರತತ್ವ ಇಂಡಿಯಾ ಬರ್ಮಾ ದೇಶಗಳಿಗೆ ಅನ್ವಯಿಸುವುದಿಲ್ಲವೆಂದೂ, ಸಾಮ್ರಾಜ್ಯ ನೀತಿಯಲ್ಲಿ ಬದಲಾವಣೆ ಏನೂ ಇಲ್ಲವೆಂದೂ ತಿಳಿಸಿದರು. ಈ ಅರ್ಥಕ್ಕೆ ಮೂಲದಲ್ಲಿ ಸಮರ್ಥನೆ ದೊರೆಯುವುದೋ ಇಲ್ಲವೋ ಎಂದು ಕೆಲವರು ಸಂದೇಹಪಡುತ್ತಾರೆ.

ಒಂದು ದೃಷ್ಟಿಯಿಂದ ನೋಡಿದರೆ ಸ್ವತಂತ್ರಾಧಿಕಾರ ತತ್ವದಲ್ಲಿ ನಿರ್ವಿವಾದವಿರುವುದೆಂದೇ ಹೇಳಬಹುದು. ಏಕೆಂದರೆ ಅಧಿಕಾರ ರಹಿತವಾದ ದೇಶವು ರಾಜ್ಯವೆನಿಸಿಕೊಳ್ಳಲಾರದು. ಆದರೆ ವಿವೇಚನೆಯಿಲ್ಲದೆ ಈ ತತ್ವಕ್ಕೆ ಗೌರವಕೊಡುವುದು ತಪ್ಪು. ಇಂತಹ ಸ್ವತಂತ್ರಾಧಿಕಾರ ಇರುವುದರಿಂದಲೇ ಪ್ರತಿ ಒಂದು ಬಲಿಷ್ಠ ರಾಜ್ಯವೂ ಸ್ವೇಚ್ಛೆಯಾಗಿ ಪ್ರವರ್ತಿಸಿ ಇತರರಿಗೂ ಪ್ರಪಂಚಕ್ಕೂ ತೊಂದರೆಗಳನ್ನುಂಟುಮಾಡುತ್ತಿರುವುದು. ಈ ಹಕ್ಕಿಗೆ ಪ್ರಾಶಸ್ತ್ಯ ಕೊಟ್ಟಹಾಗೆಲ್ಲ ಅಂತರರಾಷ್ಟ್ರೀಯ ಅನಾಯಕತ್ವ ಹೆಚ್ಚುವುದು ಖಂಡಿತ. ರಾಜ್ಯಗಳು ಎಲ್ಲಿಯವರೆಗೆ ಈ ಹಕ್ಕನ್ನು ಸಂಪೂರ್ಣವಾಗಿ ಅನುಭವಿಸಲವಕಾಶ ಹೊಂದುವುವೋ ಅಲ್ಲಿಯವರೆಗೆ ಸಾರ್ವಜನಿಕ ಭದ್ರತೆ ಸಾಧ್ಯವಾಗಲಾರದು. ಜೀವಾಪಾಯ, ಆಹಾರಾಭಾವಗಳಿಂದ ಜನರು ವಿಮೋಚನೆಯನ್ನು ಹೊಂದಲಾರರು ; ಸಾರ್ವಜನಿಕ ಆರ್ಥಿಕ ಜೀವನ ಉತ್ತಮಗೊಳ್ಳಲಾರದು. ಇಷ್ಟು ಅನರ್ಥಗಳಿಗೆ ಮೂಲವಾಗಿರುವ ಸ್ವತಂತ್ರಾಧಿಕಾರದ ಹಕ್ಕನ್ನು ಎಲ್ಲ ಜನರಿಗೂ ಸಂಪೂರ್ಣವಾಗಿ—ಎಂದರೆ ಒಳಾಡಳಿತ ಹೊರಾಡಳಿತಗಳಲ್ಲಿ—ಕೊಡುವುದಕ್ಕೆ ಬದಲಾಗಿ ಸಮಸ್ತ ರಾಜ್ಯಗಳ ಹಕ್ಕುಬಾಧ್ಯತೆಗಳನ್ನು ವ್ಯಕ್ತಪಡಿಸಿ ಅವುಗಳ ಮೇಲ್ವಿಚಾರಣೆಯನ್ನು ಅದರಲ್ಲೂ ಹೊರಾಡಳಿತ ವಿಷಯಗಳನ್ನು ನಡಸುವಂತಹ ಅಂತರರಾಷ್ಟ್ರೀಯ ಸಂಸ್ಥೆಯೊಂದನ್ನು ಸ್ಥಾಪಿಸುವುದು ಅತ್ಯಾವಶ್ಯಕ.

IV. "ವ್ಯಾಪಾರದ ಅನುಕೂಲ, ಕೈಗಾರಿಕೆಗಳಿಗೆ ಆವಶ್ಯಕವಾದ ಅಪಕ್ವ ಪದಾರ್ಥಗಳನ್ನು ಪಡೆಯುವ ಸೌಕರ್ಯ ಇವುಗಳನ್ನು—ಮಿತ್ರರಾಷ್ಟ್ರಗಳಿಗಿರುವ ಪ್ರಕೃತ ಹೊಣೆಗಾರಿಕೆಗೆ ಕುಂದುಬರದಂತೆ—ದೊಡ್ಡರಾಜ್ಯ, ಸಣ್ಣರಾಜ್ಯ, ಸೋತ ರಾಜ್ಯ, ಗೆದ್ದರಾಜ್ಯ ಇವುಗಳಿಗೆಲ್ಲ ಸಮನಾಗಿ ದೊರಕಿಸುವಂತೆ ಮಿತ್ರರಾಷ್ಟ್ರಗಳು ಪ್ರಯತ್ನ ಪಡುವುವು."

ಈಗಿನ ಅಂತರರಾಷ್ಟ್ರೀಯ ಪ್ರಪಂಚದಲ್ಲಿ ಆರ್ಥಿಕಜೀವನ ತೊಡಕಿಗೆ ಸಿಕ್ಕಿರುವುದಕ್ಕೆ ರಾಜ್ಯಗಳ ಪೈಪೋಟಿ, ಅಪಕ್ವ ಪದಾರ್ಥಗಳನ್ನು ಪಡೆಯುವ ಅನುಕೂಲಗಳಲ್ಲಿ ಅಸಮಾನತೆ ಇವು ಮುಖ್ಯ ಕಾರಣಗಳು. ಇವುಗಳ ನೆಪದಿಂದಾಗಲಿ ತಮ್ಮ ಪದಾರ್ಥಗಳಿಗೆ ಗಿರಾಕಿಗಳನ್ನು ಹುಡುಕುವ ನೆಪದಿಂದಾಗಲಿ ರಾಜ್ಯಗಳಲ್ಲಿ ಆಗಿಂದಾಗ್ಗೆ ವೈಷಮ್ಯ, ಕಲಹಗಳು ಪ್ರಾಪ್ತವಾಗುತ್ತಿರುವುವು. ಇವುಗಳನ್ನು ತಪ್ಪಿಸಿದ ಹೊರತು ಪ್ರಪಂಚದಲ್ಲಿ ಶಾಂತಿ ಸಾಧ್ಯವಾಗಲಾರದು. ಪ್ರಪಂಚದಲ್ಲಿ ದೊರೆಯುವ ಆರ್ಥಿಕ ಸಂಪತ್ತಿಗೆ ಎಲ್ಲರೂ ಭಾಗಿಗಳು ಎಂಬ ನೀತಿಯೂ ಧರ್ಮಸಮ್ಮತವಾಗಿದೆ ಎಂದು ಪುನಃ ಹೇಳಬೇಕಾಗಿಲ್ಲ. ಯಾವ ವಸ್ತುಗಳು ಎಲ್ಲರಿಗೆ ಸೇರಿರುವುವೋ ಅವುಗಳ ಮೇಲೆ ಸರ್ವರಿಗೂ ಅಧಿಕಾರವಿರುವುದು ನ್ಯಾಯ. ಆದರೆ ಈ ನೀತಿಯನ್ನು ಆಚರಣೆಗೆ ತರುವುದು ಒಂದೆರಡು ರಾಜ್ಯಗಳಿಗೆ ಅಸಾಧ್ಯ. ಪ್ರತಿ ಒಂದು ರಾಜ್ಯದ ಆರ್ಥಿಕ ನೀತಿಯನ್ನೂ ಪರಿಶೀಲಿಸುವುದು, ಅದರ ಆರ್ಥಿಕ ಚಳುವಳಿಗಳ ಮರ್ಮವನ್ನು ಭೇದಿಸಿ ತಿಳಿಯುವುದು, ಅದರ ಆಮದು ರಫ್ತುಗಳನ್ನು ಜಾಗರೂಕತೆಯಿಂದ ನೋಡಿಕೊಂಡಿರುವುದು, ಇವೇ ಮೊದಲಾದ ಕಾರ್ಯಗಳನ್ನು ದಕ್ಷತೆಯಿಂದ ನಡಸಿ ಪ್ರಪಂಚದ ಆರ್ಥಿಕ ನೀತಿಗೆ ಭಂಗ ಬರದಂತೆ ನೋಡಿಕೊಂಡಿರುವುದಕ್ಕೆ ತಕ್ಕ ಸಂಸ್ಥೆಯ ಸಹಾಯಬೇಕು. ಆಗಲೇ ಅಂತರರಾಷ್ಟ್ರೀಯ ಪ್ರಪಂಚದ ಆರ್ಥಿಕ ಅನಾಯಕತ್ವವು ಕಡಮೆಯಾಗಿ ಆರ್ಥಿಕ ಜೀವನದಲ್ಲಿ ಒಂದು ಬಗೆಯ ಶಿಸ್ತು, ಶಾಂತಿ, ಸಾರ್ವಜನಿಕ ಸುಖ ಇವು ತಲೆದೋರುವುವು. ಇಂತಹ ಸಂಸ್ಥೆಯನ್ನು ಸ್ಥಾಪಿಸುವುದು ಸಾಧ್ಯವೆಂದು ಊಹಿಸೋಣ. ಈ ಸಂಸ್ಥೆಯು ಸಣ್ಣ ಸಣ್ಣ ರಾಜ್ಯಗಳ ಮೇಲೆ ಅಧಿಕಾರವನ್ನು ನಡಸುವುದು ಸುಲಭ. ಆದರೆ ದೊಡ್ಡ ರಾಜ್ಯಗಳು ಇದರ ಅಧಿಕಾರವನ್ನು ಗೌರವಿಸುವುವೋ ಇಲ್ಲವೋ ಎಂದು ಧಾರಾಳವಾಗಿ ಹೇಳುವುದಕ್ಕಾಗುವುದಿಲ್ಲ. ದೊಡ್ಡ ರಾಜ್ಯಗಳು ತಮ್ಮ ಪ್ರಯೋಜನವನ್ನು ಅಷ್ಟು ಸುಲಭವಾಗಿ ಬಿಟ್ಟುಬಿಡುವವೇ? ಅಂತಹ ತ್ಯಾಗ ಬುದ್ಧಿಯೂ, ಪ್ರಪಂಚದ ಹಿತವನ್ನು ಈಡೇರಿಸಬೇಕೆಂಬ ಅಭಿಲಾಷೆಯೂ ಐಹಿಕ ಪ್ರಯೋಜನದಲ್ಲಿ ಮಗ್ನರಾಗಿರುವ ಜನರಿಗೆ ಬರುವುದು ಸಾಧ್ಯವೇ? ಮತ್ತು ಪ್ರಕೃತ ಹೊಣೆಗಾರಿಕೆಗಳೆಂಬ ಹೆಸರಿನಲ್ಲಿ ಯಾವ ಆರ್ಥಿಕ ರಾಜಕೀಯ ಪ್ರಪಂಚವೂ ಲೋಕ ಶಾಂತಿಗೆ ವಿರೋಧವಾದ ಯಾವ ಪ್ರಬಲ ನೀತಿಯೂ ಬುಡವೂರಲು ಪ್ರಯತ್ನಿಸುವುವೊ ಈಗ ಹೇಳುವುದು ಕಷ್ಟ. ಮಹಾರಾಷ್ಟ್ರಗಳ ರಾಜಕೀಯ ಚರಿತ್ರೆಯೂ, ಪರಸ್ಪರ ಬಾಂಧವ್ಯಗಳೂ, ಹಿಂದಿನ ಸೇಡುಗಳೂ ಹಿಂದಿನ ಸಂಶಯಗಳನ್ನೇ ಬಲಪಡಿಸುವಂತಾಗಬಾರದು.

ಈ ಹೊಸ ನೀತಿಯು ಆಚರಣೆಗೆ ಬರುವುದಾದರೆ ಎಲ್ಲಾ ದೇಶಗಳಿಗಿಂತ

ಹೆಚ್ಚಾಗಿ ಅಮೇರಿಕ ದೇಶದ ಆರ್ಥಿಕ ನೀತಿಯು ವ್ಯತ್ಯಾಸವಾಗಬೇಕಾಗುವುದು. ಈ ಬದಲಾವಣೆಗೆ ಆ ಜನರು ಒಪ್ಪುವುದು ಕಷ್ಟ. ಅಮೇರಿಕ ಜನರು ಇತರ ದೇಶಗಳ ಜನರಿಗೆ ಕೊಟ್ಟಿರುವ ಸಾಲದ ಮೊಬಲಗಿಗೆ ಬದಲು ಇತರರಿಂದ ಸಾಮಾನುಗಳನ್ನಾಗಲಿ ಅಥವಾ ಇತರ ವಿಧವಾದ ಪ್ರಯೋಜನಗಳನ್ನಾಗಲಿ ಪಡೆಯಲು ಸಮ್ಮತಿಪಡುವರೆ? ಜೊತೆಗೆ ಆರ್ಥಿಕ ಪ್ರಪಂಚದಲ್ಲಿ ಪ್ರಥಮ ಸ್ಥಾನವನ್ನು ಹೊಂದಿ ಇಡಿಯ ಪ್ರಪಂಚದ ಸಾಹುಕಾರನಂತಿರುವ ಅಮೇರಿಕ ದೇಶದ ಪ್ರಜೆ—ಅದರಲ್ಲೂ ಕೋಟ್ಯಧೀಶನು—ಅಂತರರಾಷ್ಟ್ರೀಯ ಸಂಸ್ಥೆಯ ಅಧಿಕಾರಕ್ಕೆ ಒಳಪಡುವನೋ ಇಲ್ಲವೋ ಎಂಬುದು ದೊಡ್ಡ ಸಮಸ್ಯೆ. ಇವುಗಳಿಗೆ ಸಮಾಧಾನವಾದ ಉತ್ತರ ದೊರೆಯುವ ವರೆಗೆ ಅಂತರರಾಷ್ಟ್ರೀಯ ಆರ್ಥಿಕ ನೀತಿ ಆಚರಣೆಗೆ ಬರುವುದು ಶಕ್ಯವಿಲ್ಲ.

V. "ಪ್ರಪಂಚದ ಕೂಲಿಗಾರರ ಜೀವನ, ಅವರ ಯೋಗ್ಯತೆ ಇವುಗಳನ್ನು ಮೇಲ್ಮಟ್ಟಕ್ಕೆ ಏರಿಸುವುದು, ಆರ್ಥಿಕ ವಿಷಯಗಳು ಮುಂದುವರಿಯುವಂತೆ ಮಾಡುವುದು, ಸಮಾಜ ಭದ್ರತೆಯನ್ನು ಶಾಶ್ವತಗೊಳಿಸುವುದು ಇವೇ ಮೊದಲಾದ ಕಾರ್ಯಗಳನ್ನು ಸಾಧಿಸುವ ಉದ್ದೇಶದಿಂದ ಎಲ್ಲ ರಾಜ್ಯಗಳನ್ನೂ ಒಟ್ಟುಗೂಡಿಸಬೇಕೆಂಬುದು ಮಿತ್ರರಾಷ್ಟ್ರಗಳ ಅಭಿಲಾಷೆ."

ಈ ನೀತಿಯನ್ನು ಆಚರಣೆಗೆ ತರುವುದರಿಂದ ಯಾವುದೊಂದು ರಾಜ್ಯದ ಆಧಿಪತ್ಯಕ್ಕಾಗಲಿ ಅಥವಾ ಯಾರೊಬ್ಬರ ದಬ್ಬಾಳಿಕೆಗಾಗಲಿ ಅವಕಾಶವಿರುವುದಿಲ್ಲ. ಆರ್ಥಿಕ ವಿಷಯದಲ್ಲಿ ಪ್ರಪಂಚವನ್ನು ಒಟ್ಟುಗೂಡಿಸುವ ನೀತಿ ಶ್ಲಾಘ್ಯವಾದುದೇ ಸರಿ. ಈಗಿರುವ ಆರ್ಥಿಕ ಅನಾಯಕತ್ವ, ಹಣಕಾಸಿನ ವಿಚಾರದಲ್ಲಿ ಅಲ್ಪಸಂಖ್ಯೆಯವರಿಗೆ ಮಾತ್ರ ಇರುವ ವಿಶೇಷಾಧಿಕಾರ ಇವು ದೂರವಾಗಬೇಕು. ಆರ್ಥಿಕ ಸಮಾನತೆಯಿಲ್ಲದೆ ರಾಜಕೀಯ ಅಧಿಕಾರದಿಂದ ಪ್ರಯೋಜನವಿಲ್ಲವೆಂದು ಎಲ್ಲರಿಗೂ ತಿಳಿದಿದೆ. ಬಂಡವಾಳದ ಸಂಚಲನ ಮತ್ತು ಧನಾಧಿಕಾರ ಅಂತರರಾಷ್ಟ್ರೀಯವಾಗಿ ಹಬ್ಬಿ ಆಧಿಪತ್ಯಮಾಡುತ್ತಿರುವಾಗ ಕೂಲಿಗಾರರ ವ್ಯವಸ್ಥೆಯಲ್ಲಿಯೂ ಕಟ್ಟುಪಾಡು ಸಂಘಶಕ್ತಿಗಳ ವ್ಯಾಪಕತೆಗೆ ಅಗತ್ಯವಿದೆಯೆಂಬುದು ಲೋಕಕ್ಕೆಲ್ಲ ವೇದ್ಯವಾಗಿದೆ. ಕೆಲವು ರಾಜ್ಯಗಳು ತಮ್ಮ ತಮ್ಮೊಳಗೆ ಒಪ್ಪಿ ಮಾಡುವ ತೀರ್ಮಾನಗಳಿಂದ ಈ ಕಾರ್ಯವು ಸಾಧ್ಯವಾಗಲಾರದು. ಇದು ಯಾವ ಕಾಲದಲ್ಲಿ ನಡೆಯಬೇಕಾದರೆಯೂ ಅಧಿಕಾರಯುತವಾದ ಸಂಸ್ಥೆಯೊಂದು ಆವಶ್ಯಕ. ಇಂತಹ ಸಂಸ್ಥೆಯ ಸ್ಥಾಪನೆಗೆ ಮುಂಚೆ ಪ್ರತಿ ರಾಜ್ಯವೂ ತನಗಿರುವ ಆರ್ಥಿಕ ಸ್ವತಂತ್ರತೆಯನ್ನು ಬಿಟ್ಟುಕೊಡಲು ಒಪ್ಪಬೇಕು. ಈ ಹೊಸ ಸುಧಾರಣೆ ಕೆಲಸವನ್ನು ಕೈಕೊಳ್ಳುವ ಸಂಸ್ಥೆಯಲ್ಲಿ ವ್ಯಾಪಾರ, ಕೈಗಾರಿಕೆಗಳ ಹಿತವನ್ನು ಕೋರುವ ಪ್ರತಿನಿಧಿಗಳಿರುವಂತೆ ಜನಸಾಮಾನ್ಯದ ಪ್ರಾತಿನಿಧ್ಯವೂ

ಆವಶ್ಯಕ. ಜೊತೆಗೆ, ಆರ್ಥಿಕ ಪ್ರಪಂಚವಿರುವುದು ಮುಂದುವರಿದಿರುವ ಜನರಿಗೆ ಮಾತ್ರ ಅಲ್ಲ. ಆ ಪ್ರಪಂಚದ ಸಂಪತ್ತು ಸುರಕ್ಷಣೆಗಳಿಗೆ ಹಿಂದುಳಿದ ಜನರೂ ಹಕ್ಕುದಾರರೆಂಬ ತಿಳಿವು ಎಲ್ಲರ ಮನಸ್ಸಿನಲ್ಲಿಯೂ ನಾಟಬೇಕು. ಜೀವದ ಹೆದರಿಕೆ, ಆಹಾರಾಭಾವದ ಹೆದರಿಕೆ ಇವುಗಳಿಂದ ಅಧೋಗತಿಗೆ ಬೀಳುತ್ತಿರುವವರು ಹಿಂದುಳಿದ ಜನರು. ಇವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿ, ಇವರನ್ನು ಬಲಿಷ್ಠರ ಕೈಹಿಡಿಯಿಂದ ತಪ್ಪಿಸುವುದು ಅತ್ಯಾವಶ್ಯಕ. ಶ್ರೀಮಂತರ ದ್ರವ್ಯ, ಪ್ರಾಜ್ಞರ ಬುದ್ಧಿ ಇವುಗಳು ಬಡವರ, ಹಿಂದುಳಿದ ಜನರ ಉದ್ಧಾರಕ್ಕಾಗಿ ಉಪಯೋಗವಾಗಬೇಕು. ಆಗ ಮಾತ್ರ ಪ್ರಪಂಚ ಒಂದು ಸ್ವತಂತ್ರ ಸಮಾಜದಂತಾಗುವುದು. ಜನರಲ್ಲಿ ಸಹಜವಾದ ಸ್ನೇಹ ಮೂಡುವುದು.

VI. "ನಾಜಿಗಳ ದಬ್ಬಾಳಿಕೆಯನ್ನು ನಿರ್ಮೂಲಮಾಡಿದ ಮೇಲೆ ಇಡಿಯ ಪ್ರಪಂಚದಲ್ಲಿರುವ ಜನರು ತಮ್ಮ ತಮ್ಮ ದೇಶಗಳಲ್ಲಿ ಜೀವದ ಹೆದರಿಕೆ, ಆಹಾರಾಭಾವದ ಹೆದರಿಕೆಗಳಿಗೆ ತುತ್ತಾಗದೆ ಸುಖದಿಂದಲೂ, ಸ್ವತಂತ್ರದಿಂದಲೂ ಜೀವಿಸಿಕೊಂಡಿರುವುದಕ್ಕೆ ಅವಕಾಶವನ್ನು ಕೊಡುವಂತಹ ಶಾಂತಿಯನ್ನು ಸ್ಥಾಪಿಸಬಹುದೆಂಬ ಭರವಸೆಯು ಮಿತ್ರರಾಷ್ಟ್ರಗಳಲ್ಲಿರುವುದು."

ನಾಜಿಗಳ ದಬ್ಬಾಳಿಕೆಯನ್ನು ಧ್ವಂಸಮಾಡುವ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಮುಂದಾಗುವುದನ್ನು ಹೇಳಬಹುದಾದರೆ ನಾಜಿಗಳ ಅಕೃತ್ಯಗಳೇ ಅವರನ್ನು ಕೊನೆಗಾಣಿಸುವುವು. ಆದರೆ ನಾಜಿಗಳ ನಾಶದಿಂದ ದಬ್ಬಾಳಿಕೆ ಕೊನೆಗಾಣುವುವೆಂದು ನಂಬುವುದು ತಪ್ಪು. ಸೀಸ಼ರಿನಂತಹ ನಿರಂಕುಶಪ್ರಭು ಹೋದರೆ ನಿರಂಕುಶ ಪ್ರಭುತ್ವದ ಸತ್ವ ಹೋಯಿತೆ? ಎಂದಿಗೂ ಇಲ್ಲ. ಇದೂ ಅಲ್ಲದೆ ನಿರಂಕುಶ ಪ್ರಭುತ್ವದ ಸತ್ವವು ರಾಜಕೀಯ ವಿಷಯ ಒಂದರಲ್ಲೇ ಪ್ರಕಾಶಕ್ಕೆ ಬರುವುದೆಂದು ತಿಳಿಯಕೂಡದು. ಅದು ಪ್ರವೇಶಮಾಡದಿರುವ ಸ್ಥಳವೇ ಇಲ್ಲ. ವಿಷವು ಶರೀರಾದ್ಯಂತವನ್ನು ಆವರಿಸುವಂತೆ ನಿರಂಕುಶಪ್ರಭುತ್ವದ ಸತ್ವವು ಇಡಿಯ ಸಮಾಜ ಜೀವನವನ್ನು ಆವರಿಸಿ ತನ್ನ ಕಡೆಗೆ ಸೆಳೆಯಬಲ್ಲದು. ಸಾರ್ವಜನಿಕ ಭದ್ರತೆ ನಿಜವಾಗಿ ಪ್ರಪಂಚದಲ್ಲಿ ನೆಲಸಬೇಕಾದರೆ ಅದರ ಮಾರ್ಗದಲ್ಲಿ ಬರುವ ಎರಡು ದೊಡ್ಡ ವಿಘ್ನಗಳು—ಎಂದರೆ ಬಲಿಷ್ಠರ ದಬ್ಬಾಳಿಕೆಯ ಹೆದರಿಕೆ, ದಾರಿದ್ರ್ಯದ ಹೆದರಿಕೆ—ನಿವಾರಣೆಯಾಗಬೇಕು. ಈಗ ನಡೆಯುತ್ತಿರುವ ಯುದ್ಧ ಕೊನೆಗೊಂಡು ಶಾಂತಿ ಸ್ಥಾಪನೆಯಾಗುವ ಕಾಲದಲ್ಲಿ ಶಾಂತಿಸ್ಥಾಪಕರು ಮೇಲೆ ತಿಳಿಸಿದ ವಿಷಯಗಳನ್ನು ಮನಸ್ಸಿನಲ್ಲಿಟ್ಟು ಕಾರ್ಯಾರಂಭ ಮಾಡುವುದು ಉತ್ತಮ. ಶಾಂತಿಸ್ಥಾಪಕರ ಎರಡು ಕಣ್ಣುಗಳ ಪೈಕಿ ಒಂದು ಕಣ್ಣು ರಾಜಕೀಯ ಮಾರ್ಗದ ಕಡೆಗೂ, ಮತ್ತೊಂದು

ಕಣ್ಣು ಆರ್ಥಿಕ ಮಾರ್ಗದ ಕಡೆಗೂ ತಿರುಗಬೇಕು. ಆರ್ಥಿಕ ಸಮಸ್ಯೆಯನ್ನು ಪರಿಹರಿಸಿದ ಹೊರತು ರಾಜಕೀಯ ಧ್ಯೇಯ ಸಾರ್ಥಕವಾಗದು; ಅಪೂರ್ಣವಾಗಿ ಅಸತ್ತಾಗಿ ಉಳಿಯುವುದು.

VII. "ಸಮಸ್ತ ಸಮುದ್ರ, ಸಾಗರಗಳ ಮೇಲೆ ಯಾವ ವಿಧವಾದ ಅಡಚಣೆಯಿಲ್ಲದೆ ಓಡಿಯಾಡುವ ಅನುಕೂಲವನ್ನು ಸರ್ವರೂ ಪಡೆಯುವುದು ಶಾಂತಿಸ್ಥಾಪನೆಯ ಗುರುತಾಗಬೇಕು."

ಇದರ ಅರ್ಥವೇನೆಂದರೆ ಸಮುದ್ರ ಸಂಚಾರದ ಹಾದಿಯನ್ನು ಹಡುಗುಗಳ ಸಹಾಯದಿಂದ ಇನ್ನೊಬ್ಬರಿಗೆ ದೊರೆಯದಂತೆ ಕಟ್ಟುವುದು, ವ್ಯಾಪಾರ ಸೌಲಭ್ಯಕ್ಕೆ ಅಡ್ಡಿ ಉಂಟುಮಾಡುವುದು ಇವೇ ಮೊದಲಾದ ಅಡಚಣೆಗಳಿಗೆ ಇನ್ನು ಮುಂದೆ ಆಸ್ಪದ ಕೊಡದಂತಹ ಶಾಂತಿ ಏರ್ಪಡಬೇಕು. ಇಂತಹ ವಿಘ್ನಗಳನ್ನು ನಿವಾರಿಸುವ ಜೊತೆಗೆ ವಿಮಾನಗಳಿಂದ ಸಮುದ್ರಯಾನಕ್ಕೆ ಬರುವ ತೊಂದರೆಗಳನ್ನೂ, ಒಂದು ದೇಶದ ಜನರು ಪರದೇಶದ ಸಾಮಗ್ರಿಗಳಿಗೆ ಹಾಕುವ ಬಹಿಷ್ಕಾರ ಪದ್ಧತಿಯನ್ನೂ ನಿವಾರಣೆಮಾಡುವುದು ಶಾಂತಿಸ್ಥಾಪಕರ ನೆನಪಿನಲ್ಲಿರುವುದು ಉತ್ತಮ.

VIII. "ಪ್ರಪಂಚದ ಸಮಸ್ತ ಜನರೂ ಐಹಿಕ, ಧಾರ್ಮಿಕ ದೃಷ್ಟಿಯಿಂದ ಬಲಾತ್ಕಾರ ತತ್ವವನ್ನು ತ್ಯಜಿಸುವರೆಂದು ಮಿತ್ರರಾಷ್ಟ್ರಗಳಿಗೆ ನಂಬಿಕೆ ಇದೆ. ಹಾಗೆ ಮಾಡದಿದ್ದರೆ ಕೆಟ್ಟ ರಾಜ್ಯಗಳು ತಮ್ಮ ಸೈನ್ಯ, ನಾವೆ, ವಿಮಾನಗಳನ್ನು ಸ್ವೇಚ್ಛೆಯಾಗಿ ಹೆಚ್ಚಿಸಿಕೊಂಡು ಇತರ ರಾಷ್ಟ್ರಗಳ ಮೇಲೆ ಅಕೃತ್ಯವನ್ನು ನಡಸುವುವು. ಇದರಿಂದ ಪ್ರಪಂಚದಲ್ಲಿ ಅನಾಯಕತ್ವ ಎಂದಿನಂತೆ ತಲೆದೋರುವುದು. ಆದಕಾರಣ ಪ್ರಪಂಚದಲ್ಲಿ ಶಾಶ್ವತವಾದ ಶಾಂತಿ ಸ್ಥಾಪಿತವಾಗಿ ಸಾರ್ವಜನಿಕ ಭದ್ರತೆ ನೆಲಸುವವರೆಗೆ ಶತ್ರುಗಳನ್ನು ನಿರಾಯುಧರನ್ನಾಗಿ ಮಾಡುವುದು ಅತ್ಯಾವಶ್ಯಕ. ಜೊತೆಗೆ ಶಾಂತರೀತಿಯಿಂದ ಪ್ರವರ್ತಿಸಬೇಕೆಂದಿರುವ ಇತರ ರಾಜ್ಯಗಳ ಭೂಬಲ ಜಲಬಲ ವಾಯುಬಲಗಳನ್ನು ಕಾಪಾಡುವದರ ಸಲುವಾಗಿ ಆಗುವ ಖರ್ಚಿನ ಹೊರೆಯನ್ನು ಕಡಮೆಮಾಡಲು ತಕ್ಕ ಉಪಾಯ, ಸಹಾಯ, ಪ್ರೋತ್ಸಾಹಗಳನ್ನು ಮಿತ್ರರಾಷ್ಟ್ರಗಳು ಕೊಡುವುವು."

ಈ ನೀತಿ ಸಾಧನೆಗೆ ಎರಡು ಮೆಟ್ಟಲುಗಳಿವೆ. ಶತ್ರುಗಳನ್ನು ಸದ್ಯದಲ್ಲಿ ನಿರಾಯುಧರನ್ನಾಗಿ ಮಾಡುವುದು ಮೊದಲನೆಯದು. ಇತರ ರಾಷ್ಟ್ರಗಳ ರಕ್ಷಣಾಬಲದ ಹೊರೆಯನ್ನು ಕಡಮೆಮಾಡುವುದು ಎರಡನೆಯದು. ತಾತ್ಕಾಲಿಕವಾಗಿ ಇಂಗ್ಲೆಂಡ್, ಅಮೇರಿಕ, ರಷ್ಯಾ ದೇಶಗಳು ಮಾತ್ರ ಪ್ರಪಂಚ ರಕ್ಷಣೆಯ ಜವಾಬ್ದಾರಿಯನ್ನು ಹೊರಬೇಕೆಂದರ್ಥವಾಗುವುದು. ಈ ಕೆಲಸ ಸಮರ್ಪಕವಾಗಿ ನಡೆಯಬೇಕಾದರೆ

ಈ ರಾಷ್ಟ್ರಗಳ ಶಕ್ತಿ ಅಪಾರವಾಗಿರಬೇಕು. ಇವು ತಮ್ಮ ಶಕ್ತಿಯನ್ನು ದುರುಪಯೋಗಪಡಿಸದೆ ಪ್ರಪಂಚ ಹಿತದ ದೃಷ್ಟಿಯಿಂದ ವರ್ತಿಸಬೇಕು. ಇದು ದೊಡ್ಡ ಜವಾಬ್ದಾರಿಯ ಕೆಲಸ. ಶಾಂತಿ ಶಾಶ್ವತವಾಗಿ ನೆಲಸಿದ ಮೇಲೆ ಇತರ ರಾಷ್ಟ್ರಗಳ ರಕ್ಷಣಾಬಲದ ಹೊರೆಯನ್ನು ಕಡಿಮೆಮಾಡಲು ಮಿತ್ರರಾಷ್ಟ್ರಗಳು ಪ್ರೋತ್ಸಾಹ ಕೊಡುವುವು ಎಂದು ಹೇಳುವುದರಿಂದ ಅಂತಹ ಕಾಲಬರುವುದು ಯಾವಾಗ? ಇದನ್ನು ತೀರ್ಮಾನಮಾಡುವವರು ಯಾರು? ಎಲ್ಲಿಯ ವರೆಗೆ ಶತ್ರುಗಳನ್ನು ನಿರಾಯುಧರಾಗಿಟ್ಟಿರುವುದು? ವಿಜಯಿಗಳಾದ ರಾಷ್ಟ್ರಗಳೇ ಪ್ರಪಂಚ ರಕ್ಷಣೆಯ ಕಾರ್ಯವನ್ನು ನಿಸ್ಪೃಹತೆಯಿಂದ ಮಾಡುತ್ತಿರುವರೋ ಇಲ್ಲವೋ ಎಂಬುದನ್ನು ನಿರ್ಣಯಿಸುವವರು ಯಾರು? ಅವರನ್ನು ಹಾಗೆ ಮಾಡುವಂತೆ ನಿರ್ಬಂಧಿಸುವ ಶಕ್ತಿ ಯಾವುದು? ಇವೇ ಮೊದಲಾದ ಸಂದೇಹಗಳಿಗೆ ಸಮಂಜಸವಾದ ಉತ್ತರ ಕೊಟ್ಟಂತಾಗಲಿಲ್ಲ.

ಕೊನೆಯ ಮಾತು. ಯುದ್ಧ ಮಧ್ಯದಲ್ಲಿ ಹೊರಟಿರುವ ಈ ಘೋಷಣೆಯಲ್ಲಿ ಕೆಲವು ನ್ಯೂನತೆಗಳಿರುವುದು ಸ್ವಾಭಾವಿಕ. ನ್ಯೂನತೆಗಳಿಂದ ಕೂಡಿದ ಮಾತ್ರಕ್ಕೇ ಇದು ಅಪ್ರಯೋಜಕವೆಂದೆಣಿಸಲಾಗದು. ಅಟ್ಲಾಂಟಿಕ್ ಸನದಿನಲ್ಲಿ ಅರ್ಥಗರ್ಭಿತವಾದ ಅಂಶಗಳನೇಕವಿರುವುವು. ಅನೇಕ ಮುಖ್ಯವಾದ ರಾಜಕೀಯ ತತ್ವಗಳು ಅಡಗಿರುವುವು. ಮಿತ್ರರಾಷ್ಟ್ರಗಳು ಕೈಕೊಂಡಿರುವ ಕಾರ್ಯದ ಧ್ಯೇಯ ಏನು, ಮಿತ್ರರಾಷ್ಟ್ರಗಳ ಪ್ರಜೆಗಳು ತಮ್ಮ ತನು, ಮನ, ಧನಗಳನ್ನು ಏತಕ್ಕೋಸ್ಕರ ಅರ್ಪಿಸುತ್ತಿರುವರು ಎಂಬ ವಿಷಯಗಳನ್ನು ಈ ಘೋಷಣೆಯು ಸೂಕ್ಷ್ಮವಾಗಿ ಸೂಚಿಸುವುದು. ಜೊತೆಗೆ ನಾಳೆ ಚರ್ಚೆಗೂ ಆಚರಣೆಗೂ ಬರುವ ಶಾಂತಿ ಪದ್ಧತಿಗೆ ಈ ಸನದೇ ಮುಖ್ಯಾಧಾರವಾಗುವ ಸಂಭವ ಉಂಟು. ಈ ಸನದಿನಲ್ಲಿ ಸೂಚಿಸಿರುವ ಮುಖ್ಯ ತತ್ವಗಳು ಶಾಂತಿಯ ಮೂಲಮಂತ್ರವಾಗುವಲ್ಲಿ ಪ್ರಪಂಚದ ಶಾಂತಿಯು ಚಿರಕಾಲ ನೆಲಸುವುದೆಂದು ಧಾರಾಳವಾಗಿ ಹೇಳಬಹುದು.

ಎಚ್. ಕೃಷ್ಣರಾವ್.

# ಫ್ಯಾಸಿಸಂ ಮುಸೋಲೀನಿಯ ಮುಖವಾಡ

ಫ್ಯಾಸಿಸಂ ಎನ್ನುವುದು ಸುಮಾರು ೧೯೨೨ ರಿಂದ ೨೫-೭-೧೯೪೩ರವರೆಗೂ ಇಟಲಿಯ ರಾಜಕೀಯವನ್ನು ಆಳಿ ನಡಸಿದ ತತ್ವ. ಇದನ್ನು ರಾಜಕೀಯ ಸಿದ್ಧಾಂತ ಎನ್ನುವ ಹಾಗಿಲ್ಲ. ಸಿದ್ಧಾಂತಕ್ಕೆ ಇರಬೇಕಾದ ತತ್ವ ಜಿಜ್ಞಾಸೆ ಇದರಲ್ಲಿ ತೋರುವುದಿಲ್ಲ. ಆದರೆ ಫ್ಯಾಸಿಸ್ಟ್ ಪಕ್ಷಪಾತಿಗಳು ಗೌರವಕ್ಕಾಗಿ ಸಿದ್ಧಾಂತ ಪಟ್ಟವನ್ನು ಇದಕ್ಕೆ ಕೊಟ್ಟಿರುತ್ತಾರೆ. ಮುಸೋಲೀನಿಯವರು ಫ್ಯಾಸಿಸ್ಟ್ ರಾಜಕೀಯ ಮತ್ತು ಸಾಮಾಜಿಕ ಸಿದ್ಧಾಂತ ತಮ್ಮದೆಂದು ಹೇಳಿಕೊಂಡಿರುವರು. ಇಟಲಿಯ ಪ್ರಸಿದ್ಧ ತತ್ವಶಾಸ್ತ್ರಜ್ಞರಾದ ಜಿಯೊವಾನಿ ಜೆಂಟಿಲೆ ಎಂಬವರು ಫ್ಯಾಸಿಸ್ಟ್ ಸಿದ್ಧಾಂತ ಒಂದನ್ನು ತಾರ್ಕಿಕವಾಗಿ ಸ್ಥಿರಪಡಿಸಲು ಪ್ರಯತ್ನಿಸಿರುವರು. ಅದೇನಿದ್ದರೂ ಫ್ಯಾಸಿಸಂ ಮೊಟ್ಟಮೊದಲು ಪ್ರಾರಂಭವಾದದ್ದು ಒಂದು ರಾಜಕೀಯ ಪಕ್ಷದ ನಿಯಮಾವಳಿಯ ರೂಪದಲ್ಲಿ.

ಕಾರಣವಿಲ್ಲದೆ ಕಾರ್ಯವಿಲ್ಲ. ಫ್ಯಾಸಿಸ್ಟ್ ರಾಜಕೀಯ ಪಕ್ಷದ ಹುಟ್ಟಿಗೆ ಕಾರಣವಾದ ಅಂಶಗಳನ್ನು ಈ ರೀತಿ ವಿವರಿಸಬಹುದು: "ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಪ್ರಪಂಚವನ್ನು ಹದಗೊಳಿಸಲು ಹೂಡಿದ ಯುದ್ಧ"ವೆಂದು ಕಳೆದ ಮಹಾಯುದ್ಧವು ವರ್ಣಿಸಲ್ಪಟ್ಟಿದೆ. ಈ ಧ್ಯೇಯವು ಯೂರೋಪಿನ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಅಭೂತಪೂರ್ವವಾದ ಉತ್ಸಾಹವನ್ನು ಹುಟ್ಟಿಸಿತು. ಪ್ರಜಾಪ್ರಭುತ್ವ ರಾಷ್ಟ್ರಗಳು ಜಯಶಾಲಿಗಳಾದವು. ಯುದ್ಧವಾದ ಮೇಲೆ ಇಟಲಿ ದೇಶದವರು ತಮ್ಮ ಜಯದಿಂದ ತಾವು ನಿರೀಕ್ಷಿಸುತ್ತಿದ್ದ ಫಲವನ್ನು ಪಡೆಯಲಿಲ್ಲ. ಇಟಲಿಯ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳು ತೀರ ಕೆಟ್ಟವು. ಸಾಮೂಹಿಕ ಸ್ವಾಮ್ಯವಾದವು ತಲೆಯೆತ್ತಿತ್ತು. ತನ್ನ ದೇಶವನ್ನು ಪ್ರಜಾಪ್ರಭುತ್ವದ ರಾಷ್ಟ್ರಗಳ ಮತ್ತು ಸಾಮೂಹಿಕ ಸ್ವಾಮ್ಯವಾದಿಗಳ ಸೋಂಕಿನಿಂದ ಬಿಡುಗಡೆಮಾಡಿ ಇಟಲಿಯ ರಾಜಕೀಯವನ್ನು ಪುನರುಜ್ಜೀವನಗೊಳಿಸಲು ವಿಧಾಯಕ ರಾಜ್ಯಾಡಳಿತ ಪದ್ಧತಿಯನ್ನು ಸ್ಥಾಪಿಸಬೇಕೆಂದು ಮುಸೋಲೀನಿ ಪ್ರಯತ್ನಪಟ್ಟರು. ದೇಶದ ಯುವಕರನ್ನು ತಮ್ಮ ಅಭಿಮತಕ್ಕೆ ಒಲಿಸಿಕೊಂಡು ಫ್ಯಾಸಿಸ್ಟ್ ಪಾರ್ಟಿಯನ್ನು ಸ್ಥಾಪನೆಮಾಡಿದರು. ತಮ್ಮ ಪಾರ್ಟಿಯು ಬಲಪಟ್ಟ ಒಡನೆಯೇ ೧೯೨೨ ನೆಯ ಅಕ್ಟೋಬರ್ ತಿಂಗಳು ೨೮ ನೆಯ ತಾರೀಕಿನ ದಿನ ರೋಂ ಸರ್ಕಾರವನ್ನು ವಶಪಡಿಸಿಕೊಂಡರು. ಅಂದು ಫ್ಯಾಸಿಸ್ಟ್ ರಾಷ್ಟ್ರವು ಉದಯವಾಯಿತು.

ಫ್ಯಾಸಿಸ್ಟ್ ರಾಷ್ಟ್ರಕ್ಕೆ "ಟೋಟಾಲಿಟೇರಿಯನ್" ಅಂದರೆ ಪ್ರಭುತ್ವವು ಒಂದೇ ಕಡೆ ಕೇಂದ್ರೀಕೃತವಾದ ರಾಷ್ಟ್ರ ಎಂದು ಹೆಸರು. ರಾಷ್ಟ್ರ ಸಂಸ್ಥೆಯು ಸಕಲ ಸಂಸ್ಥೆಗಳನ್ನೂ ಒಳಗೊಂಡು ಅವುಗಳನ್ನು ಮೀರಿಸಿದ ಸಂಸ್ಥೆ. ಅದನ್ನು ಮೀರಿಸಿದ್ದು ಬೇರೊಂದು ಅಧಿಕಾರವಿರಲಾರದು; ಅದನ್ನು ಎದುರಿಸಲು ಶಕ್ಯವುಳ್ಳ ಅಧಿಕಾರವೂ ಇರಲಾರದು. ಅದರದು ಸರ್ವಾಧಿಕಾರ. ಅದನ್ನು ನಡಸಲು ಸಾಮರ್ಥ್ಯ ಉಳ್ಳವನು ಸರ್ವಾಧಿಕಾರಿ. ಇವೆಲ್ಲ ತತ್ವಗಳನ್ನು ಮುಸೊಲೀನಿ ತಾವೇ ಒಂದು ಪುಸ್ತಕ ರೂಪದಲ್ಲಿ ಬರೆದಿಟ್ಟರು. ಅದರ ಸಾರಾಂಶವನ್ನು ಈ ರೀತಿ ಸಂಗ್ರಹಿಸ ಬಹುದು:—

ರಾಷ್ಟ್ರದ ಸೇವೆಗಾಗಿಯೇ ಏರ್ಪಟ್ಟ ಪ್ರಭು ಸಂಸ್ಥೆ ಫ್ಯಾಸಿಸ್ಟ್ ಸಂಸ್ಥೆ. ಪ್ರಪಂಚದಲ್ಲಿ ಇಟಾಲಿಯನ್ ಜನರ ಮೇಲ್ಮೆಯನ್ನು ಸ್ಥಾಪಿಸುವುದು ಇದರ ಗುರಿ. ಇದಕ್ಕಾಗಿ ಇಟಲಿಯು ಬಲವಾದ ಸೈನ್ಯವನ್ನು ಕಟ್ಟಬೇಕು; ಪ್ರತಿಯೊಬ್ಬ ಇಟಲಿ ದೇಶಸ್ಥನೂ ರಾಷ್ಟ್ರದ ಸೈನಿಕನಾಗಿ ಒಬ್ಬ ನಾಯಕನ ಸಿಸ್ತಿಗೆ ವಿಧೇಯನಾಗಿ ನಡೆದು ಕೊಳ್ಳಲು ಸಿದ್ಧನಾಗಿರಬೇಕು. ನಾಯಕನ ಆಜ್ಞೆಯನ್ನು ಮೀರಲು ಪ್ರಯತ್ನ ಪಡುವವನು ಪರಮದ್ರೋಹಿ. ದೇಶಕ್ಕೆಲ್ಲಾ ವಿಧಾಯಕನೇ ಪ್ರಭು. ಜನರೆಲ್ಲರೂ ಅವನ ಅನುಯಾಯಿಗಳು, ಎಲ್ಲರೂ ಫ್ಯಾಸಿಸ್ಟರು, ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿರುವಂತೆ ಇಟಲಿಯಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳು ಇರಕೂಡದು.

ಮುಸೊಲೀನಿಯ ಅಭಿಪ್ರಾಯದಲ್ಲಿ ಇಟಲಿಯು ಸಾಮಾನ್ಯ ದೇಶವಲ್ಲ; ಅದು ಧರ್ಮಭೂಮಿ; ಅದರ ರಾಜ್ಯ ನೀತಿಯು ಬರಿಯ ರಾಜ್ಯನೀತಿಯಲ್ಲ; ಅದು ಜನಾಂಗದ ಮತ. ಶಕ್ತಿಯನ್ನು ಗಳಿಸುವುದು, ರೋಮನ್ ಸಾರ್ವಭೌಮತ್ವವನ್ನು ಸ್ಥಾಪಿಸು ವುದು ಅದರ ಪರಮಪುರುಷಾರ್ಥ. ಈ ಪುರುಷಾರ್ಥ ಸಾಧನೆಗಾಗಿ ಪ್ರತಿಯೊಬ್ಬ ರೋಮನನೂ ತನ್ನ ತನು ಮನ ಧನಗಳನ್ನು ಅರ್ಪಿಸಲು ಸಿದ್ಧವಾಗಿರಬೇಕು. ರಾಷ್ಟ್ರಕ್ಕಾಗಿ ವ್ಯಕ್ತಿಯೇ ಹೊರತು, ವ್ಯಕ್ತಿಗಾಗಿ ರಾಷ್ಟ್ರವಲ್ಲ. ರಾಷ್ಟ್ರಕ್ಕಾಗಿ ಸ್ವಾರ್ಥತ್ಯಾಗಮಾಡಲು ಸಿದ್ಧನಾದವನೇ ನಿಜವಾದ ರೋಮನ್‌ಪ್ರಜೆ. ರಾಷ್ಟ್ರದ ಉನ್ನತಿ ಎಂಬ ಪರಮಧ್ಯೇಯ ಸಾಧನೆಗೆ ಸಿಸ್ತು ಮುಖ್ಯ. ಸಿಸ್ತಿಗೆ ಕಟ್ಟು ಬೀಳುವುದು ವಿವೇಕ. ಸ್ವಾತಂತ್ರ್ಯವೆಂಬ ಬಿಸಿಲುಗುದುರೆಯನ್ನು ಬೆನ್ನಹತ್ತುವುದು ಮರುಳುತನ. ಪ್ರಜೆಯ ಆತ್ಮೋನ್ನತಿಗೆ ಮುಖ್ಯವಾಗಿ ಬೇಕಾದ ಸಿಸ್ತನ್ನು ನೀಡು ವವನು ನಿಸ್ಪೃಹನಾದ ರಾಷ್ಟ್ರನಾಯಕ. ವ್ಯಕ್ತಿಗಳೆಲ್ಲರ ನಿಸ್ಪೃಹತೆ, ರಾಷ್ಟ್ರವೆಲ್ಲ ದರ ಸ್ವಾತಂತ್ರ್ಯ ಈತನಲ್ಲಿ ಮೂರ್ತಿಮತ್ತಾಗಿದೆ. ಇವನಿಟ್ಟ ಸಿಸ್ತನ್ನು ಸ್ವೈರವೃತ್ತಿಗೆ ಮನಸೋತು ಉಲ್ಲಂಘಿಸುವವನು ರಾಷ್ಟ್ರದ್ರೋಹಿ. ವ್ಯಕ್ತಿಗಳ ಸಿಸ್ತಿನಿಂದಲೂ

ನಿಸ್ಪೃಹತೆಯಿಂದಲೂ, ಸ್ವಾರ್ಥತ್ಯಾಗದಿಂದಲೂ ಪುಷ್ಟಿಗೊಂಡ ಬಲಿಷ್ಠ ಗರ್ವಿಷ್ಠ ಇಟಲಿ ರಾಷ್ಟ್ರದ ಸಾರ್ವಭೌಮತ್ವವೇ ಫ್ಯಾಸಿಸ್ಟ್‌ಪಕ್ಷದ ಮುಖ್ಯಗುರಿ.

ಜೀವನದ ಹೋರಾಟದಲ್ಲಿ ಯಾರು ಬಲಿಷ್ಠರೋ ಅವರು ಜಯಶೀಲರು. ದುರ್ಬಲರಿಗೆ ಈ ಪ್ರಪಂಚದಲ್ಲಿ ಸ್ಥಾನವಿಲ್ಲ. ಅಂತರರಾಷ್ಟ್ರೀಯ ಜೀವನದಲ್ಲೂ ಹಾಗೆಯೇ ; ಯಾವುದು ಶಕ್ತಿಯುತವಾದುದೋ ಅದಕ್ಕೆ ದೇವರು ತನ್ನ ಅಧಿಕಾರ ವನ್ನು ದಯಪಾಲಿಸುವನು. ಆದುದರಿಂದ ಪ್ರಬುದ್ಧವಾದ ರಾಷ್ಟ್ರವು ಸರ್ವದಾ ಶಕ್ತಿಯನ್ನು ಗಳಿಸುತ್ತ ಯುದ್ಧದಲ್ಲಿ ತನ್ನ ಶಕ್ತಿಯನ್ನು ತೋರಿಸುತ್ತಿರಬೇಕು. ಸಂಗ್ರಾಮ ಮನೋಭಾವವನ್ನು ತೊರೆದ ರಾಷ್ಟ್ರ ನಿರ್ವೀರ್ಯವಾಗುವುದು. ಅದು ಈ ಪ್ರಪಂಚದ ರಣರಂಗದಲ್ಲಿ ಬಾಳಲಾರದು. ಪ್ರಪಂಚದಲ್ಲಿ ಶಾಶ್ವತ ಶಾಂತಿ ಸ್ಥಾಪನೆ ಮಾಡಬೇಕೆಂದು ಪ್ರಯತ್ನಪಡುವುದು ಪ್ರಗತಿಗೆ ವಿರುದ್ಧವಾದ ನೀತಿ. ವೀರವ್ರತ ಹಿಡಿದೇ ಜನಾಂಗವು ಮುಂದುವರಿಯಲು ಸಾಧ್ಯ. ಆದುದರಿಂದ ಚಿಕ್ಕಂದಿ ನಿಂದಲೂ ಶಾಲೆಗಳಲ್ಲಿ ಬಾಲಕ ಬಾಲಕಿಯರಿಗೆ ತಮ್ಮ ರಾಷ್ಟ್ರದ ವೀರರಲ್ಲಿ ಪೂಜ್ಯ ಭಾವನೆಯನ್ನು ಹುಟ್ಟಿಸಬೇಕು. ತಾವು ಉತ್ಕೃಷ್ಟ ರಾಷ್ಟ್ರದ ಉತ್ಕೃಷ್ಟ ಪ್ರಜೆ ಗಳೆಂಬ ಭಾವನೆ ಅವರ ಮನಸ್ಸಿನಲ್ಲಿ ಬೇರೂರಬೇಕು. ರೋಮನ್ ಸಾಮ್ರಾಜ್ಯದ ಗತ ವೈಭವ ಪುನಃ ಸ್ಥಾಪಿಸುವ ಕಾಲ ಬಂದಿದೆಯೆಂದು ಜನರ ಮನಸ್ಸಿನಲ್ಲಿ ಮೂಡಬೇಕು. ರಾಷ್ಟ್ರ ಒಂದು, ರಾಷ್ಟ್ರದ ಭಾಗ್ಯವಿಧಾತನೊಬ್ಬ, ಇಟಲಿಯ ಜನರ ಆತ್ಮ ಒಂದು, ಅವರ ಆಶೋತ್ತರಗಳೆಲ್ಲವೂ ಒಂದೇ ರೀತಿಯವು, ಇಟಲಿಯ ರಾಷ್ಟ್ರನಾಯಕನು ರಾಷ್ಟ್ರಜೀವನದ ಉಸಿರು; ರಾಷ್ಟ್ರಸಮಷ್ಟಿಯ ಪ್ರತಿನಿಧಿ ಪುರುಷ, ಎಂಬ ರಾಜ ಕೀಯ ಅದ್ವೈತ ಸಿದ್ಧಾಂತವು ಫ್ಯಾಸಿಸಮ್ಮಿನ ತಿರುಳು. ಈ ತತ್ವದ ಮೇಲೆ ಮೊನ್ನೆ ಮೊನ್ನೆಯವರೆಗೂ (೨೫-೭-೧೯೪೩) ಇಟಲಿಯ ಸರ್ವಾಧಿಕಾರ ಏರ್ಪಟ್ಟಿತ್ತು.

ಆದರೆ ಕಾಲಚಕ್ರ ಉರುಳುತ್ತಿದೆ. ನಾವು ಶಾಶ್ವತವಾಗಿರಬೇಕೆಂದು ಕಟ್ಟುವ ಮಂದಿರ ಗೋಪುರಗಳು ಒಂದಲ್ಲ ಒಂದು ದಿನ ಉರುಳದೇ ಇರುವುದಿಲ್ಲ. ಮುಸೊಲೀನಿ ತನ್ನ ಭವ್ಯ ರಾಷ್ಟ್ರಮಂದಿರವನ್ನು ಶಾಶ್ವತವಾದ ಅಡಿಗಲ್ಲಿನ ಮೇಲೆ ಸ್ಥಾಪಿಸಿಬಿಟ್ಟೆ ನೆಂದು ಭಾವಿಸಿದರು. ಗುಡಿಯನ್ನು ಕಟ್ಟಿ ತಮ್ಮನ್ನೇ ಅಲ್ಲಿ ದೇವತೆಯನ್ನಾಗಿ ಸ್ಥಾಪಿಸಿ ಕೊಂಡು ಜನರೆಲ್ಲರನ್ನೂ ಪೂಜೆಗೆ ಬರಹೇಳಿದಂತಾಯಿತು. ರಾಷ್ಟ್ರದ ಪ್ರತಿಷ್ಠೆಯ ಬದಲು ಸ್ವಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ಪ್ರಯತ್ನ ನಡೆದವು. ತಮ್ಮ ಪ್ರತಿಷ್ಠೆ ಆಶೋತ್ತರಗಳೇ ರಾಷ್ಟ್ರದ ಪ್ರತಿಷ್ಠೆ ಆಶೋತ್ತರಗಳೆಂಬ ಭ್ರಾಂತಿಗೆ ಮುಸೊಲೀನಿ ಒಳಗಾದರು. "ಅಧಿಕಾರ ಮಾನವನನ್ನು ಕೆಡಿಸುವುದು; ಸಂಪೂರ್ಣ ಅಧಿಕಾರ ಅವನನ್ನು ಸಂಪೂರ್ಣವಾಗಿ ಕೆಡಿಸುವುದು" ಎಂದು ಪ್ರಸಿದ್ಧ ಚರಿತ್ರಕಾರನೊಬ್ಬನು

ಹೇಳಿದ್ದಾನೆ. ಮುಸೊಲೀನಿಯ ಸ್ಥಿತಿಯು ಈ ರೀತಿ ಆಗಿದ್ದಿರಬೇಕೆಂದು ಈಚಿನ ಘಟನೆಗಳಿಂದ ಊಹಿಸಬಹುದಾಗಿದೆ. ಫ್ಯಾಸಿಸಂ ತತ್ವಕ್ಕೂ ಕಮ್ಯೂನಿಸಂ ತತ್ವಕ್ಕೂ ಪರಸ್ಪರ ವೈಷಮ್ಯವಿರುವುದೆಂಬ ಅಂಶವು ಮುಸೊಲೀನಿಯವರು ಹೇಳಿರುವ ಈ ಮಾತುಗಳಿಂದ ವ್ಯಕ್ತವಾಗುವುದು :

"ಫ್ಯಾಸಿಸಂ ಈಗ ಮತ್ತು ಯಾವಾಗಲೂ ಪವಿತ್ರತೆ ಪೌರುಷಗಳಲ್ಲಿ ನಂಬಿಕೆಯುಳ್ಳದ್ದು ; ಎಂದರೆ, ಕೇವಲ ಆರ್ಥಿಕ ಕಾರ್ಯ್ಯಾಚರಣೆಯಲ್ಲಿ ಇದಕ್ಕೆ ನಂಬಿಕೆ ಇಲ್ಲ. ಚರಿತ್ರೆಯು ಮಾನವನ ಆರ್ಥಿಕ ಜೀವನವನ್ನೇ ಸಾರವಾಗಿ ಉಳ್ಳದ್ದೆಂದು ನಂಬುವುದಾದರೆ ಮಾನವರು ಅತ್ತಲಿಂದ ಇತ್ತ, ಇತ್ತಲಿಂದ ಅತ್ತ ಅಲೆಗಳಂತೆ ಒಯ್ಯಲ್ಪಡುವ ನಿರ್ಜೀವ ಗೊಂಬೆಗಳಂತಾಗುವರು. ಸಮಾಜದಲ್ಲಿ ಒಂದು ವರ್ಗಕ್ಕೂ ಇನ್ನೊಂದು ವರ್ಗಕ್ಕೂ ಹೋರಾಟ ನಡೆಯುತ್ತಿರುವುದೇ ಮಾನವ ಸಮಾಜದ ಸಹಜ ಲಕ್ಷಣವೆಂಬ ದುರ್ನೀತಿ ಈ ಅಭಿಪ್ರಾಯದ ಮರಿ; ವರ್ಗಗಳ ಒಳಕಲಹ ಸಮಾಜದ ಮಾರ್ಪಾಟಿಗೆ ಮುಖ್ಯ ಕಾರಣವೆಂಬುದನ್ನು ಫ್ಯಾಸಿಸಂ ಒಪ್ಪುವುದಿಲ್ಲ. ಸಮಾಜದ ತಳಹದಿ ಆರ್ಥಿಕ—ಎಂಬ ಸಿದ್ಧಾಂತ ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ತಲೆಹಾಕಿದ್ದ ಅರ್ಥಶಾಸ್ತ್ರಜ್ಞರ ಸುಳ್ಳುಕಲ್ಪನೆ. ಆರ್ಥಿಕ ಸುಖವೇ ಪರಮ ಪುರುಷಾರ್ಥವೆಂಬ ಸಿದ್ಧಾಂತದಲ್ಲಿ ಸತ್ಯವಿಲ್ಲ. ಹಾಗಿರುವುದಾದರೆ ಮಾನವನು ಮೃಗಪ್ರಾಯನಾಗುವನು. ಅವನು ಬಯಕೆಯೆಲ್ಲ ಒಂದೇ ಒಂದಾಗುವುದು — ತಿಂದು ಕೊಬ್ಬುವುದು. ಇದರಿಂದ ಮಾನವನು ಕೇವಲ ಕುತ್ಸಿತವಾದ ಪಶುಜೀವನಕ್ಕೆ ಇಳಿಯುವನು."

ಸುಖವಲ್ಲ, ಕರ್ತವ್ಯನಿಷ್ಠೆ ; ಸ್ವಾತಂತ್ರ್ಯವಲ್ಲ, ಸಿಸ್ತು ; ಸಮಾನತೆಯಲ್ಲ, ಯೋಗ್ಯತೆಗೆ ತಕ್ಕ ತಾರತಮ್ಯದ ಬೆಲೆ ; ಸಂಖ್ಯೆಯಲ್ಲ, ಗುಣ ;—ಇವು ಫ್ಯಾಸಿಸ್ಟ್ ಸಿದ್ಧಾಂತದ ಧ್ಯೇಯಗಳೆಂದು ಮುಸೊಲೀನಿ ಪ್ರತಿಪಾದಿಸಿದರು.

ರಾಷ್ಟ್ರಸಂಸ್ಥೆಯ ಪ್ರಭುತ್ವ ಸರ್ವಾಧಿಕಾರಗಳು ಅದಮ್ಯವಾದವೆಂದು ಸ್ಥಾಪಿಸುವ ಉದ್ದೇಶದಿಂದ ಅದು ಧರ್ಮಾಧರ್ಮ, ಪಾಪಪುಣ್ಯ, ಯುಕ್ತಾಯುಕ್ತ ಎಂಬ ದ್ವಂದ್ವಗಳನ್ನು ಮೀರಿದುದೆಂದೂ ಪ್ರತಿಪಾದಿಸಿದರು. ನೀತಿ ಅನೀತಿ ಎನ್ನುವ ಧರ್ಮ ನಿರ್ಣಯ ವ್ಯಕ್ತಿಗಳಿಗೆ ಖಂಡಿತವಾಗಿ ಸಲ್ಲುವುದು. ಆದರೆ ರಾಷ್ಟ್ರಸಂಸ್ಥೆಯು ಈ ನಿರ್ಣಯವನ್ನು ಮೀರಿದ ನಿರಂಜನ ನಿರ್ಲಿಪ್ತ ಸರ್ವವ್ಯಾಪಕ ಸರ್ವಶಕ್ತವಾದ ತತ್ವವೆಂದು ಜರ್ಮನ್ ತತ್ವಶಾಸ್ತ್ರಜ್ಞನಾದ **ಹೆಗೆಲ್** ಎಂಬವನ ವಾದವನ್ನು ಮುಸೊಲೀನಿ ಸಮರ್ಥಿಸಿದರು. ಈ ನೀತಿಯ ಶೃಂಖಲೆಯಿಂದ ಬಿಡಿಸಿಕೊಂಡು ತನ್ನ ಬೃಹದಾತ್ಮ ವಿಕಾಸಕ್ಕೆ ತಡೆಬರುವ ಶಕ್ತಿಸಮೂಹಗಳನ್ನು ದರ್ಪದಿಂದ ತೊಡೆದುಬಿಡುವ ಪರಾಕ್ರಮ

ಉಳ್ಳದ್ದು ರಾಷ್ಟ್ರಸಂಸ್ಥೆಯ ಮುಖ್ಯ ಲಕ್ಷಣವೆಂಬುದನ್ನು ಸ್ಥಾಪಿಸಿದರು. ಇಂತಹ ಅದಮ್ಯಶಕ್ತಿಯೂ ಅನೀತಿಯುತ ಪರಾಕ್ರಮವೂ ರಾಷ್ಟ್ರೀಯತೆಯ ಲಕ್ಷಣವೆಂಬ ಭಾವನೆ ಜಗತ್ತಿನ ಶಾಂತಿಗೆ ಭಂಗತರುವ ತತ್ವವೆಂದು ಸ್ಥಿರಪಡಿಸಲು ಹೆಚ್ಚು ತರ್ಕ ಬೇಕಿಲ್ಲ.

ಮುಸೊಲೀನಿಯವರ ಫ್ಯಾಸಿಸ್ಟ್ ತತ್ವ ಪ್ರತಿಪಾದನೆಯಲ್ಲಿ ಸತ್ಯಾಸತ್ಯ, ಧರ್ಮಾಧರ್ಮಗಳ ಮಿಶ್ರಣದಿಂದ ನಾವು ಮರುಳಾಗುವ ಸಂಭವವಿದೆ. ಇದಲ್ಲದೆ ಮುಸೊಲೀನಿ ಕಾರ್ಯರಂಗಕ್ಕೆ ಇಳಿದ ಮೇಲೆ ತಮ್ಮ ಧ್ಯೇಯವಾದವನ್ನು ಬದಿಗಿಡ ಬೇಕಾಯಿತು. ತಮ್ಮ ಪಕ್ಷದ ಮೇಲ್ಮೆಗಾಗಿ ಕುಟಿಲೋಪಾಯಗಳನ್ನು ಹೂಡ ಬೇಕಾಯಿತು. ರಾಷ್ಟ್ರಸಂಸ್ಥೆಯ ಹೆಸರಿನಲ್ಲಿ ಹೂಡಿದ ಈ ಉಪಾಯಗಳು ನೀತಿ ನಿಯಮಗಳಿಗೆ ಒಳಪಡಬೇಕಾಗಿಲ್ಲವೆಂಬ ಸಿದ್ಧಾಂತವನ್ನು ಏರ್ಪಡಿಸಿದ ಮೇಲಂತು ರಾಷ್ಟ್ರದ ಉನ್ನತಿಗೋಸ್ಕರವಾಗಿ, ಅಧಿಕಾರನಿಷ್ಠೆಗಾಗಿ ಏನು ಬೇಕಾದರೂ ಮಾಡ ಬಹುದಷ್ಟೇ? ಧ್ಯೇಯ ಶ್ರೇಷ್ಠವೆಂದ ಮೇಲೆ ಅದನ್ನು ಸಾಧಿಸಲು ಕೈಗೊಂಡ ಸಾಧನೆ ಎಲ್ಲವೂ ಸಾಧುವೆಂಬ **ಮೇಕಿಯವೆಲ್ಲಿಯ** (ಇಟಲಿಯ ಚಾಣಕ್ಯ) ರಾಜನೀತಿಯು ಮುಸೊಲೀನಿಯ ಜೀವನ ಸೂತ್ರವಾಯಿತು. ರಾಷ್ಟ್ರದ ಹೆಸರಿನಲ್ಲಿ ಕೈಕೊಂಡ ಕುಟಿಲೋಪಾಯಗಳಿಗೆಲ್ಲಾ ಧರ್ಮದ ಹೊದಿಕೆಯನ್ನು ಮುಸೊಲೀನಿಯು ಹೊದಿಸ ಬೇಕಾಯಿತು. ಫ್ಯಾಸಿಸ್ಟ್ ಧರ್ಮದ ಮುಖವಾಡವನ್ನು ತಾನು ಹಾಕಿಕೊಳ್ಳ ಬೇಕಾಯಿತು. ರಾಷ್ಟ್ರಸಂಸ್ಥೆಯು ಸರ್ವಾಧಿಕಾರದ ಮೂರ್ತರೂಪವೆಂದು ಹೀಗೆ ಬೋಧಿಸಿ ಅದರ ಹೆಸರಿನಲ್ಲಿ ತಮ್ಮ ಸರ್ವಾಧಿಕಾರವನ್ನು ಬಲಪಡಿಸಿಕೊಂಡರು. ಇಟಲಿಯ ನಿರಂಕುಶಾಧಿಕಾರಿಯಾದರು. ಪ್ರಜೆಗಳ ಹಿತಕ್ಕೆಂದು ಹೇಳಿ ಅವರಿಗಿದ್ದ ಅಲ್ಪಸ್ವಲ್ಪ ಸ್ವಾತಂತ್ರ್ಯವನ್ನು ಕಸಿದುಕೊಂಡರು. ಭಾಷಣ ಸ್ವಾತಂತ್ರ್ಯವಿಲ್ಲದಂತೆ ಮಾಡಿ ಅವರ ಬಾಯಿ ಮುಚ್ಚಿಸಿದರು. ಲೇಖನ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಜನರ ವಿಚಾರಯುತ ಜೀವನಕ್ಕೆ ಕಲ್ಲು ಹಾಕಿದರು. ಜನರು ಇಂಥದನ್ನೇ ಓದಬೇಕು, ಇಂಥದನ್ನೇ ಆಡಬೇಕು, ಇಂಥದನ್ನೇ ಬರೆಯಬೇಕೆಂಬ ನಿರ್ಬಂಧಗಳನ್ನಿಟ್ಟು ಮಾನ ವನ ಮಾನಸಿಕ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ನಾಶಗೊಳಿಸಿದರು. ಮುಖ್ಯ ಮುಸೊಲೀನಿಗೆ ಸ್ವಾತಂತ್ರ್ಯದಲ್ಲಿ ಸಂಬಿಕೆ ಇಲ್ಲ. 'ಸ್ವಾತಂತ್ರ್ಯ' ವೆಂಬ ಕಲ್ಪನಾ ರಾಜ್ಯಕ್ಕೆ ಆಸೆಪಟ್ಟು ಪ್ರಜಾಪ್ರಭುತ್ವ ರಾಷ್ಟ್ರಗಳು ನಿರ್ವೀರ್ಯವಾಗುತ್ತಿರುವು ವೆಂದು ಭಾವಿಸಿ ಇಟಲಿಯು ಆ ದಾರಿಯನ್ನು ಹಿಡಿಯಬಾರದೆಂಬ ದೃಢಸಂಕಲ್ಪವು ಮುಸೊಲೀನಿಯದಾಗಿದ್ದಿತು. ಈ ಭಾವನೆಗಳು ಮುಸೊಲೀನಿಯನ್ನು ತಪ್ಪುದಾರಿಗೆ ಎಳೆದವು. ಇಟಲಿಯ ಸ್ವಾತಂತ್ರ್ಯಸಾಧನೆಗೆ, ಐಕಮತ್ಯಕ್ಕೆ ಯತ್ನಿಸಿದ ಈ ದೇಶಾಭಿ

ಮಾನಿಗಳು ಇಟಲಿಯ ಅಭ್ಯುದಯಕ್ಕೆ ಕುಠಾರಪ್ರಾಯರಾದರು. ಫ್ಯಾಸಿಸ್ಟ್ ಅನ್ನುವ ಮಾತು 'ಫ್ಯಾಸಿಸ್' ಅನ್ನುವ ಪದದಿಂದ ಹುಟ್ಟಿದೆ. ಫ್ಯಾಸಿಸ್ ಎಂದರೆ ಲಾಠಿಗಳ ಒಂದು ಕಂತೆ. ಲಾಠಿಗಳನ್ನು ಒಂದು ಕಂತೆ ಕಟ್ಟಿ ಅದರೊಡನೆ ಒಂದು ಕೊಡಲಿ ಸೇರಿಸಿ, ಇದು ಕಂತೆಯು ಐಕ್ಯದ ಸೂಚನೆಯೆಂದೂ, ಮಧ್ಯೆ ಸೇರಿಸಿರುವ ಕೊಡಲಿ ಅಧಿಕಾರ ಸೂಚಕವೆಂದೂ ಮುಸೊಲೀನಿ ಸಂಕೇತ ಮಾಡಿಕೊಂಡಿದ್ದರು. ಅಧಿಕಾರ ಸೂಚಕವಾದ ಈ ಕೊಡಲಿ ಕಂತೆಯನ್ನೇ ಕತ್ತರಿಸುವ ಪ್ರಸಂಗ ಒದಗಿತು. ಇದು ಸಾಲದೆ ತಾವು ಜೂಲಿಯಸ್ ಸೀಸರ್ ಮೊದಲಾದ ಜಗಜ್ಜೇತೃಗಳಲ್ಲಿ ಒಬ್ಬರೆಂಬ ಭಾವನೆ ಇವರಲ್ಲಿ ಮೂಡಿ ಇಟಲಿಯ ಒಳ ಯೋಗಕ್ಷೇಮಕ್ಕೆ ತೊಡಗಿದ್ದ ಇವರು ಪ್ರಪಂಚವನ್ನು ಜಯಿಸಬೇಕೆಂಬ ಹಟ ತೊಟ್ಟರು. ಆಗತಾನೇ ಪ್ರಗತಿಯ ದಾರಿ ಹಿಡಿದಿದ್ದ ಇಟಲಿಯನ್ನು ಯುದ್ಧದ ದಾರಿಗೆ ಎಳೆದರು. ಅದರ ಪರಿಣಾಮ ವಾಗಿಯೇ ಇಟಲಿ ಇಂದಿನ ದುಃಸ್ಥಿತಿಗೆ ಬಂದಿತು. ನಾಗರಿಕತೆಯ ಬೆಳಕನ್ನು ನೀಡುವ ನೆಪದಲ್ಲಿ ಅಬಿಸೀನಿಯಾ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಈಥಿಯೋಪಿ ಯಾದ ಕಪ್ಪು ಜನರನ್ನು ಅನಾವಶ್ಯಕವಾಗಿ ದುಃಖಕ್ಕೆ ಈಡುಮಾಡಿದರು. ಆದರೆ ಆಫ್ರಿಕಾದಲ್ಲಿ ಸಾಮ್ರಾಜ್ಯವನ್ನು ಕಟ್ಟಿ ರೋಮನ್ ಚಕ್ರಾಧಿಪತ್ಯವನ್ನು ಅಲ್ಲಿ ಸ್ಥಾಪಿಸ ಬೇಕೆಂಬ ಅವರ ಹೆಬ್ಬಯಕೆ ಕೈಗೂಡಲಿಲ್ಲ. ಈ ಸಾಮ್ರಾಜ್ಯ ದಾಹ ಇಲ್ಲಿಗೆ ಆರಲಿಲ್ಲ. ಗ್ರೀಸ್ ಮತ್ತು ಅಲ್ಬೇನಿಯಾ ರಾಜ್ಯಗಳ ಮೇಲೆ ಅವರ ಕಣ್ಣು ಬಿದ್ದದ್ದು ತಿಳಿದ ವಿಷಯವೇ ಆಗಿದೆ. ಫ್ರಾನ್ಸಿನ ಆಕ್ರಮಣಕ್ಕೆ ನಡೆದ ಪ್ರಯತ್ನಗಳೂ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

ಮುಸೊಲೀನಿಗೆ ಶಾಂತಿವಾದದಲ್ಲಿ (Pacifism) ನಂಬಿಕೆಯಿಲ್ಲ. ಫ್ಯಾಸಿಸಂ ಸಿದ್ಧಾಂತದಲ್ಲಿ ಪ್ರಜೆಗಳೆಲ್ಲರೂ ಸಮಾನ ಹಕ್ಕುಭಾಧ್ಯತೆ ಉಳ್ಳವರೆಂಬ ವಾದಕ್ಕೆ ಅವಕಾಶವಿಲ್ಲ. ಪರಸ್ಪರ ಅಭಿಪ್ರಾಯವಿನಿಮಯದಿಂದ ಒಂದು ತೀರ್ಮಾನಕ್ಕೆ ಬರುವ ಪ್ರಜಾಸತ್ತೆಯ ಪದ್ಧತಿಗೆ ಇಲ್ಲಿ ಎಡೆಯಿಲ್ಲ. ವ್ಯಕ್ತಿಯ ಮೇಲ್ಮೆಯನ್ನು ಪ್ರತಿಪಾದಿ ಸುವ ವಾದ (Individualism) ಗಳಿಗಂತೂ ತೀರ ವಿರೋಧವಾದದ್ದು ಫ್ಯಾಸಿಸಂ.

ರಾಜ್ಯಕ್ಕಾಗಿ ವ್ಯಕ್ತಿಯೆ, ವ್ಯಕ್ತಿಗಾಗಿ ರಾಜ್ಯವೆ ಎಂಬುದು ರಾಜಕೀಯ ಶಾಸ್ತ್ರದಲ್ಲಿ ಬಹು ಮುಖ್ಯವಾದ ಪ್ರಶ್ನೆ. ಹಾಗೆಯೇ ಸಿಸ್ತಿಗಾಗಿ ಸ್ವಾತಂತ್ರ್ಯವೆ, ಸ್ವಾತಂತ್ರ್ಯಕ್ಕಾಗಿ ಸಿಸ್ತೆ ಎನ್ನುವುದೂ ಅಷ್ಟೇ ಮುಖ್ಯವಾದದ್ದು. ರಾಜ್ಯಕ್ಕಾಗಿ ವ್ಯಕ್ತಿಯೇ ಹೊರತು, ವ್ಯಕ್ತಿಗಾಗಿ ರಾಜ್ಯವಲ್ಲವೆಂಬುದು, ಸಿಸ್ತಿಗಾಗಿ ಸ್ವಾತಂತ್ರ್ಯವೇ ಹೊರತು, ಸ್ವಾತಂತ್ರ್ಯಕ್ಕಾಗಿ ಸಿಸ್ತಲ್ಲವೆಂಬುದು ಈ ಪ್ರಶ್ನೆಗಳಿಗೆ ಫ್ಯಾಸಿಸಂ ಕೊಟ್ಟ ಉತ್ತರ. ಇಂತಹ ಸಿದ್ಧಾಂತಗಳು ಮಾನವನ ಅಭ್ಯುದಯಕ್ಕೆ, ಆತ್ಮವಿಕಾಸಕ್ಕೆ,

ಅಧ್ಯಾತ್ಮ ಶ್ರೇಯಸ್ಸಿಗೆ ಹಾನಿಕರವೆಂಬುದನ್ನು ಇಂದು ಜಗತ್ತಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳಿಂದ ಅರಿಯುತ್ತಿದ್ದೇವೆ. ಇದಲ್ಲದೆ ಫ್ಯಾಸಿಸಂ ದೃಷ್ಟಿಯಲ್ಲಿ ಎಲ್ಲ ಜನಾಂಗಗಳೂ ಸಮಾನ ಹಕ್ಕುಬಾಧ್ಯತೆ ಉಳ್ಳವು ಎಂಬ ಉದಾರಭಾವನೆಗೆ ಅವಕಾಶ ವಿಲ್ಲ. ಕೆಲವು ಜನಾಂಗಗಳು ಶ್ರೇಷ್ಠ, ಕೆಲವು ಕೀಳು ಎಂಬ ಭಾವನೆ ಫ್ಯಾಸಿಸಂಗೆ ಸಹಜ ವಾದದ್ದು. ಇಂತಹ ದುರಹಂಕಾರಪೂರ್ಣ ವಾದಗಳು ದ್ವೇಷ, ಅಸೂಯೆಗಳನ್ನು ಎಬ್ಬಿಸಿ ರಾಷ್ಟ್ರ ರಾಷ್ಟ್ರಕ್ಕೂ ಜನಾಂಗ ಜನಾಂಗಕ್ಕೂ ಇರಬೇಕಾದ ಮೈತ್ರಿ ಯನ್ನು ಹಾಳುಮಾಡುತ್ತಿರುವುದನ್ನೂ ಕಣ್ಣಾರ ಕಾಣುತ್ತಿದ್ದೇವೆ. ಹೊಸ್ನು ಮಣ್ಣುಗಳಿಗಾಗಿ ರಕ್ತದ ಕೋಡಿಯನ್ನು ಹರಿಸಲು ಹಿಂತೆಗೆಯದ ಆಸುರ ಪ್ರಕೃತಿ ಗಳಾದ ಸರ್ವಾಧಿಕಾರಿಗಳ ಕೈಗೆ ರಾಜ್ಯಸೂತ್ರ ಸಿಕ್ಕಿಬಿದ್ದರೆ ಆಗುವ ಅನಾಹುತ ಗಳು ನಮ್ಮ ಮನಸ್ಸಿನಲ್ಲಿ ನಾಟಿವೆ. ನಿರಪರಾಧಿಗಳಾದ ಹೆಂಗಸರು, ಮಕ್ಕಳ ಮೇಲೆ ಧಾಳಿ ನಡಸುವ ನೀಚಪ್ರವೃತ್ತಿಯನ್ನು, ಮತ್ತು ಇದಕ್ಕಾಗಿ ವೈಜ್ಞಾನಿಕ ಜ್ಞಾನ ಭಂಡಾರವನ್ನು ಉಪಯೋಗಿಸಿಕೊಳ್ಳುವ ವಿದ್ಯಮಾನಗಳನ್ನೂ ನೋಡಿ ಇದು ನಾಗರಿಕತೆಯ ಲಕ್ಷಣವೇ ಎಂದು ಕೇಳುವಂತಾಗಿದೆ. ನಮ್ಮಂತೆಯೇ ಇತರರು, ನಾವು ಸುಖ ಬಯಸುವಂತೆಯೇ ಇತರರೂ ಬಯಸುವರು, ನಮಗೆ ಐಶ್ವರ್ಯ ಬೇಕಾದರೆ ಇತರರಿಗೂ ಅದು ಬೇಕಾದುದು, ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬೇಕಾದರೆ ಇತರ ರಾಷ್ಟ್ರಗಳಿಗೂ ಅದೇ ಸ್ವಾತಂತ್ರ್ಯದ ಬಯಕೆ ಇರಬಲ್ಲದು ಎಂಬ ಸಹಾನುಭೂತಿ, ಸಹನೆ, ಮೈತ್ರಿ, ಔದಾರ್ಯ ಇವು ಮಾಯವಾಗಿ ರಾಷ್ಟ್ರೀಯ ಸ್ವಾರ್ಥತೆ, ಅಶಾಂತಿಗಳು ಇಂದು ಜಗತ್ತಿನಲ್ಲಿ ಕ್ಷೋಭೆಯನ್ನುಂಟುಮಾಡುತ್ತಿವೆ. ದೊಡ್ಡ ರಾಷ್ಟ್ರಗಳು ನಿರ್ದಾಕ್ಷಿಣ್ಯವಾಗಿ ಸಣ್ಣ ರಾಷ್ಟ್ರಗಳನ್ನು ನುಂಗಿಬಿಡುವ ಪ್ರಯತ್ನಗಳು ನಡೆಯುತ್ತಿವೆ. ಈ ಸನ್ನಿವೇಶ ಒದಗುವುದಕ್ಕೆ ಫ್ಯಾಸಿಸಂ ಬಹು ಮಟ್ಟಿಗೆ ಕಾರಣವಾಗಿದೆ. ವ್ಯಕ್ತಿಗಳಲ್ಲಿ ದರೋಡೆಕಾರರಿರುವಂತೆ ರಾಷ್ಟ್ರಗಳಲ್ಲಿ ದರೋಡೆಕಾರ ರಾಷ್ಟ್ರಗಳು ಏರ್ಪಟ್ಟಿವೆ. ದುಷ್ಟ ರಾಷ್ಟ್ರಗಳ ನಿಗ್ರಹ, ಶಿಷ್ಟ ರಾಷ್ಟ್ರಗಳ ಪರಿಪಾಲನೆಗಾಗಿ ಅಂತರರಾಷ್ಟ್ರೀಯ ಸಂಸ್ಥೆಯೊಂದು ಏರ್ಪಟ್ಟ ಹೊರತು ಲೋಕಕ್ಕೆ ಕ್ಷೇಮವಿಲ್ಲವೆಂದು ತೋರುವುದು. ಈ ಸಂಸ್ಥೆಯಲ್ಲಿ ಬರಿಯ ಧಾರ್ಮಿಕಶಕ್ತಿ ಇದ್ದರೆ ಮಾತ್ರ ಪ್ರಯೋಜನವಿಲ್ಲ. ಧಾರ್ಮಿಕಶಕ್ತಿ ನಿಗ್ರಹಶಕ್ತಿ ಗಳೆರಡೂ ಸೇರಬೇಕು. ಅಂತಹ ಸಂಸ್ಥೆಯ ರೂಪರಚನೆ ಹೇಗಾಗಬಹುದೆಂದು ಈಗಲೇ ಊಹಿಸಲು ಸಾಧ್ಯವಿಲ್ಲ. ಆದರೆ ಎಲ್ಲರೂ ಬಯಸುತ್ತಿರುವ ಹೊಸ ಪ್ರಪಂಚ ದಯೆ ಮತ್ತು ಧರ್ಮದ ತಳಹದಿಯ ಮೇಲೆ ನಿಲ್ಲಬೇಕೆಂಬುದರಲ್ಲಿ ಸಂದೇಹವಿಲ್ಲ. ಈ ಹೊಸ ಪ್ರಪಂಚದ ರಚನೆಗೆ ಪೂರ್ವಭಾವಿಯಾಗಿ ಆಗಬೇಕಾದುದು ಬರ್ಟ್ರೆಂಡ್ ರಸೆಲರು

ಸೂಚಿಸಿರುವ ಪಾಶವೀ ಶಕ್ತಿಗಳ ಧರ್ಮ. ಈ ಸೂಚನೆಯನ್ನು ಜಗತ್ತಿನ ವಿಭೂತಿ ಪುರುಷರು ಈ ವರೆಗೂ ಹೇಳುತ್ತ ಬಂದಿರುವರು. ಆ ತತ್ವದ ಸತ್ಯ ಈಗ ಪುನಃ ನಮ್ಮ ಮನಸ್ಸಿಗೆ ಹೊಳೆಯುತ್ತಿದೆ. ಆಧುನಿಕ ತತ್ವಜ್ಞರು ಇದನ್ನು ಪ್ರತಿಪಾದಿಸಲು ತೊಡಗಿರುವರು. ಮಾನವನಲ್ಲಿ ಪ್ರಾದುರ್ಭವಿಸುವ ಪಾಶವೀಶಕ್ತಿ ವಿಶೇಷಗಳನ್ನು ಉತ್ತಮ ಮಾನವಧ್ಯೇಯಗಳ ಮೂಲಕ ಪಳಗಿಸಿದ ಹೊರತು ಜಗತ್ತಿಗೆ ಶಾಂತಿ ಇಲ್ಲವೆಂಬ ಅಭಿಪ್ರಾಯವನ್ನು ಬರ್ಟ್ರೆಂಡ್ ರಸೆಲರು ತಮ್ಮ "ಪವರ್—ಎ ನ್ಯೂ ಸೋಷಿಯಲ್ ಅನ್ಯಾಲಿಸಿಸ್" ಎಂಬ ಗ್ರಂಥದಲ್ಲಿ ಅನೇಕ ಉದಾಹರಣೆಗಳಿಂದಲೂ, ಯುಕ್ತಿಗಳಿಂದಲೂ, ಮನಶ್ಶಾಸ್ತ್ರದ ಜ್ಞಾನಸಾಮಗ್ರಿಯ ಸಹಾಯದಿಂದಲೂ ಸ್ಥಾಪಿಸಿರುವರು. "ಶಕ್ತಿಯ ದಮನ" (Taming of Power) ಈ ಯುಗದ ಜನರ ಮುಖ್ಯ ಉದ್ಯೋಗವಾಗಿರಬೇಕೆಂದು ಅಭಿಪ್ರಾಯಪಟ್ಟಿರುವರು.

ಇಂದಿನ ಶಕ್ತಿವಾದಗಳಲ್ಲಿ ಮುಖ್ಯವಾದದ್ದು ಫ್ಯಾಸಿಸಂ; ಶಕ್ತಿವಾದಗಳಲ್ಲಿ ಪ್ರಸಿದ್ಧರಾದವರು ಮುಸೊಲೀನಿ, ಹಿಟ್ಲರ್. ಮುಸೊಲೀನಿ ತಾವು ಎಬ್ಬಿಸಿದ ರಾಕ್ಷಸನಿಗೆ ತಾವೇ ತುತ್ತಾದರು. ಅವರೊಡನೆ ಇಟಲಿಯಲ್ಲಿ ಫ್ಯಾಸಿಸಂ ಮುರಿದುಬೀಳುವುದೆಂದು ನಂಬಬಹುದು.

ಎಂ. ಯಾಮುನಾಚಾರ್ಯ.

# ಕಾವ್ಯಾವಲೋಕನ

**ಮಂಗರಾಜವಿರಚಿತಂ ಖಗೇಂದ್ರಮಣಿದರ್ಪಣಂ** (ಮದ್ರಾಸ್ ಯೂನಿವರ್ಸಿಟಿಯ ಕರ್ಣಾಟಕ ಗ್ರಂಥಮಾಲಾ, ಸಂಖ್ಯೆ ೯)—ಸಂಪಾದಕರು : ಎ. ವೆಂಕಟರಾವ್, ಬಿ.ಎ., ಎಲ್.ಟಿ. ಮತ್ತು ಎಚ್. ಶೇಷಯ್ಯಂಗಾರ್ ; ರಾಯಲ್ ಅಷ್ಟಪತ್ರ 10 + xvi + xvii + 333, ಬೆಲೆ, ರೂ. ೫-೦-೦.

ಸಾಹಿತ್ಯ ಮತ್ತು ಧರ್ಮಗ್ರಂಥಗಳಂತೆಯೇ ಜನೋಪಯುಕ್ತವಾದ ಶಾಸ್ತ್ರ ಗ್ರಂಥಗಳನ್ನು ರಚಿಸುವುದೂ ಕನ್ನಡದಲ್ಲಿ ಬಹು ಕಾಲದಿಂದಲೂ ರೂಢಿಯಲ್ಲಿರುವ ವಿಷಯ. ಈ ದೃಷ್ಟಿಯಿಂದ ಇದುವರೆಗೆ ತಿಳಿದಿರುವವರಲ್ಲಿ ಮೊದಲು ಗ್ರಂಥರಚನೆ ಮಾಡಿದವನು ಚಾವುಂಡರಾಯ. ಈತನು ಪಂಚಾಂಗಫಲ, ನವಪಟಲ, ಉತ್ಪಾತ ಶಾಂತಿ, ವಾಸ್ತುವಿಚಾರ, ಉದಕಾರ್ಗಳ, ವೃಕ್ಷಾಯುರ್ವೇದ, ಸುಗಂಧವಾದ, ಸೂಪ ಶಾಸ್ತ್ರ, ವೈದ್ಯ, ವಿಷತತ್ತ್ವ, ಲಕ್ಷಣ, ಶಕುನ — ಎಂಬ ಹನ್ನೆರಡು ವಿಷಯಗಳನ್ನೊಳಗೊಂಡ 'ಲೋಕೋಪಕಾರ'ವೆಂಬ ಒಂದು ಗ್ರಂಥವನ್ನು ಕ್ರಿ.ಶ. ೧೦೨೫ರಲ್ಲಿ ರಚಿಸಿದ್ದಾನೆ. ಬಹುಶಃ ಇದರಿಂದಲೇ ಪ್ರೇರಿತರಾಗಿ ಇವನ ತರುವಾಯ ಬಂದ ಶ್ರೀಧರಾಚಾರ್ಯ (ಕ್ರಿ.ಶ. ೧೦೪೯), ಕೀರ್ತಿವರ್ಮ (ಕ್ರಿ.ಶ. ೧೧೨೫), ಜಗದ್ದಳ ಸೋಮನಾಥರು (ಕ್ರಿ.ಶ. ೧೧೫೦) 'ಲೋಕೋಪಕಾರ'ದ ಒಂದೊಂದು ವಿಷಯವನ್ನು ಆರಿಸಿಕೊಂಡು ಕ್ರಮವಾಗಿ 'ಜಾತಕತಿಲಕ' 'ಗೋವೈದ್ಯ' 'ಕರ್ಣಾಟಕ ಕಲ್ಯಾಣಕಾರಕ' ಎಂಬ ಸ್ವತಂತ್ರ ಗ್ರಂಥಗಳನ್ನು ರಚಿಸಿದ್ದಾರೆ.[1] ಇವರಂತೆಯೇ ಪ್ರಸಕ್ತ ಗ್ರಂಥಕರ್ತೃವಾದ ಮಂಗರಸನೂ 'ಲೋಕೋಪಕಾರ'ದ ವಿಷತತ್ತ್ವಭಾಗವನ್ನು ಜನೋಪಕಾರಕವಾಗುವ ಹಾಗೆ ವಿಸ್ತಾರವಾಗಿ ಬರೆಯಬೇಕೆಂದು ಹೊರಟು ತನ್ನ 'ಖಗೇಂದ್ರಮಣಿದರ್ಪಣ'ವನ್ನು ರಚಿಸಿರಬಹುದು.[2]

ಖಗೇಂದ್ರಮಣಿದರ್ಪಣವು ವಿಷವೈದ್ಯವನ್ನು ವಿಸ್ತಾರವಾಗಿ ಪ್ರತಿಪಾದಿಸುವ ಕನ್ನಡ ಚಂಪೂಗ್ರಂಥ. ಇದರಲ್ಲಿ ಸಂಜ್ಞಾಪ್ರಕರಣ, ಸ್ಥಾವರವಿಷಪ್ರಕರಣ, ಸಂಗ್ರಹ ಪ್ರಕರಣ, ಗಾರುಡಮಂತ್ರ, ನಿರ್ವಿಷಪಾನ, ಅಂಜನ, ನಸ್ಯ, ಲೇಪ, ಅಂಜನಪಾನ ನಸ್ಯಲೇಪನ, ಮಂಡಲಸರ್ಪವಿಷಾಪಹರಣ, ವೃಶ್ಚಿಕವಿಷಹರಣ, ಮೂಷಕವಿಷ

[1] ಇವರ ಗ್ರಂಥಗಳಲ್ಲೆಲ್ಲಾ 'ಲೊಕೋಪಕಾರ'ದ ಪದ್ಯಗಳು ಉದ್ಧೃತವಾಗಿರುವುದು ಈ ಊಹೆಗೆ ಕಾರಣ.

[2] ಈ ಅಭಿಪ್ರಾಯದ ಸಮರ್ಥನೆಗೆ ಮುಂದೆ ನೋಡಿ.

ನಿವಾರಣ, ಸರ್ವಜಂಗಮವಿಷಮವಿಷಚಿಕಿತ್ಸಾ, ಕೃತ್ರಿಮವಿಷಚಿಕಿತ್ಸಾ, ಬಾಷ್ಪ ಚಿಕಿತ್ಸಾ, ಸಮಸ್ತನಿರ್ವಿಷಚಿಕಿತ್ಸಾ ಎಂಬ ಹದಿನಾರು ಅಧಿಕಾರಗಳಿವೆ. ಇವುಗಳಲ್ಲಿ ಹೇಳಿರುವ ವಿಷಯಗಳು 'ತುಂಗಗುಣರೆನಿಪ ಮುನಿಪರ ಸಂಗತಿಯಿಂದಱಿದು ಪೇಟ್ದ ಸಂಗ್ರಹ'; 'ಶ್ರೀಪೂಜ್ಯಪಾದೋಕ್ತಿಯಸಾರ'; 'ಧರ್ಮಾರ್ಥಕಾಮವನೊರ್ಮೊದ ಲೊಳೆ ಬಯಸಿ' ಕವಿಯು ಈ ಗಾರುಡಶಾಸ್ತ್ರವನ್ನು ರಚಿಸಿದ್ದಾನೆ. ಈ ಗ್ರಂಥದಲ್ಲಿ ಸಾಮಾನ್ಯವಾಗಿ ಎಲ್ಲತೆರನಾದ ವಿಷಗಳಿಗೂ ಪರಿಹಾರಕ್ರಮವು 'ಸೂಚಿತವಾಗಿದೆ. ಪ್ರತಿಯೊಂದು ಚಿಕಿತ್ಸೆಗೂ ಮಣಿಮಂತ್ರೌಷಧಿಗಳ ಪ್ರಯೋಗಗಳು ನಿರೂಪಿತವಾಗಿವೆ. ಔಷಧಿಗಳಲ್ಲಿ ನಸ್ಯ, ಪಾನ, ಲೇಪನ, ಕರ್ಣಫೂತ್ಕಾರ ಮೊದಲಾದ ಭೇದಗಳಿವೆ. ಇಷ್ಟು ವಿಸ್ತಾರವಾದ ವಿಷವೈದ್ಯಗ್ರಂಥ ಕನ್ನಡದಲ್ಲಿ ಮತ್ತೊಂದಿಲ್ಲ. ಎಂದಮೇಲೆ ಈ ಗ್ರಂಥದ ಉಪಯೋಗವೆಷ್ಟೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇಂತಹ ಗ್ರಂಥವನ್ನು ಪ್ರಕಾಶಪಡಿಸಲು ಸಹಾಯಕರಾದ ಮದ್ರಾಸ್ ವಿಶ್ವವಿದ್ಯಾನಿಲಯದ ಅಧಿಕಾರಿಗಳೂ ಶೋಧಿಸಿ ಪ್ರಕಟಿಸಿದ ಸಂಪಾದಕರೂ ಕನ್ನಡಿಗರ ಕೃತಜ್ಞತೆಗೆ ಪಾತ್ರ ರಾಗಿದ್ದಾರೆ. ಮುದ್ರಣವೂ ಪುಸ್ತಕದ ಆಕಾರವೂ ಪ್ರಕಾಶಕರಿಗೆ ಗೌರವವನ್ನು ತರುವಂತಹುದೇ ಆಗಿದೆ. ಸಂಪಾದಕರಾದ ಶ್ರೀಮಾನ್ ಶೇಷಯ್ಯಂಗಾರ‍್ಯರು ಉತ್ತಮಸಾಹಿತಿಗಳು. ಮದ್ರಾಸ್ ವಿಶ್ವವಿದ್ಯಾನಿಲಯದ ಕನ್ನಡಗ್ರಂಥಮಾಲೆಯು ಆರಂಭವಾದಂದಿನಿಂದ ಏಕರೀತಿಯಾಗಿ ದುಡಿಯುತ್ತಿರುವವರು. ತಮ್ಮ ಸಹೋ ದ್ಯೋಗಿಗಳಾದ ಶ್ರೀಮಾನ್ ವೆಂಕಟರಾಯರು ಈ ಗ್ರಂಥದ ಶೋಧನೆಯ ಮಧ್ಯ ಕಾಲದಲ್ಲಿ ಕಾಲವಶರಾದರೂ ಎದೆಗುಂದದೆ ಅನೇಕ ಹೊಸ ಕೈಬರಹದ ಪ್ರತಿಗಳನ್ನು ಸಂಪಾದಿಸಿ ಶ್ರದ್ಧೆಯಿಂದ ಶೋಧನಕಾರ್ಯವನ್ನು ನಡೆಸಿದ್ದಾರೆ. ಪ್ರಧಾನ ಸಂಪಾದಕ ರಾದ ಎಂ. ಮರಿಯಪ್ಪಭಟ್ಟರ ಇಂಗ್ಲೀಷ್ ಭಾಷೆಯ ಉಪೋದ್ಘಾತ, ಸಂಪಾದಕರ ಮುನ್ನುಡಿ, ಕವಿಕಾವ್ಯವಿಚಾರ, ಸಂಸ್ಕೃತದಲ್ಲಿ ವಿಷವೈದ್ಯವನ್ನು ಪ್ರತಿಪಾದಿಸುವ ಕಾಶ್ಯಪಸಂಹಿತೆಯ ವಿಷಯಸಂಗ್ರಹ, ಪದ್ಯಗಳ ಅಕಾರಾದಿ, ಕಾಶ್ಯಪಸಂಹಿತೆಗೂ ಪ್ರಕೃತಗ್ರಂಥಕ್ಕೂ ಇರುವ ಸಂವಾದಿವಿಸಂವಾದಿ ಭಾಗಗಳು, ಗ್ರಂಥದಲ್ಲಿ ಉಪಯುಕ್ತವಾಗಿರುವ ವೃತ್ತಜಾತಿ ಸಂಖ್ಯೆಗಳನ್ನು ತೋರಿಸುವ ಪಟ್ಟಿ, ಶುದ್ಧಿಪತ್ರ ಮೊದಲಾದುವುಗಳಿಂದ ಕೂಡಿ ಗ್ರಂಥವು ಉಪಯುಕ್ತವಾಗಿದೆ. ಕೈಬರಹದ ಪ್ರತಿ ಯನ್ನು ಆಯುರ್ವೇದಿಕ್ ಕಾಲೇಜು ಪ್ರಿನ್ಸಿಪಾಲರಾದ ಡಾಕ್ಟರ್ ಗೊರೂರು ಶ್ರೀನಿವಾಸಮೂರ್ತಿಗಳು ಪರಿಶೀಲಿಸಿರುವುದರಿಂದ ಅದಕ್ಕೆ ಮತ್ತಷ್ಟು ಘನತೆ ಯುಂಟಾಗಿದೆ. ಆದರೂ ಪ್ರಸಕ್ತ ಮುದ್ರಣದ ವಿಷಯದಲ್ಲಿ ನಮಗೆ ಕಂಡುಬಂದ ಕೆಲವಂಶಗಳನ್ನು ಪ್ರಸ್ತಾಪಿಸಲು ಬಯಸುತ್ತೇವೆ.

೧. ಪ್ರಮಾಣಗ್ರಂಥಗಳು:—ಈ ಗ್ರಂಥವು ವಿಷವೈದ್ಯ ಮತ್ತು ಮಂತ್ರ ಶಾಸ್ತ್ರಕ್ಕೆ ಸಂಬಂಧಪಟ್ಟುದು. ಈಗ ಇವುಗಳ ಪರಿಚಯವುಳ್ಳವರು ಅತಿವಿರಳ. ಇದರ ಶೋಧನೆಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಾದರೂ ಉಪಕಾರಕ್ಕಿಂತ ಅಪಕಾರವು ಹೆಚ್ಚಾಗುವುದೆಂಬುದು ಸರ್ವವೇದ್ಯವಾದ ವಿಷಯ. ಆದುದರಿಂದ ಈ ಗ್ರಂಥದ ಪರಿಷ್ಕಾರಕಾರ್ಯದಲ್ಲಿ ಈ ಗ್ರಂಥದ ಕೈಬರಹದ ಪ್ರತಿಗಳನ್ನೇ ಅಲ್ಲದೆ ಇದಕ್ಕೆ ಸಂಬಂಧಪಟ್ಟ ಪ್ರಮಾಣಗ್ರಂಥಗಳನ್ನು ಸಾಧ್ಯವಾದ ಮಟ್ಟಿಗೆ ಉಪಯೋಗಿಸಿ ಕೊಳ್ಳುವುದು ಮೇಲು. ಗ್ರಂಥಕರ್ತನೇ ಇದು ಆದ್ಯರ ಗ್ರಂಥಗಳ ಸಂಗ್ರಹವೆಂಬುದನ್ನು ವಿಶದಗೊಳಿಸಿದ್ದಾನೆ. ಅವುಗಳಲ್ಲಿ ಕೆಲವಾದರೂ ಈಗ ಸಿಕ್ಕಬಹುದು. ಅವುಗಳನ್ನು ಉಪಯೋಗಿಸಿಕೊಂಡಿದ್ದರೆ ಶೋಧನೆಗೆ ಬಹಳ ಸಹಾಯವಾಗುತ್ತಿತ್ತು. ಸಂಪಾದಕ ರೇನೋ ಈ ದೃಷ್ಟಿಯಿಂದ ಕಾಶ್ಯಪಸಂಹಿತೆಯ ವಿವರವನ್ನೂ ಅದರ ಸಂವಾದಿಭಾಗ ಗಳನ್ನೂ ತಿಳಿಸಿದ್ದಾರೆ. ಆದರೆ ಪ್ರಧಾನ ಸಂಪಾದಕರು ತಮ್ಮ ಮೊದಲ ಮಾತಿನಲ್ಲಿ ಸೂಚಿಸಿರುವಂತೆ ಕಾಶ್ಯಪಸಂಹಿತೆಯನ್ನು ಮಂಗರಸನು ವಿಶೇಷವಾಗಿ ಉಪಯೋಗಿ ಸಿಕೊಂಡಿರುವಂತೆ ಕಾಣುವುದಿಲ್ಲ. ಮಂಗರಾಜನ ಗ್ರಂಥಕ್ಕೆ ಪ್ರತ್ಯಕ್ಷವಾಗಿ ಸಂಬಂ ಧಪಟ್ಟಿರಬಹುದಾದ ಕೆಲವು ಸಂಸ್ಕೃತ ಕನ್ನಡ ಗ್ರಂಥಗಳನ್ನು ಮುಂದೆ ಸೂಚಿಸಲು ಬಯಸುತ್ತೇವೆ.

(i) ವಾಗ್ಭಟನ ಅಷ್ಟಾಂಗಹೃದಯ[1]:—ಇದು ಸಂಸ್ಕೃತ ಭಾಷೆಯಲ್ಲಿರುವ ಪ್ರಾಚೀನವಾದ ವೈದ್ಯಗ್ರಂಥ. ಇದರಲ್ಲಿ ಎಲ್ಲ ವಿಧವಾದ ರೋಗಗಳಿಗೂ ಚಿಕಿತ್ಸೆ ಯನ್ನು ಹೇಳಿದೆ. ಇದರ ೩೫ರಿಂದ ೩೮ನೆಯ ಅಧ್ಯಾಯಗಳಲ್ಲಿ ವಿಷವೈದ್ಯವು ಪ್ರಸ್ತಾಪಿಸಿದೆ. ಈ ಭಾಗಗಳಿಗೆ ಕ್ರಮವಾಗಿ ವಿಷಪ್ರತಿಷೇಧ, ಸರ್ಪವಿಷಪ್ರತಿಷೇಧ, ಕೀಟಲತಾದಿ ವಿಷಪ್ರತಿಷೇಧ, ಮೂಷಕಾಲರ್ಕಪ್ರತಿಷೇಧ ಎಂಬ ಹೆಸರಿದೆ. ಇಲ್ಲಿಯ ಭಾಗಗಳು ಖಗೇಂದ್ರಮಣಿದರ್ಪಣದ ಆಯಾಭಾಗಗಳಿಗೆ ಬಹುಮಟ್ಟಿಗೆ ಆಕರವಾಗಿವೆ. ಕೆಲವು ಶ್ಲೋಕಗಳಂತೂ ಪ್ರತ್ಯಕ್ಷಾನುವಾದವಿದ್ದಂತೆಯೇ ಇವೆ. ಮುಂದಿನ ಶ್ಲೋಕ ವನ್ನು ಹೋಲಿಸಿ.

ಅಷ್ಟಾದಶ ಮೂಷಕಭೇದಗಳು

ಲಾಲನಶ್ಚಪಲಃ ಪುತ್ರೋ ಹಸಿರಶ್ಚಿಕ್ಕಿರೋಜರಃ | ಕಷಾಯದಂತಃ ಕುಲಕಃ ಕೋಕಿಲಃ ಕಪಿಲೋಸಿತಃ ||
ಅರುಣಃ ಶಬಲಃ ಶ್ವೇತಃ ಕಪೋತೋಪಲಿತೋಂದುರಃ | ಚುಚುಂದುರೋ ರಸಾಲಾಖ್ಯೋ ದಶಾಷ್ಟಾಚೇತಿ ಮೂಷಕಾಃ ||

(ಅಷ್ಟಾಂಗ ಹೃದಯ, ೩೮–೧)

[1] ವಾಗ್ಭಟನ ಕಾಲವನ್ನು ಅಷ್ಟಾಂಗ ಹೃದಯದ ಸಂಪಾದಕರಾದ ಅಣ್ಣಾ ಮೋರೇಶ್ವರ ಕುಂಟೆ, ಬಿ.ಎ., ಎಂ.ಡಿ. ಅವರು ಕ್ರಿ.ಪೂ. ೨ನೆಯ ಶತಮಾನವೆಂದು ನಿಷ್ಕರ್ಷಿಸಿದ್ದಾರೆ.

ಶ್ವೇತಂ ಕೃಷ್ಣನಲಕ್ತಕಂ ಕಪಿಲನುಂ ನೀಲಾಭ ಧೂಮ್ರಾಭಮಾ
ಪೀತಂ ಪಿಂಗಲ ಲೂತಿ ದಂಷ್ಟ್ರಕಪಿಲಂ ಕ್ರೋಡಾಸ್ಯದೀರ್ಘಾಸ್ಯ ಸಂ|
ಭೂತಂ ಕಾವಳ ದೀರ್ಘಕರ್ಣಕಳಕಂಠಂ ರೇಣುಕಾಂಗ ಲಸ
ತ್ಖ್ಯಾತಂ ಪುಚ್ಛವಿಹೀನನೆಂದು ಪದಿನೆಣ್ಭೇದಂಗಳಕ್ಕಾಖುಗಳ್ ||

(ಖಗೇಂದ್ರಮಣಿದರ್ಪಣಂ, ೧೨-೩೦.)

(ii) ವಿದ್ಯಾನುಶಾಸನ[1] :—ಇದೊಂದು ಸಂಸ್ಕೃತ ಸಂಗ್ರಹ ಗ್ರಂಥ. ಜೈನ ಪಂಥಕ್ಕೆ ಸೇರಿದುದು. ಇದರ ನವಮ ದಶಮ ಏಕಾದಶ ದ್ವಾದಶ ಸಮುದ್ದೇಶಗಳಲ್ಲಿ ಕ್ರಮವಾಗಿ ವಿಷವೈದ್ಯಕ್ಕೆ ಸಂಬಂಧಪಟ್ಟ ಸಂಗ್ರಹತ್ಯಾಗವಿಧಾನ, ನಿರ್ವಿಷೀಕರಣ, ಫಣಿದಷ್ಟಚಿಕಿತ್ಸೆ, ಮಂಡಲ್ಯಾದಿವಿಷಹರಣ ಎಂಬ ಭಾಗಗಳು ಉಕ್ತವಾಗಿವೆ. ಈ ಭಾಗಕ್ಕೂ ಮಂಗರಸನ ಗ್ರಂಥಕ್ಕೂ ನಿಕಟಸಂಬಂಧವಿದೆ. ಯಂತ್ರಮಂತ್ರಗಳ ವಿಷಯದಲ್ಲಿ ಎರಡಕ್ಕೂ ಬಹುಮಟ್ಟಿಗೆ ಸಾಮರಸ್ಯವಿದೆ. ಅಧಿದೇವತೆ, ಅಂಗನ್ಯಾಸ, ಘಟೀಕರಣ, ಮೂಲಮಂತ್ರ ಇವುಗಳಲ್ಲಿಯೂ ಹಾಗೆಯೇ. ದರ್ಪಣದಲ್ಲಿರುವ ಹಾಗೆಯೇ ಇಲ್ಲಿಯೂ ಅಧಿದೇವತೆ ಪಾರ್ಶ್ವನಾಥ. ನಿರ್ವಿಷೀಕರಣದಲ್ಲಿ ಉಪಯೋಗಿಸಬೇಕಾದ ಪ್ರಧಾನ ಗರುಡಮಂತ್ರ 'ಕ್ಷಿಪಓಂಸ್ವಾಹಾ' ಎಂಬುದೇ. ಚಿಕಿತ್ಸಾಸ್ವರೂಪವೂ ವಿಶೇಷತಃ ಒಂದೇ. ಮಂಗರಸನು ಕೆಲವು ಭಾಗಗಳನ್ನಾದರೂ ಇಲ್ಲಿಂದ ಸಂಗ್ರಹಿಸಿರಬೇಕು. ಈ ಭಾಗಗಳನ್ನು ಹೋಲಿಸಿ ನೋಡಿ :—

[1] ಇದು ಮೈಸೂರು ಪ್ರಾಚ್ಯಕೋಶಾಗಾರದ ಕೆ.ಎ ೫೩೭೦ನೆಯ ನಂಬರಿನ ಪ್ರತಿ. ಗ್ರಂಥಸೂಚಿಯಲ್ಲಿ ಭಟ್ಟಾಕಳಂಕವಿರಚಿತವೆಂದು ಸೂಚಿತವಾಗಿದೆ. ಗ್ರಂಥಸಮಾಪ್ತಿಯಾದ ಮೇಲೆ ಪ್ರತ್ಯೇಕವಾಗಿ ಕೊನೆಯ ಪತ್ರದಲ್ಲಿ ಭಟ್ಟಾಕಳಂಕನ ಸ್ತೋತ್ರರೂಪವಾದ ಒಂದು ಶ್ಲೋಕವಿದೆ. ಇದರ ಆಧಾರದ ಮೇಲೆ ಸೂಚಿಯ ನಿರ್ಮಾಪಕರು ಗ್ರಂಥವು ಭಟ್ಟಾಕಳಂಕ ವಿರಚಿತವೆಂದು ಬರೆದಿರಬಹುದು. ಗ್ರಂಥದ ಆಂತರ್ಯ ಪ್ರಮಾಣದಿಂದ ಇದು ಮಲ್ಲಿಷೇಣ ವಿರಚಿತವೆಂದು ಊಹಿಸುವುದಕ್ಕೆ ವಿದ್ಯಾನುಶಾಸನದ ಅಂತರ್ಗತವಾದ ದೇವೀಸ್ತೋತ್ರದ ಅಂತ್ಯದಲ್ಲಿರುವ ಈ ಮುಂದಿನ ಶ್ಲೋಕವು ಸಾಧಕವಾಗಿದೆ.

ಪದ್ಮಾವತೀಸ್ತೋತ್ರಮಿದಂ ತ್ರಿಸಂಧ್ಯಂ ಶ್ರೀಮಲ್ಲಿಷೇಣೇನ ಕೃತಂ ಪಠೇದ್ಯಃ|
ಸಸಿದ್ಧಿವಾಕ್ಸರ್ವಜನಾನುರಾಗೀ ಸರ್ವಾರ್ಥಕಾಮಾಂಶ್ಚ ಸದಾ ಲಭೇತ||

(ವಿದ್ಯಾನುಶಾಸನ, ೪-೨೭೬)

ಈ ಮಲ್ಲಿಷೇಣನು ಶ್ರವಣಬೆಳುಗೊಳದ ೬೭ನೆಯ ಶಾಸನದಲ್ಲಿನ ಮಲ್ಲಿಷೇಣನಾದ ಪಕ್ಷದಲ್ಲಿ ಈ ಗ್ರಂಥದ ಕಾಲವು ಹನ್ನೊಂದನೆಯ ಶತಮಾನವಾಗುತ್ತದೆ. ಇದಕ್ಕೆ ಮತ್ತೊಂದು ಅನುಪಪತ್ತಿಯೂ ಇದೆ. ಇದು ಸಂಗ್ರಹಗ್ರಂಥವಾದುದರಿಂದ ದೇವೀಸ್ತೋತ್ರಮಾತ್ರ ಮಲ್ಲಿಷೇಣಕೃತವಾಗಿದ್ದು ಇತರ ಭಾಗವು ಭಿನ್ನಕರ್ತೃಕವಾಗಿರಬಹುಡು. ಆದರೆ ಭಿನ್ನಕರ್ತೃಕವೆನ್ನುವುದಕ್ಕೆ ಗ್ರಂಥಪ್ರಮಾಣವಿಲ್ಲದಿರುವುದರಿಂದ ಸದ್ಯಕ್ಕೆ ಪೂರ್ಣಗ್ರಂಥವು ಏಕಕರ್ತೃಕವೆಂದೇ ಭಾವಿಸಿದೆ.

## ಕೃತ್ರಿಮ ವಿಷವ್ಯಾಪ್ತನ ಲಕ್ಷಣ

ದಾಹಃ ಕಂಪಃ ಶೂಲಃ ಕೃಷ್ಣೋದಂಶಶ್ಚ ಸರ್ಪದಂಶಾಂತೇ |
ಪ್ರಲಪನಮಂಗೋದ್ವೇಗಃ ಸ್ರವಣಂಲಾಲಾಜಲಸ್ಯಾಸ್ಯಾತ್ ||
ಹೃದಯಾಸ್ಯವಿಘಟೀನಾ ಕೃಷ್ಣಸೃಕ್ ಶ್ಯಾಮದಂತತ್ವಂ |
ರಕ್ತಸ್ಯಚಪ್ರವೃತ್ತಿಃ ದೃಙ್ನಾಸಾ ಲೋಮ ಕೂಪ ಗುಹ್ಯಾದ್[1] ||
(ವಿದ್ಯಾನುಶಾಸನ.)

ಕೋಪಂ ಶ್ವಾಸಂ ಖಾಸಂ | ತಾಪಂ ದಾಹಂ ಕ್ಷಯಂ ಮಹಾಚಿಂತೆ ಮನ |
ಸ್ತಾಪಂ ಮಂದಾಗ್ನಿ ವೃಥಾ | ಲಾಪಂಗಳಿವಕ್ಕುಮೆಂಬರಿಳೆಯೊಳಭಿಜ್ಞರ್ ||
ಮನದುದ್ವೇಗಂ ದೃಗ್ದಂ | ತ ನಖಾಂಘ್ರಿತಳಂಗಳೊಪ್ಪುವಂಗೆಯ್ಗಳ್ ಮು |
ನ್ನಿನ ತೆಱನಲ್ಲದೆ ಮತ್ತೊಂ | ದೆನೆ ಕಂಡಿರಲಱಿವುದದಱಿನಾ ಕೃತ್ರಿಮಮಂ ||
ವಾಂತಿ ಶಿರೋರೋಗ ಮಹಾ | ಭ್ರಾಂತಿ ತನೂದ್ಭೂತ ರಕ್ತಮೂತ್ರಸ್ರಾವಂ |
ಸ್ವಾಂತಸ್ತಾಪಂ ಶೋಷಂ | ಕಾಂತಾಜನಕೃತ್ರಿಮಂಗಳಿಂ ತಲೆದೋರ್ಕುಂ ||[1]
(ಖ.ಮು.ದ.—೧೪-೬, ೭,೮)

(iii) ಉಗ್ರಾದಿತ್ಯನ ಕಲ್ಯಾಣಕಾರಕ:[2]—ಇದೂ ಒಂದು ವೈದ್ಯಗ್ರಂಥ. ಜಗದ್ದಳಸೋಮನಾಥನು ಕನ್ನಡಿಸಿರುವುದಾಗಿ ಹೇಳುವ ಪೂಜ್ಯಪಾದಕೃತ ಕಲ್ಯಾಣ ಕಾರಕಕ್ಕೂ ಇದಕ್ಕೂ ಯಾವ ಸಂಬಂಧವಿದೆಯೆಂಬುದನ್ನು ಹೇಳುವಂತಿಲ್ಲ. ಉಗ್ರಾದಿತ್ಯನು ತನ್ನ ಗ್ರಂಥದಲ್ಲಿ ಈ ವಿಷಯವನ್ನಾಗಲಿ ಪೂಜ್ಯಪಾದನ ಹೆಸರನ್ನಾಗಲಿ ತಿಳಿಸಿಲ್ಲ. ತನ್ನ ಗ್ರಂಥವು 'ಜಿನವಕ್ತ್ರನಿರ್ಗತ ಸುಶಾಸ್ತ್ರಮಹಾಂಬುನಿಧಿಯ ಶೀಕರ' ವೆಂದು ಮಾತ್ರ ಹೇಳಿದ್ದಾನೆ. ಅಲ್ಲದೆ ಮಂಗರಸನಿಗೆ ಆಕರವಾಗಿರುವ ಪೂಜ್ಯಪಾದ

---

[1] ಸಂಸ್ಕೃತ ಶ್ಲೋಕಗಳ ಪಾಠವನ್ನು ನಾವು ತಿದ್ದಿಲ್ಲ.

[2] ಇದು ಮೈಸೂರು ಪ್ರಾಚ್ಯಕೋಶಾಗಾರದ ಬಿ. ೩೮೩ನೆಯ ಕೈಬರಹದ ಪ್ರತಿ. ಉಗ್ರಾದಿತ್ಯನು ತನ್ನ ಗ್ರಂಥದಲ್ಲಿ ಗ್ರಂಥನಿರ್ಮಾಣಕಾಲವನ್ನು ನಿರೂಪಿಸಿರುವುದಿಲ್ಲ. ಗ್ರಂಥಾಂತ್ಯದ

ಶ್ರೀವಿಷ್ಣುರಾಜಪರಮೇಶ್ವರಮೌಳಿಮಾಲಾಸಂಲಾಲಿತಾಂಘ್ರಿಯುಗಳಃ ಸಕಲಾಗಮಜ್ಞಃ |
ಆಲಾಪನೀಯಗಣಮುನ್ನತ ಸನ್ಮುನೀಂದ್ರಃ ಶ್ರೀನಂದಿನಂದಿತಗುರುರ್ಗುರುರೂರ್ಜಿತೋಹಂ ||
ತಸ್ಯಾಜ್ಞಯಾ ವಿವಿಧಭೇಷಜ ದಾನಸಿದ್ಧ್ಯೈ ಸದ್ವೈದ್ಯವತ್ಸಲತಪಃ ಪರಿಪೂರಣಾರ್ಥಂ |
ಶಾಸ್ತ್ರಂ ಕೃತಂ ಜಿನಮತೋದ್ಧತಮೇತದುದ್ಯತ್ಕಲ್ಯಾಣಕಾರಕಮಿತಿ ಪ್ರಥಿತಂ ಧರಾಯಾಂ ||

ಎಂಬ ಶ್ಲೋಕದಲ್ಲಿ ವಿಷ್ಣುರಾಜನಿಂದ ಸ್ತುತನಾದ ನಂದಿಮುನಿಯ ಆಜ್ಞೆಯ ಪ್ರಕಾರ ಈ ಗ್ರಂಥವನ್ನು ರಚಿಸಿದ್ದೇನೆಂದು ಹೇಳಿದ್ದಾನೆ. ಈ ಇಬ್ಬರು ಯಾರೆಂಬುದು ನಿಷ್ಕೃಷ್ಟವಾಗಿ ತಿಳಿದಿಲ್ಲ. ಇದು ೧೩ನೆಯ ಶತಮಾನಕ್ಕೆ ಹಿಂದಿನ ಗ್ರಂಥವೆಂದು ಹೇಳಬಹುದು. ವಿಷ್ಣುರಾಜ ವಿಷ್ಣುವರ್ಧನನಿರಬಹುದೆ?

ನಿರ್ಮಿತ ವಿಷಚಿಕಿತ್ಸಾಭಾಗವು ಕಲ್ಯಾಣಕಾರಕದ ಭಾಗವೋ ಅಥವಾ ಬೇರೊಂದು ಸ್ವತಂತ್ರ ಗ್ರಂಥವೋ ಹೇಳಲು ಸಾಧ್ಯವಿಲ್ಲ. ಉಗ್ರಾದಿತ್ಯನ ಕಲ್ಯಾಣಕಾರಕದ ೧೯ನೆಯ ಅಧ್ಯಾಯದಲ್ಲಿ ವಿಷಚಿಕಿತ್ಸೆಯ ನಿರೂಪಣೆ ಇದೆ. ಇದರ ಬಹುಭಾಗವು ಮಂಗರಸನ ಗ್ರಂಥಕ್ಕೆ ಆಕರವಾಗಿರಬೇಕು. ದರ್ಪಣದ ಅನೇಕೆಡೆಗಳಲ್ಲಿ ಇದರ ಛಾಯೆಯು ಕಾಣುವುದಲ್ಲದೆ ಹದಿಮೂರನೆಯ ಆಶ್ವಾಸದ ೧೩೨ನೆಯ ಪದ್ಯದಿಂದ ೧೫೭ನೆಯ ಪದ್ಯದವರೆಗಿನ ಭಾಗವು ಈ ಕಲ್ಯಾಣಕಾರಕದ ಅನುವಾದದಂತೆಯೇ ಇದೆ. ಮುಂದಿನ ಪದ್ಯಗಳನ್ನು ಹೋಲಿಸಿ.

### ಸರ್ವವಿಷಚಿಕಿತ್ಸೆ

ಮಂಜಿಷ್ಠಾಮಧುಕತ್ರಿವೃತ್ಸುರಸುರಾ ವಕ್ರಾತ್ರಿಹರಿದ್ರದ್ವಯಂ| ಭಾಟಿವ್ಯೋಷವಿಲಂಗ ಹಿಂಗುಲ ವಣ್ಯೈಃ ಸರ್ವಂಸಮಂಚೂರ್ಣಿತಂ| ಚಾಡ್ಯೇನಾ ಲುಲಿತಂ ವಿಷಾಣನಿಹಿತಂ ನಸ್ಯಾಂಜನಾ ಲೇಪನೈಃ| ಹನ್ಯಾತ್ಸರ್ವವಿಷಾಣಿ ಸರ್ಪರಿಪುವತ್ಯೇಷಾಗತಃ ಪ್ರಸ್ತುತಃ|| ಪಾಠಾಹಿಂಗು ಫಲ ತ್ರಯಂ ತ್ರಿಕಟುಕಂ ವಕ್ರಾತ್ರಜಮೋದಾಗ್ನಿಕಂ| ಸಿಂಧೂತ್ಥಂ ಸಬಿಡಂ ವಿಡಂಗಹಸಿಶಂ ಗೌವರ್ಚಲಂ ಚೂರ್ಣಿತಂ| ಸರ್ವಂ ಗವ್ಯಘೃತೇನ ಮಿಶ್ರಿತಮಿದಂ ಶೃಂಗೇ ನಿಧಾಯಸ್ಥಿತಂ| ಸರ್ವಾಣ್ಯೇವ ವಿಷಾಣಿ ನಾಶಯತಿ ತತ್ಸರ್ಪಾತ್ಮನಾಯೋಜಿತಂ||

(ಕಲ್ಯಾಣಕಾರಕಂ, ೧೯-೧೧೭, ೮)

ಗೋವಿನ ತುಪ್ಪದೊಳಂ ತಾಂ| ಭಾವಿಸಿ ಕುಡಿಸಲ್ಕೆ ಮೇಘನಾದಿಯಬೇರಂ|
ಸ್ಥಾವರಜಂಗಮಕೃತ್ರಿಮ| ದಾವಾವವಿಷಂಗಳಾದೊಡಂ ಪಱಿಪಡುಗುಂ||
ಬಜೆಯತಿಬಜೆಯೆರಡರಸಿನ| ಗಜಹಿಪ್ಪಲಿ ಹಿಂಗು ಸೈಂಧವಂ ತ್ರಿಕಟುಕಮಂ|
[1][ತಜಮೋದ][1]ನರೆದು ಪೂಸಲ್| ಸೃಜಿಸಿದ ಕೀಟಕದ ವಿಷಮದೆಲ್ಲಂ ಕಿಡುಗುಂ||

(ಖ.ಮ.ದ—೧೩-೧೩೩, ೪)

(iv) ಲೋಕೋಪಕಾರ:—ಇದು ಚಾವುಂಡರಾಯನಿಂದ ರಚಿತವಾದ ಕನ್ನಡ ಭಾಷೆಯಲ್ಲಿರುವ ಸರ್ವವಿಷಯಸಂಗ್ರಹ.[2] ಕನ್ನಡ ಸರ್ವಜನೋಪಕಾರಕ ಗ್ರಂಥಗಳಲ್ಲಿ ಇದುವರೆಗೆ ತಿಳಿದಮಟ್ಟಿಗೆ ಇದೇ ಮೊದಲನೆಯದು. ಈ ಗ್ರಂಥವನ್ನು ಮಂಗರಸನು ಉಪಯೋಗಿಸಿಕೊಂಡಿರುವುದರಲ್ಲಿ ಸಂದೇಹವೇ ಇಲ್ಲ. ಬಹುಶಃ ಇದೇ ಅವನಿಗೆ ಪ್ರೇರಕವಾಗಿರಬೇಕು. ಮುಂದಿನಂಶಗಳು ಈ ವಾದವನ್ನು ದೃಢಪಡಿಸುತ್ತವೆ.

---

[1] ಅಚ್ಚಿನ ಪುಸ್ತಕದಲ್ಲಿ ಈ ಭಾಗಕ್ಕೆ 'ನಿಜವೊಂದ' ಎಂಬ ಪಾಠವಿದೆ. ಅಜಮೋದ ಎಂಬುದೇ ಸರಿಯಾದ ಪಾಠವಿರಬಹುದೆಂದು ತಿದ್ದಿದೆ.

[2] ಪ್ರಧಾನ ಸಂಪಾದಕರು ಮೊದಲನೆಯ ಪುಟದಡಿಯಲ್ಲಿ ಜಯಬಂಧುನಂದನವಿರಚಿತವೆಂದು ಸೂಚಿಸಿರುವ ಸೂಪಶಾಸ್ತ್ರವೂ ಇದರ ಒಂದು ಭಾಗ ಮಾತ್ರ. ಈ ವಿಷಯದಲ್ಲಿ ಪ್ರ.ಕ. ೧೮-೨-೫೯ ನೋಡಿ.

(ಅ) ಮಂಗರಾಜನು ತನ್ನನ್ನು ವಿಶೇಷಿಸಿಕೊಂಡಿರುವ ಬಿರುದುಗಳಲ್ಲಿ ಬುಧಬಂಧು, ಬುಧೈಕಾಶ್ರಯ, ಶಿಷ್ಟಕಲ್ಪದ್ರುಮ, ಸರಸ್ವತೀಮುಖತಿಲಕ ಎಂಬುವು ಚಾವುಂಡರಾಯನ ಬಿರುದುಗಳು.

(ಆ) ಲೋಕೋಪಕಾರದ ವಿಷತತ್ತ್ವಭಾಗದ ಅಭಿಪ್ರಾಯವನ್ನು ಪೂರ್ಣವಾಗಿ ಮಂಗರಸನು ಉಪಯೋಗಿಸಿಕೊಂಡಿರುವುದಲ್ಲದೆ ಆ ಭಾಗದ ೫೦ ಪದ್ಯಗಳಲ್ಲಿ ೧೨ನ್ನು ಅಕ್ಷರಶಃ ತನ್ನ ಗ್ರಂಥದಲ್ಲಿ ಉದ್ಧಾರ ಮಾಡಿದ್ದಾನೆ.[1]

(ಇ) ಆ ಗ್ರಂಥದ ಹೆಸರನ್ನು ತನ್ನ ಗ್ರಂಥದ ೩-೧೦ ಳನೆಯ ಪದ್ಯದಲ್ಲಿ ಪ್ರಕಾರಾಂತರವಾಗಿ ಸೂಚಿಸಿದ್ದಾನೆ.

(v) ಜಗದ್ದಳಸೋಮನಾಥಕೃತ ಕಲ್ಯಾಣಕಾರಕ :—ಇದೂ ಕನ್ನಡ ವೈದ್ಯ ಗ್ರಂಥ. ಹಿಂದೆಯೇ ಸೂಚಿಸಿರುವಂತೆ ಪೂಜ್ಯಪಾದ ಗ್ರಂಥದ ಅನುವಾದ. ಇದರ ಗ್ರಹಾಧಿಕಾರದಲ್ಲಿ ಸರ್ವವಿಷಚಿಕಿತ್ಸೆಯೆಂಬ ೧೨ ಪದ್ಯಗಳಿವೆ. ಅವುಗಳ ವಿಷಯಗಳೇ ಅಲ್ಲದೆ ೫ ಪೂರ್ಣ ಪದ್ಯಗಳು ಪ್ರಕೃತ ಗ್ರಂಥದಲ್ಲಿ ಉದ್ಧೃತವಾಗಿವೆ.[2]

ಈ ಮೇಲೆ ಹೇಳಿದ ಗ್ರಂಥಗಳನ್ನೂ ಇಂತಹ ಇತರ ಗ್ರಂಥಗಳನ್ನೂ ಉಪಯೋಗಿಸಿಕೊಂಡಿದ್ದ ಪಕ್ಷದಲ್ಲಿ ಶೋಧನೆಯ ಕಾರ್ಯವು ಇನ್ನೂ ಯಶಸ್ವಿಯಾಗುತ್ತಿತ್ತೆಂಬುದು ನಮ್ಮ ಸೂಚನೆ.

೨. ಱ, ೞಗಳು :—ಕನ್ನಡಭಾಷೆಯಲ್ಲಿ ೧೪ನೆಯ ಶತಮಾನದ ಹೊತ್ತಿಗೆ ೞಕಾರವು ಉಚ್ಚಾರಣೆಯಿಂದಲೂ ಬರವಣಿಗೆಯಿಂದಲೂ ಲೋಪವಾಗಿದ್ದಿರಬೇಕು. ಖಗೇಂದ್ರಮಣಿದರ್ಪಣದಲ್ಲಿ ಲಕಾರ ಳಕಾರಪ್ರಾಸಗಳು ಶುದ್ಧವಾಗಿದ್ದರೂ ೞಕಾರ ಪ್ರಾಸವು ಒಂದೆಡೆಯಲ್ಲಿ ವಿನಾ ಉಳಿದೆಡೆಗಳಲ್ಲೆಲ್ಲಾ ಮಿಶ್ರವಾಗಿಯೇ ಇದೆ. ಹಾಗೆಯೇ ಲಕಾರ ಳಕಾರಪ್ರಾಸಗಳಲ್ಲಿಯೂ ಕೆಲವೆಡೆ ಮಿಶ್ರವಿದೆ. ಗ್ರಂಥದ ಒಟ್ಟಿನಲ್ಲಿ ೧೩ ಲಕಾರದ ೭ ಳಕಾರದ ೨೦ ೞಕಾರದ ಮಿಶ್ರಪ್ರಾಸಗಳಿವೆ. ೞಕಾರಪ್ರಾಸವು ಶುದ್ಧವಾಗಿರುವುದು ಒಂದೆಡೆಯಲ್ಲಿ ಮಾತ್ರ (೧೦-೬೦). ಮಂಗರಸನು ಈ ಅಕ್ಷರಗಳ ವ್ಯತ್ಯಾಸವನ್ನು ಅಂಗೀಕಾರಮಾಡಿರಲಿಲ್ಲವೇಸೋ ! ಈ ದೃಷ್ಟಿಯಿಂದ ಈ ಗ್ರಂಥದಲ್ಲಿ ಆಗಿನ ಕಾಲದ ಷಟ್ಪದಿ ಗ್ರಂಥಗಳ ಹಾಗೆ ಱಾಕ್ಷರಪ್ರಯೋಗವನ್ನು ಬಿಟ್ಟಿದ್ದರೂ ಬಾಧಕವಿರುತ್ತಿರಲಿಲ್ಲ.

---

[1] ಲೋಕೋಪಕಾರದ ಪದ್ಯಗಳು :—ಖಗೇಂದ್ರಮಣಿದರ್ಪಣದ ೨-೯೮, ೨-೧೧೧-೨, ೩-೮೯, ೫-೫೬, ೫-೫೭, ೮-೩೦, ೧೦-೬೯. ೧೦-೭೬, ೧೩-೩೭, ೧೩-೧೨೦, ೧೬-೧೪೧.

[2] ಕಲ್ಯಾಣಕಾರಕದ ಪದ್ಯಗಳು—ಖಗೇಂದ್ರಮಣಿದರ್ಪಣದ ೩-೨೭, ೭-೧೦-೧೧ ೧೧-೩೯, ೧೧-೪೦.

೩. ದ್ವಿತೀಯಾಕ್ಷರಪ್ರಾಸ:—ಈ ಗ್ರಂಥದಲ್ಲಿ ಅನೇಕ ಕಡೆ ಕನ್ನಡದ ದ್ವಿತೀಯಾಕ್ಷರದ ಪ್ರಾಸ ಭಂಗವಾಗಿರುವಂತಿದೆ. ೨-೧೧೮, ೯-೮ರಲ್ಲಿ ರಲಗಳಿಗೂ ೨-೧೨೭ರಲ್ಲಿ ರಸಗಳಿಗೂ ೫-೬೬ರಲ್ಲಿ ಡಟಗಳಿಗೂ ೮-೫೧ ಮತ್ತು ೧೨-೪೨ರಲ್ಲಿ ರಡಗಳಿಗೂ, ೧೬-೯೬ರಲ್ಲಿ ರಕಗಳಿಗೂ ಪ್ರಾಸವಾಗಿದೆ. ಮಂಗರಸನು ಪ್ರಾಸನಿಯಮವನ್ನು ಸರ್ವಥಾ ಪಾಲಿಸಲಿಲ್ಲವೆ? ಈ ವಿಷಯದಲ್ಲಿ ಸಂಪಾದಕರು ಒಂದು ವಿವರವಾದ ಟಿಪ್ಪಣಿಯನ್ನು ಬರೆದಿದ್ದರೆ ಚೆನ್ನಾಗಿತ್ತೆಂದು ತೋರುತ್ತದೆ.

೪. ಶಬ್ದಕೋಶ:—ಇದು ವೈದ್ಯಶಾಸ್ತ್ರಗ್ರಂಥವಾದುದರಿಂದ ಇದರಲ್ಲಿ ಬರುವ ಓಷಧಿಗಳ ವಿಷಯಕವಾದ ಶಬ್ದಕೋಶವೊಂದನ್ನು ಪರಿಶಿಷ್ಟದಲ್ಲಿ ಕೊಟ್ಟಿದ್ದರೆ ಉಪಕಾರವಾಗುತ್ತಿತ್ತು. ಓಷಧಿಕೋಶವನ್ನು ಶೋಧಿಸಿ ಪ್ರಕಾಶಪಡಿಸಿರುವ ಸಂಪಾದಕರಿಗೆ ಇದು ವಿಶೇಷ ಶ್ರಮವಾಗುತ್ತಿರಲಿಲ್ಲ.

೫. ಗ್ರಂಥಪರಿಷ್ಕರಣ ಮತ್ತು ಪಾಠಭೇದಗಳು:—ಸಂಪಾದಕರು ಶುದ್ಧ ಪಾಠವನ್ನು ನಿಷ್ಕರ್ಷೆಮಾಡುವುದಕ್ಕೆ ಸಹಾಯವಾಗುವಂತೆ ಅನೇಕ ಕೈಬರಹದ ಪಾಠಾಂತರಗಳನ್ನು ಸಂಗ್ರಹಿಸಿ ಪ್ರತಿ ಪುಟದಡಿಯಲ್ಲಿಯೂ ಕೊಟ್ಟಿದ್ದಾರೆ. ಸಾಮಾನ್ಯವಾಗಿ ಪಾಠಾಂತರಗಳು ಅಂಗೀಕೃತಪಾಠವನ್ನು ದೃಢಪಡಿಸುವುದಕ್ಕಾಗಲಿ ಬೇರೆಯ ಶುದ್ಧ ಪಾಠವನ್ನು ಊಹಿಸುವುದಕ್ಕಾಗಲಿ ಶಬ್ದಾರ್ಥಗಳಲ್ಲಿ ವೈಶಿಷ್ಟ್ಯವನ್ನು ಸೂಚಿಸುವುದಕ್ಕಾಗಲಿ ಪ್ರಯೋಜನವಾಗುವಂತಿರಬೇಕು. ಅವುಗಳಲ್ಲಿ ನಿಷ್ಕೃಷ್ಟವಾದ ಕ್ರಮವಿರಬೇಕು. ಪಾಠಾಂತರಗಳು ಛಂದೋದೋಷವಿಲ್ಲದಿದ್ದ ಪಕ್ಷದಲ್ಲಿ ಅಂಗೀಕೃತಪಾಠಕ್ಕೆ ಪ್ರತಿಯಾಗಿ ಉಪಯೋಗಿಸಿಕೊಳ್ಳಲು ಹೊಂದುವಂತಿರಬೇಕು. ಪ್ರಸಕ್ತಗ್ರಂಥದಲ್ಲಿ ಪಾಠಾಂತರಗಳು ವಿಪುಲವಾಗಿದ್ದರೂ ಅವುಗಳಿಂದ ಆಗಿರುವ ಉಪಯೋಗವು ಹೆಚ್ಚಲ್ಲ. ಅನೇಕಕಡೆ ಪೂರ್ವೋತ್ತರವ್ಯಾಹತಿಗಳಿವೆ. ಮುನ್ನುಡಿಯಲ್ಲಿ (ಕ) ಪ್ರತಿಯಲ್ಲಿ ೧೪ನೆಯ ಅಧಿಕಾರಗಳೂ ೧೫ನೆಯದರಲ್ಲಿ ಸ್ವಲ್ಪಭಾಗವೂ, (ಘ) ಪ್ರತಿಯಲ್ಲಿ ೧೩ ಆಶ್ವಾಸಗಳೂ, (ತ) ಪ್ರತಿಯಲ್ಲಿ ೩ ಅಧಿಕಾರಗಳೂ ಇವೆಯೆಂದೂ ಸೂಚಿತವಾಗಿವೆ. ಆದರೆ (ಕ) ಪಾಠವು ಗ್ರಂಥಾಂತ್ಯದ ವರೆಗೂ (ಘ) ಪಾಠವು ೧೪-೧೫-೧೬ನೆಯ ಅಧಿಕಾರಗಳಲ್ಲಿಯೂ (ತ) ಪಾಠವು ೫-೬ನೆಯ ಅಧಿಕಾರಗಳಲ್ಲಿಯೂ ಸೂಚಿತವಾಗಿವೆ. ಪಾಠಾಂತರಗಳನ್ನು ಸೂಚಿಸುವುದರಲ್ಲಿಯೂ ಒಂದು ಕ್ರಮವು ಕಂಡುಬರುವುದಿಲ್ಲ. ಪ್ರತಿಗಳ ಖಚಿತವಾದ ಸಂಕೇತಗಳನ್ನು ಸೂಚಿಸಿ ಪಾಠಾಂತರಗಳನ್ನು ಕೊಡುವುದರಲ್ಲಿ ಒಂದು ಗೊತ್ತಾದ ಕ್ರಮವನ್ನು ಉದ್ದಕ್ಕೂ ಅನುಸರಿಸುವುದು ಮೇಲು. ಕೆಲವು ಸಲ ಒಂದು ಪಾಠಕ್ಕೆ ಒಂದೇ ಪ್ರತಿಯ ಎರಡು ಪಾಠಗಳು ಸೂಚಿತವಾಗಿವೆ; ಪ್ರಾಸಕ್ಕೆ ಹೊಂದುವ ಪಾಠವಿದ್ದರೂ ಅದನ್ನು ಅಂಗೀಕಾರಮಾಡದೆ ಪ್ರಶ್ನೆ ಚಿಹ್ನೆ

ಯನ್ನು ಹಾಕಿರುವುದುಂಟು (ಪು. ೨೮೨). ಕೆಲವು ಪ್ರತಿಗಳಲ್ಲಿ ಇಲ್ಲವೆಂದು ಟಿಪ್ಪಣಿ ಬರೆದು ಆ ಪ್ರತಿಯ ಪಾಠವನ್ನೇ ಸೂಚಿಸಿರುವುದೂ ಉಂಟು (ಪು. ೧೯೫, ೧೯೧, ೨೪೬). ಒಂದು ಪ್ರತಿಯಲ್ಲಿ ಮಾತ್ರ ಒಂದು ಪದ್ಯವಿರುವುದೆಂದು ಸೂಚಿಸಿ ಬೇರೆಯ ಪ್ರತಿಗಳ ಪಾಠಗಳನ್ನು ಕೊಟ್ಟಿರುವುದೂ ಉಂಟು (ಪು. ೨೯೪). ಅನೇಕೆಡೆಯಲ್ಲಿ ಪಾಠಾಂತರಗಳಿಗೆ ಪ್ರತಿಗಳ ಹೆಸರನ್ನೇ ಸೂಚಿಸಿಲ್ಲ. (ಪು. ೧೪-೧೫) ಟಿಪ್ಪಣಿಗಳಲ್ಲಿಯೂ ಹೀಗೇಯೇ (ಪು. ೨೨೮, ೧೯೨ ನೋಡಿ). ಒಂದೇ ತೆರನಾದ ಅನೇಕ ವಿಷಯಗಳಲ್ಲಿ ಒಂದಕ್ಕೆ ಟಿಪ್ಪಣಿಯನ್ನು ಕೊಟ್ಟು ಉಳಿದುದಕ್ಕೆ ಹಾಗೆಯೇ ಬಿಟ್ಟಿದೆ (ಉದಾ.—ಛಂದೋದೋಷದ ವಿಷಯದಲ್ಲಿ ೩-೧೦೪ಕ್ಕೆ ಟಿಪ್ಪಣಿಯಿದೆ. ೮-೧೦, ೧೩-೨೧ರಲ್ಲಿ ಇಲ್ಲ). ಅಂಗೀಕೃತವಾದ ಪಾಠಗಳು ಒಂದೊಂದು ಕಡೆಯಲ್ಲಿ ಒಂದೊಂದು ರೀತಿಯಾಗಿದೆ. ಇಂತಹ ಕೆಲವು ಸಣ್ಣಪುಟ್ಟ ವಿಷಯಗಳನ್ನು ಎಚ್ಚರಿಕೆಯಿಂದ ನೋಡುವುದು ಮೇಲು.

ಮೇಲೆ ಹೇಳಿರುವುದರಲ್ಲಿ ಅನೇಕ ಎಲ್ಲ ಸಂಶೋಧಕರಿಗೂ ಸಾಮಾನ್ಯವಾಗಿ ಸಂಭವಿಸತಕ್ಕುವು. ಇವು ಕೇವಲ ಅಲ್ಪ ವಿಷಯಗಳು. ಪ್ರಕೃತ ಸಂಪಾದಕರಿಗೆ ತಿಳಿಯದವಲ್ಲ. ಅವಿಚ್ಛಿನ್ನವಾಗಿ ಕನ್ನಡ ಸಂಸ್ಕೃತ ಭಾಷೆಗಳ ಅಭಿವೃದ್ಧಿಗಾಗಿ ದುಡಿಯುತ್ತಿರುವ ಉಭಯಭಾಷಾಪಂಡಿತರಾದ ಶ್ರೀಮಾನ್ ಶೇಷಯ್ಯಂಗಾರ್ಯರಿಗೆ ಇವುಗಳನ್ನು ಸರಿಪಡಿಸುವುದು ಅಸಾಧ್ಯವಾದ ಕೆಲಸವೇನೂ ಅಲ್ಲ. ಸಾಧ್ಯವಾದ ಮಟ್ಟಿಗೂ ದೋಷರಹಿತವಾದರೆ ಗ್ರಂಥವು ಮತ್ತಷ್ಟು ಶೋಭಿಸುತ್ತದೆಯೆಂಬ ಅಭಿಪ್ರಾಯದಿಂದ ನಮಗೆ ತೋರಿದ ಕೆಲವಂಶಗಳನ್ನು ಸೂಚಿಸಿದ್ದೇವೆ. ಅಪೂರ್ವವಾದ ಜನೋಪಯುಕ್ತವಾದ ಈ ಗ್ರಂಥವನ್ನು ಸಂಶೋಧನೆಮಾಡಿ ಪ್ರಕಟಿಸಿದ ಶ್ರೀಮಾನ್ ಶೇಷಯ್ಯಂಗಾರ್ಯರಿಗೂ, ಪ್ರಕಟಿಸಿದ ಮದರಾಸ್ ವಿಶ್ವವಿದ್ಯಾನಿಲಯದವರಿಗೂ ಕನ್ನಡಿಗರೆಲ್ಲರೂ ಋಣಿಗಳು. ಅವರ ಭಾಷಾ ಸೇವೆಯು ಇತೋಪ್ಯತಿಶಯವಾಗಿ ಅಭಿವೃದ್ಧಿಯಾಗಲೆಂದು ಹಾರೈಸುತ್ತೇವೆ.

ಎಸ್. ಅನಂತರಂಗಾಚಾರ್.

***

**ಕೈವಲ್ಯದರ್ಪಣ** (ಶ್ರೀಮನ್ನಿರಂಜನ ಪ್ರಣವಸ್ವರೂಪಿ ಬಾಲಲೀಲಾ ಮಹಂತಲಿಂಗ ಮಹಾ ಶಿವಯೋಗಿ-ವಿರಚಿತ)—ಸಂಪಾದಕರು: ಪ್ರೊ. ಶಿ. ಶಿ. ಬಸವನಾಳ, ಎಂ.ಎ.; ಪ್ರಕಾಶಕರು: ಶ್ರೀ. ಮ. ನಿ. ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು, ಮುರುಘಾಮಠ ಶ್ರೀ. ಜ. ಮುರುಘ

ರಾಜೇಂದ್ರ ಪ್ರಸಾದನಿಲಯ, ಹಾವೇರಿಪೇಟೆ, ಧಾರವಾಡ; ಕ್ರೌನ ಷೋಡಶಪತ್ರ, ೧೪೫ + ೨೦ ಪುಟಗಳು; ಬೆಲೆ, ರೂ. ೧-೪-೦.

ವೀರಶೈವಸಾಹಿತ್ಯದಲ್ಲಿ ತತ್ತ್ವಪದಗಳಿಗೆ ಒಂದು ಸ್ಥಾನವಿದೆ. ಶ್ರೀ ನಿಜಗುಣ ಶಿವಯೋಗಿಗಳ ಕೈವಲ್ಯಪದ್ಧತಿ, ಶ್ರೀಸರ್ಪಭೂಷಣ ಶಿವಯೋಗಿಗಳ ಕೈವಲ್ಯ ಕಲ್ಪವಲ್ಲರಿ ಇವೆರಡು ಗ್ರಂಥಗಳು ಈ ಮಾದರಿಯ ಸಾಹಿತ್ಯಕ್ಕೆ ಸೇರಿದುವಾಗಿ ಈ ಮೊದಲೇ ಪ್ರಕಟವಾಗಿವೆ. ಅವುಗಳನ್ನು ಓದಿ ತಿಳಿದುಕೊಳ್ಳುವುದು ಗಡುಚಾಗಿದ್ದರೂ ಅವು ಜನರ ಬಾಯಲ್ಲಿ ನಿಂತಿವೆ. ಮನೆಮಠಗಳಲ್ಲಿ ಭಜನೆಯಕಾಲಕ್ಕೆ ಅವುಗಳನ್ನು ಹಾಡುತ್ತಲಿದ್ದುದು ಅಲ್ಲಲ್ಲಿ ಕಂಡುಬರುತ್ತದೆ. ಶ್ರೀ.ಮ.ನಿ.ಪ್ರ. ಬಾಲಲೀಲಾ ಮಹಾಂತಲಿಂಗ ಮಹಾಶಿವಯೋಗಿಗಳವರ ಕೈವಲ್ಯದರ್ಪಣವು ಈ ಮಾದರಿಯ ಸಾಹಿತ್ಯಕ್ಕೆ ಸೇರಿದುದಾದರೂ ಮೇಲಿನ ಎರಡು ಗ್ರಂಥಗಳಂತೆ ನಾರಿಕೇಲಪಾಕವಾಗಿರದೆ ದ್ರಾಕ್ಷಾಪಾಕವಾಗಿದೆಯೆಂಬುದು ಸುಲಭವಾಗಿ ಕಂಡುಬರುವಂತಿದೆ. "ಈ ಗ್ರಂಥವು ಶ್ರೀ ಘನಮಠದಾರ್ಯರ ತತ್ತ್ವಪದಗಳನ್ನೊಳಗೊಂಡು ಕ್ರಿ.ಶ. ೧೯೨೨ರಲ್ಲಿ . . . ಶ್ರೀ.ಮ.ನಿ.ಪ್ರ. ಮೃತ್ಯುಂಜಯ—ಮಹಾಸ್ವಾಮಿಗಳವರಿಂದ ಪ್ರಕಟಿತವಾಗಿತ್ತು. ಇದರ ಪ್ರತಿಗಳೆಲ್ಲ ತೀರಿಹೋದುದರಿಂದ ಶ್ರೀ ಘನಮಠದಾರ್ಯರ ತತ್ತ್ವಪದಗಳನ್ನು ಉಳಿದು ಇದೀಗ ಶ್ರೀ ಬಾಲಲೀಲಾ ಮಹಾಂತಲಿಂಗ ಮಹಾಶಿವಯೋಗಿಗಳ **ಕೈವಲ್ಯದರ್ಪಣ** ಮಾತ್ರ ಸಾಧ್ಯವಿದ್ದಮಟ್ಟಿಗೆ ಪರಿಷ್ಕೃತವಾಗಿ ಸುಬೋಧವಾಗಿ ಪ್ರಕಟಿತವಾಗಿದೆ." ಎಂದು ಸಂಪಾದಕರು ವಿನಯವಾಗಿ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಪ್ರಸ್ತುತಗ್ರಂಥಮೂಲಕವಾಗಿ ಪ್ರೊ. ಬಸವನಾಳರವರು ಕನ್ನಡಸಾಹಿತ್ಯ ಭಕ್ತರನ್ನು ಮತ್ತೆ ಉಪಕೃತರನ್ನು ಮಾಡಿದ್ದಾರೆ.

ಈ ಗ್ರಂಥಕ್ಕೆ ಸಂಪಾದಕರು ತಮ್ಮ ವಿದ್ವತ್ಪ್ರಚುರವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಅದರಲ್ಲಿ ಮುಖ್ಯವಾಗಿ ಕವಿಚರಿತೆ ಹೇಳಲಾಗಿದೆ. ಈ ಸಂದರ್ಭದಲ್ಲಿ ಸಂಪಾದಕರು ಕವಿಗಳ ಮತ್ತು ಅವರ ಗುರುಗಳ ಅಂಕಿತಗಳನ್ನು ಹೇಳಿದ್ದರೆ ಒಳಿತಾಗುತ್ತಿತ್ತೆಂದು ಹೇಳಬಹುದು. ಯಾಕೆಂದರೆ—ಮಹಾಲಿಂಗ, ಪು. ೨; ಮಹಂತೇಶ, ಪು. ೩; ಮಹಂತಮೂರ್ತಿ, ಪು. ೪; ಮಹಾಂತಲಿಂಗ, ಪು. ೬; ಮಾಹಂತೇಶ, ಪು. ೭; ಮಹಂತಪ್ರೌಢ, ಪು. ೧೦; ಗುರುಮಹಂತ, ಪು. ೧೧; ಮಹಾಲಿಂಗಸ್ವಾಮಿ, ಪು. ೨೮; ಗುರುಶಾಂತ, ಪು. ೧೨೫; ರಾಚಪಟ್ಟೇಶ, ಪು. ೧೨೬, ೧೩೦; ಮುಂತಾದ ಅಂಕಿತಗಳು ಉಕ್ತವಾಗಿವೆ. ಇವುಗಳಲ್ಲಿ ಯಾವುವು, ಯಾರಿಗೆ, ಯಾಕೆ ಅನ್ವಯಿಸುತ್ತವೆಯೆಂಬುದನ್ನು ಶೋಧಿಸುವುದು ಅವಶ್ಯವಾಗಿದೆ. ಸಂಪಾದಕರ ದೃಷ್ಟಿಯು ಎಳೆತ ಆಕಡೆ ಏಕೋ ಒಲೆದಿಲ್ಲ.

ಮತ್ತೊಂದು ಸಂಗತಿಯೆಂದರೆ—ಮೊದಲನೆಯ ಪದ್ಯದಲ್ಲಿ 'ಕರಿಯಪುರದೊರೆ ಮಹಾಲಿಂಗ' ಎಂಬ ಅಂಕಿತವಿದೆ. ಈ ಅಂಕಿತಕ್ಕೆ ಆಧಾರಗಳನ್ನು ಶೋಧಿಸುವುದೂ ಆವಶ್ಯಕವಾಗಿದೆ.

ಮೂರನೆಯ ಸಂಗತಿಯೆಂದರೆ ಛಂದಸ್ಸಿನದು. ಈ ಗ್ರಂಥದಲ್ಲಿ ಕಂಡುಬರುವ ಷಟ್ಪದಿಗಳಲ್ಲಿ ಅಥವಾ ಕಂದಪದ್ಯಗಳಲ್ಲಿ ಛಂದೋದೋಷಗಳು ಕಂಡುಬರುವುವಾದರೂ ಅವುಗಳ ಬಗೆಗೆ ಸಂಪಾದಕರಿಗೆ ಆರೂ ದೋಷಕೊಡಲಾರರೆಂಬ ಮಾತು ನಿಜ. ಗ್ರಂಥದ ಪ್ರತಿಗಳು ದೊರೆಯದೆ ಹೋಗುವುದು, ಬಾಯಲ್ಲಿ ನಿಂತಿರುವ ಪದಗಳು ಕ್ರಮವಾಗಿ ಪರಂಪರೆಯಾಗಿ ಮುಂದೆ ಬರುವಾಗ ಅವುಗಳಲ್ಲಿ ವ್ಯತ್ಯಾಸಗಳೂ ದೋಷಗಳೂ ಉಂಟಾಗುವುದು ಇಲ್ಲಿ ಕಾರಣವಾಗಿರಬಹುದು. ಆದರೆ "ಶರ ಷಟ್ಪದಿ" ಪು. ೪೩, ೪೪, ೬೦, ೬೩, ೬೬ ಎಂಬ ತಲೆಕಟ್ಟು ಸರಿಯಾಗಿರದೆ ಅದು ಅಲ್ಲಲ್ಲಿ "ಕುಸುಮಷಟ್ಪದಿ" ಎಂದಿರಬೇಕಿತ್ತು. ೧೧೯ನೆಯ ಪದದ ತಲೆಕಟ್ಟು "ಪರಿವರ್ಧಿನಿ" ಯಾಗಿರದೆ ಭೋಗಷಟ್ಪದಿಯಾಗಿರಬೇಕಿತ್ತು. ೧೨೬ನೆಯ ಮತ್ತು ೧೨೭ನೆಯ ಪುಟಗಳಲ್ಲಿನ 'ಷಟ್ಪದಿ' ಎಂಬ ತಲೆಕಟ್ಟು ಕ್ರಮವಾಗಿ "ಭಾಮಿನೀ ಷಟ್ಪದಿ" "ಕುಸುಮಷಟ್ಪದಿ" ಎಂದಿರಬೇಕಿತ್ತು. ಒಂದುವೇಳೆ ಸಂಪಾದಕರಿಗೆ ಮೂಲವನ್ನು ಬದಲಾಯಿಸುವುದು ಸರಿದೋರದಿದ್ದರೂ ತಮ್ಮ ಸೂಚನೆಗಳನ್ನು ಅಡಿ ಟಿಪ್ಪಣಿಯಲ್ಲಿ ಕೊಡಲು ಪ್ರತ್ಯವಾಯವಿರಲಿಲ್ಲ. ಇವು ಹಾಗೆಯೇ ಉಳಿದಿರುವುದರಿಂದ ಸಂಪಾದಕರು ಕಂಡುಹಿಡಿದ ಹೊಸ ಷಟ್ಪದಿಗಳೆಂಬ ತಪ್ಪು ಕಲ್ಪನೆಯು ಬೇರೂರಿ ನೆಲೆಯಾಗಿ ನಿಲ್ಲಲು ಆಸ್ಪದ ದೊರೆಯುವಂತಾಗಿದೆ.

೧೨೪ನೆಯ ಪುಟದಲ್ಲಿ (೧೨೫) ತ್ರಿವಿಧಿ ಪದಗಳಿವೆ. ಅವುಗಳನ್ನು ತ್ರಿಪದಿಗಳ ರೂಪದಿಂದ ಮೇಲಲ್ಲದಿದ್ದರೂ ಅಡಿಟಿಪ್ಪಣಿಯಲ್ಲಿ ಬರೆಯಬಹುದಿತ್ತು. ಇವುಗಳ ನಿಜರೂಪ ತೋರಲು ಒಂದು ಉದಾಹರಣೆಯನ್ನು ಇಲ್ಲಿರಿಸಿಕೊಳ್ಳಬಹುದು.

ನನಗೆ ತಟ್ಟವು ಶರಣೆ | ನಾನಿರ್ದರಹುದಲ್ಲೊ |
ತನುಮನವೆನ್ನ ನೀನಾದ | ಮೇಲಿನ್ನು |
ನಿನಗೆ ಮುಟ್ಟುವವು ಗುರುಶಾಂತ || ೪ ||

೧೨೨ನೆಯ ಪುಟದಲ್ಲಿರುವ (೧೨೪) ಕಂದ ಪದಗಳನ್ನಾದರೂ ಇವುಗಳಂತೆಯೇ ಸರಿಯಾಗಿ ಬರೆಯಬಹುದಾಗಿದೆ.

ಕೆಲವು ಅಚ್ಚಿನ ದೋಷಗಳು ಉಳಿದಿವೆ. ಅವುಗಳನ್ನು ಮುಂದಿನ ಮುದ್ರಣದಲ್ಲಿ ಸಂಪಾದಕರು ಸರಿಪಡಿಸಿಕೊಳ್ಳುವರೆಂದು ನಂಬಲಾಗಿದೆ.

ಗ್ರಂಥದಲ್ಲಿ ಅಲ್ಲಲ್ಲಿ ಕೃಷ್ಣರಾಜೇಂದ್ರ ಒಡೆಯರವರ, ಬಾಲಲೀಲಾ ಮಹಂತ ಮಹಾ ಶಿವಯೋಗಿಗಳವರ, ಅವರ ಶಿಷ್ಯರ ಮತ್ತು ಅವರಿಗೆ ಸಂಬಂಧಪಟ್ಟ ವಸ್ತುಗಳ ಭಾವಚಿತ್ರಗಳು ಗ್ರಂಥವನ್ನು ಅಂದಗೊಳಿಸಿವೆ. ಕಾಗದವು ದೊರೆಯದೆ ಇರುವ ಕಾಲದಲ್ಲಿಯೂ ಆಸಕ್ತಿಯಿಂದ ಪ್ರಕಾಶನ ಕಾರ್ಯವನ್ನು ಒಂದು ರೂಪಕ್ಕೆ ತಂದು ಗ್ರಂಥವನ್ನು ಅಚ್ಚುಮಾಡಿಸಿದ ಸಂಪಾದಕರನ್ನೂ, ಆಸ್ಥೆಯಿಂದ ಗ್ರಂಥವನ್ನು ಪ್ರಕಟಗೊಳಿಸಿದ ಶ್ರೀ.ಮ.ನಿ.ಪ್ರ. ಮೃತ್ಯುಂಜಯ ಮಹಾಸ್ವಾಮಿಗಳವರನ್ನೂ ನಾವು ಹೃತ್ಪೂರ್ವಕ ಅಭಿನಂದಿಸುತ್ತೇವೆ.

ಕೆ. ಜಿ. ಕುಂದಣಗಾರ.

*
* *

**“ರಾಜ್ಯಾದಾಯವೂ, ಬಡತನವೂ”**—ಮಿಂಚಿನ ಬಳ್ಳಿಯ ೫ನೆಯ ವರುಷದ ೪ನೆಯ ಕುಡಿ. ಮೂಲ ಲೇಖಕರು: ಶ್ರೀ ಜೆ. ಸಿ. ಕುಮಾರಪ್ಪ; ಅನುವಾದಕರು: ಶ್ರೀ ಡಿ. ಎಸ್. ಶರ್ಮ; ಪುಟಗಳು ೧೦೫; ಬೆಲೆ, ರೂ. ೧-೪-೦. ಮಿಂಚಿನ ಬಳ್ಳಿಯ ಚಾವಡಿ, ಧಾರವಾಡ.

ಶ್ರೀಯುತ ಜೆ. ಸಿ. ಕುಮಾರಪ್ಪನವರು ಮಹಾತ್ಮ ಗಾಂಧಿಜೀಯವರ ಮುಖ್ಯ ಅನುಯಾಯಿಗಳಲ್ಲೊಬ್ಬರು. ಭರತಖಂಡದ ಆರ್ಥಿಕ ಇತಿಹಾಸ ಮತ್ತು ಸಮಸ್ಯೆಗಳನ್ನು ರಾಷ್ಟ್ರೀಯ ದೃಷ್ಟಿಯಿಂದ ವಿಮರ್ಶಿಸಿ ಅನೇಕ ಲೇಖನಗಳನ್ನೂ ಪುಸ್ತಕಗಳನ್ನೂ ಬರೆದಿರುವವರು. ಅವರ ಬರವಣಿಗೆಯ ರೀತಿಯನ್ನು ಕೆಲವರು ರಾಜಕೀಯ ಪ್ರಚಾರಸಾಧನೆಯ ಮಾರ್ಗವೆಂದರೂ ಅವರ ವಿಷಯಸಂಗ್ರಹವು ಅಮೂಲ್ಯವಾದುದು. ನಮ್ಮ ದೇಶದ ಆರ್ಥಿಕ ವಿಚಾರದ ಪೂರ್ಣಪರಿಚಯಕ್ಕೆ ಶ್ರೀ ಕುಮಾರಪ್ಪನವರಂಥ ಅರ್ಥಶಾಸ್ತ್ರಜ್ಞರ ಅಭಿಪ್ರಾಯಗಳೂ ಅತ್ಯಾವಶ್ಯಕವೆಂಬುದನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪುವರು.

ಅವರ ಪುಸ್ತಕಗಳಲ್ಲೆಲ್ಲ *Public Finance and Our Poverty* ಎಂಬುದು ಹೆಚ್ಚು ಮೆಚ್ಚಿಗೆಯನ್ನು ಪಡೆದು ಪ್ರಚಾರದಲ್ಲಿದೆ. ಪ್ರಭುತ್ವದ ಹಣಕಾಸು ವ್ಯವಹಾರಗಳ ರೀತಿನೀತಿಗಳಿಂದ ನಮ್ಮ ಆರ್ಥಿಕ ಜೀವನವು ರೂಪಾಂತರಹೊಂದಿ ಹೇಗೆ ನಮ್ಮ ಈಗಿನ ಬಡತನಕ್ಕೆ ಕಾರಣವಾಗಿದೆ ಎಂಬುದನ್ನು ವಿವರಿಸುವುದೇ ಇದರ ಉದ್ದೇಶ. ಮಹಾತ್ಮಜೀಯವರು ನಡಸುತ್ತಿದ್ದ ‘ಯಂಗ್ ಇಂಡಿಯಾ’ ವಾರಪತ್ರಿಕೆಯಲ್ಲಿ ಪ್ರಕಟಣೆಯಾದ ಲೇಖನಗಳು ತಿದ್ದಿದನಂತರ ಪುಸ್ತಕವಾಗಿ ೧೯೩೦ರಲ್ಲಿ ಪ್ರಕಟವಾದುದೇ ಇದು. ಮುಂದಿನ ವರುಷ ೧೯೩೧ರಲ್ಲಿ ಒಂದೆರಡು ಹೆಚ್ಚು ವಿಷಯುಗಳನ್ನು ಸೇರಿಸಿ ವಿಸ್ತರಿಸಿದ ಪುಸ್ತಕವು ಎರಡನೆಯ ಮುದ್ರಣವಾಯಿತು. ಈ ಎರಡನೆಯ ಆವೃತ್ತಿಯೇ ೧೯೪೧ರಲ್ಲಿ ಪುನಃ ಅಚ್ಚಾಗಿ ಈಗ ಪ್ರಚಾರದಲ್ಲಿರುವುದು.

ಪುಸ್ತಕದಲ್ಲಿ ವಿಷಯಕ್ಕೆ ಸಂಬಂಧಪಟ್ಟ ಅಂಕಿಗಳೆಲ್ಲವೂ ಬಹಳ ಹಳೆಯವು. ಹದಿನೈದು ವರ್ಷಗಳ ಹಿಂದಿನವು. ಅಂದಿನಿಂದೀಚೆಗೆ ಪರಿಸ್ಥಿತಿ ಸನ್ನಿವೇಶಗಳು ಬದಲಾವಣೆಯಾಗಿದ್ದರೂ ಆಗಿನ ಅಂಕಿ ಅಂಶಗಳ ಆಧಾರದ ಮೇಲೆ ಹೂಡಿದ ವಾದದ ಪ್ರತಿಪಾದನೆಗೆ ಈಗಲೂ ಅವಕಾಶವಿದೆ ಎಂದೇ ಗ್ರಂಥಕರ್ತರ ಮತ.

"ರಾಜ್ಯಾದಾಯವೂ ಬಡತನವೂ", ಶ್ರೀ. ಕುಮಾರಪ್ಪನವರ ಪುಸ್ತಕದ ಸ್ವೇಚ್ಛಾನುವಾದ. ಇದನ್ನು ಕನ್ನಡಿಗರಿಗೆ ದೊರಕಿಸಿಕೊಡುವ ಉದ್ಯಮವು ಗ್ರಂಥಮಾಲೆಯ ವ್ಯವಸ್ಥಾಪಕರ ಸಾಹಸಕ್ಕೆ ನಿದರ್ಶನ.

ಅನುವಾದಕರು ಮೂಲಗ್ರಂಥದ ವಿಸ್ತರಿಸಿದ ಈಚಿನ ಆವೃತ್ತಿಯನ್ನು ಗಮನಿಸದೆ ಮೊದಲನೆಯ ಆವೃತ್ತಿಯ ಮೂಲವನ್ನೇ ಅನುಸರಿಸಿರುವರು. ಆದುದರಿಂದಲೇ ವಿಸ್ತರಿಸಿದ ಆವೃತ್ತಿಯಲ್ಲಿ ಅಡಗಿರುವ "ಸಾರ್ವಜನಿಕ ಸಾಲಗಳು" ಎಂಬ ಅಧ್ಯಾಯವೂ, ಗ್ರೇಟ್‌ಬ್ರಿಟನ್ ಮತ್ತು ಭರತಖಂಡಗಳ ಹಣಕಾಸಿನ ವ್ಯವಹಾರ ವಿಷಯವನ್ನು ಪರಿಶೀಲಿಸಲು ರಾಷ್ಟ್ರೀಯ ಮಹಾಸಭೆಯು ನೇಮಿಸಿದ್ದ ವಿಮರ್ಶನಾಸಮಿತಿಯ ವರದಿಯೂ ಅನುವಾದದಲ್ಲಿ ಸೇರಿಲ್ಲ. ನಮ್ಮ ದೇಶದ ಸಾರ್ವಜನಿಕ ಹಣಕಾಸುಗಳ ಪೂರ್ಣಪರಿಚಯಕ್ಕೆ ಅನುವಾದದಲ್ಲಿ ಬಿಟ್ಟುಹೋಗಿರುವ ಈ ವಿಚಾರಗಳೂ ಅತ್ಯಾವಶ್ಯಕ. ಅಲ್ಲದೆ ಈ ರೀತಿ ಅಪೂರ್ಣ ಅನುವಾದದ ಪ್ರಕಟಣೆಯು ಮೂಲಗ್ರಂಥಕರ್ತರಿಗೆ ಸಲ್ಲತಕ್ಕ ಗೌರವಕ್ಕೆ ಚ್ಯುತಿಯನ್ನುಂಟುಮಾಡುವುದು.

ಶಾಸ್ತ್ರೀಯ ಗ್ರಂಥಗಳನ್ನೂ ವಿಜ್ಞಾನ ವಿಷಯಗಳನ್ನೂ ಕನ್ನಡಕ್ಕೆ ಅನುವಾದ ಮಾಡುವುದು ಎಷ್ಟು ಪ್ರಯಾಸವೆಂಬುದು ಆ ಹಾದಿಯನ್ನು ತುಳಿದಿರುವವರಿಗೆಲ್ಲ ತಿಳಿದಿರುವುದು. ಪಾರಿಭಾಷಿಕ ಭಾವಗರ್ಭಿತವಾದ ಪದಗಳ ಸೂಕ್ಷ್ಮ ಅರ್ಥವ್ಯತ್ಯಾಸಗಳನ್ನೂ, ವಿಷಯ ವಿಚಾರದ ಧಾಟಿಯನ್ನೂ ಸರಳವಾದ ಕನ್ನಡದಲ್ಲಿ ತಿಳಿಯಪಡಿಸುವುದು ಸುಲಭವೆಂದಿಗೂ ಅಲ್ಲ. ಆದರೆ, ನಮ್ಮ ಭಾಷೆಯು, ಈ ಪುಸ್ತಕದಲ್ಲಿ ಹಲವೆಡೆ ಕಂಡುಬರುವ ತಿಣುಕಿ ಅನುವಾದ ಮಾಡಬೇಕಾದ ಪರಿಸ್ಥಿತಿಯಲ್ಲಿ ಏನೂ ಇಲ್ಲ. ಆ ಹಂತವನ್ನು ದಾಟಿ ಕನ್ನಡವು ಅನೇಕ ಮಜಲುಗಳನ್ನು ಮುಟ್ಟಿದೆ. ಕನ್ನಡಿಗರೆಲ್ಲರಿಗೂ ಸಾಮಾನ್ಯವಾಗಿ ಅರ್ಥವಾಗುವ ಶಾಸ್ತ್ರೀಯ ಪದಗಳು ರೂಢಿಗೆ ಬರುತ್ತಿವೆ. ಈ ಪುಸ್ತಕದ ಅನುವಾದಕರದೇ ಒಂದು ಹಾದಿ. ಉದಾಹರಣೆಗಾಗಿ ಒಂದೆರಡನ್ನು ಸೂಚಿಸಬಹುದು. Public Finance = ರಾಜ್ಯಾದಾಯ ; Debt Services = ಎರವಲು ಉದ್ಯೋಗಗಳು ; Irrigation = ವ್ಯವಸಾಯ ; Fiscal Science = ಅರ್ಥಶಾಸ್ತ್ರ; Handmaid = ಕೈಗೊಂಬೆ; Unnecessary Waste = ಅನುಪಯುಕ್ತ ಹಾನಿ ; Canals = ನೀರಾವರಿ ; Regressive = ಪುರಾತನ. ಅಲ್ಲದೆ ಪದಪ್ರಯೋಗ

ಗಳಲ್ಲೂ ಗಜಿಬಿಜಿ. ಒಂದೇ ಪದವನ್ನು ಬೇರೆ ಬೇರೆ ಅರ್ಥಗಳಲ್ಲಿ ಉಪಯೋಗಿಸಿದೆ. ಉದಾಹರಣೆಗೆ, ರಾಜ್ಯಾದಾಯ ಎನ್ನುವ ಪದ Public Finance ಮತ್ತು Public Revenue ಎರಡಕ್ಕೂ, ವ್ಯವಸಾಯ ಎನ್ನುವ ಪದ Irrigation ಮತ್ತು Agriculture ಎರಡಕ್ಕೂ ಪ್ರಯೋಗವಾಗಿದೆ.

ವಿಷಯವನ್ನರಿತು ಮೂಲಪ್ರಯೋಗ ಲಕ್ಷಣಕ್ಕನುಸಾರವಾಗಿ ಅನುವಾದ ಮಾಡಲಸಾಧ್ಯವಾದಾಗ ವಿಚಾರ ಸಾರಾಂಶವನ್ನು ಸರಳ ಶೈಲಿಯಲ್ಲಿ ಬರೆಯುವುದು ಅನುವಾದಕ್ಕಿಂತ ಮೇಲು. ಅನುವಾದಕರ ಉತ್ಸಾಹಭರಿತ ಎಳೆಯ ಪ್ರಯತ್ನಕ್ಕೆ ಹುರಿದುಂಬಿಸಲು ಮಾಲೆಯ ವ್ಯವಸ್ಥಾಪಕರು ಉತ್ತೇಜನಕೊಡುವುದು ಸಾಧು ವಾದದ್ದಾದರೂ, ಮೂಲ ಗ್ರಂಥಕರ್ತರಿಗೂ ಗ್ರಂಥಮಾಲೆಗೂ ಸಲ್ಲಬೇಕಾದ ಸ್ಥಾನ ಮಾನಗಳಿಗೆ ಗಮನಕೊಡುವುದು ಹೆಚ್ಚು ಹೊಣೆಗಾರಿಕೆಯ ಕೆಲಸ.

ಎಸ್. ಜಿ.

***

**ಗತಕಾಲದ ಗುರುತುಗಳು**—ಶ್ರೀ. ಎಫ್. ಜಿ. ಪಿಯರ್ಸ್. ಪ್ರಕಾಶಕರು : ಹಂಫ್ರಿ ಮಿಲ್‌ಫೊರ್ಡ್ ; O.U.P. ಬೆಲೆ, ರೂ. 2-0-0.

ಪ್ರಪಂಚದ ಇತಿಹಾಸವನ್ನು ಶಾಲೆಗಳ ವಿದ್ಯಾರ್ಥಿಗಳಿಗೂ ಅರ್ಥವಾಗುವಂತೆ ನಿರೂಪಿಸಬೇಕೆಂದು ಈ ಗ್ರಂಥವು ಹೊರಟಿದೆ. ನಿರೂಪಣೆಯ ಮಾರ್ಗವು ಮೂರು ತತ್ವಗಳನ್ನು ಅನುಸರಿಸಿದೆ. ಮಾನವಜಾತಿಯ ಐಕ್ಯವು ಸ್ಥಿರಪಡಬೇಕಾದರೆ ಮಾನವನ ಇತಿಹಾಸವು ಒಂದೇ ಒಂದು ಪ್ರವಾಹದಂತೆ ಗ್ರಹಿಸಲ್ಪಡಬೇಕು; ಕೃತಕವಾದ ರಾಷ್ಟ್ರಭೇದಗಳು ಸ್ವಾಭಾವಿಕವಾದ ಪ್ರಪಂಚದ ಐಕ್ಯಕ್ಕಾಗಲಿ, ಪರಮಧ್ಯೇಯ ವಾದ ಅಂತರರಾಷ್ಟ್ರೀಯ ಸೌಹಾರ್ದಕ್ಕಾಗಲಿ ವಿರೋಧವಾಗಕೂಡದೆಂಬ ಭಾವನೆ ಯಿಂದ ವಿವಿಧ ರಾಷ್ಟ್ರಗಳ ಸಂಸ್ಕೃತಿಗಳನ್ನು ಸಮಷ್ಟಿದೃಷ್ಟಿಯಿಂದ ನೋಡಬೇ ಕೆಂಬುದು ಮೊದಲನೆಯ ಉದ್ದೇಶ. ಇದಕ್ಕನುಸಾರವಾಗಿ ಗ್ರಂಥವು ಕೇವಲ ಒಂದು ರಾಷ್ಟ್ರದ ಅಥವಾ ಒಂದು ಜನಾಂಗದ ಚರಿತ್ರೆಯಾಗಿರದೆ ಸಮಗ್ರ ಮಾನವ ಸಂಸ್ಕೃ ತಿಯ ಸಂಗ್ರಹವಾದ ಇತಿಹಾಸದಂತಿದೆ. ರಾಜಕೀಯ ವೃತ್ತಾಂತವೇ ಚರಿತ್ರೆಯ ವಿಷಯವೆಂದು ತಿಳಿದಿದ್ದ ಹಳೆಯ ಐತಿಹಾಸಿಕ ದೃಷ್ಟಿಯನ್ನು ಮೂಲೆಗೊತ್ತಿ ಸಾಮಾ ಜಿಕ, ಔದ್ಯೋಗಿಕ ಮತ್ತು ಮಾನಸಿಕ ಸಂಸ್ಕೃತಿಗಳಿಗೂ ಅವಕ್ಕೆ ಸಲ್ಲಬೇಕಾದ ಪ್ರಾಮುಖ್ಯವನ್ನು ಕೊಡಬೇಕೆಂಬುದು ಎರಡನೆಯ ತತ್ವ. ಮೂರನೆಯದು ಅಧ್ಯಾಪನ ಸೌಲಭ್ಯಕ್ಕೆ ಅನ್ವಯಿಸಿದ್ದು. ಜನತೆಗಳ ಜೀವನದಲ್ಲಿ ಪರಿಣಾಮಕಾರಿಯಾದ ಕೆಲಸ ಮಾಡಿದ ಮಹಾವ್ಯಕ್ತಿಗಳ ಜೀವನ ಚರಿತ್ರೆಯ ಮೂಲಕ ಚರಿತ್ರೆಯನ್ನು ಉಪದೇಶಿ

ಸಿದರೆ ಅದು ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವುದೆಂದೂ ಅವರ ಐತಿಹಾಸಿಕ ಅಭಿರುಚಿಯನ್ನು ಪೋಷಿಸುವುದೆಂದೂ ಆ ರೀತಿಯನ್ನು ಇಲ್ಲಿ ಅನುಸರಿಸಲಾಗಿದೆ. ಮಾನವನ ಪ್ರಗತಿಪಥದಲ್ಲಿ ಮಹಾವ್ಯಕ್ತಿಗಳು ಕೈಮರಗಳಿದ್ದ ಹಾಗೆ. ಸಾಮಾನ್ಯಜನರು ಮುಖ್ಯವಲ್ಲವೆಂದಲ್ಲ. ಅವರ ಜೀವನವೇ ಚರಿತ್ರೆಯ ವಿಷಯ. ಆದರೆ ಆ ಜೀವನವು ಮಹಾವ್ಯಕ್ತಿಗಳ ಕಾರ್ಮಿಕ ಅಥವಾ ವೈಜ್ಞಾನಿಕ ಪ್ರತಿಭೆಯಿಂದ ಸ್ಫೂರ್ತಿ ಹೊಂದುತ್ತದೆ, ರೂಪುಗೊಳ್ಳುತ್ತದೆ.

ಪ್ರಕೃತ, ಅವಲೋಕನದ ಗ್ರಂಥವು ಎಫ್. ಜಿ. ಪಿಯರ್ಸ್ ಅವರ ಇಂಗ್ಲಿಷಿನ *Footprints on the Sands of Time* ಎಂಬುದರ ಕನ್ನಡ ಪರಿವರ್ತನೆ. ಪುಸ್ತಕವು ನೋಡುವುದಕ್ಕೆ ಅಂದವಾಗಿಯೂ ಅನೇಕ ನಕ್ಷೆ ಚಿತ್ರಗಳಿಂದ ಕೂಡಿ ಆಕರ್ಷಕ ವಾಗಿಯೂ ಉಪಯುಕ್ತವಾಗಿಯೂ ಇದೆ. ವಿಷಯವು ವಿಸ್ತಾರವಾಗಿದ್ದರೂ ೩೧೩ ಪುಟಗಳು ಮಾತ್ರ ಇರುವ ಈ ಗ್ರಂಥದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಗ್ರಂಥಕರ್ತರು ತಮ್ಮ ಸಂಗ್ರಹಸಾಮರ್ಥ್ಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಕೆಲ ವೆಡೆಗಳಲ್ಲಿ ಇದು ದೋಷವಾಗಿ ತೋರುತ್ತದೆ. ಭಾರತ ಇತಿಹಾಸದಲ್ಲಿ ಇಂಗ್ಲಿಷರ ಅಭ್ಯುದಯವೂ ದೇಶೀಯ ರಾಜಕೀಯ ಶಕ್ತಿಯ ನಾಶವೂ, ಪುನಃ ಬೇರೆ ರೂಪದಲ್ಲಿ ಅದರ ಉತ್ಪತ್ತಿ ಅಭಿವೃದ್ಧಿಗಳೂ ನಿರೂಪಿಸಲ್ಪಡದಿರುವುದು ಭಾರತೀಯ ವಿದ್ಯಾರ್ಥಿಗಳ ದೃಷ್ಟಿಯಿಂದ ಒಂದು ದೋಷವೆನ್ನಬಹುದು. ಕೆಲವು ಕಡೆ ಐತಿಹಾಸಿಕ ಘಟನೆಗಳ ನಿಜವಾದ ಕ್ರಮವನ್ನು ಗ್ರಂಥಕರ್ತರು ವ್ಯತ್ಯಸ್ತವಾಗಿ ವಿವರಿಸಿರುವುದು ಕಂಡು ಬರುತ್ತದೆ. ಉದಾಹರಣೆಗಾಗಿ—ಪ್ರಾಟೆಸ್ಟೆಂಟರ ಉದ್ಯಮವನ್ನು ವಿಶದಗೊಳಿಸಿದ ಮೇಲೆ ರಿನೈಸಾನ್ಸನ್ನು ವರ್ಣಿಸಿರುವುದು ಅಯುಕ್ತ. ರಿನೈಸಾನ್ಸ ಪ್ರಾಟೆಸ್ಟೆಂಟರ ಚಳವಳಿಗೆ ಒಂದು ಮುಖ್ಯವಾದ ಕಾರಣವೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಅದನ್ನು ಮೊದಲು ನಿರೂಪಿಸಿ ಅನಂತರ ಅದರ ಅಂಗವಾದ ಪ್ರಾಟೆಸ್ಟೆಂಟ್ ಉದ್ಯಮ ವನ್ನು ವಿವರಿಸಬಹುದಾಗಿತ್ತು. ಹಾಗೆಯೇ ಲೆನಿನ್ನರ ಬೋಲ್‌ಷೆವಿಕ್ ಕ್ರಾಂತಿಯ ವಿಷಯವನ್ನು ಹೇಳಿದ ಮೇಲೆ ಸಾಮಾಜಿಕವಾದಿಗಳ ೧೮೪೮ನೆಯ ವರ್ಷದ ಉದ್ಯಮವನ್ನು ವಿವರಿಸಿರುವುದೂ ಅಕ್ರಮ. ಈ ವಿಧವಾದ ವಾಸ್ತವಿಕ ಕ್ರಮದ ವ್ಯತ್ಯಾಸದಿಂದ ವಿಷಯ ನಿರೂಪಣೆಗೆ ಯಾವ ಪ್ರಯೋಜನವೂ ಆಗಿಲ್ಲ. ಗ್ರಂಥ ಕರ್ತರು ಕೂಡ ಈ ವಿಷಯದಲ್ಲಿ ಯಾವ ಕಾರಣವನ್ನೂ ವ್ಯಕ್ತಪಡಿಸದೆ ಇರುವುದ ರಿಂದ ಅದನ್ನು ದೋಷವೆಂದೇ ಎಣಿಸಬೇಕಾಗಿದೆ.

ಅನುವಾದದ ಭಾಷೆ ಸರಳವಾಗಿದೆ. ಇದು ಬಹು ಪ್ರಶಂಸನೀಯವಾದ್ದು. ಆದರೆ ಇಂಗ್ಲಿಷ್ ಭಾಷೆಯ ಛಾಯೆಯನ್ನು ಅನುಸರಿಸಲು ಹೋಗಿ ಇಂಗ್ಲಿಷ್

ತಿಳಿಯದ ಕನ್ನಡಿಗರಿಗೆ ಅರ್ಥವಾಗದ ಶೈಲಿಯನ್ನು ಕೆಲವು ಕಡೆಗಳಲ್ಲಿ ನಾವು ಕಾಣಬಹುದು. ಈ ವಿಧವಾದ ಪರಿವರ್ತನೆಯು ವಾಕ್ಯಾರ್ಥದ ಬಿಗಿಯನ್ನೂ ಸೌಲಭ್ಯವನ್ನೂ ಕೆಡಿಸುತ್ತದೆ. ಉದಾಹರಣೆಗಾಗಿ ಪೀಠಿಕೆಯಲ್ಲಿ ಸಿಕ್ಕುವ ಈ ವಾಕ್ಯವನ್ನು ಗಮನಿಸಬಹುದು—"ಮತಬೋಧಕರಿಬ್ಬರ ವಿಷಯದಲ್ಲಿ ಉದ್ದೇಶಪೂರ್ವಕವಾಗಿ ಸ್ಥಾಪಕರಿಗಿಂತಲೂ ಮುಖ್ಯಪ್ರಚಾರಕರನ್ನು ಕುರಿತು ಹೆಚ್ಚಾಗಿ ಬರೆದಿದ್ದೇನೆ." "Civilization" ಎಂಬ ಶಬ್ದಕ್ಕೆ "ಸಭ್ಯತೆ" ಎನ್ನುವ ಶಬ್ದವು ಅಷ್ಟು ಸುಖವಾದ ಪರಿವರ್ತನೆಯಲ್ಲ. ಬಳಕೆಯಲ್ಲಿರುವ 'ನಾಗರಿಕತೆ' ಯೇ ಒಳ್ಳೆಯ ಶಬ್ದವಾಗಿತ್ತು. ಈ ರೀತಿ ಶಬ್ದಪರಿವರ್ತನೆಯಲ್ಲಿ ಅಲ್ಲಲ್ಲಿ ಸ್ವಲ್ಪ ಅಸ್ವಾರಸ್ಯ ಕಂಡುಬರುತ್ತದೆ. ಗ್ರಂಥದ ಹೆಸರಿನ ಸಂಬಂಧದಲ್ಲಿಯೂ ಪರಿವರ್ತನೆ ಸಮರ್ಪಕವಾಗಿಲ್ಲವೆನ್ನಿಸುತ್ತದೆ. ಮೂಲ ಗ್ರಂಥದ ಹೆಸರು "ಕಾಲವೆಂಬ ಮರಳಿನಲ್ಲಿ ಕಾಣುವ ಪಾದಚಿಹ್ನೆಗಳು" ಎಂಬ ಅರ್ಥವನ್ನು ಕೊಡುತ್ತದೆ. "ಗತಕಾಲದ ಗುರುತುಗಳು" ಎಂಬುದು ಹಿತವಾಗಿಲ್ಲ. ಪಾದಚಿಹ್ನೆಗಳೆಂದರೆ ಮಾನವನು ಮುಂದುವರಿದ ಮಾರ್ಗದ ಪರಾಮರ್ಶವುಂಟಾಗುತ್ತದೆ. ಬರಿಯ 'ಗುರುತುಗಳು' ಎಂಬ ಶಬ್ದದಿಂದ ಆ ಅರ್ಥ ಹೊರಡುವುದಿಲ್ಲ. ಈ ಸಣ್ಣ ಅಂಶಗಳನ್ನು ಬಿಟ್ಟರೆ ಒಟ್ಟಿನಲ್ಲಿ ಭಾಷಾಂತರವು ಸುಲಭವಾಗಿದೆ; ಚೆನ್ನಾಗಿದೆ.

ಕನ್ನಡದಲ್ಲಿ ಐತಿಹಾಸಿಕ ಗ್ರಂಥಗಳು ಇನ್ನೂ ಹೆಚ್ಚಾಗಿ ಬೇಕಾಗಿದೆ. ಆ ಉದ್ದೇಶಸಾಧನೆಗೆ ಈ ಗ್ರಂಥದಿಂದ ಬಹಳ ಉಪಕಾರವಾಗಿದೆಯೆಂದು ಯಾರೂ ಒಪ್ಪಬೇಕು.

ಎಸ್. ಎಸ್. ರಾಘವಾಚಾರ್.

***

**ಆಯ್ದಕ್ಕಿಯ ಮಾರಯ್ಯ—**ಬರೆದವರು : ಶ್ರೀ ಚನ್ನಬಸವದೇಶಿಕೇಂದ್ರಸ್ವಾಮಿಗಳು. ೪೪ ಪುಟ; ಕ್ರಯ, ೫ ಆಣೆ.

ಇದೊಂದು ಚಿಕ್ಕರೂಪಕ. ಜಂಗಮಪ್ರಾಶಸ್ತ್ಯವನ್ನು ನಿರೂಪಿಸುವುದೇ ಈ ಗ್ರಂಥದ ಮುಖ್ಯೋದ್ದೇಶವೆಂದು ತೋರುತ್ತದೆ. ಭಕ್ತನು ಜಂಗಮನ ಗುಣದೋಷಗಳನ್ನೆಣಿಸಬಾರದು. ಜಂಗಮವೇ ಲಿಂಗವೆಂದೆಣಿಸಿ ಆರಾಧಿಸಬೇಕೆಂಬ ತತ್ವವು ಆಯ್ದಕ್ಕಿ ಮಾರಯ್ಯನ ಚರಿತೆಯಿಂದ ವ್ಯಕ್ತವಾಗುತ್ತದೆ. ಮಾರಯ್ಯನು ಬಸವಣ್ಣನವರ ಸಮಕಾಲೀನನಾದ ಒಬ್ಬ ಶ್ರೇಷ್ಠ ಶಿವಭಕ್ತ. ಈತನು ಬಸವಣ್ಣನ ಮನೆಯ ಅಂಗಳದಲ್ಲಿ ಬಿದ್ದಿರುವ ಅಕ್ಕಿಯ ಕಾಳುಗಳನ್ನು ಆಯ್ದುಕೊಂಡು ಹೋಗಿ ಜೀವನ ನಡೆಸುವ ಕಾಯಕವನ್ನು ಕೈಗೊಂಡಿದ್ದನು. ಈತನಿಗೆ ಪುಂಡ ಜಂಗಮರನ್ನು ಶಿವ

ಸ್ವರೂಪಿಗಳೆಂದು ಭಾವಿಸಿ ಆರಾಧಿಸುವುದು ತಪ್ಪೆಂದೇ ತೋರಿತು. ಆದರೆ ಬಸವಣ್ಣ ನವರು ಜಂಗಮರ ಕುಂದನ್ನೆಣಿಸುವುದು ಭಕ್ತನಲ್ಲಿ ಮಹಾ ದೋಷವೆಂದೇ ಸಾರಿ ಹೇಳುತ್ತಿದ್ದರು. ತನ್ನದಾರಿ ಸರಿಯೇ ಬಸವಣ್ಣನವರ ದಾರಿ ಸರಿಯೇ ಎಂಬುದನ್ನು ನಿರ್ಣಯಿಸಲಾರದೆ ಕಷ್ಟಪಡುತ್ತಿದ್ದಾಗ ಅವನ ಸಹಧರ್ಮಿಣಿಯಾದ ಲಕ್ಕಮ್ಮನು ಮಾರಯ್ಯನಿಗೆ ಜಂಗಮಮಹಿಮೆಯನ್ನು ತಿಳಿಯ ಹೇಳಿ ಅವನನ್ನು ಭಾವಶುದ್ಧಿ ಯಿಂದ ಜಂಗಮಾರಾಧನೆ ಮಾಡಲೊಪ್ಪಿಸಿದಳೆಂಬುದೇ ಈ ರೂಪಕದ ಮುಖ್ಯ ವಸ್ತು. ಈ ಕಥೆಯನ್ನು ಶ್ರೀ ಸ್ವಾಮಿಗಳವರು ತಿಳಿಗನ್ನಡದಲ್ಲಿ ಬಹಳ ಚೆನ್ನಾಗಿ ನಿರೂಪಿಸಿದ್ದಾರೆ. ಅಲ್ಲಲ್ಲಿ ಬಸವಣ್ಣನವರ ವಚನಗಳನ್ನೂ ಮಾರಯ್ಯನವರ ವಚನ ಗಳನ್ನೂ ಪಾತ್ರಗಳ ಮಾತಿನಲ್ಲಿ ಜೋಡಿಸಿದ್ದಾರೆ. ಮಾರಯ್ಯನ ಜೀವನವು ಲಕ್ಕಮ್ಮನ ಅಸಾಧಾರಣವಾದ ಜ್ಞಾನಪ್ರಭಾವದಿಂದ ಪರಿಪಕ್ವವಾದ ರೀತಿಯು ಈ ರೂಪಕದಲ್ಲಿ ಚೆನ್ನಾಗಿ ರೂಪುಗೊಂಡಿದೆ.

ಕೆ. ವಿ.

# ಸಂಪಾದಕೀಯ

ಪ್ರಬುದ್ಧ ಕರ್ಣಾಟಕ ಹುಟ್ಟಿ ಈಗ್ಗೆ ೨೫ ವರ್ಷಗಳಾದುವು. ಹುಟ್ಟಿದಂದಿನಿಂದ ಹೃಷ್ಟವಾಗಿ ಪುಷ್ಟವಾಗಿ ಬೆಳೆದ ಈ ಪತ್ರಿಕೆ ಸುತ್ತಲಿನ ಪ್ರಪಂಚಕ್ಕೆ ತಕ್ಕಮಟ್ಟಿಗೆ ಪ್ರಯೋಜನಕಾರಿಯಾಗಿ ಬೆಳೆದಿದೆ.

**ಸ್ವವಿಷಯ**

ತನ್ನ ಸಾಧನೆಯನ್ನು ತಾನೇ ಹೇಳಿಕೊಳ್ಳುವುದು ಉಚಿತವಲ್ಲ, ಶ್ರೇಯಸ್ಕರವಲ್ಲ. ಆದರೆ ತಾನು ಮಾಡಿರುವ ಕೆಲಸವನ್ನು ಸಿಂಹಾವಲೋಕನದಿಂದ ನೋಡಿ ಅಳೆಯುವುದೂ ಅಳೆತದ ಪ್ರಮಾಣದಮೇಲೆ ಮಾಡದೆ ಉಳಿದಿರುವುದನ್ನು ಪರ್ಯಾಲೋಚಿಸುವುದೂ ಮುಂದಕ್ಕೆ ಏನಾಗಬೇಕೊ ಯೋಚಿಸುವುದೂ ಬೆಳೆಯುವ ಎಲ್ಲ ಚೇತನಕ್ಕೂ ಅವಶ್ಯ ಕಾರ್ಯ, ಅಗತ್ಯ. ಆ ಮಾನ ಅಭಿಮಾನಗಳಿಂದ ಮುಂದಿನ ನಡೆಯನ್ನು ತಿದ್ದಿಕೊಂಡು ಅದು ಸ್ಥಿರವಾಗಿ ಫಲಪ್ರದವಾಗುವಂತೆ ಮಾಡಬೇಕು.

ತನ್ನ ಮುಂದಿರುವ ದಾರಿಯನ್ನು ತಿಳಿದು ನಡೆಯುವುದು ಎಲ್ಲರಿಗೂ ಅಗತ್ಯವಾದರೂ ಪ್ರಬುದ್ಧ ಕರ್ಣಾಟಕ ಹೊಸ ದಾರಿಯೊಂದನ್ನು ತಾನೇ ಹಾಕಿಕೊಳ್ಳಬೇಕಾಯಿತು. ನಡೆಯುವಾಗ ಹಲವು ಬಗೆಯ ಏರು ತಗ್ಗುಗಳನ್ನು ಸರಿಪಡಿಸಿಕೊಳ್ಳಬೇಕಾಯಿತು. ಅದರ ಮತ್ತು ಅದರ ಚಾಲಕರ ಪುಣ್ಯದಿಂದ ಅದರ ಪದ್ಧತಿಯನ್ನು ಒಟ್ಟಿನಲ್ಲಿ ನಾಡು ಒಪ್ಪಿಕೊಂಡಿತು; ಅದರ ಮುನ್ನಡೆಗೆ ಸಂತೋಷವನ್ನು ವ್ಯಕ್ತಪಡಿಸಿ ಮಾನ್ಯತೆ ಕೊಟ್ಟಿತು. ಕವಿತೆ, ನಾಟಕ, ಸಣ್ಣಕತೆ, ಪ್ರಬಂಧ, ವಿಮರ್ಶೆ, ಕಾವ್ಯಾವಲೋಕನ, ಕಲಾಸ್ವಾದನ, ಶಾಸ್ತ್ರವಿಹಾರ, ವಸ್ತುಸಂಗ್ರಹ — ಈ ರೂಪಗಳಲ್ಲಿ ಸ್ವತಂತ್ರವಾಗಿ ಒಂದು ವಿಶೇಷ ವ್ಯಕ್ತಿ ಗುಣವನ್ನೂ ಒಂದು ಹೊಸ ರುಚಿ, ನೋಟ, ತೂಕ, ಎಣಿಕೆ, ತೀರ್ಮಾನ ಸಂಪ್ರದಾಯವನ್ನೂ ಹೊಸ ಬೆಳಕಿನ ಮತ್ತು ತಾರತಮ್ಯದ ಒಂದು ಮಾರ್ಗವನ್ನೂ ಹಿಡಿದ ಈ ಪತ್ರಿಕೆ ಕನ್ನಡ ನಾಡಿನ ಪ್ರಬುದ್ಧತೆಗೆ ಉಪಯುಕ್ತವಾದ ಒಂದು ಸೇವೆ ಸಲ್ಲಿಸಿತೆಂದು ಹೆಮ್ಮೆಪಟ್ಟುಕೊಳ್ಳಬಹುದೆನ್ನಿಸುತ್ತದೆ. ಆಗೊಂದುಸಲ ಈಗೊಂದುಸಲ ಇಲ್ಲಿನ ಒಂದೆರಡು ಮಾತು ರೀತಿಗಳಿಗಾಗಿ ಯಾರಿಗಾದರೂ ಅಸಮ್ಮತಿ, ಅಸಮಾಧಾನ ಹುಟ್ಟಿದ ಸಂದರ್ಭಗಳುಂಟು. ಆದರೆ ಪತ್ರಿಕೆಯ ಮನಸ್ಸಿನಲ್ಲಿ ಕುತರ್ಕ, ಕುಚೋದ್ಯ, ದೌರ್ಜನ್ಯ ಎಂದಿಗೂ ಇಲ್ಲವೆಂಬುದನ್ನು ಮತ್ತೊಮ್ಮೆ ನಿವೇದಿಸುತ್ತೇವೆ. ಕನ್ನಡದ ಏಳಿಗೆಗಾಗಿ ದುಡಿಯುವ ಒಂದು ಸಂಸ್ಥೆ ಅದಕ್ಕೆ ಅಡಸಬಹುದಾದ ಜಾಡ್ಯಗಳನ್ನು ಪರಿಹರಿಸುವುದು ಹೇಗೆ ಅಗತ್ಯವೋ ಹಾಗೆಯೇ ಅದರ ದಾರಿಗೆ ಅಡ್ಡಿಬರುವ ಪ್ರಭಾವಗಳನ್ನು ಕುರಿತೂ ನಾಲ್ಕು ಮಾತನ್ನು

ಸ್ಪಷ್ಟವಾಗಿ ಆಡಬೇಕಾಗುತ್ತದೆ. ಪ್ರಸಂಗ ಕಟುವಾಗಿ ಪರಸ್ಪರ ವಿರುದ್ಧವಾದ ಹಲವು ಲಾಭಲೋಭನಗಳಿದ್ದರೆ ಮಾತು ಕಿಚ್ಚಿನಂತೆ ಕಾಣುವುದು ಶಕ್ಯ. ಆವೇಶವಿದ್ದಾಗ ಘಾತುಕರಲ್ಲಿ ಸಮತೆ ಸ್ಥೈರಣೆ ಕಷ್ಟವಾಗುವುದು ಸಹಜ. ತನ್ನ ಮಾನ ಗಾಂಭೀರ್ಯ ಗಳನ್ನೂ ಶುಚಿಯ ಮಟ್ಟವನ್ನೂ ಉಳಿಸಿಕೊಂಡು ತನ್ನ ಅಭಿಪ್ರಾಯವನ್ನು ನಿರ್ವಂಚನೆ ಯಿಂದ ಅರಿಕೆಮಾಡಲೂ ತಾನು ಉಳಿಸಬೇಕು ನಿಲಿಸಬೇಕು ಎಂಬುದಕ್ಕೆ ಒಂದು ರಕ್ಷಣೆಯ ನುಡಿಯನ್ನಾಡುವ ಸ್ವಾತಂತ್ರ್ಯವನ್ನೂ ಧೈರ್ಯವನ್ನೂ ವಹಿಸಲೂ ಪ್ರಯತ್ನಿಸಿರುವ ಈ ಪತ್ರಿಕೆಯನ್ನು ಯಾರೂ ತೆಗಳಲಾರರೆನ್ನಿಸುತ್ತದೆ. ಬಹುಮಟ್ಟಿಗೆ ಅದಕ್ಕೆ ಅಭಿನಂದನೆಯೇ ದೊರಕಿದೆ. ಇದಕ್ಕೆ ದೊರಕಿಸಿಕೊಟ್ಟಿರುವವರು ಪತ್ರಿಕೆಯ ಬರಹಗಾರರು. ಅವರ ವಿದ್ವತ್ತೆ, ಸೌಜನ್ಯ, ಸಹಕಾರ, ಪ್ರತಿಫಲವಿಲ್ಲದ ದುಡಿತ,— ಇವಿಲ್ಲವಾಗಿದ್ದಿದ್ದರೆ ಎಂತಹ ಸಂಪಾದಕರು, ಸಂಚಾಲಕರು ತಾನೇ ಏನುಮಾಡಿ ಯಾರು? ತಮ್ಮ ಕನ್ನಡ ಭಕ್ತಿಯಿಂದ ಹೀಗೆ ಉಪಕಾರಮಾಡಿರುವ ಒಳನಾಡ ಹೊರನಾಡ ಪ್ರೀತಿಯ ಗೆಳೆಯರೆಲ್ಲರಿಗೂ ನಮ್ಮ ವಂದನೆಗಳು. ಸೂಕ್ತ ಸಲಹೆಕೊಟ್ಟು, ಹೆಜ್ಜೆಗೆ ಹಜ್ಜೆ ಬೆರಸಿ, ದನಿಗೆ ದನಿ ಸೇರಿಸಿ ನಡಸಿಕೊಟ್ಟಿರುವ ಅವರಿಗೆಲ್ಲ ಕೃತಜ್ಞತೆ ಅರ್ಪಿಸುತ್ತೇವೆ.

ಇಂದು ಇನ್ನೊಂದು ಘಟ್ಟಕ್ಕೆ ಸೇರಿದ್ದೇವೆ: ಬೆಂಗಳೂರು ಸೆಂಟ್ರಲ್ ಕಾಲೆಜ್ ಕರ್ಣಾಟಕ ಸಂಘ ನಡಸುತ್ತಿದ್ದ ಪತ್ರಿಕೆ ಎಂದು ವಿಶ್ವವಿದ್ಯಾನಿಲಯದ ಪತ್ರಿಕೆ ಯಾಯಿತೋ ಅಂದು ಅದರ ವ್ಯಾಪ್ತಿಯೂ ದೃಷ್ಟಿಯೂ ವ್ಯವಹಾರವೂ ಹೊಣೆ ಗಾರಿಕೆಯ ಸ್ವರೂಪವೂ ಮಾರ್ಪಟ್ಟುವು, ವಿಸ್ತಾರಗೊಂಡುವು. ವಿಶ್ವವಿದ್ಯಾನಿಲಯ ಏತಕ್ಕೆಲ್ಲ ಪ್ರತಿನಿಧಿಯೊ ಯಾವ ವಿದ್ಯಾರಂಗವನ್ನು ತನ್ನ ಕ್ಷೇತ್ರವಾಗಿ ಮಾಡಿ ಕೊಂಡಿದೆಯೊ ಅದರ ವ್ಯಾಪ್ತಿಯನ್ನೆಲ್ಲ ಪ್ರಬುದ್ಧ ಕರ್ಣಾಟಕ ಪ್ರತಿಫಲಿಸಬೇಕಾಯಿತು. ಹೊಸಕಾಲದ ವಿದ್ಯೆ, ಕಲೆ, ಜ್ಞಾನವಿಜ್ಞಾನ, ಕಾರ್ಯಶಿಲ್ಪ, ಸಂಸ್ಕೃತಿ, ಸಂಸ್ಥೆ ಆದರ್ಶಗಳು, ತೊಳಲು — ಇವೆಲ್ಲದರ ಪರಿಚಯವನ್ನು ಮಾಡಿಕೊಟ್ಟು ಕನ್ನಡಿಗರಿಗೆ ಇಂದಿನ ಪ್ರಪಂಚದ ರೂಪರೇಖೆಗಳು ಸುವೇದ್ಯವಾಗುವಂತೆ ಅದು ಕೆಲಸಮಾಡ ಬೇಕಾಗಿದೆ. ಸ್ವಲ್ಪ ಹೆಚ್ಚು ಸಾಹಿತ್ಯದ್ದೇ ಆಗಿ ಮೊದಲಿಟ್ಟ ಪತ್ರಿಕೆ ಹೀಗೆ ಇಂದು ವಿಶ್ವವಿದ್ಯೆಯನ್ನು ಕಾಣಿಸುವ ಕನ್ನಡಿಯಾಗಿ, ಅದರ ಕೈಪಿಡಿಯಾಗಿ ಆಗಬೇಕಾಗಿದೆ.

ನಮ್ಮ ಜನ ಈವರೆಗೂ ನಮಗೆ ಊಡಿರುವ ಪೋಷಣೆಯ ಧೈರ್ಯದಿಂದ ಆ ಉತ್ಸಾಹ ವಿಶ್ವಾಸಗಳ ಭರವಸೆಯಿಂದ ಈ ಪ್ರಪಂಚದ ಕಡೆಗೂ ಧಾರಾಳವಾಗಿ ನಡೆದು ನಿಲ್ಲುವ ಶಕ್ತಿಯೂ ಅವಕಾಶವೂ ಇಂದು ನಮಗೆ ಪ್ರಾಪ್ತವಾಗಿವೆ. ಈ ಸಮಯದಲ್ಲಿ ವಿಶ್ವವಿದ್ಯಾನಿಲಯದ ಎಲ್ಲ ಅಧಿಕಾರಿಗಳಿಗೂ, ನೆರವುಕೊಟ್ಟ ಹಿಂದಿನ

ಇಂದಿನ ವಿದ್ಯಾರ್ಥಿವರ್ಗಕ್ಕೂ, ಲೇಖಕ ಮತ್ತು ಅಭಿಮಾನಿವರ್ಗಕ್ಕೂ, ನಮಗೆ ಉತ್ತೇಜನಕೊಟ್ಟು ಬರಮಾಡಿಕೊಳ್ಳುತ್ತಿರುವ ಗ್ರಾಹಕರಿಗೂ ಮತ್ತೊಮ್ಮೆ ನಮಸ್ಕಾರಗಳನ್ನು ತಿಳಿಸಿ ಹೊಸ ವರ್ಷದ ಕೆಲಸದಲ್ಲಿ ತೊಡುಗುತ್ತಿದ್ದೇವೆ.

ಸುತ್ತಲ ಪ್ರಪಂಚದ ಅರಿವಾಗಬೇಕಾದರೆ ಅದರ ಚರಿತ್ರೆ, ಇಂದಿನ ಪರಿಸ್ಥಿತಿ, ಸ್ಥಿತಿಯಲ್ಲಿ ಅಡಗಿರುವ ಪರಸ್ಪರ ಸಂಬಂಧ, ವಿಷಮತೆ, ಆಕಾಂಕ್ಷೆಗಳು, ಗತಿ, ಗುರಿ, ಇಂದು ಪ್ರಭಾವಯುತವಾಗಿರುವ ಕಾರ್ಯಶಕ್ತಿ, ಈ ಎಲ್ಲದರ ಬಲಾಬಲಗಳು, ನಾಳಿನ ಹೆಜ್ಜೆಗೆ ತೆರೆಯುವ ದಾರಿ ದೃಷ್ಟಿಗಳು ಎಲ್ಲವನ್ನೂ ನಾವು ಅರಿತುಕೊಳ್ಳಬೇಕು. ಒಂದು ಭಾಗ ಚರಿತ್ರೆಯದಾದರೆ ಇನ್ನೊಂದು ವಸ್ತು ಸ್ಥಿತಿಯ ಆಲೋಕನ, ತಿಳಿವಳಿಕೆ; ಮತ್ತೊಂದು ನಾಳೆಯ ನೋಟ; ಅದರ ಜೊತೆಗೆ ಆ ಬಗೆಗೆ ಕಟ್ಟಬೇಕಾದ ಸಂಸ್ಥೆ, ವ್ಯವಸ್ಥೆ, ಕಾರ್ಯಸೂಚನೆ, ಯೋಜನೆ ಇವುಗಳ ಕಡೆಗೆ ಮನಸ್ಸನ್ನು ಹರಿಸಬೇಕೆಂದಾಯಿತು. ನಾವು ಸ್ನೇಹಿತರಲ್ಲಿ ಮಾಡುವ ಪ್ರಾರ್ಥನೆ ಇದು: ತಮ್ಮ ವ್ಯಾಸಂಗದ ಫಲವೆಲ್ಲ ನಮ್ಮ ನಾಡಿಗೆ ಬೇಕಾಗಿದೆ. ಒಂದೂವರೆ ಕೋಟಿ ಜನಕ್ಕೆ ಹೊಸ ಪ್ರಪಂಚದ ಪರಿಚಯವನ್ನು ಮಾಡಿಕೊಟ್ಟು ಅವರನ್ನು ದೃಢಸತ್ವರನ್ನಾಗಿ ಮಾಡುವ ಕೆಲಸ ತಮ್ಮ ಪಾಲಿನದು. ಹಿಂದಿನದು, ಇಂದಿನದು, ಮುಂದಿನದು ಎಂಬ ಹೆಸರಿನಲ್ಲಿ ಸಂತತವಾಗಿ ಹರಿಯುತ್ತಿರುವ ಕಾಲದ ಮತ್ತು ಜೀವದ ಪ್ರಭಾವಗಳಲ್ಲಿ ಯಾವುದು ಸಾರಪೋಷಕವಾದ್ದೊ ಅಂಥದನ್ನು ಉಳಿಸುವ, ಗಳಿಸಿಡುವ, ಪ್ರಚಾರ ಮಾಡುವ ಸಂತೋಷವೂ ಭಾಗ್ಯವೂ ತಮ್ಮದಾಗಲಿ; ವಿಶ್ವವಿದ್ಯಾನಿಲಯದ ಪ್ರತಿ ಶಾಖೆಯವರೂ ತಮ್ಮ ತಮ್ಮ ವಿದ್ಯಾಕ್ಷೇತ್ರದ ಜೀವಂತ ಪರಿಚಯವನ್ನು ಮಾಡಿಕೊಟ್ಟು, ಅದರ ಮುನ್ನಡೆಯ ಸ್ವರೂಪ ನಮ್ಮವರ ಮನಸ್ಸಿಗೆ ಹಾಯುವಂತೆ ಮಾಡಿಕೊಟ್ಟು ಉಪಕರಿಸಬೇಕು. ಸುತ್ತ ನೋಡಿದರೆ ಹಳೆಯ ಕಾಲದ ಮನುಷ್ಯರಂತೆ ನೋಡದೆ, ಹಿನ್ನಡೆಯುವರಂತೆ ಆಗದೆ; ಕನ್ನಡಿಗರು ಇಂದಿನ ಒಂದು ಪ್ರಬಲ ಸತ್ವವಾಗುವಂತೆ ಮಾಡಿಕೊಡಬೇಕು. ತಾವು ದಿನವೂ ಪಾಠ ಹೇಳುವ ವಿಷಯವನ್ನು ಕುರಿತೇ — ಹೆಚ್ಚಿಲ್ಲ —ವರ್ಷಕ್ಕೆ ಆರು ಪುಟ ಬರೆದುಕೊಟ್ಟರೂ ಸಾಕು; ತಮ್ಮ ವಿದ್ಯಾರ್ಥಿಗಳ ಪ್ರಬಂಧ (Essay) ರಚನೆಗೆ ಸಲಹೆ ಕೊಡುತ್ತ ಅವರು ಬರೆದುದನ್ನು ಕೂಡಿಸಿ ತಿದ್ದಿ ಅದನ್ನು ದೊರಕಿಸಿದರೂ ಸಾಕು. ನಮ್ಮ ನಾಡಿಗೂ ವಿದ್ಯೆಗೂ ಪ್ರಯೋಜನಕಾರಿಯಾದ ಯಾವ ಪುಸ್ತಕದ, ಯೋಚನೆಯ ಕಾರ್ಯತಂತ್ರದ ಸ್ವರೂಪವನ್ನಾದರೂ ಕುರಿತು ನಾಲ್ಕು ಪುಟಗಳಷ್ಟು ಬರೆದು ಕೊಡುವ ಉಪಕಾರ ಮಾಡಬೇಕು.

ಇದು ವಿಶ್ವವಿದ್ಯಾನಿಲಯದ ಪತ್ರಿಕೆ ಹೇಗೆಯೊ ಹಾಗೆಯೇ ಕನ್ನಡ ನಾಡಿನ ಪತ್ರಿಕೆ. ಇಂಗ್ಲಿಷರಿಯದ, ಮತ್ತು ಬೇರೆ ಭಾಷೆಗಳ ಪರಿಚಯವಿಲ್ಲದವರಿಗಾಗಿ ನಡೆಯುವ

ಪತ್ರಿಕೆ. ಕನ್ನಡಿಗರು ಪ್ರಪಂಚದಕಡೆ ನೋಡುತ್ತಿದ್ದಾರೆ; ಆದ್ದರಿಂದ ಕನ್ನಡದಲ್ಲಿ ಕನ್ನಡಿಗರಿಗಾಗಿ ಅದರ ಸಂದೇಶಗಳನ್ನೂ ಸಂಕೇತಗಳನ್ನೂ ಸಂಗ್ರಹಿಸಬೇಕಾಗಿದೆ. ಬೇರೆ ಬೇರೆ ದೇಶಗಳಲ್ಲಿ ಜನಜೀವನದ ಮುನ್ನಡೆಗಾಗಿ ಏನೇನು ನಡೆಯುತ್ತಿದೆ? ಯಾವ ರಕ್ಷಣೆ, ಪೋಷಣೆ, ಯೋಜನೆ? ಯಾವ ಶಿಸ್ತು, ಒಡಂಬಡಿಕೆ, ಯಾವ ಶಾಸ್ತ್ರ, ವಿಮರ್ಶೆ ರಚಿತವಾಗುತ್ತಿವೆ? ಎಂಬುದರ ತಿಳಿವಳಿಕೆ ಬರಬೇಕು ಜನಕ್ಕೆ. ವೃತ್ತಪತ್ರಿಕೆಗಳಲ್ಲಿ ಬರುವ ಸಂಗತಿಗಳ್ನು ಅರ್ಥಮಾಡಿಕೊಳ್ಳಲಾಗಲಿ, ಆ ಬಗೆಗೆ ಯಾವ ಯಾವ ಸಂಗತಿಗಳ ಸ್ಥಾನ, ಸಂಬಂಧ, ಅರ್ಥ ಏನು ಎಂಬುದನ್ನಾಗಲಿ ಅವರು ತಿಳಿಯಬೇಕಾಗಿದೆ. ಒಂದು ಮಾತಿನಲ್ಲಿ, ಪ್ರಪಂಚದ ನಡುವೆ ನಿಂತು ಎಲ್ಲ ಪ್ರಭಾವಗಳನ್ನೂ ರೂಢಿಸಿಕೊಂಡು ತನ್ನ ಜೀವಕ್ಕೆ ಶಾಂತಿ, ಕಾಂತಿ ಸಂಪುಷ್ಟಿಗಳನ್ನು ಒದಗಿಸಿಕೊಂಡು ಬಾಳುವ ಒಕ್ಕಲಾಗುವಂತೆ ಕನ್ನಡ ದೇಶವನ್ನು ಮಾಡಲು ತನ್ನ ರೀತಿಯಲ್ಲಿ ಶ್ರಮಿಸುವುದು ಪ್ರಬುದ್ಧ ಕರ್ಣಾಟಕದ ಕೆಲಸ. ಇದಕ್ಕೆ ತಮ್ಮ ಸಹಾಯ ಸಹಾನುಭೂತಿಗಳನ್ನು ಬೇಡುತ್ತಿದ್ದೇವೆ.

***

ಈ ಸಲ ನಾಲ್ಕು ವಾರ ತಡವಾಗಿ ಹೊರಡಬೇಕಾಗಿ ಬಂದುದಕ್ಕಾಗಿ ಪ್ರಬುದ್ಧ ಕರ್ಣಾಟಕ ವಿಷಾದಪಡುತ್ತದೆ. ಇಷ್ಟು ಬೇಗಾದರೂ ಪ್ರಕಟವಾಗಲು ನೆರವಾದ ಎಲ್ಲ ಸ್ನೇಹಿತರಿಗೂ ವಂದನೆಗಳು.

***

ಕೆಲವರು ಮಾನ್ಯರು ತೀರಿಕೊಂಡದ್ದರಿಂದ ವಿದ್ಯಾಪ್ರಪಂಚಕ್ಕಾದ ನಷ್ಟವನ್ನು ಕುರಿತು ಈ ಸಂಚಿಕೆಯಲ್ಲಿ ಬೇರೆಯಾಗಿ ನಮ್ಮ ಕಂಬನಿಕಾಣಿಕೆ ಸಲ್ಲಿಸಲಾಗಿದೆ. ಆ ಹಿರಿಯರ ಯೋಗ್ಯತೆಯೂ ಕಾರ್ಯಸಾಧನೆಯೂ ನಮ್ಮ ತಲೆಮೊರೆಯ ಶ್ರದ್ಧಾಳುಗಳ ಪಾಲಿಗೂ ಬರಲಿ ಎಂದು ಕನ್ನಡನಾಡಿನ ಭಾಗ್ಯವನ್ನು ಕಾಯುತ್ತಿರುವ ಶಕ್ತಿಗಳನ್ನು ಬೇಡುತ್ತೇವೆ.

***

**ಬೇಸಿಕ್ ಇಂಗ್ಲಿಷ್**

ಹ್ಯಾರ್‌ವರ್ಡ್ ವಿಶ್ವವಿದ್ಯಾನಿಲಯದಲ್ಲಿ LL.D. ಪದವಿಯನ್ನು ಸ್ವೀಕರಿಸುತ್ತ ಬ್ರಿಟಿಷ್ ಪ್ರಧಾನರಾದ ಶ್ರೀ ವಿನ್‌ಸ್ಟನ್ ಚರ್ಚಿಲ್ ಅವರು ಬೇಸಿಕ್ ಇಂಗ್ಲಿಷ್ ಎಂಬುದನ್ನು ಕುರಿತು ನಾಲ್ಕು ಮಾತಾಡಿದರು. ಅದರ ಭವಿಷ್ಯತ್ತಿನಲ್ಲಿ ತಮ್ಮ ವಿಶ್ವಾಸ, ನಿರೀಕ್ಷಣೆ ಅತಿಶಯವಾಗಿರುವುವೆಂದು ತಿಳಿಸಿದರು. ಈಗಾಗಲೇ ಆಗ್ಡೆನ್, ರಿಚರ್ಡ್ಸ್ ಪ್ರಭೃತಿಗಳ ಸೇವೆಯಿಂದ ಅದಕ್ಕೆ ಗೊತ್ತಾದ ಒಂದು ರೂಪರೀತಿ ಬಂದಿದೆ. ಭರತ ಖಂಡದಲ್ಲಿಯೂ ಹಲವು

ಕಡೆ ಅದರ ಪರೀಕ್ಷಾ ಪ್ರಯೋಗ ನಡೆಯುತ್ತಿದೆ. ನಮ್ಮ ಸಂಸ್ಥಾನದಲ್ಲಿಯೂ ಆ ಬಗೆಗೆ ಸರಕಾರದವರ ಸಹಾನುಭೂತಿ ದೊರೆತು ಒಂದು ಪಾಠಶಾಲೆಯಲ್ಲಿಯಾದರೂ ಆ ಶಿಕ್ಷಣಕ್ರಮವನ್ನು ಈ ವರ್ಷ ಆಚರಿಸಿ ನೋಡುವ ಪ್ರಯತ್ನ ಏರ್ಪಟ್ಟಿದೆಯೆಂದು ಕೇಳಿದ್ದೇವೆ.

ಬೇಸಿಕ್ ಇಂಗ್ಲಿಷ್ ವಾದ ಇಷ್ಟೇ: ಇಂಗ್ಲಿಷೇ ತಾಯ್ನುಡಿಯಲ್ಲದವರು ಇಂಗ್ಲಿಷನ್ನು ಕಲಿಯಬೇಕಾಗಿ ಬಂದಾಗ ಅದರ ಪ್ರಮಾಣ ನುಡಿಕಟ್ಟನ್ನು (Standard Form) ಸಾಂಗವಾಗಿ ಸಮಗ್ರವಾಗಿ ಅಭ್ಯಾಸಮಾಡುವುದು ಕಷ್ಟ; ಮಾಡಿದಾಗಲೂ ಶ್ರಮಕ್ಕೆ ತಕ್ಕಷ್ಟು ಫಲ ದೊರೆತಿರುವುದು ಕಡಮೆ. ಜೀವನ್ತ, ಪ್ರಚಲಿತ ಭಾಷೆಯ ನೇರವಾದ ಪರಿಚಯವೂ ಅನುಭವವೂ ಇಲ್ಲದವರಿಗೆ ಕಲಿತ ಇಂಗ್ಲಿಷಿನಲ್ಲಿ ಅತಿ ಹೆಚ್ಚೆಂದರೆ ಪುಸ್ತಕದ ಭಾಷೆಯ ಒಂದು ನುಣುಪೂ ನಿರ್ದುಷ್ಟತೆಯೂ ಸಿಕ್ಕಿದರೆ ಸಿಕ್ಕಬಹುದೇ ಹೊರತು ಅದರ ಜೀವನಾಡಿ ಸಿಕ್ಕುವುದಿಲ್ಲ. ಜೀವನಾಡಿ ಸಿಕ್ಕದೆ ಹೋದರೆ ಅದರ ಅಭ್ಯಾಸಕ್ಕಾಗಿ ಹತ್ತು ಹನ್ನೆರಡು ವರ್ಷಗಳ ಕಾಲ ಬಳಲುವುದು ಜೀವದ ಅಪವ್ಯಯ. ತಮ್ಮದಲ್ಲದ ಭಾಷೆಯಲ್ಲಿ ಯಾರಿಗೂ ಆಪ್ತವಾದ ಆತ್ಮವ್ಯಂಜನೆಯಾಗಲಿ, ಸಾಹಿತ್ಯನಿರ್ಮಾಣವಾಗಲಿ ಶಕ್ಯವಾಗುವುದಿಲ್ಲ. ಅಥವಾ, ಅದನ್ನು ಕಲಿತು ಬಳಸುವುದರಿಂದ ಇಂಗ್ಲಿಷ್ ಸಾಹಿತ್ಯಕ್ಕೇನಾದರೂ ನೇರವಾಗಿ ಸತ್ವಪೋಷಣೆ ಆದೀತೆ? ಎಂದರೆ ಅದು ಬಯಲ ಭ್ರಾಂತಿ. ಇಂದಿನ ಸ್ಥಿತಿ ನೋಡಿದರೆ ಹಲವುವೇಳೆ ಕಲಿತವರಿಗೆ ಇಷ್ಟುಮಟ್ಟಿನ ಭಾಷೆ ಗೊತ್ತಾಗಿ ಕೈವಶವಾಗಿದೆ, ಇಷ್ಟು ಗೊತ್ತಾದ ಶುದ್ಧತೆ ಸರಳತೆಗಳು ಫಲಿಸಿವೆ ಎಂದು ಹೇಳುವುದು ಕೂಡ ಕಷ್ಟ. ಉಚ್ಚಾರಣೆ ಮುಂತಾದ್ದರ ಕಡೆಗಂತೂ ಗಮನ ಎಂದಿಗೂ ಅಸಾಧ್ಯವೇ. ಆದ್ದರಿಂದ ಸಾಮಾನ್ಯ ವ್ಯವಹಾರಕ್ಕೆ ತಕ್ಕ ಅಭಿಪ್ರಾಯಗಳನ್ನು ಖಚಿತವಾಗಿ ಸರಿಯಾಗಿ ವ್ಯಕ್ತಗೊಳಿಸಲು ಅನುಕೂಲವಾಗುವಂತೆ ಆ ಭಾಷೆಯ ಮುಖ್ಯ ಮಾತುಗಳನ್ನು ಸಂಗ್ರಹಿಸಿ, ಅವುಗಳಿಂದ ನುಡಿಯ ಕಟ್ಟನ್ನೂ ನುಡಿಯ ಮರ್ಯಾದೆಯನ್ನೂ ತಿಳಿಸಬಹುದಾದಷ್ಟು ವಿದ್ಯಾರ್ಜನೆ ಮಾಡುವುದು ಸಾಕು. ಕೆಲವು ನ್ಯೂನತೆಗಳು ಇಲ್ಲಿ ಉಳಿಯಬಹುದಾದರೂ ಬಹುಮಟ್ಟಿಗೆ ಇಂಗ್ಲಿಷ್ ಆಡುವವರೆಲ್ಲರಿಗೂ ಅರ್ಥವಾಗುವ, ಶುದ್ಧವಾದ ಖಚಿತವಾದ ಪದಪದ್ಧತಿ, ಉಕ್ತಿರೀತಿ, ಇವುಗಳ ಪ್ರಯೋಜನ ದೊರೆಯುವಂತಾಗುವುದು — ಎಂಬುದು ಆ ವಾದದಲ್ಲಿ ಅಡಗಿದೆ. ನಮ್ಮಂತಹ ಜನಾಂಗಗಳು ಇಂಗ್ಲಿಷ್ ಕಲಿಯಲೇಬೇಕಾಗಿರುವ ಈಗ, ಈ ಪದ್ಧತಿಯಿಂದ ಅತ್ಯಂತ ಪ್ರಯೋಜನವಾಗುವುದು ಖಂಡಿತ. ಆದಷ್ಟುಬೇಗ ಅವರ ದಿನದಿನದ ಭಾಷೆಯ ಸಾರಭಾಗ ನಮ್ಮ ಕೈಗೆ ಸಿಕ್ಕುವುದು. ಉಳಿದ ವೇಳೆಯನ್ನು ಶಾಸ್ತ್ರ ಅಥವಾ ಲೌಕಿಕ ವಿಷಯ ಸಂಗ್ರಹಕ್ಕೊ, ನಿರ್ಮಾಣಕಾರ್ಯ

ಗಳಿಗೊ ವಿನಿಯೋಗಿಸಿ ಈ ಜನದ ಮನಸ್ಸನ್ನೂ, ಯೋಗ್ಯತೆ ಪ್ರತಿಷ್ಠೆಗಳನ್ನೂ ಬೆಳಸುವ ಬೇರೆ ಕೆಲಸಗಳಿಗೆ ತಿರುಗಿಸಬಹುದಾಗುವುದು. ೧೦-೨೦ ವರ್ಷ ಕ್ರಮವಾಗಿ ವ್ಯಾಸಂಗ ಮಾಡಿದ ಮೇಲೂ, ಇಂಗ್ಲಿಷ್ ಭಾಷೆಯ ಶಬ್ದಾರ್ಥರಹಸ್ಯ, ಉಚ್ಚಾರಣೆ, ನುಡಿಕಟ್ಟಿನ ಜೀವ, ಛಂದಸ್ಸಿನ ಓಟ — ಇವು ಕೇವಲ ಸಂದಿಗ್ಧವಾಗಿರುವುದಕ್ಕಿಂತ, ಎಲ್ಲಿ 'a,' 'the' ಬಳಸಬೇಕೋ, ಎಲ್ಲಿ shall, will, can, should, would, could, may, might, yes, no, ಎಂಬವು ಸರಿಯೋ, ಎಲ್ಲಿ ಯಾವ ಅವ್ಯಯ ನಿಪಾತಾದಿಗಳ (!) ಪ್ರಯೋಗ ಸರಿಯೋ ತಿಳಿಯದೆ ಕಣ್ಣು ಕಣ್ಣು ಬಿಡುತ್ತಿರುವುದಕ್ಕಿಂತ ಈ ಸುಧಾರಣೆಯ ಸಂಪೂರ್ಣ ಪ್ರಯೋಜನವನ್ನು ಪಡೆಯುವುದು ಲೇಸೆನ್ನಿಸುತ್ತದೆ. ವಿಶೇಷವಾಗಿ ಅದನ್ನೇ ವ್ಯಾಸಂಗಮಾಡುವವರಿಗೆ ಆ ಅವಕಾಶ ತೆರೆದೇ ಇರುತ್ತದೆ; ಮುಂದುವರಿಯಬೇಕೆನ್ನುವವರಿಗೆ ಮೆಟ್ಟಲಾಗುತ್ತದೆ. ಆದ್ದರಿಂದ ಖಚಿತವಾಗಿ ಇಷ್ಟಾದರೂ ಹುಡುಗರಿಗೆ ಆ ಭಾಷೆ ವಶವಾಗಿದೆ ಎಂದರೆ ಅದೇ ದೊಡ್ಡ ಪ್ರಯೋಜನವಾದೀತು.

ಇಂಗ್ಲಿಷಿನಂತಹ ಪ್ರಬಲವಾದ ಪಾಶ್ಚಾತ್ಯ ಭಾಷೆಯೊಂದರ ಸಂಪರ್ಕ ಅಗತ್ಯವಾಗಿ ಬೇಕಾಗುವವರೆಗೂ ಹೀಗೆ ಮಾಡಬಹುದು.* ಪ್ರಮಾಣ (standard) ಭಾಷೆಯ ವ್ಯಾಸಂಗಕ್ಕೆ ಇದರಿಂದ ಯಾವ ಅಡ್ಡಿಯೂ ಇರುವುದಿಲ್ಲ. ಎಂದಿನಂತೆ ಅಲ್ಲಿನ ಕಾವ್ಯಗಳಿರುತ್ತವೆ. ನಿಘಂಟು ವ್ಯಾಕರಣ ಶಾಸ್ತ್ರಗ್ರಂಥಗಳಿರುತ್ತವೆ. ಆ ಆ ಪ್ರಪಂಚದ ಚೆಲುವು ಸಂಪುಷ್ಟಿ ಸ್ವರೂಪಲಕ್ಷಣಗಳಿಗೆ ಯಾವ ಅಪಘಾತವೂ ಬರುವುದಿಲ್ಲ. ಅದನ್ನು ವ್ಯಾಸಂಗಮಾಡಬೇಕೆನ್ನುವವರು ಈ 'ಮೂಲಭೂತ' ಭಾಷೆಯ ಪರಿಚಯದಿಂದ ಮುಂದಕ್ಕೆ ಅದನ್ನು ಬೆಳಸಿಕೊಳ್ಳುವ ಅವಕಾಶ ಯಥೇಚ್ಛವಾಗಿ ಇದ್ದೇ ಇರುತ್ತದೆ. ಇಂಗ್ಲಿಷಿನ ಮಹಾ ನಿಘಂಟನ್ನು ರಚಿಸುವುದರಲ್ಲಿ ಸ್ಥಾನಮಾನ, ಕೀರ್ತಿ ಪಡೆದ ಆಗ್ಡೆನ್ ಅಂಥವರೂ, ಹೆಸರಾಂತ ವಿಮರ್ಶಕರು ಹಲವರೂ ಇದರಿಂದ ಇಂಗ್ಲಿಷ್ ಕೆಡುವುದಿಲ್ಲವೆಂದು ಒಪ್ಪಿಕೊಂಡಿದ್ದಾರೆ. ಯಾವ ಬದಲಾವಣೆಗೂ ಎಂದಿಗೂ ಒಪ್ಪದ ಜನರೂ, ಇಂದು ಇಂಗ್ಲಿಷರೇ ಇಂಗ್ಲಿಷೆಂದು ಮೆಚ್ಚುವುದನ್ನು ಇಂಗ್ಲಿಷಲ್ಲವೆಂದು ವಾದಿಸುವ ಅನ್ಯರೂ, ಇತರ ಬಗೆಯ ಭಯ ಸಂಶಯಗಳುಳ್ಳ ಜನರೂ ಇದನ್ನು ಕೆಲವುಕಾಲ ಪ್ರತಿಭಟಿಸಬಹುದೇನೊ? ಆದರೆ ಅಂತಹ ಪ್ರತಿಭಟನೆ ನಿಲ್ಲುವುದಿಲ್ಲವೆಂದು ತೋರುತ್ತದೆ.

ಇಂಗ್ಲಿಷ್ ಪಂಡಿತರು ಅದನ್ನು ಇಂಗ್ಲಿಷೆನ್ನಲು ಒಪ್ಪಿರುವಾಗ, ಅದಕ್ಕಾಗಿ ಕಾರ್ಯರಚನೆ, ಅಭ್ಯಾಸ ಪದ್ಧತಿ ಏರ್ಪಡಿಸಿರುವಾಗ, ಮಹಾಪ್ರಧಾನರಂತಹ

* ಆಯಾ ಪ್ರಾಂತಭಾಷೆಗಳನ್ನು ಬೋಧನೆಯ ಭಾಷೆಯನ್ನಾಗಿ ಮಾಡಿ ಎಲ್ಲ ಪ್ರಾಂತಗಳಲ್ಲಿಯೂ ಈ ಇಂಗ್ಲಿಷನ್ನು ಕಡ್ಡಾಯವಾಗಿ ಓದಬೇಕಾದ ಎರಡನೆಯ ಭಾಷೆಯನ್ನಾಗಿ ಮಾಡಬಹುದು.

ಮೇಧಾವಿ ಇಂಗ್ಲಿಷ್ ಪ್ರಯೋಗಕುಶಲರೂ, ವಾಗ್ಮಿಗಳೂ, ಲೇಖಕರೂ ಅದಕ್ಕೆ ಆಶೀರ್ವಾದ ಮಾಡಿರುವಾಗ, ಇಂದಿನ ಇಂಡಿಯಾಧಿಕಾರಿಗಳಂತಹವರ ಆಧಿಪತ್ಯದಲ್ಲಿ ಕಾರ್ಯಮಂಡಲವೊಂದು ನಿಯುಕ್ತವಾಗಿರುವಾಗ, ಅನೇಕ ರಾಷ್ಟ್ರಗಳವರಿಗೆ ಇಂಥ ಒಂದು ಭಾಷೆಯ ದುಡಿತ, ಬಳಕೆಗಳ ಪ್ರಯೋಜನ ಅಗತ್ಯವಾಗಿರುವಾಗ, ಇದರಿಂದ ಲೋಕಹಿತ ಕಾರ್ಯಗಳ ಸಂಬಂಧದಲ್ಲಿಯೂ ಒಂದು ಪರಸ್ಪರ ಸಹಾನುಭೂತಿ ಉಳ್ಳ ಮಿತ್ರಮಂಡಲವೂ ಶಾಂತಿಸಾಧನವೂ ಏರ್ಪಡಲು ಅವಕಾಶವಿರುವಾಗ, ಬ್ರಿಟಿಷ್, ಅಮೇರಿಕನ್ ಮತ್ತು ಅವರ ಮಿತ್ರರಾಷ್ಟ್ರಗಳ ನೆರಳಲ್ಲಿರಬೇಕಾಗಿರುವ ಜನ ಇಂತಹ ಅವಕಾಶವನ್ನು ಬೇಗನೆ ಪಡೆದುಕೊಳ್ಳಬೇಕೆನ್ನಿಸುತ್ತದೆ. ವ್ಯವಹಾರಕ್ಕೆಷ್ಟು ಬೇಕೊ ಅಷ್ಟು ಸಾಕು, ಇಂಗ್ಲಿಷ್, ನಮ್ಮಂತಹವರಿಗೆ. ಹೆಚ್ಚಿಗೆ ಬೇಕಾದವರು ಓದಲಿ; ಪ್ರಾವೀಣ್ಯ ಪಡೆಯಲಿ. ಇಂಗ್ಲಿಷ್ ಸಾರಸ್ವತ ಭಂಡಾರವೆಲ್ಲ ಅವರಿಗೆ ಯಾವಾಗಲೂ ತೆರೆದೇ ಇರುತ್ತದೆ. ಇಲ್ಲಿನವರ ಬದುಕು ಇಲ್ಲಿನ ಭಾಷೆಗಳ ಇಲ್ಲಿನ ಜೀವನದ ವ್ಯಾಸಂಗಕ್ಕೂ ಈ ನಾಡ ಸೇವೆಗೂ ಮುಡಿಪಾಗಿ ಮೀಸಲಾಗಿರಲಿ. ಯಾವ ಭಾವದಾಸ್ಯಕ್ಕೂ ಯಾರೂ ಈಡಾಗಬೇಕಾಗಿಲ್ಲ. ಇಂಗ್ಲಿಷ್ ಜನ ಆಡಿಕೊಳ್ಳುವುದುಂಟು: ಇನ್ನೊಂದು ರಾಷ್ಟ್ರಕ್ಕೆ ಸೇರಿದವರೆಂದು ತೋರಿಸಿಕೊಳ್ಳುವ ಮೋಹ ತಮಗಿಲ್ಲವೆಂದು. ಅದು ನಮಗೆ ಮಾದರಿಯಾಗಬಾರದೆ? ಬೇರೆ ಭಾಷೆ ಕಲಿತಕಾರಣದಿಂದ ಒಂದು ರಾಷ್ಟ್ರಕ್ಕೆ ಇನ್ನೊಂದು ರಾಷ್ಟ್ರ ಅಡಿಯಾಳಾಗಬೇಕೆಂದಿಲ್ಲ. ಇಂಗ್ಲಿಷ್ ಆಡುವ ಅಮೇರಿಕಾ ದೇಶ ಇಂಗ್ಲಂಡಿಗೆ ಅಧೀನರಾಷ್ಟ್ರವಲ್ಲವಲ್ಲ? ನಾಡಿನ ಅಭಿಪ್ರಾಯಗಳನ್ನು ಅವು ತಿಳಿಯಬೇಕಾದ ಎಲ್ಲರಿಗೂ ಸ್ಪಷ್ಟವಾಗಿ ಖಚಿತವಾಗಿ ಹೇಳಲು ಅಭ್ಯಾಸಮಾಡಿಕೊಳ್ಳಬಹುದು. ಸ್ವಾಧೀನತೆಯ ತತ್ವಕ್ಕೆ ಆತ್ಮಶಕ್ತಿ, ಶ್ರದ್ಧೆ, ಆತ್ಮವಿಶ್ವಾಸ, ಬದುಕಿದರೆ ಧೀರರಾಗಿಯೇ ಬದುಕಿಯೇವು ಎಂಬ ಇಚ್ಛಾಪ್ರವೃತ್ತಿ,—ಇವು ತಳಹದಿಯೇ ಹೊರತು ಭಾಷೆಯಲ್ಲ. ಸದ್ಯಕ್ಕೆ ನಮ್ಮ ದೇಶದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವೆಂಬ ಹೆಸರಿನಲ್ಲಿ ಅಪವ್ಯಯವಾಗುತ್ತಿರುವ ಹಣ, ಕಾಲ, ಗಮನ ಉಪಯುಕ್ತವಾಗುವಂತೆ ಮಾಡುವ ಮತ್ತು ಇಂಗ್ಲಿಷಿನ ಪ್ರಯೋಜನವೇ ಇರುವ ಮಟ್ಟಿಗಾದರೂ ಪರಮಾವಧಿಯಾಗುವ ಯೋಜನೆಯ ಒಂದು ಮಾರ್ಗ ಈ ಮೂಲಕ ತೆರೆಯುವುದು. ತೆರಪಾಗುವ ಕಾಲ ಹಣ ಗಮನಗಳನ್ನು ರಾಷ್ಟ್ರಪ್ರವರ್ಧಕವಾದ ಇತರ ಕಾರ್ಯಗಳ ಕಡೆ ತಿರುಗಿಸಬಹುದಾಗುವುದು. ಈಗಿರುವ ಇಂಗ್ಲಿಷಿಗೆ ಧಕ್ಕೆ ಇಲ್ಲ; ಈಗ ಕಲಿಯಲಾಗದುದನ್ನು ಸುಲಭವಾಗಿ ಕಲಿಯಬಹುದು; ಹೆಚ್ಚು ಜನಕ್ಕೆ ಅಲ್ಪಕಾಲದಲ್ಲಿ ಹೆಚ್ಚು ಖಚಿತವಾದ ನಿಷ್ಕೃಷ್ಟವಾದ ಇಂಗ್ಲಿಷ್ ಪರಿಚಯ ದೊರೆಯುವುದು; ಬೇರೆಯಾಗಿ ರಾಷ್ಟ್ರಸೇವೆ ಮಾಡಲು ದೇಹಶಕ್ತಿ ಮನಶ್ಶಕ್ತಿ ಆತ್ಮಶಕ್ತಿಗಳು ಒದಗುವುವು; ಅಂತರರಾಷ್ಟ್ರೀಯ

ದೃಷ್ಟಿಯಿಂದಲೂ ಪ್ರಪಂಚ ಸಂಪರ್ಕಗಳ ದೃಷ್ಟಿಯಿಂದಲೂ ಪ್ರಯೋಜನ ದೊರಕುವುದು ; ಯಾವ ಅಧೀನತೆಯ ಪೋಷಣೆಗೂ ಇದು ಕಾರಣವಾಗಬೇಕಿಲ್ಲ — ಈ ಮುಂತಾದ ಕಾರಣಗಳಿಂದ ನಮ್ಮ ದೇಶದ ಜನ ಈ ಪ್ರಯತ್ನದ ಕಡೆಗೆ ಆತುರವಾಗಿ ಗಮನ ಕೊಡಬಹುದೆನ್ನಿಸುತ್ತದೆ.

* * *

ಮೂವರು ಮಹನೀಯರು ನಮ್ಮ ಅಭಿನಂದನಕ್ಕೆ ಅರ್ಹರಾಗಿದ್ದಾರೆ. ಬಿಜಾಪುರದಲ್ಲಿ ಸುಪ್ರಸಿದ್ಧರಾದ ಶ್ರೀ|| ರಾವ್ ಬಹದ್ದೂರ್ ಹಳಕಟ್ಟಿಯವರ ೬೨ನೆಯ ವರ್ಷೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು; ಸರಕಾರಿ ಸಾಹುಕಾರಿ ಎರಡು ಬಗೆಯಲ್ಲಿಯೂ ತಮ್ಮ ಜೀವಮಾನವನ್ನು ಜನಸೇವೆಗೆ ವಿನಿಯೋಗಿಸಲು ಮಾಡಿದ ಹಿರಿಯ ಬಾಳು ಈ ಮಾನ್ಯರದು.

**ಶ್ರೀ. ರಾ. ಬ. ಪಿ. ಜಿ. ಹಳಕಟ್ಟಿಯವರು**

ಚರಿತ್ರೆ, ಅನ್ವೇಷಣೆ, ಧರ್ಮ, ಗ್ರಂಥಪ್ರಚಾರ, ಸಹಕಾರ, ವ್ಯಾಪಾರ, ಉದ್ಯೋಗ ಸಾರ್ವಜನಿಕ ಜೀವನ ಈ ಎಲ್ಲಾ ರಂಗಗಳಲ್ಲಿಯೂ ಅತಿಶಯವಾಗಿ ದುಡಿದು ತಮ್ಮ ಕಾಲಕ್ಕೆ ಪ್ರಯೋಜನವೊದಗಿಸಿ ಉಪಕಾರ ಮಾಡಿದ್ದಾರೆ. ಶಿವಶರಣರ ವಚನಗಳನ್ನೂ, ಹರಿಹರರಗಳೆಗಳನ್ನೂ ಪ್ರಕಟಿಸಿ ಕನ್ನಡ ಪ್ರಪಂಚಕ್ಕೆ ಅವರು ಸಲ್ಲಿಸಿರುವ ಸೇವೆ ಅಮೂಲ್ಯವಾದದ್ದು. ಇಂತಹವರ ಸಂಬಂಧದಲ್ಲಿ ನಡಸಿದ ಈ ಉತ್ಸವದಲ್ಲಿ ತನ್ನ ಸಂತೋಷವನ್ನು ಕೂಡಿಸಿ ಅವರ ಆಯುರಾರೋಗ್ಯ ಕಾರ್ಯಶಕ್ತಿಗಳು ಈ ನಾಡುನುಡಿಗಳ ಸೇವೆಗೆ ಬಹುಕಾಲ ಉಳಿದು ನೆರವಾಗಲಿ ಎಂದು ಪ್ರಬುದ್ಧ ಕರ್ಣಾಟಕ ಹಾರೈಸುತ್ತದೆ.

ಬೆಂಗಳೂರಿನ ವರ್ತಕಮಂಡಲಿಯಲ್ಲಿ ಸುಪ್ರಸಿದ್ಧರಾದ ಶ್ರೀ|| ಧರ್ಮಪ್ರಕಾಶ ಎಲ್. ಎಸ್. ವೆಂಕಾಜಿರಾಯರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ರೂ. ೫,೦೦೦ ಗಳ ದಾನಮಾಡಿ ಕನ್ನಡ ವ್ಯಾಸಂಗದಲ್ಲಿ ಆಸ್ಥೆ ಮತ್ತು ಯೋಗ್ಯತೆ ತೋರಿಸುವವಿದ್ಯಾರ್ಥಿಗಳಿಗೆ ಒಂದು ವೇತನವೂ ಒಂದು ಪಾರಿತೋಷಕವೂ ದೊರೆಯುವಂತೆ ಮಾಡಿರುವ ಉಪಕಾರಕ್ಕೆ ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆಯಾದ ಪ್ರಬುದ್ಧ ಕರ್ಣಾಟಕ

**ಧರ್ಮಪ್ರಕಾಶ ಶ್ರೀ. ಎಲ್. ಎಸ್. ವೆಂಕಾಜಿರಾಯರು**

ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತದೆ. ಈಗಾಗಲೇ ಬಹುಜನೋಪಯುಕ್ತವಾದ ಅನೇಕ ಸಮಾಜ ಮತ್ತು ವಿದ್ಯಾಹಿತಕಾರ್ಯಗಳಿಗೆ ಧನದ ನೆರವು ಕೊಟ್ಟಿರುವ ಇವರ ಕೈ ಅಮೃತಹಸ್ತವಾಗಲಿ. ಕನ್ನಡನಾಡಿನಲ್ಲಿರುವ ಸಿರಿವಂತರು ಕನ್ನಡದ ಕಡೆಗೆ ತಮ್ಮ ಔದಾರ್ಯವನ್ನು ಹೀಗೆ ತೋರಿಸುತ್ತಾ ಬಂದರೆ ಕನ್ನಡಕ್ಕೆ ಸಲ್ಲಲಾಗದ

ಸೌಭಾಗ್ಯ ಯಾವುದು ಉಳಿಯುತ್ತದೆ? ಶ್ರೀ|| ವೆಂಕಾಜಿರಾಯರ ದಾಸಕ್ಕಾಗಿ ವಂದನೆಗಳು.

ಶ್ರೀ. ತೀ. ನಂ. ಶ್ರೀಕಂಠಯ್ಯನವರು

ಶ್ರೀ. ತೀ. ನಂ. ಶ್ರೀಕಂಠಯ್ಯನವರು ತಮ್ಮ ಪ್ರೀತಿಯ ಮಗಳ ಜ್ಞಾಪಕಾರ್ಥವಾಗಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿನಿಯರ ಕನ್ನಡ ರಚನಾಶಕ್ತಿಗೆ ಪ್ರೋತ್ಸಾಹಕವಾಗುವಂತೆ ಪ್ರತಿ ವರ್ಷವೂ ಸ್ಪರ್ಧೆಯೊಂದನ್ನು ನಡಸಬೇಕೆಂದು ರೂ. ೨೫೦ ಗಳ ನಿಧಿಯೊಂದನ್ನು ಮೈಸೂರು ಮಹಾರಾಜಾ ಕಾಲೇಜ್ ಕರ್ಣಾಟಕ ಸಂಘಕ್ಕೆ ದಯಮಾಡಿ ಕೊಟ್ಟಿದ್ದಾರೆ. ಪ್ರೌಢವ್ಯಾಸಂಗ ಮಾಡುತ್ತಿರುವ ಹೆಣ್ಣುಮಕ್ಕಳ ಶಕ್ತಿಯನ್ನು ಬೆಳಸುವುದಕ್ಕಾಗಿ ಮಾಡಿದ ಇಂತಹ ಸಹಾಯ ಪರಮ ಪ್ರಯೋಜನಕಾರಿಯಾಗುವುದೆಂಬುದನ್ನು ಬೇರೆಯಾಗಿ ವರ್ಣಿಸಬೇಕಾಗಿಲ್ಲ. ಈ ದಾಸದಿಂದ ತೀ. ನಂ. ಶ್ರೀ. ಅವರು ಮಾರ್ಗದರ್ಶಕರಾಗಿದ್ದಾರೆ. ತಮ್ಮ ಕನ್ನಡ ಪ್ರೀತಿಗೆ ಈ ರೀತಿಯಲ್ಲಿಯೂ ಪ್ರತ್ಯೇಕವಾದ ಒಂದು ಮೂರ್ತರೂಪವನ್ನು ಕೊಟ್ಟಿದ್ದಾರೆ. ಈ ಸಹಾಯಕ್ಕಾಗಿ ಅವರನ್ನು ವಂದಿಸುತ್ತೇವೆ.

# ವಸ್ತುಕೋಶ

ಈಗಿನ ತೆಲುಗು ಸಾಹಿತ್ಯವೆಂದರೆ ಸುಮಾರು ಒಂದು ಶತಮಾನದಿಂದ ಈಚೆಗೆ ಹುಟ್ಟಿದ ಸಾಹಿತ್ಯ. ನಮ್ಮ ದೇಶದಲ್ಲಿರುವ ಮಿಕ್ಕ ಎಲ್ಲಾ ಭಾಷೆಗಳಂತೆಯೇ ತೆಲುಗಿನಲ್ಲೂ ಈಗಿನ ಸಾಹಿತ್ಯಕ್ಕೆ ಪಾಶ್ಚಾತ್ತ್ಯರ—ಮುಖ್ಯವಾಗಿ ಇಂಗ್ಲೀಷರ—ಸಾಹಿತ್ಯವೇ ಬಲುಮಟ್ಟಿಗೆ ಮಾರ್ಗದರ್ಶಕವಾಗಿದೆ. ನಮ್ಮ ದೇಶದ ರಾಜ್ಯ, ನೀತಿ, ಮತ, ಆಚಾರ, ವೇಷ ಮುಂತಾದವುಗಳಲ್ಲಿ ಹೇಗೋ ಹಾಗೆಯೇ ಭಾಷಾಸಾಹಿತ್ಯಗಳಲ್ಲಿಯೂ ಪಾಶ್ಚಾತ್ತ್ಯರ ಪಡಿಯಚ್ಚು ಪ್ರಬಲವಾಗಿ ನಾಲ್ಕು ಕಡೆಯೂ ಒತ್ತುತ್ತಿದೆ. ಪ್ರಭುಗಳ ವರ್ಚಸ್ಸು ಪ್ರಜೆಗಳ ಅಂಗೋಪಾಂಗಗಳ ಪ್ರತಿನಾಡಿಯನ್ನೂ ವೇಧಿಸುವುದು ಆಶ್ಚರ್ಯವೇನಲ್ಲ.

ಇಂದಿನ ತೆಲುಗುಸಾಹಿತ್ಯ[1]

ಈ ಆಂಗ್ಲಸಾಹಿತ್ಯವು ಬರುವವರೆಗೂ ನಮ್ಮನ್ನಾಳುತ್ತಿದ್ದುದು ಆರ್ಯ ಭಾಷೆಯ ಮತ್ತು ಸಾಹಿತ್ಯದ ಸಂಸ್ಕೃತಿ. ಸಾವಿರಾರು ವರ್ಷಗಳ ಕಾಲ ಆಸೇತು ಹಿಮಾಚಲ ಅಕ್ಷರಸ್ಥರಾದವರು ಯಾರೂ ಆ ಸಾಹಿತ್ಯವನ್ನು ಅಷ್ಟೋ ಇಷ್ಟೋ ಅರಿತುಕೊಳ್ಳದೇ ಇರುವುದು ಸಾಧ್ಯವಾಗಿರಲಿಲ್ಲ. ಈಗಿನ ದೇಶಭಾಷೆಗಳಲ್ಲೆಲ್ಲಾ ಹಳೆಯವಾದ ದ್ರಾವಿಡಭಾಷೆಗಳನ್ನು ನೋಡಿದರೂ ಅವುಗಳಿಗೆ ಸಂಸ್ಕೃತ ಪ್ರಾಕೃತ ಸಾಹಿತ್ಯಗಳ ಸಂಬಂಧವಿಲ್ಲದ ಕಾಲ ಎಂದಾದರೂ ಇತ್ತೆಂದು ಊಹಿಸುವುದಕ್ಕೂ ಅವಕಾಶ ಸಾಲದು. ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೊ ಅವುಗಳ ಪ್ರಾಬಲ್ಯ ನಮ್ಮ ದೇಶದ ಮೂಲೆಮೂಲೆಗಳಲ್ಲಿಯೂ ನೆಲಸಿಯೇ ಇದ್ದಿತು.—ಆದರೆ ದೀರ್ಘ ಕಾಲ ಒಂದೇಬಗೆಯ ಪ್ರಭುತ್ವವು ಬೆಳೆಯುವುದು ಪ್ರಜೆಗಳಿಗೂ ಪ್ರಭುಗಳಿಗೂ ಕ್ಷೇಮವಲ್ಲ. ಹಾಗಾದಲ್ಲಿ ಪ್ರಜೆಗಳು ದೃಷ್ಟಿಯ ನೇರವನ್ನೂ, ದೃಷ್ಟಿಯ ದೂರ ಪ್ರಸಾರಶಕ್ತಿಯನ್ನೂ ಕಳೆದುಕೊಳ್ಳುವರು. ಪ್ರಭುಗಳು ಆಜ್ಞೆಮಾಡಿ ಮಾಡಿ, ಶಿಕ್ಷಾಸ್ಮೃತಿಯ ಕೆಲವು ಸೂತ್ರಗಳ ಹೊರತು ಪ್ರಪಂಚಯಾತ್ರೆಗೆ ಮತ್ತೇನೂ ಬೇಕಾಗುವುದಿಲ್ಲವೆಂದು ತಿಳಿದು ಮೊಂಡುಬೀಳುವರು. ಸಂಸ್ಕೃತ ಸಾಹಿತ್ಯಕ್ಕೆ ಇಂಥಾ ಜಡತೆ ಆವೇಶಿಸಿ ಸುಮಾರು ಸಾವಿರ ವರ್ಷಗಳ ಮೇಲಾಯಿತು. ದೇಶಭಾಷೆಗಳಿಗೆ ಮೊದಮೊದಲು ಸ್ವಲ್ಪ ಸ್ವತಂತ್ರವಾದ ನಡೆನುಡಿಗಳಿದ್ದಿದ್ದರೂ ಕ್ರಮವಾಗಿ ಸಂಸ್ಕೃತ ಸರ್ಕಾರದ ಸೂತ್ರಗಳ ಬಿಗಿತದಿಂದ ಸರ್ಕಸ್ಸಿನ ಜಂತುಗಳಂತೆ ಹೇಳಿದಷ್ಟು ಮಾಡುವ

[1] ಆಕಾಶವಾಣಿಯ ಕೃಪೆಯಿಂದ.

ವಿಧೇಯತೆ ಬಲಿಯಿತು. ಸುಮಾರು ಏಳೆಂಟು ಶತವರ್ಷಗಳ ಕಾಲ ತೆಲುಗುಸಾಹಿತ್ಯದ ಸ್ಥಿತಿಗತಿಗಳು ಹೀಗಿದ್ದವು. ಮಹಾ ಪ್ರತಿಭಾವಂತರಿದ್ದರು; ಮಹಾ ಪಂಡಿತರಿದ್ದರು; ಆದರೆ ಅವರ ಉದ್ಯೋಗಗಳೆಲ್ಲಾ ಸೂತ್ರಬಂಧಕ್ಕೆ ಸಿಕ್ಕಿಕೊಂಡಿದ್ದವು. ಅವರು ಮೆರೆದದ್ದೆಲ್ಲಾ ಆ ವಲಯದ ಒಳಗೆಯೇ.

ತೆಲುಗುಭಾಷೆಯ ಈ ಅವಸ್ಥೆಯಲ್ಲಿ ೧೯ನೆಯ ಶತಕದಲ್ಲಿ ಸರ್ಕಾರ ಬದಲಾಯಿಸಿತು. ಪಾಶ್ಚಾತ್ತ್ಯ ಸಾಹಿತ್ಯದ ಹೊಸದಾದ ವಿಚಿತ್ರವಾದ ರೂಪರೇಖೆಗಳು ಮಿಂಚಿನಂತೆ ಹೊಳೆದು ನಿಂತು ಮೋಹಗೊಳಿಸಿದವು. ಆಗ ಪ್ರತಿಭೆಯಲ್ಲಿ ಪಾಂಡಿತ್ಯದಲ್ಲಿ ಕಾರ್ಯಶೂರತೆಯಲ್ಲಿ ಅದ್ವಿತೀಯನೆನ್ನಬಹುದಾದ ಕಂದುಕೂರಿ ವೀರೇಶಲಿಂಗಂ ಪಂತಲು ಆಧುನಿಕ ಸಾಹಿತ್ಯಕ್ಕೆ ಬುನಾದಿಯನ್ನು ಹಾಕಿದನು. ಬುನಾದಿಮಾತ್ರವೇ ಅಲ್ಲ; ದೊಡ್ಡ ಕಟ್ಟಡವನ್ನೇ ಕಟ್ಟಿದನು. ಭಾಷಾರಚನೆಯಲ್ಲಿ ಆತನು ಕೈಹಾಕದ ರೀತಿಯಿಲ್ಲ. ಲಘುಕಾವ್ಯ, ಮಹಾಕಾವ್ಯ, ನಾಟಕ, ಪ್ರಹಸನ, ಕಥೆ, ಕಾದಂಬರಿ, ಪ್ರಬಂಧ, ಮುಂತಾದವುಗಳಲ್ಲಿ ಆ ಕಾಲದಲ್ಲಿ ನಮ್ಮ ದೇಶಕ್ಕೆ ಬಂದಿಳಿದಿದ್ದ ಆಂಗ್ಲ ಸಾಹಿತ್ಯದಲ್ಲಿ ಎಷ್ಟು ಬಗೆಗಳುಂಟೊ ಪ್ರಾಯಶಃ ಅವೆಲ್ಲವನ್ನೂ ಆತನು ತೆಲುಗಿನಲ್ಲಿ ಬಳಸಿಕೊಂಡನು. ಅಲ್ಲದೆ ನಮ್ಮ ದೇಶದ ಪ್ರಾಚೀನ ಸಂಪ್ರದಾಯಗಳನ್ನು ತನಗೆ ತೋರಿದಂತೆ ಕುಚೋದ್ಯಮಾಡಿ, ವಿಮರ್ಶೆಮಾಡಿ, ಹಳಿದು, ಯುವಕರಲ್ಲಿ ಒಂದು ಹೊಸ ಹುರುಪನ್ನುಂಟುಮಾಡಿದನು. ರಸಿಕದೃಷ್ಟಿಯಿಂದ ನೋಡಿದರೆ ಆತನ ಸಾಹಿತ್ಯ ರಚನೆಗಳಲ್ಲಿ ಯಾವದೂ ಉತ್ತಮತರಗತಿಗೆ ಸೇರದಿದ್ದರೂ, ಜನತೆಯಲ್ಲಿ ಒಂದು ವಿಧವಾದ ವಿಪ್ಲವವನ್ನುಂಟುಮಾಡಿ, ಬಾಗಿದ ತಲೆಯನ್ನೆತ್ತಿ ಅವರು ನಾಲ್ಕು ಕಡೆ ನೋಡುವಂತೆ ಪ್ರೇರಿಸಿ ಉಪಕರಿಸಿದವು. ಇದರ ಫಲವಾಗಿ ಆಂಗ್ಲಸಾಹಿತ್ಯವನ್ನು ವ್ಯಾಸಂಗಮಾಡಿದ ತರುಣರಲ್ಲಿ ಹಲವರು,—ಅವರ ಸಹವಾಸದಿಂದ ಇತರರು ಕೆಲವರೂ,—ಭಾಷೆ, ಛಂದಸ್ಸು, ರೂಪ, ಭಾವ ಇವುಗಳಲ್ಲಿ ಪ್ರಾಚೀನ ಸಂಪ್ರದಾಯಗಳನ್ನು ಪ್ರತಿಭಟಿಸಿ ಹೊಸದಾರಿಗಳಲ್ಲಿ ಸಾಹಿತ್ಯಸೃಷ್ಟಿ ಮಾಡಲಾರಂಭಿಸಿದರು.

ಈ ಚಳುವಳಿಯ ಮುಖ್ಯವಾದ ಫಲವೊಂದು: ಅದುವರೆಗೂ ತೆಲುಗು ಸಾಹಿತ್ಯದಲ್ಲಿ ಬಳಸುತ್ತಿದ್ದ ಭಾಷೆ ಹಲವು ಶತಮಾನಗಳ ಹಿಂದೆ ಬರೆದ ವ್ಯಾಕರಣದ ಕಟ್ಟುಗಳನ್ನು ಮೀರಿರಲಿಲ್ಲ. ಇದರಿಂದ ವ್ಯವಹಾರಪ್ರವಾಹದಲ್ಲಿ ಭಾಷೆಯಲ್ಲಾಗುವ ಬದಲಾವಣೆಗಳಲ್ಲಿ ಬಹುಭಾಗ ಗ್ರಂಥಗತವಾಗುವ ಅವಕಾಶವಿಲ್ಲದೆ ನಷ್ಟವಾಯಿತು. ಬರೆಯುವ ಭಾಷೆಗೂ ಮಾತಾಡುವ ಭಾಷೆಗೂ ನಡುವಿನ ಅಂತರವು ದಿನೇದಿನೇ ದೊಡ್ಡದಾಗುತ್ತಿತ್ತು. ಈ ಹೊಸ ಹುರುಪಿನಲ್ಲಿ ಆ ಸೂತ್ರಗಳು ಸಡಿಲವಾಗಿ ಭಾಷೆಯ ವ್ಯಾವಹಾರಿಕ ರೂಪಕ್ಕೆ ಗೌರವವು ಲಭಿಸಿತು. ಆದರೆ ನಿರ್ಬಂಧವೆಷ್ಟು

ಅಸಹ್ಯವೋ ಸ್ವಚ್ಛಂದವೂ ಅಷ್ಟೇ ಅಸಹ್ಯ. ಇದರಿಂದ ಅದುವರೆಗೆ ಗಂಧರ್ವನಗರ ದಲ್ಲಿ ಹಾರಾಡುತ್ತಿದ್ದ ಕವಿಗಳ ಭಾವನಾಬಲವೂ, ಸಂಕುಚಿತಸ್ಥಿತಿಯಲ್ಲಿದ್ದ ವಿದ್ವಾಂಸರ ತರ್ಕಶಕ್ತಿಯೂ ಸಾಮಾನ್ಯ ಜೀವನಮಟ್ಟಕ್ಕಿಳಿದು, ವಿಶಾಲ ಪ್ರಪಂಚವನ್ನು ಹೊಕ್ಕು, ನೋಡುವ ಅವಕಾಶಲಭಿಸಿದರೂ, ನಿಯಮವೇ ಇಲ್ಲದ ಭಾಷೆಯ ಪ್ರಚಾರ ವನ್ನು ಸಹಿಸಿಕೊಂಡಿರುವುದು ಸಾಧ್ಯವಲ್ಲ. ಆದ್ದರಿಂದ ಪ್ರಾಚೀನ ಸಂಪ್ರದಾಯದಲ್ಲಿ ಶ್ರದ್ಧಾಭಕ್ತಿಯುಳ್ಳ ಕೆಲವರು ಈ ಗ್ರಾಮ್ಯಭಾಷಾಪ್ರವಾಹವನ್ನು ತಡೆಗಟ್ಟುವ ಪ್ರಬಲ ಪ್ರಯತ್ನಮಾಡಿದರು. ಅದರ ಫಲವೇ ಆಂಧ್ರ ಸಾಹಿತ್ಯ ಪರಿಷತ್ತು. ಈ ಪರಿಷತ್ತಿನಲ್ಲಿ ತಮಗೆ ಮನ್ನಣೆ ದೊರೆಯದೆ ಹೊಸ ದಾರಿಯ ನಾಯಕರು 'ನವ್ಯಸಾಹಿತ್ಯ ಪರಿಷತ್ತು' ಒಂದನ್ನು ಸ್ಥಾಪಿಸಿಕೊಂಡರು. ಈ ಎರಡು ಸಂಸ್ಥೆಗಳು ಇನ್ನೂ ಬೇರೆಯಾಗಿಯೇ ಇವೆ. ಇವೆರಡನ್ನೂ ಒಂದುಮಾಡುವ ಪ್ರಯತ್ನವೂ ಶ್ರದ್ಧೆಯಿಂದ ನಡೆದಂತೆ ತೋರು ವುದಿಲ್ಲ. ಈ ಅಂತಃಕಲಹದಲ್ಲಿ ವ್ಯಾವಹಾರಿಕ ಭಾಷೆಗೆ ಭದ್ರವಾದ ಸ್ಥಾನವೇನೊ ಲಭಿಸಿತು. ಆದರೆ ಅದಿನ್ನೂ ಸ್ವಚ್ಛಂದ ಮಾರ್ಗದಲ್ಲಿಯೇ ನಡೆಯುತ್ತಿದೆ. ಸಾಮಾನ್ಯ ವಾಗಿ ನಾಗರಕತೆಗೆ ಬೇಕಾದ ನಿಯಮಗಳೂ ಅದಕ್ಕಿನ್ನೂ ಏರ್ಪಟ್ಟಿಲ್ಲ.

ಈ ನವ್ಯಸಾಹಿತ್ಯದಲ್ಲಿ ಪ್ರತಿಭಾವಂತರಾದ ಹಲವರು ಕವಿಗಳಾಗಿ ಕಥಕರಾಗಿ ವಿಮರ್ಶಕರಾಗಿ ಬಹುಮುಖವಾಗಿ ಕೆಲಸಮಾಡುತ್ತಿದ್ದಾರೆ. ಈ ಸಾಹಿತ್ಯದ ಪ್ರಧಾನ ಸ್ವರವೇನೆಂದರೆ ಸ್ವತಂತ್ರದಾಶೆ. ನಮಗೆ ತೋರಿದ ವಿಷಯದ ಮೇಲೆ ತೋರಿದ ಭಾವಗಳನ್ನು ನಿರ್ಭಯವಾಗಿ ಬರೆದು ಪ್ರಚಾರಮಾಡಬೇಕು, ತೋರಿದಹಾಗೆ ನಡೆಯ ಬೇಕು, ಎಂಬ ಆಧ್ಯಾತ್ಮಿಕ ಸ್ವಾತಂತ್ರ್ಯದ ತೃಷ್ಣೆ ಒಂದುಕಡೆ; ಮತ್ತೊಂದು ಕಡೆ, ನಾವು ನಮಗಾದರ್ಶಭೂತರಾದ ಪಾಶ್ಚಾತ್ತ್ಯರಂತೆ ಸ್ವತಂತ್ರರಾಗಿ, ನಮ್ಮ ದೇಶವೂ ಅವರ ದೇಶದಂತೆ ಸಮೃದ್ಧಿಯಿಂದ ವಿಜ್ಞಾನದಿಂದ ನಲಿದಾಡಬೇಕೆಂಬ ಆಧಿಭೌತಿಕ ಸ್ವಾತಂತ್ರ್ಯದ ಹಂಬಲ. ಈ ಎರಡೂ ಆಂಗ್ಲಸಾಹಿತ್ಯವನ್ನು ವ್ಯಾಸಂಗ ಮಾಡಿದ ಫಲವೇ. ಈ ಭಾವಗಳಿಂದ ತುಂಬಿದ ಸಾಹಿತ್ಯ ಧಾರಾಳವಾಗಿ ಒಂದು ಕಡೆ ಹರಿಯುತ್ತಿದೆ. ಈ ದೃಷ್ಟಿ ಕೆಲಸಮಯಗಳಲ್ಲಿ ಪಾಶ್ಚಾತ್ತ್ಯರದೇ ಸರ್ವೋತ್ತಮ ಸಂಪ್ರದಾಯವೆಂದು ಮುಕ್ತಕಂಠವಾಗಿ ಹೊಗಳಿ, ಪ್ರಾಚೀನ ಭಾರತೀಯ ಸಂಪ್ರ ದಾಯಗಳನ್ನು ಪೂರ್ತಿಯಾಗಿ ಅಲ್ಲಗಳೆಯುವ ರೂಪದಲ್ಲಿ ಹೊರಡುವುದು. ಮತ್ತೆ ಕೆಲಸಮಯಗಳಲ್ಲಿ ಇದಕ್ಕೆ ವಿಪರೀತವಾಗಿ ಅವರನ್ನು ತೆಗಳಿ ಇವರನ್ನು ಹೊಗಳಿ ಕೃತಕೃತ್ಯವಾಗುವುದು.

ಆದರೆ ಈ ಒಂದು ಶತಮಾನದ ಅನುಭವದಿಂದ ಮೇಲ್ಕಂಡ ಸ್ವಾತಂತ್ರ್ಯ ಕಾಂಕ್ಷೆಗಳು ಸಫಲವಾಗುವುದು ಬಿಟ್ಟಿಯಲ್ಲವೆಂಬ ತತ್ತ್ವವನ್ನು ದೇಶವು ಮನಗಂಡಿದೆ.

ಒಳಗಿನ ಮತ್ತು ಹೊರಗಿನ ವಿಘ್ನಗಳು ಎಷ್ಟೊ ಬಂದೊದಗಿ ನಿರಾಶೆಯನ್ನು ತುಂಬುತ್ತಿವೆ. ಆಧ್ಯಾತ್ಮಿಕವಾದ ಆಸೆ—ಮುಖ್ಯವಾಗಿ ಅರ್ಥಕಾಮಗಳ ವಿಷಯದಲ್ಲಿ—ಲಂಗು ಲಗಾಮಿಲ್ಲದ ಸ್ವಚ್ಛಂದವೃತ್ತಿಗೆ ದಾರಿಮಾಡುತ್ತಿರುವುದರಿಂದ ಸಹಜವಾಗಿ ನೀತಿಮಂತರ ಪ್ರಬಲ ವಿರೋಧಕ್ಕೀಡಾಗಿದೆ. ಇನ್ನು ಸ್ವಾತಂತ್ರ್ಯಕ್ಕೆ, ಸಮೃದ್ಧಿಗೆ ಒಳಗಿನಿಂದ ಹೊರಗಿನಿಂದ ಬರುತ್ತಿರುವ ಪ್ರಬಲ ವಿಘಾತಗಳಿಗೆ ಮಿತಿಯಿಲ್ಲ. ಹೀಗಾಗಿ ಈಚೆಗೆ ಸೃಷ್ಟಿಯಾಗುತ್ತಿರುವ ತೆಲುಗು ಸಾಹಿತ್ಯದಲ್ಲಿ ಹಲವುಕಡೆ ಈ ನಿರಾಶೆಯ ಬೇಜಾರು ಬಹಳವಾಗಿ ಸ್ಫುರಿಸುತ್ತಿದೆ. ಇದು ಸಹಜವಾಗಿ ಕೆಲವು ಕವಿಗಳಲ್ಲಿ ಆಕ್ರೋಶಕ್ಕೆ, ಸ್ವಾರ್ಥಪರಾರ್ಥಗಳೆರಡನ್ನೂ ಗಮನಿಸಲಾರದ ಕ್ರೂರಚಿತ್ತವೃತ್ತಿಗೆ ಎಡೆಮಾಡಿದೆ. ಇವರದು ವಿನಾಶವಾದ: 'ಈಗ ನೆಲ ಕೆಟ್ಟು ಹಾಳಾಗಿದೆ; ಮುಳ್ಳು ಕಲ್ಲು ತುಂಬಿದೆ; ಮೊದಲಿದನ್ನೆಲ್ಲಾ ಕಡಿದು, ಅಗೆದು, ಸುಟ್ಟು ಬೂದಿಮಾಡಬೇಕು; ಆ ಮೇಲೆ ತೋಟ.' 'ನಿಮ್ಮ ತೋಟದ ಸ್ವರೂಪವೇನಯ್ಯಾ?' ಎಂದು ಕೇಳಿದರೆ 'ಇದಾದ ಮೇಲೆ ಅದರ ಯೋಚನೆ. ಈಗೇಕೆ?' ಎನ್ನುವರು. ಇವರ ರಚನೆಗಳಲ್ಲಿ ರಕ್ತ, ಮಾಂಸ, ಬೆಂಕಿ, ಸಿಡಿಲು, ಬಿರುಗಾಳಿ, ಪ್ರಳಯ, ಪರಶುರಾಮನ ಗಂಡುಗೊಡಲಿ, ಪರಮಶಿವನ ಫಾಲನೇತ್ರ ಇಂಥಾ ದ್ರವ್ಯಗಳು ತುಂಬಿರುತ್ತವೆ.

ಇದು ಭಾವಸಾಹಿತ್ಯ. ಇನ್ನು ಶಾಸ್ತ್ರಸಾಹಿತ್ಯ ತೆಲುಗಿನಲ್ಲಿ ಬಹಳ ಸ್ವಲ್ಪ. ಅದರದು ಆಮೆಯ ನಡಿಗೆ. ಎಲ್ಲಾ ಶಾಸ್ತ್ರವ್ಯಾಸಂಗವೂ ರಾಜಭಾಷೆಯಲ್ಲಿಯೇ ನಡೆಯುತ್ತಿರುವಾಗ ಪ್ರಜಾಭಾಷೆಯಲ್ಲಿ ಶಾಸ್ತ್ರಗ್ರಂಥಗಳನ್ನು ಯಾವ ದೇವರ ಪ್ರೀತಿಗಾಗಿ ಬರೆಯಬೇಕು? ವಿದ್ಯಾಶಾಖೆಯಲ್ಲಿ ದೇಶಭಾಷೆಗೆ ಪ್ರಾಶಸ್ತ್ಯವನ್ನು ಸಂಪಾದಿಸುವ ಪ್ರಯತ್ನವೇನೋ ಒಂದುಕಡೆ ಬೆಳೆಯುತ್ತಲೇ ಇದೆ. ಮತ್ತೊಂದುಕಡೆ ಮುರಿದು ಬೀಳುತ್ತಲೂ ಇದೆ. ಇದರ ಸಲುವಾಗಿಯೇ ಆಂಧ್ರ ರಾಷ್ಟ್ರವನ್ನು ಏರ್ಪಡಿಸಬೇಕೆಂಬ ಚಳುವಳಿಯನ್ನು ಹೂಡಿಯಾಯ್ತು. ಅದನ್ನು ಹೂಳಿಯೂ ಆಯಿತು. ಅಲ್ಲಿ ಇಲ್ಲಿ, ಆಗ ಈಗ ಒಬ್ಬಿಬ್ಬರು ಬರಿಯ ಚಾಪಲ್ಯದಿಂದ ಶಾಸ್ತ್ರಗ್ರಂಥಗಳನ್ನು ಬರೆಯುವವರಿಲ್ಲದೆಯಿಲ್ಲ. ಆದರೆ ಶಾಸ್ತ್ರದ ಬೆಳವಣಿಗೆಗೆ ಮುಖ್ಯವಾಗಿ ಬೇಕಾದುದು ಶೋಧನೆ. ಅದಕ್ಕವಕಾಶವೂ ಪ್ರೋತ್ಸಾಹವೂ ಸ್ವಲ್ಪವಾದ ದೇಶದಲ್ಲಿ ಹುಟ್ಟುವ ಶಾಸ್ತ್ರಗ್ರಂಥಗಳು ಬರಿಯ ಭಾಷಾಂತರೀಕರಣ ಜಾತಿಗೆ ಮಾತ್ರ ಸೇರಬಲ್ಲವು. ಅವುಗಳಿಗೆ ಪ್ರಶಸ್ತಿಯೂ ಪ್ರಾಮಾಣ್ಯವೂ ಕಡಮೆ.

ಭರತಖಂಡದ ಎಲ್ಲಾ ದೇಶಭಾಷೆಗಳೂ ಹೆಚ್ಚು ಕಡಮೆ ಈಗ ಇದೇ ಅವಸ್ಥೆಯಲ್ಲಿರಬೇಕು. ನನಗೆ ತಿಳಿದಮಟ್ಟಿಗೆ ಕನ್ನಡ ತಮಿಳು ಸಾಹಿತ್ಯಗಳು ಹೀಗೆಯೇ ಇವೆ. ಇದು ಸಾಮಾನ್ಯ ನ್ಯಾಯ. ವಿಶೇಷಗಳ ಮಾತು ಈಗ ಬೇಕಿಲ್ಲ. ಆದರೆ ಆಂಧ್ರರಲ್ಲಿ

ಸಹಜವಾಗಿ ಉದ್ರೇಕವು ಹೆಚ್ಚಾದುದರಿಂದ ನನ್ನ ದೃಷ್ಟಿಗೆ ಅವರ ಸಾಹಿತ್ಯದಲ್ಲಿ ಈ ಅಲ್ಲ ಕಲ್ಲೋಲವು ಹೆಚ್ಚಾಗಿ ಕಾಣುವುದು. ಅವರ ಭಾವಾನುಭವವು ತೀವ್ರವಾದದ್ದು. ನುಗ್ಗುವುದು ಅವರ ಮೊದಲನೆಯ ಚಿತ್ತವೃತ್ತಿ. ಇಂಗ್ಲೀಷು ಸಾಹಿತ್ಯವು ಸುಮ್ಮನೆ ಅದನ್ನು ಕೆರಳಿಸಿತೇಹೊರತು ದಿಗ್ದರ್ಶಕವಾಗಲಿಲ್ಲ. ಹೇತುವಾದಬುದ್ಧಿ ಇದರಿಂದ ಬೆಳೆಯಿತು. ಆದರೆ ಅದನ್ನು ಅಡಕವಾಗಿಟ್ಟುಕೊಂಡು ನಡೆಯಿಸಬಲ್ಲ ಶ್ರದ್ಧಾಭಕ್ತಿಗಳು ನಷ್ಟವಾದವು. ಶ್ರದ್ಧಾಭಕ್ತಿಗಳೆಂದರೆ 'ಕುರುಡುನಂಬಿಕೆ' ಎಂದು ಹೀಯಾಳಿಸ ಬಹುದು. ಆದರೆ ಕಣ್ಣಿನ ಕೆಲಸಗಳಲ್ಲಿ ನೋಟವೂ ಕುರುಡೂ ಎರಡೂ ಸಮಾನ ವಾದವು. ಬಿಟ್ಟು ನಾಲ್ಕೂಕಡೆ ನೋಡುವ ಕಣ್ಣು ಸ್ವಲ್ಪ ಕಾಲವಾದರೂ ಮುಚ್ಚಿ ನಿದ್ದೆಮಾಡದಿದ್ದರೆ ಜೀವಯಾತ್ರೆಯೇ ನಡೆಯುವುದಿಲ್ಲ. ಹಾಗೆಯೇ ಹೇತುವಾದವೂ ಶ್ರದ್ಧಾಭಕ್ತಿಗಳೂ ಪರಸ್ಪರ ಸಹಾಯಕ್ಕೆ—ವಿಶ್ರಾಂತಿಗೆ—ಬಾರದಿದ್ದರೆ ಸಮಾಜದಲ್ಲಿ ನೀತಿ, ನ್ಯಾಯ, ಪ್ರೇಮ, ಯಾವುದೂ ನಿಲ್ಲುವುದಿಲ್ಲ. ಶಾಂತಿಗೆ ನೆಲೆ ಸಿಗುವುದಿಲ್ಲ. ಅದರ ಸಾಹಿತ್ಯವೂ ಬರಿಯ ಹುಚ್ಚುಹೊಳೆಯಾಗುವುದು, ಬಲವಿರಬಹುದು. ಬಾಳಿಗೆ ಮಾರ್ಗವಿರುವುದಿಲ್ಲ.

ಆಂಧ್ರಸಾಹಿತ್ಯದಲ್ಲಿ ಈ ಅಪಾಯದ ಸೂಚನೆಗಳು ಈಗ ತೀವ್ರವಾಗಿಯೇ ಕಾಣುವುವು. ಆದರೆ ಆಂಧ್ರಸಮಸ್ಯೆಯೆಂದರೆ ಭಾರತಸಮಸ್ಯೆ ; ಇದರ ಸಾಹಿತ್ಯವೂ ಅದರ ಸಾಹಿತ್ಯದ ಒಂದಂಗವಿಷ್ಟೆ. ಅದಕ್ಕೆ ಚಿಕಿತ್ಸೆ ನಡೆದಾಗ ಇದು ತಾನಾಗಿಯೇ ಸರಿಯಾಗುವುದು.

ರಾಳ್ಲಪಲ್ಲಿ ಅನಂತಕೃಷ್ಣಶರ್ಮ.

***

**ಶಾಂತಿವಾದ**

ಶಾಂತಿವಾದವನ್ನು ಐದು ರೀತಿ ಸ್ಥಾಪಿಸಬಯಸುವುದುಂಟು. (೧) ಮತಧರ್ಮದ ಆಧಾರದ ಮೇಲೆ ಇದಕ್ಕೆ ಹೆಸರನೆರವು ಸಿಕ್ಕುತ್ತದೆ. ಯುದ್ಧ ವಿನಾಶಕಾರಿ; ಆದ್ದರಿಂದ ಅದನ್ನು ದೂರಮಾಡಬೇಕು. ಮಾನವವರ್ಗವನ್ನು ಪ್ರೀತಿಸಬೇಕಲ್ಲದೆ ಪ್ರಪಂಚಕ್ಕೆ ಅಹಿತವಾದ ಯಾವುದನ್ನೂ ಮಾಡಬಾರದು ಎಂದು ಮತಗ್ರಂಥಗಳು ತಿಳಿಸುತ್ತವೆ. ಆದರೆ ಅಲ್ಲಿನ ವಾಕ್ಯಗಳಲ್ಲಿ ಶಾಂತಿ ವಾದಕ್ಕೆ ಎಷ್ಟು ಬೆಂಬಲ ದೊರಕುವುದೋ ಅಷ್ಟೇ ಬೆಂಬಲ ಯುದ್ಧ ಅವಶ್ಯವೆಂಬುದಕ್ಕೂ ದೊರೆಯುವುದು. ಈ ವಾದ ಶಾಂತಿವಾದಿಯ ಮತಗ್ರಂಥಗಳಲ್ಲಿನ ದೃಢ ನಂಬಿಕೆಯಿಂದ ಹುಟ್ಟಿದ್ದೇ ಹೊರತು ಸ್ವತಂತ್ರ ವಿಚಾರಬಲದಿಂದ ಆದುದಲ್ಲ. ಈ ಶಾಂತಿ ವಾದಿಗಳು ತಮ್ಮ ವಾದಕ್ಕೆ ವಿರೋಧವನ್ನು ಸಹಿಸುವವರಲ್ಲ. ಅವರು ಯಾವ ಹೊಸಪ್ರೇರಣೆಗಳಿಗೂ ಒಳಗಾಗದವರು.

(೨) **ಮಾನವ ಸೌಜನ್ಯನಿರಸನಿಗಳ ವಾದ** — (Cynics) ಇವರು ಯುದ್ಧದಿಂದಾಗುವ ಅನರ್ಥಗಳನ್ನೆಲ್ಲಾ ಪಟ್ಟಿಮಾಡಿದ್ದಾರೆ. ಯುದ್ಧ ಮನುಷ್ಯನಲ್ಲಿನ ವೈರ ಮತ್ತು ಕೊಲೆಯ ಪ್ರವೃತ್ತಿಗಳನ್ನು ಉಪೋದ್ಬಲಗೊಳಿಸುವುದು; ಯುದ್ಧವು ಸಂಕುಚಿತರಾಷ್ಟ್ರೀಯತೆ ಮತ್ತು ಸಾಮ್ರಾಜ್ಯತ್ವಕ್ಕಾಗಿ ಉಂಟಾಗುವುದು; ಉನ್ನತಿ ಪಡೆಯಬಹುದಾದ ಅನೇಕ ಮನುಷ್ಯರು ಯುದ್ಧದಲ್ಲಿ ಕೊಲೆಯಾಗುವರು; ಕೆಲವರು ಅಂತಹ ದಾರುಣ ಕಾಲದಲ್ಲಿಯೂ ಯಥೇಚ್ಛವಾಗಿ ಲಾಭ ಪಡೆದು ಭೋಗಪಡುವರು — ಇತ್ಯಾದಿ. ಇದೆಲ್ಲ ನಿಜ. ಆದರೂ ಯುದ್ಧ ಮನುಷ್ಯನಲ್ಲಿ ಸಹಕಾರ ಮತ್ತು ಆತ್ಮತ್ಯಾಗ, ಉದ್ಯೋಗಶೀಲತೆ, ಧೈರ್ಯ — ಈ ಕೆಲವು ಉತ್ತಮ ಪ್ರವೃತ್ತಿಗಳನ್ನೂ ಬೆಳಸುವುದು. ಅಂತರರಾಷ್ಟ್ರೀಯ ಕಾಯಿದೆ ಬೆಳೆಯುವುದಕ್ಕೂ ಇಡಿಯ ಪ್ರಪಂಚಕ್ಕೆ ಒಂದು ನ್ಯಾಯಸ್ಥಾನವನ್ನೂ ಬ್ಯಾಂಕನ್ನೂ ಸ್ಥಾಪಿಸುವುದಕ್ಕೂ ಸಹಾಯವಾಗುವುದು. ಲೋಕಕಲ್ಯಾಣಕರವಾದ ಮಹಾ ಪ್ರಯೋಜನಗಳಿಗಾಗಿ ಒಂದು ಯುದ್ಧ ನಡೆಯಬಹುದು ಎಂಬುದನ್ನು ಈ ವಾದದವರು ಮರೆಯುತ್ತಾರೆ.

(೩) **(Sentimental) ಭಾವಮಯ ಶಾಂತಿವಾದ** — ಎಲ್ಲ ಮನುಷ್ಯ ಜೀವವೂ ಅಮೂಲ್ಯವಾದ್ದು; ಮನುಷ್ಯಜೀವವನ್ನು ನಾಶಮಾಡಬಾರದು ಮಾತ್ರವಲ್ಲದೆ ಅದಕ್ಕೆ ನೆರವಾಗಬೇಕು; ಅದನ್ನು ಪ್ರೀತಿಸಬೇಕು ಎಂಬುದು ಈ ವಾದದ ಮುಖ್ಯತತ್ತ್ವ. ಈ ತತ್ತ್ವದ ಅನುಮೋದಕರಿಗೆ ಜಾತಿ ಮತ ವರ್ಣಗಳ ಭೇದವಿಲ್ಲ. ಮನುಷ್ಯನ ಮಾನವೀಯತೆಯ ಕಡೆಗೆ ಮಾತ್ರ ಇವರ ಲಕ್ಷ್ಯ. ಈ ವಾದ ಒಪ್ಪತಕ್ಕದ್ದಾದರೂ ಈ ಪಕ್ಷದವರನ್ನು ಉದ್ಧತರೆಂದು ಹೇಳಬೇಕಾಗುವುದು. ಮನುಷ್ಯವರ್ಗವನ್ನೆಲ್ಲ ಪ್ರೀತಿಸುವುದು ಭಗವಂತನ ಕರ್ತವ್ಯ. ಕೆಲವರನ್ನು ಮಾತ್ರ ಪ್ರೀತಿಸಿ ಮಾನವೀಯತೆಯನ್ನು ತೋರಿಸಿದರೆ ಮಾತ್ರ ಸಾಕಾಗಿದೆ, ಮನುಷ್ಯನು. ಈ ಪಂಥದವರು ಕೇವಲ ಅಪ್ರಾಪಂಚಿಕರು. ಇವರು ಮನುಷ್ಯರ ಸಹಜಸ್ವಭಾವವನ್ನೂ ಅವರ ಸದ್ಯಃಸ್ಥಿತಿಯನ್ನೂ ಉಪೇಕ್ಷಿಸಿ ಅವರಲ್ಲಿರಬೇಕಾದ ಆಧ್ಯಾತ್ಮಿಕ ಗುಣಗಳನ್ನು ಮಾತ್ರ ಒತ್ತಿ ಹೇಳುವರು. ಈ ವಾದವು ಸದ್ಭಾವವನ್ನು ಒತ್ತಿಹೇಳುತ್ತದೆಯೇ ಹೊರತು ಸದ್ಬುದ್ಧಿಯನ್ನಲ್ಲ.

(೪) **ರಾಜಕೀಯ ಶಾಂತಿವಾದ** — ಇದರ ದೃಷ್ಟಿ ಪ್ರಾಪಂಚಿಕ. ಇದನ್ನು ಅನೇಕರು ಅನುಮೋದಿಸುವರು. ರಾಜಕೀಯ ಧ್ಯೇಯಗಳನ್ನು ಯುದ್ಧಕ್ಕಿಂತಲೂ ಮೇಲಾಗಿ ಅವಿರೋಧದಿಂದ ಸುಲಭವಾಗಿ ಸಾಧಿಸಬಹುದೆಂಬುದು ಈ ಮತ. ಈ ವಾದದಲ್ಲಿ ವಿವೇಕವಿದೆ. ಪ್ರತಿಭಟನೆ ಹೆಚ್ಚಿದಂತೆಲ್ಲ ವಿಜಯಿಯ ವಿನಾಶಕ ಬುದ್ಧಿ ಹೆಚ್ಚುತ್ತದೆ. ಅವಿರೋಧದಿಂದ ಜೀವನಾಶವು ತೀರ ಕಡಮೆಯಾಗಿ ವಿಜಯಿಯ

ಮನಸ್ಸೇ ಬದಲಾಯಿಸಬಹುದು. ವಿಜಯಿ ವಿವೇಕಿಯೆಂದೂ ಉದಾತ್ತಧ್ಯೇಯದಿಂದ ಅವನ ಮನಸ್ಸು ಕರಗುವುದೆಂದೂ ಈ ವಾದ ನಿರೀಕ್ಷಿಸುತ್ತದೆ. ಆದರೆ ದಾಸ್ಯಕ್ಕೂ ಸ್ವಾತಂತ್ರ್ಯಕ್ಕೂ ವ್ಯತ್ಯಾಸವನ್ನು ಗಮನಿಸದವರಿಗೆ ಅಥವಾ ಯಾವುದೂ ಭದ್ರ ಪಡಿಸಲು ಯೋಗ್ಯವಾದುದಲ್ಲವೆಂದು ಭಾವಿಸುವವರಿಗೆ ಮಾತ್ರ ಈ ವಾದ ಸಾಧ್ಯ. ಇದು ರಾಜಕೀಯದಲ್ಲಿ ದಾಸ್ಯಸ್ಥಿತಿಯಲ್ಲಿರುವವರ ಲಕ್ಷಣ. ಯುದ್ಧ ಮತ್ತೊಬ್ಬರಿಂದ ಮೊದಲಾಗುವುದೆಂಬುದು ಈ ಮತದವರ ಮೊದಲ ಊಹೆ. ಯಾರಿಗೆ ಯಾವ ಸ್ವತ್ತೂ ಇಲ್ಲವೋ ಅಥವಾ ಯಾರಿಗೆ ಯಾವ 'ಸ್ವಂತದ, ಲೋಕದ ಅಥವಾ ಧರ್ಮದ' ಜವಾಬ್ದಾರಿ ಇಲ್ಲವೋ ಅವರು ಮಾತ್ರ ಎಲ್ಲಕ್ಕೂ ಅವಿರೋಧಕರಾಗಿರಬಹುದು, ಅಜಾತಶತ್ರುಗಳಾಗಿರಬಹುದು.

ಈ ಮೇಲಿನ ಯಾವ ಒಂದು ವಾದವೂ ದೃಷ್ಟಿಯೂ ಪರಿಪೂರ್ಣವಾದ್ದಲ್ಲ; ನಿರ್ವಿವಾದವಾದ್ದಲ್ಲ. ಮನುಷ್ಯವರ್ಗದಲ್ಲಿ ಸಾಮಾನ್ಯವಾಗಿ ಎರಡು ಪ್ರಕಟಸ್ವಭಾವಗಳುಂಟು. ಒಂದು ವಾಸ್ತವಿಕವಾದ್ದು, ಮತ್ತೊಂದು ವಿಚಾರಮಯವಾದ್ದು. ಪ್ರಪಂಚದ ನಡವಳಿಕೆಗೆ ಎರಡೂ ಅವಶ್ಯವೇ. ಕೇವಲ ವಾಸ್ತವಿಕ ವೃತ್ತಿಗಳನ್ನೇ ಅವಲಂಬಿಸಿರುವ ವೈದ್ಯರು, ವಾಸ್ತುಶಿಲ್ಪಿಗಳು, ರಾಜ್ಯತಂತ್ರಜ್ಞರು, ಕೂಲಿಕಾರರು ಇವರಿಂದ ಮಾತ್ರವೇ ಪ್ರಪಂಚ ನಡೆಯದು; ಕೇವಲ ಇಂಥವರಿರುವ ಪ್ರಪಂಚವು ಕಾಲ್ಪನಿಕವಾಗುವುದು. ಹಾಗೆಯೇ ಕಲೆಗಾರರು, ಶುದ್ಧವಿಜ್ಞಾನಿಗಳು, ವೇದಾಂತಿಗಳು — ಇವರಿಂದ ಕೂಡಿದ ಪ್ರಪಂಚ ಉತ್ತಮವೇ ಆಗಿರಬಹುದು, ಆದರೆ ಪೂರ್ಣ ನಾಗರಿಕವಾಗಿರಲಾರದು. ಈ ಎರಡು ವರ್ಗಗಳವರ ಯೋಜನೆ ಸಹಕಾರಗಳಿಂದ ಉಂಟಾಗಬಹುದಾದ ನೀತಿಯುತವಾದ ಶಾಂತತೆಯೇ ಯುಕ್ತವಾದುದು.

PAUL WEISS : *Philosophical Review*, LI. No. 5—ಶೇ.

***

## ಕಂಬನಿ ಕಾಣಿಕೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಮದರಾಸ್ ಸರಕಾರದ ಕನ್ನಡ ಟ್ರಾನ್ಸ್‌ಲೇಟರ್ ಅಧಿಕಾರಮಾಡಿ ಕನ್ನಡನಾಡಿನಲ್ಲೆಲ್ಲ ತಮ್ಮ ಪ್ರಭಾವವನ್ನು ಬೀರಿದ ಶ್ರೀ ಬೆನಗಲ್ ರಾಮರಾಯರು ಸುಪ್ರಸಿದ್ಧರು. ಕುಂದಮಾಲಾ, ರಮಾಮಾಧವ ಮುಂತಾದ ಗ್ರಂಥಗಳನ್ನು ಬರೆದರು; ಕನ್ನಡನಾಡ ಗೀತೆಗಳನ್ನು ಕಟ್ಟಿ ಹಾಡಿಸಿದರು. ಹಲವು ಬಗೆಯ ಬರಹಗಾರರಿಗೆ ಉತ್ತೇಜನಕೊಟ್ಟು ಗ್ರಂಥಸಂಪತ್ತಿಯನ್ನು ಹೆಚ್ಚಿಸಿದರು. ಈ ಶತ

ಬೆನಗಲ್ ರಾಮರಾಯರು

ಮಾನದ ಮೊದಮೊದಲಲ್ಲೇ ಸುವಾಸಿನೀ ಪತ್ರಿಕೆಯ ಮಾನ್ಯ ಸಂಪಾದಕರಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸಕಾಲದ ಧ್ವನಿಯಾಗಿ ಸಾಹಿತ್ಯ ವಿಮರ್ಶೆಗೆ ಒಂದು ವಿಶೇಷ ಸೇವೆ ಸಲ್ಲಿಸಿದರು. ಕನ್ನಡ ಬರಹಗಾರರಿಗೆ ತಮ್ಮ ಮಾತು ನಡೆವಲ್ಲೆಲ್ಲ ಪ್ರೋತ್ಸಾಹ ಸಹಾಯ ದೊರಕಿಸಿದರು. ಪಂಜೆ ಮಂಗೇಶರಾಯರು, ಎಂ. ಎನ್. ಕಾಮತರು, ಉಲ್ಲಾಳ ಮಂಗೇಶರಾಯರು, ಕೆರೋಡಿ ಸುಬ್ಬರಾಯರು, ಇವರು, ಇಂದಿಗೂ ನಮ್ಮ ಅದೃಷ್ಟದಿಂದ ನಮ್ಮೊಡನೆ ಇರುವ ಕಡೆಕಾರ್ ಶ್ರೀ ರಾಜಗೋಪಾಲ ಕೃಷ್ಣರಾಯರು ಸೇರಿ ಒಂದು ಗದ್ದಲವಿಲ್ಲದಮಹಾಕ್ರಾಂತಿಯನ್ನೇ ತಮ್ಮ ಜಿಲ್ಲೆಯಲ್ಲಿ ಮಾಡಿದರು.

ರಾಮರಾಯರ ಪರಿಚಯ ಭಾಗ್ಯವಿದ್ದವರಿಗೆಲ್ಲ ಅವರ ಸರಳತೆ, ಸೌಜನ್ಯ ಮತ್ತು ಸ್ನೇಹಪರತೆ ಗೊತ್ತು. ಎಲ್ಲಿ ಕನ್ನಡ ಸಮಾರಂಭವೆಂದರೂ ಅಲ್ಲಿಗೆ ಅಕ್ಕರೆಯಿಂದ ದಯಮಾಡಿಸಿ ಉತ್ಸಾಹಿಗಳ ಮತ್ತು ನಾಡಿನ ಕಾರ್ಯಗಳನ್ನು ಹರಸುತ್ತಿದ್ದರು. ಅಖಂಡ ಕರ್ಣಾಟಕದ ಕನಸನ್ನು ಬಹು ಮುಂಚೆ ಕಂಡು ಅದಕ್ಕೆ ಒಂದು ಕಾರ್ಯ ವ್ಯವಸ್ಥೆಯನ್ನೇರ್ಪಡಿಸುವುದಕ್ಕಾಗಿ ಶ್ರಮಿಸಿದರು. ಅವರು ಬೆಳಗಾಂ ಕರ್ಣಾಟಕ ಸಾಹಿತ್ಯಪರಿಷತ್ ಸಮ್ಮೇಳನದ ಅಧ್ಯಕ್ಷರಾಗಿ ಸಮಗ್ರ ಕರ್ಣಾಟಕದ ಪ್ರತಿನಿಧಿಗಳೂ ನಾಯಕರೂ ಆದರು. ಇಂಥ ಮಹನೀಯರ ನಿಧನದಿಂದ ಆದ ನಷ್ಟವನ್ನು ನೆನಸಿಕೊಂಡು ಮೃತರ ಅಮೃತಜೀವನ ಉಳಿದವರಿಗೆ ಮಾರ್ಗದರ್ಶಿಯಾಗಲೆಂದೂ ಅವರ ಬಂಧು ಬಾಂಧವರಿಗೆ ಶೋಕವನ್ನು ತಾಳಿಕೊಳ್ಳುವ ಧೈರ್ಯ ಬರಲೆಂದೂ ಹಾರೈಸುತ್ತೇವೆ.

ರಾಜಕಾರ್ಯಪ್ರವೀಣ
ಎನ್. ಎಸ್. ಸುಬ್ಬ
ರಾಯರು

ರಾಜಕಾರ್ಯಪ್ರವೀಣ ಬಿರುದಾಂಕಿತರಾದ, ಮೈಸೂರು ವಿಶ್ವವಿದ್ಯಾನಿಲಯದ ಸ್ಥಾನಪತಿಗಳಾಗಿದ್ದ ಶ್ರೀ ಎನ್. ಎಸ್. ಸುಬ್ಬರಾಯರವರ ನಿಧನದಿಂದ ಕನ್ನಡ ನಾಡಿಗೆ ಆಗಿರುವ ನಷ್ಟ ತುಂಬಿಕೊಡಲಾಗದುದು. ನಮ್ಮ ವಿಶ್ವವಿದ್ಯಾನಿಲಯದ ಸ್ಥಾಪನೆಯ ಸಂದರ್ಭದಲ್ಲಿಯೂ ಅದರ ಒಬ್ಬ ಪ್ರಖ್ಯಾತ ಪ್ರಾಧ್ಯಾಪಕರಾಗಿ ಮತ್ತು ಸ್ಥಾನಪತಿಗಳಾಗಿಯೂ ಅವರು ಸಲ್ಲಿಸಿದ ವಿದ್ಯಾಸೇವೆ ಅಮೂಲ್ಯವಾದುದು, ಅಪಾರವಾದುದು. ಕರ್ಣಾಟಕ, ಭರತಖಂಡ ಎರಡರಲ್ಲಿಯೂ ಅವರ ವಿದ್ಯೆಯೂ ವಿದ್ಯಾಕೀರ್ತಿಯೂ ವ್ಯಾಪಿಸಿದುವು. ಅಖಿಲಭಾರತ ಸರ್ಕಾರದವರು ಹಲವು ಸಮಿತಿಗಳಲ್ಲಿ ಅವರ ಸಲಹೆ ಸಹಾಯವನ್ನು ಪಡೆದರು. ಅವರ ವಿಶೇಷ ಶಾಸ್ತ್ರಜ್ಞತೆಗೆ ಕಾಣಿಕೆಯಾಗಿ ಮಹಾ ಸಮ್ಮೇಳನಗಳಲ್ಲಿ ಅಗ್ರಪೂಜೆ ದೊರಕಿತು. ಅಂತರ ವಿಶ್ವವಿದ್ಯಾನಿಲಯ

ಸಮಿತಿಯ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ರಾಜ್ಯತಂತ್ರ ಮತ್ತು ರಾಜ್ಯಾದಾಯಸಂಗ್ರಹ ಸಂಬಂಧದಲ್ಲಿ ಸಲಹೆಗಳನ್ನು ಕೊಟ್ಟು ಹಲವು ಒರದಿಗಳನ್ನು ತಯಾರಿಸಿದರು. ನಾಡಿನ ಅಭಿವೃದ್ಧಿ ಚೇತನಗಳಲ್ಲಿ ಒಂದಾದರು. ಸಂಸ್ಥಾನದ ವಿದ್ಯಾಶಾಖೆಯಲ್ಲಿ ಅವರು ಕನ್ನಡ ಮಾಧ್ಯಮವನ್ನು ಸ್ಥಾಪಿಸಿದ ನೀತಿಯಿಂದ ಕನ್ನಡಕ್ಕೆ ಪ್ರಾಧಾನ್ಯತೆ ತಂದುಕೊಟ್ಟುದಕ್ಕಿಂತ ಹೆಚ್ಚಾಗಿ ನಮ್ಮ ಶಿಕ್ಷಣಪದ್ಧತಿಯಲ್ಲಿ ಅತ್ಯಗತ್ಯವಾಗಿ ಆಗಬೇಕಾಗಿದ್ದ ಸುಧಾರಣೆಯನ್ನು ಉಂಟು ಮಾಡಿ ಮಕ್ಕಳನ್ನು ಬದುಕಿಸಿದರು. ಬೇರೆ ನುಡಿಯಲ್ಲಿ ಕಲಿಸುವ ವಿದ್ಯೆ ನಮ್ಮ ನಾಡಿನ ಮಕ್ಕಳಿಗೆ ಅಂಟಲಾರದೆಂಬ ತತ್ವವನ್ನು ಬೇಗ ಅರಿತು ಆ ಬಗ್ಗೆ ತಮ್ಮ ಅಧಿಕಾರ ನಡೆವಾಗ ಕಾರ್ಯವಿಧಾನವನ್ನು ಕೈಗೊಂಡ ಅವರ ತತ್ವದರ್ಶನವೂ ಕರ್ತೃತ್ವಶಾಲಿತ್ವವೂ ಉಪಕಾರವೂ ಅಸಾಧಾರಣವಾದುವು; ನಿತ್ಯಫಲವನ್ನು ಕೊಡತಕ್ಕವು.

ಅವರು ಮಹಾರಾಜಾ ಕಾಲೇಜಿನ ಅಧ್ಯಾಪಕರೂ ಮುಖ್ಯಾಧಿಕಾರಿಗಳೂ ಆಗಿದ್ದ ಕಾಲ ಒಂದು ವಿಶೇಷ ಲಕ್ಷಣವುಳ್ಳದ್ದಾಗಿತ್ತು. ದೇಶವಿದೇಶಗಳಿಂದ ಬಂದು ತಮ್ಮ ವಿದ್ಯಾಪ್ರೌಢಿಮೆಯಿಂದ ತೇಜೋವಿಶಿಷ್ಟರಾಗಿದ್ದ ಹಲವರೊಡನೆ ತೂಗಿ ಕೀರ್ತಿಪಡೆದರು. ಯೂರೋಪಿನ ಚರಿತ್ರೆ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಇವುಗಳಲ್ಲಿ ಅವರಿಗಿದ್ದ ನಿಷ್ಕೃಷ್ಟವಾದ, ತಲಸ್ಪರ್ಶಿಯಾದ ಜ್ಞಾನ, ಅವುಗಳ ಬೋಧನೆಯಲ್ಲಿ ಅವರಿಗಿದ್ದ ಅನುಭವ, ಸೌಲಭ್ಯ, ಯಾವುದನ್ನು ಹೇಳಿದರೂ ತಿಳಿಯಾಗಿ ಅಸಂದಿಗ್ಧವಾಗಿ, ಖಚಿತವಾಗಿ, ಅಡಕವಾಗಿ ಹೇಳುವ ಅವರ ಕ್ರಮ, ಎಷ್ಟು ಜಟಿಲವಾದ ಗಹನವಾದ ವಿಷಯವನ್ನಾದರೂ ಸರಳವಾಗಿ ಹೇಳಬಲ್ಲ ಶಕ್ತಿ, ವಿದ್ಯಾರ್ಥಿಗಳೇ ಸ್ವಂತವಾಗಿ ಓದಿ ವಿಷಯಜ್ಞಾನಪಡೆವಂತೆ ಮಾಡಬಲ್ಲ ಜಾಣ್ಮೆ, ಸಾವಿರ ಪುಟಗಳ ವಿಷಯವನ್ನು ಬೇಕೆಂದರೆ ೧೦–೨೦ ಪುಟಗಳಲ್ಲಿ ಸಂಗ್ರಹಿಸಬಲ್ಲ ಕುಶಲತೆ ಇವು ಅವರ ವ್ಯಕ್ತಿಲಕ್ಷಣದ ಅಂಶಗಳು. ವಿದ್ಯಾರ್ಥಿಗಳಲ್ಲಿ ಅವರಿಗಿದ್ದ ಪ್ರೀತಿಯೂ ದಾತೃತ್ವ, ಕರುಣೆಗಳೂ ಒಂದು ಸಲ ಕಂಡು ಕೇಳಿ ಓದಿದುದನ್ನು ಮರೆಯದ ಸ್ಮರಣಶಕ್ತಿಯೂ ಅದ್ಭುತವಾಗಿದ್ದುವು. ಆಕೃತಿ ಸದೃಶವಾದ ಪ್ರಜ್ಞೆ; ಅವಕ್ಕೆ ತಕ್ಕ ದಾನಶೀಲತೆ, ಅಭಿಮಾನ, ಔದಾರ್ಯಗಳು, ಯಾವ ಸಂಕುಚಿತ ಮನೋಭಾವಕ್ಕೂ ಬೇಸರಪಡುವ, ಎಲ್ಲ ಉದಾರವರ್ತನೆಗೂ ಒಲಿಯುವ ಚಿತ್ತವೃತ್ತಿ, ಕಾರ್ಯಪಟುತ್ವ, ಎಲ್ಲಿದ್ದರೂ ತಮ್ಮ ಮಾತು ಮನಸ್ಸಿನ ಆಧಿಪತ್ಯವನ್ನು ಸ್ಥಾಪಿಸಬಲ್ಲ ವ್ಯಕ್ತಿತ್ವ ಇವು ಅವರನ್ನು ಕಂಡವರೆಲ್ಲರ ಮನಸ್ಸಿನಲ್ಲಿ ಆಜೀವವೂ ಉಳಿಯುವಂಥವು. ಅಂತರರಾಷ್ಟ್ರೀಯ ದೃಷ್ಟಿಯಿದ್ದ, ಭಾರತಕ್ಕೆ ಅದು ಅಗತ್ಯವೆಂದು ಹೇಳುತ್ತಿದ್ದ ಮಹಾಪುರುಷರು ಅವರು.

ವಿಶ್ವವಿದ್ಯಾನಿಲಯದ ಕೆಲಸ ಜನಕ್ಕೆ ಒದಗಬೇಕೆಂದು ಪ್ರಚಾರ ಪುಸ್ತಕಮಾಲೆಯನ್ನು ಆರಂಭಿಸಿದರು. ಕನ್ನಡದಲ್ಲಿ ಆಗಬೇಕಾದ ಅನೇಕ ಕೆಲಸಗಳಿಗೂ ಪ್ರಕಟನೆಗಳೂ ನೆರವಿತ್ತರು. ಮುಂಬಯ್ಯಲ್ಲಿ ನಡೆದ ಕರ್ಣಾಟಕ ಸಾಹಿತ್ಯಪರಿಷತ್ತಿನ ಅಧ್ಯಕ್ಷರಾಗಿದ್ದರು. ಈ ಸಮ್ಮ ಪತ್ರಿಕೆಯ ರಕ್ಷಣೆ ಪೋಷಣೆಯಲ್ಲಿ ಸಂತತ ಸಹಾಯಕರಾಗಿ ನಾವು ಬೇಡಿದ ಸೌಕರ್ಯಗಳನ್ನೆಲ್ಲ ಒದಗಿಸಿಕೊಟ್ಟರು. ಇದು ಹೆಚ್ಚು ಜನಪ್ರಿಯವಾಗಿಯೂ ಪ್ರಯೋಜನಕರವಾಗಿಯೂ ಸುಂದರವಾಗಿಯೂ ಸಕಲ ಕರ್ಣಾಟಕದ ಮುನ್ನಡೆಯ ಕುರುಹಾಗಿ ಪ್ರತಿನಿಧಿಯಾಗಿ ನೇತೃವಾಗಿ ಆಗಲು ಯಾವ ನೆರವನ್ನು ಬೇಕಾದರೂ ಕೊಡಲು ಸಿದ್ಧರಾಗಿದ್ದವರು.

ಅಂತಹವರನ್ನು ಕಳೆದುಕೊಂಡ ನಾವು ಅವರ ನೆನಪಿಗೆ ಈ ಕಂಬನಿ ಕಾಣಿಕೆಯನ್ನು ಸಲ್ಲಿಸಿ ಕೃತಜ್ಞತೆಯಲ್ಲಿ ಅಭಿವಂದನೆ ಮಾಡುತ್ತಿದ್ದೇವೆ.

ರಾಜಸೇವಾಸಕ್ತ[1] ಬೆಳ್ಳಾವೆ ವೆಂಕಟನಾರಾಯಣಪ್ಪನವರು

ರಾಜಸೇವಾಸಕ್ತ ಶ್ರೀಮಾನ್ ಬೆಳ್ಳಾವೆ ವೆಂಕಟನಾರಾಯಣಪ್ಪನವರು ೩-೮-೪೩ ರ ರಾತ್ರಿ ೯-೩೦ ಘಂಟೆಗೆ ತೀರಿಕೊಂಡರು. ಕನ್ನಡನಾಡಿಗೆ ಅದರಿಂದ ಬಹು ದೊಡ್ಡ ನಷ್ಟವಾಗಿದೆ. ಅವರಂಥವರು ನಮ್ಮ ಕಾಲದಲ್ಲಿ ಸಾಮಾನ್ಯವಾಗಿ ದೊರೆಯುವುದು ಕಷ್ಟ. ಅವರ ಹಿರಿಮೆ, ಒದುಕಿನ ಲಕ್ಷಣ ಅಂಥವು; ಅಷ್ಟು ವಿಶೇಷವಾದವು; ನಮ್ಮ ನಾಡಿನ ಜೀವನದ ಒಂದು ಮಹಾ ಸಂಪ್ರದಾಯಕ್ಕೆ ಪ್ರತಿನಿಧಿಯಾಗಿದ್ದ ಅವರ ನಿಧನದಿಂದ ಒಂದು ಕಳೆ ಕಣ್ಮರೆಯಾದಂತಾಯಿತು.

ಹಿಂದಿನ ಸಂಪ್ರದಾಯದ ಮೂರ್ತಿಯಾಗಿದ್ದರು, ಅವರು. ಉಡುಗೆ ತೊಡುಗೆ, ಮಾತು ಕತೆ, ಊಟ ಉಪಚಾರ, ಆಚಾರ ವ್ಯವಹಾರ, ಮರ್ಯಾದೆ ವಿನಯ, ಯಾವ ಅಂಶದಲ್ಲಿಯೂ ಅದರ ಅಚ್ಚು ಅವರಲ್ಲಿ ಕಾಣಬಹುದಾಗಿತ್ತು. ಆರಡಿಗೆ ಮೇಲ್ಪಟ್ಟ ಎತ್ತರ ಆಳು. ನಡೆಯುತ್ತಿದ್ದರೆ ಒಂದು ವಿಶೇಷ ಚೈತನ್ಯದ ಮೂರ್ತಿಯಾಗಿ ಕಾಣುತ್ತಿದ್ದರು. ಆಕೃತಿ ಅವರದೇ, ನಡಗೆ ಉಡುಪು ಅವರವೇ ಎಂದು ಎಷ್ಟು ದೂರದಿಂದ ಬೇಕಾದರೂ ಪಂಥಕಟ್ಟಿ ಹೇಳಬಹುದಾಗಿತ್ತು: ಅಷ್ಟು ಗೊತ್ತಾದ ಬಗೆಯ ಉಡುಪು. ನಿರಿ ತೀಡಿ ಉಟ್ಟ ಶುಭ್ರದೋತ್ರ; ೫೪ ಅಂಗುಲ ಅಗಲದ ಪಂಚೆ ಅವರ ಮಂಡಿಯಿಂದ ಹೆಚ್ಚು ಕೆಳಕ್ಕೆ ಒದಗುತ್ತಿರಲಿಲ್ಲ; ಹಳೆಯಕಾಲದ ಕಟ್ಟಿನ ಜರಿರುಮಾಲು; ಕಂಕಳು ತೂರಿ ಭುಜದಿಂದಿಳಿದು ತೋಳ ಮೇಲೆ ತೂಗುತ್ತಿದ್ದ ಉತ್ತರೀಯ; ಕೈಯಲ್ಲಿ ಕೊಡೆ; ನೇರವಾಗಿ ನಡೆಯುವುದು ಶಕ್ಯವಾದ ವರೆಗೂ ನೇರವಾಗಿ ಬಳುಕದೆ ನಡೆದ ನಡಗೆ;

[1] ಆಕಾಶವಾಣಿಯ ಕೃಪೆಯಿಂದ.

ವಯೋಧರ್ಮದಿಂದ ಬೆನ್ನು ಬಾಗಿದಾಗ ಸ್ವಲ್ಪ ಬಾಗಿದಂತೆ ನಡೆಯಬೇಕಾಯಿತು. ಅವರು ನಡೆವುದೂ ಒಂದೇ, ಇತರರು ಓಡುವುದೂ ಒಂದೇ. ಯಾವಂಶದಲ್ಲಿಯೂ ಶಿಥಿಲತೆ ಇರಲಿಲ್ಲ, ಅವರಲ್ಲಿ. ದೇಹದಲ್ಲಿ ಅನಾರೋಗ್ಯ ಉಂಟಾಗಿ ಕೈಕಾಲ ಧಾರಾಳ ತಪ್ಪಿದಾಗ ಅವರು ಪಟ್ಟ ಮನಃಕ್ಲೇಶ ಹೇಳತೀರದು. ಗಾಡಿಯಲ್ಲಿ ಕುಳಿತುಕೊಳ್ಳುವು ದೆಂದರೆ ಸೇರದಿದ್ದ ಅವರಿಗೆ ಗಾಡಿಯಲ್ಲಿ ಅಡಗಿ ಕುಳಿತುಕೊಳ್ಳಲೇಬೇಕಾಗಿ ಬಂದಾಗ ಆ ಬೇಸೆ ವರ್ಣಿಸಲಾಗದ್ದಾಯಿತು. ಎಲ್ಲಿಗೇ ಸಂಚರಿಸಬೇಕಾಗಲಿ ಸಾಮಾನ್ಯವಾಗಿ ನಡೆದು ಹೋಗುತ್ತ— ಸಾಧಾರಣ ಜಟಕಾಗಾಡಿಗಳಿಗಿಂತ ವೇಗವಾಗಿ ನಡೆಯುತ್ತಿದ್ದ ಅವರಿಗೆ ಕಾಲನಡೆ ಕಟ್ಟಿದ ವ್ಯಾಧಿ ಬಹು ಕ್ಲೇಶವನ್ನುಂಟುಮಾಡಿತು.

ನಡಗೆಯ ಚಟುವಟಿಕೆ ಅವರ ಬದುಕಿನ ಚಟುವಟಿಕೆಯ ಒಂದು ನಿದರ್ಶನ ಮಾತ್ರ. ಹಾಗೆಯೇ ಮಾತು. ಯಾವದನ್ನಾಡಿದರೂ ಸ್ಪಷ್ಟವಾಗಿ, ಖಂಡಿತ ವಾಗಿ ಆಡುವರು ;— ಇತರರಿಗೆ ಭಯವಾಗುವಷ್ಟು, ಅಸನುಕೂಲ, ಕಡೆಗೆ ಅಪ್ರಿಯ ಆಗುವಷ್ಟು. ಮನಸ್ಸಿಗೆ ಸರಿತೋರಿದುದನ್ನು ಆಡಿಯೇ ತೀರಿಯಾರು. ಆಡದಿದ್ದರೆ ಪ್ರಾಮಾಣಿಕತೆಗೆ ಕುಂದು ಎಂದು ಅರಿತಿದ್ದ ಅವರಿಗೆ ತಾಸು ತಿಳಿದಮಟ್ಟಿಗೆ ಅಂಥ ಅಪ್ರಾಮಾಣಿಕತೆಗೆ ಎಂದಿಗೂ ಅವಕಾಶ ಕೊಡರು. 'ಇದು ಶುದ್ಧ ತಪ್ಪು' 'ಇದು ಅನ್ಯಾಯ' 'ನಾಶಮಾಡಿಬಿಟ್ಟರು' 'ಹಾಳಾಗಿಹೋಯಿತು' ಎಂಬ ಮಾತುಗಳನ್ನು ಅವರ ಬಾಯಿಂದ ಕೇಳಿದವರು ಯಾರೇ ಆಗಲಿ ಸುಲಭವಾಗಿ ಮರೆಯಲಾರರು. ಅವರ ಮನಸ್ಸಿನಲ್ಲಿ ಕಪಟವಿಲ್ಲವೆಂದೂ ತಾವು ಬಲ್ಲಂತೆ ಧರ್ಮವನ್ನೇ ಎಲ್ಲಿಯೂ ನಡಸುವರೆಂದೂ ನಂಬಿಕೆಯಿದ್ದ ಕಾರಣ ಅವರ ಬೈಗಳಿಗೂ ಅಸಮಾಧಾನಕ್ಕೂ ಯಾರೂ ಹೆಚ್ಚಾಗಿ ಬೇಸರಪಟ್ಟುಕೊಳ್ಳುತ್ತಿರಲಿಲ್ಲ. ಆ ಯಾರಿಗೇ ಆಗಲಿ ಅವರ ಶೀಲ ಸಂಪತ್ತು, ಪ್ರಾಮಾಣಿಕತೆ, ಶುಚಿಗಳ ವಿಷಯವಾಗಿ ಗೌರವವೇ, ಭಕ್ತಿಯೇ ಹೊರತು ಬೇರೆ ಭಾವಕ್ಕೆ ಎಡೆಯಿರಲಿಲ್ಲ.

ಯಾವುದನ್ನಾದರೂ ತಾವೇ ಮಾಡಬೇಕು; ಅಚ್ಚುಕಟ್ಟಾಗಿ, ಕ್ರಮವಾಗಿ, 'ಲಕ್ಷಣ'ವಾಗಿ. ಆ ಕ್ರಮ, ಅಚ್ಚುಕಟ್ಟು, ಆ ಲಕ್ಷಣ ಇಲ್ಲವಾದರೆ ಅವರಿಗೆ ತಡೆಯದು. ಏನೇ ನಷ್ಟವಾಗಲಿ ಕಷ್ಟವಾಗಲಿ, ಎಷ್ಟು ಕಾಲ ಮತ್ತು ಹಣ ವ್ಯಯ ವಾಗಲಿ ಆ ರೀತಿಯಲ್ಲಿಯೇ ಅದನ್ನು ಮಾಡಿ ತೀರುವರು. ಇಷ್ಟೇಕೆ ನಿಷ್ಠುರ ಇವರು? ಸ್ವಲ್ಪ ಕರುಣೆ, ಸಹಾನುಭೂತಿ ತೋರಿಸಬಾರದೆ? ಈ ಅಲ್ಪಕ್ಕೆಲ್ಲ ಏಕೆ ಪೇಚಾಡು ತ್ತಾರೆ, ಮನಸ್ಸು ಸ್ವಲ್ಪ ಹಗುರವಾಗಬಾರದೆ ಎಂದರೆ ಆಗದ ಮಾತು. ಈ ನಿಷ್ಠೆ ಇದ್ದುದರಿಂದಲೇ ಬಹುಶಃ ಅವರ ಬದುಕು ಒಂದು ಒಪ್ಪದಲ್ಲಿ ನಡೆಯಿತು; ಇದರಿಂದಲೇ ಅವರು ಸಾಧಿಸಿದಷ್ಟನ್ನಾದರೂ ಅವರು ಮಾಡಲು ಶಕ್ಯವಾದ್ದು.

ಯಾವುದರಲ್ಲಿಯೂ ಕ್ರಮ, ನಿಷ್ಠೆ ಎಂದೆ. ಎಲ್ಲದರಲ್ಲಿಯೂ ಖಚಿತತೆ, ಖಂಡಿತ, ಕಡ್ಡಿ ಎರಡು ತುಂಡಾಗಿ ಮುರಿದಂತೆ ಎನ್ನಬಹುದು. ಕೆಲಸ ಮಾತುಗಳಲ್ಲಿ ಹೇಗೊ, ಮನೋವ್ಯಾಪಾರದಲ್ಲಿಯೂ ಅಭಿಪ್ರಾಯ ಪ್ರಕಾಶದಲ್ಲಿಯೂ ಹಾಗೆಯೇ: ಎಲ್ಲಿಯೂ ಅರೆಕೆಲಸ, ಅರೆನಂಬಿಕೆ, ಅರೆಬೆಳಕು ಇಲ್ಲ. ಕಾಲಕ್ರಮವಾಗಿ ಬಂದುದನ್ನು ಭಕ್ತಿಯಿಂದ ಸ್ವೀಕರಿಸಿ ನಡಸಿದರು; ಸಂಪ್ರದಾಯದ ಯಾವ ಅಂಶಗಳನ್ನು ಕುರಿತೂ ಅವರು ಪ್ರತ್ಯೇಕವಾಗಿ ಯೋಚಿಸಿ ತೀರ್ಮಾನಿಸಲು ಬಯಸಲಿಲ್ಲ. ಹಿರಿಯರ ದಾರಿ ಎಂದು ನಡೆದು ಮುಗಿಸಿದರು. ಆದ್ದರಿಂದ ಈಗಿನ ಕಾಲದ ಅನೇಕರ ಮನಸ್ಸಿನಲ್ಲಿ ಪಾಶ್ಚಾತ್ಯಾದಿ ಸಂಪರ್ಕಗಳಿಂದ ಉಂಟಾದ ಯಾವ ಅಶಾಂತಿಕ್ಷೋಭೆಗಳೂ ಅವರಲ್ಲಿ ಉಂಟಾಗಲಿಲ್ಲ. ಅವರಾತ್ಮಕ್ಕೆ ಆ ಮೂಲಕ ಉದ್ವೇಗ ಹುಟ್ಟಲಿಲ್ಲ. ಇದು ಅವರ ಕೆಲಸಕ್ಕೆ ನೆರವಾಯಿತು; ಬೆನ್ನಬಲವಾಯಿತು; ಹಿಡಿದ ಕೆಲಸಗಳನ್ನು ಮಾಡುವುದಕ್ಕೆ ಒಂದು ಸ್ಥೈರ್ಯವನ್ನು ಕೊಟ್ಟಿತು.

ಅವರ ಹಿರಿತನ ಎಲ್ಲ ಅಂಶಗಳಲ್ಲಿಯೂ ಕಾಣುತ್ತಿತ್ತು. ಮಕ್ಕಳಂತೆ ಅವರ ನಗು. ಎಲ್ಲರಿಗೂ ಅವರನ್ನು ಕಂಡರೆ ಭಯಭಕ್ತಿ ಇದ್ದರೂ ಅವರೊಡನೆ ಮಾತನಾಡುವುದಕ್ಕೆ ಯಾವ ಹೆಚ್ಚು ಅಧಿಕಾರವೂ ಬೇಕಾಗಿರಲಿಲ್ಲ. ಅಷ್ಟು ಸುಲಭರು. ಎಲ್ಲಿಗೆ ಕರೆದರೂ ಹೋಗುವರು; ಯಾವ ಸಮಯಕ್ಕೆ ಲಗ್ನವೊ ಉಪನ್ಯಾಸವೊ ಗೋಷ್ಠಿಯೊ ಸಂದರ್ಶನವೊ ಕೆಲಸ ಕರೆದಲ್ಲಿಗೆ ಸಮಯಕ್ಕೆ ಸರಿಯಾಗಿ ಹೋಗುವರು. ಸೂರ್ಯ, ನಿಮ್ಮ ಗಡಿಯಾರ ತಪ್ಪಿದರೂ ಅವರ ಸಮಯನಿಷ್ಠೆ ತಪ್ಪದು. ಇರಬೇಕಾದಷ್ಟು ಹೊತ್ತೂ ಇದ್ದು ಬರುವರು. ಆಶೀರ್ವಾದಮಾಡಿ ಬರುವರು; ಅಭಿಪ್ರಾಯ ತಿಳಿಸಬೇಕಾದಾಗ ನಿರ್ವಂಚನೆಯಿಂದ, ನಿಸ್ಸಂಕೋಚದಿಂದ, ನಿರ್ದಾಕ್ಷಿಣ್ಯದಿಂದ ತಿಳಿಸಿ ಬರುವರು; ಯಾವ ಆಸೆ ಭೀತಿಗಳೂ ಅವರನ್ನು ಬೇರೆಗೆ ತಿರುಗಿಸುತ್ತಿರಲಿಲ್ಲ. ಉತ್ಸವಗಳಿಗೆ ಬಂದರೆಂದರೆ ತಡಮಾಡಿ ಬಾರರು; ಉತ್ಸವದ ನಡುವೆ ಎದ್ದು ಹೋಗರು. ಅವರು ಬಂದರೆಂದರೆ ಉತ್ಸವಕ್ಕೆ ಒಂದು ತುಂಬು. ಅವರಿಗೆ ಬಾಗಿ ನಮಸ್ಕಾರಮಾಡಿ ಹರಕೆ ಪಡೆದರೆ, ಪಡೆದವರಿಗೆ ವಿಶೇಷ ತೃಪ್ತಿ. ವಯಸ್ಸು, ಯೋಗ್ಯತೆ, ಒಂದು ಹದದಲ್ಲಿ ಬೆಳೆದು ರೂಪುಗೊಂಡ ಚಾರಿತ್ರ, ಸಹಜ ವಾತ್ಸಲ್ಯ ಇವುಗಳ ಫಲ ಅದು. ಹೀಗೆ ಅವರು ತೀರಿಕೊಂಡದ್ದು ಅವರನ್ನು ಕಂಡ ಪರಿಚಯವಿದ್ದವರಿಗೆಲ್ಲ ಜೀವನದ ಒಂದು ಸೌಭಾಗ್ಯ ಮಾಯವಾದಂತಾಗಿದೆ.

ಕನ್ನಡಕ್ಕೂ ವೈದಿಕ ಧರ್ಮದ ಪಾಲನೆ ಸುವ್ಯವಸ್ಥೆಗಳಿಗೂ ಲೋಕಹಿತ ಕಾರ್ಯಗಳಿಗೂ ಅವರ ಬದುಕು ಮೀಸಲು. ಅವರು ಕೆಲಸ ಮಾಡಿದ ಸಂಸ್ಥೆಗಳು ಹತ್ತಾರು. ಎಲ್ಲದರಲ್ಲಿಯೂ ಅವರ ಮಾತಿಗೆ ಬೆಲೆ; ಅವರ ತೀರ್ಮಾನದಲ್ಲಿ ವಿಶ್ವಾಸ.

ಬಡವರ ಮತ್ತು ವಿದ್ಯಾರ್ಥಿಗಳ ಪ್ರಯೋಜನವೆಂದರೆ ಅವರ ಸಹಾಯ ಎಂದಿಗೂ ಸಿದ್ಧವೇ. ಅಂಥವರ ಸೌಕರ್ಯಕ್ಕಾಗಿ ಶಕ್ಯವಾದುದನ್ನೆಲ್ಲ ಮಾಡುತ್ತಿದ್ದರು. ಸನಾತನ ಧರ್ಮಪ್ರಚಾರಕ್ಕೆ, ಉಳಿವಿಗೆ ಸಂತತವಾಗಿ ದುಡಿದರು; ಚಂದಾ ಹಣ ಎತ್ತಿದರು; ಸಂಸ್ಥೆಗಳಿಗೆ ಕಾರ್ಯದರ್ಶಿಗಳೋ, ಕೋಶಾಧಿಕಾರಿಗಳೋ ಆದರು. ಮಠ ದೇವಸ್ಥಾನಗಳಿಗೆ ಹೋಗಿ ಸಹಕರಿಸಿದರು; ಸಮಾರಾಧನೆಗಳನ್ನು ನಿರ್ವಹಿಸಿದರು. ದೇವರಿಗೆ ರಥೋತ್ಸವಗಳನ್ನು ಮಾಡಿಸಿದರು; ಸ್ವಂತವಾಗಿ ದೇವಸ್ಥಾನವೊಂದನ್ನು ಕಟ್ಟಿ ಅಲ್ಲಿ ಪೂಜೆಗೆ ಏರ್ಪಾಡು ಮಾಡಿದರು. ಇಂಥ ಎಲ್ಲ ಸಂಬಂಧಗಳಲ್ಲಿಯೂ ಅವರ ಆಸೆ ಗತಕಾಲದ ಪುನರುತ್ಥಾನಕ್ಕಾಗಿ ಆಯಿತು. ಅವರ ಕಾರ್ಯರೀತಿಯನ್ನು ಕುರಿತು ಬಗೆಬಗೆಯ ವ್ಯಾಖ್ಯಾನವಾದದ್ದುಂಟು. ಆದರೆ ಅದನ್ನು ಬೇರ್ಪಡಿಸಲು ಟೀಕೆ ವ್ಯಾಖ್ಯಾನ ಶಕ್ತವಾಗಲಿಲ್ಲ. ವಿಜಯನಗರ ಜೀರ್ಣೋದ್ಧಾರಕ ಮಂಡಲಿ ಎಂಬುದೊಂದಿತ್ತು. ಅದರ ಕೆಲಸ ಸಾಗಲಿಲ್ಲ; ವಿಜಯನಗರ ಉದ್ಧಾರವಾಗಲಿಲ್ಲ. ಒಂದುಸಲ ನಾವು ಹಂಪೆಗೆ ಹೋಗಿದ್ದೆವು. ದೇವಾಲಯದ ಅಂಗಳದಲ್ಲಿ ಇದ್ದ ಕೊಳೆ, ಬೂದಿ, ಕೊಳ್ಳಿಗಳನ್ನು ಎತ್ತಿಹಾಕಿ ಸ್ಥಳವನ್ನಾದರೂ ಚೊಕ್ಕಟವಾಗಿಡಬಾರದೆ ಎಂದು ಕೊರಗಿದರು. ಇತರ ನಾವು ಟೀಕೆಮಾಡಿ ತೃಪ್ತರಾಗಿರಲು ನಾವೆಲ್ಲ ಮಲಗಿ ನಿದ್ರಿಸುತ್ತಿರುವಾಗ ತಾವು ಶ್ರಮಿಸಿ ಬೆಳಗಾಗುವ ಹೊತ್ತಿಗೆ ಎರಡು ಗಾಡಿ ಕಸವನ್ನು ಹೊರಕ್ಕೆ ಎತ್ತಿ ಹಾಕಿ ಸ್ಥಳವನ್ನು ಸ್ವಚ್ಛಮಾಡಿದ್ದರು. ಅವರ ಮನಸ್ಸು, ಕಾರ್ಯಪ್ರವೃತ್ತಿ ಹೀಗೆ.

ಬೆಂಗಳೂರು ಸೆಂಟ್ರಲ್ ಕಾಲೆಜಿನಲ್ಲಿ ಭೌತಶಾಸ್ತ್ರದ ಅಧ್ಯಾಪಕರಾಗಿ ಸರಕಾರದ ಸಂಬಳ ತಿನ್ನುವಾಗ ಶಕ್ತಿಯಿರುವ ಮಟ್ಟಿಗೆ ಹೇಗೆ ದುಡಿದರೋ, ಹಾಗೆಯೇ ಕೀರ್ತಿ ಬರಲಿ ಬಾರದಿರಲಿ, ಪ್ರಯೋಜನಕಾಣಲಿ ಬಿಡಲಿ ಒಂದೇ ಹದದಿಂದ ತಮ್ಮ ಬದುಕನ್ನು ನಡಸಿದರು. ಮಾಡಬೇಕೆನ್ನಿಸಿದುದನ್ನು ಮಾಡಿದರು. ಕನ್ನಡ ಸಾಹಿತ್ಯಪರಿಷತ್ತಿನ ಕಾರ್ಯದರ್ಶಿಯಾಗಿ, ಕೋಶಾಧಿಕಾರಿಯಾಗಿ, ಅದರ ಜೀವದ ಜೀವವಾಗಿದ್ದರು. ಅದನ್ನು ಉಂಟುಮಾಡಿದವರಲ್ಲಿ ಒಬ್ಬರು; ಅದನ್ನು ಉಳಿಸಿದರು, ಬೆಳಸಿದರು. ಅದರ ಕಟ್ಟಡಕ್ಕೆ ಬೇಕಾದ ನಿವೇಶನವನ್ನು ಗಳಿಸಿಕೊಟ್ಟರು; ಕಟ್ಟಲು ಬೇಕಾದ ಒಂದೊಂದು ಕಲ್ಲು, ಇಟ್ಟಿಗೆಯನ್ನೂ ಒಂದೊಂದು ಕಾರಣೆ ಗಾರೆಯನ್ನೂ ಪರೀಕ್ಷಿಸಿ ಪರೀಕ್ಷಿಸಿ ಅದನ್ನು ಭದ್ರವಾಗಿ ಕಟ್ಟಿಸಿದರು; ಯಾವುದನ್ನು ಮಾಡಿದರೂ ಹತ್ತುಕಾಲ ನಡೆಯುವಂತೆ ಮಾಡಬೇಕೆಂಬುದು ಅವರ ಬದುಕಿನ ಮಂತ್ರ. ಅದಕ್ಕಾಗಿ ಪ್ರಯತ್ನ; ಹಟ. ಆ ಹಟದ ಮುಂದೆ ಯಾರ ಯಾವ ಅಡ್ಡಿ ಆತಂಕವನ್ನೂ ಅವರು ಲಕ್ಷ್ಯಮಾಡುತ್ತಿರಲಿಲ್ಲ. ಅವರ ಪ್ರತಿಭಟನೆಯೆಂದರೆ ಸಾಮಾನ್ಯವಲ್ಲ; ಎಂದಿಗೂ ಉಗ್ರವಾದ್ದೇ. ತಮ್ಮ ಮಾತು ರೀತಿ ನಡೆಯದ ಕಡೆ ಅವರಿಲ್ಲ; ಅವರ ಒಲವು ಸಹಾನುಭೂತಿ ಅಶಕ್ಯ.

ಕನ್ನಡದಲ್ಲಿ ವಿಜ್ಞಾನ ಪ್ರಚಾರಕ್ಕಾಗಿ ಮೊದಲು ಉಪನ್ಯಾಸಗಳನ್ನು ಕೊಟ್ಟವರು ಅವರು ; ಮತ್ತು, — ಅವರ ಗೆಳೆಯರೂ ವಿದ್ಯಾಗುರುಗಳೂ ಆದ — ಕೀ. ಶೇ. ನಂಗಪುರಂ ವೆಂಕಟೇಶ ಅಯ್ಯಂಗಾರ್ಯರು. ವಿಜ್ಞಾನದ ಮೊದಲ ಪತ್ರಿಕೆಯನ್ನು ಹೊರಡಿಸಿದವರೂ ಆ ಮಹನೀಯರೇ. ಪರಿಷತ್ತಿಗಾಗಿ ಶಬ್ದಮಣಿದರ್ಪಣ, ಪಂಪ ಭಾರತ, ಪಂಪರಾಮಾಯಣ ಮುಂತಾದವುಗಳನ್ನು ಸಂಪಾದಿಸಿ ಪ್ರಕಟಿಸಿದರು. ಕುಸುಮಾವಳಿಕಾವ್ಯವನ್ನು ಸುಮಾರು ಪೂರ್ತಿ ಅಚ್ಚುಮಾಡಿಸಿದರು. ಪರಿಷತ್ ಪತ್ರಿಕೆಯ ಸಂಪಾದಕರಾಗಿ ಅದನ್ನು ಬಹುಕಾಲ ನಡಸಿದರು ; ಜಮಖಂಡಿಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ಅವರ ಸಂತತ ಸಲಹೆ ಹಿತಬೋಧೆಗಳಿಂದ ಪರಿಷತ್ತಿಗೆ ಅಪಾರ ಉಪಕಾರವಾಯಿತು. ಇಂಗ್ಲಿಷ್-ಕನ್ನಡ ನಿಘಂಟುವೊಂದಾಗ ಬೇಕೆಂದು ಬಯಸಿ, ಅದಕ್ಕೆ ಸರಕಾರದ ಸಹಾಯವನ್ನು ಪಡೆದು ಕೆಲಸ ವ್ಯವಸ್ಥೆಯನ್ನು ಕೈಕೊಂಡು ಅದನ್ನು ಒಂದು ರೂಪಕ್ಕೆ ತರುತ್ತಿದ್ದರು.

ತಮಗಿಂತ ಹಿರಿಯರನ್ನು ಕಂಡರೆ ಅವರಿಗೆ ಭಕ್ತಿ; ಕಿರಿಯರನ್ನು ಕಂಡರೆ ವಾತ್ಸಲ್ಯ. ಕೆಟ್ಟುಹೋಗುತ್ತಿರುವ ಕಾಲದಲ್ಲಿ ಏನಾದರೂ ಹಳೆಯದನ್ನು ಉಳಿಸಬಹುದೇನೊ ಎಂಬುದೇ ಯೋಚನೆ ಇದ್ದ ಅವರಿಗೆ ಹೊಸ ಕಾಲದ ಅನೇಕ ರೀತಿಗಳು ರುಚಿಸಲಿಲ್ಲ ; ಅರ್ಥವಾಗಲಿಲ್ಲ. ಅಸಮಾಧಾನವುಂಟಾಯಿತು. ಉದ್ವೇಗವುಂಟಾಯಿತು. ಆದರೆ ಈ ಯಾವುದರಿಂದಲೂ ಅವರ ಪ್ರೀತಿ ಕೆಡಲಿಲ್ಲ. ಯಾವ ವಿರೋಧಿಯೊಡನಾಗಲಿ ಅವರ ವರ್ತನೆ ಕೀಳಾಗಲಿಲ್ಲ. ಪ್ರಕಟಶತ್ರುವೇ ಹೊರತು, ಮರೆಯ ಹಗೆ ಅಲ್ಲ ಅವರು. ಇತರರಿಗೆ ತೋರಿಸಬೇಕಾದ ಮರ್ಯಾದೆಯಲ್ಲಿ ಕೊರತೆ ಇರುತ್ತಿರಲಿಲ್ಲ ; ತಮ್ಮ ಹೊಣೆಗಾರಿಕೆಗಳಲ್ಲಿ ಅಸಡ್ಡೆ ಉಂಟಾಗುತ್ತಿರಲಿಲ್ಲ.

ಹೀಗೆ, ಅವರದು ಧೀರವಾದ ನಿಷ್ಠವಾದ ಜೀವನ. ಭಗವದ್ಭಕ್ತಿ, ಸದಾಚಾರ ನಾಲ್ವರಿಗೆ ಉಪಕಾರಿಯಾಗುವ ಬಗೆ, ಎಲ್ಲರ ಕ್ಷೇಮಲಾಭದಲ್ಲಿ ಆಸಕ್ತಿ, ಕಷ್ಟ ನಿಷ್ಠುರಗಳಲ್ಲಿ ಅನುಕಂಪೆ — ಇವು ಅವರನ್ನು ದೊಡ್ಡ ವ್ಯಕ್ತಿಯನ್ನಾಗಿಸಿದ್ದವು. ವ್ಯಕ್ತಿಯೇ ಏಕೆ ? ಶಕ್ತಿಯಾಗಿ ಮಾಡಿದ್ದವು. ಶ್ರೀಯುತ ಬೆಳ್ಳಾವೆಯವರೆಂದರೆ ಒಂದು ವ್ಯಕ್ತಿಮಾತ್ರವಲ್ಲ, ಒಂದು ಪ್ರಬಲ ಸಂಸ್ಥೆ.

ಕೃತಿಸೃಷ್ಟಿ, ಕನ್ನಡಪಡೆಯ ಯೋಜನೆ, ಸಂಘಟನೆ, ಹೊಸದೃಷ್ಟಿ ಸ್ಥಾಪನೆ, ಪ್ರಚಾರಕಾರ್ಯ ಮುಂತಾದ ನಿರ್ಮಾಣದ ಬಗೆಗಳಲ್ಲಿ ಕನ್ನಡಕ್ಕೆ ಸೇವೆ ಮಾಡುವುದು ಅವರ ಕಾರ್ಯರಂಗವಾಗಲಿಲ್ಲ. ಅಂಥ ಕೆಲಸಕ್ಕೆ ಬೇಕಾದ ಎಲ್ಲ ಸಲಕರಣೆ ಸಹಾಯಗಳನ್ನು ಒದಗಿಸುವ ಕಾರ್ಯವೂ ದುಡಿಮೆಯೂ ಅವರದಾಯಿತು. ಬರವಣಿಗೆಗಿಂತ ಮಾತು ; ಮಾತಿಗಿಂತ ಬದುಕು ; ಬದುಕಿನ ಪ್ರತಿದಿನದ ನಡತೆಗಿಂತ ಅದರ ಹಿಂದೆ

ಆಳದಲ್ಲಿ ಅಡಗಿದ್ದ ಶುಚಿ ಸತ್ವ, ಇವುಗಳಿಂದ ಮಾನ್ಯರು ಶ್ರೀಯುತರು. ಇಂತಹವರ ಸಂತತಿ ಬೆಳೆಯಬೇಕು—ಒಂದು ದೇಶ ಬೆಳೆಯಬೇಕಾದರೆ, ಉಳಿಯಬೇಕಾದರೆ. ಸ್ವಾಭಿಮಾನಶೂನ್ಯರಾಗಿ ತಾವು ತಿಳಿದಂತೆ ಧರ್ಮವನ್ನು ಸಮರ್ಪಕವಾಗಿ ನಡಸಿ ಬದುಕಿನ ಹೊರೆಯನ್ನು ಇಳಿಸಿಕೊಂಡ ಇಂಥ ಪುಣ್ಯಶಾಲಿಗಳು ಪ್ರತಿದಿನವೂ ಕಾಣರು, ಸಿಕ್ಕರು. ಇಂಗ್ಲಿಷ್ — ಕನ್ನಡ ನಿಘಂಟಿನ ಕೆಲಸವನ್ನು ಮುಗಿಸಿ ತೀರಿ ಕೊಂಡಿದ್ದರೆ ತೃಪ್ತಿಯಿಂದ ಅವರು ನಿರ್ಯಾಣ ಹೊಂದುತ್ತಿದ್ದರು.

ಎಲ್ಲರ ಎಲ್ಲ ಆಸೆಗಳೂ ಹಾಗೆ ಪೂರೈಸುವಂತಾದರೆ ಮನುಷ್ಯನನ್ನು ಹಿಡಿಯ ಬಲ್ಲವರು ಯಾರು? ಎಷ್ಟೋ ಬಗೆಯ ಆರೋಗ್ಯ, ನೈರ್ಮಲ್ಯ, ಸಂಯಮಗಳಲ್ಲಿ ಚುರುಕಾಗಿ ನಡೆದ ಅವರ ಬದುಕಿಗೆ ವ್ಯಾಧಿ ಹೇಗೆ ಬಂದಿತೆನ್ನಿಸುತ್ತದೆ. ಆದರೆ ಪಂಚಭೂತಗಳಿಂದಾದ ಎಲ್ಲ ದೇಹದ ಲಕ್ಷಣ ಅದು. ಅದರನೇಮವನ್ನು ಅದು ನಡಸಿತಾದರೂ ಅಂತಹ ಸತ್ವವನ್ನು ೭೨ ವರ್ಷಗಳ ಕಾಲ, ಅಷ್ಟು ಫಲಕಾರಿಯಾಗಿ ಸಲು ಅವಕಾಶಕೊಟ್ಟ ಉಪಕಾರಕ್ಕಾಗಿ ಅದಕ್ಕೂ ಕಾಲಕ್ಕೂ ನಮ್ಮ ನಮಸ್ಕಾರ.

ವಿ. ಸೀತಾರಾಮಯ್ಯ.

**ಡಾ|| ವಿಷ್ಣು ಸೀತಾ ರಾಮ ಸುಖತನಕರ್**

ಶ್ರೀ ಸುಖತನಕರ್ ಅವರು ಈ ವರ್ಷ ಜನವರಿ ೨೧ನೆಯ ತಾರೀಖಿನ ದಿನ ತಮ್ಮ ಐವತ್ತೇಳನೆಯ ವಯಸ್ಸಿನಲ್ಲಿ ದಿವಂಗತರಾದರು. ಇವರ ಮರಣದಿಂದ ಭಾರ ತೀಯವಿದ್ಯಾ ಸಂಶೋಧನೆಯಲ್ಲಿ ಆಸಕ್ತರಾದವರಿಗೆಲ್ಲ ಬಹಳ ನಷ್ಟವಾಗಿದೆ. ಪುಣೆಯಲ್ಲಿನ ಭಂಡಾರಕರ್ ಸಂಸ್ಥೆಯವರು ಪ್ರಕಟಿಸುತ್ತಿರುವ ಸಂಸ್ಕೃತ ಮಹಾಭಾರತಕ್ಕೆ ಇವರು ಮುಖ್ಯ ಸಂಪಾದಕರಾಗಿದ್ದುದೇ ಅಲ್ಲದೆ ಅನೇಕ ವಿದ್ವತ್ಪೂರ್ಣವಾದ ಲೇಖನಗಳನ್ನು ಬರೆದು ಜ್ಞಾನಪ್ರಚಾರನಿರತರಾಗಿದ್ದರು.

ಶ್ರೀ ಸುಖತನಕರ್ ಅವರು ತಮ್ಮ ಬಾಲ್ಯದ ವಿದ್ಯಾಭ್ಯಾಸವನ್ನೆಲ್ಲ ಮುಂಬೈ ನಗರದಲ್ಲಿಯೇ ಮುಗಿಸಿ ಇಂಟರ್ಮಿಡಿಯೆಟ್ ಪರೀಕ್ಷೆಯಾದ ಮೇಲೆ ಇಂಗ್ಲೆಂಡಿಗೆ ಹೋಗಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಟ್ರೈಪಾಸ್ ಪರೀಕ್ಷೆಯಲ್ಲಿ ಉತ್ತೀರ್ಣ ರಾದರು. ಇವರಿಗೆ ಮೊದಲಿನಿಂದಲೂ ಗಣಿತಶಾಸ್ತ್ರದಲ್ಲಿ ಬಹಳ ಮಮತೆ. ಅವರು ತಮ್ಮ ಸಂಸ್ಕೃತ ಸೇವೆಗೆ ತೊಡಗಿದ ಮೇಲೆಯೂ ಗಣಿತಶಾಸ್ತ್ರ ವ್ಯಾಸಂಗವನ್ನು ಕೈಬಿಡಲಿಲ್ಲ; ತಮ್ಮ ಟ್ರೈಪಾಸ್ ಪರೀಕ್ಷೆಗೂ ಗಣಿತವನ್ನೇ ಮುಖ್ಯ ವಿಷಯವಾಗಿ ಆರಿಸಿಕೊಂಡಿದ್ದರು. ಇವರು ಇಂಗ್ಲೆಂಡಿಗೆ ಹೋಗುವಾಗ ಇಂಡಿಯದ ಸಿವಿಲ್ ಸರ್ವಿಸ್ ಪರೀಕ್ಷೆಗೆ ಕೂಡಬೇಕೆಂಬ ಸಂಕಲ್ಪವಿದ್ದಿತಂತೆ. ಆದರೆ ಯಾವ ಕಾರಣ

ದಿಂದಲೋ ತಿಳಿಯದು,— ನಮ್ಮ ಪುಣ್ಯದಿಂದ — ಅವರ ಒಲವು ಸಂಸ್ಕೃತಕ್ಕೆ ತಿರುಗಿತು.

ಇಂಗ್ಲೆಂಡಿನಿಂದ ಇವರು ಬರ್ಲಿನ್ ವಿಶ್ವವಿದ್ಯಾಲಯಕ್ಕೆ ಹೋಗಿ ಪ್ರೊ|| ಲ್ಯೂಡರ್ಸ್ ಎಂಬ ಹಿರಿಯ ವಿದ್ವಾಂಸರ ಶಿಷ್ಯರಾದರು. ಅಲ್ಲಿ ಸುಖತನಕರ್ ಅವರು ಭಾರತ ವಿದ್ಯಾಸಂಶೋಧನ ಶಾಸ್ತ್ರ (Indology) ವನ್ನು ಅಭ್ಯಾಸಮಾಡಿದರು. ಇವರು ಡಾಕ್ಟರ್ ಪ್ರಶಸ್ತಿಗಾಗಿ ಸಿದ್ಧಪಡಿಸಿದ ಶಾಕಟಾಯನ ವ್ಯಾಕರಣವು ಇವರ ಮೊದಲ ಕೆಲಸವಾದರೂ ಅವರು ಮುಂದೆ ಕೈಕೊಂಡು ಯಶಸ್ವಿಯಾಗಿ ನಡೆಸಿದ ಹಲವು ಮಹಾ ಕಾರ್ಯಗಳ ಮಾದರಿಯಂತಿದೆ.

ಶ್ರೀ ಸುಖತನಕರ್ ತಮ್ಮ ವಿದೇಶ ಪರ್ಯಟನೆಯನ್ನು ಮುಗಿಸಿಕೊಂಡು ಭಾರತ ವರ್ಷಕ್ಕೆ ಹಿಂತಿರುಗಿದ ಮೇಲೆ ಇಂಡಿಯಾಸರ್ಕಾರದ ಆರ್ಕಿಯಾಲಜಿ ಇಲಾಖೆ ಯಲ್ಲಿ ಸೇರಿ ಕೆಲಸಮಾಡಿದರು. ಆ ಕಾಲದಲ್ಲಿ ಇವರು ಅನೇಕ ಸ್ಫೂರ್ತಿಯುತವಾದ ಲೇಖನಗಳನ್ನು ಬರೆದು ಪ್ರಸಿದ್ಧರಾದರು. ಭಂಡಾರಕರ್ ಸಂಸ್ಥೆಯವರು ತಾವು ಕೈಕೊಂಡ ಮಹಾಭಾರತ ಪರಿಷ್ಕರಣ ಕಾರ್ಯಕ್ಕೆ ಇವರೇ ಅರ್ಹರೆಂದು ತೀರ್ಮಾ ನಿಸಿಕೊಡಲು ಶ್ರೀ ಸುಖತನಕರ್ ಅವರು ಉತ್ಸಾಹದಿಂದ ಒಪ್ಪಿ ಸರ್ವತೋಪಮ ವಾದ ಈ ಮಹಾಕಾರ್ಯವನ್ನು ತಮ್ಮ ಅಸಾಧಾರಣ ಜ್ಞಾನ ವಿಜ್ಞಾನಗಳಿಂದ ಬಹಳ ಚೆನ್ನಾಗಿ ಆರಂಭಿಸಿದರು. ಈ ಮಹಾಕಾರ್ಯವು ಕೊನೆಗಾಣುವ ಮೊದಲೇ ಅವರು ಕಣ್ಮರೆಯಾದುದು ಭಾರತೀಯರ ದುರದೃಷ್ಟ. ಅವರು ಮಹಾಭಾರತಕ್ಕೆ ಬರೆದಿರುವ ಪೀಠಿಕೆಯು ಸಂಶೋಧನಾಕಾರ್ಯಾಸಕ್ತರಿಗೆ ಮಾರ್ಗದರ್ಶಕವಾಗಿದೆ. ಸ್ವದೇಶ ವಿದೇಶಗಳ ವಿದ್ವಾಂಸರನೇಕರು ಸುಖತನಕರ್ ಅವರ ಈ ಸಂಶೋಧನ ಕಾರ್ಯವನ್ನು ಮೆಚ್ಚಿಕೊಂಡಿದ್ದಾರೆ.

ಅವರ ಪಾಂಡಿತ್ಯ ಎಷ್ಟು ದೊಡ್ಡದೋ ಅವರ ವಿನಯವೂ ಅಷ್ಟೇ ದೊಡ್ಡದು. ಮಹಾಭಾರತಕ್ಕೆ ತಾವು ಬರೆದ ಪೀಠಿಕೆಯಲ್ಲಿ ತಮ್ಮ ವಿದ್ಯಾಗುರುಗಳಾದ ಪ್ರೊ|| ಲ್ಯೂಡರ್ಸ್ ಅವರನ್ನು ಪ್ರಶಂಸೆಮಾಡಿ ತಮ್ಮ ಕೀರ್ತಿಗೆ ಅವರ ಉಪದೇಶಮಾರ್ಗ ದರ್ಶಿತ್ವಗಳೇ ಕಾರಣವೆಂದು ಹೇಳಿದರು. ಆದರೆ ಪ್ರೊ|| ಲ್ಯೂಡರ್ಸ್ ಅವರು ತಾವು ಪ್ರತಿವರ್ಷವೂ ಅನೇಕ ಶಿಷ್ಯರನ್ನು ತಯಾರುಮಾಡುತ್ತಿದ್ದರೂ ಯಾರೂ ಇಂಥ ಹಿರಿಯ ಕಾರ್ಯವನ್ನು ಮಾಡಲಿಲ್ಲವಾದ್ದರಿಂದ ಆ ಕೀರ್ತಿಯು ಸಂಪೂರ್ಣವಾಗಿ ಶಿಷ್ಯನಿಗೇ ಸಲ್ಲಬೇಕೆಂದು ಬರೆದರಂತೆ! ಈ ಗುರುಶಿಷ್ಯ ಬಾಂಧವ್ಯವು ಹಿಂದಿನ ಋಷಿ ಜನರ ನೆನಪನ್ನು ತರುವಂತಿದೆ! ಇಂಥ ಹಿರಿಯ ಪಂಡಿತರೂ, ವಿನಯವಂತರೂ ಶಿಷ್ಯಪ್ರೇಮಿ ಗಳೂ, ಕಾರ್ಯಶೀಲರೂ ಆಗಿದ್ದು ದೇಶ ವಿದೇಶಗಳ ವಿದ್ವಾಂಸರ ಆದರ ಗೌರವ

ಗಳಿಗೆ ಪಾತ್ರರಾಗಿದ್ದ ಶ್ರೀ ವಿಷ್ಣುಸೀತಾರಾಮ ಸುಖತನಕರ್ ಅವರು ಸ್ವರ್ಗಸ್ಥ ರಾದುದು ಭರತಖಂಡಕ್ಕೇ ಅಲ್ಲ, ಇಡಿ ಪ್ರಪಂಚದ ಸಂಸ್ಕೃತ ಸಂಸ್ಕೃತಿ ಪ್ರೇಮಿ ಗಳಿಗೆಲ್ಲ ಬಹಳ ದೊಡ್ಡ ನಷ್ಟ.

ಕೆ ವಿ.

ದಿವಂಗತ ಆಟೋ ಯಸ್ಪರ್ಸನ್ (೧೮೬೦–೧೯೪೩)

ಪ್ರಪಂಚದ ಭಾಷಾ ಶಾಸ್ತ್ರವೇತ್ತರಲ್ಲಿ ಬಹು ಪ್ರಸಿದ್ಧರಾದ ಆಟೋ ಯಸ್ಪರ್ಸನ್ ಅವರು ಇದೇ ವರ್ಷದ ಮೇ ತಿಂಗಳ ಆರಂಭದಲ್ಲಿ ಸ್ವರ್ಗಸ್ಥರಾದರು. ಅವರ ನಿಧನ ದಿಂದ ಭಾಷಶಾಸ್ತ್ರದ ಆಜೀವ ಉಪಾಸಕರೊಬ್ಬರನ್ನು ಇಂದು ಪ್ರಪಂಚ ಕಳೆದುಕೊಂಡಿದೆ. ಅವರು ತಮ್ಮ ಅಭ್ಯಾಸಕ್ಕೆ ಎತ್ತಿ ಕೊಂಡ ಆ ಶಾಸ್ತ್ರವನ್ನು ನಾನಾ ಮುಖವಾಗಿ ಬೆಳೆಸಿದ್ದಾರೆ. ಇವರು ಹುಟ್ಟಿದ್ದು ಡೆನ್ಮಾರ್ಕ್ ದೇಶದ ರಾಂಡರ್ಸ್ ಎಂಬ ನಗರದಲ್ಲಿ; ಆಡುತ್ತಿದ್ದ ಮಾತು ಡಚ್‌ಭಾಷೆ; ಪರಿಶೋಧನೆಗೆ ಕೈಕೊಂಡ ವಿಷಯ ಇಂಗ್ಲಿಷು ಭಾಷೆ ಮತ್ತು ವ್ಯಾಕರಣ! ಅದರಲ್ಲಿ ಅವರು ಪರಮ ಪರಿಣತಿಯನ್ನು ಸಂಪಾದಿಸಿದರು. ಇಂಗ್ಲಿಷ್ ಮಾತಾಡುವವರು ಕೂಡ ಇವರ ಪಾಂಡಿತ್ಯವನ್ನು ಕಂಡು ಬೆರಗಾಗಿದ್ದಾರೆ.

೧೮೬೦ನೆಯ ಇಸವಿಯ ಜುಲೈ ೧೬ನೆಯ ತಾರೀಕು ಇವರು ಜನ್ಮಧಾರಣೆ ಮಾಡಿ ೧೮೯೩ರಲ್ಲಿ ಕೋಪನ್‌ಹೇಗನ್ ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಪದವಿಯನ್ನು ಪಡೆದರು. ನ್ಯೂಯಾರ್ಕಿನ ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ೧೯೦೯–೧೯೧೦ರವರೆಗೆ ಇವರು ವಿಶೇಷ ಉಪನ್ಯಾಸಗಳನ್ನು ನಡಸಿದರು. ಆಗಾಗ ಇಂಗ್ಲೆಂಡಿಗೆ ಹೋಗಿ ಅಲ್ಲೂ ಪ್ರೌಢಪ್ರವಚನಗಳನ್ನು ಮಾಡಿದರು. ಅಲ್ಲಿಂದೀಚೆಗೆ ತಮ್ಮ ವಿಶ್ವವಿದ್ಯಾನಿಲಯದಲ್ಲೇ ಅವರು ನೆಲಸಿ ಅನೇಕ ಗ್ರಂಥಗಳನ್ನು ರಚಿಸಿದರು.

ಇವರು ಬರೆದಿರುವ ಗ್ರಂಥಗಳು ಮತ್ತು ಲೇಖನಗಳು ಸುಮಾರು ೪೦೦ ಇವೆ. ಅವುಗಳಲ್ಲಿ ಬಹು ಮುಖ್ಯವಾದುವು ಈ ಗ್ರಂಥಗಳು: (1) ಇಂಗ್ಲಿಷ್ ಭಾಷೆಯ ಬೆಳವಣಿಗೆ ಮತ್ತು ರಚನೆ *Growth and Structure of the English Language* 1905; (2) ಭಾಷೆಯ ಪ್ರಗತಿ *Progress in Language* 1894: (3) ಶಿಕ್ಷಾ ಶಾಸ್ತ್ರ *Phonetics*, 1897-99; (4) ಭಾಷೆ, ಅದರ ಮೂಲ, ಸ್ವಭಾವ ಮತ್ತು ಬೆಳವಣಿಗೆ *Language, Its Nature, Development and Origin* 1922; (5) ವ್ಯಾಕರಣಶಾಸ್ತ್ರದ ತತ್ವ *Philosophy of Grammar*, 1924. ಈ ಗ್ರಂಥ ಗಳಲ್ಲಿ ಅನುಸರಿಸುವ ಮಾರ್ಗವೂ ನಿರೂಪಿಸಿರುವ ವಿಷಯಗಳೂ ಶಾಸ್ತ್ರೀಯವಾದ

ವಿಚಾರಪದ್ಧತಿಯೂ, ಹೊಸದಾಗಿ ಸೂಚಿಸಿರುವ ಅಂಶಗಳೂ ಎಲ್ಲಾ ಭಾಷೆಗಳಿಗೂ ಸಾಮಾನ್ಯವಾಗಿ ಅನ್ವಯಿಸುತ್ತವೆ. ಅವುಗಳ ಅಭ್ಯಾಸದಿಂದ ಉಂಟಾಗುವ ಹೊಸ ದೃಷ್ಟಿ ನಮ್ಮ ಭಾಷಾಚರಿತ್ರೆ ವ್ಯಾಕರಣಗಳ ಕ್ರಮವನ್ನು ತಿರುಗಿ ವಿಮರ್ಶೆಮಾಡುವ ಪ್ರೇರಣೆಯನ್ನು ಮೂಡಿಸುತ್ತದೆ.

ಅವರು ಒಣ ವೈಯಾಕರಣರಲ್ಲ. ಭಾಷೆಯನ್ನು ಸುಲಭವಾಗಿ ಕಲಿಯುವುದಕ್ಕೆ ಉತ್ಕೃಷ್ಟವಾದ ಮಾರ್ಗ ಯಾವುದೆಂಬುದನ್ನು ಕಂಡುಹಿಡಿಯುವುದು ಅವರ ಉದ್ದೇಶ. ಇದಕ್ಕಾಗಿ ಅವರು ಭಾಷೆಯ ಮೂಲವನ್ನೂ ಬೆಳವಣಿಗೆಯನ್ನೂ ಬೆದಕಲು ಹೊರಟರು. ಡೆನ್ಮಾರ್ಕ್ ದೇಶದಲ್ಲಿನ ಭಾಷಾ ಬೋಧನೆಯ ಕ್ರಮವೆಲ್ಲ ಯಸ್ಪರ್ಸನ್ ಅವರು ಸೂಚಿಸಿದ ಕ್ರಮದಲ್ಲಿ ಇಂದು ನಡೆಯುತ್ತಿದೆ.

ಇವರ *Philosophy of Grammar* ಎಂಬ ಗ್ರಂಥ ಹಲವು ದೃಷ್ಟಿಗಳಿಂದ ಮುಖ್ಯವಾದದ್ದು. ಇವರು ತಮಗೆ ಪರಿಚಿತವಾಗಿದ್ದ ಐರೋಪ್ಯ ಭಾಷೆಗಳ ವ್ಯಾಕರಣಗಳನ್ನೆಲ್ಲ ಸಮಷ್ಟಿದೃಷ್ಟಿಯಿಂದ ನೋಡಿ ವ್ಯಾಕರಣ ಶಾಸ್ತ್ರದ ಜೀವವೇನೆಂಬುದನ್ನು ನಿರೂಪಿಸಿರುವರು. ಪ್ರತಿಯೊಂದು ಭಾಷೆಯನ್ನು ಆಡುವ ಜನರ ಮನೋಧರ್ಮ ಅವರವರ ವ್ಯಾಕರಣಗಳಲ್ಲಿ ಅಡಕವಾಗಿದೆ. ಮನುಷ್ಯನ ಬುದ್ಧಿ ಕಾಲದೇಶಗಳ ತಡೆಯಿಲ್ಲದೆ ಭಾಷೆಯ ಬೆಳವಣಿಗೆಯಲ್ಲಿ ಅನುಸರಿಸಿರುವ ಕ್ರಮ ಸಾಮಾನ್ಯವಾಗಿ ಒಂದೇ ರೀತಿಯದೆಂದು ಅವರು ತೋರಿಸಿದ್ದಾರೆ. ಭಾಷೆಯ ಚರಿತ್ರೆಯನ್ನು ಬುದ್ಧಿಯ ಚರಿತ್ರೆಯೆಂದೂ ಹೇಳಬಹುದು. ಯಾವುದಾದರೂ ಭಾಷೆಯ ವ್ಯಾಕರಣ ರಚನೆಗೆ ಸಾಮಾನ್ಯವಾಗಿ ಗ್ರಾಂಥಿಕ ಪ್ರಯೋಗಗಳನ್ನು ಆಧಾರವಾಗಿಟ್ಟುಕೊಳ್ಳುವುದು ರೂಢಿಯಾಗಿದೆ. ವ್ಯವಹಾರದಲ್ಲಿಲ್ಲದ ಭಾಷೆಯ ವಿಷಯದಲ್ಲಿ ಇದು ಸರಿಯಾದರೂ ಅದು ಜೀವಂತವಾಗಿದ್ದಲ್ಲಿ, ಎಂದರೆ ವ್ಯವಹಾರಿಕವಾಗಿದ್ದಲ್ಲಿ, ಅದರ ಆ ಸ್ವರೂಪವನ್ನು ಅವಶ್ಯವಾಗಿ ಗಮನಿಸಬೇಕೆಂದು ಯಸ್ಪರ್ಸನ್ ಅವರು ಒತ್ತಿ ಹೇಳಿದ್ದಾರೆ. ಇಂದು ನಡೆಯುತ್ತಿರುವ ವ್ಯತ್ಯಾಸಗಳೂ ಹಿಂದೆ ನಡೆದಿರುವುವೂ ಯಾವುದಾದರೂ ನಿಯಮಗಳಿಗೆ ಒಳಪಟ್ಟಿರಬೇಕೆಂಬ ಅಂಶ ಖಚಿತವಾಗಿ ತಿಳಿಯುತ್ತದೆ. ಇದರಿಂದ ವ್ಯಾಕರಣ ರಚನೆಗೆ ಇದು ಬಹು ಸಹಾಯಕರ. ವ್ಯಾಕರಣದಲ್ಲಿ ಒಂದು ಭಾಷೆಯ ಲಕ್ಷಣವನ್ನು ಹೇಳುವುದು ಮುಖ್ಯವಾದರೂ ಕಲಿಯುವವನ ದೃಷ್ಟಿಯಿಂದಲೂ ಅದನ್ನು ರಚಿಸಬೇಕು. ಅದು ಅವನಿಗೆ ಕ್ಲೇಶವಿಲ್ಲದ ಮಾರ್ಗವನ್ನು ಕಾಣಿಸಬೇಕು, ಬೇಸರಗೊಳಿಸದೆ ಸಾಮಾನ್ಯ ಲಕ್ಷಣಗಳನ್ನು ಸಂದೇಹಕ್ಕೆ ಅವಕಾಶವಿಲ್ಲದಂತೆ ತಿಳಿಸಬೇಕು. ಒಬ್ಬನ ಮಾತೃಭಾಷೆಯ ವ್ಯಾಕರಣದ ಅಭ್ಯಾಸದಲ್ಲಿಯೇ ಅವನಿಗೆ ಇತರ ಭಾಷೆಗಳ ವ್ಯಾಕರಣಗಳ ಸಾಮಾನ್ಯ ಪದ್ಧತಿಯೂ ಹಸ್ತಗತವಾಗುವಂತಿರ

ಬೇಕು. ಇವೇ ಮುಂತಾದ ಹಲವು ತತ್ವಗಳ ಪ್ರತಿಪಾದನೆ ಈ ಗ್ರಂಥದಲ್ಲಿದೆ. ವ್ಯಾಕರಣ ಶಾಸ್ತ್ರದಲ್ಲಿ ಹೊಸಮಾರ್ಗವುಂಟೆಂಬುದು ಇದರಿಂದ ವ್ಯಕ್ತವಾಗುತ್ತದೆ. ಅದನ್ನು ಕಾಲಕಾಲಕ್ಕೆ ವಿಮರ್ಶೆಗೆ ಒಳಪಡಿಸಿ ತಿದ್ದುವ ಆವಶ್ಯಕತೆ ಇದ್ದೇ ಇದೆ. ಈ ಗ್ರಂಥವೊಂದರಿಂದಲೇ ಯಸ್ಪರ್ಸನ್ ಅವರ ವ್ಯಕ್ತಿತ್ವವನ್ನು ಮನಗಾಣಬಹುದು. ಇದು ಅವರ ವಿದ್ವತ್ತಿನ ಪರಿಣತ ಫಲವಾಗಿದೆ. ಅವರು ತೋರಿಸಿರುವ ಹಾದಿ ಮುಂದಿನವರ ಅನ್ವೇಷಣೆಗೆ ಎಂದೂ ಸವೆಯದೆ ನಿಲ್ಲಲಿ.

ಡಿ.ಎಲ್.ಎನ್.

# ಪ್ರಾಚ್ಯಲೇಖನಾವಳಿ

A.B.O.R.I.—XXIV—1. 2. 1943

1. The Influence of Popular Dialects on Sanskrit—S. M. KATRE.
2. The supposed identification of Udayana of Kausambi with Udayin of Magadha—LILADHAR B. KENY.

   The two are different, ruling at two different places Vatsa and Magadha respectively, and at two different periods. The successors and predecessors of these two were (also) different.

3. The Authorship of the Mahabharata—DR. N. J. SHENDE.

   —The Brahminic families forming the Bhrgu and Angirasa element is not only very prominent in the epic in its present form but is also closely associated with the original Saga of the Bharatas. . . . The prevalence of the Bhagavata Dharma and the Dharmaniti element in the MHB. was due to the revising hand of the members of (this) family. . . . The methods of magical warfare were . . . introduced mainly by these teachers. . . . (They) were evidently great religious reformers. (Notice that) Bhrgu, Sukra, Brhaspati and Rama are mentioned as the Vibhutis of Krishna. . . . Increasing the bulk of the MHB. by the addition of episodes must have been (their work). (Thus) the fluid text of the MHB. (came) under their influence. . . . Saunaka is a Bhargava. . . . (The author concludes): The Bhrgvangirases were jointly responsible for the final redaction of the MHB., for making it a Dharmasastra and Nitisastra, and an Encyclopædia of the Brahminical tradition and for preserving its unity in the midst of its manifold diversity.

   (Sums up with seven arguments.)

Miscellanea

1. An internal evidence as regards the Age of the Bhagavadgita. —M. V. KIBE.

   Argues that on the strength of the hemistichs

   ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿಯಾನ್ತಿ ಪರಾಂಗತಿಂ || and
   ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾಭಕ್ತಾರಾಜರ್ಷಯಸ್ತಥಾ ||

   the B.G. might be established as Post-Buddhist.

2. The Silver Jubilee Items.
3. The Message of the Naimisaranya—DR. C. KUNHAN RAJA.
4. The Original Inhabitants of India: The black and the white races—A. P. KARMARKAR.

**Indian Historical Quarterly**—Vol. XIX, 2. June, 1943.

1. Bhavabhuti—S. K. DE.
2. Metrical and Grammatical lapses due to the imposition of Rules of Modern Grammar and Prosody on Ṛks.

**Journal of the Sri Venkatesvara, O.R.I., Tirupati**—IV. I.

Bhasa's Prakrit—P. V. RAMANUJASWAMI.

**Journal of the Bombay Branch of the Royal Asiatic Society**—Vol. 18.

The Family Hymns in the Family Mandalas—H. D. VELANKAR.
Yajnaphalam: A newly discovered drama of Bhasa—A. D. PUSALKAR.

**Journal of Indian History**—Vol. XXII, 1. April, 1943.

The Trivikrama Avatara in Mahabalipuram—TIRUVENKATACHARI.

**Poona Orientalist**—Vol. VII, 3–4.

The Ṛbhus and the four Soma Cups—Dr. R. SHAMA SASTRI.

**uarterly Journal of the Mythic Society**—Vol. XXXIII, 3–4. April, 1943.

The Story of the Asuras—RAO SAHEB N. K. VENKATESHAM PANTULU.
Education in the Vedic Age—DR. C. KUNHAN RAJA.

**ಶಿವಾನುಭವ**—XVII, 2. August, 1943.

ಬಸವೇಶ್ವರನ ಚರಿತ್ರೆ—ರಾ|| ಬ|| ಪಿ. ಜಿ. ಹಳಕಟ್ಟಿ.
ಶಿವಾನುಭವ ಶಬ್ದಕೋಶ—ಸಿ. ನಾ. ಮಹಂತಣ್ಣನವರು.
ಸಂಕೀರ್ಣ ವಚನಗಳು—(ಸೊಡ್ಡಳ ಬಾಚರಸ, ಹಡಪದ ಅಪ್ಪಣ್ಣ).
ವೀರಶೈವ ರಾಜಮನೆತನಗಳ ಚರಿತ್ರೆ—ಮುಂದುವರಿದದ್ದು.

**ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿ ಪತ್ರಿಕೆ**—III, 2.

ವೀರಶೈವ ವಚನಗಳಲ್ಲಿಯೂ ಅವುಗಳ ಅಂಕಿತಗಳಲ್ಲಿಯೂ ದೊರೆಯುವ ಐತಿಹಾಸಿಕಾಂಕಗಳು—ಶ್ರಿ. ಚೆನ್ನಪ್ಪ ಉತ್ತಂಗಿ.
ಸ್ಥಲಕಟ್ಟು—ಶ್ರೀ. ವೀ. ರು. ಕೊಪ್ಪಳ.
ಶ್ರೀ ಬಸವೇಶ್ವರ—ಶ್ರಿ. ಸದಾಶಿವ ಶಿವಾಚಾರ್ಯಸ್ವಾಮಿಗಳು.
ಹೊಸ ಅಂಕಿತದ ವಚನ—ಶ್ರೀ. ಚೆನ್ನಪ್ಪ ಉತ್ತಂಗಿ.

**Journal of the Literary Committee of the L.E. Association, Dharwar.**—July, 1943—Vol. III, 2.

1. Asuric Civilization in the Asuric West.—DR. MOHAN SINGH.
2. Omar Khayyam (II).—A. N. KRISHNA RAO.
3. Soonya Sampadane.—V. C. YAGATI.

**The Jaina Antiquary**—IX. 1. June, 1943.

ವಿಜಯನಗರಕೇ ಜೈನ ಶಿಲಾಲೇಖ—ಶ್ರೀ ಕಾಮತಾ ಪ್ರಸಾದ ಜೈನ.

ತುಲು ದೇಶಮೇ ಜೈನಧರ್ಮ—ಡಾ|| ಬಿ. ಎ. ಸಾಲೆತೋರ್.

The Jaina Theory of Anekanta Vada.—K. C. BHATTACHARYA.

Jaina and Buddhistic Studies.—DR. A. N. UPADHYE.

Advent of Jainism.—PROF. D. S. TRIVEDA.

**University of Ceylon Review.**—Vol. I, 1 April, 1943.

The Enunciative Vowel in Dravidian—K. KANAPATHI PILLAI.

There seems to be two groups of words in the Dravidian languages in which the vowel endings *u* and *a* occur. In one group these vowels behave in the same way as the rest of the vowel sounds of the languages when they are combined with other sounds. But in the other group they behave differently. An attempt is made here to prove that these vowel sounds as occurring in the second group are later additions.

Considers *u* endings in nāku 'a cow', varaku 'a kind of grain', teḷku 'a flea', eḥku 'steel', kokku 'a crane' and kuranku—'a monkey'.

In kātu, kaṭṭu, kattu Murukku and teruṭṭu when the final u is pronounced without properly sounding the lips, the words are nouns; when . . . pronounced properly sounding the lips they become imperatives.

Among words with reduced u sounds . . . one group has u in the initial syllable the other . . . at the end of the word. In the 1st the reduced quantity (may be due to) laziness of pronunciation.

(Proto Dravidian) may have had words ending in plosives . . . Tamil seems to have preserved the final plosive without any changing by suffixing this vowel . . . Later on extended to other consonants.

a also seems to be used as enunciative.

Consider

Elision of a when a vowel follows it in:

tuvaitta + ampi*r* > tuvaitt—ampi*r* (Puram 4)

tita*r*uka + e*n*a > tita*r*uka - e*n*a (Cilap 1-62)

unta + iṭam > unt - iṭam (Tirukkovai 223)

also colloquial forms like

cita*r*a + aṭitta*n* > cita*r*—aṭittan

(Possibly) the original vowel . . . used for enunciation might be a type of vowel sound . . . capable of being confused as u or a.

2. Some Notes on Geiger's Grammar of the Sinhalese Language.—D. E. Hettiaratchi.
3. References to Buddhist Sanskrit writers in Sinhalese Literature.—C. E. Godakumbura.

Among others Aśvaghosa, Ārya Sūra, Vasubandhu, Santideva, Candragomin.

**Notes and Queries.**—Some observations on the Intervocalic Sonant in Sinhalese Inscriptions—D. J. Wijayaratne.

---



ಕದಂಬ ದುದ್ದರಸನ ಮಹಿಷಿ ಮೇಚಲದೇವಿಯ

**ಹಾರುವ ಬೆಲುಹೂರು ಅಗ್ರಾಹಾರದ ಶಾಸನ**

ಕ್ರಿ.ಶ. ೧೦೯೫



**ಹಾರುವ ಬೆಲುಹೂರು** (ಹಾಳೆ ಬೇಲೂರು)

**ವಾಸುದೇವ ಮೂರ್ತಿ**

(ಈಚಿನ ಕದಂಬರ ಕಾಲ)

ಪ್ರಬುದ್ಧ

# ಕರ್ಣಾಟಕ

ಸ್ವಭಾನು ಸಂವತ್ಸರ — ೯೭ — ದೀಪಾವಳಿಯ ಸಂಚಿಕೆ

## ಪ್ರಾರ್ಥನೆ

ಕನಸಿನೊಂದು ಕಾಡಿನಲ್ಲಿ
ಸರಸಿಯೊಂದು ಮೆರೆಯಲಿ;
ಶಶಿಯ ತುಂಬು ಬೆಳಕಿನಲ್ಲಿ
ದೋಣಿಯೊಂದು ಕೆರೆಯಲಿ!
ಕವಿದ ಕಾನು, ಬುವಿಯು, ಬಾನು
ಯೋಗಿವರರ ಹೋಲಲಿ!
ಅಲ್ಲಿ ನನ್ನ ಮನವು ತನ್ನ
ಸ್ವೇಚ್ಛೆಯಂತೆ ತೇಲಲಿ!
ಅಲ್ಲಿ ಗಗನದನಂತತೆಯ-
ನೆನ್ನ ಹೃದಯ ಬೆಳಗಲಿ;
ನಿನ್ನ ದಯಾಂಬುಧಿಯೊಳೆನ್ನ
ಮನೋವ್ಯಥೆಯು ಮುಳುಗಲಿ!
ನಿನ್ನ ತಂಪು ಗಾಳಿಯೆನಗೆ
ಶಾಂತಿಯುಸಿರನೊಯ್ಯಲಿ;

ನಿನ್ನ ಸುಮುದ ಕಂಪೊಳೆನ್ನ
ಬಾಳು ನಿದ್ರೆಗೈಯಲಿ!
ಖಗಗಳಿನಿದು ಕೊರಳೊಲುಲಿದು
ಮಧುರಗಾನ ಮಾಡಲಿ;
ಅದರ ಸೊದೆಯ ಕುಡಿಯಲೆದೆಯ
ದುಗುಡವೆಲ್ಲ ಬಾಡಲಿ!
ದೇವ, ಕಡೆಗೆ ನಿನ್ನ ಎಡೆಗೆ
ನನ್ನ ದೋಣಿ ಜಾರಲಿ!
ಅರಳಿದೆನ್ನ ಭಕ್ತಿಯನ್ನ
ನಿನ್ನ ಅಡಿಗೆ ತೂರಲಿ!

ರಾಮರಾವ್.

## ವಿಶ್ವಭಿಕ್ಷು

ಸ್ವಾರ್ಥತಾ ಸೂತ್ರಂಗಳಿಂ ನೆಯ್ಯುತಿದೆ ಸೃಷ್ಟಿ
ಪರಾರ್ಥತಾ ಶುಭ್ರ ದೇವಾಂಗಮಂ. ವ್ಯಕ್ತಿ
ಪಡುವ ಗೆಯ್ಮೆಗೆ ತನತೆ ಸುಖಸಾಧನಾಸಕ್ತಿ
ಗಂತವ್ಯಮಾಗಿರಲದನ್ ಬ್ರಾಹ್ಮೀ ಸಮಷ್ಟಿ
ವಿಶ್ವಪ್ರಯೋಜನಕೆ ಪಾಸು ಪೊಕ್ಕಂ ಗೆಯ್ದು,
ಜೀವರಿಗೆ ಸ್ವಾತಂತ್ರ್ಯ ಸಂಭ್ರಾಂತಿಯಂ ನೀಡಿ,
ತನ್ನ ಇಚ್ಛಾರಥಯುಗಕ್ಕವರ್ಗಳಂ ಪೂಡಿ
ರಕ್ಷಿಸುತ್ತಿದೆ ಜಗತ್ ಕಲ್ಯಾಣಮಂ ನೆಯ್ದು.
ಹೇ ವ್ಯಕ್ತಿ, ನಿನ್ನ ತ್ಯಾಗದ ತಿರುಪೆಗಾ ಶಿವಂ
ಜೋಳಿಗೆಯನಾಂತು ಭಿಕ್ಷಾಟನೆಗೆ ಹೊರಟಿಹನೆ,
ಹೇಳ್, ಸ್ವಯಂ ತ್ಯಾಗೀಶ್ವರಂ? ತನ್ನ ಸಂತಸಕೆ
ಪ್ರಾಣಿ ಪ್ರಾಣಿಯನಪ್ಪಿಕೊಳೆ ಸಂತತಿಯ ಭವಂ
ತಾನಪ್ಪುದನಿವಾರ್ಯಮುಪಫಲಂ! ಪ್ರಕೃತಿಯನೆ
ಕೃತಿಗೆಯ್ದವಗೆ ನಿನ್ನ ಕೃತಿ ಭಿಕ್ಷೆಯೇನ್ ರಸಕೆ?

ಕುವೆಂಪು.

# ಶೂದ್ರತಪಸ್ವಿ

## ದೃಶ್ಯ ೧

[ಶಂಬೂಕಾಶ್ರಮವಿರುವ ಅರಣ್ಯದ ಬಹಿರ್ವಲಯದಲ್ಲಿ ಆಶ್ರಮದ ಮಹಾದ್ವಾರದಲ್ಲಿ ಕಾವಲು ನಿಂತಿರುವಂತಿದೆ ಒಂದು ಬೃಹದಾಕಾರದ ವಟತರು. ಶಾಂತಿಗೆ ತವರುವೀಡಾಗಿದ್ದ ಆ ವನವು, ನೋಡೆ ನೋಡೆ, ಕ್ಷುಬ್ಧಶೀಲವಾಗುತ್ತದೆ. ಬಲ್ಗಾಳಿ ಬೀಸಿ, ಹಕ್ಕಿ ಚೀರಿಡುತ್ತವೆ. ಕೊಂಬೆಗೆ ಕೊಂಬೆ ಉಜ್ಜಿ ಆರ್ತಧ್ವನಿಯನ್ನು ಹೋಲುವ ಚೀತ್ಕೃತಿಗಳುಣ್ಮುತ್ತವೆ. ಮೃಗತತಿ ಗಾರಾಗಿ ದೆಸೆದೆಸೆಗೆ ಓಡುತ್ತವೆ. ದೃಷ್ಟಿಗೆ ಕೇಂದ್ರವಾಗಿ, ದೃಶ್ಯದ ಮುಂಭಾಗದಲ್ಲಿರುವ ಆ ಮಹಾ ವಟತರುವೂ ಕ್ಷೋಭೆಗೆ ಸಿಕ್ಕಿ ಅಸ್ಥಿರವಾಗುತ್ತದೆ. ಎಲೆ ಬಳಬಳನೆ ಉದುರುತ್ತವೆ. ಬಲ್ಗಾಳಿಗೆ ಧೂಳಿದ್ದು ಇದ್ದಕಿದ್ದಂತೆ ವನವೆಲ್ಲವೂ ಮಸುಕಾಗುತ್ತದೆ. ವಟತರುವೂ ಮಂಜುಮಂಜಾಗಿ, ಮಾಯ ವಾದಂತಾಗಿ, ಅದರ ಸ್ಥಾನದಲ್ಲಿ, ಒಯ್ಯೊಯ್ಯನೆ, ಆ ಮರದನಿತೆ ಭೀಮಾಕಾರನಾದ ಒಬ್ಬ ವೃಕ್ಷ ಭೈರವನು ದೃಗ್ಗೋಚರವಾಗುತ್ತಾನೆ. ತರುಶಾಖೆಗಳಂತಿರುವ ಬಹುಸಂಖ್ಯೆಯ ತೋಳುಗಳಲ್ಲಿ ತ್ರಿಶೂಲಾಯುಧ ಪಂಕ್ತಿ ಸಾಲ್ಗೊಂಡು ಸೇನಾವ್ಯೂಹದಂತೆ ಭಯಂಕರವಾಗಿರುತ್ತದೆ. ಕ್ರುದ್ಧನೆಂಬಂತೆ ಬದ್ಧಭ್ರುಕುಟಿಯಾಗಿ ಉರಿಗಣ್ಣುಗಳನ್ನು ಸುತ್ತಲೂ ಹೊರಳಿಸಿ ನೋಡುತ್ತಾನೆ. ತನಗೆ ತಾನೆಂಬಂತೆ ಮೊಳಗುತ್ತಾನೆ.]

ಭೈರವ.— ಏನವಿನಯಂ ಇಂದೀ ಪ್ರಕೃತಿ ಸಾಧ್ವಿಗೆ!
ಉಗ್ರಧೀ ಶಂಬೂಕಯೋಗಿಯಂ ಲೆಕ್ಕಿಸದೆ,
ವೃಕ್ಷಭೈರವನೆನ್ನ ರಕ್ಷೆಯಂ ಕಡೆಗಣ್ಚಿ,
ಅಂಡಲೆಯುತಿಹಳೀ ತಪೋವಿಪಿನಮಂ.
ಮಥನ ಕರ್ಮಕೆ ಸಿಲ್ಕಿದಂಬುಧಿಯ ತೆರೆಯವೊಲ್
ತರತರಸೆ ನಡುಗುತಿದೆ ಕಾಡುಮಲೆ. ಒರಲುತಿವೆ
ಪಕ್ಷಿಗಳ್. ಕೀಚಕಧ್ವಾನಗಳ್ ಕರ್ಕಶಂ
ಕೂಗುತಿವೆ. ಕಾಲ್ಗೆಟ್ಟುವೋಡುತಿವೆ ಮೃಗಸಮೂಹಂ.
ಏಂ ನಿಮಿತ್ತಮೊ ಪರಿಕಿಸಲ್‌ವೇಳ್ಕುಂ.
ಧೂರ್ತಳೀ ದುಷ್ಕೃತಿಗೆ ಶೃಂಖಲೆಯನಿಕ್ಕದಿರೆ
ತಪಸ್ವಿಯಾಗ್ರಹಕೆ ಪಕ್ಕಾದಪೆನ್.

[ಮತ್ತೆ ಸುತ್ತಲೂ ನೋಡಿ ಧ್ಯಾನಿಸುತ್ತಾನೆ. ತೆಕ್ಕನೆಚ್ಚತ್ತವನಂತೆ ಇದಿರುನೋಡಿ ಅಧಿಕಾರ ವಾಣಿಯಿಂದ ಆಜ್ಞಾಪಿಸುತ್ತಾನೆ.]

ನಿಲ್ ನಿಲ್! ಅಲ್ಲಿಯೆ ನಿಲ್!
ಹತ್ತೆ ಸಾರದಿರ್! ಅತ್ತಲ್ ತೊಲಗತ್ತಲ್! ಅತ್ತಲ್!

[ನೋಡುತ್ತಿರುವಂತೆಯೆ ಏನೂ ಇಲ್ಲದೆ ಶೂನ್ಯವಾಗಿದ್ದ ಬಯಲು ನಸುಗಪ್ಪಾಗುತ್ತದೆ. ಕರಿಮುಂಜು ದಟ್ಟಯಿಸುತ್ತದೆ. ಬರಬರುತ್ತಾ ಗಟ್ಟಿಯಾಗುತ್ತದೆ. ಕಡೆಗೆ ಮೃತ್ಯುವಿನ ಕರಾಳಾಕೃತಿ ರೂಪುಗೊಂಡು ಸ್ಪಷ್ಟಾಸ್ಪಷ್ಟವೆಂಬಂತೆ ನಿಲ್ಲುತ್ತದೆ.]

ಆರ್ ನೀನ್? ನಿನಗೇನಿಲ್ಲಿ ಕಜ್ಜಂ, ಘೋರಮುಖಿ?

ಮೃತ್ಯು.— (ಭಯಂಕರಧ್ವನಿಯಿಂದ)
ಪೆಸರ್ಗೇಳ್ವ ಕೆಚ್ಚಿರ್ಪುದೇನ್ ನಿನಗೆ?

ಭೈರವ.— (ಉಗ್ರನಾಗಿ)
ಇರ್ಪುದರಿಂದಮೆ ಕೇಳ್ದೆನ್, ವಿಕೃತವದನೆ,
ಅಧಿಕಪ್ರಸಂಗಿಯಾಗದಿರ್!

ಮೃತ್ಯು.— ನನ್ನ ನಾಮಶ್ರವಣಮಾತ್ರದಿಂ
ತನ್ನ ಗವಿಗೊರಲ್ಗಳಿಂದೊರಲ್ವುದಯ್ ನರಕಂ;
ಗಿರಿಗಹ್ವರಗಳಿಂ ರೋದಿಸುವುದೀ ಪೃಥ್ವಿ;
ಬೆಬ್ಬಳಿಸಿ ಬೆಳ್ಪೇರ್ವುದಯ್ ಸಗ್ಗದ ಮೊಗಂ.
ಪೆಸರ ಭೀತಿಗೆ ಬೆಚ್ಚಿ ಕಂಪಿಪುದೊ ಮೂಜಗಂ!

ಭೈರವ.— ನಿನಗಂಜದಾನ್ ನಿನ್ನ ಪೆಸರ್ಗಳ್ಕುವೆನೆ?
ಪೇಳ್ ಬೇಗದಿಂದಲ್ಲದಿರೆ ನೀನಿನ್ನೆಗಂ
ಕಾಣದನುಭವವನುಣ್ಣಿಪೆನ್!

ಮೃತ್ಯು.— ಆ ಗರ್ವಮಿರ್ಕೆ. ಕೇಳ್:
ಮೃತ್ಯುವೆನ್! ದುರ್ಮೃತ್ಯುವೆನ್!
ಪುಗಲ್ ಬಯಸಿ ಬಂದಿರ್ಪೆನ್
ಈ ತಪೋವನಕ್ಕೆ!

ಭೈರವ.— (ವಿಕಟಹಾಸ್ಯದಿಂದ ನಕ್ಕು)
ಕೆಟ್ಟುದಾವುದವ್ ನಿನಗೀಗಳ್?
ಬಟ್ಟೆಯೊ ಬಗೆಯೊ?

ಮೃತ್ಯು.— ನೀನಾರ್ ಕೇಳಲ್ಕೆ?

ಭೈರವ.— ತಪೋವನಮಂ ರಕ್ಷಿಪ್ಪ ವೃಕ್ಷಭೈರವನೆನ್!—

ಅಮೃತಮೀ ಕ್ಷೇತ್ರಮ್ :
ನಿನಗಿದು ದಿಟಂ ಪುಗಲ್ ತಾಣಂ!

ಮೃತ್ಯು.— ಮೂಲೋಕದೊಳ್ ಮೀಸವೊತ್ತನನ್ ಕಾಣೆನ್
ನನ್ನನ್ ತಡೆವ ಗಂಡನನ್!
ನೀನ್ ತಡೆವಯ್, ವೃಕ್ಷವಾಸಿ?

ಭೈರವ.— (ಕಟುಹಾಸ್ಯದಿಂದ)
ಆಃ! ಮಾಜೆಲ್ವುಪೆಣ್ಣಲ್ತೆ ನೀನ್?
ನಿನಗೆ ಸೋಲದರುಂಟೆ? — ಆದೊಡಂ ಕೇಳ್.
ಮಹರ್ಷಿ ಶಂಬೂಕನುಜ್ವಲ ತಪಃಪ್ರಭಾವದಿನ್
ನನಗೆ ಲಭಿಸಿರ್ಪೊಂದು ಕರ್ತವ್ಯ ಧರ್ಮಬಲದಿಂ
ನಿನ್ನನ್, ಒರ್ ಪಜ್ಜೆ ಮುಂದಿಡದವೊಲ್,
ತಡೆಗಟ್ಟಲ್ ಆನ್ ಸಮರ್ಥನೆನ್.
ಮೀರಿ ಮುಂಬರಿಯಲೆಳಸಿದರೆ
ಈ ನನ್ನ ತೋಳ್ಗಳೀ ತ್ರಿಶೂಲ ಪಂಕ್ತಿಗಳ್,
ತೋಳಗಳ್ ಕುರಿಯನ್ ಅರೆಯಟ್ಟುವೋಲ್,
ಅಟ್ಟುವುವು ನಿನ್ನಾಲಯಕೆ ನಿನ್ನನ್!

ಮೃತ್ಯು.— ಲಯಮೆ ನಾನ್. ನನಗೆಲ್ಲಿ ಲಯಮಯ್?

ಭೈರವ.— ಬೆಳ್ಪರೋಲಾಡದಿರ್ ತಿಳಿಯದೆ ಪದಾರ್ಥಮಂ.

ಮೃತ್ಯು.— ಕೆರಳ್ಚದಿರ್ ಅನರ್ಥಮಂ!

(ಮೃತ್ಯುಛಾಯೆ ಮುನ್ನುಗ್ಗಲೆಳಸುವುದು)

ಭೈರವ.— (ರೌದ್ರವಾಣಿಯಿಂದ)
ಮಹರ್ಷಿ ಶಂಬೂಕದೇವನಾಣೆ!
ಕಲ್ಲವೊಲ್ ನಿಲ್ ನೀನ್!

[ತನ್ನ ತೋಳುಗಳಲ್ಲಿ ಹೊಳೆಯುವ ತ್ರಿಶೂಲಗಳನ್ನು ಮೃತ್ಯುವಿನ ಮುಂದೆ ಬೇಲಿಗಟ್ಟುವನು]

ಮೃತ್ಯು.— ಎಲೆ ಮರುಳೆ, ಕೇಳ್:
ಶಂಬೂಕ ಋಷಿಯ ಗೌರವಕಾಗಿ ಬಂದೆನಯ್,
ಧರ್ಮದೇವತೆಯಾಜ್ಞೆಯಿಂ.
ನೀನಾತನ ಮೆಯ್‌ಗಾವಲ್;
ನಾನುಸಿರ್ ಗೌರವಕೆ ಕಾವಲಯ್!
ತಿಳಿದು ತೆರೆ ಬಟ್ಟೆಯುಂ. ಈಡಾಗದಿರ್ ನಗೆಗೆ!.

ಭೈರವ.— (ಅಚ್ಚರಿವಟ್ಟು)
ಧರ್ಮದೇವತೆಯಾಜ್ಞೆ ? ಋಷಿಯ ಗೌರವಕಾಗಿ ?
ಮೃತ್ಯುಗೆ ತಪೋವನ ಪ್ರವೇಶಮ್ ? —
ಜಟಿಲಮಿಾ ವಾರ್ತಾ ಕಂಟಕ ನಿಕುಂಜದೊಳ್
ಸಿಲ್ಕಿತವ್ ನನ್ನ ಬಗೆ. ಬಿಡಿಸದನ್ ಮೊದಲ್ !

ಮೃತ್ಯು.— ಇಂದು ಪೊಳ್ತರೆಯಿನ್, ಆರಾರ್ಗೆ,
ಈ ಬನಕೆ ತೆರವಿತ್ತೆ, ಪೇಳ್.

ಭೈರವ.— ಸೂರ್ಯದೇವನ ಕಿರಣದೂತರ್ಗೆ.

ಮೃತ್ಯು.— ಮೇಣ್ ?

ಭೈರವ.— ಪುಣ್ಯ ಲಕ್ಷ್ಮಿಯಂ ಕೂಡಿ
ವಸಂತಗಂಧಾನಿಲಂ ವೆರಸಿ ಬಂದಾ
ಶ್ರೀರಾಮಚಂದ್ರಮನ ಕೀರ್ತಿಕಾಂತೆಗೆ.

ಮೃತ್ಯು.— ಮೇಣ್ ?

ಭೈರವ.— ಪ್ರಕೃತಿ ದೇವಿಯ ದೈನಂದಿನ ಪರಿವಾರಕೆ.

ಮೃತ್ಯು.— ಮೇಣ್ ?

ಭೈರವ.— ಪಾರ್ವಸೊರ್ವನ್ ತನ್ನ ಣುಗಂ ವೆರಸಿ
ಪೂಜಾವಿಧಿಗೆ ಪೂದಿರಿಯಲೆಂದು
ಒಳಪೊಕ್ಕನೈಸೆ.

ಮೃತ್ಯು.— ಅದೆ ನಿಮಿತ್ತಮಿಾ ನನ್ನ ಯಾತ್ರೆ.

ಭೈರವ.— ಕಾರಣಂ ?

ಮೃತ್ಯು.— ಗೆಯ್ದನ್ ಅಧರ್ಮಮಂ !

ಭೈರವ.— ಎಂತು ?

ಮೃತ್ಯು.— ಅವಜ್ಞೆಯಿಂ !

ಭೈರವ.— ಆರ್ಗೆ ?

ಮೃತ್ಯು.— ಮತ್ತಾರ್ಗೆ ? ಋಷಿಗೆ !
ನಿನ್ನ ಗುರುದೇವನಾ ಶಂಬೂಕ ಋಷಿಗೆ !

ಭೈರವ.— (ಕೆರಳಿ) ಏನ್ ಗರ್ವಮಾ ಪಾರ್ವಂಗೆ ?

ಮೃತ್ಯು.— ಪುಟ್ಟೊಳಾತಂ ಶೂದ್ರನಾಗಿರ್ದನೆಂದು !

ಭೈರವ.—(ತಟಕ್ಕನೆ ಬೇಲಿಗಟ್ಟಿದ್ದ ಶೂಲಪಂಕ್ತಿಯನ್ನೆತ್ತಿ)
ಶಿವಶಿವಾ! ಏನ್ ಭಯಂಕರಂ ಪಾಪಂ
ಶ್ರೀರಾಮನಾಳುತಿಪ್ಪಿರ್ದ ಧರ್ಮರಾಜ್ಯದೊಳ್!

[ಮೃತ್ಯು ಮೆಲ್ಲಮೆಲ್ಲನೆ ಕರಿಮಂಜಾಗಿ ಆಶ್ರಮದ ಕಡೆಗೆ ಚಲಿಸುತ್ತದೆ. ಭೈರವನು ಮುಸುಕು ಮುಸುಕಾಗಿ ಮತ್ತೆ ವೃಕ್ಷರೂಪಿಯಾಗಿ ನಿಲ್ಲುತ್ತಾನೆ.]

ತೆರೆ ಬೀಳುತ್ತದೆ.

## ದೃಶ್ಯ ೨

[ತಿಂಗಳ್ಬೆಳಗು ಹಾಲುಚೆಲ್ಲಿದ ಅಯೋಧ್ಯೆ. ಶ್ರೀರಾಮಚಂದ್ರನ ಅರಮನೆಯ ಬಳಿಯ ಉದ್ಯಾನದಲ್ಲಿ ಉತ್ತರ ವಯಸ್ಸಿನ ಬ್ರಾಹ್ಮಣನೊಬ್ಬನು ಹುಯ್ಯಲಿಟ್ಟು ರೋದಿಸುತ್ತಿದ್ದಾನೆ. ಸುತ್ತಲೂ ಬಹುದೂರದ ವರೆಗೆ ಹಬ್ಬಿ, ಬಣ್ಣ ಬಣ್ಣದ ಹೂವಿನ ಪೊದೆಗಳೂ ಬಳ್ಳಿಗಳೂ ಮರಗಳೂ ರಂಜಿಸಿರುತ್ತವೆ. ನೀರ್ಬುಗ್ಗೆಗಳು ನರ್ತಕಿಯರಂತೆ ನಾಟ್ಯವಾಡುತ್ತಿವೆ. ದೂರದಲ್ಲಿ ಹಾಲುಗಲ್ಲಿನ ಅರಮನೆ ಶೋಭಿಸಿದೆ. ಅದರ ಸೋಪಾನಪಂಕ್ತಿ ತರಂಗವಿನ್ಯಾಸದಿಂದ ಉದ್ಯಾನದ ಕಡೆಗೆ ಇಳಿದಿರುವುದು ಕಾಣಿಸುತ್ತದೆ.]

ಬ್ರಾಹ್ಮಣ.— ಕಂದಾ, ಕಂದಯ್ಯಾ, ಕಂದಮ್ಮಾ,
ಓ ಎನ್ನ ಕಂದಾ,
ಸಹಿಪೆನೆಂತೀ ಬಗೆಯ ಬೆಂಕೆಯಂ,
ನಿನ್ನಗಲ್ಕೆಯಂ.
ಕಣ್ಗೆ ಬೆಳಕಾಗಿರ್ದೆ ನೀನ್;
ಬಾಳ್ಗೆ ಉಸಿರಾಗಿರ್ದೆ ನೀನ್;
ಮುದಿತನಕ್ಕೊಂದೂರೆಗೋಲಾಗಿರ್ದೆ ನೀನ್, ಪುತ್ರಕ.
ನೀನಳಿಯಲೊರ್ಮೊದಲೆ ಸರ್ವಮುಂ ಕಳಲ್ದಾನ್
ಜಗತೀ ಶ್ಮಶಾನದೊಳ್ ಜಂಗಮ ಶವಂ!
ನೀನೊರ್ವನೆಯೆ ಕಂದನುಂ ಕಣ್ಣುಮಾಗಿರ್ದ
ಕುರುಡಿ ನಿನ್ನಬ್ಬೆಯಂ ಮರಳಿ ನಾನೆಂತು ಕಾಣ್ಬೆನ್?
ನಾನ್ ಬಳಿಸಾರಲ್
ಪಜ್ಜೆಸದ್ದಂ ಕೇಳ್ದು 'ಬಾ ಚಿಣ್ಣಾ ಬಾ' ಎನುತೆ
ಮೊಗದ ಸುರ್ಕಳಿಯೆ ಸುಖವುಕ್ಕಿ ಚಾಚಿದ ತೋಳ್ಗೆ,
ಕರು ಕಳಿದ ಹಸುವ ಹಾಲ್ ಕರೆವ ಗೌಳಿಗನಂತೆ

ನಾನಾವ ಚಕ್ಕಳದ ಕವಡು ಸಂತೈಕೆಯುಂ ತುಂಬಿ,
ಬಾಳ್ಗಡಲ ಪೀರ್ವ ಬಡಬಾಗ್ನಿಯುಂ ನಂದಿಸಲಿ?
ಪೇಳ್, ಪುತ್ರಕ! ಪೇಳ್! ಪೇಳ್! ಪೇಳ್!

(ತುಸುಪೊತ್ತು ಮೌನವಾಗಿ ಬಿಕ್ಕಿಬಿಕ್ಕಿ ಅಳುತ್ತಾ)

ಪೋದ ಜನ್ಮಗಳಾವ ದುಷ್ಕೃತವೊ? ಅಲ್ಲದಿರೆ,
ಬಾಳ್ದುದಿಗೆ ನಾಂ ಪಡೆದೊರ್ವನೆಯೆ ಮಗನ್,
ಕಣ್ಣೆದುರೆ ಮಡಿವುದನ್ ಕಾಣ್ಬರೊಳರೇ
ಈ ಪುಣ್ಯಯುಗದೊಳ್?
ಅಪ್ರಾಪ್ತ ಯೌವನನ್,
ಅಕೃತ ಪಿತೃಕಾರ್ಯನ್,
ಅಪಾಪಜೀವಿತನ್,
ಪಂಚವತ್ಸರದೆನ್ನ ವತ್ಸನ್
ಆವ ಕತದಿಂದಿಂತು ರಾಮರಾಜ್ಯವನುಳಿದು
ಯಮರಾಜ್ಯಕೆಯ್ದಿದನ್?
ನಾನಾವ ಪಾಪಮನ್ ಎಸಗಿದುದೆನಗೆ ನೆನಪಿಲ್ಲ.
ಎಂದುಮ್ ಅನೃತವನೊರೆದೆನಿಲ್ಲ.
ಮೇಣ್ ಹಿಂಸೆಯಂ ಗೆಯ್ದೆನಿಲ್ಲಾವ ಜೀವಿಗುಂ.
ಮತ್ತಾರ ದುಷ್ಕೃತಕಿಂದು ಕೊಲೆವೋದುದೆನ್ನ ಶಿಶು?

(ದುಃಖಾತಿಶಯದಿಂದಲೂ ಕೋಪದಿಂದಲೂ)

ಪೇಳ್ ನೀನ್, ಓ ಬೆಳ್ದಿಂಗಳಿರುಳೇ!
ಪೇಳ್ ನೀನ್, ಓ ಇಕ್ಷ್ವಾಕು ರಘು ದಿಲೀಪಾದಿ
ರವಿಕುಲ ನರೇಂದ್ರ ರಾಜ್ಯಧರ್ಮ ಸ್ವರೂಪಿಣೀ
ಹೇ ಅಯೋಧ್ಯಾ ನಗರಲಕ್ಷ್ಮೀ!
ಪಿಂತೆಂದುಂ ಕಂಡುದಿಲ್ಲಿಂತಪ್ಪ ಘೋರಮಂ;
ಮೇಣ್ ಕೇಳ್ದುಮಿಲ್ಲಮ್.
ಶ್ರೀರಾಮನಾಳ್ವಿಂದೆ ರಾಮಪ್ರಜೆಗೆ ಕುಂದೆ?
ದೊರೆಯ ದೋಷವೆ ಕಾರಣಂ ಪ್ರಜಾಸಂಕಟಕೆ!
ಪೆರತಲ್ತು! ಪೆರತಲ್ತು!
ಏನೊ ಒಂದಿರಲ್ವೇಳ್ಕುಮಾ ರಾಮಪಾಪಂ!

(ಆಲೋಚಿಸಿ ತರಿಸಂದು)

ಪೆರತೇನ್ ?
ಸಾಲದೇನಾ ಶೂದ್ರನ ತಪಕೆ ಮುನಿದ ಧರ್ಮಶಾಪಂ !

(ದಿಟ್ಟದನಿಯಿಂದ)

ಮಡಿದ ಮಗನನ್ ಮರಳ್ಚದಿರ್ದೊಡೆ
ಕೇಳ್, ಓ ರಾಮಚಂದ್ರ,
ಸಾವೆನಿಲ್ಲಿಯೆ ನಿನ್ನರಮನೆಯ ಬಾಗಿಲೊಳ್.
ಬ್ರಹ್ಮಹತ್ಯಂಗೆಯ್ದು ಸುಖದಿನಿರು ; ಇರು ; ಇರು !

(ಗಟ್ಟಿಯಾಗಿ)

ಆಗಸವೇ, ನೀನ್ ಸಾಕ್ಷಿ !
ತಣ್ಗದಿರನೇ, ನೀನ್ ಸಾಕ್ಷಿ !
ಓ ಅಯೋಧ್ಯೆ, ನೀನುಂ ಸಾಕ್ಷಿ !
ಕೇಳಿಮ್, ಓ ಸಗ್ಗದೊಳಿರ್ಪ ನೇಸರ್‌ಬಳಿಯ ಅರಸರಿರ
ನೀಮೆಲ್ಲರುಮೆನ್ನ ಪೂಣ್ಕೆಗೆ ಸಾಕ್ಷಿಗಳ್ !

(ಕುಸಿಯುತ್ತಾನೆ)

[ಬೆಳ್ದಿಂಗಳಲ್ಲಿ ಬೆಳ್ಳಗಾಗಿರುವ ಹಾಲ್ಗಲ್ಲಿನ ಅರಮನೆಯಿಂದ ನೀಲಶರೀರಿ ಶ್ರೀರಾಮಚಂದ್ರನು ಕರುಣಮುಖಮುದ್ರೆಯಿಂದಲೂ ಹುಡುಕುವವನಂತೆ ಸುತ್ತಲೂ ನೋಡುತ್ತಲೂ, ಗಂಭೀರವಾಗಿ, ಆಶೆಯಂತೆ, ಆಶೀರ್ವಾದದಂತೆ, ಪ್ರವೇಶಿಸುತ್ತಾನೆ. ದೂರದಿಂದಲೆ ಆತನನ್ನು ಗುರುತಿಸಿ, ಬ್ರಾಹ್ಮಣನು ಭಯಭಕ್ತಿಯಿಂದೆದ್ದು ಕೈಮುಗಿದು ನಿಲ್ಲುತ್ತಾನೆ. ಶ್ರೀರಾಮನು ಬಳಿಬಳಿಗೆ ಬಂದಂತೆಲ್ಲ ಬ್ರಾಹ್ಮಣನ ದುಃಖಭಾವವೂ ಧನ್ಯಭಾವಕ್ಕೆ ತಿರುಗುತ್ತದೆ. ಶ್ರೀರಾಮನು ಹಜ್ಜೆಯಿಟ್ಟು ಮುಂದುವರಿದಂತೆಲ್ಲ, ಒಂದೊಂದು ಹಜ್ಜೆಗೆಂಬಂತೆ, ಒಂದೊಂದು ಮಾತನ್ನು ಧ್ವನಿಪೂರ್ವಕವಾಗಿ ತನಗೆ ತಾನೆ—ಹೇಳಿಕೊಳ್ಳುತ್ತಾನೆ.]

ತ್ರಿಭುವನ ಪುಲಕಕಾರಿ ಧನ್ಯಮೀ ದರ್ಶನಂ !
ಕ್ರಮನ್ಯಾಸಂ ಸಪ್ತಸಾಗರ ಜೀವನಕ್ರಮಂ !
ವ್ಯೋಮಮ್ ವಪುಃಕಾಂತಿ !
ವನಾದ್ರಿ ಸಂಗದಿಂದಂಗಮೆ ವನಾದ್ರಿಯಾಗಿರ್ಪನ್ !
ದಶರಥ ಪುತ್ರನೀತನ್ ರಘುಶ್ರೇಷ್ಠನೆ ದಿಟಂ.—
ಕರುಣಮೂರ್ತಿಯೀತನ್ ಕೌಸಲೆಯ ಕಂದನೆ ವಲಂ.
ಋಷಿಶಿಷ್ಯನೀತನ್ ಮಹಾ ಸಂಯಮಿಯ್ಕೆಸೆ.
ಹರಧನುವ ಮುರಿದವನ್, ಸುರಧನುಸ್ಸುಂದರನ್,
ಮೈಥಿಲೀ ಮನೋಹರನ್ ಕುಸುಮಕೋಮಲನ್.

ನೀಲಮೇಘಶ್ಯಾಮನ್, ಗಿರಿವನಪ್ರಿಯನ್.—
ದಶಗ್ರೀವಾರಿ, ಉಗ್ರನೀತನ್, ವಜ್ರಪ್ರಜ್ಞಾ ಕಠೋರನ್!
ಅಂಜನಾಸುತ ಹೃದಯಮಿತ್ರನ್, ಪವಿತ್ರನ್.
ಪಂಚವಟಿಯೊಳ್ ನಿಂದವನ್;
ಗೋದಾವರಿಯ ಮಿಂದವನ್;
ದೈತ್ಯಕೋಟಿಯ ಕೊಂದವನ್.—
ಶಬರಿಯ ಕಯ್ಯ ಪಣ್ಪಲಂಗಳನ್ ತಿಂದವನ್.
ಮೇರುಭವ್ಯನ್!
ಪ್ರೇಮಮೂರ್ತಿ; ಧರ್ಮಮೂರ್ತಿ, ಕ್ಷಮಾಮೂರ್ತಿ;
ಶಿಷ್ಟರಕ್ಷಾಮೂರ್ತಿ, ದುಷ್ಟಶಿಕ್ಷಾಮೂರ್ತಿ,
ನರದೇವನೀತನ್ ಪರದೈವಮೆ ವಲಂ!—
ಆಶಾಸ್ವರೂಪಿಯಿೀತನ್
ಬಂದಪ್ಪನಾಶೀರ್ವಾದಮೈತಪ್ಪವೋಲ್.
ಧನ್ಯನಾನಿನ್ ಬರ್ದುಕಿದೆನ್!
ಬರ್ದುಕಿದೆನ್! ಬರ್ದುಕಿದೆನ್!
ಬರ್ದುಕದಿರ್ಪನೆ ನನ್ನ ಕಂದನ್?
ಬರ್ದುಕಿದನ್, ಅವನುಂ ಬರ್ದುಕಿದನ್! (ಎವೆಯಿಕ್ಕದೆ ನೋಡುತ್ತಾ ನಿಲ್ಲುತ್ತಾನೆ.)

ಶ್ರೀರಾಮ.— (ರಾಜರಾಜಗಾಂಭೀರ್ಯದಿಂದ ಬರುತ್ತಾನೆ.)
ಈ ವಸಂತಪೂರ್ಣಿಮಾ ರಜನಿಯಂ
ಈ ಅಯೋಧ್ಯಾಶಾಂತಿಯಂ
ತನ್ನ ಕರುಣಕಥೆಯಿಂ ಕದಡಿದಾ ದುಃಖಿ,

(ಸುಯ್ಯುತ್ತಾನೆ)

ಅಗಲ್ದರೆಮೆಯ್ಯಳನೆ ನೆನೆಯುತಿರ್ದೆನ್ನ
ಸೀತಾಶೋಕಮನಿತುಮನ್ ಮರುಕೊಳಿಸಿದಾ ದುಃಖಿ
ಎಲ್ಲಿರ್ಪನ್? ಎತ್ತವೋದನ್?

(ಸ್ವಲ್ಪ ನೋಡಿ)

ಇತ್ತಣಿಂದೀ ತೋಂಟದಿಂದೈತಂದುದಾ ರುದಿತಂ.

(ವ್ಯಂಗ್ಯಸ್ಮಿತನಾಗಿ)

ನನ್ನ ಬಾಳ್‌ಗಿವಿಗೇಗಳುಮ್
ರೋದನಮೆ ಸಂಗೀತಮಾಯ್ತುಲಾ!

ಅವತಾರಿಯುಣ್ಬ ಕೂಳಲ್ತೆ ಗೋಳ್ ;
ಕುಡಿವಮರ್ದಲ್ತೆ ಕಣ್ಣೀರ್ !

(ತನ್ನೆಡೆಗೆ ಬರುತ್ತಿರುವ ಬ್ರಾಹ್ಮಣನನ್ನು ಗಮನಿಸಿ)

ಆರೊ ಬರುತಿಪ್ಪರೀ ಎಡೆಗೆ.

(ನಿಟ್ಟಿಸಿನೋಡಿ)

ಮುದಿಯನ್ ; ಪಾರ್ವನ್ ; ದುಃಖ ಜರ್ಜ್ಜರಿತನ್.
ಈತನಾ ಪುಯ್ಯಲ್ಗಿದನೆ ಇರಲ್‌ವೇಳ್ಕುಮ್.

(ಎರಡು ಹೆಜ್ಜೆ ಮುಂಬರಿಯುತ್ತಾನೆ)

ಬ್ರಾಹ್ಮಣ.— (ಬೇಗ ಬೇಗ ಬರುತ್ತಾ)
ಅನಾಥ ರಕ್ಷಕಾ, ದುಃಖವಿಮೋಚಕಾ,
ಸರ್ವಲೋಕಪ್ರಭೂ, ಸಲಹು, ಸಲಹು !

(ಕಾಲಿಗೆರಗುತ್ತಾನೆ)

ಶ್ರೀರಾಮ.— ಏಳಿಮೇಳಿಮ್. ಮುದುಕರ್, ಪಿರಿಯರ್, ಪಾರ್ವರ್,
ನೀಂ ಗುರುಜನ ಸಮರೆನಗೆ.

ಬ್ರಾಹ್ಮಣ.— ಅರ್ಥಿ ಸಹಜಮೆನಸೆಸಗಿದೆನ್, ದಾಶರಥಿ.
ಕಟ್ಟಳಲ್ಗುಂಟೆ ಮತಿ ? ತಿರುಪೆಗೆತ್ತಣ ಪೆರ್ಮೆ ?

ಶ್ರೀರಾಮ.— ಆರ್ ನೀಮ್ ? ದುಃಖಮೇನ್ ?

ಬ್ರಾಹ್ಮಣ.— ನೀನ್ ವಿಚಾರಿಸಲ್ ದುಃಖಮೆಂಬುದುಮುಂಟೆ ? —
ನೀನ್ ಪಾರ್ವರನ್ ಮೊಗದಿಂದುಗುಳ್ದಾತನಂ
ಪೊಕ್ಕುರ್ಕಳಿಂ ಪೆತ್ತಾತನಲ್ತೆ ?
ಕಾಲಮನೆ ಕೂಸೆಂಬ ನಿನಗಿಂ ವೃದ್ಧರಿರ್ಪರೆ ?
ವಿಶ್ವಮಂ ಸೃಜಿಸಿದಾ ಪಿರಿಯಂಗೆ ಪಿರಿಯನ್
ನಿನಗೆ ನಾನೆರಗಿದೊಡೆ ವಿಪರೀತಮಲ್ತು.
ಮನುಷ್ಯರೀತಿಯಿಂದಪ್ಪೊಡಂ ನಿನಗೆ
ಪೊಡವಿಯೊಡೆಯಂಗೆ ಪೊಡೆವಡುವುದೆ ಪಾಳಿ.
ಪ್ರೇಮ ಸಾಧನದಿಂ ನೀಂ ಮಹಾತಪಸ್ವಿಯಲ್ತೆ ?
ಪಿರಿದೇಗಳುಂ ತಪಂ. ಗುಣಕ್ಕೆ ಮಚ್ಚರಮೆ ?

ಶ್ರೀರಾಮ.— ಪಿರಿದನೊಲ್ವರುಂ ಪಿರಿಯರ್, ವಿಪ್ರೋತ್ತಮ !
ಪೇಳಿಮ್ ನಿಮ್ಮಳಲ್ಕೆಯುಂ.

ಬ್ರಾಹ್ಮಣ.— ಅಪಹರಿಸಿದನ್ ಪಂಚವತ್ಸರದೆನ್ನ ಕಂದನನ್. . . .
ಶ್ರೀರಾಮ.— ಆವನ್ ಆ ನೀಚನ್ ?
ಬ್ರಾಹ್ಮಣ.— ಯಮನೆಂಬ ಕೀರ್ತಿಯಾ ವೈವಸ್ವತನ್ !
ಶ್ರೀರಾಮ.— ದಿಟಮೆ !
ಬ್ರಾಹ್ಮಣ.— ನನ್ನೊಡನೆ ಬಪ್ಪೆಯಪ್ಪೊಡೆ ತೋರ್ಪೆನಾ ತಾಣಮಂ ;
ಮೇಣ್, ನನ್ನೊರ್ವನೆಯೆ ಕುವರನಾ ಪೆಣಮುಮಂ. (ಅಳುತ್ತಾ)
ಹೇ ದಯಾನಿಧಿ,
ಕ್ಲೇಶ ಕಾಲದೊಳೆಲ್ಲರುಂ ನಿನ್ನ ಪೆಸರನುಸಿರ್ದು
ರಕ್ಷೆಯಂ ಪಡೆವರಯ್. ನಿನ್ನನೇ ಬೇಡುತಿಹೆ ನಾಂ.
ನನ್ನ ಕಂದನ ಹರಣಮಂ ಬಿಕ್ಕೆನೀಡೆನಗೆ.
ನೀನ್ ಕೃಪಾಬ್ಧಿಯಲ್ತೆ? —
ಸುಲಭಸಾಧ್ಯಂ ನಿನಗೆ ಅದೆಂತಪ್ಪ ಕಠಿನಮುಂ.
ಲೋಕಾಪವಾದಕ್ಕೆ ನಿನ್ನರ್ಧಾಂಗಿಯಂ,
ಬೆಂಕೆವೊಕ್ಕೆಯ್ತಂದ ಪರಿಶುದ್ಧೆಯಂ,
ಸೌಂದರ್ಯ ಲಕ್ಷ್ಮಿ ಆ ಸೀತಾದೇವಿಯಂ
ತುಂಬು ಬಸಿರಿಯೆಂದೆರ್ದೆನೋರದಡವಿಗಟ್ಟಿ
ನಿನ್ನಾ ಭೀಷ್ಮಪೌರುಷವ ಮೆರೆದೆಯಲ್ತೆ ?
ಶ್ರೀರಾಮ.—(ನಿಡುಸುಯ್ದು ಮೊಗಮಂ ಪಿಂಡಿ)
ಸಾಲ್ಗುಮಾ ಕಥನಂ, ದ್ವಿಜನ್ಮ.
ಕಾಳ್ಗಿಚ್ಚಿಗೂರ್ಗಿಚ್ಚುನಿದಿರೊಡ್ಡಿ ಸಂದಿಪ್ಪವೋಲ್
ನಿನ್ನಳಲ್ಗೆನ್ನಳಲ್ ಪರಿಹಾರಮೇನ್ ?
ಬ್ರಾಹ್ಮಣ.— ಮನ್ನಿಸು, ಮಹೀಶ್ವರ.
ನನ್ನ ಕಂದನ ಹರಣಮಂ ಬೇಡಿ ಬಂದೆನ್ ;
ಕೃಪೆಯಿಂದದನ್ ನೀಡು.
ಶ್ರೀರಾಮ.— ದ್ವಿಜೋತ್ತಮ, ನೀಂ ಪೇಳ್ವುದಕ್ಕಜಮ್ !
ಧರ್ಮಾಧಿಕಾರಿ ವೈವಸ್ವತನ್ ನಿರ್ನೆರಂ
ನನ್ನ ರಾಜ್ಯದೊಳಿಂತು ಗೆಯ್ವನಲ್ಲಂ.
ಇದರೊಳೊಂದೇನೊ ಧರ್ಮಚ್ಯುತಿಯಿರಲೆವೇಳ್ಕುಂ.
ಅಪ್ರಾಪ್ತಕಾಲನಂ, ಬಾಲನಂ,

ಕೊಂಡೊಯ್ದು ಕಾಲನಂ ಕಾಲ್ಗೆಡಿಸುವೆನ್
ತಪ್ಪು ಅವನದಾಗಿರಲ್.— ಆದೊಡಾಂ
ಅಪರಾಧಮ್ ಅವನದೆಂದಾಳೋಚಿಸೆನ್.
ನೀವ್ ಏನಾದೊಡಂ ಅಪೂಜ್ಯಮಂ ಗೆಯ್ದಿರೇನ್?
ಬ್ರಾಹ್ಮಣ.— ಪೆರ್ನಡೆಯ ತಾಯ್ತುಂದೆವಿರ್ ನನ್ನವರ್.
ಬಿಜ್ಜೆಗಲಿಸಿರ್ಪೋಜರುಂ ಸಜ್ಜನರ್.
ಪಾರ್ವರೊಳ್ ಪುಟ್ಟಿರ್ಪುದೆನ್ನಾತ್ಮಂ, ಪ್ರಭೂ.
ಶ್ರೀರಾಮ.— ಮಾನ್ಯರ್ ನೀವ್.
ಧನ್ಯಂ ನಿಮ್ಮನ್ನರಂ ಪಡೆದೆನ್ನ ರಾಜ್ಯಂ.—
ಇನ್ನಾರಾದೊಡಂ ಗೆಯ್ದರೇನಧರ್ಮಮಂ
ನಿಮ್ಮ ಮಗನಳಿವಿಂಗೆ ಕಾರಣಮೆನಲ್?
ನೀವ್ ಅರಿತಿರ್ಪೊಡೆ ಅದನ್ ಒರೆಯಿಮ್;
ಅಳಿಪೆನದನ್.
ಕಾರಣದ ನಾಶದಿಂ ನಾಶಮಪ್ಪುದು ಕಾರ್ಯಮುಂ.

(ದೃಢವಾಣಿಯಿಂದ)

ನನ್ನ ರಾಜ್ಯದೊಳಿರಲ್ಕಾಗದು ಅಧರ್ಮಿ!

(ಶ್ರೀರಾಮನ ಧರ್ಮಕೋಪಕ್ಕೆ ಬ್ರಾಹ್ಮಣನು ಬೆದರುತ್ತಾನೆ. ಮಿಳ್ಮಿಳನೆ ನೋಡುತ್ತಿರುವಾತನಿಗೆ ರಾಮನು ಧೈರ್ಯ ಹೇಳುವಂತೆ)

ಬಿಡಿ ಬೆದರ್ಕೆಯುಂ! ದಿಟಮನೊರೆಯಿಂ!
ಬ್ರಾಹ್ಮಣ.— ಕ್ಷಮಿಸಯ್, ಮಹಾಪುರುಷ. ಜಿಹ್ವೆ ತೊದಳ್ದಪುದೆನಗೆ.
ಶ್ರೀರಾಮ.— ನಿಜವನುಸುರಲ್ಕೆ?
ಬ್ರಾಹ್ಮಣ.— ನಿನ್ನಿದಿರೆ ನಿನ್ನ ಪೆಸರಂ ಪೇಳ್ವುದರ್ಕ್ಕಳ್ಕಿ!
ಶ್ರೀರಾಮ.— (ನಸುಬೆಚ್ಚಿದಂತಾಗಿ ತನ್ನೊಳಗೆ ತಾನೆ)
ಅಪರಾಧಂಗಳ್ಗೆಲ್ಲ ನಾನೆ ಮೂಲಮೋ ಏನ್?
ಅಂದಸಗನಾಡಿದನ್; ಇಂದೀ ಪಾರ್ವನ್!

(ಬ್ರಾಹ್ಮಣನಿಗೆ)

ದ್ವಿಜೋತ್ತಮ, ಸತ್ಯಂ ಸರ್ವಪೂಜ್ಯಂ.
ಸತ್ಯಕಂಜಲ್ ತರಮೆ? ಪೇಸಲಿಲ್ಲಾವಗಂ
ಸತ್ಯಮನ್ನಾಲಿಸಲ್ಕೀ ದಶರಥಾತ್ಮಜಂ.

ಸತ್ಯಮಾರ್ಗರ್ಗಂ ಕ್ಷೇಮಮೇ, ಇಳೆಯ ಪಿರಿಯ.
ಪೇಳ್ವರ್ಗಂ, ಕೇಳ್ವರ್ಗಂ.— ತಳ್ವದೆ ಪೇಳಿಂ !
ನನ್ನದೇನಪರಾಧಂ ? ನನ್ನಿಂದಮೇನಧರ್ಮಂ ?
ಜನ್ಮದಿಂ ಮಾತ್ರಮಲ್ಲದೆ ಕರ್ಮದಿಂದಮುಂ
ಗುರುಗಳಪ್ಪಿರಿ ನೀಮ್.
ಪೇಳಿಮ್, ತಳ್ವದೆ ಪೇಳಿಮ್ !

ಬ್ರಾಹ್ಮಣ.— ಶಿಷ್ಟಪರಿತ್ರಾಣ ಮೂರ್ತಿ, ಕೇಳ್ :
ಇಂದು ಬೆಳಗುಂಬೊಳ್ತು ದೇವಾರ್ಚನೆಗೆ
ಪೂದಿರಿಯಲೆಂದು ನಾಂ ಪುತ್ರಕಂವೆರಸಿ
ಸಾರ್ದೆನೊರ್ವೆಸರ ಬನಮಂ.

ಶ್ರೀರಾಮ.— ಪೆಸರಿರ್ಪುದೇನಾ ಬನಕೆ ? ಇರ್ಪುದೆತ್ತಣ್ಗೆ ?

ಬ್ರಾಹ್ಮಣ.— ಪಾಪಕರಮೆಂದುಸಿರ್ದೆನಿಲ್ಲಾ ಪೆಸರನ್.
ಇರ್ಪುದದು ಮೃತ್ಯುದಿಶೆಯೊಳ್.

ಶ್ರೀರಾಮ.— ಪೆಸರೊಳೇನ್ ಪಾಪಂ ? ಉಸಿರಿಂ.

ಬ್ರಾಹ್ಮಣ.— ಶಂಬೂಕಾಶ್ರಮವೆಂದು ಕರೆವರಾ ಕಾಡನ್.

ಶ್ರೀರಾಮ.— (ಚಿಂತಾಮಗ್ನನಾಗಿ, ಬಳಿಕ)
ಓಹೊ ಈಗಳೆನಗೆ ಬೆಳಕು ಮೂಡುತಿದೆ ! —
ಮುಂದೆ ?

ಬ್ರಾಹ್ಮಣ.— ಮುಂದೇನ್, ಮಹಾಪ್ರಭೂ ?
ಕಂಡೆವಿರ್ವರುಮಾ ತಪಂಬಡುತ್ತಿರ್ದನಂ,
ಶೂದ್ರನಂ, ಶಂಬೂಕವೆಸರಾಂತನಂ,
ಋಷಿವೇಷದಾ ಪಾಷಂಡಿಯಂ.

[ಶ್ರೀರಾಮನ ಹುಬ್ಬು ಗಂಟಿಕ್ಕುತ್ತವೆ. ಆಲೋಚಿಸುತ್ತಾ ನಿಲ್ಲುತ್ತಾನೆ. ಬ್ರಾಹ್ಮಣನು ತನ್ನಲ್ಲಿಯೆ ತಾನು ಹೇಳಿಕೊಳ್ಳುತ್ತಾನೆ.]

ಈಗಳಾ ಶೂದ್ರಂಗೆ ತಕ್ಕುದಕ್ಕುಂ.
ಅಧರ್ಮಶ್ರವಣಮಾತ್ರದಿಂ, ಕೋಪದಿಂ,
ಏಂ ರೌದ್ರಮಾದುದೀ ರಾವಣಾರಿಯ ಮುಖಂ !

ಶ್ರೀರಾಮ.— (ಸೌಮ್ಯನಾದವನಂತೆ ಬ್ರಾಹ್ಮಣನ ಕಡೆಗೆ ತಿರುಗಿ)
ನಮಸ್ಕಾರಂಗೆಯ್ದಿರೇಂ ?

ಬ್ರಾಹ್ಮಣ.— (ಕಿವಿಮುಚ್ಚಿ)
ಶಿವ ಶಿವ ಶಿವ!
ಅಂತಪ್ಪ ಘೋರಮಂ ನಾವೆಸಗಿದೆವಲ್ತು.
ಅರಿಯದಾ ಕುವರಂ ಕೈಮುಗಿಯಲಿರ್ದನ್;
'ಮಾಣ್, ಶೂದ್ರಂಗೆ ತುಳಿಲ್‌ಗೆಯ್ಯಲಾಗ!'
ಎಂದಾಂ ಬುದ್ಧಿಯಂ ತಿದ್ದಿ ತಡೆದೆನ್.
ಶ್ರೀರಾಮ.— (ವ್ಯಂಗ್ಯವಾಗಿ)
ಎಂತಾದೊಡಂ ತಾಮ್ ವೇದಮೂರ್ತಿಗಳಲ್ತೆ!
ಬ್ರಾಹ್ಮಣ.— ನಿನ್ನ ರಾಜ್ಯದೊಳಿರ್ದುಮ್
ಅಸಿತೊಂದನಾದೊಡಂ ಅಧರ್ಮಮಂ
ತಡೆಯದಿರೆ ನರಕಮಾಗದೆ ನಮಗೆ?
ಶ್ರೀರಾಮ.— ಓವೊ ದಿಟಂ; ಸ್ವರ್ಗಮಪ್ಪುದನೆಸಗಿದಿರಿ!
ಆ ಸೈಪಿನೊಂದು ಮೆಯ್ಮೆಗೇ ನಿಮ್ಮರ್ಭಕಂ
ಸ್ವರ್ಗಸ್ಥನಾದನೆಂಬಿರೇಂ?
ಬ್ರಾಹ್ಮಣ.— ಅಲ್ತಲ್ತು, ರಾಮಚಂದ್ರ,
ಶೂದ್ರನ್ ತಪಂಗೆಯ್ವೊಂದು ಅಧರ್ಮಕ್ಕೆ,
ವರ್ಣಾಶ್ರಮ ಧರ್ಮದುಲ್ಲಂಘನೆಯ ಪಾಪಕ್ಕೆ,
ನಿನ್ನ ಬಾಲಪ್ರಜೆಯೊರ್ವನ್ ಬಲಿಯಾದನ್.—
ಮುಂದಾವ ಮಹತ್ಕಾರ್ಯಮಂ ಗೆಯ್ಯಲಿರ್ದನೊ?
ಆವ ಶಾಸ್ತ್ರವನೊರೆಯಲಿರ್ದನೊ?
ಆವ ಕಬ್ಬಮಂ ಕಟ್ಟಲಿರ್ದನೊ?
ಆವ ತಪದಿಂದಾವ ಸಿದ್ಧಿಯ ಪಡೆಯಲಿರ್ದನೊ?
ಆ ಪ್ರಜೆ ಶೂದ್ರನ ತಪೋದುಷ್ಕೃತಿಗೆ ಬೇಳ್ವೆಯಾದನ್!
ಪಾವಗಿದು ತೀರ್ದನ್! (ಅಳುತ್ತಾನೆ.)
ಶ್ರೀರಾಮ.— (ಸ್ವಗತ. ಕನಿಕರದಿಂದಲೂ ಕೋಪದಿಂದಲೂ)
ಈ ವರ್ಣ ಗರ್ವಾಂಧಂಗೆ,
ಈ ಶಾಸ್ತ್ರಮೂರ್ಖಂಗೆಂತೊ ಬುದ್ಧಿಗಲಿಪೆನ್?
ಶಂಬೂಕನ್ ಮಹಾಯೋಗಿ.
ತಪಸ್ವಿಯ ತಿರಸ್ಕೃತಿಗೆ ಮುನಿದ ಧರ್ಮಂ

ತಂದುದೀತನ ಮುದ್ದು ಕಂದಂಗೆ
ನನ್ನ ರಾಜ್ಯದೊಳುಂ ಅಕಾಲ ಮೃತ್ಯುವಂ.
ತನ್ನ ತಪ್ಪನೆ ತಿಳಿಯಲಾರದೀತನ್,
ಮರೆಯಿಂದಮೆನ್ನನ್,
ಬಹಿರಂಗಮಾ ಶಂಬೂಕಯೋಗಿಯನ್,
ನಿಂದಿಸುತ್ತಿರ್ಪನ್.

(ಆಲೋಚಿಸಿ, ನಿರ್ಣಯಿಸಿ, ಮತ್ತೆ)

ತೋರ್, ದ್ವಿಜನ್ಮ, ಶಂಬೂಕ ವಿಪಿನಮಂ.
ನಡೆವಮಾ ಎಡೆಗೆ, ತೊಡೆವಮ್ ಅಧರ್ಮಮಂ.
ರಾಮರಾಜ್ಯದೊಳ್ ಅಧರ್ಮಮೆ ಮೃತ್ಯು.
ಅಧರ್ಮ ಸಂಹಾರಮೆ ಮೃತ್ಯುವಿಜಯಂ :
ಅರನ ಗೆಲ್ ಯಮನ ಸೋಲ್ !
ಬರ್ದುಕಲ್ ಧರ್ಮಂ ಬರ್ದುಕುವನ್ ನಿನ್ನಣುಗನ್ !

ಬ್ರಾಹ್ಮಣ.— (ಸ್ವಗತ)

ರಾಮನಿಂದೆಯುಮ್ ಅವ್ಯರ್ಥಮೆನಲ್
ಪೊಗಳ್ಕೆ ಇನ್ನೆಂತೊ ಸಫಲಮಕ್ಕುಂ ? (ರಾಮನಿಗೆ)
ಪೋಗುವಂ, ರಾಕ್ಷಸಾರಿ. ಧನ್ಯನಾದೆನ್.

ಶ್ರೀರಾಮ.— ಬನ್ನಿಮ್. (ಆಕಾಶದೆಡೆಗೆ ನೋಡುತ್ತ)

ಪುಷ್ಪಕವೇರ್ದು ಶಂಬೂಕಾಶ್ರಮಕ್ಕೈದುವಮ್.

[ಶ್ರೀರಾಮನು ಉತ್ತರದಿಕ್ಕಿನ ಕಡೆಗೆ ನೋಡಿ ಪುಷ್ಪಕವನ್ನು ನೆನೆಯುತ್ತಾನೆ. ಬಹುಸಂಖ್ಯೆಯ ಕಿರುಗಂಟೆಯ ಟಿಂಟಿಣಿಯ ಮಧುರನಾದವು ಕೇಳಲಾರಂಭವಾಗುತ್ತದೆ. ಇಚ್ಛಾರೂಪದ ಕಾಮಗಮನದ ಆ ಬಾನ್ದೇರು, ಬೆಳ್ದಿಂಗಳೆ ಹೆಪ್ಪಾಯ್ತೊ ಎಂಬಂತೆ, ಮುಗಿಲ್‌ಮುಗಿಲ್ ಗೋಚರವಾಗಿ ನೆಲಕ್ಕಿಳಿಯುತ್ತದೆ. ಶ್ರೀರಾಮನೊಡನೆ ಬ್ರಾಹ್ಮಣನೂ ತೇರಿಗೆ ತುಳಿಲ್‌ಗೆಯ್ದು ಅಡರುತ್ತಾನೆ. ವಿಮಾನವು ಮೇಲೆದ್ದು ಹಾರಿ, ದೂರದೂರವಾಗಿ, ಕಣ್ಮರೆಯಾಗಿ, ನಾದಾವಶೇಷವಾಗುತ್ತದೆ.]

ತೆರೆ ಬೀಳುತ್ತದೆ.

## ದೃಶ್ಯ ೩

[ಶಂಬೂಕಾಶ್ರಮದ ವನ್ಯಸೀಮೆ. ಹುಣ್ಣಿಮೆಯ ಬೆಳ್ದಿಂಗಳಲ್ಲಿ ಮಿಂದಿದೆ. ಎಲ್ಲೆಲ್ಲಿಯೂ ನಿಶ್ಶಬ್ದ. ಹೂವಿನ ಹೊದೆ ಬೆಳೆದ ಒಂದು ಹುತ್ತದೆಡೆ ಬ್ರಾಹ್ಮಣಕುಮಾರನು ಬಿದ್ದಿದ್ದಾನೆ. ಕಳೇಬರಕ್ಕೆ ಸಮೀಪದಲ್ಲಿ ಛಾಯಾರೂಪಿ ಮೃತ್ಯು ನಿಂತಿರುವುದು ಕಂಡುಬರುತ್ತದೆ. ಅಲ್ಲಿಗೆ ಅನತಿ

ದೂರದಲ್ಲಿಯೆ ಸಮಾಧಿಮಗ್ನನಾಗಿರುವ ಶಂಬೂಕ ಮಹರ್ಷಿಯ ಧ್ಯಾನಸ್ತಿಮಿತವಾದ ಆಕೃತಿಯೂ ಇಂಗಿತವಾಗಿ ಕಂಡುಬರುತ್ತದೆ. ಆತನ ಸುತ್ತಲೂ ಹಳು ಬೆಳೆದಿದೆ. ಶ್ಮಶ್ರುಮಯವಾದ ಮುಖವೂ ಜಟಾಸ್ರೋತಗಳೂ ಬಳ್ಳಿಗಳಲ್ಲಿ ಹೆಣೆಗೊಂಡಿವೆ. ಅರ್ಧಭಾಗದ ಮೆಯ್ಗೆ ಹುತ್ತವೂ ಬೆಳೆದಿದೆ. ಆ ಭವ್ಯ ದೃಶ್ಯವನ್ನಾವರಿಸಿ ಒಂದು ತೇಜಸ್ಸಿನ ಪರಿವೇಷವೂ ಕಂಗೊಳಿಸುತ್ತದೆ. ಸವಿಾಕ್ಷಿಸಿದರೆ ಮಾತ್ರವೆ ವೇದ್ಯವಾಗುವಷ್ಟರ ಮಟ್ಟಿಗೆ ಪ್ರಕೃತಿಲೀನವಾಗಿದೆ ಋಷ್ಯಾಕೃತಿ. ಇದ್ದಕ್ಕಿದ್ದ ಹಾಗೆ ವನದಲ್ಲಿ ಭಾವಸಂಚಾರವಾದಂತಾಗಿ, ಎಲರು ತೀಡಿ, ಹೂಬಳ್ಳಿ ಹೊದೆ ಎಲ್ಲವೂ ತಲೆಯೊಲೆಯುತ್ತವೆ. ಮೃತ್ಯುವೂ ಭಕ್ತಿಯಿಂದ ಬಾಗಿ ಕೈಮುಗಿಯುತ್ತದೆ. ಆ ದಿಕ್ಕಿನಿಂದಲೆ ಬ್ರಾಹ್ಮಣ ದ್ವಿತೀಯನಾಗಿ ಶ್ರೀರಾಮನು ಪ್ರವೇಶಿಸುತ್ತಾನೆ. ಆತನ ವದನವು ಭಾವದೀಪ್ತವಾಗಿದೆ. ತನ್ನಾನಂದಕ್ಕೆ ತಾನೆ ಮಾತಾಡಿಕೊಳ್ಳುವಂತಿದೆ.]

ಶ್ರೀರಾಮ.— ಏನ್ ಶಾಂತಿ ನೆಲೆಸಿರ್ಪುದೀ ಚೆಲ್ವಿನೊಳ್!
ಅನುಭವಮೆ ಪೇಳ್ವುದು ಇದು ಋಷಿಯ ಬೀಡೆಂದು.
ತಪೋಮಹಿಮೆಗೆಣೆಯುಂಟೆ?

(ರಸಾನುಭವ ಮಾಡುವವನಂತೆ ಧ್ಯಾನಭಂಗಿಯಿಂದ ನಿಲ್ಲುತ್ತಾನೆ.)

ಬ್ರಾಹ್ಮಣ.— (ಸ್ವಗತ)
ಸೋಜಿಗಮಾಗಿರ್ಪುದೀ ರಾಜೇಂದ್ರನೀ ತೆರಂ!
ಅರಮನೆಯೊಳಿರ್ಪೀತಂಗೆ ಗಿರಿವನಪ್ರಕೃತಿಯೆನೆ
ಅದೇನ್ ಪ್ರೇಮವೋ? ಅದೇನ್ ಮೋಹವೋ?
ಸೀತೆಯನ್ ಅರಣ್ಯಕೆ ವಿಸರ್ಜಿಸಿದೀತಂಗೆ
ಅರಣ್ಯಮೆ ಸೀತೆಯಾಗಿರ್ಪಳ್!

ಶ್ರೀರಾಮ.— (ಬ್ರಾಹ್ಮಣಗೆ) ತೋರಿಮ್ ಆ ತಾಣಮಂ.

ಬ್ರಾಹ್ಮಣ.— ಬಾ, ಪ್ರಭೂ, ತೋರ್ದಪೆನ್. (ಮುಂದೆ ನಡೆದು)
ನೋಡಲ್ಲಿ! ನೋಡಲ್ಲಿ, ಕೋಸಲೇಶ್ವರ,
ಕೆಡೆದಿರ್ಪುದೆನ್ನ ಕುಲಗೋಪುರದ ಕಲಶಮಣಿ!

(ಮುಂದೆ ನುಗ್ಗಿ)

ರಕ್ಷಿಸಯ್, ರಕ್ಷಿಸಯ್ ನನ್ನೀ ಕಣ್ಮಣಿಯಂ!

(ಶವದೆಡೆ ಕುಸಿಯುತ್ತಾನೆ)

ಶ್ರೀರಾಮ.— (ಪ್ರಯತ್ನಿಸಿದರೂ ಸಾಧ್ಯವಾಗದೆ ಅಸ್ಥಿರನಾಗಿ ಕಣ್‌ತೊಯ್ದು, ಸ್ವಗತ)
ಸ್ಥಿತಪ್ರಜ್ಞಂಗುಂ ಅಧೈರ್ಯಮನೊಡರ್ಚುವುದೀ
ಪುತ್ರಶೋಕದ ದೃಶ್ಯಮೇಗಳುಮ್!
ಸನ್ನಗಲ್ಕೆಗಂದು ಎದೆಬಿರಿಯಲ್ ಪಳಯಿಸಿದಾ

ಸನ್ನ್ಯಾಸಂ ಬಗೆಗೆ ತರ್ಪ್ಪನೀ ಮುದುಕ ತಂದೆ!—
ಏನ್ ಮಾಯೆ?
ಅಮೃತ ಸಾಕ್ಷಾತ್ಕಾರಮಾದರ್ಗಂ
ಮೃತ್ಯು ಸಂಕಟಕರಂ!
ನಾಟಕದ ನಿಜವನರಿವುದು
ನೇಪಥ್ಯಮಂ ಪೊಕ್ಕ ಮೇಲಲ್ತೆ?

(ಬ್ರಾಹ್ಮಣನ ಬಳಿಗೆಯ್ದಿ)

ರೋದಿಸದಿರ್ ಅಬೋಧನೊಲ್, ವೇದವೇತ್ತ್ರ.
ಸಡೆದೊಂದಧರ್ಮಮಂ ಪರಿಹರಿಸಲೊಡಂ
ಅಮೃತನಕ್ಕುಮ್ ನಿನ್ನೀ ಚಿರಂಜೀವಿ!

ಬ್ರಾಹ್ಮಣ.— (ಉನ್ಮತ್ತ ಹರ್ಷದಿಂದ ಮೇಲೆದ್ದು)
"ಅಮೃತನಕ್ಕುಮ್ ನಿನ್ನೀ ಚಿರಂಜೀವಿ!"
ಸತ್ಯವಾಕ್ ನೀನ್, ಇಕ್ಷ್ವಾಕು ಕುಲೇಂದ್ರ,
ಇನ್ ಎನ್ನ ಕಂದನ್ ಚಿರಂಜೀವಿ!—
ಪರಿಹರಿಸಾ ಅಧರ್ಮಚಾರಿಯನ್ ಶೀಘ್ರದಿಂ.

ಶ್ರೀರಾಮ.— (ಕೈಮುಗಿದು ನಿಂತಿದ್ದ ಮೃತ್ಯುದೇವತೆಯನ್ನು ಪ್ರಸನ್ನದೃಷ್ಟಿಯಿಂದ ನೋಡುತ್ತಾ)
ಇದೇನ್ ನೀನ್, ಈ ತಪೋವಿಪಿನದೊಳ್? (ಮುಗುಳ್ನಗೆವೆರಸಿ)
ಉಪವಾಸಮಾಚರಿಸುತಿರ್ಪೆಯೇನ್?

ಮೃತ್ಯು.— (ಹಸನ್ಮುಖಿಯಾಗಿ) ತಪಂಗೆಯ್ಯುತಿರ್ಪೆನ್!

ಶ್ರೀರಾಮ.— (ವಿನೋದದಿಂದ) ಆರ ಅಮಂಗಳದ ಅಪಾವ ಸಿದ್ಧಿಗೋ?

ಮೃತ್ಯು.— ದೈತ್ಯವೈರಿಯ ಧರ್ಮಸಿದ್ಧಿಗೆ!

ಶ್ರೀರಾಮ.— ಅನೇಕ ವಂದನಂಗಳ್ ನಿನಗೆ!

ಮತ್ತು.— ಧನ್ಯಳೆನ್!

ಬ್ರಾಹ್ಮಣ.— (ಶ್ರೀರಾಮನನ್ನು ವಿಸ್ಮಯದಿಂದ ನೋಡುತ್ತಾ ತನ್ನಲ್ಲಿಯೆ)
ಆರೊಡನೆ ಸಂವಾದವಿಾ ಆಕಾಶವರ್ಣಂಗೆ!

ಶ್ರೀರಾಮ.—ದ್ವಿಜೋತ್ತಮ, ನೀಂ ಪೇಳ್ದಾ ಅನಧಿಕಾರಿ,
ಆ ಶೂದ್ರನ್,
ತಪವಿರ್ಪ ತಾಣಮಂ ತೋರ್ಪುದೆ ತಡಂ.

ಬ್ರಾಹ್ಮಣ.— (ಕೈದೋರಿ) ಅದೆ ನೋಡಾ ವಲ್ಮೀಕದೆಡೆ.

ಶ್ರೀರಾಮ.— (ಸ್ವಗತ)

ಏನ್ ಜಿಹ್ವೆ ಈ ಪಾರ್ವನದು ?
ಮಾತು ಮಾತಿನೊಳೆನ್ನ ಮರ್ಮಮಂ ಚುಚ್ಚುವನ್.
ವಲ್ಮೀಕಮೆಂಬಾ ಪದವನಾಲಿಸಿದೆನಗೆ
ಸೀತೆಯಂ ಸಲಹುತಿರ್ಪಾ ಮಹಾ ಕವೀಶ್ವರನ
ನೆನಹು ಮೊಳೆತು
ಏಕೊ ಉಕ್ಕುತಿರ್ಪುದು ಮನಕೆ ದಿವ್ಯದುಃಖಂ !
ಆ ಕವಿಋಷಿಯುಮಿಾ ಶಂಬೂಕನೊಲೆ
ಶೂದ್ರನೈಸೆ ?
ವ್ಯಾಧವೃತ್ತಿಯೊಳಿರ್ದವಂ ಉಗ್ರತಪದಿಂ
ಮಹರ್ಷಿತ್ವಕೇರ್ದನೈಸೆ ?
ತಪೋಮಹಿಮೆಗೆಣೆಯುಂಟೆ ?

[ಬ್ರಾಹ್ಮಣನು ಕೈದೋರಿದ ಕಡೆಗೆ ನೋಡುತ್ತಾ ಬಿಲ್ಲನ್ ಅಣಿಮಾಡುವ ನೆವದಿಂದಲೆಂಬಂತೆ ಶಂಬೂಕಮಹರ್ಷಿಗೆ ಕೈಜೋಡಿಸುತ್ತಾನೆ.]

ಬ್ರಾಹ್ಮಣ.— (ಬೆಚ್ಚಿ ತನ್ನೊಳಗೆ)

ಇದೇನ್ ?
ತಪಂಗೆಯ್ವ ಪಾಷಂಡಿಗೆ ಕೈಮುಗಿವನೋ ?
ಮೇಣ್, ಬಿಲ್ಗೆ ಹೆದೆಯಂ ಬಲಿವ ಬಿಜ್ಜೆಯ ಪಾಂಗೊ ?
ಅರಿಯೆನೀ ಪಾರ್ಥಿವೇಂದ್ರನ ವಿಚಿತ್ರಕೃತಿಯಂ !

(ಬೆರಗುನೋಟದಿಂದ ನಿಲ್ಲುತ್ತಾನೆ)

ಶ್ರೀರಾಮ.— (ಬ್ರಾಹ್ಮಣನ ಕಡೆ ತಿರುಗಿ)

ಭೂಸುರೋತ್ತಮ,
ಕ್ಷತ್ರಿಯನೊಂದು ಸಂದೇಹಮಂ ನಿವಾರಿಸಿ
ಕೃಪೆಗೆಯ್ಯವೇಳ್ಕುಮ್.

ಬ್ರಾಹ್ಮಣ.— (ವಿನಯದಿಂದ) ನನ್ನಲ್ಪಬುದ್ಧಿಗೆ ತೋರ್ಪುದಂ ಪೇಳ್ವೆನ್.

ಶ್ರೀರಾಮ.— (ವ್ಯಂಗದಿಂದಾದರೂ ಗಂಭೀರವಾಗಿ)

ಪೂಜ್ಯರ್ ಉದಾತ್ತ ಬುದ್ಧಿಯಿನ್ ಒರೆಯವೇಳ್ಕುಮ್.

ಬ್ರಾಹ್ಮಣ.— ಯಥಾ ಸಾಮರ್ಥ್ಯಮನ್, ರಾಜೇಂದ್ರ.

ಶ್ರೀರಾಮ.— ತಪಂ ಪೂಜ್ಯಕರ್ಮಮಲ್ತೆ, ದ್ವಿಜೇಂದ್ರ ?

ಬ್ರಾಹ್ಮಣ.— ತಪಕ್ಕೆಣೆಯುಂಟೆ, ರಾಘವೇಂದ್ರ ?
ಶ್ರೀರಾಮ.— ತಪಂಗೆಯ್ವಸುಂ ಪೂಜ್ಯಸಲ್ತೆ ; ವಿಬುಧವರ್ಯ.
ಬ್ರಾಹ್ಮಣ.— ದಿಟಂ, ಧರ್ಮಮೂರ್ತಿ.
ಶ್ರೀರಾಮ.— ಪೂಜ್ಯ ಹನನಂ ಪಾಪಕರಮಲ್ತೆ, ಸತ್ತ್ವಶೀಲ ?
ಬ್ರಾಹ್ಮಣ.— ನಿಸ್ಸಂಶಯಂ, ವಾಲಿಸಂಹಾರಿ.
ಶ್ರೀರಾಮ.— (ಹುಬ್ಬುಗಂಟಿಕ್ಕಿ ನಿಧಾನವಾಗಿ ಹೇಳುತ್ತಾನೆ)
ಅಂತೆವೋಲ್
ಈ ತಪಸ್ವಿಯಂ ಕೊಲ್ವುದುಂ ಪಾಪಮಾಗದೆ !
ಬ್ರಾಹ್ಮಣ.— ವಸಿಷ್ಠ ಶಿಷ್ಯ,
ತರ್ಕಕೆ ಮಿಗಿಲ್ ಶ್ರುತಿವಾಕ್ಯಮೈಸೆ !
ತಪಕ್ಕನಧಿಕಾರಿ ಶೂದ್ರನ್
ಎಂಬುದದು ಶಾಸ್ತ್ರ ಪ್ರಸಿದ್ಧಂ.
ಕೃತಯುಗದೊಳ್ ತಪಕ್ಕರ್ಹರ್ ಬ್ರಾಹ್ಮಣರ್ ಮಾತ್ರಂ.
ತ್ರೇತೆಯೊಳ್ ಕ್ಷತ್ರಿಯರುಮ್ ಅರ್ಹರ್.
ವೈಶ್ಯರುಂ ತಪಂಗೆಯ್ವರಾ ದ್ವಾಪರದೊಳ್.
ಕಲಿಕಾಲಂ ಬರಲ್ ಶೂದ್ರನುಂ ತಪಸ್ವಿ !
ಅದು ಕಾರಣದಿಂ
ಕೃತಯುಗದೊಳ್ ನಾಲ್ಕುಂ ಕಾಲೊಳ್ ನಿಂತ ಧರ್ಮಂ
ತ್ರೇತೆಯೊಳ್ ಮೂಗಾಲಿಯಕ್ಕುಮ್ ;
ದ್ವಾಪರದೊಳ್ ದ್ವಿಪಾದಿ ;
ಕಲಿಯುಗದೊಳ್ ಒಂಟಿಗಾಲೊಳ್ ಕುಂಟಿ
ತತ್ತರಿಸಿ ಸತ್ತುರುಳ್ವುದಾ ವಿಲಯದತ್ತಣ್ಗೆ.—
ಕೇಳ್, ವರ್ಣಾಶ್ರಮ ಧರ್ಮಪಾಲಕ,
ಪಾಲ್ ಪೂಜ್ಯಮಾದೊಡಂ,
ಜೀವಾತುವಾದೊಡಂ,
ತ್ಯಾಜ್ಯಮಾ ನಾಯ ಪಾಲ್ :
ನಾಯ ಪಾಲ್ಗೆಣೆ ಶೂದ್ರನ ತಪಂ !
ಶ್ರೀರಾಮ.— (ಕೋಪವನ್ನು ತೋರಗೊಡದೆ ವ್ಯಂಗ್ಯದಿಂದ)
ಸಾರ್ಥಕಮ್ ನೀಂ ಕಲ್ತ ಬಿಜ್ಜೆ, ಆಚಾರ್ಯ !

(ಸುಯ್ವನ್)

ನಿಮಗೆ ಸಮ್ಮತಮಲ್ತೆ ಬಾಣಪ್ರಯೋಗಂ?
ಬ್ರಾಹ್ಮಣ.— ಅಪ್ಪುದಯ್, ಧನುರ್ಧರ,
ಶಿಕ್ಷೆಗರ್ಹನೀ ಶೂದ್ರತಪಸ್ವಿ.
ಶ್ರೀರಾಮ.— ಶೂದ್ರನಪ್ಪೊಡಂ ತಪಂ ಶಕ್ತಿದಾಯಕಂ.
ಸಾಲದೀತನ ಕೊಲೆಗೆ ಸಾಮಾನ್ಯಸಾಯಕಂ.
ಬ್ರಾಹ್ಮಣ.— ಆವ ದಿವ್ಯಾಸ್ತ್ರದಿಂ ದೈತೇಂದ್ರ ರಾವಣನ
ದಶಶಿರಗಳುರುಳಿದುವೊ ಅದನೆ ತುಡು, ಅರಿಂದಮ;
ಪಾಪ ಕರ್ಮದೊಳೀತನಾತಂಗೆ ಕೀಳಲ್ಲ.
ಶ್ರೀರಾಮ.— ಬ್ರಹ್ಮಾಸ್ತ್ರಂ ಅತಿಭಯಂಕರಂ, ದ್ವಿಜನ್ಮ.
ತನ್ನರಿಯನ್ ಅರಿಯದೆಯೆ ಬಿಡದೆಂತಾದೊಡಂ.
ಬ್ರಾಹ್ಮಣ.— ಈ ಪಾಷಂಡಿಗದು ತಕ್ಕುದೆ ವಲಂ!
ತುಡು, ಕೋದಂಡಪಾಣಿ!

[ಶ್ರೀರಾಮನು ಬತ್ತಳಿಕೆಗೆ ಕೈಯಿಕ್ಕುತ್ತಾನೆ. ಭೂಮಿ ನಡುಗುತ್ತದೆ. ಗಗನ ಗುಡುಗುತ್ತದೆ. ಬ್ರಾಹ್ಮಣನು ಹೆದರಿ, ಸೆಡೆತು, ರಾಮನ ಮರೆಗೆ ಹೊಗುತ್ತಾನೆ. ಮೃತ್ಯು ಬೆಪ್ಪಾಗಿ ಕೂಗುತ್ತದೆ.]

ಮೃತ್ಯು.— ತಾಳ್ ತಾಳ್, ಋತಪ್ರಭೂ!
ಶ್ರೀರಾಮ.— (ಮೃತ್ಯುವನು ಲಕ್ಷಿಸಿ) ನಿಸಗಿದೇನ್ ತಲ್ಲಣಂ?
ಮೃತ್ಯು.— ಇದೇನ್ ಆಟವೋ ದಿಟವೋ?
ನನಗರಿವುದೋರ್!
ನನಗಾವುದು ನಡೆವ ಬಟ್ಟೆ?
ಶ್ರೀರಾಮ.— (ಹುಬ್ಬುಗಂಟಿಕ್ಕಿ)
ಮೃತ್ಯೂ,
ಅಲಂಘ್ಯಮೇಗಳುಂ ಕರ್ತವ್ಯಮಖಿಲರ್ಗಂ!—
ಮಾರ್ಗದರ್ಶಿ ಈ ಮಹಾಸ್ತ್ರಂ.
ಮೃತ್ಯು.— ಆಜ್ಞೆ! (ತಲೆಬಾಗಿ, ಅಸ್ತ್ರಾನುಸಾರಿಯಾಗಲು, ಸಿದ್ಧವಾಗುತ್ತದೆ.)

[ಶ್ರೀರಾಮನು ಬ್ರಾಹ್ಮಾಸ್ತ್ರವನ್ನು ತೊಟ್ಟು, "ಅರಸಿ ಕೊಲ್ ಅರಗುಲಿಯನ್!" ಎಂದು ಅಘೋಷಿಸಿ, ಸೆಳೆದು ಬಿಡುತ್ತಾನೆ. ಮಿಂಚು ತಳಿಸುತ್ತದೆ. ಸಿಡಿಲೆರಗುತ್ತದೆ. ಬಿರುಗಾಳಿ ಭೋರಿಡುತ್ತದೆ. ಧೂಳಿ ಕವಿಯುತ್ತದೆ. ಅರಣ್ಯ ಸಮಸ್ತವೂ ತಪಿಸಿ ಚೀತ್ಕರಿಸುತ್ತದೆ. ಮೃತ್ಯುವಿನ ಕರಾಳ ಛಾಯೆ ರೌದ್ರರೋಷದಿಂದಲೂ ಶರವೇಗದಿಂದಲೂ ಅಸ್ತ್ರವನು ಹಿಂಬಾಲಿಸುತ್ತದೆ. ತಪಸ್ವಿಯ ಸಮೀಪ ಕೈದಿದ ಬ್ರಹ್ಮಾಸ್ತ್ರವು ತನ್ನ ಉಗ್ರತೆಯನ್ನುಳಿದು, ವಿನೀತವಾಗಿ, ಶಂಬೂಕ ಋಷಿಯನ್ನು ಬಲಗೊಂಡು

ಅಡ್ಡ ಬೀಳುತ್ತದೆ. ವ್ಯುತ್ಯುವೂ ಅದನ್ನೇ ಅನುಕರಿಸುತ್ತದೆ. ಬೆಬ್ಬಳಿಸಿ ನೋಡುತ್ತಿರುವ ಬ್ರಾಹ್ಮಣನಿಗೆ ಶ್ರೀರಾಮನು ಮುಗುಳುನಗೆಗೂಡಿ ಹೇಳುತ್ತಾನೆ.]

ಶ್ರೀರಾಮ.— ಇದೇನ್, ಆಚಾರ್ಯ?

ಬ್ರಾಹ್ಮಣ.— ಹೇ ದಾಶರಥಿ, ಇದೆಲ್ಲಂ ಶೂದ್ರತಪಸ್ವಿಸ
ತಮಃ ಪ್ರಭಾವಮೆ ದಲ್!
ನೀನೆಚ್ಚ ಬ್ರಹ್ಮಾಸ್ತ್ರಮುಂ ಆಯ್ತೆ ನಿಷ್ಫಲಂ?

ಶ್ರೀರಾಮ.— ಬ್ರಹ್ಮಾಸ್ತ್ರಮಾದಪುದೆ ನಿಷ್ಫಲಂ?
ಈಗಳೆಯೆ ಸಫಲಮಕ್ಕುಂ.

ಬ್ರಾಹ್ಮಣ.— (ಅಚ್ಚರಿಯಿಂದ) ಎಂತು?

ಶ್ರೀರಾಮ.— ಋಷಿವರಗೆ ಮರ್ಯಾದೆಯಂ ಸಲಿಸಿ,
ತದನಂತರಂ, ಬರ್ಪುದಿತ್ತಣ್ಗೆ.

ಬ್ರಾಹ್ಮಣ.— ಮತ್ತಮಿತ್ತಣ್ಗೆ? ಅದೇಕಯ್?

ಶ್ರೀರಾಮ.— ಧ್ವಂಸಗೆಯ್ಯಲ್ಕೆ ತನ್ನ ಹಗೆಯನ್!

ಬ್ರಾಹ್ಮಣ.— ಆರನ್?

ಶ್ರೀರಾಮ.— ಅಧರ್ಮಿಯನ್.

ಬ್ರಾಹ್ಮಣ.— ಆ ಶೂದ್ರನನೆ?

ಶ್ರೀರಾಮ.— ಅಲ್ತಲ್ತು. ಬ್ರಾಹ್ಮಣವರೇಣ್ಯನನ್!

ಬ್ರಾಹ್ಮಣ.— ಬ್ರಾಹ್ಮಣ ವರೇಣ್ಯನನ್?

ಶ್ರೀರಾಮ.—(ದರ್ಪಧ್ವನಿಯಿಂದ)
ಪೂಜ್ಯರನ್ ಅವಜ್ಞೆಗೆಯ್ದಾತನನ್;
ಶಾಸ್ತ್ರ ಸಂಭ್ರಾಂತನನ್, ದುರ್ವಿನೀತನನ್!

ಬ್ರಾಹ್ಮಣ.— (ಶ್ರೀರಾಮನ ಇಂಗಿತಕ್ಕಳ್ಕಿ) ಆ್ಞಃ?!

ಶ್ರೀರಾಮ.— (ಬ್ರಾಹ್ಮಣನ ಕಡೆಗೆ ನೋಡದೆ) ನಿನ್ನನ್, ದ್ವಿಜೋತ್ತಮ!

ಬ್ರಾಹ್ಮಣ.— ರಕ್ಷಿಸು, ಅನಾಥರಕ್ಷಕಾ, ದೀನಬಂಧೂ! (ಕಾಲ್ವಿಡಿಯಲೆಳಸುತ್ತಾನೆ.)

ಶ್ರೀರಾಮ.— (ಅವನ ಕಡೆಗೆ ನೋಡದೆ)
ನೀಮ್ ಅವಜ್ಞೆಗೆಯ್ದುದು ನನ್ನನಲ್ತು.

ಬ್ರಾಹ್ಮಣ.— ಗತಿಯೇನೆನಗೆ ಬಟ್ಟೆದೋರಯ್,
ಕ್ಷಮಾಕನ್ಯಾ ಜೀವಿತೇಶ್ವರ!

ಶ್ರೀರಾಮ.— (ಅವನ ಕಡೆಗೆ ನೋಡದೆ)
ಮಾರ್ಗದರ್ಶಿ ಆ ಮಹಾಸ್ತ್ರಂ!

ಬ್ರಾಹ್ಮಣ.— ಅಂತೆಗೆಯ್ವೆನ್ ; ನಿನ್ನಾಜ್ಞೆ.

ಶ್ರೀರಾಮ.— (ಅವನನ್ನು ನೋಡಿ, ದಯೆಯಿಂದ)

ಸಾಲದಿಲ್ಲಿಗೆ ಬರಿಯ ಆಜ್ಞಾಪಾಲನಂ.
ಕಣ್‌ದೆರೆಯವೇಳ್ಕುಂ ಬುಧಪ್ರಜ್ಞೆಯುಂ, ದ್ವಿಜನ್ಮ :
ತಂದೆಯುಂ ಬರ್ದುಕುವನ್ ; ಕಂದನುಂ ಬಳ್ದಪನ್.

ಬ್ರಾಹ್ಮಣ.— ಅಶಾಸ್ತ್ರಮೆಂದಳ್ಕುವೆನ್, ಕ್ಷತ್ರಿಯೋತ್ತಮ.

ಶ್ರೀರಾಮ.— ಸನ್ಮತಿಯ ಸತ್ಕೃತಿಗೆ ಶಾಸ್ತ್ರದ ಸೆರಂ ಬೇಕೆ ?

ಆದೊಡಂ ನಿನಗೋಸುಗಮ್ ಒರೆವೆನೊಂದನ್,
ಶ್ಲೋಕಪ್ರಮಾಣಮನ್ : ಕೇಳ್, ಶ್ರೋತ್ರೀಯ !

ಆಕಾಶವಾಕ್.— "ಕೇವಲಂ ಶಾಸ್ತ್ರಮಾಶ್ರಿತ್ಯ ನ ಕರ್ತವ್ಯೋ ವಿನಿರ್ಣಯಃ |
ಯುಕ್ತಿಹೀನ ವಿಚಾರೇ ತು ಧರ್ಮಹಾನಿಃ ಪ್ರಜಾಯತೇ ||"

ಬ್ರಾಹ್ಮಣ.— (ಎವೆಯಿಕ್ಕದೆ ಶ್ರೀರಾಮನನ್ನೇ ನೋಡುತ್ತಾ ತುಸುಹೊತ್ತು ನಿಂತು, ತೆಕ್ಕನೆ)

ಬೋಧವಾಯ್ತೆನಗೀಗಳ್, ಮಹಾಪ್ರಾಜ್ಞ.
ಬುದ್ಧಿಗಲಿಸಿದಯ್ ಸಂಪ್ರದಾಯಬದ್ಧಂಗೆ,
ಶಾಸ್ತ್ರಸಂಮೂಢಂಗೆ, ಜಾತಿಗರ್ವಾಂಧಂಗೆ.—
ಆವ ಜಾತಿಯ ತರುವೊ ? ಇಂಧನಕೆ ಹೊರತುಂಟೆ ?
ಬೆಂಕೆಗೇಂ ಭೇದಮೆ ? ದಳ್ಳುರಿಗೆ ದಾಕ್ಷಿಣ್ಯವೆ ?
ಆರಾದರೇನ್ ? ಆರಾಧ್ಯರ್ ತಪೋಧನರ್ !
ನಮಸ್ಕಾರಮೆ ಪುಣ್ಯಂ ; ತಿರಸ್ಕಾರಮೆ ಪಾಪಂ !

ಶ್ರೀರಾಮ.— ಅವರ್ಗೇನ್ ಗೆಯ್ದೊಡಂ ಪುಣ್ಯಮೆಂದರಿವಿರೀಗಳ್ :

ಭೂಮದಿಂದೆಂತಾದೊಡಂ ಅಲ್ಪಫಲಮಕ್ಕುಮೇ ?
ಪೀಡಿಸಿದೊಡಮ್ ಇಕ್ಷು ಮಧುರಸವನೀವಂತೆ,
ಕಡೆದೊಡಂ ಕಡಲ್ ಅಮೃತಮಂ ಕೊಡುವಂತೆ,
ನಿಮಗೊಳ್ಳಿತಕ್ಕುಮ್, ವಿಪ್ರದೇವ !

[ಮುಂದೆ ಮುಂದೆ ತೂಣಗೊಂಡವನಂತೆ ನಡೆದು ಬ್ರಾಹ್ಮಣನು ಶಂಬೂಕ ಮಹರ್ಷಿಗೆ ಸಾಷ್ಟಾಂಗಪ್ರಣಾಮ ಮಾಡುತ್ತಾನೆ. ವನವೆಲ್ಲ ಸಸಂಭ್ರಮವಾಗುತ್ತದೆ. ಹೂಮಳೆಗರೆಯುತ್ತದೆ. ದೇವದುಂದುಭಿ ಮೊಳಗುತ್ತದೆ. ಮೃತ್ಯುಛಾಯೆ ಬೇಗಬೇಗನೆ ಓಡಿ ಕಣ್ಮರೆಯಾಗುತ್ತದೆ. ಬ್ರಾಹ್ಮಣ ಕುಮಾರನು ಮಲಗಿದ್ದವನು ಏಳುವಂತೆ ಎದ್ದು ಕಣ್ಣುಜ್ಜಿಕೊಂಡು, ಸುತ್ತಲೂ ನೋಡಿ, ತನ್ನ ತಂದೆಯನ್ನು ಕರೆಯುತ್ತಾನೆ.]

ಕುಮಾರ.— ತಾತ! ತಾತ! — ಓ ತಾತಾ! —

ಹೂ ಕುಯ್ಯುತಿದ್ದವನ್ ಇಲ್ಲಿಯೆ ಮಲಗಿದೆನೆ? —
ಎತ್ತವೋದನೊ ತಾತನ್ ನನ್ನನಿಲ್ಲಿಯೆ ಬಿಟ್ಟು?

(ಹೂಬುಟ್ಟಿ ತೆಗೆದುಕೊಂಡು ಮುಂಬರಿದು ರಾಮನನ್ನು ನೋಡಿ)

ಆರೀತನ್ ರುಂದ್ರಸತ್ತ್ವನ್? ದೇವತೆವೋಲ್ ಪೊಳೆವನ್!

ಶ್ರೀರಾಮ.— ಅಂಜದಿರ್, ಬಾ ವತ್ಸ, ನಿನ್ನಯ್ಯನದೋ (ತೋರುತ್ತಾನೆ.)

[ಎದ್ದು ಬರುತ್ತಿದ್ದಾ ಹೊಸ ತೇಜಸ್ಸಿನಿಂದ ಹೊಳೆಯುತ್ತಿದ್ದಾ ಬ್ರಾಹ್ಮಣನನ್ನು ನೋಡಿ ಕುಮಾರನು 'ತಾತ! ತಾತ!' ಎನ್ನುತ್ತಾ ಓಡಿಹೋಗಿ ತಬ್ಬಿಕೊಳ್ಳುತ್ತಾನೆ. ಮಾತಿಲ್ಲದ ಹರ್ಷದಿಂದ ಕಣ್ಣೀರಿಡುತ್ತಾ ಬ್ರಾಹ್ಮಣನು ಮಗನನ್ನು ರಾಮನೆಡೆಗೆ ಕರೆತರುತ್ತಾನೆ.]

ಬ್ರಾಹ್ಮಣ.— (ಸಗದ್ಗದನಾಗಿ)

ಕೈಮುಗಿ, ಕಂದಾ, ಸೀತಾಪತಿಗೆ.
ರಾಜರಾಜೇಂದ್ರಂಗೆ! ಶ್ರೀರಾಮಚಂದ್ರಂಗೆ!
ನಮ್ಮಿರ್ವರುಮನ್ ಪೊರೆದಂಗೆ!

[ಕುಮಾರನು ಹಿಗ್ಗಿ ಕೈಮುಗಿಯುತ್ತಾನೆ. ಶ್ರೀರಾಮನು ಅವನನ್ನೆತ್ತಿ, ಮುದ್ದಾಡಿ, ಶಂಬೂಕ ಋಷಿಯನ್ನು ತೋರಿಸುತ್ತಾನೆ.]

ಶ್ರೀರಾಮ.— ನಮಸ್ಕರಿಸಾ ಮಹಾತಪಸ್ವಿಗೆ, ದ್ವಿಜಕುಮಾರ.

ಋಷಿಕೃಪೆಯಿಂ ನೀನಿಗಳ್ ದಿಟದಿಂ ದ್ವಿಜನ್.
ತಪಂ ತಾನಿರ್ಪೆಡೆಯೊಳೆ ದೂರಕರ್ಮಿ! (ಕುಮಾರನು ಕೈಮುಗಿಯುತ್ತಾನೆ.)
ನಿನ್ನ ಕೈಗಳೆ ನಿನ್ನನೆತ್ತಿರ್ಪನ್ನ ಕೈಗಳಕ್ಕೆ!
ಅಖಿಲರ್ಗಂ ಶ್ರೇಯಮಕ್ಕೆ!
ರಾಜ್ಯಂ ನಿರ್ವಿಘ್ನಮಕ್ಕೆ! ಋತಂ ಗೆಲ್ಗೆ!

[ಕುಮಾರನಂತೆ ಬ್ರಾಹ್ಮಣನೂ ಕೈಮುಗಿಯುತ್ತಾನೆ. ಶಂಬೂಕಋಷಿಯನ್ನು ಸುತ್ತಿಮುತ್ತಿದ್ದ ಹೊದೆಯ ಹಳು ಅಲುಗುತ್ತದೆ. ತೋಳ್ಗರೆರಡು ಹೊರದೋರಿ ಒಯ್ಯನೆ ಆಶೀರ್ವಾದ ಮುದ್ರೆಯಲ್ಲಿ ಸ್ಥಾಯಿಯಾಗುತ್ತವೆ. ದೇವವೀಣಾಗಾನವು ವಾಯುಮಂಡಲವನ್ನೆಲ್ಲ ತುಂಬುತ್ತದೆ. ಪುಷ್ಪವೃಷ್ಟಿಯಾಗಿ, ಆ ವೃಷ್ಟಿಧಾರೆಯೆ ನೆಯ್ದ ಜವನಿಕೆಯೆಂಬಂತೆ ದೃಶ್ಯದ ಮೇಲೆ ತೆರೆಬೀಳುತ್ತದೆ.]

ಕುವೆಂಪು.

ಸಂಪೂರ್ಣಂ.

# ಅಲಂಪೂರು

"ನಾನು ಹೇಳುವುದು ಅತ್ಯುಕ್ತಿಯಲ್ಲ, ರಾಯರೇ. ಆ ಊರು ಪುಣ್ಯಕ್ಷೇತ್ರವೆನಿಸಿ ದಕ್ಷಿಣಕಾಶಿ ಎಂದು ಹೆಸರಾಗಿರುವುದಲ್ಲದೆ ನಿಮ್ಮಂತಹರು ಸಂದರ್ಶಿಸತಕ್ಕ ಚಾರಿತ್ರಕ ವಿಷಯಗಳೂ ಅಲ್ಲಿ ಹೇರಳವಾಗಿವೆ. ನೀವು ಆ ಸ್ಥಳವನ್ನು ಅಗತ್ಯವಾಗಿ ನೋಡಬೇಕು."

ಕಳೆದ ಫೆಬ್ರುವರಿ ತಿಂಗಳು; ಕರ್ನೂಲ ಜಿಲ್ಲೆಯ ನಂದೀಕೊಟ್ಕೂರ ತಾಲೂಕಿನಲ್ಲಿ ಅನ್ವೇಷಣ ಸಂಚಾರಮಾಡುತ್ತಿರುವಾಗ ಪರಿಚಿತರೊಬ್ಬರು ಈ ಮೇರೆಗೆ ಹತ್ತಿರದಲ್ಲಿ ಇರುವ ಅಲಂಪೂರು ಗ್ರಾಮದ ಸಮಾಚಾರವನ್ನು ಅರುಹುತ್ತ ನಾನದನ್ನು ನೋಡುವುದಾಗಿ ಸೂಚಿಸಿದರು. ನಂದೀಕೊಟ್ಕೂರು ತಾಲೂಕಿನ ಕೆಲಭಾಗಕ್ಕೆ ವಾಯವ್ಯ ಮೇರೆಯಾಗಿ ಹರಿದ ತುಂಗಭದ್ರೆ ನೈಜಾಂ ರಾಜ್ಯ ಮತ್ತು ಮದ್ರಾಸ್ ಪ್ರಾಂತಗಳನ್ನು ಬೇರ್ಪಡಿಸುವ ಎಲ್ಲೆಕಟ್ಟಾಗಿದೆ. ಅಲಂಪೂರು ಈ ಹೊಳೆಯ ಆಚೆಯ ದಂಡೆಯಲ್ಲಿ ನೆಲಸಿದ್ದು ನೈಜಾಂ ರಾಜ್ಯಕ್ಕೆ ಸೇರಿದೆ. ಅದು ರಾಯಚೂರ ಜಿಲ್ಲೆಯಲ್ಲಿಯ ಅದೇ ಹೆಸರಿನ ತಾಲೂಕಿನ ಮುಖ್ಯಸ್ಥಳವು. ಪರಿಚಿತರ ಸೂಚನೆಯಂತೆ ಈ ಊರನ್ನು ನೋಡುವುದಾಗಿ ನಿರ್ಧರಿಸಿ ಒಂದು ದಿನ ಅಲ್ಲಿಗೆ ಹೊರಟೆನು.

ಈ ಊರನ್ನು ಸುತ್ತಿಕೊಂಡು ಬರುವ ಸಾಮಾನ್ಯ ಪ್ರವಾಸಿಯ ಕಣ್ಣಿಗೂ ಇಲ್ಲಿಯ ಇಂದಿನ ಅರಸೊತ್ತಿಗೆಯ ಕುರುಹುಗಳು ಸಾಕಷ್ಟು ಬೀಳದಿರಲಾರವು. ಆದರೆ ಇಂದಿನ ಈ ನಾಗರಿಕತೆಗಿಂತ ಹೆಚ್ಚು ಆಕರ್ಷಕವಾದುದು ಇಲ್ಲಿಯ ಪ್ರಾಕೃತಿಕ ಮತ್ತು ಚಾರಿತ್ರಕ ರಚನೆ. ಮಹಮ್ಮದೀಯ ಯುಗದಲ್ಲಿ ನಿರ್ಮಿತವಾಗಿ ಇಂದಿಗೂ ಬಹುಮಟ್ಟಿಗೆ ಭದ್ರವಾಗಿ ಉಳಿದಿದ್ದ ಇಲ್ಲಿಯ ವಿಸ್ತಾರವಾದ ಕೋಟೆಯೂ ಆ ಕೋಟೆಗೆ ಅಂಟಿಕೊಂಡು ಮೆದುವಾಗಿ ಹರಿಯುವ ತುಂಗಭದ್ರೆಯೂ ಆ ಹೊಳೆಯ ವಿಶಾಲವಾದ ಪಾತ್ರವೂ ಈ ಸ್ಥಳದ ಘನತೆಯನ್ನೂ ಭವ್ಯತೆಯನ್ನೂ ಹೆಚ್ಚಿಸಿವೆ.

ಮಹಮ್ಮದೀಯ ಆಳಿಕೆಯ ಅನೇಕ ಪಾಳುಗಳೂ ಪ್ರಾಚೀನ ಅವಶೇಷಗಳೂ ಇಲ್ಲಿ ದೊರೆಯುವುವು. ಅವುಗಳಲ್ಲಿ ಸಿರ ಮುಬಾರಕ (ಪವಿತ್ರ ತಲೆ) ಮತ್ತು ಧಡ ಮುಬಾರಕ (ಪವಿತ್ರ ದಿಂಡು) ಎಂದು ಕರೆಯಲಾಗುವ ಸಯ್ಯದ ಶಾಹ ಅಲಿ ಬಾದಷಹನ ಎರಡು ಸಮಾಧಿಗಳು ಮುಖ್ಯವಾದುವು. ಸಯ್ಯದ ಶಾಹ ಅಲಿ ಕಾದುತ್ತಿರುವಾಗ ಆತನ ರುಂಡವು ಕತ್ತರಿಸಿ ಒಂದುಕಡೆ ಬಿದ್ದಿತಂತೆ; ಆ ಎಡೆಯಲ್ಲಿ ಒಂದು ಸಮಾಧಿ ಆಯಿತು. ಮುಂದೆ ಸ್ವಲ್ಪ ಹೊತ್ತು ಹಾಗೆಯೆ ಹೋರಾಡುತ್ತ ಆತನ

ಡಿಂಬವು ಇನ್ನೊಂದುಕಡೆ ಬಿದ್ದಿತಂತೆ; ಅಲ್ಲಿ ಮತ್ತೊಂದು ಸಮಾಧಿ ಆಯಿತು. ಈ ಸಮಾಧಿಗಳ ಮೂಲಕ ಈ ಊರು ಮಹಮ್ಮದೀಯರಿಗೆ ಪವಿತ್ರ ಕ್ಷೇತ್ರವಾಗಿದ್ದು ಪ್ರತಿ ವರ್ಷ ಇಲ್ಲಿ ಉತ್ಸವವು (ಉರುಸ) ನಡೆಯುತ್ತಿದೆ.[1] ಈ ಸಿರ ಮುಬಾರಕದ ಇನ್ನೊಂದು ಸೋಜಿಗವೆಂದರೆ ಇದರ ಸಮಾಧಿ. ಈ ಮುಂದೆ ಹೇಳಲಾಗುವ ಬಾಲ ಬ್ರಹ್ಮೇಶ್ವರ ದೇವಾಲಯದ ಒಳಪ್ರಾಕಾರದಲ್ಲಿ ಇದೆ. ಈ ಸಿರ ಮುಬಾರಕ ದರಗಕ್ಕೂ ಬಾಲಬ್ರಹ್ಮೇಶ್ವರ ದೇವಾಲಯಕ್ಕೂ ಪ್ರವೇಶದ್ವಾರವಾಗಿರುವ ಹೆಬ್ಬಾಗಿಲ ಒಂದು ಗೂಡಿನಲ್ಲಿ ಕಂಚಿ ಕಾಮಾಕ್ಷಿಯ ವಿಗ್ರಹವಿದೆ. ಶಾಹ ಅಲಿಗೆ ಅಭಯವಿತ್ತು ಕಾಪಾಡಿದ ದೇವತೆ ಇವಳು ಎಂದು ಹೇಳುವರು. ಕಾಮಾಕ್ಷಿಯಂತೆ ಕಂಚಿಕ್ಷೇತ್ರದ ಇನ್ನೊಂದು ನಾಮಾಂಕಿತ ದೈವತವಾದ ಏಕಾಮ್ರೇಶ್ವರನೂ ಇಲ್ಲಿ ನೆಲಸಿರುವನು. ಆತನಿಗೆ ಕಾಮಾಕ್ಷಿಯ ಪಕ್ಕದ ಇನ್ನೊಂದು ಗೂಡಿನಲ್ಲಿ ಸ್ಥಳವು ದೊರೆತಿದೆ.

ಮುಸಲ್ಮಾನರ ಕಾಲದ ಈ ವಿಚಿತ್ರ ಅವಶೇಷಗಳಿಗಿಂತ ಪ್ರಾಚೀನವೂ ವಿಲಕ್ಷಣವೂ ಆದ ಅವಶೇಷಗಳು ಹಿಂದು ಯುಗಕ್ಕೆ ಸಂಬಂಧಿಸಿದುವಾಗಿವೆ. ಇವುಗಳಲ್ಲಿ ಪ್ರಧಾನವಾದುವು ಒಂದು ವಿಶಾಲವಾದ ಪ್ರಾಕಾರದಲ್ಲಿ ಅಲ್ಲಲ್ಲಿ ನೆಲಸಿರುವ ಗರ್ಭಗೃಹ, ಸುಖನಾಸಿ, ಮುಖಮಂಟಪ, ಮೇಲೆ ಗೋಪುರ, ಮುಂತಾದ ಸ್ವತಂತ್ರ ಗುಡಿಗಳ ಅಂಗಗಳಿಂದ ಕೂಡಿದ ಒಂಬತ್ತು ಈಶ್ವರಾಲಯಗಳು. ಇವುಗಳ ದೈವತವು ಶಿವಲಿಂಗ. ಇವುಗಳಿಗೆ ಬ್ರಹ್ಮ ಎಂಬ ಅಂಕಿತವುಳ್ಳ ಹೆಸರುಗಳು ಇವೆ. ಅವು ಹೀಗೆ: (೧) ಬಾಲಬ್ರಹ್ಮೇಶ್ವರ, (೨) ಅರ್ಕಬ್ರಹ್ಮೇಶ್ವರ, (೩) ಕುಮಾರಬ್ರಹ್ಮೇಶ್ವರ, (೪) ವೀರಬ್ರಹ್ಮೇಶ್ವರ, (೫) ಗರುಡಬ್ರಹ್ಮೇಶ್ವರ, (೬) ತಾರಕಬ್ರಹ್ಮೇಶ್ವರ, (೭) ಸ್ವರ್ಗ ಬ್ರಹ್ಮೇಶ್ವರ, (೮) ಪದ್ಮಬ್ರಹ್ಮೇಶ್ವರ, (೯) ವಿಶ್ವಬ್ರಹ್ಮೇಶ್ವರ. ಈ ಗುಡಿಗಳ ಮೇಲಿನ ಗೋಪುರ, ಒಳಗಿನ ಮಂಟಪದ ಕಂಬಗಳು ಮುಂತಾದ ಎಡೆಯಲ್ಲಿ ಚಿತ್ತಾರದ ಕೆಲಸವು ಕಂಗೊಳಿಸುತ್ತಿದೆ.

ಈ ಒಂಬತ್ತು ಶಿವಾಲಯಗಳಲ್ಲಿ ಬಾಲಬ್ರಹ್ಮೇಶ್ವರನದು ಅಗ್ರಸ್ಥಾನವು. ಇಲ್ಲಿ ಬ್ರಹ್ಮದೇವನು ಯಜ್ಞಮಾಡಿ ಆ ಹೋಮಕುಂಡದ ತಾಣದಲ್ಲಿ ಈ ಶಿವಲಿಂಗವನ್ನು ಪ್ರತಿಷ್ಠೆಮಾಡಿದನು ಎಂದು ಹೇಳುವರು. ಇದು ತೇಜೋಲಿಂಗವಂತೆ. ಕಲ್ಲಿನದಾದ ಈ ಲಿಂಗವು ಚಿಕ್ಕದಾಗಿದ್ದು, ಅದರ ಮೇಲೆ ಚಕ್ರಾಂಕಿತವೂ ಶಾಲಿಗ್ರಾಮ-ರುದ್ರಾಕ್ಷಿ

---

[1] ಈ ಶಾಹ ಅಲಿ ಚಾರಿತ್ರಕ ಪುರುಷನೇ. ಆದರೆ ಸಾಧನ ಮತ್ತು ಸಮಯಾಭಾವ ಮೂಲಕ ಆತನ ವಿಷಯವಾಗಿ ಹೆಚ್ಚಿನ ಅನ್ವೇಷಣ ನಡೆಸಲು ಸಾಧ್ಯವಾಗಿಲ್ಲ. ಇದೇ ಮೇರೆಗೆ ಈ ಲೇಖನದಲ್ಲಿ ಈ ಮುಂದೆ ನಿರೂಪಿಸಿದ ಅನೇಕ ಆಖ್ಯಾಯಿಕೆಗಳ ವಿಷಯವಾಗಿಯೂ ಹೆಚ್ಚಿನ ವಿಮರ್ಶೆಯನ್ನು ನಡೆಸಲು ಆಗಿರುವುದಿಲ್ಲ.

ಗಳ ಚಿಹ್ನೆಗಳೂ ಇವೆಯಂತೆ. ಈ ಲಿಂಗದ ಮೇಲೆ ಆವರಣವಾಗಿ ರಾಳದ ಲಿಂಗವೊಂದು ಇದ್ದು, ಈ ಆವರಣವನ್ನು ಸುಮಾರು ೨೦ ವರ್ಷಕ್ಕೆ ಒಮ್ಮೆ ತೆಗೆದು ಹೊಸದನ್ನು ಕೂಡಿಸುವರಂತೆ. ಮೂಲಲಿಂಗವನ್ನು ಸುರಕ್ಷಿತವಾಗಿ ಕಾಪಾಡುವ ಉದ್ದೇಶದಿಂದ ಮೇಲೆ ತೋರಿಕೆಗೆ ದರ್ಶನೀಲಿಂಗವನ್ನು ಇರಿಸಿರುವರಂತೆ. ಇದರ ಹೆಸರು ಘಟಾಟೋಪಲಿಂಗ. ಬಾಲಬ್ರಹ್ಮೇಶ್ವರ ಲಿಂಗವು ಶಿವ ಮತ್ತು ವಿಷ್ಣುವಿನ ಅಂಕಿತದಿಂದ ಕೂಡಿರುವುದರಿಂದ ಮಿಕ್ಕೆಡೆ ಶಿವನಿರ್ಮಾಲ್ಯವರ್ಜ್ಯವಾಗಿದ್ದರೂ ಇಲ್ಲಿ ಅದು ಗ್ರಾಹ್ಯವಾದುದು.

ಬಾಲಬ್ರಹ್ಮೇಶ್ವರನ ಸೆರೆಯಲ್ಲಿ ಜೋಗಳಾಂಬೆ ಇರುವಳು. ಈಕೆ ಬಾಲಬ್ರಹ್ಮನ ಅರ್ಧಾಂಗಿ, ಈಕೆಯ ಮಹಿಮೆ ಘನವಾದುದು. ಯೋಗಿನಿಯಾದ ಈಕೆಯ ವಿಗ್ರಹವು ಉಗ್ರವಾಗಿದೆ. ಈಕೆಯ ಸ್ಥಾನವು ಅಷ್ಟಾದಶ ಶಕ್ತಿಪೀಠಗಳಲ್ಲಿ ಒಂದು ಅಂತೆ.

ಬಾಲಬ್ರಹ್ಮೇಶ್ವರ ಗುಡಿಯೊಳಗೆ ರಸಸಿದ್ಧನೆಂಬ ತಪಸ್ವಿಯೊಬ್ಬನ ಮೂರ್ತಿ ಇದೆ. ಈತನ ಬಗೆಗೆ ಈ ರೀತಿಯ ಆಖ್ಯಾಯಿಕೆಯನ್ನು ಹೇಳುವರು : ಈತನು ಮೊದಲು ಕಾಶಿಯವನು. ಒಬ್ಬ ವಿಧವೆಯ ಹೊಟ್ಟೆಯಲ್ಲಿ ಈಶ್ವರವೀರ್ಯದಿಂದ ಹುಟ್ಟಿದನು. ರಸಸಿದ್ಧಿಯನ್ನು ಪಡೆದನು. ಈತನು ಶಿಲ್ಪಕಲೆಯಲ್ಲಿ ಕುಶಲನು. ಈ ಊರಿಗೆ ಬಂದು ಗುಡಿಗಳನ್ನು ಕಟ್ಟಿಸಲಾರಂಭಿಸಿದನು. ಗುಡಿಗಳನ್ನು ಕಟ್ಟಿಸುವಾಗ ಅನೇಕ ಜನಗಳು ಈತನ ಕೈಕೆಳಗೆ ಕೆಲಸಮಾಡುತ್ತಿದ್ದರು. ಆ ಕೆಲಸಗಾರರಿಗೆ ಕೊಡತಕ್ಕ ವೇತನವೆಂದು ಉಸುಬಿನ ಕುಪ್ಪೆಗಳನ್ನು ಮಾಡಿ ಮಾಡಿ ಇಡುತ್ತಿದ್ದನು. ಆ ಕೆಲಸಗಾರನು ಬಂದೊಡನೆ ಆ ಮರಳನ್ನು ಮುಟ್ಟುವನು. ಕೂಡಲೆ ಅದು ಚಿನ್ನವಾಗಿ ಆ ಕೆಲಸಗಾರನ ಕೆಲಸದ ಯೋಗ್ಯತೆಯಂತೆ ಪ್ರತಿಫಲವು ದೊರೆಯುತ್ತಿದ್ದಿತು. ಆ ರಸಸಿದ್ಧನಿಗೆ ಇಷ್ಟನಾದ ಗಾಣಿಗನೊಬ್ಬನು ಇಲ್ಲಿ ಇರುತ್ತಿದ್ದು ಈತನು ಆತನಿಗೆ ನೆರವಾಗುತ್ತಿದ್ದನು. ಈ ಗಾಣಿಗನದು ಎಂದು ತೋರಿಸುವ ಇನ್ನೊಂದು ವಿಚಿತ್ರ ವಿಗ್ರಹವು ಈ ರಸಸಿದ್ಧನ ಪಕ್ಕದಲ್ಲಿ ಇದೆ. ಇದಲ್ಲದೆ ರಸಸಿದ್ಧನ ಶಿಷ್ಯರವು ಎಂದು ಹೇಳುವ ಇನ್ನೂ ಕೆಲ ತಪಸ್ವಿಗಳ ವಿಗ್ರಹಗಳೂ ಇವೆ. ರಸಸಿದ್ಧನ ವಿಗ್ರಹದ ಪಟ್ಟಿಯಮೇಲೆ ಹಳಗನ್ನಡ ಲಿಪಿಯ ಚಿಕ್ಕ ಲೇಖನವಿದೆ.

ಬಾಲಬ್ರಹ್ಮೇಶ್ವರ ಗುಡಿಯಲ್ಲಿ 'ಆಲೋಚನಾಗೃಹ' ಎಂದು ತೋರಿಸುವ ಗೂಡಿನಲ್ಲಿ ಬ್ರಹ್ಮ, ನರಸಿಂಹರೂಪಿ ವಿಷ್ಣು ಮತ್ತು ದಕ್ಷಿಣಾಮೂರ್ತಿಯಾದ ಶಿವನ ವಿಗ್ರಹಗಳು ಇವೆ. ಇದಲ್ಲದೆ ಕುಮಾರಸ್ವಾಮಿ, ಕಾಲಭೈರವ ಮೊದಲಾದ ವಿಗ್ರಹಗಳನ್ನೂ ಕಾಣಬಹುದು.

ನವಲಿಂಗೇಶ್ವರ ಗುಡಿಯ ಪ್ರಾಕಾರದಲ್ಲಿಯ ಇನ್ನೆರಡು ವಿಗ್ರಹಗಳನ್ನು ಗಮನಿಸಬೇಕಾದುದು. ಒಂದನೆಯದು ಸ್ತ್ರೀ ವಿಗ್ರಹ; ಚಿಕ್ಕದಾದ ಒಂದು ಗೂಡಿನಲ್ಲಿ

ಅಂಗಾತಾಗಿ ಮಲಗಿದೆ. ಸ್ಥೂಲವಾದ ಅವಯವಗಳು; ಶಿರಸ್ಸು ಮಾತ್ರ ಮೂಲತಃ ಇಲ್ಲ. ನಗ್ನ ರೂಪ! ಸಂತಾನ ಬಯಸುವ ಹೆಂಗಸರು ಇದನ್ನು ಪೂಜಿಸುವರಂತೆ. ಇದು ರೇಣುಕೆಯ ವಿಗ್ರಹವೆಂದೂ ಇದರ ಶಿರಸ್ಸು ಸವದತ್ತಿಯಲ್ಲಿ (ಬೆಳಗಾವ ಜಿಲ್ಲೆ) ಇರುವ ಯಲ್ಲಮ್ಮನೆಂದೂ ಒಬ್ಬರು ಹೇಳಿದರು.[1] ಕೆಲಮಟ್ಟಿಗೆ ಇದೇ ಮಾದರಿಯ ಇನ್ನೊಂದು ವಿಗ್ರಹ ಸಂಗಮೇಶ್ವರದ (ನಂದೀಕೊಟ್ಕೂರ ತಾಲೂಕು) ಸಂಗಮೇಶ್ವರ ಗುಡಿಯ ಪ್ರಾಕಾರದಲ್ಲಿ ಇರಿಸಿದುದನ್ನು ಲಕ್ಷಿಸಿದ್ದೇನೆ. ಅದೂ ನಗ್ನ ರೂಪ; ಯೋನಿ ಪ್ರಾಮುಖ್ಯವಾಗಿ ಕಾಣುವಂತೆ ಕಾಲುಗಳನ್ನು ಇಕ್ಕೆಲದಲ್ಲಿ ಮಡಿಸಿ ತಿರುಗಿಸಿಕೊಂಡುದು. ಸರಿಯಾದ ಶಿರಸ್ಸು ಇಲ್ಲ. ಶಿರಸ್ಸಿನ ಸ್ಥಳದಲ್ಲಿ ಬಂಡಿಗಾಲಿಯ ಮಾದರಿ ಒಂದು ಚಕ್ರವಿದೆ. ಇದು 'ಭೂದೇವಿ'ಯೆಂದೂ ಮಕ್ಕಳನ್ನು ಎಳಸುವ ಹೆಂಗಳೆಯರು ಇದನ್ನು ಭಜಿಸುವರೆಂದೂ ಇಲ್ಲಿಯವರು ಹೇಳಿದರು. ಈ ವಿಧವಾಗಿ ಭಿನ್ನಭಿನ್ನ ಭಂಗಿಯ ನಗ್ನ ಸ್ತ್ರೀಪ್ರತಿಮೆಗಳನ್ನು ಭೂದೇವಿ ಮತ್ತು ಮಾತೃದೇವಿಯ ಹೆಸರಿನಿಂದ ಪೂಜಿಸುವ ಸಂಪ್ರದಾಯವು ಅತಿಪ್ರಾಚೀನವಾಗಿದ್ದು ಸಿಂಧುನದಿಯ ನಾಗರಿಕತೆಯ ಕಾಲದಿಂದಲೂ ನಡೆದುಬಂದಂತೆ ತಿಳಿಯಬರುತ್ತದೆ.[2]

ಇನ್ನೊಂದು ವಿಗ್ರಹವು ಮಾಧ್ವಸಂಪ್ರದಾಯಕ್ಕೆ ಸಂಬಂಧಿಸಿದುದು. ಈ ಸಂಪ್ರದಾಯದಂತೆ ವಾಯುದೇವನಿಗೆ ಮೂರು ಅವತಾರಗಳು: (೧) ಹನೂಮಾನ್, (೨) ಭೀಮಸೇನ, (೩) ಮಧ್ವಾಚಾರ್ಯ. ಈ ಮೂರು ಅವತಾರಗಳ ವೈಲಕ್ಷಣ್ಯಗಳಿಂದ (ಅಂದರೆ ಕಪಿಯಬಾಲ, ಗದೆ, ಗ್ರಂಥ ಮೊದಲಾದುವು) ಕೂಡಿದ ತ್ರಿರೂಪಾತ್ಮಕ ಸಂಯುಕ್ತ ಪ್ರತಿಮೆ ಇದು. ಪ್ರಾಚೀನವಲ್ಲದಿದ್ದರೂ ಇದರ ಅಪೂರ್ವತೆ ಅಲಕ್ಷಿಸುವಂತೆ ಇಲ್ಲ.

ನವಲಿಂಗೇಶ್ವರ ದೇವಾಲಯವಲ್ಲದೆ ಇನ್ನೂ ಕೆಲವು ಗುಡಿಗಳು ಈ ಊರಲ್ಲಿ ಇವೆ. ಅವುಗಳಲ್ಲಿ ಎರಡನ್ನು ನಿರ್ದೇಶಿಸಬೇಕಾಗಿದೆ. ಒಂದು ಸೂರ್ಯದೇವನ ಗುಡಿ. ಹಿಂದಿನ ಕಾಲದಲ್ಲಿ ನಮ್ಮ ನಾಡಿನಲ್ಲಿಯೂ ಭಾರತದ ಮಿಕ್ಕ ಭಾಗಗಳಲ್ಲಿಯೂ ಭಾಸ್ಕರನ ಉಪಾಸನೆ ಹೆಚ್ಚಾಗಿ ನಡೆಯುತ್ತಿದ್ದು ಆತನ ಗುಡಿಗಳು ಅನೇಕ ಕಡೆಗಳಲ್ಲಿ ಇದ್ದಂತೆ ಶಾಸನಾದಿ ಆಧಾರಗಳಿಂದ ನಿದರ್ಶನವಾಗುತ್ತದೆ. ಪ್ರಸ್ತುತ ಕಾಲದಲ್ಲಿ ರವಿದೇವನ

---

[1] ರೇಣುಕೆಯನ್ನು ನಗ್ನ ರೂಪದಲ್ಲಿ ಪೂಜಿಸತಕ್ಕದ್ದು ಎಂದು ರೇಣುಕಾತಂತ್ರದಲ್ಲಿ ಹೇಳಿದೆ. ಹೈದರಾಬಾದದ ನಾಮಾಂಕಿತ ಬ್ರಾಹ್ಮಣ ಸಂಸ್ಥಾನಿಕರೊಬ್ಬರ ಬಳಿಯಲ್ಲಿ ರೇಣುಕೆಯ ಚಿನ್ನದ ಮತ್ತು ಬೆಳ್ಳಿಯ ನಗ್ನ ವಿಗ್ರಹಗಳು ಇದ್ದು ಅವುಗಳನ್ನು ಅವರು ಉಪಾಸನೆಮಾಡುವರು ಎಂದು ತಿಳಿಯುತ್ತದೆ.

[2] *Mohenjo-Daro and The Indus Civilization*, pp. 51-52.

ಗುಡಿಗಳು ಸಿಕ್ಕುವುದು ಅಪರೂಪ. ಪ್ರಾಚೀನ ಕಾಲದಿಂದ ನಡೆದುಬಂದ ದಿನಕರ ಪೂಜೆಯ ಒಂದು ಅವಶೇಷವೇ ಅಲಂಪೂರ ಈ ಸೂರ್ಯ ದೇವಾಲಯವೆಂದು ಹೇಳ ಬಹುದು. ಎರಡನೆಯದು ನರಸಿಂಹದೇವಾಲಯ. ಸಾಮಾನ್ಯವಾಗಿ ವಿಷ್ಣುದೇವಾ ಲಯಗಳಲ್ಲಿ ವಿಷ್ಣುವಿನ ಮುಂದುಗಡೆ ಆತನ ಭಕ್ತನಾದ ಹನುಮಂತ ಇಲ್ಲವೇ ಗರುಡನ ವಿಗ್ರಹಗಳು ನಿಂತಿರುತ್ತವೆ. ಆದರೆ ಇಲ್ಲಿಯ ಈ ನರಸಿಂಹನ ಮುಂದೆ ನಿಂತಿರುವವನು ಹನುಮಂತನಲ್ಲ, ಗರುಡನೂ ಅಲ್ಲ, ಸುಗ್ರೀವ! ಈತನ ರೂಪವೇನೋ ಹನುಮಂತನಂತೆ ಸಾಮಾನ್ಯಕಪಿಯದು ಆಗಿದೆ. ಆದರೆ ಈತನು ಸುಗ್ರೀವನೆಂದೇ ಹೇಳುವುದು ವಾಡಿಕೆ.

ಊರಿಂದ ಸುಮಾರು ಒಂದೂವರೆ ಮೈಲಿ ಅಂತರದ ಮೇಲೆ ಹೊಳೆಯ ದಂಡೆ ಯಲ್ಲಿ ಪಾಪನಾಶಿನಿ ಎಂಬ ಸ್ಥಳವಿದೆ. ಅಲ್ಲಿ ಧಾರ್ಮಿಕ ದೃಷ್ಟಿಯಿಂದ ಈ ಕ್ಷೇತ್ರದ ಘನತೆಯನ್ನು ಸೂಚಿಸುವ ಕೆಲವು ವಿಗ್ರಹಗಳು ಇವೆ. ಅವುಗಳಲ್ಲಿ ಮೂರನ್ನು ನಿರ್ದೇಶಿಸುವೆ:

೧. ಷೋಡಶಬಾಹು ನರಸಿಂಹ — ಹಿರಣ್ಯಕಶಿಪುವನ್ನು ಸೀಳುತ್ತಿರುವನು.

೨. ಗುಲಗುಂಜಿ ಮಾಧವ — ಕೈಯಲ್ಲಿ ಒಂದು ಗುಲಗುಂಜಿ ಕಾಳನ್ನು ಹಿಡಿದಿರುವನು. ಇದರ ಅಭಿಪ್ರಾಯ ಹೀಗೆ: ಈ ಕ್ಷೇತ್ರ ದಕ್ಷಿಣಕಾಶಿ; ಸುಪ್ರಸಿದ್ಧ ಕಾಶೀಕ್ಷೇತ್ರಕ್ಕೆ ಸಮಾನವಾಗಿರುವುದು; ಒಂದು ಗುಲಗುಂಜಿ ತೂಕ ಹೆಚ್ಚೆಂದು ಹೇಳಿದರೂ ಹೇಳಬಹುದು.

೩. ಗದಾಧರ.

ಅಲಂಪೂರು ದಕ್ಷಿಣಕಾಶಿ ಎನಿಸುವುದು. ಇದರ ಪ್ರಾಚೀನ ಹೆಸರು ಹೇಮಲಾ ಪುರಿ. ಇಲ್ಲಿ ತುಂಗಭದ್ರೆ ಉತ್ತರವಾಹಿನಿಯಾಗಿ ಹರಿದಿರುವುದರಿಂದ ಇದರ ಪಾವಿತ್ರ್ಯವು ಅಧಿಕವಾಗಿದೆ. ಈ ಊರನ್ನು ಕಾಶಿಗೆ ಹೋಲಿಸಿರುವುದು ಇಂತು:

> ಬ್ರಹ್ಮೇಶೋಯಂ ಸ ವಿಶ್ವೇಶಃ ಸಾ ಕಾಶೀ ಹೇಮಲಾಪುರೀ |
> ಸಾ ಗಂಗಾ ತುಂಗಭದ್ರೇತಿ ಸತ್ಯಮೇತನ್ನ ಸಂಶಯಃ ||

ಸುಪ್ರಸಿದ್ಧ ಶ್ರೀಶೈಲಕ್ಷೇತ್ರವು ಈ ಊರಿಗೆ ಸಮೀಪವಾಗಿದೆ. ಅಲಂಪೂರು ಶ್ರೀಶೈಲದ ಪಶ್ಚಿಮದ್ವಾರ. ಇದರ ಮಹಿಮೆ ಪುರಾಣೋಕ್ತವಾಗಿದೆ.

ಈ ಊರಿಗೆ ಹೇಮಲಾಪುರೀ, ಹತಂಪುರೀ, ಅಲಕಾಪುರೀ ಮೊದಲಾದ ಹೆಸರುಗಳು ಇದ್ದಂತೆಯೂ, ವಿಲಸದ್ರಾಜನೆಂಬ ಅರಸನು ಇಲ್ಲಿ ಆಳಿದನೆಂತಲೂ, ಆತನ ಕಾಲದಲ್ಲಿ ರಸಸಿದ್ಧನು ಇಲ್ಲಿಗೆ ಬಂದು ದೇವಾಲಯಗಳನ್ನು ಕಟ್ಟಿಸಲು ಪ್ರಾರಂಭಿಸಿದ ನೆಂತಲೂ ಮುಂತಾದ ಕೆಲವಾರು ಕತೆಗಳು ಇಲ್ಲಿ ಪ್ರಚುರವಾಗಿವೆ. ಅವುಗಳ ಸತ್ಯತೆ ಪರೀಕ್ಷಾರ್ಹವಾದುದು. ವಿಜಯನಗರದ ಅರಸರು, ಗಜಪತಿರಾಜರು, ಪ್ರತಾಪರುದ್ರ

ಮೊದಲಾದ ಭೂಪತಿಗಳು ಇಲ್ಲಿಗೆ ಬಂದು ಇಲ್ಲಿಯ ಈಶ್ವರನನ್ನು ಪೂಜಿಸಿದರು ಎಂದು ಹೇಳುವರು. ಈ ಐತಿಹ್ಯವು ಇಲ್ಲಿ ಸಿಕ್ಕುತ್ತಿರುವ ಆ ಆ ನರಪತಿಗಳ ಶಾಸನ ಪ್ರಮಾಣಗಳಿಂದ ಪೋಷಿತವಾಗುವುದು.

ನವಲಿಂಗೇಶ್ವರ ದೇವಾಲಯದಲ್ಲಿಯೂ ಮಿಕ್ಕ ಗುಡಿಗಳಲ್ಲಿಯೂ ಕೋಟೆಯ ಗೋಡೆಯಲ್ಲಿ ನಟ್ಟ ಕಲ್ಲುಗಳ ಮೇಲೆಯೂ ಕಂಡರಿಸಿದ ಅನೇಕ, ವಿಚಿತ್ರ, ಸುಂದರ ಪ್ರಾಚೀನ ಶಾಸನಗಳನ್ನು ಕಂಡೆನು. ಆದರೆ ಸಮಯಸಂಕ್ಷೇಪದ ಮೂಲಕ ಅವುಗಳನ್ನು ಓದುವುದಾಗಲಿ ಅಚ್ಚೊತ್ತಿಕೊಳ್ಳುವುದಾಗಲಿ ಆಗಲಿಲ್ಲ. ನೈಜಾಂ ಪ್ರಭುತ್ವದ ಪುರಾತತ್ತ್ವವಿಭಾಗದವರು (Archæological Department) ಇಲ್ಲಿಯ ಶಾಸನಗಳನ್ನು ಪ್ರತಿಮಾಡಿಕೊಂಡು ಒಯ್ದಿರುವರು ಎಂದು ತಿಳಿಯಿತು. ಅವು ಪ್ರಕಟವಾಗುವುದನ್ನು ಇದಿರು ನೋಡಬಹುದಷ್ಟೆ?

ಇಲ್ಲಿಯ ಗುಡಿಗಳ ಶಿಲ್ಪರಚನೆಯ ಮಾದರಿಯೇ ಬೇರೆ. ಈ ಗ್ರಾಮವು ಕರ್ಣಾಟಕ ಆಂಧ್ರನಾಡುಗಳ ಗಡಿಯೂರು ಆಗಿದ್ದರೂ ಅವುಗಳ ರೀತಿ ಕರ್ಣಾಟಕದಲ್ಲಿಯಾಗಲಿ ಈ ಕಡೆಯ ಆಂಧ್ರಭಾಗದಲ್ಲಿಯಾಗಲಿ ಸಿಕ್ಕುವ ಗುಡಿಗಳಿಗಿಂತ ಭಿನ್ನವಾಗಿದೆ. ಕರ್ಣಾಟಕದಲ್ಲಿ ಸಾಮಾನ್ಯವಾಗಿ ಪ್ರಚುರವಾಗಿರುವ 'ಜಕ್ಕಣಾಚಾರ್ಯರ ಕಟ್ಟು' ಇವುಗಳಲ್ಲಿ ಕಾಣಬರುವುದಿಲ್ಲ. ಇವು ನರಪಳಿಯ ದಿಂಡಿನ, ಮುಂಡಾಸದ ಆಕಾರದ ಗೋಪುರಗಳುಳ್ಳ ಓರಿಸ್ಸದ ಗುಡಿಗಳನ್ನು ಹೋಲುತ್ತವೆ. ಮೇಲೆ ನಿರೂಪಿಸಿದ ರಸಸಿದ್ಧನ ಆಖ್ಯಾಯಿಕೆಯಿಂದಲೂ ಈ ಸಂಗತಿ ಸೂಚಿತವಾಗುತ್ತದೆ. ಇವುಗಳನ್ನು ಕಟ್ಟಿಸಿದ ಶಿಲ್ಪಜ್ಞನೆಂದು ಹೇಳುವ ರಸಸಿದ್ಧನು ಜಕ್ಕಣಾಚಾರ್ಯರಿಗಿಂತ ವಿಭಿನ್ನವಾದ ಶಿಲ್ಪಸಂಪ್ರದಾಯದ ಪ್ರವರ್ತಕನಾಗಿರಬೇಕು.

ಇಂತು ಅಲಂಪೂರು ಅನೇಕ ದೃಷ್ಟಿಯಿಂದ ಅವಲೋಕನೀಯವಾಗಿದೆ. ಅನೇಕ ಕಾರಣಗಳ ಮೂಲಕ ನಾನು ಈ ಊರಲ್ಲಿ ಕೆಲವು ಗಂಟೆಗಳಿಗಿಂತ ಹೆಚ್ಚು ಕಾಲ ನಿಲ್ಲಲಾಗಲಿಲ್ಲ. ಈ ಅಲ್ಪಾವಧಿಯಲ್ಲಿ ನಾನು ಕಂಡ ಕೆಲ ವಿಷಯಗಳನ್ನು ಇಲ್ಲಿ ನಿವೇದಿಸಿದ್ದೇನೆ. ಈ ಮೇಲ್ಕಂಡ ಒಂದೊಂದು ಅಂಶದಲ್ಲಿಯೂ ಅನ್ವೇಷಣ — ವಿಮರ್ಶೆಗಳನ್ನು ನಡೆಸಲು ಅವಕಾಶವಿದೆ. ಆ ಕೆಲಸವನ್ನು ಮುಂದಕ್ಕೆ ಇರಿಸಿ ಇಂದು ಇಷ್ಟಕ್ಕೆ ಮುಗಿಸುವೆ.

ದೇಸಾಯಿ ಪಾಂಡುರಂಗರಾಯರು.

# ಭಕ್ತಿಯು ರಸವೇ?

ಪ್ರಾಚೀನ ಅಲಂಕಾರಶಾಸ್ತ್ರಜ್ಞರು ಮೇಲ್ಕಂಡ ವಿಷಯದಲ್ಲಿ ನಾನಾಬಗೆಯ ಮತಗಳನ್ನು ಸಿದ್ಧಾನ್ತಮಾಡಿರುತ್ತಾರೆ. ಮೊದಲು ಭಕ್ತಿಯ ಸ್ವರೂಪವನ್ನು ವಿವೇಚಿಸುವುದು ಆವಶ್ಯಕ. ಭಕ್ತಿಯೆಂದರೆ ಪ್ರೇಮವೆಂದು ಕರೆಯಬಹುದಾದ ಒಂದು ಮನೋವೃತ್ತಿ. ಗೃಹ ಆರಾಮ ಮುಂತಾದ ಅಚೇತನ ಉಪಕರಣವಸ್ತುಗಳಲ್ಲಿ, ಸಾಕಿದ ನಾಯಿ ಮುಂತಾದ ಪ್ರಾಣಿಗಳಲ್ಲಿ, ಅಥವಾ ಪೋಷ್ಯ ಕುಟುಂಬವರ್ಗಕ್ಕೆ ಸೇರಿದ ಕಲತ್ರಪುತ್ರಾದಿಗಳಲ್ಲಿ ಇರುವ ಪ್ರೇಮ ಭಕ್ತಿಯೆನಿಸುವುದಿಲ್ಲ. ಸರ್ವವಸ್ತುಗಳಿಗಿಂತಲೂ ಉತ್ಕೃಷ್ಟತ್ವಜ್ಞಾನಪೂರ್ವಕವಾಗಿ ಭಗವಂತನಲ್ಲಿಟ್ಟ ಪ್ರೇಮ ಭಕ್ತಿರೂಪವಾಗುತ್ತದೆ.

ಅಧ್ಯಾತ್ಮಶಾಸ್ತ್ರಗಳಲ್ಲಿಯೂ ಭಕ್ತಿಯ ವಿಷಯವನ್ನು ಪ್ರಸ್ತಾಪಿಸುವರು. ಭಕ್ತಿಯೋಗವೆಂಬುದು ತತ್ವಜ್ಞಾನವನ್ನುಂಟುಮಾಡಲು ಅಂತರಂಗಸಾಧನ. ಆದ್ದರಿಂದ ಭಕ್ತಿಯಿಂದ ಜ್ಞಾನೋದಯವಾಗಿ ಪರಮಪುರುಷಾರ್ಥವಾದ ಮುಕ್ತಿ ಲಭಿಸುವುದು ಎಂದು ಪ್ರತಿಪಾದಿಸಿರುವುದೂ ಕಂಡುಬರುವುದು. ಹಾಗೂ "ಶ್ರವಣಂ, ಕೀರ್ತನಂ, ವಿಷ್ಣೋಃ ಸ್ಮರಣಂ, ಪಾದಸೇವನಂ | ಅರ್ಚನಂ, ವಂದನಂ, ದಾಸ್ಯಂ, ಸಖ್ಯಮಾತ್ಮನಿವೇದನಂ | ಇತಿ ಪುಂಸಾರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವಲಕ್ಷಣಾ | ಕ್ರಿಯತೇ ಭಗವತ್ಯದ್ಧಾ ತನ್ಮನ್ಯೇಽಧೀತಮುತ್ತಮಂ" ಎಂದು ಭಕ್ತಿಯನ್ನು ಒಂಬತ್ತು ವಿಧವಾಗಿ ವಿಭಾಗಿಸುವರು. ಮುಂದೆ ವಿವರಿಸಬೇಕೆಂದಿರುವ ಪರಮಪುರುಷಾರ್ಥಪ್ರಾಯವಾದ ಪ್ರೇಮರೂಪ ಭಕ್ತಿಯ ದೃಷ್ಟಿಯಿಂದ ಆ ವಚನಗಳೆಲ್ಲವೂ ಗೌಣಭಕ್ತಿಪರವಾಗುವುವು. ಮುಖ್ಯ ಭಕ್ತಿಯನ್ನುದ್ದೇಶಿಸಿ "ಸಾಪುನರನುರಕ್ತಿರೀಶ್ವರೇ" (ಶಾಂ. ಸೂ) "ಸಾತು ಅಸ್ಮಿನ್ ಪರಪ್ರೇಮರೂಪಾ, ಅಮೃತರೂಪಾ ಚ, ಸಾ ತು ಕರ್ಮಜ್ಞಾನೇಭ್ಯೋಽಪ್ಯಧಿಕತರಾ, ಫಲರೂಪತ್ವಾತ್" (ನಾ. ಸೂ) ಎಂಬ ಸೂತ್ರಗಳು ಇವೆ. ಸಾಧನಯೋಗಗಳಲ್ಲಿ ಸೇರಿರುವ ಜ್ಞಾನ ಕರ್ಮಗಳಿಗಿಂತಲೂ ಉತ್ಕೃಷ್ಟರೂಪವಾದದ್ದೂ, ಸ್ವತಂತ್ರಫಲಸ್ವರೂಪ ಮುಕ್ತ್ಯಾತ್ಮಕವಾದದ್ದೂ ಪರಮಪ್ರೇಮ ಎಂದು ಅವು ಪ್ರತಿಪಾದಿಸುತ್ತವೆ. ಮೇಲ್ಕಂಡ ಗೌಣಭಕ್ತಿ ಅಥವಾ ಸಾಧನಗಳ ಅನುಷ್ಠಾನಪರಿಪಾಕದಿಂದ ಹುಟ್ಟಿ ಇಂತಹ ಭಕ್ತಿ ಭಗವಚ್ಛರಣತ್ವರೂಪವಾಗಿ ಪರಿಣಮಿಸುತ್ತದೆ.

ಸಾಧನಗಳ ಅಭ್ಯಾಸಪರಿಪಾಕಗಳಿಗೆ ಅನುಗುಣವಾಗಿ ಈ ಭಕ್ತಿ ಮೂರು ಬಗೆಯಾಗಿದೆ: "ತಸ್ಯೈವಾಹಂ, ಮಮೈವಾಸೌ, ಸ ಏವಾಹಂ" ಎಂಬ ಭಾವನೆಗಳೇ

ಭಕ್ತಿಯನ್ನು ಮೂರಾಗಿ ವಿಂಗಡಿಸಿರುವುವು. "ಸತ್ಯಪಿ ಭೇದಾಪಗಮೇ ನಾಥ ತವಾಹಂ ನಮಾಮಕೀನಸ್ತ್ವಂ | ಸಾಮುದ್ರೋ ಹಿ ತರಂಗಃ ಕ್ವಚ ನ ಸಮುದ್ರೋ ನ ತಾರಂಗಃ" ಸಮುದ್ರತರಂಗಗಳ ತತ್ತ್ವ ಒಂದೇ ಆದರೂ ತರಂಗವು ಸಮುದ್ರ ಸಂಬಂಧಿಯಾಗಿ ವ್ಯವಹರಿಸಲ್ಪಡುತ್ತದೆ. ಹಾಗೆಯೇ ನಿನ್ನವನು ನಾನು ಎಂಬ ಭಾವನೆ ಮೊದಲನೆಯ ವಿಧ. ಹಸ್ತಮುತ್ಕ್ಷಿಪ್ಯ ಯಾತೋಽಸಿ ಬಲಾತ್ಕೃಷ್ಣ ಕಿಮದ್ಭುತಂ | ಹೃದಯಾದ್ಯದಿ ಯಾತ್ಯೋಽಸಿ ಪೌರುಷಂ ಗಣಯಾಮಿ ತೇ" ಎಂಬಲ್ಲಿ ನನ್ನವನು ನೀನೆಂಬ ಭಾವನೆ ಎರಡನೆಯ ಪ್ರಕಾರ. "ಸಕಲಮಿದಮಹಂಚವಾಸುದೇವಃ ಪರಮಪುಮಾನ್ ಪರಮೇಶ್ವರಃ ಸ ಏಕಃ | ಇತಿ ಮತಿರಚಲಾ ಭವತ್ಯನಂತೇಹೃದಯ ಗತೇ ವ್ರಜ ತಾನ್ ವಿಹಾಯ ದೂರಂ" ಇಲ್ಲಿ ಸೋಽಹಂ (ಅವನೇ ನಾನು ಎಂಬ) ಭಾವನೆ ಭಕ್ತಿಯ ಮೂರನೆಯ ಪ್ರಕಾರ. ಉತ್ತಮ ಪ್ರೇಮರೂಪವಾದ ಇಂತಹ ಭಕ್ತಿ ರಸವಾಗಬಹುದೆ? ನೋಡೋಣ.

ಭರತನ ನಾಟ್ಯಶಾಸ್ತ್ರದಲ್ಲಿಯೂ ಅದನ್ನು ಅನುಸರಿಸುವವರ ಅನೇಕ ಗ್ರಂಥಗಳಲ್ಲಿಯೂ ಹೇಳಿರುವ ಎಂಟು ರಸಗಳಲ್ಲಿ ಭಕ್ತಿ ಸೇರಿಲ್ಲ. ಮತ್ತೆ ಕೆಲವರು ಇದನ್ನು ರಸಭಾವಗಳಲ್ಲಿ ಅಂತರ್ಭಾವ ಎಂದು ಹೇಳುತ್ತಾರೆ. ಭರತ ನಾಟ್ಯಶಾಸ್ತ್ರದಲ್ಲಿ ರಸಗಳನ್ನು ಎಂಟಾಗಿ ಭಾಗಿಸುವುದಕ್ಕೆ ಛಾಂದೋಗ್ಯದ "ಏಷಾಂಭೂತಾನಾಂ ಪೃಥಿವೀ ರಸಃ ಪೃಥಿವ್ಯಾ ಆಪೋರಸೋಪಾಮೋಷಧಯೋರಸ ಓಷಧೀನಾಂ ಪುರುಷೋ ರಸಃ ಪುರುಷಸ್ಯವಾಗ್ರಸೋವಾಚ ಋಗ್ರಸ ಋಚಃ ಸಾಮರಸಃ ಸಾಮ್ನ ಉದ್ಗೀಥೋರಸಃ" ಎಂಬ ಉದ್ಗೀಥೋಪಾಸನಪ್ರಕರಣದ ವಾಕ್ಯದಲ್ಲಿ ಎಂಟು ರಸಪದಗಳ ಅಭ್ಯಾಸವಿದೆ. ಅದನ್ನು ಇದಕ್ಕೆ ಮೂಲವಿರಬಹುದೆಂದು ಊಹಿಸುವುದೂ ಉಂಟು. ಅವೂ ಎಂಟು ಇವೂ ಎಂಟು ಎಂಬ ಸಂಖ್ಯಾಮಾತ್ರ ಸಾಮ್ಯದಿಂದ ಈ ರೀತಿ ಕಲ್ಪನೆಮಾಡುವುದು ಸಮಂಜಸವಲ್ಲ. ಈಚೆಗೆ ಕೆಲವರು ಆಲಂಕಾರಿಕರು ಲೌಲ್ಯರಸ, ಕಾರ್ಪಣ್ಯರಸ, ಭಕ್ತಿರಸ, ವತ್ಸಲರಸ ಮುಂತಾದ ರಸಗಳನ್ನು ಅತಿರಿಕ್ತವಾಗಿ ಒಪ್ಪುವರು. ಅಲ್ಲದೆ ನಿರ್ವೇದಸ್ಥಾಯಿಭಾವವನ್ನುಳ್ಳ ಶಾಂತರಸವನ್ನು ಶ್ರೀ ಮಮ್ಮಟಾಚಾರ್ಯರು ಕೂಡ ಒಪ್ಪಿರುತ್ತಾರೆ. ಭಕ್ತಿಗೆ ರಸತ್ವವನ್ನು ಔಚಿತ್ಯದಿಂದಲೇ ಹೇಳಬೇಕಾಗಿ ಬಂದರೆ ಭರತನಾಟ್ಯಶಾಸ್ತ್ರದ ವಚನವನ್ನು ಅಭಿಪ್ರಾಯಾಂತರದಿಂದ ನಯನಮಾಡಬೇಕಾಗುವುದು. ಔಚಿತ್ಯವನ್ನು ವಿಚಾರಿಸೋಣ. ಶೃಂಗಾರಾದಿ ಎಲ್ಲ ಪ್ರಸಿದ್ಧ ರಸಗಳ ಆಸ್ವಾದವನ್ನು ರಸಿಕರು ಅನುಭವಿಸುವರಷ್ಟೆ. ರಸಿಕರಲ್ಲಿ ಮೊದಲಿಂದಲೇ ರತಿಯೆಂಬ ಸ್ಥಾಯಿಭಾವ ಸೂಕ್ಷ್ಮರೂಪವಾಗಿರುವುದು. ಕಾಮಿನೀ ವಿಷಯದಲ್ಲಿ ಅನುರಾಗ ಅಥವಾ ಪ್ರಣಯವುಂಟಲ್ಲವೆ? ಕಾವ್ಯನಾಟ್ಯಗಳಲ್ಲಿ ಶ್ರಾವಣ-ಚಾಕ್ಷುಷ ಪ್ರತ್ಯಕ್ಷ ವಿಗೋಚರಗಳಾದ

ವಿಭಾವ—ಅನುಭಾವ—ವ್ಯಭಿಚಾರಿ ಭಾವಗಳಿಂದ ಆ ರತಿಯು ಅಭಿವ್ಯಕ್ತವಾಗಿ ರಸವಾಗಿ ಪರಿಣಮಿಸುವುದು. ಅಂತಹ ರಸಾಸ್ವಾದವು ಕೇವಲ ಆನಂದಮಯವಾದ್ದು. ಚರ್ವ್ಯಮಾಣತಾಪ್ರಾಣವುಳ್ಳದ್ದು; ಹೃದಯಸಂವಾದಪೂರ್ಣವಾದ್ದು. ಹೃದಯ ಸಂವಾದ ಪ್ರಧಾನತೆಯಿಂದ ಮಿಕ್ಕ ಎಲ್ಲ ವೇದ್ಯವಸ್ತುಗಳನ್ನು ಮರೆಮಾಚುವಂತೆ ಮಾಡುವ ರಸಾಸ್ವಾದಕ್ಕೆ ಮೊದಲಿಂದಲೂ ನಮ್ಮೊಳಗೆ ನೆಲಸಿರುವ ವಾಸನೆಯೇ ಕಾರಣ. ಆದ್ದರಿಂದ ಕಾಮಿನೀಪ್ರೇಮ ಮತ್ತೂ ಅದರ ಕಾರ್ಯಗಳನ್ನು ಪ್ರಾಯಃ ಸಮಸ್ತ ದೇವಮನುಷ್ಯ ತಿರ್ಯಕ್ ಪ್ರಾಣಿಗಳೂ ಅನುಭವಿಸುವರು. ವಾಸನಾವಶಾತ್ ಎಲ್ಲರಿಗೂ ಹೃದಯಸಂವಾದವು ಸಂಭವಿಸುವುದು. ಹೀಗೆ ಸಾರ್ವತ್ರಿಕವಾಗಿರುವುದ ರಿಂದಲೇ "ಶೃಂಗಾರ ಏವ ಮಧುರಃ" (ಧ್ವ) ಎಂಬ ಕಾರಿಕೆಯಲ್ಲಿ ಶೃಂಗಾರರಸವನ್ನು ಮಧುರವನ್ನಾಗಿ ವರ್ಣಿಸಿರುತ್ತಾರೆ. ಭಗವದ್ಭಕ್ತರಿಗೆ ಭಕ್ತಿರಸದ ಆಲಂಬನವಿಭಾವ — ಭಗವಂತನು; ಉದ್ದೀಪನವಿಭಾವ — ತುಲಸೀ ಗೋಪೀಚಂದನಾದಿಗಳು; ಅನು ಭಾವ — ಆನಂದಾಶ್ರು ರೋಮಾಂಚ ಗದ್ಗದಾದಿಗಳು; ವ್ಯಭಿಚಾರಿಭಾವ — ಮತಿ ಹರ್ಷ ಮುಂತಾದವು. ಇವು ಸೇರಿ ವ್ಯಂಜನವೃತ್ತಿಯಿಂದ ಭಕ್ತಿಸ್ಥಾಯಿಭಾವವನ್ನು ವ್ಯಕ್ತಪಡಿಸಿ ಹೃದಯಸಂವಾದಾನಂದಮಯವಾದ ಚರ್ವಣೆಯನ್ನುಂಟುಮಾಡುವು ದಾದರೆ ರಸತ್ವವನ್ನು ನಿರಾಕರಿಸುವುದು ಹೇಗೆ? ರಾಧಾ ಮುಂತಾದ ಗೋಪಿಕೆಯರು ಭಗವಂತನಾದ ಕೃಷ್ಣಪರಮಾತ್ಮನಲ್ಲಿ ಅತ್ಯುತ್ತಮ ಪ್ರೇಮವನ್ನಿಟ್ಟುಕೊಂಡಿದ್ದರು. ಆ ಪ್ರೇಮವು ಶೃಂಗಾರಪ್ರೇಮವಲ್ಲದೆ ಉತ್ಕೃಷ್ಟತ್ವಜ್ಞಾನದಿಂದ ಭಗವಚ್ಛರಣತ್ವ ಪರ್ಯಾಯವಾದ ಭಕ್ತಿಯಮಟ್ಟಕ್ಕೆ ಏರಿತ್ತು. ಆ ಉತ್ಕರ್ಷಜ್ಞಾನವಿಲ್ಲದಿದ್ದರೆ ಆ ಪ್ರೇಮವು ಜಾರಪ್ರೇಮವಾಗುತ್ತಿತ್ತು. "ತದ್ವಿಹೀನಂ ಜಾರಾಣಾಮಿವ" (ನಾ. ಸೂ) ಎಂಬ ಈ ವಚನವು ಇದನ್ನು ಸೂಚಿಸುತ್ತದೆ. "ಅಹೋ ಭಾಗ್ಯಮಹೋಭಾಗ್ಯಂ ನಂದಗೋಪವ್ರಜೌಕಸಾಂ| ಯನ್ಮಿತ್ರಂ ಪರಮಾನಂದಂ ಪೂರ್ಣಂ ಬ್ರಹ್ಮ ಸನಾ ತನಂ" ಎಂಬ ವಚನದ ಆಶಯವೂ ಇದೇ. ಭಾಗವತ ಮಹಾಪುರಾಣದಲ್ಲಿ ವರ್ಣಿತ ವಾದ ಲೀಲೆಗಳನ್ನು ಪೂರ್ತಿಯಾಗಿ ಪರಾಮರ್ಶಿಸಿದರೆ ಗೋಪಿಕೆಯರ ಪ್ರೇಮವು ಶೃಂಗಾರ ಪ್ರೇಮವಲ್ಲವೆಂಬುದು ಸ್ಪಷ್ಟವಾಗುತ್ತದೆ. ಭಯ ಲೋಭಭಾವಗಳ ಮೂಲ ಕವೂ ಭಕ್ತಿ ಅಂಕುರಿತವಾಗುವುದು ಕೆಲವೆಡೆಗಳಲ್ಲಿ ಉಂಟು. ಆದರೆ ಭಗವಂತನ ಸನ್ನಿಧಿ ಅಸನ್ನಿಧಿಗಳ ಪ್ರತ್ಯಕ್ಷ ಪರೋಕ್ಷಗಳ ಸಂದರ್ಭಗಳಲ್ಲಿ ಉಂಟಾಗುವ ಅನು ಭಾವ ವಿಶೇಷಗಳಿಂದಲೇ ಈ ಭಕ್ತಿ ಪ್ರೇಮೈಕಮೂಲವೆಂದು ಕಂಡುಹಿಡಿಯಬಹುದು.

ಭಕ್ತಿ ಒಂದು ರಸವೆಂದು ಯುಕ್ತಿಯಿಂದ ಸಾಧಿಸಿರುವುದು ಮೊದಲು ರೂಪ ಗೋಸ್ವಾಮಿಯ 'ಉಜ್ಜ್ವಲ ನೀಲಮಣಿ'ಯೆಂಬ ಗ್ರಂಥದಲ್ಲಿ; ಮತ್ತು, ಮಧುಸೂದನ

ಸರಸ್ವತಿಗಳ 'ಭಕ್ತಿರಸಾಯನ' ಗ್ರಂಥದಲ್ಲಿ, ಎನ್ನಬಹುದು. ಭಕ್ತಿರಸಾಯನದ ಮೊದಲನೆಯ ಶ್ಲೋಕ:— "ನವರಸ ಮಿಲಿತಂ ವಾ ಕೇವಲಂ ವಾ ಪುಮರ್ಥಂ ಪರಮ ಮಿಹ ಮುಕುಂದೇ ಭಕ್ತಿಯೋಗಂ ವದಂತಿ| ನಿರುಪಮ ಸುಖಸಂವಿದ್ರೂಪ ಮಸ್ಪೃಷ್ಟ ದುಃಖಂ ತಮಹಮಖಿಲತುಷ್ಟ್ಯೈ ಶಾಸ್ತ್ರದೃಷ್ಟ್ಯಾ ವ್ಯನಜ್ಮಿ" ಎಂಬಲ್ಲಿ ಭಕ್ತಿ ಸ್ವತಂತ್ರ ಪುರುಷಾರ್ಥರೂಪವಾದ್ದು ಎಂದು ಹೇಳಿದೆ. ಅದೇ ಗ್ರಂಥದಲ್ಲಿ "ದ್ರುತಸ್ಯ ಭಗವದ್ಧರ್ಮಾದ್ಧಾರಾವಾಹಿ ಕತಾಂಗತಾ| ಸರ್ವೇಶೇ ಮನಸೋವೃತ್ತಿರ್ಭಕ್ತಿರಿತ್ಯ ಭಿಧೀಯತೇ" ಎಂದು ಭಕ್ತಿಯ ಸ್ವರೂಪ ಹೇಳಲ್ಪಟ್ಟಿದೆ. ಹಾಗೆಯೇ ಜ್ಞಾನಯೋಗ ಮತ್ತು ಶಮ ಇವುಗಳಿಗೆ ಅಂತರಂಗ ಸಾಧನವಾದ ಭಕ್ತಿ ಗೌಣ. ಇದರಿಂದ ನಿರ್ವೇದ ಪೂರ್ವಕವಾಗಿ ತತ್ತ್ವಜ್ಞಾನವುಂಟಾಗುವುದು. ಆ ಮೂಲಕ ಮೋಕ್ಷಪುರುಷಾರ್ಥವೂ ಲಭಿಸುವುದು. ಚಿತ್ತವು ದ್ರುತವಾಗಿರುವ ಉತ್ತಮಾಧಿಕಾರಿಗೆ ಭಗವತ್ಕಥಾಶ್ರವಣ ಮುಂತಾದ ಭಾಗವತ ಧರ್ಮಶ್ರದ್ಧಾಪೂರ್ವಕವಾಗಿ ಭಕ್ತಿಯೇ ಪುರುಷಾರ್ಥರೂಪ ವಾಗುವುದು. ಈ ರಸಕ್ಕೆ ವಿಭಾವ ಅನುಭಾವ ವ್ಯಭಿಚಾರಿಭಾವ ಮುಂತಾದವು ಯಾವು ವೆಂಬುದನ್ನು ಹಿಂದೆಯೇ ಸೂಚಿಸಿದೆ. ಭಗವದ್ಭಕ್ತರ ಚಿತ್ತದಲ್ಲಿ ಪ್ರತಿಬಿಂಬಿಸಿರುವ ಭಗವ ದಾಕಾರವೇ ಸ್ಥಾಯಿಭಾವ; ಚಿತ್ತವು ಅರಗಿನಂತೆ ದ್ರುತಿಯಾಗುವ (ಕರಗುವ) ಶೀಲ ವುಳ್ಳದ್ದು. ತಾಪಕವಸ್ತುಗಳ ಸಂಪರ್ಕದಿಂದ ಅರಗು ಕರಗುವಂತೆ ಕಾಮಕ್ರೋಧ ಮುಂತಾದ ತಾಪಕಗಳಿಂದ ಚಿತ್ತ ಕರಗುವುದು. ಚಿತ್ತದ್ರಾವಕವಸ್ತುಗಳನ್ನು ತಾಪಕ ವೆಂದೇ ಹೇಳಬೇಕಾದುದು ಅಗತ್ಯವಿಲ್ಲ. ತನಗೆ ಅಭಿರುಚಿಯಿರುವ ಹುಳಿ ಅಥವಾ ಸಿಹಿ ವಸ್ತುಗಳನ್ನು ಎದುರಿಗೆ ಕಂಡಕೂಡಲೆ ನಾಲಿಗೆಯಲ್ಲಿ ನೀರು ಸುರಿಯುವುದು ಅನುಭವ ಸಿದ್ಧವಲ್ಲವೆ? ಎಂದರೆ ರಸನೇಂದ್ರಿಯವು ದ್ರುತವಾದಂತೆ ಆಗುವುದು. ಅದೇ ರೀತಿ ಚಿತ್ತಕ್ಕೆ ಅಭಿರುಚಿಯಾದ ವಸ್ತುವಿನ ಭಾವನೆಯಿಂದ ಚಿತ್ತ ಕರಗುವುದು. ಆ ಅವಸ್ಥೆ ಯಲ್ಲಿ ಭಗವದಾಕಾರವು ಪ್ರತಿಬಿಂಬಿತವಾದರೆ ಅರಗಿನಲ್ಲಿ ಅಂಟಿಕೊಂಡಂತೆ ಆ ಆಕಾ ರವು ದೃಢವಾಗಿ ಚಿತ್ತಾರೂಢವಾಗುವುದು. ಮತ್ತೆ ಆ ಚಿತ್ತ ಕಠಿನವಾದರೂ ಆ ಆಕಾರವು ಬಿಟ್ಟುಹೋಗುವುದಿಲ್ಲ. ವೇದಾಂತಿಗಳಿಗೆ ಸಂಮತವಾಗುವಂತೆ ರಸಾಭಿ ವ್ಯಕ್ತಿಯನ್ನು ಉಪಪಾದನ ಮಾಡುವ ರೀತಿ ಇದು.

ಸಾಂಖ್ಯಪ್ರಕ್ರಿಯೆಯನ್ನೂ ರಸಾಭಿವ್ಯಕ್ತಿಯಲ್ಲಿ ಹೊಂದಿಸಬಹುದು. ಸಾಂಖ್ಯ ಸಿದ್ಧಾಂತದಲ್ಲಿ ಪ್ರತಿಯೊಂದು (ವಿಕಾರಜನ್ಯ) ವಸ್ತುವೂ ಸುಖ ದುಃಖ ಮೋಹಾತ್ಮಕ ವಾದದ್ದು. ಆದುದರಿಂದಲೇ "ಪರಿವ್ರಾಟ್ ಕಾಮುಕ ಶುನಾಂ ಏಕಸ್ಯಾಂ ಪ್ರಮದಾತನೌ| ಕುಣಪಃ ಕಾಮಿನೀ ಕವ್ಯ ಇತಿ ತಿಸ್ರೋ ವಿಕಲ್ಪನಾಃ|| ಎಂಬಂತೆ ಒಂದೇ ಸುಂದರ ಸ್ತ್ರೀವ್ಯಕ್ತಿಯಲ್ಲಿ ಯತಿಗಳಿಗೆ ಶವದೃಷ್ಟಿಯೂ, ತರುಣನಿಗೆ ಭೋಗ್ಯ

ಕಾಮಿನೀ ದೃಷ್ಟಿಯೂ, ನಾಯಿಗೆ ಆಹಾರವಾದ ಮಾಂಸ ಪಿಂಡವೆಂಬ ದೃಷ್ಟಿಯೂ ಇರುವುವು. ಇದರಂತೆ ಕಾಮಿನಿಯಲ್ಲಿ ಪ್ರಿಯನಿಗೆ ಸುಖಾಕಾರವೂ, ಸಪತ್ನಿಯರಿಗೆ ದುಃಖಾಕಾರವೂ, ಆಕೆಯನ್ನು ಆಶಿಸಿದರೂ ಪಡೆಯದಿರುವ ಯುವಕನಿಗೆ ಮೋಹಾ ಕಾರವೂ ತೋರಿಬರುವುದು. ವಸ್ತು ಒಂದೇ ವಿಧವಾದದ್ದಾದರೆ ಈ ರೀತಿಯಾಗಿ ಭಿನ್ನದೃಷ್ಟಿಗಳು ಗ್ರಾಹಕರಿಗೆ ಸಂಭವಿಸುತ್ತಿರಲಿಲ್ಲ. ಹೀಗಿರಲು ಆಲಂಬನ ವಸ್ತುವಿನ ಸುಖಾಕಾರವು ಮನಸ್ಸಿನಲ್ಲಿ ಪ್ರವೇಶಿಸಿದಾಗ ಅದು ಸ್ಥಾಯಿಭಾವರೂಪವನ್ನು ಹೊಂದುತ್ತದೆ. ಸಮಸ್ತ ರಸಗಳಲ್ಲಿಯೂ ವಿಭಾವಾದಿ ಸಂಯೋಗದಿಂದ ಅಭಿವ್ಯಕ್ತಿಯನ್ನು ಹೊಂದುವ ಮೊದಲು ಇರುವ ಭಾವವನ್ನು ಸ್ಥಾಯಿಭಾವವೆಂದು ಕರೆಯಲು ಇದೊಂದು ಆಶಯವಿದೆ. ಚಿತ್ತವು ಜಾಗರಣದಲ್ಲಿ ವಿಷಯೇಂದ್ರಿಯ ಸಂಯೋಗ ಮುಂತಾದ ಸಾಮಗ್ರಿಯಿಂದ ಬಾಹ್ಯವಾದ ಸ್ಥೂಲ ವಿಷಯಾಕಾರವನ್ನೂ ಸ್ವಪ್ನದಲ್ಲಿ ವಾಸನಾ ಸಹಾಯದಿಂದ ಸೂಕ್ಷ್ಮವಿಷಯಾಕಾರವನ್ನೂ ಗ್ರಹಿಸುತ್ತದೆ. ಸುಷುಪ್ತಿಯಲ್ಲಿ ವಿಷಯವನ್ನು ಗ್ರಹಿಸುವ ಸಾಮಗ್ರಿ ಇಲ್ಲದಿರುವುದರಿಂದ ನಿರ್ವಿಷಯವಾಗಿಯೇ ಇರುವುದು. ಹೀಗೆ ಪ್ರತಿಯೊಂದು ಬಾಹ್ಯವಸ್ತುವೂ ಬಾಹ್ಯಾಕಾರ ಮಾತ್ರವಲ್ಲದೆ ಮನೋಮಯಾಕಾರದಿಂದಲೂ ಕೂಡಿದೆ. ಸುಂದರಿಯಾದ ಅಂಗನೆಯಲ್ಲಿ ಕೈಕಾಲು ಮುಂತಾದ ಅವಯವಗಳಿಂದ ಕೂಡಿದ ಬಾಹ್ಯಾಕಾರವು ಸರ್ವರ ದೃಷ್ಟಿಗೂ ಒಂದು ರೂಪವಾಗಿದ್ದರೂ ಮನೋಮಯ ಆಕಾರ ಬೇರೆ ಬೇರೆಯಾಗಿರುವುದು. ಆದ್ದರಿಂದಲೇ ಗ್ರಾಹಕರ ಮನೋಽನುಗುಣವಾಗಿ ಹೆಂಡತಿ, ಸೊಸೆ, ನಾದಿನಿ ಮುಂತಾದ ವ್ಯವಹಾರಗಳು ಒಂದೇ ವ್ಯಕ್ತಿಯಲ್ಲಿ ಅಬಾಧಿತವಾಗಿರುವುವು. ಹಾಗೆಯೇ ಬಾಹ್ಯಾಕಾರವು ನಾಶವಾದರೂ ಮನೋಮಯವಾದ ಆಕಾರವು ಸ್ಥಿರವಾಗಿರುವುದರಿಂದ ಅದಕ್ಕೆ ಸ್ಥಾಯಿಯೆಂದು ಹೆಸರು.

ಕಠಿನಚಿತ್ತವು ವಿಷಯಾಕಾರವನ್ನು ಗ್ರಹಿಸುವುದೇ ಇಲ್ಲ. ಶಿಥಿಲ (ಸ್ವಲ್ಪ ಮಾತ್ರ ಮೃದುವಾದ) ಚಿತ್ತದಲ್ಲಿ ವಿಷಯಗೋಚರವೃತ್ತಿ ಹುಟ್ಟಿದರೂ ವಾಸನಾ ರೂಪವಾದ ಆಕಾರ ಹುಟ್ಟುವುದಿಲ್ಲ. ಆದುದರಿಂದ ಕಠಿನ, ಶಿಥಿಲ ಅವಸ್ಥೆಗಳಿಂದ ಕೂಡಿದ ಮನೋವೃತ್ತಿಯನ್ನು ಉಪೇಕ್ಷಾಜ್ಞಾನವೆಂದು ಕರೆಯುವರು. ಭಕ್ತಿ ರಸಾಸ್ವಾದವೆಂಬ ಪುರುಷಾರ್ಥವನ್ನು ಅಪೇಕ್ಷಿಸುವವರು ಭಗವಂತನಿಗಿಂತ ಇತರ ವಿಷಯಗಳಲ್ಲಿ ಚಿತ್ತವನ್ನು ಕಠಿನವನ್ನಾಗಿಯೂ, ಭಗವಂತನಲ್ಲಿ ದ್ರವೀಭೂತವನ್ನಾಗಿಯೂ ಮಾಡಲು ಯತ್ನಿಸಬೇಕು. ಆಗ ಅಲ್ಲಿ ಪ್ರತಿಬಿಂಬಿಸಿರುವ ಭಗವದಾಕಾರವೆಂಬ ಈ ಸ್ಥಾಯಿಭಾವವು ಆಯಾ ವಿಭಾವ ಅನುಭಾವ ವ್ಯಭಿಚಾರಿಗಳಿಂದ ಅಭಿವ್ಯಕ್ತವಾಗಿ ರಸರೂಪವಾಗುತ್ತದೆ—ಎಂಬುದು ರಸಾಸ್ವಾದದ ಪ್ರಕಾರ. ಪ್ರಕೃತ,

ಭಕ್ತಿರಸಕ್ಕೆ ಭಗವಂತನೆಂಬ ಆಲಂಬನ, ಪುಣ್ಯಾಶ್ರಮ ತಪೋವನಾದಿ ಉದ್ದೀಪನ, ರೋಮಾಂಚ ಅಶ್ರುಪಾತ ಮೊದಲಾದ ಅನುಭಾವ, ಹರ್ಷಾದಿ ವ್ಯಭಿಚಾರಿಭಾವ, — ಇವುಗಳ ಸಂಪರ್ಕದಿಂದ ಭಾಗವತಾದಿ ಪುರಾಣಶ್ರವಣ ಸಮಯದಲ್ಲಿ ಭಗವದ್ಭಕ್ತರಿಗೆ ಆಸ್ವಾದ್ಯಮಾನವಾಗುವುದಾದ್ದರಿಂದ ಇದನ್ನು ನಿರಾಕರಿಸಲಾಗದು.

ಕೆಲವು ಆಲಂಕಾರಿಕರು ಭಕ್ತಿಯನ್ನು ಶಾಂತರಸದಲ್ಲಿ ಅಂತರ್ಭಾವಮಾಡಿದ್ದಾರೆ. ಆದ್ದರಿಂದ ಅದು ರಸವೆಂಬ ಅಂಶಕ್ಕೆ ಅವರ ಸಂಮತಿಯೂ ಇದ್ದಂತಾಯಿತು. ಆದರೆ ಶಾಂತರಸವು ಸರ್ವತೋವಿರಕ್ತಿರೂಪವಾದ ನಿರ್ವೇದಪ್ರಧಾನವಾದ್ದು. ಭಗವದನು ರಾಗರೂಪವಾದ ಭಕ್ತಿಗೆ ಅಲ್ಲಿ ಅಂತರ್ಭಾವ ಹೇಗೆ ಸರಿಯಾದೀತು? ರತಿರ್ದೇವಾದಿ ವಿಷಯಾ ವ್ಯಭಿಚಾರೀ ತಥಾಂಜಿತಃ — ಎಂಬ ಪ್ರಾಚೀನಸಿದ್ಧಾಂತವು ಪರಿಪೂರ್ಣ ಸಚ್ಚಿದಾನಂದಾತ್ಮಕನಾದ ಭಗವಂತನಿಗಿಂತ ಇತರ ದೇವಾದಿಗಳ ವಿಷಯದಲ್ಲಿರುವ ಭಕ್ತಿ ಭಾವರೂಪವಾದುದೆಂದೂ ಭಗವದ್ವಿಷಯದಲ್ಲಿಯ ಪ್ರೇಮವು ರಸಸ್ವರೂಪ ವೆಂದೂ 'ಭಕ್ತಿರಸಾಯನ' ಗ್ರಂಥಕಾರರ ಆಶಯ. ಇಂತಹ ಭಕ್ತಿಯಲ್ಲಿ ಲೀನರಾಗಿರು ವವರಿಗೆ ಪ್ರಾರ್ಥನೀಯ ವಸ್ತು ಬೇರೆಯಿಲ್ಲವೆಂಬುದು ಅವರಿಗೆ ಅನುಭವಸಿದ್ಧ. ಈ ವಿಧದ ಭಗವತ್ಪ್ರೇಮಕ್ಕೆ ವಿರುದ್ಧವಾದುದಾಗಿ ಪರಮಪುರುಷಾರ್ಥವೇ ಆದರೂ ಅದು ದ್ವೇಷ್ಯವೆಂದೇ ಅವರ ನಿಶ್ಚಯ. ರಾಮಾಯಣ ಮಹಾಭಾರತಾದಿಗಳಲ್ಲಿ ಕರುಣ — ಶಾಂತರಸಾದಿಗಳು ಪ್ರಧಾನವಾದರೆ ಭಾಗವತ ಕಾವ್ಯಕ್ಕೆ ಭಕ್ತಿರಸವೇ ಪ್ರಧಾನ. ಮಿಕ್ಕ ವರ್ಣನೆಗಳೆಲ್ಲವೂ ಭಾಗವತದಲ್ಲಿ ಇದಕ್ಕೆ ಉಪೋದ್ಬಲಕವಾಗಿಯೇ ಇವೆ. ಆಮೂಲಾಗ್ರ ಭಾಗವತ ವಿಮರ್ಶದಿಂದ ಈ ಸಂಗತಿ ವ್ಯಕ್ತವಾಗುವುದು. ಉದಾಹರಣೆಗೆ ಇದರ ಉಪಕ್ರಮದಲ್ಲಿರುವ "ನಿಗಮಕಲ್ಪತರೋಃ ಗಲಿತಂ ಫಲಂ ಶುಕಮುಖಾದಮೃತ ದ್ರವ ಸಂಯುತಂ| ಪಿಬತ ಭಾಗವತಂ ರಸಮಾಲಯಂ ಮುಹುರಹೋ ರಸಿಕಾ ಭುವಿ ಭಾವುಕಾಃ" ಎಂಬ ಪದ್ಯವನ್ನು ತೆಗೆದುಕೊಳ್ಳೋಣ. ಇಲ್ಲಿ ಭಾವುಕಾಃ ಎಂಬ ವಿಶೇಷಣದಿಂದ ಕೂಡಿ ರಸಿಕಾಃ ಎಂದು ಸಂಬೋಧಿಸಿ, "ಭಾಗವತಂ ರಸಂಪಿಬತ" ಎಂದು ಭಾಗವತರಸವನ್ನು ಆಸ್ವಾದಮಾಡಿ ಎಂದು ಹೇಳಿ ಮುಂದೆ ಭಕ್ತಿಯನ್ನೇ ಪ್ರಧಾನವಾಗಿ ನಿರೂಪಿಸಿರುವುದನ್ನು ಪರ್ಯಾಲೋಚಿಸಿದರೆ ಭಕ್ತಿಯು ರಸವೆಂದು ತೀರ್ಮಾನವಾಗುವುದು.

ಈ ಭಕ್ತಿ ರಸವಾಗುವುದು ಮಾತ್ರವಲ್ಲದೆ ಎಲ್ಲ ರಸಗಳಿಗಿಂತಲೂ ಉತ್ತಮವಾದು ದೆಂದು ಹೇಳಬಹುದು. ಶೃಂಗಾರಾದಿ ರಸಗಳಲ್ಲಿ ಹಿಂದೆ ಹೇಳಿರುವಂತೆ ಆಲಂಬನ ವಿಭಾವದ ಸುಖಾಕಾರವು ಮನಸ್ಸಿನಲ್ಲಿ ಅಂಟಿಕೊಂಡು ಸ್ಥಾಯಿಭಾವಸ್ವರೂಪವನ್ನು ಹೊಂದುವುದು; ಅದರ ಅಭಿವ್ಯಕ್ತಿ ಆನಂದಮಯವಾಗುವುದು. ಅದು ಆಸ್ವಾದ್ಯ

ಮಾನ ಅಥವಾ ರಸ್ಯಮಾನವಾದ್ದರಿಂದ ರಸವಾಗುವುದಷ್ಟೇ. ಚಿತ್ತದಲ್ಲಿ ಕಾಮಿನೀ ಮುಂತಾದ ಆಕಾರ ಸ್ವಾಭಾವಿಕವಾದುದಲ್ಲ. ಅದು ಆಗಂತುಕವಾದ ಕಾರಣದಿಂದ ಬರುವುದೆಂದು ಹಿಂದೆಯೇ ಹೇಳಿದೆ. ಭಗವಾದಾಕಾರವು ಸ್ವಾಭಾವಿಕವಾದುದು. ಪ್ರಪಂಚವನ್ನೆಲ್ಲಾ ವ್ಯಾಪಿಸಿ ಸರ್ವಾಂತರ್ಯಾಮಿಯಾದ ಭಗವಂತನು ಮನಸ್ಸಿನಲ್ಲಿಯೂ ಸ್ವತಃ ವ್ಯಾಪಿಸಿರುವನು. ಒಂದು ಗಡಿಗೆಯಲ್ಲಿ ಜಲಪೂರ್ಣತಾ ಎಂಬ ಗುಣವು ಕಾರಣಸಂಪರ್ಕದಿಂದ ಹುಟ್ಟುವುದೇ ಹೊರತು ಘಟದ ಸ್ವಾಭಾವಿಕ ಗುಣವಾಗಲಾರದು. ಆಕಾಶವು ಸರ್ವವ್ಯಾಪಕವಾಗಿರುವುದರಿಂದ ಆಕಾಶಪೂರ್ಣತಾ ಎಂಬುದು ಮಾತ್ರ ಸ್ವಾಭಾವಿಕವಾಗಿದೆ. ಈ ದೃಷ್ಟಾಂತದಿಂದ ಭಗವದಾಕಾರವು ಸ್ವಾಭಾವಿಕವಾದರೆ ಪೌರುಷದಿಂದ ಸಾಧಿಸುವುದೇನೆಂದು ಶಂಕೆ ಹುಟ್ಟೀತು. ಸ್ವಾಭಾವಿಕವಾದ ಭಗವದಾಕಾರವು ಬೇರೆ ವಿಷಯಗಳ ಆಕಾರದ ಜೊತೆಯಲ್ಲಿರುವುದರಿಂದ ಆ ವೇದ್ಯಾಂತರವನ್ನು ಮರೆಮಾಚುವ ಅದ್ವಿತೀಯಾನಂದಮಯ ರಸಾಸ್ವಾದಕ್ಕೆ ನಿಮಿತ್ತವಾಗಲಾರದು. ಶಾಸ್ತ್ರಾಭ್ಯಾಸದಿಂದ ಹುಟ್ಟಿದ ಭಗವದಾಕಾರವು ವೇದ್ಯಾಂತರವಸ್ತುಗಳ ಆಕಾರವನ್ನು ಮರೆಮಾಡಿ ಸಾಧನಾಭ್ಯಾಸದಿಂದ ಅಪರೋಕ್ಷವಾಗುವುದು. ಆಗ ಎಲ್ಲ ರಸಾಸ್ವಾದ ಮತ್ತು ಅದರ ಸಾಧನಗಳಲ್ಲಿರುವ ಪ್ರೇಮವು ಭಗವಂತನಲ್ಲಿಯೇ ಅರ್ಪಿತವಾಗುವುದು. ಈ ಅವಸ್ಥೆಯಲ್ಲಿ ಪ್ರಹ್ಲಾದನು "ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ । ತ್ವಾಮನುಸ್ಮರತಃ ಸಾಮೇ ಹೃದಯಾನ್ಮಾಽಪಸರ್ಪತು ॥" ಎಂದು ಪ್ರಾರ್ಥಿಸಿರುವನು. ಇಂತಹ ಭಕ್ತಿಯ ಅನುಭವವೇ ರಸಾಸ್ವಾದ. ಭಕ್ತಿರಸದ ಆಲಂಬನವಾದರೋ ಅಪರಿಚ್ಛಿನ್ನಾನಂದ ಸ್ವರೂಪವೇ. ಹೀಗೆ ಇರುವುದರಿಂದ ಅದು ಸ್ಥಾಯಿಭಾವ. ರಸಪರಂಪರೆಯಿಂದ ಆಸ್ವಾದ್ಯವಾಗುವುದರಲ್ಲಿ ಆನಂದಮಯತ್ವವು ನಿರತಿಶಯವಾದುದು. ಆದ್ದರಿಂದ ಈ ರಸವೇ ಸರ್ವೋತ್ತಮವಾದ ರಸ. "ರಸೋ ವೈ ಸಃ" ಎಂಬ ಶ್ರುತಿಯಿಂದ ಆತ್ಮನು ರಸಸ್ವರೂಪನು ಎಂದೂ "ರಸಂ ಹ್ಯೇವಾಯಂ ಲಬ್ಧ್ವಾಽನಂದೀ ಭವತಿ" ಎಂಬ ಶ್ರುತಿಯಿಂದ ರಸಾಸ್ವಾದದಿಂದ ಆತನು ಆನಂದಾನುಭವಿಯಾಗುವನೆಂದೂ ಹೇಳಿರುವ ಮಾತು ಶೃಂಗಾರಾದಿ ರಸಗಳಿಗಿಂತ ಹೆಚ್ಚಾಗಿ ಭಕ್ತಿರಸಕ್ಕೇ ಉಚಿತವಾಗಿ ಅನ್ವಯಿಸುತ್ತದೆ. ಆದುದರಿಂದ ಭಕ್ತಿಯನ್ನು ರಸವೆಂದು ಹೇಳಬಹುದು.

ಪಾಟಣಕರ ಚಂದ್ರಶೇಖರ ಭಟ್ಟ.

# ಕನ್ನಡ ಮೇಘದೂತ*

೩

೧

ಆವನೊರುವಂ ಯಕ್ಷನಧಿಕಾರಮದದಿಂದೆ
ದೊರೆಯ ಶಾಪಕೆ ಸಿಲುಕಿ ವರುಷಕಾಲ
ತನ್ನ ಕಾಂತೆಯನಗಲಿ ವಿರಹಭಾರದಿ ಬಳಲಿ
ವೈಗರೆದ ಮಹಿಮೆಯಿಂ ದೀನನೆನಿಸಿ
ವಾಸಗೈದಂ ಬಂದು ಜನಕನಂದನೆ ಮಿಂದ
ಪುಣ್ಯತೀರ್ಥಗಳಿರುವ ರಾಮಗಿರಿಯ
ನಿಬಿಡಮೆನೆ ನೆಳಲೀವ ತರುಗಳಾಸರೆಗಳಲಿ
ಉಚಿತಮಾದಾಶ್ರಮಂಗಳಲಿ ನೆಲಸಿ.

೨

ಅಬಲೆಯನು ತಾನಗಲಿ ಕನಕವಲಯುವು ಕಳಚಿ
ಬರಿದಾದ ಮುಂಗೈಯೊಳಾ ಕಾಮಿಯು
ಅದುವೆ ಗಿರಿಯೊಳು ನೆಲಸಿ ಕೆಲವು ತಿಂಗಳು ಕಳೆದು
ಆಷಾಢಮಾಸದಲಿ ಮೊದಲದಿವಸ
ದಂತದಲಿ ಮಣ್ಣನಗೆದೆರಚುತಿರುವಾಟದಲಿ
ತೊಡಗಿರುವ ಆನೆವೊಲು ಕಣ್ಗೆಸೆಯುವ
ಸಾನುದೇಶವನಪ್ಪಿ ಸೊಬಗನಾಂತಿರುವೊಂದು
ಹಿರಿದಾದ ಮೋಡವನು ಕಂಡನಂದು.

೩

ಹಲವಾರು ಆಸೆಗಳ ಮನದೊಳೊಡಮೂಡಿಸುವ
ಆ ಮುಗಿಲ ಮುಂದೆಸೆಯೊಳೆಂತೊ ನಿಂತು
ರಾಜರಾಜಾನುಚರನುರುಳಿ ಬಹ ಕಂಬನಿಯ
ತಡೆದಂತೆ ಬಹುಪೊಳ್ತು ಚಿಂತಿಸಿದನು.

---

* ಸದ್ಯದಲ್ಲಿಯೆ ಪ್ರಕಟವಾಗಲಿರುವ 'ಕನ್ನಡ ಮೇಘದೂತ'ದಲ್ಲಿನ ಪೂರ್ವಮೇಘದ ಕೆಲವು ಪದ್ಯಗಳು.

ಮೇಘದಾಲೋಕನದಿ ಸುಖಿಯುಂತರಂಗಮುಂ
ಅನ್ಯಥಾವೃತ್ತಿಯನು ತಾಳ್ವುದೆನಲು
ಕೊರಳಬಿಗಿಯಪ್ಪುಗೆಯನಾಶಿಸುವ ಪ್ರಣಯಿಜನ
ದೂರವಿರುವಂತಹರ ಪಾಡದೆಂತು !

೪

ಶ್ರಾವಣವು ಸನ್ನಿಹಿತವೆನೆ ಬಗೆದು ಪ್ರೇಯಸಿಯ
ಜೀವಿತಾಲಂಬನದೊಳಾಸಕ್ತನಾಗಿ
ತನ್ನ ಕುಶಲವನಾಕೆಗಾ ಮುಗಿಲ ಮೊಗದಿಂದೆ
ಕಳುಹಿಸುವ ಸಲುವಾಗಿ ಆತನಂದು,
ಅದೆತಾನೆ ಅರಳಿರುವ ಕುಟಜ ಕುಸುಮಗಳಿಂದೆ
ಅರ್ಘಮಂ ಕಲ್ಪಿಸುತೆ ಪ್ರೀತನಾಗಿ
ಪ್ರೇಮದೊಳ್ನುಡಿಗಳಿಂದಾ ಮುಗಿಲ ತಾಂ ನುಡಿಸಿ
ಸ್ವಾಗತವ ಬಯಸಿದನು ಹರ್ಷದಿಂದೆ.

೫

ಹೊಗೆಯಿಂದೆ ಉರಿಯಿಂದೆ ಗಾಳಿನೀರುಗಳಿಂದೆ
ರೂಪುಗೊಂಡಿರುವ ಜಡಮೋಡವೆತ್ತ !
ಪಟುವಾದ ಕರಣಗಳ ಪಡೆದಿರುವ ಜೀವಿಗಳು
ಕೊಂಡೊಯ್ವ ಸಂದೇಶ ವಿಷಯವೆತ್ತ !
ಔತ್ಸುಕ್ಯದಿಂದಿದನು ಗಣಿಸದೆಯೆ ಗುಹ್ಯಕನು
ಯಾಚಿಸಿದನಾ ಮುಗಿಲ ಕೃಪಣನಾಗಿ.—
ಕಾಮಾರ್ತರಾದವರು ಚೇತನಾಚೇತನದೆ
ಕೃಪಣರೆಂಬುದು ನೋಡೆ ಸಾಜವಲ್ತೆ !

* * *

೬

ಸಂತಪ್ತರಾದರಿಗೆ ನೀನೆ ಶರಣಾಗಿರುವೆ
ಹೇ, ಪಯೋದನೆ, ಅಂತೆ ನಿನ್ನನೆರೆವೆ.
ಧನಪತಿಯ ಕೋಪದಿಂದಗಲಿ ಬಂದಿರುವೆನ್ನ
ಸಂದೇಶವಿದನೊಯ್ದು ನಲ್ಲೆಗರುಹು.

ಅಲ್ಲಿ ಬಹಿರುಪವನದಿ ಸೆಲೆನಿಂದ ಪರಶಿವನ
    ಶಿರದ ಶಶಿಕಳೆಯು ಬೆಳ್ದಿಂಗಳಿಂದ
ಹೊಳೆವ ಹರ್ಮ್ಯಗಳಿರುವ ಯಕ್ಷರೊಡೆಯನು ವಸಿಪ
    ಹೆಸರಾದ ಅಲಕೆಯನು ಕುರಿತು ತೆರಳು.

೭

ದಿನದಿನಗಳೆಣಿಕೆಯಲೆ ನಿರತಳಾಗಿರುವವಳ
    ಏಕಪತ್ನಿಯ ಸತಿಯನವಿಪನ್ನೆಯ
ಭ್ರಾತೃಜಾಯೆಯನವಳ ನೀನವಶ್ಯಂ, ಸಖನೆ
    ತ್ವರಿತ ಗಮನದೊಳೈದಿ ನೋಡಲಿರುವೆ.
ಕುಸುಮ ಕೋಮಲವೆನಿಸಿ ವಿರಹದೊಳು ಬಲುಬಳಲಿ
    ಕ್ಷಣಮಾತ್ರದಲಿ ಕಳಚಿ ಬೀಳಲಿರುವ
ಪ್ರಣಯಿ ಹೃದಯುವನದನು ಆಸೆಯೆಸುವಾ ಬಂಧ
    ವಿಪ್ರಯೋಗದೊಳಿರದೆ ತಡೆದಿರುವುದು.

* * *

೮

ಅತಿ ಬೆಳೆದ ಕೇಸರದೆ ಕಂದು ಹಸುರಿಸ ಬಣ್ಣ-
    ದಿಂದೆಸೆವ ನೀಪಗಳ ನೋಡಿ ಸವಿದು
ಜೌಗುನೆಲದಲಿ ಬೆಳೆದ ಮೊದಲ ಮುಗುಳುಗಳೊಗೆದ
    ಎಳೆಯ ಕಂದಳಿಗಳನು ತಿಂದು ನಲಿದು
ವನ್ಯದೇಶಗಳಿಂದಲಧಿಕ ಸೌರಭವುಗುವ
    ನೀರುಂಡ ತಿರೆಯ ಹೊಸ ಕಂಪು ಮೂಸಿ
ಸಂಚರಿಪ ಸಾರಂಗನಿವಹ ತಾಂ ಸೂಚಿಪುದು
    ಹೊಸನೀರ ಹನಿಗರೆವ ನಿನ್ನಪಥಮಂ.

* * *

೯

ಉತ್ತರದ ದೆಸೆಗೆಂದು ಪಯಣ ಬೆಳೆಸುವ ನಿನಗೆ
    ಉಜ್ಜಯಿನಿಯಾ ದಾರಿ ಬಳಸಾದರುಂ
ಅಲ್ಲಿನ ಮಹೋತ್ತುಂಗ ಸೌಧದರಮನೆಗಳಲಿ
    ಸ್ನೇಹವಿರಹಿತನೆನಿಸಿ ಮೊಗದಿರುಹದೆ

ಬಳ್ಳಿ ಮಿಂಚಿನ ಬೆಳಕಿಗಿರದೆ ಭಯದಿಂ ಬೆದರಿ
ಚಲಿಸುತಿರುವಾ ನಗರದಂಗನೆಯರ
ಚಕಿತ ಲೋಲಾಪಾಂಗ ಲೋಚನಂಗಳ ನೋಡಿ
ನೀನಲ್ಲಿ ರಮಿಸದಿರೆ ವಂಚಿತನಹೆ!

* * *

೧೦

ವತ್ಸರಾಜನ ಕಥೆಯನರಿತ ಕೋವಿದರಿರುವ
ಊರ ಹಿರಿಯರ ನೆಲೆಯುನಾವಂತಿಯು
ಹಿಂದಿರಿಸಿ, ಸಿರಿಯು ಹರಹಿನ ನೆಲೆಯು ತಾನೆನಿಸಿ-
ದುಜ್ಜಯಿನಿಯನು ಕುರಿತು ತೆರಳಿದಂದು
ತಮ್ಮ ಸುಚರಿತಫಲವು ಮುಗಿದು ಬರುತಿರುವಂದು
ದೇವಲೋಕದ ಜನರು ತಿರುಗಿ ಬಂದು
ಸುಕೃತ ಶೇಷಗಳಿಂದ ಧರೆಗೆ ತಂದಿಳಿಸಿರುವ
ದಿವದೊಂದು ಖಂಡವೆನೆ ಕಂಗೊಳಿಪುದು.

೧೧

ಅಲ್ಲಿ ಶಿಪ್ರಾನದಿಯ ಮೇಲೆ ಬೀಸುವ ಗಾಳಿ
ಉದಯಕಾಲದೊಳುಲಿವ ಸಾರಸಗಳ
ಮದಕಲದ ಕೂಜಿತವ ನಿಡಿದಾಗಿ ಬೆಳೆಯಿಸುತೆ
ಬಿರಿದ ತಾವರೆಯರಳ ಕಂಪನಾಂತು
ಭೋಗದಭಿಲಾಷೆಯಲಿ ಚಾಟುವಚನವ ನುಡಿದು
ಕಾಮಿನಿಯ ಸಂತವಿಸುವಿನಿಯನಂತೆ
ಅಂಗನೆಯರೊಡಲಿಗನುಕೂಲ ಭಾವದಿ ಸುಳಿದು
ಬೇಟದಾಯಾಸವನು ನೀಗಲಿಹುದು.

೧೨

ತಾರಹಾರಗಳೆನಿತೊ ತರಳ ಘುಟಿಕಗಳೆನಿತೊ
ಶಂಖ ಶುಕ್ತಿಗಳೆನಿತೊ ಕೋಟಿ ಕೋಟಿ
ಎಳೆ ಹುಲ್ಲಿನಂತಿರುವ ಹಸುರುಬಣ್ಣದ ಕಾಂತಿ
ಕುಡಿಯೊಡೆದು ಹೊಳೆವ ಮರಕತಗಳೆನಿತೊ!

ಹವಳಗಳ ಹರಳೆನಿತೊ ಉಜ್ಜಯಿನಿಯಂಗಡಿಯ
ಬೀದಿಗಳ ನೋಡಿದರೆ ಹೊಳೆವುದೆಂದು
ಮುನ್ನೀರು ತನ್ನೆಲ್ಲ ರತ್ನಗಳನಿಲ್ಲಿರಿಸಿ
ತಾಂ ಬರಿಯ ನೀರನಿಧಿಯಾದುದೆಂದು.

* * *

೧೩

ಎಲೆಹಸುರುಬಣ್ಣದಲಿ ದಿನಕರನ ತೇಜಿಗಳ
ಹೋಲುತಿಹ ವಾಹಕಗಳಿರುವುವಲ್ಲಿ
ಶೈಲದಂತುತ್ತುಂಗಮೆನಿಸಿದಾನೆಗಳಲ್ಲಿ
ನಿನ್ನವೊಲು ಮದಜಲದ ಮಳೆಗರೆವುವು
ಸಮರ ಸಂರಂಭದಲಿ ದಶಮುಖನಿಗೆದುರಾಗಿ
ಚಂದ್ರಹಾಸದೊಳಾದ ಕಲೆಗಳಿಂದೆ
ಆಭರಣ ಕಾಂತಿಗಳ ಮರಸಿ ಮೆರೆವಂತಿರುವ
ಯೋಧಾಗ್ರಗಣ್ಯರಿಹರಲ್ಲಿ ನೆಲಸಿ.

೧೪

ಜಾಲಮಾರ್ಗದಿನೊಗೆವ ಕೇಶಸಂಸ್ಕಾರದಿನಿ-
ಧೂಪದಿಂದೊಡಗೂಡಿ ಪುಷ್ಟನಾಗಿ
ಬಾಂಧವ ಪ್ರೇಮದಿಂ ಭವನಶಿಖಿಗಳ್ ಕುಡುವ
ನೃತ್ತೋಪಹಾರದಿಂ ತುಷ್ಟನಾಗಿ
ಕುಸುಮ ಸೌರಭವುಗುವ ಲಲಿತವನಿತಾಪಾದ-
ರಾಗಾಂಕಿತಂಗಳಿಹ ಹರ್ಮ್ಯಗಳಲಿ
ಉಜ್ಜಯಿನಿಯೈಶ್ವರ್ಯ ಲಕ್ಷ್ಮಿಯನು ನೋಡುತ್ತೆ
ದಾರಿ ನಡೆದಾಯಸವ ನೀಗಲಿರುವೆ.

೧೫

ಭರ್ತೃವಿನ ಕಂಠದೊಲು ಛವಿಯಾಂತನಿವನೆಂದು
ನಿನ್ನ ನೋಡುತ ನಲಿಯೆ ಪ್ರಮಥಗಣವು
ಜಲಕೇಳಿಯೊಳು ಮೆರೆವ ಯುವತಿಯರ ವಿಹಾರದಿಂ
ಮಗಮಗಿಪ ಗಂಧವತಿಯುತ್ತಣಿಂದೆ

ನೈದಿಲೆಯ ನರುಗಂಪಿನೊಡಗೂಡಿ ಸುಳಿದು ಬಹ
ತಂಗಾಳಿಯಲಿ ತೊನೆವ ಉಪವನದೆಡೆ
ತೆರಳು ನೀಂ ತ್ರಿಭುವನಕೆ ಗುರುವಾದ ಚಂಡೀಶ
ನೆಲೆಸಿರುವ ಪುಣ್ಯಮಯಧಾಮದೆಡೆಗೆ.

೧೬

ನೀನಲ್ಲಿ ಮೆರೆಯುವ ಮಹಾಕಾಳಮಂದಿರವ
ಬೇರಾವ ವೇಳೆಯಲಿ ಸಾರಿರ್ದರುಂ
ನಯನದೇಶವಮೀರಿ ದೂರದ ದಿಗಂತದಲಿ
ಸೂರ್ಯ ಮುಳುಗುವವರೆಗೆ ಅಲ್ಲೆ ನೆಲಸಿ
ಲೋಕವಂದಿತನಾದ ಶೂಲಿಯಾರಾಧನೆಗೆ
ಮೊಳಗುಗಳ ದನಿಗೈದು ಪಟಹವಾಗು.
ಗಂಭೀರತರವಾದ ನಿನ್ನ ಗರ್ಜಿತಗಳಿಗೆ
ಮುಂದೆ ನೀಂ ಸಂಪೂರ್ಣಫಲವ ಪಡೆವೆ.

೧೭

ನೃತ್ಯಸೇವಾಭರದಿನಡಿಯನೆತ್ತಿಡುವಂದು
ಕಟಿಯ ಕಾಂಚೀದಾಮ ಝಣಝಣರೆನೆ
ರತ್ನವರ್ಣಚ್ಛವಿಯ ವಳಿಯ ಚಾಮರ ಮಿನುಗೆ
ಲೀಲೆಯಿಂ ಪಿಡಿದದನು ಬೀಸುವಂದು
ಕ್ಲಾಂತ ವೇಶ್ಯಾಜನದ ನಖಪದಕೆ ಸುಖವೀವ
ಮೊದಲಮಳೆವನಿಗಳನು ನೀನು ಸುರಿಯೆ
ಮಧುಕರ ಶ್ರೇಣಿವೊಲು ನಿಡಿದಾದಪಾಂಗಗಳ
ನಿನ್ನ ಕಡೆಗೆಸೆಯುವರು ಪ್ರೀತಿಯಿಂದೆ.

೧೮

ಆ ಬಳಿಕ ಶಿವನ ನಿಡುತೋಳುಗಳ ತರುವನವ
ಮಂಡಲಾಕಾರದಲಿ ಬಳಸಿ ನಿಂದು
ಅಭಿನವ ಜಪಾಕುಸುಮವೆಂತಂತೆ ಕೆಂಪಾಗಿ
ಬೈಗುವೆಳಗನು ತಳೆದು ಸುಭಗನಾಗಿ

ಉದ್ವೇಗ ಶಮನಗೊಳೆ ನಿಶ್ಚಲಾಕ್ಷಿಗಳಿಂದೆ
ಶಿವೆ ನಿನ್ನ ಭಕ್ತಿಯನ್ನೀಕ್ಷಿಸುತಿರೆ
ನಾಟ್ಯದಾರಂಭದಲಿ ಪಶುಪತಿಯ ಆರ್ದ್ರಗಜ-
ಚರ್ಮಾಭಿಲಾಷೆಯನು ನೀಗಲೆಳಸು.

೧೯

ನೋಟವನು ತಡೆಗೈದು ಕವಿದ ಕಗ್ಗತ್ತಲೆಯು
ರಾಯಬೀದಿಯೊಳಲ್ಲಿ ಉಜ್ಜಯಿನಿಯ
ಯೋಷಿತೆಯರಂದಮಿಗೆ ರಮಣವಸತಿಯ ಕುರಿತು
ಸಾನುರಾಗದಿ ತೆರಳಲನುವಾಗಿರೆ
ಕನಕ ನಿಕಷದ ತೆರದಿ ಹೊಳೆವ ಸೌದಾಮಿನಿಯ
ಬೆಳಕಿನಿಂ ನೀನವರ ದಾರಿ ತೋರು.
ಮೊದಲೆ ಭಯಚಕಿತರಹ ಯೋಷಿತೆಯರವರ ನೀಂ
ಮಳೆಗರೆದು ಮೊಳಗಿರಿದು ಬೆದರಿಸದಿರು.

೨೦

ಚಿರವಿಲಸನೋದ್ವೇಗಭರದಿಂದ ಕಡುಬಳಲಿ
ಖೇದಗೊಳೆ ನಿನ್ನ ಸತಿ ಸೌದಾಮಿನಿ,
ಸುಪ್ತಪಾರಾವತಗಳಿರುವ ಸೌಧಾಗ್ರದಲಿ
ನೀನುಮಾಯಾಸವನು ನೀಗಲೆಂದು
ಇರುಳು ನೂಕಲು ತಂಗಿ ನೇಸರುದಯಿಸುವಂದು
ಉಳಿದ ದಾರಿಯ ಕುರಿತು ತೆರಳು ಮುಂದೆ.
ಕೈಕೊಂಡ ಸಖರರ್ಥ ಕೃತ್ಯಗಳನೆಸಗಲಿರೆ
ಸಾವಕಾಶಂಗೈವುದುಚಿತಮಲ್ತು.

ಎಸ್. ವಿ. ಪರಮೇಶ್ವರಭಟ್ಟ.

# ಸಂಬಳದ ದಿನ

ರಾಮು ತನ್ನ ಪಕ್ಕದಲ್ಲಿದ್ದವನನ್ನು ನೋಡಿದ. ಸುಕ್ಕುಗಟ್ಟಿರುವ ಕೆನ್ನೆಗಳು; ಎರಡಂಗುಲ ಉದ್ದದ ಗಡ್ಡ; ಬೆಳಕಳಿದ ಕಣ್ಣುಗಳು.— ಅವನನ್ನು ನೋಡುವುದಕ್ಕೇ ಅಸಹ್ಯವಾಗುತ್ತಿತ್ತು. ಇಂಥವನು ಹೆಡ್ ಕ್ಲಾರ್ಕು! ಅವನ ರುಮಾಲೋ, ಅವನ ಕೋಟೋ! ರಾಮು ಲೇಖಣಿಯನ್ನು ಕೆಳಗಿಟ್ಟು ಎಣಿಕೆ ಹಾಕತೊಡಗಿದ . . . "ಇವನು ಬಹುಶಃ ಸಂಸಾರದಲ್ಲಿ ನೊಂದವನಾಗಿರಬೇಕು, ಬಹು ಮಕ್ಕಳೊಂದಿಗನಾಗಿರಬೇಕು, ಅಲ್ಲದೆ ಸ್ವಂತ ವೆಚ್ಚಕ್ಕೆ ಅಷ್ಟು ಗಮನಕೊಡಲಾರದವನಾಗಿರಬೇಕು. . . . ಅವನ ಕೋಟು ನೋಡಿದರೆಯೆ ಹೇಳಬಹುದು. ಬೆವರು ಹೀರಿ ಹೀರಿ ಕೀಗಟ ಕಟ್ಟಿ ಒಂದು ಬಣ್ಣಕ್ಕೆ ತಿರುಗಿರುವ ಕೋಟು; ದರ್ಜಿಯ ಕೈದಾಟಿ ಬಹುಕಾಲವಾಗಿ, ಕೈಹೊಲಿಗೆಯನ್ನು ಪದೇ ಪದೇ ಹೊಂದಿ ಕುಬ್ಜವಾಗಿರುವುದು; ಮೊಳಕೈ ಮುಂತಾದೆಡೆ ಜೀರ್ಣವಾಗಿದೆ. . . ."

"ಹೊರಡೋಣವೆ, ರಾಮರಾವ್?"

ರಾಮೂ ಯೋಚನೆ ಅಷ್ಟಕ್ಕೇ ನಿಂತು ಅದೇ ದಿನ ವರ್ಗವಾಗಿ ಬಂದ ಹೆಡ್ ಕ್ಲಾರ್ಕಿನ ಸಂಗಡ ಹೊರಟುಹೋಗುತ್ತ ಇನ್ನೊಂದು ಸಲ ಅವನನ್ನು ನೋಡಿ "ಇವನ ಹೆಂಡತಿ ತಾಟಕಿಯಾಗಿರಬೇಕು; ಇಲ್ಲವೆ, ರೋಗಿಷ್ಠೆಯಾಗಿರಬೇಕು!" ಎಂದುಕೊಂಡ. ಮನುಷ್ಯರ ಮುಖನೋಡಿಯೇ ಅವರ ಸ್ಥಿತಿಗತಿಗಳನ್ನು ಊಹಿಸಿಕೊಳ್ಳುವ ಶಕ್ತಿ ತನಗುಂಟೆಂದು ರಾಮು ಹೆಮ್ಮೆ.

ಇಬ್ಬರೂ ಹೊರಟರು.

"ಇಲ್ಲೇ ಜವಳಿ ಅಂಗಡಿಗೆ ಹೋಗಿ ಬರೋಣ, ಬನ್ನಿ" ಎಂದು ರಾಮು ಶೆಟ್ಟರ ಅಂಗಡಿಗೆ ನುಗ್ಗಿದ. ಕೆಲವು ತಿಂಗಳ ಕೆಳಗೆ ಸರಸುಗೆ ಕೊಂಡುಕೊಟ್ಟ ಸೀರೆಯ ಕೊನೆಯ ಕಂತು ಕೊಡಬೇಕಾಗಿತ್ತು. ಕೊಟ್ಟ. ಸರಸೂ ಮನಸ್ತೃಪ್ತಿಗಾಗಿ ಆ ಸೀರೆ ಕೊಂಡದ್ದಾಗಿತ್ತು. ತಿಂಗಳು ತಿಂಗಳೂ ಬಹು ಕಷ್ಟಪಟ್ಟು ಐದು ರೂಪಾಯಿ ಕೊಡುತ್ತಿದ್ದ. ಅದಕ್ಕೆ ಪ್ರತಿಫಲ ಮನೆಯಲ್ಲಿ ಒಲುಮೆಯ ಉಪಚಾರ.

ಹೆಡ್ ಕ್ಲಾರ್ಕನ್ನು ಕಳುಹಿಸಿ ಮನೆಯ ಕಡೆ ಹೊರಟ. ಈ ಸಾರಿ ಇನ್ನೊಂದು ಸೀರೆ ತರಬೇಕೆಂದು ಸರಸು ಹೇಳಿದ್ದಳು. ಒಂದು ಸೀರೆ ಏನು ಭಾಗ್ಯ? ಇದ್ದರೂ ಒಂದೆ, ಇಲ್ಲದಿದ್ದರೂ ಒಂದೆ. ಎಲ್ಲಿಗೆ ಹೋಗಬೇಕಾದರೂ ಅದನ್ನೇ ಉಡಬೇಕು. ಅದೊಂದೇ ಒಳ್ಳೆಯ ಸೀರೆ. ಪದೇ ಪದೇ ಅದನ್ನೇ ಉಟ್ಟರೆ ಎಲ್ಲರೂ ನಗುತ್ತಾರೆ.

"ಒಂದು ಕಣ್ಣು ಕಣ್ಣಲ್ಲ, ಒಂದು ಸೀರೆ ಸೀರೆಯಲ್ಲ" ಎಂದು ಮುಂತಾಗಿ ಗಾದೆ ಬೇರೆ ಹೇಳಿದ್ದಳು.

ರಾಮು ಮನೆಸೇರಿ ಕೋಟುಬಿಚ್ಚಿ ತೂಗುಹಾಕಿದ. ಕೈಕಾಲು ತೊಳೆದು ಚಾಪೆಯ ಮೇಲೆ ಕುಳಿತುದಾಯಿತು. ತಿಂಡಿಯೂ ಮೊದಲಾಯಿತು.

"ಸಂಬಳ ಆಯಿತೆ?" ಎಂದಳು, ಸರಸು.

"ಹುಂ" ಎಂದ.

"ಜವಳಿ ಅಂಗಡೀದು ತೀರಿತಲ್ಲವೆ?"

"ಹುಂ"

ಸರಸಿ ಸುಮ್ಮನಿದ್ದಳು. ಮುಖದ ಮೇಲೆ ಸಂತೋಷ ನಲಿದಾಡುತ್ತಿತ್ತು.

"ಅಂತೂ ತೀರಿತು" ಅಂದಳು.

"ಅಂತೂ ತೀರಿತು!"

"ಹೇಗೆ ತೀರತ್ತೋ ಅಂತ ಮಾಡಿದ್ದೆ!" ಎಂದಳು.

"ಹೌದು, ನಾನೂ ಹಾಗೇ ಮಾಡಿದ್ದೆ!"

"ನಾನು ಆವಾಗ ಹೇಳಿದರೆ ನೀವೇನೇನೊ ಹೇಳಿದಿರಿ!"

"ಏನೇನು ಹೇಳಿದೆ, ಸರಸು?"

"ಸಾಲಮಾಡಬೇಡ, ಹಾಗೆ, ಹೀಗೇಂತ! ಹೇಗೆ ತೀರಿಸೋದೊ ಏನೊ, ಎಂತ! . . . . ಎಲ್ಲಾರೂ ಬಟ್ಟೆ ತೊಗೊಳ್ಳೋದೇ ಇಲ್ಲವೆ? . . . ನಾನು ಆಗ ಹಟ ಮಾಡಿದ್ದಕ್ಕೆ ಒಂದು ಸೀರೆ ಆದರೂ ಆಯ್ತು; ಇಲ್ಲದಿದ್ದರೆ ನಮ್ಮ ತಾಪತ್ರಯದಲ್ಲಿ ಅದೂ ಆಗ್ತಾ ಇರಲಿಲ್ಲ."

"ಹೌದು, ಹೌದು!"

ಸರಸು ಪ್ರಸನ್ನಳಾಗಿದ್ದಳು. ಅವನ ಷರ್ಟಿನ ಗುಂಡಿಗಳನ್ನು ಬಿಚ್ಚುತ್ತಾ, ಮತ್ತೆ ಹಾಕುತ್ತಾ, ಮಧ್ಯೆ ಮಧ್ಯೆ ನಗುತ್ತಾ ನಲಿದಾಡುತ್ತಿದ್ದಳು. ತಿಂಡಿ ಆಯಿತು; ಕಾಫೀ ಆಯಿತು. ಅದು ಇದು ಚಿಲ್ಲರೆ ಸವಿಮಾತುಗಳು ಬೇಗ ಆಗಿ ಮುಗಿದುವು. ಕಡೆಗೆ,

"ಹಾಗಾದರೆ ಅದನ್ನೇನು ಮಾಡಿದಿರಿ?" ಎಂದಳು.

"ಯಾವುದನ್ನ?"

"ಇನ್ನೊಂದು ಸೀರೇನ, ಆ ಸ್ಕೈಕಲರ್‌ದು!"

"ಯೋಚಿಸುತ್ತಾ ಇದ್ದೇನೆ, ಸರಸು!"

"ಯೋಚಿಸೋದೇನು ಬಂತು? ಅದು ತೀರದ ಹಾಗೇ ಇದೂ ತೀರುತ್ತೆ!"

"ಹಾಗಲ್ಲ, ನಾನೂ ಸ್ವಲ್ಪ ಬಟ್ಟೆ ಕೊಂಡುಕೊಬೇಕಾಗಿದೆ, ಸರಸಾ!"

"ನೀವು ಕೊಳ್ಳೋದು ಇದ್ದೇ ಇದೆ! ಟ್ರಂಕಿನ ತುಂಬಾ ಬೇಕಾದಷ್ಟಿದೆಯಲ್ಲ ನಿಮಗೆ!"

“ ಅಲ್ಲ. . . . ”

“ ನನಗೊತ್ತು ಬಿಡಿ ನಿಮ್ಮ ವಿದ್ಯಾ . . . ನಾನು ಎಂದರೆ ನಿಮಗೆ ಹಾಗೆ ಹಾಗೇ . . . ”

“ ರಾಮು ಸುಮ್ಮನಾದ. ಹಾಳು ಸಂಬಳದ ದಿನ ಏತಕ್ಕೆ ಬರುತ್ತೋ, ಎಂದುಕೊಂಡ.

ಆ ದಿನ ಮನೆಯಲ್ಲಿ ಮೋಡ ಕವಿದುಕೊಂಡಿತ್ತು. ತುಟಿ ಪಿಟಕ್ಕೆನಲಿಲ್ಲ ಸರಸು.

“ ಸಾರು ಏಕೆ ಹೀಗಿದೆ ? ” ಎಂದ.

“ ಇನ್ನು ಹೇಗಿರಬೇಕು ? ”

ರಾಮು ಸುಮ್ಮನಾದ.

ಬೆಳಿಗ್ಗೆ ಎದ್ದಾಗ ಸರಸಿಯ ಮುಖ ರುಮ್ಮೆನ್ನುತ್ತಿತ್ತು. ಮತ್ತೆ ಬಿಸಿ ಬಿಸಿ ಮಾತುಕತೆ. ಟೈಮಿಗೆ ಸರಿಯಾಗಿ ಊಟ ಸಿದ್ಧವಾಗಲಿಲ್ಲ. ಉಪವಾಸ ಹೊರಟ ಆಫೀಸಿಗೆ.

ಸಾಯಂಕಾಲ ಆಫೀಸಿನಿಂದ ಹೊರಟವನು ಸಿದ್ಧಾಂತಮಾಡಿಕೊಂಡಿದ್ದ: ಜವಳಿಯ ಅಂಗಡಿಗೆ ಹೊರಟು ಬೇಕಾದ ನಾಲ್ಕೈದನ್ನು ಆರಿಸಿಕೊಂಡ ; ಒಂದನ್ನು ಚುನಾಯಿಸಿ ಉಳಿದುದನ್ನು ಹಿಂದಕ್ಕೆ ಕಳುಹಿಸುತ್ತೇನೆಂದು ಹೇಳಿ ಲೆಕ್ಕಬರೆದು ಮನೆಗೆ ಹೊರಟ.

ಸೀರೆಯ ಗಂಟನ್ನು ಕಂಡ ಕೂಡಲೆ ಸರಸಿಯ ಮುಖ ಗೆರಸಿಯುಗಲವಾಯಿತು.

“ ಇದೇ ಇರಲೀಂದ್ರೆ ! ” ಎಂದು ಒಂದನ್ನಾರಿಸಿದಳು.

“ ಹುಂ ” ಎಂದ ರಾಮು.

ಉಳಿದುವನ್ನು ಅಂಗಡಿಯ ಆಳಿನ ಸಂಗಡ ಕೊಟ್ಟು ಕಳುಹಿಸಿ ಕೋಟನ್ನು ಬಿಚ್ಚಿ ತೂಗುಹಾಕಿದ. ಹಾಗೆಯೇ ಜಗುಲಿಯ ಮೇಲೆ ಬಂದುನಿಂತು ಗಾಳಿ ಹಾಕಿಕೊಳ್ಳುತ್ತಾ ಕುಳಿತ. ಹಸಿವು ಜೋರೆ. ಒಳಗಿಂದ ಏನಾದರೂ ಕರೆ ಬರುತ್ತದೇನೋ ಎಂದು ಕಾದ. ಒಳಗೆ ನೋಡಲು ಕೋಟು ತೂಗುತ್ತಾ ಇರುವುದು ಕಂಡುಬಂದಿತು. ಹತ್ತಿರ ಹೋಗಿ ನೋಡಲು ಬಲತೋಳಿನ ಮೊಳಕೈಬಳಿ ಜೀರ್ಣವಾಗಿದೆ. ಬೆನ್ನಬಳಿ ಹೊಲಿಗೆ ಬಿಟ್ಟುಹೋಗಿದೆ! ಹಿಂದಿನ ದಿನ ಹೆಡ್ ಕ್ಲಾರ್ಕನ್ನು ನೋಡಿ ಊಹಿಸಿದ್ದುದು ಜ್ಞಾಪಕಕ್ಕೆ ಬಂತು —

“ ಅವನ ಹೆಂಡತಿ ತಾಟಕಿಯಾಗಿರಬೇಕು, ಇಲ್ಲವೇ ರೋಗಿಷ್ಠೆಯಾಗಿರಬೇಕು, ಅಂಥವರನ್ನು ಕೈಹಿಡಿದ ಗಂಡಂದಿರ ಗತಿಯೇ ಹೀಗೆ ! . . . . ”

ರಾಮು ನಕ್ಕ !

ಶೇ. ಷು.

# ಬೋರೆಗೌಡ ಮತ್ತು ನೋಟುಗಳು

ಜೀವನ ನಡಸುವುದು ಬರುಬರುತ್ತ ಕಷ್ಟವಾಗುತ್ತಿದೆ. ಹಣದ ಕೊರತೆಯಿಲ್ಲದ ಈ ಕಾಲದಲ್ಲಿ ಹೀಗೂ ಉಂಟೆ ಎಂಬ ಕೇಳಿಕೆ ಸಹಜ. ಪ್ರಶ್ನೆಗಿಂತ ಉತ್ತರ ತೊಡಕಾದದ್ದು. ಈ ಒಗಟನ್ನು ಬಿಡಿಸದಿದ್ದರೆ ಚಿಂತೆಯಿಲ್ಲ, ಅದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡೋಣ ಎಂಬ ಆಸೆ ಈ ಬರಹಕ್ಕೆ ನೆಪ.

ಹೆಚ್ಚಿದ ಹಣದ ಹಾವಳಿಯನ್ನು ಸಗಟುಧಾರಣೆವಾಸಿಯ ಸೂಚೀ ಸಂಖ್ಯೆಗಳು ಕಣ್ಣಮುಂದೆ ಹಿಡಿಯುತ್ತವೆ.

(1939 ನೆಯ ಆಗಸ್ಟ್ 19 ಕ್ಕೆ ಮುಗಿದ ವಾರದಲ್ಲಿದ್ದ ಬೆಲೆ = 100)

| | ಫೆಬ್ರುವರಿ '43 | ಜನವರಿ '43 | ಫೆಬ್ರುವರಿ '42 |
|---|---|---|---|
| ಆಹಾರ ಮತ್ತು ಹೊಗೆಸೊಪ್ಪು | 207.0 | 190.8 | 132.3 |
| ಇತರ ವ್ಯವಸಾಯ ವಸ್ತುಗಳು | 193.8 | 183.3 | 125.3 |
| ಮೂಲಸಾಮಗ್ರಿಗಳು | 172.0 | 171.5 | 158.0 |
| ಸಿದ್ಧವಾದ ಸಾಮಾನುಗಳು | 225.5 | 224.1 | 162.3 |
| ಪ್ರಧಾನ ವಸ್ತುಗಳು | 190.5 | 182.0 | 140.6 |
| ಎಲ್ಲಾ ಸಾಮಾನುಗಳು | 197.6 | 190.4 | 145.0 |
| ಮುಖ್ಯ ರಫ್ತುಗಳು | 187.6 | 177.2 | 142.4 |

ಒಟ್ಟಿನಲ್ಲಿ ಈ ಸೂಚೀ ಸಂಖ್ಯೆ 1939 ನೆಯ ಆಗಸ್ಟಿನಲ್ಲಿ 100 ಆಗಿದ್ದದ್ದು 1943 ನೆಯ ಮಾರ್ಚಿನಲ್ಲಿ 220.1 ಕ್ಕೆ ಏರಿದೆ. ಚಲಾವಣೆಯ ನೋಟು ಹಣ ಎಷ್ಟು ಹೆಚ್ಚಿದ್ದೀತು? ಇಲ್ಲಿ ಅದರ ಅಂಕಿಗಳಿವೆ:

(ಕೋಟಿ ರೂಪಾಯಿಗಳಲ್ಲಿ)

| | ಒಟ್ಟು ನೋಟುಗಳು | ಬಳಕೆಯಲ್ಲಿರುವ ನೋಟುಗಳು | ಪೌಂಡು[1] ಹಣಪತ್ರಗಳು |
|---|---|---|---|
| ಆಗಸ್ಟ್ '39 | 216.78 | 178.89 | 59.50 |
| ಸರಾಸರಿ '39—'40 | 227.75 | 208.86 | 78.32 |

[1] ಪೌಂಡು ಸ್ಟರ್ಲಿಂಗ್ ಇಂಗ್ಲಂಡಿನಲ್ಲಿ ಚಲಾವಣೆಯಲ್ಲಿರುವ ಹಣದ ಹೆಸರು. ರೂಪಾಯೆಂದರೆ ಹೇಗೆ ಒಂದು ಬೆಲೆಯ ಅಳತೆಯೋ ಹಾಗೇ ಅದೂ. ರೂಪಾಯೆಂದರೆ ನೋಟಾಗಬಹುದು; ಬೆಳ್ಳಿಯ

| | ಒಟ್ಟು ನೋಟುಗಳು | ಬಳಕೆಯಲ್ಲಿರುವ ನೋಟುಗಳು | ಪೌಂಡು ಹಣಪತ್ರಗಳು |
|---|---|---|---|
| ಸರಾಸರಿ '40—'41 | 258.77 | 241.62 | 126.97 |
| ,, '41—'42 | 320.63 | 308.46 | 165.44 |
| ಮಾರ್ಚ್ 26, '43 | 655.11 | 643.58 | 421.71 |
| ಜುಲೈ 9, '43 | 748.26 | 737.62 | 570.79 |
| ಹೆಚ್ಚಿದ್ದು | 531.48 | 558.73 | 511.29 |

ಇದರ ಅರ್ಥ ಇಷ್ಟೇ: ಲಂಡನಿನಲ್ಲಿ ಕೊಂಡ ಸ್ಟರ್ಲಿಂಗ್ ಪತ್ರಗಳು ಹೆಚ್ಚಿದಂತೆಲ್ಲ ನಮ್ಮ ದೇಶದ ಮುಖ್ಯ ಬ್ಯಾಂಕಾದ ರಿಸರ್ವ್ ಬ್ಯಾಂಕ್ ಹೆಚ್ಚು ಹೆಚ್ಚಾಗಿ ನೋಟುಗಳನ್ನು ಅಚ್ಚುಹಾಕಿ ಚಲಾವಣೆಗೆ ಕಳುಹಿಸುತ್ತಿದೆ. ಸ್ಟರ್ಲಿಂಗಿನ ಬಲವಿಲ್ಲದ ನೋಟುಗಳಿಗೆ ರೂಪಾಯಿ ಠೇವಣಿಯೇ ಬಲವಾಗುವುದು. ರೂಪಾಯಿ ಠೇವಣಿ ಇಂಡಿಯಾ ಸರ್ಕಾರದ ಆಧಾರಪತ್ರ ಅಥವಾ ಖಜಾನೆಹುಂಡಿ ಈ ರೂಪದಲ್ಲಿರುತ್ತದೆ.

ಅಲ್ಲದೆ ಬ್ಯಾಂಕುಗಳ ಚಾಲ್ತಿ ಅಥವಾ ಕಿರುವಾಯಿದೆ (ಕೇಳಿದಾಗ ಹಿಂದಕ್ಕೆ ಕೊಡಬೇಕಾದ) ಡಿಪಾಸಿಟ್‌ಗಳು ರೂ. ೧೪೦ ಕೋಟಿಯಿಂದ ರೂ. ೩೭೨ ಕೋಟಿಗೆ ಏರಿವೆ. ಆದರೆ ಫಿಕ್ಸೆಡ್ ಡಿಪಾಸಿಟ್‌ಗಳಲ್ಲಿ ಹೇಳಿಕೊಳ್ಳುವಂತಹ ಯಾವ ಬದಲಾವಣೆಯೂ ಆಗಿಲ್ಲ. ದಾಳಿಯಲ್ಲಿ ದುಡ್ಡುಮಾಡುತ್ತಿರುವವರು ತಮ್ಮ ಹಣವನ್ನು ವ್ಯಾಪಾರಕ್ಕಾಗಲಿ ಆಸ್ತಿ ಠೇವಣಿಗಳನ್ನು ಕೊಳ್ಳುವುದಕ್ಕಾಗಲಿ ಕೈಗಾರಿಕೆಗಾಗಲಿ ಉಪಯೋಗಿಸದೆ ಚಾಲ್ತಿ ಡಿಪಾಸಿಟ್ಟಾಗಿಯೇ ಇಟ್ಟಿದ್ದಾರೆ. ಬ್ಯಾಂಕುಗಳಲ್ಲಿ ಒಟ್ಟು ಸಾಲದ ಸೇಕಡ ೧೦ ಭಾಗವಿರುತ್ತಿದ್ದ ಸಗದು ಈಗ ಸೇಕಡ ೧೪ಕ್ಕೇರಿದೆ—ರೂ. ೨೪ ಕೋಟಿಯಿಂದ ರೂ. ೬೬ ಕೋಟಿಗೆ.

ಅಂತೂ ಧಾರಣೆವಾಸಿಗಳು ಬಿರುಗಾಳಿಗೆ ಸಿಕ್ಕಿದಂತೆ ಹಾರಾಡುತ್ತಿವೆ. ಈ ಸ್ಥಿತಿಗೆ ಕಾರಣಗಳು ಹಲವು :—

ಸಾಮಾನುಗಳು ಹೆಚ್ಚುಹೆಚ್ಚಾಗಿ ತಯಾರಾಗುತ್ತಿದ್ದರೂ ಅಪರೂಪವಾಗುತ್ತಿವೆ. ಪದಾರ್ಥದ ಪೇಟೆ ಕೊರೆಬೀಳದ ಗಣಿಯಲ್ಲ. ವ್ಯವಸಾಯ ಮತ್ತು ಕೈಗಾರಿಕೆಗಳು ನೋಟು ಅಚ್ಚುಹಾಕುವ ಯಂತ್ರದಷ್ಟು ಬೇಗ ಕೆಲಸಮಾಡಲಾರವು. ಸೈನ್ಯದ ಉಪಯೋಗಕ್ಕಾಗಿ ಸರ್ಕಾರವೇ ಎಷ್ಟೋ ಸಾಮಾನುಗಳನ್ನು ಕೊಂಡಿಡುತ್ತಿದೆ.

---

ನಾಣ್ಯವಾಗಬಹುದು. ಹಾಗೆಯೇ ಪೌಂಡು. ಪೌಂಡು ನೋಟಾಗಬಹುದು ಅಥವಾ ಸವರನ್ ರೂಪದಲ್ಲಿರಬಹುದು. ಪೌಂಡ್ ಪತ್ರಗಳೆಂದರೆ ಆ ಲೆಕ್ಕದಲ್ಲಿ ಮಾರಾಟಕ್ಕಿರುವ (ಸಾಲದ) ಹಣದ ಪತ್ರಗಳು. ಆ ಮಟ್ಟಿಗೆ ಈ ಪತ್ರಗಳನ್ನು ಕೊಂಡವರಿಗೆ ಬ್ರಿಟಿಷರು ಸಾಲಗಾರರಾಗುವರು.

ಬ್ರಿಟಿಷ್ ಸರ್ಕಾರದ ಪರವಾಗಿ ದೇಶದಲ್ಲಿ ಸರ್ಕಾರವು ರೂಪಾಯಿಕೊಟ್ಟು ಅನೇಕ ಸಾಮಾನುಗಳನ್ನು ಕೊಂಡುಕೊಳ್ಳುವುದು. ಇದಕ್ಕೆ ಬದಲಾಗಿ ಬ್ರಿಟಿಷ್ ಸರ್ಕಾರದ ಸ್ಟರ್ಲಿಂಗ್ ಆಧಾರಪತ್ರಗಳು ಇಲ್ಲಿನ ಸರ್ಕಾರದ ಕೈಸೇರುತ್ತವೆ. ಈ ಸ್ಟರ್ಲಿಂಗ್ ಪತ್ರಗಳ ಆಧಾರದ ಮೇಲೆ ನೋಟುಗಳನ್ನು ಅಚ್ಚು ಹಾಕುವ ಹಕ್ಕು ರಿಸರ್ವ್ ಬ್ಯಾಂಕಿಗಿದೆ. ಅಲ್ಲದೆ ಇದೇ ಕಾಲದಲ್ಲಿ ದೇಶದ ಆಮದಿಗಿಂತ ರಫ್ತು ಹೆಚ್ಚಿದೆ. 1939 ನೆಯ ಸೆಪ್ಟೆಂಬರಿನಿಂದ 1943 ನೆಯ ಮಾರ್ಚ್‌ವರೆಗೆ ದೇಶದ ಹೊರಕ್ಕೆ ಸಾಮಾನು ಕಳಿಸಿರುವವರಿಗಾಗಿ ಈ ಬಗ್ಗೆ ರಿಸರ್ವ್ ಬ್ಯಾಂಕ್ ರೂ. 382 ಕೋಟಿ ಬೆಲೆಯ ಸ್ಟರ್ಲಿಂಗನ್ನು ಸಂಗ್ರಹಿಸಿಕೊಂಡಿತು. ಈ ಎರಡು ಕಾರಣಗಳಿಂದ ಭರತಖಂಡದ ಲೆಕ್ಕಕ್ಕೆ ರೂ. 555 ಕೋಟಿ ಬೆಲೆಯ ಸ್ಟರ್ಲಿಂಗ್ ಲಂಡನಿನಲ್ಲಿ ಕೂಡಿದೆ. ಸರ್ಕಾರದ ವಿನಿಮಯ ದರದ ಪ್ರಕಾರ ಇದರ ಬೆಲೆ 740 ಕೋಟಿ ರೂಪಾಯಿಗಳು (ಪೌಂ. 1 = ರೂ. 13-5-4).

ಈ ಸ್ಟರ್ಲಿಂಗನ್ನು ಉಪಯೋಗಿಸಿ ರಿಸರ್ವ್ ಬ್ಯಾಂಕು ಇಂಡಿಯಾ ದೇಶದ ಸ್ಟರ್ಲಿಂಗ್ ಸಾಲಗಳನ್ನು ತೀರಿಸಿದೆ. ಸ್ಟರ್ಲಿಂಗ್ ಸಾಲ 1938-39ರಲ್ಲಿ ರೂ. 469ಕೋಟಿ ಇದ್ದದ್ದು. 1942-43 ರಲ್ಲಿ ರೂ. 93 ಕೋಟಿಗೆ ಇಳಿಯಿತು. ಈಗ ಪ್ರಾಯಶಃ ಏನೂ ಇರಲಾರದು. ಬ್ರಿಟಿಷರಿಗೆ ತೆರಬೇಕಾದ ಅದನ್ನು ತೀರಿಸಿಯಾದಮೇಲೂ ಈ ಸಾಲ ರೂಪಾಯಿ ಸಾಲದ ರೂಪದಲ್ಲಿ ಅವತರಿಸುತ್ತದೆ:[1] ಆಗಾಗ ಸರ್ಕಾರವು ರಿಸರ್ವ್ ಬ್ಯಾಂಕಿಗೆ ಸ್ಟರ್ಲಿಂಗ್ ಠೇವಣಿಗಳನ್ನು ಕೊಡುತ್ತದೆ. ಈ ರೂಪಾಯಿ ಮತ್ತು ಸ್ಟರ್ಲಿಂಗ್ ಠೇವಣಿಗಳ ಆಧಾರದ ಮೇಲೆ ರಿಸರ್ವ್ ಬ್ಯಾಂಕು ನೋಟುಗಳನ್ನು ಅಚ್ಚು ಮಾಡಿ ಪ್ರಚಾರಕ್ಕೆ ತರುತ್ತದೆ. ಹೊಸ ನೋಟಿನ ಮೊದಲ ಉಪಯೋಗ ಸರ್ಕಾರಕ್ಕೆ ಸೇರಿದ್ದರಿಂದ ಪೇಟೆಯಲ್ಲಿ ಸರ್ಕಾರವು ತನ್ನ ಮತ್ತು ಬ್ರಿಟಿಷ್ ಸರ್ಕಾರದ ಪರವಾಗಿ ಹೆಚ್ಚು ಹೆಚ್ಚಾಗಿ ಸಾಮಾನು ಕೊಳ್ಳಲು ಸಾಧ್ಯವಾಗುವುದು. ಹೀಗೆ ನಡೆದಿದೆ ಸ್ಟರ್ಲಿಂಗ್-ರೂಪಾಯಿ ನೋಟುಗಳ ಪ್ರದಕ್ಷಿಣೆ. ಎಂದರೆ ಬ್ರಿಟಿಷರಿಗೆ ಇಂಡಿಯಾದ ಸಾಮಾನು ಬೇಕು. ಕೆಲಸ ಬೇಕು. ಅದಕ್ಕಾಗಿ ತಮ್ಮ ಹಣ ಕೊಡುತ್ತಾರೆ. ಅದನ್ನು ಆಧಾರವಾಗಿಟ್ಟುಕೊಂಡು ಇಂಡಿಯಾ ಸರ್ಕಾರ ಅದಕ್ಕೆ ತಕ್ಕಷ್ಟು ಹೊಸ ರೂಪಾಯಿಗಳನ್ನು ಚಲಾವಣೆಗೆ ತರುತ್ತದೆ. ಆ ಹಣ ನಮ್ಮ ವರ್ತಕರ ಕೈ ಸೇರಿ ದೇಶದ ಒಳಗೆ ಸಂಚರಿಸುವ ಹಣದ ಮೊತ್ತವನ್ನು ಹೆಚ್ಚು ಮಾಡುತ್ತದೆ.

ಯುದ್ಧ ಮುನ್ನಡೆದ ಹಾಗೆಲ್ಲ ಸರ್ಕಾರದ ಆದಾಯಕ್ಕಿಂತ ವೆಚ್ಚ ಏರುತ್ತದೆ. ಈ ಅರೆಯನ್ನು ತುಂಬಲು ಸರ್ಕಾರ ಜನರಿಂದಲೂ ಹಣದ ಪೇಟೆಯಿಂದಲೂ ಆಗಾಗ

[1] ಎಂದರೆ, ಸ್ಟರ್ಲಿಂಗ್ ಸಾಲ ತೀರಿದ ಕೂಡಲೆ ಅಷ್ಟು ನೋಟು ಇಲ್ಲಿ ಕಡಮೆಯಾಗುವುದಿಲ್ಲ. ಅದಕ್ಕೆ ಪ್ರತಿಯಾಗಿ ರೂಪಾಯಿ ಲೆಕ್ಕದ ಸಾಲ ಹುಟ್ಟಿಕೊಳ್ಳುತ್ತದೆ.

ಹಣವನ್ನು ಕಿರುವಾಯಿದೆ ಸಾಲ ತೆಗೆದುಕೊಳ್ಳುತ್ತದೆ. ತಕ್ಷಣಕ್ಕೆ ಆ ಮೊಬಲಗಿನಷ್ಟು ಹಣವನ್ನು ಸರಕಾರ ವೆಚ್ಚಮಾಡುವುದರಿಂದ ಚಲಾವಣೆಯ ಮೊತ್ತ ಹೆಚ್ಚುತ್ತದೆ. ಹೀಗೆ ಹೆಚ್ಚಿದ ಹಣದ ಹಾವಳಿ ಕೆಲಕಾಲ ಮುಚ್ಚಿಕೊಂಡು ಬಂದರೂ ಸ್ಟರ್ಲಿಂಗ್ ಠೇವಣಿಗಳ ಆಧಾರದಮೇಲೆ ಹೊರಟ ನೋಟುಗಳ ಪರಂಪರೆ ವಿಪರೀತವಾದ್ದರಿಂದ ಇದು ಹೆಚ್ಚು ದಿವಸ ನಡೆಯಲಿಲ್ಲ. ಅದರ ಫಲವಾಗಿ ಈಗ ಯಾವ ಸಾಮಾನೂ ಜನಸಾಮಾನ್ಯದ ಕೈಗೆ ಸಿಗದಂತಾಗಿದೆ.[1]

ಈ ದೇಶದ ಸ್ಟರ್ಲಿಂಗ್ ಸಾಲವೇನೊ ಕಡಮೆಯಾಯಿತು ; ಆದರೆ ಸ್ಟರ್ಲಿಂಗ್ ಠೇವಣಿಗಳ ಕಂತೆ ಹೆಚ್ಚುತ್ತಿದೆ.

(ಕೋಟಿ ರೂಪಾಯಿಗಳಲ್ಲಿ)

| | ಕಮ್ಮಿಯಾದ ಸ್ಟರ್ಲಿಂಗ್ ಸಾಲ | ಹೆಚ್ಚಾದ ಸ್ಟರ್ಲಿಂಗ್ ಠೇವಣಿ |
|---|---|---|
| 1939-40 | 26.61 | 18.82 |
| 1940-41 | 97.56 | 51.65 |
| 1941-42 | 164.93 | 35.47 |
| 1942-43 (ನಿರೀಕ್ಷೆ) | 117.33 | 256.27 |

ಈ ಕಂತೆಗೆ ತಕ್ಕ ಜೊಂತೆ ಕೊನೆಮೊದಲಿಲ್ಲದ ನೋಟ್ ನಿರ್ಮಾಣ. ಹೆಚ್ಚು ನೋಟು ಕೈಗೆ ಬಂದರೆ ಅಷ್ಟು ಹೆಚ್ಚು ಪದಾರ್ಥ ಸಿಕ್ಕಿದಂತಾಯಿತೇನು? ಪದಾರ್ಥಗಳ ಬೆಲೆ ಹೆಚ್ಚುತ್ತದೆ. ನೋಟ್ ಹೆಚ್ಚಿದ ಹಾಗೆಲ್ಲ ಧಾರಣೆವಾಸಿಗಳ ಪರದಾಟ ಬಲವಾಗುತ್ತದೆ. ಇನ್ನೊಂದು ಕಡೆ ಜನಗಳಿಗೆ ನೋಟಿನಲ್ಲಿ ನಂಬಿಕೆ ಇಳಿದು ಅವರಲ್ಲಿ ಸಾಮಾನುಗಳನ್ನು ಕೂಡಿಹಾಕುವ ಬುದ್ಧಿ ಹುಟ್ಟುತ್ತದೆ. ಅದನ್ನೂ ಕಾನೂನಂತೆ

---

[1] ಜನದ ಕೈಗೆ ಸಾಮಾನು ಸಿಕ್ಕದಿರುವುದು ಧಾರಣೆವಾಸಿ ಏರುವುದಕ್ಕೆ ಒಂದು ಕಾರಣ. ಸರಕಾರದವರು ಬೇಕಾದಷ್ಟು ಹೆಚ್ಚಿನ ಬೆಲೆ ಕೊಡುವುದಕ್ಕೆ ಸಿದ್ಧರಾಗಿ ಅದನ್ನು ಏರಿಸುತ್ತಿರುವುದು ಇನ್ನೊಂದು ಕಾರಣ. ಸರಕಾರದ ಈ ಕೆಲಸಗಳಿಂದ ಲಾಭ ಪ್ರತಿಫಲ ದೊರೆತವರೂ, ಹೆಚ್ಚಿನ ಸಂಬಳ ಪಡೆದ ಮಂದಿಯೂ, ಸೈನ್ಯಗಳವರೂ. ತಮ್ಮ ಕೈಯಲ್ಲಿ ಕುಣಿಯುವ ಪುಷ್ಕಲ ಹಣವನ್ನು ಎಷ್ಟು ಬೇಕೆಂದರಷ್ಟು ವೆಚ್ಚಮಾಡುತ್ತಿರುವುದು ಮತ್ತೊಂದು. ಈ ಸಂಬಂಧದಲ್ಲಿ ಸೈನ್ಯಕ್ಕೆ ಸಂಬಂಧಿಸದ ಸಾಮಾನ್ಯರ ಬಳಕೆಗೆ ಬೇಕಾಗುವ ಪದಾರ್ಥಗಳ ಮತ್ತು ಸೇವೆ ಸೌಕರ್ಯಗಳ ಧಾರಣೆ ಎದೆ ಒಡೆಯುವಷ್ಟು ಏರಿರುವುದನ್ನು ಹೆಚ್ಚಾಗಿ ಗಮನಿಸಬೇಕು. ಜನ ಇಂತಹ ಸಮಯಗಳಲ್ಲಿ ಕಂಗಾಲಾಗಿ ನಿಸ್ಸಹಾಯರಾಗುತ್ತಾರೆ. ಬ್ರಿಟಿಷರ ವೆಚ್ಚವೆಂದರೆ ಅಮೇರಿಕಾ ಸೈನ್ಯಗಳವರಿಗಾಗಿ ಮಾಡುವ ವೆಚ್ಚವೂ ಸೇರುತ್ತದೆ. ಅದಕ್ಕೂ ರೂಪಾಯಿ ಒದಗಿಸಬೇಕು. ಪದಾರ್ಥಗಳನ್ನು ಕೊಳ್ಳಬೇಕು. ಇವೆಲ್ಲದರ ಪರಿಣಾಮ ನಾಡಿನ ಸಮಾನ್ಯರಿಗೆ ದುಗುಣೀ ಕಷ್ಟ.

ಕೊಟ್ಟುಬಿಡಬೇಕಾಗಿ ಬಂದರೆ ಕೊನೆಗೆ ಬೋರೆಗೌಡನು ಹೊಟ್ಟೆಯ ಮೇಲೆ ಒದ್ದೆಬಟ್ಟೆ ಕೂಡ ಹಾಕಿಕೊಳ್ಳುವ ಹಾಗಿಲ್ಲ. ಸುಲಭವಾಗಿ ಬಟ್ಟೆಯೂ ಸಿಕ್ಕದು.

ಇದನ್ನು ಸರಿಮಾಡುವುದು ಹೇಗೆ ಎಂಬುದು ಮುಖ್ಯ. ಮೊದಲು ಹಣದ ಮೊತ್ತವನ್ನು ಕಡಮೆಮಾಡಬೇಕು. ಅಂದರೆ ಹಾಳುಭಾವಿಯನ್ನೋ ಬೆಂಕಿಕಡ್ಡಿಯನ್ನೋ ಹುಡುಕಬೇಕೆಂದಲ್ಲ. ಸರ್ಕಾರವು ಜನರಿಂದ ಸಾಧ್ಯವಾದ ಮಟ್ಟಿಗೆ ಸಯವಾಗಿ ನ್ಯಾಯವಾಗಿ ಹಣವನ್ನು ಹಿಂದಕ್ಕೆಳೆಯಬೇಕು.

(೧) ಜನರಿಂದ ಹಣವನ್ನು ಕಡವಾಗಿ ಪಡೆದು ಆ ಮೊತ್ತವನ್ನು ಕಡಮೆಮಾಡಬಹುದು. ಆ ಪ್ರಕಾರ ಸರ್ಕಾರ ಒಡ್ಡಿತೆರುವ ಸಾಲವನ್ನೇನೊ ಹೆಚ್ಚು ಮಾಡಿಕೊಂಡಿದೆ. 1943 ನೆಯ ಜೂನ್ ವರೆಗೆ ಈ ಸಾಲ ರೂ. 1,206 ಕೋಟಿಯಿಂದ ರೂ. 1,405 ಕೋಟಿಗೇರಿತು. ಎಂದರೆ ಸುಮಾರು ರೂ. 200 ಕೋಟಿಯಷ್ಟು. ಆದರೆ ಇದು ಪ್ರತಿಯಾಗಿ ಯಾವ ಫಲಪ್ರಯೋಜನವನ್ನೂ ತರತಕ್ಕದ್ದಲ್ಲ. ಅಲ್ಲದೆ, ಎಷ್ಟು ಮೊತ್ತ ಸಾಲ ಹುಟ್ಟಿದರೆ ಪ್ರಯೋಜನವಾಗಬಹುದಾಗಿತ್ತೊ ಅಷ್ಟು ಮೊತ್ತದಲ್ಲಿ — ರಾಜಕೀಯ ಕಾರಣಗಳಿಂದಾಗಿ — ಸರ್ಕಾರಕ್ಕೆ ಸಾಲ ದೊರೆಯುತ್ತಿಲ್ಲ.

(೨) ಹಳೆಯ ತೆರಿಗೆಗಳ ದರವನ್ನು ಹೆಚ್ಚಿಸುವುದೂ ಹೊಸ ತೆರಿಗೆಗಳನ್ನು ಹಾಕುವುದೂ ಇನ್ನೊಂದು ದಾರಿ. ಅಧಿಕಲಾಭದ ತೆರಿಗೆ ಎಂಬುದು ಹೊಸದಾಗಿ ಜಾರಿಗೆ ಬಂದಿತು. ರೂ. 36,000 ಕ್ಕಿಂತ ಹೆಚ್ಚಾದ ವಾರ್ಷಿಕ ವರಮಾನವಿರುವ ಸಂಸ್ಥೆಗಳು ಇದನ್ನು ತೆರುವುವು. ಇದು ಸೇಕಡ 66⅔ ರ ತೆರಿಗೆ. ಅಲ್ಲದೆ ತೆರಿಗೆಯ ಸೇಕಡ 20 ರಷ್ಟನ್ನು ಸಂಸ್ಥೆಗಳು ಸರ್ಕಾರದಲ್ಲಿ ಡಿಪಾಸಿಟ್ ಮಾಡಬೇಕು. ಇದರಿಂದ ಅಧಿಕ ಲಾಭದ ಸೇಕಡ 80 ಸರ್ಕಾರದ ವಶವಾದಂತಾಯಿತು. ವರಮಾನದ ತೆರಿಗೆಯ ದರವನ್ನು ಹೆಚ್ಚಿಸಿದ್ದಾರೆ; ಮತ್ತು ತೆರಿಗೆ ಕೊಡಬೇಕಾದ ಮಿತಿಯನ್ನು ತಗ್ಗಿಸಿ ಹಿಂದೆ ತೆರಬೇಕಾಗಿರಲಿಲ್ಲದವರೂ ಕೊಡುವಂತೆ ಮಾಡಿದ್ದಾರೆ. ರೂ. 15,000 ಮೇಲಿರುವ ವರಮಾನಗಳ ತೆರಿಗೆಯ ಮೇಲೆ ಸೇಕಡ 50 ತೆರಿಗೆ ಹೊರಿಸುವ ಏರ್ಪಾಡು ನಡೆದಿದೆ. ಈ ಸರ್‌ಛಾರ್ಜಿನಿಂದಲೇ 1943-44 ರಲ್ಲಿ ರೂ. 16 ಕೋಟಿ ಆದಾಯ ಬರುವ ನಿರೀಕ್ಷೆಯಿದೆ. ಬೇರೆ ಎಲ್ಲಾ ತೆರಿಗೆಗಳನ್ನೂ ಹೆಚ್ಚಿಸಿಯೂ ಆಗಿದೆ.[1]

[1] ತೆರಿಗೆಗಳನ್ನು ಪದಾರ್ಥರೂಪವಾಗಿ ತೆಗೆದುಕೊಳ್ಳುವ ಸಲಹೆಯಿದೆ. ಮದರಾಸ್ ಸರ್ಕಾರವು ಭೂಕಂದಾಯದ ಕಿಸ್ತನ್ನು ಹಣಕ್ಕೆ ಬದಲು ಬತ್ತದರೂಪವಾಗಿ ವಸೂಲುಮಾಡುವ ಆಲೋಚನೆ ಮಾಡುತ್ತಿದೆ. ಇದರಿಂದ ತೆರಿಗೆ ಕೊಡಬೇಕಾಗಿಲ್ಲದ ಮಿತಿಯನ್ನು ಕಡಮೆ ಮಾಡಬೇಕಾಗುವುದು: ಇಲ್ಲದಿದ್ದರೆ ಬಡವರ ಬಾಯಿಂದ ಅನ್ನವನ್ನು ಕಿತ್ತುಕೊಂಡ ಹಾಗಾಗುತ್ತದೆ. ಆಹಾರ ಪದಾರ್ಥಗಳ ವ್ಯವಸ್ಥೆ ಇದರಿಂದ ಉತ್ತಮಗೊಳ್ಳುವುದೇನೋ ನಿಜ. ಆದರೆ ಹಣ ತುಂಬ ಕಡಮೆಯಾದಾಗ ಈ ಸಲಹೆ ಫಲಕಾರಿ. ಹೆಚ್ಚಾಗಿರುವಾಗಲಲ್ಲ.

ಈ ಬಗೆಗಳಲ್ಲಿ ಹಣ ಕಡಮೆ ಆದರೂ ಸಾಕಾದಷ್ಟು ಕಮ್ಮಿಯಾಗಿಲ್ಲ.

(೩) ಪದಾರ್ಥಗಳನ್ನು ಹೆಚ್ಚು ಹೆಚ್ಚಾಗಿ ತಯಾರಿಸಿ ಅಥವಾ ಬೇರೆ ದೇಶಗಳಿಂದ ಆಮದುತಂದು ಅವುಗಳನ್ನು ಸರಿಯಾಗಿ ಜನರಲ್ಲಿ ಹಂಚುವುದು ಹಣದ ಬೆಲೆಯನ್ನು ಹೆಚ್ಚಿಸುವುದಕ್ಕೂ ಪದಾರ್ಥಗಳ ಧಾರಣೆ ಇಳಿಸುವುದಕ್ಕೂ ಇನ್ನೊಂದು ದಾರಿ. ಯುದ್ಧಕಾರಣದಿಂದ ಜಲಪ್ರಯಾಣಕ್ಕೆ ತೊಂದರೆಯಾದ್ದರಿಂದ ಎಷ್ಟೋ ಸಾಮಾನುಗಳು ಹೊರದೇಶಗಳಿಂದ ಬರುವುದು ನಿಂತಿದೆ. ಅವುಗಳಲ್ಲಿ ಹಲವು ಈಗ ನಮ್ಮಲ್ಲೇ ತಯಾರಾಗುತ್ತವೆ. ಹಿಂದೆ ತೊಂದರೆಯಲ್ಲಿದ್ದ ಕಾಗದ, ಬಟ್ಟೆ ಮುಂತಾದ ಕೈಗಾರಿಕೆಗಳು ಈಗ ಚೆನ್ನಾಗಿ ಕೆಲಸಮಾಡತೊಡಗಿವೆ. ಒಟ್ಟಿನಲ್ಲಿ ಪದಾರ್ಥಗಳ ತಯಾರಿಕೆ ಹೆಚ್ಚಿದೆ. ಇನ್ನೂ ಹೆಚ್ಚಾಗುವ ನಿರೀಕ್ಷೆಯೂ ಇದೆ. ಆದರೂ ಬೋರೆಗೌಡನ ಮಾತಿನಂತೆ 'ಲೋಟಿ'ನಷ್ಟು ಬೇಗ ಯಾವ ಸಾಮಾನೂ ತಯಾರಾಗಲಾರದು.

ಹೋಗಲಿ: ಇರುವ ಪದಾರ್ಥಗಳನ್ನೇ ಸರಿಯಾಗಿ ಹಂಚಬಹುದಲ್ಲ? — ಎನ್ನಬಹುದು. ಪಡಿಕೊಡುವ ಪದ್ಧತಿಯನ್ನು ಅಕ್ಕಿ ಬೇಳೆ ಇವುಗಳಿಗೆ ಹೊಂದಿಸಿದ್ದು ಸರಿ. ಅದನ್ನು ಎಲ್ಲಾ ಪದಾರ್ಥಗಳಿಗೂ ಪ್ರಯೋಗಿಸುವುದು ಕಷ್ಟ. ಅದರಿಂದ ನಷ್ಟವೂ ಕೂಡ.

(೪) ಹಣದ ಹಾವಳಿಯನ್ನು ತಪ್ಪಿಸಲು ಇನ್ನೊಂದು ಸಲಹೆ ಇದೆ, ಧಾರಣೆ ವಾಸಿ ಪಾತಾಳಕ್ಕಿಳಿಯದ ಹಾಗೆ ಆಕಾಶಕ್ಕೆ ಹತ್ತದಹಾಗೆ ಕಟ್ಟುಮಾಡಬಹುದು. ಖಾಸಗಿ ಬಂಡವಾಳಗಾರರ ಪ್ರಭಾವ ಇರುವ ರಾಜ್ಯಗಳಲ್ಲಿ ಬೆಲೆಗಟ್ಟು ಸುಲಭವಲ್ಲ. ಲಾಭದ ಅಟ್ಟಹಾಸದಲ್ಲಿ ಗಾಳಿಗೆ ಹಾರಿಹೋಗುತ್ತದೆ. ದೇಶದ ಯಾನವಾಹನಗಳ ಆಡಳಿತವೆಲ್ಲ ಹೆಚ್ಚುಕಡಮೆ ಸೈನ್ಯಶಾಖೆಯವರ ಕೈಯಲ್ಲಿರುವುದರಿಂದ ಊರಿಂದ ಊರಿಗೆ ಪದಾರ್ಥಗಳ ಓಡಾಟಕ್ಕೆ ತಡೆಯಿದೆ. ಇದು ಜನಕ್ಕೆ ಪಡಿ ಕೊಟ್ಟೋ ಪದಾರ್ಥಗಳ ಬೆಲೆ ಕಟ್ಟಿಯೋ ವಾಸಿಯಾಗುವ ಕಾಹಿಲೆಯಿಲ್ಲ. ಇದರ ಬೇರು ಬ್ರಿಟನ್-ಇಂಡಿಯಾ, ಸ್ಟರ್ಲಿಂಗ್-ರೂಪಾಯಿ ಇವುಗಳ ಸಂಬಂಧದಲ್ಲಿ ಬೆಸೆದಿದೆ.

ಸ್ಟರ್ಲಿಂಗ್ ಲೆಕ್ಕದ ಸಾಲ[1] ಅಥವಾ ಠೇವಣಿ ಈಗ ಚಲಾವಣೆಯಲ್ಲಿರುವ ನೋಟುಗಳ ತಳಹದಿ ಎಂದೆವು. ಇದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಆಕ್ಟ್, 1934 ರ 33 ನೆಯ ಕಲಮಿನ ಪ್ರಕಾರ ನಡೆಯುತ್ತಿದೆ. ಈ ಕಾನೂನು 1941 ನೆಯ

[1] ಒಳ್ಳೆಯ ಕಾಲದಲ್ಲಿ ಇದು ನಮ್ಮ ಸಾಹುಕಾರಿಕೆ ಹೆಚ್ಚಿರುವ ಲಕ್ಷಣವಾಗುತ್ತಿತ್ತು. ಏಕೆಂದರೆ ನಮ್ಮ ದೇಶಕ್ಕೆ ಬ್ರಿಟಿಷರು ಆ ಮಟ್ಟಿಗೆ ಸಾಲಗಾರರಾಗುತ್ತಿದ್ದರು. ನಾವು ಅವರ ಸಾಹುಕಾರರಾಗುತ್ತಿದ್ದೆವು. ಈಗಲೂ ಹೆಸರಿಗೆ — ಲೆಕ್ಕಕ್ಕೆ, ಹಾಗೆಯೇ ಸರಿ.

ಫೆಬ್ರುವರಿಯಲ್ಲಿ ತಿದ್ದುಪಡಿಯಾಯಿತು. ಈ ತಿದ್ದುಪಡಿ ನೋಟುಗಳಿಗೆ ಆಧಾರವಾದ ರೂಪಾಯಿ ಶೇವಣಿಗಳಿಗಿದ್ದ ಮಿತಿಯನ್ನು ಕಿತ್ತುಹಾಕಿತು. ನಾವು ತೆರಬೇಕಾಗಿದ್ದ ಸ್ಟರ್ಲಿಂಗ್ ಸಾಲ ಕಡಮೆಯಾಗಿ ನಮ್ಮ ನಿಧಿಗಳಲ್ಲಿ ಕೂಡಿಸಿಟ್ಟಿರುವ ಸ್ಟರ್ಲಿಂಗ್ ಶೇವಣಿ ಹೆಚ್ಚಿದ ಹಾಗೆಲ್ಲ ದೇಶದಲ್ಲಿ ರೂಪಾಯಿ ಶೇವಣಿ ಮಿತಿಮೀರಿ ಬೆಳೆಯುತ್ತಿದೆ. ರೂಪಾಯಿ ಶೇವಣಿಯ ಆಶ್ರಯದಲ್ಲಿ ಹುಟ್ಟಿಕೊಂಡ ನೋಟುಗಳ ಪರಿಮಾಣ ಅತಿಯಾದ್ದು ಈ ತಿದ್ದುಪಡಿಯಿಂದ ನಮ್ಮ ದೇಶಕ್ಕೆ ಬಂದ ಉಡುಗೊರೆ.

ಸ್ಟರ್ಲಿಂಗ್-ರೂಪಾಯಿ ಬಾಂಧವ್ಯವನ್ನು ಬಿಡಿಸುವುದು ಈಗ ಅಸಾಧ್ಯ. ಒಂದು ವೇಳೆ ಈ ವಿವಾಹ ವಿಚ್ಛೇದ ನಡೆದು, ನಮ್ಮ ಹಣ ನಮ್ಮಲ್ಲೇ ಹುಟ್ಟಿಕೊಂಡು ರೂಪಾಯಿ 'ಸ್ವದೇಶಿ'ಯಾದರೂ ಈಗಿರುವ ಸ್ಟರ್ಲಿಂಗ್ ಶೇವಣಿಯನ್ನು ನೀರಿನಲ್ಲಿ ಕದಡಲಾಗುವುದಿಲ್ಲ. ದೇಶದಲ್ಲಿ ನೂರಾರು ವಿದೇಶೀಯ ಸಂಸ್ಥೆಗಳಿವೆ: ರೈಲ್ವೆ, ಟೀ, ರಬ್ಬರ್, ಕಬ್ಬಿಣ ಮುಂತಾದ ಅನೇಕ ಕೈಗಾರಿಕೆಗಳು 'ಅವರ' ಕೈಲಿವೆ. ಈಗ ಬೆಟ್ಟದಂತೆ ಬೆಳೆಯುತ್ತಿರುವ ಸ್ಟರ್ಲಿಂಗ್ ಶೇವಣಿ ಅವನ್ನೆಲ್ಲ ಕೊಂಡು ನಮ್ಮವನ್ನಾಗಿ ಮಾಡಬಲ್ಲುದು. ಸರ್ಕಾರವು ಜನರಿಂದ ಇನ್ನೂ ಹೆಚ್ಚಾಗಿ ಸಾಲಪಡೆಯಬಹುದು. ತುಂಬಾ ಕಷ್ಟಪಟ್ಟರೆ, ಅಮೆರಿಕ ಸಂಯುಕ್ತ ಸಂಸ್ಥಾನ ದಯವಿಟ್ಟರೆ ಈ ಸ್ಟರ್ಲಿಂಗ್ ಶೇವಣಿಯ ಕಾಗದದ ರಾಶಿ, ಚಿನ್ನ ಬೆಳ್ಳಿ ಆಗಬಹುದು. ಹೀಗೆಲ್ಲ ಹಣದ ಮೊತ್ತವನ್ನು ಕಡಮೆಮಾಡಬಹುದು. ಆದರೆ, ಯಾರು, ಎಂದು, ಎಷ್ಟು, ಹೇಗೆ? ಎಂಬವೆಲ್ಲ ಪರ್ಯಾಲೋಚ್ಯಗಳೇ.

ಈಗೊಂದು ಪ್ರಶ್ನೆ: ಹಣ ಹೆಚ್ಚಿದೆ, ಹೌದು. ಅದನ್ನು ಕಡಮೆಮಾಡಬೇಕು: ಅದೂ ಸರಿಯೆ. ಆದರೆ ನಮ್ಮ ದೇಶ ಹಳ್ಳಿಗರದು; ಬೋರೆಗೌಡನದು. ಹೊಸಹಣ ಅವನನ್ನೂ ಮುಟ್ಟಿದೆ. ಪಟ್ಟಣಿಗರು ರುಚಿನೋಡಿದ ಅನೇಕ ಅನುಕೂಲಗಳ ಕಡೆಗೆ ಅವನೀಗ ಕಣ್ಣುಬಿಡುತ್ತಿದ್ದಾನೆ. ಇದರ ಕಾರಣ, ಅವನ ಜೇಬಿಗೆ ಸೇರಿರುವ ಹೊಸ ನೋಟು. ಎಲ್ಲರೂ ನಮವೆನ್ನುವ ಈ ಕಾಲದಲ್ಲಿ ಅಪರೂಪಕ್ಕೆ ಈಗ ಅವನ ಜೇಬಿಗೆ ಬಂದು ಸೇರಿರುವ ನಾಲ್ಕು ನೋಟುಗಳನ್ನು ಕಿತ್ತುಕೊಳ್ಳುವುದು ಸರಿಯೆ? ಎಂಬುದು ಪರ್ಯಾಲೋಚಿಸಬೇಕಾದ ಅಂಶವೆಂಬುದನ್ನು ಮರೆಯಬಾರದು.

ಈ ಲೇಖನದಲ್ಲಿ ಬರುವ ಪರಿಭಾಷೆಯ ಇಂಗ್ಲಿಷ್ ಮೂಲ:

| | | |
|---|---|---|
| ಸಗಟುಧಾರಣೆಗಳ ಸೂಚೀಸಂಖ್ಯೆ | .... | Index Number of Wholesale Prices. |
| ಮೂಲಸಾಮಗ್ರಿಗಳು | .... | Raw Materials. |
| ಸಿದ್ಧವಾದ ಸಾಮಾನುಗಳು | .... | Manufactured articles. |

| | | |
|---|---|---|
| ಪ್ರಧಾನ ವಸ್ತುಗಳು | .... | Primary Commodities. |
| ಸ್ಟರ್ಲಿಂಗ್ ಠೇವಣಿ (ಹಣದ ಪತ್ರಗಳು) | .... | Sterling Security. |
| ರೂಪಾಯಿ " " | .... | Rupee " |
| ಖಜಾನೆ ಹುಂಡಿ | .... | Treasury Bill. |
| ಅಧಿಕಲಾಭದ ತೆರಿಗೆ | .... | Excess Profits Tax. |
| ವರಮಾನದ ತೆರಿಗೆ | .... | Income-Tax. |
| ಪಡಿಪದ್ಧತಿ | .... | Rationing. |
| ಬೆಲೆಗಟ್ಟು | .... | Price-Control. |
| ಮಾರುವೆ ಹುಂಡಿ | .... | Bill of Exchange. |

ಎ. ಎನ್. ಸುಬ್ರಹ್ಮಣ್ಯಂ.

---

ಈ ಲೇಖನ ಬರೆಯಲು ಪ್ರೊಫೇಸರ್ ವಿ. ಎಲ್. ಡಿಸೌಜಾ ಅವರಿಂದ ತುಂಬಾ ಸಹಾಯ ವಾಗಿದೆ.

# ಹುಸಿಮುನಿಸು

ಉಪ್ಪು ಕಾರ ತಿನ್ನುವ ಮೈಗೆ ಕಾಮ ಕ್ರೋಧಗಳು ತಪ್ಪಿದ್ದಲ್ಲ ಎನ್ನುವುದು ವಾಡಿಕೆಯ ಮಾತು. ಆದರೆ ಉಪ್ಪು ಕಾರ ಎರಡನ್ನೂ ಕಾಣದೆ ಕೇವಲ ಮೊಲೆ ಹಾಲನ್ನೇ ಕುಡಿಯುವ ಕಂದಮ್ಮನಿಗೂ ಕ್ರೋಧದ ಬಂಧುವಾದ ಕೋಪ ತಪ್ಪಿದ್ದಲ್ಲ. ಕಾಮ ತಪ್ಪಿದರೂ ತಪ್ಪಬಹುದು; ಕೋಪತಾಪಗಳು ತಪ್ಪುವುದು ಕಷ್ಟ. ಈ ಭೂಮಿಯ ಮೇಲೆ ಹುಟ್ಟುವುದೇ ತಡ,—ಇಲ್ಲಿನ ಸುಖದುಃಖಗಳೂ, ಕಷ್ಟನಷ್ಟಗಳೂ, ಕೋಪಕ್ರೋಧಗಳೂ, ವ್ಯಸನವ್ಯಾಕುಲಗಳೂ, ಚಿಂತೆಚಟಗಳೂ ಒಂದೆರಡು ದಿನ ಹಿಂಚೊ ಮುಂಚೊ ಹೊಂಚುಹಾಕಿ ತಮ್ಮ ಬಲೆಗೆ ಹಾಕಿಕೊಳ್ಳುತ್ತವೆ. ಆದರೆ ಇವೆಲ್ಲ ಬೇಡಬೇಡವೆಂದರೂ ತಂಡೋಪತಂಡವಾಗಿ ತಾವೇ ಬಂದು ಆವರಿಸಿಕೊಳ್ಳುವ ಸ್ವಭಾವವುಳ್ಳ ಕಷ್ಟಕಾರ್ಪಣ್ಯಾಗಳು.

ಹುಸಿಮುನಿಸು ಇಂಥಾದ್ದಲ್ಲ. ಅದರ ರಂಗೇ ಬೇರೆ, ರೀತಿಯೇ ಬೇರೆ. ಅದು ಹೆಸರಿಗೆ ಮಾತ್ರ ಮುನಿಸು; ಕೋಪದ ಕೊಸರು. ಅದನ್ನು ಅಗೆದು ನೋಡಿದರೆ ಅಥವಾ ಅದರ ಸತ್ವವೆಷ್ಟು ಸಾಮರ್ಥ್ಯವೆಷ್ಟು ಎನ್ನುವುದನ್ನು ಅಳೆದು ನೋಡಿದರೆ ಅಲ್ಲಿ ಕಾಣುವುದು ಮುನಿಸೂ ಅಲ್ಲ, ಮುಂಕೂ ಅಲ್ಲ; ಕೋಪವೂ ಅಲ್ಲ, ತಾಪವೂ ಅಲ್ಲ; ಎಲ್ಲ ಬರಿ ಪೊಳ್ಳು, ಟೊಳ್ಳು. ಒಂದು ಮಾತಿನಲ್ಲಿ ಹೇಳುವುದಾದರೆ ಅದು ಆವಿಯಷ್ಟು ಹಗುರ; ಆವಿಯ ಕಣದಷ್ಟೇ ಅದರ ಬದುಕು ಕ್ಷಣಕಾಲ ಮಾತ್ರ. ಅದನ್ನು ನೋಡಿ ನಲಿಯುವುದಕ್ಕಿಂತ ಅನುಭವಿಸಿ ಆನಂದಪಡುವುದು ಮೇಲು. ಓದಿ ಆಮೋದಪಡುವುದೂ ಅಸಾಧ್ಯ; ಕೇಳಿ ಕೃತಾರ್ಥರಾಗುವುದಂತೂ ಸಲ್ಲದ ಮಾತು. ಎಲ್ಲರಲ್ಲೂ ಈ ಹುಸಿಮುನಿಸು ಉಂಟೆ? ಎಂಬ ಸಂಶಯ ಬರಬಹುದು. "ಉಂಟು. ಲವಲೇಶವೂ ಸಂಶಯ ಬೇಡ" ಎಂದೇ ನನ್ನ ನಿರ್ಧಾರವಾದ ಉತ್ತರ.

ಇನ್ನು ಹುಸಿಮುನಿಸಿನ ರೂಪರೇಖೆಗಳ ಬಗ್ಗೆ ನಾಲ್ಕು ಮಾತುಗಳು. ಅದು ಎಲ್ಲೆಡೆಯಲ್ಲೂ ದೊರಕುವ ಅಗ್ಗದ ಮಾಲಲ್ಲ. ಅದಕ್ಕೂ ಒಂದು ಎಡೆಯುಂಟು. ಸ್ವಾನುಭವದಿಂದ ಸವಿದು ಸಂತೋಷಪಡಬೇಕಾದರೆ ಎಲ್ಲರಿಗೂ ಒಂದು ನಿಯತವಾದ ವಯಸ್ಸುಂಟು. ಸಮಯ ಸಂದರ್ಭಗಳಂತೂ ಅತ್ಯಗತ್ಯ ಎಂದು ಬಿಚ್ಚಿ ಹೇಳ ಬೇಕಾಗಿಲ್ಲ. ವಯಸ್ಸಾದ ಗಂಡಹೆಂಡಿರ ನಡುವೆ ಅದರ ಸದ್ದು ಗದ್ದಲವೆಲ್ಲ—ಇದ್ದ ಪಕ್ಷದಲ್ಲಿ—ಅಡಗಿಹೋಗಿರುತ್ತದೆ. ತಂದೆತಾಯಿಗಳೊಂದಿಗೆ ಮಕ್ಕಳು

ಅಸಮಾಧಾನಗೊಂಡ ಸಮಯದಲ್ಲೂ ಅದು ಕಂಡುಬರುವುದು ದುರ್ಲಭ. ಅಣ್ಣ ತಮ್ಮಂದಿರ ಅಥವಾ ಅಕ್ಕತಂಗಿಯರ ಕದನಗಳ ಮಸೆದಾಟದಲ್ಲೂ ಅದನ್ನು ನೋಡ ಲಾರೆವು. ಸ್ನೇಹಿತರ ವಿರಸವಂತೂ ಅದನ್ನು ಹತ್ತಿರ ಸೇರಿಸದು. ಆದರೆ ಅದಕ್ಕೆ ಪ್ರತಿಯೊಬ್ಬರ ಜೀವಮಾನದಲ್ಲೂ ಒಂದು ಸಂದರ್ಭ ವಿಾಸಲು. ಅದೇ ಮಾವ-ಅಳಿಯರ ಸಂಟತನ. ಮದುವೆಗೆ ಮೊದಲೆ ಹೆಣ್ಣು ಕೊಡುವ ಮಾವ ಬೇರೆ ಯಾವ ರೀತಿಯಿಂದ ಎಷ್ಟು ಆಪ್ತ ಬಂಧುವಾಗಿದ್ದರು ಕೂಡ ಮದುವೆಯಾದ ಮರುಕ್ಷಣ ದಲ್ಲಿ, ಇಲ್ಲವೇ ಮದುವೆಯ ಮಾತೆತ್ತಿದ ಮರುಕ್ಷಣದಿಂದ ಬಾಂಧವ್ಯದ ಬಣ್ಣ ಬದಲಾಗುತ್ತದೆ. ಮಾವನವರು ತೀರ ಹೊಸಬರಾದರಂತೂ ಹೇಳಲೇಬೇಕಾಗಿಲ್ಲ. ಮಾವನ ಮಗಳ ಕತ್ತಿಗೆ ತಾಳಿ ಕಟ್ಟಿದ ಮೇಲೆ ಮತ್ತೂ ಒಂದು ಕೈ ಮೇಲು.

ಮದುವೆಯ ಮಂಟಪದಲ್ಲಿಯೇ ಅಳಿಯ ತನ್ನ ಅಧಿಕಾರವನ್ನು ಚಲಾಯಿಸು ವುದಕ್ಕೆ ಹವಣಿಸುತ್ತಾನೆ. ಅದರಲ್ಲೂ ಮಾವ ಮೆತ್ತಗಿದ್ದರೆ ಸಾಕು, ಮೊಳಕೈಯಲ್ಲಿ ಗುದ್ದುವುದಕ್ಕೂ ಹೇಸುವುದಿಲ್ಲ. ಈ ಮಧ್ಯೆ ಅವನ ಪರವಾಗಿ ವಕಾಲತ್ತು ನಡೆಸುವ ಅವನ ಹಿತೈಷಿಗಳು ಎಂದು ಹೆಜ್ಜೆ ಹೆಜ್ಜೆಗೂ ಘಳಿಗೆ ಘಳಿಗೆಗೂ ಸಾರುವ ಬಂಧು ಬಳಗದವರ ಉಪದೇಶವೇನಾದರೂ ಆಗಿಬಿಟ್ಟರೆ, ಎಲ್ಲ ಉತ್ಕಟ ಸ್ಥಿತಿಯೇ, ಎಲ್ಲ ಉಲ್ಬಣ ಪರಿಣಾಮವೇ. ಕ್ಷಣಕ್ಷಣಕ್ಕೂ ಕುಂದುಕೊರತೆಗಳು ಕಣ್ಣು ಕುಕ್ಕುತ್ತವೆ. ನಿಮಿಷ ನಿಮಿಷಕ್ಕೂ ನಿರಾಶೆಯ ಪರಮಾವಧಿಯ ಚಿಹ್ನೆಗಳೇ. ಎದ್ದಲ್ಲಿ, ಕೂತಲ್ಲಿ, ನಿಂತಲ್ಲಿ, ನಡೆದಲ್ಲಿ ಎಲ್ಲ ಆಕ್ಷೇಪಣೆಗಳೇ. ವರದಕ್ಷಿಣೆಯ ಪ್ರಸ್ತಾಪ ಬಂದಾಗ ಇಡಿಯ ಪ್ರಪಂಚವೇ ಬದಲಾಗುವುದೇನೊ ಎಂಬ ಭಯಾನಕ ಸೂಚನೆಗಳಾಗುವು ದುಂಟು. ವಸ್ತ್ರೋಪಚಾರದ ವೇಳೆ ಬಂದಾಗ ಬಟ್ಟೆಬರೆಗಳ ರಂಗಿನ ಸೌಂದರ್ಯದಿಂದ ಮೊದಲಾಗಿ ಅವುಗಳ ಒಟ್ಟು ವೆಚ್ಚವೆಷ್ಟು ಎನ್ನುವ ತನಕ ವಾದವಿವಾದಗಳೆದ್ದು ರಗಳೆ ರಾದ್ಧಾಂತವಾಗುವುದುಂಟು. ಊಟ ಉಪಚಾರಗಳ ಗೊಡವೆ ಹೇಳಲೇ ಬೇಕಾಗಿಲ್ಲ. 'ಇತ್ತ ದರಿ, ಅತ್ತ ಪುಲಿ.' ಉಪ್ಪು ಮರೆತರೂ ಸಾಕು, ಒಂದು ಊರು ಹೋದಷ್ಟು ಹೊಡೆದಾಟವಾಗುತ್ತದೆ. ತುಪ್ಪ ತಪ್ಪಿದರಂತೂ ಊಹಿಸಿ ಹೇಳುವುದು ಅಶಕ್ಯ.

ಇಷ್ಟು ಅಳಿಯ ಮತ್ತು ಅವನ ಪರಿವಾರದವರ ಮಾತಾಯಿತು. ಇನ್ನು ಕುಲ ವಧುವಾಗುವವಳ ವಿಷಯ. ಆಕೆ ತಮ್ಮವಳಾಗುವ ಮೊದಲೆ, ಗಂಡಿನವರಿಗೆ ಆಕೆಯ ಎಲ್ಲ ವಿಷಯದಲ್ಲೂ ತಮಗೆ ಸಂಪೂರ್ಣವಾದ ಹಕ್ಕುಂಟು ಎಂಬ ಭ್ರಾಂತಿ ಬಲವಾಗಿ ಬೇರೂರುತ್ತದೆ. ಹುಡುಗನಿಗೆ ಹೊಳೆಯದ ಎಷ್ಟೋ ವಿಷಯಗಳು ಅವರಿಗೆ ಹೊಳೆದು ಆ ಬಗ್ಗೆ ದೀರ್ಘವಾದ ಚರ್ಚೆ ಆಗುತ್ತದೆ. ಮುಖ್ಯವಾಗಿ ಅವಳ ಮೇಲಿಟ್ಟಿರುವ

ಒಡವೆ ವಸ್ತುಗಳ ತನಿಖೆ. ಆ ಹೊತ್ತಿನಲ್ಲಿ, ಅದುವರೆಗೂ ಕಾಣದಿದ್ದ ಕಣ್ಣಿಗೆ ನೋಡುವ ಶಕ್ತಿ ಬರುತ್ತದೆ; ಕೇಳದ ಕಿವಿಗೆ ಕೇಳುವ ಶಕ್ತಿ ಬರುತ್ತದೆ; ಕುಂಟ ಸಂಟನೂ ಬಂದು ತಂಟೆ ಮಾಡದೆ ಹೋಗುವುದಿಲ್ಲ. ಎಲ್ಲಾ ಸರಿಯೆ. ಹೆಣ್ಣಿನವರೇನಾದರೂ ಹುಡುಗಿಯ ಪರವಾಗಿ — ತಾವು ಸಾಕಿ ಸಲಹಿದ ಮಗಳ ಪರವಾಗಿ — ಮಾತೆತ್ತಿದರೆ ಪ್ರತಿ ಪಕ್ಷದವರ 'ಅನಿರ್ವಚನೀಯವಾದ' ಮೂಗಿನ ಮೇಲಿನ ಬೆರಳೇ ಸದುತ್ತರ. ತೊಂಡು ತೊಳಸಿಲ್ಲದೆ, ಸದ್ದು ಗದ್ದಲವಿಲ್ಲದೆ ಮದುವೆಯಾದರೆ ಅದು ಮದುವೆಯೇ ಅಲ್ಲ. ಕಲ್ಯಾಣವೆಂದರೆ ಕೂಗಿರಬೇಕು; ವಿವಾಹವೆಂದರೆ ವಾದ ವಿವಾದಗಳಿರಬೇಕು. ಈ ಗಜಿಬಿಜಿ, ಈ ಸೆಣಸಾಟದಲ್ಲಿ, ಈ ಮಾತು ಮಾತಿನ ಮಂಥನದಲ್ಲಿ ಹುಸಿಮುನಿಸು ಉದ್ಭವವಾಗುತ್ತದೆ ಎನ್ನಬಹುದು. ಅದರ ಪ್ರಭಾವ ಆಗ ಕೇವಲ ಮಿಂಚು ಹುಳುವಿನ ಬೆಳಕಂತೆ ಮಿಣುಕಿ ಮಿಣುಕಿ ಮಾಯವಾಗುವಂಥಾದ್ದು. ಅದರ ವಿಶ್ವರೂಪವನ್ನು ಕಾಣಬೇಕಾದರೆ ಮದುವೆ ಮುಗಿಯಬೇಕು; ಹಬ್ಬ ಹಾಡಿ ಮೊದಲಾಗಬೇಕು. ದಿನ ಕ್ರಮೇಣ 'ಜಾಮಾತಾ ದಶಮೋ ಗ್ರಹಃ" ಎಂಬ ಮಾತು ಮಾವನವರಿಗೆ ಮಂದಟ್ಟಾಗುತ್ತದೆ.

ಮದುವೆ ಮುಗಿಯಬಹುದು. ಅತ್ತೆ ಮಾವಂದಿರ ಮೇಲೆ ಬಂದ ಬೀಗರ ಮುನಿಸೂ ಆರಬಹುದು. ಅಳಿಯನ ಅಸಮಾಧಾನವೂ ಕೊನೆಗಾಣಬಹುದು. ಆದರೆ ಹೆಣ್ಣು ಕೊಟ್ಟವರಿಂದ ಪುನಃ ಪುನಃ ಪಡೆಯುವ ವಸೂಲಿ ಮಾತ್ರ ಮುಗಿಯುವುದಿಲ್ಲ. 'ಕಳ್ಳನಿಗೊಬ್ಬ ಕುಳ್ಳ ಸಾಕ್ಷಿ' ಎಂಬಂತೆ ಈ ಉಪಾಯದ ಅಪಹಾರಕ್ಕೆ ಶಾಸ್ತ್ರ ಬೇರೆ ತಾಳ ಹಾಕುತ್ತದೆ. ಉಪಾಕರ್ಮ ಬಂದರೆ ಅದಕ್ಕೆ ಮೊಟ್ಟಮೊದಲಿನ ಪಟ್ಟಕಟ್ಟಿ ತಕ್ಕಮಟ್ಟಿನ ವಸೂಲಿ ಆಗುತ್ತದೆ. ಗಣಪತಿ ಹಬ್ಬ ಬಂತು. ಆಗೊಂದಿಷ್ಟು ರೊಕ್ಕ ಸಮೇತವಾಗಿ ಚೊಕ್ಕ ಬೆಳ್ಳಿ ಕೈಸೇರುತ್ತದೆ. ದೀಪಾವಳಿಗೆ ಮತ್ತೊಂದಿಷ್ಟು ಸುಲಿಗೆ. ಇದೆಲ್ಲ ಆಗುವ ವೇಳೆಗೆ ಶೋಭನ. ಮದುವೆ ಒಂದು ದೊಡ್ಡ ಹಬ್ಬವಾದರೆ ಇದು "ವರ್ಷದ ತೊಡಕು." ಅಂತೂ ಇಂತೂ ದಾನಧರ್ಮದ ಹೆಸರಿನಲ್ಲಿ, ಮಾನ ಮರ್ಯಾದೆಗಳ ಹೆಸರಿನಲ್ಲಿ ಸಾಧ್ಯವಾದಷ್ಟು ಸುಲಿಗೆ, ಕೈಯಲ್ಲಾದಷ್ಟು ಕೊಳ್ಳೆ ಆಗಬೇಕು. ಈ ಆಚಾರ ವಿಚಾರಗಳಲ್ಲಿ ತುಸು ತಪ್ಪಿದರೂ ಸಾಕು, ಅಳಿಯನ ಮುಖ ವಾದರೂ ಗಂಟಿಕ್ಕಬಹುದು; ಅವನ ಕಡೆಯವರ ಮೋರೆಯಾದರೂ ಮಾಸಲು ಮಾಸಲಾಗಬಹುದು. ಇಂಥ ಸಮಯಗಳಲ್ಲಿಯೇ ನಸುಮುನಿಸೂ ಹುಸಿಮುನಿಸೂ ಹುಟ್ಟಿಬಂದು ಆಕ್ಷೇಪಣೆಯ ಆಕಾರ ತಾಳಿ ಅದೃಶ್ಯವಾಗುತ್ತವೆ. ಇಲ್ಲಿನ ಹುಸಿಮುನಿಸು ಇನ್ನೂ ಹಸುಗೂಸು. ಅದರ ಪ್ರಾಬಲ್ಯವನ್ನು ಅದರ ಯೌವನದಲ್ಲಿ, ಅದರಲ್ಲೂ ಅಳಿಯನ ಹೃದಯದಲ್ಲಿಯೇ ಕಾಣಬೇಕು.

ಅಳಿಯಂದಿರಲ್ಲಿ ಮೂರು ಪಂಗಡ. ಅಳಿಯನು ಒಂದೇ ಊರಿನವನಾಗಬಹುದು. ಇಲ್ಲವೇ ಬೇರೆ ಊರಿನವನಾಗಬಹುದು. ಇವೆರಡಕ್ಕೂ ಹೊರತಾಗಿ ಅವನು ಮಾವನ ಮನೆಯಲ್ಲಿಯೇ ಬಿಡಾರಮಾಡುವ ಗೆಣೆಯನಾದರೂ ಆಗಬಹುದು. ಇದೇನೂ ನಿನ್ನೆ ಮೊನ್ನೆಯ ಪದ್ಧತಿಯೆಂದು ಭಾವಿಸಬಾರದು. ಪುರಂದರ ದಾಸರ ಕಾಲಕ್ಕೇ ಇದು ಹಳೆಯದಾಗಿತ್ತೆಂದು ತೋರುತ್ತದೆ. 'ಮಡದಿ ಹುಟ್ಟಿದ ಮನೆಯಲಿರುವಾತ ಮೂರ್ಖ' ಎಂದು ಅವರ ಬಾಯಿಂದ ಬರಬೇಕಾದರೆ ಅದು ಕವಿತೆಯ ಕಲ್ಪನೆಯಲ್ಲ; ನೈಜವಾದ ಅನುಭವವೇ ಸರಿ. ಸೊಸೆ ಮಾವನ ಮನೆ ಸೇರುವುದರ ಮೊದಲೇ ಅಳಿಯ ಮಾವನ ಮನೆ ಸೇರುವ ವ್ಯತಿರಿಕ್ತ ಪರಿಸ್ಥಿತಿ ಒಂದಲ್ಲ ಒಂದು ಬಗೆಯಾಗಿ ಅಗತ್ಯ ಬಿದ್ದೋ, ಮೇಲು ಬಿದ್ದೋ ಬರುತ್ತದೆ. ಇಷ್ಟೆಲ್ಲವನ್ನು ಹಿನ್ನಲೆಯಾಗಿಟ್ಟು ಕೊಂಡು, ಈಗ ಹುಸಿಮುನಿಸು ಹೇಗೆ ಅಳಿಯನನ್ನು ಕಾಡಿಸಿ, ತನ್ನ ಸರದಿಯ ಮೇಲೆ ಅವನ ಅತ್ತೆ ಮಾವಂದಿರನ್ನು ಗೋಳು ಹೊಯ್ದುಕೊಳ್ಳುತ್ತದೆ ಎನ್ನುವುದನ್ನು ಕಾಣಬಹುದು. ಇದೊಂದು ಬಿಡಿಸಲಾರದ ಸಮಸ್ಯೆ; ಸಿಕ್ಕು ಸಿಕ್ಕಾದ ಗಂಟು. ಆದ್ದರಿಂದ ಮೇಲೆ ಸೂಚಿಸಿರುವ ಅಳಿಯಂದಿರ ಪರಿಸ್ಥಿತಿಯ ಒಂದೊಂದರಲ್ಲಿಯೂ ಕಂಡುಬರುವ ಇದರ ಚಿಹ್ನೆಯನ್ನು ಒಂದೋ ಎರಡೋ ಘಟನೆಗಳ ಆಧಾರದ ಮೇಲೆ ವಿಚಾರಮಾಡಬಹುದು.

ಒಂದೇ ಊರಿನ ಅಳಿಯನಾದರೆ ಅವನು ಪ್ರತ್ಯೇಕವಾಗಿ ಒಂದು ಕೊಟಡಿ ಯಲ್ಲಿರಬಹುದು; ಇಲ್ಲವೆ, ತಂದೆತಾಯಂದಿರ ಮನೆಯಲ್ಲಿಯೆ ಇರಬಹುದು. ಕೊಟಡಿ ಯಲ್ಲಿ ಇದ್ದದ್ದಾದರೆ ಬಲು ಸೊಗಸು. ಮದುವೆಯಾಗಿ ಒಂದು ವಾರವೊ, ಎರಡು ವಾರವೊ ಆಗಿರಬಹುದು: ಆಗಲೆ ಅಳಿಯದೇವರು ಮೊದಲುಬಾರಿ ಸಂಜೆಯಲ್ಲಿಯೊ, ತಪ್ಪಿದರೆ ಹವ ತಂಪಾಗಿದ್ದರೆ ಹಗಲಿನಲ್ಲಿಯೊ ಮಾವನ ಮನೆಗೆ ಬಿಜಯಮಾಡುವು ದುಂಟು. ಅವನು ಬರುವುದೇ ತಡ ಮನೆಮಂದಿಯೆಲ್ಲಾ ನಾಚಿ ಅಡಗುವರು. ಭಾವಮೈದುನದಿರೊ, ಮಾವನವರೊ ಮುತುವರ್ಜಿ ವಹಿಸಿ ಉಪಚಾರ ಮಾಡು ತ್ತಾರೆ. ಹಾಗೂ ಹೀಗೂ ದಾಕ್ಷಿಣ್ಯದ ಸೆರೆಯಲ್ಲಿ ಸಿಕ್ಕಿ ಅವರ ಉಪಚಾರವನ್ನೆಲ್ಲ ಸಹಿಸಿಕೊಂಡು ಆ ಬಾರಿ ಹಿಂದಿರುಗಬೇಕಾಗುತ್ತದೆ. ಹೊರಟುಹೋಗುವ ಆತುರದಲ್ಲಿ ಹೆಂಡತಿಯ ಮುಖ — ಮುಖವೇಕೆ ಕಣ್ಣಾದರೂ, ಓರೆಬಾಗಿಲಿನ ಕಡೆಯಿಂದಲೊ ಕಿಟಿಕಿಯ ಕಿಂಡಿಯಿಂದಲೊ ಕಂಡುಬಂದರೆ ಅಷ್ಟೇ ಅವನ ಪಾಲಿನ ಪುಣ್ಯ. ಎಷ್ಟೇ ತೃಪ್ತಿಯನ್ನು ನಟಿಸಿದರೂ ಅವನಲ್ಲಿ ಅತೃಪ್ತಿ ಇನ್ನೂ ಮಬ್ಬು ಮಬ್ಬಾಗಿರುತ್ತದೆ. ಹುಸಿ ಮುನಿಸು ಕೆರಳಿರುವುದಿಲ್ಲ; ಇನ್ನೂ ಅರಳಿರುವುದಿಲ್ಲ. ಮೊಗ್ಗು ಮೊಗ್ಗಾಗಿರು ತ್ತದೆ. ಅದಕ್ಕೆ ಇನ್ನೂ ತೀವ್ರತೆ ತೀಕ್ಷ್ಣತೆಗಳು ಬಂದಿರುವುದಿಲ್ಲ. ಆದ್ದರಿಂದ ಅದು

ಅವರಿವರ ಗಮನವನ್ನು ಎಳೆಯಲು ಅಶಕ್ತವಾಗಿರುತ್ತದೆ. ಕಡೆ ಕಡೆಗೆ ಅಳಿಯನಿಗೂ ಅದು ಮುನಿಸೆಂದು ಎನ್ನಿಸುವುದಿಲ್ಲ. ಅವನು ಕೊಟಡಿಯನ್ನು ತಲಪಿ ಸ್ವಲ್ಪ ಆಲೋಚನೆ ಮಾಡಲು ತೊಡಗಿದರೆ, ತನ್ನ ನಿರಾಶೆಗೆ ತಾನೇ ಸಮಾಧಾನ ಮಾಡಿಕೊಳ್ಳುತ್ತಾನೆ. 'ಪಾಪ. ಮಾವನವರಿಗೆ ಅಭಿವಾಸವಿಲ್ಲದೆ ಇಲ್ಲ. ನಾನಿನ್ನೂ ಹೊಸದು. ಹುಡುಗಿಗೆ ಬಹಳ ನಾಚಿಕೆ. ಅವಳಲ್ಲಿ ಏನೂ ತಪ್ಪಿಲ್ಲ' ಎಂದು ಅವನ ಮನಸ್ಸು ಅವನಿಗೇ ಬುದ್ಧಿ ಹೇಳುತ್ತದೆ. ಈ ತಾಳ್ಮೆ ಸಹನೆಗಳು ಎರಡನೆಯ ಬಾರಿ ದಯಮಾಡಿಸುವ ಹೊತ್ತಿಗೆ ಬಲುಮಟ್ಟಿಗೆ ಕಡಿಮೆಯಾಗಿರುತ್ತವೆ. ಮೂರು ನಾಲ್ಕನೆಯ ಬಾರಿಗಂತೂ ಹೇಳಲೇ ಬೇಕಾಗಿಲ್ಲ. ಈ ವೇಳೆಗಾಗಲೆ ಹಿರಿಯರು ಎನ್ನಿಸಿಕೊಂಡವರು ಅಳಿಯನ ಹೃದಯವನ್ನು ಅರಿತು ವರ್ತಿಸಿದರೆ ಮೇಲು. ಇಲ್ಲದಿದ್ದರೆ ಅಳಿಯನ ಮುಖ ಸಪ್ಪೆಯಾಗುವುದು ಹಾಗಿರಲಿ; ನೋಡಲು ಹೆದರಿಕೆಯೇ ಆಗುತ್ತದೆ. ಬಹಿರಂಗದಲ್ಲಿ ಬಣ್ಣ ಕಾಣದೆ ಹೋಗಬಹುದು. ಅಂತರಂಗವೆಲ್ಲ ತಕತಕನೆ ಕುದಿಯುವ ಮಲ್ಲಶಾಲೆಯಾಗಿರುತ್ತದೆ. ಜ್ವಾಲಾಮುಖಿ ಎಂದರೂ ಸಲ್ಲುತ್ತದೆ. ಹಾಗೂ, ಅರಿಯದೆಯೋ, ಅರಿತೂ ಅರಿತೂ ಶಾಸ್ತ್ರ ಶಾಸ್ತ್ರವೆಂದು ಬಾಯಿಬಿಡುತ್ತಲೊ ಹಿರಿಯರು ಅಳಿಯನಿಗೂ ಮಗಳಿಗೂ ಭೇಟಿಯಾಗುವುದಕ್ಕೆ ಅವಕಾಶಕೊಡದೆ ಹೋದರೆ ಪ್ರಮಾದವೇ ಆದೀತು. ಅಳಿಯನ ಅಸಹನೆ ಸಲಸಲಕ್ಕೂ ಹೆಚ್ಚು ಹೆಚ್ಚಾಗುತ್ತ ಹೋಗುತ್ತದೆ. ಅವನ ಮಾತು ಕತೆ ಹುಚ್ಚುಹುಚ್ಚಾಗುತ್ತದೆ. ನಗುಮುಖ ಗಂಟುಮುಖವಾಗುತ್ತದೆ. ಮಾವನ ಮನೆಯ ದಾರಿ ಮರೆಯದಿದ್ದರೂ ಅತ್ತ ಮುಖ ತಿರುಗಿಸಿ ನೋಡಲೂ ಮನಸ್ಸು ಬರುವುದಿಲ್ಲ. ಇಷ್ಟೇ ಅಲ್ಲ. ಅವನ ಮನಸ್ಸಿನಲ್ಲಿ 'ಥೀ! ಇವರೆಂಥಾ ಜನಗಳು. ನನ್ನ ಕೈ ಹಿಡಿದವಳೂ ಒಂದು ಮೃಗವೇ ಸರಿ. ಯಾರಿಗಾದರೂ ನನ್ನ ಸಂಕಟ ಗೊತ್ತಾಗಬಾರದೆ? ಎಲ್ಲ ಬಾಯಿಬಿಟ್ಟು ಹೇಳುವುದಕ್ಕಾದೀತೆ? ಏನಪ್ಪ, ಇವರು, ಇಪ್ಪತ್ತನೆಯ ಶತಮಾನದ ಜನಗಳೆ?' ಎಂದು ಚಿಂತಿಸಿ ಚಿಂತಿಸಿ ಕಡೆಗೆ ಆಕ್ರೋಶ ಬಂದಂತಾಗುವುದು. ಆದರೆ, ಇದು ನಿಜವಾಗಿ ಆಕ್ರೋಶವೂ ಅಲ್ಲ. ಆಟೋಪವೂ ಅಲ್ಲ. ದೈವವಶಾತ್, ಪುನಃ ಮಾವನ ಮನೆಯ ಕಡೆ ಹೋದಾಗ ಹೆಂಡತಿಯಾದವಳು ಬಾಗಿಲಿನಲ್ಲಿಯೇ ನಿಂತಿದ್ದು, ಯಜಮಾನರನ್ನು ಕಂಡಕೂಡಲೆ ಒಳಗೆ ಹೋದರೆ ಸಾಕು, ಅವನ ಆಕ್ರೋಶವೆಲ್ಲ ಅಲ್ಲಿಯೇ ಬಯಲಾಗುತ್ತದೆ. "ನಾನು ಅಂದು ಅಂದುಕೊಂಡದ್ದು ಶುದ್ಧ ತಪ್ಪು. ಅವಳಿಗೆ ನಿಜವಾಗಿಯೂ ನನ್ನಲ್ಲಿ ಪ್ರೇಮವುಂಟು. ಇನ್ನೂ ನಾಚಿಕೆ. ಅಷ್ಟೆ. ಇಲ್ಲದೆ ಹೋದರೆ ನನ್ನನ್ನೇ ಎದುರುನೋಡುತ್ತಿದ್ದಳೆ?" ಎಂದು ಸಮಾಧಾನಮಾಡಿಕೊಳ್ಳುತ್ತಾನೆ. ಅಥವಾ ಅಂದೇ ಅವಳು ಅವನ ಊಟವಾದ ಮೇಲೆ, ಯಾರೂ ಇಲ್ಲದುದನ್ನು ನೋಡಿಕೊಂಡು, ಅಡಿಕೆ ಎಲೆಯನ್ನು ತಂದುಕೊಟ್ಟರೆ

ಅವನ ಬಿಟ್ಟದಷ್ಟು ಸಿಟ್ಟೆಲ್ಲಾ ಹಾರಿಹೋಗುತ್ತದೆ. ಅವಳು ಮಾತಾಡದೆ ಹೋದರೂ ಚಿಂತೆಯಿಲ್ಲ. ನನ್ನ ಹೆಂಡತಿಗೆ ನನ್ನ ಮೇಲೆ ದೇವರಾಣೆಗೂ ಅಭಿಮಾನವಿದೆ ಎಂದು ಮನ್ಸಿಗೆ ಸಮಾಧಾನ ಬರುತ್ತದೆ. ಇದಕ್ಕೇ ಹುಸಿಮುನಿಸು ಎನ್ನುವುದು. ಇದಾದ ಬಳಿಕ ಅಳಿಯನಿಗೆ ಪ್ರಿಯೆಯೊಂದಿಗೆ ಮಾತನಾಡಬೇಕೆಂಬ ಹುಚ್ಚು. ಅನಂತರ ಏಕಾಂತದ ಹುಚ್ಚು. ಹೀಗೆಯೇ ಕಾಲ ಕಳೆದಂತೆ ಹಿರಿಯರು ಒಂದೊಂದು ವ್ಯತ್ಯಾಸ ವನ್ನೂ ಗಮನಿಸಿ ಸೂಕ್ಷ್ಮ ತಿಳಿದು ಸುಮ್ಮನಾದರೆ ತೀರಿತು. ಇಲ್ಲವೇ, ಈ ಮುನಿಸು ಬೇಗ ಬರುತ್ತದೆ. ಅದಕ್ಕ ಬೇರಾವ ಮದ್ದೂ ಇಲ್ಲ: ಮನದನ್ನೆ ಮುಂದೆ ಬಂದರೆ ಮುಗಿಯಿತು; ಮಬ್ಬೆಲ್ಲ ಮಾಯವಾಗುತ್ತದೆ.

ಇನ್ನು, ಬೇರೆ ಊರಿನಲ್ಲಿರುವ ಅಳಿಯನ ವರ್ತನೆಯನ್ನು ಗಮನಿಸೋಣ. ಇಲ್ಲಿ ಪತ್ರ ಬರೆಯುವುದು ಮುಖ್ಯ ಸಾಧನ. ಮೊದಮೊದಲು ಪತ್ರವ್ಯವಹಾರ ಮಾವನಿಗೂ ಅಳಿಯನಿಗೂ ಆಗುವುದುಂಟು. ಅನಂತರ ಕಂಡೂ ಕಾಣದಂತೆ ಅಳಿಯನ ಲೇಖನಿ ಚಿತ್ತದ ಚಾಂಚಲ್ಯಕ್ಕೆ ಮಾರುಹೋಗಿ, ಪ್ರಿಯೆಯ ಕಡೆ ತಿರುಗುತ್ತದೆ. ಆ ಓಲೆಗಳಿಗೆ ಸಕಾಲದಲ್ಲಿ ಪ್ರತ್ಯುತ್ತರ ಬಂದರೆ ಅವನ ಮನಸ್ಸು ಸಮಾಧಾನವಾದೀತು. ಅನಂತರ ಪ್ರತ್ಯುತ್ತರ ಬಂದರೆ ಸಾಲದು; ಸದುತ್ತರ ಬರಬೇಕು. ಇಲ್ಲಿ ಬರುವ ಟಪ್ಪಾಲು ಬರಿಯ ಪತ್ರವಲ್ಲ. ಪ್ರೇಮಿಗಳಿಬ್ಬರ ಹೃದಯಾಂತರಾಳದ ವಿವಿಧ ಭಾವನೆಗಳ ಪ್ರತಿಕೃತಿ. ಒಂದೊಂದು ಅಕ್ಷರಕ್ಕೂ ಜೀವವುಂಟು. ಒಂದೊಂದು ಮಾತಿಗೂ ಬೆಲೆಯುಂಟು. ಈ ಸಂದರ್ಭದಲ್ಲಿ ಯಾರೊಬ್ಬರು ಸ್ವಲ್ಪ ತಡಮಾಡಿದರೂ ಸರಿಯೆ, ಮೈಲುಗಳಾಚೆ ಇರುವ ಹೃದಯದ ತಳಮಳವನ್ನು ಭಗವಂತನೊಬ್ಬನೇ ಬಲ್ಲ. ಅಳಿಯನಿಗೂ ಮಾವ ನಿಗೂ ನೆಪಮಾತ್ರಕ್ಕೆ ತಿಂಗಳಿಗೊಮ್ಮೆಯೊ, ಎರಡು ತಿಂಗಳಿಗೆ ಒಮ್ಮೆಯೊ ಪತ್ರ ಬರುತ್ತದೆ. ಎಷ್ಟೋ ಸಾರಿ ಅದಕ್ಕೂ ಅಭಾವ ಬಂದು ಹೆಂಡತಿಯ ಕಾಗದದೊಂದಿಗೇ ಮಾವನವರಿಗೂ ಒಂದು ಚೀಟಿ ಬರುವುದುಂಟು. ಪ್ರೇಯಸಿಗಾದರೋ ಪ್ರತಿವಾರವೂ ಲಕ್ಕೋಟೆ ಬರುತ್ತದೆ. ಅದರ ಮೇಲೆ 'Strictly Confidential' (ಜೋಕೆ! ಗುಟ್ಟು!) ಎಂಬ ಹುಷಾರ್ ಬೇರೆ. ಈ ಅಳಿಯ ಊರಿಂದ ಊರಿಗೆ ದಯಮಾಡಿಸಿದಾಗ ಅವನ ಪಾಡು ಅಷ್ಟಿಷ್ಟಲ್ಲ. ಕಾಗದದಲ್ಲಿ ಪ್ರಿಯೆಯಾದವಳು ಎಷ್ಟೇ ನಿಸ್ಸಂಕೋಚದ ಪ್ರಕೃತಿ ಯವಳಾಗಿದ್ದರೂ, ತಂದೆತಾಯಿಯರ, ಒಡಹುಟ್ಟಿದವರ ಸಮ್ಮುಖದಲ್ಲಿ ಅಷ್ಟು ಸದರ ವಹಿಸಲು ಸಾಧ್ಯವಿಲ್ಲ. ಆಗ ಅಳಿಯನಿಗೆ ಕೋಪವೂ ಇಲ್ಲ; ಸಮಾಧಾನವೂ ಇಲ್ಲ. ಇಂಥ ಸಂದರ್ಭದಲ್ಲಿ ಅಳಿಯನಿಗೆ ಹೊಳೆಯುವ ಉಪಾಯ ಒಂದೇ ಒಂದು. ಪ್ರಿಯೆ ಯನ್ನು ಯಾವುದಾದರೂ ನೋಟಕ್ಕೆ ಕರೆಯುವುದು. ಇಲ್ಲವೆ ಸಂಜೆ ತಿರುಗಾಡಿಕೊಂಡು ಬರಲು ಕರೆಯುವುದು. ಈ ಅಭೀಷ್ಟಕ್ಕೆ ತಕ್ಷಣ ಸಮ್ಮತಿ ಬಂದರೆ ಅಳಿಯನಿಗೆ ಸ್ವರ್ಗ

ವೆನ್ನುವುದು ಬೇರೆ ಇಲ್ಲ ಎನ್ನಿಸಿ ಆನಂದವಾಗುತ್ತದೆ. ಹಿಂದು ಮುಂದೆ ಆಲೋಚನೆ ಮಾಡುತ್ತ ಕಾಲವಿಳಂಬವಾದರೆ ತಕ್ಷಣವೇ ಮುನಿಸು ಕಾದಿರುತ್ತದೆ. 'ನನ್ನ ಮೇಲಿಷ್ಟು ಗುಮಾನಿಯೆ? ನಾನೇನು ಅಧಮನೆ? ಅಯೋಗ್ಯನೆ? ಇಂಥ ಅವಮಾನ ನನ್ನ ಶತ್ರುಗಳಿಗೂ ಬೇಡ. ನಾಳೆಯೇ ನಾನು ಹೊರಡಬೇಕು. ಇಲ್ಲಿ ಇರುವುದೂ ಒಂದೆ, ಎಲ್ಲಿಯಾದರೂ ಕಾಡಿನಲ್ಲಿ ಇರುವುದೂ ಒಂದೆ' ಎನ್ನಿಸುತ್ತದೆ. ದೇವರ ದಯದಿಂದ ಹೆಂಡತಿಯೇನಾದರೂ ನಗುನಗುತ್ತ ತನ್ನ ಮುಂದೆ ಸುಳಿದು, ಸಮ್ಮತಿ ಸೂಚಿಸಿ, ಬಯಕೆ ನೆರವೇರಿಸಿದರೆ ಮುನಿಸು ಮಟ್ಟಮಾಯವಾಗುತ್ತದೆ. ಕಟ್ಟಿಟ್ಟಿದ್ದ ಹಾಸಿಗೆ ಗಂಟನ್ನು ಬಿಚ್ಚಿ, ಇನ್ನೂ ಒಂದೆರಡು ವಾರಗಳು ಅಲ್ಲಿಯೇ ಇದ್ದು ಹೋಗಬೇಕು ಎನ್ನಿಸುತ್ತದೆ. ಈ ಹೊತ್ತಿಗೆ ಅತ್ತೆ ಮಾವಂದಿರ ಸಲಹೆ ಬಂದರಂತೂ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತೆ.

ಇನ್ನು ಮಾವನ ಮನೆಯಲ್ಲಿಯೇ ಇರುವ ಅಳಿಯನ ಪಾಡು: ಇವನ ಸಂಕಟವೇ ಒಂದು ರೀತಿ. ಮೂಗು ನೋವೆಂದರೂ ಸಲ್ಲುವುದು. ಇವನಿಗೆ ಹಿಂದೆ ಹೇಳಿದ ಅಳಿಯಂದಿರ ಹಾಗೆ ಸಂಪೂರ್ಣ ಸ್ವಾತಂತ್ರ್ಯವಿರುವುದಿಲ್ಲ. ಅವರುಗಳಂತೆ ಇವನು ದಿನ ನೋಡಿಕೊಂಡು ಬರಬೇಕಾದ ಅಗತ್ಯವಿಲ್ಲ. ಅಂತೆಯೇ ಊರಿಂದ ಊರಿಗೆ ಪತ್ರ ಬರೆಯಬೇಕಾದ ಪ್ರಸಂಗವೂ ಇಲ್ಲ. ಅಳಿಯಂದಿರಿಗೆ ಈ ಪತ್ರ ಬರೆಯುವ ಆವಶ್ಯಕತೆ ತಪ್ಪಿದರೆ ಅರ್ಧ ಹೊರೆ ತಪ್ಪಿದಂತೆ. ಅಂಚೆವೆಚ್ಚದ ಮಾತು ಹೆಚ್ಚಲ್ಲ. ಆದರೆ ಪ್ರಣಯ ಪತ್ರವನ್ನು ಬರೆಯುವುದು ಸುಲಭಸಾಧ್ಯವಲ್ಲ. ಅದರಲ್ಲಿಯೂ ಮದುವೆಯಾದ ಅನಂತರದಲ್ಲಿ, ಸಂಸಾರದ ಕಾರ ಕ್ಷಾರಗಳೊಂದನ್ನೂ ಕಾಣದೆ ಇರುವಲ್ಲಿ, ಸಂಪೂರ್ಣವಾಗಿ ಪ್ರೇಮದ ಪ್ರಸಂಗವನ್ನೇ ಕುರಿತು ಸಂಪುಟಗಳಷ್ಟು ಬರೆಯಬೇಕಾದರೆ ಬಲು ಕಷ್ಟ. ಅದೊಂದು ಪ್ರಣಯ ಪರೀಕ್ಷೆ! ಮಾವನ ಮನೆಯ ಅಳಿಯನಿಗೆ ಇಂಥ ತಿಂಡಾಟವಿಲ್ಲ. ದಿನ ಬೆಳಗಾದರೆ ಒಂದಲ್ಲ ಒಂದು ರೀತಿಯಲ್ಲಿ ಹೆಂಡತಿಯ ಮುಖ ನೋಡಬಹುದು. ನಾಚಿಕೆ ಹೆಚ್ಚಾದ ಹೆಣ್ಣಾದರೆ ಹೊಂಚು ಹಾಕಿಯಾದರೂ ಕಂಡು ಕೃತಾರ್ಥನಾಗಬಹುದು. ಆದರೆ ಅವನಿಗೆ ಬರುವ ಕಷ್ಟವೆಂದರೆ ತಾನು ಹೆಂಡತಿಯನ್ನು ಕಂಡು ಹೇಗೆ ಮಾತನಾಡಿಸುವುದು ಎನ್ನುವ ಪ್ರಶ್ನೆ. ಚಪಲ ಚಿಟಿಕೆಹಾಕುತ್ತಿರುತ್ತದೆ. ಚಾಂಚಲ್ಯ ಚಟವಾಗಿ ಪರಿಣಮಿಸಿರುತ್ತದೆ. ಹೆಚ್ಚು ದುಡುಕುವ ಹಾಗಿಲ್ಲ. ಏನು ಮಾತು ಬರುತ್ತದೊ ಎಂಬ ಭಯ. ಇಲ್ಲದೆಹೋದರೆ ಹೃದಯಕ್ಕೆ ಹಿತವಿಲ್ಲ. ಅಂತು ಇಂತೂ, ಊಹಿಸಲಾರದ ಉಭಯಸಂಕಟ. ಆದರೆ ಈ ಅಳಿಯನಿಗೆ ಮತ್ತೊಂದು ಸುಕೃತವುಂಟು. ಎಂಥವನಿಗಾದರೂ ಮದುವೆಯಾದ ಹೊಸತರಲ್ಲಿ ಅಡಿಕೆ ಎಲೆಯ ರುಚಿ ಹೆಚ್ಚು, ಸ್ವಾರಸ್ಯ ಹೆಚ್ಚು. ಅವನು ಎಷ್ಟೇ ಮಂಕ

ನಾದರೂ ಆಗ ರಸಿಕಚಕ್ರಿಯಾಗುತ್ತಾನೆ. ಮಾವನ ಮನೆಯ ಅಳಿಯನಿಗೆ ಹೆಂಡತಿಯ ಕೈಯಿಂದ ಮಡಿಸಲ್ಪಟ್ಟ ಅಡಿಕೆ ಎಲೆ ನಿತ್ಯವೂ ಬರುತ್ತದೆ. ಒಮ್ಮೊಮ್ಮೆ ಬಂದ ಹೊಸತರಲ್ಲಿ ಅದನ್ನೇ ನೋಡುತ್ತ ಬಗೆದೂರ ಸಾಗಿ ತಿನ್ನುವುದನ್ನೇ ಮರೆಯುವ ಪ್ರಸಂಗ ಬಂದರೂ ಬರಬಹುದು. ಆಮೇಲೆ ಅವರಿವರು ತಂದ ಅಡಿಕೆ ಎಲೆ ಅಷ್ಟು ರುಚಿಸುವುದಿಲ್ಲ. ಅವಳೇ ತಂದು ಕೊಡಬಾರದೆ ಎನ್ನಿಸುತ್ತದೆ. ಹುಡುಗಿ ನಾಚಿಕೆಯಿಂದ ಹಿಂದೆಗೆಯಬಹುದು. ಆದರೆ ಅದು ಅಳಿಯನಿಗೆ ಸರಿಬೀಳುವುದಿಲ್ಲ. ಆಶಾಭಂಗವಾದರೆ ಸಹಿಸಲಸದಳವಾದ ಸಂಕಟವಾಗುತ್ತದೆ. ಏನೇನೊ ನಿರ್ಧರಮಾಡಿಕೊಳ್ಳುತ್ತಾನೆ. ತನ್ನಲ್ಲಿಯೇ ಉರಿದು ಉರಿದು ಬೀಳುತ್ತಾನೆ. ಕಡೆಗೆ ತನ್ನ ಆಕಾಂಕ್ಷೆಯನ್ನು ಹೇಳಿಬಿಡೋಣವೆ ಎನ್ನಿಸುತ್ತದೆ. ನಾಲಿಗೆಯ ತುದಿಯವರೆಗೂ ಮಾತು ಬರುತ್ತದೆ. ಮರುಕ್ಷಣದಲ್ಲಿಯೇ ನಾಚಿಕೆಯುಂಟಾಗಿ ಮರೆಮಾಚುವನು. 'ಹಾಳು ನಾಚಿಕೆ ಯಾಕೆ ಹುಟ್ಟಿಬಂತೋ ನನ್ನ ಗೋಳು ಹೊಯ್ದುಕೊಳ್ಳುವುದಕ್ಕೆ' ಎಂದು ಪೇಚಾಡಿಕೊಳ್ಳುವನು. ಇಷ್ಟಾದರೂ ಬಯಕೆ ಫಲಿಸದಿದ್ದರೆ ಅಡಿಕೆ ಎಲೆಯ ತಟ್ಟೆಯ ಕಡೆ ದೃಷ್ಟಿ ಬೀಳದೆ ಹೋಗಬಹುದು. ದೈವವಶಾತ್ ಮಾರನೆಯ ದಿನ ಹೆಂಡತಿಯೇ ನೇರವಾಗಿ ಬಂದು ಅಡಿಕೆ ಎಲೆಯನ್ನು ತಂದುಕೊಟ್ಟರೆ ಹಿಂದಿನ ದಿನದ ಮುನಿಸೆಲ್ಲ ಗುರುತಿಲ್ಲದ ಹಾಗೆ ಹೊರಟುಹೋಗುವುದು. ಅಂದು ಎಲ್ಲೂ ಇಲ್ಲದ ವಿನಯ, ವಿಶ್ವಾಸ ಕೂಡಿಬರುತ್ತವೆ. ಅವರಿವರೊಡನೆ ಮಾತು ಕತೆಯೇನು! ತುಂಬಿದ ಹೊಳೆಯಂತೆ ಹರಟೆಯೇನು! ಮಿತಿಯಿಲ್ಲ; ಮೇರೆಯಿಲ್ಲ. ಮನಸ್ಸು ಮಕರಂದವಾಗುತ್ತದೆ.ಬಾಳು ಬೆಲ್ಲವಾಗುತ್ತದೆ. ಈ ಆಶೆ ಪೂರೈಸುವ ವೇಳೆಗೆ ಬೇರೊಂದು ಬಯಕೆ ಬಲಿಯುತ್ತದೆ. ಗಂಟೆಗಳ ಕಾಲವಲ್ಲದಿದ್ದರೂ ಹಲವು ನಿಮಿಷಗಳಾದರೂ ತಾನೂ ನಲ್ಲೆಯೂ ಕೂತುಕೊಂಡು ಹರಟಬೇಕೆಂಬ ಚಪಲ. ಊರಿಂದ ಊರಿಗೆ ಬಂದ ಅಳಿಯನಿಗೆ ಇದರ ಸೌಲಭ್ಯವುಂಟು. ಒಂದೇ ಊರಿನಲ್ಲಿದ್ದು ದಿನಬಿಟ್ಟು ದಿನ ಬರುವ ಅಳಿಯನಿಗೂ ಇದಕ್ಕೆ ಅವಕಾಶವುಂಟು. ದಿನವೆಲ್ಲಾ, ವರ್ಷವೆಲ್ಲಾ ಮಾವನ ಮನೆಯಲ್ಲಿಯೇ ಇರುವವನಿಗೆ ಈ ಬಗೆಯಾದ ಏಕಾಂತಕ್ಕೆ ಹಕ್ಕುಂಟೆ ಇಲ್ಲವೆ ಎಂಬ ಪ್ರಶ್ನೆ ದೊಡ್ಡದು. ಅಳಿಯನಿಗೂ ಆತಂಕ; ಮಗಳಿಗೂ ಆತಂಕ. ಸಮಯಕಾಯಬೇಕು; ಗ್ರಹಬಲ ಕೂಡಿಬರಬೇಕು. ಬಯಕೆ ನೆರವೇರಿಯೂ ನೆರವೇರದಂತಿರಬೇಕು. ಇನ್ನೊಂದು ಸ್ವಾರಸ್ಯವಾದ ಸಂಗತಿ — ಮಾವನ ಮನೆಯ ಅಳಿಯನ ಹುಸಿಮುನಿಸು ಬರುವುದು ಬೇಗ; ಹೋಗುವುದೂ ಬೇಗ. ಯಾವುದಾದರೂ ಒಂದು ಕಾರಣಕ್ಕಾಗಿ ಮುನಿಸು ಬಂತೆಂದು ಇಟ್ಟುಕೊಳ್ಳೋಣ. ಕೂಡಲೆ ಅವನ ಮನಸ್ಸೆಲ್ಲ ಬಟ್ಟಬಯಲಾಗುವುದು. ಮಾತೂ ಬೇಕಿಲ್ಲ; ಕತೆಯೂ ಬೇಕಿಲ್ಲ. ತುಂಬಿದ ಮನೆ ಶೂನ್ಯ; ನಂಬಿದ ನಂಟರೂ

ಕೋಟಲೆ. ಕಡೆ ಕಡೆಗೆ ಆ ಮುನಿಸೆಲ್ಲಾ ಊಟದ ಮೇಲೆ ಹೋಗುತ್ತದೆ. ತಿಂಡಿ ಬೇಡ; ತೀರ್ಥಬೇಡ. ಊಟಬೇಡ; ಉಪಚಾರಬೇಡ. ಎಲ್ಲವನ್ನೂ ನಿರಾಕರಿಸಿ ನಿರಾಶೆಯ ನೋವನ್ನು ಸಹಿಸಲಾರದೆ ಸಂಕಟಪಡುತ್ತಾನೆ. ಅಳಿಯ ಜಾಣನಾದರೆ ತನ್ನ ನಿರಾಕರಣೆಗೆ ದೇಹಾಲಸ್ಯದ ನೋಗನ್ನು ಗಂಟು ಹಾಕುವುದುಂಟು. ಈ ಅನಂತ ಶೂನ್ಯತೆ ಮಾಯವಾಗಬೇಕಾದರೆ ಹೆಂಡತಿಯಿಂದಲ್ಲದೆ ಬೇರೆ ಯಾರಿಂದಲೂ ಸಾಧ್ಯವಿಲ್ಲ. ಹೆಂಡತಿಯ ಉಪಚಾರವಾಗುವುದೇ ತಡ, ಅದರ ಸೋಂಕೂ ಇರುವುದಿಲ್ಲ. 'ತಾನು ಸರ್ವಾಪರಾಧಿ. ಎಂಥ ತಪ್ಪುಮಾಡಿದೆ' ಎಂಬ ಪಶ್ಚಾತ್ತಾಪದ ಬುದ್ಧಿ ಬರುತ್ತದೆ. ಬೇರೆಯವರ ಮುಂದೆ ಹೇಳುವುದಕ್ಕೆ ಹಿಂದೆಗೆದರೂ ಹೆಂಡತಿಯೊಡನೆ ತನ್ನ ದುಃಖವನ್ನೆಲ್ಲ ತೋಡಿಕೊಂಡು ಸಮಾಧಾನ ಮಾಡಿಕೊಳ್ಳುತ್ತಾನೆ. ನಲ್ಲೆಯ ಪ್ರಫುಲ್ಲವದನದ ಎದುರು ಮುನಿಸು ಹುಸಿಯಾಗುತ್ತದೆ.

ಹೀಗೆ ಹುಸಿಮುನಿಸು ಅಳಿಯನ ಹೃದಯದಲ್ಲಿ ಒಂದಲ್ಲ ಒಂದು ಬಗೆಯಾಗಿ ತನ್ನ ಅಧಿಕಾರವನ್ನು ಚಲಾಯಿಸುತ್ತದೆ. ಇದು ಜೀವಾವಧಿ ಇರತಕ್ಕುದಲ್ಲ. ಮದುವೆ ಮುಗಿದಿರಬೇಕು; ಒಸಗೆ ಇನ್ನೂ ಆಗದಿರಬೇಕು. ಈ ಅಂತರದಲ್ಲಿ ಇದರ ಪ್ರಭಾವವೇ ಪ್ರಭಾವ; ಬಿರುಸೇ ಬಿರುಸು. ಇದು ಸರ್ವಥಾ ಹಾನಿಕಾರಿಯಲ್ಲ; ಅನರ್ಥಸಾಧನವೂ ಅಲ್ಲ. ಕೇವಲ ಅಹಿತಕಾರಿ. ಅಷ್ಟೇ. ಇದಕ್ಕೆ ಬೆಲೆಯಿಲ್ಲ; ನೆಲೆಯಿಲ್ಲ. ನೋವಿಲ್ಲ; ಕಾವಿಲ್ಲ.

ಲೋಕದ ರೀತಿ ನೀತಿಗಳಾಗಲಿ, ಹಿರಿಯರ ನೇಮ ನಿಯಮಗಳಾಗಲಿ, ನೂತನ ವಧೂವರರ ಸುಖಸಂತೋಷಗಳ ನಡುವೆ ತಲೆಹಾಕಿಕೊಂಡು ಬಂದರೆ ಹುಸಿಮುನಿಸು ಬಲುಬೇಗ ಕರಗುತ್ತದೆ. ಕೈ ಹಿಡಿದ ತರಳೆಯ ಸುಳಿವಾಗಲಿ, ಆಕೆಯ ನಾಲ್ಕು ಲಲ್ಲೆವಾತುಗಳಾಗಲಿ, ಲಭಿಸಿದ ಕೂಡಲೆ ಹಿಮಾಲಯದಷ್ಟು ಬೃಹತ್ತರವಾಗಿದ್ದರೂ ಸೂರ್ಯನ ಎದುರಲ್ಲಿ ಕರಗಿ ನೀರಾಗುವ ಮಂಜಿನಂತೆ ತಕ್ಷಣವೇ ಉಪಶಮನವಾಗುತ್ತದೆ.

ಹುಸಿಮುನಿಸಿಲ್ಲದ ಅಳಿಯನಿಲ್ಲ. ನಸುನಾಚಿಕೆಯಿಲ್ಲದ ಹೆಣ್ಣಿಲ್ಲ. ಚಪಲವಿಲ್ಲದ ಹರೆಯವಿಲ್ಲ.

ಜಿ. ವರದರಾಜರಾವ್.

## ಒಲಿದಿಹೆನಾ ಬೆಳುದಿಂಗಳಿಗೆ

ಒಲಿದಿಹೆನಾ ಬೆಳುದಿಂಗಳಿಗೆ
ಮಂಗಳವಾಯ್ತುಹ ಕಂಗಳಿಗೆ.

ಮಲಗಿಹ ಸೂರ್ಯನ ಸವಿಗನಸು,
ಇದು ಕಾರಿರುಳಿನ ನಲ್‌ಮನಸು,
ಬಿಸಿಯೇ ಇಲ್ಲದ ಈ ಬೆಳಕು
ಗರಳಕೊರಳನಾವನ ತಳಕು ?

ಜಗವನು ತೋರುವ ಸೋಗಿದಕೆ
ಏನನೆಂಬೆನೀ ಸೋಜಿಗಕೆ !
ಎಳೆಯರ ಮಾತೊಳು ತಿಳಿವೆನಿತು
ಇದಕೂ ತೋರುವ ಗುಣವನಿತು.

ಚೆಂದಕ್ಕಿ ಮಾಮನ ತನಿಬೆಳಕೆ,
ಬಾ ಬೆಳುದಿಂಗಳೆ ಅಂಗಳಕೆ.
ನೀ ಬೆಳಗುವುದೇ ಬಲುಚೆಂದ
ನೀನಿಹುದೇ ನಮಗಾನಂದ.

ಪಿಸುಮಾತೊಳು ತಿರೆಗೇನೊರೆವೆ !
"ಅಮ್ಮಯ್ಯ, ನೀ ಬಲು ಚೆಲುವೆ."
"ಕೇಳುವರೇನೆಂಬರು, ಸದ್ದು !"
ನಿಮ್ಮಾ ಮಾತಿದು ಬಲುಮುದ್ದು.

ಬೆಳುದಿಂಗಳೆ ನೀ ಕಲೆಗಾರ,
ನೀ ತರುವೀ ಭ್ರಮೆ ಸುಕುಮಾರ,
ಬೆಣ್ಣೆಗಿಂತ ಮೆದುವಿದಿರ ಮಲೆ
ನಾಗಲೋಕದಂತಾಯಿತಿಳೆ.

ಮಿಂಚುವುದೆಂತಹ ಈ ಬಳ್ಳಿ
ಕಲ್ಪಲತೆಯನೇ ಹಿಂತಳ್ಳಿ!

ನಿತ್ಯದರೂಢಿಯ ಮನೆಯ ಸತಿ
ಎಂತು ಕಾಂಬಳಿಂದೆಮಗೆ ರತಿ !

ಬೆಳುದಿಂಗಳೆ, ದೇವರ ವರವೆ,
ನೀ ತರುವೀ ಸೊಗಕೇನೊರೆವೆ ?
ನೀ ಮದ್ದೆಲ್ಲರ ಬೇಸರಕೆ
ಕೊಳ್ಳಣ್ಣಾ ಈ ನುಡಿಹರಕೆ.

ಪು.ತಿ.ನ.

## ನಾಕ - ನರಕ

ಅವಳು ನಾಕ; ಅವಳು ನರಕ;
ನಾಕ
ಜತೆಯೊಳಿದ್ದರೆ !
ನರಕ
ದೂರಹೋದರೆ!

ಕುವೆಂಪು.

# ಈಶ್ವರ ವಚನಗಳು

೧. ತಾಯ ತೋಳಸಗಲಿದ ಕೂಸು ಹರಿದು ಬಂದ ಹಾವ ಹಿಡಿಯುವಂತೆ ನಿನ್ನ ಸ್ಮರಣೆಯಿಂದ ದೂರಸಾದ ನಾಸು ಪರಾರ್ಥಕ್ಕೆ ಮನಸ್ಸು ಮಾಡಿದೆಸಯ್ಯ. ಧನದ ಮದದಿಂದ ಕೊಬ್ಬಿ ಮಲೆತ ಸಿರಿವಂತಸೊಬ್ಬ ಹೊಟ್ಟೆಗಿಲ್ಲದೆ ಗೋಳಿಡುವ ದೀಸರನ್ನು ಕಡೆಗಣಿಸಿ ನೋಡುವಂತೆ ಭೋಗಸಂಕುಲಕ್ಕೆ ಮಾರುವೋದ ನಾಸು ನಿನ್ನ ಮರೆತುಬಿಟ್ಟೆಸಯ್ಯ. ತನ್ನ ನೆರೆಜೌವನದ ರೂಪಿಂಗೆ ತಾಸೆ ಸಂತಸಗೊಂಡು ಅಖಿಲಬ್ರಹ್ಮಾಂಡವನ್ನೆ ತಬ್ಬಿ ನಲಿಯುವ ಹೆಣ್ಣಿನಂತೆ ಧರೆಯ ಸುಖಕ್ಕೆ ತಲೆಗೊಟ್ಟ ನಾನು ಮಾಡಬಾರದ ಕಾರ್ಯವನ್ನ ಮಾಡಿ ಪಾಪಕ್ಕೆ ಎರವಾದೆನಯ್ಯ. ಮಗು ಕುರುಡೆಂದು ತಾಯಿ ದೂರುವಳೆ? ಹುಟ್ಟಿದುದು ಹೆಣ್ಣೆಂದು ತಂದೆ ನೋಯುವನೆ? ಎನ್ನೊಡೆಯ, ನೀನೆ ಹೇಳು. ತಾಯಾಗಿ ಬೆಳಸಿ ತಂದೆಯಾಗಿ ಕಾಪಾಡಿ ಮಾನವ ನನ್ನಾಗಿ ಮಾಡಿದೆಯಯ್ಯ ನೀನು. ನೀನಲ್ಲದಿನ್ನಾರು ಎನಗೆ! ಲೋಕದಾಟಕ್ಕೆ ಬೆದರಿ ಪಶ್ಚಾತ್ತಾಪಗೊಂಡು ನಿನ್ನ ಮರೆಬಂದಿಹೆನಯ್ಯ. ಒಲಿದು ಕಾಪಾಡು ಎನ್ನೊಡೆಯ, ಕಪ್ಪಡಿ ಸಂಗಮದೇವ!

೨. ತವರೂರಿನಿಂದ ಓಡಿ ಬರುವ ತಾಯಮೊಗವ ನೋಡಿ ಸಾಯ್ವೆನೆಂದು ಕಣ್ಣಿನಲ್ಲಿ ಜೀವಹಿಡಿದು ನಿಂತಮಗಳು, ತಾಯಿ ಊರ ಅಗಸೆಯನ್ನು ಬಂದು ಸೇರುವ ಮುನ್ನವೆ ಜಡದೇಹವನ್ನು ತ್ಯಜಿಸುವಂತೆ ನಿನ್ನ ಬರವಿಗಾಗಿ ನೆತ್ತಿಯಲ್ಲಿ ಉಸಿರು ಹಿಡಿದು ನಿಂತಿದ್ದೇನೆ. ಊರ ಅಗಸೆಯಲ್ಲಿದ್ದರೆ ಓಡಿಬರಬಾರದೆ? ಮನೆಯ ಬಾಗಿಲ ಬಳಿ ಬಂದಿದ್ದರೆ ಓ ಎನ್ನಬಾರದೆ ಅಯ್ಯ? ಎನ್ನೊಡೆಯ, ಕಪ್ಪಡಿ ಸಂಗಮ ದೇವ, ನೀನು ಬಾರದೆ ಇದ್ದರೆ ಎನ್ನಗತಿ ಅಗ್ನಿಗೆ ಆಹುತಿಯಾದ ಕರ್ಪೂರದಂತೆ.

೩. ಹರಿವ ನೀರಿನಂತೆ, ಬೀಸುವ ಮಂದಾನಿಲದಂತೆ ಅಯ್ಯ, ಎನ್ನ ಚಂಚಲ ಮನವು ನಿಂದಲ್ಲಿ ನಿಲ್ಲದು. ನಿನ್ನ ನಾಮದಲ್ಲಿ ಮನವನಿಟ್ಟು ಧ್ಯಾನಗೈಯುತಿರಲು ಸಮಯ ಸಾಧಿಸಿ ಪಂಚೇಂದ್ರಿಯಗಳೆನ್ನ ಸಿಕ್ಕಕಡೆಗೆ ಜಗ್ಗಿ ಗಾಸಿಗೊಳಿಸುತ್ತಿವೆ. ಬಂದು ಕಾಪಾಡಬಾರದೆ ಅಯ್ಯ ನಿನ್ನ ಮರೆಹೊಕ್ಕಿದೇನೆ. ಒಡೆಯ ಎಂದು ಕೂಗುತ್ತಿದೇನೆ; ಓಡಿ ಬಂದು ಎತ್ತಿಕೊಳ್ಳಬಾರದೆ, ಕಪ್ಪಡಿ ಸಂಗಮದೇವ.

೪. ಎನ್ನ ಜರೆದು ನುಡಿಯುವವರು ನುಡಿಯಲಿ ಅಯ್ಯ! ನಾನು ಮಾತ್ರ ಬಾಯಿ ಬಿಚ್ಚಲಾರೆ. ವಿಷವ ನುಂಗಿದ ನೀನೆ ಮಂದಹಾಸಂಗೈಯುತಿರಲು ಅನ್ಯರ

ದೂಷಿತಕ್ಕೆ ನಾನು ಬೆದರಲೇಕೆ ಅಯ್ಯ! ಗಾಣಕ್ಕೆ ತುತ್ತಾದ ಕಬ್ಬು ಸವಿರಸವ ಸುರಿಸುವಂತೆ ಹೆರವರ ಕೀಳ್ನುಡಿಗೆ ಎರವಾದ ನಾನು ಪರಿಶುದ್ಧಗೊಳ್ಳುವೆನಯ್ಯ. ಚಿತ್ತಶುದ್ಧಿಯಾಗಿ ಬಂದ ಎನ್ನ ಅಪ್ಪಿಕೊಳ್ಳಲಾರೆಯಾ, ಎನ್ನೊಡೆಯ ಕಪ್ಪಡಿ ಸಂಗಮದೇವ!

೫. ಮನೆಯ ಮಕ್ಕಳಿಗೆ ತೊಡಲು ಬಟ್ಟೆಯಿಲ್ಲ; ಉಣಲು ಅನ್ನವಿಲ್ಲ. ಇಂತಿದನು ನೋಡಿ ಮನೆಯ ಒಡೆಯ ನೀನೆ ಮೌನಗೊಂಡಿರುವಾಗ ನಾನೇಕೆ ಕಳವಳಗೊಳ್ಳಲಯ್ಯ? ಬಡತನದ ಹೊಯ್ಲಿನಿಂದ ಹತವಾದ ಮಕ್ಕಳ ಅಸ್ತಿಪಂಜರಗಳನ್ನು ನೋಡುವಲ್ಲಿ ತಂದೆಗೆ ಆನಂದಾಭಿವೃದ್ಧಿಯಾಗುತಿದ್ದರೆ ಮಕ್ಕಳೇನು ಮಾಡಬಲ್ಲುವು! ಬಾಸು ಹರಿದು ಬಿದ್ದರೆ, ನುಂಗಲೆಂದು ಜಗವು ಬಾಯಿ ತೆರೆದರೆ ಯಾರು ಏನು ಮಾಡಬಲ್ಲರು! ಜಗದೊಡೆಯ ಕಪ್ಪಡಿ ಸಂಗಮದೇವ, ನಿನ್ನ ಸಂಕಲ್ಪಗಳಿಗೆ ತಲೆಕೊಟ್ಟು ನಿಲ್ಲುವುದೊಂದೆ ಎಮ್ಮ ಕರ್ತವ್ಯವಯ್ಯ!

೬. ಮೂಡಲ ದಿಗಂತದಲ್ಲಿ ಉದಯವಾಗುವ ಕಿತ್ತಿಳೆವರ್ಣದ ಚಂದ್ರ ಕತ್ತಲೆಯ ಮೊತ್ತವನ್ನು ಹೊಡೆದೋಡಿಸಿ ಬಾನಿಗೇರಿಬಂದು ತನ್ನ ಜೊನ್ನನಗೆಯ ಬೀರಿ ಜಗದ ಮಕ್ಕಳನ್ನು ನಲಿಸುವಂತೆ ಎನ್ನ ಹುಟ್ಟಿನೊಡನೆ ಬಂದ ಕ್ರೋಧಗುಣವನ್ನು ತೊಡೆದು ಹಾಕಿ ಮನವ ನಿರ್ಮಲಗೊಳಿಸಯ್ಯ ತಂದೆ! ಎನ್ನ ಕೂಗ ನೀನು ಮನ್ನಿಸದಿದ್ದ ಪಕ್ಷದಲ್ಲಿ ಲೋಕವ್ಯವಹಾರದಿಂದ ಬೇರೆಯಾದರೂ ಮಾಡು ಎನ್ನೊಡೆಯ ಕಪ್ಪಡಿ ಸಂಗಮದೇವ! ಹುಳುಹತ್ತಿದ ಹೂವಿನಂತೆ ಇಲ್ಲಿ ಕೊರಗಿ ನಶಿಸುವುದಕ್ಕಿಂತ ನಿನ್ನ ಪಾದಕಮಲದಲ್ಲಿ ಎನ್ನ ಮನವು ಮುಡಿಪಾದರೆ ಬಾಳು ಪಾವನವೆಂಬೆನಯ್ಯ ಕಪ್ಪಡಿ ಸಂಗಮದೇವ!

೭. ಕಾಸಾರದೊಳಗಿನ ಸರೋಜದಂತೆ, ವನದೊಳಗಿನ ಕುಸುಮದಂತೆ, ನೀರಿನೊಳಗಿನ ಹಾವಸೆಯಂತೆ ಈ ಪ್ರಪಂಚದಲ್ಲಿ ಎನ್ನ ನಿರಿಸಯ್ಯ ತಂದೆ! ಮನೆ ನನ್ನದೆಂಬ ಆಸೆಬೇಡ. ಮಕ್ಕಳು ನನಗೆ ಎಂಬ ಬಯಕೆಬೇಡ. ಹೊನ್ನು ನನಗಾಗಿ ಎಂಬ ಆತುರತೆಬೇಡ. ಸಕಲ ಪ್ರಪಂಚಕ್ಕೆ ಆದಿಭೂತನಾದ ನೀನೆ ಎನ್ನವನಾಗಿರುವಾಗ ಈ ಲೋಕದ ಹಂಗು ಎನಗೇಕೆ ಎನ್ನೊಡೆಯ ಕಪ್ಪಡಿ ಸಂಗಮದೇವ!

**ಕೆ. ಈಶ್ವರ.**

# ಶೈಲಿ ಮತ್ತು ವಾಕ್ಯಪ್ರಮಾಣ

[*Biometrica*, Vol. 30, 1938. P. 364 ರಲ್ಲಿರುವ Yule ರವರ ಲೇಖನದ ಆಧಾರದ ಮೇಲೆ ಇದನ್ನು ಬರೆಯಲಾಗಿದೆ. ಲೆಕ್ಕಗಳಲ್ಲಿ ಅದಕ್ಕೂ ಇದಕ್ಕೂ ವ್ಯತ್ಯಾಸವಿದೆ.]

ಕನ್ನಡ ಗದ್ಯವನ್ನು ಓದುವಾಗ, ಅದರಲ್ಲೂ ಗಟ್ಟಿಯಾಗಿ ಓದುವಾಗ, ಪದಗಳಲ್ಲಿಯೂ ಸಂಧಿಸಮಾಸಪ್ರಯೋಗಗಳಲ್ಲಿಯೂ ವ್ಯತ್ಯಾಸವು ಗೋಚರವಾಗುವುದಲ್ಲದೆ ವಾಕ್ಯಪ್ರಮಾಣದಲ್ಲಿ ಸಹ ಅನೇಕ ವೇಳೆ ವ್ಯತ್ಯಾಸವು ಮನಸ್ಸಿಗೆ ತಟ್ಟುತ್ತದೆ. ಒಂದೇ ವಿಚಾರವನ್ನು ಅನೇಕ ವಿಧವಾದ ವಾಕ್ಯಗಳಲ್ಲಿ ಬರೆಯಬಹುದು.

ಉದಾ :—1. ಇದರಿಂದೇನು ಪ್ರಯೋಜನವೆಂದು ಯಾರಾದರೂ ಕೇಳಬಹುದು (3 ಪದಗಳು)
2. ಪ್ರಯೋಜನವೇನಿವರಿಂದ ಎಂದು ಯಾರಾದರೂ ಕೇಳಬಹುದು (4 ,, )
3. ಏನು ಪ್ರಯೋಜನ ಇದರಿಂದ ಎಂದು ಯಾರಾದರೂ ಕೇಳಬಹುದು (6 ,, )
4. ಏನು ಪ್ರಯೋಜನ ಇದರಿಂದ ಇದೆ ಎಂದು ಯಾರಾದರೂ ಕೇಳಬಹುದು (7 ,, )

ಹೀಗೆ ಪದಪ್ರಮಾಣದ ವ್ಯತ್ಯಾಸದಿಂದ ಶೈಲಿಯ ವ್ಯತ್ಯಾಸಗಳನ್ನು ಗುರುತಿಸಬಹುದೆ ಎನ್ನುವುದೇ ಈ ಲೇಖನದ ಉದ್ದೇಶ.

**ಪ್ರಯೋಗ.**—ಗ್ರಂಥಕರ್ತೃವಿನ ಬರಹದಲ್ಲಿ ಒಂದೊಂದು ವಾಕ್ಯವನ್ನು ಬೇರೆ ಬೇರೆಯಾಗಿ ವಿಂಗಡಿಸಿ ಪ್ರತಿವಾಕ್ಯದಲ್ಲಿಯೂ ಪದಗಳನ್ನು ಎಣಿಸುವುದು. ಒಂದು ಪದವಿರುವ ವಾಕ್ಯ, ಎರಡು ಪದಗಳ ವಾಕ್ಯ, ಮೂರು ಪದಗಳ ವಾಕ್ಯ, ಈ ರೀತಿಯಾಗಿ ವಿಂಗಡಿಸಿ ಪರಂಪರೆಗಳನ್ನು (Series) ಏರ್ಪಡಿಸುವುದು. ಹೀಗೆ ಬಂದ ಪರಂಪರೆಗಳಲ್ಲಿ ವ್ಯತ್ಯಾಸವಿದೆಯೆ ಎಂಬುದನ್ನು ಕಂಡುಹಿಡಿಯುವುದು.

ಒಂದೇ ಕವಿ ಬರೆದ ಗ್ರಂಥದಲ್ಲಿ ಒಂದು ಭಾಗದ ಪರಂಪರೆಗಳಿಗೂ ಮತ್ತೊಂದು ಭಾಗದ ಪರಂಪರೆಗಳಿಗೂ ಹೆಚ್ಚು ವ್ಯತ್ಯಾಸವಿರುವುದಿಲ್ಲ. ಇದನ್ನು ತೋರಿಸಲು ಗಳಗನಾಥರ **ಕುರುಕ್ಷೇತ್ರ** ಪುಸ್ತಕವನ್ನು ಕೆಳಗೆ ಕಂಡಂತೆ ವಿಂಗಡಿಸಲಾಗಿದೆ.

| (ಕ) ಪು. ೧-೨೮ | | (ಖ) ಪು. ೨೯-೫೬ | |
|---|---|---|---|
| ಪದಗಳು | ವಾಕ್ಯಗಳು | ಪದಗಳು | ವಾಕ್ಯಗಳು |
| 1 – 5 | 168 | 1 – 5 | 144 |
| 6 –10 | 258 | 6 –10 | 273 |
| 11–15 | 108 | 11–15 | 108 |
| 16–20 | 45 | 16–20 | 46 |
| 21–25 | 9 | 21–25 | 19 |
| 26 | 14 | 26 | 10 |
| | 602 | | 600 |

(ಕ) ಪರಂಪರೆಗಳು ಪುಟ ೧ ರಿಂದ ೨೮ ರ ವರೆಗೆ ಇರುವ ವಾಕ್ಯಗಳು, ಎಂದರೆ, 1 ರಿಂದ 5 ಪದಗಳಿರುವ ವಾಕ್ಯಗಳು 168; 6 ಪದಗಳಿಂದ 10 ಪದಗಳಿರುವ ವಾಕ್ಯಗಳು 258; 11 ರಿಂದ 15 ಪದಗಳಿರುವ ವಾಕ್ಯಗಳು 108 ಇದರಂತೆ.

| | ← ಇರುವವು → (Actual) | | | ← ಇರಬೇಕಾದವು → (Expected) | |
|---|---|---|---|---|---|
| | (ಕ) | (ಖ) | ಮೊತ್ತ | (ಕ′) | (ಖ′) |
| 1 – 5 | 168 | 144 | 312 | 156 | 156 |
| 6 –10 | 258 | 273 | 531 | 265·5 | 265·5 |
| 11–15 | 108 | 108 | 216 | 108 | 108 |
| 16–20 | 45 | 46 | 91 | 45·5 | 45·5 |
| 21–25 | 9 | 19 | 28 | 14 | 14 |
| 26 | 14 | 10 | 24 | 12 | 12 |
| ಒಟ್ಟು | 602 | 600 | 1202 | 602 | 600 |

Degree of Freedom = 10
Chisquared ($x^2$) = 5·610
P = more than 0·80

ಈ ಲೆಕ್ಕದಿಂದ ಈ ಪರಂಪರೆಗಳಿಗೆ ವ್ಯತ್ಯಾಸವಿಲ್ಲವೆಂದು ಸಿದ್ಧಾಂತವಾಗುವುದು.

**ಬೇರೆ ಬೇರೆ ಕವಿಗಳಲ್ಲಿ.**—ಮೇಲಿನದು ಒಬ್ಬರ ಬರವಣಿಗೆಯನ್ನು ಕುರಿತ ಸಂಗತಿ. ಬರಹಗಳು ಬೇರೆಯವರವು ಎಂಬುದನ್ನು ಹೀಗೆ ತಿಳಿಯುವುದು ಶಕ್ಯವೆ ಎಂಬುದನ್ನು ಪರೀಕ್ಷಿಸುವುದಕ್ಕಾಗಿ **ಸಂಭಾವನೆ** (೧೯೪೧) ಗ್ರಂಥದಿಂದ ಈ ಲೇಖನಗಳನ್ನು ತೆಗೆದುಕೊಳ್ಳಲಾಗಿದೆ:— ಶ್ರೀ ಮಾನ್ವಿ ನರಸಿಂಗರಾಯರ **ಶ್ರೀಕಂಠಯ್ಯನವರ ವಕ್ತೃತ್ವ** (ಮಾ), ಶ್ರೀ ಗರಳಪುರಿ ಶಾಸ್ತ್ರಿಗಳವರ **ಕರ್ಣಾಟಕ ಭಾಷೋಜ್ಜೀವನ** (ಶಾ), ಶ್ರೀ ಬುರ್ಲಿ ಬಿಂದುಮಾಧವರವರ **ಕನ್ನಡಕ್ಕಿರುವ ಕಾಲ್ತೊಡಕುಗಳು** (ಕಾ), ಮತ್ತು ಶ್ರೀ ಕಂದಾಡೆ ಕೃಷ್ಣಯ್ಯಂಗಾರರವರ **ಚರಿತ್ರೆಯ ರೀತಿ** (ರೀ).

| | ← ವಾಕ್ಯ → | | | | |
|---|---|---|---|---|---|
| | ಪದ | ಮಾ | ಶಾ | ಕಾ | ರೀ |
| 1 | 1–5 | 44 | 28 | 28 | 37 |
| 2 | 6–10 | 55 | 67 | 47 | 45 |
| 3 | 11–15 | 31 | 38 | 16 | 18 |
| 4 | 16 ... | 6 | 27 | 12 | 7 |
| | ಒಟ್ಟು | 136 | 160 | 103 | 107 |

| | ← ಇರುವದು | | | → | | ← ಇರಬೇಕಾದ್ದು | | | → |
|---|---|---|---|---|---|---|---|---|---|
| | ಮೂ | ಶಾ | ಕಾ | ರೀ | ಮೊತ್ತ | ಮೂ | ಶಾ | ಕಾ | ರೀ |
| 1 | 44 | 28 | 28 | 37 | 137 | 36·8 | 43·3 | 27·9 | 29·0 |
| 2 | 55 | 67 | 47 | 45 | 214 | 57·5 | 67·6 | 43·6 | 45·3 |
| 3 | 31 | 38 | 16 | 18 | 103 | 27·7 | 32·6 | 20·9 | 21·8 |
| 4 | 6 | 27 | 12 | 7 | 52 | 14·0 | 16·5 | 10·6 | 10·9 |
| | 136 | 160 | 103 | 107 | 506 | 136 | 160 | 103 | 106 |

Degree of Freedom = 9.

$X^2 = 26{\cdot}60$. P is less than ·01. (ಸಂಭವ ಕಡಮೆ)

ಈ ಲೆಕ್ಕದಿಂದ ಮೂ, ಶಾ, ಕಾ, ರೀ ಗಳಿಗೆ ಒಂದಕ್ಕೊಂದಕ್ಕೆ ವ್ಯತ್ಯಾಸವಿದೆ ಎಂದು ತೋರಿಸಲಾಯಿತು.

| | ಮೂ | ಶಾ | | | |
|---|---|---|---|---|---|
| 1 ... | 44 | 28 | 72 | 33 | 39 |
| 2 ... | 55 | 67 | 122 | 56 | 66 |
| 3 ... | 31 | 38 | 69 | 31·7 | 37·3 |
| 4 ... | 6 | 27 | 33 | 15·3 | 17·7 |
| | 136 | 160 | 296 | 136·0 | 160·0 |

Degree of Freedom = 3.

$X^2 = 18{\cdot}60$.

P is less than ·01. (ಸಂಭವ ಕಡಮೆ)

ಇದರಿಂದ ಮೂ, ಮತ್ತು ಶಾ, ಪರಂಪರೆಗಳಿಗೆ ವ್ಯತ್ಯಾಸವು ಕಾಣುತ್ತದೆ.

**ಎಣಿಕೆಯ ಅಂಶವಿಚಾರ.**—(1) ಹೆಣ್ಣುಮಕ್ಕಳ, (2) ಕಾರಣವಾಗಿದೆಯೆನ್ನಬೇಕು, (3) ಶಾಖೆಗಳನ್ನೊಳಗೊಂಡ, (4) ಸಾಂಪ್ರದಾಯಿಕವಾಗಿರುತ್ತ, (5) ಹರಿದಾಸಪಂಥವು, (6) ೧೨೦ ಲಕ್ಷ, (7) 7 ನೆಯ ತಾರೀಖು—ಇವುಗಳಲ್ಲಿ (1) (2) (3) (4) (5) ಒಂದೊಂದು ಪದವಾಗಿಯೂ, (6) ರಲ್ಲಿ ೧೨೦ ಎಂಬುದನ್ನು ಒಂದು ಪದ, ಲಕ್ಷ ಎಂಬುದನ್ನು ಮತ್ತೊಂದು ಪದವಾಗಿಯೂ, (7) ರಲ್ಲಿ 7 ನೆಯ ಎಂಬುದನ್ನು ಒಂದು ಪದವಾಗಿಯೂ, ತಾರೀಖು ಎಂಬುದನ್ನು ಮತ್ತೊಂದು ಪದವಾಗಿಯೂ ಗಣಿಸಲಾಗಿದೆ.

**ಒಟ್ಟಿನಲ್ಲಿ.**—ಇಲ್ಲಿ ಕಾವ್ಯದ ವಿಚಾರವಾಗಿ ಏನೂ ಹೇಳಿಲ್ಲ. ಕವಿಯ ವೈಯಕ್ತಿಕ ವಿಚಾರವೇನೂ ಹೇಳಿದಂತಾಗಲಿಲ್ಲ. ಮಾಧುರ್ಯಾದಿ ಗುಣಗಳ ಗೋಜಿಗೆ ಹೋಗಿಲ್ಲ. ಸ್ಥೂಲವಾಗಿ ಹೇಳಬೇಕಾದರೆ: ಸ್ನೇಹಿತನನ್ನು ನಿರೀಕ್ಷಿಸುತ್ತ ನಾವು ಕಾದಿದ್ದಾಗ ದೂರದಲ್ಲಿ ಯಾರು ಬಂದಾಗ್ಯೂ ಆ ಸ್ನೇಹಿತನೇ ಬಂದ ಹಾಗೆ ಕಾಣುತ್ತೆ. ಆದರೆ

ಹತ್ತಿರಕ್ಕೆ ಬರುತ್ತ ಆ ವ್ಯಕ್ತಿಯ ಉದ್ದ, ಅಡ್ಡ, ದಪ್ಪ ವ್ಯತ್ಯಾಸವಾಗಿ 'ಅವನಲ್ಲ' ಎನ್ನುತ್ತೇವೆ. ಉದ್ದ ಅಗಲ ತಿಳಿದ ಕೂಡಲೆ ಮನುಷ್ಯನ ಯೋಗ್ಯತೆ ತಿಳಿದ ಹಾಗಾಯಿತೆ? ಇಲ್ಲ.—ಆದರೆ, ಒಂದು ಬಗೆಯ ಅಳತೆಯ ಮೂಲಕ ಒಂದು ಶೈಲಿಗೂ ಮತ್ತೊಂದಕ್ಕೂ ಇರುವ ವ್ಯತ್ಯಾಸವನ್ನು ಮಾತ್ರ ತೋರಿಸುವುದಕ್ಕೆ ಇದು ಸಹಕಾರಿಯಾಗಿದೆ. ಎರಡು ಗ್ರಂಥಗಳ ಶೈಲಿಗಳನ್ನು ಪರೀಕ್ಷಿಸಿ, ವಾಕ್ಯರಚನೆಗಳಲ್ಲಿನ ಕೆಲವು ಬಗೆಯ ವಿಶೇಷ ಪ್ರಮಾಣದ ಮೇಲೆ, ಇವೆರಡನ್ನೂ ಬರೆದವರು ಒಬ್ಬರೇಯೆ? ಅಥವಾ ಬೇರೆ ಬೇರೆಯವರಾಗಿರಬಹುದೆ? ಎಂಬುದನ್ನು ಊಹಿಸಲು ಈ ರೀತಿಯೂ ಸಹಾಯಕವಾದೀತು ಎಂಬುದನ್ನು ಸೂಚಿಸುತ್ತಿದ್ದೇನೆ. ಸಂಖ್ಯಾಶಾಸ್ತ್ರವನ್ನು (Statistics) ಈ ಬಗೆಯ ಕಾರ್ಯಕ್ಕೆ ಅಮೇರಿಕಾ ದೇಶದಲ್ಲಿ ಬಳಸುವುದಕ್ಕಾರಂಭಿಸಿದ್ದಾರೆ. ಅದರ ಸ್ವರೂಪವನ್ನು ಸ್ಥೂಲವಾಗಿ ತಿಳಿಸಲು ಈ ಲೇಖನ ಪ್ರಯತ್ನಿಸಿದೆ.

ಎಂ. ಜಿ. ವೆಂಕಟೇಶಯ್ಯ.

# ನಯನ ಭೀಕರ ಕರ್ಬಲ

[ಹಿನ್ನೆಲೆ : — '' ಪ್ರಜೆಗಳ ದೃಷ್ಟಿಯಲ್ಲಿ ಶ್ರೇಷ್ಠನಾದವನು ಪ್ರಜಾಭಿಮತವನ್ನು ಪಡೆದು ಖಲೀಫನಾಗಬೇಕು '' ಎಂಬ ಮೊಹಮ್ಮದ್ ಪೈಗಂಬರ್ ಅವರ ಧಾರ್ಮಿಕ ನಿಬಂಧನೆಯನ್ನು ಉಲ್ಲಂಘಿಸಿ, ಕೇವಲ ಬಲಪ್ರದರ್ಶನದಿಂದ ಎಜೀದನು ಖಲೀಫತನದ ಗದ್ದುಗೆಯನ್ನೇರಲು, ಮೊಹಮ್ಮದ್ ಪೈಗಂಬರ್ ಅವರ ದೌಹಿತ್ರರಾದ ಹಜರತ್ ಇಮಾಂ ಹುಸೇನರವರು ಇದನ್ನು ತೀವ್ರವಾಗಿ ಪ್ರತಿಭಟಿಸಿದರು. ವೈರಿಗಳು ವಂಚನೆಯಿಂದ ಕರ್ಬಲಾದ ಘೋರ ಮರುಭೂಮಿಯಲ್ಲಿ ಹುಸೇನರನ್ನು ಮುತ್ತಿಕೊಂಡು, ಅವರಿಗೆ ವಿವಿಧರೀತಿಯ ದುಃಖಸಂಕಟಗಳನ್ನಿತ್ತು '' ಎಜೀದನ ಪ್ರಭುನಿಷ್ಠೆಯನ್ನಂಗೀಕರಿಸಿರಿ '' ಎಂದು ನಿರ್ಬಂಧಗೊಳಿಸಲು, '' ಅಲ್ಪಕಾಲದ ಬಾಳ್ವೆಗಾಗಿ ಎಜೀದನಂಥ ಅಧರ್ಮ ಪ್ರಭುವಿನ ಸ್ವಾಮಿತ್ವವನ್ನಂಗೀಕರಿಸಲೆ ? ಸ್ವಾತಂತ್ರ್ಯದ ಸಾವನ್ನೆದುರ್ಗೊಳ್ಳಲು ಸಿದ್ಧನಿರುವೆನು ; ಪಾರತಂತ್ರ್ಯದ ಬಾಳ್ವೆಯನ್ನಾಶಿಸೆನು '' ಎಂದು ಮೂರು ದಿನಗಳಿಂದಲೂ ಹಸಿವು ಬಾಯಾರಿಕೆಗಳಿಂದ ಬಳಲಿದ್ದ ಕೇವಲ ತಮ್ಮ ಎಪ್ಪತ್ತೆರಡು ಮಂದಿ ಅನುಯಾಯಿಗಳೊಡನೆ ವೈರಿಯ ಇಪ್ಪತ್ತೆರಡು ಸಾವಿರ ಮಂದಿ ಸೈನಿಕರನ್ನಿದಿರಿಸಿ ಹೋರಾಡಿ ಬಲಿದಾನವಾದರು. ಯುದ್ಧಾಂತ್ಯದಲ್ಲಿ ಜರುಗಿದ ವಿಷಾದ ಘಟನೆಯೊಂದನ್ನು ಇಲ್ಲಿ ನಿರೂಪಿಸಿದೆ.]

ಸಕಲ ಬಂಧುಗಳೂ ಪ್ರಳಯಪ್ರವಾಹಿನಿಯಲ್ಲಿ ತೇಲಿ ಕಣ್ಮರೆಯಾದ ಬಳಿಕ ರಣರಂಗಕ್ಕೆ ಹೋಗುವ ಸರದಿ ಇಮಾಂ ಹುಸೇನರ ಪಾಲಿನದಾಯಿತು. ಇಮಾಮರ ಏಕಾಂಗತೆಯನ್ನೂ, ನಿಸ್ಸಹಾಯತೆಯನ್ನೂ ಕಂಡು ಅವರ ಪತ್ನಿಯವರು, ಸೋದರಿ, ಮಗಳು ಮತ್ತು ಇತರ ಸ್ತ್ರೀಯರು ಎಲ್ಲರೂ ಎದೆಯನ್ನು ಬಡಿದುಕೊಂಡು ಅಳುತ್ತಿದ್ದರು. ಇಮಾಮರು ಗೂಡಾರವನ್ನು ಪ್ರವೇಶಿಸಿದರು. ದುಃಖಿತರನ್ನು ಸಂತೈಸುತ್ತ, '' ನೀವು ಹೀಗೆಯೇ ರೋದಿಸುತ್ತ ದುಃಖವ್ರಣಗಳಿಂದ ಕದಡಿಹೋಗಿರುವ ನನ್ನ ಹೃದಯದ ಮೇಲೇಕೆ ಕ್ಷಾರಜಲಸೇಚನೆಗೆಯ್ಯುತ್ತಿರುವಿರಿ ? ಖಾಸಿಂ ಮತ್ತು ಅಲೀ ಅಕ್ಬರರ ನಾಮಗಳನ್ನುಚ್ಚರಿಸುತ್ತ, ನನ್ನ ದುಃಖಜ್ವಾಲೆಯ ಮೇಲೇಕೆ ತೈಲವನ್ನೆರಚುತ್ತಿರುವಿರಿ ? ಆ ಚಂದ್ರವದನಗಳನ್ನೂ ಆ ತೇಜಃಪುಂಜಗಳನ್ನೂ ಸ್ಮರಿಸಿಕೊಳ್ಳುತ್ತ ದುಃಖಕ್ಲೇಶವಾರಿಯಿಂದ ನಾದಿದ ನನ್ನ ಚಿತ್ತಭಿತ್ತಿಯ ಮೇಲೇಕೆ ನಿಮ್ಮ ಹರಿತವಾದ ನಖಗಳಿಂದ ಪರಚುತ್ತಿರುವಿರಿ ? ಶಾಂತಚಿತ್ತರಾಗಿ ಭಗವಂತನಿಗೆ ನಿಮ್ಮ ಕೃತಜ್ಞತೆಯನ್ನು ಸಲ್ಲಿಸಿ ಎದೆಯ ಮೇಲೆ ಸಹನಾಶ್ಮವನ್ನು ಧರಿಸಿ. ಕಷ್ಟದಲ್ಲಿ, ವಿಪ್ಲವದಲ್ಲಿ ತಾಳ್ಮೆ ಪುಣ್ಯಪ್ರದವಾದ್ದು. ಅಸಹನೆ ಪಾಪಹೇತು. ನನ್ನ ಮರಣಾನಂತರ ನೀವುಗಳು ಇನ್ನೂ ಹೆಚ್ಚಿನ ಕಷ್ಟನಷ್ಟಗಳಿಗೆ ಗುರಿಯಾಗಬಹುದು. ಎಚ್ಚರಿಕೆ. ನನ್ನನ್ನಗಲಿದ ದುಃಖದಲ್ಲಿ ಅವಗುಂಠನವನ್ನು ಕಿತ್ತೊಗೆಯದಿರಿ. ವಸ್ತ್ರಗಳನ್ನು ಹರಿಯದಿರಿ. ಕೇಶರಾಶಿಯನ್ನು ಕೆದರಿಕೊಳ್ಳದಿರಿ. ಗಟ್ಟಿಯಾಗಿ ರೋದಿಸದಿರಿ. ನೆಲದ ಮೇಲೆ

ಬಿದ್ದು ಹೊರಳಾಡುವುದು, ಮುಖದ ಮೇಲೆ ಪ್ರಹರಿಸಿಕೊಳ್ಳುವುದು, ನಖಗಳಿಂದ ಮುಖವನ್ನು ಪರಚಿಕೊಳ್ಳುವುದು; ಎದೆಯನ್ನು ಬಡಿದುಕೊಳ್ಳುವುದು; ಹಣೆಯನ್ನು ಚಚ್ಚಿಕೊಳ್ಳುವುದು—ಇವೆಲ್ಲಾ ಧರ್ಮಶಾಸ್ತ್ರದಲ್ಲಿ ನಿಷೇಧಿಸಲ್ಪಟ್ಟಿವೆ. ದುಃಖ ಅತಿರೇಕವಾದಾಗ ಧ್ವನಿಗೈಯದೆ ಕಂಬನಿಗರೆಯುವುದು ಹಿಂಸಾಪೀಡಿತರ ಕರ್ತವ್ಯ.

ಪ್ರಕೃತದಲ್ಲಿ ನಿಮ್ಮಂತೆ ಹಿಂಸಾಪೀಡಿತರೂ ದುಃಖಿತರೂ ನಿರಾಶ್ರಿತರೂ ನಿರಾಧಾರಿಗಳೂ ಆದವರು ಯಾರೊಬ್ಬರೂ ಇರುವುದಿಲ್ಲ. ಆಹ! ದೇಶವಗಲಿತು. ಮನೆಮಠಗಳನ್ನು ವೈರಿಗಳು ಸೂರೆಗೈದರು. ಸಂಪತ್ತನ್ನು ದೋಚಿದರು. ಕೊನೆಗೆ ಕರ್ಬಲಾದ ಈ ಘೋರ ವಧ್ಯಭೂಮಿಯಲ್ಲಿ ಅನುಯಾಯಿಗಳೂ ಆಪ್ತಬಂಧುಗಳೂ ತನುಜರೂ ಅಗ್ರಜರಾತ್ಮಜರೂ ಸೋದರಿಯ ಸಂಜಾತರೂ ಅಸ್ಖಲಿತ ಹಿತಚಿಂತನೆಯುಳ್ಳ ಸಹೋದರರೂ ಎಲ್ಲರೂ ಯುದ್ಧಲಹರಿಯಲ್ಲಿ ಹರಿದು ಬೊಬ್ಬುಳಿಕೆಗಳಂತೆ ತೇಲಿ ಕಣ್ಮರೆಯಾದರು. ಈಗ ಏಕಮಾತ್ರನಾಗಿ ಉಳಿದಿರುವ ನನ್ನಿದಿರಿನಲ್ಲಿಯೂ ಮೃತ್ಯು ಖಡ್ಗಪಾಣಿಯಾಗಿ ನಿಂತಿದೆ. ತ್ವರಿತದಲ್ಲಿಯೇ ನಾನೂ ಅವರನ್ನೆಲ್ಲ ಹಿಂಬಾಲಿಸುವವನಿದ್ದೇನೆ. ಆಹಾ, ಎಂಥೆಂಥಾ ಅನುಪಮ ವೀರರು ಒಂದೊಂದು ತುತ್ತು ಕೂಳಿಗಾಗಿ, ಒಂದೊಂದು ಗುಟುಕು ನೀರಿಗಾಗಿ, ಹಾತೊರೆದು, ಕಾದ ಮಳಲ ರಾಶಿಯ ಮೇಲೆ ಹೊರಳಾಡಿ, ಬೆಂದು, ಶತ್ರುಗಳ ಕೂರಂಬುಗಳಿಗೆ ಬಲಿಯಾಗಿ, ತಮ್ಮ ತನುವಿನ ರಕ್ತಾಂಬುಧಿಯಲ್ಲಿ ಮುಳುಗಿ ಕಣ್ಮರೆಯಾದರು? ಎಂಥಾ ಜಗನ್ಮೋಹಕ ಸುಂದರ ಪುಷ್ಪಮುಕುಳಗಳು ಪ್ರಸ್ಫುಟಿತವಾಗಿ ಜಗತ್ತಿಗೆಲ್ಲ ತಮ್ಮ ಸೌಂದರ್ಯವನ್ನೂ ಸೌರಭ್ಯವನ್ನೂ ಬೀರುವುದರೊಳಗಾಗಿಯೇ ಯುದ್ಧಾರುಣನ ತೀಕ್ಷ್ಣರಶ್ಮಿಗಳಿಂದ ಬಾಡಿ, ಉದುರಿ ಭಸ್ಮೀಭೂತವಾಗಿ ಹೋದುವು!" ಎನ್ನುತ್ತ ವಿವಶರಾಗಿ ರೋದಿಸಲಾರಂಭಿಸಿದರು. ಹುಸೇನರ ಈ ವಾಕ್ಕುಗಳನ್ನು ಕೇಳಿ ಶಹರ್‌ಬಾನೊ, ಜೈನಬ್, ಕುಲ್ಸುಂ ಅವರುಗಳು ದುಃಖವನ್ನು ತಡೆಯಲಾರದೆ ಬಿಕ್ಕಿಬಿಕ್ಕಿ ಅಳುತ್ತಿದ್ದರು.

ಹುಸೇನರು ಎಲ್ಲರನ್ನೂ ಸಂತೈಸಿ ಹಸುಳೆಯಾದ ಸಕೀನಳನ್ನೆತ್ತಿಕೊಂಡು ಮನವಾರೆ ಮುತ್ತಿಕ್ಕಿ, ಮಗುವನ್ನು ಜೈನಬ್‌ರವರ ಮಡಿಲಲ್ಲಿ ಹಾಕಿ "ಸೋದರಿ, ಇಂದು ನನ್ನ ಸಕೀನಳ ನಾವೆ ಜಲಾವರ್ತದಲ್ಲಿ ಸಿಲುಕಿ ಮುಳುಗುತ್ತಿದೆ. ಕ್ಷಿಪ್ರದಲ್ಲಿಯೇ ನನ್ನ ಮುದ್ದು ಮಗು ಪಿತೃವಿಹೀನಳೂ ಅನಾಥಳೂ ಆಗುವಳು. ಸ್ವಾಭಾವಿಕವಾಗಿ ಅನಾಥರು ಸೂಕ್ಷ್ಮಹೃದಯಿಗಳಾದ್ದರಿಂದ ಅಲ್ಪಕಾರಣಗಳಿಗಾಗಿಯೂ ನೊಂದುಕೊಳ್ಳುತ್ತಾರೆ. ಸದಾ ಪರಾಜಿತಚಿತ್ತವುಳ್ಳವರಾಗಿರುವುದರಿಂದ ನಿರಂತರವೂ ಧೈರ್ಯಗುಂದಿರುತ್ತಾರೆ. ನನ್ನ ಮುದ್ದುಮಗು ನನ್ನ ಮೇಲೆ ಹೆಚ್ಚಿನ ಅನುನಯವನ್ನಿಟ್ಟಿದ್ದಳು. ಈಗ ಇದರ ಪೋಷಣಾಭಾರ ನಿಮ್ಮ ಮೇಲಿದೆ. ಈಕೆಗೆ ಯಾವ ವಿಧವಾದ ಕೊರತೆ

ಝುಸನ್ನೂ ಉಂಟುಮಾಡದಿರಿ. ಈಕೆಯ ಕಣ್ಣುಗಳಿಂದ ಅಶ್ರುಬಿಂದುಗಳು ತುಳುಕದಂತೆ ನೋಡಿಕೊಳ್ಳಿ" ಎಂದರು. ಅದಕ್ಕೆ ಜೈನಬ್‌ರವರು "ಅಣ್ಣಾ, ಒಮ್ಮೆ ಸಕೀನಳು ನನ್ನ ಸುವನ್ನ ಪೇಕ್ಷಿಸಿದರೂ ನಾನು ತಕ್ಷಣವೇ ಅದನ್ನೆರೆಯಲು ಸಿದ್ಧಳಿರುವೆನು. ಆದರೆ ತಮ್ಮನ್ನು ಸ್ಮರಿಸಿಕೊಂಡು 'ಅಪ್ಪಾ, ಅಪ್ಪಾ' ಎಂದು ಕಲ್ಲುಬಂಡೆಗಳು ಕರಗಿಹೋಗು ವಂತೆ ಆರ್ತನಾದಗೆಯ್ಯುತ್ತ, ಸಿಕ್ಕಿದೆಡೆಯಲ್ಲೆಲ್ಲ ತಲೆಯನ್ನು ಬಡಿದುಕೊಂಡು ರೋದಿಸುವಾಗ ನಾನು ಹೇಗೆ ತಾನೆ ಸಂತೈಸಲಿ? ನಿಮ್ಮ ಮಂಗಳಮೂರ್ತಿಯನ್ನು ಈಕೆಗೆ ಎಲ್ಲಿಂದ ತಂದು ತೋರಿಸಲಿ?" ಎಂದರು. ಇಮಾಮರಿಗೆ ಎಲ್ಲೆಲ್ಲೂ ನೈರಾಶ್ಯ ತಲೆದೋರಲಾರಂಭಿಸಿತು. ಕೊನೆಗೆ ದೀರ್ಘವಾದ ನಿಟ್ಟುಸಿರನ್ನು ಬಿಟ್ಟು "ವಿಧಿವಿಲಾಸ ವಿದ್ದಂತಾಗಲಿ. ಈಗ ಹೃದಯದ ಮೇಲೆ ಉಪಲವನ್ನು ಧರಿಸುತ್ತೇನೆ. ನಿಮ್ಮೆಲ್ಲರನ್ನೂ ಆ ದೀನಶರಣ್ಯನಾದ ಪರಮಾತ್ಮನ ಅಧೀನಕ್ಕೊಪ್ಪಿಸುತ್ತೇನೆ. ಭಗವಂತನು ನಿಮಗೆಲ್ಲ ರಿಗೂ ಬಂಧುವಿಯೋಗದುಃಖ ಸಹಿಷ್ಣುತೆಯನ್ನೀಯಲಿ. ನಿಮ್ಮೆಲ್ಲರನ್ನೂ ಗೌರವದಿಂದ ಸುರಕ್ಷಿತವಾಗಿ ಮದೀನಾಪಟ್ಟಣಕ್ಕೆ ತಲಪಿಸಲಿ" ಎನ್ನುತ್ತ ಗೂಡಾರದಿಂದ ಹೊರ ಬಿದ್ದರು. ಕುದುರೆಯನ್ನು ಸಿದ್ಧಗೊಳಿಸಿ, ಇನ್ನೇನು ಅದನ್ನೇರಿ ರಣರಂಗಕ್ಕೆ ಹೊರಡ ಬೇಕು, ಒಮ್ಮಿಂದೊಮ್ಮೆಯೇ ಗೂಡಾರದಿಂದ ಹಾಹಾಕಾರ ಕೇಳಿಬರಲಾರಂಭಿಸಿತು. ತಕ್ಷಣವೇ ಇಮಾಮರು ಗೂಡಾರವನ್ನು ಪ್ರವೇಶಿಸಿ ಕಾರಣವನ್ನು ವಿಚಾರಿಸಿದರು. ಶಹರ್‌ಬಾನೋರವರು ಅಲೀ ಅಸ್ಗರನನ್ನು ತೋರಿಸುತ್ತ "ಇಲ್ಲಿ ನೋಡಿ, ಮಗು ಬಿಸಿಲ ಧಗೆಯನ್ನು ಸೈರಿಸದೆ ಮೇಲುಸಿರನ್ನೆಳೆಯುತ್ತಿದೆ. ತುಟಿಗಳು ಒಣಗಿಹೋಗಿವೆ. ಬಾಯಾರಿಕೆಯಿಂದ ನಾಲಿಗೆಯನ್ನು ಹೊರಚಾಚಿದೆ. ಅಗ್ನಿಸ್ಪರ್ಶವಿಲ್ಲದೆಯೇ ಇದರ ಕೋಮಲ ತನುವಿನ ಮೇಲೆ ಬೊಕ್ಕೆಗಳೆದ್ದಿವೆ. ಇದರ ರೋದನಶಕ್ತಿಯೂ ಕುಂಠಿತ ವಾಗಿದೆ. ಹಸುಳೆ ಮೂರು ದಿನಗಳಿಂದಲೂ ನಮ್ಮಂತೆಯೇ ತೃಷಾಪೀಡಿತವಾಗಿದೆ. ನಾವು ನಿರ್ಗತಿಕರಾಗಿದ್ದೇವೆ. ಏನುಮಾಡಲಿ? ಸ್ತನಕ್ಷೀರ ಕೂಡ ಬತ್ತಿಹೋಗಿದೆ. ಈಗ ಈ ಮುದ್ದುಕಂದನ ಮೇಲೆ ಕೃಪೆದೋರಿ ವೈರಿಗಳು ಒಂದು ಗುಟುಕು ಜಲವ ನ್ನಿತ್ತರೂ ಮಗು ಬದುಕಿಕೊಳ್ಳುವುದು. ಇಲ್ಲದಿದ್ದರೆ ಕ್ಷಿಪ್ರದಲ್ಲಿಯೇ ಇದು ತನ್ನ ಅಂತ್ಯೋಚ್ಛ್ವಾಸವನ್ನು ನಿಶ್ವಾಸಿಸಿ ಬಿಡುವುದು" ಎಂದು ರೋದಿಸತೊಡಗಿದರು.

ಇಮಾಮರು ಮಗುವನ್ನು ಮಡಿಲಲ್ಲೆತ್ತಿಕೊಂಡರು. ಅದನ್ನು ತಮ್ಮ ಹೃದಯಕ್ಕೆ ಒತ್ತಿಕೊಂಡರು. ಮಗುವಿನೊಂದಿಗೆ ವೈರಿಗಳೆದಿರಿನಲ್ಲಿ ನಿಂತು "ಎಲೈ ಕೂಫಾದ ಕೃತಘ್ನರಿರಾ! ನೀವು ವಂಚನೆಯಿಂದ ನಮ್ಮನ್ನು ಇಲ್ಲಿಗೆ ಕರಸಿದಿರಿ. ಈ ಕರ್ಬಲಾದ ವಹ್ನಿಕುಂಡದಲ್ಲಿ ನಮ್ಮನ್ನು ತಳ್ಳಿ ದಗ್ಧಗೊಳಿಸಿದಿರಿ. ನಿಮ್ಮ ಮನದ ಬಯಕೆಯನ್ನು ಸಫಲಗೊಳಿಸಿಕೊಂಡಿರಿ. ನಿರಪರಾಧಿಗಳ, ಶಿಷ್ಟರ ರಕ್ತದಲ್ಲಿ ನಿಮ್ಮ ಪಾದಗಳನ್ನು

ತೋಳಿದಿರಿ. ಆದರೂ ನಿಮ್ಮಾತ್ಮಕ್ಕೆ ಶಾಂತಿಯುಂಟಾಗಲಿಲ್ಲ. ಪುತ್ರನಾದ ಆಬಿದನು ಪ್ರಜ್ಞಾಶೂನ್ಯನಾಗಿ ರುಗ್ಣಶಯ್ಯೆಯ ಮೇಲೊರಗಿದ್ದಾನೆ. ಔಷಧಿಯ ಮಾತೇಕೆ? ಒಂದು ತೊಟ್ಟು ಜಲಕ್ಕಾಗಿ ಬಾಯಿ ಬಾಯಿ ಬಿಡುತ್ತಿದ್ದಾನೆ. ನೀವೆಲ್ಲರೂ ಫಿರಾತ ಜಲ ಪಾನದಿಂದ ಸಂತೃಪ್ತರಾಗಿರುವಿರಿ. ನಾವಾದರೋ, ಬಿಸಿಲಿನ ಧಗೆಯನ್ನೂ, ತಪ್ತಾನಿಲ ವನ್ನೂ ಪ್ರಾಶನಿಸಿ ಪ್ರಜ್ಞೆಗುಂದುತ್ತಿರುವೆವು. ಇದೇನು—ಕರ್ಬಲಾದ ಮರು ಭೂಮಿಯೋ? ಅಥವಾ ಜ್ವಾಲಾರಸಾಂಬುಧಿಯೋ? ಅರಿಯದಂತಾಗಿದೆ. ಇಲ್ಲಿನ ಮಳಲ ರಾಶಿಯು ಅಗ್ನಿಕಣಗಳಂತೆ ಜ್ವಲಿಸುತ್ತಿರುವುದು. ಕಲ್ಲುಗಳು ಬೆಂಕಿಯ ಕೆಂಡ ಗಳಂತೆ ಚುಚ್ಚುತ್ತಿರುವುವು. ಗಾಳಿ ತಪ್ತಮಾರುತನಂತೆ ಬೀಸುತ್ತಿರುವುದು. ಈ ಬಿಸಿಲ ಬೇಗೆಯಲ್ಲಿ, ಈ ಅಸಹನೀಯ ತಾಪದಲ್ಲಿ, ಕ್ಷುಧಾತೃಷಾಪೀಡಿತರಾದ ನಮ್ಮನ್ನು ವಿವಿಧ ಸಂಕಟಗಳಿಗೀಡುಮಾಡಿದಿರಿ. ನನ್ನ ಅನುಚರರನ್ನು ಶರವರ್ಷಗಳಿಂದ ವಿಧ್ವಂಸಗೊಳಿ ಸಿದಿರಿ. ಈಗ ನನ್ನ ಪ್ರಾಣಾಪಹರಣಕ್ಕಾಗಿ ತವಕಗೊಳ್ಳುತ್ತಿರುವಿರಿ. ನಿಮ್ಮ ದೃಷ್ಟಿ ಯಲ್ಲಿ ಅನ್ಯಾಯಿಯೆಂದರೆ, ತಪ್ಪಿತಸ್ಥನೆಂದರೆ, ಶಿಕ್ಷಾರ್ಹನೆಂದರೆ ನಾನಲ್ಲವೆ? ಆದರೆ ಈ ನಿರಪರಾಧಿ, ನಿರುಪದ್ರವಿ, ನಿರ್ದೋಷಿಯಾದ ಹಸುಳೆಯದೇನು ತಪ್ಪಿದೆ? ಇದರ ಮೇಲೇಕೆ ನೀವು ಇಂಥಾ ದೌರ್ಜನ್ಯವನ್ನು ಪ್ರಯೋಗಿಸುತ್ತಿರುವಿರಿ? ಇದರ ಜೀವ ಒಂದು ಗುಟುಕು ನೀರಿಗಾಗಿ ಕಾದು ಕುಳಿತಿದೆ. ಬಾಯಾರಿಕೆಯಿಂದ ಈ ಮುದ್ದುಮಗು ನಾಲಿಗೆಯನ್ನು ಹೊರಚಾಚಿಕೊಂಡಿದೆ. ನೀರ ಹೆಸರನ್ನು ಕೇಳಿದೊಡನೆಯೇ ಕಂಪಿಸಿ ಹೋಗುತ್ತಿದೆ. ಇದರ ಶುಷ್ಕವದನವನ್ನೂ ದಾರುಣವೇದನೆಯನ್ನೂ ನೋಡಿದೊಡ ನೆಯೇ ಕರುಳು ಕತ್ತರಿಸಿಹೋಗುತ್ತವೆ. ಈ ಸಂದರ್ಭದಲ್ಲಿ ಪರಮಾತ್ಮನಿಗಾಗಿ ಈ ಮಗುವಿಗೆ ಒಂದು ಗುಟುಕು ಜಲವನ್ನು ಕುಡಿಸಿರಿ. ಬಹು ನಿರ್ದೋಷಿಯಾದ ಈ ಮೂಗುಜೀವಿ ಬದುಕಿದರೂ ಬದುಕಿಕೊಳ್ಳಬಹುದು" ಎಂದು ಬೇಡಲಾರಂಭಿಸಿದರು.

ಒಡನೆಯೇ ಒಬ್ಬ ಪಾಷಾಣಹೃದಯಿಯಾದ ಚತುರ ಬಿಲ್ಗಾರನ ಅಂಬಿನಿಂದ ಬಾಣವೊಂದು ವಾಯುವೇಗದಲ್ಲಿ ಹೊರಟಿತು. ಮಗುವಿನ ತೆರೆಯಲ್ಪಟ್ಟ ಬಾಯನ್ನು ಹೊಕ್ಕು ಕಂಠದಲ್ಲಿ ಬೇರೂರಿತು. ಮಗು ದಡದ ಮೇಲೆಸೆಯಲ್ಪಟ್ಟ ಮೀನಿನಂತೆ ಇಮಾಮರ ಮಡಿಲಲ್ಲಿ ಹೊರಳಾಡಲಾರಂಭಿಸಿತು. ಇಮಾಮರು ಮಗುವಿನ ಕಂಠ ಶಲ್ಯವನ್ನು ಕಿತ್ತರು. ಬೊಗಸೆಯು ರಕ್ತದಿಂದ ತುಂಬಿಹೋಯಿತು. ಆ ರಕ್ತಧಾರಾ ವರ್ಷಿತ ಮಗುವಿನೊಂದಿಗೆ ಗೂಡಾರದೆಡೆಗೆ ಹಿಂದಿರುಗಿದರು. ಮಗುವನ್ನು ಶಹರ್ ಬಾನೋರವರ ಮಡಿಲಲ್ಲಿ ಹಾಕುತ್ತ "ಇದೋ, ಅಲೀಅಸ್ಗರನು ಈಗ ಶಾಂತಚಿತ್ತ ನಾಗಿದ್ದಾನೆ. ಮರಣಪೀಯೂಷವನ್ನು ಸವಿದು ತನ್ನ ದಾಹವನ್ನು ನಿರಂತರಕ್ಕಾಗಿ ಪರಿಹರಿಸಿಕೊಂಡಿರುತ್ತಾನೆ" ಎಂದರು.

ಎಸ್. ಕೆ. ಕರೀಂಖಾನ್.

# ಚೌತಿಯ ಚಂದ್ರ

೧

ಬೆನಕ ಚೌತಿಯ ಚೆಲುವ ಶಿಶುಶಶಿ
ಅಂತರಿಕ್ಷದ ವಕ್ಷದಿ
ಘನಪಯೋಧರ ಪಾನ ಸುಖವಶಿ
ಶುಕ್ಲಸುಂದರ ಪಕ್ಷದಿ.

೨

ಅರಿಲಗೊಂಚಲ ತೆರನ ತೆನೆಯಾ
ಕೃತ್ತಿಕೆಯ ಬೆಳೆ ಹೊನ್ನನು.
ಸವರಿ ಕವರಲು ಬಂದ ಭಾದ್ರನ,
ಪಿಡಿವು ಮರೆಯಪ್ಪಂತೆ ಪಿಡಿದಿಹ
ಕೈಯ ಕುಡುಗೋಲನ್ನನು.

೩

ರತಿಯ ನೆಚ್ಚರಗೊಳಿಸಿ ಯತಿಯಲಿ
ಮದನ ಕಿವಿವರೆಗೆಳೆದನು ;
ಜೊನ್ನವಿಲ್ಲನ ಜೊನ್ನನಾರಿಯ
ವೃತ್ತವಾದುದು ಆ ಧನು :
ಶಿವನ ಹೃದಯವ ಹೊಕ್ಕ ಹೂವಿನ
ಸರಳು ಸಂದುದು ಬೇಳ್ವಿಗೆ ;
ಭಸ್ಮವಾದನು ಅತನು, ಬಾನಿನ
ಬೂದಿಮುಗಿಲಿನ ಬಾಳ್ವಿಗೆ ;
ವ್ಯೋಮಕೇಶನ ಜಟೆಗೆ ಸಿಲ್ಕಿತೊ
ವೃತ್ತಗೊಂಡಾ ಜ್ಯಾಧನು :
ಕಾಣು ಕಾಣ್ ಅದೆ ಮೇಲೆ ತೇಲಿದೆ
ಬೆನಕ ಚೌತಿಯ ಚಂದ್ರನು !

ಕುವೆಂಪು.

# ಛಂದಃಶಾಸ್ತ್ರದ ಸಂಕ್ಷಿಪ್ತ ಇತಿಹಾಸ

ಕೊಲ್ಹಾಪುರ ರಾಜಾರಾಂ ಕಾಲೇಜಿನ ಮರಾಠಿ ಭಾಷೆಯ ಪ್ರಾಧ್ಯಾಪಕರಾಗಿದ್ದ ದಿವಂಗತ ಶ್ರೀ ಮಾಧವರಾವ್ ತ್ರ್ಯಂಬಕ್ ಪಟವರ್ಧನ್ ಎಂಬವರು ಮಹಾರಾಷ್ಟ್ರ ದೇಶದಲ್ಲಿ 'ಮಾಧವ ಜೂಲಿಯನ್' ಎಂಬ ಪ್ರಸಿದ್ಧ ಕವಿಗಳು. ಅವರು ೧೯೩೭ರಲ್ಲಿ 'ಛಂದೋರಚನಾ'ವೆಂಬ ಅಮೂಲ್ಯವಾದ ಗ್ರಂಥವನ್ನು ಪ್ರಕಾಶಪಡಿಸಿದರು. ಈ ಗ್ರಂಥವು ಮರಾಠಿ ಭಾಷೆಯಲ್ಲಿ ಇದ್ದರೂ ಇದರ ವ್ಯಾಪ್ತಿ ಕೇವಲ ಮರಾಠಿ ಛಂದಸ್ಸಿಗೆ ಮಾತ್ರ ಅನ್ವಯಿಸಿಲ್ಲ; ಅಲ್ಲಿ ಸಂಸ್ಕೃತ ಛಂದಸ್ಸಿನ ವಿಚಾರವೂ ಇದೆ. ಗ್ರಂಥದಲ್ಲಿ ಒಟ್ಟು ಎಂಟು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಛಂದೋವಿಷಯಕವಾದ ಕೆಲವು ಪ್ರಶ್ನೆಗಳ ವಿಚಾರವಿದೆ. ಎರಡನೆಯ ಅಧ್ಯಾಯದಲ್ಲಿ ಯಮಕ, ಯತಿ, ಅಕ್ಷರ ಮತ್ತು ಗಣ ಇವುಗಳ ವಿಚಾರವಿದೆ. ಮೂರನೆಯ ಅಧ್ಯಾಯದಲ್ಲಿ ವೃತ್ತ ವಿಚಾರ ಮತ್ತು ವೃತ್ತ ವಿಸ್ತಾರ ಇವೆ. ಇಲ್ಲಿ ಒಟ್ಟು ೯೯೧ ವೃತ್ತಗಳ ಲಕ್ಷಣ ಸಿಕ್ಕುತ್ತದೆ. ನಾಲ್ಕನೆಯ ಅಧ್ಯಾಯ ವೃತ್ತ ವಿಹಾರ:— ಹಿಂದೆ ಹೇಳಿದ ವೃತ್ತಗಳಿಗೆ ಉದಾಹರಣೆಗಳು ಇಲ್ಲಿ ಕಂಡುಬರುತ್ತವೆ. ಅನೇಕ ಉದಾಹರಣೆಗಳ ಜೊತೆಗೆ ಗ್ರಂಥಕರ್ತರು ತಾವೇ ರಚಿಸಿರುವ ೨೬೦ ಉದಾಹರಣೆಗಳನ್ನು ಕೊಟ್ಟಿರುತ್ತಾರೆ. ಐದನೆಯ ಅಧ್ಯಾಯ 'ಜಾತಿ ಜೀವನ'ಕ್ಕೆ ಸಂಬಂಧಪಟ್ಟದ್ದು. ಆರನೆಯ ಅಧ್ಯಾಯ 'ಜಾತಿ ಜೃಂಭಣ'. ಏಳನೆಯದು ಛಂದಶ್ಶಾಟ್ಯ. ಎಂಟು, ಛಂದಃಶಾಸ್ತ್ರದ ಸಂಕ್ಷಿಪ್ತ ಇತಿಹಾಸ. ಈ ಕೊನೆಯ ಅಧ್ಯಾಯದ ಕೆಲವು ಭಾಗಗಳನ್ನು ಮಾತ್ರ ಈ ಲೇಖನ ಕನ್ನಡಿಸುತ್ತದೆ.

### ಪಿಂಗಳನ ಛಂದಃಸೂತ್ರ

ಛಂದಃಶಾಸ್ತ್ರದ ಪಾಯವನ್ನು ಯಾರು ಹಾಕಿದರೆಂಬುದನ್ನು ನಿಶ್ಚಯವಾಗಿ ಹೇಳುವುದಕ್ಕಾಗುವುದಿಲ್ಲ. 'ಛಂದಸ್' ಶಬ್ದದಂತೆ 'ಪಿಂಗಳ' ಎಂಬ ಹೆಸರು ಪ್ರಾಚೀನಕಾಲದಿಂದ ಪ್ರಸಿದ್ಧವಾಗಿದೆ. ಆದರೆ ಛಂದಃಸೂತ್ರಗಳ ಕರ್ತನೆಂದು ಯಾವ ಪಿಂಗಳನು ಪರಿಚಿತನೋ, ಆತನ ಹಿಂದೆ ಕಾಶ್ಯಪ, ಸೈತವ, ರಾತ, ಮಾಂಡವ್ಯ ಇವರು ಛಂದೋವಿವೇಚಕರಾಗಿ ಹೋದರೆಂದು ಪಿಂಗಳನ ೭/೯–೧೦ ಮತ್ತು ೭/೩೪ ಈ ಸೂತ್ರಗಳಿಂದ ತಿಳಿದುಬರುತ್ತದೆ. ಇವರ ಕೃತಿಗಳು ಈಗ ಉಪಲಬ್ಧವಾಗಿಲ್ಲ. ಪಿಂಗಳನ ಛಂದಃಶಾಸ್ತ್ರ ಮಾತ್ರ ಪ್ರಸಿದ್ಧವಾಗಿದೆ.[1]

[1] "ಬ್ರಾಹ್ಮಣಗಳಲ್ಲಾಗಲೆ ಛಂದೋ ವಿಷಯಗಳಲ್ಲಿ ಆಸಕ್ತಿ ಕಾಣುತ್ತದೆ. **ಶಾಂಖಾಯನ**

ಪಿಂಗಳನು ಕೇವಲ ಸೂತ್ರಗಳನ್ನು ಕೊಟ್ಟು ಪಾಣಿನೀಯ ಅಷ್ಟಾಧ್ಯಾಯಿಯಂತೆ ಅವುಗಳನ್ನು ಎಂಟು ಅಧ್ಯಾಯಗಳನ್ನಾಗಿ ವಿಭಾಗಿಸಿರುತ್ತಾನೆ. ವೈದಿಕ ಛಂದಸ್ಸು, ತನುಮಧ್ಯಾ ಅಥವಾ ಆರು ಅಕ್ಷರಗಳ ವೃತ್ತ ಮೊದಲುಗೊಂಡು ಚಂಡವೃಷ್ಟಿಪ್ರತಾಪ ಅಥವಾ ಇಪ್ಪತ್ತೇಳು ಅಕ್ಷರಗಳ ದಂಡಕಪರ್ಯಂತ ಕೆಲವು ಲೌಕಿಕ ವೃತ್ತಗಳು, ವೈತಾಲೀಯಾದಿ ಕೆಲವು ಜಾತಿಗಳು, ಇವುಗಳ ವಿಚಾರವನ್ನು ಮಾಡಿರುತ್ತಾನೆ. ಉಳಿದ ವಿಚಾರವನ್ನು 'ಶೇಷಃ ಪ್ರಚಿತ ಇತಿ (೭–೩೫) ಎಂಬ ಒಂದೇ ಸೂತ್ರದಿಂದ ಮಾಡಿರುತ್ತಾನೆ. ಯಾವ ವೃತ್ತಗಳು ನಾಮ ನಿರ್ದೇಶದಿಂದ ಪ್ರಸಿದ್ಧವಾಗಿಲ್ಲದೆ ಪ್ರಯೋಗರೂಪದಿಂದ ತಿಳಿದುಬರುತ್ತವೆಯೊ, ಆ ವೃತ್ತಗಳ ಪರಾಮರ್ಶವನ್ನು ಗಾಥಾಪ್ರಕರಣದಲ್ಲಿ ಮಾಡಿದ್ದಾನೆ. ಆದರೆ ಪ್ರಾಕೃತ ಪದ್ಯಗಳ ವಿಚಾರವನ್ನು ಮಾಡಿರುವಂತೆ ಕಾಣುವುದಿಲ್ಲ. ಇವನ್ನು ಬಿಟ್ಟು ಇನ್ನಾವ ವೈದಿಕ ಛಂದಸ್ಸುಗಳ ವಿಚಾರವನ್ನು ಮಾಡಿಲ್ಲ.

ಪಿಂಗಳನು ಛಂದಃಶಾಸ್ತ್ರದಲ್ಲಿ ಮೊದಲನೆಯ ಸೂತ್ರಕಾರನೆಂದು ತೋರುತ್ತದೆ. ತ್ರ್ಯಕ್ಷರೀ ಗಣಗಳಿಗೆ ಮ-ಯ-ರ-ಸ-ತ-ಜ-ಭ-ನ-, ಮತ್ತು ಲಘು, ಗುರುಗಳಿಗೆ ಲ-ಗ ಸಂಜ್ಞೆಗಳನ್ನು ಕೊಟ್ಟು ಯತಿಸ್ಥಾನಗಳನ್ನು ತೋರಿಸುವುದಕ್ಕೆ ಸಮುದ್ರ, ಕಾಮಶರಾದಿ ಸಂಜ್ಞೆಗಳನ್ನು ಕೊಟ್ಟು, ವೃತ್ತಗಳ ಲಕ್ಷಣಗಳನ್ನು ಸೂತ್ರಬದ್ಧವನ್ನಾಗಿ ಮಾಡಿರುತ್ತಾನೆ. ಈ ಸೂತ್ರಗಳಿಂದ ವೃತ್ತದ ಅಕ್ಷರಗಳ ಸಂಖ್ಯೆ ಲ-ಗ ಕ್ರಮ ಮತ್ತು ಯತಿ, ಇವುಗಳ ತಿಳಿವಳಿಕೆ ಸರಿಯಾಗಿ ಆಗುತ್ತದೆ. ಉದಾಹರಣೆ: "ಶಿಖರಿಣೀ ಯ್ಮೌನ್ಸೌ ಭ್ಲೌಗ್ ಋತು ರುದ್ರಾಃ." ಪಿಂಗಳನ ಪೂರ್ವದಲ್ಲಿ ಯತಿಯನ್ನೂ ಗಮನಿಸುತ್ತಿರಲಿಲ್ಲವೆಂಬುದರ ಅರ್ಥ, ಪಾದಾಂತರ್ಗತಯತಿಯನ್ನು ಗಮನಿಸುತ್ತಿರಲಿಲ್ಲವೆಂದು. ಪಾದಾಂತ್ಯಯತಿ ವಿಷಯದ ಪ್ರಶ್ನೆಯೇ ಏಳುವುದಿಲ್ಲ. ಆದ್ದರಿಂದ 'ಅತ್ರಪಾದಾಂತೆ ಯತಿಃ' ಎಂದು ಹಲಾಯುಧನು ಭಾಷ್ಯಮಾಡುವಾಗ ನಗು ಬರುವ ಹಾಗಿದೆ. ಪಾದಾಂತರ್ಗತ ಯತಿ ವಿಷಯದಲ್ಲಿ ಪಿಂಗಳನ ಮಾತುಗಳು ಅನೇಕ ಸ್ಥಳಗಳಲ್ಲಿ ಸೂಚಕವಾಗಿದ್ದರೂ ಆತನ ವಿವೇಚನೆಯಲ್ಲಿ ನಿಶ್ಚಿತಾರ್ಥವಿಲ್ಲ. ಗಜವಿಲಾಸಿತ, ವರತನು, ಶೈಲಶಿಖಾ, ಕೋಕಿಲಕ ಮುಂತಾದ ಕೆಲವು ವೃತ್ತಗಳಲ್ಲಿ ಆತನು ಹೇಳುವ ಯತಿಸ್ಥಾನಗಳು ಅಸ್ವಾಭಾವಿಕವಾಗಿ ಕಾಣುತ್ತವೆ. ಯತಿಪ್ರಕರಣದಲ್ಲಿ ಪಿಂಗಳನ ಮತ ಪ್ರಮಾಣವೆಂದು ಗ್ರಹಿಸಬೇಕಾಗಿಲ್ಲ.

---

**ಶ್ರೌತಸೂತ್ರ**ದ ಕೆಲವು ಭಾಗಗಳು, **ನಿದಾನಸೂತ್ರ, ಋಕ್ ಪ್ರಾತಿಶಾಖ್ಯ,** ಋಗ್ವೇದ ಯಜುರ್ವೇದಗಳಿಗೆ ಸಂಬಂಧಿಸಿದ ಕಾತ್ಯಾಯನನ **ಅನುಕ್ರಮಣಿ**ಗಳು ಇವುಗಳಲ್ಲಿ ಛಂದಸ್ಸಿಗೆ ಸಂಬಂಧಿಸಿದ ವಿಚಾರವಿದೆ. ವೇದಾಂಗ ಛಂದಸ್ ಎಂಬ ಗೌರವ ಇದಕ್ಕುಂಟು.''—ಎ. ಬಿ. ಕೀತ್.

ಪಿಂಗಳನು ವೃತ್ತಗಳ ಕ್ರಮವನ್ನು ಚರಣಗಳ ಉದ್ದದ ಮೇಲೆ ನಿಶ್ಚಯಿಸಿರುವಂತೆ ಕಂಡುಬರುತ್ತದೆ. ಇದೇ ಪದ್ಧತಿ ಮುಂದೆ ಎಲ್ಲ ಸ್ಥಳದಲ್ಲಿಯೂ ಕಾಣುವುದು. ಆತನು ಕೇವಲ ಪ್ರಸಿದ್ಧ ವೃತ್ತಗಳನ್ನು ಸಂಗ್ರಹಮಾಡಿರುತ್ತಾನೆಂದು ಹೇಳುವುದಾದರೆ, ತತ, (೬-೪೩) ವಾಹಿನೀ, (೬-೪೨) ಮೊದಲಾದ ವೃತ್ತಗಳನ್ನೂ ಸಂಗ್ರಹಿಸಿರುತ್ತಾನೆ. ವಾಹಿನೀ ವೃತ್ತಕ್ಕಾದರೂ ಧಾಟಿಯೇ ಹತ್ತುವುದಿಲ್ಲ. ಅಶ್ವಘೋಷನು ಸೌಂದರನಂದ ಕಾವ್ಯದಲ್ಲಿ ಒಂದು ಸರ್ಗವನ್ನು ವಿಯೋಗಿನೀ ವೃತ್ತದಲ್ಲಿ ಬರೆದಿರುವುದೂ ಮತ್ತು ಕಾಳಿದಾಸನು ರಘುವಂಶ ಕಾವ್ಯದಲ್ಲಿ 'ರತಿವಿಲಾಪ' ಮತ್ತು 'ಅಜವಿಲಾಪ'ಗಳನ್ನು ಅದೇ ವೃತ್ತದಲ್ಲಿ ಬರೆದಿರುವುದೂ ಪಿಂಗಳನ ದೃಷ್ಟಿಗೆ ಬೀಳದೆ ಇರುವುದು ಆಶ್ಚರ್ಯವಾಗಿದೆ. ಇದೇ ರೀತಿ ಮಾಲಭಾರಿಣೀ ವೃತ್ತಪರಿಚಯವೂ ಇಲ್ಲವೆಂದು ತೋರುತ್ತದೆ. ನಾರಾಚಕ ಮತ್ತು ವಿಸ್ಮಿತಾ ವೃತ್ತಗಳ ಉದಾಹರಣೆಗಳು ಅನುಕ್ರಮವಾಗಿ ರಘುವಂಶ ಮತ್ತು ಶಿಶುಪಾಲವಧ ಕಾವ್ಯಗಳಲ್ಲಿ ಇದ್ದಾಗ್ಯೂ ಅವುಗಳನ್ನು ಗಾಥಾಪ್ರಕರಣದಲ್ಲಿ ಸೇರಿಸಿರುತ್ತಾನೆ.

ಶಾಸ್ತ್ರದಲ್ಲಿ ಒಂದು ಪಾರಿಭಾಷಿಕ ಸಂಜ್ಞೆಯಿಂದ ಒಂದೇ ವಿಷಯದ ತಿಳಿವಳಿಕೆಯಾಗಬೇಕು. ಮತ್ತು ಒಂದೇ ವಿಷಯಕ್ಕೆ ಅನೇಕ ಪಾರಿಭಾಷಿಕ ಸಂಜ್ಞೆಗಳು ಇರಕೂಡದೆಂಬ ಮೂಲನಿಯಮವನ್ನು ಪಿಂಗಳನು ಪಾಲಿಸಿಲ್ಲ. 'ವೃತ್ತ' ಎಂಬುದನ್ನು ಒಂದು ವೃತ್ತದ ಹೆಸರನ್ನಾಗಿ ಕೊಟ್ಟಿದ್ದಾನೆ. ಯಾವ ವೃತ್ತವನ್ನು ಆರನೆಯ ಅಧ್ಯಾಯದಲ್ಲಿ (೬-೩೬) ಚಂಚಲಾಕ್ಷಿಕಾ ಎಂದು ಕರೆದಿರುತ್ತಾನೆಯೊ ಅದೇ ವೃತ್ತವನ್ನು ಗಾಥಾ ಪ್ರಕರಣದಲ್ಲಿ (೮-೫) ಗೌರೀ ಎಂದು ಕರೆದಿರುತ್ತಾನೆ. ಮತ್ತೆ ಏಳನೆಯ ಅಧ್ಯಾಯದಲ್ಲಿ (೭-೪) ಗೌರೀ ಎಂಬ ಪ್ರತ್ಯೇಕ ವೃತ್ತವನ್ನು ಹೇಳುತ್ತಾನೆ. ಪಾರಿಭಾಷಿಕ ಸಂಜ್ಞೆಯನ್ನು ಪ್ರಬಲ ಕಾರಣವಿಲ್ಲದೆ ಬದಲಾಯಿಸಬಾರದು. ಆದರೆ ಯಾವ ವೃತ್ತವನ್ನು ಕಾಶ್ಯಪನು 'ಸಿಂಹೋನ್ನತಾ' ಎಂದು ಕರೆದಿರುವನೊ ಸೈತವನು 'ಉದ್ಧರ್ಷಿಣೀ' ಎಂದು ಕರೆದಿರುವನೊ ಅದಕ್ಕೆ ಪಿಂಗಳನು ವಸಂತತಿಲಕಾ ಎಂಬ ಹೆಸರನ್ನು ಏಕೆ ಕೊಟ್ಟಿರುತ್ತಾನೆಂಬುದಕ್ಕೆ ಕಾರಣ ಸಿಗುವುದಿಲ್ಲ.

ಮೂಲವೃತ್ತಗಳು ಹೇಗೆ ರಚಿಸಲ್ಪಟ್ಟವು, ಅವುಗಳಿಗೆ ಹೆಸರು ಹೇಗೆ ಇಡಲಾಯಿತು ಎಂಬುದನ್ನು ಪ್ರಾಚೀನತಮ ಮತ್ತು ಸುಪ್ರಸಿದ್ಧತಮ ಲೇಖಕರ ಹೆಸರೊಡನೆ ಉದಾಹರಣೆಗಳನ್ನು ಕೊಟ್ಟಿದ್ದರೆ ಬಹಳ ಉಪಯೋಗವಾಗುತ್ತಿತ್ತು. ಮುಖ್ಯವಾಗಿ ಪಿಂಗಳನು ಸೂತ್ರರಚನಾ ಕಾರ್ಯವನ್ನು ಬಿಟ್ಟು ಮುಂದೆ ಹೋಗಲಿಲ್ಲ. ಛಂದೋರಚನೆ ಎಂದರೆ ಸಾಮಾನ್ಯತಃ ಲಯಬದ್ಧ ಅಕ್ಷರರಚನೆ. ಈ ಮೂಲಭೂತವಾದ ಮಾತು ಆತನ ಧ್ಯಾನಕ್ಕೆ ಬರಲಿಲ್ಲವೆಂದು ತೋರುತ್ತದೆ. ಹದಿನಾಲ್ಕು ಲಘು ಮತ್ತು

ಒಂದು ಗುರು ಇವುಗಳಿಂದ ಕೂಡಿ ಆಗುವ ಒಂದೇ ಲಘು ಗುರುಗಳ ಆವಳಿಯಲ್ಲಿ ಯತಿ ಭೇದದಿಂದ ಮಣಿಗುಣನಿಕರ, ಚಂದ್ರಾವರ್ತಾ ಮತ್ತು ಮಾಲಾ ಈ ರೀತಿ ಯಾದ ಮೂರು ಭಿನ್ನವೃತ್ತಗಳು ಸಿದ್ಧವಾಗುತ್ತವೆ ಎಂಬ ಅಂಶ (7/11-13) ಆತನ ಧ್ಯಾನಕ್ಕೆ ಬಂದಿದ್ದರೂ ಈ ವೃತ್ತಗಳು ಅಷ್ಟಮಾತ್ರಕ, ಸಪ್ತಮಾತ್ರಕ ಮತ್ತು ಷಣ್ಮಾತ್ರಕ ಆವರ್ತನದಿಂದ ಭಿನ್ನಭಿನ್ನವಾಗುತ್ತವೆ ಎಂಬ ಕಲ್ಪನೆಯೂ ಆತನಿಗೆ ಹೊಳೆದಿಲ್ಲ. ಹೊಳೆದಿದ್ದರೆ ಆತನು ಮಾಡಿರುವ ಜಾತಿ ವಿಚಾರವು ಅಗಾಧವಾಗಿಯೂ ಶಾಸ್ತ್ರಶುದ್ಧವಾಗಿಯೂ ಆಗುತ್ತಿತ್ತು. ಆದರೂ ಪಿಂಗಳನು ಪ್ರಾಚೀನ ಮತ್ತು ಪ್ರಚಲಿತ ತ್ರಿಕಾವಲಂಬಿ ಸಂಪ್ರದಾಯದ ಸಂಸ್ಥಾಪಕನೊಬ್ಬನಾಗಿರುತ್ತಾನೆ.

ಪಿಂಗಳನ ಕಾಲವನ್ನು ನಿಶ್ಚಯಿಸುವುದು ಸಂಸ್ಕೃತಪಂಡಿತರ ಕೆಲಸ. ಗಾಥಾ ಪ್ರಕರಣದಲ್ಲಿ 'ಅತಿಶಾಯಿನೀ' ಮತ್ತು 'ವಿಸ್ಮಿತಾ' ವೃತ್ತಗಳ ಲಕ್ಷಣವು ಕಂಡು ಬರುತ್ತದೆ. ಈ ಹೆಸರುಗಳು ಅನುಕ್ರಮವಾಗಿ ಶಿಶುಪಾಲವಧ ಕಾವ್ಯದಲ್ಲಿ ೮-೧೧, ಮತ್ತು ೨೦-೭೯, ಶ್ಲೋಕಗಳಿಂದ ಸೂಚಿತವಾಗಿರಬೇಕೆಂದು ತೋರುತ್ತದೆ. ಇದನ್ನು ಒಪ್ಪುವುದಾದರೆ ಪಿಂಗಳನು ಮಾಘನ ತರುವಾಯ ಇದ್ದನೆಂದು ಹೇಳಬೇಕಾಗುತ್ತದೆ. ಆದರೆ ಇದು ಸರಿಯಾಗಿ ಕಾಣುವುದಿಲ್ಲ. ಸೂತ್ರಗಳ ಮಧ್ಯದಲ್ಲಿ ಇವುಗಳನ್ನು ಯಾರೋ ಇತ್ತೀಚೆಗೆ ಸೇರಿಸಿರಬೇಕೆಂದು ಊಹಿಸಲವಕಾಶವಿದೆ. ಹಲಯುಧನು ಕೊಟ್ಟಿರುವ ಎಲ್ಲ ಉದಾಹರಣೆಗಳ ಉಗಮ ಸಿಕ್ಕುವ ಪಕ್ಷಕ್ಕೆ ಪಿಂಗಳನ ಕಾಲವನ್ನು ನಿಶ್ಚಯಿಸಲು ಬಹು ಸಹಾಯವಾದೀತು.

## ಭರತನ ನಾಟ್ಯಶಾಸ್ತ್ರ

ನಾಟ್ಯಶಾಸ್ತ್ರದ ಕರ್ತನಾದ ಭರತಮುನಿಯ ಸಂಪ್ರದಾಯ ಪಿಂಗಳ ಸಂಪ್ರದಾಯದಿಂದ ಬೇರೆಯಾಗಿದೆ. ಭರತಮುನಿ ಈ ಭಿನ್ನಸಂಪ್ರದಾಯದ ಆದ್ಯ ಪ್ರವರ್ತಕನಲ್ಲದೇ ಇದ್ದರೂ ಪ್ರಾಚೀನ ಆಚಾರ್ಯರ ಗುಂಪಿಗೆ ಸೇರಿದವನು. ಈಗ ನಮಗೆ ಸಿಕ್ಕಿರುವ ನಾಟ್ಯಶಾಸ್ತ್ರದ ಆವೃತ್ತಿ ಅಶುದ್ಧವಾಗಿದೆ. ಅನೇಕ ಸ್ಥಳಗಳಲ್ಲಿ, ಇತ್ತೀಚೆಗೆ ಹೆಚ್ಚುಗೊಂಡದ್ದಾಗಿದೆ. ಉದಾಹರಣೆಗೆ ಮದನವತೀವೃತ್ತ ಕಾವ್ಯ ಮಾಲಾ (೪೬೮) ಆವೃತಿಯಲ್ಲಿ ಮಾತ್ರ ಇದೆ. ಚಿತ್ತವಿಲಾಸಿತ ವೃತ್ತ ಗಾಯಕವಾಡ ಪ್ರತಿಯಲ್ಲಿ (೬೦೯) ಮಾತ್ರ ಇದೆ. ಕಾವ್ಯಮಾಲಾ ಪ್ರತಿಯಲ್ಲಿ (೧೫-೩೨) ಶಾಲಿನೀ ವೃತ್ತದಲ್ಲಿ ಯತಿಯನ್ನು ಹೇಳಿಲ್ಲ. ಆದರೆ ಚೌಖಂಬಾ ಆವೃತಿಯಲ್ಲಿ (೧೬-೩೬) ಹೇಳಿದೆ. ಭರತನು ಯತಿಯನ್ನು ಗಮನಿಸದವರಲ್ಲಿ ಒಬ್ಬನು ಎಂದು ಸ್ವಯಂಭೂ ವಚನವಿದೆ. ಯತಿಯನ್ನು ಗಮನಿಸದೆ ಇರುವುದು ಪ್ರಾಕೃತ ಸಂಪ್ರದಾಯ ವಿರಬೇಕು. ಅವಿತಥಾದಿಗೇಯವೃತ್ತಗಳು ಯಾವಾಗ ಪ್ರಾಕೃತ ಕಾವ್ಯದ ಮೂಲಕ

ಪರಿಣತವಾಗಿ ಸಂಸ್ಕೃತದಲ್ಲಿ ಬಂದವೋ ಆಗ ಪಿಂಗಳ ಮುಂತಾದ ಛಂದಃಶಾಸ್ತ್ರಕಾರರಿಗೆ ಆ ವರ್ತನೆಯ ಕಲ್ಪನೆ ಇರಲಿಲ್ಲವಾದ್ದರಿಂದ ಅನೇಕ ತೊಡಕುಗಳು ಉಂಟಾದವು. ಅದೇ ಪ್ರಕಾರ ತ್ರ್ಯಕ್ಷರೀ ಗಣಗಳ ವಿವೇಚನೆ ನಾಟ್ಯಶಾಸ್ತ್ರದಲ್ಲಿ ಏಕೆ ಇರಬೇಕೊ ತಿಳಿಯುವುದಿಲ್ಲ. ಭರತನು ವೃತ್ತಲಕ್ಷಣವನ್ನು ಹೇಳುವಾಗ ಆ ಪರಿಭಾಷೆಯ ಉಪಯೋಗವನ್ನು ಮಾಡುವುದಿಲ್ಲ. ಆತನು ವೃತ್ತವಿಚಾರವನ್ನು ಎರಡು ಸ್ಥಳಗಳಲ್ಲಿ ಮಾಡುತ್ತಾನೆ. ಮೊದಲು ಸುಪರಿಚಿತವೃತ್ತಗಳ ವಿಚಾರವನ್ನು ೧೬ನೆಯ ಅಧ್ಯಾಯದಲ್ಲಿಯೂ ಅನಂತರ ಧ್ರುವಗಳ ನಿಮಿತ್ತದಿಂದ ಗೇಯವೃತ್ತಗಳ ವಿಚಾರವನ್ನು ೩೨ನೆಯ ಅಧ್ಯಾಯದಲ್ಲಿಯೂ ಮಾಡಿದ್ದಾನೆ. ೩೨ನೆಯ ಅಧ್ಯಾಯದಲ್ಲಿ ಆತನು ಪ್ರಾಕೃತ ಉದಾಹರಣೆಗಳನ್ನು ಕೊಡುತ್ತಾನೆ. ಆದರೆ ಪ್ರಾಕೃತ ಜಾತಿಗಳ ವಿಚಾರವನ್ನು ಸ್ವಲ್ಪವೂ ಮಾಡುವುದಿಲ್ಲ.

ವೃತ್ತಲಕ್ಷಣವನ್ನು ಹೇಳುವ ಭರತನ ಪದ್ಧತಿ ಕೇವಲ ಪ್ರಾಥಮಿಕ ಅವಸ್ಥೆಯದೆಂದು ಕಾಣುತ್ತದೆ. ಇದರಿಂದ ಭರತನು ಪಿಂಗಳನ ಹಿಂದೆ ಇದ್ದಿರಬೇಕೆಂಬ ಶಂಕೆ ಬರುತ್ತದೆ. ಇಷ್ಟು ಅಕ್ಷರಗಳುಳ್ಳ ಚರಣದಲ್ಲಿ ಅನುಕ್ರಮವಾಗಿ ಇಂಥ ಇಂಥ ಅಕ್ಷರ ಗುರು, ಉಳಿದವೆಲ್ಲ ಲಘು—ಈ ರೀತಿಯಾದ ಲಕ್ಷಣವನ್ನು ಒಂದು ಅಥವಾ ಎರಡು ಅನುಷ್ಟುಪ್ ಶ್ಲೋಕಗಳಲ್ಲಿ ಹೇಳಿರುತ್ತಾನೆ. ಉದಾಹರಣೆ:

ಆದ್ಯಾತ್ಪರಾಣಿ ಪಂಚೈವ ದ್ವಾದಶಂ ಸತ್ರಯೋದಶಂ |
ಅಂತ್ಯಂ ಸಪ್ತದಶೇ ಪಾದೇ ಶಿಖರಿಣ್ಯಾಂ ಗುರೂಣಿ ಚ ||

(ಭ. ನಾ. ೧೬-೭೬).

ಕೆಲವು ವೃತ್ತಗಳ ಲಕ್ಷಣಗಳು ಆಯಾ ವೃತ್ತಗಳಲ್ಲೇ ಗ್ರಥಿತವಾಗಿ ಕಂಡುಬರುತ್ತವೆ. ಈ ಸುಧಾರಣೆಯನ್ನು ಮೂಲದಲ್ಲಿ ಈಚೆಗೆ ಯಾರಾದರೂ ತಂದಿರಬೇಕೆಂದು ತೋರುತ್ತದೆ. ಲಕ್ಷಣದ ಹಿಂದೆ ವೃತ್ತದ ಉದಾಹರಣೆಯನ್ನು ಕೊಟ್ಟು ಉದಾಹರಣೆಯ ನಾಲ್ಕನೆಯ ಚರಣದಲ್ಲಿ ವೃತ್ತದ ಹೆಸರು ಗ್ರಥಿತವಾಗಿ ಕಂಡುಬರುತ್ತದೆ.

ಮಹಾನದ್ಯಾಭೋಗೇ ಪುಲಿನಮಿವ ತೇ ಭಾತಿ ಜಘನಂ
ತಥಾಽಽಸ್ಯಂ ನೇತ್ರಾಭ್ಯಾಂ ಭ್ರಮರಸಹಿತಂ ಪಂಕಜಮಿವ |
ತನುಸ್ಪರ್ಶಶ್ಛಾಯಂ ಸುತನು ಸುಕುಮಾರೋ ನ ಪರುಷಃ
ಸ್ತನಾಭ್ಯಾಂ ತುಂಗಾಭ್ಯಾಂ ಶಿಖರಿಣಿನಿಭಾ ಭಾಸಿ ದಯಿತೆ ||

(ಭ. ನಾ. ೧೬-೭೭)

ಉದಾಹರಣೆಗಳು ಬಹುಶಃ ಶೃಂಗಾರಿಕವಾಗಿ ಇವೆ.

ಭರತನು ಕೊಟ್ಟಿರುವ ವೃತ್ತಗಳಲ್ಲಿ ಎರಡು ವೃತ್ತಗಳು ವಿಚಾರಣೀಯ. ಅವುಗಳನ್ನು ಪಿಂಗಳನು ಕೊಟ್ಟಿಲ್ಲ. ಅವುಗಳಿಗೆ ಉದಾಹರಣೆಗಳು ಸಿಗುವುದು ಕಷ್ಟವಾಗಿ

ದ್ದರೂ ಸುಪ್ರಸಿದ್ಧ ವಾಙ್ಮಯದಲ್ಲಿ ಕಂಡುಬರುತ್ತವೆ. ಭಾಸನ ಪ್ರತಿಮಾನಾಟಕದಲ್ಲಿ (ಅಂಕ III ಶ್ಲೋಕ ೩) ಮೇಘಮಾಲಾ ವೃತ್ತಕ್ಕೆ ಉದಾಹರಣೆ ಇದೆ. ಅಶ್ವಘೋಷನ ಸೌಂದರನಂದ ಕಾವ್ಯದಲ್ಲಿ (೧೨-೪೩, ೧೩-೫೬) ಶರಭಲಲಿತಾ ವೃತ್ತಕ್ಕೆ ಎರಡು ಉದಾಹರಣೆಗಳು ದೊರೆಯುತ್ತವೆ. ಮತ್ತೆ ಸಿಂಹರೇಖಾವೃತ್ತವನ್ನು ಭರತನು ಹೇಳುತ್ತಾನೆ. ಪಿಂಗಳನು ಇದನ್ನು ಹೇಳಿಲ್ಲ. ಈ ವೃತ್ತಕ್ಕೆ ಉದಾಹರಣೆಯೆಂದರೆ ಮಹಾಭಾಷ್ಯದ (ಖಂಡ ೧, ಪೃ. ೫೦೨) ಎರಡು ಕಾರಿಕೆಗಳು. ಇಂದ್ರವಂಶಾ ವೃತ್ತವನ್ನು ಭರತನು ಕೊಡುವುದಿಲ್ಲ: ಇದೂ ವಿಚಾರಣೀಯ. ಆದರೆ ಇಂದ್ರವಂಶಾ ವೃತ್ತದ ರಚನೆಯೂ ಬಹಳ ಈಚೆಗೆ ಆದದ್ದು.

ಭರತನ ವಿಷಯದಲ್ಲಿ ಇನ್ನೂ ಒಂದು ಮಾತು ಚಿಂತನೀಯ. ಸುಪ್ರಸಿದ್ಧ ವೃತ್ತಗಳಾದ ಪ್ರಮಾಣಿಕಾ, ವಿದ್ಯುನ್ಮಾಲಾ, ದ್ರುತವಿಲಂಬಿತಾ, ಭುಜಂಗಪ್ರಯಾತ, ಸ್ರಗ್ವಿಣೀ, ರುಚಿರಾ, ಮಾಲಿನೀ, ಹರಿಣೀ, ಮಂದಾಕ್ರಾಂತಾ, ಪೃಥ್ವೀ ಮತ್ತು ಕುಸುಮಿತಲತಾವೇಲ್ಲಿತಾ, ಇವುಗಳಿಗೆ ನಾಟ್ಯಶಾಸ್ತ್ರದಲ್ಲಿ ಅನುಕ್ರಮವಾಗಿ ಮತ್ತಚೇಷ್ಟಿತ, ವಿದ್ಯುಲ್ಲೇಖಾ, ಹರಿಣೀಪ್ಲುತಾ, ಅಪ್ರಮೇಯಾ, ಪದ್ಮಿನೀ, ಪ್ರಭಾವತೀ, ನಾಂದೀಮುಖೀ ವೃಷಭಲಲಿತಾ, ಶ್ರೀಧರಾ, ವಿಲಂಬಿತಗತಿ ಮತ್ತು ಚಿತ್ರಲೇಖಾ ಈ ಹೆಸರುಗಳನ್ನು ಕೊಟ್ಟಿರುತ್ತಾನೆ. ಆದರೆ ಭರತನು ವಸಂತತಿಲಕಾ ಎಂಬ ಹೆಸರನ್ನು ಮಾತ್ರ ಗ್ರಾಹ್ಯವೆಂದು ಸ್ವೀಕರಿಸಿದ್ದಾನೆ. ಪ್ರಾಚೀನವಾದ ಹೆಸರ ಪೈಕಿ ಸಿಂಹೋನ್ನತಾ ಮತ್ತು ಉದ್ಧರ್ಷಿಣೀ ಈ ಹೆಸರುಗಳನ್ನು ಕೊಡುವುದಿಲ್ಲ.

## ವರಾಹ ಮಿಹಿರನ ಬೃಹತ್ಸಂಹಿತೆ

ವಿವಿಧ ವಿಷಯಾತ್ಮಕ ಗ್ರಂಥವಾದ ತನ್ನ ಬೃಹತ್ಸಂಹಿತೆಯ ೧೦೩ ನೆಯ ಗ್ರಹಗೋಚರವೆಂಬ ಅಧ್ಯಾಯದಲ್ಲಿ ವರಾಹಮಿಹಿರನು 'ಶ್ರುತಿಸುಖದವೃತ್ತ ಸಂಗ್ರಹ'ವನ್ನು ಮಾಡಿರುತ್ತಾನೆ. ವೃತ್ತವಿಚಾರವು ಈ ಅಧ್ಯಾಯದ ವಿಷಯವಲ್ಲ. ಆದರೆ ಪ್ರತಿಪಾದ್ಯ ವಿಷಯವನ್ನು ಸಹೇತುಕವಾಗಿ ವಿವಿಧ ವೃತ್ತದಲ್ಲಿ ಮುಂದಿಟ್ಟು ಆಯಾ ಶ್ಲೋಕದಲ್ಲಿ ವೃತ್ತಗಳ ಹೆಸರನ್ನು ಕೊಟ್ಟಿರುತ್ತಾನೆ.

'ಶಾರ್ದೂಲ ವಿಕ್ರೀಡಿತ' ವೆಂಬ ಹೆಸರು ಮಾತ್ರ ಸಂಪೂರ್ಣವಾಗಿ ಗ್ರಥಿತವಾಗಿಲ್ಲ. ವರಾಹಮಿಹಿರನು ಶಾರ್ದೂಲ ಎನ್ನುತ್ತಾನೆ. ಆದರೂ ಈ ವರಾಹಮಿಹಿರನ ವ್ಯಾಪಾರ ಆಶ್ಚರ್ಯಕಾರಕವಾಗಿದೆ, ಇದರಲ್ಲಿ ಸಂದೇಹವಿಲ್ಲ. ಯಾವ ವೃತ್ತಗಳಿಗೆ ಪಿಂಗಳನು ಪ್ರಮಾಣಿಕಾ, ದೋಧಕ, ವರತನು, ವಾತೋರ್ಮಿ, ಹರಿಣೀ, ಪೃಥ್ವೀ ಮತ್ತು ಅವಿತಥ ಎಂದು ಹೆಸರಿಟ್ಟಿದ್ದಾನೆಯೊ ಆ ವೃತ್ತಗಳಿಗೆ ಅನುಕ್ರಮವಾಗಿ ವರಾಹಮಿಹಿರನು ಸ್ಥಿರ, ದೋಧಕ, ಮಾಲತಿ, ಊರ್ಮಿಮಾಲಾ, ವೃಷಭ

ಚರಿತ, ವಿಲಂಬಿತಗತಿ ಮತ್ತು ಸರ್ಕುಟಕ ಎಂಬೀ ಹೆಸರುಗಳನ್ನು ಕೊಟ್ಟಿರುತ್ತಾನೆ. ವೃಷಭಚರಿತ ಮತ್ತು ವಿಲಂಬಿತಗತಿ ಈ ಎರಡು ಹೆಸರಿಗೆ ಮಟ್ಟಿಗೆ ಈತನು ಭರತ ಸಂಬಂಧಿಯಾಗುತ್ತಾನೆ. ಪಿಂಗಳನು ಹೇಳದೇ ಇರುವ ಪ್ರಸಭ, ಅನವಸಿತಾ ದ್ರುತ ಪದ, ಲಲಿತಪದಾ, ಲಕ್ಷ್ಮೀ ಮತ್ತು ಸಮುದವಿಲಾಸಿನೀ ಈ ಹೊಸ ವೃತ್ತಗಳನ್ನು ಕೊಟ್ಟಿರುತ್ತಾನೆ. ಗ್ರಂಥದ ಇತರ ಕಡೆಗಳಲ್ಲಿ ಕೊಟ್ಟಿರುವ ಮೋಟನಕ (ಬೃ. ಸಂ. ೪೬-೨೬), ಶುದ್ಧವಿರಾಟ್ (ಬೃ. ಸಂ. ೫-೩೮), ವಿದ್ಯುನ್ಮಾಲಾ (ಬೃ. ಸಂ. ೬೮-೨೭), ರುಕ್ಮವತೀ (ಬೃ. ಸಂ. ೬೩-೨) ಮತ್ತು ತೋಟಕ (ಬೃ. ಸಂ. ೪೬-೧೧) ಈ ವೃತ್ತಗಳ ಸಮಾವೇಶವನ್ನು ಈ ಅಧ್ಯಾಯದಲ್ಲಿ ಮಾಡಿರುವುದಿಲ್ಲ. ಅದೇ ಪ್ರಕಾರ ಬೃ. ಸಂ. ೩೩/೨೫/೨೮ ಈ ಶ್ಲೋಕಗಳು ಸುಕಾಮಿನೀ (|—ᴗ—ᴗ |—ᴗ—) ವೃತ್ತದಲ್ಲಿವೆ. ಬೃ. ಸಂ. ೩೩-೨೯, ೩೬-೮, ಈ ಎರಡು ಶ್ಲೋಕಗಳು [|ᴗᴗᴗᴗ——|ᴗᴗ———] ಈ ವೃತ್ತದಲ್ಲಿ ಇದ್ದು ಇದರ ಉಲ್ಲೇಖನವನ್ನು ಯಾವ ಛಂದಃಶಾಸ್ತ್ರಕಾರನೂ ಮಾಡಿಲ್ಲ. ದಂಡಕಕ್ಕೆ ಬೃ. ಸಂ. ಯಲ್ಲಿ ಮೂರು ಉದಾಹರಣೆಗಳು ಸಿಕ್ಕುತ್ತವೆ. (ಬೃ. ಸಂ. ೧೨/೬, ೮೮/೧, ೧೦೩/೬೧,) ಇದರಲ್ಲಿ ಮೂರನೆಯದಾದ ಸಾನಂದ ದಂಡಕದ ಒಂದೇ ಚರಣದಲ್ಲಿ ೧೦೨ ಅಕ್ಷರಗಳಿವೆ.[1] ವರಾಹಮಿಹಿರನ ಬೃಹಜ್ಜಾತಕದ ೨೩/೪. ಶ್ಲೋಕವು (——ᴗ—!ᴗᴗᴗᴗ— ᴗ—ᴗ——) ಈ ಅಭಿನವ ವೃತ್ತದಲ್ಲಿ ಕಂಡುಬರುತ್ತದೆ. ಈ ವೃತ್ತಕ್ಕೆ 'ಕೋಣೋದಯ'ವೆಂದು ಹೆಸರು. ಅದೇ ರೀತಿ (೨೮/೩) ಈ ಶಾಲಿನೀ ವೃತ್ತದ ಶ್ಲೋಕದ ('ಸಿಯರ್ಾಣಾಂ ಸ್ಯಾನ್ನಷ್ಟಜನ್ಮದೃಕಾಣಃ', ಎರಡನೆಯ ಚರಣದಲ್ಲಿ ಋಕಾರಯುಕ್ತ ವ್ಯಂಜನದ ಹಿಂದಿನ ಅಕ್ಷರಕ್ಕೆ ಗುರುತ್ವವು ಬಂದಿದೆ. ಈ ವಿಷಯವು ಚಿಂತನೀಯವಾದುದು.

## ಅಗ್ನಿಪುರಾಣ

ಅಗ್ನಿಪುರಾಣದ ೩೨೮–೩೩೪ನೆಯ ಅಧ್ಯಾಯಗಳಲ್ಲಿ ಛಂದೋವಿವೇಚನೆ ಇದೆ. ಪಿಂಗಳೋಕ್ತ ಪರಿಭಾಷೆಯ ಅವಲಂಬವಿದೆ. ವಿಶೇಷವೇನೂ ಇಲ್ಲ. ಮುದ್ರಿತ ಆವೃತ್ತಿಯಲ್ಲಿ ಅಶುದ್ಧ ಬಹಳ ಉಂಟು.

---

[1] ಅಥ ಬುಧಸ್ಯದಿನೆ ಯಾನಿ ಕಾರ್ಯಾಣಿಕ್ರಿಯಂತೇ ತಾನಿದಂಡಕ ಚತುರ್ಥಪಾದೇನಾಹ : —
ಹರಿತಮಣಿ ಮಹೀಸುಗಂಧೀನಿ ವಸ್ತ್ರಾಣಿಸಾಧಾರಣಂ ನಾಟಕಂ ಶಾಸ್ತ್ರವಿಜ್ಞಾನಕಾವ್ಯಾನಿ ಸರ್ವಾ. ಕಲಾಮುಕ್ತಯೋ ಮಂತ್ರಧಾತುಕ್ರಿಯವಾದನ್ಯೈಪುಣ್ಯಪುಣ್ಯವ್ರತಾಯೋಗದೂತಸ್ತಥಾಽಽಯುಷ್ಯಮಾಯಾನೃತ ಸ್ನಾನ ಹ್ರಸ್ವಾಣಿ ದೀರ್ಘಾಣಿ ಮಧ್ಯಾನಿ ಚ ಚ್ಛಂದತಶ್ಛಂಡವೃಷ್ಟಿ ಪ್ರಯಾತಾನುಕಾರೀಣಿ ಕಾರ್ಯಾಣಿ ಸಿಧ್ಯಂತಿ ಸೌಮ್ಯಸ್ಯ ಲಗ್ನೇಽಹ್ನಿವಾ ||

## ಕಾಳಿದಾಸನ ಶ್ರುತಬೋಧ

ಶ್ರುತಬೋಧ ಗ್ರಂಥದ ೨೦ನೆಯ ಅಂದರೆ ಇಂದ್ರವಜ್ರಾವಿಷಯದ ಶ್ಲೋಕವನ್ನು ಹಲಾಯುಧನು (ಪಿಂ. ೨೮) ಉದಾಹರಿಸಿರುತ್ತಾನೆ. ಇದರಿಂದ ಶ್ರುತಬೋಧವು ಹಲಾಯುಧಾನ ಹಿಂದೆ ಇದ್ದಿರಬೇಕು. ಈ ೪೨ ಶ್ಲೋಕಗಳ ಗ್ರಂಥಕರ್ತನಾದ ಕಾಳಿದಾಸನು ರಘುವಂಶಕಾರ ಕಾಳಿದಾಸನಲ್ಲ. ಈತನು ಪಿಂಗಳೋಕ್ತ ಪರಿಭಾಷೆಯನ್ನು ಉಪಯೋಗಿಸುವುದಿಲ್ಲ ಭರತನ ಪದ್ಧತಿಯನ್ನು ಅನುಸರಿಸುತ್ತಾನೆ. ಆದರೆ ವೃತ್ತಲಕ್ಷಣವನ್ನು ಅನುಷ್ಟುಪ್ ಶ್ಲೋಕದಲ್ಲಿ ಹೇಳದೆ ಆ ವೃತ್ತಗಳಲ್ಲೇ ಕೊಡುತ್ತಾನೆ. ಮತ್ತು ಯತಿಯನ್ನೂ ಕುರಿತು ಹೇಳುತ್ತಾನೆ.

ಯದಿ ಪ್ರಾಚ್ಯೋಹ್ರಸ್ವಃ ಕಮಲನಯನೇ ಪಂಚಗುರವ-
ಸ್ತತೋ ವರ್ಣಾಃ ಪಂಚ ಪ್ರಕೃತಿ ಸುಕುಮಾರಾಂಗಿ ಲಘವಃ |
ತ್ರಯೋಽನ್ಯೇಚೋಪಾಂತ್ಯಾಃ ಸುತನು ಜಘನಾಭೋಗಸುಭಗೇ
ರಸೈರುದ್ರೈರ್ಯಸ್ಯಾಂ ಭವತಿ ವಿರತಿಃ ಸಾ ಶಿಖರಿಣೀ

(ಶ್ರು. ಬೊ. ೩೯)

ಯತಿ (ರಸೈರುದ್ರೈಃ) ಮಾತ್ರ ಪಿಂಗಳೋಕ್ತ ಪರಿಭಾಷೆಯಿಂದ ಹೇಳಿರುತ್ತಾನೆ. ಶ್ರುತಬೋಧದಲ್ಲಿ, ಪ್ರಮಾಣಿಕಾ, ರುಕ್ಮವತೀ, ಲಕ್ಷ್ಮೀ ಈ ವೃತ್ತಗಳಿಗೆ ಅನುಕ್ರಮವಾಗಿ ನಗಸ್ವರೂಪಿಣೀ, ಚಂಪಕಮಾಲಾ ಮತ್ತು ಪ್ರಭಾವತೀ ಎಂಬ ಹೆಸರುಗಳನ್ನು ಕೊಟ್ಟಿದ್ದಾನೆ. ಅಕ್ಷರಪಂಕ್ತಿ (—UU——) ಎಂಬ ಪಂಚಾಕ್ಷರೀ ಹ್ರಸ್ವ ವೃತ್ತವನ್ನೂ ಹೇಳಿರುತ್ತಾನೆ. ಶ್ರುತಬೋಧಕಾರನು ಜಾತಿಯ ವಿಷಯವನ್ನೇ ಪ್ರಸ್ತಾಪಿಸಿಲ್ಲ.

## ವಿರಹಾಂಕನ ವೃತ್ತಜಾತಿ ಸಮುಚ್ಚಯ

ಈ ಗ್ರಂಥವನ್ನು ಪ್ರೊ|| ಹರಿ ದಾಮೋದರ ವೇಲಣಕರ್ ಅವರು ಸಂಪಾದಿಸಿ, ಪ್ರಸ್ತಾವನೆ ಟೀಕೆಗಳೊಡನೆ ಪ್ರಕಾಶಪಡಿಸಿದ್ದಾರೆ. ಅವರ ಮತದಂತೆ ವಿರಹಾಂಕನ ಕಾಲ ಒಂಬತ್ತು ಅಥವಾ ಹತ್ತನೆಯ ಶತಮಾನ. ಗ್ರಂಥಕರ್ತನು ಪ್ರಾಕೃತ ಜಾತಿಗಳ ವಿಚಾರವನ್ನು ಪ್ರಾಕೃತದಲ್ಲೆ ಮಾಡಿರುತ್ತಾನೆ. ಐದನೆಯ ನಿಯಮದಲ್ಲಿ ಸಂಸ್ಕೃತದ ೫೦ ವೃತ್ತಗಳ ವಿವೇಚನೆಯನ್ನು ಸಂಸ್ಕೃತದಲ್ಲಿ ಮಾಡಿದ್ದಾನೆ. ಈತನು ಯತಿಯನ್ನು ಪಾಲಿಸುವುದಿಲ್ಲ. ತ್ರ್ಯಕ್ಷರೀ ಗಣಗಳ ಉಪಯೋಗವನ್ನು ಮಾಡುವುದಿಲ್ಲ. ಈತನು ಒಂದು ವಿಶಿಷ್ಟ ಪರಿಭಾಷೆಯನ್ನು ಯೋಜಿಸಿರುತ್ತಾನೆ. ವೃತ್ತಗಳ ಲಕ್ಷಣಗಳನ್ನು ಆಯಾ ವೃತ್ತಗಳಲ್ಲೇ ಹೇಳುತ್ತಾನೆ. ಉದಾಹರಣೆ:

ಸುರೇಂದ್ರೇಭಂ ಕರ್ಣಂ ಚರಣಪಟಹಂ ಚಂದ್ರವದನೇ
ಪ್ಪ (?) ಯಸ್ಮಿಂಲ್ಲಲಿತಗಮನೇ ಪಶ್ಯಸಿ ಪುನಃ |
ನಿಯುಕ್ತಂ ಕೇಯೂರಂ ಮರಕತಯುತಂ ಭಾವಸಹಿತಂ
ಧ್ವಜಶ್ಚಾಂತೇ ಯಸ್ಯಾ ಸುತನು ಕಥಿತಾ ಸಾ ಶಿಖರಿಣೀ ||

(ವಿ. ವೃ. ೫-೩೫)

ಸುರೇಂದ್ರೇಭ (ᑌ——), ಕರ್ಣ (——), ಚರಣ (—ᑌᑌ), ಪಟಹ (ᑌᑌᑌ), ಕೇಯೂರ (—), ಮರಕತ (—) ಭಾವ (ᑌᑌ), ಧ್ವಜ (ᑌ—) ಈ ಪರಿಭಾಷೆಗಳಿಂದ ವೃತ್ತಲಕ್ಷಣಗಳನ್ನು ತಿಳಿಸುತ್ತಾನೆ.

ಲಘುತನು ವೃತ್ತಗಳಲ್ಲಿ ಗೌ (—) ಏಕಾಕ್ಷರೀ, ನೌ (——) ದ್ವ್ಯಕ್ಷರೀ ವೃತ್ತಗಳನ್ನು ಕೊಟ್ಟಿರುತ್ತಾನೆ. ದಂಡಕವನ್ನು ಸಂಸ್ಕೃತ ವೃತ್ತದಲ್ಲಿ ಕೊಡುವುದಿಲ್ಲ. ನಾಲ್ಕನೆಯ ನಿಯಮದಲ್ಲಿ ಕೊಡುತ್ತಾನೆ. ಈತನು ಕೊಟ್ಟಿರುವ ಶ್ಲೋಕ (ವಿ. ವೃ. ೪-೪೭) ವ್ಯಾಲಕದಂಡಕವಾಗಿದೆ. ಉಪಜಾತಿಗೆ ಮಿಶ್ರವೆಂದು ಹೇಳುತ್ತಾನೆ. ವೃತ್ತಗಳಿಗೆ ಹೊಸ ಹೊಸ ಹೆಸರನ್ನು ಕೊಟ್ಟು ತೊಡಕುಗಳನ್ನು ಹೆಚ್ಚುಮಾಡುವ ಸ್ವಾತಂತ್ರ್ಯವನ್ನು ಈತನು ದೂರಮಾಡುವುದಿಲ್ಲ. ವಂಶಸ್ಥ, ಪ್ರಹರ್ಷಿಣೀ, ರುಚಿರಾ, ವೀರಲಲಿತಾ, ಸುವದನಾ ಈ ವೃತ್ತಗಳಿಗೆ ಅನುಕ್ರಮವಾಗಿ ವಸಂತಮಂಜರೀ, ಮಯೂರಪಿಚ್ಛ ಸದಾಗತಿ, ಪ್ರಮುದಿತಾ, ಈ ಹೆಸರುಗಳನ್ನು ಕೊಡುತ್ತಾನೆ. ಶ್ಯಾಮಾ, ಗುರ್ವೀ, ಕುಸುಮ ಮತ್ತು ಹಯಲೀಲಾಂಗೀ ಈ ಹೊಸ ವೃತ್ತಗಳನ್ನು ಕೊಟ್ಟಿರುತ್ತಾನೆ.

ವಿರಹಾಂಕನು ದೋಹಾಜಾತಿಯನ್ನು ಇತರ ಛಂದಃ ಶಾಸ್ತ್ರಕಾರರಂತೆ ೧೩ ಮತ್ತು ೧೧ ಮಾತ್ರಗಳುಳ್ಳದ್ದನ್ನಾಗಿ ಗಣಿಸದೆ ೧೪ ಮತ್ತು ೧೨ ಮಾತ್ರಗಳುಳ್ಳದ್ದನ್ನಾಗಿ ಗಣಿಸುತ್ತಾನೆ. ಇದರಿಂದಲೇ ಪಾದಾಂತ್ಯದಲ್ಲಿ ಬರುವ ಲಘು ನೋಡುವುದಕ್ಕೆ ಲಘುವಾದರೂ ಉಚ್ಚರಿಸುವಾಗ ಗುರುವಾಗುತ್ತಾದ ಕಾರಣ ಈತನು ಅದನ್ನು ಗುರುವಾಗಿ ಪರಿಗಣಿಸುತ್ತಾನೆ.

## ಜಯದೇವಕೃತ ಛಂದೋವೃತ್ತಿ

ಛಂದೋವೃತ್ತಿ ಜಯದೇವನಿಂದ ರಚಿತವಾದುದು. ಇದರ ಮೇಲೆ ಹರ್ಷಟನ ವಿವೃತಿ ಇದೆ. ಈತನು ಯತಿವಾದಿ. 'ವಿರಾಮೊ ಯತಿರಿತಿ' ಎಂದು ಮೊದಲನೆಯ ಅಧ್ಯಾಯದ ಕೊನೆಯಲ್ಲಿ ಕೊಡುತ್ತಾನೆ. 'ನರ್ಕುಟಕ' ಎಂಬ ವೃತ್ತದ ಹೆಸರನ್ನು ಮೊದಲು ಜಯದೇವನು ಕೊಟ್ಟನೆಂದು ಹೇಮಚಂದ್ರನು ಹೇಳುತ್ತಾನೆ. ವಿರಹಾಂಕನೂ ಇದೇ ನರ್ಕುಟಕ ಹೆಸರನ್ನು ಕೊಡುತ್ತಾನೆ. ಆದ್ದರಿಂದ ಜಯದೇವನು

ವಿರಹಾಂಕನ ಪೂರ್ವದಲ್ಲಿ ಇದ್ದಿರಬೇಕೆಂದು ಪ್ರೊ|| ವೇಲಣಕರರ ಮತ. ಆದರೆ ನರ್ಕುಟಕ ಹೆಸರನ್ನು ವರಾಹಮಿಹಿರನೂ ಕೊಟ್ಟಿದ್ದಾನೆ. ಆದ್ದರಿಂದ ಜಯದೇವನು ವರಾಹಮಿಹಿರನ ಪೂರ್ವದಲ್ಲಿ ಇದ್ದನೆ? ಹೇಮಚಂದ್ರನು 'ನರ್ಕುಟಕಮಿತಿ ಜಯದೇವಃ' ಇಷ್ಟುಮಾತ್ರ ಹೇಳುತ್ತಾನೆ. ಇದರಿಂದ ಜಯದೇವನೇ ನರ್ಕುಟಕ ಹೆಸರನ್ನು ಕೊಟ್ಟನೆಂದು ಹೇಳುವುದಿಕ್ಕಾಗುವುದಿಲ್ಲ.

## ಸ್ವಯಂಭೂಚ್ಛಂದ

ಈ ಗ್ರಂಥವನ್ನು ಪ್ರೊ|| ವೇಲಣಕರರು ಸಂಪಾದಿಸಿ ಪ್ರಕಾಶಪಡಿಸಿದ್ದಾರೆ. ಈ ಜೈನ ಛಂದಃಶಾಸ್ತ್ರಕಾರನು ೧೦ನೆಯ ಶತಮಾನದ ಪೂರ್ವಭಾಗದಲ್ಲಿ ಇದ್ದನೆಂದು ಹೇಳುತ್ತಾರೆ. ಪ್ರಾಕೃತ ಜಾತಿ ಮತ್ತು ಪ್ರಾಕೃತ ಕಾವ್ಯಗಳ ದೃಷ್ಟಿಯಿಂದ ಈ ಗ್ರಂಥದಲ್ಲಿ ಬಹಳ ಮಹತ್ವವಿದೆ. ದುರ್ದೈವದಿಂದ ಹಸ್ತಲಿಕಿತ ಪ್ರತಿಯು ಆದಿಭಾಗದ ಕೆಲವು ಪತ್ರಗಳು ಕಳೆದುಹೋಗಿರುವುದರಿಂದ ಅತಿಜಗತೀವರ್ಗದಲ್ಲಿ ರುಚಿರಾ ಮತ್ತು ಕನಕಪ್ರಭಾ (ಈ ವೃತ್ತವನ್ನು ಆತನು ನಂದಿನೀ ಎಂದು ಕರೆಯುತ್ತಾನೆ) ಈ ಎರಡು ವೃತ್ತಗಳನ್ನು ಬಿಟ್ಟರೆ ೧೪ ಅಕ್ಷರಗಳ ವೃತ್ತಪರ್ಯಂತ ಸರ್ವ ವೃತ್ತಗಳ ವೃತ್ತಾಂತವು ನಷ್ಟವಾಗಿದೆ. ಆದರೂ ಈತನು ಕೊಟ್ಟಿರುವ ವಿಷಮ, ಅರ್ಧಸಮ ಮತ್ತು ಸಮವೃತ್ತಗಳ ಸಂಖ್ಯೆ ಕಡಮೆ ಏನೂ ಇಲ್ಲ. ಮುಂದೆ ಹೇಮಚಂದ್ರನ ಛಂದೋನುಶಾಸನದಲ್ಲಿ ಕಂಡುಬರುವ ಎಷ್ಟೋ ಹೊಸ ವೃತ್ತಗಳು ಮೊದಲು ಸ್ವಯಂಭೂಚ್ಛಂದದಲ್ಲಿ ಕಂಡುಬರುತ್ತವೆ. ಈತನು ವೃತ್ತಲಕ್ಷಣವನ್ನು ಪ್ರಾಕೃತದಲ್ಲಿ ಹೇಳಿ ಹೆಸರನ್ನೂ ಪ್ರಾಕೃತದಲ್ಲಿ ಕೊಡುತ್ತಾನೆ. ಆದರೆ ವೃತ್ತದ ಲಕ್ಷಣವನ್ನು ಅದೇ ವೃತ್ತದಲ್ಲಿ ಕೊಡುತ್ತಾನೆ.

ಪಢಾ ದೋಪ್ಪಾ ಚಂಸೋ ಮಹುಲತಿ ಗುರೂ ಸವ್ವಪರಲಾ
ಗಆರಂತೋ ಸೇಸೋ ಹುವಇ ಚಲಣೇ ಸಾ ಸಿಹರಿಣೀ

(ಸ್ವ. ಛ. ೧-೫೬)

ಈ ಗ್ರಂಥದಲ್ಲಿ ಒಂದು ವಿಶೇಷವೇನೆಂದರೆ ವೃತ್ತಗಳ ಉದಾಹರಣೆಗಳನ್ನು ಈತನು ಸ್ವಯಂ ರಚಿಸದೆ ಕವಿಗಳು ರಚಿಸಿರುವ ಪ್ರಾಕೃತಕಾವ್ಯಗಳಿಂದ ಸಂಗ್ರಹಿಸಿ ಸಂಕ್ಷೇಪವಾಗಿ ಶ್ಲೋಕವು ಯಾವುದು, ಯಾರು ರಚಿಸಿದವರು, ಎಂಬುದನ್ನು ತಿಳಿಸುತ್ತಾನೆ. ಪಿಪೀಲಿಕಾ, ಮಾಲಾ, ಇತ್ಯಾದಿ ಕ್ಲಿಷ್ಟವೃತ್ತಗಳಲ್ಲಿ ಅನೇಕ ಕವಿಗಳು ಪದ್ಯಗಳನ್ನು ರಚಿಸಿರುವುದನ್ನು ನೋಡಿದರೆ ಪ್ರಾಕೃತ ಕಾವ್ಯವೈಚಿತ್ರ್ಯವು ಎಲ್ಲರಿಗೂ ಭಾಸವಾಗುತ್ತದೆ.

ಸ್ವಯಂಭುವೇ ಯತಿಯನ್ನು ಮಾನ್ಯಮಾಡುವುದಿಲ್ಲವಾದ್ದರಿಂದ ಯಾವ ಪಿಂಗಳನ ಅಪವಾಹಕ ವೃತ್ತವು ಯತಿದೃಷ್ಟ್ಯಾ ಭೃಂಗಾವರ್ತನೀ ಅಥವಾ ಷಣ್ಮಾತ್ರಕ ಆವರ್ತನವಾಗಿ ಕಂಡುಬರುತ್ತದೆಯೋ

[| – – – | ⏑⏑⏑⏑⏑⏑ | ⏑⏑⏑⏑⏑⏑ | ⏑⏑⏑⏑⏑⏑ | ⏑⏑ – – | –]

ಅದೇ ಸ್ವಯಂಭೂ ಪ್ರಕಾರ ಪದ್ಮಾವರ್ತನೀ ಅಂದರೆ ಅಷ್ಟಮಾತ್ರಕ ಆವರ್ತನವಾಗಿ ಆಗುತ್ತದೆ.

[| – – – ⏑⏑ | ⏑⏑⏑⏑⏑⏑⏑⏑ | ⏑⏑⏑⏑⏑⏑⏑⏑ | ⏑⏑ – – – ]

ಉದಾಹರಣೆ :

ಅವವಾಹಂ ಸುದ್ಧಸಹಾವಸ್ಸ.

ಫುಲ್ಲೋಲಾವಣಪಸರಿಅಪರಿಮುಲಪರಿಪಿಹಿಅಸಅಲ ಭುಅಣಾಭೋಓ |
ಮಾಅದ್ಧುಗ್ಗಅಸುವುಣಸಕುವಲಅವಣಕಮುಲಪಸರಿಅರಅ ವೋದೋ |
ಅಚ್ಚಂತಂ ಪಿಅಪರಹುಅಮುಹುಅರ ಮುಹುರಅರರ ಇಅರವಸಂಗೀಓ |
ಅವ್ವೋ ಕಸ್ಸವ ಣ ಹರಇ ಮಣಹರ ಮಲಅಗಿರಿಸುರಹಿ ಸಿಹರುದ್ದೇಸೋ ||

## ಹಲಾಯುಧನ ವೃತ್ತಿ

ಪಿಂಗಳನ ಛಂದಃಸೂತ್ರದ ಮೇಲೆ ಹಲಾಯುಧನ ಮೃತಸಂಜೀವಿನೀ ವೃತ್ತಿ ಇದೆ. ಈತನು ೧೦ನೆಯ ಶತಮಾನದಲ್ಲಿ ಇದ್ದಿರಬೇಕು. 'ವರತನು ಸಂಪ್ರವದಂತಿ ಕುಕ್ಕುಟಾಃ' ಎಂಬ ಮಹಾಭಾಷ್ಯದ ಸ್ಫುಟಚರಣದ ಸಮಸ್ಯಾಪೂರ್ತಿ ಯಾವ ಶ್ಲೋಕದಲ್ಲಿ ಇದೆಯೋ ಮತ್ತು ಆ ಶ್ಲೋಕ ಕುಮಾರಪಾಲನದೆಂದು ಕ್ಷೇಮೇಂದ್ರನು ಯಾವುದನ್ನು ಹೇಳುತ್ತಾನೆಯೋ ಆ ಶ್ಲೋಕವನ್ನು ಹಲಾಯುಧನು ವರತನು ವೃತ್ತಕ್ಕೆ ಉದಾಹರಣೆಯನ್ನಾಗಿ ಕೊಟ್ಟಿದ್ದಾನೆ.

ಹಲಾಯುಧನು ಕಾಳಿದಾಸ ಮಾಘ ಇತ್ಯಾದಿ ಅನೇಕ ಕವಿಗಳ ಗ್ರಂಥಗಳಿಂದ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಸ್ವಯಂಭೂ ಹೇಳುವಂತೆ ಉದಾಹರಣೆಗಳನ್ನು ಇಂಥಾ ಸ್ಥಳದಿಂದ ಸಂಗ್ರಹಿಸಿದ್ದೆಂಬುದನ್ನು ಹೇಳುವುದಿಲ್ಲ. ಶ್ಲೋಕಗಳನ್ನು ಸಂಗ್ರಹಿಸುವಾಗ ವೃತ್ತದ ಹೆಸರು ಎಲ್ಲಿಯಾದರೂ ಇದೆಯೆ? (ಶ್ಲೋಕದ ನಾಲ್ಕನೆಯ ಚರಣದಲ್ಲಿ ಮಾತ್ರವಲ್ಲ) ಎಂಬ ಈ ಒಂದೇ ಮಾತನ್ನು ಲಕ್ಷಿಸಿದನೆಂದು ತೋರಿಬರುತ್ತದೆ.

ಛಂದಃಸೂತ್ರಗಳ ಅನಂತರ ಕೆಲವು ಶತಮಾನಗಳಾದ ಮೇಲೆ ಹಲಾಯುಧನು ಈ ವೃತ್ತಿಯನ್ನು ಬರೆದನು. ಆದರೆ ಈ ಮಧ್ಯದಲ್ಲಿ ಯಾವ ಹೊಸ ವೃತ್ತಗಳು ರಚಿಸಲ್ಪಟ್ಟವೊ ಅವುಗಳನ್ನು ಸಂಗ್ರಹಮಾಡಿ ಪಿಂಗಳನ ವೃತ್ತಸಂಗ್ರಹಕ್ಕೆ ಪರಿಶಿಷ್ಟವನ್ನಾಗಿ ಜೋಡಿಸಿಲ್ಲ. ಗಾಥಾ ಪ್ರಕರಣದಲ್ಲಿ, ಶಿಶುಪಾಲವಧ ಕಾವ್ಯದ ಶ್ಲೋಕದಿಂದ

ಸೂಚಿತವಾದ ಅತಿಶಾಯಿನೀ ಮತ್ತು ವಿಸ್ಮಿತಾ ಈ ಎರಡು ವೃತ್ತಗಳ ಸಮಾವೇಶವಿದೆ. ಅದೇ ಕಾವ್ಯದ 'ಕುಟಜಾನಿ ವೀಕ್ಷ್ಯ ಶಿಖಿಭಿಃ ಶಿಖರೀಂದ್ರಂ' (ಶಿಶು. ೬-೭೩) ಶ್ಲೋಕದಿಂದ ಸೂಚಿತವಾಗುವ 'ಕುಟಜಾ' ವೃತ್ತ ಈ ಪ್ರಕರಣದಲ್ಲಿ ಏಕೆ ಸೇರಿಸಲ್ಪಡಲಿಲ್ಲವೆಂಬ ಶಂಕೆ ಹಲಾಯುಧನಿಗೆ ಬಾರದಿರುವುದು ಆಶ್ಚರ್ಯವಾಗಿದೆ.

ಪಿಂಗಳನು ಯತಿಯನ್ನು ಹೇಳದೆ ಇರುವ ಅನೇಕ ವೃತ್ತಗಳಲ್ಲಿ 'ಇತ್ಯಾಮ್ನಾಯಃ' ಎಂದು ಹಲಾಯುಧನು ಯತಿಯನ್ನು ಹೇಳುತ್ತಾನೆ. ಕುಮಾರಲಲಿತಾ ವೃತ್ತದಲ್ಲೇ ಯತಿಭೇದವೆಂದು ಹೇಳಿ 'ಇದಂವದನಪದ್ಮಂ' ಎಂಬ ಉದಾಹರಣೆಯನ್ನು ಕೊಟ್ಟು 'ದ್ವಾಭ್ಯಾಂ ಪಂಚಭಿಶ್ಚಯತಿಮಿಚ್ಛಂತಿ' ಎಂದು ಹೇಳುತ್ತಾನೆ. ವಸ್ತುತಃ ಪಿಂಗಳನು ಹೇಗೆ ಯತಿಭೇದದಿಂದ ಮಣಿಗುಣನಿಕರ, ಚಂದ್ರಾವರ್ತಾ, ಮಾಲಾ, ಎಂದು ವೃತ್ತಭೇದವನ್ನು ಮಾಡುತ್ತಾನೆಯೋ ಹಾಗೆಯೆ ವೃತ್ತಭೇದವನ್ನು ಹಲಾಯುಧನು ಪರಿಗಣಿಸಿ ಈ ವೃತ್ತಗಳಿಗೆ ಬೇರೆ ಬೇರೆ ಹೆಸರುಗಳನ್ನು ಕೊಡುವ ಆವಶ್ಯಕತೆಯನ್ನು ಏಕೆ ಪ್ರತಿಪಾದಿಸಕೂಡದು ? ಹಾಗೆಯೆ ಶ್ರುತಬೋಧವು ಈತನಿಗೆ ಪರಿಚಿತವಾದ ಗ್ರಂಥವಾಗಿತ್ತು. ಯಾಕೆಂದರೆ, ಇಂದ್ರವಜ್ರಾ ವೃತ್ತಕ್ಕೆ ಕೊಟ್ಟಿರುವ ಮೂರು ಉದಾಹರಣೆಗಳೊಳಗೆ ಅದರಲ್ಲಿ ಮೊದಲನೆಯದು ಶ್ರುತಬೋಧದಲ್ಲಿ ಇದೆ. ಆದರೆ ಶ್ರುತಬೋಧಕಾರನು

ಇಂದ್ರಿಯಬಾಣೈರ್ಯತ್ರ ವಿರಾಮಾ
ಸಾ ಕಥನೀಯಾ ಚಂಪಕಮಾಲಾ (ಶ್ರು.ಬೊ. 15)

ಎಂದು ಹೇಳಿ ಯತಿಯನ್ನು ಹೇಳಿರುವಾಗ ಪಿಂಗಳನು ಏತಕ್ಕೆ ಯತಿಯನ್ನು ಹೇಳಲಿಲ್ಲವೆಂಬ ವಿಚಾರವನ್ನೇ ಹಲಾಯುಧನು ಮಾಡುವುದಿಲ್ಲ. "ಪಾದತಲೆ ಪದ್ಮೋದರ ಗೌರೇ" ಎಂದು ಹೇಳಿ ಯಾವ ಉದಾಹರಣೆಯನ್ನು ಹಲಾಯುಧನು ಕೊಡುತ್ತಾನೆಯೊ ಅದರಲ್ಲಿ ಯತಿಯನ್ನು ಪಾಲಿಸದೆ ಇರುವುದು ಒಂದು ಕಾರಣವಿರಬಹುದು.

(ಮುಂದುವರಿಯುವುದು)

ಕೌಲಗಿ. ಶೇಷಾಚಾರ್ಯ,

# ಶಕುಂತಲೆಯ ಕಥೆ

ಕಾಳಿದಾಸನು ತನ್ನ 'ಅಭಿಜ್ಞಾನ ಶಾಕುಂತಲ'ದ ಕಥೆಯನ್ನು ಭಾರತದಿಂದ ತೆಗೆದುಕೊಂಡನೆಂದೂ ಭಾರತದಲ್ಲಿಲ್ಲದ ಹಲವು ಕಲ್ಪನೆಗಳನ್ನು ಜೋಡಿಸಿ ಕಥೆಯನ್ನು ಬಹಳ ಚೆನ್ನಾಗಿ ಶೃಗಾರಗೊಳಿಸಿರುವನೆಂದೂ ಹೇಳುವುದು ವಾಡಿಕೆ. ಆದರೆ ಕಾಳಿದಾಸನ ನಾಟಕದಲ್ಲಿರುವ ಕೆಲವು ಸನ್ನಿವೇಶಗಳು ಶಕುಂತಲೆಯ ಕಥೆ ಬರುವ ಬೇರೆ ಕೆಲವು ಗ್ರಂಥಗಳಲ್ಲಿಯೂ ಇವೆ. ಪದ್ಮಪುರಾಣದಲ್ಲಿ ದೂರ್ವಾಸ ಶಾಪವೃತ್ತಾಂತ, ಅಂಗುಳೀಯಕದ ಸುದ್ದಿ, ಇವೆರಡೂ ಇವೆ. ಬೌದ್ಧಜಾತಕ ಕಥೆಯೊಂದರಲ್ಲಿ ಅಂಗುಳೀಯಕದ ಪ್ರಸ್ತಾಪವಿದೆ. ವಿಷ್ಣುಪುರಾಣದಲ್ಲಿ ದೂರ್ವಾಸ ಶಾಪವೃತ್ತಾಂತವಿದೆಯಾದರೂ ಉಂಗುರದ ಸುದ್ದಿಯಿಲ್ಲ. ಪದ್ಮಪುರಾಣ ಕರ್ತನು ಕಾಳಿದಾಸನ ನಾಟಕವನ್ನು ಅನುಸರಿಸಿಯೇ ಬರೆದಿದ್ದಾನೆಂದು ಹೇಳುವುದುಂಟು. ಆದರೆ ವೈದಿಕಮತಕ್ಕೆ ಸಂಬಂಧಪಟ್ಟ ಗ್ರಂಥಗಳೊಂದೊಂದರಲ್ಲಿ ಒಂದೊಂದು ರೀತಿಯಾಗಿರುವ ಈ ಕಥೆಯು ಬೌದ್ಧ ಜೈನ ಸಾಹಿತ್ಯಗಳಲ್ಲಿಯೂ ಇರುವುದರಿಂದಲೂ ಈ ಎಲ್ಲ ಗ್ರಂಥಗಳ ರಚನೆಯ ಕಾಲ ನಿಷ್ಕರ್ಷೆಯಾಗಿ ತಿಳಿಯದಿರುವುದರಿಂದಲೂ ಇದನ್ನು ಯಾರು ಯಾರಿಂದ ತೆಗೆದುಕೊಂಡರೆಂದು ನಿರ್ಣಯಿಸುವುದು ಸಾಧ್ಯವಲ್ಲ.

ಭಾಗವತದ ಒಂಬತ್ತನೆಯ ಸ್ಕಂಧದಲ್ಲಿ ಶಕುಂತಲಾದುಷ್ಯಂತರ ಪ್ರಣಯ ಕಥೆಯಿದೆ. ಆದರೆ ಇದು ಮಹಾಭಾರತದ ದುಷ್ಯಂತೋಪಾಖ್ಯಾನದಷ್ಟು ವಿಸ್ತಾರವಾಗಿಲ್ಲ; ಕೇವಲ ಹದಿನಾರು ಶ್ಲೋಕಗಳಲ್ಲಿಯೇ ಮುಗಿದುಹೋಗುತ್ತದೆ. ಭಾಗವತದಲ್ಲಿ ಶಕುಂತಲೆಯು ತನಗೆ ಮುಂದೆ ಹುಟ್ಟಬಹುದಾದ ಮಗನಿಗೆ ರಾಜ್ಯ ಕೊಡಬೇಕೆಂದು ಅರಸನ ಸಂಗಡ ಒಪ್ಪಂದಮಾಡಿಕೊಳ್ಳುವುದಿಲ್ಲ. ಇಲ್ಲಿ ಅವರ ಮದುವೆಗೆ ಪರಸ್ಪರ ಪ್ರೇಮವೇ ಕಾರಣ. ಆಶ್ರಮವಾಸಿನಿಯಾದ ಶಕುಂತಲೆಯು ಅತಿಥಿಯಾಗಿ ಬಂದ ದುಷ್ಯಂತನನ್ನು ಮೋಹಿಸಿದಳು. ಅರಸನೂ ಆಕೆಯನ್ನು ನೋಡಿದ ಮಾತ್ರದಿಂದಲೇ ಅನುರಾಗವಶನಾಗಿ "ಸ್ವಂ ಹಿ ವೃಣ್ವತೇ ರಾಜ್ಞಾಂ ಕನ್ಯಕಾಸ್ಸದೃಶಂ ವರಮ್' ಎಂದು ಕ್ಷತ್ರಿಯ ಕನ್ಯಕೆಯರಿಗೆ ಸ್ವಯಂವರದ ಹಕ್ಕಿದೆಯೆಂದು ಸೂಚಿಸಿ ಅವಳನ್ನೊಲಿಸಿಕೊಂಡು ಗಾಂಧರ್ವ ವಿಧಿಯಿಂದ ಮದುವೆಯಾಗುತ್ತಾನೆ. ಒಂದು ರಾತ್ರಿ ಅಲ್ಲಿದ್ದು ಅರಸನು ಮಾರನೆಯ ದಿನ ತನ್ನ ನಗರವನ್ನು ಸೇರಿದನು. ಗರ್ಭಿಣಿಯಾದ ಶಕುಂತಲೆಯು ಸಕಾಲದಲ್ಲಿ ಮಗನನ್ನು ಹೆತ್ತಳು. ಕಣ್ವಮಹರ್ಷಿಯು ಆ ಮಗುವಿಗೆ ಜಾತಕರ್ಮಾದಿಗಳನ್ನು ನಡೆಯಿಸಿದನು. ಕೆಲವು ವರ್ಷಗಳ ಮೇಲೆ

ಶಕುಂತಲೆಯು ತನ್ನ ಮಗನನ್ನು ಕರೆದುಕೊಂಡು ಅರಸನ ಬಳಿಗೆ ಹೋದಳು. ಆದರೆ ದೀರ್ಘಕಾಲವಾಗಿದ್ದುದರಿಂದ ನೆನಪಿಲ್ಲದೆ ಅರಸನು ಅವಳನ್ನು ಗುರುತಿಸದೆ ಇರಲು,

[1] "ಮಾತಾ ಭಸ್ತ್ರಾ ಪಿತುಃ ಪುತ್ರೋ ಯೇನ ಜಾತಸ್ಸ ಏವಸಃ
ಭರಸ್ವ ಪುತ್ರಂ ದುಷ್ಯಂತ ಮಾವಮಂಸ್ಥಾ ಶ್ಶಕುಂತಲಾಮ್
ರೇತೋಧಾಃ ಪಿತರಂ ಪುತ್ರೋ ನಯತ್ಯೇವ ಯಮಕ್ಷಯಾತ್
ತ್ವಂಚಾಸ್ಯ ಧಾತಾ ಗರ್ಭಸ್ಯ ಸತ್ಯಮಾಹ ಶಕುಂತಲಾ"

ಎಂದು ಆಕಾಶವಾಣಿಯಾಯಿತು. ಈ ಮಾತುಗಳನ್ನು ಕೇಳಿ ಪರಿಹೃತಸಂಶಯನಾದ ದುಷ್ಯಂತನು ಶಕುಂತಲೆಯನ್ನು ಹೆಂಡತಿಯಾಗಿ ಸ್ವೀಕರಿಸಿದನು.

ಇದು ಭಾಗವತದಲ್ಲಿರುವ ಕಥೆ. ಇದರಲ್ಲಿಯೂ ಕಾಳಿದಾಸನ ನಾಟಕದಲ್ಲಿರುವ ದೂರ್ವಾಸಶಾಪ ವೃತ್ತಾಂತ, ಅಂಗುಳೀಯಕ ಕಥೆ ಮುಂತಾದ ಸಂಗತಿಗಳಿಲ್ಲ. ಆದರೆ ಭಾರತದಲ್ಲಿರುವ ಕೆಲವು ವಿಷಯಗಳೂ ಇದರಲ್ಲಿಲ್ಲ. ದುಷ್ಯಂತನು ಶಕುಂತಲೆಯನ್ನು ಮದುವೆಯಾದ ವಿಷಯ ತನಗೆ ಸ್ಮರಣೆಯಲ್ಲಿದ್ದರೂ ಕಣ್ವರ ಹೆದರಿಕೆಯಿಂದ ಅವರನ್ನು ಕರೆಸಿಕೊಳ್ಳಲಿಲ್ಲವೆಂದೂ ಅವರೇ ಇದಿರಿಗೆ ಬಂದಾಗ ಸಭೆಯಲ್ಲಿ ತನಗೆ ಅಪಮಾನವಾದೀತೆಂಬ ಹೆದರಿಕೆಯಿಂದ ಅವರನ್ನು ಅಂಗೀಕರಿಸಲಿಲ್ಲವೆಂದೂ ಭಾರತದಲ್ಲಿ ಹೇಳಿದೆ. ಇನ್ನು ರಾಜಸಭೆಯಲ್ಲಿ ದುಷ್ಯಂತ ಶಕುಂತಲೆಯರು ಒಬ್ಬರನ್ನೊಬ್ಬರು ಹೀಯಾಳಿಸುವ ಪ್ರಕರಣವೂ ಭಾಗವತದಲ್ಲಿಲ್ಲ. ಅಲ್ಲದೆ ಭಾರತದಲ್ಲಿ ಶಕುಂತಲೆಯು ಹಲವು ನೀತ್ಯುಪದೇಶಗಳನ್ನು ಬೇರೆ ಮಾಡುತ್ತಾಳೆ. ಭಾರತದಲ್ಲಿನ ಶಕುಂತಲೆಯ ಕಥೆಗೆ ಬೇರೆ ಬೇರೆ ಕಾಲಗಳಲ್ಲಿ ಹಲವು ಸಂಗತಿಗಳು ಸೇರಿಕೊಂಡಿವೆ. ದುಷ್ಯಂತೋಪಾಖ್ಯಾನದ ಬಹುಭಾಗ ಪ್ರಕ್ಷಿಪ್ತವೆಂದೇ ತೋರುತ್ತದೆ. ಆದರೆ ಮೇಲೆ ಹೇಳಿದ ಎರಡು ಶ್ಲೋಕಗಳು ಭಾಗವತದಲ್ಲಿ ಮಾತ್ರವೇ ಅಲ್ಲದೆ ಶಕುಂತಲೆಯ ಕಥೆ ಬರುವ ಇನ್ನೂ ಹಲವು ಗ್ರಂಥಗಳಲ್ಲಿ ಬರುತ್ತವೆ.[2] ಮಹಾಭಾರತದಲ್ಲಿಯೂ ಇವುಗಳನ್ನು ಅನುವಂಶಶ್ಲೋಕಗಳೆಂದು ಹೇಳಿದೆ. ಆದ್ದರಿಂದ ಈ ಶ್ಲೋಕಗಳು ಭಾರತ ಭಾಗವತಗಳಿಗಿಂತ ಮುಂಚೆಯೇ ಜನತೆಯಲ್ಲಿ ಪ್ರಚಾರದಲ್ಲಿದ್ದಿರಬೇಕೆಂದು ತೋರುತ್ತದೆ. ಈ ಊಹೆಗೆ ಉಪಷ್ಟಂಭಕವಾಗಿ ಶತಪಥ ಬ್ರಾಹ್ಮಣದಲ್ಲಿ ಶಕುಂತಲೆ ದುಷ್ಯಂತ ಮತ್ತು

---

[1] ದುಷ್ಯಂತ! ತಾಯಿಯು ಆಧಾರ ಮಾತ್ರ. ಯಾವನಿಂದ ಹುಟ್ಟುವನೋ ಅವನು ತಾನೇ. ಮಗನು ತಂದೆಗೆ ಸೇರಿದವನು. ಆದ್ದರಿಂದ ಮಗನನ್ನು ಸಂರಕ್ಷಿಸು. ಶಕುಂತಲೆಯನ್ನು ತಿರಸ್ಕರಿಸಬೇಡ. ವಂಶೋದ್ಧಾರಕನಾದ ಮಗನು ತಂದೆಯನ್ನು ನರಕದಿಂದ ರಕ್ಷಿಸುತ್ತಾನೆ. ಈ ಗರ್ಭವನ್ನಿಟ್ಟವನು ನೀನೇ. ಶಕುಂತಲೆ ಸತ್ಯವನ್ನಾಡಿದಳು.

[2] ವಿಷ್ಣುಪುರಾಣ, ಹರಿವಂಶ, ಪದ್ಮಪುರಾಣ, ವಾಯುಪುರಾಣ, ಮತ್ಸ್ಯಪುರಾಣ.

ಭರತರ ಹೆಸರುಗಳು ಬಂದಿವೆ. ಈಗ ಪ್ರಚಾರದಲ್ಲಿರುವ ರೂಪದಲ್ಲಿ ಅಲ್ಲದಿದ್ದರೂ ಶಕುಂತಲಾ ದುಷ್ಯಂತರ ಕಥೆ ಆವೇಳೆಗಾಗಲೇ ಹರಡಿತ್ತು.

ವೈದಿಕ ಗ್ರಂಥಗಳಲ್ಲಿಯೇ ಅಲ್ಲದೆ ಬೌದ್ಧ, ಜೈನ ಗ್ರಂಥಗಳಲ್ಲಿಯೂ ಈ ಕಥೆ ಹರಡಿತ್ತೆಂದು ತಿಳಿಯಲು ಕಾರಣವಿದೆ. ಬುದ್ಧನ ಜಾತಕ ಕಥೆಯೊಂದರಲ್ಲಿ ಶಕುಂತಲೆಯ ಕಥೆಯನ್ನು ಬಹಳಮಟ್ಟಿಗೆ ಹೋಲುವ ಒಂದು ಕಥೆಯಿದೆ. ವಾರಾಣಸಿಯ ಬ್ರಹ್ಮದತ್ತ ರಾಜನು ಒಂದುದಿನ ಪುರೋದ್ಯಾನದಲ್ಲಿ ವಿಹರಿಸುತ್ತಿರುವಾಗ ಒಬ್ಬ ಹೆಂಗಸು ಉದ್ಯಾನದ ಒಂದುಕಡೆ ಉಲ್ಲಾಸದಿಂದ ಹಾಡುತ್ತಾ ಸೌದೆಗಾಗಿ ಕಡ್ಡಿಗಳನ್ನು ಮುರಿಯುತ್ತಿದ್ದಳು. ಆ ಸಂಗೀತಕ್ಕೆ ಕಿವಿಸೋತು ಅರಸನು ಆ ಹೆಂಗಸನ್ನು ನೋಡಿದನು. ದರ್ಶನಮಾತ್ರದಿಂದಲೇ ಪ್ರೇಮಪರವಶನಾದ ಅರಸನು ಅವಳನ್ನು ಒಲಿಸಿಕೊಂಡು ಅವಳ ಸಹವಾಸ ಮಾಡಿದನು. ಅವಳು ಆಗ ತಾನು ಗರ್ಭವತಿಯಾದುದನ್ನರಿತು ಅರಸನಿಗೆ ಆ ಸಂಗತಿಯನ್ನು ಹೇಳಿದಳು. ಅರಸನು ಅವಳಿಗೆ ತನ್ನ ಮುದ್ರೆಯುಂಗರವನ್ನು ಕೊಟ್ಟು "ಹೆಣ್ಣು ಮಗುವಾದರೆ ಈ ಉಂಗುರವನ್ನು ಅದರ ಪೋಷಣೆಗಾಗಿ ವೆಚ್ಚಮಾಡು, ಗಂಡುಮಗುವಾದರೆ ಈ ಉಂಗುರವನ್ನೂ ಮಗುವನ್ನೂ ನನ್ನಲ್ಲಿಗೆ ತಾ" ಎಂದು ಹೇಳಿ ಹೊರಟುಹೋದನು.

ಕಾಲಕ್ರಮದಲ್ಲಿ ಆ ಹೆಂಗಸು ಗಂಡು ಮಗುವನ್ನು ಹೆತ್ತಳು. ಬೋಧಿಸತ್ವನೇ ಅವಳ ಮಗನಾಗಿ ಹುಟ್ಟಿದ್ದನು. ಆ ಮಗು ಸ್ವಲ್ಪ ವಯಸ್ಸಾಗಿ ಓಡಾಡುವ ಹಾಗಾದಾಗ ಅವನ ಜತೆಯ ಹುಡುಗರು ತಂದೆಯಿಲ್ಲದವನೆಂದು ಅಲ್ಲಗಳೆಯಲು ಅವನು ತನ್ನ ತಂದೆ ಯಾರೆಂದು ತಾಯಿಯನ್ನು ಕೇಳಿದನು. "ಮಗು, ನೀನು ವಾರಾಣಸಿಯ ದೊರೆಯ ಮಗ" ಎಂದು ಉತ್ತರ ಬಂತು. 'ಏನು ನಿದರ್ಶನ?' 'ಇಗೋ ಈ ಅಭಿಜ್ಞಾನಾಭರಣವನ್ನು ಅರಸನು ಕೊಟ್ಟಿದ್ದಾನೆ.' 'ಹಾಗಾದರೆ ತಂದೆಯಲ್ಲಿಗೆ ಹೋಗೋಣ ನಡೆ' ಹೀಗೆ ಮಗನ ಒತ್ತಾಯಕ್ಕೋಸ್ಕರವಾಗಿ ಅವಳು ಮಗನನ್ನು ಕರೆದುಕೊಂಡು ಉಂಗುರದೊಡನೆ ಅರಸನ ಬಳಿಗೆ ಹೋದಳು.

ಅರಸನಿಗೆ ಆ ಹೆಂಗಸಿನ ಪರಿಚಯ ನೆನಪಿಗೆ ಬಂದರೂ ಸಭೆಯಲ್ಲಿ ಇದನ್ನು ಒಪ್ಪಿಕೊಂಡರೆ ತನಗೆ ಅಪಮಾನವೆಂದು ಬಗೆದು ಅವನು ಒಪ್ಪಿಕೊಳ್ಳಲಿಲ್ಲ; ಅವರನ್ನು ತಿರಸ್ಕರಿಸಿದನು. ಅವಳ ನೆನಪೇ ತನಗಿಲ್ಲವೆಂದೂ ಆ ಉಂಗುರವೂ ತನ್ನದಲ್ಲವೆಂದೂ ಹೇಳಿಬಿಟ್ಟನು. ಆಗ ಆಕೆಯು ತನ್ನ ಮಾತನ್ನು ಸ್ಥಿರಪಡಿಸಲು ಇನ್ನೇನೂ ಮಾರ್ಗ ತೋರದೆ "ಮಹಾರಾಜ, ನನಗೆ ಇನ್ನು ಯಾವ ಸಾಕ್ಷ್ಯವೂ ಇಲ್ಲ. ದೇವರಿಗೆ ಮೊರೆಯಿಡುವುದೊಂದೇ ನನಗೆ ದಾರಿ. ಇಗೋ ಈ ಮಗುವಿಗೆ ನೀನು ತಂದೆಯಾದ ಪಕ್ಷಕ್ಕೆ ಈ ಮಗು ಅಂತರಿಕ್ಷದಲ್ಲಿ ನಿಲ್ಲಲಿ. ಇಲ್ಲದಿದ್ದರೆ ಕೆಳಗೆ ಬಿದ್ದು ಸಾಯಲಿ" ಎಂದು ಹೇಳಿ ತನ್ನ ಮಗುವನ್ನು ಮೇಲಕ್ಕೆ ಎಸೆದಳು.

ಬೋಧಿಸತ್ವನು ಅಂತರಿಕ್ಷದಲ್ಲಿ ಪದ್ಮಾಸನಸ್ಥನಾಗಿ ಕುಳಿತು ತಾನು ಆ ರಾಜನ ಮಗನೇ ಹೌದೆಂಬುದನ್ನು ಸಿದ್ಧಾಂತಪಡಿಸಿದನು. ಆಗ ಅರಸನು ಆ ಸತಿಪುತ್ರರನ್ನು ತನ್ನವರನ್ನಾಗಿ ಸ್ವೀಕರಿಸಿದನು. ಬ್ರಹ್ಮದತ್ತನ ತರುವಾಯ ಆ ಹುಡುಗನೇ ರಾಜನಾದನು. ಕಟ್ಟಿಗೆ ಹೊರುತ್ತಿದ್ದವಳ ಮಗನಾದ್ದರಿಂದ ಅವನಿಗೆ ಕಟ್ಠವಾಹನನೆಂದೇ ಹೆಸರಾಯಿತು (ಇದಕ್ಕೆ ಕಟ್ಠವಾಹನ ಜಾತಕವೆಂದೇ ಹೆಸರು).

ಈ ಕಥೆಯಲ್ಲಿ ಅಂಗುಳೀಯಕದ ವೃತ್ತಾಂತವಿದೆ. ಕಾಳಿದಾಸನ ನಾಟಕದಲ್ಲಿ ನಡೆದ ಹಾಗೆ ಇಲ್ಲಿ ಉಂಗುರ ಕಳೆದುಹೋಗುವುದಿಲ್ಲವಾದರೂ ಇದ್ದೂ ನಿಷ್ಫಲವಾಗುತ್ತದೆ — ಅರಸನು ಅದನ್ನು ತನ್ನದೆಂದು ಒಪ್ಪದಿದ್ದುದರಿಂದ. ಅರಸನು ತನಗೆ ನೆನಪಿದ್ದರೂ ಅಪಮಾನದ ಅಂಜಿಕೆಯಿಂದ ಹೆಂಗಸನ್ನು ಒಪ್ಪಿಕೊಳ್ಳದಿರುವ ಸಂಗತಿ ಭಾರತಕ್ಕೂ ಇದಕ್ಕೂ ಸಮಾನವಾಗಿದೆ. ಇದರಿಂದ ಶತಪಥಬ್ರಾಹ್ಮಣದ ಕಾಲಕ್ಕೆ ಈ ಕಥೆಯು ಪ್ರಚಾರದಲ್ಲಿದ್ದಿತೆಂದೂ ಮಹಾಭಾರತದ ವೇಳೆಗೆ ಜನಶ್ರುತಿಯಾಗಿದ್ದ ಆ ಕಥೆಯು ಭಾರತಕ್ಕೆ ಸೇರಿತೆಂದೂ ಊಹಿಸಬಹುದಲ್ಲದೆ ಆ ಕಥೆಯ ಆಧಾರದಿಂದಲೇ ಈ ಬೌದ್ಧಕಥೆಯೂ ಕಲ್ಪಿತವಾಯಿತೆಂದು ತೋರುತ್ತದೆ. ಕಾಳಿದಾಸನು ತನ್ನ ನಾಟಕಕ್ಕೆ ವಸ್ತುವನ್ನು ಭಾರತದಿಂದಲೇ ಆರಿಸಿಕೊಂಡಿದ್ದರೂ ಈ ಬೌದ್ಧಕಥೆಗೆ ಆಧಾರವಾದ — ಅಂಗುಳೀಯಕ ವೃತ್ತಾಂತವನ್ನೊಳಗೊಂಡ — ಜನಪದ ಸಾಹಿತ್ಯದ ಕಥೆಯನ್ನೂ ನೋಡಿರಬಹುದೆಂದು ಭಾವಿಸಿದರೆ ತಪ್ಪಾಗಲಾರದು.

ಪಾರ್ಶ್ವನಾಥ ಚರಿತ್ರೆಯಲ್ಲಿ ಕಾಳಿದಾಸನ ನಾಟಕದ ಕಥೆಯ ಹೋಲಿಕೆ ಬಹಳವಾಗಿ ಕಾಣುತ್ತದೆ. ನಮ್ಮ ಪದ್ಮಪುರಾಣದ ಕಥೆಯ ಹಾಗೆ ಇದೂ ಕಾಳಿದಾಸನ ನಾಟಕವನ್ನು ನೋಡಿ ಬರೆದಿದ್ದರೂ ಇರಬಹುದು. ಶಕುಂತಲಾ ದುಷ್ಯಂತರ ಪ್ರಣಯ ಕಥೆಯನ್ನು ಹೋಲುವ ಒಂದು ಉಪಾಖ್ಯಾನವಿದೆ. ಸುರಪುರದ ಅರಸು ಸುವರ್ಣಬಾಹು ಒಂದು ದಿನ ಒಂದು ಹೊಸ ಕುದುರೆಯನ್ನೇರಿ ವಿಹಾರಕ್ಕೆಂದು ಹೊರಟನು. ಆದರೆ ಆ ಕುದುರೆಗೆ ವಿಪರೀತ ಶಿಕ್ಷಣವನ್ನು ಕೊಟ್ಟಿತ್ತು[1]. ಅದು ಸುವರ್ಣಬಾಹುವನ್ನು ಹೊತ್ತುಕೊಂಡು ಹೋಗಿ ಯಾವುದೋ ಅಪರಿಚಿತವಾದ ಸರೋವರದ ಬಳಿ ನಿಂತಿತು. ಆ ಸರೋವರದ ಅಚ್ಛೋದಕದಲ್ಲಿ ಮಿಂದಮೇಲೆ ಅರಸನು ಅದರ ಪರಿಸರದಲ್ಲಿ ಹರಿಣಮಯವಾದ ಒಂದು ಋಷ್ಯಾಶ್ರಮವನ್ನು ಕಂಡನು. ಒಡನೆಯೇ ಅವನ ಬಲಗಣ್ಣು ಅದುರಿತು. ಈ ಶುಭಶಕುನದಿಂದ ತನ್ನ ಆಯಾಸವನ್ನು ಮರೆತು ಹರ್ಷಚಿತ್ತನಾದ ಸುವರ್ಣಬಾಹು ಮುಂದೆ ಹೋಗಲು ಆಶ್ರಮದಲ್ಲಿ ಲತೆಗಳಿಗೆ

---

[1] ಸಾಧಾರಣವಾದ ಅಶ್ವಶಿಕ್ಷೆಯ ವಿಪರ್ಯಾಸ. ಸವಾರನು ಕುದುರೆಯ ಸ್ವಭಾವವನ್ನು ತಿಳಿಯದೆ ಕಷ್ಟಪಡುತ್ತಾನೆ.

ನೀರೆರೆಯುವ ಕೆಲಸದಲ್ಲಿ ತೊಡಗಿದ್ದ, ಸಖೀಪರಿವೃತಳಾದ ಒಬ್ಬ ಸುಂದರ ಕನ್ಯೆಯನ್ನು ಕಂಡನು. ಅವಳು ರಂಭೆಗಿಂತ ಸುಂದರಿಯೆಂದೆನಿಸಿತು ಅರಸನಿಗೆ. ನಾಗ, ವಿದ್ಯಾಧರ, ಅಪ್ಸರಸ್ತ್ರೀಯರೆಲ್ಲರ ಸೌಂದರ್ಯದ ಸಾರವೇ ಆಕೆಯೆಂದು ತೋರಿತು. ಅರಸನು ಹೀಗೆ ಯೋಚಿಸುತ್ತಿರುವಾಗ ಆ ಕನ್ಯೆಯು ತನ್ನ ಗೆಳತಿಯೊಬ್ಬಳೊಡನೆ ಪುಷ್ಪಿತವಾದ ಲತಾ ಗೃಹವೊಂದನ್ನು ಹೊಕ್ಕಳು. ಅವಳನ್ನೇ ನೋಡುತ್ತಿದ್ದು ಆ ಸೌಂದರ್ಯ ಮುಗ್ಧ ನಾದ ಅರಸನು ಅವಳು ಸಾಮಾನ್ಯಳಾದ ಆಶ್ರಮವಾಸಿನಿಯಾಗಿರದೆ ಯಾವುದೋ ರಾಜವಂಶದಲ್ಲಿ ಹುಟ್ಟಿದವಳಾಗಿರಬೇಕೆಂದು ಯೋಚಿಸುತ್ತಿದ್ದನು. ಆ ಸಮಯದಲ್ಲಿ ಒಂದು ದುಂಬಿಯ ಆ ರಮಣಿಯ ಮುಖಕ್ಕೆರಗಿತು. ಅವಳು ರಕ್ಷಣೆಗಾಗಿ ಕೂಗಿ ಕೊಳ್ಳಲು ಸಖಿಯರು "ಆಶ್ರಮರಕ್ಷಣೆ ಸುವರ್ಣಬಾಹು ರಾಜನಿಗೆ ಸೇರಿದ್ದು. ಆತನಿಗೆ ಮೊರೆಯಿಡು" ಎಂದು ಹೇಳಿ ಹಾಸ್ಯಮಾಡಿದರು. ಇಷ್ಟೇನೆಪ ಸಾಕೆಂದು ಅರಸನು ಮುಂದೆ ನುಗ್ಗಿ ಅವರಿಗೆ ಕಾಣಿಸಿಕೊಂಡು "ವಜ್ರನಾಭಸುತನು ರಾಜ್ಯಭಾರ ಮಾಡುತ್ತಿರುವಾಗ ಋಷ್ಯಾಶ್ರಮದಲ್ಲಿ ದೌರ್ಜನ್ಯನಡೆಸುವ ಸಾಹಸಿ ಯಾರು?" ಎಂದನು. ಆಗ ಸಖಿಯೊಬ್ಬಳು ಏನೂ ಪ್ರಮಾದ ನಡೆಯಲಿಲ್ಲವೆಂದೂ ದುಂಬಿ ಯೊಂದು ಆಕೆಯ ಮುಖಕ್ಕೆರಗಿತೆಂದು ಹೇಳುವ ಧೈರ್ಯಮಾಡಿ ಅರಸನ ಪರಿಚಯ ವನ್ನು ಕೇಳಿದಳು. ನಿಜಸ್ವರೂಪವನ್ನು ತಿಳಿಸಲು ಇಷ್ಟವಿಲ್ಲದೆ ತಾನು ರಾಜನಿಂದ ಆಶ್ರಮರಕ್ಷಣೆಗೆ ನಿಯಮಿತನಾದವನೆಂದು ಆತನು ಹೇಳಿಕೊಂಡನು. ಆದರೆ ಆ ರಮ ಣಿಯು ಅವನೇ ಅರಸನಿರಬೇಕೆಂದು ಊಹಿಸಿದಳು. ಆಮೇಲೆ ಅರಸನು ಆಕೆಯ ಪರಿಚಯಮಾಡಿಕೊಳ್ಳ ಬಯಸಲು ಆಕೆಯು ರತ್ನಪುರದ ವಿದ್ಯಾಧರ ರಾಜನಿಗೂ ಅವನ ಹೆಂಡತಿ ರತ್ನಾವಳಿಗೂ ಮಗಳಾದ ಪದ್ಮೆಯೇ ಅವಳೆಂದು ತಿಳಿಯಿತು. ಆ ರಾಜನ ಮರಣಾನಂತರ ಅವನ ಮಕ್ಕಳು ಜಗಳವಾಡಲು ರತ್ನಾವಳಿಯು ತನ್ನ ಚಿಕ್ಕ ಮಗ ಳನ್ನು ಕರೆದುಕೊಂಡು ಆ ಆಶ್ರಮಕ್ಕೆ ಬಂದಳು. ಆಕೆಯ ಅಣ್ಣ ಗಾಲವನೇ ಆ ಆಶ್ರಮದ ಕುಲಪತಿ. ಪದ್ಮೆಯು ಚಕ್ರವರ್ತಿ ಸುವರ್ಣಬಾಹುವಿಗೆ ಹೆಂಡತಿ ಯಾಗುವಳೆಂದೂ ಆ ಅರಸನು ವೈಪರೀತ್ಯಾಭಸ್ತವಾದ ಕುದುರೆಯನ್ನೇರಿ ಅಲ್ಲಿಗೆ ಬರುವನೆಂದೂ ಸಿದ್ಧಪುರುಷನೊಬ್ಬನು ಹಿಂದೆಯೇ ಭವಿಷ್ಯ ಹೇಳಿದ್ದನಂತೆ! ಈ ಸಂಗತಿ ತಿಳಿದು ಸುವರ್ಣಬಾಹು ಬಹಳ ಆನಂದಪಟ್ಟನು. ಈ ವೇಳೆಗೆ ಸರಿಯಾಗಿ ಅರಸನ ಬರವನ್ನು ತಿಳಿದ ಗಾಲವನೂ ಅಲ್ಲಿಗೆ ಬಂದು ಸುವರ್ಣಬಾಹುವಿಗೂ ಪದ್ಮೆಗೂ ಮದುವೆಮಾಡಿದನು. ಆಗ ಪದ್ಮೆಯ ಬಲತಮ್ಮನಾದ ಪದ್ಮೋತ್ತರನು ತನ್ನ ವಿದ್ಯಾಧರ ರಾಜಧಾನಿಯಾದ ವೈತಾಢ್ಯದಿಂದ ಬಂದು ಸುವರ್ಣಬಾಹು ತನ್ನೊಡನೆ ಬಂದು ವಿದ್ಯಾಧರ ರಾಜ್ಯಾಧಿಪತ್ಯವನ್ನು ವಹಿಸಿಕೊಳ್ಳಬೇಕೆಂದು ಕೇಳಿಕೊಂಡನು. ಅದರಂತೆ

ಪದ್ಮಾಸಮೇತನಾದ ಸುವರ್ಣಬಾಹುವು ಸ್ವರ್ಗಗಾಮಿಯಾದ ಒಂದು ಸುವರ್ಣ ರಥವನ್ನೇರಿದನು. ಪದ್ಮಳು ತಾಯಿಯ ಅಗಲಿಕೆಯನ್ನು ಸಹಿಸಲಾರದೆ ದುಃಖಿಸಲು ರತ್ನಾವಳಿ ಅವಳ ಮುಂದಿನ ವೈಭವವನ್ನು ವರ್ಣಿಸಿ ಪತಿಭಕ್ತಿಯ ಮಹಿಮೆಯನ್ನು ಉಪದೇಶಿಸಿ ಸಂತೈಸುವಳು. ಸುವರ್ಣಬಾಹು ವೈತಾಢ್ಯವನ್ನು ಸೇರಿ ವಿದ್ಯಾಧರಾಧಿಪತ್ಯವನ್ನು ವಹಿಸಿಕೊಂಡು ಅಲ್ಲಿ ಕೆಲವು ಕಾಲವಿದ್ದು ತರುವಾಯ ತನ್ನ ಸ್ವಂತ ನಗರವನ್ನು ಸೇರಿದನು.

ಕಾಳಿದಾಸನ ನಾಟಕದ ಕಥೆಗೆ ಹಿಂದೆ, ಮುಂದೆ, ಸುತ್ತ ನೆಲಸಿರುವ ಈ ಶಕುಂತಲಾ ಪ್ರಪಂಚ ಕೌತುಕವನ್ನುಂಟುಮಾಡುವಂಥಾದ್ದಾಗಿದೆ.

ಕೆ. ವೆಂಕಟರಾಮಪ್ಪ.

## ಆಕರಗಳು

ಭಾಗವತ: ಸ್ಕಂಧ ೯, ಅಧ್ಯಾಯ ೨೦.

ಭಾವದೇವಸೂರಿ: ಪಾರ್ಶ್ವನಾಥಚರಿತೆ, ಸರ್ಗ ೪.

Maurice Bloomfield: *The Life and Stories of the Jaina Saviour Parsvanatha*, pp. 104-107.

Cowell: *Jataka Stories: Kaṭṭhavahana Jataka.*

# ಭಾವಸ್ವರೂಪ ಮತ್ತು ರಸೋತ್ಪತ್ತಿ

ಮನಶ್ಶಾಸ್ತ್ರದಲ್ಲಿ ಭಾವಸಂಬಂಧವಾದ ವಿಷಯವನ್ನು ಚರ್ಚೆಮಾಡಿರುವಷ್ಟು ಬೇರೆ ಯಾವ ವಿಷಯವನ್ನೂ ಚರ್ಚೆಮಾಡಿರುವುದು ಅಪರೂಪ. ಅತಿ ಪುರಾತನ ಕಾಲ ದಿಂದಲೂ,— ಮಾನವನು ಭಾವದ ಜಸಿಯನ್ನು ಅನುಭವಿಸಿದಂದಿನಿಂದಲೂ — ಹಾಗೆ ಅನುಭವಿಸಿ, ಅದರ ಸ್ವರೂಪ, ಸಾರ್ಥಕ್ಯದ ವಿಷಯದಲ್ಲಿ ಕುತೂಹಲವನ್ನು ತೋರಿಸಿ ದಂದಿನಿಂದಲೂ, ಭಾವಕ್ಕೆ ಹೆಚ್ಚಿನದೊಂದು ಪ್ರಾಶಸ್ತ್ಯವು ದೊರಕಿದೆ. ಮನಶ್ಶಾಸ್ತ್ರವು ರೂಪುಗೊಂಡು, ಒಂದು ಶಾಸ್ತ್ರವಾಗಲು ಆರಂಭಿಸಿದಂದಿನಿಂದ ಮನಶ್ಶಾಸ್ತ್ರಿಗಳು ಭಾವಸಂಬಂಧವಾದ ವಿಷಯಗಳು ಬಹು ಮುಖ್ಯವಾದವುಗಳೆಂದು ಅರಿತಿರುವುದು ಕಂಡುಬರುತ್ತದೆ. ಆಧುನಿಕ ಮನಶ್ಶಾಸ್ತ್ರದಲ್ಲಿ, ಪ್ರಾಯೋಗಿಕ ಮನಶ್ಶಾಸ್ತ್ರದಲ್ಲಿ ಕೂಡ, ಭಾವದ ಸ್ಥಾನವು ಹಿರಿಮೆಯನ್ನು ಪಡೆದಿದೆ.

ಭಾವದ ವಿಷಯದಲ್ಲಿ ಅನೇಕ ತತ್ವಗಳನ್ನು ಪ್ರತಿಪಾದಿಸಿದ್ದಾರೆ. ಅವು ಅನೇಕ ವಾಗಿರುವುದರಿಂದಲೇ ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ ಎಂಬುದು ವ್ಯಕ್ತ ವಾಗುತ್ತದೆ. ಈ ತತ್ವಗಳನ್ನು ಎರಡು ಪಂಗಡಗಳಾಗಿ ವಿಭಾಗಿಸಬಹುದು; (೧) ದೇಹಕೇಂದ್ರವಾದುವು, ಮತ್ತು (೨) ಮನಃಕೇಂದ್ರವಾದುವು. ದೇಹಕೇಂದ್ರ ತತ್ವಗಳಲ್ಲಿ ನಾವು ಸಾಧಾರಣವಾಗಿ ಕಾಣುವುದೇನೆಂದರೆ, ಭಾವದ ಸ್ವರೂಪದ ಅರಿವಾಗಬೇಕಾದರೆ ದೈಹಿಕವ್ಯಾಪಾರದ ವ್ಯತ್ಯಾಸಗಳನ್ನೇ ಪರಿಶೀಲಿಸಬೇಕೆಂಬ ಕಲ್ಪನೆ. ಮನಃಕೇಂದ್ರತತ್ವಗಳಾದರೋ, ಆ ಅರಿವೆಗೆ ಮನಸ್ಸಿನಲ್ಲಿ ಆಗುವ ವ್ಯತ್ಯಾಸ ಗಳನ್ನು ಪರಿಶೀಲಿಸಬೇಕೆಂದು ಹೇಳುವುವು. ಈ ಎರಡು ವಿಧವಾದ ತತ್ವಗಳ ಸ್ವರೂಪ ವನ್ನು ಈಗಾಗಲೇ ಮನಶ್ಶಾಸ್ತ್ರಿಗಳು ವಿಶದವಾಗಿ ಪ್ರತಿಪಾದಿಸಿದ್ದಾರೆ.

ಪ್ರಸಿದ್ಧನಾದ ಜೇಮ್ಸ್ ಎಂಬ ಮನಶ್ಶಾಸ್ತ್ರಿಯೂ ಮತ್ತು ಅದೇ ಸಮಯದಲ್ಲಿ ಲ್ಯಾಂಗೆ ಎಂಬ ದೇಹಶಾಸ್ತ್ರಜ್ಞನೂ, ಭಾವಸ್ವರೂಪದ ವಿಷಯದಲ್ಲಿ ನೂತನವಾದ ಒಂದು ತತ್ವವನ್ನು ಒಂದೇ ಕಾದಲ್ಲಿ ಪ್ರತಿಪಾದಿಸಿದರು. ಈ ತತ್ವವು ಜೇಮ್ಸ್-ಲ್ಯಾಂಗೆ ತತ್ವವೆಂದು ಮನಶ್ಶಾಸ್ತ್ರದಲ್ಲಿ ಪ್ರಸಿದ್ಧವಾಗಿದೆ.

ಸಾಧಾರಣವಾಗಿ ಭಾವೋದ್ರೇಕವಾಗಬೇಕಾದರೆ ಯೋಗ್ಯವಾದ ಪ್ರಚೋದನ ವಸ್ತುವನ್ನು ನಾವು ಕಾಣಬೇಕು. ಹಾಗೆ ಪ್ರಚೋದಕವನ್ನು ಕಂಡಾಗ ಮೊದಲು ಭಾವವು ಮನಸ್ಸಿನಲ್ಲಿ ಉದ್ರೇಕವಾಗಿ ಬಳಿಕ ದೈಹಿಕವ್ಯಾಪಾರದಲ್ಲಿ ವ್ಯತ್ಯಾಸ

ವಾಗುವುದು ನಮ್ಮೆಲ್ಲರ ಅನುಭವ. ಉದಾಹರಣೆಗಾಗಿ, ನಾವು ಕಾಡಿನಲ್ಲಿ ಹೋಗುತ್ತಿದ್ದೇವೆಂದು ಇಟ್ಟುಕೊಳ್ಳೋಣ. ಆಗ, ಅಕಸ್ಮಾತ್ತಾಗಿ ಎದುರಿಗೆ ಕರಡಿಯೊಂದು ಬಂದರೆ, ಮೊದಲು ನಮಗೆ ಭಯವುಂಟಾಗುತ್ತದೆ. ಬಳಿಕ ಕೈಕಾಲು ನಡುಗುವುದು, ಗಂಟಲು ಬತ್ತಿಹೋಗುವುದು ಇವೇ ಮೊದಲಾದ ವ್ಯತ್ಯಾಸಗಳು ದೈಹಿಕವ್ಯಾಪಾರದಲ್ಲಿ ಕಂಡುಬರುವುವು. ಅಂದರೆ ಭಯದ ಅನುಭವದ ಪ್ರಸ್ತಾರವು ಈ ರೀತಿಯಾಗಿರುತ್ತದೆ— (೧) ಮೊದಲು ಪ್ರಚೋದಕ ವಸ್ತುವನ್ನು ಕಾಣುವುದು, (೨) ಆ ಮೇಲೆ ನಮ್ಮ ಮನಸ್ಸಿನಲ್ಲಿ ಭಾವೋದ್ರೇಕವುಂಟಾಗುವುದು, (೩) ಬಳಿಕ ದೈಹಿಕವ್ಯಾಪಾರದಲ್ಲಿ ವ್ಯತ್ಯಾಸಗಳು ಉಂಟಾಗುವುದು. ಈ ಪ್ರಸ್ತಾರಕ್ರಮವು ಸಾಧಾರಣವಾಗಿ ಎಲ್ಲರ ಅನುಭವದಲ್ಲಿಯೂ ಇದೆ.

ಆದರೆ ಜೇಮ್ಸ್—ಲ್ಯಾಂಗೆ ತತ್ವಕ್ಕೆ ಅನುಸಾರವಾಗಿ ಅನುಭವ ಪ್ರಸ್ತಾರದಲ್ಲಿ ಕ್ರಮ ವಿಪರ್ಯಯವಾಗಬೇಕು. ಅವರು ಹೇಳುವ ಪ್ರಕಾರ, ಮೊದಲು ಪ್ರಚೋದಕ ವಸ್ತುವನ್ನು ಕಾಣುತ್ತೇವೆ. ಆ ಮೇಲೆ ದೈಹಿಕವ್ಯಾಪಾರದಲ್ಲಿ ವ್ಯತ್ಯಾಸಗಳುಂಟಾಗುತ್ತವೆ. ಬಳಿಕ ಭಾವೋದ್ರೇಕವುಂಟಾಗುತ್ತದೆ. ಅಂದರೆ ಇವರ ಅಭಿಪ್ರಾಯಕ್ಕೆ ಅನುಸಾರವಾಗಿ, ಪ್ರಚೋದಕ ವಸ್ತುವನ್ನು ಕಂಡ ಒಡನೆ, ಆ ಅವಧಾನಕ್ಕೆ ಅನುಗುಣವಾಗಿ, ಮನಸ್ಸಿನ ಪ್ರಕ್ರಿಯೆಯು ಇಲ್ಲದೆಯೇ, ದೈಹಿಕವ್ಯಾಪಾರದಲ್ಲಿ ವ್ಯತ್ಯಾಸಗಳುಂಟಾಗುತ್ತವೆ. ಕರಡಿಯನ್ನು ಕಂಡ ಒಡನೆ ದೇಹದಲ್ಲಿನ ಮಾಂಸ ಭಿತ್ತಿಗಳಲ್ಲಿಯೂ ನಿರ್ನಾಳ ಗ್ರಂಥಿಗಳ ಕೆಲಸದಲ್ಲಿಯೂ, ದೇಹದ ಒಳಭಾಗದಲ್ಲಿರುವ ಅಂಗಾಂಗಗಳಲ್ಲಿಯೂ ವ್ಯತ್ಯಾಸವುಂಟಾಗುತ್ತವೆ. ಈ ವ್ಯತ್ಯಸ್ತ ವ್ಯಾಪಾರಗಳ ಅನುಭವವೇ ಭಾವಾನುಭವವೆಂದು ಜೇಮ್ಸ್ ಸ್ಪಷ್ಟವಾಗಿ ಹೇಳಿದ್ದಾನೆ.

ಜೇಮ್ಸ್—ಲ್ಯಾಂಗೆ ತತ್ವವನ್ನು ಈಚಿನ ಮನಶ್ಶಾಸ್ತ್ರಕಾರರಾರೂ ಸಂಪೂರ್ಣವಾಗಿ ಒಪ್ಪಿಲ್ಲ. ಪ್ರಯೋಗಬಲದಿಂದ ಷೆರಿಂಗ್‌ಟನ್ ಮತ್ತು ಕ್ಯಾನನ್ ಈ ತತ್ವವನ್ನು ಸಂಪೂರ್ಣವಾಗಿ ವಿರೋಧಿಸಿರುತ್ತಾರೆ. ದೈಹಿಕವ್ಯಾಪಾರಗಳ ವ್ಯತ್ಯಾಸಗಳು ಮೆದುಳಿಗೆ ಹೋಗದಂತೆ ಶಸ್ತ್ರಚಿಕಿತ್ಸೆಯನ್ನು ಮಾಡಿದ್ದರೂ, ಪ್ರಚೋದಕ ವಸ್ತುವನ್ನು ಕಂಡ ಒಡನೆ ಭಾವೋದ್ರೇಕವಾದ ಸಂದರ್ಭವನ್ನು ತೋರಿಸಿ ಷೆರಿಂಗ್‌ಟನ್ ಈ ತತ್ವವನ್ನು ವಿರೋಧಿಸಿದ. ಹಸಿವು, ಕೋಪ, ಭಯ ಈ ಭಾವಗಳು ಉದ್ರೇಕವಾದಾಗ ದೇಹದಾಂತರ್ಯದಲ್ಲಿ ಒಂದೇ ಮಾದರಿಯ ವ್ಯತ್ಯಾಸಗಳು ಆಗುವುದರಿಂದ ವಿಧವಿಧವಾದ ಭಾವಗಳಿಗೆ ಕಾರಣಗಳು ವಿಧವಿಧವಾದ ದೈಹಿಕ ವ್ಯಾಪಾರ ವ್ಯತ್ಯಾಸಗಳೆಂದು ಹೇಳುವುದು ಕಷ್ಟವೆಂದು ಕ್ಯಾನನ್ ಹೇಳುತ್ತಾನೆ.

ಜೆಷ್ಟೆರೆವ್ ಮತ್ತು ಹೆಡ್ ಇವರ ಪರಿಶೋಧನೆಗಳಿಗೆ ಅನುಸಾರವಾಗಿ ಭಾವದ

ಕೇಂದ್ರವು ಮೇರುದಂಡದ ಮೇಲಿರುವ ತಲಾಮಸ್ ಎಂದು ತಿಳಿಯಬರುತ್ತದೆ. ಇದೇ ಅಭಿಪ್ರಾಯವನ್ನು ಕ್ಯಾನನ್ ಸಹ ಪುಷ್ಟೀಕರಿಸುತ್ತಾನೆ. ತಲಾಮಸ್ಸಿನ ರಚನಾವಿಧಾನವನ್ನು ನೋಡಿದರೆ ಅಲ್ಲಿ ಭಾವಾನುಗುಣವಾದ ರಚನೆಯ ಪ್ರಭೇದಗಳೇನೂ ಕಂಡುಬರುವುದಿಲ್ಲ.

ಒಟ್ಟಿನಲ್ಲಿ ಹೇಳುವುದಾದರ ಜೇಮ್ಸ್-ಲ್ಯಾಂಗೆ ತತ್ವವನ್ನು ಈಗ ಯಾರೂ ಒಪ್ಪುವುದಿಲ್ಲ. ಆದರೆ ಇವರು ಮಾಡಿರುವ ಮಹದುಪಕಾರ ಒಂದಿದೆ. ತತ್ವಶಾಸ್ತ್ರದ ಮೋಹಕ್ಕೆ ಒಳಪಟ್ಟ ಮನಶ್ಶಾಸ್ತ್ರವು ಮಾನವನ ವರ್ತನೆಯನ್ನೇ ಮುಖ್ಯವಾಗಿ ಪರೀಕ್ಷಿಸುವುದನ್ನು ಬಿಟ್ಟು, ದೇಹವನ್ನು ಮೂಲೆಗೆ ಒರಗಿಸಿ, ಮನಸ್ಸಿಗೇ ಹೆಚ್ಚು ಹೆಚ್ಚಾಗಿ ಪ್ರಾಮುಖ್ಯತೆಯನ್ನು ಕೊಡುತ್ತಿತ್ತು. ಹೀಗಾಗಿ ಮನುಷ್ಯನೆಂದರೆ ಮನಸ್ಸಿನ ಕೈಗೊಂಬೆಯೆಂಬ ಭಾವನೆಯು ತಲೆದೋರಿ, ಶರೀರಸಂಬಂಧವು ದೂರವಾಗುತ್ತಿತ್ತು. ಈ ಸಮಯದಲ್ಲಿ ಸರಿಯಾದ ಎಚ್ಚರಿಕೆ ಕೊಟ್ಟು ಮನಶ್ಶಾಸ್ತ್ರದಲ್ಲಿ ಶರೀರದ ಮೇಲ್ಮೆಯೂ ಉಂಟೆಂದು ತೋರಿಸಿಕೊಟ್ಟವರು ಜೇಮ್ಸ್ ಮತ್ತು ಲ್ಯಾಂಗೆ. ಹಿಂದಿನ ಮನಶ್ಶಾಸ್ತ್ರಿಗಳು ಚಿಂತನಾಮಾರ್ಗದ ಸಹಾಯದಿಂದ ಭಾವೋದ್ರೇಕವಾದಾಗ ಏನಾಗುವುದು ಎಂಬುದನ್ನು ಪರೀಕ್ಷಿಸುತ್ತಿದ್ದರು. ಇವರು ಹೆಚ್ಚು ಹೆಚ್ಚಾಗಿ ಮನಸ್ಸಿನ ವ್ಯಾಪಾರಗಳನ್ನೇ ಪರಿಶೀಲಿಸುತ್ತಾ ದೈಹಿಕವ್ಯಾಪಾರಗಳ ಕಡೆಗೆ ಲಕ್ಷ್ಯವನ್ನು ಜೀರದೆ ಅಸಂಪೂರ್ಣವಾದ ತತ್ವಗಳನ್ನು ನೇಯುವುದಕ್ಕೆ ಪ್ರಯತ್ನಪಡುತ್ತಿದ್ದರು. ಹೀಗೆ ಮಾಡುತ್ತಿದ್ದುದರಿಂದ ಭಾವಸ್ವರೂಪದ ವಿಷಯಗಳು ಹೆಚ್ಚು ಬೆಳಕಿಗೆ ಬರಲು ಅವಕಾಶವಿರಲಿಲ್ಲ. ಭಾವಸ್ವರೂಪದ ಅರಿವಿಗೆ ದೈಹಿಕ ವ್ಯಾಪಾರದ ವ್ಯತ್ಯಾಸಗಳ ಜ್ಞಾನವೂ ಆವಶ್ಯಕವೆಂದು ತೋರಿಸಿದ ಉಪಕಾರಿಗಳು ಜೇಮ್ಸ್ ಮತ್ತು ಲ್ಯಾಂಗೆ.

ಹೆನ್ರಿ ಪಿಯರಾನ್ ಎಂಬ ಮನಶ್ಶಾಸ್ತ್ರಿಯು ಹೇಳುವುದೂ ಸ್ವಲ್ಪ ಹಾಗೆಯೇ ಇದೆ. ಇವನ ಅಭಿಪ್ರಾಯದಲ್ಲಿ ಬೇರೆಬೇರೆ ಭಾವಗಳಿಗೆ ಅನುಸಾರವಾಗಿ ದೈಹಿಕ ವ್ಯಾಪಾರದಲ್ಲಿ ಬೇರೆಬೇರೆ ವ್ಯತ್ಯಾಸಗಳು ನಡೆಯುವುವು. ಅಂದರೆ ಭಾವಸ್ವರೂಪದ ತಿಳಿವಳಿಕೆ ನಮಗೆ ಆಗಬೇಕಾದರೆ ವಿಧವಿಧವಾದ ದೈಹಿಕ ವ್ಯಾಪಾರಗಳನ್ನು ಪರಿಶೀಲಿಸಿ ಅವುಗಳನ್ನೂ ಆಯಾಕಾಲದಲ್ಲಿ ಉದ್ರೇಕವಾಗುವ ಭಾವಗಳನ್ನೂ ಜೋಡಿಸಿ, ಒಂದಕ್ಕೊಂದನ್ನು ಗಂಟುಹಾಕಿ, ಕಾರ್ಯಕಾರಣ ಸಂಬಂಧವನ್ನೋ ಅಥವಾ ಇನ್ನು ಯಾವುದಾದರೂ ಸಂಬಂಧವನ್ನೋ ಹೊಂದಿಸಿಬಿಟ್ಟರೆ ಸರಿ. ಇದನ್ನು ನೋಡಿದರೆ, ಈ ವಿಷಯವು ಇಷ್ಟು ಸುಲಭಸಾಧ್ಯವೇ ಎಂದು ಅನುಮಾನ ಬರುತ್ತದೆ. ಬ್ರನ್ಸ್‌ವಿಕ್ ಪರೀಕ್ಷೆಮಾಡಿನೋಡಿ ಕರುಳುಗಳ ಮತ್ತು ಒಳ ಅಂಗಗಳ ವ್ಯಾಪಾರದಲ್ಲಿ ಭಾವಾನು

ಗುಣವಾಗಿ ಸ್ಪಷ್ಟವಾಗಿ ವ್ಯತ್ಯಾಸಗಳು ನಡೆಯುವುದು ಕಾಣುವುದಿಲ್ಲವೆಂದು ಅಭಿಪ್ರಾಯಪಡುತ್ತಾನೆ. ಪಿಯರಾನಿನ ಮತವನ್ನು ಒಪ್ಪುವುದು ಸಾಧ್ಯವಲ್ಲವೆಂದು ಬ್ರನ್ಸ್‌ವಿಕ್ ಪ್ರಯೋಗಬಲದಿಂದ ತೋರಿಸಿಕೊಟ್ಟಿದ್ದಾನೆ.

ಅಂದರೆ ದೇಹಶಾಸ್ತ್ರದ ದೃಷ್ಟಿಯಿಂದ ಕ್ಯಾನನ್, ಬ್ರನ್ಸ್‌ವಿಕ್, ಬೆಷ್ಟೆರೆವ್, ಹೆಡ್ ಮುಂತಾದವರು ತೋರಿಸಿರುವಂತೆ ಭಾವಸ್ವರೂಪದ ನಿರ್ಣಯಕ್ಕೆ ಸಹಾಯವು ಅಷ್ಟು ದೊರೆಯಲಾರದು. ದೈಹಿಕವ್ಯಾಪಾರಗಳ ಪರಿಶೀಲನೆಗಳ ದತ್ತಲಬ್ಧಗಳ ತಳಹದಿಯಮೇಲೆ ಭಾವಸ್ವರೂಪವನ್ನು ನಿರ್ದಿಷ್ಟಮಾಡುವುದು ಆಗದ ಕೆಲಸ.

ದೈಹಿಕವ್ಯಾಪಾರಗಳ ನೆಲಗಟ್ಟಿನ ಮೇಲೆಯೇ ಭಾವಸ್ವರೂಪದ ತತ್ವವನ್ನು ಕಟ್ಟುವುದು ನ್ಯಾಯವೂ ಅಲ್ಲ, ಸಾಧ್ಯವೂ ಅಲ್ಲ ಎಂದು ಷೆಪರ್ಡ್ ಅಭಿಪ್ರಾಯಪಟ್ಟಿರುತ್ತಾನೆ. ಸಾಧಾರಣವಾಗಿ ನರಗಳಲ್ಲಿ ಶಕ್ತಿಪ್ರವಹಿಸಿ, ಕೆಲಸ ನಡೆದಾಗಲೆಲ್ಲ ರಕ್ತನಾಳಗಳ ಕೊನೆಯಲ್ಲಿ ಅವು ಸಂಕುಚಿಸಿ, ನಾಡಿಯ ವೇಗವೂ ರಕ್ತದ ಒತ್ತಡವೂ ವ್ಯತ್ಯಾಸವಾಗುತ್ತವೆ. ಹೀಗಿರುವಾಗ ಭಾವೋದ್ರೇಕವುಂಟಾದಾಗ ರಕ್ತದ ಚಲನದಲ್ಲಿ ವ್ಯತ್ಯಾಸವಾಗಲೇಬೇಕು. ಈ ವ್ಯತ್ಯಾಸಗಳಿಗೆ ಅನುಗುಣವಾಗಿ, ಈ ವ್ಯತ್ಯಾಸಗಳನ್ನೇ ಮುಖ್ಯವೆಂದು ಭಾವಿಸಿ ಭಾವಭಿನ್ನತೆಯನ್ನು ಸ್ಪಷ್ಟಪಡಿಸುವುದು ಸಾಧುವಲ್ಲ. ಲ್ಯಾಂಡಿಸ್ ಮತ್ತು ಗ್ಯುಲೆಟ್ ವಿಧವಿಧವಾದ ಪ್ರಯೋಗಗಳನ್ನು ಮಾಡಿ, ಬಂದಿರುವ ತೀರ್ಮಾನವೂ ಹೀಗೆಯೇ ಇದೆ. ದೇಹಾಂತರ್ಯದಲ್ಲಿ ಸೂಕ್ಷ್ಮವಾದ ಅಂಗಾಂಗಗಳ ವ್ಯಾಪಾರದಲ್ಲಿ ವ್ಯತ್ಯಾಸಗಳು ಉಂಟಾಗುವುವು. ಮುಖಭಾವದಲ್ಲಿ ಬದಲಾವಣೆಯಾಗುವುದು. ಆದರೆ ಇವುಗಳನ್ನೇ ಅತಿ ಮುಖ್ಯವೆಂದು ಭಾವಿಸಿ ಭಾವಸ್ವರೂಪದ ನಿರ್ದಿಷ್ಟತೆಗೆ ಇವುಗಳಿಂದಲೇ ಸಹಾಯವನ್ನು ಪಡೆಯುವುದು ನ್ಯಾಯವಲ್ಲ.

ಪ್ರಾಯೋಗಿಕ ಮನಶ್ಶಾಸ್ತ್ರದಲ್ಲಿ ಭಾವದ ಬಿಸಿಯನ್ನು ಅಳೆಯುವ ಸಾಧನಗಳ ಉಪಯೋಗವಿದೆ. ಉಷ್ಣಮಾಪಕಯಂತ್ರದ ಸಹಾಯದಿಂದ ಉಷ್ಣಾಂಶವನ್ನು ಮಾತ್ರ ಅಳೆಯಬಹುದು; ಯಾವರೀತಿಯ ಜ್ವರವೆಂದು ಹೇಳುವುದು ಅಸಾಧ್ಯ. ಅದರಂತೆ ಭಾವೋದ್ರೇಕಮಾಪಕ ಯಂತ್ರಗಳಲ್ಲಿ ಮುಖ್ಯವಾದ ಸೈಕೋಗಾಲ್ವನೋಮೀಟರ್, ಸೈಕೋಟ್ಯಾಚೋಗ್ರಾಮ್ ಮುಂತಾದುವುಗಳಲ್ಲಿಯೂ ಸಹ ನಮಗೆ ಸಾಧ್ಯವಾಗಿರುವುದು ಭಾವದ ಉಲ್ಬಣತೆಯ ಬಿಸಿಯನ್ನು ಕಂಡುಹಿಡಿಯುವುದು. ಆದರೆ ಭಾವಸ್ವರೂಪವು ಮಾತ್ರ ಅರ್ಥವಾಗಿರುವುದಿಲ್ಲ. ಭಾವಸ್ವರೂಪದ ಅರಿವಿಗೆ ಯಾರಮೇಲೆ ಪ್ರಯೋಗಮಾಡುತ್ತಿರುವೆವೋ ಅವರನ್ನೇ ಕೇಳಿ ತಿಳಿದುಕೊಳ್ಳಬೇಕಾಗಿದೆ.

ಆದುದರಿಂದ ದೇಹಶಾಸ್ತ್ರದ ಬಲದಿಂದಲೂ ಪ್ರಯೋಗಗಳ ಬಲದಿಂದಲೂ ಭಾವಸ್ವರೂಪವನ್ನು ನಿರ್ದಿಷ್ಟಮಾಡುವುದು ಅಸಾಧ್ಯ. ಅಂದರೆ ದೇಹಕೇಂದ್ರ

ತತ್ತ್ವಗಳಿಂದ ನಮಗೆ ಅಷ್ಟು ಪ್ರಯೋಜನವಾಗುವಂತಿಲ್ಲ. ಭಾವಸ್ವರೂಪದ ಜ್ಞಾನಕ್ಕೆ ಬೇರೆ ಕಡೆ ನಾವು ತಿರುಗಬೇಕು.

ಮನಃಕೇಂದ್ರ ತತ್ತ್ವಗಳನ್ನು ಪರಿಶೀಲಿಸಿದರೆ ನಮಗೆ ಕಂಡುಬರುವ ವಿಷಯ ವಾದರೂ ಹೆಚ್ಚಿಲ್ಲ. ಭಾವದ ಉತ್ಪತ್ತಿಗೆ ಮನಸ್ಸೇ ಕಾರಣ — ಅದರ ಸ್ವರೂಪದ ಅರಿವಿಗೆ ಮನೋವ್ಯಾಪಾರಗಳ ಪರಿಶೀಲನೆಯೇ ಮುಖ್ಯ — ಎಂದು ಈ ತತ್ತ್ವಪಂಥಿಗಳು ಹೇಳುತ್ತಾರೆ. ಇವರುಗಳಲ್ಲಿ ಮುಖ್ಯರಾದ ಕೆಲವರ ಅಭಿಪ್ರಾಯಗಳನ್ನು ನೋಡೋಣ.

ಆಧುನಿಕ ಮನಶ್ಶಾಸ್ತ್ರ ಪ್ರಪಂಚದಲ್ಲಿ ಹೆಸರಾಂತ ಮನಶ್ಶಾಸ್ತ್ರಿ ಮೆಕ್‌ಡೂಗಲ್. ಹುಟ್ಟುಗುಣಗಳ ಮತ್ತು ಭಾವಗಳ ವಿಭಜನೆಯನ್ನು ಇವನಷ್ಟು ಸಮರ್ಪಕವಾಗಿ ಯಾರೂ ಮಾಡಿಲ್ಲ. ಈಚೆಗೆ ಮೆಕ್‌ಡೂಗಲ್ಲಿನ ವಿಭಜನೆಯಲ್ಲಿ ಬದಲಾವಣೆಗಳನ್ನು ಹಲವರು ಸಚಿಸಿರುವುದಾದರೂ, ಅವನ ಮತವನ್ನು ಅನುಮೋದಿಸಿರುವವರೇ ಹೆಚ್ಚು. ಆದುದರಿಂದ ಅವನ ಅಭಿಪ್ರಾಯವನ್ನೂ ನಾವು ಪರಿಶೀಲಿಸಬೇಕು.

ಮೆಕ್‌ಡೂಗಲ್ಲಿನ ಅಭಿಪ್ರಾಯಾನುಸಾರ, ಹುಟ್ಟುವಾಗಲೇ ಮನುಷ್ಯನಲ್ಲಿ ಕೆಲವು ಗುಣಗಳಿರುತ್ತವೆ. ಕೆಲವು ಶೈಶವದಲ್ಲಿಯೇ ವರ್ತನೆಯಲ್ಲಿ ಕಂಡುಬರಬಹುದು. ಇನ್ನು ಕೆಲವು ಪ್ರಕಾಶಕ್ಕೆ ಬರಲು, ದೇಹವು ಬೆಳೆದು ಸರಿಯಾದ ಯೋಗ್ಯತೆಯೂ ಅವಕಾಶವೂ ಬೇಕು. ಹುಟ್ಟಿದ ಶಿಶುವು ಹಸಿವಾದಾಗ ಅಳುವುದು, ಅವಲಂಬನ ಸಡಿಲವಾದರೆ ಬೆಚ್ಚುಬೀಳುವುದು, ಅಕಸ್ಮಾತ್ ಶಬ್ದವಾದರೂ ಬೆಚ್ಚುಬೀಳುವುದು. ಈ ಎರಡು ವರ್ತನೆಗಳೂ ಹುಟ್ಟುಗುಣಗಳು. ಇವುಗಳನ್ನು ಯಾರೊಬ್ಬರೂ ಶಿಶುವಿಗೆ ಹೇಳಿಕೊಡ ಬೇಕಾಗಿಲ್ಲ. ಮಗುವಿನಲ್ಲಿ ಪಿತೃದತ್ತವಾಗಿ ಬಂದ ಗುಣವೂ ಅದರ ದೇಹರಚನೆಯೂ ಹಾಗಿವೆ. ಅದಕ್ಕೆ ಅನುಗುಣವಾದ ಮನೋಬೋಧೆಯೂ ಇದೆ. ಆದುದರಿಂದ ಸನ್ನಿವೇಶದಲ್ಲಿ, ಪ್ರಚೋದಕಗಳಾಗಿ ಹಸಿವು, ಅವಲಂಬನ ನಿವಾರಣೆ ಇದ್ದಾಗಲೆಲ್ಲಾ, ಪ್ರತಿಕ್ರಿಯಾರೂಪವಾಗಿ ಶಿಶುವರ್ತನೆಯಲ್ಲಿ ಅಳುವುದು ಬೆಚ್ಚುಬೀಳುವುದೂ ಕಂಡು ಬರುತ್ತವೆ. ಶೈಶವದ ತೀರ ಪ್ರಾರಂಭದಲ್ಲಿ ನಮಗೆ ಕಂಡುಬರುವ ಹುಟ್ಟುಗುಣಗಳು ಇವೆರಡು. (ಇದರಲ್ಲಿ ಇನ್ನೊಂದು ವಿಷಯ:— ಸನ್ನಿವೇಶದಲ್ಲಿರುವ ಪ್ರಚೋದಕ ಗಳನ್ನು ಶಿಶುವು ಕಾಣುತ್ತದೆಯೇ? ಅಥವಾ ಮನಗಾಣುತ್ತದೆಯೇ? ಶೈಶವದ ವರ್ತನೆಯು ಪ್ರಾಣವರ್ಗದ ವರ್ತನೆಯನ್ನೇ ಹೆಚ್ಚಾಗಿ ಹೋಲುತ್ತದೆ. ಪ್ರಚೋದ ಕವು ಪ್ರತಿಬಿಂಬಿತವಾಗಿ ತಮ್ಮ ಕಣ್ಣಿನ ರೆಟಿನದ ಮುಖಾಂತರ ನರಗಳಲ್ಲಿ ಶಕ್ತಿ ರೂಪದಲ್ಲಿ ಉದ್ಭವಿಸಿ ಮೆದುಳಿಗೆ ಹೋಗುತ್ತದೆ. ಇಷ್ಟೇ ಸಾಕೆ? ಅಥವಾ ಹಾಗೆ ಮೆದುಳಿಗೆ ಹೋದ ಶಕ್ತಿಯು ಪುನಃ ವ್ಯತ್ಯಸ್ತವಾಗಿ, ನಾವು ಪ್ರಚೋದಕವನ್ನು ವಸ್ತುವನ್ನಾಗಿ ಮನಗಾಣುವುದಿಲ್ಲವೆ? ಮನಗಾಣದೆಯೇ ಭಾವವು ಉದ್ರೇಕವಾಗ

ಲಾರದೆಂದು ನಾವು ಈಗಾಗಲೇ ತಿಳಿದಿದ್ದೇವೆ.— ಶೈಶವದ ವರ್ತನೆಯು ಪ್ರಾಣಿವರ್ಗದ ವರ್ತನೆಯನ್ನೇ ಹೆಚ್ಚಾಗಿ ಹೋಲುತ್ತಿದ್ದರೂ ಅತಿಸ್ವಲ್ಪಕಾಲದಲ್ಲಿಯೇ ಭಾವದ ಬಿಸಿಯು ತಲೆದೋರಿ ವರ್ತನೆಯ ಅರ್ಥವೂ ಬದಲಾಯಿಸುತ್ತದೆ. *Indian Journal of Psychology*, 1936 ರಲ್ಲಿ ಈ ಲೇಖಕನು 'Evolution of the Instinct' ಎಂಬ ಲೇಖನದಲ್ಲಿ ಪ್ರತಿಪಾದಿಸಿರುವಂತೆ ಪ್ರಚೋದಕವನ್ನು **ಮನಗಾಣುವ** ಶಕ್ತಿ ಪಡೆದಂದಿನಿಂದ ಶಿಶುವನ್ನು ಮಾನವನೆಂದು ಭಾವಿಸಬೇಕು. ಭಾವಾನುಭವವು ಮುಂದೆ ಬರುವುದಾದರೂ ಅದರ ಪ್ರಾರಂಭವು ಮೃಗಾವಸ್ಥೆಯಲ್ಲಿ ಕಾಣಬಹುದಾದ ದೈಹಿಕವ್ಯಾಪಾರದಲ್ಲಿ ಸೂಚಿತವಾಗುವುದೆಂಬುದನ್ನು ನಾವು ಮರೆಯಬಾರದು. ಮಾನವಯೋಗ್ಯ ಅನುಭವಗಳಿಗೆ — ಅದರಲ್ಲಿಯೂ ಭಾವಾನುಭವಕ್ಕೆ — ದೈಹಿಕ ವ್ಯಾಪಾರವು ದೂರವೆಂದು ಕಂಡುಬಂದರೂ — ಈ ಅನುಭವಗಳ ಹುಟ್ಟೆಲ್ಲ ಮೃಗಾವಸ್ಥೆಯಲ್ಲಿಯೇ ಪ್ರಾರಂಭವಾಗಿದೆ. ಆದುದರಿಂದಲೇ ಹೆನ್ರಿ ಪಿಯರಾನ್, ಷೆಪರ್ಡ್ ಮುಂತಾದವರೆಲ್ಲ ಭಾವಸ್ವರೂಪವನ್ನು ತಿಳಿಯಬೇಕಾದರೂ ಅದು ಮೃಗಾವಸ್ಥೆಯಿಂದ ಮಾನವನವರೆಗೆ ಹೇಗೆ ಬೆಳೆದುಬಂದಿತೆಂಬುದನ್ನು ಪರಿಶೀಲಿಸಬೇಕೆಂದು ಹೇಳುವುದು.)

ಹುಟ್ಟುಗುಣಗಳಿಂದ ಪ್ರಾಣಿಗೆ ಬಹಳ ಪ್ರಯೋಜನವುಂಟು. ಪ್ರಾಣಿಯು ಸನ್ನಿವೇಶಕ್ಕೆ ಸರಿಯಾಗಿ ಹೊಂದಿಕೊಂಡು ಹೋಗಲು ಇವು ಸಹಾಯಕಗಳು. ಕಾಡಿನಲ್ಲಿರುವ ಜಿಂಕೆ, ಅಕಸ್ಮಾತ್ ಶಬ್ದವಾದೊಡನೆ ಭಯಪಟ್ಟು ಪಲಾಯನಮಾಡುವುದರಿಂದ ಆ ಶಬ್ದಮಾಡಿದ ಶತ್ರುವಿನ ಬಾಯಿಗೆ ತುತ್ತಾಗದೆ, ಆ ಸನ್ನಿವೇಶಕ್ಕೆ ಸರಿಯಾಗಿ ಹೊಂದಿಕೊಂಡು ಹೋಯಿತು. ಆದುದರಿಂದ ಆ ಸಮಯದಲ್ಲಿ ಪ್ರಚೋದಕವಾದ ಅಕಸ್ಮಾತ್ ಶಬ್ದವನ್ನು ಮನಗಂಡು, ಹುಟ್ಟುಗುಣಾನುಸಾರವಾಗಿ ಮರುಕ್ಷಣದಲ್ಲಿಯೇ ಪಲಾಯನಮಾಡಿ, ಬಂದ ವಿಪತ್ತಿನಿಂದ ಪಾರಾಗಿ, ಭಯೋತ್ಪಾದಕ ಸನ್ನಿವೇಶಕ್ಕೆ ಯೋಗ್ಯವಾದ ರೀತಿಯಲ್ಲಿ ಜಿಂಕೆಯು ಹೊಂದಿಕೊಂಡಿತು. ಈ ರೀತಿಯಲ್ಲಿ ಕೆಲಸಮಾಡುವುದು ಹುಟ್ಟುಗುಣ. ಹುಟ್ಟುಗುಣದ ಪ್ರಾರಂಭವು ಹೇಗೆಯೇ ಇರಲಿ ನಾವು ಮುಖ್ಯವಾಗಿ ಗಮನಿಸಬೇಕಾದುದು ಇದು :— ಶಿಶುವು ಜನಿಸುವಾಗಲೇ ಹುಟ್ಟುಗುಣಾನುಸಾರವಾಗಿ ಪ್ರತಿಕ್ರಿಯೆ ನಡೆಸುವ ಯೋಗ್ಯತೆಯನ್ನು ಹೊಂದಿರುತ್ತದೆ. ಯೋಗ್ಯ ಪ್ರಚೋದಕಾತ್ಮಕವಾದ ಸನ್ನಿವೇಶ, ದೈಹಿಕಸಂಪತ್ತಿ ಇವೆರಡು ದೊರೆತಾಗಲೆಲ್ಲಾ ವರ್ತನೆಯಲ್ಲಿ ಹುಟ್ಟುಗುಣದ ಕೈವಾಡವು ಕಂಡುಬರುತ್ತದೆ.

ಆದರೂ ಅಂತಹ ಸಂದರ್ಭಗಳಲ್ಲಿ ಪ್ರತಿಯೊಂದರಲ್ಲಿಯೂ ಹುಟ್ಟುಗುಣಾನುಸಾರವಾಗಿ ವರ್ತನೆಯು ಬದಲಾಯಿಸಲೇಬೇಕೆಂದಲ್ಲ. ಆ ಸಂದರ್ಭದಲ್ಲಿ ಆ ರೀತಿಯಲ್ಲಿ

ಕೆಲಸಮಾಡಬೇಕೆಂಬ ತೀವ್ರವಾದ ಒತ್ತಾಯವು ಮನಸ್ಸಿಗೆ ಬೋಧವಾಗುತ್ತದೆ. ನಾಗರಿಕನ ನಡತೆಯಲ್ಲಿ ಅನೇಕವೇಳೆ ಈ ಒತ್ತಾಯವು ವರ್ತನೆಯಾಗಿ ಪರಿಣಾಮ ವಾಗದೇ ಇರಬಹುದು.

ಇದೆಲ್ಲವೂ ಹುಟ್ಟುಗುಣದ ವರ್ಣನೆ. ಮೆಕ್‌ಡೂಗಲ್ಲಿನ ಅಭಿಪ್ರಾಯವು ಇಲ್ಲಿಗೆ ನಿಲ್ಲಲಿಲ್ಲ. ಪ್ರತಿಸಲವೂ ಹುಟ್ಟುಗುಣಾನುಸಾರವಾಗಿ ವರ್ತನೆಯಲ್ಲಿ ವ್ಯತ್ಯಾಸವನ್ನು ನಡೆಯಿಸಬೇಕೆಂಬ ಮನೋಬೋಧೆಯಾದಾಗಲೆಲ್ಲ, ತದನುಗುಣವಾಗಿ ಭಾವೋದ್ರೇಕವೂ ಉಂಟಾಗಿ ಈ ಮನೋಬೋಧೆಯು ಬಲವಾದ ಒತ್ತಾಯವಾಗಿ ಪರಿಣಮಿಸುತ್ತದೆ. ಹೀಗೆ ಭಾವವು ಉದ್ರೇಕವಾದಾಗಲೆಲ್ಲ ಮನಸ್ಸಿನ ಮತ್ತು ದೇಹದ ವ್ಯಾಪಾರದಲ್ಲಿ ಅಲ್ಲೋಲಕಲ್ಲೋಲವಾಗುತ್ತದೆ. ಭಾವದ ಉದ್ರೇಕದ ಬಿಸಿಯೇ ಪ್ರಾಣಿಯ ವರ್ತನೆಯಲ್ಲಿ ವ್ಯತ್ಯಾಸವಾಗುವಂತೆ ಮಾಡುವುದು. ಹೀಗೆ ವ್ಯತ್ಯಸ್ತವಾದ ವರ್ತನೆಯು ನಡೆಯುತ್ತಿರುವವರೆಗೂ ಭಾವದ ಬಿಸಿ ಇಳಿದಿರುವುದಿಲ್ಲ. ಶಿಶುವಿಗೆ ಹಸಿವಾದರೆ ಅಳುವುದು. ಈ ಅಳುವೇ ಶಿಶುಗಳ ವರ್ತನೆಯಲ್ಲಿ ಕಂಡುಬರುವ ವ್ಯತ್ಯಾಸ. ಈ ಅಳುವೆಂಬ ಪ್ರತಿಕ್ರಿಯೆಗೂ ಪ್ರತಿಕ್ರಿಯೆಯನ್ನು ಮಾಡಬೇಕೆಂಬ ತೀವ್ರ ಮನೋಬೋಧೆಗೂ — ತದನುಗುಣವಾಗಿ ಕ್ಷುದಾ ಎಂಬ ಭಾವವು ಉದ್ರೇಕವಾಗಿ ಶಿಶುವಿನ ಮನಸ್ಸನ್ನೆಲ್ಲಾ ಆವರಿಸಿಕೊಂಡು ದೈಹಿಕವ್ಯಾಪಾರದಲ್ಲಿ ವ್ಯತ್ಯಾಸವನ್ನು ಉಂಟುಮಾಡುತ್ತದೆ. ಈ ಭಾವದ ಬಿಸಿಯು ಮಗುವು ಅಳುತ್ತಿರುವವರೆಗೂ — ಆ ಅಳುವಿನ ಫಲವಾಗಿ ಆಹಾರವು ದೊರಕುವ ವರೆಗೂ—ಆರದೇ ಇರುತ್ತದೆ. ಯಾವಾಗ ಪ್ರತಿಕ್ರಿಯೆಯ ಗುರಿಯು ಸಾಧಿಸಲ್ಪಡುತ್ತದೆಯೋ ಆಗ ಈ ವರ್ತನೆಯೂ ನಿಲ್ಲುತ್ತದೆ. ಭಾವದ ಬಿಸಿಯೂ ಆರಿ, ಭಾವವೂ ಹೋಗಿ, ಪುನಃ ಮೊದಲಿನಂತೆ ದೇಹ ಮನಸ್ಸಿನ ವ್ಯಾಪಾರವೆಲ್ಲವೂ ಸುಸೂತ್ರವಾಗಿ ನಡೆಯುತ್ತದೆ.

(ಮುಂದುವರಿಯುವುದು.)

ಎಸ್. ಎಸ್. ನಾರಾಯಣಶಾಸ್ತ್ರಿ.

---

Priority claim for the original views expressed in this contribution is laid by the author in 1936, in a short communication to the Indian Science Congress.

# ಭೌತಶಾಸ್ತ್ರದಲ್ಲಿ ಅನಿಶ್ಚಿತತ್ವವಾದ

## (The Theory of Indeterminacy)

ಪ್ರತಿಯೊಂದು ಕಾರ್ಯಕ್ಕೂ ಒಂದು ಕಾರಣ ಉಂಟು ಎಂಬುದು ಅನುಭವಸಿದ್ಧ ವಿಷಯ. ಒಂದು ಕಲ್ಲನ್ನು ಒಂದು ಗಾಜಿನ ಕಿಟಿಕೆಯ ಮೇಲೆ ಎಸೆದರೆ ಗಾಜು ಚೂರು ಚೂರಾಗುವುದು. ಗಾಜು ಚೂರು ಚೂರಾಗುವುದು ಎಂಬ ಕಾರ್ಯಕ್ಕೆ ಕಲ್ಲನ್ನು ಎಸೆದುದೇ ಕಾರಣ. ಕಾರ್ಯವುಂಟಾಗಲು ಕಾರ್ಯಕ್ಕೆ ಪೂರ್ವದಲ್ಲಿ ನಿಯಮವಾಗಿ ಕಾರಣವು ಇದ್ದೇ ಇರಬೇಕು. ಇಷ್ಟು ಮಾತ್ರವೇ ಅಲ್ಲ; ಕಾರಣಕ್ಕೂ ಕಾರ್ಯಕ್ಕೂ ಒಂದು ವಿಧವಾದ ಸಂಬಂಧವೂ ಇರಬೇಕು. ರಾತ್ರಿಗೆ ಹಗಲು ನಿಯತವಾಗಿ ಪೂರ್ವಭಾವಿ. ಅಷ್ಟು ಮಾತ್ರದಿಂದಲೇ ರಾತ್ರಿಗೆ ಹಗಲು ಕಾರಣ ಎಂದು ಹೇಳಲು ಅಗುವುದಿಲ್ಲ. ಎರಡು ವಸ್ತುಸ್ಥಿತಿಗಳಲ್ಲಿ ಒಂದು ನಿಯಮವಾಗಿ ಪೂರ್ವಭಾವಿಯಾಗಿ ಅನಂತರ ಮತ್ತೊಂದು ವಸ್ತುಸ್ಥಿತಿಯು ನಿಯಮವಾಗಿ ಉತ್ಪನ್ನವಾದರೆ ಪೂರ್ವಭಾವಿಯಾದ ವಸ್ತುಸ್ಥಿತಿಯು ಕಾರಣವೆಂದೂ ಉತ್ತರಭಾವಿಯಾದ ವಸ್ತುಸ್ಥಿತಿಯು ಕಾರ್ಯವೆಂದೂ ಕರೆಯಲ್ಪಡುವುವು. ಉತ್ತರಭಾವಿಯಾದ ವಸ್ತುಸ್ಥಿತಿಯು ನಿಯಮವಾಗಿ ಉತ್ಪನ್ನವಾಗಲು ಆ ಎರಡು ವಸ್ತುಸ್ಥಿತಿಗಳಿಗೂ ಒಂದು ಸಹಜವಾದ ಅನಿಮಿತ್ತವಾದ ಸಂಬಂಧವಿರಬೇಕು. ಈ ಸಂಬಂಧವೇ ಕಾರ್ಯಕಾರಣ ಸಂಬಂಧ. ಕಾರ್ಯವನ್ನು ನುಡಿದರೆ ಅದು ಹೇಗೆ ಉಂಟಾಯಿತೆಂದು ಪ್ರಶ್ನೆಯು ತೋರುವುದು. ಹೀಗೆ ತೋರಲು ಕಾರ್ಯಕಾರಣಗಳಿಗಿರುವ ಸ್ವಾಭಾವಿಕ ಸಂಬಂಧದಲ್ಲಿ ಇರುವ ನಂಬಿಕೆಯೇ ಕಾರಣ. ಮಕ್ಕಳು ಹೇಗೆ ಏಕೆ ಎಂದು ಪ್ರಶ್ನಿಸುವುದಕ್ಕೂ ಇದೇ ಕಾರಣ. ವಿಜ್ಞಾನಿಗಳೂ, ತತ್ವಶಾಸ್ತ್ರಜ್ಞರೂ ವಿಚಾರಮಾಡುವುದೂ ಈ ಕಾರಣದಿಂದಲೇ. ಕಾರ್ಯಕಾರಣಗಳಿಗೆ ಸ್ವಾಭಾವಿಕವಾದ ಸಂಬಂಧವು ಇರುವುದೆಂದು ಎಲ್ಲರೂ ತಿಳಿದಿರುವರು. ಕಾರಣ ಸಂಪೂರ್ಣವಾಗಿ ಸಿದ್ಧವಾದರೆ ಕಾರ್ಯವು ಸಿದ್ಧಿಸಲೇಬೇಕು. ಕಲ್ಲನ್ನು ಗಾಜಿನಮೇಲೆ ಎಸೆದರೆ ಗಾಜು ಚೂರಾಗುವುದು ನಿಶ್ಚಯವೇ ಸರಿ. ಅದು ಚೂರಾಗುವುದನ್ನು ಪ್ರತಿಬಂಧಿಸಲು ಸಾಧ್ಯವಲ್ಲ. ಪ್ರತಿಬಂಧವಿದ್ದರೆ ಕಾರಣ ಸಂಪೂರ್ಣವಲ್ಲ ಎಂದು ತಿಳಿಯಬೇಕು. ಆದುದರಿಂದ ಕಾರಣದ ಸಂಪೂರ್ಣ ಜ್ಞಾನವು ಉಂಟಾದರೆ ಕಾರ್ಯದ ಜ್ಞಾನ ತಾನಾಗಿಯೇ ಉಂಟಾಗುವುದು. ಎಂದರೆ ಈಗ ನಡೆದ ವ್ಯಾಪಾರದ ಜ್ಞಾನವು ಮುಂದೆ ನಡೆಯುವ ವ್ಯಾಪಾರದ ಜ್ಞಾನಕ್ಕೆ ಸಾಧನೆ ಎಂದ ಹಾಗೆ ಆಯಿತು.

ಕಾರ್ಯಕಾರಣಸಂಬಂಧವನ್ನು ಬೇರೆ ರೀತಿಯಲ್ಲಿಯೂ ಅರ್ಥಮಾಡಿಕೊಳ್ಳ ಬಹುದು. ಒಂದು ವಸ್ತುವಿನ ಈಗಿನ ಸ್ಥಿತಿಯನ್ನು ತಿಳಿದರೆ ಅದರ ಮುಂದಿನ ಸ್ಥಿತಿ ಹೇಗಿರುವುದು ಎಂದು ಭವಿಷ್ಯ ಹೇಳಬಹುದು. ಕಾರ್ಯವು ಕಾರಣದಿಂದ ನಿರ್ಧರ ವಾಗಿರುವುದು. ವಸ್ತುವಿನ ಮುಂದಿನ ಸ್ಥಿತಿ ಅದರ ಈಗಿನ ಸ್ಥಿತಿಯಲ್ಲಿ ಅಡಗಿ ಕೊಂಡಿರುವುದು. ಆ ವಸ್ತುವಿನ ಸ್ಥಿತಿ ಮುಂದೆ ಹೇಗೆಹೇಗೆ ಇರುವುದೆಂದು ಈಗಲೇ ನಾವು ಹೇಳಬಹುದು. ಹೀಗೆ ಅದರ ಮುಂದಿನ ಚರಿತ್ರೆ ಈಗಲೇ ಬರೆದಿಟ್ಟಿದೆ.

ಕಾರಣ ಸಂಪೂರ್ಣವಾಗಿ ಸಿದ್ಧವಾಗಿದ್ದರೆ ಕಾರ್ಯ ಹುಟ್ಟುವುದು ಖಂಡಿತ ಎಂಬುದು ಕಾರ್ಯಕಾರಣವಾದದ ತಿರುಳು. ಯಾವುದು ಇದ್ದರೆ, ನಡೆದರೆ ಮಾತ್ರ ಇನ್ನೊಂದು ಇದ್ದೀತೊ ನಡೆದೀತೊ ಯಾವುದು ಇಲ್ಲದಿದ್ದರೆ ಆ ಇನ್ನೊಂದು ಇರದೊ ನಡೆಯಲಾರದೊ ಅದಕ್ಕೆ ಕಾರಣ ಎನ್ನುವುದು ವಾಡಿಕೆ. ವಿಜ್ಞಾನದ ಒಂದು ಪ್ರಭೇದವಾದ ಭೌತಶಾಸ್ತ್ರದಲ್ಲಿ ಕೂಡ ಕಾರ್ಯಕಾರಣವಾದವು ಬಹಳವಾಗಿ ವ್ಯಾಪಿಸಿತ್ತು. ಸಮಸ್ತ ಭೌತವ್ಯಾಪಾರಗಳೂ ಈ ನಿಯಮವನ್ನು ಅವಲಂಬಿಸಿರುತ್ತ ವೆಂದು ಭೌತಶಾಸ್ತ್ರ ತಿಳಿದಿತ್ತು. ಕ್ರಿ.ಶ. ೧೭ ನೆಯ ಶತಮಾನದಲ್ಲಿ ಸರ್ ಐಸಾಕ್ ನ್ಯೂಟನ್ ಎಂಬ ಇಂಗ್ಲೆಂಡ್ ದೇಶದ ಪ್ರಸಿದ್ಧ ಭೌತವಿಜ್ಞಾನಿ 'ಸಾರ್ವತ್ರಿಕ ಆಕರ್ಷಣ ನಿಯಮ' ಎಂಬ ನಿಯಮವನ್ನು ಕಂಡುಹಿಡಿದ ಮೇಲೆ ಕಾರ್ಯಕಾರಣ ವಾದದ ವ್ಯಾಪ್ತಿ ಭೌತಶಾಸ್ತ್ರದಲ್ಲಿ ಪರಮಾವಧಿಯನ್ನು ಮುಟ್ಟಿತು. ಪ್ರಪಂಚದಲ್ಲಿ ಪ್ರತಿಯೊಂದು ಪದಾರ್ಥವೂ ಇತರ ಪದಾರ್ಥಗಳನ್ನು ಆಕರ್ಷಿಸುವುದು ಎಂಬುದೇ ಈ ನಿಯಮ. ಸೂರ್ಯನ ಸುತ್ತ ಭೂಮಿಯೇ ಮೊದಲಾದ ಗ್ರಹಗಳು ಸುತ್ತಲೂ ಮತ್ತು ಪದಾರ್ಥಗಳು ಭೂಮಿಯ ಕಡೆ ಬೀಳಲೂ ಪ್ರಕೃತಿಯಲ್ಲಿನ ಈ ನಿಯಮವೇ ಕಾರಣ. ಭೂಮಿ ಸೂರ್ಯನ ಸುತ್ತ ಸುತ್ತುವುದು ಎಂಬ ಕಾರ್ಯಕ್ಕೆ ಸೂರ್ಯನ ಆಕರ್ಷಣಶಕ್ತಿ ಎಂಬುದು ಕಾರಣ. ಕಾರ್ಯಕಾರಣಸಂಬಂಧವು ಸ್ವಾಭಾವಿಕ ವಾದುದರಿಂದ ಭೂಮಿಯು ಸೂರ್ಯನ ಸುತ್ತಲೂ ತಿರುಗಲೇಬೇಕು; ಗತ್ಯಂತರವಿಲ್ಲ. ಭೂಮಿ ಈಗ ಎಲ್ಲಿದೆ ಎಷ್ಟು ವೇಗದಿಂದ ಓಡುತ್ತಿದೆ ಎಂಬುದನ್ನು ಗೊತ್ತುಮಾಡಿದರೆ ಮುಂದೆ ಅದು ಎಲ್ಲಿರುವುದು ಎಷ್ಟು ವೇಗದಿಂದ ಓಡುತ್ತಿರುವುದು ಎಂಬುದನ್ನು ನಿರ್ವಿವಾದವಾಗಿ ನಿಶ್ಚಯಮಾಡಬಹುದು. ಭೂಮಿ ಮತ್ತು ಸೂರ್ಯ ಇವುಗಳ ಮಧ್ಯದಲ್ಲಿ ನೇರವಾಗಿ ಚಂದ್ರನು ಬಂದರೆ ಆಗ ಸೂರ್ಯಗ್ರಹಣವಾಗುವುದು. ಭೂಮಿ, ಚಂದ್ರ ಇವುಗಳ ಈಗಿನ ಗತಿಯಿಂದ ಮುಂದೆ ಯಾವಾಗ ಸೂರ್ಯಗ್ರಹಣ ವಾಗುವುದೆಂದು ಹೇಳಬಹುದು. ಕ್ರಿ.ಶ. 1999 ನೆಯ ಆಗಸ್ಟ್ ತಿಂಗಳಲ್ಲಿ ಒಂದು ಪೂರ್ಣ ಗ್ರಾಸ ಸೂರ್ಯಗ್ರಹಣವು ಆಗುವುದೆಂದು ನಾವು ಈಗಲೇ ಹೇಳಬಹುದು.

ಕ್ರಿ.ಶ. 19ನೆಯ ಶತಮಾನದಲ್ಲಿ ಕಾರ್ಯಕಾರಣವಾದದ ವ್ಯಾಪ್ತಿ ಭೌತ ಶಾಸ್ತ್ರದಲ್ಲಿ ಕಡಮೆಯಾಗಲು ಪ್ರಾರಂಭವಾಯಿತು. ಈ ವಾದದಲ್ಲಿ ಭೌತಶಾಸ್ತ್ರಜ್ಞರಿಗೆ ನಂಬಿಕೆ ಸಡಿಲವಾಗುವ ಹಲವು ಸಂದರ್ಭಗಳು ಒದಗಿದುವು. ಎಲ್ಲಪದಾರ್ಥಗಳೂ ಪರಮಾಣುಗಳಿಂದ ಆಗಿವೆ. ಪರಮಾಣುಸಮೂಹಗಳೇ ಅಣುಗಳು. ಈ ಅಣುಗಳ ಚಲನೆಯಿಂದ ಪದಾರ್ಥದಲ್ಲಿ ಕೆಲವು ಧರ್ಮಗಳು ಕಂಡುಬರುವುವು. ಪದಾರ್ಥ ಗಳಲ್ಲಿರುವ ಉಷ್ಣವೆಂಬುದು ಈ ಅಣುಗಳ ಚಲನೆಯಿಂದ ಉಂಟಾದ ಶಕ್ತಿ. ಪದಾರ್ಥದ ಅತ್ಯಂತ ಸೂಕ್ಷ್ಮವಾದ ಭಾಗದಲ್ಲಿಯೂ ಅನೇಕ ಅಣುಗಳಿರುವುವು. ಆದರೆ ಪ್ರತಿಯೊಂದು ಅಣುವಿನ ಚಲನೆಯನ್ನೂ ತಿಳಿಯಲು ಸಾಧ್ಯವಿಲ್ಲ. ಸಾಮೂ ಹಿಕವಾದ ಅನೇಕ ಅಣುಗಳಲ್ಲಿ ಸಾಮಾನ್ಯವಾಗಿ ಅವು ಹೇಗೆ ಚಲಿಸುವುವೆಂದು ಮಾತ್ರ ಹೇಳಲು ಸಾಧ್ಯ. ಪ್ರತಿಯೊಂದು ಅಣುವಿನ ಚಲನೆಯನ್ನೂ ನಿರ್ಧರಮಾಡಲು ಅವಕಾಶವಿಲ್ಲ. ಅವುಗಳ ಭವಿಷ್ಯ ಅನಿರ್ದಿಷ್ಟ. ಆದುದರಿಂದ ಈ ವಸ್ತುವಿನ ಈಗಿನ ಸ್ಥಿತಿಯಿಂದ ಮುಂದಿನ ಸ್ಥಿತಿ ಪ್ರಾಯಶಃ ಹೇಗಿರುವುದೆಂದು ಸಾಮೂಹಿಕ ದೃಷ್ಟಿ ಯಿಂದ ಹೇಳಲು ಸಾಧ್ಯವಿದ್ದರೂ ಒಂದು ಅಣುವಿನ ವಿಷಯದಲ್ಲಿ ಹೇಳಲು ಸಾಧ್ಯ ವಿಲ್ಲ. ಇದರಿಂದ ಕಾರ್ಯಕಾರಣವಾದಕ್ಕೆ ಒಂದು ರೀತಿಯಾದ ಭಂಗವುಂಟಾದಂತೆ ಆಯಿತು. ಏಕೆಂದರೆ ಸಾಮೂಹಿಕ ದೃಷ್ಟಿಯಿಂದ ಕಾರ್ಯಕಾರಣವಾದವು ಸಂಭಾ ವಿತವೇ ಹೊರತು ನಿಶ್ಚಿತವಲ್ಲ. ಈ ವಿಷಯದಲ್ಲಿ ಒಂದು ಉದಾಹರಣೆ ಕೊಡಬಹುದು. ನೀರನ್ನು ಕಾಯಿಸಲು ಅದನ್ನು ಬೆಂಕಿಯ ಮೇಲೆ ಇಡಬೇಕು. ಶಾಖ ಬೆಂಕಿಯಿಂದ ನೀರಿಗೆ ಹೋಗುವುದು. ನೀರು ಕಾಯುವುದು ಎಂಬ ಕಾರ್ಯ ಬೆಂಕಿಯಿಂದ ಬಂದ ಶಾಖವೆಂಬ ಕಾರಣದಿಂದ ಉಂಟಾಗುವುದು. ಆದರೆ ಶಾಖ ಬೆಂಕಿಯಿಂದ ನೀರಿಗೆ ಹೋಗಿಯೇಹೋಗುವುದು ಎಂಬ ನಿಯಮವಿಲ್ಲ. ಬೆಂಕಿಯಲ್ಲಿರುವ ವೇಗದಿಂದ ಚಲಿಸುವ ಅಣುಗಳು ನೀರಿಗೆ ಸೋಕದೆ ನೀರಿನಲ್ಲಿರುವ ವೇಗದಿಂದ ಚಲಿಸುವ ಅಣುಗಳು ಬೆಂಕಿಗೆ ಸೋಕಿದರೆ ತಣ್ಣಗಿರುವ ನೀರಿನಿಂದ ಬಿಸಿಯಾಗಿರುವ ಬೆಂಕಿಯೂ ಕಾಯ ಬಹುದು. ಆದರೆ ನೀರಿನಿಂದ ಬೆಂಕಿಯು ಕಾಯುವ ಸಂದರ್ಭಕ್ಕಿಂತಲೂ ಬೆಂಕಿಯಿಂದ ನೀರು ಕಾಯುವ ಸಂದರ್ಭ ಹೆಚ್ಚು ಸಂಭಾವಿತ. ನಾಲ್ಕು ಕಡೆಯೂ ಗೋಡೆ ಹಾಕಿರುವ ಮೈದಾನದಲ್ಲಿ ಜನಸಂದಣಿ ಸೇರಿರುವಾಗ ಮೈದಾನದ ಮಧ್ಯದಲ್ಲಿ ಗುಂಡನ್ನು ಹಾರಿಸಿದರೆ ಜನರು ದಿಕ್ಕಾಪಾಲಾಗಿ ಓಡುವರು. ಗುಂಪಿನಲ್ಲಿದ್ದ ಯಾವನೋ ಒಬ್ಬ ಮನುಷ್ಯನು ಯಾವ ದಿಕ್ಕಿಗೆ ಓಡುವನೆಂದು ಹೇಳಲು ಸಾಧ್ಯ ವಿಲ್ಲ. ಆದರೆ ಸಾಮೂಹಿಕ ದೃಷ್ಟಿಯಿಂದ ಗುಂಪಿನ ಬಹುಜನರು ಹೆಬ್ಬಾಗಿಲಿನ ಕಡೆ ಓಡುವರೆಂದು ಹೇಳಬಹುದು. ಹೀಗೆಯೇ ಅಣುಗಳ ಚಲನೆಯ ವಿಷಯದಲ್ಲಿಯೂ

ಸಾಮೂಹಿಕ ದೃಷ್ಟಿಯಿಂದ ಕಾರ್ಯಕಾರಣದ ಸಂಭಾವನೆ ಸಿದ್ಧವಾಗುವುದು. ಕ್ರಿ.ಶ. ೧೯ನೆಯ ಶತಮಾನದ ಅಂತ್ಯಭಾಗದಲ್ಲಿ ಕೆಲವು ಪದಾರ್ಥಗಳ ಪರಮಾಣುಗಳಿಂದ ನೂತನವಾದ ಕೆಲವು ರಶ್ಮಿಗಳು ಬರುವುವೆಂದು ಕಂಡಿತು. 'ರೇಡಿಯಂ' ಎಂಬ ವಸ್ತುವಿನ ಪರಮಾಣುವಿನಿಂದ ಈ ರಶ್ಮಿಗಳು ಬರುವುವು. ರಶ್ಮಿಗಳ ಬದಲು ಪರಮಾಣುವಿನ ಮಧ್ಯದಲ್ಲಿರುವ ವಿದ್ಯುತ್ಕಣವು ಒಡೆಯುವುದೇ ಕಾರಣ. ಪರಮಾಣುಗಳ ಸಮೂಹದಲ್ಲಿ ಯಾವ ಪರಮಾಣು ಯಾವಾಗ ಒಡೆಯುವುದೆಂದು ಹೇಳಲು ಸಾಧ್ಯವಿಲ್ಲ. ಅದರಲ್ಲಿ ಕಾರ್ಯಕಾರಣ ಸಂಬಂಧ ಕಂಡುಬಂದಿಲ್ಲ. ಆದರೆ ಸಮೂಹದಲ್ಲಿ ಅನೇಕ ಪರಮಾಣುಗಳು ಪ್ರಾಯಶಃ ಯಾವಾಗ ಒಡೆಯುವುವು ಎಂಬುದನ್ನು ನಿಶ್ಚಯಮಾಡಲು ಅವಕಾಶವಿರುವುದು. ಹೀಗೆ ಕಾರ್ಯಕಾರಣವಾದದ ನಿಶ್ಚಯತ್ವದಲ್ಲಿ ನಂಬಿಕೆ ಬಹಳ ಮಟ್ಟಿಗೆ ಕಡಿಮೆಯಾಯಿತು.

ಆದರೆ ಕ್ರಿ.ಶ. ೧೯೨೭ ರಲ್ಲಿ ಹೈಸನ್‌ಬರ್ಗ್ ಎಂಬ ಜರ್ಮನ್ ಭೌತವಿಜ್ಞಾನಿ ಈ ವಿಷಯದಲ್ಲಿ ಹೊಸ ಪ್ರಕಾಶವನ್ನು ಬೀರಿದನು. ಒಂದು ವಸ್ತುವಿನ ಈಗಿನ ಸ್ಥಿತಿ ನಿಶ್ಚಿತವಾಗಿ ತಿಳಿದಿದ್ದರೆ ಅದರ ಮುಂದಿನ ಸ್ಥಿತಿ ಹೇಗಿರುವುದೆಂದು ಕಾರ್ಯಕಾರಣ ಸಂಬಂಧದಿಂದ ನಿರ್ಧರಿಸಬಹುದು. ಆದರೆ ಈಗಿನ ಸ್ಥಿತಿಯನ್ನು ನಿಶ್ಚಿತವಾಗಿ ತಿಳಿಯಲು ಸಾಧ್ಯವೇ ಇಲ್ಲದಿರುವಾಗ ಮುಂದಿನ ಸ್ಥಿತಿಯನ್ನು ನಿಶ್ಚಯಿಸಲು ಹೇಗೆ ತಾನೆ ಸಾಧ್ಯ ಎಂಬುದೇ ಈತನ ವಾದ. ಪರಮಾಣುವಿನಲ್ಲಿ ವಿದ್ಯುತ್ತಿನ ಅಣುವಿರುವುದು. ಒಂದು ವಿದ್ಯುದಣುವನ್ನು ದೃಷ್ಟಿಯಲ್ಲಿಟ್ಟು ಅದರ ಈಗಿನ ಸ್ಥಿತಿಯನ್ನು ತಿಳಿಯಲು ಪ್ರಯತ್ನಪಟ್ಟೆವೆಂದು ತಿಳಿಯೋಣ. ವಿದ್ಯುದಣುವಿನ ಸ್ಥಳ ಮತ್ತು ವೇಗವನ್ನು ಈಗ ನಿರ್ಧರಿಸಿದರೆ ಮುಂದೆ ಅದರ ಸ್ಥಳ ಮತ್ತು ವೇಗವನ್ನು ನಿಶ್ಚಯಮಾಡಬಹುದು. ವಿದ್ಯುದಣುವಿನ ಸ್ಥಳವನ್ನು ನಿಶ್ಚಯಿಸಲು ಅದರ ಮೇಲೆ ಬೆಳಕನ್ನು ಬೀರಬೇಕು. ಬೆಳಕು ತೀಕ್ಷ್ಣವಾದಷ್ಟೂ ವಿದ್ಯುದಣು ಸ್ಪಷ್ಟವಾಗಿ ಕಾಣುವುದು. ಅದರಿಂದ ಅದರ ಸ್ಥಳವನ್ನು ಹೆಚ್ಚು ಜಾಗರೂಕತೆಯಿಂದ ಗುರುತಿಸಬಹುದು. ಆದರೆ ಬೆಳಕು ವಿದ್ಯುದಣುವಿನ ಮೇಲೆ ಬಿದ್ದರೆ ವಿದ್ಯುದಣುವಿನ ವೇಗ ಬದಲಾಯಿಸುವುದು. ಬೆಳಕು ಸಹ ಒಂದು ರೀತಿಯಾದ ಅಣು. ಬೆಳಕಿನ ಅಣು ವಿದ್ಯುದಣುವಿನ ಮೇಲೆ ಬಿದ್ದರೆ, ಓಡುತ್ತಿರುವ ಗೋಲಿಯನ್ನು ಮತ್ತೊಂದು ಗೋಲಿಯಿಂದ ಹೊಡೆದರೆ ಅದರ ವೇಗ ಬದಲಾಯಿಸುವಂತೆ, ವಿದ್ಯುದಣುವಿನ ವೇಗವೂ ಬದಲಾಯಿಸುವುದು. ಆದುದರಿಂದ ನಾವು ನಿಶ್ಚಯಮಾಡುವ ವೇಗವು ಬದಲಾವಣೆ ಹೊಂದಿದ ವೇಗವೇ ಹೊರತು ವಿದ್ಯುದಣುವಿನ ಹಿಂದಿನ ವೇಗವಲ್ಲ. ಬೆಳಕಿನ ತೀಕ್ಷ್ಣತೆ ಹೆಚ್ಚಿದಷ್ಟೂ ವೇಗ ಹೆಚ್ಚಾಗಿ ಬದಲಾಯಿಸುವುದು. ಆದುದರಿಂದ ವಿದ್ಯುದಣುವಿನ ಸ್ಥಳದ

ವಿಷಯದಲ್ಲಿ ಜಾಗರೂಕತೆ ಹೆಚ್ಚಿದಷ್ಟೂ ಅದರ ವೇಗದ ವಿಷಯದಲ್ಲಿ ಸಂಶಯಭಾಗ ಹೆಚ್ಚುವುದು. ವೇಗದ ಸಂಶಯ ಕಡಿಮೆಯಾದರೆ ಸ್ಥಳದ ವಿಷಯದಲ್ಲಿ ನಿಶ್ಚಯತ್ವ ಕಡಿಮೆಯಾಗುವುದು. ಆದುದರಿಂದ ವಿದ್ಯುದಣುವಿನ ಸ್ಥಳ ಮತ್ತು ವೇಗ ಎಂಬ ಈಗಿನ ಅವಸ್ಥೆಯಲ್ಲಿ ನಿಶ್ಚಿತತೆ ಅಪೂರ್ಣ. ಅವರ ಮುಂದಿನ ಅವಸ್ಥೆ ಸಹ ಹೀಗೆಯೇ ಸ್ವಲ್ಪ ಅನಿಶ್ಚಿತತೆ ಇದೆ. ಇದೇ ಅನಿಶ್ಚಿತತ್ವ (Indeterminacy) ವಾದ.

ಇಲ್ಲಿ ಒಂದಂಶವನ್ನು ಜ್ಞಾಪಕದಲ್ಲಿಡಬೇಕು. ಯಾವ ಪರಿಮಾಣವನ್ನು ಅಳೆಯಲೂ ಒಂದು ಉಪಕರಣ ಅಥವಾ ಯಂತ್ರಬೇಕು. ದೂರವನ್ನು ಅಳೆಯಲು ಗಜದ ಕಡ್ಡಿಬೇಕು. ಯಂತ್ರ ಸೂಕ್ಷ್ಮವಾದಷ್ಟೂ ಅಳತೆಯಲ್ಲಿ ನಿಶ್ಚಯತ್ವ ಹೆಚ್ಚುವುದು. ಆದರೆ ಯಂತ್ರ ಸೂಕ್ಷ್ಮವಾಗಲು ಒಂದು ಎಲ್ಲೆಯಿದೆ. ನಾವು ಅಳೆದ ಪರಿಮಾಣ ಆ ಎಲ್ಲೆಯನ್ನು ಮೀರಲಾರದು. ಆದರೆ ವಿದ್ಯುದಣುವಿನ ದೃಷ್ಟಾಂತದಲ್ಲಿ ಹಿಂದೆ ಹೇಳಿದ ಎಲ್ಲೆ ಯಂತ್ರದಿಂದ ಬಂದಿರುವುದಲ್ಲ. ವಸ್ತುಗಳ ಸ್ವಭಾವದಲ್ಲಿಯೇ ಅಡಕವಾಗಿರುವುದು. ಯಾವ ಪರಿಮಾಣವನ್ನು ಹೇಗೆ ಅಳೆದರೂ ಅಳೆಯುವುದರಿಂದಲೇ ಅದು ಬದಲಾವಣೆ ಹೊಂದುವುದು. ಅಳೆಯುವ ಪರಿಮಾಣವನ್ನು ಬದಲಾಯಿಸದಂತೆ ಅಳೆಯುವುದೇ ಅಸಾಧ್ಯ. ಒಬ್ಬ ಕುರುಡ ಮನುಷ್ಯನಿಗೆ ಕೊಳದ ನೀರು ನಿಶ್ಚಲವಾಗಿದೆ ಎಂದು ತಿಳಿಸಲು ಕೊಳದ ನೀರಿನ ಮೇಲೆ ಬೆರಳನ್ನು ಇಡುವಂತೆ ಹೇಳಬೇಕು. ನೀರು ಅಲುಗಾಡದಿದ್ದರೆ ಅದು ನಿಶ್ಚಲವಾಗಿದೆಯೆಂದು ಅವನು ತಿಳಿಯುವನು. ಆದರೆ ತನ್ನ ಬೆರಳನ್ನು ನೀರಿನಮೇಲೆ ಇಡುವುದರಿಂದಲೇ ನೀರು ಸ್ವಲ್ಪ ಚಲಿಸುವುದು. ನೀರ ನಿಶ್ಚಲತೆಯನ್ನು ತಿಳಿಯಲು ಕುರುಡನಿಗೆ ಅದನ್ನು ಅಲುಗಿಸದೆ ಆಗುವುದಿಲ್ಲ. ಹಾಗೆಯೇ ವಿದ್ಯುದಣುವಿನ ವೇಗವನ್ನು ತಿಳಿಯಲು ಅದನ್ನು ಬದಲಾಯಿಸದೆ ಇರಲು ಶಕ್ಯವಿಲ್ಲ.

ಹೈಸೆನ್‌ಬರ್ಗ್ ಅವರ ಅನಿಶ್ಚಿತತ್ವಸಿದ್ಧಾಂತ ಕಾರ್ಯಕಾರಣವಾದದ ವಿಷಯದಲ್ಲಿ ಭೌತಶಾಸ್ತ್ರಜ್ಞರಲ್ಲಿ ಭಿನ್ನಭಿನ್ನ ಮತಗಳನ್ನು ಉಂಟುಮಾಡಿದೆ. ಈ ಅನಿಶ್ಚಿತತ್ವ ಸಿದ್ಧಾಂತ ಕಾರ್ಯಕಾರಣವಾದವನ್ನು ನಂಬಲಸಾಧ್ಯವಾಗುವಂತೆ ಮಾಡಿದೆ ಎಂದು ಸರ್ ಆರ್ಥರ್ ಎಡ್ಡಿಂಗ್‌ಟನ್ ಎಂಬ ವೈಜ್ಞಾನಿಕರ ಅಭಿಪ್ರಾಯ. ಆದರೆ ಈ ಸಿದ್ಧಾಂತಕ್ಕೆ ಕಾರ್ಯಕಾರಣವಾದವನ್ನು ಅಲ್ಲಗಳೆಯಲು ಸಾಧ್ಯವಿಲ್ಲ ಎಂದು ಮ್ಯಾಕ್ಸ್‌ಪ್ಲಾಂಕ್ ಎಂಬ ವೈಜ್ಞಾನಿಕರು ಹೇಳಿರುವರು. ಎಡ್ಡಿಂಗ್‌ಟನ್ ಅವರ ವಾದಸರಣಿ ಹೀಗಿದೆ:— ವಿದ್ಯುದಣುವಿನ ಈಗಿನ ಸ್ಥಿತಿ ಅವರ ಮುಂದಿನ ಸ್ಥಿತಿಯನ್ನು ನಿರ್ದಿಷ್ಟಮಾಡಿದೆ ಎಂದು ಕಾರ್ಯಕಾರಣವಾದ ಹೇಳುವುದು. ಎಂದರೆ, ಅದರ ಭವಿಷ್ಯ ಈಗಲೇ ನಿರ್ಧರವಾಗಿದೆ ಎಂದ ಹಾಗೆ ಆಯಿತು. ಹೈಸೆನ್‌ಬರ್ಗ್

ಅವರ ಸಿದ್ಧಾಂತವನ್ನು ಇವಕ್ಕೆ ಜೋಡಿಸಿದರೆ ವಿದ್ಯುದಣುವಿನ ಮುಂದಿನ ಸ್ಥಿತಿ ಈಗಲೇ ನಿಶ್ಚಿತವಾಗಿದ್ದರೂ ಅದು ನಮಗೆ ಗೊತ್ತಾಗದಂತೆ ಪ್ರಕೃತಿ ಅಡ್ಡಿಮಾಡುವುದೆಂದು ಹೇಳಬೇಕಾಗುವುದು. ಅದರ ಬದಲು ವಿದ್ಯುದಣುವಿನ ಮುಂದಿನ ಸ್ಥಿತಿಯು ನಿಶ್ಚಿತವಾಗಿಯೇ ಇಲ್ಲ ಎಂದು ನಂಬಿದರೆ ಪ್ರಕೃತಿ ಮರೆಮಾಚಬೇಕಾದ ಪ್ರಸಂಗವೇ ಇರುವುದಿಲ್ಲ. ಇಷ್ಟುಮಾತ್ರದಿಂದ ಕಾರ್ಯಕಾರಣ ಸಂಬಂಧವೆಂಬುದಿಲ್ಲ ಎಂದು ಹೇಳಿದಹಾಗಾಗಲಿಲ್ಲ. ಕಾರ್ಯಕಾರಣ ಸಂಬಂಧವೆಂಬುದು ಇದೆ ಎನ್ನುವವರಿಗೆ ಮಾತ್ರ ಆಧಾರವಿಲ್ಲ ಎಂದು ಹೇಳಿದ ಹಾಗಾಯಿತು. ಆದುದರಿಂದ ಪ್ರಕೃತಿಯ ವ್ಯಾಪಾರಗಳಲ್ಲಿ ಅನಿಶ್ಚಿತ ಭವಿಷ್ಯದ ಅಂಶ ಇರುವುದೆಂದು ಹೇಳುವುದೇ ಸಾಧುವಾದುದು. ಕಾರ್ಯಕಾರಣ ಸಂಬಂಧದಲ್ಲಿ ಅನುಭವ ಇಲ್ಲವೆಂದೂ ಸಿದ್ಧವಾಗುವುದು. ವಿದ್ಯುದಣುವಿನ ಭವಿಷ್ಯವು ಅನಿರ್ಧರಿತವಾಗಿದ್ದರೆ ಅದಕ್ಕೆ ಒಂದುರೀತಿ ಯಾವ ಸ್ವಾತಂತ್ರ್ಯ ಇರುವುದಿಲ್ಲವೆ? ಎಂದು ಪ್ರಶ್ನೆ ಮಾಡಬಹುದು. ಚೇತನನಲ್ಲಿ ಆ ಬಗೆಯ ಸ್ವಾತಂತ್ರ್ಯ ಕಂಡುಬರುವುದು. ಮುಂದಿನ ಕ್ಷಣದಲ್ಲಿ ಹೋಗಬೇಕಾದ ಮಾರ್ಗಗಳು ಅನೇಕವಾಗಿದ್ದರೆ ಚೇತನನು ತನ್ನ ಸ್ವಂತ ಇಚ್ಛೆಯಿಂದ ಯಾವುದೋ ಒಂದು ಮಾರ್ಗದಲ್ಲಿ ಹೋಗುವನು. ಆದರೆ ಈ ರೀತಿಯಾದ ಸ್ವಾತಂತ್ರ್ಯವೂ ಅಚೇತನವಾದ ವಿದ್ಯುದಣುವಿನಲ್ಲಿದೆ ಎಂದು ಮಾತ್ರ ಹೇಳಲು ಎಳ್ಳಷ್ಟೂ ಅವಕಾಶವಿಲ್ಲ ಎಂಬುದು ಎಡ್ಡಿಂಗ್‌ಟನ್ ಅವರ ವಾದ.

ಪ್ರೊ. ಮ್ಯಾಕ್ಸ್ ಪ್ಲಾಂಕ್ ಅವರು ಅನಿಶ್ಚಿತತ್ವ ಸಿದ್ಧಾಂತ ಕಾರ್ಯಕಾರಣವನ್ನು ನಿರಾಕರಿಸಲಾರದೆಂದು ವಾದಿಸಿರುವರು. ವಸ್ತುಸ್ಥಿತಿಯ ಭವಿಷ್ಯವನ್ನು ಹೇಳುವುದೇ ಕಾರ್ಯಕಾರಣವಾದದ ತಿರುಳು ಎಂದು ಹಿಂದೆಯೇ ನಿರೂಪಿಸಿದೆ. ಆದರೆ ಭವಿಷ್ಯ ಹೇಳಲು ಈಗಿನ ಸ್ಥಿತಿಯನ್ನು ನಿರ್ಧರಿಸಬಲ್ಲ ಯಂತ್ರಗಳು ಬೇಕು. ಆದರೆ ಬುದ್ಧಿಶಕ್ತಿಯಿಂದಲೇ ಈಗಿನ ಸ್ಥಿತಿಯನ್ನು ನಾವು ನಿರ್ಧರಿಸಿದರೆ ಮುಂದಿನ ಸ್ಥಿತಿಯೂ ನಿಶ್ಚಿತವೆಂದು ಹೇಳಲು ಏನೂ ಅಡ್ಡಿ ಇರುವುದಿಲ್ಲ. ಪ್ರಪಂಚದಲ್ಲಿ ಎಲ್ಲ ಪರಿಮಾಣಗಳೂ ಯಂತ್ರಗಳಿಂದಲೇ ಅಳೆಯಲ್ಪಡುವುವಾದರೂ ಪರಿಮಾಣಗಳನ್ನು ಬುದ್ಧಿಶಕ್ತಿಯಿಂದಲೇ ತಿಳಿಯಲು ಸಾಧ್ಯ. ಹಾಗೆ ತಿಳಿದ ಅಂಶದಲ್ಲಿ ಯಂತ್ರದಿಂದ ಬಂದ ದೋಷ ಇರುವುದಿಲ್ಲವಾದುದರಿಂದ ಅದು ನಿಶ್ಚಿತವಾದದ್ದೇ ಸರಿ. ಬುದ್ಧಿಶಕ್ತಿಯಿಂದ ಗೃಹೀತವಾದ ವಿಷಯದಲ್ಲಿ ಕಾರ್ಯಕಾರಣ ವಾದವನ್ನು ಪ್ರತಿರೋಧಿಸುವ ಯಾವ ಸಂದರ್ಭವೂ ಇರುವುದಿಲ್ಲ. ಅಲ್ಲದೆ ಭವಿಷ್ಯವನ್ನು ಹೇಳುವಾಗ ಅದನ್ನು ಹೇಳುವ ವ್ಯಕ್ತಿಯ ಯೋಗ್ಯತೆಯ ಮೇಲೆ ಭವಿಷ್ಯಕ್ಕೆ ಬೆಲೆ. ಹವದ ವಿಷಯದಲ್ಲಿ ಭವಿಷ್ಯ ಹೇಳುವಾಗ ಗಾಳಿಯ ಗುಣಗಳನ್ನು ತಿಳಿಯದ ಮನುಷ್ಯನಿಗಿಂತಲೂ, ಸ್ವಲ್ಪಮಟ್ಟಿ

ಗಾದರೂ ತಿಳಿದಿರುವ ರೈತನು ಹೇಳುವ ಭವಿಷ್ಯ ಹೆಚ್ಚು ನಂಬಿಕೆಗೆ ಅರ್ಹವಾದುದು. ವಾಯುಗುಣವನ್ನೇ ಕುರಿತು ಬಹಳವಾಗಿ ಪರಿಶೀಲನೆ ಮಾಡಿದ ವೈಜ್ಞಾನಿಕನು ಹೇಳುವ ಭವಿಷ್ಯ ರೈತನು ಹೇಳಿದುದಕ್ಕಿಂತಲೂ ಹೆಚ್ಚು ವಿಶ್ವಾಸಕ್ಕೆ ಪಾತ್ರವಾದ್ದು. ಹಾಗೆಯೇ ಪ್ರಪಂಚದ ಸಮಸ್ತ ವ್ಯಾಪಾರಗಳನ್ನೂ ಸಮಸ್ತ ವಸ್ತುಗಳ ಗುಣವನ್ನೂ ಗ್ರಹಣಮಾಡುವ ಒಂದು ಪರಮಚೇತನವಿದೆ ಎಂದು ನಂಬಿದರೆ ಆ ಚೇತನವು ಹೇಳಿದ ಭವಿಷ್ಯ ಎಂದಿಗಾದರೂ ನಡೆಯದೆ ಇರುವುದೆ? ಉಪಕರಣ ಮತ್ತು ಯಂತ್ರ ಗಳಿಂದ ಉಂಟಾದ ದೋಷ ಆ ಚೇತನನ್ನು ಬಾಧಿಸಲಾರವು. ಆದುದರಿಂದ ಕಾರ್ಯ ಕಾರಣವಾದದ ಪರಮಾವಧಿಯಲ್ಲಿ ಭೂತಭವಿಷ್ಯದ್ವರ್ತಮಾನವೆಲ್ಲವನ್ನೂ ಗ್ರಹಿಸುವ ಒಬ್ಬ ಪರಮಚೇತನನು ಇರುವನು ಎಂಬುದೇ ಆಗಿದೆ. ಕಾರ್ಯಕಾರಣ ವಾದವನ್ನು ಸ್ಥಾಪಿಸಲು ಯಾವ ಪ್ರಮಾಣವಿಲ್ಲದಿದ್ದರೂ ಅದನ್ನು ನಿರಾಕರಿಸಲೂ ಯಾವ ಪ್ರಮಾಣವೂ ಇರುವುದಿಲ್ಲ. ಅದರ ಆಧಾರದಿಂದಲೇ ವಿಚಾರಶಾಸ್ತ್ರಗಳು ಬೆಳವಣಿಗೆ ಹೊಂದಿರುವುವು. ಅವು ಮುಂದೆ ಬೆಳವಣಿಗೆ ಹೊಂದುವುವೆಂಬುದಕ್ಕೆ ಕಾರ್ಯ ಕಾರಣವಾದದಲ್ಲಿರುವ ನಂಬಿಕೆಯೇ ಆಧಾರ.

ಬಿ. ಎ. ಕೃಷ್ಣಸ್ವಾಮಿರಾವ್.

# ನಾಳಿನ ವಿದ್ಯಾಭ್ಯಾಸ ಮತ್ತು ಪ್ರಪಂಚದ ಶಾಂತಿ

ಬೇರೆ ಕಾರ್ಯಂ ತಗದೆ ಸಾಹಸಿಗನಾಳ್ಗೆ ?
ಬೇರೆ ಭೂಷಣಮ್ ಇರದೆ ಮಾನವನ ತೋಳ್ಗೆ ?
ಓ ಪೊಲ್ಲಯುದ್ಧಮೇ,
ಎಂದು ನಿಲ್ವಯ್ !
ಓ ತಾಯೆ ಶಾಂತಿಯೇ
ಎಂದು ಗೆಲ್ವಯ್ !

—ಅಶ್ವತ್ಥಾಮನ್.

[ಈ ಯುದ್ಧವಾದರೂ ಕಡೆಯ ಯುದ್ಧವಾಗಿ ಪರಿಣಮಿಸಿ ಜಗತ್ತಿನಲ್ಲಿ ಶಾಂತಿ ನೆಲೆಗೊಳ್ಳಬೇಕಾದರೆ ಯುದ್ಧ ಮುಗಿದ ಕೂಡಲೆ ಎಲ್ಲೆಡೆಗಳಲ್ಲೂ ಮನಸ್ಸು ಸುಧಾರಿತವಾಗಬೇಕು. ಯುದ್ಧದ ಕಾರಣಗಳನ್ನು ಕಿತ್ತೊಗೆದು, ರಾಷ್ಟ್ರ ರಾಷ್ಟ್ರಗಳಲ್ಲಿ ಸೌಹಾರ್ದವನ್ನುಂಟುಮಾಡುವ ಶಕ್ತಿ ಸುವ್ಯವಸ್ಥಿತವಾದ ಶಿಕ್ಷಣಕ್ಕೆ ಮಾತ್ರವುಂಟು. ಅಂತರರಾಷ್ಟ್ರೀಯ ಪುನರ್ರಚನೆಯಲ್ಲಿ ಶಿಕ್ಷಣದ ಸ್ಥಾನವೇನು, ಬೇರೆ ಬೇರೆ ರಾಜ್ಯಗಳಲ್ಲಿ, ಮುಖ್ಯವಾಗಿ ಜರ್ಮನಿಯಲ್ಲಿ ಯಾವ ನೀತಿಯನ್ನು ಅನುಸರಿಸಬೇಕು—ಈ ಎಲ್ಲ ಸಮಸ್ಯೆಗಳನ್ನು ಕುರಿತು ಹೊರದೇಶಗಳಲ್ಲಿ ಅಪಾರವಾದ ಚರ್ಚೆ ನಡೆಯುತ್ತಿದೆ. ಚರ್ಚೆಯ ಸ್ವಲ್ಪಭಾಗವನ್ನು ಈ ಲೇಖನದಲ್ಲಿ ಸಂಗ್ರಹಿಸಿ ಕೊಡಲಾಗಿದೆ.]

"ಯುದ್ಧವನ್ನು ಗೆದ್ದರೆ ಸಾಲದು. ಶಾಂತಿಯನ್ನೂ ಗೆಲ್ಲಬೇಕು." ಎಂಬ ಮಾತು ಎಲ್ಲೆಲ್ಲೂ ಕೇಳಿಬರುತ್ತಿದೆ. ಶಾಂತಿಯೂ ಯುದ್ಧದ ಒಂದು ಭಾಗ; ಯುದ್ಧದ ಕಡೆಯ ಅಂಕ. ಅದರಿಂದ ನಡೆದುಹೋದ ಹತ್ಯಾಕಾಂಡ ಅನಿವಾರ್ಯವಾಗಿತ್ತೆಂಬ ಸಮರ್ಥನೆ ದೊರೆಯಬಹುದು ಎಂಬ ಅಂಶವನ್ನು ಮಾತ್ರ ರಾಷ್ಟ್ರಗಳೂ ರಾಜಕೀಯ ಮುಖಂಡರೂ ಇನ್ನೂ ಅರಿತಿಲ್ಲ. ಶಾಂತಿಯ ವ್ಯವಸ್ಥೆ ಹೇಗಿರಬೇಕೆಂದು ಈಗಿನಿಂದ ಯೋಚಿಸುತ್ತ ಹೋಗಬೇಕೆ? ಯುದ್ಧ ಮುಗಿದ ಕೂಡಲೆ ಅದರ ಯೋಚನೆ ಮಾಡಬೇಕೆ? ಯುದ್ಧ ಮುಗಿದ ಮೇಲೆ ಕೆಲಕಾಲ ದಣಿವಾರಿಸಿಕೊಂಡು ಅನಂತರ ಆ ಯೋಚನೆಗಳನ್ನು ಮಾಡಬೇಕೆ? ಈ ವಿಷಯಗಳನ್ನು ಕೂಡ ರಾಷ್ಟ್ರಗಳ ಭವಿಷ್ಯದ ವಿಧಾತರು ಇತ್ಯರ್ಥಮಾಡಿದಂತೆ ಕಾಣುವುದಿಲ್ಲ. "ನಾಲ್ಕು ಸ್ವಾತಂತ್ರ್ಯಗಳು"[1], ಅಟ್ಲಾಂಟಿಕ್ ಘೋಷಣೆಗಳು ಹೊರಬಿದ್ದಿರಬಹುದು. ಆದರೆ ಅವುಗಳ ವ್ಯಾಪ್ತಿಯ ಬಗ್ಗೆ ಅದನ್ನು ಹೊರಡಿಸಿದವರೇ ನಿರ್ಣಯಮಾಡಿಕೊಂಡಿಲ್ಲ. ಆದುದರಿಂದಲೇ ಶ್ರೀಮತಿ ಪರ್ಲ್‌ಬಕ್ ಎಂಬ ಹಿರಿಯ ಸಾಹಿತಿ ಹೇಳಿರುವುದು: ರೂಸ್‌ವೆಲ್ಟರ

[1] ವಿನಾಯಕನ ಸಂಚಿಕೆಯಲ್ಲಿ ಇದರ ಪರಿಚಯವನ್ನು ಮಾಡಿಕೊಟ್ಟಿದೆ.

ನಾಲ್ಕು ಸ್ವಾತಂತ್ರ್ಯಗಳು ಸಾಲವು. ಅವುಗಳ ಜತೆಗೆ ಐದನೆಯ ಸ್ವಾತಂತ್ರ್ಯವೊಂದು ಸೇರಬೇಕು—"ಸ್ವಾತಂತ್ರ್ಯ ಪಡೆಯಲು ಸ್ವಾತಂತ್ರ್ಯ", ಎಂಬುದು. ಸ್ಟಾಲಿನರ ಯುದ್ಧಧ್ಯೇಯಗಳ ಘೋಷಣೆಯಲ್ಲಿ ಈ ಮಿಕ್ಕೆರಡು ಘೋಷಣೆಗಳಿಗಿಂತ ಹೆಚ್ಚು ನಿಶ್ಚಿತತೆ ಕಾಣುತ್ತದಾದರೂ, ಮುಂದಿನ ಅಂತರರಾಷ್ಟ್ರೀಯ ವ್ಯವಸ್ಥೆಯಲ್ಲಿ ರಷ್ಯದ ಪಾತ್ರವೇನೋ ಹೇಳುವುದಕ್ಕೆ ಸಾಧ್ಯವಿಲ್ಲ. "ರಷ್ಯದ ಒಳಗಿನ ಪುನರ್ರಚನೆಯ ವ್ಯವಸ್ಥೆಯೆಲ್ಲವನ್ನೂ ಈಗಾಗಲೇ ಗೊತ್ತುಮಾಡಿದ್ದೇವೆ. ನಮಗೆ ಹೊಸ ಧ್ಯೇಯಗಳ ಆವಶ್ಯಕತೆ ಇಲ್ಲ" ಎಂದು ಸ್ಟಾಲಿನ್ ಹೇಳಿರುವುದು ಜ್ಞಾಪಕವಿರಬಹುದು.

ಯುದ್ಧಮುಗಿದ ಮೇಲೆ ಪ್ರತಿಯೊಂದೂ ಹೀಗೆಯೇ ನಡೆಯುತ್ತದೆ, ಅಥವಾ ನಡೆಯಬೇಕು ಎಂದು ಹೇಳಬಲ್ಲ ಸ್ಥಿತಿಗೆ ನಾವಿನ್ನೂ ಬಂದಿಲ್ಲ. ಎಷ್ಟೊಂದು ಹೊಸ ತೊಡಕುಗಳು ತಲೆಹಾಕಲಿವೆಯೋ ಯಾರು ಬಲ್ಲರು? ವಿಜಯ ಯಾವಾಗ ದೊರೆಯುವುದು ಎಂಬುದು ಖಚಿತವಾಗಿಲ್ಲದೆ ಹೋದರೂ, ಯಾರಿಗೆ ದೊರೆಯುವುದು ಎಂಬುದು ಈಗಾಗಲೇ ಖಚಿತವಾದಂತೆಯೇ.

ರಾಜಕಾರಣಿಗಳ ವೃಂದದಲ್ಲಿರುವಷ್ಟು ಅಸ್ಪಷ್ಟತೆ, ಅದೃಷ್ಟವಶಾತ್, ಮಿಕ್ಕ ವೃಂದಗಳಲ್ಲಿಲ್ಲ. ಶಾಂತಿಗೆ ನಾವು ಸಿದ್ಧರಾಗಿರಬೇಕು, ಅದು ಬರುವ ವೇಳೆಗೆ ಕಣ್ಣು ಕಣ್ಣು ಬಿಡುವಂತಾಗಬಾರದು ಎಂಬ ಭಾವನೆ ಎಲ್ಲ ದೇಶಗಳ ಪ್ರಾಜ್ಞರಲ್ಲೂ ಬಂದಿದೆ, ಬರುತ್ತಿದೆ. ಈಗಿನಿಂದ ಸರಿಯಾಗಿ ಆಲೋಚನೆ ಮಾಡಿದರೆ ಮಾತ್ರ ಶಾಶ್ವತ ಶಾಂತಿಯನ್ನು ಪಡೆಯಲು ಸಾಧ್ಯ ಎಂಬುದು ಅವರಿಗೆ ಮನದಟ್ಟಾಗಿದೆ. ಅನೇಕರು ಯುದ್ಧಾನಂತರದ ಶಿಕ್ಷಣದ ವಿಷಯವನ್ನು ಗಾಢವಾಗಿ ಪರಿಶೀಲಿಸುತ್ತಿದ್ದಾರೆ. ಇಂಗ್ಲೆಂಡ್ ಅಮೆರಿಕಾಗಳಲ್ಲಿ ಈ ವಿಷಯವಾಗಿ ನೂರಾರು ಲೇಖನಗಳು, ಹತ್ತಾರು ಪುಸ್ತಕಗಳು ಹೊರಬಿದ್ದಿವೆ. ಈ ವರೆಗೆ ಬಂದಿರುವ ಸಲಹೆಗಳನ್ನು ಎರಡು ಬಗೆಗಳಾಗಿ ವಿಂಗಡಿಸಬಹುದು :—(೧) ಪ್ರತಿ ರಾಷ್ಟ್ರದ ವಿದ್ಯಾಪದ್ಧತಿಗಳ ಸುಧಾರಣೆ. (೨) ಶಾಶ್ವತಶಾಂತಿಗೆ ಸಾಧಕವಾಗುವಂಥ ಅಂತರ್ರಾಷ್ಟ್ರೀಯ ವಿದ್ಯಾಭ್ಯಾಸದ ಯೋಜನೆಗಳು.

(೧) **ಒಳ ಸುಧಾರಣೆ:** "ಈ ಯುದ್ಧ ಒಂದು ಮಹಾಕ್ರಾಂತಿ. ಈವರೆಗೆ ನಾವು ಯಾವುದನ್ನು ಸಮರ್ಥವಾದುದು ಸಮರ್ಪಕವಾದುದು ಎಂದು ಭಾವಿಸುತ್ತಿದ್ದೆವೋ ಅವೆಲ್ಲವೂ ಎಷ್ಟು ಶಿಥಿಲ, ಎಷ್ಟು ನಿರರ್ಥಕ ಎಂಬುದನ್ನು ಮಿಕ್ಕ ಮಹಾಕ್ರಾಂತಿಗಳಂತೆ ಈ ಕ್ರಾಂತಿಯೂ ತೋರಿಸಿಕೊಟ್ಟಿದೆ"[1]. ಈ ಬಗೆಯ ಪ್ರಳಯಗಳಿಂದ

[1] ಎಚ್. ಜೆ. ಲಾಸ್ಕಿ "ಅಧಿಕಾರಿಗಳ ಶಿಕ್ಷಣ" "ಪಬ್ಲಿಕ್ ಅಡ್ಮಿನಿಸ್ಟ್ರೇಷನ್" ಏಪ್ರಿಲ್, ೧೯೪೩.

ನಮ್ಮ ಹಿಂದಿನ ಕಾರ್ಯನೀತಿಗಳನ್ನು ತಿದ್ದಿಕೊಳ್ಳಬಹುದು, ಮುಂದಿನ ನೀತಿಯನ್ನು ನಿರ್ಧರಿಸುವ ಶಕ್ತಿಗಳನ್ನು ಪರಿಶೀಲಿಸಬಹುದು. ಜರ್ಮನಿಯು ಹೊರತು ಯಾವ ರಾಷ್ಟ್ರವೂ ಯುದ್ಧಕ್ಕೆ ಸಿದ್ಧವಾಗಿರಲಿಲ್ಲ. ಮಿತ್ರರಾಷ್ಟ್ರಗಳು ಯುದ್ಧಘೋಷಿಸಿದಾಗಲೂ ಅನೇಕ ಜೀವನವ್ಯಾಪಾರಗಳು ಹಿಂದಿನಂತೆಯೇ ನಡೆದುಕೊಂಡು ಹೋಗುತ್ತಿದ್ದುವು. ವಿದ್ಯಾಸಂಸ್ಥೆಗಳಲ್ಲಿ ಯುದ್ಧದ ಆವಶ್ಯಕತೆಗಳಿಗೆ ಹೊಂದಿಕೊಳ್ಳುವಂಥ ಬಹಳ ಮಾರ್ಪಾಡುಗಳಾಗಬೇಕೆಂದು ಕ್ರಮೇಣ ಎಲ್ಲರಿಗೂ ತೋರಿಬಂತು. ಅಮೆರಿಕದಲ್ಲಿ ವಿದ್ಯಾರ್ಥಿಗಳನೇಕರು ಸೈನ್ಯಕ್ಕೆ ಸೇರಲು ನುಗ್ಗಿದರು. ಅವರಲ್ಲಿ ಶೇಕಡ ೫೦ ಜನಕ್ಕೆ ತಕ್ಕ ದೇಹದಾರ್ಢ್ಯವಿರಲಿಲ್ಲ. ದೇಹಶಿಕ್ಷಣಕ್ಕೆ ಕೊಡಬೇಕಾದ ಪ್ರಾಮುಖ್ಯವನ್ನು ಕೊಡಲಿಲ್ಲವೆಂಬುದು ಆಗ ಅಮೆರಿಕದವರಿಗೆ ಅನುಭವವಾಯಿತು. ಶಾಲೆಗಳಲ್ಲಿ ಅಂಗಸಾಧನೆಗೆ ತಕ್ಕ ಸ್ಥಾನಕೊಡಬೇಕೆಂದು ಚಳುವಳಿ ಮೊದಲಾಯಿತು. ಹಾಗೆಯೇ ವೃತ್ತಿಶಿಕ್ಷಣದಲ್ಲೂ[1] ಇಂಗ್ಲೆಂಡಿನಲ್ಲಿ ಯಂತ್ರಗಳ ನಿರ್ವಹಣವನ್ನು ಬಲ್ಲವರ ಸಂಖ್ಯೆ ಬಹು ಸ್ವಲ್ಪವಿತ್ತು. ಯುದ್ಧಕಾಲದಲ್ಲಿ ಅನೇಕರಿಗೆ ಶಸ್ತ್ರಾಭ್ಯಾಸ ಬೇಕಾಯಿತು. ಹಳೆಯ ಪದ್ಧತಿಗಳ ಗೊಡ್ಡುತನ ಬಯಲಿಗೆ ಬಿತ್ತು. ಶಿಕ್ಷಣಶಾಸ್ತ್ರ ಪ್ರವೀಣರು ಅನೇಕ ಸುಧಾರಣೆಗಳನ್ನು ಮೊದಲಿಂದ ಸೂಚಿಸುತ್ತಿದ್ದರು. ಸರಕಾರಗಳವರು ಅದಕ್ಕೆ ತಕ್ಕಗಮನ ಕೊಡುತ್ತಿರಲಿಲ್ಲ. ಈ ಯುದ್ಧದ ನಿಮಿತ್ತವಾಗಿಯಾದರೂ ಆಯಾ ಸರಕಾರಗಳು ತಾವಾಗಿ ಸುಧಾರಣಾ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಯಿತು. ಅವುಗಳ ಬಗ್ಗೆ ಸಲಹೆ ಪಡೆದುಕೊಳ್ಳಬೇಕಾಯಿತು. ದೇಶದ ಎಲ್ಲ ಮಕ್ಕಳೂ ಶಾಲೆಗಳಲ್ಲಿ ಓದುತ್ತಿದ್ದಾರೆಯೆ? ಅವರಿಗೆ ತಕ್ಕಷ್ಟು ಶಾಲೆಗಳಿವೆಯೆ? ತಕ್ಕಂಥ ಶಾಲೆಗಳಿವೆಯೆ? ಶಾಲೆಯ ಕಟ್ಟಡಗಳು ಸಮರ್ಪಕವಾಗಿವೆಯೆ? ಮಕ್ಕಳಿಗೆ ಮನೆಗಳಲ್ಲಿ ತಕ್ಕ ಪೋಷಣೆ ದೊರೆಯುತ್ತಿದೆಯೆ? ಅವರ ಆಹಾರ ಹೇಗಿದೆ? ಅವರ ದೇಹದ ಬೆಳವಣಿಗೆ ಸಮರ್ಪಕವಾಗಿದೆಯೆ? ಬಲಯುತವಾದ ಯುವಕ ಜನಾಂಗ ಬರುತ್ತಿದೆಯೆ? ಶಾಲೆಗಳಲ್ಲಿ ದೇಹದಾರ್ಢ್ಯಕ್ಕೆ ಕೊಡಬೇಕಾದ ಲಕ್ಷ್ಯಕೊಡಲಾಗುತ್ತಿದೆಯೆ? ಮಕ್ಕಳು ಶುಚಿಯಾದ ಪದ್ಧತಿಗಳನ್ನು ಕಲಿಯುತ್ತಿದ್ದಾರೆಯೆ? ಅವರ ಶೀಲಶಿಕ್ಷಣ ಹೇಗಿದೆ? ಮಾಧ್ಯಮಿಕ ಶಾಲೆಗಳಲ್ಲೂ ಪ್ರೌಢಶಾಲೆಗಳಲ್ಲೂ ಬೋಧಿಸುವ ಪಾಠಗಳು ಹೇಗಿವೆ? ಯುವಕರ ಮನಸ್ಸು, ಶೀಲ ಇವುಗಳ ಅಭಿವೃದ್ಧಿಗೆ ಅವು ಸಾಧಕವಾಗಿದೆಯೆ? ಎಂಥ ಎಡರುಗಳನ್ನಾಗಲಿ ಎದುರಿಸುವ ಧೈರ್ಯಸಾಹಸ ಸಾಮರ್ಥ್ಯಗಳು ಅವರಿಗಿದೆಯೆ? ಅವರಿಗೆ ಮಿಲಿಟರಿ ಶಿಕ್ಷಣ ಆಗಿದೆಯೆ? ಆಗಬೇಡವೆ? ವೃತ್ತಿಶಿಕ್ಷಣದ

[1] "ವೃತ್ತಿಶಿಕ್ಷಣದಲ್ಲಿ ಸಮರ್ಪಕವಾದ ಒಂದು ಯೋಜನೆ ಅಗತ್ಯ" ಎಂಬುದೇ ಒಂದು ಪುಸ್ತಕದ ಹೆಸರು.

ವ್ಯವಸ್ಥೆ ಸಮಂಜಸವಾಗಿದೆಯೆ? ಪುಸ್ತಕದ ವಿಜ್ಞಾನ, ಅಥವಾ ಚರಿತ್ರೆ, ವೇದಾಂತ, ಸಮಾಜಶಾಸ್ತ್ರ ಇವುಗಳ ಓದು ಸಾಕೆ? ತಮ್ಮ ಜೀವನವನ್ನೆಲ್ಲ ಸಮಾಜದ ಏಳಿಗೆಗೆ ವಿನಿಯೋಗಿಸುವ ಬುದ್ಧಿ ಅವರಿಗೆ ಬಂದಿದೆಯೆ? ಹೆಣ್ಣುಮಕ್ಕಳ ವಿದ್ಯಾಭ್ಯಾಸ ಹೇಗಿರಬೇಕು? ಕಾರ್ಮಿಕರ ಮಕ್ಕಳಿಗೆ ಹೇಗೆ ಶಿಕ್ಷಣಕೊಡಬೇಕು? ವಯಸ್ಕರ ಶಿಕ್ಷಣದ ವ್ಯಾಪ್ತಿಯೇನು? ವಿಶ್ವವಿದ್ಯಾಲಯಗಳು ಹೀಗೇ ಇರಬೇಕೆ? ಈಗ ಎಲ್ಲ ಅಧ್ಯಾಪಕರಿಗೆ ತಕ್ಕಷ್ಟು ಸಿದ್ಧತೆಯಿದೆಯೆ? ಉಪಾಧ್ಯಾಯವೃತ್ತಿಗೆ ಯಾವ ಸ್ಥಾನ ಮಾನಗಳು ನ್ಯಾಯವಾಗಿ ಸಲ್ಲಬೇಕೊ ಅವು ಸಂದಿವೆಯೆ? ಈ ಪ್ರಶ್ನೆಗಳೂ, ಇನ್ನೂ ಎಷ್ಟೋ ಪ್ರಶ್ನೆಗಳೂ ಅನೇಕರ ಮನಸ್ಸನ್ನು ಬಾಧಿಸತೊಡಗಿವೆ. ಇಂಗ್ಲೆಂಡಿನಲ್ಲಿ, ರಾಷ್ಟ್ರೀಯ ಅಧ್ಯಾಪಕರ ಸಂಘ, ಕಾರ್ಮಿಕಶಿಕ್ಷಣ ಸಂಘ, ಟ್ರೇಡ್ ಯೂನಿಯನ್ ಸಂಘ, ಅಂತರ ವಿಶ್ವವಿದ್ಯಾಲಯಗಳ ಸಂಘ, ಕನ್‌ಸರ್ವೇಟಿವ್ ಪಕ್ಷ, ವಿದ್ಯಾಭಿ ವೃದ್ಧಿ ಸಭೆ, ಮೊದಲಾದ ಎಷ್ಟೋ ಸಂಸ್ಥೆಗಳವರು ಈ ವಿಷಯಗಳ ವಿಮರ್ಶೆಯನ್ನು ಕೂಲಂಕಷವಾಗಿ ಮಾಡುತ್ತಿದ್ದಾರೆ. ತಮ್ಮ ಸಲಹೆಗಳನ್ನು ಆಗಾಗ ಪುಸ್ತಕಗಳ ರೂಪ ದಲ್ಲಿ ಪ್ರಕಟಿಸುತ್ತಿದ್ದಾರೆ. "ಧನಿಕರ ಮಕ್ಕಳ ವಿದ್ಯಾಭ್ಯಾಸಕ್ಕೂ ಬಡವರ ಮಕ್ಕಳ ವಿದ್ಯಾಭ್ಯಾಸಕ್ಕೂ ವ್ಯತ್ಯಾಸವಿರಬಾರದು. ಅವರ ಶಾಲೆಯ ಕಟ್ಟಡಗಳು ಅರಮನೆ ಗಳಾಗಿರಬಾರದು, ಇವರು ಕೊಟ್ಟಿಗೆಗಳಲ್ಲಿ ಓದುವಂತಾಗಬಾರದು. ಚಿಕ್ಕಂದಿ ನಿಂದಲೇ ಈ ತಾರತಮ್ಯಕ್ಕೆ ತುತ್ತಾದರೆ ಮುಂದೆ ಬಹಳ ಅಪಾಯವಾದೀತು. ಇದನ್ನು ಯುದ್ಧವಾದ ಮೇಲಾದರೂ ತಿದ್ದಬೇಕು" ಎಂದು ರಾಷ್ಟ್ರೀಯ ಅಧ್ಯಾಪಕ ಸಂಘದವರು ತಮ್ಮ ಪುಸ್ತಕದಲ್ಲಿ ಹೇಳಿದ್ದಾರೆ.

"ಈಗಿನ ಯುವಕರಿಗೆ ದೊರೆತಿರುವ ಶಿಕ್ಷಣ ತೀರ ಅಸಮರ್ಪಕವಾದುದು, ನಾವೇ ಅದಕ್ಕೆ ಕಾರಣರು, ಅವರಿಗೆ ನಾವು ಕೊಡಬೇಕಾದುದನ್ನು ಕೊಟ್ಟಿಲ್ಲ" ಎಂಬ ಭಾವನೆ ಅಮೆರಿಕದಲ್ಲೂ ಬಲವಾಗಿವೆ. ದೇಶದಾದ್ಯಂತವೂ ಅಧ್ಯಾಪಕರ ಸಭೆ ಸಮ್ಮೇ ಳನಗಳು ಸೇರಿ ಶಿಕ್ಷಣಕ್ರಮದಲ್ಲಿನ ಹುಳುಕುಗಳನ್ನು ಎತ್ತಿತೋರಿಸಿ, ಅವನ್ನು ನಿವಾರಿ ಸಲು ಯೋಜನೆಗಳನ್ನು ತಯಾರಿಸುತ್ತಿದ್ದಾರೆ.

ಬ್ರಿಟಿಷ್ ಸರ್ಕಾರವೂ ಸುಮ್ಮನೆ ಕುಳಿತಿಲ್ಲ. ಮಾಧ್ಯಮಿಕ ವಿದ್ಯಾಭ್ಯಾಸದ ಸ್ಥಿತಿಗತಿಗಳನ್ನು ಪರೀಕ್ಷಿಸಿ ಸುಧಾರಣೆಗಳನ್ನು ಸೂಚಿಸಲು ನಾರ್‌ವುಡ್ ಸಮಿತಿ ಯನ್ನು ನಿಯಮಿಸಿತು. ವ್ಯವಸಾಯದ ಶಿಕ್ಷಣ ಹೇಗೆ ನಡೆಯಬೇಕೆಂಬುದನ್ನು ಪರಿ ಶೀಲಿಸಲು ಲಕ್ಸ್‌ಮೂರ್ ಸಮಿತಿಯನ್ನು ನಿಯಮಿಸಿತು. ಶಿಕ್ಷಣ ಸುಧಾರಣೆಗಳ ನ್ನೊಳಗೊಂಡ ಮಸೂದೆಯನ್ನು ಬ್ರಿಟಿಷ್ ವಿದ್ಯಾಮಂತ್ರಿ ಮಿ|| ಆರ್. ಎ. ಬಟ್ಲ ರರು ಪಾರ್ಲಿಮೆಂಟ್ ಮುಂದೆ ತರಲಿದ್ದಾರೆ. ಅದರ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರ

ದವರು ಒಂದು ಶ್ವೇತಪತ್ರ ಹೊರಡಿಸಿ ತಾವು ರೂಢಿಗೆ ತರಬೇಕೆಂದಿರುವ ಸುಧಾರಣೆಗಳ ಪರಿಚಯವನ್ನು ಕೊಟ್ಟಿದ್ದಾರೆ. "ಬ್ರಿಟನ್ನಿನ ಯಾವ ಮಗುವಿಗೂ ವಿದ್ಯಾಭ್ಯಾಸವಿಲ್ಲದಂತಾಗಬಾರದು; ಸಾರ್ವಜನಿಕ ವಿದ್ಯಾಭ್ಯಾಸವು ಸೀಬೆಹಣ್ಣು ಕಚ್ಚುವ ಸಾಧಾರಣ ಪೋರನಿಗೂ ದೊರೆಯುವಂತಾಗಬೇಕೆಂಬ ಅರಿವು ಈಗ ರಾಷ್ಟ್ರಕ್ಕುಂಟಾಗಿದೆ. ಅರೆಬರೆ ಏರ್ಪಾಡುಗಳನ್ನು ಮಾಡದಿರಬೇಕೆಂಬುದೇ ಸರಕಾರದ ಉದ್ದೇಶ." ಎಂಬುದಾಗಿ ಅದರಲ್ಲಿ ಮಿ|| ಬಟ್ಲರರು ತಿಳಿಸಿದ್ದಾರೆ. ಧನಿಕರ ಪುತ್ರರಿಗಾಗಿ ನಡೆಯುವ ಪಬ್ಲಿಕ್ ಸ್ಕೂಲ್ ಎಂಬ ಶಾಲೆಗಳು ಸರ್ಕಾರದ ಅಧೀನದಲ್ಲಿಲ್ಲ. ಧನಿಕ ಬಡವ ಎಂಬ ಭೇದವನ್ನು ತೊಡೆಯುವುದಕ್ಕಾಗಿ ಅವನ್ನು ಸರ್ಕಾರದ ಆಡಳಿತಕ್ಕೇ ತೆಗೆದುಕೊಳ್ಳುವ ಯೋಜನೆಯಿದೆ. ಯುದ್ಧ ಮುಗಿದ ಮೇಲೆ ಇಂಗ್ಲೆಂಡಿನ ಶಿಕ್ಷಣದ ಸ್ವರೂಪವೇ ಮಾರ್ಪಡುತ್ತದೆ.

ಬಡವರ ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರ ಹೆಚ್ಚು ಹೆಚ್ಚು ಆಸ್ಥೆಯಿಂದ ದುಡಿಯಬೇಕು ಎಂಬುದಾಗಿ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನವರೂ, ಕಾರ್ಮಿಕ ಶಿಕ್ಷಣ ಸಂಘದವರೂ ಒತ್ತಾಯಪಡಿಸುತ್ತಿದ್ದಾರೆ.

(೨) **ಶಾಂತಿಯ ತಳಹದಿ:** ಆದರೆ ಒಂದು ರಾಜ್ಯದಲ್ಲಿ ಶಿಕ್ಷಣಕ್ರಮ ಉತ್ತಮಗೊಂಡರೆ ಅಥವಾ ಪರಿಪೂರ್ಣತೆ ಹೊಂದಿದರೆ ಸಾಲದು. ಜಗತ್ತಿನಲ್ಲಿ ಶಾಶ್ವತ ಶಾಂತಿ ನೆಲಸಬೇಕಾದರೆ ಲೋಕವ್ಯಾಪ್ತಿಯುಳ್ಳ ಒಂದು ಬಗೆಯ ಶಿಕ್ಷಣ ಕ್ರಮ ಏರ್ಪಡಬೇಕು. ಎಲ್ಲ ರಾಷ್ಟ್ರಗಳೂ ಆ ಒಂದು ಧ್ಯೇಯಕ್ಕಾಗಿ ಶ್ರಮಿಸುವಂತಾಗಬೇಕು; ಎಲ್ಲ ಜನಾಂಗಗಳ ಮಕ್ಕಳೂ ಸೌಹಾರ್ದವೊಂದೇ ಜೀವನದ ನಿಯಮ ಎಂಬುದನ್ನು ಕಂಡುಕೊಳ್ಳುವಂತೆ ಆಗಬೇಕು. "ಸುವ್ಯವಸ್ಥಿತ ಶಿಕ್ಷಣದಿಂದಲೇ ಲೋಕಕ್ಕೆ ಮೋಕ್ಷ" ಎಂಬುದನ್ನು ದೊಡ್ಡ ಪಂಡಿತರೆಲ್ಲರೂ ಪದೇ ಪದೇ ಸಾರುತ್ತಲಿದ್ದಾರೆ. ಆದರೆ ಈ ವಿದ್ಯಾಭ್ಯಾಸದ ಯೋಜನೆಯನ್ನು ಯಾವಾಗ ಸಿದ್ಧಮಾಡುವುದು? ಯಾವಾಗ ಕಾರ್ಯರೂಪಕ್ಕೆ ತರುವುದು? "ನ್ಯಾಯಪೂರ್ಣವಾದ ಸಮಾಜದ ಸೃಷ್ಟಿಗಾಗಿ ಶ್ರಮಿಸುತ್ತಿರುವಾಗ ಅಂಥ ಸಮಾಜಕ್ಕೆ ಜನರನ್ನು ಹೊಂದಿಸುವ ಪ್ರಯತ್ನವನ್ನು ಹಿಂಬದಿಗೆ ತಳ್ಳಲಾಗದು. ವಿದ್ಯಾಭ್ಯಾಸದ ಪುನರುಜ್ಜೀವನ, ರಕ್ಷಣೆ, ಅಭಿವೃದ್ಧಿಗಳು ಯುದ್ಧಾನಂತರ ಪ್ರಪಂಚದ ಆಗುಹೋಗುಗಳನ್ನು ಗೊತ್ತುಪಡಿಸುವುದರಲ್ಲಿ ಪ್ರಥಮ ಕಾರ್ಯಗಳು ಎಂದು ಮನನಮಾಡಿಕೊಳ್ಳಬೇಕು. ಕೇವಲ ಯುದ್ಧವನ್ನು ಗೆಲ್ಲುವುದಕ್ಕಿಂತ ಹಿರಿದಾದ ಧ್ಯೇಯವೊಂದು ಎಲ್ಲ ಮಿತ್ರರಾಷ್ಟ್ರಗಳ ಜನರ ಮನಸ್ಸುಗಳನ್ನೂ, ಎದೆಗಳನ್ನೂ ಹುರಿದುಂಬಿಸಿದ ಹೊರತು, ಪ್ರಪಂಚ ಮತ್ತೊಮ್ಮೆ ಜಗಳದ ಹಾದಿ ಹಿಡಿಯಬಹುದು."

ಎಂಬುದಾಗಿ ಗಿಲ್ಬರ್ಟ್ ಮರ್ರೇ ಸಮಿತಿಯವರು[1] ಪಶ್ಚಿಮದಲ್ಲಿ ಹೇಳುತ್ತಿದ್ದರೆ, ದೂರಪ್ರಾಚ್ಯದಲ್ಲಿ ಚೀನೀ ದಂಡನಾಯಕ ಚಿಯಾಂಗ್ ಕೈಷೇಕರು "ನಮಗೆ ಒಪ್ಪುವ ಬಾಳಹಾದಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಯುದ್ಧರಂಗದಲ್ಲಿ ನಾವು ಕಾದಾಡುತ್ತಿರುವಾಗ, ನಾವು ಮನೆಯಲ್ಲಿ ತೆಪ್ಪಗೆ ಕುಳಿತಿರುವುದು ಅರ್ಥ ಶೂನ್ಯ" ಎಂದು ನಮ್ಮನ್ನು ಎಚ್ಚರಿಸುತ್ತಿದ್ದಾರೆ. "ಹೋರಾಟದ ಸಮಾಪ್ತಿಯಾದ ನಿಮಿಷವೇ ನೂತನ ಶಕ್ತಿಯೊಂದರ ರಚನೆ ಪ್ರಾರಂಭವಾಗದಿದ್ದರೆ ಹೊಸ ಯುದ್ಧ ವೊಂದನ್ನು ಘೋಷಿಸಿದಂತೆಯೇ ಸರಿ."[2] ಹೋರಾಟವಾಗುತ್ತಿದ್ದಂತೆ ಕೂಡ ಈ ಹೊಸ ವಿದ್ಯಾಭ್ಯಾಸದ ದೃಷ್ಟಾಂತಗಳು ಕಾಣಬೇಕು. ಪುರೋಗಾಮಿದೃಷ್ಟಿಯುಳ್ಳವ ರೆಲ್ಲರೂ ಇವನ್ನೇ ಕುರಿತು ಚಿಂತಿಸುತ್ತಿದ್ದಾರೆ. ಅಂತರರಾಷ್ಟ್ರೀಯ ಯುವಕಮಂಡಲಿ, ಅಂತರರಾಷ್ಟ್ರೀಯ ವಿದ್ಯಾರ್ಥಿ ಮಂಡಲಿ, ಜಿನೀವಾದ ಅಂತರರಾಷ್ಟ್ರೀಯ ಶಿಕ್ಷಣ ಕಛೇರಿ, ಮಿಗಿಲಾಗಿ, ಸಕಲ ಮಿತ್ರರಾಷ್ಟ್ರಗಳ ವಿಶ್ವವಿದ್ಯಾಲಯ ಅಧ್ಯಾಪಕ ಪ್ರೊಫೆಸರುಗಳ ಸಂಘ ಇವರೆಲ್ಲರೂ ಶ್ರಮಿಸುತ್ತಿದ್ದಾರೆ. "ನಾವೆಷ್ಟು ಮಾತನಾಡಿ ದರೂ ಫಲವಿಲ್ಲ. ಮಿತ್ರರಾಷ್ಟ್ರಗಳ ಸರ್ಕಾರಗಳವರು ಈ ವಿಷಯುಗಳಲ್ಲಿ ಕೂಡಲೇ ಆಸಕ್ತಿ ವಹಿಸಬೇಕು" ಎಂದು ಜಿನೀವಾದ ಅಂತರರಾಷ್ಟ್ರೀಯ ಶಿಕ್ಷಣ ಕಚೇರಿಯ ಡೈರೆಕ್ಟರು ೧೯೪೧-೪೨ನೆಯ ತಮ್ಮ ವರದಿಯಲ್ಲಿ ಹೇಳಿಕೊಂಡಿದ್ದಾರೆ. ಸರ್ಕಾರಗಳೂ ಕಣ್ಣುಮುಚ್ಚಿಕೊಂಡಿಲ್ಲ. ಮಿತ್ರರಾಷ್ಟ್ರಗಳ ವಿದ್ಯಾಮಂತ್ರಿಗಳು ಐದು ಸಲ ಸಭೆ ಸೇರಿದ್ದಾರೆ. ಐದನೆಯ ಸಮ್ಮೇಳನವು ಮಿ|| ಆರ್. ಎ. ಬಟ್ಲರರ ಅಧ್ಯಕ್ಷತೆಯಲ್ಲಿ ಇದೇ ವರ್ಷ ಜುಲೈ ೨೭ರಲ್ಲಿ ಸೇರಿದಾಗ ಅನೇಕ ಮುಖ್ಯವಾದ ಸಲಹೆಗಳ ಪರಿಶೀಲನೆ ನಡೆಯಿತು.[3] ಇವುಗಳಲ್ಲಿ ಮುಖ್ಯವಾದುದೆಂದರೆ ಲಂಡನ್ನಿನ ಇಂಟರ್‌ನ್ಯಾಷನಲ್ ಅಸೋಸಿಯೇಷನ್ ಮತ್ತು ಕೌನ್‌ಸಿಲ್ ಆಫ್ ಎಜುಕೇಷನ್ ಇನ್ ವರ್ಲ್ಡ್ ಸಿಟಿಜ಼ನ್‌ಷಿಪ್ ಇವರ ಸಂಯುಕ್ತ ಸಮಿತಿಯ ವರದಿ. ಈ ಸಮಿತಿಗೆ ವಿಖ್ಯಾತ ಪಂಡಿತರಾದ ಡಾ|| ಗಿಲ್ಬರ್ಟ್ ಮರ್ರೇಯವರು ಅಧ್ಯಕ್ಷರು. ಚೀನಾ, ಸಂಯುಕ್ತ ಸಂಸ್ಥಾನಗಳು, ಗ್ರೀಸ್, ಫ್ರಾನ್ಸ್ ಮುಂತಾದ ಹನ್ನೆರಡು ವಿವಿಧ ರಾಷ್ಟ್ರಗಳ ಪ್ರತಿನಿಧಿಗಳು ಈ ಸಮಿತಿಯಲ್ಲಿದ್ದಾರೆ. ಇವರ ವರದಿಯಲ್ಲಿ ಮೂರು ಮುಖ್ಯ ವಿಭಾಗ ಗಳಿವೆ. ಮೊದಲನೆಯ ಭಾಗದಲ್ಲಿ ನಾಜಿಗಳು ವಿದ್ಯಾಸಂಸ್ಥೆಗಳ ಮೇಲೆ ಎಸಗಿರುವ ದೌರ್ಜನ್ಯದ ಪ್ರಾಮುಖ್ಯ, ಪರಿಮಾಣಗಳನ್ನು ವಿವರಿಸಿ ಅವನ್ನು ಪುನರುದ್ಧಾರಮಾಡಲು

---

[1] ಈ ಸಮಿತಿಯ ವಿಷಯ ಮುಂದೆ ಹೇಳಿದೆ.

[2] ಡಾ|| ಇ. ಎ. ಗಟ್‌ಕೈಂಡ್ "*Principles of National Planning.*"

[3] ಆರನೆಯ ಸಮ್ಮೇಳನ ಅಕ್ಟೋಬರಿನಲ್ಲಿ ಸೇರಬೇಕೆಂದು ಗೊತ್ತಾಗಿತ್ತು.

ಕಾರ್ಯಕ್ರಮವನ್ನು ಸೂಚಿಸಲಾಗಿದೆ. ಜರ್ಮನಿಯಲ್ಲಿ ಪುನರ್ವಿದ್ಯಾಭ್ಯಾಸದ ಭವಿಷ್ಯವನ್ನೂ, ಅದರ ತತ್ವಗಳನ್ನೂ ಎರಡನೆಯ ಭಾಗದಲ್ಲಿ ಪರೀಕ್ಷಿಸಲಾಗಿದೆ. ಮೂರನೆಯ ಭಾಗದಲ್ಲಿ, ಯುದ್ಧಾನಂತರದ ವ್ಯವಸ್ಥೆಗೆ ಶಿಕ್ಷಣವೇ ಹೇಗೆ ತಳಹದಿಯಾಗಿರಬೇಕು, ಅಟ್ಲಾಂಟಿಕ್ ಚಾರ್‌ಟರಿನ ಧ್ಯೇಯಗಳು ಮಣ್ಣುಪಾಲಾಗದಿರಲು ಬೇಕಾಗುವ ಶಿಕ್ಷಣದ ಉದ್ಧಾರವನ್ನು ಸಾಧಿಸಲು ಯಾವ ರೀತಿಯ ಸುಧಾರಣೆಗಳು ಅಗತ್ಯ, ಯಾವ ರೀತಿಯ ವಿಸ್ತರಣ ಆವಶ್ಯಕ ಎಂಬುದನ್ನು ವಿಶದವಾಗಿ ವಿಮರ್ಶಿಸಲಾಗಿದೆ. ಈ ಸಮಿತಿಯ ಸಲಹೆಗಳನ್ನು ಮುಂದೆ ಕೊಡಲಾಗುವುದು.

ಹೀಗೆ ವಿಶ್ವವ್ಯಾಪಿಯಾದ ವಿದ್ಯಾಭ್ಯಾಸದ ಕೊನೆಯ ಗುರಿ ಒಂದೇ ಆದರೂ ಈ ಕೂಡಲೇ ಎಲ್ಲಾ ದೇಶಗಳಲ್ಲೂ ಒಂದೇ ಕಾರ್ಯಕ್ರಮವನ್ನು ಕೈಗೊಳ್ಳುವುದು ಸಾಧ್ಯವಲ್ಲ, ಸಾಧುವಲ್ಲ. ಏಕೆಂದರೆ ಬೇರೆ ಬೇರೆ ರಾಷ್ಟ್ರಗಳ ಶಿಕ್ಷಣದ ಮಟ್ಟ ಬೇರೆ ಬೇರೆ; ಅವರ ರಾಜಕೀಯ ಸ್ಥಾನಮಾನಗಳೂ ಬೇರೆ ಬೇರೆ. ಯುದ್ಧ ಮುಗಿದ ಕೂಡಲೆ ವಿದ್ಯಾಭ್ಯಾಸದ ದೃಷ್ಟಿಯಿಂದ ಪ್ರಪಂಚವನ್ನು ಐದು ಭಾಗಗಳಾಗಿ ವಿಂಗಡಿಸಬಹುದು. (೧) ಅಕ್ಷರಾಷ್ಟ್ರಗಳು, ಅಥವಾ ಇನ್ನೂ ಹೆಚ್ಚು ಖಚಿತವಾಗಿ ಹೇಳಬೇಕಾದರೆ, ಈವರೆಗೂ ಅಕ್ಷರಾಷ್ಟ್ರಗಳೆನಿಸಿದ್ದ ರಾಜ್ಯಗಳು, (೨) ಆಕ್ರಮಿತ ರಾಷ್ಟ್ರಗಳು, (೩) ಇಂಗ್ಲಿಷ್ ಮಾತನಾಡುವ ರಾಷ್ಟ್ರಗಳು, (೪) ರಷ್ಯಾ ಮತ್ತು ಚೀನಾ, (೫) ಇಂಡಿಯಾ ಮತ್ತು ಇತರ ಕಾಲೊನಿಗಳು. ಈ ಎಲ್ಲ ಭಾಗಗಳಲ್ಲಿ ಅನುಸರಿಸುವ ಶಿಕ್ಷಣದ ಕಾರ್ಯಕ್ರಮಗಳಲ್ಲಿ ಒಂದೇ ರಸ ಹರಿಯುತ್ತಿರಬೇಕಾದರೂ ಬೇರೆ ಬೇರೆ ವಿಧಾನಗಳಲ್ಲಿ ಕೆಲಸದ ಪ್ರಾರಂಭ ಮಾಡಬೇಕಾಗುತ್ತದೆ. ಶಿಕ್ಷಣಶಾಸ್ತ್ರ ಪ್ರವೀಣರೂ ಪಂಡಿತರೂ ಈ ವಿಷಯವನ್ನು ಕುರಿತು ಬರೆದಿರುವುದನ್ನು ಇಲ್ಲಿ ಸಂಗ್ರಹವಾಗಿ ಪರಿಶೀಲಿಸೋಣ.

(೧) **ಜರ್ಮನಿ ಮತ್ತು ಇತರ ಅಕ್ಷರಾಷ್ಟ್ರಗಳು :** ಕಳೆದ ಅರ್ಧಶತಮಾನದಿಂದಲೂ ಜರ್ಮನಿಯೇ ಪ್ರಪಂಚದ ಆಧಿವ್ಯಾಧಿಗಳಿಗೆಲ್ಲ ಕಾರಣವಾಗಿದೆ. ಈ ಯುದ್ಧ ಮುಗಿದ ಮೇಲೆ ಮಿತ್ರಸೈನ್ಯಗಳು ಜರ್ಮನಿಯನ್ನು ಆಕ್ರಮಿಸಿಕೊಂಡು ಹಲವು ವರ್ಷಗಳು ರಾಜ್ಯಭಾರ ನಡೆಸಬೇಕೆ? ಅಲ್ಲಿನವರ ತಪ್ಪಿತಕ್ಕಾಗಿ ಅವರ ಮೇಲೆ ವರ್ಸೇಲ್ಸ್‌ನಲ್ಲಿ ಮಾಡಿದಂತೆ ಅಗಾಧವಾದ ಶಿಕ್ಷೆಗಳನ್ನೂ ದಂಡಗಳನ್ನೂ ಹೊರಿಸಬೇಕೆ? ಔದಾರ್ಯ ತೋರಿಸಿ, ಯಾವ ಶಿಕ್ಷೆಯನ್ನೂ ವಿಧಿಸದೆ, ಯೋಗ್ಯವಾದ ಪ್ರಜಾಪ್ರಭುತ್ವವೊಂದು ಅಲ್ಲಿ ಸ್ಥಾಪಿತವಾಗುವಂತೆ ಸಹಾಯಮಾಡಿ ಅಂತರರಾಷ್ಟ್ರೀಯ ಯೋಜನೆಗಳಲ್ಲಿ ಅವರ ಸಹಕಾರ, ವಿಶ್ವಾಸಗಳನ್ನು ಗಳಿಸಬೇಕೆ? — ಈ ರಾಜಕೀಯ ಪ್ರಶ್ನೆಗಳು ಈ ವರೆಗೂ ತೀರ್ಮಾನವಾಗಿಲ್ಲ.

ಆದರೆ ಜರ್ಮನಿಯಲ್ಲಿ ಅನುಸರಿಸಬೇಕಾದ ಶಿಕ್ಷಣ ನೀತಿಯ ಬಗ್ಗೆ ಇಷ್ಟೊಂದು

ಅನಿಶ್ಚಿತತೆಯಾಗಲಿ, ಭಿನ್ನಾಭಿಪ್ರಾಯವಾಗಲಿ ಇಲ್ಲ. ಅಖಿಲ ಮಿತ್ರರಾಷ್ಟ್ರಗಳ ವಿಷಯ ಸಂಗ್ರಾಹಕ ಸಮಿತಿಯೊಂದು ಅಕ್ಷರಾಷ್ಟ್ರಗಳವರು ಜರ್ಮನಿಯಲ್ಲೂ ಆಕ್ರಮಿತರಾಷ್ಟ್ರಗಳಲ್ಲೂ ಶಿಕ್ಷಣಕ್ರಮದಲ್ಲಿ ತೋರಿಸಿರುವ ಹಿಂಸೆಯನ್ನು ಪರೀಕ್ಷಿಸಿ ಒಂದು ವರದಿಯನ್ನೊಪ್ಪಿಸಿದೆ. ನಾಜೀಶಿಕ್ಷಣ ತೀರ ವಿಲಕ್ಷಣವಾದುದು. ಮಗು ಹುಟ್ಟಿದಾಗಿನಿಂದ ಅದಕ್ಕೆ ತಪ್ಪುಭಾವನೆಗಳನ್ನೇ ತುಂಬಿ ಅದನ್ನು "ಹೊರದೇಶಗಳ ವಿಷಯವಾಗಿ ಸರಿಯಾದ ತಿಳಿವಳಿಕೆ ಏನೇನೂ ಇಲ್ಲದಂತೆ ಮಾಡಿದ್ದಾರೆ." ವಿದ್ಯಾವಂತನೆನಿಸಿದ ಜರ್ಮನ್ ಯುವಕನಿಗೆ ಎಷ್ಟು ವಿಷಯಗಳಲ್ಲಿ ಸಂಪೂರ್ಣ ಅಜ್ಞಾನವೆಂಬುದನ್ನು ನೆನಸಿದರೆ ಮೈಜುಮ್ಮೆನ್ನುತ್ತದೆ ಎಂದು ಪ್ರೊ|| ಕಾರ್ ಅವರು ಹೇಳಿದ್ದಾರೆ. ಜರ್ಮನಿಯು ಮತ್ತೆ ಎಲ್ಲ ರಾಷ್ಟ್ರಗಳ ಜತೆಯಲ್ಲಿ ಸಮಾನಸ್ಥಾನ, ಪಾಲುಗಾರಿಕೆಗಳನ್ನು ಹೊರಬೇಕಾದರೆ, ವಯಸ್ಕರೆಲ್ಲರಿಗೂ ಪುನರ್ವಿದ್ಯಾಭ್ಯಾಸ ನಡೆಯಬೇಕು, ಚಿಕ್ಕವರಿಗೆ ಸರಿಯಾದ ರೀತಿಯಲ್ಲಿ ಶಿಕ್ಷಣಕೊಡಬೇಕು. ಗಿಲ್‌ಬರ್ಟ್ ಮರ್‍ರೇ ಸಮಿತಿಯವರು ಈ ಸಮಸ್ಯೆಗೆ ತಮ್ಮ ಸಂಪೂರ್ಣ ಲಕ್ಷ್ಯವನ್ನಿತ್ತು ಅನೇಕ ಸಲಹೆಗಳನ್ನು ಮಾಡಿದ್ದಾರೆ:— "[1]ಜರ್ಮನಿಯ ಪುನರ್ವ್ಯವಸ್ಥೆ ಸಾಧ್ಯವಾಗಬೇಕಾದರೆ ನಾಜೀ ಸಂಸ್ಥೆಯನ್ನು ಕೂಡಲೆ ನಿರ್ನಾಮ ಮಾಡಬೇಕು, ಜರ್ಮನ್ ಸೈನ್ಯವನ್ನು ಮುರಿಯಬೇಕು, ಸೋಲಿನ ಅರ್ಥ ಜರ್ಮನರ ಮನಸ್ಸಿಗೆ ತಟ್ಟುವಂತೆ ಮಾಡಬೇಕು. ಹಾಗೆಂದ ಮಾತ್ರಕ್ಕೆ ಮಿತ್ರರಾಷ್ಟ್ರಗಳು ಅಲ್ಲಿ ನಿರಂಕುಶಾಧಿಪತ್ಯ ನಡೆಸಬೇಕೆಂದಲ್ಲ. ಜರ್ಮನರು ಮತ್ತೆ ತಮ್ಮ ರಾಷ್ಟ್ರಗೌರವವನ್ನು ಪಡೆಯಲು ಗೆದ್ದವರು ಸಹಾಯಮಾಡಬೇಕು. ಜರ್ಮನಿಯನ್ನು ಶಸ್ತ್ರರಹಿತವಾಗಿ ಮಾಡುವುದು ಎಷ್ಟು ಮುಖ್ಯವೋ, ಅಲ್ಲಿನವರ ನೈತಿಕ ಹಾಗೂ ಧಾರ್ಮಿಕ ಪುನರುಜ್ಜೀವನ ಸಾಧ್ಯವಾಗುವಂತೆ ಮಾಡುವುದೂ ಅಷ್ಟೇ ಮುಖ್ಯ. ಸದಾಕಾಲ ಅವರನ್ನು ತುಳಿದಿಟ್ಟಿರುತ್ತೇವೆನ್ನುವುದಕ್ಕಿಂತ ದೊಡ್ಡ ತಪ್ಪು ಇರಲಾರದು. ಯಾವ ದೇಶದಲ್ಲಾಗಲಿ ನಿಜವಾದ ಶಿಕ್ಷಣ ನಡೆಯಬೇಕಾದರೆ ಅಲ್ಲಿನವರಿಂದಲೇ ಸಾಧ್ಯ. ಹೊರಗಿನವರು ಅದನ್ನು ಹೊರಿಸಬಾರದು. ಪುನರ್ವಿದ್ಯಾಭ್ಯಾಸಕ್ಕೆ ಬೇಕಾದ ಅವಕಾಶಗಳನ್ನು ಕಲ್ಪಿಸಿಕೊಡಬೇಕಾದುದು ಗೆದ್ದವರ ಕೆಲಸ.

ಪ್ರಾರಂಭದಲ್ಲಿ ಮಿತ್ರರಾಷ್ಟ್ರಗಳವರು ಒಬ್ಬ ಹೈಕಮಿಷನರ್ ಮೂಲಕ ಜರ್ಮನಿಯ ವಿದ್ಯಾಭ್ಯಾಸದ ಮೇಲೆ ಹತೋಟಿಯನ್ನಿಟ್ಟುಕೊಂಡಿರಬೇಕು. ಮೊದಲೇ ಆತನನ್ನು ಆರಿಸಿಕೊಂಡಿದ್ದು ಯುದ್ಧ ಮುಗಿದ ಕೂಡಲೇ ಆತನು ತನ್ನ ಕೆಲಸವನ್ನು ಆರಂಭಿಸುವಂತಾಗಬೇಕು. ಈತನ ಸಹಾಯಕ್ಕೆ ಮಿತ್ರರಾಷ್ಟ್ರಗಳ ಮತ್ತು ತಟಸ್ಥ ರಾಷ್ಟ್ರಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಸಮಿತಿಯಿರಬೇಕು. ಈ ಸಮಿತಿ

[1] ಇವುಗಳ ಸಂಕ್ಷಿಪ್ತ ವರದಿ ೧೪ನೆಯ ಆಗಸ್ಟಿನ 'ನೇಚರ್' ಪತ್ರಿಕೆಯಲ್ಲಿದೆ.

ಯವರು ಜರ್ಮನಿಯ ಶಿಕ್ಷಣಪದ್ಧತಿಯನ್ನು ಆಮೂಲಾಗ್ರವಾಗಿ ಶೋಧಿಸಿ ಯಾವುದನ್ನು ತಿದ್ದಬೇಕು, ಯಾವುದನ್ನು ಉಳಿಸಿಕೊಳ್ಳಬಹುದು ಎಂದು ವರದಿಮಾಡಬೇಕು. ಜರ್ಮನರ ಕೈಗೇ ತಮ್ಮ ವಿದ್ಯಾಭ್ಯಾಸದ ಮೇಲ್ವಿಚಾರಣೆ ವಹಿಸಿಕೊಡಬಹುದೆಂದು ಎಂದು ಆತನ ಮನಸ್ಸಿಗೆ ತೋರುವುದೋ ಅಲ್ಲಿಯವರೆಗೂ ಈ ಹೈ ಕಮಿಷನರ್ ಅಧಿಕಾರದಲ್ಲಿರತಕ್ಕದು. ಜರ್ಮನಿಯಲ್ಲಿ ಈಗಿರುವ ಎಲ್ಲ ಅಧ್ಯಾಪಕರೂ ನಾಜಿಗಳಲ್ಲ. ನಾಜೀ ಆಳಿಕೆಗೆ ಹೃತ್ಪೂರ್ವಕ ಬೆಂಬಲವನ್ನು ಯಾರು ಕೊಟ್ಟಿದ್ದರೋ, ಅಥವಾ, ಹಿಟ್ಲರನು ಅಧಿಕಾರಕ್ಕೆ ಬರುವುದಕ್ಕೆ ಮೊದಲಿನಿಂದ ಯಾರು ನಾಜೀ ತತ್ತ್ವಕ್ಕೆ ಮಾರುಹೋಗಿದ್ದರೋ ಅಂತಹ ಅಧ್ಯಾಪಕರನ್ನು ನಿರ್ದಾಕ್ಷಿಣ್ಯವಾಗಿ ತೆಗೆದುಹಾಕಬೇಕು. ನಾಜೀ ವಿರೋಧಿಗಳಾದ ಉಪಾಧ್ಯಾಯರಿಗೆ ಎಲ್ಲ ಉತ್ತೇಜನವನ್ನೂ ಕೊಡಬೇಕು. ಹಾಗೆಯೇ ನಾಜೀ ಆಡಳಿತದಲ್ಲಿ ಮುಖ್ಯಸ್ಥಾನ ವಹಿಸಿದ್ದ ಪಠ್ಯ ಪುಸ್ತಕಗಳನ್ನು ತೊಡೆದುಹಾಕಬೇಕು. ಅವಕ್ಕೆ ಬದಲಾಗಿ ಬೇಕಾಗುವಂಥ ಪಠ್ಯಪುಸ್ತಕಗಳನ್ನು ಈಗಿನಿಂದ ತಯಾರಿಸಿಟ್ಟುಕೊಂಡಿರಬೇಕು. ಜರ್ಮನಿಯಿಂದ ಗಡೀಪಾರಾಗಿ ಬಂದಿರುವಂಥವರಿಗೆ ಈ ಕೆಲಸವನ್ನು ಒಪ್ಪಿಸಿ, ಪುಸ್ತಕಗಳನ್ನು ಬರೆಯುವಂತೆ ಅವರನ್ನು ಪ್ರೋತ್ಸಾಹಿಸಬೇಕು. ಆದರೆ ಪ್ರತಿಯೊಂದು ಪುಸ್ತಕದ ಯುಕ್ತಾಯುಕ್ತತೆಯನ್ನೂ ಮಿತ್ರರಾಷ್ಟ್ರಗಳವರು ಬಹಳ ಜಾಗರೂಕತೆಯಿಂದ ಪರೀಕ್ಷಿಸಬೇಕು.

ಹಿಟ್ಲರ್ ಆಧಿಪತ್ಯಕ್ಕೆ ಜರ್ಮನಿಯಲ್ಲಿ ಇಷ್ಟೊಂದು ಬೆಂಬಲ ಸಿಕ್ಕಿದುದು ಆತನೇರ್ಪಡಿಸಿದ "ಜುಗೆಂಡ್" ಎಂಬ ಯುವಕಸಂಸ್ಥೆಗಳಿಂದ. ಕಳೆದ ಯುದ್ಧದ ಫಲವಾಗಿ ಅಧಃಪಾತಾಳಕ್ಕೆ ಇಳಿದಿದ್ದ ಜರ್ಮನ್ ಯುವಕರಿಗೆ ಹೊಸದೊಂದು ನಂಬಿಕೆ (ಅದೆಷ್ಟೇ ದುಷ್ಟವಾದುದಾಗಲಿ) ತಂದುಕೊಟ್ಟಿದ್ದುದೆಂದರೆ "ಜುಗೆಂಡ್" ಗಳು. ಯುದ್ಧಾನಂತರ ಜರ್ಮನಿಯಲ್ಲಿ ಜುಗೆಂಡ್‌ಗಳನ್ನು ಉಳಿಸಲು ಸಾಧ್ಯವಿಲ್ಲ. ಅವುಗಳ ಅಂಗಾಂಗಗಳಲ್ಲೂ ನಾಜೀತತ್ತ್ವ ತುಂಬಿದೆ.[1] ಅವನ್ನು ತೊಡೆದುಹಾಕಿದ-

[1] ಜರ್ಮನ್ ಯುವಕಸಂಸ್ಥೆಗಳಿಗೆಲ್ಲ ಈ ಮೂರು ಅಂಶಗಳು ತಳಹದಿ :—

೧. ಜರ್ಮನರದು ಆರ್ಯರಕ್ತ, ಸ್ವಚ್ಛರಕ್ತ. ಮಿಕ್ಕೆಲ್ಲ ಜನಾಂಗಗಳಿಗಿಂತಲೂ ಎಲ್ಲ ವಿಧಗಳಲ್ಲೂ ಇವರು ಶ್ರೇಷ್ಠರು.

೨. ಇತರ ಎಲ್ಲ ಜನಾಂಗಗಳೂ ಕೀಳು. ಯೆಹೂದ್ಯರೂ ಕರಿಯಜನರೂ ಬದುಕಲು ಕೂಡ ಅನರ್ಹರು.

೩. ಈ ಕೀಳುಜನಾಂಗಗಳ ಮೇಲೆ ರಾಜ್ಯಭಾರ ನಡೆಸುವುದಕ್ಕಾಗಿಯೇ ದೇವರು ಜರ್ಮನರನ್ನು ಸೃಷ್ಟಿಸಿರುವುದು. ಆದುದರಿಂದ ರಾಜ್ಯಾಕ್ರಮಣ, ಯುದ್ಧ, ಇವು ಜರ್ಮನರ ಕರ್ತವ್ಯ, ಅವರ ಧರ್ಮ.

ಇದೇ ನಾಜೀತತ್ತ್ವದ ತಿರುಳು. ಹೀಗೆ ನಾಜೀತತ್ವ ಪರಜನಾಂಗದ್ವೇಷದ ಅಡಿಪಾಯದ ಮೇಲೆ ನಿಂತಿರುವುದರಿಂದಲೇ ಅವರನ್ನು ವಿರೋಧಿಸಿ ಹೋರಾಡುವುದು ಧರ್ಮ ಯುದ್ಧವಾಗುತ್ತದೆ.

ನಂತರ, ಯುವಕರ ಶಕ್ತಿಯನ್ನು ನಮ್ಮ ಕಡೆ ಒಲಿಸಿಕೊಳ್ಳಲು ಮತ್ತೊಂದು ಯುವಕ ಸಂಸ್ಥೆಯನ್ನು ಕಟ್ಟಬೇಕು. ಎಲ್ಲ ಯುವಕರನ್ನೂ ತನ್ನ ಕಡೆ ಸೆಳೆದುಕೊಂಡು ಅವರ ಶಕ್ತಿಯನ್ನೆಲ್ಲ ಮಾನವಜನಾಂಗದ ಶ್ರೇಯಸ್ಸಿಗಾಗಿ ವಿನಿಯೋಗಗೊಳಿಸುವಂಥ ತತ್ತ್ವ ಅದರೊಳಗಿರಬೇಕು. ಪ್ರೊ|| ಕಾರ್ ಅವರು ಹೇಳಿರುವಂತೆ ಜರ್ಮನ್ ಜನರಿಗೆ ನೂತನ ಯೂರೋಪೊಂದರ ನಿರ್ಮಾಣದಲ್ಲಿ ಮಿಕ್ಕ ಜನಾಂಗಗಳ ಆಸಕ್ತಿಗೆ ಸಮಾನವಾದ ಆಸಕ್ತಿ ಹುಟ್ಟಿಸುವುದಷ್ಟೇ ಅಲ್ಲದೆ, ಅಂಥುದೇ ನೈತಿಕ ಗುರಿಯನ್ನು ಕೊಡಬೇಕು.

(೨) **ಆಕ್ರಮಿತ ರಾಷ್ಟ್ರಗಳು:** ಫ್ರಾನ್ಸ್, ಹಾಲೆಂಡ್, ಬೆಲ್ಜಿಯಂ, ಆಸ್ಟ್ರಿಯಾ, ಜೆಕೋಸ್ಲೋವಾಕಿಯಾ ಮುಂತಾದ ಆಕ್ರಮಿತ ರಾಷ್ಟ್ರಗಳ ಸಮಸ್ಯೆ ಅಷ್ಟು ಕಠಿಣವಾದುದಲ್ಲ. ಯುದ್ಧಕ್ಕೆ ಮುಂಚೆ ಅಲ್ಲಿದ್ದ ಸರ್ಕಾರಗಳೇ ಮತ್ತೆ ಹಿಂತಿರುಗುವುದರಲ್ಲಿ ಹೆಚ್ಚು ಸಂದೇಹವಿಲ್ಲ(?). ಆದುದರಿಂದ ಹಿಂದಿನ ಶಿಕ್ಷಣಕ್ರಮವೇ ಮತ್ತೆ ರೂಢಿಗೆ ಬರಬಹುದು. ಆದರೆ ಮಾಡಬೇಕಾದ ಸುಧಾರಣೆಗಳು ಅನೇಕವಿರುತ್ತದೆ. ಪ್ರಾಯಶಃ ಈ ಎಲ್ಲ ರಾಷ್ಟ್ರಗಳ ವಿದ್ಯಾಂಗಗಳನ್ನೂ ಒಂದು ಅಂತರರಾಷ್ಟ್ರೀಯ ಶಿಕ್ಷಣಮಂಡಲಿಯ ಅಧೀನದಲ್ಲಿಡಬೇಕಾದೀತು. ಈ ರಾಷ್ಟ್ರಗಳು ತಮ್ಮ ಸಂಕುಚಿತ ರಾಷ್ಟ್ರೀಯತ್ವವನ್ನು ಬಿಟ್ಟು ಮಿಕ್ಕೆಲ್ಲ ರಾಷ್ಟ್ರಗಳೊಡನೆ ಬೆರೆಯಬೇಕಾದೀತು.

ಜರ್ಮನಿಯು ಈ ರಾಷ್ಟ್ರಗಳನ್ನು ಆಕ್ರಮಿಸಿದ ಮೇಲೆ ತನ್ನ ಶಿಕ್ಷಣಕ್ರಮಗಳನ್ನು ಅಲ್ಲೂ ಕಡ್ಡಾಯವಾಗಿ ಜಾರಿಗೆ ತಂದಿತು. ಆದರೆ ಇದು ಹೆಚ್ಚು ಫಲಕಾರಿಯಾದಂತಿಲ್ಲ. ಈ ವಿಷಯದಿಂದ ನಮಗೆ ಇನ್ನೊಂದು ಶಂಕೆ ಬರುತ್ತದೆ. ತಮ್ಮ ಪುನರ್ವಿದ್ಯಾಭ್ಯಾಸದಲ್ಲಿ ಜರ್ಮನರಿಗೇ ಉತ್ಸಾಹ ಹುಟ್ಟುವಂತೆ, ಅವರೇ ಅದರ ಹೊರೆ ಹೊರುವಂತೆ ಮಿತ್ರರಾಷ್ಟ್ರಗಳು ಮಾಡದೆ, ತಮ್ಮ ಅಭೀಷ್ಟವನ್ನು ಬಲಾತ್ಕಾರದಿಂದ ಅವರ ಮೇಲೆ ಹೊರಿಸಹೋದರೆ ಆ ಅಭೀಷ್ಟಗಳು ಎಷ್ಟೇ ಧರ್ಮಯುತವಾಗಿದ್ದರೂ ಅವು ಫಲಕಾರಿಯಾಗುವುವೆ? ಇದು ಒಂದು ದೊಡ್ಡ ಸಮಸ್ಯೆ. ಗಿಲ್ಬರ್ಟ್ ಮರ್ರೇ ಸಮಿತಿಯವರು ಇದನ್ನೂ ಪರಿಶೀಲಿಸಿದ್ದಾರೆ.

ಈ ರಾಷ್ಟ್ರಗಳ ಸರಕಾರಗಳು ಈಗ ಬೇರೆ ದೇಶಗಳಲ್ಲಿ ಕೆಲಸಮಾಡುತ್ತಿವೆ. ಅಲ್ಲಿನ ಪ್ರಜೆಗಳನೇಕರೂ ಹೊರದೇಶಗಳಲ್ಲಿದ್ದಾರೆ. ಅವರೂ ಆ ಸರಕಾರಗಳೂ ಸೇರಿ ಈಗಿನಿಂದ ವಿಜಯದ ಕಾಲಕ್ಕಾಗಿ ಸಿದ್ಧರಾಗುತ್ತಿದ್ದಾರೆ. ಉದಾಹರಣೆಗೆ ಗ್ರೀಸಿನ ಸರಕಾರದವರು ಗಡೀಪಾರಾದ ಗ್ರೀಕ್ ಯುವಕರಿಗಾಗಿ ಲಂಡನಿನಲ್ಲಿ ಟ್ರೇನಿಂಗ್ ಕಾಲೇಜನ್ನು ಸ್ಥಾಪಿಸಿದ್ದಾರೆ.

(೩) **ಇಂಗ್ಲಿಷ್ ಮಾತನಾಡುವ ರಾಜ್ಯಗಳು:** ಈ ಯುದ್ಧದಿಂದ ಅಮೆರಿಕಕ್ಕೂ ಇಂಗ್ಲೆಂಡಿಗೂ ಹತ್ತಿರದ ಸಂಬಂಧ ಉಂಟಾಯಿತು. ಇಂಗ್ಲೆಂಡನ್ನು

ಕಾಪಾಡಿದುದು ಅಮೆರಿಕವೇ ಎಂಬ ಭಾವನೆ ಬ್ರಿಟಿಷರಲ್ಲಿ ಬೆಳೆಯುತ್ತ ಬಂದಿದೆ. ೧೭೭೬ರಲ್ಲಿ ಇಂಗ್ಲೆಂಡಿನ ಅಧೀನತೆಯಿಂದ ಅಮೆರಿಕ ಬೇರೆಯಾದಂದಿನಿಂದ ಆ ಎರಡು ರಾಷ್ಟ್ರಗಳಿಗೂ ಇಷ್ಟೊಂದು ಬಾಂಧವ್ಯವಿರಲಿಲ್ಲ. "ಯುದ್ಧದಲ್ಲಿ ಮಿತ್ರರಾದವರು ಶಾಂತಿಯಲ್ಲಿಯೂ ಮಿತ್ರರಾಗಿಯೇ ಉಳಿಯಬೇಕು. ಹಾಗಿದ್ದರೆ ಮಾತ್ರ ಪ್ರಪಂಚದಲ್ಲಿ ಮಾನವ ಜನಾಂಗವು ತನ್ನ ಪೂರ್ಣ ಗೌರವವನ್ನು ಸಂಪಾದಿಸಲು ಸಾಧ್ಯ"[1] ಎಂಬ ಭಾವನೆಗೆ ಅಮೆರಿಕದ ಮೂಲೆ ಮೂಲೆಯಲ್ಲೂ ಸಮರ್ಥನೆ ದೊರೆಯುತ್ತಿದೆ. ಇಂಗ್ಲೆಂಡ್ ಅಮೆರಿಕಾ ಇವೆರಡೂ ಒಂದುಗೂಡಿ ಒಂದೇ ರಾಜ್ಯ ಏಕಾಗಬಾರದು ಎಂಬ ಮಾತು ಕೂಡ ಅಲ್ಲಲ್ಲಿ ಕೇಳಿಬರುತ್ತಿದೆ.[2]

ಇಷ್ಟಾದರೆ ಸಾಕೆ? ಇಂಗ್ಲೆಂಡ್ ಅಮೆರಿಕಾ ಇವೆರಡು ರಾಷ್ಟ್ರಗಳು ಒಟ್ಟಿಗೆ ನಿಂತು ಒಂದು ನೀತಿಯನ್ನು ಅನುಸರಿಸಿದ ಮಾತ್ರಕ್ಕೆ ಜಗತ್ತಿಗೆ ಶಾಶ್ವತ ಶಾಂತಿ ದೊರೆಯುತ್ತದೆ ಎಂದು ಒಪ್ಪಲು ಸಾಧ್ಯವೆ? ಮಿಕ್ಕ ರಾಷ್ಟ್ರಗಳ ಮಾತೇನು? ಯುದ್ಧದಲ್ಲಿ ಶತ್ರುಗಳಾಗಿದ್ದವರು, ಮಿತ್ರರಾಗಿದ್ದ ಮಿಕ್ಕವರು, ಇವರುಗಳ ಸ್ಥಾನಮಾನಗಳೇನು? ಈ ಪ್ರಶ್ನೆಗಳಿಗೆ ಗಿಲ್ಬರ್ಟ್ ಮರ್ರೀ ಸಮಿತಿಯವರು ಉತ್ತರ ಕೊಟ್ಟಿಲ್ಲ. ಕೊಡಲು ಸಾಧ್ಯವೂ ಇಲ್ಲ. ರಾಜಕಾರಣವೇತ್ತರು ತೀರ್ಮಾನಿಸಬೇಕಾದ ವಿಷಯಗಳನ್ನು ಶಿಕ್ಷಣ ಶಾಸ್ತ್ರ ನಿಪುಣರು ತೀರ್ಮಾನಿಸುವ ಹಾಗಿಲ್ಲ.

ಗಿಲ್ಬರ್ಟ್ ಮರ್ರೆ ಸಮಿತಿಯವರು ಒಂದು ಸತ್ಯವಾದ ಸಂಗತಿಯನ್ನು ಬಹಳ ಸಂಗ್ರಹವಾಗಿಯೂ ಸುಂದರವಾಗಿಯೂ ಹೇಳಿದ್ದಾರೆ: "The re-education of Germany is possible if we are prepared to re-educate ourselves"—ನಮ್ಮ ಪುನರ್ವಿದ್ಯಾಭ್ಯಾಸಕ್ಕೆ ನಾವು ಒಡಂಬಡುವುದಾದರೆ ಮಾತ್ರ ಜರ್ಮನಿಯ ಪುನರ್ವಿದ್ಯಾಭ್ಯಾಸ ಸಾಧ್ಯ." ಇದು ಬಹಳ ಮುಖ್ಯವಾದ ಅಂಶ. ಸಾಧಾರಣವಾಗಿ ಒಂದು ಯುದ್ಧದ ವಿಜಯವೇ ಮತ್ತೊಂದು ಯುದ್ಧಕ್ಕೆ ಕಾರಣ. ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳಬೇಕು, ಪ್ರತೀಕಾರ ತೆಗೆದುಕೊಳ್ಳಬೇಕು ಎಂಬ ಮನೋವರ್ತನೆಯನ್ನು ಬಿಟ್ಟರೆ ಈ ಯುದ್ಧವೇ ಕೊನೆಯ ಯುದ್ಧವಾಗಬಹುದು. ಶಿಕ್ಷಣ ಶಾಸ್ತ್ರದಲ್ಲಿ ಹಗಲಿರುಳೂ ಶ್ರಮಿಸುತ್ತಿರುವವರಿಗೆ ಅತ್ಯಂತ ದೊಡ್ಡ ಸಮಸ್ಯೆಯೆಂದರೆ ಈ "ದ್ವೇಷ ಪ್ರಕೃತಿ." ಇದರ ಫಲಗಳೇನೆಂದು ಅವರು ನೋಡಿದ್ದಾರೆ, ಅವುಗಳನ್ನು ಅನುಭವಿಸುತ್ತಿದ್ದಾರೆ. ಈ ಸಲವಾದರೂ ದೇಶದ ಯುವಕರಿಗೆ, ಬಾಲಕ ಬಾಲಕಿಯರಿಗೆ ಈ ಪ್ರತೀಕಾರದ ತೃಷ್ಣೆ ಉಂಟಾಗದಿರಲೆಂದು ಅವರು ದುಡಿಯುತ್ತಿದ್ದಾರೆ.

---

[1] ಪ್ರೊ|| ಐ. ಎಲ್. ಕ್ಯಾಂಡೆಲ್. [2] ಪ್ರೊ|| ರೈಯಾನ್. ಯುದ್ಧಾನಂತರ ವ್ಯವಸ್ಥೆಗೆ ಸಂಬಂಧಪಟ್ಟ ೭೭ ಪ್ರಶ್ನೆಗಳ ಪಟ್ಟಿ ಮಾರ್ಚಿ ತಿಂಗಳ "Clearing House" ಅಲ್ಲಿದೆ.

"ಸೈನಿಕರಿಗೆ ಹೇಗೋ ಏನೋ, ಶಾಲೆಗಳಲ್ಲೂ ಎಳೆಯ ಮಕ್ಕಳಲ್ಲೂ ಪ್ರತೀಕಾರ ಮನೋಭಾವಕ್ಕೆ ಸ್ಥಾನವಿರಬಾರದು. ಸ್ವಾತಂತ್ರ್ಯದ ಪ್ರೀತಿ ಹೇಳಿಕೊಡಿ, ಧರ್ಮ ಪ್ರೇಮವನ್ನು ಬೋಧಿಸಿ, ಅನ್ಯಾಯ ಗುಲಾಮಗಿರಿಗಳನ್ನು ಎದುರಿಸುವುದನ್ನು ಬೇಕಾದ ಹಾಗೆ ಹೇಳಿಕೊಡಿ, ಆದರೆ ಪ್ರತೀಕಾರ ಮನೋಭಾವವನ್ನು ಮಾತ್ರ ಹೇಳಿಕೊಡಬೇಡಿ" ಎಂಬುದಾಗಿ ಅಮೆರಿಕಾ ಸರಕಾರದ ವಿದ್ಯಾ ಇಲಾಖೆಯ ಪತ್ರಿಕೆ ಹೇಳಿದೆ.

ಸರಿಯಾದ ಎಚ್ಚರಿಕೆಯಿಲ್ಲದಿದ್ದರೆ ಈ ಪ್ರತೀಕಾರ ಪ್ರಕೃತಿಯ ಹಾಲಾಹಲದಿಂದ ಮತ್ತೊಂದು ಪ್ರಳಯ ಒದಗುತ್ತದೆ. ಈ ಅಂಶವನ್ನು ವಿವರಿಸುತ್ತ ಗಿಲ್ಬರ್ಟ್ ಮರ್ರೇ ಸಮಿತಿಯವರು, "ಸ್ವತಂತ್ರವಾಗಿ ಸುಖದಿಂದ ಜೀವಿಸುವ ಹಕ್ಕು ಪ್ರತಿ ಜರ್ಮನನಿಗೂ ಇದೆ ಎಂಬುದು ಸ್ಥಾಪನೆಯಾಗಬೇಕು. ಪ್ರಜಾಪ್ರಭುತ್ವ ಧ್ಯೇಯಗಳಿಗನುಸಾರ ವಾಗಿ ರಚಿಸಿದಂಥ ಸ್ವಾತಂತ್ರ್ಯಪ್ರೇಮಿ ಸರಕಾರವು ಅಲ್ಲಿ ಏರ್ಪಡುವಂತೆ ನೋಡಿ ಕೊಳ್ಳುವ ಜವಾಬ್ದಾರಿ ಗೆದ್ದವರದು" ಎಂಬುದಾಗಿ ಬರೆದಿದ್ದಾರೆ.

ಆದುದರಿಂದ ಇಂಗ್ಲಿಷ್ ಮಾತನಾಡುವ ರಾಷ್ಟ್ರಗಳ ಮುಂದಿರುವ ದೊಡ್ಡ ಸಮಸ್ಯೆಯಿದು: ಅಲ್ಲಿನ ಜನರು ವಿಜಯದಿಂದ ಉನ್ಮತ್ತರಾಗಿ ಬಿಡಬಾರದು; ಅಥವಾ ವೈರಿಗಳಾಗಿದ್ದವರ ಮೇಲೆ ಪ್ರತೀಕಾರವನ್ನೇ ಕೋರುತ್ತ ನಡೆಯಬಾರದು; ಯುದ್ಧ ಮುಗಿದ ಮೇಲೆ ಎಲ್ಲ ರಾಷ್ಟ್ರಗಳೊಡನೆ ಸೇರಿ ತಮ್ಮ ಹೊಣೆಯನ್ನು ತಾವು ಹೊರಲು ಸಿದ್ಧರಾಗಿರಬೇಕು. ಇದು ಸಾಧ್ಯವಾಗಬೇಕಾದರೆ ಅಲ್ಲಿನ ಆಂತ ರಿಕ ಶಿಕ್ಷಣ ಪದ್ಧತಿಯು ಬಹಳ ಬದಲಾವಣೆಗೊಳ್ಳಬೇಕಾಗುತ್ತದೆ. ಈ ರಾಷ್ಟ್ರಗಳು ಎಲ್ಲಕ್ಕಿಂತ ಮೊದಲು ತಮ್ಮನ್ನು ತಾವು ತಿದ್ದಿಕೊಳ್ಳಬೇಕಾಗುತ್ತದೆ.

(೪) **ರಷ್ಯಾ, ಚೀನಾ:** ರಷ್ಯಾಕ್ಕೂ ಚೀನಾಕ್ಕೂ ಹೋಲಿಕೆ ಸ್ವಲ್ಪವೇ ಆದರೂ ಅವೆರಡನ್ನೂ ಒಟ್ಟಿಗೆ ಸೇರಿಸುವುದು ವಾಡಿಕೆ. ರಷ್ಯಾದ ಶಿಕ್ಷಣಕ್ರಮ ಮಿಕ್ಕೆಲ್ಲ ದೇಶಗಳ ಶಿಕ್ಷಣಕ್ರಮಕ್ಕಿಂತಲೂ ಹೆಚ್ಚು ಸಮರ್ಪಕವಾಗಿದೆ. ಈ ಅರ್ಥ ದಲ್ಲಿ ನೋಡುವುದಾದರೆ, ಯುದ್ಧಾನಂತರ ಅದನ್ನು ಪುನರ್ವ್ಯವಸ್ಥೆಗೊಳಿಸುವ ಅಗ ತ್ಯವೇ ಇರಲಾರದು. ಆದರೆ ರಷ್ಯಕ್ಕೆ ದೊಡ್ಡದೊಂದು ಪ್ರಶ್ನೆಯಿದೆ: ವಿದ್ಯಾಸಂಸ್ಥೆ ಗಳಿಗೆ ಯುದ್ಧದಿಂದಾಗಿರುವ ಅಪಾರ ನಷ್ಟವನ್ನು ಸರಿಹೊಂದಿಸಿಕೊಳ್ಳುವುದು. ಇದೇ ಪ್ರಶ್ನೆ ಚೀನದ ಮುಂದೆಯೂ ಇದೆ. ಪ್ರಚಂಡವಾದ ಮಾರ್ಪಾಡುಗಳಾಗಬೇಕಾ ದರೆ ಆಂದೋಲನ ಕಾಲಗಳಲ್ಲೇ ಎಂಬುದು ಚೀನದ ಈಚಿನ ಚರಿತ್ರೆಯಿಂದ ವೇದ್ಯವಾಗುತ್ತದೆ. ಯುದ್ಧದ ಈ ಆರು ವರ್ಷಗಳಲ್ಲಿ ಆ ನಾಡಿನಂತೆಯೇ ಅಲ್ಲಿನ ಶಿಕ್ಷಣಕ್ರಮವೂ ಮಾರ್ಪಾಡುಹೊಂದಿದೆ. ಇದರಲ್ಲಿ ಬಹಳ ಆಶ್ಚರ್ಯವನ್ನುಂಟು

ಮಾಡುವ ಅಂಶವೆಂದರೆ ಅಲ್ಲಿನ ಅಕ್ಷರಪ್ರಚಾರಕಾರ್ಯ. ೧೯೩೭ ರಲ್ಲಿ ಶೇಕಡ ೭೫ ಇದ್ದ ನಿರಕ್ಷರಸ್ಥರ ಸಂಖ್ಯೆ, ೧೯೪೨ ರಲ್ಲಿ ಶೇಕಡ ೩೬ ಕ್ಕೆ ಇಳಿಯಿತು.[1] ಎಂದರೆ ಓದುಬರಹ ಬಲ್ಲವರ ಸಂಖ್ಯೆ ಎರಡೂವರೆಯಷ್ಟಾದಂತಾಯಿತು, ಅಕ್ಷರ ಪ್ರಚಾರವೊಂದೇ ಅಲ್ಲ. ಎಲ್ಲ ಬಗೆಯ ಶಿಕ್ಷಣದಲ್ಲೂ ಚೀಣ ಆಶ್ಚರ್ಯಕರವಾಗಿ ಮುಂದುವರೆದಿದೆ.

(೫) **ಇಂಡಿಯಾ ಮತ್ತು ಇತರ ಕಾಲೊನಿಗಳು :** ಚೀಣದ ಮಾದರಿಯಿಂದ ಈಗ ವಸಾಹತುಗಳಾಗಿರುವ ರಾಷ್ಟ್ರಗಳಿಗೆ ಭಾರಿಯ ಆತ್ಮವಿಶ್ವಾಸ ಬಂದಿದೆ. ಯುದ್ಧವಾದ ಮೇಲೂ ಅವುಗಳನ್ನು ವಸಾಹತುಗಳನ್ನಾಗಿಯೇ ಇಟ್ಟುಕೊಂಡಿರ ಬೇಕೋ ಅಥವಾ ಅವುಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕೋ ಎಂಬ ವಿಷಯದಲ್ಲಿ ಅವುಗಳ ಸ್ವಾಮಿಗಳೆನಿಸಿದವರು ಸಂಪೂರ್ಣವಾಗಿ ನಿಶ್ಚಯಮಾಡಿ ಕೊಂಡಿಲ್ಲದಿದ್ದರೂ, ಅವುಗಳ ಸ್ಥಾನಮಾನಗಳಲ್ಲಿ ಬದಲಾವಣೆಗಳಾಗುವುದು ಸ್ವತಸ್ಸಿದ್ಧ. ಭಾರತದ ಭವಿಷ್ಯ ಹೀಗೇ ಇರುವುದು ಎಂಬುದನ್ನು ಯಾರೂ ಹೇಳಲಾರರು. ತತ್ಪರಿಣಾಮವಾಗಿ ಯಾವ ಶಿಕ್ಷಣಕ್ರಮವನ್ನೂ ಈಗಲೇ ಹಾಕುವುದು ಸಾಧ್ಯವಿಲ್ಲ. ಏಕೆಂದರೆ ಒಂದು ದೇಶದ ಶಿಕ್ಷಣಪದ್ಧತಿ ಅಲ್ಲಿನ ಸರ್ಕಾರವನ್ನವಲಂಬಿಸಿರುತ್ತದೆ. ಆದರೆ ಮಾಡಬೇಕಾದ ಕೆಲಸಗಳ ವಿಷಯದಲ್ಲಿ ಭಿನ್ನಾಭಿಪ್ರಾಯ ಲೇಶವೂ ಇಲ್ಲ. ನಿರಕ್ಷರತೆ ನಿಶ್ಶೇಷವಾಗಿ ಅಳಿಯಬೇಕು. ದೇಶದಾದ್ಯಂತವೂ ವಯಸ್ಕರ ಶಿಕ್ಷಣ ಏರ್ಪಡಬೇಕು. ವೃತ್ತಿಶಿಕ್ಷಣಕ್ಕೆ ಸರ್ವಸೌಲಭ್ಯಗಳನ್ನೂ ಮಾಡಿ ಕೊಡಬೇಕು. ಶಿಕ್ಷಣಖಾತೆಗಳು ಕೇವಲ ಹೊರದೇಶದ ಮಾದರಿಗಳ ನೆರಳಿನಂತಿರದೆ ದೇಶದ ಸಂಸ್ಕೃತಿಯನ್ನು ಸೂಸುವ ಅಂಗಗಳಾಗಿರಬೇಕು. ಮಾತೃಭಾಷೆಗಳಿಗೆ ಮೊದಲ ಮನ್ನಣೆ ದೊರೆಯಬೇಕು. ಸಮಾಜದ ಏಳಿಗೆಯೇ ಶಿಕ್ಷಣದ ಗುರಿಯಾಗಿರಬೇಕು. ವಸಾಹತುಗಳಲ್ಲಿ ಮಾಡಬೇಕಾದ ಕೆಲಸ ಹೇರಳವಾಗಿದೆ. ಶಿಕ್ಷಣಕಾರ್ಯ ಒಂದರಲ್ಲೇ ಹತ್ತಾರು ವರ್ಷಗಳ ಕೆಲಸವಿದೆ.

ಇಂಡಿಯಾ ಸರ್ಕಾರದ ಶಿಕ್ಷಣಖಾತೆಯ ಡೈರೆಕ್ಟರಾದ ಸರ್ ಜಾನ್ ಸಾರ್ಜೆಂಟರು ಯುದ್ಧಾನಂತರದ ಶಿಕ್ಷಣದ ಬಗ್ಗೆ ಅನೇಕ ಸಲಹೆಗಳನ್ನೊಳಗೊಂಡ ಒಂದು ವರದಿಯನ್ನು ಪ್ರಕಟಿಸಿದ್ದಾರೆ. ದೇಶದ ಎಲ್ಲ ಕಡೆಗಳ ಉಪಾಧ್ಯಾಯ ಸಂಘಗಳವರೂ ಆಂತರಿಕ ಸುಧಾರಣೆಗಳಾಗಬೇಕೆಂದೂ, ಶಿಕ್ಷಕವೃತ್ತಿಗೆ ಹೆಚ್ಚಿನ ಗೌರವ ದೊರೆಯಬೇಕೆಂದೂ ಒತ್ತಾಯಮಾಡುತ್ತಿದ್ದಾರೆ. ಚೀಣದಲ್ಲಿ ಯುದ್ಧ

[1] ಚೀನದ ಉಪವಿದ್ಯಾಮಂತ್ರಿ ವಿ|| ವೈ. ಎಚ್. ಕು ಅವರು ಮದ್ರಾಸಿನ ಸಭೆಯಲ್ಲಿ ಮಾತನಾಡುತ್ತ ಒದಗಿಸಿದ ಸಂಖ್ಯೆಗಳು.

ನಡೆಯುತ್ತಿದ್ದಂತೆಯೇ, ನವಚೇತನವನ್ನು ಹೊಂದಿದ ವಿದ್ಯಾಂಗದ ನಿರ್ಮಾಣ ವಾಯಿತು. ಭಾರತದ ವಿದ್ಯಾಂಗದಲ್ಲಿಯಾದರೋ ಈ ಮೂರು ವರ್ಷಗಳಿಂದಲೂ ಮುಖ್ಯವಾದ ಬದಲಾವಣೆಯೊಂದೂ ಕಂಡುಬರುವುದಿಲ್ಲ.

**ಅಂತರರಾಷ್ಟ್ರೀಯ ತಳಹದಿ:** ಅಲ್ಲೊಂದು ರಾಷ್ಟ್ರ ಇಲ್ಲೊಂದು ರಾಷ್ಟ್ರ ಪ್ರಗತಿಗಾಮಿಯಾದ ಶಿಕ್ಷಣಕ್ರಮವನ್ನು ಅನುಸರಿಸಿದರೆ ಸಾಲದು. ಎಲ್ಲ ರಾಜ್ಯಗಳೂ ಸಹೋದರರಂತೆ ಶಾಂತಿಪಥದಲ್ಲಿ ನಡೆದು ಹೋಗಬೇಕು. ಗಿಲ್‌ಬರ್ಟ್ ಮರ‍್ರೇ ಸಮಿತಿಯವರು ಇದಕ್ಕೂ ತಕ್ಕ ವಿಧಾನಗಳನ್ನು ಸೂಚಿಸಿರುವರು. ಅಲ್ಲದೆ ಅಂತರರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಕುರಿತು ವಿಸ್ತಾರವಾದ ಇನ್ನೊಂದು ವರದಿಯನ್ನು ತಯಾರಿಸುತ್ತಿದ್ದಾರೆ. ಈಗಿನ ವರದಿಯಲ್ಲಿ ಅವರು ಹೇಳಿರುವ ಅಂಶ ಗಳನ್ನು ಮಿತ್ರಸರ್ಕಾರಗಳು ಈಗಾಗಲೆ ಒಪ್ಪಿಕೊಂಡು ಅದರಂತೆ ನಡೆದುಕೊಂಡಿದ್ದರೆ ಅವರ ಪಕ್ಷಕ್ಕೆ ಇನ್ನೂ ಹೆಚ್ಚಿನ ಸಮರ್ಥನೆ ದೊರೆಯುತ್ತಿತ್ತು; ಅವರ ಘೋಷಣೆ ಗಳಲ್ಲಿ ಎಲ್ಲರಿಗೂ ಹೆಚ್ಚಿನ ವಿಶ್ವಾಸ ಉಂಟಾಗುತ್ತಿತ್ತು. ಸಲಹೆಗಳಿವು: "ಶಿಕ್ಷಣ ಪುನರ‍್ರಚನೆಯು ಮಿತ್ರರಾಷ್ಟ್ರಗಳವರೆಲ್ಲರ ಸಂಯುಕ್ತ ಪ್ರಯತ್ನವಾಗಿರಬೇಕು. ಯುದ್ಧಮುಗಿದ ಮೇಲಿನ ಪ್ರಥಮ ಕಾರ್ಯಗಳಲ್ಲಿ ಇದು ಒಂದಾಗಿರಬೇಕು. ಶಿಕ್ಷಣ ಪುನರ್‍ರಚನೆಗಾಗಿ ಮಿತ್ರರಾಷ್ಟ್ರಗಳ ಕಚೇರಿಯೊಂದು ಸ್ಥಾಪನೆಯಾಗಬೇಕು. ಯಾವ ದೊಡ್ಡ ರಾಷ್ಟ್ರವೂ ಈ ಕಾರ್ಯದಲ್ಲಿ ಭಾಗವಹಿಸದೆ ಹೊರಗೆ ನಿಲ್ಲುವಂತಾಗ ಕೂಡದು. ಇಂಥ ಅಗಾಧವಾದ ಸಮಸ್ಯೆಗಳನ್ನು ಯಾವ ರಾಷ್ಟ್ರವೂ ಒಂಟೊಂಟಿ ಯಾಗಿ ಪರಿಹರಿಸಲಾರದು. ಈ ಸಂಸ್ಥೆಯವರು ಅಗತ್ಯವಾದ ಯೋಜನೆಗಳನ್ನು ಈಗಿನಿಂದ ತಯಾರಿಸಬೇಕು. ಸಣ್ಣ ರಾಷ್ಟ್ರಗಳವರಿಗೆ ಶಿಕ್ಷಣ ಪುನರ್ವ್ಯವಸ್ಥೆಗೆ ಸಾಕಾ ದಷ್ಟು ಹಣ ಸಿಗದೆಹೋದರೆ, ಈ ಸಂಸ್ಥೆಯವರು ಅದನ್ನು ಒದಗಿಸುವಂತಿರಬೇಕು."

"ಎಲ್ಲ ದೇಶಗಳ ಪಠ್ಯಪುಸ್ತಕಗಳಲ್ಲೂ ಅನೇಕ ಮಾರ್ಪಾಡುಗಳಾಗಬೇಕು. ನಾವೆಲ್ಲರೂ ಪ್ರಪಂಚದ ಪ್ರಜೆಗಳು ಎಂಬ ಭಾವನೆ ಮಕ್ಕಳಲ್ಲಿ ಈಗಿನಿಂದ ಬೆಳೆದು ಬರಬೇಕು. ದೇಶದ ಚರಿತ್ರೆಯನ್ನೂ, ಪ್ರಪಂಚದ ಚರಿತ್ರೆಯನ್ನೂ ಒಂದೇ ಪುಸ್ತಕ ದಲ್ಲಿ ಸೇರಿಸಿ ಬೋಧಿಸಬೇಕು. ವಿಜ್ಞಾನ ಓದುವವರಿಗೆ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಇವುಗಳನ್ನೂ, ಚರಿತ್ರೆ ಕಲೆ ಮುಂತಾದವನ್ನು ಓದುವವರಿಗೆ ವಿಜ್ಞಾನವನ್ನೂ ಕಲಿಸಿ ಜ್ಞಾನವೆಲ್ಲ ಒಂದು ಎಂಬ ಭಾವನೆಯನ್ನು ಬೆಳೆಸಬೇಕು. ಉಪಾಧ್ಯಾಯರು ಗಳಿಗಾಗಿ ಅಂತರರಾಷ್ಟ್ರೀಯ ಶಿಬಿರಗಳನ್ನು ಏರ್ಪಡಿಸಬೇಕು. ಎಲ್ಲೆಡೆಗಳಲ್ಲೂ ಅವರ ಸ್ಥಾನಮಾನಗಳು ಹೆಚ್ಚಬೇಕು."

"ಲಂಡನಿನಲ್ಲಿ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯವೊಂದನ್ನು ಏರ್ಪಡಿಸ

ಬೇಕು. ಈ ವಿಶ್ವವಿದ್ಯಾಲಯದಲ್ಲಿ ಎಲ್ಲ ಶಾಸ್ತ್ರಗಳಲ್ಲೂ ಶಿಕ್ಷಣಕೊಡಬೇಕು. ಅಲ್ಲದೆ ಶಿಕ್ಷಣಕ್ರಮಗಳಿಗೆ ವಿಶೇಷ ಗಮನಕೊಡಬೇಕು.

ಈ ಸಲಹೆಯನ್ನು ಸಕಲ ಮಿತ್ರರಾಷ್ಟ್ರಗಳ ವಿಶ್ವವಿದ್ಯಾಲಯಗಳ ಅಧ್ಯಾಪಕ ಸಂಘದವರು ಒಪ್ಪಬೇಕು. ಇದರ ಜತೆಗೆ, ವಿವಿಧ ವಿಶ್ವವಿದ್ಯಾಲಯಗಳಲ್ಲಿ ಸೌಹಾರ್ದ ಸಹವರ್ತನೆಯನ್ನು ಹೆಚ್ಚಿಸುವುದಕ್ಕೋಸ್ಕರ ಅಂತರರಾಷ್ಟ್ರೀಯ ವಿಶ್ವ ವಿದ್ಯಾಲಯಗಳ ಸಂಸ್ಥೆಯನ್ನು ಸ್ಥಾಪಿಸಬೇಕು, ಈ ಸಂಸ್ಥೆ ಎಲ್ಲ ವಿಶ್ವವಿದ್ಯಾಲಯ ಗಳಲ್ಲೂ ಸಾಧ್ಯವಾದ ಮಟ್ಟಿಗೆ ಒಂದೇ ಬಗೆಯ ಪಾಠಕ್ರಮವಿರುವಂತೆ ನೋಡಿಕೊಳ್ಳ ಬೇಕು, ತಮ್ಮ ತಮ್ಮ ಪ್ರೊಫೆಸರುಗಳನ್ನು ಪರಸ್ಪರ ವಿನಿಮಯಮಾಡಿಕೊಳ್ಳುವಂತೆ ನೋಡಿಕೊಳ್ಳಬೇಕು ಎಂದು ಸಲಹೆಯಿತ್ತಿದೆ. ಈ ಸಂಸ್ಥೆಗೆ ಮುಖ್ಯವಾದ ಇನ್ನೊಂದು ಕೆಲಸವೆಂದರೆ, ಜರ್ಮನ್ ವಿಶ್ವವಿದ್ಯಾಲಯಗಳ ಪುನರ್ನಿರ್ಮಾಣಕ್ಕೆ ನೆರವಾಗುವುದು. ಎಲ್ಲ ದೇಶಗಳಲ್ಲೂ ಸರಿಯಾದ ಬಗೆಯ ಸಾಹಿತ್ಯ ಬೆಳೆಯುವಂತೆ ನೋಡಿಕೊಳ್ಳಲು ಒಂದು ಸಮಿತಿ (Permanent Committee for Comparative Literature) ನೇಮಕವಾಗಬೇಕೆಂದು ಮತ್ತೊಂದು ಸಲಹೆ ಬಂದಿದೆ. ವಿವಿಧ ಪುಸ್ತಕಭಂಡಾರಗಳ ಉದ್ಧಾರಕ್ಕಾಗಿ ಒಂದು ಯೋಜನೆಯನ್ನು ಡಾ|| ಅರ್ನೆಸ್ಟ್ ಬಾರ್ಕರ್ ಅವರ ಅಧ್ಯಕ್ಷತೆ ಯಲ್ಲಿ ಒಂದು ಸಮಿತಿಯು ತಯಾರಿಸಿದೆ. ಮಿತ್ರರಾಷ್ಟ್ರಗಳ ವಿದ್ಯಾಮಂತ್ರಿಗಳ ಐದನೆಯ ಸಮ್ಮೇಳನದಲ್ಲಿ ಈ ಯೋಜನೆಯು ಅಂಗೀಕಾರವಾಯಿತು.

**ವಯಸ್ಕರ ಶಿಕ್ಷಣ:** ಯುದ್ಧಾನಂತರದ ಪ್ರಪಂಚದಲ್ಲಿ ವಯಸ್ಕರ ಶಿಕ್ಷಣ ಬಹಳ ಪ್ರಮುಖಪಾತ್ರ ವಹಿಸುತ್ತದೆ. "ಶೈಶವಸ್ಥಿತಿಯಲ್ಲಿದ್ದ ವಯಸ್ಕರ ಶಿಕ್ಷಣ ಯುದ್ಧದ ದೆಸೆಯಿಂದ ಪ್ರಾಪ್ತವಯಸ್ಕವಾಯಿತು. ವಯಸ್ಕರ ಶಿಕ್ಷಣವೆಂದರೇನು? ಎಲ್ಲರಿಗೂ ಬರಿಯ ಅಕ್ಷರ ಕಲಿಸುವುದು ಮಾತ್ರವಲ್ಲ. ನಿಜವಾದ ಜ್ಞಾನವು, ಗಂಡಸು ಹೆಂಗಸೆಂಬ ಭೇದವಿಲ್ಲದೆ ಎಲ್ಲರಿಗೂ ದೊರೆಯುವಂತಾಗಬೇಕು. ಯುದ್ಧದ ಹಾಗೂ ಶಾಂತಿಯ ಆಗುಹೋಗುಗಳೆಲ್ಲವೂ ಜಗತ್ತಿನ ಜನಸಾಮಾನ್ಯರಿಗೆ ತಿಳಿದಿರಬೇಕು. ಅವರು ಅದರಲ್ಲಿ ಭಾಗವಹಿಸಬೇಕು. ಜಗತ್ತಿನ ಭವಿಷ್ಯ ಈ ಬಗೆಯ ಶಿಕ್ಷಣದಲ್ಲಿದೆ" ಎಂದು ಪ್ರೊ|| ಎನ್. ಎಲ್. ಎಂಗ್ಲ್‌ಹಾರ್ಟರವರು ಹೇಳಿದ್ದಾರೆ. ಗೆದ್ದವರು, ಸೋತವರು, ತಟಸ್ಥರಾಗಿದ್ದವರು, ಎಂಬ ತಾರತಮ್ಯವಿಲ್ಲದೆ ಪ್ರತಿಯೊಂದು ರಾಷ್ಟ್ರಕ್ಕೂ ತಿಳಿವಳಿಕೆಯಿಂದ ಕೂಡಿದ ವಯಸ್ಕ ಶಿಕ್ಷಣ ಬೇಕೇ ಬೇಕು.

**ಯುವಕರ ಸ್ಥಾನ:** ಯುದ್ಧದ ಯಾವ ರೂಪವಿಶೇಷವನ್ನು ಪರಿಶೀಲಿಸ ಬೇಕಾದರೂ, ಮುಂದಿನ ಜಗತ್ತಿನಲ್ಲಿ ಯುವಕರ ಸ್ಥಾನವೇನು ಎಂಬ ಪ್ರಶ್ನೆಯನ್ನು ಕುರಿತು ಯೋಚಿಸಲೇ ಬೇಕು. ಯುದ್ಧವನ್ನು ನಿಜವಾಗಿ ಗೆಲ್ಲುವವರು ಅವರು.

ನೆತ್ತರನ್ನು ಚೆಲ್ಲುವವರು ಅವರು. ತಮ್ಮ ವಿದ್ಯೆಯನ್ನು ತ್ಯಾಗಮಾಡಿ ರಣರಂಗಕ್ಕೆ ಧುಮುಕುವವರು ಅವರು. ಮುಂದಿನ ವಿದ್ಯಾವ್ಯವಸ್ಥೆಯಲ್ಲಿ ಅವರಿಗೆ ಏನು ಸ್ಥಾನ? ಕಳೆದ ಯುದ್ಧದಲ್ಲಿ ಯುವಕರು ಎಷ್ಟೋ ಸೇವೆ ಸಲ್ಲಿಸಿದರು. ಆದರೆ ಯುದ್ಧ ಮುಗಿದ ಮೇಲೆ "ಶಾಂತಿ"ಯ ಕಾಲದಲ್ಲಿ ಪಡಬಾರದ ಕಷ್ಟಗಳನ್ನು ಪಟ್ಟವರೂ ಅವರೇ. ನಿರುದ್ಯೋಗದ ಕರಾಳ ರಕ್ಕಸಿಯ ಹಿಡಿತಕ್ಕೆ ಸಿಕ್ಕಿ ಪರಾವಲಂಬನೆಯ ಯಾತನೆಯನ್ನು ಪಡಬೇಕಾದವರೂ ಅವರೇ. ಆ ಬಗೆಯ ಸಮಸ್ಯೆಗಳು ಈ ಸಲ ಬಾರದಿರಲೆಂದು ದೇಶಗಳ ಮುಖಂಡರುಗಳು ಪ್ರಯತ್ನಮಾಡುತ್ತಿದ್ದಾರೆ. ಯುವಕರಾದರೂ ಜವಾಬ್ದಾರಿಯ ಕೆಲಸಗಳನ್ನೆಲ್ಲ 'ಹಿರಿಯರ' ಕೈಗೆ ಒಪ್ಪಿಸಿಬಿಟ್ಟು ಹೋದಸಲದಂತೆ ತೆಪ್ಪಗೆ ಕುಳಿತುಕೊಳ್ಳುವವರಲ್ಲ. "ಪ್ರಜಾಪ್ರಭುತ್ವಾನುಸಾರವಾದ ಶಿಕ್ಷಣಕ್ರಮಗಳಿಗೆ ನಾವು ನಮ್ಮ ಜೀವನವನ್ನು ಅರ್ಪಿಸುವುದಕ್ಕೆ ಸಿದ್ಧರಾಗಿದ್ದೇವೆ" ಎಂಬುದಾಗಿ ಅಂತರರಾಷ್ಟ್ರೀಯ ಯುವಕಮಂಡಲಿಯವರು ತಮ್ಮ ಲಂಡನ್ ಸಮ್ಮೇಳನದಲ್ಲಿ (೧೯೪೨ನೆಯ ನೊವೆಂಬರ್ ೧೪, ೧೫) ತೀರ್ಮಾನಿಸಿದರು. ಅವರು ಮತ್ತೊಂದು ಮುಖ್ಯವಾದ ನಿರ್ಣಯವನ್ನು ಮಾಡಿದ್ದಾರೆ:[1] "ಉದ್ಯೋಗ, ವಿಶ್ರಾಂತಿ, ವಿನೋದ, ವಿದ್ಯಾಭ್ಯಾಸ, ಆರೋಗ್ಯ,—ಯುವಕರ ಈ ಹಕ್ಕುಗಳನ್ನು ಎಲ್ಲ ರಾಷ್ಟ್ರಗಳೂ ಕೂಡಲೇ ಅಂಗೀಕರಿಸಬೇಕು. ಹಾಗಾದರೆ ಮಾತ್ರ ಯುವಕರು ಪೂರ್ಣೋತ್ಸಾಹದಿಂದ ಫ್ಯಾಸಿಸಮ್ಮಿನೊಡನೆ ಹೋರಾಟ ನಡೆಸಬಲ್ಲರು."

"ಯುದ್ಧವನ್ನು ಗೆಲ್ಲುವುದು ಮಾತ್ರವಲ್ಲ, ಶಾಂತಿಯನ್ನೂ ಗೆಲ್ಲಬೇಕು ಎಂದು ಒತ್ತಿ ಒತ್ತಿ ಹೇಳಿ. ಹಿರಿಯರನ್ನು ಒತ್ತಾಯಪಡಿಸಿ. ಹಾಗಾದರೆ ಮಾತ್ರ ಯುವಕ ಜನಾಂಗದ ಭವಿಷ್ಯವು ಗೌರವದಿಂದಕೂಡಿರಲು ಸಾಧ್ಯ" ಎಂಬುದಾಗಿ ಅಂತರರಾಷ್ಟ್ರೀಯ ವಿದ್ಯಾರ್ಥಿ ಸಮ್ಮೇಳನದಲ್ಲಿ ಭಾಷಣಮಾಡುತ್ತ ಡಾ|| ಬೆನಿಷ್‌ರವರು ತಿಳಿಸಿದರು. ಯುವಕರೇನೋ ಹಾಗೆಯೇ ಹಟ ಹಿಡಿದಿದ್ದಾರೆ. ಹಿರಿಯರೇನು ಮಾಡುವರೊ ನೋಡಬೇಕು.

ಎಚ್. ವೈ. ಶಾರದಾಪ್ರಸಾದ್.

---

[1] "ಶಿಕ್ಷಣ, ಪ್ರಜಾಪ್ರಭುತ್ವ"—ಪ್ರೊ|| ಎನ್. ಎಲ್. ಎಂಗ್ಲ್‌ಹಾರ್ಟ್, "ಟೀಚರ್ಸ್ ಕಾಲೇಜ್ ರಿಕಾರ್ಡ್" ೧೯೪೨, ಡಿಸೆಂಬರ್ ಸಂಚಿಕೆ.

# ಸಗೋತ್ರವಿವಾಹ

ಜೀವರಾಶಿಯ ಅನೇಕ ವರ್ಗಗಳಲ್ಲಿ ಸ್ತ್ರೀಪುರುಷರೆಂಬ ಜಾತಿಭೇದವಿರುವುದು. ಈ ಜಾತಿಗಳು ಒಂದನ್ನೊಂದು ಆಶಿಸಿ ಪರಸ್ಪರ ಸಮೀಪ ಬಾಂಧವ್ಯವನ್ನು ಬೆಳಸುವುದೂ, ಇದರಿಂದ ಪ್ರಜೋತ್ಪತ್ತಿಯಾಗುವುದೂ ಸ್ವಾಭಾವಿಕ. ಇಂತಹ ಪರಸ್ಪರ ಆಶೆಯು ತಿರ್ಯಗ್ಜಂತುಗಳಲ್ಲಿ ಸಾಮಾನ್ಯವಾಗಿ ಯಾವ ನಿಯಮಕ್ಕೂ ಒಳಪಡದಿದ್ದರೂ, ಮಾನವರಾಶಿಯಲ್ಲಿ ಎಲ್ಲ ಸಂದರ್ಭಗಳಲ್ಲೂ ಜಾತಿಭೇದವನ್ನು ಮಾತ್ರ ಆಶ್ರಯಿಸಿಲ್ಲ. ಅಂದರೆ ಸ್ತ್ರೀಪುರುಷರಾಗಿದ್ದರೂ ಇಬ್ಬರು ವ್ಯಕ್ತಿಗಳು ಮತ್ತಾವುದನ್ನೂ ಲೆಕ್ಕಿಸದೆ ಒಬ್ಬರನ್ನೊಬ್ಬರು ಪ್ರೀತಿಸುವುದಿಲ್ಲ. ಹೀಗೆ ಸಂಬಂಧವನ್ನು ಬೆಳಸುವ ವ್ಯಕ್ತಿಗಳಿಗೆ ಅದಕ್ಕೆ ಮೊದಲೇ ಇನ್ನಾವ ವಿಧವಾದ ಸಮೀಪಸಂಬಂಧವೂ ಇಲ್ಲದಿದ್ದರೆ ಮುಂದೆ ಹುಟ್ಟಬಹುದಾದ ಮಕ್ಕಳಲ್ಲಿ ಆರೋಗ್ಯ, ಶಕ್ತಿವಿಶೇಷಗಳು ಗೋಚರವಾಗುವುವೆಂದೂ, ಸಂಬಂಧವನ್ನು ಬೆಳಸುವ ವ್ಯಕ್ತಿಗಳಿಗೆ ಹೆಚ್ಚು ಸುಖಕ್ಕೆ ಅವಕಾಶವಿರುವುದೆಂದೂ ಬಹಳ ಹಿಂದೆಯೇ ಮನದಟ್ಟಾದಂತೆ ತೋರುವುದು. ಇದಲ್ಲದೆ ಸಮಾಜದಲ್ಲಿ ಮತದ ಆಧಾರದಿಂದಲೊ ಇತರ ಕಾರಣಗಳಿಂದಲೊ ಪ್ರಚಾರದಲ್ಲಿದ್ದ ಪ್ರಭೇದಗಳೂ ಇಂತಹ ಸಂಬಂಧಗಳ ಕೆಲವು ನಿಯಮಗಳಿಗೆ ಕಾರಣವಾದವು. ಇಂತಹ ನಿಯಮಗಳನ್ನೆಲ್ಲ ಗಮನಿಸಿ ಕ್ರಮಪಡಿಸಿದುದರ ಪರಿಣಾಮವೇ ವಿವಾಹಪದ್ಧತಿ. ಇದು ಮಾನವನ ಮೇಲ್ಮೆ.

ವಿವಾಹ ಪದ್ಧತಿಯು ಎಲ್ಲ ದೇಶಗಳಲ್ಲೂ ಎಲ್ಲ ಕೋಮುಗಳಲ್ಲೂ ಯಾವಾಗಲೂ ಒಂದೇ ಸಮನಾಗಿಲ್ಲ. ಭಾರತಭೂಮಿಯಲ್ಲೂ ಇದಕ್ಕೆ ಪ್ರಮಾಣ ಗ್ರಂಥಗಳಾದ ಸ್ಮೃತಿಗಳಲ್ಲಿ ಕಾಲಭೇದದಿಂದ ಇದು ವ್ಯತ್ಯಸ್ತವಾಗಿರುವುದಕ್ಕೆ ಆಧಾರಗಳು ಸಿಕ್ಕುವವು. ಒಟ್ಟಿನಲ್ಲಿ ಸ್ವಲ್ಪಮಟ್ಟಿಗೆ ನಿಯಮವನ್ನು ಉಲ್ಲಂಘಿಸಿದ್ದರೆ ಅದಕ್ಕೂ ಸ್ಮೃತಿಯಲ್ಲಿ ಅವಕಾಶವಿರುವುದೆಂಬ ಭಾವನೆಯಿಂದ ಕೆಲವು ಮಾರ್ಪಾಡುಗಳನ್ನು ಜನರು ಅಂಗೀಕರಿಸಿರುವರು. ಆದರೂ ಸ್ಮೃತಿಗಳು ಕ್ರಮಗೊಂಡಾಗಿನಿಂದಲೂ ಕೆಲವು ನಿಯಮಗಳು ಮಾತ್ರ ಒಂದೇಸಮನಾಗಿ ಅನ್ವಯಿಸುತ್ತಿವೆಯೆಂದು ಹೇಳಬಹುದು. ಉದಾ.— ಸಪಿಂಡ, ಸಗೋತ್ರ, ಸಪ್ರವರ ವಿವಾಹನಿಷೇಧ. ಭಾರತೀಯ ವಿವಾಹ ಪದ್ಧತಿಗೆ ಬಾಹ್ಯಸನ್ನಿವೇಶಗಳು ಮಾತ್ರವಲ್ಲದೆ ಮತವಿಷಯಕವಾದ ಕೆಲವು ಅಂಶಗಳೂ ಆಧಾರವೆಂದು ಸಾಮಾನ್ಯಜನರ ನಂಬಿಕೆ. ಆದುದರಿಂದ ಇದನ್ನು ಮಾರ್ಪಡಿಸುವುದು ಸುಲಭವಲ್ಲ. ಆದರೆ ಕೊಂಚಕಾಲದಿಂದ ಆಯಾ ಕೋಮಿನವರು

ಮಾತ್ರ ಇಂತಹ ಸಂಗತಿಗಳನ್ನು ಪರಾಮರ್ಶಿಸಿ ಸೂಕ್ತತೋರಿದಂತೆ ಮಾರ್ಪಾಡು ಗಳನ್ನು ಮಾಡದೆ ಇವು ರಾಜಕೀಯ ಸಭೆಗಳಲ್ಲಿ ಚರ್ಚೆಗೆ ಬಂದು ವ್ಯವಸ್ಥೆಯಾಗು ತ್ತಿರುವವು. ಈ ಸಭೆಗಳಲ್ಲಿ ಇಂತಹ ವಿಷಯಗಳನ್ನು ನಿರ್ಣಯಿಸುವುದು ಸೂಕ್ತವೆ ಎಂಬ ದೊಡ್ಡ ವಿಷಯಕ್ಕೆ ಇಲ್ಲಿ ಕೈ ಹಾಕುವುದಿಲ್ಲ.

ಸಪಿಂಡರು, ಸಗೋತ್ರರು, ಸಪ್ರವರರು ಪರಸ್ಪರ ಮದುವೆಯಾಗಕೂಡದೆಂದು ಸಾಮಾನ್ಯ ಸಂಪ್ರದಾಯವಿರುವುದು. ಈ ಮೂರು ರಾಶಿಗಳಲ್ಲಿ ಸಪಿಂಡರೆಂಬವರು ಸ್ಥೂಲದೃಷ್ಟಿಯಿಂದ ಸಾಕ್ಷಾತ್ತಾಗಿಯೊ ಪರಂಪರೆಯಾಗಿಯೊ ಒಂದೇ ಶರೀರದ ಅವಯವ ಉಳ್ಳವರು.[1] ಪ್ರಸಕ್ತ ವಿಷಯದಲ್ಲಿ ತಂದೆಯ ಮೂಲಕವೊ, ತಾಯಿಯ ಮೂಲಕವೊ ಏಳು ತಲೆಮಾರಿಗೆ ಸೇರಿದವರೆನ್ನಬಹುದು.[2] ಅಂದರೆ ಮದುವೆಯಾಗ ಲೆಳಸುವ ಸ್ತ್ರೀಪುರುಷರು ಇಷ್ಟು ಹತ್ತಿರದ ನೆಂಟರನ್ನು ಬಿಡತಕ್ಕದ್ದೆಂದು ತಾತ್ಪರ್ಯ. ಈ ನಿಷೇಧಕ್ಕೆ ರಕ್ತಸಂಬಂಧವೇ ಕಾರಣವೆಂದಾಯಿತು. ಒಬ್ಬನೇ ಮೂಲಋಷಿಯ ಗೋತ್ರಕ್ಕೆ ಸೇರಿದವರು ಸಗೋತ್ರರು. ವೇದರಾಶಿಯ ಮಂತ್ರಗಳು ಯಾರೂ ಬರೆದ ವಲ್ಲ, ಅನಾದಿಸಿದ್ಧ. ಆದರೂ ಒಂದೊಂದು ಮಂತ್ರಕ್ಕೆ ಒಬ್ಬೊಬ್ಬ ಋಷಿಯೆಂದು ವ್ಯವಹರಿಸುವುದು ಆ ಋಷಿಯೇ ಅದನ್ನು ಮೊಟ್ಟಮೊದಲು ಸಾಕ್ಷಾತ್ಕರಿಸಿದನೆಂಬು ದರಿಂದ ಮಾತ್ರ. ಈಗ ಯಾವನಾದರೂ ಋಷಿಯ ಗೋತ್ರಕ್ಕೆ ಸೇರಿದವರೆಂದರೆ ಅವನ ಸಂತತಿಯವರೆಂದು ತಾತ್ಪರ್ಯ. ಸಗೋತ್ರರೆಂದರೆ ಈಗ ಎಲ್ಲ ಸಂದರ್ಭ ಗಳಲ್ಲೂ ಪರಸ್ಪರ ರಕ್ತಸಂಬಂಧವುಳ್ಳವರೆಂದು ಹೇಳುವಂತಿಲ್ಲ. ಇವರು ಮದುವೆಯಾಗ ಕೂಡದೆಂದು ನಿಷೇಧಿಸಿರುವುದನ್ನು ನೋಡಿದರೆ ಇಲ್ಲೂ ಸ್ಥೂಲದೃಷ್ಟಿಗೆ ಗೋಚರ ವಾಗದಿದ್ದರೂ ರಕ್ತಸಂಬಂಧವೇ ನಿಮಿತ್ತವೆಂದು ಊಹಿಸಬೇಕಾಗಿದೆ.

ಪ್ರವರಭೇದವು ಮತ್ತೊಂದು ಕ್ರಮವನ್ನು ಅನುಸರಿಸುವುದು. ಅನೇಕ ಋಷಿ ಗಳನ್ನು ಒಟ್ಟುಗೂಡಿಸಿ ಒಂದು ಸಮೂಹವಾಗಿ ವ್ಯವಹರಿಸುವುದುಂಟು. ಇಂತಹ ಸಮುದಾಯಕ್ಕೆ ಸಾಮಾನ್ಯವಾಗಿ ಮೂವರು ಅಥವಾ ಐದು ಋಷಿಗಳನ್ನು ಸೇರಿಸ ಬಹುದು. ಅಂದರೆ ಪ್ರವರಗಳು 'ತ್ರ್ಯಾರ್ಷ' ಅಥವಾ 'ಪಂಚಾರ್ಷ'ಗಳಾಗ ಬಹುದು. ಉದಾ: ವೈಶ್ವಾಮಿತ್ರ, ಅಘಮರ್ಷಣ, ಕೌಶಿಕ ಮೂವರು ಸೇರಿದ

---

[1] ಸಾಕ್ಷಾತ್ಪರಂಪರಯಾವಾ ಏಕಶರೀರಾವಯವಾನ್ವಯಃ

ವಿಜ್ಞಾನೇಶ್ವರ—ಯಾ. ಸ್ಮೃ. II, 52.

[2] ಯಾಜ್ಞವಲ್ಕ್ಯಸ್ಮೃತಿಯಲ್ಲಿ ತಾಯಿಯ ಕಡೆ ಐದು ತಲೆಮಾರಿನವರನ್ನೂ ತಂದೆಯ ಕಡೆ ಏಳು ತಲೆಮಾರಿನವರನ್ನೂ ಮದುವೆಯಾಗಕೂಡದೆಂದು ಸ್ವಲ್ಪ ಮತಭೇದವಿರುವುದು.

—ಯಾ. ಸ್ಮೃ. II, 53.

ತ್ರ್ಯಾರ್ಷಪ್ರವರವು ಕೌಶಿಕ ಗೋತ್ರದವರದು. ಆಂಗೀರಸ, ಬಾರ್ಹಸ್ಪತ್ಯ, ಭಾರದ್ವಾಜ ಮೂವರು ಸೇರಿದ ತ್ರ್ಯಾರ್ಷಪ್ರವರವು ಭಾರದ್ವಾಜ ಗೋತ್ರದವರದು. ಭಾರ್ಗವ, ಚ್ಯವನ, ಆಪ್ನವಾನ, ಔರ್ವ, ಜಾಮದಗ್ನ್ಯ ಐದು ಋಷಿಗಳು ಸೇರಿದ ಪಂಚಾರ್ಷ ಪ್ರವರವು ಶ್ರೀವತ್ಸ ಗೋತ್ರದವರದು. ಕೆಲವು ವೇಳೆ ಗೋತ್ರಋಷಿಯ ಹೆಸರು ಪ್ರವರದಲ್ಲಿ ಬರುವುದೂ ಉಂಟು. ಮೇಲೆ ನಿರ್ದಿಷ್ಟವಾದ ಕೌಶಿಕ ಮತ್ತು ಭಾರದ್ವಾಜ ಗೋತ್ರಗಳ ಪ್ರವರಗಳನ್ನು ಗಮನಿಸಬಹುದು. ಒಂದೇ ಪ್ರವರವೆಂಬುದನ್ನು ನಿರ್ಣಯಿಸಲು ಸುಲಭವಲ್ಲ. ಪ್ರವರಗಳಲ್ಲಿ ಪ್ರಧಾನರಾದ ಋಷಿಗಳ ಹೆಸರನ್ನಾಶ್ರಯಿಸಿ, ಭೃಗುಗಣ, ಅಂಗಿರೋಗಣ ಎಂದು ಮುಂತಾಗಿ ವ್ಯವಹರಿಸಿ ಇವುಗಳಲ್ಲಿ ಪಂಚಾರ್ಷ ಮತ್ತು ತ್ರ್ಯಾರ್ಷ ಪ್ರವರಗಳಲ್ಲಿ ಮೂವರು ಋಷಿಗಳೊ ಅಥವಾ ಒಬ್ಬನೇ ಋಷಿಯೊ ಸಮನಾಗಿದ್ದರೆ ಆಗ ಒಂದೇ ಪ್ರವರವಾಗುವುದೆಂಬುದು ಸ್ಥೂಲವಾದ ಮಾರ್ಗ. ಹೆಚ್ಚು ವಿವರಗಳನ್ನು 'ಗೋತ್ರಪ್ರವರನಿಬಂಧ'ವೆಂಬ ಗ್ರಂಥದಿಂದ ತಿಳಿಯಬಹುದು.

ಆಧುನಿಕ ಸಮಾಜಸುಧಾರಕರು ಇದನ್ನು ಮಾರ್ಪಡಿಸಬೇಕಾದರೆ ಎರಡು ಮಾರ್ಗಗಳನ್ನು ಹಿಡಿಯಬಹುದು! ಸ್ಮೃತಿಗಳಲ್ಲಿ ಇಂತಹ ನಿರ್ಬಂಧಗಳೇ ಇಲ್ಲವೆಂದೊ, ಅಂತಹ ವಚನಗಳಿದ್ದರೆ ಅವುಗಳಿಗೆ ಬೇರೆ ತಾತ್ಪರ್ಯವೆಂದೊ ಕಲ್ಪಿಸುವುದು ಮೊದಲನೆಯದು. ಯುಕ್ತಿವಾದದಿಂದ ಅಂತಹ ವಚನಗಳು ಸಮಂಜಸವಲ್ಲವೆಂದೊ, ಈಗಿನ ವಾತಾವರಣಕ್ಕೆ ಅವು ಸರಿಬೀಳುವುದಿಲ್ಲವೆಂದೊ ವಾದಿಸುವುದು ಎರಡನೆಯ ಮಾರ್ಗ. ಪ್ರಕೃತ ವಿಷಯದಲ್ಲಿ ಮಹಾರಾಷ್ಟ್ರದ ಪಂಡಿತರಿಬ್ಬರು ಮೇಲೆ ಸೂಚಿಸಿದ ಒಂದೊಂದು ಮಾರ್ಗವನ್ನು ಹಿಡಿದು ಸಗೋತ್ರ ಸಪ್ರವರ ವಿವಾಹಗಳನ್ನು ಸಮರ್ಥಿಸಿರುವರು.

ಮನುಸ್ಮೃತಿಯಲ್ಲಿ ಸಗೋತ್ರವಿವಾಹವನ್ನು ನಿಷೇಧಿಸುವ—

ಅಸಪಿಂಡಾ ಚ ಯಾ ಮಾತುರಸಗೋತ್ರಾ ಚ ಯಾ ಪಿತುಃ |
ಸಾ ಪ್ರಶಸ್ತಾ ದ್ವಿಜಾತೀನಾಂ ದಾರಕರ್ಮಣಿ ಮೈಥುನೆ || III, 5.

ಎಂಬ ಶ್ಲೋಕವಿರುವುದು. ಇದರ ಪೂರ್ವಾರ್ಧವು ಗಮನಾರ್ಹ. ಇಲ್ಲಿ 'ಮಾತುಃ' ಎಂಬುದರೊಡನೆ 'ಅಸಪಿಂಡಾ' ಎಂಬುದೂ 'ಪಿತುಃ' ಎಂಬುದರೊಡನೆ 'ಅಸಗೋತ್ರಾ' ಎಂಬುದೂ ಅನ್ವಯಿಸುವುವೆಂದು ಎಲ್ಲರಿಗೂ ವ್ಯಕ್ತವಾಗುವುದು. ಆದರೆ ಇಲ್ಲಿ 'ಚ' ಶಬ್ದವನ್ನು ಎರಡಾವೃತ್ತಿ ಪ್ರಯೋಗಿಸಿರುವುದರಿಂದ 'ಅಸಪಿಂಡಾ' 'ಅಸಗೋತ್ರಾ' ಶಬ್ದಗಳನ್ನು 'ಪಿತುಃ' 'ಮಾತುಃ' ಎಂಬ ಎರಡು ಶಬ್ದಗಳೊಡನೆಯೂ ಅನ್ವಯಿಸಿ ತಾಯಿಯ ಅಸಗೋತ್ರಳೂ, ಅಸಪಿಂಡಳೂ, ತಂದೆಯ ಅಸಗೋತ್ರಳೂ,

ಅಸಪಿಂಡಳೂ ಆದ ಕನ್ಯೆಯು ವಿವಾಹಕ್ಕೆ ಶ್ರೇಷ್ಠಳೆಂದು ಕುಲ್ಲೂಕಭಟ್ಟ, ಮೇಧಾತಿಥಿ ಮುಂತಾದ ಪ್ರಸಿದ್ಧ ವ್ಯಾಖ್ಯಾನಕಾರರು ಅಭಿಪ್ರಾಯಪಟ್ಟಿರುವರು. ಮೂಲಲೇಖಕರ ಆಶಯವೂ ಇದೇ ಎಂಬುದನ್ನು ಮನುಸ್ಮೃತಿಯು XI, ೧೭೧—೨ನೆಯ ಶ್ಲೋಕಗಳೂ ಸಮರ್ಥಿಸುವವು. ಮೇಧಾತಿಥಿ ತನ್ನ ವ್ಯಾಖಾನಕ್ಕೆ ಆಧಾರವಾಗಿ ಗೌತಮಧರ್ಮ ಸೂತ್ರದಿಂದ 'ಅಸಮಾನಪ್ರವರೈರ್ವಿವಾಹಃ' ಎಂಬುದನ್ನೂ ಯಾಜ್ಞವಲ್ಕ್ಯಸ್ಮೃತಿ ಯಿಂದ 'ಅಸಮಾನಾರ್ಷಗೋತ್ರಜಾಮ್' ಎಂಬುದನ್ನೂ ಉದಾಹರಿಸಿರುವನು.

ಇದರಂತೆ ಯಾಜ್ಞವಲ್ಕ್ಯಸ್ಮೃತಿಯು 'ಅಸಮಾನಾರ್ಷಗೋತ್ರಜಾಮ್,' ಎಂಬುದನ್ನು ವ್ಯಾಖ್ಯಾನಮಾಡುವಲ್ಲಿ ವಿಜ್ಞಾನೇಶ್ವರರು ಮನುಸ್ಮೃತಿಯ ಮೇಲ್ಕಂಡ ಶ್ಲೋಕವನ್ನು ಆಧಾರವಾಗಿ ಕೊಟ್ಟಿರುವರು. ಈಗ ಪ್ರಚಾರದಲ್ಲಿರುವ ಮಿತಾಕ್ಷರದ (ವಿಜ್ಞಾನೇಶ್ವರರ ವ್ಯಾಖ್ಯಾನದ ಹೆಸರು) ಅಚ್ಚುಹಾಕಿದ ಪ್ರತಿಗಳಲ್ಲಿ ಮನುಸ್ಮೃತಿಯ ಶ್ಲೋಕದ ಎರಡನೆಯ ಪಾದದಲ್ಲೂ 'ಅಸಗೋತ್ರಾ' ಶಬ್ದಕ್ಕೆ ಬದಲಾಗಿ 'ಅಸ ಪಿಂಡಾ' ಶಬ್ದವನ್ನೆ ಆವೃತ್ತಿಮಾಡಿರುವರು. ಇದನ್ನು ನೋಡಿ ತಮ್ಮ ಅಭಿಸಂಧಿಗೆ ಅನುಕೂಲವಾಗುವುದೆಂದು ಭಾವಿಸಿದ ಶ್ರೀ ಕೆ. ಬಿ. ಗಜೇಂದ್ರಗಡ್ಕರವರು, ವಿಜ್ಞಾ ನೇಶ್ವರರಿಗೆ ಗ್ರಾಹ್ಯವಾಗಿದ್ದುದರಿಂದ ಮನುಸ್ಮೃತಿಯ ಶ್ಲೋಕದ ಈ ಪಾಠವೇ ಪ್ರಾಮಾಣಿಕವೆಂದು ವಾದಿಸಿರುವರು.[1] ಇದು ತಪ್ಪು.

ಮೊದಲನೆಯದಾಗಿ ಪಾಠವನ್ನು ನಿರ್ಣಯಿಸಲು ಪ್ರಾಚೀನ ತಾಳಪ್ರತಿಗಳಲ್ಲಿ ಲೇಖಕಪ್ರಮಾದಕ್ಕೆಡೆಗುಡದವು ಮಾತ್ರ ಸಹಾಯಕವಾಗುವವು. ಮನುಸ್ಮೃತಿ ಯನ್ನು ವ್ಯಾಖ್ಯಾನಸಹಿತವಾಗಿ ಪರಿಷ್ಕರಿಸಿ ಪರಿವರ್ತಿಸಲು ಅನೇಕ ವರ್ಷ ಶ್ರಮಿಸಿದ ಶ್ರೀ ಮ. ಮ. ಗಂಗಾನಾಥ ಝಾ ರವರು ಇತರ ಶ್ಲೋಕಗಳ ಪಾಠಭೇದವನ್ನು ಕುರಿತು ಟೀಕಿಸಿದ್ದರೂ ಈ ಶ್ಲೋಕದ ವಿಷಯದಲ್ಲಿ ಯಾವ ಪಾಠಾನ್ತರವನ್ನೂ ಗಮನಿಸಿಲ್ಲ.[2] ಮತ್ತು ವಿಜ್ಞಾನೇಶ್ವರರು ಈ ಶ್ಲೋಕವನ್ನು ಸಗೋತ್ರಕನ್ಯೆಯನ್ನು ಬಿಡುವುದು ಯುಕ್ತವೆಂದು ಸಮರ್ಥಿಸಲು ಆಧಾರವಾಗಿ ಉದಾಹರಿಸಿರುವರೆಂದು ಬರೆದಿರುವರು.[3] ಈ ವಚನವನ್ನು ಉದಾಹರಿಸಿರುವ ಪರಾಶರಮಾಧವೀಯ,[4] ನಿರ್ಣಯಸಿಂಧು[5] ಮುಂತಾದ ಗ್ರಂಥಗಳಲ್ಲೂ ಎರಡನೆಯ ಪಾದದಲ್ಲಿ 'ಅಸಗೋತ್ರಾ' ಎಂಬ ಪಾಠ ವನ್ನೆ ಅನುಸರಿಸಿರುವರು. ಧರ್ಮಶಾಸ್ತ್ರವನ್ನು ಕುರಿತು ಆಂಗ್ಲಭಾಷೆಯಲ್ಲಿ ಗ್ರಂಥ

[1] *Annals of the Bhandarkar* Oriental Research Institute—Silver Jubilee Number, pp. 143-5 ನೋಡಿ.

[2] *Manu Smṛti Notes*—Vol. I, pp. 93-4.

[3] ,, ,, —Vol. II, p. 162.

[4] *Islampurkar's Edition*—Vol. II, p. 62.

[5] *Nirnaya Sagar Edition*—p. 202.

ಗಳನ್ನು ರಚಿಸಿ ಅಥವಾ ಪರಿವರ್ತಿಸಿರುವ ಶ್ರೀಗಳಾದ ಮ. ಮ. ಕಾಣೆ,[1] ಮಂಡಲಿಕ್,[2] ಘೋಸ್,[3] ವೆಸ್ಟರ್‌ಮಾರ್ಕ್[4], ಬ್ಯೂಲರ್[5] ಮುಂತಾದ ಲೇಖಕರೆಲ್ಲರೂ 'ಅಸಗೋತ್ರಾ' ಎಂಬ ಪಾಠವನ್ನೆ ಅಂಗೀಕರಿಸಿರುವರು.

ಎರಡನೆಯದಾಗಿ ವಿಜ್ಞಾನೇಶ್ವರರಿಗೂ ಈ ಪಾಠವು ಗ್ರಾಹ್ಯವಾಗಿದ್ದಿರಲಾರದು. ಅವರು ಈ ಶ್ಲೋಕವನ್ನು ಯಾಜ್ಞವಲ್ಕ್ಯಸ್ಮೃತಿಯ I. ೫೩ರಲ್ಲಿರುವ 'ಅಸಮಾನಾರ್ಷಗೋತ್ರಜಾಮ್' ಶಬ್ದದ ವ್ಯಾಖ್ಯಾನದಲ್ಲಿ ಉದಾಹರಿಸಿರುವರು. ಯಾಜ್ಞವಲ್ಕ್ಯಸ್ಮೃತಿಯ I. ೫೨ರಲ್ಲಿ 'ಅಸಪಿಂಡಾಮ್' ಎಂಬ ಶಬ್ದವೇ ಇರುವುದು. ಮನುಸ್ಮೃತಿಯ ಶ್ಲೋಕದ ಎರಡು ಪಾದಗಳಲ್ಲೂ 'ಅಸಪಿಂಡಾ' ಎಂಬ ಪಾಠವೇ ಗ್ರಾಹ್ಯವಾಗಿದ್ದರೆ ಅವರು ಆ ಶ್ಲೋಕವನ್ನು ಯಾಜ್ಞವಲ್ಕ್ಯಸ್ಮೃತಿಯ I. ೫೨ರಲ್ಲೆ ಉದಾಹರಿಸಬೇಕಾಗಿತ್ತು. ಯಾ. ಸ್ಮೃತಿಯ I. ೫೩ರಲ್ಲೂ 'ಆರ್ಷ' ಶಬ್ದಕ್ಕೆ ಪ್ರವರವೆಂದು ವ್ಯಾಖ್ಯಾಸಮಾಡಿ ಅದಕ್ಕೆ ಗೌತಮರ 'ಅಸಮಾನ ಪ್ರವರೈರ್ವಿವಾಹಃ' ಎಂಬ ಆಧಾರವನ್ನು ಕೊಟ್ಟು ಮುಂದಿನ 'ಅಸಮಾನ—ಗೋತ್ರಜಾಮ್' ಎಂಬುದರ ವ್ಯಾಖ್ಯಾನದಲ್ಲಿ ಮನುಸ್ಮೃತಿಯ ಪ್ರಸಕ್ತಶ್ಲೋಕವನ್ನು ಕೊಟ್ಟಿರುವರು. ಆದುದರಿಂದ ಆ ಶ್ಲೋಕದ ಎರಡನೆಯ ಪಾದದಲ್ಲಿರುವ 'ಅಸಗೋತ್ರಾ' ಶಬ್ದವೇ ಅವರ ಮುಖ್ಯ ಉದ್ದೇಶ. ಮುಂದೆ ಅವರು ಬರೆದಿರುವ ತಾಯಿಯ ಸಗೋತ್ರಳನ್ನೂ ಮದುವೆಯಾಗಕೂಡದೆಂದು ಕೆಲವರು ಅಭಿಪ್ರಾಯಪಡುವರೆಂಬ ವಾಕ್ಯವೂ ಇದನ್ನು ದೃಢಪಡಿಸುವುದು.[6]

ಜನಸಾಮಾನ್ಯದಲ್ಲೂ ಅತ್ಯಂತ ಪ್ರಸಿದ್ಧವಾದ ಮನುಸ್ಮೃತಿಯೇ ಸಗೋತ್ರ ವಿವಾಹವನ್ನು ನಿಷೇಧಿಸುವುದಿಲ್ಲವೆಂದು ಸಾಧಿಸಲು ಶ್ರೀ ಗಜೇಂದ್ರಗಡ್ಕರವರು ನಡೆಸಿದ ಪ್ರಯತ್ನವು ಸರ್ವಥಾ ಭ್ರಾಂತಿಯೆಂದು ಇದರಿಂದ ಸಿದ್ಧವಾಯಿತು. ಇನ್ನು ತಮ್ಮ ಲೇಖನದಲ್ಲಿ ಪ್ರಾಚೀನ ವ್ಯಾಖ್ಯಾನಕಾರರಾದ ಕುಲ್ಲೂಕಭಟ್ಟರ ಮೇಲೆ ಇವರೆತ್ತಿರುವ ಉದ್ಗಾರವೂ ಭ್ರಾಂತಿವಿಲಸಿತವೇ ಎಂಬುದನ್ನು ನನ್ನ ಆಂಗ್ಲ ಲೇಖನದಲ್ಲಿ ವಿವರಿಸಿದ್ದೇನೆ.

ಧರ್ಮಶಾಸ್ತ್ರಗಳನ್ನು ಕೂಲಂಕಷವಾಗಿ ಪರಿಶೀಲಿಸಿರುವ ಉದ್ದಾಮಪಂಡಿತರಾದ ಶ್ರೀ ಮ.ಮ. ಪಿ. ವಿ. ಕಾಣೆಯವರು ಮೇಲ್ಕಂಡ ಶಾಸ್ತ್ರೀಯ ತತ್ತ್ವವನ್ನು

---

[1] *History of Dharma Sastra*—Vol. II, Part I, p. 499.

[2] *Vyavaharamayukha*—p. 439, Footnote 1.

[3] *Hindu Law*—p. 708.

[4] *The History of Human Marriage*—p. 119.

[5] *Sacred Books of the East*—Vol. 25, p. 75.

[6] ಪಾಠ ವಿಷಯದಲ್ಲಿ ನನ್ನ ಲೇಖನವನ್ನು ಶ್ರೀ ಮ. ಮ. ಕಾಣೆಯವರೂ, ಶ್ರೀ ಜಸ್ಟಿಸ್ ಎಸ್. ವರದಾಚಾರಿಯವರೂ ಅನುಮೋದಿಸಿರುವರು.

ಮಸಗಂಡಿರುವರು. ಸಾಮಾಜಿಕ ಸುಧಾರಣೆಗೆ ಯಾವಾಗಲೂ ಶಾಸ್ತ್ರಾಧಾರವಿದ್ದೇ ಇರಬೇಕೆಂದು ಹಟಮಾರಿತನ ಮಾಡುವುದು ಸರಿಯಲ್ಲವೆಂದು ಇವರ ಮತ. ಆದುದರಿಂದ ಸಗೋತ್ರ ಸಪ್ರವರ ವಿವಾಹಗಳು ನ್ಯಾಯಬದ್ಧವೆಂದು ಕಾನೂನು ಮಾಡಲು ಸೂಚನೆಯನ್ನು ಕೊಟ್ಟು ಅವನ್ನು ಸ್ವತಂತ್ರಯುಕ್ತಿಗಳಿಂದ ಸಾಧಿಸಲು ಯತ್ನಿಸಿರುವರು.[1] ಕೆಲವು ತಿಂಗಳ ಹಿಂದೆ ಕೇಂದ್ರ ಸಭೆಯಲ್ಲಿ ಡಾ|| ದೇಶಮುಖರವರು ಮಂಡಿಸಿದ್ದ ಇದನ್ನು ಕುರಿತ ಮಸೂದೆಗೂ ಇದೇ ಕಾರಣವಾಗಿರಬಹುದು. ಬಹಳ ಹಿಂದಿನ ತಲೆಮಾರಿಗೆ ಸೇರಿದ ಪೂರ್ವಜರಾದ ಗೋತ್ರ ಋಷಿಗಳ ಶರೀರದ ಕಣಗಳು ಈಚಿನವರ ದೇಹವನ್ನು ವ್ಯಾಪಿಸಲಾರವೆಂದು ಇವರ ಭಾವನೆ. ಇದಕ್ಕೆ ಪ್ರಾಣಶಾಸ್ತ್ರದ ಬೆಂಬಲ ಸಾಲದು. ಈಚೆಗೆ ಆ ಶಾಸ್ತ್ರದಲ್ಲಿ ಶೋಧನೆಗಳನ್ನು ನಡೆಸಿರತಕ್ಕವರು ಸನ್ನಿವೇಶಮಹಿಮೆಯಿಂದ ವಂಶಾನುಕ್ರಮವಾಗಿ ಬಂದ ಕೆಲವು ಚಿಹ್ನೆಗಳು ಸ್ವಲ್ಪ ವ್ಯತ್ಯಸ್ತವಾಗಬಹುದೆಂದು[1] ಒಪ್ಪಿದರೂ ಅಂತಹ ಚಿಹ್ನೆಗಳು ಪೂರ್ತಿ ಅಳಿಸಿಹೋಗುವುವೆಂದು ಒಪ್ಪುವುದಿಲ್ಲ. ಇಂತಹ ಊಹೆಗಳನ್ನು ಮುಂದಿಟ್ಟುಕೊಂಡು ಸಮಾಜದಲ್ಲಿ ಅನಾದಿಸಿದ್ಧವೆಂದು ಆಚರಣೆಯಲ್ಲಿರುವ ಕಟ್ಟಳೆಗಳನ್ನು ಮಾರ್ಪಡಿಸುವುದು ಸೂಕ್ತವಾಗದು.

ಅನೇಕ ಪ್ರಾಚೀನ ಸಂಪ್ರದಾಯಗಳು ತಲೆಕೆಳಗಾಗಿರುವುದಕ್ಕೆ ಸಮ್ಮತಿಸಿರುವವರು ಇದೊಂದು ಶೇಷವನ್ನೇಕೆ ಕಟ್ಟಿಕೊಳ್ಳಬೇಕೆಂದು ಇವರ ಆಕ್ಷೇಪ. ಈ ದೃಷ್ಟಿಯೂ ಸರಿಯಲ್ಲ. ಯಾವುದನ್ನು ಆಚರಣೆಯಲ್ಲಿಟ್ಟುಕೊಳ್ಳುವುದು ಸೂಕ್ತವೆಂಬುದನ್ನು ಆಯಾ ಕೋಮುಗಳಲ್ಲಿ ಅನುಭವ ಪಾಂಡಿತ್ಯಗಳುಳ್ಳ ಹಿರಿಯರು ಕಲೆತು ನಿರ್ಧರಿಸಬೇಕು. ಕಾಲನಿಮಿತ್ತವಾಗಿಯೊ, ರಾಜಕೀಯ ವಾತಾವರಣದಿಂದಲೊ ಸಂಭವಿಸಿರುವ ಕೆಲವು ಮಾರ್ಪಾಡುಗಳು ನಿರ್ವಾಹವಿಲ್ಲದೆ ತಲೆದೋರಿದ್ದರೂ ಇವೆಲ್ಲವನ್ನೂ ಸಮಾಜವು ಯಾವ ಆಕ್ಷೇಪಣೆಯೂ ಇಲ್ಲದೆ ಒಳಗೊಂಡಿಲ್ಲ.

ಧರ್ಮಶಾಸ್ತ್ರಗಳೂ ಕೆಲವುವೇಳೆ ಸಂಭವಿಸಬಹುದಾದ ಅನನುಕೂಲಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಿಯಮಗಳನ್ನು ಎಲ್ಲಿನವರೆಗೆ ಸಡಿಲಿಸಬಹುದೆಂಬುದನ್ನು ಗಮನಿಸಿವೆ. ಸಪಿಂಡ, ಸಗೋತ್ರ, ಸಪ್ರವರರ ವಿವಾಹವನ್ನು ನಿಷೇಧಿಸಿದ್ದರೂ ಅಶಕ್ತರು ಸಂಕಟಬಂದಲ್ಲಿ ಮಾತ್ರ ಸಪಿಂಡರಲ್ಲೂ ಅತಿ ಸನ್ನಿಹಿತರಲ್ಲದ ಕೆಲವರನ್ನು ಮದುವೆಮಾಡಿಕೊಳ್ಳಲು ಅವಕಾಶಕೊಟ್ಟಿರುವವು.[2] ವಿವರಗಳನ್ನು ಲಂಬಿಸದೆ ಒಟ್ಟಿನಲ್ಲಿ ಈ ಸಾಪಿಂಡ್ಯಸಂಕೋಚವು ಒಂದೇ ಸಂತತಿಗೆ ಸೇರಿದವರನ್ನು ಮದುವೆಯಾಗ

[1] *History of Dharma Sastra*—Vol II, Part I, p. 498.

[2] ಧರ್ಮಸಿಂಧು. I ಭಾಗ. ಮೂರನೆಯ ಪರಿಚ್ಛೇದ 50—51.

ಕೂಡದೆಂದು ತಿಳಿಸುವುದು. ಸೋದರಮಾವನ ಮಗಳ ಪಾವೆಯಿರುವವರನ್ನೂ ಮದುವೆಯಾಗಲು ಇದು ಅವಕಾಶಕೊಡುವುದು. ಇದು ಸಾಕ್ಷಾತ್ ಸೋದರ ಮಾವನ ಮಗಳಿಗೆ ಅನ್ವಯಿಸುವುದೆಂದು ಭ್ರಾನ್ತಿಗೊಳ್ಳಕೂಡದು. ಈ ಸಂದರ್ಭದಲ್ಲಿ ಬರುವ ಒಂದು ವಾಕ್ಯವು ಬಹಳ ಗಮನಾರ್ಹ. "ತಂದೆಯ ಅಣ್ಣತಮ್ಮಂದಿರ ಪಾವೆಯುಳ್ಳವರ ಮಗಳನ್ನು ಮದುವೆಯಾಗಕೂಡದೆಂ"ದು ಸ್ಪಷ್ಟವಾಗಿ ನಿಷೇಧಿಸಿ ಇದಕ್ಕೆ 'ಸಗೋತ್ರತ್ವಾತ್' ಎಂಬ ಕಾರಣವನ್ನು ಕೊಟ್ಟಿರುವರು. ಆದುದರಿಂದ ಅಶಕ್ತರು ಸಂಕಟಗಳಲ್ಲೂ ಸಗೋತ್ರ ವಿವಾಹವನ್ನು ನಡೆಸಕೂಡದೆಂಬುದೇ ಶಾಸ್ತ್ರಕ್ಕೆ ಅಭಿಮತ.

ಮನುವು ಹತ್ತು ಕುಲಗಳಿಗೆ ಸೇರಿದ ಕನ್ಯೆಯರನ್ನು ಬಿಡಬೇಕೆಂದು ಕೆಲವು ಕುಲ ದೋಷಗಳನ್ನು ಪರಿಗಣಿಸಿದ್ದರೂ[1] 'ಸ್ತ್ರೀರತ್ನಂ ದುಷ್ಕುಲಾದಪಿ' (II. 238.) ಎಂದು ದುಷ್ಕುಲಕ್ಕೆ ಅವಕಾಶಕೊಟ್ಟಿದ್ದರೂ 'ಸ್ವಕುಲಕ್ಕೆ' ಅಂತಹ ಅವಕಾಶವನ್ನು ಕೊಟ್ಟಿಲ್ಲ. ಮೇಧಾತಿಥಿಯೂ[2] ವಿಜ್ಞಾನೇಶ್ವರರೂ[3] ಸ್ಪಷ್ಟವಾಗಿ ಸಗೋತ್ರವಿವಾಹಗಳು ಅಸಿದ್ಧ ವೆಂದಿರುವರು. ಬೋಧಾಯನರ ಕಾಲದಿಂದಲೂ ಇವು ನಿಷಿದ್ಧವಾಗಿ ಅತಿಕ್ರಮಿಸಿ ದವರಿಗೆ ಕೆಲವು ಶಿಕ್ಷೆಗಳನ್ನೂ ವಿಧಿಸಿರುವರು.[4]

ಸಂಪ್ರದಾಯವೂ ಇದಕ್ಕೆ ಅನುಗುಣವಾಗಿಯೇ ಇರುವುದು. ಕನ್ಯಾದಾನ ವನ್ನು ಸ್ವಜನರಿಗೇ ಮಾಡಬೇಕು. ಇಲ್ಲದಿದ್ದರೆ ಪತಿತರಾಗುವರೆಂಬ ನಿಯಮವಿದ್ದರೂ ನಿರ್ವಾಹವಿಲ್ಲದ ಕೆಲವು ಸಮಯಗಳಲ್ಲಿ ಜನರು ಇತರ ಒಳಪಂಗಡಗಳಲ್ಲೂ ಹೆಣ್ಣು ಕೊಟ್ಟು ತರುತ್ತಿರುವರು. ತಮ್ಮ ಜನರಲ್ಲೇ ಸಗೋತ್ರದವರಿಗೆ ಕೊಡುವುದಿಲ್ಲ. ದಕ್ಷಿಣ ದೇಶದ ತಮಿಳರಲ್ಲಿ ಅನೇಕ 'ಬೃಹಚ್ಚರಣ'ಗಳೆಂಬ ಒಳಪಂಗಡಗಳು ಹಿಂದೆ ತಮ್ಮ ತಮ್ಮ ಪಂಗಡಗಳಲ್ಲದೆ ಹೊರಗೆ ಸಂಬಂಧ ಬೆಳಸುತ್ತಿರಲಿಲ್ಲ. ಈಚೆಗೆ ಈ ನಿಯಮ ಸಡಿಲಿರುವುದು ಮಾತ್ರವಲ್ಲದೆ ಇವರು 'ವಡಮ' 'ಸಂಕೇತಿ'ಗಳೆಂಬ ಇತರ ಒಳಪಂಗಡಗಳೊಡನೆಯೂ ವಿವಾಹಸಂಬಂಧವನ್ನು ನಡೆಸುತ್ತಿರುವರು. ವರದಕ್ಷಿಣೆ ಮುಂತಾದ ದುಸ್ಸಂಪ್ರದಾಯಗಳು ಪ್ರಬಲವಾಗಿರುವ ಇತರ ಪಂಗಡಗಳಲ್ಲೂ ಹೀಗೆಯೇ ಇರಬಹುದು. ಸಿದ್ಧಾನ್ತದೃಷ್ಟಿಯಿಂದ ಸ್ಮಾರ್ತರನ್ನು "ನಿತ್ಯಬದ್ಧ"ರೆಂದು ದೂಷಿಸಿದರೂ ಮಾಧ್ವರು ಸ್ಮಾರ್ತಕನ್ಯೆಯರನ್ನು ತಂದುಕೊಳ್ಳುವರು. ಈ ಮಾರ್ಪಾಡು

---

[1] ಮನುಸ್ಮೃತಿ, III, 6—7.

[2] ,, III, 11.

[3] ಯಾಜ್ಞವಲ್ಕ್ಯಸ್ಮೃತಿ, II, 53.

[4] ಮ. ಮ. ಕಾಣೆ—*History of Dharma Sastra*, II, i. p. 487.

ಗಳೆಲ್ಲವೂ ದೂರಸಂಬಂಧವನ್ನೇ ಅನುಮೋದಿಸುತ್ತವಲ್ಲದೆ ಸಗೋತ್ರ ಸಪ್ರವರವೆಂಬ ಸಮೀಪ ಸಂಬಂಧಕ್ಕೆಡೆಗೊಡುವುದಿಲ್ಲ.

ಮೇಲೆ ಸೂಚಿಸಿದ ಮಸೂದೆಯ ಆವಶ್ಯಕತೆಯನ್ನು ಸಾಧಿಸಲು ಶ್ರೀ. ಮ. ಮ. ಕಾಣೆಯವರು ಕೊಟ್ಟಿರುವ ಒಂದು ಯುಕ್ತಿಯು ಸರಿಯಾಗಿಲ್ಲ. ಪೂನಾ, ಬೊಂಬಾಯಿ ಪಟ್ಟಣಗಳ ನೆರೆಹೊರೆಯಲ್ಲಿ ವಿದ್ಯಾಭ್ಯಾಸದಲ್ಲಿ ಮುಂದುವರಿದಿರುವ ಕೆಲವು ಮಹಾರಾಷ್ಟ್ರ ಬ್ರಾಹ್ಮಣ ಪಂಗಡಗಳಿರುವವು. ಪ್ರೌಢಕಲಾಶಾಲೆಗಳಲ್ಲಿ ವ್ಯಾಸಂಗಮಾಡುತ್ತಿರುವ ಈ ಪಂಗಡಗಳಿಗೆ ಸೇರಿದ ಕೆಲವು ಯುವಕ ಯುವತಿಯರು ಅನ್ಯೋನ್ಯಾನುರಾಗದಿಂದ ದಂಪತಿಗಳಾಗಲು ಒಪ್ಪಿಕೊಳ್ಳುವರು. ಕೆಲವು ವೇಳೆ ಬಂಧುಮಿತ್ರರಿಗೆ ಲಗ್ನಪತ್ರಿಕೆಗಳನ್ನು ಕಳುಹಿಸುವ ಸಮಯದಲ್ಲಿ ಪುರೋಹಿತರ ಮೂಲಕ ಇವರು ಸಗೋತ್ರರೆಂದೊ ಸಪ್ರವರರೆಂದೊ ಹೊರಬೀಳುವುದು. ಇಂತಹ 'ದಯಾಪಾತ್ರ'ರಾದ ಯುವಕರ ಉದ್ಧಾರಕ್ಕಾಗಿ ಶಾಸನವನ್ನು ಕೋರಿರುವರಂತೆ.

ಇವರು ದಂಪತಿಗಳಾಗಲು ಈಗಾಗಲೆ ಸಿದ್ಧವಾಗಿರುವ Special Marriage Act ಸಾಕಾದಷ್ಟು ಸೌಕರ್ಯವನ್ನು ಕಲ್ಪಿಸಿರುವುದು. ಆದುದರಿಂದ ಮತ್ತೊಂದು ಕಾನೂನಿನ ಆವಶ್ಯಕತೆಯಿಲ್ಲ. ಕಾನೂನನ್ನು ಅಪೇಕ್ಷಿಸುವವರು ಇಂತಹ ಸಂಬಂಧಗಳಿಗೆ 'ಹಿಂದೂ ವಿವಾಹ'ವೆಂಬ ಮುದ್ರೆಯನ್ನೊತ್ತುವುದಕ್ಕಾಗಿ ಮಾತ್ರ ಆಶಿಸುವರೆನ್ನಬೇಕಾಗುವುದು. ಆ ಮುದ್ರೆಯಿಲ್ಲದಿದ್ದರೆ ದಾಯಭಾಗ ಮುಂತಾದ ಸಂಗತಿಗಳಲ್ಲೇನಾದರೂ ಕೊರತೆಯಿರಬಹುದೆ? ನ್ಯಾಯನಿಪುಣರು ಈ ಸಂಗತಿಗಳನ್ನು ಕಾನೂನು ಮಾಡುವ ಸಮಯದಲ್ಲಿ ಗೋಪ್ಯವಾಗಿಟ್ಟು ಇಂತಹ ಯುವಕಯುವತಿಯರನ್ನು ಹಿಂದೂ ಸಮಾಜದಿಂದ ಹೊರಕ್ಕೆ ತಳ್ಳಕೂಡದೆಂಬುದು ಉದ್ದೇಶವೆ? ಸಮಾಜದಲ್ಲಿ ಅತಿದೀರ್ಘಕಾಲದಿಂದಲೂ ಆಚರಣೆಯಲ್ಲಿರುವ ಮೂಲನಿಯಮಗಳನ್ನು ಒತ್ತಟ್ಟಿಗಿಟ್ಟು ವೇದಮಂತ್ರಗಳನ್ನು ಉಚ್ಚರಿಸಿದರೆ ಹಿಂದೂ ವಿವಾಹವಾದೀತೆ?

ಧರ್ಮಶಾಸ್ತ್ರ ದೃಷ್ಟಿಯಿಂದಲೂ ಸಂತಾನಶಾಸ್ತ್ರದ ದೃಷ್ಟಿಯಿಂದಲೂ ಅಕ್ಕತಂಗಿಯರ ಮಕ್ಕಳನ್ನು ಸೋದರಮಾವಂದಿರು ಮದುವೆಯಾಗುವುದು, ಸೋದರಮಾವ ಅಥವಾ ಸೋದರತ್ತೆಯ ಮಗಳನ್ನು ಮದುವೆಯಾಗುವುದು ಮುಂತಾದ ಕೆಲವು ದುಸ್ಸಂಪ್ರದಾಯಗಳು ಹಿಂದೂ ಸಮಾಜದಲ್ಲಿ ಈಗಾಗಲೇ ಬೇರೂರಿವೆ. ಇಂತಹ ಸಪಿಂಡವಿವಾಹವನ್ನು ಇತರರೂ ಯುಕ್ತವೆಂದೊಪ್ಪುವುದಿಲ್ಲ. ಸುಧಾರಕರು ಕೆಟ್ಟಿರುವುದನ್ನು ಸರಿಪಡಿಸುವ ಕೆಲಸಕ್ಕೆ ತೊಡಗುವುದು ಲೇಸು.

ಎಮ್. ಲಕ್ಷ್ಮೀನರಸಿಂಹಯ್ಯ.

# ಅಂತರರಾಷ್ಟ್ರೀಯ ಶಾಂತಿಯ ಇತಿಹಾಸ

## ಪ್ರಾಚೀನ ಗ್ರೀಕರು

ಪ್ರಾಚೀನ ಗ್ರೀಸ್ ದೇಶವು ಹಲವಾರು "ನಗರ ರಾಜ್ಯ"ಗಳನ್ನು (City States) ಒಳಗೊಂಡಿತ್ತು. ಇವುಗಳಲ್ಲಿ ಅಂತಃಕಲಹಗಳು ಹುಟ್ಟಿ ದಿನ ಬೆಳಗಾದರೆ ಯುದ್ಧ ನಡೆಯುತ್ತಲೇ ಇತ್ತು. ಜನರನ್ನು ಇದರ ಕಷ್ಟಗಳಿಂದ ಪಾರುಮಾಡಲು ಅನೇಕ ಯತ್ನಗಳು ನಡೆದವು. ಈ ಕಾರ್ಯದಲ್ಲಿ ಆಂಫಿಕ್ಟಿಯಾನ್ಸ್ (Amphyctions) ಎಂಬ ಗ್ರೀಕರ ಧರ್ಮಕ್ಷೇತ್ರಗಳಲ್ಲಿದ್ದ ಮತಸಂಘಗಳ ಪಾತ್ರ ಮುಖ್ಯವಾದುದು. ಈ ಸಂಘಗಳಲ್ಲಿ ಅತ್ಯಂತ ಪ್ರಸಿದ್ಧವಾದ ಡೆಲ್ಫಿ ಕ್ಷೇತ್ರದ ಮತಸಂಘದಲ್ಲಿ ಗ್ರೀಸಿನ ಎಲ್ಲ ಪಟ್ಟಣಗಳ ಪ್ರತಿನಿಧಿಗಳು ಇದ್ದರು. ಈ ಸಂಘದ ಒಂದು ಮುಖ್ಯ ಧ್ಯೇಯವೆಂದರೆ ತನ್ನ ಸದಸ್ಯರಲ್ಲಿ ಹುಟ್ಟಿದ ಅಂತಃಕಲಹಗಳನ್ನು ಪಂಚಾಯಿತಿಯ ಮೂಲಕ ಹೋಗಲಾಡಿಸಿ ಯುದ್ಧವಾಗದ ಹಾಗೆ ನೋಡಿಕೊಳ್ಳುವುದು. ಇದಲ್ಲದೆ ಯುದ್ಧದಲ್ಲಿ ಕ್ರೌರ್ಯವನ್ನು ತಪ್ಪಿಸಲು ಯತ್ನಿಸುವುದು. ಸಂಘದ ಪ್ರತಿಯೊಬ್ಬ ಪ್ರತಿನಿಧಿಯೂ ತನ್ನ ಪಟ್ಟಣದ ಪರವಾಗಿ ಈ ರೀತಿ ಪ್ರಮಾಣಮಾಡಬೇಕಾಗಿತ್ತು: "ನಾವು ಈ ಸಂಘಕ್ಕೆ ಸೇರಿದ ಯಾವ ಪಟ್ಟಣವನ್ನೂ ನಾಶಮಾಡುವುದಿಲ್ಲ; ಯುದ್ಧದಲ್ಲಾಗಲಿ ಶಾಂತಿಯಲ್ಲಾಗಲಿ ಅವರಿಗೆ ನೀರು ಸಿಕ್ಕದ ಹಾಗೆ ನದಿಯನೀರನ್ನು ಬೇರೆ ಕಡೆಗೆ ತಿರುಗಿಸುವುದಿಲ್ಲ. ಹಾಗೆ ಯಾರಾದರೂ ಅಕ್ರಮರೀತಿಯಲ್ಲಿ ನಡೆದುಕೊಂಡರೆ ನಾವು ಅವರೊಡನೆ ಯುದ್ಧಮಾಡಿ ಅವರ ನಗರವನ್ನು ನಾಶಮಾಡುತ್ತೇವೆ. ಅಲ್ಲದೆ ಯಾರಾದರೂ ಡೆಲ್ಫಿ ಕ್ಷೇತ್ರದ ಅಪಾಲೋ ದೇವರ ಗುಡಿಯ ಖಜಾನೆಯನ್ನಾಗಲಿ ಅದಕ್ಕೆ ಸೇರಿದ ಮತ್ತೆ ಯಾವ ವಸ್ತುವನ್ನಾಗಲಿ ಕೊಳ್ಳೆಹೊಡೆದರೆ ಅಥವಾ ಇಂತಹ ಹೇಯ ಕಾರ್ಯಕ್ಕೆ ಯಾವ ವಿಧದಲ್ಲಾದರೂ ಸಹಾಯಮಾಡಿದರೆ ಅಂತಹವರ ಮೇಲೆ ತ್ರಿಕರಣಗಳಿಂದಲೂ ಸೇಡು ತೀರಿಸಿಕೊಳ್ಳುತ್ತೇವೆ." ಈ ಮತಸಂಘಗಳ ಧ್ಯೇಯವೇನೊ ಉದಾತ್ತವಾದ್ದೇ; ಆದರೆ ಇದನ್ನು ಸಾಧಿಸುವುದು ಅಸಾಧ್ಯವಾಗಿತ್ತು. ರಾಜಕೀಯ ಜೀವನದಲ್ಲಿ ಈ ಸಂಘಗಳಿಗೆ ಹೆಚ್ಚಿನ ಸ್ಥಾನವಿರಲಿಲ್ಲ. ಪ್ರಬಲ ರಾಷ್ಟ್ರಗಳು ಇವುಗಳ ಮಾತಿಗೆ ಸ್ವಲ್ಪವೂ ಲಕ್ಷ್ಯಕೊಡುತ್ತಿರಲಿಲ್ಲ. ಇಂದಿನಂತೆಯೇ ಎಂದೂ.

ಗ್ರೀಕರಲ್ಲಿ ಅಂತಃಕಲಹಗಳನ್ನು ಹೋಗಲಾಡಿಸಿ ಶಾಂತಿನೆಲಸಲು ಸಹಾಯ ಮಾಡಿದ ಸಂಸ್ಥೆಗಳಲ್ಲಿ ಮತ್ತೊಂದು ಮುಖ್ಯವಾದ ಸಂಸ್ಥೆ ಕಾನ್ಫೆಡೆರಸಿ ಆಫ್

ಡೀಲಾಸ್ (Confederacy of Delos) ಎಂಬ ಹಲವಾರು ಗ್ರೀಕ್ ಪಟ್ಟಣಗಳ ನ್ನೊಳಗೊಂಡ ಸಂಘ. ಇದನ್ನು ಸ್ಥಾಪಿಸಿದುದು ಪರ್ಶಿಯನರ ಆಕ್ರಮಣವನ್ನು ಎದುರಿಸುವುದಕ್ಕಾಗಿ. ಪ್ರಾರಂಭದಲ್ಲಿ ಇದಕ್ಕೆ ಸೇರಿದ ಪ್ರತಿಯೊಂದು ಪಟ್ಟಣಕ್ಕೂ ಸಮಾನ ಹಕ್ಕು ಬಾಧ್ಯತೆಗಳಿದ್ದವು. ಸಂಘದ ಸದಸ್ಯರು ತಮ್ಮತಮ್ಮಲ್ಲಿ ಯುದ್ಧ ಮಾಡುವ ಹಾಗಿರಲಿಲ್ಲ. ಏನು ವ್ಯಾಜ್ಯವಿದ್ದರೂ ಪಂಚಾಯಿತಿಯ ಮೂಲಕ ಒಪ್ಪಂದಕ್ಕೆ ಬರಬೇಕಾಗಿತ್ತು. ಹಾಗೆ ಯಾರಾದರೂ ಸಂಘದ ಒಳಶಾಂತಿಗೆ ಭಂಗ ತಂದರೆ ಸಂಘದ ಸೈನ್ಯವು ಅವರನ್ನು ಶಿಕ್ಷಿಸುತ್ತಿತ್ತು. ಪ್ರಾರಂಭದಲ್ಲಿ ಈ ಸಂಘವು ಗ್ರೀಕರ ಸ್ವಾತಂತ್ರ್ಯವನ್ನೂ ಒಳನಾಡಿನ ಶಾಂತಿಯನ್ನೂ ಕಾಯುವುದಕ್ಕೆ ಬಹಳ ಸಹಾಯಮಾಡಿತು. ಆದರೆ ಈ ಸಂಘದ ಸದಸ್ಯರಾಷ್ಟ್ರಗಳಲ್ಲಿ ಅತ್ಯಂತ ಪ್ರಬಲವಾದ ಆಥೆನ್ಸ್‌ಪಟ್ಟಣವು ತನ್ನ ಹಿರಿಮೆಯನ್ನು ಸ್ಥಾಪಿಸಿ ಈ ಪ್ರಜಾಸತ್ತಾತ್ಮಕ ಸಂಘ ವನ್ನು ಆಥೆನ್ಸ್ ಚಕ್ರಾಧಿಪತ್ಯವನ್ನಾಗಿ ಮಾರ್ಪಡಿಸಿತು.

ಇದಾದ ಮೇಲೆ ಕ್ರಿ.ಪೂ. ೩-೨ ಶತಮಾನಗಳಲ್ಲಿ ಗ್ರೀಕರಲ್ಲಿ ಅಂತಃಕಲಹಗಳನ್ನು ಹೋಗಲಾಡಿಸಿ ಅವರನ್ನು ಒಂದುಗೂಡಿಸುವುದಕ್ಕಾಗಿ ಅಕೇಯನ್ ಲೀಗ್ ಎಂಬ ಸಂಘವು ಸ್ಥಾಪಿತವಾಯಿತು. ಇದಕ್ಕೆ ಸೇರಿದ ಪಟ್ಟಣಗಳಿಗೆ ಒಳ ಆಡಳಿತ ವಿಷಯ ಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯವಿತ್ತು. ವಿದೇಶೀಯ ವಿಷಯಗಳನ್ನು ನೋಡಿಕೊಳ್ಳು ವುದಕ್ಕೆ ಎಲ್ಲ ಸದಸ್ಯರಾಷ್ಟ್ರಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಕೇಂದ್ರಸಭೆ ಇತ್ತು. ಇದರ ಶಾಸನಗಳನ್ನು ಎಲ್ಲ ರಾಷ್ಟ್ರಗಳೂ ಪಾಲಿಸಬೇಕಾಗಿತ್ತು, ಎಲ್ಲ ರಾಷ್ಟ್ರಗಳೂ ಈ ಕೇಂದ್ರಸಭೆಯ ಅಧೀನಕ್ಕೆ ಒಳಗಾಗಿರುವಂತೆ ನೋಡಿಕೊಳ್ಳಲು ಇದರ ಅಧೀನದಲ್ಲಿ ಒಂದು ಪ್ರಬಲವಾದ ಸೈನ್ಯವಿತ್ತು.

ಅಂತರರಾಷ್ಟ್ರೀಯ ಶಾಂತಿಸ್ಥಾಪನೆಗಾಗಿ ದುಡಿದ ಅನೇಕ ಅರ್ವಾಚೀನ ತತ್ವಜ್ಞರು ಈ ಮೇಲ್ಕಂಡ ಸಂಸ್ಥೆಗಳನ್ನು ಭಾವೀ ಅಂತರರಾಷ್ಟ್ರೀಯ ಸರ್ಕಾರದ ಮಾದರಿಯನ್ನಾಗಿ ಪರಿಗಣಿಸಿದ್ದಾರೆ. ಇವುಗಳಲ್ಲಡಗಿರುವ ಪ್ರಜಾಧಿಕಾರತತ್ವ (Democracy) ಮತ್ತು ಸಂಯುಕ್ತ ರಾಜ್ಯಾಂಗತತ್ವಗಳೇ (Federalism) ವಿಶ್ವ ಶಾಂತಿಗೆ ಗ್ರೀಕರ ಹಿರಿದಾದ ಕಾಣಿಕೆ. ಈ ಎರಡು ತತ್ವಗಳೇ ಆಧುನಿಕ ಅಂತರ ರಾಷ್ಟ್ರೀಯ ಸರ್ಕಾರದ ಯೋಜನೆಗಳಿಗೆ ಮೂಲಾಧಾರ. ಆದರೆ ಗ್ರೀಕ್ ಸಂಸ್ಕೃತಿ ಯಲ್ಲಿ ಒಂದು ದೊಡ್ಡ ಕೊರತೆಯೂ ಕಂಡುಬರುತ್ತದೆ. ಗ್ರೀಕರಿಗೆ ಇತರ ಜನಾಂಗ ದವರ ವಿಷಯದಲ್ಲಿ ಹೃದಯವೈಶಾಲ್ಯವಿರಲಿಲ್ಲ. ಗ್ರೀಕರಲ್ಲದವರು ಅನಾಗರಿಕರು, ಅವರ ಸಂಸ್ಕೃತಿ ಹೀನವಾದುದು, ಅವರೊಡನೆ ಹೆಚ್ಚಿನ ಸಂಪರ್ಕ ಸಲ್ಲದು, — ಎಂಬುದೇ ಇವರ ಒಟ್ಟಭಿಪ್ರಾಯ. ತಮ್ಮ ಸಂಸ್ಕೃತಿಯಲ್ಲಿ ತಮಗೆ ಎಷ್ಟು

ಅಭಿಮಾನವಿದೆಯೋ ಅಷ್ಟೇ ಅಭಿಮಾನ ಇತರ ಜನಾಂಗಗಳವರಿಗೂ ತಮ್ಮ ತಮ್ಮ ಸಂಸ್ಕೃತಿಯಲ್ಲಿದೆ; ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದಕ್ಕೆ ತಮಗೆ ಎಷ್ಟು ಹಕ್ಕಿದೆಯೋ ಇತರರಿಗೂ ಅಷ್ಟೇ ಹಕ್ಕು ಇದೆ; ಪರಸ್ಪರ ಏನು ವ್ಯತ್ಯಾಸಗಳಿದ್ದರೂ ಪ್ರಪಂಚದ ಎಲ್ಲ ಜನಾಂಗದವರೂ ಅನ್ಯೋನ್ಯವಾಗಿ ನಡೆದುಕೊಳ್ಳಬೇಕು;—ಎಂಬ ವಿಶ್ವಶಾಂತಿಗೆ ಮೂಲಾಧಾರವಾದ ಲೋಕದ ಸೋದರಿಕೆಯ ಭಾವನೆ ಇವರಲ್ಲಿ ಅಷ್ಟಾಗಿ ಬೇರೂರಲಿಲ್ಲ.

## ರೋಮನ್ ಚಕ್ರಾಧಿಪತ್ಯ

ಗ್ರೀಕರ ಕಾಲವಾದ ಮೇಲೆ ರೋಮನ್ ಚಕ್ರಾಧಿಪತ್ಯದ ಸ್ಥಾಪನೆಯಾಯಿತು. ಇದು ಪ್ರಪಂಚದ ಇತಿಹಾಸದಲ್ಲಿ ಅತ್ಯಂತ ವಿಸ್ತಾರವಾದ ಚಕ್ರಾಧಿಪತ್ಯಗಳಲ್ಲಿ ಒಂದು. ಇಂಗ್ಲೆಂಡ್, ದಕ್ಷಿಣ ಜರ್ಮನಿ, ಫ್ರಾನ್ಸ್, ಸ್ಪೇನ್, ಬಾಲ್ಕನ್ ಪರ್ಯಾಯ ದ್ವೀಪ, ಇಟಲಿ, ಏಷ್ಯಾಮೈನರ್, ಈಜಿಪ್ಟ್ ಮತ್ತು ಉತ್ತರ ಆಫ್ರಿಕಾ ದೇಶಗಳನ್ನು ಒಳಗೊಂಡಿತ್ತು. ರೋಮನ್ ಚಕ್ರಾಧಿಪತ್ಯದ ಸ್ಥಾಪನೆಯಿಂದ ಈ ದೇಶಗಳನ್ನೊಳಗೊಂಡ ಈ ದೊಡ್ಡ ಭೂಭಾಗದಲ್ಲಿ ೫ ಶತಮಾನಗಳ ಕಾಲ ಅವಿಚ್ಛಿನ್ನವಾಗಿ ಶಾಂತಿ ನೆಲಸಿತ್ತು. ಅಲ್ಲದೆ ಈ ಚಕ್ರಾಧಿಪತ್ಯದಲ್ಲಿರುವುದರಿಂದ ಬೇರೆ ಬೇರೆ ಮಟ್ಟಕ್ಕೆ ಸೇರಿದ ಹಲವಾರು ಸಂಸ್ಕೃತಿಗಳ ಜನಾಂಗದವರು ಅನ್ಯೋನ್ಯವಾಗಿರಲು ಕಲಿತರು. ಇವರಲ್ಲಿ ಪರಸ್ಪರ ಸಂಪರ್ಕ ಹೆಚ್ಚಿ ಸಂಕುಚಿತ ಬುದ್ಧಿ ಹೋಗಿ ವಿಶ್ವಭ್ರಾತೃತ್ವಭಾವನೆ ಹುಟ್ಟಲು ಅವಕಾಶವಾಯಿತು. ಈ ವಿವಿಧ ಸಂಸ್ಕೃತಿಗಳ ವ್ಯಕ್ತಿತ್ವಕ್ಕೆ ಲೋಪಬರದೆ ಸಮಾನರಾಜ್ಯಾಂಗಪದ್ಧತಿಯೂ ನ್ಯಾಯಪದ್ಧತಿಯೂ ಬೆಳೆಯುವಂತಾಯಿತು. ಈ ರೀತಿಯಲ್ಲಿ ರೋಮನ್ ಚಕ್ರಾಧಿಪತ್ಯವು ಹಲವಾರು ಶತಮಾನಗಳ ಕಾಲ ಯೂರೋಪಿನ ಶಾಂತಿರಕ್ಷಣೆಗೆ ಮುಖ್ಯ ಸಾಧನವಾಯಿತು. ಆದರೆ ಸಾಮ್ರಾಜ್ಯತತ್ವ ಮತ್ತು ಗುಲಾಮಪದ್ಧತಿ ಇವು ರೋಮನರ ಆಧಿಪತ್ಯಕ್ಕೆ ತಳಹದಿಯಾಗಿದ್ದವು. ಆದ್ದರಿಂದ ಇವರು ಏರ್ಪಡಿಸಿದ ಶಾಂತಿವ್ಯವಸ್ಥೆಯು ಶಾಂತಿಯಲ್ಲಿ ನೆಲಸಿರಲಿಲ್ಲವೆಂದು ಹೇಳಬಹುದು. ಗ್ರೀಸ್ ರೋಮ್ ಎರಡರಲ್ಲಿಯೂ ಅವರ ನಾಗರಿಕತೆಯೆಲ್ಲ ಈ ಗುಲಾಮರ ಎದೆ-ನೆಲದ ಮೇಲೆ ಬೆಳೆದದ್ದು ಎಂಬುದನ್ನು ಮರೆಯಬಾರದು.

## ಮಧ್ಯಯುಗ: ಡಾಂಟೆ

ರೋಮನ್ ಚಕ್ರಾಧಿಪತ್ಯವು ನಾಶವಾದ ಮೇಲೆ ಅನೇಕ ಶತಮಾನಗಳ ಕಾಲ ಯೂರೋಪ್ ದೇಶವು ಛಿನ್ನಭಿನ್ನವಾಗಿ ಅಲ್ಲಿ ಅನಾಯಕತೆ ಇತ್ತು. ಎಲ್ಲೆಲ್ಲಿಯೂ ಪಾಳೆಯಗಾರರಂಥವರ ಪ್ರಾಬಲ್ಯ ಹೆಚ್ಚಿ ಇವರ ಒಳಹೋರಾಟದಿಂದ ರಕ್ತದ

ಕೋಡಿ ಹರಿಯುತ್ತಿತ್ತು. ಕ್ರಿ.ಶ. ೮೦೦ ರಲ್ಲಿ ಚಾರ್ಲ್ಸ್‌ಮೇನ್ (Charlemagne) ಎಂಬ ಫ್ರಾನ್ಸಿನ ರಾಜನು ಅಕ್ಕಪಕ್ಕದ ಹಲವಾರು ರಾಜ್ಯಗಳನ್ನು ಗೆದ್ದು ಅಳಿದು ಹೋದ ರೋಮನ್ ಚಕ್ರಾಧಿಪತ್ಯವನ್ನು ಹೋಲಿ ರೋಮನ್ ಸಾಮ್ರಾಜ್ಯ ಎಂಬ ಹೊಸ ಹೆಸರು ಕೊಟ್ಟು ಪುನರುಜ್ಜೀವನಗೊಳಿಸಹೊರಟನು. ಇವನು ಸ್ಥಾಪಿಸಿದ ಸಾಮ್ರಾಜ್ಯವು ೧,೦೦೦ ವರ್ಷಗಳ ಕಾಲ ಬಾಳಿಬಂದರೂ ಇದರ ಶಕ್ತಿ ಚಾರ್ಲ್ಸ್‌ಮೇನನ ಕಾಲವಾದನಂತರ ಬಹುಮಟ್ಟಿಗೆ ಕುಗ್ಗಿಹೋಯಿತು. ದೇಶವು ಮೊದಲಿನಂತೆ ಅನಾಯಕಸ್ಥಿತಿಗೆ ಇಳಿಯಿತು.

ಈ ಕಾಲವು ಅವ್ಯವಸ್ಥಿತವಾಗಿದ್ದುದರಿಂದಲೇ ಜನರು ರೋಮನ್ ಚಕ್ರಾಧಿಪತ್ಯದ ಐಕ್ಯತೆ ಮತ್ತು ಶಾಂತಿಯನ್ನು ಮತ್ತೆ ಕಾಣುವೆವೇ ಎಂದು ಕಾತರಿಸತೊಡಗಿದರು. ಅಲ್ಲದೆ ಈ ಕಾಲದ ಕ್ರೈಸ್ತಮತವು ಕ್ರೈಸ್ತರು ಯಾವ ದೇಶದಲ್ಲಿರಲಿ ಯಾವ ಜನಾಂಗಕ್ಕೆ ಸೇರಿರಲಿ ಎಲ್ಲರೂ ಒಂದೇ ಸೋದರವರ್ಗಕ್ಕೆ ಸೇರಿದವರು, ಇವರನ್ನೆಲ್ಲ ಒಳಗೊಂಡ ಒಂದು ಸಮಾನ ಸರ್ಕಾರವಿರಬೇಕು, ಎಂಬ ಭಾವನೆಯನ್ನು ಸಾರಿತು. ಈ ಕಾಲದ ಜನಸಾಮಾನ್ಯರೂ ತಾವು ಪ್ರಪಂಚವನ್ನೆಲ್ಲ ಒಳಗೊಂಡ ಕ್ರೈಸ್ತ ಸಮಾಜದ ಸದಸ್ಯರು; ಎಲ್ಲರಿಗೂ ಸಮಾನವಾಗಿ ಅನ್ವಯಿಸುವ ಕ್ರೈಸ್ತ ಶಾಸನವೇ ಇದಕ್ಕೆ ಮೂಲಾಧಾರ; ಈ ಸಮಾಜವನ್ನು ರಕ್ಷಿಸುವುದಕ್ಕೆ ಕ್ರೈಸ್ತರ ಜಗದ್ಗುರುವಾದ ಪೋಪರೂ ಹೋಲಿ ರೋಮನ್ ಚಕ್ರವರ್ತಿಯೂ ಎಡಭುಜ ಬಲಭುಜದಂತೆ ಇದ್ದಾರೆ,— ಎಂದು ಭಾವಿಸಿದ್ದರು.

ಈ ರೀತಿಯಲ್ಲಿ ಕ್ರೈಸ್ತ ಭ್ರಾತೃತ್ವ ಭಾವನೆಯು ಜನರ ಮನಸ್ಸಿನಲ್ಲಿ ನೆಲಸಿದ್ದರೂ ಕ್ರೈಸ್ತ ದೇಶಗಳನ್ನೆಲ್ಲ ಒಳಗೊಂಡ ಸಮಾನಸರ್ಕಾರವನ್ನು ಏರ್ಪಡಿಸಲು ಸಾಧ್ಯವಾಗಲಿಲ್ಲ. ಆದರೆ ಇಂತಹ ಸರ್ಕಾರ ಬೇಕೆಂಬ ಬಯಕೆಯು ಮಧ್ಯಯುಗದ ಕೊನೆಯವರೆಗೂ ಇತ್ತು. ಈ ಕಾಲದಲ್ಲಿ ರಂಜಿಸಿದ ಸುಪ್ರಸಿದ್ಧನಾದ ಡಾಂಟೆಕವಿಯು ತನ್ನ ಡೀ ಮಾನಾರ್ಕಿಯಾ (*De Monarchia*) ಎಂಬ ಗ್ರಂಥದಲ್ಲಿ ಈ ಧ್ಯೇಯವನ್ನೇ ಜನರ ಮುಂದಿಟ್ಟಿದ್ದಾನೆ. ಇವನು ಪ್ರತಿಪಾದಿಸಿದ ತತ್ವವಿಷ್ಟೇ: "ಮಾನವನ ಅಂತಿಮ ಧ್ಯೇಯ ವಿಶ್ವಶಾಂತಿ, ವಿಶ್ವಕಲ್ಯಾಣ. ಇದನ್ನು ಸಾಧಿಸಬೇಕಾದರೆ ಅಳಿದುಹೋದ ರೋಮನ್ ಚಕ್ರಾಧಿಪತ್ಯದಂತಹ ಧರ್ಮದಲ್ಲಿ ನೆಲಸಿದ ವಿಶ್ವಪ್ರಭುತ್ವಬೇಕು. ಇದನ್ನು ಸಾಧಿಸಲು ಎಲ್ಲರೂ ಪ್ರಯತ್ನಪಡಬೇಕು." ಡಾಂಟೆಯ ಈ ತತ್ವವು ಮುಂದಿನ ಅಂತರರಾಷ್ಟ್ರೀಯ ಸರ್ಕಾರದ ಭರತವಾಕ್ಯದಂತೆ ಇದೆಯೆಂದು ಎಲಿಜಬೆತ್ ಯಾರ್ಕ್ ಎಂಬವರು ಹೇಳಿದ್ದಾರೆ.

## ರಾಷ್ಟ್ರಪ್ರಭುತ್ವಗಳು

ಪ್ರಪಂಚಕ್ಕೆಲ್ಲ ಒಂದೇ ಕ್ರೈಸ್ತಮತವೂ ಒಂದೇ ಪ್ರಭುತ್ವವೂ ಇರಬೇಕೆಂಬ ಈ ಮಧ್ಯಕಾಲದ ಭಾವನೆಗಳು ಕ್ರಿ.ಶ. ೧೬ ನೆಯ ಶತಮಾನದಲ್ಲಿ ಮಾಯವಾದುವು. ಲೂಥರನ್ ಮತ ಮತ್ತು ಇತರ ಸುಧಾರಕ ಮತಗಳು ಹುಟ್ಟಿ ಕ್ರೈಸ್ತಮತದ ಒಗ್ಗಟ್ಟು ಹೋಗಿ ಪ್ರತಿಯೊಂದು ದೇಶದಲ್ಲೂ ಸ್ವತಂತ್ರಮತಗಳು ಸ್ಥಾಪಿತವಾದುವು. ಇದೇ ಕಾಲದಲ್ಲಿ ಪಾಳೆಯಗಾರರ ಪ್ರಾಬಲ್ಯ ಕುಗ್ಗಿ ಇಂಗ್ಲೆಂಡ್, ಫ್ರಾನ್ಸ್, ಸ್ಪೇನ್ ಮೊದಲಾದ ಪ್ರಬಲ ರಾಷ್ಟ್ರಗಳು ಹುಟ್ಟಿದವು. ಈ ದೇಶದ ರಾಜರು ರಾಜಕೀಯ ವಿಷಯಗಳಲ್ಲಿ ಹೋಲಿ ರೋಮನ್ ಚಕ್ರವರ್ತಿಗಾಗಲಿ ಮತವಿಷಯಗಳಲ್ಲಿ ಪೋಪನಿಗಾಗಲಿ ಅಧೀನರಲ್ಲ. ಇವರು ಸರ್ವಸ್ವತಂತ್ರರು. ಹೊರಗಿನ ಯಾವ ಕಟ್ಟುಪಾಡಿಗೂ ಒಳಪಡದೆ ಸಂಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸುವ ಹಕ್ಕು ತಮಗಿದೆ ಎಂಬ ಭಾವನೆಗಳು ಈ ರಾಷ್ಟ್ರಗಳಲ್ಲಿ ಬೇರೂರಿದವು. ಅಲ್ಲದೆ ರಾಜರು ದೇವಾಂಶಭೂತರು, ಪ್ರಜೆಗಳ ಪಾಲನೆಗಾಗಿ ದೇವರಿಂದಲೆ ನಿಯಮಿಸಲ್ಪಟ್ಟಿದ್ದಾರೆ. ರಾಜ್ಯಭಾರದ ಎಲ್ಲ ಹಕ್ಕೂ ಅವರಿಗೇ ಸೇರಿದುದು; ರಾಜನು ಒಳ್ಳೆಯವನಾಗಲಿ ಕೆಟ್ಟವನಾಗಲಿ ಪ್ರಜೆಗಳು ವಿಧೇಯತೆಯಿಂದ ನಡೆದುಕೊಳ್ಳಬೇಕು; ರಾಜನಿಗೆ ವಿರೋಧವಾಗಿ ಮಾತನಾಡುವುದೂ ದಂಗೆ ಏಳುವುದೂ ದೇವರನ್ನು ಎದುರುಕಟ್ಟಿಕೊಂಡಂತೆಯೇ ಮಹಾಪಾಪಕರ, — ಎಂಬ ಭಾವನೆಗಳು ಹೆಚ್ಚಿನ ಪ್ರಚಾರಕ್ಕೆ ಬಂದವು. ಇದರ ಪರಿಣಾಮವಾಗಿ ದೇಶದ ಒಳಗೂ ಹೊರಗೂ ರಾಜರ ಅಧಿಕಾರಕ್ಕೆ ಯಾವ ತಡೆಯೂ ಇಲ್ಲದಂತಾಯಿತು. ೧೬ ನೆಯ ಶತಮಾನದಿಂದ ೩-೪ ಶತಮಾನಗಳ ಕಾಲ ನಿರಂಕುಶ ಪ್ರಭುತ್ವಗಳು ಎಲ್ಲೆಲ್ಲಿಯೂ ಪ್ರಬಲವಾದವು. ಈ ನಿರಂಕುಶ ರಾಜರ ವೈಮನಸ್ಯದಿಂದಲೂ ರಾಜ್ಯಾಭಿಲಾಷೆಯಿಂದಲೂ ಒಂದಾದ ಮೇಲೆ ಒಂದು ಯುದ್ಧ ಹುಟ್ಟಿ ಯೂರೋಪು ರಕ್ತಮಯವಾಯಿತು. ಈ ಯುದ್ಧಗಳಲ್ಲಿ ಮುಖ್ಯವಾದವು ೧೬ನೆಯ ಶತಮಾನದ ಪೂರ್ವಾರ್ಧದಲ್ಲಿ ಹೋಲಿ ರೋಮನ್ ಚಕ್ರವರ್ತಿಯಾದ ಐದನೆಯ ಚಾರ್ಲ್ಸನಿಗೂ ಫ್ರಾನ್ಸ್ ದೇಶದ ರಾಜನಾದ ಫ್ರಾನ್ಸಿಸನಿಗೂ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸುವುದಕ್ಕಾಗಿ ಆದ ಕದನಗಳು; ೧೬೧೮-೪೮ ವರೆಗೆ ಪ್ರಾಟೆಸ್ಟೆಂಟ್ ರಾಷ್ಟ್ರಗಳಿಗೂ ಕ್ಯಾಥೊಲಿಕ್ ರಾಷ್ಟ್ರಗಳಿಗೂ ನಡೆದ "ಮೂವತ್ತು ವರ್ಷಗಳ ಯುದ್ಧ" (Thirty Years' War); ೧೬೬೭-೧೭೧೪ರ ವರೆಗೆ ತನ್ನ ಹಿರಿಮೆಯನ್ನು ಸ್ಥಾಪಿಸಲು ನಡೆಸಿದ ಫ್ರಾನ್ಸ್ ದೇಶದ ರಾಜನಾದ ೧೪ನೆಯ ಲೂಯಿಯ ಕದನಗಳು; ೧೮ನೆಯ ಶತಮಾನದಲ್ಲಿ ಸಾಮ್ರಾಜ್ಯಸ್ಥಾಪನೆಗಾಗಿ ಇಂಗ್ಲಿಷರಿಗೂ ಫ್ರೆಂಚರಿಗೂ ನಡೆದ ಆಸ್ಟ್ರಿಯನ್ ಸಕ್ಸೆಷನ್ ವಾರ್ (Austrian Succession War); ಮತ್ತು ಸೆವೆನ್

ಯಿಯರ್ಸ್ ವಾರ್ (Seven Years' War); ಕೊನೆಗೆ ಫ್ರೆಂಚ್ ಮಹಾಕ್ರಾಂತಿಯ ಪರಿಣಾಮವಾಗಿ ನಡೆದ ಮತ್ತು ನೆಪೋಲಿಯನ್ನನ ಯುದ್ಧಗಳು.

ಈ ರೀತಿಯಲ್ಲಿ ಯೂರೋಪು ಯುದ್ಧಪರಂಪರೆಗಳಿಗೆ ಸಿಕ್ಕಿ ನರಳುತ್ತಿರಲು ಅನೇಕ ತತ್ವಜ್ಞರೂ, ರಾಜ್ಯತಂತ್ರಜ್ಞರೂ ಶಾಂತಿಸ್ಥಾಪನೆಗಾಗಿ ಅನೇಕ ಯೋಜನೆಗಳನ್ನು ಜನರ ಮುಂದಿಟ್ಟರು. ಇವರಲ್ಲಿ ಪ್ರಸಿದ್ಧರಾದವರು ಫ್ರಾನ್ಸ್ ದೇಶದ ರಾಜನಾದ ೪ನೆಯ ಹೆನ್ರಿಯ ಮಂತ್ರಿ ಸಲ್ಲಿ (Sully), ಅಂತರರಾಷ್ಟ್ರೀಯ ನ್ಯಾಯಶಾಸ್ತ್ರಕ್ಕೆ ಜನ್ಮದಾತನಾದ ಗ್ರೋಟಿಯಸ್ (Grotius), ಉದಾತ್ತಧ್ಯೇಯ ನಿಷ್ಠನಾದ ಸೇಂಟ್ ಪೀರ್ (Saint Pierre), ೧೮ನೆಯ ಶತಮಾನದಲ್ಲಿ ಬಾಳಿದ ಕ್ಯಾಂಟ್ (Kant), ರೂಸೊ (Rousseau) ಮತ್ತು ಬೆಂಥಮ್ (Bentham) ಎಂಬ ತತ್ವಜ್ಞರು, ಮತ್ತು ಅಹಿಂಸಾವ್ರತ ಪ್ರಧಾನವಾದ ಕ್ವೇಕರ್ಸ್ ಎಂಬ ಕ್ರೈಸ್ತಮತಶಾಖೆಗೆ ಸೇರಿದ ವಿಲಿಯಂ ಪೆನ್ (William Penn).

ಇವರಲ್ಲಿ ಒಬ್ಬೊಬ್ಬರು ಒಂದೊಂದು ದೃಷ್ಟಿಯಿಂದ ಶಾಂತಿಯ ಆವಶ್ಯಕತೆಯನ್ನೂ, ಮುಂದೆ ನಿರ್ಮಿಸಬೇಕಾದ ಅಂತರರಾಷ್ಟ್ರೀಯ ವ್ಯವಸ್ಥೆಯ ರೀತಿನೀತಿಗಳನ್ನೂ ಒತ್ತಿ ಹೇಳಿದರು. ಈ ವಿಷಯದಲ್ಲಿ ಗ್ರೋಟಿಯಸ್ಸನು (Grotius) ಪ್ರತಿಪಾದಿಸಿದ ತತ್ವ ಬಹಳ ಉದಾತ್ತವಾದುದು. ಇದೇನೆಂದರೆ: ಒಂದು ದೇಶದಲ್ಲಿ ಶಾಂತಿ ನೆಲಸಬೇಕಾದರೆ ನ್ಯಾಯಸಮ್ಮತವಾದ ಸರ್ಕಾರವಿರಬೇಕು. ಪ್ರಜೆಗಳು ತಮ್ಮ ಸರ್ಕಾರದ ಶಾಸನಗಳನ್ನು ಪಾಲಿಸಬೇಕು. ತಮ್ಮ ತಮ್ಮಲ್ಲಿ ಏನು ವ್ಯಾಜ್ಯ ಒದಗಿದರೂ ನ್ಯಾಯಾಸ್ಥಾನಕ್ಕೆ ಹೋಗಬೇಕೇ ಹೊರತು ಹೊಡೆದಾಟಕ್ಕೆ ಇಳಿಯಬಾರದು. ಅಲ್ಲದೆ ವೈಯಕ್ತಿಕ ಜೀವನದಲ್ಲಿ ನ್ಯಾಯಸಮ್ಮತವಲ್ಲದ, ನಾಲ್ಕು ಜನರಿಗೆ ಒಪ್ಪದಂತಹ ಕೆಲಸಗಳನ್ನು ಮಾಡಕೂಡದು. ಇದು ತಿಳಿದ ಅಂಶವಾಗಿಯೇ ಇದೆ. ಹಾಗೆಯೇ ವಿಶ್ವಶಾಂತಿ ನೆಲಸಬೇಕಾದರೆ ಪ್ರತಿಯೊಂದು ರಾಷ್ಟ್ರವೂ ತಾನು ಅಂತರರಾಷ್ಟ್ರೀಯ ಸಮಾಜದ ಪ್ರಜೆಯೆಂದು ಭಾವಿಸಬೇಕು. ಎಲ್ಲ ರಾಷ್ಟ್ರಗಳ ಹಿತದ ದೃಷ್ಟಿಯಿಂದ ಯಾವುದು ಧರ್ಮ, ಪ್ರತಿ ರಾಷ್ಟ್ರವೂ ತಾನು ಹೇಗೆ ನಡೆದುಕೊಳ್ಳಬೇಕು, ಎಂಬುದನ್ನು ತಿಳಿಸುವಂತಹ ಅಂತರರಾಷ್ಟ್ರೀಯ ಶಾಸನಪದ್ಧತಿ ಏರ್ಪಡಬೇಕು. ಅಂತರರಾಷ್ಟ್ರೀಯ ನಿಯಮಗಳಿಗೆ ಪ್ರತಿಯೊಂದು ರಾಷ್ಟ್ರವೂ ತಲೆಬಾಗಬೇಕು. ರಾಷ್ಟ್ರಗಳಲ್ಲಿ ಪರಸ್ಪರ ವ್ಯಾಜ್ಯಗಳು ಹುಟ್ಟಿದಲ್ಲಿ ಪಂಚಾಯಿತಿಯ ಮೂಲಕ ತೀರ್ಮಾನ ಮಾಡಿಕೊಳ್ಳಬೇಕೇ ಹೊರತು ಅನಾಗರಿಕರಂತೆ ರಣಕ್ಕೆ ಇಳಿಯಬಾರದು. ಹಾಗೇ, ಯಾರೊಬ್ಬರ ಕೆಟ್ಟನಡತೆಯಿಂದಾಗಲಿ ಯುದ್ಧ ಒದಗಿದರೆ ಯುದ್ಧದಲ್ಲಿ ಕ್ರೌರ್ಯ ತೋರಿಸಬಾರದು, ಅತ್ಯಾಚಾರ ನಡೆಸಬಾರದು.

ಬೆಂಥಮ್ (Bentham) ತನ್ನ ಆರ್ಥಿಕ ಮತ್ತು ರಾಜಕೀಯ ತತ್ವಗಳಿಗೆ ಸರಿಹೊಂದುವ ರೀತಿಯಲ್ಲಿ ಅಂತರರಾಷ್ಟ್ರೀಯ ವ್ಯವಸ್ಥೆಯ ಆವಶ್ಯಕತೆಯನ್ನು ಪ್ರತಿಪಾದಿಸಿದನು. ಇವನ ವಾದದ ಸಾರಾಂಶವೇನೆಂದರೆ: ಯಾವ ಪ್ರಜಾಪ್ರಭುತ್ವದಲ್ಲಿಯಾಗಲಿ ರಾಜ್ಯತಂತ್ರಜ್ಞನ ಧ್ಯೇಯ — ಆದಷ್ಟು ಹೆಚ್ಚು ಜನರಿಗೆ ಆದಷ್ಟು ಹೆಚ್ಚು ಸೌಖ್ಯವನ್ನುಂಟುಮಾಡುವುದು. ಉತ್ತಮದರ್ಜೆಯ ರಾಜ್ಯತಂತ್ರಜ್ಞನು ತನ್ನ ದೇಶದ ಹಿತವನ್ನು ಮಾತ್ರ ಬಯಸುವುದಿಲ್ಲ. ಜಾತಿಮತ ವ್ಯತ್ಯಾಸಗಳಿಲ್ಲದೆ ಎಲ್ಲ ಜನಾಂಗಗಳಿಗೂ ಒಟ್ಟಿನಲ್ಲಿ ಯಾವುದು ಉಪಯುಕ್ತವೋ ಅದನ್ನೇ ಸಾಧಿಸಬೇಕು. ಅಂತರರಾಷ್ಟ್ರೀಯ ಶಾಂತಿ ಏರ್ಪಡಬೇಕಾದರೆ ಒಂದು ದೇಶದವರು ಮತ್ತೊಂದು ದೇಶದವರೊಡನೆ ವ್ಯಾಪಾರಮಾಡುವುದಕ್ಕೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು; ಆಮದು ರಫ್ತು ತೆರಿಗೆಗಳನ್ನೂ ಮತ್ತು ವ್ಯಾಪಾರಕ್ಕಿರುವ ಇತರ ವಿಧವಾದ ಅಡಚಣೆಗಳನ್ನೂ ತೆಗೆದುಹಾಕಬೇಕು. ಪ್ರತಿಯೊಂದು ರಾಷ್ಟ್ರವೂ ತನಗೆ ಸೇರಿರುವ ವಸಾಹತುಗಳನ್ನು (colonies) ಬಿಟ್ಟುಕೊಡಬೇಕು. ಇದರಿಂದ ವಿಶ್ವಶಾಂತಿ ಸ್ಥಾಪನೆಗೆ ಬಹುಮಟ್ಟಿಗೆ ಸಹಾಯವಾಗುವುದಲ್ಲದೆ ಆರ್ಥಿಕದೃಷ್ಟಿಯಿಂದಲೂ ಅನುಕೂಲವಾಗುತ್ತದೆ. ಅಂತರರಾಷ್ಟ್ರೀಯ ಶಾಂತಿಸ್ಥಾಪನೆಗೆ ಬೇಕಾದ ಮತ್ತೊಂದು ಅಂಶ: ಎಲ್ಲ ರಾಷ್ಟ್ರಗಳಿಗೂ ಅನ್ವಯಿಸುವಂತಹ ಅಂತರರಾಷ್ಟ್ರೀಯ ನ್ಯಾಯರಚನೆ (International Law) ಮತ್ತು ರಾಷ್ಟ್ರರಾಷ್ಟ್ರಕ್ಕೆ ಹುಟ್ಟಿದ ವ್ಯವಹಾರಗಳ ವಿಷಯದಲ್ಲಿ ತೀರ್ಪುಕೊಡಲು ಒಂದು ಅಂತರರಾಷ್ಟ್ರೀಯ ಪಂಚಾಯಿತಿ ನ್ಯಾಯಸ್ಥಾನ.

ಕ್ಯಾಂಟ್ (Kant) ಎಂಬ ತತ್ವಜ್ಞನು *Perpetual Peace* ಎಂಬ ಗ್ರಂಥದಲ್ಲಿ ಪ್ರತಿಪಾದಿಸಿದ ತತ್ವದ ಸಾರಾಂಶವೇನೆಂದರೆ: ಪ್ರಪಂಚದಲ್ಲಿ ಶಾಂತಿ ನೆಲಸಬೇಕಾದರೆ ಎಲ್ಲ ರಾಷ್ಟ್ರಗಳೂ ಅಧೀನವಾಗಿರುವ ಅಂತರರಾಷ್ಟ್ರೀಯ ಸರ್ಕಾರವಿರಬೇಕು. ಇದು ತಿಳಿದ ವಿಷಯವಾಗಿಯೇ ಇದೆ. ಆದರೆ ಜನರು ಅಸೂಯಾಪರರಾಗಿಯೂ ಸ್ವಾರ್ಥಪರರಾಗಿಯೂ ಸಂಕುಚಿತಬುದ್ಧಿಯುಳ್ಳವರಾಗಿಯೂ ಇರುವಲ್ಲಿ ಇಂತಹ ಅಂತರರಾಷ್ಟ್ರೀಯ ವ್ಯವಸ್ಥೆ ಸಾಧ್ಯವೇ ಎಂದು ಕೇಳಬಹುದು. ವಿಶ್ವಶಾಂತಿಯ ಸಾಧನೆಗೆ ಮನುಷ್ಯನ ಸ್ವಭಾವ ಬದಲಾಯಿಸಬೇಕಾದುದು ಆವಶ್ಯಕವಿಲ್ಲ. ಏಕೆಂದರೆ ಶಾಂತಿಯೂ ವ್ಯವಸ್ಥಿತಸಮಾಜವೂ ಮಾನವ ಜನಾಂಗದ ಅಂತಿಮ ಗುರಿ. ಇದು ಪ್ರಕೃತಿ ಸಿದ್ಧವಾದುದು. ಮಾನವನ ಅದೃಷ್ಟವನ್ನು ನಡಸುತ್ತಿರುವ ಸತ್ವಗಳು ನಮಗೆ ತಿಳಿಯದಂತಹ ಹಲವಾರು ರೀತಿಗಳಲ್ಲಿ ಅವನ ಚಂಚಲ ಪದಗಳನ್ನು ಮಾನವ ಸಮಾಜದ ಅಂತಿಮಗುರಿಯಾದ ಶಾಂತಿಯ ಕಡೆಗೇ ಎಳೆದುಕೊಂಡು ಹೋಗುತ್ತಿದೆ. ಸ್ವಾರ್ಥತೆಯೇ ಮೊದಲಾದ ಮನುಷ್ಯನ ಯಾವ ದುರ್ಗುಣಗಳೂ ಈ ವಿಶ್ವಶಕ್ತಿ

ಯನ್ನು ತಡೆಯಲಾರವು. ಇದರ ಎದುರಿಗೆ ಮನುಷ್ಯನ ಯಾವ ಪ್ರಯತ್ನವೂ ಸಾಗಲಾರದು. ಈಗ ನಡೆಯುತ್ತಿರುವ ಯುದ್ಧಗಳೂ ದೂರದೃಷ್ಟಿಯಲ್ಲಿ ಮಾನವ ಸಮಾಜವನ್ನು ಒಂದುಗೂಡಿಸುವುದಕ್ಕಾಗಿಯೇ ನಡೆಯುತ್ತಿವೆ. ಯುದ್ಧದ ಕಷ್ಟಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಸಣ್ಣ ರಾಷ್ಟ್ರಗಳು ಒಂದುಗೂಡಿ ದೊಡ್ಡ ರಾಷ್ಟ್ರಗಳಾಗುತ್ತವೆ. ಯುದ್ಧಗಳ ಪರಿಣಾಮವಾಗಿ ಚಕ್ರಾಧಿಪತ್ಯಗಳೂ ದೊಡ್ಡ ಸಂಯುಕ್ತ ರಾಜ್ಯಾಂಗಗಳೂ ಹುಟ್ಟುತ್ತವೆ. ಇವುಗಳಲ್ಲಿ ಮತ್ತೆ ಹೋರಾಟ ಆರಂಭವಾಗುತ್ತದೆ. ಹೀಗೆ ಹಲವು ಶತಮಾನಗಳು ಯುದ್ಧದ ಕಷ್ಟಗಳಿಗೆ ಸಿಕ್ಕಿ ಬಳಲಿ ಬೆಂಡಾಗಿ ಕೊನೆಗೆ ಪ್ರಪಂಚದ ರಾಷ್ಟ್ರಗಳೆಲ್ಲ ಒಂದಾಗಿ ತಾವೇ ಸಮ್ಮತಿಪಟ್ಟು ಒಂದು ಅಂತರರಾಷ್ಟ್ರೀಯ ಸಂಯುಕ್ತ ರಾಜ್ಯಾಂಗವನ್ನು ಸ್ಥಾಪಿಸುವವು; ಅದರ ಶಾಸನಗಳಿಗೆ ಯಾವ ನಿರ್ಬಂಧವೂ ಇಲ್ಲದೆ ತಾವಾಗಿಯೇ ತಲೆಬಾಗುವುವು. ಮಾನವಸಮಾಜವು ಬುಡಮುಟ್ಟ ನಾಶವಾಗದಂತೆ ಕಾಯುವುದಕ್ಕಾಗಿ ಇಂತಹ ಅಂತರರಾಷ್ಟ್ರೀಯ ಸಂಸ್ಥೆಯನ್ನು ಸ್ಥಾಪಿಸಲೇಬೇಕಾಗುತ್ತದೆ.

ಒಟ್ಟಿನಲ್ಲಿ ಈ ಎಲ್ಲ ತತ್ವಜ್ಞರ ಅಭಿಪ್ರಾಯವಿಷ್ಟೇ: ಈಗ ಪ್ರಪಂಚದಲ್ಲಿ ಸಂಪೂರ್ಣ ಸರ್ವಪ್ರಭುತ್ವವುಳ್ಳ ಸ್ವತಂತ್ರ ರಾಷ್ಟ್ರಗಳಿವೆ. ಇವುಗಳ ವೈಮನಸ್ಯದಿಂದಲೂ ಸ್ವಾರ್ಥಪರತೆಯಿಂದಲೂ ಯುದ್ಧಗಳು ನಡೆಯುತ್ತವೆ. ಇವನ್ನು ತಪ್ಪಿಸಿ ಶಾಂತಿಯನ್ನು ಸ್ಥಾಪಿಸಲು ಒಂದು ಅಂತರರಾಷ್ಟ್ರೀಯ ಸರ್ಕಾರ ಬೇಕು. ಎಲ್ಲ ರಾಷ್ಟ್ರಗಳಿಂದಲೂ ಒಪ್ಪಿಗೆ ಪಡೆದು ಎಲ್ಲ ರಾಷ್ಟ್ರಗಳಿಗೂ ಅನ್ವಯಿಸುವಂತಹ ಅಂತರರಾಷ್ಟ್ರೀಯ ಶಾಸನಪದ್ಧತಿ ಬೇಕು. ಒಂದು ರಾಷ್ಟ್ರಕ್ಕೂ ಮತ್ತೊಂದು ರಾಷ್ಟ್ರಕ್ಕೂ ಹುಟ್ಟಿದ ತೊಡಕು ಕೋಟಲೆಗಳನ್ನು ವಿಮರ್ಶಿಸಿ ನ್ಯಾಯನಿರ್ಣಯಿಸಲು ಅಂತರರಾಷ್ಟ್ರೀಯ ನ್ಯಾಯಾಸ್ಥಾನ ಬೇಕು. ಅಂತರರಾಷ್ಟ್ರೀಯ ಸರ್ಕಾರದ ಮತ್ತು ನ್ಯಾಯಾಸ್ಥಾನಗಳ ಕಟ್ಟಳೆಗಳನ್ನು ಕಡೆಗಣಿಸಿ ದುಷ್ಟ ರೀತಿಯಲ್ಲಿ ನಡೆದುಕೊಂಡ ರಾಷ್ಟ್ರಗಳನ್ನು ಶಿಕ್ಷಿಸುವುದಕ್ಕೆ ಅಂತರರಾಷ್ಟ್ರೀಯ ಸೈನ್ಯವೊಂದಿರಬೇಕು.

ಇಂತಹ ಅಂತರರಾಷ್ಟ್ರೀಯ ವ್ಯವಸ್ಥೆಯನ್ನು ಹೇಗೆ ಸಾಧಿಸುವುದು? ರೂಸೊ, ಕ್ಯಾಂಟ್, ಬೆಂಥಮ್ — ಇವರು ಹೇಳಿದ್ದೇನೆಂದರೆ: ಪ್ರಪಂಚದಲ್ಲಿ ನಿರಂಕುಶ ರಾಜರು ಇರುವವರೆಗೂ ಯುದ್ಧವನ್ನು ನಿಲ್ಲಿಸುವುದಕ್ಕಾಗುವುದಿಲ್ಲ; ಇವರಿಗೆ ಯುದ್ಧ ಹೂಡುವುದಕ್ಕೆ ಮನಸ್ಸು ಅಳುಕುವುದೇ ಇಲ್ಲ— ಮೃಗಗಳ ಬೇಟೆಗೆ ಸಿದ್ಧಪಡಿಸಲು ಆಜ್ಞೆಕೊಟ್ಟಂತೆ ಈ ನರಬೇಟೆಗೂ ನಿಲ್ಲುತ್ತಾರೆ. ಯುದ್ಧ ನಿಲ್ಲಿಸಬೇಕಾದರೆ ಮೊಟ್ಟಮೊದಲು ಎಲ್ಲ ದೇಶಗಳಲ್ಲಿಯೂ ಪ್ರಜಾಪ್ರಭುತ್ವಗಳು ಸ್ಥಾಪನೆಯಾಗಬೇಕು. ಯುದ್ಧ ಹೂಡುವುದಕ್ಕೆ ಪ್ರಜೆಗಳ ಅನುಮತಿ ಬೇಕೆಂಬ ನಿಯಮ

ವಿದ್ದರೆ ಆಳರಸರು ಇಂತಹ ಘೋರ ಕಾರ್ಯಕ್ಕೆ ಇಳಿಯುವುದಕ್ಕೆ ಮುಂಚೆ ಬಹಳ ಯೋಚನೆಮಾಡುತ್ತಾರೆ; ಅವಶ್ಯವಿದ್ದಲ್ಲಿ ಮಾತ್ರ ಯುದ್ಧಮಾಡುತ್ತಾರೆ. ಇಂತಹ ಅಂತರರಾಷ್ಟ್ರೀಯ ವ್ಯವಸ್ಥೆಯನ್ನು ಸಶಸ್ತ್ರಕ್ರಾಂತಿಯಿಂದ ಮಾತ್ರ ಸಾಧಿಸಬಹುದೆಂದು ರೂಸೋ ಅಭಿಪ್ರಾಯಪಟ್ಟನು. ಆದರೆ ಇಂತಹ ಕ್ರಾಂತಿಯಿಂದ ದೇಶಕ್ಕೆ ಒಟ್ಟಿನಲ್ಲಿ ಒಳ್ಳೆಯದೊ ಕೆಟ್ಟದೊ ಎಂದು ಸಂದೇಹಪಟ್ಟನು.

ಅಂತರರಾಷ್ಟ್ರೀಯ ಶಾಂತಿಯ ಸ್ಥಾಪನೆಗಾಗಿ ದುಡಿದವರಲ್ಲಿ ಒಬ್ಬೊಬ್ಬರು ತತ್ವಜ್ಞರ ವಿಷಯವನ್ನು ಮೇಲೆ ಹೇಳಿದೆ. ಇದಲ್ಲದೆ ವಿಶ್ವಶಾಂತಿಯ ಇತಿಹಾಸದಲ್ಲಿ ಕ್ವೇಕರ್ಸ್ ಎಂಬ ಕ್ರೈಸ್ತಮತಶಾಖೆಯ ಅನುಯಾಯಿಗಳಿಗೆ ಹೆಚ್ಚಿನ ಸ್ಥಾನವಿದೆ. ಇವರ ಮತದ ಮುಖ್ಯ ತತ್ವಗಳಲ್ಲಿ ಅಹಿಂಸೆ ಒಂದು. ಇವರ ಮತಸ್ಥಾಪಕನಾದ ಜಾರ್ಜ್ ಫಾಕ್ಸನು (George Fox) ಕ್ರಿ.ಶ. ೧೬೬೦ ರಲ್ಲಿ ಈ ರೀತಿ ಹೇಳಿದನು: "ನಮ್ಮ ಮತದ ಸಿದ್ಧಾಂತವೂ ಆಚಾರವೂ ಯಾವಾಗಲೂ ಶಾಂತಿಗಾಗಿ ಪ್ರಯತ್ನಪಡುವುದು; ಶಾಂತಿಯನ್ನು ಆದಷ್ಟು ಕಾಪಾಡಿಕೊಂಡು ಬರುವುದು; ರಕ್ತವನ್ನು ಸುರಿಸುವ ಯಾವ ತತ್ವವನ್ನಾಗಲಿ ಆಚಾರವನ್ನಾಗಲಿ ನಾವು ಒಪ್ಪುವುದಿಲ್ಲ; ಯಾವ ಧ್ಯೇಯಸಾಧನೆಗಾಗಿಯಾಗಲಿ, ನೇರವಾಗಿ, ಅಥವಾ, ಬೇರೆ ಯಾವ ವಿಧದಲ್ಲಿಯಾಗಲಿ ಯುದ್ಧ ಹೋರಾಟಗಳಿಗೆ ಕೈ ಹಾಕುವುದಿಲ್ಲ. ಇದೇ ನಮ್ಮ ಶಪಥ." ಕ್ವೇಕರ್ ಮತಾನುಯಾಯಿಗಳಲ್ಲಿ ಹಲವರು ಸೈನ್ಯಕ್ಕೆ ಸೇರುವುದಿಲ್ಲವೆಂದು ಸತ್ಯಾಗ್ರಹಮಾಡಿದುದರಿಂದ ಅವರನ್ನು ನಿರ್ಬಂಧಿಸಕೂಡದೆಂಬ ನಿಯಮಕೂಡ ಹಲವು ರಾಷ್ಟ್ರಗಳಲ್ಲಿ ಬಳಕೆಯಲ್ಲಿದೆ. ಇವರು ೧೯ ನೆಯ ಶತಮಾನದಲ್ಲಿ ಶಾಂತಿಪ್ರಚಾರಕಾರ್ಯದಲ್ಲಿ ಬಹು ಮುಂದಾಳಾಗಿದ್ದರು. ಹಲವು ಶಾಂತಿಸಂಘಗಳನ್ನು ಸ್ಥಾಪಿಸಿದರು. ಈ ಕ್ವೇಕರ್ ಮತಾನುಯಾಯಿಗಳಲ್ಲಿ ಜಾನ್ ಬೆಲ್ಲರ್ಸ್ (೧೬೫೪-೧೭೨೫) ಮತ್ತು ವಿಲಿಯಮ್ ಪೆನ್ನ್ (೧೬೪೪-೧೭೧೮) ಎಂಬವರು ಅಂತರರಾಷ್ಟ್ರೀಯ ಶಾಂತಿ ಯೋಜನೆಗಳನ್ನು ರಚಿಸಿದವರಲ್ಲಿ ಪ್ರಸಿದ್ಧಿಹೊಂದಿದ್ದಾರೆ. ಇವರ ಲೇಖನಗಳಲ್ಲಿ ಕಾಣುವ ಒಂದು ಅನಿರೀಕ್ಷಿತ ವಿಷಯವೆಂದರೆ ಇವರು ಕ್ವೇಕರ್ ಮತಾನುಯಾಯಿಗಳಾದರೂ ವಿಶ್ವಶಾಂತಿ ಏರ್ಪಡಬೇಕಾದರೆ ಅಂತರರಾಷ್ಟ್ರೀಯ ಸೈನ್ಯ ಅತ್ಯಗತ್ಯವೆಂದು ಇವರು ಪಟ್ಟಿರುವ ಅಭಿಪ್ರಾಯ. ವಿಲಿಯಮ್ ಪೆನ್ನ್ ಹೇಳಿದಂತೆ "ಮನುಷ್ಯನ ಸ್ವಭಾವ ಎಷ್ಟರ ಮಟ್ಟಿಗೆ ಕೆಟ್ಟುಹೋಗಿದೆಯೆಂದರೆ ಒಂದಲ್ಲ ಒಂದು ರೀತಿಯಲ್ಲಿ ಒತ್ತಾಯ ಪಡಿಸದಿದ್ದರೆ ಬಹುಮಂದಿ ತಮಗೆ ಸರಿ, ಮಾಡತಕ್ಕದ್ದು, ಎಂದು ತಿಳಿದರೂ ಯಾವ ಕಾರ್ಯವನ್ನೂ ತಾವಾಗಿ ಮಾಡುವುದಿಲ್ಲ; ಮಾಡಬಾರದ ಕೆಲಸಗಳನ್ನು ಮಾಡಕೂಡದೆಂದು ತಿಳಿದೂ ಮಾಡುತ್ತಾರೆ."

೧೯ನೆಯ ಶತಮಾನಕ್ಕೆ ಮುಂಚೆ ಶಾಂತಿಸ್ಥಾಪನೆಗಾಗಿ ಮಾಡಿದ ಪ್ರಯತ್ನಗಳಲ್ಲಿ ಕಂಡುಬರುವ ಒಂದೆರಡು ಕುಂದುಕೊರತೆಗಳನ್ನು ಹೇಳಬಹುದು. ಮೊದಲನೆಯದಾಗಿ ಪ್ರತಿಯೊಂದು ರಾಷ್ಟ್ರವೂ, ಬಹುಮಟ್ಟಿಗೆ ಪ್ರತಿಯೊಂದು ಹಳ್ಳಿಯೂ, ತನಗೆ ಬೇಕಾದ ಎಲ್ಲ ಸಾಮಾನುಗಳನ್ನೂ ತಾನೇ ತಯಾರಿಸಿಕೊಳ್ಳುತ್ತಿತ್ತು. ಈಗಿನ ಸ್ಥಿತಿಗೆ ಹೋಲಿಸಿನೋಡಿದರೆ ಅಂತರರಾಷ್ಟ್ರೀಯ ವ್ಯಾಪಾರ ತೀರ ಕಡಿಮೆಯಾಗಿತ್ತು. ಅಲ್ಲದೆ ಒಂದು ದೇಶದ ಜನ ಮತ್ತೊಂದು ದೇಶಕ್ಕೆ ಹೋಗಿಬರುವುದು, ಪುಸ್ತಕಗಳ ಮತ್ತು ವೃತ್ತಪತ್ರಿಕೆಗಳ ಮೂಲಕ ಇತರ ದೇಶಗಳ ವಿದ್ಯಮಾನಗಳಲ್ಲಿ ಹೆಚ್ಚಿನ ಆಸಕ್ತಿ ತೋರಿಸುವುದು ಬಹಳ ಕಡಿಮೆಯಾಗಿತ್ತು. ಒಟ್ಟಿನಲ್ಲಿ ಆ ಜನರ ಪ್ರಪಂಚ ಬಹು ಕಿರಿದು. ಇದರ ಪರಿಣಾಮವಾಗಿ ಆ ಕಾಲದ ಯುದ್ಧಗಳೂ ಅಕ್ಕಪಕ್ಕದ ಕೆಲವು ರಾಜ್ಯಗಳಿಗೆ ಮಾತ್ರ ಅನ್ವಯಿಸುತ್ತಿದ್ದವು. ಉದಾಹರಣೆಗೆ ೨೦ನೆಯ ಶತಮಾನಕ್ಕೆ ಮುಂಚೆ ಸಾಮಾನ್ಯವಾಗಿ ಯುರೋಪಿನಲ್ಲಿ ನಡೆದ ಯುದ್ಧಗಳಿಗೆ ತುರ್ಕಿ ದೇಶವನ್ನು ಬಿಟ್ಟು ಇತರ ಖಂಡಗಳ ಯಾವ ರಾಷ್ಟ್ರವೂ ಸೇರುತ್ತಿರಲಿಲ್ಲ. ಇದೇ ಕಾರಣದಿಂದಲೇ ಅಂತರರಾಷ್ಟ್ರೀಯ ಸ್ಥಾಪನೆಗಾಗಿ ಯೋಜನೆಗಳನ್ನು ರಚಿಸಿದವರೆಲ್ಲ ಯೂರೋಪಿನ ಸ್ಥಿತಿಗತಿಗಳಿಗೆ ಮಾತ್ರ ಗಮನಕೊಡುತ್ತಿದ್ದರು. ಪ್ರಪಂಚ ಬಹುದೊಡ್ಡದು, ಆಯಾ ಖಂಡದ ರಾಷ್ಟ್ರಗಳು ತಮ್ಮ ತಮ್ಮಲ್ಲಿ ಶಾಂತಿ ಸ್ಥಾಪನೆಮಾಡಿಕೊಂಡರೆ ಸಾಕು ಎಂಬುದು ಇವರ ಅಭಿಪ್ರಾಯ. ಹೀಗೆ ದೇಶಗಳಲ್ಲಿ ಪರಸ್ಪರ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸಂಪರ್ಕ ಕಡಿಮೆಯಾಗಿರುವಲ್ಲಿ ಮಾನವ ಜನಾಂಗವೆಲ್ಲ ಒಂದು, ಎಲ್ಲ ರಾಷ್ಟ್ರಗಳೂ ಒಂದು ಮನೆಯವರಂತೆ ಬಾಳಬೇಕು, ಎಂಬ ಅಂತರರಾಷ್ಟ್ರೀಯ ಸಹಕಾರಕ್ಕೆ ಮೂಲಸ್ತಂಭವಾದ ಲೋಕಸೋದರತೆಯ ಭಾವನೆ ಬೆಳೆಯಲು ಸಾಧನವಾಗಲಿಲ್ಲ. ಅಂತರರಾಷ್ಟ್ರೀಯತೆಯೂ ವಿಶ್ವಶಾಂತಿಭಾವನೆಯೂ ಜನರಲ್ಲಿ ಬೇರೂರಲು ಅಂತರರಾಷ್ಟ್ರೀಯ ಸಮಾಜ ಉದಯಿಸಬೇಕಾಗಿತ್ತು.

ಎರಡನೆಯದಾಗಿ ಪ್ರಜಾಪ್ರಭುತ್ವವಿಲ್ಲದುದರಿಂದ ಪ್ರಜೆಗಳ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸರಿಯಾದ ಸಂಸ್ಥೆಗಳಿರಲಿಲ್ಲ. ಇದರಿಂದ ಜನರಲ್ಲಿ ಅಂತರರಾಷ್ಟ್ರೀಯ ಶಾಂತಿಭಾವನೆಗಳು ಹುಟ್ಟಿದರೂ ಅವುಗಳಿಗೆ ಸರಿಯಾದ ರೂಪಕೊಟ್ಟು ಚಳವಳಿ ಹೂಡಿ ಹೆಚ್ಚಿನ ಪ್ರಚಾರಮಾಡಲು ಸಾಧ್ಯವಾಗಲಿಲ್ಲ.

ಕಡೆಯದಾಗಿ ಅಂತರರಾಷ್ಟ್ರೀಯ ಶಾಂತಿಸ್ಥಾಪನೆಗಾಗಿ ಕಾರ್ಯತಃ ಆಗ ಏನೊಂದೂ ನಡೆಯಲಿಲ್ಲ. ಆ ಕಾಲದ ರಾಜಕೀಯ ಮುಂದಾಳುಗಳಿಗೆ ಅಂತರರಾಷ್ಟ್ರೀಯ ಶಾಂತಿಯತ್ನಗಳಲ್ಲಿ ಸ್ವಲ್ಪವೂ ವಿಶ್ವಾಸವಿರಲಿಲ್ಲ. ಇದಕ್ಕಾಗಿ ಯೋಜನೆ

ಗಳನ್ನು ರಚಿಸಿದ ಗ್ರೋಟಿಯಸ್, ಸೇಂಟ್ ಪೀರ್ ಮತ್ತು ಕ್ಯಾಂಟಿನಂತಹ ತತ್ವಜ್ಞರು ಬರಿಯ ಧ್ಯೇಯವಾದಿಗಳೆಂತಲೂ, ಆಗದ ಹೋಗದ ಗಾಳಿಗೋಪುರ ಕಟ್ಟುವವರೆಂತಲೂ ಇವರ ಅಭಿಪ್ರಾಯ. ಸೇಂಟ್ ಪೀರಿನ ವಿಶ್ವಶಾಂತಿಯೋಜನೆಯ ವಿಷಯದಲ್ಲಿ ಫ್ರಾನ್ಸಿನ ಮಂತ್ರಿ ಕಾರ್ಡಿನಲ್ ಫ್ಲೂರಿ (Cardinal Fleury) ಹೇಳಿದನಂತೆ: "ಅದ್ಭುತವಾದ ಯೋಜನೆ! ಆದರೆ ಒಂದೇ ಒಂದು ಅಂಶ ಬಿಟ್ಟು ಹೋಗಿದೆ. ಯೂರೋಪಿನ ರಾಜರ ಹೃದಯವನ್ನು ಮಾರ್ಪಡಿಸಲು ಮಾತ್ರ ಯಾವ ಮಾರ್ಗವನ್ನೂ ತೋರಿಸಿಕೊಟ್ಟಿಲ್ಲ." ಇದೇ ವಿಷಯದಲ್ಲಿ ಪ್ರಷ್ಯ ದೇಶದ ರಾಜನಾದ ಫ್ರೆಡರಿಕ್ ದಿ ಗ್ರೇಟ್ (Frederick the Great) ಎಂಬಾತನು "ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು ಬಹುಸುಲಭ. ಯೂರೋಪಿನ ರಾಜರ ಒಪ್ಪಿಕೆ ಪಡೆಯುವುದು ಮುಂತಾದ ಒಂದೆರಡು ಅಲ್ಪವಿಷಯಗಳನ್ನು ಬಿಟ್ಟರೆ ಇದನ್ನು ಸಾಧಿಸುವುದಕ್ಕೆ ಬೇಕಾದ ಉಳಿದ ಎಲ್ಲ ಅಂಶಗಳೂ ಇಲ್ಲಿ ಇವೆ! ಎಂದು ಹೇಳಿದನಂತೆ.

ಎಸ್. ವೆಂಕಟದೇಶಿಕಾಚಾರ್.

---

# ಕಾವ್ಯಾವಲೋಕನ

**ಹೂವಿನ ಹಾಸಿಗೆ** (ಮನೋಹರ ಗ್ರಂಥಮಾಲೆಯ ೭೧ನೆಯ ಕುಸುಮ) — ಬರೆದವರು : ಶ್ರೀ ಹೊಯಿಸಳ ; ಪ್ರಕಾಶಕರು : ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ ; ಕ್ರೌನ್ ಅಷ್ಟಪತ್ರದ ಪುಟಗಳು, ೮ + ೧೩೦ ; ಬೆಲೆ, ೧ ರೂಪಾಯಿ.

ಶ್ರೀ ಹೊಯಿಸಳರು ಮಕ್ಕಳ ಸಾಹಿತ್ಯದ ನಿರ್ಮಾಣದಲ್ಲಿ ಗಣ್ಯಸ್ಥಾನ ಪಡೆದಿರುವವರಲ್ಲಿ ಒಬ್ಬರು ; ಮಗುವಿನೊಡನೆ ಮಗುವಾಗಿ ಹುಡುಗರೊಡನೆ ಹುಡುಗರಾಗಿ ಹಾಡಬಲ್ಲವರು, ಕುಣಿಯಬಲ್ಲವರು. ಇವರು ಹಲವಾರು ಮುದ್ದಾದ ಕವನಗಳನ್ನು ಬರೆದು ಕನ್ನಡ ಕಂದನಿಗೆ ಕಾಣಿಕೆ ಕೊಟ್ಟಿದ್ದಾರೆ. ಅವುಗಳನ್ನು ಓದಿ, ಹಾಡಿ, ಕೇಳಿ ಮಕ್ಕಳು ನಲಿದಿದ್ದಾರೆ, ಕುಣಿದಿದ್ದಾರೆ. ಈಗ ಈ ಪುಸ್ತಕದಲ್ಲಿ ಇಪ್ಪತ್ತಾರು ಪುಟ್ಟ ಕಥೆಗಳನ್ನು ಕನ್ನಡ ಮಕ್ಕಳಿಗೆ ಹೊಸ ಕಾಣಿಕೆಯಾಗಿ ನೀಡಿದ್ದಾರೆ.

"ಬೆಳೆಯೇನೋ ಬೇಕಾದಷ್ಟಿದೆ, ಕೊಯ್ಯುವವರು ಕಡಮೆ" ಎಂಬ ಮಾತು ಕನ್ನಡದ ಮಕ್ಕಳಸಾಹಿತ್ಯದ ವಿಷಯಕ್ಕೆ ಅನ್ವಯಿಸುವಷ್ಟು ಪ್ರಮಾಣದಲ್ಲಿ ಸಾಹಿತ್ಯದ ಇನ್ನುಳಿದ ಯಾವ ವಿಭಾಗಕ್ಕೂ ಅನ್ವಯಿಸುವ ಹಾಗೆ ಕಾಣಲಿಲ್ಲ. ಈ ಮಾತು 'ಹೂವಿನ ಹಾಸಿಗೆ'ಯನ್ನು ಓದಿದ ಮೇಲೆ ದೃಢಗೊಳ್ಳುತ್ತದೆ. ಸ್ವಪ್ರತಿಭೆಯಿಂದ ಮಕ್ಕಳಿಗಾಗಿ ಕಥೆ ಕಟ್ಟಿ ಹೇಳುವುದು ಕಷ್ಟ. ಹಾಗೆ ಹೇಳುವವರೂ ಇದ್ದಾರೆ. ಹೊಯಿಸಳರು ಅಂಥ ಕಲ್ಪನಾಶಕ್ತಿಯುಳ್ಳವರೆಂಬುದಕ್ಕೆ ಈ ಪುಸ್ತಕದಲ್ಲೆ ಸಾಕಷ್ಟು ನಿದರ್ಶನಗಳಿವೆ. ಆದರೂ, ಸಿದ್ಧವಾಗಿರುವ ವಸ್ತುವನ್ನು ಬಳಸಿಕೊಂಡು ಮಕ್ಕಳಿಗೆ ಸೊಗಸುವ ರೀತಿಯಲ್ಲಿ ಕಥೆಕಟ್ಟಿ ಹೇಳಬೇಕಾದದ್ದೂ ಅಗತ್ಯವಾಗಿ ಮಾಡಬೇಕಾದ ಒಂದು ಕಾರ್ಯ. ಇದರಿಂದ ಬರಹಗಾರರ ಮೇಲ್ಮೆಗೆ ಊನವೇನಿಲ್ಲ. ಇಂಗ್ಲಿಷ್ ಸಾಹಿತ್ಯದಲ್ಲಿ Charles Lamb, Mary Lamb ಇವರು ಷೇಕ್ಸ್‌ಪಿಯರ್ ಮಹಾ ಕವಿಯ ಮಹಾ ನಾಟಕಗಳನ್ನು ಸರಳಸುಂದರ ಭಾಷೆಯಲ್ಲಿ ಕಥಾರೂಪಕ್ಕಿಳಿಸಿ ಮಕ್ಕಳಿಗೆ ರಸದೂಟವನ್ನೊದಗಿಸಿಲ್ಲವೆ? ನಾವು ಕೂಡ ಅದೇ ರೀತಿ ಮಕ್ಕಳಿಗಾಗಿ ಕಥೆಗಳನ್ನೊದಗಿಸಬೇಕೆಂದು ಉದ್ದೇಶಪಟ್ಟರೆ ವಿಷಯಕ್ಕೆ ಕೊರತೆಯೆ? ಇಡಿಯ ವಿಶ್ವದ ಸಾಹಿತ್ಯವೇ ನಮ್ಮ ಮುಂದೆ ತೆರೆದಿದೆ: ಬೇಕಾದ ರತ್ನಗಳನ್ನು ನಾವು ಆಯ್ದುಕೊಳ್ಳಬಹುದು. ದಿವಂಗತರಾದ ಪಂಜೆ ಮಂಗೇಶರಾಯರು, ಎಂ. ಎನ್. ಕಾಮತರು ಈ ಭಾಗದಲ್ಲಿ ಮಾರ್ಗದರ್ಶನ ಮಾಡಿದ್ದಾರೆ. ಸಮರ್ಥರಾದ ಹೊಯಿಸಳರೂ ಈ ಕಾರ್ಯ ಕೈಕೊಂಡಿರುವುದು ಸಂತೋಷ.

"ವಿಷಯಗಳನ್ನು ಎಲ್ಲೆಲ್ಲಿಂದಲೋ ಆರಿಸಿದ್ದೇನೆ. ಕೆಲವನ್ನು ನನ್ನ ತಾಯಿಯವರು ಹೇಳುತ್ತಿದ್ದ ಗಾದೆಗಳಿಂದಲೇ ವಿಸ್ತರಿಸಿದ್ದೇನೆ. ಕೆಲವನ್ನಂತೂ ಮಕ್ಕಳ ಸಂಗಡ ಕಥೆಕಟ್ಟುವ ಆಟ ಆಡುತ್ತ ಇದ್ದಾಗ್ಗೆ ರೂಪಿಸಿಕೊಂಡಿದ್ದೇನೆ" ಎಂದು ಹೊಯಿಸಳರೇನೊ ಹೇಳಿದ್ದಾರೆ. 'ಹೂವಿನ ಹಾಸಿಗೆ'ಯಲ್ಲಿ ಯಾವವು ಬೇರೆಯ ಭಾಷೆಗಳಿಂದ ಆಯ್ದವು, ಯಾವವು ಗಾದೆಗಳಿಂದ ವಿಸ್ತರಿಸಿದವು, ಯಾವವು ನಡೆದ ಸಂಗತಿಗಳ ಆಧಾರದ ಮೇಲೆ ಕಟ್ಟಿದವು, ಯಾವವು ಸ್ವಕಪೋಲಕಲ್ಪಿತ — ಎಂಬ ಅಂಶವನ್ನು ಊಹಿಸಿಕೊಳ್ಳಬಹುದಾದರೂ ಅದನ್ನು ಪೃಥಕ್ಕಾಗಿ ನಿರ್ದೇಶಿಸಿದ್ದರೆ ಮೇಲು ಎನ್ನಿಸುತ್ತದೆ. ಆದರೆ ಇದೇನು ಅಷ್ಟು ದೊಡ್ಡ ವಿಷಯವಲ್ಲ. ಸಕ್ಕರೆ ಯಾವ ಅಂಗಡಿಯದಾದರೇನು? ಕೊಬ್ಬರಿ ಯಾವ ಮರದ್ದಾದರೇನು? ಪಾಕ ಮುಖ್ಯ; ಬೇಕಾದ್ದು ಮಿಠಾಯಿ. ಈ ಕಥೆಗಳಲ್ಲಿ ನಿಜವಾಗಿಯೂ 'ಒಂದು ಹೊಸ ಮಾದರಿಯ ಪಾಕ' ಇಳಿದಿದೆ: ಭಾಷೆಯಲ್ಲಿ, ಶೈಲಿಯಲ್ಲಿ, ಹೇಳುವ ರೀತಿಯಲ್ಲಿ. ಹೊಯಿಸಳರು ಕಥೆ ಬರೆದಿಲ್ಲ, ಹೇಳಿದ್ದಾರೆ. ಮಕ್ಕಳಿಗೆ ಪರಿಣಾಮಕಾರಿಯಾಗಿ ಕಥೆ ಹೇಳುವ ಕಲೆಯನ್ನು ಹೊಯಿಸಳರು ಚೆನ್ನಾಗಿ ಸಾಧಿಸಿದ್ದಾರೆ. ಅಲ್ಲೊಂದು ಇಲ್ಲೊಂದು ಕಥೆ ಮಕ್ಕಳಿಗೆ ಸ್ವಾರಸ್ಯವಾಗದೆ ಹೋಗಬಹುದು; ಇಲ್ಲವೆ, ಅವರ ಅರಿವಿನ ಮಟ್ಟಕ್ಕೆ ಮೀರಿರಬಹುದು (ಉದಾ.—'ನಿಶ್ಚಲದಾಸ'; 'ಹರಕೆ'). ಆದರೆ ಹೊಯಿಸಳರ ಕಥೆಗಾರಿಕೆಯ ಕೈವಾಡ ಉದ್ದಕ್ಕೂ ಒಂದೇ ಸಮನಾಗಿ ಸಾಗಿದೆ; ಎಲ್ಲಿಯೂ ಕುಗ್ಗಿಲ್ಲ, ತಗ್ಗಿಲ್ಲ, ಕುಂಟಿಲ್ಲ. ವಿಷಯಗಳಲ್ಲಿ ವೈವಿಧ್ಯವಿದೆ. ಕಥೆಗಳು ಬೇರೆಬೇರೆ ರಸಗಳನ್ನು ಉಕ್ಕಿಸುತ್ತವೆ: ಉದಾಹರಣೆಗೆ, 'ಹೂವಿನ ಹಾಸಿಗೆ', 'ಮುದ್ದುರಾಮು', 'ಅಶೋಕಮೂಲ' ಇವು ಕರುಣೆ ಉಕ್ಕಿಸಿ ಕಣ್ಣಲ್ಲಿ ಹನಿ ತಂದರೆ, 'ಗೌರಿಯ ಬರೆಹ', 'ಅಭ್ಯಂಕು', 'ಗಂಗು', 'ಸೋಬಾನಿ' ಇವು ನಗೆಯ ಹೊನಲು ಹರಿಸುತ್ತವೆ; 'ಅವಳಿ ಚಿಲುಮೆ', 'ಗುಣ' ಇವು ಅದ್ಭುತರಮ್ಯ; 'ನೆನಪು', 'ನ್ಯಾಯಮೂರ್ತಿ', 'ಉಂಗುರ' ಇವುಗಳ ಮುಕ್ತಾಯ ಮಕ್ಕಳನ್ನು ಬೆರಗುಗೊಳಿಸುತ್ತವೆ. 'ಕಾಕಿ' ಕಿರಿಯರಲ್ಲಿ ಕನ್ನಡದ ಅಭಿಮಾನ ಹುಟ್ಟಿಸಲು ಮೀಸಲಾದ, ಸ್ವಾರಸ್ಯವಾದ ಕಥೆ. ಹೊಯಿಸಳರ ಕಥಾಪ್ರಪಂಚದಲ್ಲಿ 'ಖಸೀಮಾವು', 'ಪಠಾಕ್ಷಿ' (ಪಟಾಕಿ), ಕತ್ತೆ, ಗಿಣಿ — ಎಲ್ಲ ಪಾತ್ರಗಳೇ. ಇಂಥ ಪಾತ್ರಗಳನ್ನುಳ್ಳ ಕಥೆಗಳು ಉಳಿದವಕ್ಕಿಂತ ಮಕ್ಕಳಿಗೆ ಹೆಚ್ಚು ಪ್ರಿಯ. ಕೆಲವು ಕಥೆಗಳಲ್ಲಿ ಸ್ವಾರಸ್ಯದ ಜೊತೆಗೆ ನೀತಿಯೂ ಮೈಗೊಂಡಿದ್ದು, ಅವುಗಳ ಸತ್ವ ಹೆಚ್ಚಿದೆ. ಸಂಕ್ಷೇಪದಲ್ಲಿ, ಈ ಪುಸ್ತಕ ಮಕ್ಕಳಿಗೆ ಮಿಠಾಯಿ. ದೊಡ್ಡವರು ಕೂಡ ಕಥೆಗಳನ್ನು ಓದಿ ಆನಂದಿಸಬಹುದಾಗಿದೆ. ಹೊಯಿಸಳರು ಇಂಥ ಸಿಹಿಯನ್ನು ನಾಡಿನ ಮಕ್ಕಳಿಗೆ ಆಗಿಂದಾಗ್ಗೆ ಹಂಚುತ್ತಿರಲಿ ಎಂಬುದೇ ನಮ್ಮ ಹಾರೈಕೆ.

ಪುಸ್ತಕದ ದೊಡ್ಡ ಕೊರತೆಯೆಂದರೆ, ಚಿತ್ರಗಳಿಲ್ಲದಿರುವುದು. ಈಗಿನ ಕಾಲದಲ್ಲಿ ಪುಸ್ತಕ ಅಚ್ಚು ಹಾಕಿಸುವುದೇ ಸಾಹಸದ ಮಾತಾಗಿರುವಾಗ ಚಿತ್ರಗಳನ್ನಪೇಕ್ಷಿಸುವುದು ಉಚಿತವಾಗದೇನೊ. ಮುಂದಿನ ಮುದ್ರಣದಲ್ಲಾದರೂ ಈ ಕೊರತೆ ತುಂಬಬೇಕೆಂದು ನಮ್ಮ ಆಸೆ.

—ಎಂ.ವಿ.ಸೀ.

***

**ಬೆಟ್ಟದ ಜೀವ** (ಸಾಮಾಜಿಕ ಕಾದಂಬರಿ. ಮನೋಹರ ಗ್ರಂಥಮಾಲೆಯ ೫೯-೬೦ನೆಯ ಕುಸುಮ)—ಗ್ರಂಥಕರ್ತರು : ಶ್ರೀ ಶಿವರಾಮ ಕಾರಂತರು ; ಪ್ರಕಾಶಕರು : ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ ; ಪುಟ ಸಂಖ್ಯೆ i + ೨೦೨ ; ಬೆಲೆ, ರೂ. ೧-೧೪-೦.

ಇದೊಂದು ಶ್ರೀ ಕಾರಂತರ ಹೊಸ ಕಾದಂಬರಿ. ಕಾದಂಬರಿ ಅನ್ನುವುದಕ್ಕಿಂತ, ಬೆಟ್ಟದ ಮಡಿಲಿನ ವ್ಯಕ್ತಿಯೊಂದರ ಜೀವನಚಿತ್ರವೆನ್ನಬಹುದು. ಶ್ರೀಮಾನ್ ಕಾರಂತರು ಉತ್ತಮ ಬರೆಹಗಾರರೆಂದು ಹೇಳಬೇಕಾಗೇನಿಲ್ಲ. ಅವರ ಕಾದಂಬರಿಗಳು ಘಟ್ಟದ ಕೆಳಗಿನವರ ಜೀವನಗಳನ್ನು ಚಿತ್ರಿಸುತ್ತವೆ. ಆ ಮೂಲೆಗೂ ಪಟ್ಟಣದ ನಾಗರಿಕತೆಯ ಗಾಳಿಯ ಸೋಂಕು ತಗುಲದೆ ಇಲ್ಲ. ಅಂತಹ ಬಿರುಗಾಳಿಗೆ ಸಿಕ್ಕಿ, ಸಂಸಾರವೊಂದರಲ್ಲಿ ಉಂಟಾದ ಕಷ್ಟಪರಂಪರೆ 'ಮರಳಿ ಮಣ್ಣಿಗೆ'ಯಲ್ಲಿ ಚಿತ್ರಿತವಾಗಿದೆ. ಮತ್ತೊಂದು ಚಿತ್ರ 'ಬೆಟ್ಟದ ಜೀವ'ದಲ್ಲಿ.

ಪುತ್ತೂರಿನ 'ಶಿವರಾಮ' ಎಂಬೊಬ್ಬರು ತಪ್ಪಿಸಿಕೊಂಡು ಹೋದ ತಮ್ಮ ದನವೊಂದನ್ನು ವಿಚಾರಿಸುತ್ತ, ದಾರಿತಪ್ಪಿ, ಬೆಳಗ್ಗಿನಿಂದ ಊಟವಿಲ್ಲದೆ ಹಸಿವಿಗೆ 'ಸುಸ್ತಾಗಿ ಅಲೆದಾಟದ ಅವಾಂತರದಿಂದ ಆಯಾಸಗೊಂಡು, ಪಂಜೆಗೆ ಹೊರಟು, ಕತ್ತಲಾಗುತ್ತ ಬಂದುದರಿಂದ ರಪರಪನೆ ಕಾಲುಹಾಕುತ್ತಿದ್ದ ದಾರಿಹೋಕರಿಬ್ಬರನ್ನು ಮರ್ಯಾದೆತಪ್ಪಿ ಮಾತನಾಡಿಸಿ, ಅವರ ಸಹಾಯದಿಂದ ಕೆಳಬೈಲಿನ, ಹವ್ಯಕ ಬ್ರಾಹ್ಮಣ ಗೋಪಾಲಯ್ಯನವರ ಮನೆಗೆ ಅಭ್ಯಾಗತರಾದರು. ಅವರ ಉಪಚಾರದ ಆರಂಭದಲ್ಲಿಯೇ ನಿದ್ರೆಯ ಅಮಲಿಗೆ ತುತ್ತಾಗಿ, ಅನಂತರ ಅವರ ಉಪಚಾರದ, ವಿಶಾಲ ಹೃದಯದ ಸೆಳವಿಗೆ ಸಿಕ್ಕಿ ಅಲ್ಲಿಯೇ ನಾಲ್ಕುದಿನ ನಿಂತು ಆ ಸಂಸಾರದ ಪರಿಚಯವನ್ನು ತಾವು ಮಾಡಿಕೊಂಡುದಲ್ಲದೆ ನಮಗೂ ಮಾಡಿಕೊಟ್ಟಿದ್ದಾರೆ. ಇದಕ್ಕಾಗಿ ಕನ್ನಡಿಗರೆಲ್ಲ ಅವರಿಗೆ ಕೃತಜ್ಞರು.

ಗೋಪಾಲಯ್ಯನವರು ತಮ್ಮ ತಂದೆಯನ್ನು ಹತ್ತನೆಯ ವಯಸ್ಸಿನಲ್ಲೂ ತಾಯಿಯನ್ನು ಹದಿನೆಂಟನೆಯ ವಯಸ್ಸಿನಲ್ಲೂ ಕಳೆದುಕೊಂಡರು. ಕೆಳಬೈಲಿನಲ್ಲಿ ಒಬ್ಬೊಂಟಿಗರಾಗಿರಲು ಬೇಸರಿಸಿ ಸೋದರಮಾವನ ಮನೆ ಸೇರಿದರು. ಆದರೆ ನೆರಮನೆಯವರಾದ

ಅತ್ತೆಯ 'ಉಪದ್ರವ'ದಿಂದ ಮನೆ ತ್ಯಜಿಸಿ, ತಾಸು ತರುಣನಾಗಿದ್ದೇನೆಂದರಿತು ಕನ್ಯಾರ್ಥಿಯಾಗಿ ದೇಶಸಂಚಾರ ಹೊರಟರು. ಊರೂರಲ್ಲಿ ಉಂಟಾದ ಕಹಿ ಸಿಹಿ ಅನುಭವಗಳನ್ನು ಸಹಿಸುತ್ತ, ಹೆಣ್ಣುಮಕ್ಕಳ ಗುಂಪೊಂದನ್ನು ಪಡೆದಿದ್ದ, ಬಡತನದ ಗಾಣಕ್ಕೆ ತಲೆಯೊಡ್ಡಿದ್ದ ವಿಟ್ಲ ಸೀಮೆಯ ಪರಮೇಶ್ವರಭಟ್ಟರ ಮನೆಗೆ ಹೋಗಿ ಆತಿಥ್ಯ ಪಡೆದರು. ಅವರ ಕತೆ ಕೇಳಿ, ವ್ಯಥೆಪಟ್ಟು ಅವರ ಮೊದಲ ಹೆಣ್ಣಿನ ಸೆರೆ ಬಿಡಿಸಲು ಇಚ್ಛಿಸಿದರು. ಅಳಿಯನನ್ನು ಹುಡುಕಿಕೊಡುವುದಾಗಿ ಹೇಳಿ ತಮ್ಮೂರಿಗೆ ಭಟ್ಟರನ್ನು ಕರೆದುಕೊಂಡು ಬಂದು ತಾವೇ ಅಳಿಯನಾಗುವ ವರ ಎಂದು ಹೇಳಿ ಅವರಿಗೆ ಅಳಿಯನಾದರು. ಶಂಕರಮ್ಮ ಮತ್ತು ಗೋಪಾಲಯ್ಯನವರ ನವಜೀವನ ಕೆಳಬೈಲಿನ ಮನೆಯಲ್ಲಿ ಆನಂದದಿಂದ ಆರಂಭವಾಯಿತು. ಆ ಉತ್ಸಾಹದಲ್ಲಿ ಅವರು ಮಾಡದ ಕೆಲಸವಿಲ್ಲ. ತಾರುಣ್ಯದ ಹುಮ್ಮಸ್ಸು ಬೆಟ್ಟದಿಂದ ಧುಮುಕುವ ನಿರ್ಝರಿಗೆ ಅಡ್ಡಗಟ್ಟಿಸಿತು. ಕಾಡಾನೆಗಳ ಕಾಟದಿಂದ ತುಂಬಿದ ಕಾಡನ್ನು 'ಕಲಕಲ'ವೆಂದು ನಗುವ ತೋಟವನ್ನಾಗಿ ಮಾಡಿಸಿತು. ಆ ಉತ್ಸಾಹ, ಹುಮ್ಮಸ್ಸು, ಹಟ, ಸಾಹಸ ಮುದಿತನದಲ್ಲಿಯೂ ಅದೇ ಬಗೆಯಿಂದ ಅವರಲ್ಲಿ ನೆಲಸಿದ್ದುವು. ತಮ್ಮ ಪ್ರೇಮವಾತ್ಸಲ್ಯಗಳನ್ನು ತಮ್ಮ ಮಕ್ಕಳಲ್ಲಿ ತೋರಿಸಿದಂತೆಯೇ ತಾವು ನಟ್ಟ ಅಡಕೆ ಸಸಿಗಳಲ್ಲೂ ತೋರಿಸಿದರು. ಅವುಗಳ ಆ ಪ್ರೇಮಕ್ಕೆ ಮಮತೆಗೆ ತಕ್ಕ ಫಲಗಳನ್ನು ಕೊಡುತ್ತಿವೆ. ಆದರೆ ಆ ಮಕ್ಕಳೊ? ಗೋಪಾಲಯ್ಯ ಮತ್ತು ಶಂಕರಮ್ಮನಿಗೆ ಎರಡು ಮಕ್ಕಳಾದುವು, ಎರಡು ಕಣ್ಣುಗಳಂತೆ: ಒಂದು ಹೆಣ್ಣು, ಒಂದು ಗಂಡು. ಸರ್ವವಿಧದಲ್ಲಿ ಉತ್ತಮನೆನಿಸಿದ ವರನಿಗೆ ಮಗಳನ್ನು ಕೊಟ್ಟು ವಿವಾಹಸಂಬಂಧವನ್ನು ಬೆಳಸಿದರು. ಆದರೆ ಆಕೆ ಮೊದಲ ಹೆರಿಗೆಗೆ ಬಂದು ತಾಯಿಯ ತೊಡೆಯಮೇಲೆ ಪ್ರಾಣಬಿಟ್ಟಳು. ಎಲ್ಲರಂತೆ ತನ್ನ ಮಗನೂ 'ಇಂಗ್ಲೀಷ್' ವಿದ್ಯಾಭ್ಯಾಸ ಮಾಡಲೆಂದು ಪಟ್ಟಣಕ್ಕೆ ಕಳುಹಿಸಿದರು. ಯೌವನದ ಕಾಮಕ್ಕೆ ಆತುರನಾಗಿ, ಹೆಣ್ಣು ಹುಲಿಯೊಂದರ ಬಾಯಿಗೆ ತುತ್ತಾಗಿ ತಂದೆತಾಯಿಗಳನ್ನು ತೊರೆದನು — ಮಗ. ಈ ದುಃಖ ಅವರ ತುಂಬುಬದುಕಿನ ತಿಳಿ ಹೊನಲನ್ನು ಕಲಕಿಬಿಟ್ಟಿತು. ಎರಡು ಜೀವಿಗಳೂ ತಮ್ಮ ಜೀವನ ಪ್ರವಾಹವನ್ನು ತಿಳಿಯಾಗಿಟ್ಟುಕೊಳ್ಳಲು ಸಹನೆ, ತಾಳ್ಮೆಯೆಂಬ ಆಸರೆಯಿಂದ ಸಂಸಾರದಲ್ಲಿ ನಿರ್ಲಿಪ್ತತೆಯನ್ನು ಕಾಣಲು ಪ್ರಯತ್ನಿಸುತ್ತಿದ್ದುವು. ಪೂರ್ಣವಾಗಿ ಅಲ್ಲದಿದ್ದರೂ ಗಂಡುಜೀವ ಅದನ್ನು ಸಂಪಾದನೆ ಮಾಡಿತು. ಹೆಣ್ಣುಜೀವಕ್ಕೆ ಮಗನ ಹಂಬಲ ಅಳಿಸಲಿಲ್ಲ. ಇದರ ಮಧ್ಯೆ ನಾರಾಯಣನೆಂಬ ಅನಾಥ ಹುಡುಗನನ್ನು ತಂದು ಬೆಳಸಿ, ಮದುವೆ ಮಾಡಿಸಿ, ಅವನಿಗೆ ಭೂಮಿಕೊಟ್ಟು ಮಗ ಮಗಳಂತೆ ನೋಡಿಕೊಳ್ಳುತ್ತಿದ್ದರು. ಅವರ ಮಕ್ಕಳಲ್ಲಿ ಗಂಡನ್ನು ದತ್ತು ತೆಗೆದುಕೊಳ್ಳುವ ಯೋಚನೆಯೂ ಇತ್ತು. ಆ ಸಮಯದಲ್ಲಿ

ಅವರ ಉಪಚಾರಕ್ಕೆ ತುತ್ತಾದ ನಮ್ಮ 'ಶಿವರಾಮು'ವಿನ ನಾಲ್ಕು ದಿನದ ನಿಲುವಿನಲ್ಲಿ ಗೋಪಾಲಯ್ಯನವರ ಸಂಸಾರದ ರೀತಿಯೇ ಬದಲಿಸಿದಂತೆ ತೋರುತ್ತದೆ. ಕಾರಣ, ಅವರು ಅಭ್ಯಾಗತನ ಶುಶ್ರೂಷೆಯಲ್ಲೇ ಕಾಲ ಕಳೆದರು. ಅವರ ತಾರುಣ್ಯದ ಹುರುಪು ರೂಪುಗೊಂಡಿತು. ಸಂತೋಷ ನಾಟ್ಯವಾಡಿತು. ಹಾಸ್ಯ ಚೆಲ್ಲಾಡಿತು. ಸಾಹಸ ಇಮ್ಮಡಿಸಿತು. ಉದಾರಮನಸ್ಸು ವಿಶಾಲತರವಾಯಿತು. ದುಃಖ ಮರುಕಳಿಸಿತು. ಆಗಂತುಕನಿಂದ ಮಗನ ಅಲ್ಪಪರಿಚಯವನ್ನೂ ಇರುವಿಕೆಯನ್ನೂ ಅರಿತ ಭಟ್ಟರು ಶನಿವಾರದ ಅಡಕೆಯ ಗಾಡಿಯಲ್ಲಿ ಮನೆಗೆ ಬಂದವರನ್ನು ಕಳುಹಿಸಿಕೊಡುವ ನೆಪದಿಂದ ಪುಣೆಯವರೆಗೆಹೋಗಿ ಮಗನನ್ನು ನೋಡುವ ಆಸೆಯ ಆತುರದಿಂದ ಹೊರಟರು. ಕತೆ ಇಲ್ಲಿಗೆ ನಿಲ್ಲುತ್ತದೆ.

ಗೋಪಾಲಯ್ಯನವರದು ಒಂದು ದೊಡ್ಡ ಜೀವ. ಬೆಟ್ಟದ ಜೀವ. ಆತನು ಬೆಟ್ಟದ ಹೊಟ್ಟೆಯಲ್ಲಿ ಹುಟ್ಟಿದ ಮನುಷ್ಯ. ಬೆಟ್ಟದಷ್ಟು ಎತ್ತರ ಬೆಳೆದಿದ್ದಾರೆ. ಮನಸ್ಸೂ ಹಾಗೆ. 'ಮಾನವೂ ಹಾಗೆ.' 'ನೀಳವಾದ ಶರೀರ. ನರೆತ ತಲೆಗೂದಲು. ಅರೆನರೆತ ಗಡ್ಡ ಮೀಸೆಗಳು. ಎಣ್ಣೆ ಹಚ್ಚಿಕೊಂಡು ಒಲೆಯಮುಂದೆ ಕೂತಿದ್ದ ಅವರು ಸಂಜೆ ದೇವನಂತೆ ಕಾಣಿಸುತ್ತಿದ್ದರು. ಶಾಂತವೂ ಗಂಭೀರವೂ ಆದ ಮುಖಚರ್ಯೆ.' ಅಯ್ಯ ನವರು ಇಳಿ ವಯಸ್ಸಿನಲ್ಲಿದ್ದರೂ ಎಳೆತನದ ಹುಮ್ಮಸ್ಸು. ಬದುಕಿಬಾಳಿದ ಜೀವ. ಅವರು ಜೀವನವನ್ನು ಅಳೆದು ತೂಕಮಾಡಿ ಆಡುವ ಮಾತುಗಳು ಅನುಭವದ ಗಾದೆ ಮಾತುಗಳಿದ್ದಂತೆ. ಮನುಷ್ಯನನ್ನು ಅಲ್ಪನೆಂದು ಅವರು ಭಾವಿಸಿದವರಲ್ಲ. ಕತೆಗಾರರು ಬೆಟ್ಟಗುಡ್ಡಗಳ, ಅಡಕೆ ತೆಂಗಿನ ಮರಗಳ ಬುಡದಲ್ಲಿ ನಿಂತು ಮನುಷ್ಯನ ಸಣ್ಣತನವನ್ನೂ ಅಲ್ಪತ್ವವನ್ನೂ ಕಂಡರೆ, ಆಲೋಚಿಸಿದರೆ, ಅವರು ಬೆಟ್ಟದ ಮೇಲೆ ನಿಂತು, ಮಾನವನ ದೊಡ್ಡತನವನ್ನೂ ಅಗಾಧತೆಯನ್ನೂ ಕಾಣುವರು; ಆಲೋಚಿಸುವರು. ಅಭ್ಯಾಗತ ನೊಡನೆ ಹಾಸ್ಯಕ್ಕಾಗಿ ಅವರು ಆಡಿದ ಮಾತು ಸುಳ್ಳಲ್ಲ. ಆಗಲೂ ಮತ್ತೊಂದು ಕಾಟಮೂಲೆಯನ್ನು ಸೃಷ್ಟಿಸಬಲ್ಲ ಶಕ್ತಿವಂತರು. ಬಲಿಷ್ಠರು. ಆ ಪ್ರೇಮದ ಬೆಲೆ ಅಷ್ಟರಮಟ್ಟಿನದು. ಅಂತರಿಕ್ಷಕ್ಕೆ ಕೈಯಿಡುವ ಸಾಮರ್ಥ್ಯವಿರುವುದರಿಂದಲೇ ಕೈಚಾ ಚುವ ಧೈರ್ಯ. ಆತನ ಹಟ, ಸಾಹಸ, ಧೈರ್ಯ, ಹುರುಪು ಮನುಷ್ಯಮಾತ್ರ ದವನಿಗೆ ಬರಲಾರದು. 'ಸಂತೋಷಚರಿತ' ಜೀವನದ ಮಧ್ಯೆ ಬಂದೊದಗಿದ ದುಃಖವನ್ನು ಮರೆಯಲು ಹವಣಿಸುತ್ತಿದ್ದರು. ದುಃಖತಪ್ತವಾದ ಜೀವ ಉಳಿದ ಬದುಕನ್ನು ಸಮತೆಯಿಂದ ಕಳೆಯುವ ಅಭ್ಯಾಸದಲ್ಲಿ ತೊಡಗಿತ್ತು. ಕಷ್ಟಜೀವಿಗಳಿಗೆ ಸಹಾಯಮಾಡುವ ಉದಾರ ಮನಸ್ಸು. ನಾರಾಯಣ ಅವರನ್ನು ದೇವರೆಂದು ತಿಳಿದ. ಪೂಜಿಸಲೂ ಸಿದ್ಧನಿದ್ದ. ಕೆಂಚಣ್ಣ ಅಲಕ್ಷಿಸಿದ. ಆಗಂತುಕರನ್ನು ಆತ್ಮೀಯರನ್ನಾಗಿ

ಮಾಡಿಕೊಳ್ಳುವ ಇಚ್ಛೆ. ಏಕೆಂದರೆ ಅವರ ಮನಸ್ಸನ್ನು ಅಳೆಯುವ ಶಕ್ತಿ ಅವರಲ್ಲಿತ್ತು. ತಮ್ಮ ಸುತ್ತುಮುತ್ತಲಿನ ಜನದ ಮನಸ್ಸು ಅವರಿಗೆ ತಿಳಿದಿತ್ತು. ಮಕ್ಕಳನ್ನು ಕಳೆದು ಕೊಂಡು ಮನುಷ್ಯರಿಂದ ದೂರವಾಗಿದ್ದ ಅವರು ಮನುಷ್ಯನ ಸಹವಾಸಕ್ಕೆ ಎಳಸು ತ್ತಿದ್ದರು. ಸಂತೋಷದಂತೆಯೇ ದುಃಖವನ್ನೂ ಹಂಚಿಕೊಂಡು ಅನುಭವಿಸಲು ಹಾತೊರೆಯುತ್ತಿದ್ದರು. ಆದ್ದರಿಂದಲೇ 'ಶಿವರಾಮು' ವಿನಲ್ಲಿ ಅಷ್ಟೊಂದು ಸಲಿಗೆ ಗಂಡಹೆಂಡಿರಿಗೆ. ನಾರಾಯಣ ಲಕ್ಷ್ಮಿಯರಲ್ಲಿ ಮಕ್ಕಳ ಪ್ರೇಮ, ಅವರ ಮಕ್ಕಳೇ ತಮ್ಮ ಮಕ್ಕಳು. ಆದರೂ ಹೆತ್ತಮಕ್ಕಳೇ ಹಾಗಾದ ಮೇಲೆ ಬೆಳೆದ ಮೇಲೆ ಇವರೂ ಯಾವ ತೆರನೋ ಎಂಬ ಯೋಚನೆ ತಲೆಯಿಂದ ತೊಲಗದು. ನಾರಾಯಣ ಲಕ್ಷ್ಮಿಯರ ಬದುಕು ಅವರ ಬದುಕಿನ ಹೊಸಲ ಕಾಲುವೆ. ಪ್ರೇಮದ ಪ್ರವಾಹ ಬತ್ತದು. ಮುಂದಾಲೋಚನೆಯುಳ್ಳವರಾದ್ದರಿಂದ ನಾರಾಯಣನಿಗೆ ಉಯಿಲು ಬರೆದುಕೊಡುವ ಯೋಚನೆ ಅವರಿಗೆ ಇದ್ದೇ ಇತ್ತು. ಆದರೆ ಮಗನ ಮೇಲಿನ ಮೋಹವೂ ತಪ್ಪಿರಲಿಲ್ಲ. ನಾರಾಯಣನೇ ತಮಗೆ ಕಡೆಗಾಲಕ್ಕೆ ಕಿಚ್ಚಿಡುವನೆಂದು ಹೇಳುತ್ತಿದ್ದರೂ ಮಗನ ಚಿಂತೆ ಶಂಕರಿಗೆ ಮಟ್ಟಿಗೆ ಎಂದು ನುಡಿಯುತ್ತಿದ್ದರೂ ತಪ್ಪುಮಾಡಿದ ಮಗನನ್ನು ನೋಡುವ ಹಂಬಲ ಅಂತರ್ಯದಲ್ಲಿ ಇತ್ತು. 'ಆತ ದುರ್ಮಾರ್ಗಿಯಾಗಲಿ, ಅವನು ಅನುಭವಿಸಲಿ, ದುರುಪಯೋಗಪಡಿಸಲಿ ಹಿರಿಯರು ಸಂಪಾದಿಸಿದ್ದು ಅವನಿಗೆ ಸೇರಿದುದು. ಅದು ಅವನದೇ! ಎಂಬುದು ಅವರ ಮನಸ್ಸು.

ಅವರ ಮಾತು ಮಾತಿನಲ್ಲಿ ಕಂಡುಬರುವ ಹಾಸ್ಯ ಆ ದಂಪತಿಗಳ ಸುಖಜೀವನದ ಹೆಗ್ಗುರುತು. ಗಂಡಹೆಂಡಿರಲ್ಲಿ ಯಾರೂ ಮಾತಿಗೆ ಸೋಲುವಂತಿರಲಿಲ್ಲ. ಹಾಸ್ಯ ಮಾಡುವುದರಲ್ಲಿಯೂ ಯಾರಿಗೆ ಯಾರೂ ಕಡಿಮೆಯಲ್ಲ. ಶಂಕರಿಯ ಸಸ್ಯದ ಪ್ರಸಂಗ, ತಮ್ಮ ಮಾವನಿಗೆ ಅಳಿಯನನ್ನು ಹುಡುಕಿಕೊಟ್ಟರೀತಿ, ದೇರಣ್ಣನನ್ನು ಹಾಸ್ಯದ ಕಡಲಿಗೆ ನೂಕಲು 'ಶಿವರಾಮು'ವಿಗೆ ತಹಶೀಲ್ದಾರರ ಪದವಿ, ದೇರಣ್ಣನನ್ನು ವ್ಯಾಘ್ರ ಯಜ್ಞದ ಶ್ವಾನಹವಿಸ್ಸಿನ ಜೊತೆಗೆ ಸೇರಿಸಿದ್ದು, ನಾರಾಯಣನ ಪರ ವಕಾಲತ್ತಿಗೆ ಬಟ್ಯನಿಗೆ ಪಾಯಸ, ಅವರು ತಮ್ಮ ಪತ್ನಿಯೊಡನೆ ಮಾತಾಡುವಾಗ ಹೊರ ಹೊಮ್ಮುತ್ತಿದ್ದ ಹಾಸ್ಯ— ಇವನ್ನು ಪುಸ್ತಕ ಓದಿಯೇ ಅನುಭವಿಸಬೇಕು.

ಶಂಕರಮ್ಮ ಗೋಪಾಲಯ್ಯನವರಿಗೆ ತಕ್ಕ ಹೆಂಡತಿ. ಬಡತನದ ಬುಟ್ಟಿಯಲ್ಲಿ ಬಳೆದರೂ ಐಶ್ವರ್ಯವಂತ ಮನೆಯೊಳಗೆ ಸರಿಹೊಂದಿಕೊಂಡ ಹೆಣ್ಣುಮಗಳು ಆಕೆ. ಗಂಡಹೆಂಡಿರು ಜೀವನಸಂಗ್ರಾಮದಲ್ಲಿ ಒಟ್ಟಿಗೆ ಸಮನಾಗಿ ದುಡಿದವರಾದರೂ ಅದರ ಶ್ರಮ ಹೆಂಡತಿಯ ಮುಖದ ಮೇಲೆ ಕಟುವಾಗಿ ಮೂಡಿ ಗಂಡನಿಗಿಂತ ಹತ್ತು ವರುಷ ಹೆಚ್ಚಿನವಳಾಗಿ ಕಾಣುವಂತೆ ಮಾಡಿತ್ತು. ಅವರ ನಿತ್ಯಕಾದಾಟ ಅವರ ಪ್ರೇಮಾಭಿ

ವೃದ್ಧಿಗೆ ಕಾರಣವಾಗಿ ಅವರು ಸಂಸಾರದಲ್ಲಿ ನಿತ್ಯವೂ ಹೊಸತನ್ನೇ ಕಂಡರು. ಮೊದಲು ಗಂಡನೊಡನೆ ಮಾತಾಡಲು ನಾಚಿಕೆಪಡುತ್ತಿದ್ದರೂ, ತಾಯಿಯ ಉಪದೇಶದಂತೆ ಗಂಡನನ್ನು ಮೀರಿಸುವ ಮಾತುಗಾತಿಯಾದಳು. ಅವಳ ಜೀವನವನ್ನು ಕೊರೆಯುತ್ತಿದ್ದುದು ಮಗಳ ಮರಣದ ದುಃಖಕ್ಕಿಂತ ಮಗನ ಅಗಲಿಕೆಯ ವೇದನೆ. ಆದ್ದರಿಂದ ಹೊಸಬನನ್ನು ಕಂಡರೆ ಮಗನನ್ನು ಕಂಡಷ್ಟು ಪ್ರೇಮ. ನಾರಾಯಣನ ಮಕ್ಕಳ ಮೇಲಿನ ಪ್ರೇಮದಿಂದ ಜೀವನದ ಬೇಸರವನ್ನು ಹೋಗಲಾಡಿಸುವ ಅಭ್ಯಾಸ ಮಾಡಿಕೊಂಡರು.

ನಾರಾಯಣಯ್ಯ ಆತನ ಹೆಂಡತಿ, ಬಟ್ಯ, ದೇರಣ್ಣ, ಇವರ ಪಾತ್ರ ಕಥಾನಾಯಕ ನಾಯಕಿಯರ ಜೀವನ ಚಿತ್ರಕ್ಕೆ ಹಿನ್ನೆಲೆ. ಅವರಿಂದ ಕಾದಂಬರಿಯ ಬೆಳವಣಿಗೆಗೆ ಸಹಾಯವಾಗಿದೆ. ನಾರಾಯಣಯ್ಯ ಗೋಪಾಲಯ್ಯನವರ ಸಾಹಸ ಕಾರ್ಯಗಳನ್ನೂ ಉದಾರ ಮನಸ್ಸನ್ನೂ ವರ್ಣಿಸುವವನು. ಆತ ಬಣ್ಣ ಹಚ್ಚಿಸಿ ಬಣ್ಣಿಸಿದರೂ ತಪ್ಪಿಲ್ಲ. ಅವನಿಗೆ ಅವರು ದೇವರು. ಅವರಿಗೆ ಆತ ಕೃತಜ್ಞ. ಆದರೆ ಅವರ ಮಗನ ವಿಷಯದಲ್ಲಿ ಸಂದೇಹ : ತನ್ನ ಸತಿಗೆ ಉಂಟಾದ ಅನುಭವದಿಂದ.

ಅಲ್ಲಲ್ಲಿ ಬರುವ ಹುಲಿಯ ಬೇಟೆಯ ವಿಷಯ, ಅದನ್ನು ಬೇಟೆ ಆಡಿದ ಚಿತ್ರ, ದೇರಣ್ಣನ ಬೇಟೆಯ ಅನುಭವದಲ್ಲಿ ಕಂಡುಬರುವ ಸ್ವಾರ್ಥತೆ, ದೇವತೆ 'ಕಲ್ಕುಡ'ನ ವಿಚಾರ ಕತೆಯಪುಷ್ಟಿಗೆ ಸಹಾಯಕವೇ. ಒಂದು ಬೆಟ್ಟದ ಗಟ್ಟಿಜೀವನದ ಸಾಹಸಕ್ಕೆ ನಿದರ್ಶನವಾದರೆ, ಮತ್ತೊಂದು ಹಳೆಯ ಸಂಪ್ರದಾಯದ ಭಯಕ್ಕೆ ಹೆಗ್ಗುರುತು.

ಕಾದಂಬರಿಯ ಶೈಲಿ ಬಿಗಿ. ಕನ್ನಡದಲ್ಲಿ ಮಂಗಳೂರಿನ ಭಾಷಾಛಾಯೆ ತಕ್ಕ ಮಟ್ಟಿಗೆ ತನ್ನ ಚಹರೆಯನ್ನು ತೋರ್ಪಡಿಸಿಕೊಂಡೇ ಇದೆ ಎನ್ನಬೇಕು. ಆದರೆ ಕಾದಂಬರಿಕಾರರು, ಹವ್ಯಕರ ಅಚ್ಚಗನ್ನಡವನ್ನೇ ಬರೆಯದೆ ಉಪಕಾರ ಮಾಡಿ ಕೊಟ್ಟಿದ್ದಾರೆ. ಶೈಲಿಯಲ್ಲಿ ಕನ್ನಡನುಡಿಯ ಕೆಲವು ನುಡಿಗಟ್ಟು ಕಂಡುಬರುತ್ತವೆ. ಪದಗಳನೇಕ ಬೆರತಿವೆ. ಉದಾ. ಫಜೀತಿ; ಬಚಾವು; ಬರಕತ್ತು. 'ಮರಳಿಮಣ್ಣಿಗೆ' ಯಲ್ಲಿ ಕೊಟ್ಟಿರುವಂತೆ ಕೆಲವು ರೂಢಿಪದಗಳ ಅರ್ಥ ಪುಸ್ತಕದ ಕೊನೆಯಲ್ಲಿ ಕೊಟ್ಟಿದ್ದರೆ ಹೆಚ್ಚು ಅನುಕೂಲವಾಗುತ್ತಿತ್ತು. ಉದಾ. ದಂಬೆ; ಬರೆಕರೆ; ಪಿಜ್ಜ; ಕೊಗಳುಕಟ್ಟೆ; ಜಂಬರ.

ಶ್ರೀಕಾರಂತರ ಕಾದಂಬರಿಗಳಲ್ಲಿ ಇದು ಉತ್ತಮವಾದುದೊಂದೆನ್ನಬಹುದು. ಗೋಪಾಲಯ್ಯ ಶಂಕರಮ್ಮ ಸಾಹಿತ್ಯದಲ್ಲಲ್ಲದೆ ಬದುಕಿನಲ್ಲೂ ಪರಿಚಯಸ್ಥರಾಗಿ ಆದರ್ಶಜೀವಿಗಳಾಗಿ ನಿಲ್ಲುವ ವ್ಯಕ್ತಿಗಳು.

ಆರ್. ಎಸ್. ರಾಮರಾವ್.

# ಸಂಪಾದಕೀಯ

ಈ ಪತ್ರಿಕೆ ಹುಟ್ಟುವ ಸಮಯದಲ್ಲಿ ಅದಕ್ಕೆ ಕಾರಣರಾದ ಶ್ರೀಮಾನ್ (ಈಗ ಪ್ರೊಫೆಸರ್) ಎ. ಆರ್. ಕೃಷ್ಣಶಾಸ್ತ್ರಿಗಳವರಿಗೆ ಒಂದು ಧೈರ್ಯವಿತ್ತಂತೆ: ಹೇಗಿದ್ದರೂ ತಾವು ವಿದ್ಯಾರ್ಥಿಗಳಿಂದ ಪ್ರಬಂಧ ಬರಸುವುದುಂಟು. ಆ ಪ್ರಬಂಧಗಳಲ್ಲಿ ಉತ್ತಮವಾದವುಗಳನ್ನು ಆರಿಸಿ ಪ್ರಕಟಿಸಿದರಾಯಿತು. ಜೊತೆಗೆ ತರಗತಿಗಳಿಗೆ ಪಾಠಗಳನ್ನು ಹೇಳುವಾಗ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೆಲವು ಸಂಗತಿಗಳನ್ನು ಒಂದು ಕ್ರಮದಲ್ಲಿ ಸಿದ್ಧಮಾಡಿಕೊಳ್ಳಬೇಕಾಗುವುದು; ಎರಡನ್ನೂ ಸೇರಿಸಿದರೆ ೩೨ ಪುಟ ಪ್ರಬುದ್ಧ ಕರ್ಣಾಟಕದ ಕೆಲಸ ಸಾಧಿತವಾಗುತ್ತದೆ ಎಂದು. ಆ ಧೈರ್ಯ ಮೊದಮೊದಲು ಸಾರ್ಥಕವಾಯಿತು. ಶ್ರೀ|| ಗಳಾದ ಸಿ. ಕೆ. ವೆಂಕಟರಾಮಯ್ಯ, ಎಸ್. ವಿ. ರಂಗಣ್ಣ, ಪಿ. ಕೃಷ್ಣರಾವ್ ಮುಂತಾದ ಉತ್ಸಾಹೀಯುವಕರ ಬರವಣಿಗೆ ಪತ್ರಿಕೆಗೆ ದೊರೆಯಿತು. ಶಾಸ್ತ್ರಿಗಳೇ ಕಾವ್ಯಾವಲೋಕನಾದಿಗಳಲ್ಲಿ ತೊಡಗಿ ಒಂದು ಸಂಪ್ರದಾಯವನ್ನು ಬಳಕೆಗೆ ತಂದರು. ಬರವಣಿಗೆ, ದೃಷ್ಟಿಗಳಲ್ಲಿ ಹೊಸ ನಡೆಯ ಪ್ರವರ್ತನೆಯಾಗಿ ಕನ್ನಡಕ್ಕೆ ಒಂದು ವಿಶೇಷ ಸೇವೆ ಸಂದಿತು. ಗಾತ್ರದಲ್ಲಿ ಚಿಕ್ಕದಾಗಿದ್ದ ಪ್ರಬುದ್ಧಕರ್ಣಾಟಕ ಅವರ ಕೈಯಲ್ಲಿಯೇ ಬೆಳೆದು ದೊಡ್ಡದಾಗಿದೆ. ಮಿತವಾಗಿ ಒದಗಿಸಬೇಕಾಗಿದ್ದ ಆಹಾರ ಇವೊತ್ತು ಹೆಚ್ಚಾಗಿಬೇಕಾಗಿದೆ. ಅದಕ್ಕೆ ತಕ್ಕಂತೆ ವಿವಿಧತೆ ವಿಸ್ತಾರಗಳೂ ಹೆಚ್ಚಿವೆಯೆಂಬುದನ್ನು ನೆನಪಿನಲ್ಲಿಟ್ಟರೆ, ಕೇವಲ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಭಕ್ತವರ್ಗಮಾತ್ರವೇ ಅಲ್ಲ ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾಮಂಡಲವೆಲ್ಲ ಇದಕ್ಕೆ ತೆರೆದಿದೆ — ಎಂಬುದನ್ನೂ ಎಣಿಕೆಗೆ ತಂದುಕೊಂಡರೆ ಈ ಆಹಾರ ದೊರಕಿಸುವುದು ಕಷ್ಟವಾಗಬಾರದು. ಆದರೆ ಕನ್ನಡ ಪತ್ರಿಕೆಗೆ ಯಾವ ಲೋಕಮಾನ್ಯತೆ ಇದೆ? ಅದರಲ್ಲಿ ಪ್ರಕಟಿಸಿದೆಯೆಂದರೆ ಕೇಳುವವರು ಯಾರು? ಸರಕಾರಕ್ಕಾಗಲಿ, ಭರತ ಖಂಡದಲ್ಲಿಯಾಗಲಿ, ಹೊರಪ್ರಪಂಚದಲ್ಲಿಯಾಗಲಿ ಗಣನೆ ಬರುವ ಹಾಗಿಲ್ಲ. ಹೀಗಾಗಿ ಹೊಸ ಯೋಚನೆಯ ಫಲವೆಲ್ಲ ಕನ್ನಡಕ್ಕೆ ದೊರೆಯದೆ ಬೇರೆ ಭಾಷೆಗೆ, ಬೇರೆ ಪತ್ರಿಕೆಗಳಿಗೆ ಹೊರ ಪ್ರಯೋಜನಕ್ಕೆ ಒದಗುವುದು ಸಹಜ. ಇದು ತಪ್ಪೆಂದು ಹೇಳುವುದು ಅನ್ಯಾಯ. ನಮ್ಮ ಭಾಷೆಯನ್ನು ಭರತಖಂಡದಲ್ಲಿ ಒಂದು ಮರ್ಯಾದೆಯ ಸ್ಥಾನಕ್ಕೆ ತಂದ ಹೊರತು, ಅದರ ಗೌರವಕ್ಕೆ ಬೇರೆಯವರಿಂದ ಕಾಣಿಕೆ, ಮಣಿತ ಬರುವುದು ಶಕ್ಯವಿಲ್ಲ. ಅವು ಬಂದ ಹೊರತು, ಇಲ್ಲಿ ಬರೆದುದನ್ನು ಜನರು ನಿರೀಕ್ಷಿಸಲಾರರು; ಅದನ್ನು ಓದಲು ತವಕಪಡುತ್ತಿರಲಾರರು.

ಆದರೆ ಅದನ್ನು ಸಾಧಿಸಿಕೊಡಬೇಕಾಗಿರುವವರು ನಮ್ಮ ವಿದ್ವಾಂಸರೇ ಎಂಬುದನ್ನು ಮರೆಯಲಾಗುವುದಿಲ್ಲ. ಒಂದು ಕಾಲದಲ್ಲಿ ಇಲ್ಲಿನ ಸಾಹಿತ್ಯಾದಿ ಲೇಖನ ಸಂಪತ್ತನ್ನು ದೇಶವಿದೇಶಗಳವರು ಸಂಗ್ರಹಿಸಿದರು; ಇಂಗ್ಲಿಷಿಗೆ ಭಾಷಾಂತರ ಮಾಡಿಕೊಂಡರು. ಇಂದೂ ಬಂಗಾಳಿ, ಮರಾಠಿ ಭಾಷೆಗಳ ವರ್ಚಸ್ವಿತೆಯಿಂದ ಅವಕ್ಕೆ ಗಣ್ಯತೆ ದೊರೆತಿವೆ. ಅದಕ್ಕೆ ಕಾರಣ, ಅಲ್ಲಿನ ಲೇಖಕರು ಸಾಹಿತಿಗಳು. ಮೊದಲು ತಮ್ಮ ಬರಹವನ್ನು ಅವರು ತಮ್ಮ ನುಡಿಯಲ್ಲಿ ಮಾಡುತ್ತಾರೆ; ಆ ಮೇಲೆ ಇಂಗ್ಲಿಷು ಮಾಡಿಕೊಳ್ಳುತ್ತಾರೆ. ಕೆಲವು ಸಮಯ ಇಂಗ್ಲಿಷಿನದಕ್ಕೆ ಮೂಲವಾದ ಲೇಖನ ತಮ್ಮ ಭಾಷೆಯಲ್ಲಿದೆ, ವಿವರಗಳಿಗೆ ಅದನ್ನು ನೋಡಿರೆಂದು ಬರೆಯುವುದುಂಟು. ಪ್ರಪಂಚದ ಮಾನ್ಯಭಾಷೆಗಳ ಸಂಪ್ರದಾಯವೆಲ್ಲ ಹೀಗೆ. ವಿಷಯಪರಿಶೀಲನೆಯಲ್ಲಿ ಆಸಕ್ತಿಯಿರುವವರು ಆ ಭಾಷೆಯನ್ನು ಕಲಿತು ಉಪಯೋಗ ಪಡೆದುಕೊಳ್ಳಬೇಕಾದ ಅವಶ್ಯ ಉಂಟಾಗುವುದು. ಕನ್ನಡಕ್ಕೆ ಆ ಗೌರವವನ್ನೂ ಸ್ಥಾನವನ್ನೂ ಗಳಿಸಿಕೊಡುವ ಪುಣ್ಯ ನಮ್ಮ ವಿದ್ವಾಂಸರ ಪಾಲಿಗೆ ಎಂದು ಬರುವುದೋ. ನಮ್ಮ ಹೊಲ, ಮನೆ, ತೋಟ ಎಂದು ತುಂಬಿ ಸಿಂಗರವಾದಾವೋ. ಇಲ್ಲಿನ ಬೆಳಸನ್ನು ಜಗತ್ತಿಗೆ ಎತ್ತಿತೋರಿಸಿ ಎಂದು ಪುನಃ ಮನ್ನಣೆ ಪಡೆದೇವೋ. ಗಿಡ ಚಿಗುರಿಟ್ಟು ಹೂತೊಟ್ಟ ಹೊರತು ಅದಕ್ಕೆ ಚೆಲುವಿಲ್ಲ. ಮೊಗ್ಗು ತನ್ನ ಕಾವಿನ ಮೇಲೆ ಬಿರಿದು ಅರಳುವುದಕ್ಕೆ ಆರಂಭಿಸಿತೆಂದರೆ ಅದರ ಚೆಲುವು, ಮೃದು, ಬಣ್ಣ, ಕಂಪುಗಳಿಗೆ ದುಂಬಿಗಳು ಮೋಹಿಸಿ ಅದಿರುವಲ್ಲಿಗೇ ಬರುತ್ತವೆ. ಅದಕ್ಕೆರಗಿ ಮಧುಪಾನ ಮಾಡಿ ಸೊಕ್ಕುತ್ತವೆ; ಮೊರೆಯುತ್ತವೆ. ಅದರ ಪರಿಮಳವನ್ನು ಗಾಳಿ ಹೊತ್ತು ಹತ್ತು ದಿಕ್ಕುಗಳಿಗೂ ಬೀರುತ್ತದೆ. ಹೂ ಅರಳಿದುದು ಆಗ ಸಾರ್ಥಕವಾಗುತ್ತದೆ. ಇದು ನಡೆದ ಹೊರತು, ಮಿಡಿ ಹುಟ್ಟದು, ಕಾಯಾಗದು, ತಿರುಳು ಬಲಿಯದು, ಹಣ್ಣಾಗದು, ಬಿತ್ತ ಬಲಿಯದು. ನಾಳಿನ ಬದುಕಿನ ಸತ್ತ್ವ ಸಿದ್ಧವಾಗದು. ಆ ಹೂ ಹೇಗೋ ಬಾಳ ಹೂವಿನ ಸಫಲತೆಯೂ ಹಾಗೆಯೇ ಆಗಬೇಕು. ಅಂಥ ಭಾಗ್ಯವನ್ನು ಬೆಳಸುವ ಕಾರ್ಯದ ಹೊಣೆಗಾರಿಕೆ ನಮ್ಮ ವಿದ್ವಾಂಸರ ಪಾಲಿಗೆ ಬಂದಿದೆ.

ಹತ್ತು ವರ್ಷಕಾಲ ವ್ರತನೇಮ ಹೊತ್ತು ಪ್ರಪಂಚದ ಸಾರಸಂಗ್ರಹಮಾಡಿ ತಿಳಿವಳಿಕೆಯನ್ನು ಕನ್ನಡ ಜನಕ್ಕೆ ಕನ್ನಡದಲ್ಲಿ ನೀಡಿದರೆ ಈಗ ಪರಭಾಷೆಗಳಲ್ಲಿ ಮಾತ್ರ ದೊರಕುವ ಸಂಪತ್ತಿ ಆ ಭಾಷೆತಿಳಿಯದ ಇವರಿಗೆ ಎಟುಕುವುದು. ನಮಗಿಂತ ಬುದ್ಧಿಶಕ್ತಿಯಲ್ಲಿ ಹೇಗೂ ಕೀಳಲ್ಲದ, ಆದರೆ ನಾನಾ ಕಾರಣಗಳಿಂದ ಅನ್ಯಭಾಷೆಗಳ ಅರಿವಿಲ್ಲದ ಮೇಧಾವಿಗಳಿಗೆ ಪ್ರಚೋದನ ಸಾಮಗ್ರಿಯೂ ಸಂಪುಷ್ಟಿಯೂ ದೊರೆಯುವುವು. ಅಲ್ಲಿಂದ ಮುಂದೆ ಸ್ವಂತವಾಗಿ ಅವರೇ ಯೋಚಿಸಿ ಲೋಕವನ್ನು ಹೊಸದಾಗಿ

ನೋಡುವ, ಬರೆಯುವ, ಮತ್ತು ಕಾರ್ಯವ್ಯವಸ್ಥೆ ಕೈಕೊಳ್ಳುವ ಆಸಕ್ತಿ ಅವರಿಗೆ ಬರುವುವು. ಅಂಥ ಕೆಲಸಗಾರವರ್ಗ ರಚಿತವಾಗುವಂತೆ ವಿಶ್ವವಿದ್ಯಾನಿಲಯಗಳಲ್ಲಿರುವ ಗೆಳೆಯರು ನೆರವು ಕೊಡಬೇಕಾಗಿದೆ.

ಎಲ್ಲೆಲ್ಲಿನ ವಿಷಯಗಳನ್ನೂ ಕೂಡಿಸಿ ತಿಳಿಸಿಕೊಡುವುದು ಒಂದು ಭಾಗ. ಆದರೆ ಅದೆಲ್ಲ ಎರವಲು ಸಂಪತ್ತು; ಅಲ್ಲಿಂದ ಇಲ್ಲಿಂದ ಎತ್ತಿತಂದ ಭಾಗ್ಯ. ಇದರಿಂದ ಹೊಟ್ಟೆಗೆ ಆಹಾರ ಸಿಕ್ಕುವುದು ನಿಜ. ಆದರೆ ಅದನ್ನು ಜೀರ್ಣಿಸಿಕೊಂಡು ರಕ್ತವಾಗಿ ಮಾಡಿಕೊಳ್ಳುವುದು ಕನ್ನಡಿಗರ ಕೆಲಸವಾಗುತ್ತದೆ. ಅದಕ್ಕಾಗಿ ಅವರ ಜೀರ್ಣ ಶಕ್ತಿಯನ್ನು ಕೂಡ ಕುದುರಿಸಬೇಕು. ಹೊಸ ಅಗ್ನಿಗಳನ್ನು ಹೊತ್ತಿಸಿ ಅದರಿಂದ ಹೊಸ ಪಾಕಗಳಿಳಿಯುವಂತೆ ಮಾಡಬೇಕು. ಜೊತೆಗೆ ಇನ್ನೊಂದು ಕಾರ್ಯಭಾಗವಿರುವುದು: ಈ ಕಾಲದ ಯೋಚನಾಮಾರ್ಗ; ಪರೀಕ್ಷಾ ಪ್ರಯತ್ನಗಳ ಸ್ವರೂಪ ಲಕ್ಷಣ, ವಿಧಾನ; ಜ್ಞಾನವಿಜ್ಞಾನಗಳ ಸಿದ್ಧಾಂತಮಾರ್ಗ, ವ್ಯಾಖ್ಯಾನವಿಧಾನ, ಯಂತ್ರ ನಿರ್ಮಾಣಕಾರ್ಯ — ಈ ಭಾಗಗಳ ಕಡೆಗೆ ಕೂಡ ನಮ್ಮವರ ಗಮನ ಹೋಗುವಂತೆ ಮಾಡಬೇಕು. ಸಾಧನ ಸಾಮಗ್ರಿಯನ್ನೂ, ಯಂತ್ರಭಾಗವನ್ನೂ, ದೃಷ್ಟಿರೀತಿಯನ್ನೂ, ವಿವೇಚನಾಶಕ್ತಿಯನ್ನೂ ಒದಗಿಸಿಕೊಟ್ಟರೆ ಒಂದು ಹೊಸ ಮೊನೆಯಿಂದಲೂ ಶ್ರದ್ಧೆಯಿಂದಲೂ ಜನ ಸ್ವಂತವಾಗಿ ಸಾಹಸಮಾಡಬಲ್ಲವರಾಗುತ್ತಾರೆ. ಗುರಿಗಳು ಯಾವುವು? ಸಾಧನಗಳಾವುವು? ಪ್ರಯೋಗರೀತಿ ಹೇಗೆ? ಯಾವ ಯಾವುದರ ಬೆಲೆ ಎಷ್ಟು? ಯಾವುದು ಪ್ರಧಾನ, ಯಾವುದು ಗೌಣ? ಯಾವುದು ತತ್ವ? ಯಾವುದು ವಾದ ಅಥವಾ ಯುಕ್ತಿ ಮಾತ್ರ? ಯಾವುದು ಸತ್ಯ? ಯಾವುದು ಅಭಿಪ್ರಾಯ? ಯಾವುದು ಬರಿಯ ನಂಬಿಕೆ ಅಥವಾ ಪಕ್ಷಪಾತ? ಯಾವುದು ಖಚಿತವಾಗಿ ಸಿದ್ಧವಾಗಿರುವ ಸಂಪತ್ತು? ಎಂಬವುಗಳ ಪೂರ್ತಿ ತಿಳಿವಳಿಕೆ ಮಾಡಿಕೊಡಬೇಕಾದ ಹೊಣೆ ವಿಶ್ವವಿದ್ಯಾನಿಲಯದವರದು.

* * *

ಮೊನ್ನೆ 'ರಾಜಕಾರಣ ಪಟುಗಳು ಮತ್ತು ಸಾಹಿತ್ಯ' ಎಂಬ ವಿಷಯವನ್ನು ಕುರಿತು ಮಾತನಾಡುತ್ತ ಪ್ರಿನ್ಸಿಪಲ್ ಶ್ರೀ|| ಎ. ಬಿ. ಮ್ಯಾಕಿಂಟಾಷ್ ಅವರು ಈ ಎರಡು ವಿಷಯಗಳಿಗೂ ಯೂರೋಪಿನಲ್ಲಿ, ಇಂಗ್ಲೆಂಡಿನಲ್ಲಿ ಹೇಗೆ ಸಂಬಂಧವಿದೆ ಎಂದು ಹೇಳುತ್ತ, ವಿಶ್ವವಿದ್ಯಾನಿಲಯದಲ್ಲಿ ಬಲಿಯುವ ದೃಷ್ಟಿ ಮತ್ತು ಶೀಲ ಹೇಗೆ ರಾಜಕೀಯಕ್ಕೆ ಪೋಷಕವಾಗುತ್ತವೆ ಎಂದು ವಿವರಿಸಿದರು. ವಿನೋದಕ್ಕೇ ಸ್ಫೂರ್ತಿಗೇ ಮಾತ್ರವಲ್ಲದೆ ಸಾಹಿತ್ಯ ಜನಜೀವನದ ಉತ್ಥಾನತೆಗೂ ಹೇಗೆ ಸಾಧಕವಾಗುತ್ತದೆ ಎಂದು ವಿವರಿಸಿದರು. ಅದೇ ಸಮಯದಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ಸ್ಥಾನಪತಿಗಳಾಗಿ ಉತ್ತಮ ಭಾರತಭಕ್ತರಾಗಿದ್ದ ಸರ್ ಆಶುತೋಷ ಮುಖರ್ಜಿಯವರು

ಆಡಿದ ಮಾತೊಂದನ್ನು ಎತ್ತಿ ಹೇಳಿದರು. ರಾಜಕೀಯ ರಂಗಕ್ಕೆ ವಿಶ್ವವಿದ್ಯಾನಿಲಯಗಳಲ್ಲಿ ರೂಪುಗೊಳ್ಳುವ ದೃಷ್ಟಿಸಾಕಲ್ಯವೂ, ಮನಸ್ಸಿನ ವಿಶಾಲತೆಯೂ, ಪರಾಭಿಪ್ರಾಯ ಸಹನೆಯೂ, ದೃಢಶೀಲತೆಯೂ ಅಗತ್ಯ. ಹಾಗೆಯೇ ಇಲ್ಲಿಸವರು ಮಾನವ ವರ್ಗದ ಮತ್ತು ಬುದ್ಧಿಜೀವನದ ನಾಯಕರಾಗಲು ಬಯಸುವಂತೆಯೂ ರಾಜಕಾರ್ಯಮಹಾಮಂಡಲಿಗಳಲ್ಲಿ ಗೌರವಸ್ಥಾನ ಪಡೆಯುವಂತೆಯೂ ಆಗಬೇಕು — ಎಂಬುದು ಅವರ ಉಕ್ತಿ. ರಾಜಕೀಯದ ನಾಯಕರನ್ನು ತಯಾರಿಸುವುದು ಒಂದು ಪಟ್ಟಾದರೆ, ಜ್ಞಾನಪ್ರಪಂಚದಲ್ಲಿ ನಾಯಕತ್ವ ವಹಿಸುವುದು ಇನ್ನೊಂದು ಪಟ್ಟು ಕೂಡಿ ವಿಶ್ವವಿದ್ಯಾನಿಲಯದ ಬದುಕು ಆಗ ಸಾರ್ಥಕವಾಗುತ್ತದೆ.

ನಮ್ಮ ಜನ ಎಲ್ಲಕ್ಕೂ ಹೆರವರ ಕೈಕಾಯದಂತೆ ಸಮ್ಮ ಬಾಳನ್ನು ನಾವು ಉತ್ತಮಪಡಿಸಿಕೊಳ್ಳಲು ಯಾರು ಮುಂದೆ ಬಂದು ನೆರವು ಕೊಡುತ್ತಾರೆಯೊ ಅವರಿಗೆ ನಾಡಿನ ಹರಕೆಯಿದೆ.

***

ಕನ್ನಡನಾಡು ಒಂದು : ಇವೊತ್ತಿನ ದಿನ ಹಲವು ಪ್ರಾಂತಗಳ ಮತ್ತು ಹಲವು ದೇಶೀಯ ಆಡಳಿತಗಳ ಮರೆಯಲ್ಲಿ ಸೊರಗಿ ಬಿದ್ದಿದ್ದರೂ ಅದು ಒಂದು. ನಾಳೆಗೆ ಭಾಷಾಪ್ರಾಂತಗಳು ನಿರ್ಮಾಣವಾಗುತ್ತವೆ. ಆಗ್ಗೆ ಗಡಿಸೀಮೆಗಳಲ್ಲಿರುವ ಕನ್ನಡಿಗರು ತಮ್ಮದಾದುದನ್ನು ಕನ್ನಡಕ್ಕೆ ಉಳಿಸಿಕೊಳ್ಳಬೇಕಾಗುತ್ತದೆ. ಇನ್ನೊಬ್ಬರ ನೆಲವೂ ಸಂಪತ್ತೂ ನಮಗೆ ಬೇಡ. ಹಾಗೆಯೇ ನಮ್ಮದನ್ನು ನಮ್ಮದಾಗಿಟ್ಟುಕೊಳ್ಳುವುದರಲ್ಲಿ ಉದಾಸೀನತೆ ಕೂಡದು. ಈ ವ್ಯವಹಾರದಲ್ಲಿ ನೆರೆಯ ನುಡಿಗಳವರೊಡನೆ ಸ್ನೇಹದ ಹುರುಡುಮಾಡಿ ನಮ್ಮದನ್ನು ನಾವು ಉಳಿಸಿಕೊಂಡು ಹಸಮಾಡಿಕೊಳ್ಳೋಣ. ಅವರು ನಮ್ಮಲ್ಲಿ ಬಂದು ಆಕ್ರೋಶಗಳನ್ನು ಬಿತ್ತುವುದು, ನಾವು ಅವರಲ್ಲಿಗೆ ನುಗ್ಗಿ ಉದ್ವೇಗವನ್ನು ಹುಟ್ಟಿಸುವುದು ಎರಡೂ ಸರಿಯಲ್ಲ. ಹೊಸ ಪ್ರಾಂತಗಳು ನಿರ್ಮಾಣವಾಗುವಾಗ್ಗೆ ಗಡಿಯ ವಿಭಾಗ ಅಥವಾ ವಿಧಾಯಕ ಮಂಡಲಿಗಳು ಏರ್ಪಡುತ್ತವೆ. ಆ ಹೊತ್ತಿಗೆ ಬಳ್ಳಾರಿ, ನೀಲಗಿರಿ, ಬೆಳಗಾವಿ ಮುಂತಾದ ಗಡಿ ಭಾಗಗಳಿಗೆ ಸಂಬಂಧಪಟ್ಟ ಎಲ್ಲ ವಾಗ್ವಾದಗಳೂ ಶಾಂತವಾಗುವುವು. ಆ ವರೆಗೂ ನಮ್ಮವರು ಅಭಿಮಾನದಿಂದ, ಎಚ್ಚರಿಕೆಯಿಂದ, ತಮ್ಮ ನಿಟ್ಟನ್ನು ತಾವು ಕಾಪಾಡಿಕೊಳ್ಳಬೇಕು. ಹೀಗೆಂದ ಮಾತ್ರಕ್ಕೇ ವೈರಗಳನ್ನು ಕಟ್ಟಿಕೊಂಡು ನೆರೆಯವರಿಗೆ ಅಸಹನೆ ತೋರಿಸಹೋಗಬಾರದು. ಎಲ್ಲ ಪ್ರಾಂತಗಳೂ ಭರತಖಂಡದ ಭಾಗಗಳು ; ಎಲ್ಲ ಅಂಗಗಳ ಪುಷ್ಟಿಯೂ ಶಕ್ತಿಯೂ ಒಟ್ಟು ನಾಡಿನ ಪುಷ್ಟಿಶಕ್ತಿಗಳಿಗೆ ಆಧಾರ. ಪ್ರತಿಭಾಗಕ್ಕೂ ಅಲ್ಲಿನವರ ದುಡಿತ, ಭಕ್ತಿ ಬೇಕು. ಪ್ರತಿಭಾಗಕ್ಕೂ ಒಂದು ಚರಿತ್ರೆ, ಶೀಲ, ವಿಶೇಷಲಕ್ಷಣ ಇವೆ.

ಆ ವಿಶೇಷ ಲಕ್ಷಣವನ್ನು ಬೆಳಸಿ ಅದರದೇ ಆದ ಕಾಣಿಕೆಯನ್ನು ಅದು ಭರತಖಂಡದ ಜೀವನಕ್ಕೂ ಸಂಪತ್ತಿಗೂ ಸೇರಿಸಬೇಕಾಗಿದೆ. ಆದ್ದರಿಂದ ಕ್ಷೇತ್ರವ್ಯವಸ್ಥೆ ಮತ್ತು ಕೆಲಸಗಾರರ ನಿಷ್ಕರ್ಷೆ ಖಚಿತವಾಗಿ ಮಾಡಿಕೊಳ್ಳಬೇಕು. ಅರೆಭಕ್ತಿಗಳಿಂದ ಎಂದೂ, ಎಲ್ಲೂ, ಯಾವ ಪ್ರಯೋಜನವೂ ಇಲ್ಲ. ಒಂದು ಉದಾರಾರ್ಥದಲ್ಲಿ, ಎಲ್ಲಕ್ಕೂ ಸಂಬಂಧಪಟ್ಟ ವಿಶ್ವಾಸ ಅತ್ಯುತ್ತಮವಾದ್ದಾದರೂ, ವ್ಯವಹಾರ ಜೀವನದಲ್ಲಿ ಎಲ್ಲಕ್ಕೂ ಸೇರಿರುವುದು ಯಾವುದಕ್ಕೂ ನಿಷ್ಕರ್ಷೆಯಾಗಿ ಸೇರದಂತಾಗುತ್ತದೆ. ಕೆಲಸ ಜಾಳು ಬೀಳುತ್ತದೆ. ಆದುದರಿಂದಲೇ ಬಳ್ಳಾರಿಯವರ ಆಸೆ ಆಕಾಂಕ್ಷೆಗಳು ಕನ್ನಡನಾಡಿನ ವರವು. ಅಲ್ಲಿ ನಡೆದ ಆಂಧ್ರ ಸಮ್ಮೇಳನವು ಕನ್ನಡಿಗರಿಗೆ ಆಶ್ವಾಸನ ಕೊಟ್ಟುದಕ್ಕಾಗಿ ಆಂಧ್ರ ಸೋದರರಿಗೆ ನಾವು ಋಣಿಗಳಾಗಿದ್ದೇವೆ.

***

ಯುದ್ಧಾನಂತರ ಜಗತ್ತಿನ ಜೀವನದ ಪುನರ್ರಚನೆಯಾಗಬೇಕಾಗುತ್ತದೆ; ಯಾವ ಮಂತ್ರ ತಂತ್ರಗಳಿಗೆ ಒಳಪಟ್ಟಾಗುತ್ತದೆಯೊ ನೋಡಬೇಕು. ದುರ್ಬಲರಾದ, ಶಕ್ತಿ ವ್ಯವಸ್ಥೆಗಳಿಲ್ಲದ, ಶಕ್ತವಾಗಿ ಕಾರ್ಯಕಾರಿಯಾಗಿ ಮಾತನಾಡಲಾರದ ನಮ್ಮಂಥ ದೇಶಗಳವರ ಧ್ವನಿ ಲೋಕದ ಸಭೆಗಳಲ್ಲಿ ಕೇಳಿಸಲಾರದು. 'ನಾಯಂ ಆತ್ಮಾ ಬಲ ಹೀನೇನ ಲಭ್ಯಃ' ಎಂಬ ಉಕ್ತಿ ಆತ್ಮವೊಂದಕ್ಕೇ ಅಲ್ಲದೆ ಎಲ್ಲ ಬಗೆಯ ವೀರಜೀವ ನಕ್ಕೂ ಸಂಬಂಧಿಸುವುದು. ಯಾರಿಗೆ ದೇಹದ, ಬುದ್ಧಿಯ, ಆತ್ಮದ, ಬಲವಿಲ್ಲವೊ ಸುವ್ಯವಸ್ಥ ಸಂಘಟಿತ ಕಾರ್ಯಶಕ್ತಿಯಿಲ್ಲವೊ ಅಂಥವರಿಗೆ ಇಹವೂ ಇಲ್ಲ ಪರವೂ ಇಲ್ಲ. ಅಶಕ್ತರಾದವರ ಮಾತನ್ನು ಕೇಳುವವರು ಯಾರು? ಸಿರಿವಂತರಲ್ಲದವರು ಇನ್ನೊಬ್ಬರಿಗೆ ಯಾವ ಸಿರಿಯನ್ನು ಕೊಟ್ಟಾರು? ಸ್ವಯಂದಕ್ಷರಾಗಿಲ್ಲದವರು ಯಾರ ಮನ್ನಣೆಯನ್ನು ಗಳಿಸಿಯಾರು? ಆದುದರಿಂದಲೇ ಈ ನಾಡಿನ ಜೀವನದ ತಿರುಳು ಪುಷ್ಟಿಗೊಳ್ಳಬೇಕೆಂದು ನಾಡಿನ ಹಿರಿಯರೆಲ್ಲ ಹೇಳುತ್ತಿರುವುದು.

ಇದಕ್ಕೆ ಪರಿಸ್ಥಿತಿಯ ಅರಿವಾಗಬೇಕು. ನಮ್ಮ ಸುತ್ತಮುತ್ತ ಯಾವ ಬಗೆಯ ಪ್ರಭಾವ ಮಂಡಲಗಳು ಹುಟ್ಟಿಕೊಳ್ಳುತ್ತಿವೆ? ಅವಕ್ಕೆ ನಮ್ಮ ಮೇಲೆ ಯಾವ ಅಧಿಕಾರ ಉಂಟಾಗುತ್ತದೆ ಎಂಬುವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಇದು ಹೊರಗಿನ ಪ್ರಭಾವಗಳನ್ನು ಕುರಿತ ಮಾತಾದರೆ, ಒಳಗೆ ನಾವು ನಮ್ಮ ಬದುಕನ್ನು ಹೇಗೆ ತಿದ್ದಿಕೊಳ್ಳುತ್ತೇವೆ? ಯಾವ ಭಾಗಗಳನ್ನು ಹೇಗೆ ಬಲಪಡಿಸಿಕೊಳ್ಳುತ್ತೇವೆ? ಎಂಬುದು ಇದೇ ಕೆಲಸದ ಇನ್ನೊಂದು ಮುಖವಾಗುತ್ತದೆ. ಒಳಗೆ ಜೀವನೋತ್ಸಾಹವೂ, ಅದಕ್ಕೆ ಸಹಾಯಕವಾದ ಆರ್ಥಿಕಸಂಪುಷ್ಟಿಯ ತಿಳಿವಳಿಕೆಯೂ ಬೆಳೆಯವಾದರೆ ಇಲ್ಲಿನ ಬದುಕು ಜಡವಾಗುತ್ತದೆ; ಅದನ್ನು ಉಳಿಸಿಕೊಳ್ಳುವುದು ಕಷ್ಟವಾಗುತ್ತದೆ.

***

ನಮ್ಮ ನಾಡು ಹಳ್ಳಿಗಳ ನಾಡು. ಕನ್ನಡನಾಡಿನ ಸುಮಾರು ೨೮,೦೦೦ ಹಳ್ಳಿಗಳು ಜೇನುಗೂಡುಗಳಂತೆ ಬಾಳು ಬಾಳಿದ ಹೊರತು ಈ ಕೆಲಸ ಆಗದು. ಪ್ರತಿ ಹಳ್ಳಿಯಲ್ಲಿಯೂ ಸಂಪತ್ತು, ಶುಚಿ, ವಿದ್ಯಾಶಿಕ್ಷಣ, ಸಮಾಜ ಮತ್ತು ಧಾರ್ಮಿಕ ಜೀವನ, ರಾಜಕೀಯ ಕಟ್ಟು, ಲೋಕಸಂಪರ್ಕ, ಸಮರಸ ಜೀವನ ಇವು ರೂಢಿಸ ಬೇಕಾದಲ್ಲಿ ಅಲ್ಲಿನ ಜನ ತಾವು ಒಂದೊಂದು ಸ್ವಸಂಪೂರ್ಣವಾದ ಮಂಡಲಿ, ಒಂದು ಸಮಗ್ರ, ಜೀವಂತ ಅವಯವಿ ಎಂಬುದನ್ನು ಮರೆಯಬಾರದು. ಅಲ್ಲಿನ ಬಡತನ, ಅಜ್ಞಾನ, ಕೊಳೆ, ಜಡತೆ, ಸಾಲಗಾರಿಕೆ, ವೈಮನಸ್ಯ ಇವುಗಳನ್ನು ನಿವಾರಿಸಲು ಹೊರಗಿನವರ ಸಹಾಯಕ್ಕೆ ಏಕೆ ಕಾಯಬೇಕು? ಸರಕಾರಕ್ಕಾದರೂ ಏಕೆ ಕಾಯ ಬೇಕು? ಯಾವ ಸರಕಾರವಾಗಲಿ ಹೊರಗಿಂದ ಎಷ್ಟು ಮಾಡಬಲ್ಲದು? ಸ್ವಸತ್ವ-ನಿಷ್ಠವಾದ ಪ್ರಗತಿಚೈತನ್ಯ ಪ್ರತಿ ಹಳ್ಳಿಯಲ್ಲಿಯೂ ಹುಟ್ಟಿ ಕಾರ್ಯಮಾಡಿದಲ್ಲದೆ ನಾಡಿನ ಮಂಗಳ ಸಾಧಿತವಾಗದು. ಆಯಾ ಹಳ್ಳಿಯವರು, ತಮ್ಮ ಕೆರೆ ಕಾಲುವೆ ಗಳನ್ನು ತಾವು ಚೊಕ್ಕಮಾಡಿಕೊಳ್ಳಬಾರದೆ? ತಮ್ಮ ಊರಿಗೆ ಕುಡಿಯುವ ನೀರನ್ನು ಒದಗಿಸಲು ನಾಲ್ಕು ಬಾವಿಗಳನ್ನು ತೋಡಿಕೊಳ್ಳಲಾರರೆ? ಒಂದು ಚಾವಡಿ, ಸೊಸೈಟಿ, ಒಂದು ಪಾಠಶಾಲೆ, ಒಂದು ದೇವಸ್ಥಾನ, ಆಸ್ಪತ್ರೆ ಕಟ್ಟಿಕೊಳ್ಳಲಾರರೆ? ತಮ್ಮ ಒಳಜಗಳಗಳನ್ನು ಕಾಲಕಾಲಕ್ಕೆ ತಾವಾರಿಸುವ ಮುಖಂಡರ ಮೂಲಕ ತೀರಿಸಿ ಕೊಳ್ಳಲಾಗದೆ? ತಮ್ಮ ಬೀದಿಗಳನ್ನೂ ಹಿತ್ತಿಲನ್ನೂ ಶುಚಿಗೊಳಿಸಿಕೊಂಡು, ರಸ್ತೆ, ದೀಪ, ಬೆಳಗಿಸಿಕೊಳ್ಳಲಾರರೆ? ಊರಿನವರು ಒಂದು ಕಾರ್ಯಯೋಜನೆಯನ್ನು ಮಾಡಿಕೊಂಡು ಪ್ರತಿಯೊಬ್ಬರೂ ಇನ್ನೊಬ್ಬರಿಗೆ ಭದ್ರವಾದ ಸುಂದರವಾದ ಮನೆಗಳನ್ನು ಕಟ್ಟಿಕೊಡುವುದರಲ್ಲಿ ನೆರವಾಗುವುದು ಕಷ್ಟವೆ? ಎಲ್ಲರ ಮಕ್ಕಳೂ ಊರಿನ ಮಕ್ಕಳೆಂದು ಎಣಿಸಿ ಅವರಿಗೆ ಓದುಬರಹ ಲೆಕ್ಕಾಚಾರದ ತಿಳಿವಳಿಕೆ ಕೊಡುವಂತೆ ಏರ್ಪಡಿಸಿಕೊಳ್ಳುವುದು ಅಶಕ್ಯವೆ? ಊರಲ್ಲಿ ೫೦ ಹಸು, ಎಮ್ಮೆ ಕಟ್ಟಿಕೊಂಡು ಮಕ್ಕಳೆಲ್ಲರಿಗೂ ದಿನಾ ಒಂದೊಂದು ಬಟ್ಟಲು ಹಾಲುಕೊಡು ವುದು, ಊರಸುತ್ತ ಆಯಾ ಪ್ರದೇಶದಲ್ಲಿ ಬೆಳೆವ ಬಾಳೆ, ಸೀಬೆ, ಕಿತ್ತಿಳೆ, ಟೊಮಾಟೊ, ಸೇಬು, ದ್ರಾಕ್ಷಿ, ಅಂಜೂರ, ಮಾವು ಮುಂತಾದ ಹಣ್ಣುಗಳನ್ನು ಆಯಾಕಾಲದಲ್ಲಿ ಒದಗಿಸಿ ನಾಳೆಗೆ ಬೆಳೆಯಬೇಕಾಗಿರುವ ಪೌರರನ್ನು ಪುಷ್ಟರಾಗಿ ಬೆಳಸುವುದು ಅಸಾಧ್ಯವೆ? ಶಾಲೆಗೆ ಹೋಗುವ ಎಳೆಯ ಮಕ್ಕಳಿಗೆಲ್ಲ ಬೆಳಗ್ಗೆ ಸ್ನಾನ ಮಾಡಿಸಿ, ಒಂದು ಸ್ವಲ್ಪ ಆಹಾರಕೊಟ್ಟು ದಿನಕ್ಕೆ ಹತ್ತು ನಿಮಿಷ ಅಂಗಸಾಧನೆ ಮಾಡಿಸಿ, ದಿನಕ್ಕೊಂದೊಂದು ಒಗೆಯ ಪ್ರಾರ್ಥನೆ ಹೇಳಿಕೊಟ್ಟು ಆಡಿಸುತ್ತ ನಲಿ ಸುತ್ತ ಹರ್ಷಗೊಳಿಸುತ್ತ ಶಿಕ್ಷಣ ಕೊಡಲಾಗದೆ? ಊರಿನವರು ತಮ್ಮಲ್ಲಿನವರ

ಸಾಲಗಾರಿಕೆ ಹರಿಯುವಂತೆ ಒಟ್ಟಿಗೆ ಸಹಕರಿಸಿ ಪರಿಹಾರೋಪಾಯಗಳನ್ನು ಕಲ್ಪಿಸಿಕೊಂಡರೆ — ಹೆಚ್ಚು ಕೆಲಸಗಳಿಗೆ ಹೊರಗಿನ ಪ್ರಪಂಚದಿಂದಲೂ ಸರ್ಕಾರದಿಂದಲೂ ನೆರವು ದೊರೆಯದೆ ಹೋದೀತೆ? ನಾಡಿಗೆ ಬೇಕಾದ್ದು ಕೇವಲ ಹಣವಲ್ಲ. ಜನದ ಕಾರ್ಯಶಕ್ತಿ, ಬುದ್ಧಿಶಕ್ತಿ; ಇವಿದ್ದರೆ ಹಣ ಮಾಡುವ ಕೆಲಸವನ್ನೆಲ್ಲ ಬೇರೆ ರೀತಿಯಲ್ಲಿ ಮಾಡಿಕೊಳ್ಳಬಹುದು. ಈ ಬಗ್ಗೆ ಕಾರ್ಯವ್ಯವಸ್ಥೆ ಮಾಡಬೇಕೆಂದು ದೇಶದಲ್ಲಿ ಆರಂಭವಾಗಿರುವ ಗ್ರಾಮಪುನರುಜ್ಜೀವನದ ಯೋಜನೆ ಶ್ಲಾಘ್ಯವಾದ್ದು.

* * *

ಸಿನೆಮಾಗಳು ಬೇರೆ ಬೇರೆ ದೇಶಗಳಲ್ಲಿ 'ಡಾಕ್ಯುಮೆಂಟರೀಸ್' ಎಂಬ ಬಗೆಯ ಚಿತ್ರಗಳನ್ನು ತಯಾರುಮಾಡಿ ತಿಳಿವಳಿಕೆ ಕೊಡುತ್ತಿವೆ. ಆಕಾಶವಾಣಿ, ಸಿನೆಮಾ ಎರಡೂ ಕೂಡಿದರೆ ಇಂತಹ ನೆರವು ಬಹು ಕಾರ್ಯಕಾರಿಯಾದೀತು.

ಪಾಲ್ ರೋಥಾ ಎಂಬವರು ಈ ಬಗೆಯ ಚಿತ್ರನಿರ್ಮಾಣದಲ್ಲಿ ಹೆಸರಾದ ಮಾನ್ಯರು. ಹೊಸತಾಗಿ "World of Plenty" ಎಂಬ ಸುಮಾರು ಒಂದು ಗಂಟೆ ಕಾಲ ನಡೆಯುವ ಚಿತ್ರವೊಂದನ್ನು ತಯಾರುಮಾಡಿದ್ದಾರಂತೆ. ಅದನ್ನು ಹಾಟ್ ಸ್ಪ್ರಿಂಗ್ಸ್ ಎಂಬ ಕಡೆ ಸೇರಿದ್ದ 'ಪ್ರಪಂಚದ ಆಹಾರ ಸಮ್ಮೇಳನ'ದ ೨೦೦ ಪ್ರತಿನಿಧಿಗಳಿಗೆ ತೋರಿಸಿದರಂತೆ. ಅಲ್ಲಿದ್ದ ಅಮೇರಿಕ, ಚೀನಾ, ಈಜಿಪ್ಟ್, ಇಂಡಿಯಾ ಪ್ರತಿನಿಧಿಗಳು ಎಲ್ಲರೂ ತಮ್ಮ ತಮ್ಮ ದೇಶದಲ್ಲಿ ಅದನ್ನು ತೋರಿಸುವ ಅವಕಾಶ ಕಲ್ಪಿಸಿಕೊಡಬೇಕೆಂದು ಬೇಡಿದರಂತೆ. ರಾಜಕೀಯ ಜೀವನದಲ್ಲಿಯೇ ಇದೊಂದು ಉತ್ತಮ ಘಟನೆ ಎಂದು ಅದನ್ನು ನೋಡಿದ 'ಕಿಂಗ್ಸ್ಲಿ ಮಾರ್ಟಿನ್' ಎಂಬ ಪ್ರಸಿದ್ಧ ಪತ್ರಿಕಾ ಸಂಪಾದಕರು ಬರೆದಿದ್ದಾರೆ. ಅದರ ಸಂದೇಶ ಇಷ್ಟೇ: ಸಮ್ಮೇಳನದ ಮುಖ್ಯ ತೀರ್ಮಾನಗಳನ್ನು ಸಂಗ್ರಹಿಸಿ ಆ ಚಿತ್ರ ಕಣ್ಣಿಗೆ ಕಟ್ಟಿದಂತೆ ತೋರಿಸುವುದು. ಯಾರ ಬುದ್ಧಿ ಅತಿ ಸಂಕುಚಿತವಾದ ವ್ಯಕ್ತಿ ಅಥವಾ ಪಕ್ಷಪ್ರಯೋಜನದ ಕಡೆಗೆ ಮಾತ್ರ ಒಲಿಯದೆ ಸಾರ್ವಜನಿಕ ಮಂಗಳದ ಕಡೆಗೆ ಒಲಿಯುತ್ತದೆಯೊ ಅಂಥ ಎಲ್ಲರಿಗೂ ಇದು ರುಚಿಸುವುದು ಎಂದಿದ್ದಾರೆ. ಯುದ್ಧ ಮುಗಿದ ಮೇಲೆ ಪ್ರಪಂಚದ ಎಲ್ಲರಿಗೂ ಆಹಾರ ನಿರ್ಮಾಣಕಾರ್ಯ ವಿಸ್ತಾರಗೊಳ್ಳಬೇಕಾಗುವುದು. ಅದರ ಉತ್ಪತ್ತಿಗಾಗಿ ಇಂದಿನ ವಿಜ್ಞಾನ ಒದಗಿಸಬಲ್ಲ ಎಲ್ಲಬಗೆಯ ಯಂತ್ರ, ಶಾಸ್ತ್ರತಂತ್ರಗಳನ್ನೂ ಹೂಡಬೇಕಾಗುತ್ತದೆ. ಲಾಭಕ್ಕೋಸ್ಕರವಾಗಿ ಉತ್ಪತ್ತಿಯನ್ನು ಮಿತಮಾಡುವ ನಾಶಕರ ಪ್ರವೃತ್ತಿಗಳ ಪಾಲನೆಗೂ ಹುಚ್ಚುತನಕ್ಕೂ ಹಿಂತಿರುಗುವ ಅವಿವೇಕಕ್ಕೆ ಮನಸ್ಸು ಒಳಗಾಗದಾದರೆ, ಯಾವ ರೈತನಾಗಲಿ, ಮೂಲಸಾಮಗ್ರಿಗಳ ಉತ್ಪತ್ತಿಕಾರನಾಗಲಿ, ಅತ್ಯುತ್ಪತ್ತಿ ಮಾಡುತ್ತಿರುವೆನೆಂಬ ಭ್ರಾಂತಿಗೆ ಒಳಗಾಗಲಾರ ಎಂಬುದು ಒಂದು

ತೀರ್ಮಾನ. ಎರಡನೆಯದಾಗಿ — ಪ್ರಪಂಚದಲ್ಲಿ ಹಸಿದ ಜನರ ಹಸಿವನ್ನು ಹೋಗಲಾಡಿಸುವ ಅಗತ್ಯ ತುರುತಿನದು; ಬರಿಯ ತತ್ವದ್ದಲ್ಲ ಎಂಬ ಸಂಗತಿಯೂ ಮನವರಿಕೆಯಾಗಬೇಕು ಎಂಬುದು. ಯುದ್ಧದಿಂದ ಪಾಳಾದ ಯೂರೋಪಿನಲ್ಲಿಯೇ ಅಲ್ಲ— ಅರ್ಧಪುಷ್ಟಿ ಇರುವ ಅಥವಾ ಪೋಷಣೆಯೇ ಇಲ್ಲದ ಬಾಲ್ಕನ್ ಚೀಣಾ ಇಂಡಿಯಾ ದೇಶಗಳಿಗೆ ಉತ್ತಮ ಆಹಾರಪದಾರ್ಥಗಳ ನಕ್ಷೆ ಭೂಪಟಗಳು ಅಣಕಿಸುವಂತೆ ಕಂಡಾವು. ಆದರೂ ಇಂತಹ ಸಮ್ಮೇಳನಗಳ ಕಾರ್ಯ ಸಫಲವಾದ ದಿನ ಜಗತ್ತಿಗೆ ಒಂದು ಹೊಸ ಸಂತೋಷ ಬಂದ ಹಾಗಾಗುತ್ತದೆ ಎನ್ನುತ್ತಾರೆ.

ಒಂದೆರುಡು ವಿವರಾಂಶಗಳನ್ನು ಹೇಳಿದರೆ ಇಂಥ ಚಿತ್ರ ಮಾಡಲಾಗದುದೇನು ಎಂಬುದು ಯಾರಿಗೇ ಆಗಲಿ ಸ್ಪಷ್ಟವಾದೀತು. ಇದನ್ನೂ ೧೭-೬-೧೯೪೩ ರ 'ಸ್ಟ್ಯಾಟ್ಸ್‌ಮನ್' ಪತ್ರಿಕೆಯಿಂದಲೇ ತೆಗೆದಿದೆ.

— ಚಿತ್ರಪಟದ ವಿಷಯ: ಆಹಾರ, ಅದರ ಉತ್ಪತ್ತಿ, ಶಾಂತಿಕಾಲದಲ್ಲಿ ಅದರ ಹಂಚಿಕೆ ಅಸಮವಾಗುತ್ತಿರುವ, ಪೋಲಾಗುತ್ತಿರುವ ರೀತಿ, ಯುದ್ಧಕಾರಣದಿಂದ ಅದನ್ನು ಒಂದು ಸ್ಥಿತಿಗೆ ತರಲು ಒದಗಿರುವ ಅಗತ್ಯ, ಯುದ್ಧಾನಂತರ ಪ್ರಪಂಚಕ್ಕೆಲ್ಲ ಹೊಂದುವ ವಿಸ್ತಾರವಾದ ಒಂದು ಕಾರ್ಯಯೋಜನೆಯ ಆವಶ್ಯಕತೆ — ಇವು. ಇವನ್ನು ಹೇಗೆ ಮಾಡಬಹುದು? ಈ ಕಡೆ ಜನದ ಆಸಕ್ತಿಯನ್ನು ಹೇಗೆ ಸೆರೆಹಿಡಿದಿಡಬಹುದು ಎಂದೀರಿ. ಪಾಲ್ ರೋಥಾ ಮತ್ತು ಎರಿಕ್ ನೈಟ್ ಇಬ್ಬರೂ ಸೇರಿ ಅದನ್ನು ಸಾಧಿಸಿದ್ದಾರೆ. ಸ್ವಲ್ಪ ಕಡಮೆ ಒಂದು ಗಂಟೆಯ ಕಾಲ ಈ ಚಿತ್ರ ನಡೆಯುವುದು. 'ಮಾರ್ಚ್ ಆಫ್ ಟೈಮ್' ಎಂಬ ಅಭಿಧಾನದಲ್ಲಿ ಕಾಣಿಸುವ ಚಿತ್ರಗಳ ವೇಗವೂ ಮೋಹಕತೆಯೂ ಅದರಲ್ಲಿವೆ. ಇಂಥ ವಿಷಯಗಳಲ್ಲಿ ಜನಕ್ಕೆ ತಿಳಿವಳಿಕೆ ಸ್ಫೂರ್ತಿಕೊಡಬೇಕೆಂದು ಬರೆವ ಯಾವ ಲೇಖಕನಿಗೂ ಧೈರ್ಯವಿಲ್ಲದ ರೀತಿ ಆ ಉದ್ದೇಶವನ್ನು ಅದು ಸಾಧಿಸುತ್ತದೆ. ಇಲ್ಲಿ ಬರಿಯ ನೂರೆಯಿಲ್ಲ. ಮಾತಿನ ಧೋರಣೆ, ಆಡಂಬರ ಇಲ್ಲ. ಅಂಕಿ, ಅಂಶ, ವಿಷಯ ಕಣ್ಣಿಗೆ ಎದ್ದು ಕಾಣುತ್ತವೆ. ಅವುಗಳಲ್ಲಿ ರೂಢವಾಗಿದೆ ತತ್ವ, ಸತ್ಯ, ಸಿದ್ಧಾಂತ, ಪ್ರಚಾರಗಳು; ಕಣ್ಣು, ಮನಸ್ಸು, ಕಿವಿ, ಹೃದಯ ಒಂದೇ ಸಮಯದಲ್ಲಿ ಸೆಳೆದು ತೃಪ್ತಿಪಡುತ್ತವೆ:— ಸರ್ ಜ್ಞಾನ್ ಆರ್ ಅವರು ಸಂಗತಿಗಳನ್ನು ವಿವರಿಸುತ್ತ ಪ್ರಪಂಚವಿಸ್ತಾರವಾದ ಯೋಜನೆಯನ್ನೂ ಹೊಲಗದ್ದೆಗಳ ನೋಟವನ್ನೂ ಕಾಣಿಸುತ್ತಿರುವಾಗ. ಗಿರಣಿಗಳಲ್ಲಿನ ರೇವು ಬಂದರುಗಳಲ್ಲಿನ ಕಾರ್ಯವೈಭವವನ್ನು ತೋರಿಸುತ್ತ ವ್ಯಾಖ್ಯಾನ ಮಾಡುತ್ತಿರುವಾಗ. — ಒಣ ವಾದವಲ್ಲ, ಬದುಕಿಗೂ ಜನಕ್ಕೂ ನೇರವಾಗಿ ಸಂಬಂಧಿಸಿದುದು ಎಂದು ಹೇಳುತ್ತಿರುವಾಗ. ಗಮನವನ್ನು ಸಂತತವಾಗಿ ಸೆಳೆದಿಡಲು ರೋಥಾ ಅವರು ಒಂದು ತಂತ್ರವನ್ನು

ಪ್ರಯೋಗಿಸಿದ್ದಾರೆ: ಸರ್ ಜ್ಞಾನ್ ಆರ್, ಲಾರ್ಡ್ ವುಲ್ಟನ್, ಲಾರ್ಡ್ ಹೊರ್ಡರ್, ಈಸ್ಟರ್ ಬ್ರುಕ್ ಮುಂತಾದ ಅಲ್ಲಿನ ತಜ್ಞರನ್ನು ಸಂದರ್ಶನಮಾಡಿ ಅವರಿಂದ ಮಾತಾಡಿಸುತ್ತಾರೆ ಮಾತ್ರವಲ್ಲದೆ ಪೇಟೆಯ ವ್ಯಾಪಾರಕ್ಕೆ ಹೋಗುತ್ತಿರುವ ಲಂಡನ್ ಪಟ್ಟಣಿಗನೊಬ್ಬನನ್ನು ನಿಲ್ಲಿಸಿ ಮಾತಾಡಿಸುತ್ತಾರೆ; ಮಧ್ಯಪಶ್ಚಿಮದ (Middle West) ರೈತನೊಬ್ಬನನ್ನು ಪ್ರಶ್ನಿಸುತ್ತಾರೆ; ಕೆಲಸದಲ್ಲಿ ನಿರತನಾಗಿರುವ ಪೊಲೀಸಿನವನೊಡನೆ ಸಂಭಾಷಣೆ ನಡಸುತ್ತಾರೆ. ಕ್ಯಾಮೆರ ಅವರನ್ನು ಹಿಡಿದು ಕಣ್ಣೆದುರಿಗೆ ನಿಲ್ಲಿಸುತ್ತದೆ. ಅವರು ಚಿತ್ರದಿಂದೆದ್ದು ನಮ್ಮ ಪ್ರಯೋಜನಕ್ಕಾಗಿ ಮಾತನಾಡುತ್ತಾರೆ. ಇಂಗ್ಲಂಡ್, ಅಮೇರಿಕಾ ದೇಶದ ವಿಷಯ ನಿರೂಪಕರು ಸಂಗತಿಗಳನ್ನು ಈ ದೇಶದಿಂದ ಅದಕ್ಕೆ ಅದರಿಂದ ಮತ್ತೊಂದಕ್ಕೆ ಅನ್ವಯಿಸಿ ಪ್ರಯಾಣ ಮಾಡಿಸಿ ತೋರಿಸುತ್ತಾರೆ; ಪ್ರಶ್ನೆ ಕೇಳುತ್ತಾರೆ, ಉತ್ತರವೊದಗಿಸುತ್ತಾರೆ. ಕೆಲವು ವೇಳೆ ಮುಖ್ಯವಾದ ಯಾವುದೋ ಒಂದು ಸಂಗತಿಯೋ, ಅಂಶಪರಂಪರೆಗಳೋ, ಅವುಗಳಿಂದ ಸಿದ್ಧವಾಗುವ ತತ್ವವೊ ಪುನರುಕ್ತವಾಗುವುವು. ಮನಸ್ಸಿಗೆ ಹಿಡಿಯುವಂತೆ ಸರಿಯಾದ ಸನ್ನಿವೇಶದಲ್ಲಿ ಉಜ್ವಲವಾದ ಪಟಗಳು, ನಕ್ಷೆಗಳು, ಅಂಕಿಗಳ ಪಟ್ಟಿಗಳು, ದರ್ಶನಗಳು ಎದುರಿಗೆ ಬಂದು ನಿಲ್ಲುವುವು. ಉದಾ: ಸಂಯುಕ್ತ ರಾಜ್ಯದಲ್ಲಿ (ಇಂಗ್ಲಂಡ್-ವೇಲ್ಸ್-ಸ್ಕಾಟ್‌ಲಂಡ್) ವರಮಾನದ ಮಟ್ಟಗಳ ಹಂಚಿಕೆ ಹೀಗಿದೆ: ವರಮಾನ ಸಂಪಾದಿಸುವ ೨೦ ಮಂದಿಯಲ್ಲಿ ೧೪ ಮಂದಿಯ ಆದಾಯ ವಾರಕ್ಕೆ £೨[1] ಅಥವಾ ಇನ್ನೂ ಕಡಮೆ; ಒಬ್ಬಾತನು ಐಶ್ವರ್ಯವಂತ — ಎಂದು ಹೊಡೆದು ತೋರಿಸುವಂತೆ ಒಂದೊಂದು ಸಂಗತಿಯನ್ನು ಕಾಣಿಸುತ್ತಾರೆ: ನೋಡುನೋಡುತ್ತ ಈ ಒಬ್ಬ ಸಿರಿವಂತನು ಒಂದು ಪಾದರಸದ ಕಂಬದಂತೆ ಎದ್ದು ಸುತ್ತಣವರ ಮೇಲೇರಿ ಕಾಣುತ್ತಾನೆ. ಇಂಥ ವಿಧಾನಗಳಲ್ಲಿ — ಇವುಗಳ ವಿವಿಧತೆ ಅನಂತ — ಸಾಮಾನ್ಯವಾಗಿ ಚಿತ್ರಗತವಾಗುವುದು ಅಶಕ್ಯ ಎಂಬಂತಹ ಅಂಶಗಳೂ ಅತಿ ಹಿಂದಿನಿಂದಲೂ ಆಡಿ ಆಡಿ ಅರ್ಥ ಕಳೆದುಕೊಂಡು ಸಪ್ಪೆಯಾಗಿರುವ ಮಾತುಗಳೂ ಸೇರಿ ಚಿತ್ರದಲ್ಲಿ ಜೀವಗೊಳ್ಳುವುವು. ಲೋಕಕ್ಕೆಲ್ಲ ಗೊತ್ತಾದಂತೆ (ಪೇಟೆ ಗಿರಾಕಿ ಸಾಲದೆಂಬ ಕಾರಣದಿಂದ) ಕಾಫೀಯನ್ನು ಸಮುದ್ರದಲ್ಲಿ ಸುರಿದು ಹಾಳುಮಾಡಿದ ಸಂಗತಿ ಕಣ್ಣಿಗೆ ಕಾಣುವಂತೆ ಇಲ್ಲಿ ನಡೆಯುತ್ತದೆ. ಪಾಠಶಾಲೆಗಳಲ್ಲಿಯೂ ಯುದ್ಧದ ಪಾಳೆಯಗಳಲ್ಲಿಯೂ ಉಪಾಧ್ಯಾಯರ ಮತ್ತು ಕಪ್ಪು ಹಲಗೆಗಳ ಕೆಲಸವನ್ನು ಈ ಬಗೆಯ ಚಿತ್ರಪಟಗಳು ಹೇಗೆ ಮಾಡುತ್ತಿವೆ ಎಂಬಂಶವನ್ನು ಮುಂದಟ್ಟುಮಾಡಿಕೊಡುತ್ತದೆ. ಪ್ರತಿದಿನದ ವೃತ್ತಪತ್ರಿಕೆಗಿಂತ

[1] ವಾರಕ್ಕೆ ೨ ರೂಪಾಯಿ ಕೂಡ ಸರಾಸರಿ ಸಂಪಾದನೆ ಇಲ್ಲದ ಭರತಖಂಡದ ವರಮಾನಗಳೊಡನೆ ಈ ಸಂಗತಿಯನ್ನು ಹೋಲಿಸಬೇಕು.— ಸಂ.

ಜೀವನದ ಸಂಗತಿಗಳನ್ನೂ ಅಗತ್ಯವಾದ ಕಾರ್ಯ ನೀತಿರೀತಿಗಳನ್ನೂ ವಿಶದಪಡಿಸುವ ಒಂದು ಯಂತ್ರಸಾಧನೆ ಈ ಮೂಲಕ ಪ್ರಪಂಚಕ್ಕೆ ಬಂದಂತಾಗಿದೆ. ಆದುದರಿಂದ ಇದರಿಂದ ಸಂಸ್ಕೃತಿ ಜೀವನಕ್ಕೂ ರಾಜಕೀಯ ಪ್ರಪಂಚಕ್ಕೂ ಮೇಲ್ತರದ ಆಯುಧ ಸಾಮಗ್ರಿ ದೊರೆತಂತಾಯಿತು. ಅಯೋಗ್ಯರೂ ಅಶಕ್ತರೂ ಉತ್ತಮ ಕಲೆಗಾರರಲ್ಲದವರೂ ಇದನ್ನು ಇಷ್ಟು ಮೋಹಕವಾಗಿ ಉಪಯೋಗಿಸಲಾರರಾಗಿರುವುದು ನಮ್ಮ ಅದೃಷ್ಟ ವಿಶೇಷ. ಹೊಸ ಕ್ರಮ ಹೊಸ ವಿಧಾನಗಳೆಂದರೆ ಬಹುಮಟ್ಟಿಗೆ ಹೊಸ ದೃಷ್ಟಿ ಎಂದೇ ಅರ್ಥ. ಈ "World of Plenty" ಎಂಬ ಚಿತ್ರ ಪತ್ರಿಕೆಗಳ ಮೊದಲಪುಟದ ಕಥೆಯಂತೆ ಇದೆ. ಅಥವಾ, ವೃತ್ತಪತ್ರಿಕೆಯ ಅಗ್ರಲೇಖನದಂತೆ ಇದೆ. ಸಿನೆಮಾ ನೋಡಲು ಹೋದವರ ಕಣ್ಣನ್ನು ಹೊಡೆದು ಬುದ್ಧಿಯನ್ನು ಎಚ್ಚರಿಸುತ್ತದೆ. ವಿನೋದವಿಲಾಸ ಮಾತ್ರ ಬೇಕೆನ್ನುವವರಿಗೆ ಅದು ಯಾರಿಗೆ ಹೇಗೇ ಕಾಣಿಸಲಿ, ಅದರಿಂದ ಲೋಕಜೀವನಕ್ಕೆ ಸಂಬಂಧಿಸಿದಂತೆ ಒಂದು ಹೊಸ ಚಿತ್ತ ಚಿತ್ರಿದಂತೆ ಖಂಡಿತವಾಗಿ ಆಗಿದೆ.

ನಮ್ಮ ನಾಡಿನ ಜನಕ್ಕೆ ಪರ್ಯಾಲೋಚ್ಯವಾದೀತೆಂದು ನಂಬಿ ಇದನ್ನು ಸಂಗ್ರಹಿಸಿದೆ.

***

**ಈ ಸಲದ ಕನ್ನಡಸಾಹಿತ್ಯ ಪರಿಷತ್ ಸಮ್ಮೇಳನದ ಅಧ್ಯಕ್ಷರು**

ಇದೇ ಡಿಸೆಂಬರ್ ಕೊನೆಯ ವಾರದಲ್ಲಿ ಶಿವಮೊಗ್ಗೆಯಲ್ಲಿ ಕೂಡಲಿರುವ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಎಂ.ಎ. ಅವರು ಆಯ್ದು ಬಂದಿದ್ದಾರೆ. ಬೇಂದ್ರೆ ಹೆಸರು ಕನ್ನಡನಾಡಿನ ಮನೆಮಾತು. ಬೇಂದ್ರೆ 'ಮಾಸ್ತರ' ಪ್ರಭಾವ ಉತ್ತರ ಕರ್ನಾಟಕದಲ್ಲಿ ಹಾಗೆ. ಅವರು ಕವಿ ಗೆಳೆಯರು, ಮಾಸ್ತರು.

ತುಂಗಭದ್ರೆಯ ಉತ್ತರದವರಾದರೂ ಅವರು ಕಾವೇರಿ ಗೋದಾವರಿಗಳ ನಡುವೆ ಇರುವ ಎಲ್ಲ ಕನ್ನಡ ನಾಡಿನ ಗೆಳೆಯರು. ಗೆಳೆಯರ ಗುಂಪಿನ ನಾಯಕರಾಗಿದ್ದವರು. ಹಿರಿಯರಾದ ಶ್ರೀ ಆಲೂರರಂಥವರ ಜೊತೆಯಲ್ಲಿ ಜಯಕರ್ನಾಟಕದ ಚಾಲನೆಯಲ್ಲಿ ಸಹಕರಿಸಿದವರು. ಇಂದು ಉತ್ತರ ಕರ್ನಾಟಕದಲ್ಲಿ ತೆರೆದು ಹಾಡುವ ಅನೇಕ ಇನಿಗೊರಲುಗಳು, ಸಾಹಿತ್ಯವನ್ನು ಸೋಡಿ ನಲಿಯುವ ಅನೇಕ ಹೃದಯಗಳು ಬೇಂದ್ರೆ ಮಾಸ್ತರ ಪ್ರಸಾದ. ಚಿತ್‌ಪಾವನ ಮರಾಟಿ ಬ್ರಾಹ್ಮಣ ವಂಶದಲ್ಲಿ ಹುಟ್ಟಿದರೂ ಕನ್ನಡಿಗರಲ್ಲಿ ಕನ್ನಡಿಗರಾದ ಅವರ ಭಕ್ತಿ, ಒಲವು ಅನನ್ಯಸಾಧಾರಣವಾದವು. ಎಲ್ಲಿ ಕನ್ನಡ ಕೆಲಸ ಆಗಬೇಕಾದರೆ ಅಲ್ಲಿ ನೆರವಿಗೆ ಸಿದ್ಧವಾಗಿ ನುಡಿದು, ಬರೆದು, ಸ್ಫೂರ್ತಿ

ಕೊಟ್ಟಿರುವ ಸತ್ವ ಅವರದು. ಪ್ರತಿಭೆ, ಹೃದಯಸ್ಪರ್ಶಿಯಾದ ಮಾತಿನ ಮೊನೆ-ಬೆಡಗು, ಒಳ್ಳಿ ಮಿಂಚಿನಂತೆ ಬೆಳಗುವ ಚಿತ್ರಭಾವಗಳ ವೈಖರಿ, ನಾಡತಾಸಗಳ ಮತ್ತು ಜನಪದ ಧಾಟಿಗಳ ಛಂದೋವಿಹಾರಗಳಲ್ಲಿ ತಾಂಡವವಾಡುವ ಅವರ ಕವಿತಾವಿಲಾಸ, ನಿಂತಕಡೆ ನುಡಿದಕಡೆ ಕಲ್ಪನೆಯ ಕೈಲಾಸವನ್ನೂ, ಅಚ್ಚ ಕವಿತೆಯ ಕೈವಲ್ಯಗಳನ್ನೂ ತೋರಿಸಬಲ್ಲ ಚಾತುರಿ ಕವಿತೆಯ ರುಚಿಯರಿತ ಸಹೃದಯರಿಗೆಲ್ಲ ಪರಿಚಿತವಾದವು.

ಗೆಳೆತನದ ಸವಿಯಿತ್ತು, ನಾಡಿನ ಒಗ್ಗಟ್ಟಿಗಾಗಿ ದುಡಿಯುತ್ತ, ಸ್ವಂತವಾಗಿ ಸರಳವಾದ ಬಾಳನ್ನು ಬದುಕುತ್ತ, ಹತ್ತುಜನ ಎಳೆಯರ, ಕಿರಿಯರ ಪ್ರೋತ್ಸಾಹಕರಾಗಿ, ಸ್ವಾರ್ಥತ್ಯಾಗದಿಂದ ನಾಡ ಕೈಂಕರ್ಯಮಾಡಿ, ಉತ್ತಮ ಕವಿಗಳಾಗಿ, ಎಲ್ಲರಿಗೂ ಪ್ರಿಯರಾಗಿ ಮಾನ್ಯರಾಗಿರುವ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಮ್ಮೇಳನ ಸ್ಮರಣೀಯವಾಗಲಿ; ಅವರ ಪಟ್ಟದ ವರ್ಷದಲ್ಲಿ ಅಖಿಲಕರ್ನಾಟಕದ ಸೌಭಾಗ್ಯ ಮೇಲಾಗಿ ತೆನೆಯಿಡಲಿ.

ಭೃಂಗದ ಬೆನ್ನೇರಿ ಬಂದ ಕಲ್ಪನಾವಿಲಾಸ — ಅರ್ಥವಿಲ್ಲದ ಸ್ವಾರ್ಥವಿಲ್ಲದ ಬರಿಯ ಭಾವಗೀತವಾಗುವೆನೆಂದು ತೃಪ್ತಿಪಟ್ಟರೂ ಆ ತೃಪ್ತಿಯ ಏರಿಗೆ ಏರಬಲ್ಲ ಕಲ್ಪನಾವಿಲಾಸದಿಂದ ನಾಡ ಕಾವ್ಯಕೃತಿಗಳು ಸಿದ್ಧಿಪಡೆದು ಅಮರಸತ್ವವಾಗಲಿ.

ಶಿವಮೊಗ್ಗೆಯ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆಯುವ ಈ ಉತ್ಸವ ಕನ್ನಡನಾಡನ್ನು ಬೆಸೆದು, ಒಂದು ಮೊಸೆಯಲ್ಲಿ ಅದನ್ನು ಮುಂದೆ ಸುಗ್ಗಿಸುವ ಚೈತನ್ಯವಾಗಲಿ.

***

**ಚಿತ್ರಗಳ ಪರಿಚಯ**

ವಿನಾಯಕನ ಸಂಚಿಕೆಯಲ್ಲಿ ಕದಂಬರನ್ನು ಕುರಿತ ಒಂದು ಲೇಖನವನ್ನು ಕೊಟ್ಟಿದ್ದೆವು. ಅವರ ಕಾಲಕ್ಕೆ ಸಂಬಂಧಿಸಿದ ಶಿಲ್ಪ, ಶಿಲಾಲೇಖ ತಾಮ್ರ ಲೇಖಗಳು, ನಾಣ್ಯ, ಲಿಪಿಗಳನ್ನು ಅಚ್ಚುಮಾಡಿ ಅದರ ಚಿತ್ರಪರಿಚಯವನ್ನು ಮಾಡಿಕೊಡುವ ಪ್ರಯತ್ನ ಈ ಸಲ ನಡೆದಿದೆ. ಅದಕ್ಕೆ ಆವಶ್ಯಕವಾದ ಎಲ್ಲ ನೆರವನ್ನೂ ಕೊಟ್ಟ ಪ್ರಾಕ್ತನ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳಾದ ಡಾ|| ಎಂ. ಎಚ್. ಕೃಷ್ಣ ಅವರಿಗೂ, ಅವರ ಕಚೇರಿಯಲ್ಲಿನ ಗೆಳೆಯರಿಗೂ ಈ ಪತ್ರಿಕೆ ತುಂಬಾ ಋಣಿಯಾಗಿದೆ.

***

## ಕಂಬನಿ

೧. ದಕ್ಷಿಣದೇಶದ ಸಂಸ್ಕೃತ ವಿದ್ವನ್ಮಣಿಗಳೂ ಪ್ರಾಚ್ಯ ವಿದ್ಯಾಪಾರಂಗತರೂ ಮೇಲ್ತರದ ಪ್ರಾಧ್ಯಾಪಕರೂ ಆಗಿದ್ದ ಮಹಾಮಹೋಪಾಧ್ಯಾಯ ಮುಂತಾದ

ಬಿರುದು ಪಡೆದಿದ್ದ ಶ್ರೀ ಎಸ್. ಕುಪ್ಪುಸ್ವಾಮಿಶಾಸ್ತ್ರಿ, ಎಂ.ಎ., ಐ.ಇ.ಎಸ್. ಅವರು ಸ್ವಲ್ಪ ದಿನಗಳ ಮುಂಚೆ ಕಾಲವಾದ್ದು ಭರತಖಂಡಕ್ಕೇ ಒಂದು ದೊಡ್ಡ ನಷ್ಟ. ದಕ್ಷಿಣದೇಶದಲ್ಲಿ ಅನೇಕ ವಿದ್ಯಾಸಂಸ್ಥೆಗಳ ನಿರ್ಮಾಣಕ್ಕೂ ಚಾಲನೆಗೂ ಅವರು ಸ್ಫೂರ್ತಿಕೊಟ್ಟರು; ಪರಿಶೋಧನೆಗಳನ್ನು ನಡಸಿದರು; ಹತ್ತಾರು ಉತ್ತಮ ಶಿಷ್ಯರನ್ನು ತಯಾರುಮಾಡಿ ಅವರನ್ನು ಲೋಕಕ್ಕೆ ದಾನಮಾಡಿದರು. 'ಜರ್ನಲ್ ಆಫ್ ಓರಿಯೆಂಟಲ್ ರಿಸರ್ಚ್' ಅಂತಹ ಪತ್ರಿಕೆಯ ಸ್ಥಾಪಕರಾದರು. ತಮ್ಮ ಖಚಿತವಾದ ನುಡಿ, ಬುದ್ಧಿವಾದ, ಸರಣಿ, ಜ್ಞಾನಗಳಿಂದ ದೇಶವಿದೇಶಗಳ ಮಹಾ ವಿದ್ವಾಂಸರ ಮೆಚ್ಚುಗೆ ಪಡೆದು ನಮ್ಮ ನಾಡಿಗೆ ಕೀರ್ತಿತಂದರು. ಸ್ವಚ್ಛವಾದ, ಉದಾರವಾದ ಜೀವನದಿಂದಲೂ ಶಾಸ್ತ್ರಜ್ಞಾನ ಮತ್ತು ವಿದ್ಯಾ ಪಕ್ಷಪಾತದಿಂದಲೂ ಅವರನ್ನು ತಿಳಿದ ಎಲ್ಲರ ಭಕ್ತಿ ಪ್ರೀತಿಗಳಿಗೂ ಪಾತ್ರರಾದರು. ಇಂಥವರ ಸ್ಮರಣೆಮಾಡುವುದೇ ಒಂದು ಭಾಗ್ಯ.

೨. ಕನ್ನಡದಲ್ಲಿ ಬರೆವ ಮತ್ತು ಸಾರ್ವಜನಿಕ ಕೆಲಸಮಾಡುವ ಮಹಿಳೆಯರೇ ಅಲ್ಪಸಂಖ್ಯೆಯ ಮಂದಿ. ಅಂಥ ಕೆಲವೇ ಮಂದಿಯಲ್ಲಿ ಹೆಸರಾಗಿ, ಕತೆ ಪ್ರಬಂಧಗಳನ್ನು ಬರೆದು, ಸಮಾಜ ಕಾರ್ಯಗಳಲ್ಲಿ ಭಾಗವಹಿಸಿ ಮಹಿಳಾ ಲೋಕಕ್ಕೆ ಸೇವೆ ಸಲ್ಲಿಸಿ, ಕೆಲವುಕಾಲ ಜಯಕರ್ಣಾಟಕದ ಸಂಪಾದಕಿಯರಾಗಿದ್ದ ಶ್ರೀ. ಶ್ಯಾಮಲಾದೇವಿ ಬೆಳಗಾಂಕರ್ ಅವರು ತೀರಿಕೊಂಡದ್ದರಿಂದ ಕನ್ನಡದ ಮಹಿಳಾ ಲೋಕದಿಂದ ಒಂದು ಸಾರ್ಥಕ ಪ್ರಭಾವ ಕಣ್ಮರೆಯಾದಂತಾಗಿದೆ. ಅವರನ್ನು ಕಳೆದುಕೊಂಡ ನಷ್ಟ ಶ್ರೀ ರಾಮಚಂದ್ರರಾವ್ ಅವರಿಗೆ ಹೇಗೊ ಕನ್ನಡಿಗರಿಗೂ ಹಾಗೇ ಹಿರಿದೆಂದು ಹೇಳಿ ಈ ಸಮಯದಲ್ಲಿ ರಾಯರಿಗೆ ನಮ್ಮ ಸಹಾನುಭೂತಿಯನ್ನು ಅರ್ಪಿಸಲು ಬೇಡುತ್ತೇವೆ.

---

ಕೊಟ್ಟಿರುವ ಸತ್ವ ಅವರದು. ಪ್ರತಿಭೆ, ಹೃದಯಸ್ಪರ್ಶಿಯಾದ ಮಾತಿನ ಮೊನೆ-ಬೆಡಗು, ಒಳ್ಳಿ ಮಿಂಚಿನಂತೆ ಬೆಳಗುವ ಚಿತ್ರಭಾವಗಳ ವೈಖರಿ, ನಾಡತಾನಗಳ ಮತ್ತು ಜನಪದ ಧಾಟಿಗಳ ಛಂದೋವಿಹಾರಗಳಲ್ಲಿ ತಾಂಡವವಾಡುವ ಅವರ ಕವಿತಾವಿಲಾಸ, ನಿಂತಕಡೆ ನುಡಿದಕಡೆ ಕಲ್ಪನೆಯ ಕೈಲಾಸವನ್ನೂ, ಅಚ್ಚ ಕವಿತೆಯ ಕೈವಲ್ಯಗಳನ್ನೂ ತೋರಿಸಬಲ್ಲ ಚಾತುರಿ ಕವಿತೆಯ ರುಚಿಯರಿತ ಸಹೃದಯರಿಗೆಲ್ಲ ಪರಿಚಿತವಾದವು.

ಗೆಳೆತನದ ಸವಿಯಿತ್ತು, ನಾಡಿನ ಒಗ್ಗಟ್ಟಿಗಾಗಿ ದುಡಿಯುತ್ತ, ಸ್ವಂತವಾಗಿ ಸರಳವಾದ ಬಾಳನ್ನು ಬದುಕುತ್ತ, ಹತ್ತುಜನ ಎಳೆಯರ, ಕಿರಿಯರ ಪ್ರೋತ್ಸಾಹಕರಾಗಿ, ಸ್ವಾರ್ಥತ್ಯಾಗದಿಂದ ನಾಡ ಕೈಂಕರ್ಯಮಾಡಿ, ಉತ್ತಮ ಕವಿಗಳಾಗಿ, ಎಲ್ಲರಿಗೂ ಪ್ರಿಯರಾಗಿ ಮಾನ್ಯರಾಗಿರುವ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಮ್ಮೇಳನ ಸ್ಮರಣೀಯವಾಗಲಿ; ಅವರ ಪಟ್ಟದ ವರ್ಷದಲ್ಲಿ ಅಖಿಲಕರ್ನಾಟಕದ ಸೌಭಾಗ್ಯ ಮೇಲಾಗಿ ತೆನೆಯಿಡಲಿ.

ಭೃಂಗದ ಬೆನ್ನೇರಿ ಬಂದ ಕಲ್ಪನಾವಿಲಾಸ—ಅರ್ಥವಿಲ್ಲದ ಸ್ವಾರ್ಥವಿಲ್ಲದ ಬರಿಯ ಭಾವಗೀತವಾಗುವೆನೆಂದು ತೃಪ್ತಿಪಟ್ಟರೂ ಆ ತೃಪ್ತಿಯ ಏರಿಗೆ ಏರಬಲ್ಲ ಕಲ್ಪನಾವಿಲಾಸದಿಂದ ನಾಡ ಕಾವ್ಯಕೃತಿಗಳು ಸಿದ್ಧಿಪಡೆದು ಅಮರಸತ್ವವಾಗಲಿ.

ಶಿವಮೊಗ್ಗೆಯ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆಯುವ ಈ ಉತ್ಸವ ಕನ್ನಡನಾಡನ್ನು ಬೆಸೆದು, ಒಂದು ಮೊನೆಯಲ್ಲಿ ಅದನ್ನು ಮುಂದೆ ಸುಗ್ಗಿಸುವ ಚೈತನ್ಯವಾಗಲಿ.

***

ವಿನಾಯಕನ ಸಂಚಿಕೆಯಲ್ಲಿ ಕದಂಬರನ್ನು ಕುರಿತ ಒಂದು ಲೇಖನವನ್ನು ಕೊಟ್ಟಿದ್ದೆವು. ಅವರ ಕಾಲಕ್ಕೆ ಸಂಬಂಧಿಸಿದ ಶಿಲ್ಪ, ಶಿಲಾಲೇಖ ತಾಮ್ರ ಲೇಖಗಳು,

**ಚಿತ್ರಗಳ ಪರಿಚಯ**

ನಾಣ್ಯ, ಲಿಪಿಗಳನ್ನು ಅಚ್ಚುಮಾಡಿ ಅದರ ಚಿತ್ರಪರಿಚಯವನ್ನು ಮಾಡಿಕೊಡುವ ಪ್ರಯತ್ನ ಈ ಸಲ ನಡೆದಿದೆ. ಅದಕ್ಕೆ ಆವಶ್ಯಕವಾದ ಎಲ್ಲ ನೆರವನ್ನೂ ಕೊಟ್ಟ ಪ್ರಾಕ್ತನ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳಾದ ಡಾ|| ಎಂ. ಎಚ್. ಕೃಷ್ಣ ಅವರಿಗೂ, ಅವರ ಕಚೇರಿಯಲ್ಲಿನ ಗೆಳೆಯರಿಗೂ ಈ ಪತ್ರಿಕೆ ತುಂಬಾ ಋಣಿಯಾಗಿದೆ.

***

## ಕಂಬನಿ

೧. ದಕ್ಷಿಣದೇಶದ ಸಂಸ್ಕೃತ ವಿದ್ವನ್ಮಣಿಗಳೂ ಪ್ರಾಚ್ಯ ವಿದ್ಯಾಪಾರಂಗತರೂ ಮೇಲ್ತರದ ಪ್ರಾಧ್ಯಾಪಕರೂ ಆಗಿದ್ದ ಮಹಾಮಹೋಪಾಧ್ಯಾಯ ಮುಂತಾದ

ಬಿರುದು ಪಡೆದಿದ್ದ ಶ್ರೀ ಎಸ್. ಕುಪ್ಪುಸ್ವಾಮಿಶಾಸ್ತ್ರಿ, ಎಂ.ಎ., ಐ.ಇ.ಎಸ್. ಅವರು ಸ್ವಲ್ಪ ದಿನಗಳ ಮುಂಚೆ ಕಾಲವಾದ್ದು ಭರತಖಂಡಕ್ಕೇ ಒಂದು ದೊಡ್ಡ ನಷ್ಟ. ದಕ್ಷಿಣದೇಶದಲ್ಲಿ ಅನೇಕ ವಿದ್ಯಾಸಂಸ್ಥೆಗಳ ನಿರ್ಮಾಣಕ್ಕೂ ಚಾಲನೆಗೂ ಅವರು ಸ್ಫೂರ್ತಿಕೊಟ್ಟರು; ಪರಿಶೋಧನೆಗಳನ್ನು ನಡಸಿದರು; ಹತ್ತಾರು ಉತ್ತಮ ಶಿಷ್ಯರನ್ನು ತಯಾರುಮಾಡಿ ಅವರನ್ನು ಲೋಕಕ್ಕೆ ದಾನಮಾಡಿದರು. 'ಜರ್ನಲ್ ಆಫ್ ಓರಿಯೆಂಟಲ್ ರಿಸರ್ಚ್' ಅಂತಹ ಪತ್ರಿಕೆಯ ಸ್ಥಾಪಕರಾದರು. ತಮ್ಮ ಖಚಿತವಾದ ನುಡಿ, ಬುದ್ಧಿವಾದ, ಸರಣಿ, ಜ್ಞಾನಗಳಿಂದ ದೇಶವಿದೇಶಗಳ ಮಹಾ ವಿದ್ವಾಂಸರ ಮೆಚ್ಚುಗೆ ಪಡೆದು ನಮ್ಮ ನಾಡಿಗೆ ಕೀರ್ತಿತಂದರು. ಸ್ವಚ್ಛವಾದ, ಉದಾರವಾದ ಜೀವನದಿಂದಲೂ ಶಾಸ್ತ್ರಜ್ಞಾನ ಮತ್ತು ವಿದ್ಯಾ ಪಕ್ಷಪಾತದಿಂದಲೂ ಅವರನ್ನು ತಿಳಿದ ಎಲ್ಲರ ಭಕ್ತಿ ಪ್ರೀತಿಗಳಿಗೂ ಪಾತ್ರರಾದರು. ಇಂಥವರ ಸ್ಮರಣೆಮಾಡುವುದೇ ಒಂದು ಭಾಗ್ಯ.

೨. ಕನ್ನಡದಲ್ಲಿ ಬರೆವ ಮತ್ತು ಸಾರ್ವಜನಿಕ ಕೆಲಸಮಾಡುವ ಮಹಿಳೆಯರೇ ಅಲ್ಪಸಂಖ್ಯೆಯ ಮಂದಿ. ಅಂಥ ಕೆಲವೇ ಮಂದಿಯಲ್ಲಿ ಹೆಸರಾಗಿ, ಕತೆ ಪ್ರಬಂಧಗಳನ್ನು ಬರೆದು, ಸಮಾಜ ಕಾರ್ಯಗಳಲ್ಲಿ ಭಾಗವಹಿಸಿ ಮಹಿಳಾ ಲೋಕಕ್ಕೆ ಸೇವೆ ಸಲ್ಲಿಸಿ, ಕೆಲವುಕಾಲ ಜಯಕರ್ಣಾಟಕದ ಸಂಪಾದಕಿಯರಾಗಿದ್ದ ಶ್ರೀ. ಶ್ಯಾಮಲಾದೇವಿ ಬೆಳಗಾಂಕರ್ ಅವರು ತೀರಿಕೊಂಡದ್ದರಿಂದ ಕನ್ನಡದ ಮಹಿಳಾ ಲೋಕದಿಂದ ಒಂದು ಸಾರ್ಥಕ ಪ್ರಭಾವ ಕಣ್ಮರೆಯಾದಂತಾಗಿದೆ. ಅವರನ್ನು ಕಳೆದುಕೊಂಡ ನಷ್ಟ ಶ್ರೀ ರಾಮಚಂದ್ರರಾವ್ ಅವರಿಗೆ ಹೇಗೊ ಕನ್ನಡಿಗರಿಗೂ ಹಾಗೇ ಹಿರಿದೆಂದು ಹೇಳಿ ಈ ಸಮಯದಲ್ಲಿ ರಾಯರಿಗೆ ನಮ್ಮ ಸಹಾನುಭೂತಿಯನ್ನು ಅರ್ಪಿಸಲು ಬೇಡುತ್ತೇವೆ.

---

# ವಸ್ತುಕೋಶ

**೧. ಇಂದಿನ ಕನ್ನಡ ಕವಿತೆ**[1]

ಈಗ್ಗೆ ಸುಮಾರು ಮೂವತ್ತು ವರ್ಷಗಳ ಹಿಂದೆ ಮೊದಲಾದ ಕನ್ನಡ ಕವಿತೆ ಈಗ ಗರಿಮೂಡಿ ಹಾರಾಡುತ್ತ ತನ್ನ ನೋಟವನ್ನು ವಿಶಾಲಪಡಿಸಿಕೊಳ್ಳುತ್ತ ಒಂದು ನೆಲೆಗೆ ಬಂದು ನಿಂತಿದೆ. ಬೆಳೆ ಬೇಕಾದಷ್ಟು ಬಂದಿದೆ. ಓದುವವರೂ ಹೆಚ್ಚುತ್ತಿದ್ದಾರೆ. 'ನೂತನ ಕವಿತೆಯೆಂದು ಕುಂದಿಟ್ಟು ಜರೆಯುವವರು' ಕಡಮೆಯಾಗಿದ್ದಾರೆ. ಹತ್ತಾರು ಮಂದಿ ಉತ್ತಮ ಕವಿಗಳಿಂದ ನಮ್ಮ ಬಾಳ್ವೆಗೆ ಹೊಳಪು ಬಂದಿದೆ. ಸಣ್ಣ ಪುಟ್ಟ ಕವಿಗಳಂತೂ ಲೆಕ್ಕವಿಲ್ಲದಷ್ಟು ಮಂದಿ. ಸಂತತವಾದ ಸ್ಫೂರ್ತಿಯಿಂದ ಎಡೆಬಿಡದೆ ಹಾಡುವವರು ಕೆಲವರು. ಸಮಯಸ್ಫೂರ್ತಿಯಿಂದ ಬರೆಯುವವರು ಹಲವರು. ಹೇಗೋ ಒಂದೆರಡು ಪದ್ಯಗಳನ್ನು ಬರೆದು ತೆಪ್ಪಗಿರುವವರು ಬಹುಮಂದಿ. ಇಂದಿನ ಕವಿತೆಯಲ್ಲಿ ಉತ್ಕೃಷ್ಟವಾದುವು ಕಡಮೆಯಾಗಿಯೂ ಎರಡನೆಯ ವರ್ಗದವು ಹೇರಳವಾಗಿಯೂ ಇದ್ದರೆ ಅದು ಸಹಜವೇ. ಇದರಿಂದ ಕವಿತೆಯ ಬೆಳಸು ಒಬ್ಬನ ಅಭ್ಯಾಸಕ್ಕೆ ಅಳವಡದಷ್ಟು ವಿಪುಲವಾಗಿಬಿಟ್ಟಿದೆ.

ಇಂದು ನಮ್ಮ ಜೀವನದ ಆಶೆ ಆದರ್ಶಗಳೂ ಭಯ ಸಂದೇಹಗಳೂ ನಮ್ಮ ಕವಿಗಳನ್ನು ಹಾಡಿಸುತ್ತಿವೆ. ಇವು ಅತಿರಮ್ಯವಾದರೀತಿಯಲ್ಲಿ ರೂಪುಗೊಂಡಿವೆ. . . . ಇಂದಿನ ಕವಿತೆ ಹಿಂದಿನದಕ್ಕೆ ಏನೂ ಕಡಮೆಯಿಲ್ಲವೆಂದೂ ಅದು ಸ್ವಾಭಾವಿಕವಾದ ಬೆಳವಣಿಗೆಯೆಂದೂ ನಿರೂಪಿಸುವುದು ನನ್ನ ಕೆಲಸ. ಎಲ್ಲ ಕವಿತೆಗಳನ್ನಾಗಲಿ ಎಲ್ಲ ಕವಿಗಳನ್ನಾಗಲಿ ಹೆಸರು ಹಿಡಿದು ಸೂಚಿಸುವ ಸಾಹಸಕ್ಕೆ ತೊಡಗಿಲ್ಲ. ವಿಷಯ ದೊಡ್ಡದು. ಅದರ ಒಂದು ಮುಖವನ್ನು ಮಾತ್ರ ಇಲ್ಲಿ ಬಿಂಬಿಸುತ್ತಿದ್ದೇನೆ.

ಕವಿಗೆ ಸ್ಫೂರ್ತಿ ಎರಡು ರೀತಿಯಾಗಿ ಬರಬಹುದು; ತನ್ನೊಳಗೆ ಉದಿಸಿ ವಿಕಾಸಗೊಳ್ಳುವ ಭಾವಾವೇಗಗಳೂ, ಆಲೋಚನೆಗಳೂ, ಚಿತ್ರಗಳೂ ಅವನ ನಾಲಗೆಯನ್ನು ಕುಣಿಸುತ್ತವೆ. ಸುತ್ತಲಿನ ಪರಿಸ್ಥಿತಿಗಳು ಅವನ ಮನಸ್ಸನ್ನು ಸೆರೆಹಿಡಿದು ಉದ್ರೇಕಗೊಳಿಸಿ ಅವನನ್ನು ನುಡಿಸುತ್ತವೆ. ಇವು ಒಂದರೊಡನೆ ಒಂದು ಬೆರೆತು ಇರುವುದೇ ಹೆಚ್ಚು. ಇದನ್ನು ಗಮನಿಸಿದರೆ ಇಂದು ನಮ್ಮ ಕವಿಗಳು ಮನಸ್ಸಿನಲ್ಲಿ ತುಂಬಿಕೊಂಡಿರುವ ಆವೇಶಗಳು ಅವರಿಗೆ ಹೇಗೆ ಬಂದುವೆಂಬುದನ್ನು ತಿಳಿಯಲು

[1] ಶ್ರೀ ಡಿ. ಎಲ್. ನರಸಿಂಹಾಚಾರ್, ಎಂ.ಎ. "ಆಕಾಶವಾಣಿ" ೨-೯-೧೯೫೩ ಇಂದ.

ಸುಲಭವಾಗುತ್ತದೆ. ಸ್ವಯಂಸ್ಫೂರ್ತಿಯಿಂದ ಅವರು ಕಂಡಿರುವ ಕನಸುಗಳು ವ್ಯಕ್ತವಾಗುತ್ತವೆ.

ಇಂಗ್ಲಿಷು ಭಾಷಾಸಾಹಿತ್ಯಗಳ ಅಭ್ಯಾಸ ನಮಗುಂಟಾದದ್ದು ನಮ್ಮ ನಾಡಿನ ಎಲ್ಲ ಪುನರುಜ್ಜೀವನಕ್ಕೂ ಕಾರಣ. ಅದು ಕತ್ತಲೆಯ ಮನೆಗೆ ಬೆಳಕನ್ನು ತುಂಬಿಸುವ ಕಿಟಿಕಿಯಾಯಿತು. ಅದರ ಮೂಲಕ ಆ ಸಾಹಿತ್ಯದ ಪರಿಚಯ ಒಂದೇ ಅಲ್ಲದೆ ಇತರ ಪಾಶ್ಚಾತ್ಯ ದೇಶಗಳ ಸಾಹಿತ್ಯಗಳೂ ನಮ್ಮ ಕೈಗೆ ಸಿಕ್ಕಿದುವು. ವಿಜ್ಞಾನಶಾಸ್ತ್ರಗಳೂ ರಾಜ್ಯತಂತ್ರವೂ ಅರ್ಥಶಾಸ್ತ್ರವೂ ನಮಗೆ ಹೊಸ ಕಣ್ಣನ್ನು ಕೊಟ್ಟವು. ನಮ್ಮ ದೃಷ್ಟಿ ವಿಶಾಲವಾಯಿತು; ವಿಚಾರಶಕ್ತಿ ಬೆಳೆಯಿತು; ಯಾವುದನ್ನೂ ವಿಮರ್ಶಿಸಿ ಒರೆಹಚ್ಚಿ ತಿರುಳನ್ನು ಗ್ರಹಿಸುವ ಸಾಮರ್ಥ್ಯ ಬಲಿಯಿತು. ಚರಿತ್ರೆಯ ವ್ಯಾಸಂಗದಿಂದ ನಮ್ಮಲ್ಲಿ ಚಾರಿತ್ರಿಕ ದೃಷ್ಟಿ ಅಂಕುರಿಸಿತು. ನಮ್ಮ ಬದುಕಿಗೂ ಸಾಹಿತ್ಯಕ್ಕೂ ತೀರ ಬೇರೆಯಾದ ಈ ಇಂಗ್ಲಿಷು ಸಂಸ್ಕೃತಿಯ ಸಂಪರ್ಕ ನಮ್ಮ ಹಳಿಗೆಯ ದಾರಿಯನ್ನು ಕಾಣಿಸಿತು. ಅದರ ಪ್ರಭಾವ ನಮ್ಮ ಬದುಕಿನ ಪ್ರತಿಯೊಂದು ನಡೆವಳಿಕೆಯಲ್ಲಿಯೂ ತುಂಬಿಕೊಂಡಿದೆ. ನಮ್ಮಲ್ಲಿರುವ ಕೊರತೆಗಳನ್ನು ನೀಗಿ ನಮ್ಮ ದೇಶದ ಬಯಕೆಗಳನ್ನು ಈಡೇರಿಸಿಕೊಳ್ಳುವ ಹಂಬಲ ನಮಗೆ ಉಂಟಾದದ್ದು ಅದರಿಂದ. ಇಂಗ್ಲಿಷು ಸಾಹಿತ್ಯವನ್ನು ಚೆನ್ನಾಗಿ ಓದಿ ಅದರ ಅಂದಕ್ಕೆ ಸೋತು ನಮ್ಮ ನಾಡು ಭಾಷೆಗಳಲ್ಲಿಯೂ ಅದನ್ನು ರೂಪಿಸುವ ಪ್ರೇರಣೆ ಸಾಹಿತಿಗಳಿಗೆ ಬಂತು. . . . ಕನ್ನಡವನ್ನೂ ಇಂಗ್ಲಿಷನ್ನೂ ಕಲಿತ ಸವ್ಯಸಾಚಿಗಳಾದ 'ಶ್ರೀ' ಅವರು ಕನ್ನಡದ ಹೊಸ ಕಾವ್ಯಕ್ಕೆ ಪ್ರೇರಕರಾದರು. ಅವರು ರಚಿಸಿದ 'ಇಂಗ್ಲಿಷು ಗೀತೆಗಳು' ಇಂಗ್ಲಿಷು ಕಾವ್ಯಮಾರ್ಗವನ್ನು ತೋರಿಸಿದ್ದೊಂದೇ ಅಲ್ಲದೆ ಹೊಸಕನ್ನಡ ಛಂದಸ್ಸನ್ನೂ ಧಾಟಿಯನ್ನೂ ಕಾಣಿಸಿತು. ಹೊಸ ಚೈತನ್ಯ ಹರಿಯುವುದಕ್ಕೆ ಹೊಸಪಾತ್ರವನ್ನು ನಿರ್ಮಿಸಿತು. ಹೊಸಕನ್ನಡದ ಬಗೆಬಗೆಯ ಮಟ್ಟುಗಳಿಗೆ ಅವರು ನಿರ್ಮಾಪರಾಗಿದ್ದಾರೆ. ಅವರು ತೋಡಿದ ನಾಲೆ ಇಂದು ತುಂಬಿ ಹೊನಲಾಗಿದೆ. ಹೀಗೆ ಹೊಸಕನ್ನಡ ಕವಿತೆಗೆ ಬೇಕಾದ ವಿಷಯಸಂಗ್ರಹ ಇಂಗ್ಲಿಷು ವಿದ್ಯೆಯ ಪ್ರಸಾರದಿಂದ ಬಂದು ಕನ್ನಡದ ಕಾಲುವೆಯಲ್ಲಿ ಹರಿಯತೊಡಗಿತು. ಇದರ ಫಲವಾಗಿ ಕವಿಗಳ ದೃಷ್ಟಿ ನೂತನವಾಯಿತು.

ಹಿಂದೆ ನಮ್ಮ ಸಾಹಿತ್ಯ ಬೆಳೆದದ್ದು ಬಹುಮಟ್ಟಿಗೆ ಮತಪ್ರಚಾರಕ್ಕಾಗಿ. ಈಗ ಮತವು ನಮ್ಮ ಕಾವ್ಯರಥವನ್ನು ಮುಂದಕ್ಕೆ ಎಳೆಯಲಾರದಾಗಿದೆ. ಎಲ್ಲ ಧರ್ಮಗಳ ತಿರುಳು ಒಂದೇ ಎಂದು ಅರಿತು ಅದನ್ನು ಕಾವ್ಯದ ಮೂಲಕ ಹಬ್ಬಿಸುವುದಕ್ಕೆ ಇಂದಿನ ಕವಿತೆ ತೊಡಗದೇ ಇಲ್ಲ. ಸೃಷ್ಟಿಯ ಮರ್ಮವನ್ನರಿಯದೆ ವಿಸ್ಮಯಪಡುವುದು, ಕಷ್ಟದಲ್ಲಿ ಚಿತ್ತಶಾಂತಿಯನ್ನು ಕೊಡುವುದು, ಪೌರುಷಪ್ರಯತ್ನಕ್ಕೆ ನಾನಾ ಮಾರ್ಗ

ಗಳನ್ನು ತೋರಿಸುವುದು, ಇವು ಎಲ್ಲ ಮತಗಳ ಸಾರ. ಈಗ ಮತಕ್ಕೆ ಪ್ರತೀಕವಾಗಿ ನಾನಾ ಭಕ್ತಿಗಳು ಬಂದು ನಿಂತಿವೆ. ದೇಶಪ್ರೇಮ, ಭಾಷಾಪ್ರೇಮ ಮುಂತಾದುವು ನಮ್ಮ ಮನಸ್ಸನ್ನು ಈಗ ಆಕ್ರಮಿಸಿಕೊಂಡಿವೆ. ಪ್ರಗತಿಮಾರ್ಗವನ್ನು ಹಿಡಿದು, ಏಳಿಗೆಗಾಗಿ ದುಡಿಯಬೇಕೆಂಬ ಹಂಬಲ ನಮ್ಮ ಜನರಿಗೆ ಹೆಚ್ಚಿದೆ. ಇವೆಲ್ಲ ಇಂದಿನ ಕವಿತೆಯಲ್ಲಿ ಬೆಳಗುತ್ತಿವೆ. ನಮ್ಮ ನಾಡುನುಡಿಗಳ ಹಿಂದಿನ ವೈಭವವನ್ನೂ ಇಂದಿನ ಬೀಳನ್ನೂ ಹೋಲಿಸಿ ಕೊರಗುವ ಕವಿತೆಗಳು ಕೆಲವಿವೆ. ಇವು ಬರಿಯ ಕೊರಗಿನಲ್ಲಿಯೇ ಮುಗಿಯದೆ ಹಿಂದಿನಂಥ ವೈಭವವನ್ನು ನಮ್ಮ ಪ್ರಯತ್ನದಿಂದ ತಿರುಗಿ ಗಳಿಸಬೇಕೆಂಬ ಉತ್ಸಾಹದಿಂದ ಕೂಡಿವೆ. ಐರೋಪ್ಯರು ನಮ್ಮ ನಾಡಿಗೆ ಬಂದು ನಮ್ಮ ಹಿಂದಿನ ಚರಿತ್ರೆಯನ್ನೂ ಸಂಸ್ಕೃತಿಯನ್ನೂ ಶೋಧಿಸಿ ಹೊರಗೆಡವಿದರು. ಅವರ ದಾರಿಯಲ್ಲೇ ನಮ್ಮವರೂ ನಡೆದು ನಮ್ಮ ಬಾಳು ಹಿಂದೆ ಮುಟ್ಟಿದ್ದ ಉನ್ನತಿಯ ಶಿಖರವನ್ನು ಎಲ್ಲರಿಗೂ ಕಾಣಿಸಿದರು. ಕವಿಗಳ ಮನಸ್ಸನ್ನು ಇದು ಸೂರೆಗೊಂಡಿತು. ಈ ವೈಭವ ದಿಂದ ಪುಲಕಿತವಾದ ಕವಿತೆಗಳು ಹೇರಳವಾಗಿವೆ. . . .

ಇದು ತ್ಯಾಗದ ಯುಗ. ಏತಕ್ಕಾಗಿ ತ್ಯಾಗ? ನಮ್ಮವರಿಗೆ ಮೇಲ್ಮೆಯನ್ನುಂಟು ಮಾಡುವುದಕ್ಕಾಗಿ. ಎಷ್ಟೋ ಜನ ತ್ಯಾಗಶೀಲರು ನಮ್ಮ ನಡುವೆ ಇದ್ದಾರೆ. ಅತಿ ದೊಡ್ಡದಾದ ಒಂದು ಬಯಕೆಯನ್ನು ಅವರು ಸಾಧಿಸುವುದಕ್ಕಾಗಿ ತೊಡಗಿ ದ್ದಾರೆ. ಅದೇ ಅವರ ಬಾಳಿನ ಉಸಿರು. ನಾನಾಮುಖವಾಗಿ ಮುಂದುವರಿದು ಎಲ್ಲ ರೀತಿಯ ನೆಮ್ಮದಿಯ ಉನ್ನತಿಯನ್ನು ನಮ್ಮ ನಾಡಿಗೆ ಉಂಟುಮಾಡುವುದಕ್ಕಾಗಿ ತಪಸ್ವಿಗಳಂತೆ ದೀಕ್ಷಿತರಾಗಿದ್ದಾರೆ. ಈ ತ್ಯಾಗ ಕನ್ನಡ ಕವಿಗಳನ್ನು ಕೆರಳಿಸದೆ ಇಲ್ಲ. . . . . ದುಷ್ಟಚಿಂತನೆಗಳನ್ನು ಬಿಟ್ಟು ತ್ಯಾಗಮುಖಿಯಾದ ಸಾಧನೆಯಲ್ಲಿ ಮಾತ್ರವೇ . . . . ನಾಡಿನ ಸೌಭಾಗ್ಯ ಸಾಧ್ಯ.

ಸುಖವೂ ಸಂತೋಷವೂ ಎಲ್ಲರ ಹಕ್ಕು. ಸಮಾಜದಲ್ಲಿ ಇವು ಒಂದು ಪಂಗಡ ಕ್ಕಿದ್ದು ಮತ್ತೊಂದಕ್ಕೆ ಇಲ್ಲದೇಹೋದಾಗ ಅತೃಪ್ತಿಯೂ ಅಶಾಂತಿಯೂ ಹೆಚ್ಚಾಗು ವುವು. ಒಬ್ಬರು ಐಶ್ವರ್ಯದಲ್ಲಿ ಮೆರೆಯುತ್ತಿದ್ದರೆ ಹಲವರು ಬಡತನದಲ್ಲಿ ತೊಳಲು ತ್ತಿದ್ದಾರೆ. ಇದು ನ್ಯಾಯವಲ್ಲವೆಂದೂ ದೇಶದ ಸಂಪತ್ತನ್ನು ವೃದ್ಧಿಗೊಳಿಸಲು ದುಡಿಯುವ ಅನೇಕರ ಮೇಲ್ಮೆಗಾಗಿ ಅವರಿಂದ ಪುಷ್ಟರಾದ ಶ್ರೀಮಂತರು ಉದಾರಿ ಗಳಾಗಬೇಕೆಂದೂ ಹೇಳುವ ಒಂದು ತತ್ವ ನಮ್ಮ ಕವಿಗಳ ಅನುಭವಕ್ಕೂ ಬಂದಿದೆ. ಇದರಿಂದ ಬಡತನವನ್ನು ತೊಲಗಿಸುವುದಕ್ಕೂ ಅಜ್ಞಾನವನ್ನು ಕಳೆಯುವುದಕ್ಕೂ ಪ್ರಯತ್ನಿಸಬೇಕೆಂಬ ಪ್ರೇರಣೆ ಉಂಟಾಗಿದೆ. . . .

ನಮ್ಮ ಸಮಾಜದಲ್ಲಿ ಹಲವು ದೋಷಗಳು ಹಿಂದಿನಿಂದ ಇವೆ. ಇಂದು ಅವು

ನಮ್ಮ ಪ್ರಗತಿಗೆ ಅಡ್ಡವಾಗಿವೆ. ಹಲವರಿಗೆ ಇದರಿಂದ ಬಹು ಹಿಂಸೆ. ಈ ದ್ವೇಷಗಳನ್ನು ನಿವಾರಿಸಲು ಸುಧಾರಣೆಯೆಂಬ ಚಿಕಿತ್ಸೆ ಆಗಬೇಕು. ಕೆಲವರು ಶಸ್ತ್ರಚಿಕಿತ್ಸೆಯನ್ನು ಸೂಚಿಸಿದರೆ ಮತ್ತೆ ಕೆಲವರು ಮದ್ದುಕೊಟ್ಟು ನಿಧಾನವಾಗಿ ಗುಣಪಡಿಸುವುದು ಮೇಲೆಂದು ಹೇಳುತ್ತಾರೆ. ಒಂದು ಕ್ರಾಂತಿ ಪದ್ಧತಿ, ಇನ್ನೊಂದು ಪ್ರಗತಿ ಪದ್ಧತಿ. ಕನ್ನಡ ಕವಿಗಳು ಇಂಥ ಸುಧಾರಣೆಗಳಿಗೆ ಗಮನವನ್ನು ಸಲ್ಲಿಸಿದ್ದಾರೆ.

ಸೌಂದರ್ಯ ದರ್ಶನದಲ್ಲಿ ಹೊಸ ಕನ್ನಡ ಕವಿತೆ ಮುಂದುವರಿದಿದೆ; ಬಳಕೆಯಾಗಿರುವ ವಸ್ತುಗಳಲ್ಲೇ ಹೊಸದಾದ ಸೊಗಸನ್ನು ತೋರಿಸುತ್ತಿದೆ. ಮಾನವನ ಹೃದಯಸೌಂದರ್ಯವನ್ನೂ ಸೃಷ್ಟಿಯ ಸೌಂದರ್ಯವನ್ನೂ ತೂಗಿ ನೋಡಲು ಹವಣಿಸುತ್ತಿದೆ.

ಸಾಧಾರಣ ಮನುಷ್ಯರಾದರೂ ಅವರಲ್ಲಿ ಇರುವ ಹೃದಯಸೌಂದರ್ಯ ಎಷ್ಟೋ ಜನರಲ್ಲಿ ಇರುವುದಿಲ್ಲ. ಪ್ರಕೃತಿಸೌಂದರ್ಯವನ್ನು ಇಂದಿನ ಕವಿಗಳು ಬಣ್ಣಿಸುವ ರೀತಿ ಹೊಸದು. ಇಂಗ್ಲಿಷು ಸಾಹಿತ್ಯದಲ್ಲಿ ಪ್ರಕೃತಿಯ ವಿಲಾಸ ಚೆಲ್ಲಾಡಿರುವುದನ್ನು ನಮ್ಮ ಕವಿಗಳು ಕಂಡು ಅದರಂತೆಯೇ ಸಹಜತೆಯನ್ನು ಬಿಡದೆ ಭಾವಪೂರ್ಣವಾಗಿ ವರ್ಣಿಸಿದ್ದಾರೆ. . . .

ಪ್ರಕೃತಿಯ ಚೆಲುವಿನಿಂದ ಕವಿಗಳ ಮನಸ್ಸು ಸೊಕ್ಕಿ ಸಮಾಧಿಯನ್ನು ಹೊಂದಿದೆ. ಅವುಗಳನ್ನು ಓದಿದಾಗ ಉಂಟಾಗುವ ಚಿತ್ತಶಾಂತಿ ವರ್ಣನೆಗೆ ಮೀರಿದ್ದು. ಇವೆಲ್ಲ ಅಂತಃಸ್ಫುರಣೆಯಿಂದ ಜನ್ಮಿಸಿರುವ ಗೀತಗಳು.

ಮೇಲೆ ಕಾಣಿಸಿರುವ ಅಂಶಗಳೆಲ್ಲ ಪುನರುಜ್ಜೀವನ ಹೊಂದಿರುವ ಭರತಖಂಡದ ಎಲ್ಲ ಭಾಷೆಗಳಲ್ಲಿಯೂ ಕಾಣಿಸುತ್ತವೆ. ಇಂಗ್ಲಿಷಿನ ವಿದ್ಯೆ ಹರಡಿ ನಮ್ಮ ದೇಶ ಭಾಷೆಗಳು ಕಣ್ಣುತೆರೆದು ಹೊಸ ಸಾಹಿತ್ಯದ ಸೃಷ್ಟಿಗೆ ಆರಂಭಿಸಿ ಭಾರತದ ಬಯಕೆಗಳನ್ನು ನಾನಾ ರೀತಿಯಲ್ಲಿ ರೂಪಿಸುತ್ತಿವೆ. ಬಂಗಾಳಿ, ಗುಜರಾತಿ ಮುಂತಾದ ಕೆಲವು ಭಾಷೆಗಳ ಸಾಹಿತ್ಯ— ಬಂಕಿಮಚಂದ್ರ, ರವೀಂದ್ರನಾಥ ಠಾಕೂರ ಮುಂತಾದ ಕವಿಶ್ರೇಷ್ಠರು ಕಾರಣರಾಗಿ ಬಹುದೂರ ಮುಂದಕ್ಕೆ ಹೋಗಿದೆ. ಯಾವ ಪ್ರಾಂತ್ಯದಲ್ಲಿ ನೋಡಿದರೂ ಹೊಸ ಚೈತನ್ಯದ ಸುಳಿದಾಟ ಸಾಹಿತ್ಯದಲ್ಲಿ ಕಾಣುತ್ತದೆ. ಕನ್ನಡ ಕವಿಗಳು ಕೂಡ ಭರತಖಂಡವನ್ನೆಲ್ಲ ಆವರಿಸಿಕೊಂಡಿರುವ ನಾನಾ ಆದರ್ಶಗಳನ್ನು ಉಗ್ಗಡಿಸಿ ನಿರೂಪಿಸಿದ್ದಾರೆ. ಭರತಖಂಡದ ಮಹಾಮೇಳದಲ್ಲಿ ಕನ್ನಡ ಸಾಹಿತ್ಯವು ತನ್ನ ವೀಣೆಯ ಧ್ವನಿಯನ್ನು ಬೆರಸಿ ಸಮುದಾಯವಾದ ಮಾಧುರ್ಯವನ್ನು ಹೆಚ್ಚಿಸಿದೆ. ದೇಶಪ್ರೇಮ, ಭಾಷಾಭಕ್ತಿ, ಸಾಹಿತ್ಯಸೇವೆ, ಜನರ ಉದ್ಧಾರ, ಅಜ್ಞಾನದ ತೊರಾಟ, ಜ್ಞಾನಪ್ರಸಾರ, ಬಿಡುಗಡೆಯ ಬಯಕೆ, ಶಾಂತಿ, ನೆಮ್ಮದಿ — ಒಟ್ಟಿನಲ್ಲಿ ಮನುಷ್ಯನ

ಬಾಳು ಯಾವ ಯಾವುದರಿಂದ ಹಸಗೊಳ್ಳುವುದೋ, ಉಜ್ವಲವಾಗುವುದೋ ಅವೆಲ್ಲ ಅಂಶಗಳು ಈಗಿನ ಕನ್ನಡ ಕವಿತೆಯ ತಿರುಳಾಗಿವೆ.

ಹೊಸ ಕನ್ನಡ ಕವಿತೆ ನಿಜವಾದ ಸ್ಫೂರ್ತಿಯಿಂದ ಹಾಡುತ್ತಿದೆ. ನಾನಾ ಕಡೆಗಳಿಂದ ಬಂದ ಪ್ರೇರಣೆಗೆ ಹೊಳಲುಕೊಡುತ್ತ, ಕೆಲವುವೇಳೆ ಅದನ್ನು ಇನ್ನೂ ಹೆಚ್ಚು ಸಾಂದ್ರವಾಗಿಸುತ್ತ, ಅದು ಜೀವನದಲ್ಲಿ ಮಂಗಳವನ್ನು ಅರಸಲು ಹೊರಟಿದೆ. . . . . ಇಂತಹ ಹಿರಿಯ ಆದರ್ಶವನ್ನು ಸಾಧಿಸಲು ಹೊರಟಿರುವ ಕನ್ನಡ ಕವಿತೆ ಮುಂದೆ ಇನ್ನೂ ಹೆಚ್ಚಾಗಿ ಭವ್ಯತೆಯ ಮಂದಿರವನ್ನು ರೂಪಿಸಲಿ.

ಡಿ.ಎಲ್.ಎನ್.

***

**ಡಾ|| ಜೆ. ಸಿ. ಘೋಷ್ ಅವರ ಸಂದೇಶ**

ನಮ್ಮ ಮುನ್ನಡೆಯಲ್ಲಿನ ನಿಧಾನತೆಯನ್ನು ಕುರಿತು ಯೋಚಿಸಿದರೆ ಅಸಹನೆ ಉಂಟಾಗುತ್ತದೆ. ಈಚಿನ ೧೫೦ ವರ್ಷಗಳಲ್ಲಿ ಹಿಂದಿನ ೧೦,೦೦೦ ವರ್ಷಗಳಲ್ಲಿ ಆದುದಕ್ಕಿಂತ ಹೆಚ್ಚಿನ ಪ್ರಗತಿಯನ್ನು ಬೇರೆ ದೇಶಗಳವರು ಸಾಧಿಸಿದ್ದಾರೆ. ಇದಕ್ಕೆ ಪ್ರಧಾನಕಾರಣ ವಿಜ್ಞಾನದ ಬೆಳವಣಿಗೆ; ಅದು ಆರ್ಥಿಕಜೀವನದ ಮೇಲೂ, ಸಾಮಾನ್ಯರ ಮನಸ್ಸಿನ ದೃಷ್ಟಿರೀತಿಯ ಮೇಲೂ ಬಹು ಪರಿಣಾಮಕಾರಿಯಾದ್ದರಿಂದ. ಅನಟೋಲ್ ಫ್ರಾನ್ಸ್ ಎಂಬ ಸಾಹಿತಿ ಹೇಳಿದರು: 'ನಾಗರಿಕತೆಯೆಂಬುದು ಬಡವರ ಸಹನೆಯ ಮೇಲೆ ನಿಂತಿದೆ' ಎಂದು. ವಿಜ್ಞಾನ ಮಾಡಿರುವ ಉಪಕಾರದ ಫಲವಾಗಿ ಇಂದು ಅದನ್ನು ಸಾಧಾರಣರ ತೃಪ್ತಿಯ ಮೇಲೆ ಭದ್ರವಾಗಿ ನಿಲ್ಲಿಸಬಹುದಾಗಿದೆ. ಮನುಷ್ಯನನ್ನು ಗುಲಾಮನನ್ನಾಗಿ ಮಾಡದೆ ನಾಗರಿಕತೆಯನ್ನು ಸಾಧಿಸಬಹುದು. ದಾಸನ ಕೆಲಸವನ್ನು ಒಂದು ಯಂತ್ರ ಹೆಚ್ಚು ಸುಲಭವಾಗಿ ಮಾಡಬಲ್ಲದು; ಅದು ಹೊರುವ ಹೊಣೆಯನ್ನು ಮನುಷ್ಯನ ಮಾಂಸಖಂಡಗಳು ಹೊರಲಾರವು. ಮಾನವಶಕ್ತಿಯನ್ನು ಹೆಚ್ಚು ಸಂತೋಷದ ಕೆಲಸಗಳಿಗೆ ಹೂಡಿಕೊಳ್ಳಬಹುದು. ಇಂಗ್ಲಂಡಿನಲ್ಲಿ ಪ್ರತಿಯೊಬ್ಬರ ಸೌಕರ್ಯಕ್ಕಾಗಿಯೂ ೮ ಯಂತ್ರದ ಆಳುಗಳು ದುಡಿದರೆ ಇಂಡಿಯಾದಲ್ಲಿ ೬ ಜನಕ್ಕೆ ಒಬ್ಬ ಆಳು ದುಡಿವಷ್ಟು ಮಾತ್ರ ಇದೆ. ಇಂಗ್ಲಂಡಿನ ಐಶ್ವರ್ಯಕ್ಕೂ ಇಂಡಿಯಾದ ಬಡತನಕ್ಕೂ ಈ ವ್ಯತ್ಯಾಸವೇ ಕಾರಣ.

ಪ್ರಕೃತಿಯ ಎಲ್ಲ ಅನುಕೂಲಗಳಿದ್ದೂ ಭೂಮಿಯಿಂದ ಸಾಕಾದಷ್ಟು ಪ್ರಯೋಜನ ಪಡೆಯದೆ ಇರುವುದು ಮಹಾಪರಾಧ.

ಅಶೋಕ ಬುದ್ಧ ಮುಂತಾದವರ ಹೆಸರನ್ನು ಹೆಮ್ಮೆಯಿಂದ ಹೇಳಿಕೊಂಡು ಪ್ರಾಚೀನ ವೈಭವವನ್ನೂ ಸಾಧನೆಯನ್ನೂ ಕೊಚ್ಚಿಕೊಳ್ಳುತ್ತ ನಾವು ಬಹು ಪುರಾತನ

ರಾದ್ದಕ್ಕೇ ಹಿರಿಯರೆಂದು ತೃಪ್ತಿಪಟ್ಟುಕೊಳ್ಳಬಾರದು. ಹಿಂದಿನದಕ್ಕಾಗಿ ಹೆಮ್ಮೆ— ಇಂದಿನ ಸ್ಥಿತಿಯನ್ನು ಉತ್ತಮಪಡಿಸಿಕೊಂಡರೆ ಮಾತ್ರ ಸಾರ್ಥಕವಾದೀತು.

ತಮ್ಮ ಸ್ಥಿತಿಯನ್ನು ಮೇಲ್ಪಡಿಸಿಕೊಳ್ಳಬೇಕೆಂಬ ಪ್ರವೃತ್ತಿ ಸಾಮಾನ್ಯರಲ್ಲಿ ಬಲಿಯಬೇಕು. ವಿದ್ಯಾರ್ಜನೆಯ ಫಲವನ್ನು ಅನುಭವಿಸುವವರ ಮೇಲೆ ದೊಡ್ಡ ಭಾರದ ಹೊರೆ ಹೊತ್ತಿದೆ. ಅವರ ಉತ್ಸಾಹದಿಂದ ಸಂಪ್ರದಾಯ ಪಾಲನೆಯ ರೂಪದಲ್ಲಿ ಬಂದಿರುವ ನಡತೆ ಪದ್ಧತಿಗಳ ಬಿಗಿ ಸಡಿಲವಾಗಬೇಕು; ಜಡತೆ ತೊಲಗಬೇಕು. ಅವರ ಪ್ರಯತ್ನ, ನಾಗರಿಕತೆ, ಸ್ವಾರ್ಥತ್ಯಾಗಗಳಿಂದಲೇ ಜನಜೀವನಕ್ಕೆ ಪುಷ್ಟಿ ಬರಬೇಕು. ಸತ್ಯವನ್ನು ನೋಡೋಣ; ನುಡಿಯೋಣ: ನಾವು ಬಹುಕಾಲದಿಂದ ಪುರಾತನ ಅವಶೇಷಗಳಂತೆ— ಜರಠಗಳಂತೆ ಮಾತ್ರ ಬದುಕಿದ್ದೇವೆನ್ನಿಸುತ್ತದೆ. ಈ ಸ್ಥಿತಿಯನ್ನು ಉತ್ತಮಪಡಿಸೆವಾದರೆ ಬಾಳನ್ನು ಕೊನೆಗಾಣಿಸುವುದು ಮೇಲು.

ಮನಸ್ಸಿನ ಜಡತೆಯನ್ನು ಪರಿಹರಿಸಲು ವಿಜ್ಞಾನದ ಶಿಕ್ಷಣಕ್ಕಿಂತ ಉತ್ತಮ ಸಾಧನ ಬೇರೊಂದಿಲ್ಲ. ಕೈಗಾರಿಕೆ, ವ್ಯವಸಾಯಗಳಿಗೆ, ವಿಜ್ಞಾನದ ತತ್ವಗಳೂ ವಸ್ತುಗಳೂ ಉತ್ಪನ್ನಗಳೂ ವಿಧಾನಗಳೂ ಒದಗಿಸಿರುವ ಶಕ್ತಿಸಾಧನಗಳನ್ನು ಬಳಸಿ ಕೊಂಡರೆಯೇ ನಾವು ಕೊಳೆಯದೆ ಉಳಿದೇವು— ಬೆಳೆದೇವು. ಬೇರೆ ದೇಶಗಳಲ್ಲಿ ಜನಜೀವನದ ಸಂಪತ್ತಿಯೂ ಸಂಸ್ಕೃತಿಯ ಮಟ್ಟವೂ ಉತ್ತಮಪಟ್ಟು, ಕೈಗಾರಿಕೆ, ಕಸುಬು, ಕಲೆ ಇವು ಈ ಮೂಲಕ ಅಭಿವೃದ್ಧಿಯಾಗಿವೆ. ನಮ್ಮಲ್ಲಿಯೂ ಅದೇ ಬದುಕುವ ದಾರಿ! ವಿಜ್ಞಾನವೆಂದರೆ ಕೇವಲ ಸಂಗತಿಗಳನ್ನೂ ಪದಾರ್ಥಗಳನ್ನೂ ಹೊಸದಾಗಿ ಕಂಡುಹಿಡಿಯುವುದಾಗಲಿ, ಅವುಗಳ ಪರಸ್ಪರ ಸಂಬಂಧಗಳನ್ನು ತಿಳಿಸುವು ದಾಗಲಿ, ಜನದ ಅಗತ್ಯಕ್ಕೆ ಅವುಗಳನ್ನು ಒದಗಿಸಿಕೊಳ್ಳುವುದಾಗಲಿ — ಅಲ್ಲ. ಅದು ಮನುಷ್ಯನ ಮನಸ್ಸನ್ನು ಉನ್ನತಗೊಳಿಸುವ ಸಾಧನ. ಸತ್ಯವನ್ನು ಅರಿಯುವ ಮಾರ್ಗ; ಸತ್ಯವನ್ನು ಕಂಡುಹಿಡಿಯಬಹುದು ಎಂಬ ಭರವಸೆ ಕೊಡುವ ವಿಶ್ವಾಸ.

ಪ್ರೆಸಿಡೆಂಟ್ ರೂಸ್‌ವೆಲ್ಟರು ಜನಜೀವನದ ರಕ್ಷಣೆಗಾಗಿ ಬೇಕಾದ ಎಂಟು ಸಂಗತಿಗಳನ್ನು ಪಟ್ಟಿಮಾಡಿದರು: ಪ್ರಪಂಚದಲ್ಲಿ ಪ್ರಜಾಧಿಕಾರ ತತ್ವ ಸ್ಥಾಪಿತವಾಗಿ ನಿಲ್ಲಬೇಕಾದರೆ. ಜೊತೆಗೆ ಒಂಬತ್ತನೆಯದಾಗಿ "ವಿಜ್ಞಾನ ಮನೋಧರ್ಮದ ಅಗತ್ಯ" ಎಂಬುದನ್ನು ಸೇರಿಸಬೇಕು. ಅರಿಯದ ಉತ್ಸಾಹೀ ಯುವಕರನ್ನು ಅಪಮಾರ್ಗಗಳಿಗೆ ಎಳೆಯುವ ರಾಜಕೀಯಾದಿ ಪ್ರಚಾರಗಳ ಹಾವಳಿಯನ್ನು ತಪ್ಪಿಸಿ ಅವರನ್ನು ಉದ್ಧಾರ ಮಾಡಬೇಕಾದರೂ ವಿಜ್ಞಾನಶಿಕ್ಷಣ ಅಗತ್ಯ.

ರಾಷ್ಟ್ರದ ಯೋಗ್ಯತೆ ವ್ಯಕ್ತಿಯಾದ ಅಲ್ಲಿನ ಪ್ರಜೆಯ ಯೋಗ್ಯತೆಯ ಮೇಲೆ ನಟ್ಟಿದೆ ಎಂದು ಜ್ಞಾನ್ ಸ್ಟುವರ್ಟ್ ಮಿಲ್ ಹೇಳಿದುದು ನಿಜ.

ಸಂಸ್ಕೃತಿತರುವ, ಸಂಸ್ಕೃತಿತಾರದ ವಿಷಯಗಳು ಎಂಬ ಭೇದ ವಿದ್ಯೆಯಲ್ಲಿ ಸಲ್ಲದು. ಬೋಧನೆಯಲ್ಲಿ ಮಾತ್ರ ಸಂಸ್ಕೃತಿ ಸಾಧಕ, ಸಂಸ್ಕೃತಿ ನಾಶಕ ವಿಧಗಳುಂಟು. ಸುತ್ತಲಿನ ಪರಿಸ್ಥಿತಿಯ ಎಡರು ತೊಡರುಗಳನ್ನು ನಿವಾರಿಸಿಕೊಳ್ಳಬೇಕಾದರೆ ಮೇಲ್ತೆರದ ಬಾಳನ್ನು ಬಯಸಿ ಅದಕ್ಕಾಗಿ ಹೋರಾಡಿ ಗೆಲ್ಲಬೇಕು. ಇಂದು ಇದೇ ನಮ್ಮ ಪ್ರಧಾನಕಾರ್ಯ.

ಈಗ ನಮ್ಮ ವೈಸರಾಯ್ ಆಗಿ ಬಂದಿರುವ ಮಹನೀಯರು ಲಂಡನಿನಲ್ಲಿ ಮಾತನಾಡುತ್ತ ಹೇಳಿದರು: ಯುದ್ಧರಂಗದಲ್ಲಿ ಅಕ್ಷರಾಷ್ಟ್ರಗಳನ್ನು ಸೋಲಿಸಲೂ ಪ್ರಪಂಚವನ್ನು ನಾಶಗೊಳಿಸಲೂ ಕೇಳಿದಷ್ಟು ಹಣ ಸಿಕ್ಕುತ್ತಿದೆ. ಶಾಂತಿಯನ್ನು ಕೆಡಿಸುವ ಶತ್ರುಗಳಾದ, ಬಡತನ, ಅವಿದ್ಯೆ, ನಿರುದ್ಯೋಗ, ಅನಾರೋಗ್ಯವೆಂಬ ಶತ್ರುಗಳನ್ನು ನಾಶಮಾಡಲು ಸಾಕಾದಷ್ಟು ಹಣ ದೊರೆಯುವುದು ಕಷ್ಟವಾಗುವುದೆಂಬುದನ್ನು ಪರ್ಯಾಲೋಚಿಸಿದರೆ ನನಗೆ ಆಶ್ಚರ್ಯವಾಗುತ್ತದೆ ಎಂದು.

ಅಕ್ಷರಾಷ್ಟ್ರಗಳವರು ಬೇಗ ಸೋತು ಶರಣಾಗುವರು: ಶಾಂತಿಯ ಈ ಶತ್ರುಗಳೊಡನೆ ಕಾದಾಡಿ ಜಯಪಡೆಯಬೇಕಾದ ಕೆಲಸ ಉಳಿಯುವುದು. ಇತರ ಕಡೆಗಳಿಗಿಂತ ಭರತಖಂಡದಲ್ಲಿ. ಆ ಕಾಳೆಗ ನಿಮ್ಮನ್ನು,— ಹೊಸ ಪದವೀಧರರನ್ನು ಕರೆಯುತ್ತಿದೆ, ಕೆಣಕುತ್ತಿದೆ. ಅದರ ಸೈನಿಕರಾಗಿ. ಮುಂದೆ ಕಣ್ಣುಹಾಯಿಸಿನೋಡಿ. ಹಿನ್ನೋಟ ಬೇಡ. ಆ ಕಾಳಗ-ಸಂತೋಷ ನಿಮ್ಮನ್ನು ಹುರಿದುಂಬಿಸಲಿ. ಅಲ್ಲಿ ಗೆಲವು ಪಡೆಯುವ ವರೆಗೂ ನಿಮ್ಮ ಕೈಯಬಾವುಟ ಕೆಳಗಿಳಿಯದಿರಲಿ.''

—ಮೈಸೂರು ವಿಶ್ವವಿದ್ಯಾನಿಲಯದ
೧೯೪೩ ರ ಪದವೀದಾನ ಮಹೋತ್ಸವದ ಭಾಷಣದಿಂದ.

* * *

**೩. ಬೆಂಗಳೂರು ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು. ರಜತೋತ್ಸವ**

ಈ ವರ್ಷ ಸಂಘದ ರಜತೋತ್ಸವವನ್ನು ನಡಸಬೇಕೆಂದು ನಿಶ್ಚಯಿಸಿರುವ ಸಂಗತಿಯನ್ನು ಈ ಹಿಂದೆಯೆ ಪ್ರಕಟಿಸಲಾಗಿತ್ತಷ್ಟೆ. ಸಂಘದ ಹಿಂದಿನ ಕಾರ್ಯದರ್ಶಿಗಳೂ, ಅಧಿಕಾರಿ ವರ್ಗದವರೂ, ಅಭಿಮಾನಿಗಳೂ ಆ ನಿಶ್ಚಯವನ್ನು ಅನುಮೋದಿಸಿ ಉತ್ಸವ ಕಾರ್ಯಗಳನ್ನು ಮುಂದುವರಿಸುವಲ್ಲಿ ನಮ್ಮೊಡನೆ ಸಹಕರಿಸುತ್ತಿರುವುದು ಸಂತೋಷಕರವಾಗಿದೆ.

ಉತ್ಸವವನ್ನು ಬರುವ ನವೆಂಬರ್ ತಿಂಗಳು ಇಲ್ಲವೆ ಡಿಸೆಂಬರ್ ಅಂತ್ಯದೊಳಗಾಗಿ ನಡಸಲು ತೀರ್ಮಾನವಾಗಿದೆ. ಆ ಸಂದರ್ಭದಲ್ಲಿ **ಸಂಘ ಸಮ್ಮೇಳನವನ್ನೂ** ಸಂಘದ ಹಿಂದಿನ ಮತ್ತು ಇಂದಿನ ಸದಸ್ಯರು ಭಾಗವಹಿಸುವ **ಬರಹಗಾರರ ಕೂಟ**

ವೊಂದನ್ನೂ ನಡಸಬೇಕೆಂದು ಉದ್ದೇಶಿಸಿದೆ. ವಿದ್ಯಾರ್ಥಿಗಳಿಗಾಗಿ ಭಾಷಣ, ವಾಚನ, ಪ್ರಬಂಧ ಮತ್ತು ಸಣ್ಣಕತೆ — ಇವುಗಳಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಿದೆ. ವಿಜ್ಞಾನ ವಿಷಯವನ್ನು ಕುರಿತ ಕನ್ನಡದ ಉತ್ತಮ ಪ್ರಬಂಧವೊಂದಕ್ಕೆ ಈ ಸಂಘದ ಮೊದಲನೆಯ ಅಧ್ಯಕ್ಷರಾಗಿದ್ದ ದಿವಂಗತರಾದ ರಾಜಸೇವಾಸಕ್ತ ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರ ಹೆಸರಿನಿಂದ ಬಹುಮಾನವನ್ನು ಕೊಡಲು ನಿಶ್ಚಯಿಸಿದೆ; ಮತ್ತು ಉತ್ಸವದ ಅಂಗವಾಗಿ ಅವರ ಭಾವಚಿತ್ರ ಅನಾವರಣವನ್ನೂ ನೆರವೇರಿಸಬೇಕೆಂದು ಗೊತ್ತುಮಾಡಿದೆ. ಗಮಕ, ಸಂಗೀತ, ನಾಟಕ ಮತ್ತು ಉಪನ್ಯಾಸಗಳನ್ನು ಒಳಕೊಂಡ ಎರಡು ದಿನದ ಕಾರ್ಯಕ್ರಮ ಏರ್ಪಾಡಾಗಿದೆ. ಕರ್ಣಾಟಕ ಸಂಘದ ೨೫ ವರ್ಷದ ಚರಿತ್ರೆಯನ್ನೊಳಗೊಂಡ ಸಣ್ಣ ಪುಸ್ತಕವೊಂದನ್ನು ಪ್ರಕಟಿಸಲು ನಿಶ್ಚಯಿಸಿದೆ.

ಸಂಘದ ಘನತೆಗೆ ತಕ್ಕಂತೆ ಉತ್ಸವವನ್ನು ಯಶಸ್ವಿಯಾಗಿ ನಡಸುವುದಕ್ಕೆ ಸುಮಾರು **ಒಂದು ಸಾವಿರ ರೂಪಾಯಿ** ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದೆ. ಈ ೨೫ ವರ್ಷಗಳಲ್ಲಿ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳಾಗಿದ್ದವರೂ ಕರ್ಣಾಟಕ ಸಂಘದ ಪುರೋಭಿವೃದ್ಧಿಗಾಗಿ ದುಡಿದವರೂ ಹಲವು ಸಾವಿರ ಮಂದಿ. ಅವರಲ್ಲಿ ಎಷ್ಟೋ ಮಹನೀಯರು ಜೀವನದ ನಾನಾ ರಂಗಗಳಲ್ಲಿ ಬಹು ಉನ್ನತ ಸ್ಥಾನದಲ್ಲಿದ್ದಾರೆ. ಇವರಲ್ಲದೆ ಈ ಕಾಲೇಜಿನಲ್ಲಿ ವ್ಯಾಸಂಗಮಾಡದಿದ್ದರೂ ಈ ಸಂಘದ ವಿಶೇಷ ಚಟುವಟಿಕೆಗಳಲ್ಲಿ ಮಮತೆಯಿಟ್ಟು ಸಹಕರಿಸುತ್ತಿರುವ ಅಭಿಮಾನಿಗಳೂ ಬಹಳ ಜನ ಇದ್ದಾರೆ. ಇವರೆಲ್ಲರೂ ಎಂದಿನಂತೆ ನೆರವಾದರೆ ಇಷ್ಟು ಹಣ ಕೂಡುವುದು ದೊಡ್ಡದೇನೂ ಅಲ್ಲ. ಈ ಭರವಸೆಯಿಂದಲೆ ಈ ಕಾರ್ಯವನ್ನು ಕೈಕೊಂಡಿದ್ದೇವೆ. ಎಲ್ಲರೂ ಉದಾರವಾಗಿ ಸಹಾಯಮಾಡಬೇಕೆಂದು ಕೋರುತ್ತೇವೆ.

ಸಹಾಯದ್ರವ್ಯವನ್ನು ಸಂಘದ ಕಾರ್ಯದರ್ಶಿಗಳಿಗೆ ನೇರವಾಗಿಯಾದರೂ ಕಳಿಸಬಹುದು; ಹಣ ಶೇಖರಿಸಲು ಸಂಘದಿಂದ ಅಧಿಕಾರ ಪಡೆದ ಪ್ರತಿನಿಧಿಗಳ ವಶಕ್ಕಾದರೂ ಕೊಡಬಹುದು. ಕಡೆಯಲ್ಲಿ ಎಲ್ಲರಿಗೂ ಅಧಿಕೃತವಾದ ರಸೀತಿ ಕೊಡಲಾಗುತ್ತದೆ.

ಸಂಘದ ಹಿಂದಿನ ಸದಸ್ಯರೂ ಅಭಿಮಾನಿಗಳೂ ತಮ್ಮ ಈಗಿನ ವಿಳಾಸಗಳನ್ನು ಬರೆದು ತಿಳಿಸಿದರೆ ತುಂಬ ಉಪಕಾರವಾಗುತ್ತದೆ.

ಕನ್ನಡದ ಅಭಿಮಾನಿಗಳಾದ ಸರ್ವ ಮಹಾಜನರೂ ಉದಾರದ್ರವ್ಯ ಸಹಾಯದಿಂದಲೂ ಇತರ ಬಗೆಯ ಸಹಕಾರದಿಂದಲೂ ನಮಗೆ ನೆರವೀಯಬೇಕೆಂದು ಪ್ರಾರ್ಥಿಸುತ್ತೇವೆ.

ಬಿ. ಎಂ. ಶ್ರೀಕಂಠಯ್ಯ,
ಅಧ್ಯಕ್ಷ.

ಬಿ. ಎಲ್. ಗುರುರಾಜರಾವ್,
ಕಾರ್ಯದರ್ಶಿ.

# ಪ್ರಾಚ್ಯಲೇಖನಮಾಲೆ

**ಭಾರತಿ** — ಅಕ್ಟೋಬರ್, 1943.

ರಾಜೇಂದ್ರ ಚೋಳ ಚಕ್ರವರ್ತಿ — ವೆಂಗಿ. ಡಾ|| ನೇಲಮಾರು ವೆಂಕಟರಮಣಯ್ಯ

(ಆತನ ಗೋದಾವರಿ ತೀರ ನಿವಾಸದ ಕಾಲವನ್ನು ತಿಳಿಸುವ ಶಿಲಾಶಾಸನ ತಮಿಳಿನಲ್ಲಿರುವ ಭೀಮಾವರದ್ದು. ಕ್ರಿ.ಶ. ೧೧ನೆಯ ಶತಾಬ್ದದ ಪೂರ್ವ ಚಾಳುಕ್ಯ ಚೋಳ ಪರಸ್ಪರ ಸಂಬಂಧನಿರ್ಣಯಕ್ಕೆ ಇದೊಂದು ಮುಖ್ಯಸಾಧನ. . . . ೭ ಶಾಸನಗಳ ಆಧಾರ:— ಇವೆರಡೂ ಕರಿದಿಣ್ಡಿ ಶಾಸನದಲಿ ಹೇಳಿದಂತೆ ಚೋಳಚಕ್ರವರ್ತಿ ರಾಜೇಂದ್ರನು ಕ್ರಿ.ಶ. ೧೦೨೨ರಲ್ಲಿ ಎಂದರೆ ರಾಜರಾಜ ನರೇಂದ್ರನ ಪಟ್ಟಾಭಿಷೇಕದಲ್ಲಿ ರಾಜಮಹೇಂದ್ರ ಪ್ರಾಂತ ಇದ್ದನೆಂದೂ, ಆಗ ರಾಜರಾಜನರೇಂದ್ರನು ಚೋಳನ ಅನೇಕಾಪಾಗಿ ಇದ್ದನೆಂದೂ ಸ್ಥಿರಪಡಿಸುತ್ತವೆ. . . .)

**ಶಿವಾನುಭವ** — ಸಂಪುಟ ೧, ಅಕ್ಟೋಬರ್, ೧೯೪೩.

ಬಸವೇಶ್ವರನ ಚರಿತ್ರೆ— ರಾ|| ಬ|| ಪಿ. ಜಿ. ಹಳಕಟ್ಟಿ.

ವೀರಶೈವ ರಾಜಮನೆತನಗಳ ಚರಿತ್ರೆ— ರಾ|| ಬ|| ಪಿ. ಜಿ. ಹಳಕಟ್ಟಿ.

ಸಂಕೀರ್ಣ ವಚನಗಳು — ಭಾಗ ೩.

**The Jaina Antiquary** — IX, 1. June, 1943.

1. ವಿಜಯನಗರಕೆ ಜೈನ ಶಿಲಾಲೇಖ — ಕಾ. ಪ್ರ. ಜೈನ.
2. ಪಾರ್ಶ್ವದೇವಕೃತ ಸಂಗೀತ ಸಮಯಸಾರ — ನಾ. ಮೋ. ಖರೆ.
3. ತುಲುದೇಶಮೆ ಜೈನಧರ್ಮ— ಬಿ. ಎ. ಸಾಲೆತೋರ.
4. ಜೈನಿಯೋಂಕೀ ದೃಷ್ಟಿಮೇ ವಿಕ್ರಮಾದಿತ್ಯ— ಭುಜಬಲಿಶಾಸ್ತ್ರೀ.

1. 'The Jaina Theory of Anekanta Vada'— PROF. K. C. BHATTACHARYA.
2. 'Jaina and Buddhistic Studies'— DR. A. N. UPADHYE.
3. 'Advent of Jainism'— PROF. D. S. TRIVEDA.

**Man in India** — XXIII, 2. June, 1943, Marriage Number.

1. 'Santal Poetry and An Anthology of Marriage Sermons
2. Betrothal Dialogues'— W. G. ARCHER.

**The New Review** — XVIII, No. 107. November, 1943.

'Kautilya's Imperialism'— V. R. R. DIKSHITAR.

**Journal of the University of Bombay — XII, 1. July, 1943.**

1. 'The Origin of Civilization in Egypt'— S. N. CHAKRAVARTI.

TABLE OF THE EARLY PERIODS IN EGYPT, MESOPOTAMIA AND INDIA

| Date | Egypt | Mesopotamia | India |
|---|---|---|---|
| B.C. 3400 | Early Dynasties | Early Dynasties | Mohenjo-Daro |
| | Semainean | Jemdet Nasr | Amri |
| | Gerzean | Uruk | |
| 4500 | Amratian | Al'ubaid | |
| 5000 | Badarian | | |
| | Tasian | Neolithic Settlement at Kish | Neolithic Settlement at Sukkur and Rohri |

'2. Some Tamil Folk Songs'— M. N. SRINIVAS.

**Philosophy and Phenomenological Research — III, 4. June, 1943.**

'How to Read a Word'— J. K. FEIBLEMAN.

(1) Ontological Aspect: A word has a being and perhaps also existence. It is a sign which indicates object or reference. Does not depend on knower; on its effect. The symbolism of the word is not a mark on paper, nor a part of the grammar, syntax or vocabulary of a particular language, not even an intended meaning. It is a possible (or actual) sign.

(2) Epistemological Aspect: We consider a word in its knowledge-relation to a knower. . . . An aspect of something for somebody. An element in the knowledge process.

(3) Psychological Aspect: We are still closer to the word. Effect of the word on the knower. . . . The person affected by the meaning of the word becomes important. From a philosophy of language — a Semantics — we step into the psychology of language.

A word is the arbitrary symbol standing for an idea; and can take

(*a*) Innumerable forms . . . For the meaning we require a sign, and not the thing, or even the sound.

(*b*) Its indirect reference: is the actual thing which illustrates the object of the direct reference.

Thus words refer directly to abstract values and universally and indirectly to actual things.

Consider: Logic words, value words and fact words.

Value words are abstractions from actuality to possibility.

Logic words are abstractions from value.

**Journal of Education and Psychology** — I, 3. October, 1943.

1. 'Emotional Reaction for Stimuli Presented in Foreign Tongue and Mother Tongue'— Dr. N. S. N. Sastry.
2. 'Psychology of Laughter: The View of an Eminent Art Critic of Ancient India'— K. R. Pisharoti.

   (Bharata and Abhinavagupta).
3. 'A Theory of Emotional Experience'— B. Kuppuswamy.
4. 'Sanskrit through Sanskrit'— An idle Caprice'— D. G. Apte.

**Psychological Bulletin** — 39, 10. October, 1942.

'Speech and Personality'— Fillimore H. Sanford.

Is concerned with the existence, consistency, and significance of individual differences in the mode of verbal expression.

**Islamic Culture** — XVII, 4. October, 1943.

'Law and Culture in Islam'— A. A. A. Fyzee.

**Exhibition of Islamic History and Culture**: Opened on 25th August at Madras.

Describes:

The Life of the Prophet Room—The Mosque Room—The Pilgrimage Room—The History Room—The Karnatic Room—The Architecture Room—The Arcot Room—The Literary Room—The Mughal Room—The Art Gallery—The Hall of Science—The Arab Room—The Iqbal Room—The Orientalists' Room—The Urdu Room—A Book Stall.

**Indian Culture** — VIII, 4. April-June, 1943.

1. 'Life and Works of Vyasaraja Swamin' (1478-1593) — B. N. Krishnamurthy Sarma.
2. 'Pre-Indo-European'— S. K. Chatterji.

   Proofs for postulating a Pre-Indo-European primitive Indo-Hittite.
3. 'Dravidian and Monkhmer: Speakers or Australids: A Study in Variation'— A. K. Mitra and B. K. Chatterji.
4. 'Hindu Architecture and Sculpture' (continued) — P. K. Acharya.
5. 'Hindu Ideal of Life' (According to S'rauta Sutras) — Batakrishna Ghosh.

**Miscellanea**—

1. 'Contacts between Kautilya and Vatsyayana'— C. W. Gurner.
2. 'A Note on the Basim Copper Plate Inscription of Vakataka Vindhya Sakti II.'

The supposition that the Vakatakas had their original home in the south is wholly unjustifiable; based as it is on wrong premises. There is absolutely no resemblance between the phraseology of the Vakataka and that of the Pallava characters. The same remark also applies to the section of the Parihara which apparently developed both in Vakataka and Pallava grants, from the exemptions prevalent in Satavahana age and noticed in Satavahana charters. It should be remembered that the Vakatakas and Pallavas were both successors of S'atavahanas. Regarding Vakataka—in an inscription in Ameravati in the Andhra country, it is apparently a personal name and has absolutely nothing to do with the Vakataka ruling family—D. C. SIRCAR.

**Adyar Library Bulletin** — VII, 2. Blavatsky Number 8, May, 1943.

1. 'The Commentary of Caturbhuja Misra of Kampilya on the Amarusataka and its Chronology'— P. K. GODE.

   C.M. . . . had before him Arjunavarmadeva's commentary on A . . . He composed his commentary Bhavacintamani after C.A.D. 1250. The later limit to the date of this commentary is . . . date Samvat 1726 (= A.D. 1670) of a M.S. at B.O.R.I. No. 365 of 1887-91.

   Kampilya is possibly Kampil = 28 miles N.E. of Fattegad in Farukhabad District, U.P.

2. 'Inscriptions of Uttaramerur'— A. N. KRISHNA AIYANGAR.

   Pallava records from last quarter of 8th Century to the middle of the 13th which witnessed the downfall of the Cola Empire. Three inscriptions are printed: belonging to the time of Rajaraja the Great of the Imperial Colas of the Vijayalaya line.

3. 'Visesamrta of Tryambakanura' (An Orthographical Lexicon) — Edited by H. G. NARAHARI.

   A lexicon for Nouns. Possibly composed after Medini (C. 1200 A.D.) 1700 A.D. latest limit.

4. 'Serial Publications of Rgvedavyakhya — Nyayakusumanjali — Vaisnavopanisads.'—

5. Horasastra of Varahamihira—and Sangitaratnakarah.

ಪ್ರಬುದ್ಧ
# ಕರ್ಣಾಟಕ

ಸ್ವಭಾನು ಸಂವತ್ಸರ — ೯೭ — ಸಂಕ್ರಾಂತಿ ಸಂಚಿಕೆ

## ಹುಟ್ಟಿದ ಹಬ್ಬ

ನನ್ನ ದೇವರೆ ನಿನಗೆ ಇಂದು ಹುಟ್ಟಿದ ಹಬ್ಬ
ನೀ ಮಾತ್ರ ಬರಲಿಲ್ಲ ನಡಸಿಕೊಡಲು ||ಪ||

ನಿನ್ನ ಯೋಚನೆಯೊಳಗೆ ಇರುಳು ಬೆಳಗಾಯಿತ್ತು
ಸಂಭ್ರಮದಿ ಸಡಗರವು ತುಂಬಿ ಬಂದು,—
ತಳಿರು ತೋರಣ ಮೆರೆದು ಮನೆಯು ಓರಣವಾಯ್ತು
ಹಬ್ಬದಡಿಗೆಯು ನಿನಗೆ ಸಿದ್ಧವಾಯ್ತು.

ನೀ ಮಾತ್ರ ಬರಲಿಲ್ಲ ಬರಿದೆ ನಾ ಕಾದಿದ್ದೆ
ಈಗಾಗ ಇನ್ನೇನು ಬರುವೆಯೆಂದು.—
ಸಂಜೆಯಾಯಿತು ಆಗ ಹಕ್ಕಿಗಳು ಹಾಡಿದವು
ಚಂದ್ರನೂ ಮೂಡಿದನು ಸರಿಹೊತ್ತಲಿ.

ಇರುಳ ಕೊನೆ ಜಾವವೂ ಜಾರುತಿದೆ ಜಾಗರದಿ
ನಿನ್ನ ಚಿತ್ರವನಪ್ಪಿ ತಪಿಸುತಿರುವೆ,—
ನಾನಾಯ್ದ ಮಲ್ಲಿಗೆಯು ಕೋದ ಹೂವಿನ ಮಾಲೆ
ಚಿತ್ರಕರ್ಪಿತವಾಯ್ತು ನೀ ಬಾರದೆ.

ಎಂ. ನಂಜುಂಡಶಾಸ್ತ್ರಿ.

## ಶಾರದಯಾಮಿನಿ

ಓ ತಾರಾಪಥಗಾಮಿನಿ,
ಶಾರದಯಾಮಿನಿ,
ನಕ್ಷತ್ರೋದ್ದೀಪಿಕೆ,
ಶೋಭನೆ ಕಾರ್ತಿಕೆ,
ಕಾಂತಿಮಯಿ,
ಶಾಂತಿಮಯಿ,
ಜಗಗೊಳು ತಾಯಿ.

ಕ್ಷೀರಪಥದೊಳಗೆ ಧೂಳನೆಬ್ಬಿಸುತ
ತೇರು ಹರಿದು ಬರೆ ನಿನ್ನನೀಕ್ಷಿಸುತ
ತಾರೆಬಳಗ ಹೆದ್ದಾರಿಯಿಕ್ಕೆಲದಿ
ತುದಿಯ ಕಾಲಿನೊಳು ನಿಲ್ಲೆ ಕೌತುಕದಿ
ಹೊಸಿಲನೇರಿ ಸುಸ್ವಾಗತವೆನುತೆ
ಕುಡಿಯಾಡಿಸುತಿರೆ ಸಾಸಿರ ಹಣತೆ,
ಇದುವೇ ತಿರೆ ನಾವಿಲ್ಲಿಹೆವೆಂದು
ಸನ್ನೆಗೈವರೋ ನಿನಗೆನುವಂದು
ಮದ್ದಿನ ಸದ್ದೊಳು ನಗೆಗದ್ದಲದೊಳು
ಬಣ್ಣದಬಾಣದಿ ತಿಣ್ಣನೆ ಹುಯಿಲೊಳು
ಬೀದಿಯೊಳೆಳೆಯರು ನಿನಗುತ್ಸವಿಸೆ,
ಈದನಿ ಎನ್ನಾಸೆಯನೆಚ್ಚರಿಸೆ,
ಹೊರಗೆ ಬಂದು ನಾನಂಬರತಲಕೆ
ಮೊಗವೆತ್ತುವೆನಾ ಸಂದರ್ಶನಕೆ,
ಆದೊಡಹಾ ಮುಂಬರಿದಿಹೆ ನೀನು,
ದಿನದಿನವೂ ತುಸ ತುಸ ತಡ ನಾನು
ನಿನ್ನ ತೇರು ನನ್ನಾಸೆಗು ಚುರುಕು,
ನೀಮಿಗಿಲೆನ್ನಯ ಹಂಬಲಕು,
ಓ ದಿಗಂತ ಪ್ರಯಾಣೆ,
ಚಾರು ಶಶಿಯಾನೆ!

ಇರುಳಿಗೆ ಮುಂಬೆಳಗಿನ ತೆರೆ ಬೀಳೆ,
ರಂಗಕಿಳಿಯೆ ಚೆಸ್ನುಡೆಯುಷೆಬಾಲೆ,
ಮಂಜುಳರವ ಮೌನವನಚ್ಚರಿಸೆ,
ಸಂಜೀವನ ಮಂತ್ರವನುಚ್ಚರಿಸೆ
ಕುಳಿರುಗಾಳಿ, ಬೆಳ್ಳನೆ ದಳತೆರೆದು
ಸೇವಂತಿಗೆ ಹೊಸ್ನೊಳಗನು ತೋರೆ,
ನಿನ್ನ ನೆರಳೊ ಎನೆ ಬೆರಗನೆ ಪಡೆದು
ನಾನಾ ಹೂಗಳ ಸನಿಯಕೆ ಸಾರೆ,
ಹಸುರೊಳು ಹನಿ ನನ್ನೊಹೆಗೆ ಹ್ಣೂಗೊಡೆ,
ಕಂಡೆನೆಂಬೆನಾ ನಿನ್ನನಾಯೆಡೆ,
ಆದೊಡಹಾ ನೀ ಮುಂಬರಿದಿರುವೆ
ಎಂದಿನಂತೆಯೇ ನನ್ನಸು ಮರೆವೆ
ಓ ನಿರ್ಜಿತ ಗಗನವಿಷಾದೆ,
ವಿಮೋಚಿತಾಹ್ಲಾದೆ.

ಮೃದುಪದಪಾತಕೆ ತೆನೆ ನಸುಬಾಗಿದೆ
ಉಯ್ಯಲನಾಡಿಹೆ ಎನೆ ಲತೆ ತೂಗಿದೆ
ಬಂದ ಪರಿಯನೀ ಹಕ್ಕಿ ಹಾಡಿದೆ
ಸಂದ ವರವನೀ ಹಸಿರು ತೋರಿದೆ
ಸರಸಿ ಮಿಂಚಿಹುದು ನಕ್ಕೆಯೋ ಎನೆ
ನಿನ್ನನಂತು ನಾ ಕಾಣೆ ಶೋಭನೆ
ನನ್ನ ಮನಕೊ ನೀನೊಂದನುಮಾನ
ನನ್ನೆದೆಗೋ ನಿನ್ನರಿತ ಸುಮಾನ
ಓ ತರಂಗ ತಾರಾಭರಣೆ
ಸಂಮೋದ ಕಿರಣೆ !

ನಡು ಬಾನೊಳು ದಿನಪನು ಸೊಕ್ಕಿರಲು,
ತಿಳಿನೀಲಕೆ ನೀಲಿಮೆ ಮಿಕ್ಕಿರಲು,
ಬಿಳಿಮೋಡವು ಪುಳಿನದ ತೆರನಾಗೆ,
ನಡುವೊಳು ತಣ್ಣನೆ ತಿಳಿಗೊಳವಾಗೆ

ನೀನಾ ತೀರದೊಳಾಡಿ,
ಕೊಳದೊಳು ಜಳಕವ ಮಾಡಿ,
ಹಿಂತಿರುಗುವೆಯಾ ನಿನ್ನ ಸದನಕೆ
ಸಂಜೆಯ ಮೆರವಣಿಗೆಯ ಹಸದನಕೆ?
ಓ ಅಂಬುದ ಪುಳಿನ ವಿಹಾರಿಣಿ,
ನಭ ತಾಪ ಹಾರಿಣಿ!

ನೀ ಮರುಳಲು ನಿನ್ನಂತಃಪುರಕೆ
ಮರಳುವೆನಾ ನಿತ್ಯದ ಬೇಸರಕೆ,
ಹಗಲೊಳಾಸೆ ಮನದೊಳು ತೀರಿಹುದು
ಸಂಜೆಯುತ್ಸವಕೆ ಎದೆಹಾರಿಹುದು.
ಅಹ ಇದಿಗೊ ಚೆಂಬೊನ್ನಿನ ಬೆಳಕಾಯ್ತು
ನನ್ನಯ ಮನೆಸೆರೆಯಂಗಳದೊಳಗೆ,
ಹಕ್ಕಿಯ ಕಲರವ ಕಲಕಲವಾಯ್ತು
ಸರಸಿಯ ಮುಂದಣ ತೋಪುಗಳೊಳಗೆ,
ಬಾನ ಬೀದಿಯೊಳು ಚೆಮ್ಮಲರೆರೆಚಿ
ಸಂಜೆ ನಡೆವಳು; ಹೋ ಎಂದರಚಿ
ಜಿನದಿಸೆ ಮಕ್ಕಳು ಜಗುಲಿಯಮೇಲೆ
ಬಾ ಹೊರಗೆನ್ನುವಳೆನ್ನಯ ಬಾಲೆ,
ಮರಳಿಯಿಂತು ಜಗ ನಿನ್ನುತ್ಸವಕೆ
ಹಾರೈಸಿರೆ ನಾನಂಬರತಲಕೆ
ಮೊಗವೆತ್ತಿಹೆನೌ ಸಂದರ್ಶನಕೆ
ಓ ತಾರಾಪಥಗಾಮಿನಿ,
ಶಾರದಯಾಮಿನಿ,
ನಕ್ಷತ್ರೋದ್ದೀಪಿಕೆ,
ಶೋಭನೆ ಕಾರ್ತಿಕೆ,
ಕಾಂತಿಮಯೀ,
ಶಾಂತಿಮಯೀ,
ಬಗೆವೊಗು ತಾಯೀ.

ಪು.ತಿ.ನ.

# ಹೋಳು-ಬಾಳು

(ಏಕಾಂಕ ನಾಟಕ)

## ಪಾತ್ರ ಪರಿಚಯ

೧. ರಾಮಪ್ಪ .... ಹನುಮೇಹಳ್ಳಿ ಚಿಕ್ಕಪುಟ್ಟೇಗೌಡರ ಮಗ. ಹಿರಿಯರ ವರ್ತನೆಗಾಗಿ ಮರುಗಿ, ತನ್ನ ಹಳ್ಳಿಯ ದುರ್ದಶೆಗಾಗಿ ಸೊರಗುತ್ತಿದಾನೆ. ಕಟ್ಟನ್ನು ಮುರಿದು, ಊರನ್ನು ನೇರ್ಪಡಿಸಲು, ಧೈರ್ಯ ಸಾಲದು.

೨. ದಾಸರು .... ಅಪ್ಪಿ ತಪ್ಪಿ ಹಬ್ಬದ ದಿನ ಹನುಮೇಹಳ್ಳಿಗೆ ಬಂದು ಕಂಗಾಲಾದ ಬ್ರಾಹ್ಮಣ. ಸಂಪ್ರದಾಯ ಜೀವಿ. ಬೆಳ್ಳಗಿರುವುದೆಲ್ಲ ಹಾಲೆಂದು ನಂಬುವ ಪ್ರಾಣಿ.

೩. ಮಾದಯ್ಯ .... ಹನುಮೇಹಳ್ಳಿ ಚಿಕ್ಕಪುಟ್ಟೇಗೌಡರ ಪ್ರತಿಸ್ಪರ್ಧಿಯಾದ ಅಂಕೇಗೌಡರ ಮಗ. ರಾಮಪ್ಪನ ಬಾಲ್ಯಸ್ನೇಹಿತ. ಈಗಲೂ ಆತನ ಗೆಳೆಯ.

೪. ಮಲ್ಲಿ .... ಮಾದಯ್ಯನ ಪತ್ನಿ. ತೀರ್ಥಪುರದ ಪಟೇಲರ ಮಗಳು. ಹನುಮೇಹಳ್ಳಿಯ ರಾಜಕೀಯದಿಂದ ಭೀತಿಗೊಂಡ ತರಳೆ.

೫. ಅಂಕೇಗೌಡ .... ಮಾದಯ್ಯನ ತಂದೆ, ರಾಮಪ್ಪನ ಮಾವ.

೬. ಕರಿಯ .... ತೀರ್ಥಪುರದ ಸರ್ಪ. ಹನುಮೇಹಳ್ಳಿಯಲ್ಲೇ ಹೆಚ್ಚು ಹರಿದಾಟ.

೭. ಮೇಷ್ಟ್ರು .... ಹಳ್ಳಿಯ ಕಕ್ಷಿಪ್ರತಿಕಕ್ಷಿಗಳ ಬಿರುಗಾಳಿಯಲ್ಲೂ ತನ್ನ ಕೆಲಸವನ್ನು ನಿರ್ವಹಿಸುತ್ತಿರುವ ಸೊಡರು. ಸರಳವಾದ ಅಂತಃಕರಣ.

೮. ಬೋರೇಗೌಡರು .... ತೀರ್ಥಪುರದ ಪಟೇಲರು. ಪರಮ ಯೋಗ್ಯರು. ಚಿಕ್ಕಪುಟ್ಟೇಗೌಡರಿಗೂ ಅಂಕೇಗೌಡರಿಗೂ ಬೀಗರು.

ಸ್ಥಳ: ಹನುಮೇಹಳ್ಳಿ.

ಕಾಲ: ರಾಮನವಮಿ ದಿನ—ಸಂಜೆ ೭ ರಿಂದ ೧೦-೩೦ ರ ವರೆಗೆ.

## ದೃಶ್ಯ ೧

[ಹನುಮೇಹಳ್ಳಿಯಲ್ಲಿರುವುದು ಎರಡೇ ಬೀದಿ. ಅವೆರಡಕ್ಕೂ ಕೊಂಚ ದೂರವಾಗಿ, ಅಂಕೇಗೌಡರ ಮನೆಯಿಂದ ಸುಮಾರು ಮುನ್ನೂರು ಹೆಜ್ಜೆ ಆಚೆ, ಗಾರೆ ಬಳಿಯದ ಹೊಸ ಇಟ್ಟಿಗೆ ಕಟ್ಟಡ, ರಾಮಮಂದಿರ. ಅದರ ಬಾಗಿಲ ಪಕ್ಕದ ಎರಡು ಕಿಟಿಕಿಗಳೂ ಕಾಣಿಸುತ್ತಿವೆ. ಕಿಟಿಕಿಗಳು ತೆರೆದಿಲ್ಲ. ಬಾಗಿಲನ್ನು ಅಡ್ಡಪಟ್ಟಿ ಹೊಡೆದು ಬಿಗಿಮಾಡಿದೆ. ಅದರೆದುರು ಕಂಬಕ್ಕೆ ಒರಗಿಕೊಂಡು ದಾಸರು ನಿಂತಿದಾರೆ. ದಾಸರಿಗೆ ತುಂಬಾ ಆಯಾಸವಾಗಿದೆ. ಹೆಗಲ ಮೇಲೆ ಒಂದು ಗಂಟು ಚೀರೆ ಇದೆ. ಹಾರ್ಮೋನಿಯಂ ಪೆಟ್ಟಿಗೆಯನ್ನು ನೆಲದಮೇಲಿರಿಸಿದಾರೆ. ರಾಮಪ್ಪ ಅವರೊಂದಿಗೆ ಮಾತನಾಡುತ್ತಿದಾನೆ. ಸಂಜೆ; ಸೂರ್ಯ ಅಸ್ತಮಿಸಿ ಅರೆಗಳಿಗೆ ಆಗಿರಬಹುದು. ಕತ್ತಲು ಬಹುಬೇಗ ದಾಳಿಯಿಟ್ಟು ನುಗ್ಗುತ್ತಿದೆ; ದೃಶ್ಯ ಮುಗಿಯುವುದರೊಳಗೆ ಇಬ್ಬರೂ ಕತ್ತಲಲ್ಲೇ ಕರಗಿ ಕಾಣಿಸದಂತಾಗುವರು.]

ರಾಮಪ್ಪ — ಅಯ್ಯೋ! ನಮ್ಮ ಪಂಚಾಯಿತಿಯೇ ನಮ್ಮ ಪಂಚಾಂಗ! ನಾವು ರಾಮನವಮಿನೂ ಕಾಣೆವು; ರಾಮೋತ್ಸವಾನೂ ಕಾಣೆವು. ಅವೆಲ್ಲ ಬರೀ ಕನ್ನಡಿ ಗಂಟಾಗಿಹೋಯ್ತು ಈ ಹಳ್ಳಿಗೆ. . . ನಮ್ಮೂರು ಎರಡು ಹೋಳಾದ ದಿನವೇ ರಾಮದೇವರು ವನವಾಸ ಹೊರಟುಹೋದರು, ದಾಸರೆ!

ದಾಸರು — ಹೋಳಾದ್ದಕ್ಕೆ ಹೆದರಬೇಡಿ; ಜರಾಸಂಧನ ಕಥೆಯಲ್ಲೂ ಹೀಗೆಯೆ. ಆದರೆ, ಸೀಳಿದ್ದು ಮತ್ತೆ ಕೂಡಿಬಾಳುತ್ತೆ. ಕಾಡಿಗೆ ಹೋದವರು ಮತ್ತೆ ಬೀಡಿಗೆ ಬರಲಿಲ್ಲವೆ? . . . ಈ ಊರಲ್ಲಿ ಭಾರಿ ರಾಮಮಂದಿರ ಇದೆ ಅಂತ ಕೇಳಿ ನಾನು ಈ ದಿವಸ ಇಲ್ಲಿಗೆ ಬಂದೆ.

ರಾಮಪ್ಪ (ಬಿಸುಸುಯ್ದು) — ರಾಮಮಂದಿರವೇನೋ ಇದೆ, ಇನ್ನೂ ಕುಸಿದು ಬಿದ್ದಿಲ್ಲ! ನೋಡಿ! ಇದೇನೆ! ಹೊಟ್ಟೆತುಂಬ ಊಟಕಾಣದ ನೂರು ಸಂಸಾರ ಕೂಡ ಇಲ್ಲದ ಈ ಹಾಳೂರಿಗೆ ಇದು ಭಾರಿಯಲ್ಲವೆ? ನೀವೇ ಹೇಳಿ.

ದಾಸರು — ಆ? ರಾಮಮಂದಿರವೇ ಇದು?

ರಾಮಪ್ಪ — ಯಾಕೆ? ನಂಬಿಕೆ ಬರಲಿಲ್ಲವೇನು? ಸುಣ್ಣ ಬಣ್ಣ, ದೀಪ ಧೂಪ, ಬಾಳೆ ಕಂದು ಮಾವಿನಸೊಪ್ಪು ಯಾವುದೂ ಇಲ್ಲ ಅಂತಲೆ? ನಾವೇನು ಮಾಡುವುದು, ದಾಸರೆ? ರಾಮದೇವರಿಗೆ ಕೃಪೆ ಬರಲಿಲ್ಲ. ತಾನು ಒಳಗೆ ಕೂತುಬಿಟ್ಟು ಈ ಊರಿನ ಹಿರಿಯರ ಕೈಯಿಂದ ಬಾಗಿಲು ಭದ್ರಮಾಡಿಸಿಬಿಟ್ಟಿದಾರೆ; ಚಿಕ್ಕವರು ನಾವು ಜಪ್ಪಯ್ಯ ಅಂದರೂ ತೆಗೆಯುವುದಕ್ಕಾಗುತ್ತಿಲ್ಲ.

ದಾಸರು (ನಮಸ್ಕಾರ ಮಾಡುತ್ತಾ) — ರಾಂ ರಾಂ ಸೀತಾರಾಂ! ರಾಂ ರಾಂ ಸೀತಾರಾಂ! . . . ಶಾಂತಂ ಪಾಪಂ. ರಾಮಚಂದ್ರನಿಗೆ ಕೃಪೆ ಬರಲಿಲ್ಲ ಅಂತ, ಇಂದು, ಇವತ್ತು, ರಾಮನವಮಿ ದಿವಸ, ನನ್ನ ಕಿವಿಗೆ ಬೀಳುವ ಹಾಗೆ ಹೇಳ ಬೇಡಿ,

ದಯವಿಟ್ಟು; ನಾನು ಬದುಕಿರುವುದು, ನೀವು ಬಾಳುತ್ತಿರುವುದು ಎಲ್ಲವೂ ಆತನ ಕೃಪೆಯಿಂದಲೇ. 'ಶಾಪವಿಮೋಚನೆ' ಅಂತ ಒಂದು ಕಥೆ ಮಾಡುವುದುಂಟು ನಾನು. . . . ಇವತ್ತು ಇಲ್ಲಿ ನಡೆಸೋಣ ಅಂತಿದ್ದೆ ಅದನ್ನ. . . . ಅದರಲ್ಲಿ ರಾಮನ ಕೃಪೆ ಎಂಬುದು ಹೇಗೆ ಹಿಮದಹಾಗೆ ಅನಾಯಾಸವಾಗಿ ಅನರ್ಗಳವಾಗಿ ಕೇವಲ ಒಂದು ಕಲ್ಲುಬಂಡೆಯ ಮೇಲೂ ಕೂಡ . . .

ರಾಮಪ್ಪ— ಅಯ್ಯೋ, ಇಲ್ಲಿಯೂ ಅನಾಯಾಸವಾಗಿಯೇ ಹರಿಯಿತು. ದಾಸರೇ ! ಇದನ್ನು ಪ್ರಾರಂಭಿಸಿದಾಗ ನನ್ನ ತಂದೆಯವರೂ ಮಾವನವರೂ, ಬೀಗ ಬೀಗರ ಅನ್ಯೋನ್ಯದಲ್ಲಿ ಇನ್ನಿಲ್ಲಾ ಅಂತಿದ್ದರು. ಈ ಜಾಗ ನಮ್ಮದು. ಇಟ್ಟಿಗೆಗೂಡು ಅಂಕೇಗೌಡರದು. ಕಿಟಿಕಿ ಬಾಗಿಲಿಗೆ ಅಂತ ಬೇವಿನಮರ ಕಡಿದದ್ದು ಕುಯ್ದದ್ದು ನಮ್ಮ ಹೊಲದಲ್ಲಿ. ಹೆಂಚು ತರಿಸಿದ್ದು ನಮ್ಮ ಖರ್ಚು; ರೀಪೀಸ್ ಪಟ್ಟಿ ಅವರು ಒದಗಿಸಿದರು. ಗಾರೆ-ಒಳಗೆ ಗಾರೆಹಾಕಿ ಆಗಿದೆ-ಅರ್ಧ ನಮ್ಮದು; ಅರ್ಧ ಅವರದು. ಪಠ ಬರೆಸಿದ್ದು ನಾವು; ಕಟ್ಟುಹಾಕಿಸಿದ್ದು ಅವರು . . . ಹೋದ ವರ್ಷದ ತಾಲೋಕ್ ಕಾನ್‌ಫರೆನ್ಸಲ್ಲಿ ಅಮಾಲ್‌ದಾರ್ ಸಾಹೇಬರು ಇಬ್ಬರನ್ನೂ ಕರೆಸಿ ಹೂವಿನಹಾರ ಹಾಕಿ ಹಾಲು ಜೇನು ಸೇರಿದ ಹಾಗಿದೆ ಹನುಮೇಹಳ್ಳಿ ಒಗ್ಗಟ್ಟು ಅಂತ ತುಂಬಿದ ಸಭೆಯಲ್ಲಿ ಸಾರಿಬಿಟ್ಟರು ! ಆಗ ದೃಷ್ಟಿಗಿಷ್ಟಿ ಬಡಿಯಿತೋ ಏನೋ, ಹಾಳು ನಮ್ಮ ಬಾಳಿಗೆ ?

ದಾಸರು — 'ವಾಯುವಿಲಾಸ' ಅಂತ ಒಂದು ಕಥೆಮಾಡುವುದು ವಾಡಿಕೆ ನಾನು ! ಹನುಮನಕೊಪ್ಪಲು ಹನುಮಂತನಪುರ ಹನುಮಾನ್‌ದುರ್ಗ ಹನುಮನಕೆರೆ ಅಂತ ಒಂದು ಪಟ್ಟಿಕೊಟ್ಟು ಆಗ ವಿವರಿಸುತ್ತೇನೆ ; ಪ್ರತಿಯೊಂದು ಊರೂ ಆ ಹೆಸರಿನ ಆಸರೆಯಲ್ಲಿ ಬಹುಸುಭಿಕ್ಷದ ಸ್ಥಾನ. ಆಂಜನೇಯನ ಹೆಸರು ನೋಡಿದರೆ ಸಾಕು, ರೋಗರುಜಿನ ಎಲ್ಲವೂ ಓಡುತ್ತವೆ, ಹೆದರಿಕೊಂಡು, ನನ್ನ ಕಥೆಯಲ್ಲಿ.

ರಾಮಪ್ಪ— ಆ ವಿಷಯದಲ್ಲಿ ಈ ಊರಿಗೂ ಯಾವ ಕೊರತೇನೂ ಇಲ್ಲ. ಆದರೆ, ಜನ ? ಕೇಳಬೇಡಿ, ದಾಸರೇ ! ಮುಕ್ಕಾಲುಮೂರುವೀಸೆ ಜನ ಎಳಗೂಸುಗಳು ! ಉಳಿದವರು ಚಾಡಿಕೋರರು ! ನಮ್ಮೂರಲ್ಲಿ ಸಾಲದೆಹೋದರೆ ನೆರೆ ಊರಿಂದಾನೂ ಬರುತ್ತಾರೆ ! ಅಲ್ಲಾ ! ಅಂಕೇಗೌಡರು, ನನ್ನ ಮಾವಂದಿರು, ಮಹಾರಾಜರ ಖಜಾನೆಗೆ ಮುನ್ನೂರು ರೂಪಾಯಿ ಕಂದಾಯ ಕಟ್ಟುವ ಅಂಕೇಗೌಡರು, ನಮ್ಮ ಮನೆಯಿಂದ ತಮ್ಮ ಮನೆಗೆ ಮಗಳ ಮೂಲಕ ಹತ್ತು ಹೆಂಚು ಸಾಗಿಸಿದರು ಅಂಬೋ ವಿಷಬೀಜ ಬಿತ್ತಿ ಬೆಳೆಸೇಬಿಟ್ಟರು ಭೂತಾಳೇಸ, ರಾಮನಿಗೂ ಆಂಜನೇಯನಿಗೂ ಜಗಳ ತಂದು ಹಾಕಿದರು ಅಂತೀರಲ್ಲಾ ನೀವು, ಹಾಗೇನೆ !

ದಾಸರು — "ಚಾಡಿಕೋರ ಮನುಷ್ಯಾಣಾಂ ಚಾಮರ ಪ್ರಹರೇಣ ಕಿಂ," ಅಂತ ಹೇಳುವುದು ಕೇಳಿಲ್ಲವೆ? ಅದು ಅವರ ಹುಟ್ಟುಗುಣ. ಚೇಳಿನ ಹಾಗೆ, ಕುಟುಕುವ ಜೀವಿಗಳು ಅವರು! . . . "ಮಾನಸಂರಕ್ಷಣೆ" ಅಂತ ಒಂದು ಕಥೆ ಮಾಡುತ್ತೇನೆ ನಾನು; ಉದ್ದಕ್ಕೂ ಚಾಡಿಯ ಖಂಡನೆಯೇ ಅದರಲ್ಲಿ. ಯಾವಾಗಲೋ ಏನೋ ಒಂದು ಸಲ ಪಾಂಡವರ ರಾಣಿ ನಕ್ಕಳು ಅಂತ ಯಾರೋ ಚಾಡಿ ಹೇಳಿದ್ದರಿಂದ ತಾನೆ, ಅವಳ ಪಾಡುನೋಡಿ ಇಡೀ ರಾಜಸಭೆಯೇ ನಗುವಂತಾದದ್ದು!

ರಾಮಪ್ಪ — ಹೌದು, ದಾಸರೇ! ನಮ್ಮೂರು ಅವಲಕ್ಷಣನೋಡಿ ಸುತ್ತಮುತ್ತಲ ಹಳ್ಳಿಯವರೆಲ್ಲ ನಗುತ್ತಿದಾರೆ. ಕಿಚ್ಚು ಎಲ್ಲಾದರೂ ಆರಿಹೋಗುವ ಸಂಭವ ಕಂಡರೆ ತುಪ್ಪಹುಯ್ದು ತಮಾಷೆ ನೋಡುವರು. ದಾವಹಾಕಿ, ಕೇಸುಕೊಡಿ, ದಂಡತೆರ ಬೇಡಿ, ಮಧ್ಯಸ್ಥಿಕೆ ಮಾಡಬೇಡಿ ಅಂತ ತಿವಿಯುವರು. . . . ಅವರಿಗೇನು ಇದೂ ಒಂದು ಟಗರಿನ ಕಾಳಗ!

ದಾಸರು — ವಿದುರ ದ್ರೋಣ ಭೀಷ್ಮ ವಿಭೀಷಣ ಮುಂತಾದವರ ಹಾಗೆ ಜನರಿಗೆ ಬುದ್ಧಿವಾದ ಹೇಳುವ ಹಿರಿಯರು ಯಾರೂ ಇಲ್ಲವೆ ನಿಮ್ಮೂರಲ್ಲಿ?

ರಾಮಪ್ಪ — ವಿದುರನಿಗೂ ದ್ರೋಣನಿಗೂ ಏನು ಗತಿ ಆಯಿತೋ ಅದೇಗತಿ ಇಲ್ಲಿ ಈ ಜನಕ್ಕೆ ಬುದ್ಧಿ ಹೇಳಿದವರಿಗೂ. ಹಿರಿಯರೇ ಹಣಾಹಣಿಗೆ ತಲೆಕೊಟ್ಟ ಮೇಲೆ ಕಿರಿಯರ ಮಾತು ಯಾರು ಕಿವಿಗೆ ಹಾಕಿಕೊಳ್ಳುತ್ತಾರೆ? ತಮ್ಮ ಮೂಗಿಗೆ ತುಪ್ಪ ಹಚ್ಚುವವರೇ ಬುದ್ಧಿವಂತರು ಅಂತ ಅವರು ತಿಳಿದುಕೊಂಡು ಬಿಟ್ಟಿದಾರೆ. . . .

ದಾಸರು — ಆದರೂ, ಯಾರಾದರೂ ವಿದ್ಯಾವಂತರು ಬಂದು . . .

ರಾಮಪ್ಪ — ಅಯ್ಯೋ, ಬಿಡಿ, ದಾಸರೇ! ನಿಮಗೆ ಹೊತ್ತು ಹೋಗದು! ಈ ಊರಲ್ಲಿ ಇಂಗ್ಲೀಷು ಅಕ್ಷರ ಹೇಗಿರುತ್ತೆ ಅಂತ ಕಣ್ಣುಬಿಟ್ಟು ನೋಡಿದವರು ನಾನೊಬ್ಬ, ಅಂಕೇಗೌಡರ ಮಗ ಸಣ್ಣ ವಯಸ್ಸಿನ ಮಾದಯ್ಯ ಒಬ್ಬ, ಅಷ್ಟೆ. ನಮ್ಮ ಇಂಗ್ಲೀಷು ಕೂಡ ಅಲ್ಲಿಗೇ ಮುಕ್ತಾಯ. ಸಾಹೇಬರುಗಳು ಯಾರಾದರೂ ಬಂದರೆ ನಮಸ್ಕಾರ ಅಂತ ಗಮಾರರು ಹೇಳುವ ರೀತಿ ಅಲ್ಲದೆ ಒಳ್ಳೇ ಇಂಗ್ಲೀಷಲ್ಲಿ ಅದಷ್ಟನ್ನಾದರೂ ವೇಳೆಯರಿತು ಹೇಳೋಕೆ ಬರದು! ಇವತ್ತು ರಾಮನವಮಿ ಅನ್ನುವುದೇ ಗೊತ್ತಾಗಲಿಲ್ಲ, ನೋಡಿ ನಮ್ಮ ವಿದ್ಯೆ ಲಕ್ಷಣ!

ದಾಸರು — ನೀವೇನಾದರೂ ಮಾಡಿ, ಬಿಡಿ! ರಾಮನವಮಿ ದಿನ ರಾಮದೇವರ ಕಥೆಮಾಡದೆ ಮಲಗುವುದೆಂದರೆ ನನ್ನಿಂದ ಅಸಾಧ್ಯ! . . . ಬಹುರಾಜ ಅಂತ ಒಬ್ಬನಿದ್ದನಂತೆ. ಆತನ ದೇಶದಲ್ಲಿ ಕಲಹ ಕೈಗೂಡಿ ಒಂದಾಗಿದ್ದ ಸಿಂಹಾಸನ ಒಡೆದು ಎರಡಾಯಿತಂತೆ. ಆದರೆ, ರಾಜನಿಗೇನೂ ನಷ್ಟವಾಗಲಿಲ್ಲ. ಒಂದು ದೇಶ ಎರಡು

ದೇಶವಾಯಿತು! ಒಂದಕ್ಕೆ ಬದಲಾಗಿ ಎರಡು ರಾಜಧಾನಿ ಲಭಿಸಿತು. ಹಾಗೆಯೇ, ನಿಮ್ಮೂರಲ್ಲೂ ಇವತ್ತು ರಾತ್ರಿ ಎರಡುಕಡೆ ಕಥೆ ಮಾಡುತ್ತೇನೆ. ನಷ್ಟವೇನು? ಬೆಳ್ಳಂಬೆಳಗೂ ನಡೆಯಲಿ ರಾಮನಾಮ ಸಂಕೀರ್ತನೆ!

ರಾಮಪ್ಪ— ನಿಮಗೆ ಭ್ರಾಂತು, ದಾಸರೇ! ಭ್ರಾಂತು! ಇಲ್ಲಿ ಜಗಳಕ್ಕಲ್ಲದೆ ಬೇರೆ ಯಾವ ಪುಣ್ಯಪುರುಷಾರ್ಥಕ್ಕೂ ಜನ ಸೇರುವುದಿಲ್ಲ. ಸುಳಿಗೆ ಸಿಕ್ಕಿದ ಮಡಕೆಗಳ ಹಾಗೆ ಒಬ್ಬರಿಗೊಬ್ಬರು ಹೊಡೆದುಕೊಂಡು ಸಾಯುತ್ತಾರೆ. ನಿಮ್ಮಂತಹ ಸಾಧುಗಳನ್ನು ಕಂಡರೆ ಸಹನೆಯೇ ಇಲ್ಲ. ಸಂಭಾವನೆ ಮೊದಲೇ ಇಲ್ಲ. ನೀವು ಸುರಕ್ಷಿತವಾಗಿ ಮನೆ ಸೇರುವುದೇ ಕಷ್ಟವಾಗಬಹುದು!

ದಾಸರು — ನನಗೆ ಸಂಭಾವನೆಯ ಯೋಚನೆ ಸುತರಾಂ ಇಲ್ಲ. ಇಂತಹ ಪುಣ್ಯ ದಿವಸ ಪಾಪಿಗಳ ಹಾಗೆ ಉಂಡು ಮಲಗದೆ ನಾಲ್ಕು ಜನಕ್ಕೆ ಆ ರಾಮನ ಕಥೇನ ಶ್ರವಣಮಾಡಿಸಬೇಕು, ಅಷ್ಟೆ. ನಿಮ್ಮನ್ನ ಕಂಡರೆ ಈ ಕೆಲಸವಾಗುತ್ತೆ ಅಂತ ಯಾರೋ ಹೇಳಿದ್ದರಿಂದ ನಾನು ಬಂದೆ.

ರಾಮಪ್ಪ — ಯಾರು ಹೇಳಿದ್ದು ನಿಮಗೆ? ತೀರ್ಥಪುರದರೊ? ಅಲ್ಲಿನ ಮಾರಮ್ಮನ ಗುಡಿ ಬೀದಿಯವರು ತಾನೆ?

ದಾಸರು — ಹೌದು. ಬೆಳಗ್ಗೆ ಅಲ್ಲಿಗೆ ಹೋಗಿದ್ದೆ; ಅಲ್ಲಿಂದಲೇ ಇಲ್ಲಿಗೆ ಬಂದದ್ದು ನಾನು.

ರಾಮಪ್ಪ — ತೋಳ ಹಳ್ಳಕ್ಕೆ ಬಿದ್ದರೆ ಕುರಿಗಳೆಲ್ಲ ಬಿದ್ದು ಬಿದ್ದು ನಗುತ್ತವೆ ಅಂತಾರಲ್ಲಾ, ಹಾಗಾಯಿತು ಇದು. ನಿಮ್ಮನ್ನ ಹದಿನೈದು ಮೈಲಿ ನಡೆಸಿ ತಮಾಷೆ ನೋಡುತ್ತಿದಾರೆ ಆ ಕರಿಯನ ಕಡೆಯವರು! ನನಗೆ ಗೊತ್ತು. ಆ ಬೀದಿಯವರೇ ಹಾಗೆ. ಅವರೂರಲ್ಲೂ ಪಾರ್ಟಿ ಬೆಳೆಸಬೇಕು ಅಂತ ತುಂಬಾ ಶ್ರಮಪಡುತ್ತಾರೆ ಕರಿಯನ ಬಳಗದವರು. ಆದರೆ, ಅಲ್ಲಿಯ ಪಟೇಲರು ಅವರ ಪಿತೂರೀನೆಲ್ಲ ಮುರಿದು ಹಾಕುತ್ತಿದಾರೆ. . . . ನೀವು ಅಲ್ಲಿ ಪಟೇಲರನ್ನ ನೋಡಬೇಕಾಗಿತ್ತು.

ದಾಸರು — ಅಲ್ಲಿಯ ಪರಿಸ್ಥಿತಿ ಗೊತ್ತಾಗಲಿಲ್ಲ! ಗೊತ್ತಿದ್ದರೆ, ರಾಮನವಮಿ ದಿನ ಇಲ್ಲಿ ಬಂದು ಹೀಗೆ ಪೇಚಾಡುತ್ತಿರಲಿಲ್ಲ. ಅಲ್ಲೇ ಈ ಹಾರ್ಮೋನಿಯಂ ಬಾರಿಸುತ್ತಾ, ನಾಲ್ಕು ದೇವರ ನಾಮ ಹೇಳಿರುವೆ.

ರಾಮಪ್ಪ — ಅವರು ಅಲ್ಲೇ ಏರ್ಪಾಟುಮಾಡುತ್ತಿದ್ದರು. ನಾಳೆ ಅವರೂರು ಜಾತ್ರೆ, ದಾಸರೇ! ಅದನ್ನ ಮುಂದಿಟ್ಟುಕೊಂಡು ನಿಮ್ಮನ್ನ ಇತ್ತಲಾಗಿ ಅಟ್ಟುತ್ತಿರಲಿಲ್ಲ, ಪಟೇಲರು. . . . ಅವರು ಇವತ್ತು ರಾತ್ರಿ ಈ ಊರಿಗೆ ಬರುತ್ತಾರೆ!

ದಾಸರು — ಯಾರು ಬರುತ್ತಾರೆ? ಯಾಕೆ?

ರಾಮಪ್ಪ — ಇಲ್ಲಿಗೆ ಬರುತ್ತಾರೆ ಅಂದೆ, ತೀರ್ಥಪುರದ ಪಟೇಲರು! ಈ ಊರಿಗೆ ಅವರು ಹೆಣ್ಣು ಕೊಟ್ಟಿದಾರೆ; ಇಲ್ಲಿಂದ ಹೆಣ್ಣು ತಂದುಕೊಂಡಿದಾರೆ. . . . ಬೀಗರ ಮನೆಗೆ ಬರುತ್ತಿದಾರೆ.

ದಾಸರು — ಹಾಗಾದರೆ ಅವರಿಗೆ ಇಲ್ಲಿಯ ವಿದ್ಯಮಾನ ಚೆನ್ನಾಗಿ ಗೊತ್ತು, ಅನ್ನಿ!

ರಾಮಪ್ಪ — ಓ! ಗೊತ್ತಿಲ್ಲದೆ? ಅಂಕೇಗೌಡರ ಮಗ ಮಾದಯ್ಯನೇ ಅವರ ಅಳಿಯ! ನನ್ನ ತಂಗೀನೇ ಅವರ ಸೊಸೆ! ಅವರೂ ಐದಾರು ಸಲ ಇಲ್ಲಿಗೆ ಬಂದು ಊರೊಂದಾಗುವುದಕ್ಕೆ ಮೇಲಿಂದ ಮೇಲೆ ಹೆಣಗಾಡಿದರು. ಈ ಗ್ರಾಮದೊಳಕ್ಕೆ ಕರಿಯ ಕಾಲಿಡಬಾರದು ಅಂತ ಕಟ್ಟುಮಾಡಿದರು. ಆದರೆ, ರಾಮನ ಕೃಪೆ ಒದಗಲಿಲ್ಲ.

ದಾಸರು — ಅವರೆದುರಿಗಾದರೂ ಇವತ್ತು ರಾತ್ರಿ ಒಂದು ಕಥೆ ಮಾಡಿಬಿಡುತ್ತೇನೆ. ಅವರು ಯಾವ ಪಾರ್ಟಿಗೂ ಸೇರಿದವರಲ್ಲವಲ್ಲಾ. . . . ಮೂವತ್ತು ವರ್ಷದಿಂದ ನಾನು ಈ ದಿನವನ್ನ ಬರಿದುಮಾಡಿಲ್ಲ, ಗೌಡರೇ! . . . ಅವರೆಲ್ಲಿ ಬಿಡಾರಮಾಡುತ್ತಾರೆ ಇವತ್ತು ರಾತ್ರಿ? ಅದನ್ನಾದರೂ ಹೇಳಿ.

ರಾಮಪ್ಪ — ಅದೆಲ್ಲ ಆಗದ ಮಾತು, ಅವರು ಬಂದಾಗ ಯಾರ ಮನೆಗೆ ಹೋಗುತ್ತಾರೋ ಏನು ಕಥೆಯೋ? ಬಹುಶಃ ಮಾದಯ್ಯನ ಮನೆಗೇ ಹೋದಾರು. ನಮ್ಮ ಮನೆಗೆ ಬಂದರೂ ಕಥೆಗಿಥೆಗೆ ಅವಕಾಶವಿಲ್ಲ. ಬೆಳಗಿನ ಜಾವ ಗಾಡಿ ಕಟ್ಟುತ್ತಾರೆ. ಅಕೊ! ಅಲ್ಲಿ ಮಾದಯ್ಯ ಹೋಗುತ್ತಿದಾನೆ. . . . ಆ ಬಾವಿಕಟ್ಟೆ ಹತ್ತಿರ . . .

ದಾಸರು — ಅವರನ್ನ ಕೊಂಚ ಕರೆಯಿರಿ, ದಯವಿಟ್ಟು. ಅವರನ್ನೂ ಒಂದು ಮಾತು ಕೇಳಿಬಿಡುತ್ತೇನೆ. ನಾನು ಕಥೆ ಮಾಡಲೇಬೇಕು.

ರಾಮಪ್ಪ — ಅಯ್ಯೋ! ಅಯ್ಯೋ! ನಾವಿಬ್ಬರೂ ಮಾತಿಗೆ ಸೇರುತ್ತೇವೆ ಅಂತ ಯಾರಾದರೂ ಪತ್ತೆ ಹಚ್ಚಿಬಿಟ್ಟರೆ ನಮ್ಮ ತಲೆ ಕಡಿದುಬಿಡುತ್ತಾರೆ. ಊರಾಚೆ ಆ ಮಾವಿನ ತೋಪಿನಲ್ಲಿ ಕತ್ತಕತ್ತಲೆಯಲ್ಲಿ ಸೇರುತ್ತಿದೇವೆ ನಾವು, ವಾರಕ್ಕೆರಡು ದಿನ; ಅಲ್ಲಿಗೇ ಹೋಗುತ್ತಿರುವುದು ಮಾದಯ್ಯ, ಈಗ; ನಾನು ಅಲ್ಲಿರುತ್ತೇನೆ ಅಂತ ಹೇಳಿದ್ದೆ.

ದಾಸರು — ಇಂಥಾದ್ದೇ ಸನ್ನಿವೇಶ ನನ್ನ ಒಂದು ಉಪಕಥೆಯಲ್ಲಿ ಬರುತ್ತೆ. ಯಾವುದೋ ಊರಲ್ಲಿ ಮೇಷ್ಟರೊಬ್ಬರು. . . .

ರಾಮಪ್ಪ — ಅಂದಹಾಗೆ, ರಾತ್ರಿಹೊತ್ತು ನೀವು ಹಿಂತಿರುಗುವುದು ಚೆನ್ನಿಲ್ಲ. ನೀವು ನಮ್ಮೂರು ಮೇಷ್ಟರ ಮನೆಗೆ ಹೋಗಿ, ಅಲ್ಲಿರಿ. . . . ಊಟಮಾಡಿ ಮಲಗಿ. . . . ಕೋಳಿಕೂಗುವ ಹೊತ್ತಿಗೆ ಎದ್ದು ಬಿರಬಿರನೆ ನಡೆದುಬಿಡಿ ತೀರ್ಥ ಪುರಕ್ಕೆ. . . . ಅಲ್ಲಿ ನಾಳೆ ಜಾತ್ರೆ. . . . ನಿಮ್ಮ ಕಥೆ ಏರ್ಪಾಟುಮಾಡೋಣ.

ಮಾದಯ್ಯನಿಗೂ ಸೂಚನೆ ಕೊಡುತ್ತೇನೆ ಮಾವನಿಗೆ ಹೇಳಿರಯ್ಯ ಅಂತ. . . . ಹೊರಡಿ! ಈ ಕಡೆಯಿಂದ ಹೋಗಿ . . . ದಾರಿಯಲ್ಲಿ ಯಾರನ್ನೂ ಮಾತನಾಡಿಸಬೇಡಿ . . . ನಿಮ್ಮ ಸಂಗೀತದ ಪೆಟ್ಟಿಗೆಯನ್ನ ಕುಯೋ ಅನ್ನಿಸಬೇಡಿ! ಬಾವಿಹತ್ತಿರದ ಮನೆಯೇ ಮೇಷ್ಟರದು. . . . ಒಳಗೆ ಹೈಕಳು ಕಾಗುಣಿತ ಹೇಳುತ್ತಿರುತ್ತವೆ. . . . ಅದೇ ಗುರುತು . . . ನಾನು ಬರುತ್ತೇನೆ . . . ಮಾದಯ್ಯ ಕಾದಿರುತ್ತಾನೆ . . . (ಹೊರಡುವನು.)

ದಾಸರು — ಎಂತಹ ಗ್ರಹಚಾರ ಬಂದು ವಕ್ಕರಿಸಿಕೊಂಡಿತು ನನಗೆ! ಮೂವತ್ತು ವರ್ಷ ಅಖಂಡ ರಾಮಸೇವೆ ಮಾಡಿದ್ದಕ್ಕೆ ಇದೇಯೋ ಪ್ರತಿಫಲ? . . . ತನ್ನ ವರ್ಧಂತಿ ದಿನ ಈ ಹಾಳುಕೊಂಪೆಗೆ ತಂದು ಸೇರಿಸಿದನೇ ಭಗವಂತ? ಕಾರ್ಕೋಟಕನ ಬಾಯಿಗೆ ಬಿದ್ದ ನಳಮಹರಾಯನ ಹಾಗಾಯಿತಲ್ಲಾ ನನ್ನ ಗತಿ? . . . ರಾಮ ಭಜನೆಗೆ ಕೂಡ ಅವಕಾಶವಿಲ್ಲವಂತಲ್ಲಾ ಈ ರಾಕ್ಷಸರ ಗುಂಪಿನಲ್ಲಿ! (ಹಾರ್ಮೋನಿಯಂ ಸಹಿತ ಹೊರಡುವರು. ಅದನ್ನೆತ್ತಿ ಕಂಕುಳಲ್ಲಿರಿಸಿದಾಗ ಕುಯ್ಯೋ ಅನ್ನುವುದು! ದಾಸರ ಮುಖ ಭೀತಿಯಿಂದ ವಿವರ್ಣವಾಗುವುದು. ಅವರು ಮೆಲ್ಲ ಮೆಲ್ಲನೆ ತೆರಳುವರು)

(ತೆರೆ)

## ದೃಶ್ಯ ೨

[ಅಂಕೇಗೌಡರ ಮನೆಯ ಒಂದು ಕೊಠಡಿ. ಮೂಲೆಯಲ್ಲಿ ರಾಗಿ ಮೂಟೆಗಳು; ಕುಕ್ಕೆಗಳು; ಗಡಿಗೆಗಳು. ಗೋಡೆಯಲ್ಲಿನ ಗೂಡಿನೊಳಗೊಂದು ಹಣತೆ. ಕೊಠಡಿಯ ಅರ್ಧಭಾಗವನ್ನೆಲ್ಲ ಆವರಿಸಿರುವ ಮಂಚದ ಮೇಲೆ ಕುಳಿತು ಮಾದಯ್ಯ ತನ್ನ ಹೆಂಡತಿ ತಂದುಕೊಡುವ ಸಾಮಾನುಗಳನ್ನೆಲ್ಲ ಸೀರೆಯ ತುಂಡೊಂದರಲ್ಲಿ ಗುಂಟು ಕಟ್ಟುತ್ತಿದಾನೆ]

ಮಾದಯ್ಯ (ನಗುತ್ತಾ) — ತವರುಮನೆಗೆ ಅಂದರೆ, ಓಹೋ, ಏನು ಸಡಗರ ಹೆಣ್ಣುಮಕ್ಕಳಿಗೆ? ಏನು ಸಂಭ್ರಮ? ಯಾವ ಸಾರೋಟೂ ನಿನ್ನ ಮುಂದಿಲ್ಲ, ಅಂತ ಓಡುತ್ತೀಯಲ್ಲೇ? ಬೆಳಗ್ಗಿಂದ ಕೂತೇ ಇಲ್ಲ ಅಂತ ಕಾಣುತ್ತೆ, ಮಹರಾಯಗಿತ್ತಿ! ನಿಮ್ಮೂರಲ್ಲಿ ಜಾತ್ರೆ ವರ್ಷಕ್ಕೊಂದೇಸಲವಾದ್ದರಿಂದ ನಾನು ಬದುಕಿದೆ!

ಮಲ್ಲಿ — ಹೊಸ್ತಿಲು ದಾಟಿ ಒಂದು ಹೆಜ್ಜೆ ಕೂಡ ಆಚೆ ಇಡಕೂಡದು ಅಂತ ನನಗೂನೂ ಆಜ್ಞೆಮಾಡಿಬಿಡಿ, ಮಗಳಿಗೆ ಮಾಡಿರುವ ಹಾಗೇನೆ! ಅಲ್ಲಾಡದೆ ಸೊಲ್ಲಿಲ್ಲದೆ ಇಲ್ಲೇ ಬಿದ್ದಿರುತ್ತೀನಿ. ನೀವು ಹೋಗು ಅನ್ನೋ ಹೊತ್ತಿಗೆ ತಾನೇ ನಾನು ಗಂಟು ಕಟ್ಟುತ್ತಾ ಇರೋದು?

ಮಾದಯ್ಯ — ನೀನು ಪುಣ್ಯಮಾಡಿದ್ದೀಯಾ; ಅವಳು ಮಾಡಲಿಲ್ಲ. ಅವರವರ ಕರ್ಮ ಅವರವರಿಗೆ. ಅವಳು ಬಂದು ಆಗಲೇ ಎಂಟು ತಿಂಗಳಾಯಿತು, ಅಷ್ಟರಲ್ಲೇ ನಿನ್ನದಿದು ಎರಡನೇ ಸವಾರಿ, ನೆನಪಿರಲಿ.

ಮಲ್ಲಿ— ಹೂಂ ! ಲೆಕ್ಕ ಜೇರೆ ಇಟ್ಟಿದೀರಾ ನೀವು ? ಇಷ್ಟನೇ ತಿಂಗಳು ಇಷ್ಟನೇ ದಿನ ಬಂದಳು, ಇಷ್ಟು ದಿವಸದಲ್ಲಿ ಹೊರಟಳು, ಅಂತ . . .

ಮಾದಯ್ಯ— ಇಡದೆ ? ನಿನ್ನ ಕಾಟ ನನಗೆ ಎಂದು ಪ್ರಾರಂಭ ಆಯಿತು, ಎಂದು ನನಗೆ ಬಿಡುಗಡೆ ಆಯಿತು, ಅಂತ ತಿಳಿಯಬೇಡವೆ ನಾನು ?

ಮಲ್ಲಿ— ನಾನು ಊರಿಗೆ ಹೊರಟುಹೋದರೆ ನಿಮಗೆ ಬಿಡುಗಡೆ ಅಂತೀರಾ ?

ಮಾದಯ್ಯ— ಅಲ್ಲವೆ ಮತ್ತೆ ?

ಮಲ್ಲಿ— ಹಾಗಾದರೆ, ನಾನು ಬರುವ ತನಕ ನೀವು ಸಂತೋಷವಾಗಿರುತ್ತೀರಾ ?

ಮಾದಯ್ಯ— ಓಹೊ ! ಮೂರು ಹೊತ್ತೂ ಅಳುತ್ತಾ ಕೂತಿರುತ್ತೇನೆ ಅಂತ ಯೋಚನೆಮಾಡಿದಿಯೇನು ನೀನು ? ಅಯ್ಯೋ, ಹುಚ್ಚಿ !

ಮಲ್ಲಿ— ಕಣ್ಣಲ್ಲಿ ನೀರೇ ಬರೋಗಿಲ್ಲವೆ ?

ಮಾದಯ್ಯ— ಕಣ್ಣೀರಂತೆ, ಕಣ್ಣೀರು ! ಒಳ್ಳೇ ಮಝವಾಗಿರುತ್ತೇನೆ. ಮನೆಕಡೆ ಯೋಚನೆ ಇಲ್ಲದೆ ಹಾಯಾಗಿ ಹರಟುತ್ತಾ ಇರುತ್ತೇನೆ ! . . . ನೀನೆಲ್ಲಾದರೂ ಜಾತ್ರೆಗೆ ಹೋಗದೆ ನಿಂತುಬಿಟ್ಟೀಯಾ ಅಂತಲ್ಲವೆ ನಾವು ಅಷ್ಟು ದಿವಸದಿಂದ ರಾಮಮಂದಿರದ ಬಾಗಿಲು ಕೂಡ ಬಂದುಮಾಡಿರುವುದು . . . ಅದಕ್ಕೇ ಅಲ್ಲವೆ ಗಂಟುಗಿಂಟು ಕಟ್ಟುವುದಕ್ಕೆ ನಾನೇ ನಿನಗೆ ಸಹಾಯಮಾಡುತ್ತಿರುವುದು ?

ಮಲ್ಲಿ (ರೇಗಿ)— ನನಗೆ ಯಾರ ಸಹಾಯವೂ ಬೇಡ . . . ಬನ್ನಿ . . . ಇತ್ತಲಾಗೆ ಬಂದು ಕೂತುಕೊಳ್ಳಿ . . . ಈಗಿನಿಂದಲೇ ನಿಮಗೆ ಬಿಡುಗಡೆ ! (ಮಾದಯ್ಯನನ್ನು ಎಬ್ಬಿಸಿ ದೂರ ಕೂರಿಸುವಳು) ಈಗಿನಿಂದ ಹಾಯಾಗಿದ್ದುಬಿಡಿ . . . ನನ್ನ ತಾಪತ್ರಯ ನಿಮಗೆ ಯಾಕೆ ?

ಮಾದಯ್ಯ (ನಗುತ್ತಾ)— ಅಂತೂ ನೀನು, ಅದನ್ನೂ ನಂಬಿಬಿಟ್ಟೆಯಾ ? ಕರಿಯ ನಂತಹ ಮನೆಮುರುಕರ ಕೈಗೆ ಸಿಕ್ಕಿದರೆ ನಿನ್ನ ಗತಿ ಏನು ? (ಮಲ್ಲಿ ಗಂಟಿನೊಳಗೆ ಸೇರಿಸು ತ್ತಿದ್ದ ಒಂದು ಗೊಂಬೆಯನ್ನು ನೋಡಿ) ಯಾವುದದು ? ಕೊಡಿಲ್ಲಿ ! ನೋಡೋಣ . . . ಹೊಸದಾಗಿದೆ. . . . ಚೆನ್ನಾಗಿದೆ . . . ನೋಡೋಣ, ಕೊಡಲ್ಲಿ. . .

ಮಲ್ಲಿ— ಕೊಡೋದಿಲ್ಲ. . . .

ಮಾದಯ್ಯ— (ಕಸಿದುಕೊಂಡು) ಗೊಂಬೆ ! ಈ ಕೂಸಿಗೆ ಆಡೋದಕ್ಕೆ ? ನಾನು ನೋಡೇ ಇಲ್ಲ ಇದುವರೆಗೂ ! ಯಾವಾಗ ಇಟ್ಟುಕೊಂಡು ಆಡುತ್ತಿದ್ದೆ ? ಯಾವಾಗ ತಂದೆ ನಿಮ್ಮೂರಿಂದ ? ನನ್ನ ಕಣ್ಣಿಗೆ ಬಿದ್ದೇ ಇಲ್ಲ ಈ ನಿನ್ನ ಆಟದ ಕೂಸು ! . . .

ಮಲ್ಲಿ— ಥೂ ! ನನಗಲ್ಲ ಇದು. . ನನ್ನ ತಮ್ಮನಿಗೆ . . . ಪುಟ್ಟುರಾಜುವಿಗೆ. . . .

ಮಾದಯ್ಯ— ನಮ್ಮೂರಿಂದ ಗೊಂಬೆ ತೆಗೆದುಕೊಂಡು ಹೋಗುತ್ತಿದ್ದೀಯಾ? ಇಲ್ಲೆಲ್ಲಿ ಸಿಕ್ಕಿತು?

ಮಲ್ಲಿ (ಮಾದಯ್ಯನ ಹತ್ತಿರ ಬಂದು) — ನಿಮ್ಮ ತಂಗಿಯವರು ಕೊಟ್ಟರು. . . . ಒಂದು ಕಣಬೇರೆ ಕೊಟ್ಟು ಹೋದರು. . . .

ಮಾದಯ್ಯ— ಆ? . . . ಇಲ್ಲಿ ಬಂದಿದ್ದಳೇ? ಈ ಮನೆಗೆ?

ಮಲ್ಲಿ— ಉಂ. ಬೆಳಗಿನ ಜಾವ . . . ಮಾವನವರು ಇನ್ನೂ ಮೈಸೂರಿಂದ ಕೆರೆ ಕಡೆಯಿಂದ ಮನೆಗೆ ಬಂದಿರಲಿಲ್ಲ. ಓಡೋಡಿ ಬಂದು ಬಾಗಿಲು ಬಡಿದರು. . .

ಮಾದಯ್ಯ (ಗೊಂಬೆಯನ್ನು ಮಡಿಲಲ್ಲಿರಿಸಿಕೊಂಡು) — ಅವಳೇ ಹೊಲೆದು ಹತ್ತಿತುಂಬಿ ಸರ ಪೋಣಿಸಿ ಒಡವೆ ತೊಡಿಸಿ ಮಾಡಿದಾಳೆ ಇದನ್ನ . . . ಎಷ್ಟು ಚೆನ್ನಾಗಿದೆ! ರಾಮಪ್ಪನಿಗೂ ಗೊತ್ತಿಲ್ಲ, ಗೊಂಬೆ ಸಮಾಚಾರ!

ಮಲ್ಲಿ— ಅವರು ಕೊಟ್ಟ ಕಣ ತಂದು ತೋರಿಸುತ್ತೇನೆ . . . ಅದನ್ನೂ ಗಂಟಲ್ಲಿಡಬೇಕು. ಮರೆತೇಬಿಟ್ಟಿದ್ದೆ (ಹೊರಡುವಳು.)

ಮಾದಯ್ಯ (ನಿಟ್ಟುಸಿರು ಬಿಡುತ್ತಾ ಗೊಂಬೆಯನ್ನೇ ನೋಡುತ್ತ ಕುಳಿತಿರುವನು.)

(ಅಂಕೇಗೌಡರು ಬರುವರು.)

(ತಂದೆಯನ್ನು ಕಾಣುತ್ತಲೂ ಮಾದಯ್ಯ ದಿಗ್ಭ್ರಾಂತನಾಗುವನು. ಗೊಂಬೆಯನ್ನೇನು ಮಾಡುವುದೆಂದು ತಿಳಿಯದೆ ತತ್ತರಿಸಿ ಕಡೆಗೆ ಕೈಯಲ್ಲೇ ಮರೆಯಾಗಿ ಹಿಡಿದು ನಿಲ್ಲುವನು.)

ಅಂಕೇಗೌಡರು — ಮಾದ! ನಿನ್ನ ಮಾವ ಬರುತ್ತಾರಂತೆ, ಈಗ . . . ಮಗಳನ್ನ ಕರೆದುಕೊಂಡು . . . ಓ! ಆಗಲೇ ಗಂಟು ಮೂಟೆ ಸಿದ್ಧ! . . . ಸರಿ! ಕೋಳಿ ಕೂಗುವ ಹೊತ್ತಿಗೆ ಸರಿಯಾಗಿ ಗಾಡಿ ಕಟ್ಟಿಕೊಂಡು ಬಂದುಬಿಡು ಅಂತ ತಿಮ್ಮನಿಗೆ ಹೇಳು . . . ಅವನು ಹಿಟ್ಟುತಿಂದು ಒರಗಿದ ಅಂದರೆ ಸಿಡಿಲು ಬಡಿದರೂ ಏಳುವುದಿಲ್ಲ . . . ಅವನ ಹೈದನಿಗೂ ಹೇಳಿರು. ಹೋಗಿಬಿಟ್ಟು ಬಾ . . . ಈಗಲೇ! (ಮಾದಯ್ಯ ಹೊರಡುವನು) ಇಲ್ಲಿ ಬಾ, ಮಾದ! ಅವರ ಸೊಸೆಯನ್ನೂ ಎಳೆದುಕೊಂಡು ಹೋಗುತ್ತಾರೋ ಏನೋ ಜಾತ್ರೆಗೆ! ಅವಳು ಆಚೆಬೀದಿ ಮಗಳು, ನೆನಪಿರಲಿ! ನಮ್ಮ ಗಾಡೀಲಿ ಕೂರಿಸಕೂಡದು ಅಂತ ತಿಮ್ಮನಿಗೆ ಎಚ್ಚರಿಕೆ ಹೇಳಿರು; ನಮ್ಮ ಸೊಸೆ ನಮ್ಮ ಗಾಡೀಲಿ, ಅವರ ಮಗಳು ಅವರ ಗಾಡೀಲಿ, ಅದೇ ನ್ಯಾಯ.

ಮಾದಯ್ಯ— ಅವರ ಎತ್ತಿಗೆ ಜ್ವರವಂತೆ! ಅವರು ಹೇಗೆ ಗಾಡಿ ಕಟ್ಟುತ್ತಾರೆ?

ಅಂಕೇಗೌಡರು — ಅದಕ್ಕೆ ಜ್ವರವಾದರೆ ನೀನು ಬರೆ ಎಳೆಸಿಕೊಳ್ಳುತ್ತೀಯೇನು? ಅವರ ಕೊಟ್ಟಿಗೆಯೊಳಕ್ಕೆ ನೀನೇಕೆ ನುಗ್ಗಿದೆ? ಇಲ್ಲಿ ನೋಡು, ಮಾದ! ನೀನೂ

ಆ ಕಾಳಿಂಗಸರ್ಪನೂ ಸರಸ ಆಡೋದು ಬಿಟ್ಟಿಲ್ಲಾ ಅಂತ ನನಗೆ ಗೊತ್ತಿದೆ. ಇಬ್ಬರು ಚಂಡಾಳರೂ ಸೇರಿ ಹೆತ್ತವರ ತಲೆಮೇಲೆ ಚಪ್ಪಡಿ ಎಳೆಯುತ್ತಿದೀರಿ, ಗೊತ್ತು ನನಗೆ! ಆ ಲಿಂಗೀನೂ ಅಷ್ಟೆ. ತೆಗೆದುಕೊಂಡು ಹೋಗಿ ಆ ಹಾಳುಭಾವಿಯೊಳಗೆ ನೂಕಿದೇವೆ; ಅಲ್ಲೇ ಬಿದ್ದಿರಬೇಕು ಎಂಬ ಜ್ಞಾನವಿಲ್ಲ ಅವಳಿಗೆ. ಬೆಳಗ್ಗೆ ಅವಳ ಹಾಗಿತ್ತು, ಯಾರೋ ಹಿತ್ತಲ ಬಾಗಿಲಿಂದ ಛಂಗ್ ಅಂತ ನೆಗೆದದ್ದು ನೋಡಿದೆ. ಆಚೆ ಬೀದಿಯಿಂದ ಒಂದು ಹೀಚು, ಒಂದುಹುಳ, ಇತ್ತಲಾಗೆ ಹರಿದು ಬರಬಾರದು; ಹಿಸುಕಿ ಹಾಕಿಬಿಡುತ್ತೇನೆ ಅಂತ ಹೇಳಿದೇನೆ, ನಿನ್ನ ತಾಯಿಗೆ . . . ಏನೋ ಅದು ? . . . ನಿನ್ನ ಕೈಯಲ್ಲಿ ?

ಮಾದಯ್ಯ (ತೋರಿಸುತ್ತಾ)—ಗೊಂಬೆ . . . ಯಾವುದೋ ಗೊತ್ತಿಲ್ಲ! ಅಷ್ಟು ಹೊತ್ತಿನಿಂದ ಇಲ್ಲೇ ಇದೆ.

ಅಂಕೇಗೌಡರು—(ಕಸಿದುಕೊಳ್ಳುತ್ತಾ) ನಮ್ಮ ಮನೇದಲ್ಲ . . . ಹೊಸದಾಗಿದೆ . . . ಯಾರು ತಂದರು ? ಯಾಕಿದು ?

ಮಾದಯ್ಯ— ನನಗೇನು ಗೊತ್ತು ?

(ಮಲ್ಲಿ ಕಣಸಹಿತವಾಗಿ ಒಳಕ್ಕೆ ಬರುವಳು. . . . ಮಾವನವರನ್ನು ಕಂಡು ನಿಲ್ಲುವಳು. ವಿಧ್ಯಮಾನ ಚೆನ್ನಾಗಿಲ್ಲವೆಂದರಿತು ಬೆದರುವಳು. ಕಣವನ್ನು ಹಿಂದಕ್ಕೆ ಹಿಡಿದು, ಅಲ್ಲೇ ನಿಲ್ಲುವಳು.)

ಅಂಕೇಗೌಡರು — ಕೇಳು ! ಕೇಳಿ ಹೇಳು ? ಯಾರು ತಂದರಿದನ್ನ ?

ಮಲ್ಲಿ (ಮೆಲ್ಲಗೆ) — ಮಕ್ಕಳಿಗೆ . . . (ಗಾಬರಿಗೊಂಡು) ಮೇಷ್ಟರು. . . .

ಮಾದಯ್ಯ (ತಕ್ಷಣವೇ ಒಂದು ಸುಳ್ಳಿನ ಕಥೆಯನ್ನು ನೆಯ್ಯುತ್ತಾ, ಹೇಳುತ್ತಾ ಹೇಳುತ್ತಾ ತನ್ನ ಕಥೆಗೆ ತಾನೇ ಬೆದರುತ್ತಾ) — ದೊಡ್ಡ ದೊಡ್ಡ ಹೈಕಳೆಲ್ಲ ಓದುತ್ತಾ ಕೂತಾಗ ಅವರ ಜೊತೆಯಲ್ಲಿ ಸಣ್ಣವೂನೂ ಬಂದುಬಿಡುತ್ತವೆ. ಅವಕ್ಕೂ ಓನಾಮ ಕಲಿಸ್ತೇನಿ ಅಂತ ಮೇಷ್ಟರಯ್ಯನವರು. . . .

ಅಂಕೇಗೌಡರು — ಏನೋ ನೀನು ಹೇಳುವುದು ? ನಮ್ಮೂರು ಮೇಷ್ಟರಿಗೂ ಈ ಗೊಂಬೆಗೂ ಏನು ಸಂಬಂಧ ?

ಮಾದಯ್ಯ (ಮಲ್ಲಿಯ ಮುಖ ನೋಡುತ್ತಾ) — ಕೊಂಚ ಹೊತ್ತು ಮರಳಿನ ಮೇಲೆ ಅಕ್ಷರ ತಿದ್ದಿಬಿಟ್ಟರೆ ಸಣ್ಣ ಹುಡುಗರಿಗೆ ಬೇಜಾರಾಗಿ ಬಿಡುತ್ತದೆ. ಅವಕ್ಕೇನಾದರೂ ಆಟದ ಸಾಮಾನು ಕೊಡಬೇಕು ಅಂತ ಹೇಳಿ ಮನೆಮನೆಯಿಂದ ಮೇಷ್ಟರು ಇಂತಹ ಗೊಂಬೆ, ಬಸವ, ಮಣಿ, ಮಡಕೆ, ಕುಡಿಕೆ, ಹೀಗೆ ಶೇಖರಿಸುತ್ತಾ ಇದಾರಂತೆ. . . . ಯಾರ ಮನೆಯದೋ ಏನೋ ಇದು ಗೊತ್ತಿಲ್ಲ. . . . ಜವರಾಯಿ ಮಕ್ಕಳು ಇಲ್ಲಿಗೆ ತಂದರೋ ಏನೋ ? . . . ಅವರೇ ತಂದಿರಬೇಕು. . . .

ಅಂಕೇಗೌಡರು (ಮಾದಯ್ಯನ ಕೈಯಿಂದ ಅದನ್ನು ತೆಗೆದು ನೆಲಕ್ಕೆ ಎಸೆಯುತ್ತಾ) — ಆಚೆಯುವರ ಮಕ್ಕಳು, ಈಚೆಯುವರ ಮಕ್ಕಳು, ಎಲ್ಲರನ್ನೂ ಕಲಸು ಮೇಲೋಗರಮಾಡಿ ಜಾತಿ ಕೆಡಿಸುವ ತಂತ್ರ ಇದು, ನನಗೆ ಗೊತ್ತಿಲ್ಲವೆ? ನೀವೇ ಹೇಳಿಕೊಟ್ಟಿರಬೇಕು ಈ ದುರ್ವಿದ್ಯೇನ . . . ಕಲಿತ ಮಂದಿಯಲ್ಲವೆ ನೀವು? ಕಲಿತ ಮಂದಿ! ಹಾಳಾಗಿ ಹೋಯ್ತು! . . . ಹೋಗು . . . ತಿಮ್ಮನಿಗೆ ಹೇಳು . . . ಹಾಗೇನೇ ಬೋಳು ತೆಂಗಿನಮರದ ಹತ್ತಿರ ನಿಂತಿದ್ದು ನಿನ್ನ ಮಾವ ಬರುತ್ತಲೂ ಇಲ್ಲಿಗೇ ಕರೆದುಕೊಂಡು ಬಾ! ರಾಮೇಶ್ವರಕ್ಕೆ ಬಂದಮೇಲೂ ಕೂಡ ಆ ಶನೀಶ್ವರನ ಮನೆ ಹೊಕ್ಕು ಬಿಟ್ಟಾರು! ಗ್ರಹಚಾರ . . . (ಮಾದಯ್ಯ ಹೋಗುವನು. ಮಲ್ಲಿಯೂ ಮೆಲ್ಲನೆ ಹೊರಡುವಳು . . . ಕರಿಯ ಬರುವನು)

ಕರಿಯ — ಗೌಡರೇ! ಬೆಳಗಾಗುವ ಹೊತ್ತಿಗೆ ಇನ್ನೊಂದು ಎತ್ತು ಕೈಲಾಸದ ಮೆಟ್ಟಲು ಹತ್ತುತ್ತಾ ಇರುತ್ತದೆ, ನೋಡುತ್ತಿರಿ!

ಅಂಕೇಗೌಡರು — ಮೆತ್ತಗೆ ಹೇಳು ಕರಿಯ! ನಮ್ಮ ಬಲಗೈಯನ್ನೂ ಕೂಡ ನಾವೀಗ ನಂಬುವಹಾಗಿಲ್ಲ. ಮಕ್ಕಳೇ ತಿರುಗಿಬೀಳುವ ಕಾಲ ಬಂದಿದೆ! . . . ಹಿಡಿಯಿತೇನು ಮದ್ದು ಅದಕ್ಕೆ? ಸ್ವಲ್ಪವೇ ಉಳಿದಿತ್ತು, ಅಂದೆ! ಸಾಕಾಯಿತೆ ಅದು?

ಕರಿಯ — ಓಹೊ! ಮೂರು ಜೊತೆ ಎತ್ತನ್ನುರುಳಿಸಿದ್ದು ಇದೊಂದನ್ನು ಮಾತ್ರ ಹಾಗೆಯೇ ಉಳಿಸೀತೆ? ಇದರ ಜಾತೀನೇ ಅಲ್ಪ ಪ್ರಾಣ! ಚುಂಚನಕಟ್ಟೇಲಿ ತಂದದ್ದಲ್ಲವೆ ಅವನು? ಇದಕ್ಕೆ ಅರ್ಧ ಚಮಚವೇ ಸಾಕು.

ಅಂಕೇಗೌಡರು — ಹಾಗಾದರವನಿಗಿನ್ನು ಉಳಿದಿರುವುದು ಒಂದೇ ಒಂದು, ಒಂಟಿ!

ಕರಿಯ — ಹುಂ! ಆ ಎಡಚ ಒಂದು ಮಾತ್ರ! . . . ಅದೂ ಅಲ್ಲದೆ, ಅಷ್ಟೊಂದು ರಾಸು ಇದ್ದರೂ ಚಿಕ್ಕ ಪುಟ್ಟೇಗೌಡರಿಗೆ ತಾಪತ್ರಯವೇ, ಕಾಳುಕಡ್ಡಿಗೆ, ಮೆದೆಮೆದೇನೆ ಬೂದಿಯಾಗಿ ಹೋಗಿರುವಾಗ! ಹೋದ ಅಮಾಸೆ ದಿನ ಹಚ್ಚಿದ್ದು ತೀರ್ಥಪುರಕ್ಕೂ ಕಾಣಿಸಿತಂತೆ!

ಅಂಕೇಗೌಡರು — ಇದೆಲ್ಲ ನಿನ್ನ ಕೈಚಳಕ ಕರಿಯ! ನಿನ್ನ ಜಾಣತನ . . . ನಾನೇನು? ಬರೀ ಕೋರ್ಟಿಗಲೆಯೋದಕ್ಕೆ ಲಾಯಕ್ಕು! ಅಷ್ಟೆ. . . .

ಕರಿಯ — ತಂತ್ರ ಎಲ್ಲಿ ಬಂತು, ಗೌಡರೇ! ಕೊ, ಕರಿಯ, ಅಂತ ನೀವು ಒಂದು ಹಿಡಿ ಜೋಳ ಕೊಟ್ಟರೂ ನನಗದು ಒಂದು ಹಿಡಿ ಚಿನ್ನ! . . . ಅದಕ್ಕಾಗಿ ಮಾನ ಪ್ರಾಣ ಎರಡನ್ನೂ ಒತ್ತೆ ಇಟ್ಟು ದುಡಿಯುತ್ತಿದೇನೆ . . . ಕೋರ್ಟಲ್ಲೇನು ಕಡಿಮೆ ಕೆಲಸ ಇದೆಯೆ ನಿಮಗೆ? ಅವನ ಕೈಗೆ ಕರಟ ಕೊಡಿಸೋದು ಅಲ್ಲೇ ಅಲ್ಲವೆ! ಜಡ್ಜಿಗಳ ಕೈಯಿಂದ!

ಅಂಕೇಗೌಡರು — ಇಷ್ಟೆಲ್ಲ ಮಾಡಿಸುತ್ತೀಯಾ! ಕರಿಯಾ! ಆದರೆ, ನಿಮ್ಮ ತೀರ್ಥಪುರಾಣ ಮುರಿಯುವುದಕ್ಕಾಗಲಿಲ್ಲವಲ್ಲಾ ನಿನ್ನ ಕೈಲಿ . . . ಎಲ್ಲರೂ ಆ ಪಟೇಲರ ಹಿಂದೇನೆ ಬಾಲ ಆಡಿಸಿಕೊಂಡು ಓಡಾಡುತ್ತಾರಲ್ಲಾ! ಅವರಿವತ್ತು ಬರ್ತಾರೆ ಇಲ್ಲಿಗೆ . . . ಗೊತ್ತೇನು? ಮಾದಯ್ಯ ಹೋಗಿದಾನೆ . . . ದೊಡ್ಡ ರಸ್ತೆ ಹತ್ತಿರಕ್ಕೆ . . . . ಅವರನ್ನ ಕರೆತರುವುದಕ್ಕೆ.

ಕರಿಯ — ಗೌಡರೇ! ಇಲ್ಲೂ ಬೆಂಕಿ ಆರಿಸುವ ಪ್ರಯತ್ನ ಮಾಡಿದರೂ ಮಾಡಬಹುದು ನಮ್ಮ ಪಟೇಲರು ಇವತ್ತು . . . ನಿಮ್ಮ ಕಿವಿ ಸೆಟ್ಟಗಾಗುವುದಿಲ್ಲ ತಾನೆ? ಚಿಕ್ಕಪುಟ್ಟೇಗೌಡ ಆಡಿರೋ ಹಾಳು ಮಾತೆಲ್ಲ ಜ್ಞಾಪಕ ಇರಲಿ, ಚೆನ್ನಾಗಿ . . .

ಅಂಕೇಗೌಡರು — ನನ್ನ ಗುಣ ಗೊತ್ತಿಲ್ಲದೆ ಇದ್ದವನ ಹಾಗೆ ಮಾತನಾಡುತ್ತೀಯಲ್ಲಾ, ಕರಿಯಾ! ಪಟೇಲರ ಬೆದರಿಕೆಗೆಲ್ಲಾ ನಾನು ತಗ್ಗುತ್ತೇನೆಯೇ? ಪಟೇಲ ಬೆಣ್ಣೆಯ ಹಾಗೆ ಹೊರಗಿನವರು ಎರಡು ಮಾತಾಡಿಬಿಟ್ಟರೆ ನಾನು ಕುಣಿಕುಣೀತಾ ಹೋಗಿ ಆ ಪಿಶಾಚೀನ ತಬ್ಬಿಕೊಂಡುಬಿಡುತ್ತೇನೆಯೆ? ಯಾವ ಸೀಮೆ ಮಾತು? . . . ಅದಿರಲಿ! ಈ ಹುಡುಗರುಬ್ಬರ ಸ್ನೇಹಾನ ಬೇರುಸಹಿತ ಕಿತ್ತುಹಾಕಬೇಕಲ್ಲ!

ಕರಿಯ — ದೊಡ್ಡ ದೊಡ್ಡ ಬಂಡೇನ, ಒಂದು ಸನಿ ಬೇರು ಇಳಿಸ್ತಾ ಒಡೆಸಿ ಅತ್ತಲಾಗೊಂದು ಇತ್ತಲಾಗೊಂದು ಬೀಳಿಸುತ್ತೆ. ಇನ್ನು, ಇವರ ಸ್ನೇಹ ಯಾವ ಮಹಾ! ಕೊಂಚ ನನ್ನ ಚಾಡೀಗಿಡದ ಬೇರು ಇಳೀಬಿಟ್ಟರೆ ಸಾಕು. . . . ಏರ್ಪಾಟುಮಾಡೋಣ. . .

ಅಂಕೇಗೌಡರು — ಆ ಮೇಲೆ, ಕರಿಯಾ! ಈ ಮೇಷ್ಟರಯ್ಯನ ಮೇಲೂನೂ ಒಂದು ಮೂಗರ್ಜಿ ಹೋಗಬೇಕು, ಮೇಲಕ್ಕೆ!

ಕರಿಯ — ಅದೆಷ್ಟು ಹೊತ್ತು? ಆಗಲೇ ಮಾಡಬೇಕಾಗಿದ್ದ ಕೆಲಸ ಅದು . . . ಮುದುರಿಕೊಂಡು ತೆಪ್ಪಗಿದ್ದನಲ್ಲಾ ಅಂತ ಸುಮ್ಮನಿದ್ದಿರಿ! ಅಲ್ಲವೆ?

ಅಂಕೇಗೌಡರು — ಹೂಂ. ತೆಪ್ಪಗಿರುವವರ ಮೇಲೆ ಕಪ್ಪೆ ಎಸೆಯಬೇಕಾದ ಕಾಲ ಇದು, ಕರಿಯಾ! ಊರೂರೇ ಮಹಾಭಾರತ ಮಾಡುತ್ತಾ ಇರೋವಾಗ ಈ ಮೇಷ್ಟರಯ್ಯ ಮನೆ ಮನೆ ಗೊಂಬೆ ತಿರುಪೆಮಾಡಿ ಕಂಡ ಕಂಡವರ ಕೈಗೆಲ್ಲಾ ಕೊಟ್ಟು ಜಾತಿ ಕೆಡಿಸುವುದಕ್ಕೆ ಹೊರಟಿದಾನೆ, ತಿಂದ ಅನ್ನ ಅರಗಿಸಲಾರದೆ!

ಕರಿಯ — ಎಂಟು ತಿಂಗಳಿಂದ ಇಸ್ಕೂಲು ಬಾಗಿಲೇ ತೆಗೆದಿಲ್ಲ ಅಂತ ಗೀಚಿ ಹಾಕಿಬಿಡೋಣ! ಹೋದರೆ ಒಂದೂವರೆ ಆಣೆ! ಬಂದರೆ, ಒಬ್ಬ ಹೊಸ ಮೇಷ್ಟರು. ಇಸ್ಕೂಲೇ ತೆಗೆದುಬಿಟ್ಟರೆ ಇನ್ನೂ ಸರಾಗ! ತಂಟೆ ತೀರಿತು. ನಮ್ಮ ಹೈಕಳು ನಮ್ಮ

ಹತ್ತಿರವೇ ಬುದ್ಧಿ ಕಲಿತುಕೊಳ್ಳಲಿ. ಇನ್ನೊಬ್ಬರ ಮುಂದೆ ಕೈಕಟ್ಟಿಕೊಂಡು ನಿಲ್ಲುವುದೇ ಬೇಡ. ನಾವು ಕಲಿಸದೆ ಇರೋ ಬುದ್ಧಿ ಇವರೇನು ಹೇಳಿಕೊಟ್ಟಾರು?

ಅಂಕೇಗೌಡರು — ಸರಿ, ಹಾಗಾದರೆ! ಈಗಲೇ ಹೊರಡುತ್ತೀಯಾ ತೀರ್ಥಪುರಕ್ಕೆ?

ಕರಿಯ — ಹುಂ. ಬೆಳಗಾಗುತ್ತಲೂ ಬಸ್ಸಲ್ಲಿ ಮೈಸೂರಿಗೆ ಹೊರಡಬೇಡವೇನು?

ಅಂಕೇಗೌಡರು — ಓ! ಮರೆತಿದ್ದೆ! ಎತ್ತು ಸತ್ತಾಗ ನೀನಿಲ್ಲಿ ಕಾಣಿಸಿಕೊಳ್ಳಬಾರದು . . . ಹೊರಡು . . . ಹೋಗುತಾ, ಈ ಹಾಳು ಗೊಂಬೆಯನ್ನ ಆ ಮೇಷ್ಟರ ಬಾಗಿಲಿಗೆ ರೊಯ್ ಅಂತ ಬಡಿದುಬಿಟ್ಟು ಹೋಗು! ಅನಿಷ್ಟ . . . ಆಚೆ ಬೀದೀದೇ ಇರಬೇಕು ಶನಿ . . . (ಕರಿಯ ಗೊಂಬೆ ಸಹಿತ ಹೊರಡುವನು.)

(ತೆರೆ)

## ದೃಶ್ಯ ೩

[ಚಿಕ್ಕಪುಟ್ಟೇಗೌಡರ ಮನೆ ಪಡಸಾಲೆ. ಮನೆಯ ಮುಂಭಾಗ ಮಾತ್ರ ಕಾಣಿಸುತ್ತಿದೆ. ಬಾಗಿಲು; ಬಾಗಿಲಿನ ನಡುವೆ ಕಡೆಗಳಲ್ಲೂ ಗೋಡೆಯ ಗೂಡಿನೊಳಗೆ ಹಣತೆಗಳು. ಬೀದಿಯಿಂದ ಬಾಗಿಲು ತನಕ ಮೆಟ್ಟಿಲುಗಳು. ಪಡಸಾಲೆ ಮೇಲೆ ಕುಳಿತು ಮೆಟ್ಟಲಿಗೆ ಕಾಲನ್ನಿಳಿಬಿಟ್ಟು, ಗೌಡರು ಮಗನೊಂದಿಗೆ ಮಾತನಾಡುತ್ತಿದಾರೆ.]

ಚಿ. ಪು. ಗೌಡರು — ಹೋಗೊ! ಹೋಗೊ! ನಾನು ನಂಬುವುದಿಲ್ಲ ಯಾವುದೋ ಗಾದೆ ಹೇಳಿದ ಹಾಗಾಯಿತು! ದೊಡ್ಡರೋಗವೂ ಅಲ್ಲ, ಗಡ್ಡರೋಗವೂ ಅಲ್ಲ! ನಾ ಕಾಣದೆ ಇದ್ದದ್ದೇ ಆ ರೋಗಗಳನ್ನ! . . . ಹಿಂದೆ ಸತ್ತವಲ್ಲ ಅವಕ್ಕೆ ಬಂದ ರೋಗಾನೇ ಇದಕ್ಕೂವೆ! ಈ ರೋಗಕ್ಕೆ ಹೆಸರೇನು ಗೊತ್ತೆ? ಜಿದ್ದುರೋಗ! . . . ಇದು ಸಟ್ಟಗಾಗುವುದಿಲ್ಲ, ರಾಮಪ್ಪ! ಹೆಂಚಿನ ವಿಷಯಕ್ಕೆ ಹಾಳು ಕರಿಯ ತಂದು ಹಾಕಿದ ಪಾಪಾಸುಕಳ್ಳಿ ಈಗ ಊರೂರನ್ನೇ ಆಕ್ರಮಿಸಿಕೊಂಡುಬಿಟ್ಟಿದೆ ನೋಡು! ಯಾವ ಗಳಿಗೇಲಿ ಅವನು ನಮ್ಮೂರು ಮೆಟ್ಟಿದನೊ? ನಮ್ಮಪ್ಪ ರಾಮದೇವರಿಗೇ ಗೊತ್ತು! ಅಂದ ಹಾಗೆ, ರಾಮಪ್ಪ! ಯಾವುದೋ ಗಾದೆ ಹೇಳಿದ ಹಾಗೆ ನಾನು ಅದನ್ನೇ ಮರೆತೆನಲ್ಲಾ? ಬಾಗಿಲು ಬಂದಾಗಿದ್ದರೂ ಒಳಗೆ ಪಠ ಇದೆಯಲ್ಲ! ಹಿತ್ತಲಾಗಿಂದ ಹೋಗಿ ರಾಮಮಂದಿರದ ಬಾಗಿಲಿಗೆ ಒಂದು ದೀಪ ಹಚ್ಚಿಟ್ಟು, ಒಂದು ಕಾಯೊಡೆದು, ಕರ್ಪೂರ ತೋರಿಸಿಬಿಟ್ಟು ಬಾ! ಕಾಯಿನೀರನ್ನ ಆ ಎತ್ತಿನ ಬಾಯಿಗೆ ಹಾಕು! ನೋಡೋಣ ಅದೂ ಒಂದು ಕಡೇ ಪರಿಸೆ! (ರಾಮಪ್ಪ ಹೊರಡುವನು) (ಗೌಡರು ಪಡಸಾಲೆ ಮೇಲೆ ಅತ್ತಿತ್ತ ಶತಪಥ ತಿರುಗುವರು.)

ಮೇಷ್ಟರು (ಒಳಗಿಂದ) — ಚಿಕ್ಕಪುಟ್ಟೇಗೌಡರೇ ! . . . ಚಿಕ್ಕಪುಟ್ಟೇಗೌಡರೇ !

ಚಿ. ಪು. ಗೌಡರು (ಚಕಿತರಾಗಿ) — ಆ ! ಯಾರು ? ಯಾರು ? ಮೇಷ್ಟರೇ ?

ಮೇಷ್ಟರು (ಕಾಣಿಸಿಕೊಂಡು) — ಹೌದು, ಗೌಡರೇ !

ಚಿ. ಪು. ಗೌಡರು — ಏನು? ಎತ್ತಿನ ಗತಿ ಏನಾಯಿತು? ಎಲ್ಲಿಂದ ಬಂದಿರಿ ನೀವೀಗ?

ಮೇಷ್ಟರು — ನಾನು ಎತ್ತನ್ನೂ ಕಾಣೆ! ಗತೀನೂ ಕಾಣೆ! . . . ನಮ್ಮ ನೇಲಿ ನಡೆದ ಒಂದು ಸೋಜಿಗಾನ ನಿಮಗೆ ತಿಳಿಸಿ, ನಿಮ್ಮನ್ನ ಕರೆದುಕೊಂಡು ಹೋಗೋಣ ಅಂತ ಬಂದೆ.

ಚಿ. ಪು. ಗೌಡರು (ಗಾಬರಿಗೊಂಡು) — ಅದೇನದು ? ಇಷ್ಟು ಹೊತ್ತಿನಲ್ಲಿ ! ನಿಮ್ಮ ಮನೇಲಿ ? ಅಲ್ಲೂ ಏನಾದರೂ ಅನಾಹುತ ನಡೆಸಿದನೇ ಕರಿಯ ?

ಮೇಷ್ಟರು (ನಿಧಾನವಾಗಿ) — ಇನ್ನೇನೂ ಇಲ್ಲ! ಇವತ್ತೇ ರಾಮನವಮಿ, ನೆನ ಪಿದೆಯೇ ?

ಚಿ. ಪು. ಗೌಡರು (ಬೇಸರದಿಂದ) — ನನಗೆಲ್ಲಿ ನೆನಪು, ಮೇಷ್ಟರೇ ! ಈ ಕೋರ್ಟು ಕಚೇರಿ ಹವ್ಯಾಸದಲ್ಲಿ! ಮೆದೆಗೆ ಬೆಂಕಿ; ಎತ್ತಿಗೆ ಜ್ವರ; ಹಗೇವಲ್ಲಿ ನೀರು; ಈ ಅವಾಂತರ ದಲ್ಲಿ ! . . . ಯಾವುದೋ ಗಾದೆ ಹೇಳಿದ ಹಾಗೆ.

ಮೇಷ್ಟರು — ನಾವು ಹೇಳುತ್ತಿರಲಿಲ್ಲವೆ, ರಾಮಮಂದಿರ ಕಟ್ಟುತ್ತಿದ್ದಾಗ, ನವಮಿ ದಿವಸ ದೊಡ್ಡ ಉತ್ಸವ ಮಾಡಬೇಕು. ಕೋಸುಂಬರಿ ಪಾನಕ ಹಂಚಬೇಕು, ಹರಿಕಥೆ ಏರ್ಪಾಟುಮಾಡಿಸಬೇಕು ಅಂತ, . . . ಇವತ್ತೇ ನೋಡಿ, ಆ ರಾಮನವಮಿ, ರಾಮದೇವರ ಹುಟ್ಟಿದ ಹಬ್ಬ !

ಚಿ. ಪು. ಗೌಡರು (ನಿಟ್ಟುಸಿರು ಬಿಡುತ್ತಾ ತನಗೆ ತಾನೇ) — ಅಯ್ಯೋ ! ನಮ್ಮಂತಹ ಪಾಪಿಗಳೂ ಉಂಟೆ ಪ್ರಪಂಚದಲ್ಲಿ ? ಇಂಥಾ ದಿನ ಮೈ ತೊಳೆದುಕೊಂಡು ಮಡಿ ಉಟ್ಟು, ರಾಮಾ ಅಂತ ಒಂದು ಸಲ ಬಾಯಲ್ಲಿ ಅನ್ನಲಿಲ್ಲವಲ್ಲಾ ! ಯಾವುದೋ ಗಾದೆ ಹೇಳಿದಹಾಗಾಯ್ತು; (ಥಟಕ್ಕನೆ) ಓ ರಾಮಪ್ಪ ಹೋಗಿದಾನೆ. ಸಾಯೋ ಎತ್ತಿನ ನೆಪದಲ್ಲಾದರೂ ದೀಪ ಹಚ್ಚಿಡುತ್ತಾನೆ. ಬಾಗಿಲಾಚೆಯಿಂದಾದರೂ ಕಾಯೊಡೆಯುತ್ತಾನೆ. . . . ರಾಮನವಮಿ ಖಾಲಿ ಮಾಡುವುದಿಲ್ಲ.

ಮೇಷ್ಟರು — ಅಂಥ ಪಾಪಿಗಳೇನೂ ಅಲ್ಲ, ಗೌಡರೇ, ನಾವು ! ಅದನ್ನ ಹೇಳೋ ದಕ್ಕೇನೆ ಬಂದದ್ದು ! ಕೇಳಿ ಇಲ್ಲಿ! ಕೊಂಚ ಹೊತ್ತಿಗೆ ಮುಂಚೆ ನಾನು ಜಗುಲಿ ಮೇಲೆ ಪಂಚಾಂಗ ತಿರುವಿಹಾಕುತ್ತಾ ಇದ್ದೆ. ಯಾವ ಪರದೇಶೀನೂ ಸುಗ್ಗದೆ ಇರೋ ನಮ್ಮ ಹಳ್ಳಿಗೆ, ನನ್ನ ಮನೆಬಾಗಿಲಿಗೆ, ಒಬ್ಬರು ಮಹಾತ್ಮರು ಬಂದರು. . . .

ಚಿ. ಪು. ಗೌಡರು — ಏನು ? ಮಹಾತ್ಮರೆ ! ಯಾರವರು ? ಯಾವೂರಿಂದ ?

ಮೇಷ್ಟರು — ಮಹಾಭಾಗವತೋತ್ತಮರು! ರಾಮಭಕ್ತರು! . . . ಅವರನ್ನೆದುರುಗೊಂಡು ಕುಶಲಪ್ರಶ್ನೆ ಕೇಳಿ ಕಾಲು ತೊಳೆಯುವುದಕ್ಕೆ ನೀರುಕೊಟ್ಟು ಚೌಕ ತರೋಣ ಅಂತ ನಾನು ಮನೆಯೊಳಕ್ಕೆ ಹೋದೆ. ನೋಡಿ . . . ಅದೇನೋ 'ಧೊಪ್' ಅಂತ ನಮ್ಮ ಮನೆ ಮುಂದೆ ಆಕಾಶದಿಂದ ಬಿತ್ತು. ನಾನು ಓಡಿ ಬರುವುದರೊಳಗೆ ಭಾಗವತರು ಅದನ್ನ ಕೈಗೆ ತೆಗೆದುಕೊಂಡಿದ್ದರು! ದೀಪ ತರಿಸಿ ನೋಡುತ್ತೇವೆ . . . ಆಹಹ!

ಚಿ. ಪು. ಗೌಡರು — ಏನದು? ಎಲ್ಲಿಂದ ಬಿತ್ತು ಅದು? ಹೇಳಿ ಬೇಗ . . . ಅಯ್ಯೋ! ರಾಮು!

ಮೇಷ್ಟರು — ಸಾಕ್ಷಾತ್ ಆಂಜನೇಯಸ್ವಾಮಿ ಮೂರ್ತಿ.

ಚಿ. ಪು. ಗೌಡರು — ಇದೇನಾಶ್ಚರ್ಯ? ಯಾವುದೋ ಗಾದೆ ಹೇಳಿದ ಹಾಗೆ!

ಮೇಷ್ಟರು — ಆಶ್ಚರ್ಯವಲ್ಲದೆ? ಭಗವಂತನ ಲೀಲೆ! ಶ್ರೀರಾಮದೇವರ ಕೃಪೆ! ಮಖಮಲ್ಲು ಜರತಾರಿ ಹಾಕಿ ಹೊಲೆದಿರುವ ಗೊಂಬೆ; ಗಾಜಿನ ಮಣಿಸರ; ಸಣ್ಣದೊಂದು ಗಂಟೆ ಕುತ್ತಿಗೆಯಲ್ಲಿ, ಬಾಲದ ತುದಿಗೊಂದು ಕುಚ್ಚು ಬೇರೆ! ಬಹು ಸೊಗಸಾಗಿದೆ. ಅಂಥಾದ್ದನ್ನ ನಾವೆಂದೂ ನೋಡಿಲ್ಲ. ದಾಸರಿಗಂತೂ ತಮ್ಮ ಇಷ್ಟದೇವತೆಯೇ ಸಿಕ್ಕಿದಹಾಗಾಗಿದೆ. ದೇವಲೋಕದಲ್ಲಿ ಮಕ್ಕಳುಮರಿ ಎಲ್ಲೋ ಆಟವಾಡುತ್ತಿದ್ದಾಗ ಕೆಳಗೆ ಬಿದ್ದಿರಬೇಕು ಅಂತಾರೆ ಅವರು. ಅದನ್ನ ತಬ್ಬಿಕೊಂಡು ಮುದ್ದಿಟ್ಟುಕೊಂಡು ಒಂದೇಸಮ ರಾಂ ರಾಂ ಸೀತಾರಾಂ ಅಂತ ಭಜನೆಮಾಡುತ್ತಾ ನಮ್ಮ ಮನೆ ಬಾಗಿಲಲ್ಲೇ ಕುಣಿಯುತ್ತಿದಾರೆ. ಈ ಬೀದಿ ಜನ ಎಲ್ಲ ಅಲ್ಲೇ ಸೇರುತ್ತಿದ್ದಾರೆ . . .

(ರಾಮಪ್ಪ ಬರುತ್ತಾನೆ.)

ರಾಮಪ್ಪ — ಅಪ್ಪಾ! ಪೂಜೆ ತೋರಿಸಿ ಕೊಟ್ಟಿಗೆಯೊಳಗೆ ನುಗ್ಗಿದಾಗ, ಎತ್ತು ಎದ್ದುನಿಂತಿದೆ ಅಪ್ಪಾ! ಕೊಂಚ ಕಾಯಿನೀರು ಬಿಟ್ಟೆ ಬಾಯೊಳಕ್ಕೆ . . . ಇದೇನು ಸಾಯೋದಿಲ್ಲ . . . ಉಳಿದುಕೊಂಡುಬಿಟ್ಟಿದೆ . . . ದೇವರು ಒಳ್ಳೇದು ಮಾಡಿದರು. ಇನ್ನು ಭಯವಿಲ್ಲ. ಮೇಷ್ಟರೇ! ಇದೇನಿದು? ಆ ದಾಸರು ಬೇಡ ಅಂದರೂ ನಿಮ್ಮ ಮನೆಯಲ್ಲಿ ಭಜನೆ ಪ್ರಾರಂಭಿಸೇಬಿಟ್ಟರಲ್ಲಾ! . . . ಭಂಡದಾಸರು ಅಂದರೆ ಅವರು . . .

ಮೇಷ್ಟರು — ಹಾಗೆನ್ನಬೇಡ, ರಾಮಪ್ಪ! ದೇವರು ಪವಾಡ ತೋರಿಸಿ ನಮಗೆ ಬುದ್ಧಿ ಕಲಿಸಿದ್ದಾರೆ. ಆ ದಾಸರು ನಮ್ಮೂರಿಗೆ ಬಂದದ್ದೇ ದೊಡ್ಡ ಕಲ್ಯಾಣ! ನಾವು ದೇವರನ್ನು ಮರೆತರೂ ದೇವರು ನಮ್ಮನ್ನ ದೂರಮಾಡಿಲ್ಲ.

ರಾಮಪ್ಪ — ಆಚೆ ಬೀದಿಯವರೂ ಬಂದು ಭಜನೆಗೆ ಸೇರುತ್ತಿದಾರೆ; ಇವತ್ತೇನೋ ವಿಶೇಷ ರೀತಿಯ ದಿನ ಇದ್ದ ಹಾಗಿದೆ! ಹಾವುಗಳ ಹಲ್ಲೆಲ್ಲ ಉದುರುತ್ತಿವೆ.

ಚಿ. ಪು. ಗೌಡರು — ಹಾ! ಆಚೆ ಬೀದಿಯವರು ಬಂದರೆ? 'ರಾಮು' ಅಂದರೆ ರೇಗುತ್ತಿದ್ದವರೆಲ್ಲ ಇವತ್ತು ಈಚೆಗೆ ಬರುತ್ತಿದಾರೆಯೇ?

ಮೇಸ್ಟರು — ಇವತ್ತಿನ ದಿನ ಅಂಥಾದ್ದು, ಗೌಡರೇ! ರಾಮರಾಜ್ಯದಲ್ಲಿ ಪಾರ್ಟಿಯೂ ಇಲ್ಲ; ಜಿದ್ದೂ ಇಲ್ಲ. ನಮ್ಮ ಹಳ್ಳಿಯಲ್ಲಿ ರಾಮರಾಜ್ಯ ಬಂದುಬಿಟ್ಟಿದೆ!

ರಾಮಪ್ಪ — ಆ ದಾಸರಿಗೆ ಆವೇಶ ಬಂದಿದೆ ಅಂತ ಕಾಣುತ್ತೆ. ದೇವರೇ ಮೈ ಮೇಲೆ ಬಂದವರ ಹಾಗೆ ಆಡುತ್ತಿದಾರೆ.

ಚಿ. ಪು. ಗೌಡರು — ಬಾ! ರಾಮಪ್ಪಾ! ಹೋಗೋಣ. ಎತ್ತಿನ ಯೋಚನೆಯಂತೂ ಬಿಡ್ತಲ್ಲಾ . . . ಬಾ! ನಾವೂ

ಮೇಸ್ಟರು — ರಾಂರಾಂ ಸೀತಾರಾಂ! ಹೇಳಿ, ಗೌಡರೇ! (ಹೊರಡುವರು.)

ಚಿ. ಪು. ಗೌಡರು — ರಾಂರಾಂ ಸೀತಾರಾಂ! (ಹೊರಡುವರು.)

ರಾಮಪ್ಪ — ರಾಂರಾಂ ರಾಜಾರಾಂ! (ಹೊರಡುವನು.)

## ದೃಶ್ಯ ೪

[ಅಂಕೇಗೌಡರ ಮನೆ ಪಡಸಾಲೆ, ಬೀಗರು ಕುಳಿತು ಮಾತನಾಡುತ್ತಿದಾರೆ.]

ಬೋರೇಗೌಡರು (ನಿಧಾನವಾಗಿ) — ಗೌಡರೇ! ಅಮಲ್‌ದಾರ್ ತಮ್ಮಯ್ಯನವರು ಬಂದಿದಾರೆ ತೀರ್ಥಪುರಕ್ಕೆ . . .

ಅಂಕೇಗೌಡರು (ಚಕಿತರಾಗಿ) — ಅದೇನು? ಮತ್ತೆ ಅವರನ್ನೇ ಕಳುಹಿಸಿದಾರೇನು, ಇಲ್ಲಿಗೆ?

ಬೋರೇಗೌಡರು — ಇಲ್ಲ, ಇಲ್ಲ. ಅವರು ಪೆನ್‌ಷನ್ ತೆಗೆದುಕೊಂಡು ಆಗಲೇ ಐದು ತಿಂಗಳಾಯಿತು. ನಂಜನಗೂಡಿನಲ್ಲಿ ಮಗಳ ಜೊತೆಯಲ್ಲೇ ವಾಸವಾಗಿದಾರಂತೆ. ಸುಮ್ಮನೆ ನಮ್ಮನ್ನೆಲ್ಲ ನೋಡಿಕೊಂಡು ಹೋಗೋಣ ಅಂತ ಬಂದಿದಾರೆ.

ಅಂಕೇಗೌಡರು — ಅಯ್ಯೋ! ನಮ್ಮನ್ನೇನು ನೋಡೋದು? ಅಂಥಾ ಪುಣ್ಯಾತ್ಮರು ಆಚೆ ಬೀದಿಯವರ ಕಥೆ ಕೇಳಿದರೆ ತುಂಬಾ ವ್ಯಸನಪಡುತ್ತಾರೆ.

ಬೋರೇಗೌಡರು — ಹಾಗಲ್ಲ, ಹಾಗಲ್ಲ! ರಾಮಮಂದಿರ ಪೂರ್ತಿಯಾಗಿರಬೇಕು ಈಗ; ಹನುಮೇಹಳ್ಳಿ ಮಾದರಿ ಹಳ್ಳಿಯಾಗಿರಬೇಕು ಅಂತ . . .

ಅಂಕೇಗೌಡರು — ಅದರ ಮಾತು ಬಿಡಿ. . . .

ಬೋರೇಗೌಡರು — ಬಿಡಿ ಅಂದರೆ, ಪಾಪ, ಅವರು ಕೇಳಬೇಕಲ್ಲ! ಇವತ್ತು ರಾಮನವಮಿ! ನೀವಿಬ್ಬರೂ ಹಿಂದೇನೆ ಅಂದಾಜು ಮಾಡಿದ್ದ ಹಾಗೆ ಇವತ್ತು ಇಲ್ಲಿ ಭಾರಿ ಉತ್ಸವ ಆಗುತ್ತೆ ಅಂತ, ಪಾಪ, ಅವರು . . . ಜೊತೆಯಲ್ಲಿಷ್ಟು ಕಲ್ಲುಸಕ್ಕರೆ ಬಾದಾಮಿ ಕೂಡ ತಂದಿದಾರೆ.

ಅಂಕೇಗೌಡರು — ಆಗುತ್ತಾ ಇದೆಯಲ್ಲ ಇಲ್ಲಿ ದಿನಕ್ಕೊಂದು ಉತ್ಸವ!

ಬೋರೇಗೌಡರು — ನೀವೂ ಚಿಕ್ಕಪುಟ್ಟೇಗೌಡರೂ ಹಿಂದೆ ಇದ್ದ ಸ್ಥಿತಿ ಏನು? ಆ ಸ್ನೇಹವೇನು? ಸಂಟತಸವೇನು? ಅಂಥಾದ್ದನ್ನೂ ಈ ಚಾಡಿಕೋರರು ಕೆಡಿಸಿದರು ಅಂದಮೇಲೆ, ರಾಮಾಯಣ ಮಹಾಭಾರತ ಎಲ್ಲ ನಿಜವಿರಬೇಕು ಅನ್ನಿಸುತ್ತದೆ. . . . ಸಾವಿರಾರು ರೂಪಾಯಿ ಲಾಯರು ಪಾಲುಮಾಡಿ, ಆಳುಗಳನ್ನು ಹೊಡೆಸಿ, ಕಾಲುವೆ ಕಡಿದುಹಾಕಿ, ದೇವಸ್ಥಾನದ ಬಾಗಿಲು ಹಾಕಿಸಿ . . . ಇದೆಲ್ಲಾ ಯಾವ ದೇವರಿಗೆ ಪ್ರೀತಿ, ಗೌಡರೆ! ಅಮಿಲ್‌ದಾರರಂತೂ ಕೇಳಿ ಕಣ್ಣಲ್ಲಿ ನೀರು ತುಂಬಿಕೊಂಡರು. . . ಬೆಳಗಾಗುತ್ತಲೂ ಬರುತ್ತೇನೆ, ಅಂದರು . . . ಅವರು ಸಂಬಲೇ ಇಲ್ಲ ಮೊದಲು

ಅಂಕೇಗೌಡರು — ದೇವರಿಗೆ ಅಂತ ಆತ ತಂದ ಹೆಂಚಿನಲ್ಲಿ ನಾನು ನನ್ನ ಮನೆಗೆ ಹತ್ತು ಹೆಂಚು ಕದ್ದುತಂದೆನಂತಲ್ಲಾ! ಇಂಥಾ ಮಾತು ಅವನು ಆಡಬಹುದೆ? ಅವನದೇನು ನಾಲಿಗೆಯೋ. . . . ಅಲ್ಲ. . . .

ಬೋರೇಗೌಡರು — ನಮ್ಮೂರು ಕರಿಯನ ಹತ್ತಿರ ಹೇಳಿದರು ಅಂತ ಆ ಕರಿಯ ತಾನೆ ಹೇಳಿದ್ದು. . . . ಕರಿಯನ ನಾಲಿಗೇನೂ ಒಂದೇ, ಕೆಂಜೇಳಿನ ಕೊಂಡಿಯೂ ಒಂದೇ! ಯಾರಿಗೆ ಬೇಕಾದರೂ ಸುಳ್ಳುಸಾಕ್ಷಿ ಹೇಳೋದಕ್ಕೆ ಅವನು ಸಿದ್ಧ! ಸುಳ್ಳು ಪತ್ರ ಮೂಗರ್ಜಿ ತಕರಾರು ತಂಟೆ ಎಲ್ಲಾದಕ್ಕೂ ಈ ಹೋಬಳಿಯಲ್ಲಿಯೇ ಅವನಂಥ ಹಾಳುತಲೆ ಇಲ್ಲ. . . . ನಮ್ಮ ಅಮಿಲ್‌ದಾರರಿಗೆ ಅಷ್ಟು ಬೇಗ ಪೆನ್‌ಷನ್ ಆಗೋದಕ್ಕೆ ಅವನೇ ಕಾರಣ! ರಾಮದೇವರು ಅಂದರೆ ಒಂದೇ ಬಾಣ, ಒಂದೇ ಮಾತು. ಅಂಥಾ ದೇವರಾಣೆ ಹೇಳುತ್ತೇನೆ. . . . ಕೇಳಿ, ಗೌಡರೆ! . . .

ಅಂಕೇಗೌಡರು (ಯಾವುದೋ ದೂರದ ಸದ್ದನ್ನು ಆಲಿಸುತ್ತಾ) — ಏನದು ಸದ್ದು?

ಬೋರೇಗೌಡರು (ಎದ್ದು) — ಎಲ್ಲಿ? . . . ಯಾವುದೋ ಠಕ್ ಅಂತ ಒಡೆದ ಸದ್ದಾಯಿತು. . . . ಈ ಕಡೆಯಿಂದ ಬಂತು. . .

ಅಂಕೇಗೌಡರು — (ಎದ್ದು) ರಾಮಮಂದಿರದ ಬಾಗಿಲಲ್ಲಿ! ಇಷ್ಟು ಹೊತ್ತಿನಲ್ಲಿ ಏನು ಸದ್ದು? ಕತ್ತಲಾದ ಮೇಲೆ ಒಂದು ಪ್ರಾಣೀನೂ ಅಲ್ಲಿ ಸುಳಿಯುವುದಿಲ್ಲ (ಆ ಕಡೆಗೆ ನೋಡುತ್ತಾ ಗಾಬರಿಗೊಂಡು) ದೀಪ ಹಚ್ಚಿಟ್ಟಿದೆ ಬಾಗಿಲಲ್ಲಿ! ಆಶ್ಚರ್ಯ! ಅಯ್ಯೋ!

ಬೋರೇಗೌಡರು — ಆ ಪರಮಾತ್ಮನ ಲೀಲೆ ಇರಬೇಕು! ಇವತ್ತು ರಾಮದೇವರ ಹುಟ್ಟಿದ ಹಬ್ಬ ಅಲ್ಲವೆ? (ಕುತೂಹಲದಿಂದ ನೋಡುತ್ತಾ, . . .) ಅಕೊ! ಅಕೋ ಗೌಡರೇ! ಬನ್ನಿ ಇಲ್ಲಿ! ಮಾದಯ್ಯ ಎಲ್ಲಿ? . . . ಬನ್ನಿ — ಮಂಗಳಾರತಿ ಆಗುತ್ತಿದೆ . . . ನೋಡಿ . . . ಕರ್ಪೂರದ ಆರತಿ . . . ಮಲ್ಲಮ್ಮ! . . . ಯಾರೂ ಇಲ್ಲದ ರಾಮಮಂದಿರದಲ್ಲಿ ತನಗೆ ತಾನೇ ಆರತಿ ಆಗುತ್ತಿದೆ! ನೋಡಿ, ಕತ್ತಲಲ್ಲಿ!

ಅಂಕೇಗೌಡರು — ನನಗೆ ಯಾಕೊ ಭಯವಾಗುತ್ತೆ, ಪಟೇಲರೆ! ಬಾಗಿಲಿಗೆ ಪಟ್ಟಿ ಹೊಡೆದದ್ದು ನಾನು, ನನ್ನ ಕೈಯಿಂದ! ದೇವರ ಶಾಪ ಬಡಿದರೆ. . .

ಬೋರೇಗೌಡರು — ಭಯಪಡಬೇಡಿ! ದೇವರೊಳ್ಳೇದು ಮಾಡುತ್ತಾನೆ. ನಾವು ಕೈ ಬಿಟ್ಟರೂ ರಾಮದೇವರ ಪೂಜೆ ನಿಲ್ಲುತ್ತದೆಯೆ? ಯಾರೋ ದೇವತೆಗಳೇ ಇಳಿದು ಬಂದು ಮಾಡುತ್ತಿರಬೇಕು . . . ಇಷ್ಟು ಹೊತ್ತಿನಲ್ಲಿ.

ಅಂಕೇಗೌಡರು — ದೇವರೇ ಕಾಪಾಡಬೇಕು. ನನ್ನ ತಪ್ಪನ್ನೆಲ್ಲ ಕ್ಷಮಿಸಬೇಕು. ಶವ ಒಳಗಿರುವಾಗ ನಾನು ಬಾಗಿಲನ್ನು ಮೊಳೆ ಹೊಡೆದು ಮುಚ್ಚಬಾರದಾಗಿತ್ತು . . .

(ಮಾದಯ್ಯ ಓಡಿಬರುವನು)

ಮಾದಯ್ಯ — ಅಪ್ಪಾ! ಆಚೆಬೀದೀಲಿ ಒಂದು ಪವಾಡ ನಡೆದಿದೆ. ಯಾರೋ ದಾಸರು! ಅವರ ಮೇಲೆ ದೇವರು ಬಂದುಬಿಟ್ಟಿದಾರೆ. ಊರವರೆಲ್ಲ ಒಟ್ಟಾಗಿ ಭಜನೆ ಮಾಡುತ್ತಾ ರಾಮಮಂದಿರದ ಕಡೆ ಬರುತ್ತಿದಾರೆ . . . ನಾನೂ ಹೋಗುತ್ತೇನೆ.

ಅಂಕೇಗೌಡರು — ದಾಸರು? ದಾಸರು ಯಾರೋ ನಮ್ಮೂರಲ್ಲಿ!

ಮಾದಯ್ಯ— ಯಾವೂರಿನವರೋ ಗೊತ್ತಿಲ್ಲ! ರಾಮಭಜನೆ ಮಾಡುತ್ತಾ ಬರುತ್ತಿದಾರೆ. ಆಚೆಬೀದಿ ಈಚೆಬೀದಿ ಎಲ್ಲಾ ಸೇರಿಬಿಟ್ಟಿದೆ. ಇವತ್ತು ರಾಮೋತ್ಸವವಾಗಲೇಬೇಕು ಅಂತ ಕೂಗುತ್ತಿದಾರೆ ಜನಗಳೆಲ್ಲ!

ಬೋರೇಗೌಡರು — ಅಂಕೇಗೌಡರೆ! ಈವಾಗಿನಿಂದ ಹನುಮೇಹಳ್ಳಿ ಒಂದು! ಎರಡಲ್ಲ! ಚಿಕ್ಕಪುಟ್ಟೇಗೌಡರ ಹತ್ತಿರ ನಾನು ಹೇಳುತ್ತೇನೆ. ಇಬ್ಬರೂ ಹಿಂದಿನದೆಲ್ಲ ಮರೆತುಬಿಡಿ. ಆ ಹೆಂಚಿನ ಕಥೆಯೆಲ್ಲ ಕರಿಯನ ಸಂಚು . . .

ಮಾದಯ್ಯ — ಮಂದಿರದ ಬಾಗಿಲು ತೆಗೆದು ಇವತ್ತು ಅಲ್ಲಿ ಹರಿಕಥೆ ಮಾಡಿಸಿಬಿಡೋಣ, ಅಪ್ಪಾ! ಇಲ್ಲದಿದ್ದರೆ, ಜನರು ನಮ್ಮನ್ನ ಸುಮ್ಮನೆ ಬಿಡುವುದಿಲ್ಲ. . .

ಬೋರೇಗೌಡರು — ಹುಂ. ನಾನೂ ಬರುತ್ತೇನೆ. ನೀನು ರಾಮಪ್ಪನನ್ನೂ ಕರೆದುಕೊಂಡು ಬಾ, ಅಲ್ಲಿಗೆ (ಮಾದಯ್ಯ ಹೊರಡುವನು.) ಯೋಚಿಸಬೇಡಿ, ಅಂಕೇಗೌಡರೇ! ದೇವರ ಕಾರ್ಯ, ನಡೆಸೇಬಿಡಿ! ಬನ್ನಿ!

(ತೆರೆಯ ಹಿಂದೆ ಭಜನೆ ಕೇಳಿ ಬರುವುದು)

ಅಂಕೇಗೌಡರು — ಕರಿಯ ಇದ್ದಿದ್ದರೆ ಅವನನ್ನೊಂದುಮಾತು ಕೇಳಬಹುದಾಗಿತ್ತು.

ಬೋರೇಗೌಡರು — ಕರಿಯ ಇನ್ನು ಮೇಲೆ ಇಲ್ಲಿ ತಲೆತೋರಿಸುವುದಿಲ್ಲ. ಈ ಹಳ್ಳಿಗೆ ಬೆಳಕು ಬಂದಿದೆ! ರಾಮದೇವರ ಕೃಪೆ ಬಂದಿದೆ. ಇನ್ನು ಆ ರಾಕ್ಷಸ ಏನು ಮಾಡಿಯಾನು? ಬನ್ನಿ! ಗೌಡರೇ; ನಾವೂ ಭಜನೆಯಲ್ಲಿ ಸೇರೋಣ. . .

**ಅಂಕೇಗೌಡರು** — ಅವಿಾಲ್‌ದಾರರಾದರೂ ಇದ್ದರೆ ಚೆನ್ನಾಗಿತ್ತು. ಅಂಕೇ ಗೌಡನ ಬಾಯಿಂದ ತಪ್ಪಾಯ್ತು ಅಂತ ಅನ್ನಿಸಿಬಿಟ್ಟರೆ ಮಾನ ಉಳಿದ ಹಾಗಾಗು ವುದು! . . .

**ಬೋರೇಗೌಡರು** — ಈ ಊರು ಮಾನವನ್ನ ರಾಮದೇವರೇ ಉಳಿಸಿದಾರಲ್ಲ, ಇನ್ನೇನು? ಹೇಳಿ . . . ರಘುಪತಿ ರಾಘವ ರಾಜಾರಾಂ! ಗೌಡರೇ! ತಡಮಾಡ ಜೇಡಿ . . . ನಿಮ್ಮ ಮಗ ನಿಮ್ಮ ಅಳಿಯ ಇಬ್ಬರೂ ಸೇರಿ, ಅಕೊ, ಹಾಡುತ್ತಾ ಬರುತ್ತಿದಾರೆ . . .

**ಅಂಕೇಗೌಡರು** — ಆಗಲಿ, ರಾಮನ ಇಷ್ಟದಂತೆ ನಡೀಲಿ. ಆದರೂ ನಾನು ಬಾಗಿಲನ್ನ ಬಡಿಯಬಾರದಾಗಿತ್ತು . . . ರಘುಪತಿ ರಾಘವ ರಾಜಾರಾಂ . . . (ಬೀಗರಿಬ್ಬರೂ ಭಜನೆ ಮಾಡುತ್ತಾ ಹೊರಡುವರು.)

(ತೆರೆಯ ಹಿಂದೆ)

ಪತಿತಪಾವನ ಸೀತಾರಾಂ

ನಾ. ಕಸ್ತೂರಿ.

## ವಿವಾಹಿತ

ಒಂದು ತಾವರೆಗೊಳದ ದಂಡೆಗೈತಂದು
ಅದರ ಸೌಂದರಕೆ ನೀ ಮನಸೋತೆಯೆಂದು
ಕನಸಿಗನು, ನೀ ಕನಸುಗಳ ಮರೆಯೆ ಹೆಣಗಿ
ನಿಂತೆ ಬುದ್ಧಿಯುಪಾಸನೆಯ ಗೆಯ್ಯುತೊಣಗಿ.
ಅನುರಾಗವಹುದು ಮಹದಪರಾಧವೆಂದೆ
ಆಜನ್ಮವಿದೆ ಮೋಹಕೆ ವಿರೋಧವೆಂದೆ.
ಕೊಳವು ಬೀಸಾಗಿರುವುದೀಸಲೆಂದೆ,
ಇರಲೇನು? ಮರಣಕ್ಕೆ ಮಿಾಸಲೆಂದೆ.
ಒಳಗೆ ತಿರುಗಣಿ ಮಡುವು; ನೋಡಲು ನಿವಾತ.
ಈಸುಬಿದ್ದವನಿಲ್ಲಿ ಮರುಕ್ಷಣಕೆ ಭೂತ.
ಇಂತು ಬುದ್ಧಿಯು ಬೋಧಿಸಿರುವಂತೆ ನಡೆದು
ಮತ್ತೆ ಹೊರಳಿದೆ ಕೊಳವನೀಕ್ಷಿಸಲು ತಡೆದು.
ಈಜಬೀಳಲು ಮೆಯ್ಯು ತೂಗಾಡುತಿತ್ತು.
ಬುದ್ಧಿಯರೆದಾಡೆ ಮನ ಹೊಯ್ದಾಡುತಿತ್ತು.
ಕೊಳದೊಳಾವರ್ತಗಳು ಸುಳಿಸುಳಿಯುತಿರಲು
ಮುಂದೆ ಬದುಕೇನೆಂದೆ ನೀನಳಿಯುತಿರಲು:
ನಾಗಮುರಿಗೆಯ ಬಿಗಿದು ಬರಲು ಘಟಸರ್ಪ
ನುಂಗಲಣಿಗೊಳಲು, ಮೆಯ್ಯಾಗಿರದೆ ಬರ್ಫ?
ನಾಗಕನ್ಯೆಯ ಬದಲು ಬರುತಿರೆ ಹಿಡಿಂಬೆ
ಜೀವಿತದಲಾವ ಸುಖವಸು ಸುರಿವುದೆಂಬೆ!
ಹೀಗಿಂತು ಧೇನಿಸಿದೆ ನೀ ಬುದ್ಧನಾಗಿ;
ಬುದ್ಧಿಚಕ್ರದಿ ಸಿಲುಕುತತಿಕ್ರುದ್ಧನಾಗಿ.

ಮುಂದೊಮ್ಮೆ ಗಾಳಿ ಕೊಳಲೂದುವುದ ಮರೆತು,
ನೀಲಗನ್ನಡಿಯಾದ ಕೊಳದಾಳವರಿತು
ತೆರೆಯು ಮರೆಯಾಗಿರಲು, ರವಿಯು ಪಡುದೆಸೆಗೆ
ನಡೆಯಲು, ನಿಶಾದೇವಿ ಕರೆದಿರಲು ಹಸೆಗೆ,

ಹೃದಯದೇಕಾಂತದಾ ದಾರುಣಕೆ ಮುಗಿದು
ತಿಳಿಯದೆಯೆ ಬುದ್ಧಿಯನು ಸೋಲಿಸುತ ಜಿಗಿದು
ಕೊಳದೊಳಿಣುಕುತಲೊಂದು ರೂಪವನು ಕಂಡೆ:
ಅದನು ಶೋಧಿಸಲು ಭೋಂಕನೆ ಹಾರಿಕೊಂಡೆ!
ಸುಕುಮಾರಿಯೊರ್ವಳಾ ಸೌಂದರವದೆಂದೆ;
ನಾರ್ಸಿಸಸನಂತೊಸೆದು ನಿನ್ನ ನೆರಲೆಂದೆ.
ಹೇಗದೇನೋ ಪ್ರೀತಿಸರಸಿಯಲಿ ಮಿಂದು
ಮುಳುಗುಹಾಕುತ ಚತುರ್ಭುಜನಾದೆಯಿಂದು!
ಅನುದಿನವು ಕೊಳದೊಳೀಗೀಸುತಿರುವೆ.
ತುಂಬಿದೆದೆಯಿಂದೊಲವ ಸೂಸುತಿರುವೆ.
ಈಸು-ಮುಳುಗು-ಸುರಂಗದಲಿ ನಿನಗೆ ಲಲ್ಲೆ,
ಮುತ್ತಿನನುಶೋಧದಲಿ: ನಾನಿದನು ಬಲ್ಲೆ.
ಮುತ್ತುಸುರಿದಿಹ ಕಡಲಿನಾಳದಲ್ಲಿ
ಮೊಳಗುವ ತರಂಗಗಳ ಮೇಳದಲ್ಲಿ
ಮುಂದೆ ನೀನೀಜಲೆಸಗುವ ಕಾಲಬರಲು,
ನೆನಪಿರಲಿ ಈ ಗೀತೆಯನ್ನೊರೆದ ಕೊರಲು.

ವಿನಾಯಕ.

## ಯಾಕೆ ?

ತುಂಬಿಬಂದ ರಸದ ಜಲದ
ವೇಕೆ ಮುಂದೆ ಸಾಗಿದೆ ?
ಹಂಬಲಿಸುವ ಲೋಕದೆದೆಯು
ತುಂಬಿ ತುಳುಕಿ ಸೂಸದೆ.

ಬಿಸಿಲನುಂಡು ಹಸಿಯದಿಂಗಿ
ನೆಲವು ಬಿರಿತು ಬಲಿತಿರೆ
ಬೆಳೆಯು ಬಿಳಿಯ ಮೊಗದಿ ಕಂದಿ
ನಿನ್ನ ಕರೆದು ಹಲುಬಿರೆ.

ಬಾರದಾಗಿ ದೂರಹೋದೆ
ಎಂದು ತಿಳಿಯ ಬಾನೊಳು
ಹೊಳೆವ ಕಿರಣ ಸಾರುತಿರಲು
ಬಂದೆ ಬಗೆದು ನಿನ್ನೊಳು.

ಬರವದೆಂಥ ದಿವ್ಯರಮ್ಯ !
ಭಸಿತವೇಷಕಾರಿಯೆ
ಮುಗಿಲನೆಲ್ಲ ಮುತ್ತಿ ಮೆರೆವ
ಅಮೃತರಸದ ಧಾರೆಯೆ.

ಬಿಸಿಲಮರಸಿ ಮಳೆಯತರಿಸಿ
ತಂಪುಗಾಳಿ ತೀಡಿದೆ
ಎಲ್ಲ ಬಳ್ಳಿಮರವ ತೂಗಿ
ಬರುವ ಸುಖವ ಹಾಡಿದೆ.

ಹೃದಯದಾಳದಿಂದ ಹರುಷ
ಚಿಮ್ಮಿದಂತೆ ಹೂಗಳು
ಬಾಲರೊಡನೆ ತೂಗಿ ತೊನೆದು
ಕುಣಿಯುತಿಹವು ಈಗಳು.

ಕೋಟಿಕಣ್ಣು ಆಸೆಹಣ್ಣು
ದೊರೆಯಿತೆಂದು ತೆರೆಯುತ
ಮೇಲೆ ನೋಡಿ ನಲಿಯುತಿಹವು
ಕನಸುಗಂಡು ಮೆರೆಯುತ.

ಮುಸಲಧಾರೆಯಾಗಿ ಸುರಿವೆ
ಎಂದು ಸೂಚಿಸಂತೆಯೆ
ಭರದಿ ಸಿಡಿಯೆ ಕೆಲಸೀರ್ಪನಿ
ಸಿಂಪಡಿಸಿರುವಂತೆಯೆ.

ನಿನ್ನ ಬರವ ಭವ್ಯತೆಯನು
ಸಾರುತಿರುವ ಮೊಳಗದೊ
ನೆಲಮುಗಿಲನು ನಡುಗಿಸಿಹುದು
ಭಯದೊಳಭಯಸ್ವರವದೊ !

ಇಂತಿದೆಲ್ಲ ಗಾಳಿಗುಡಿಯ
ರಚಿಸಿ ಬಂದು ಬಾರದೆ
ಕಣ್ಣಮುಂದೆ ನುಸುಳಿ ನಡೆವೆ
ಯಾಕೆ ತೋರಿ ತೋರದೆ ?

ನಿನ್ನ ಕೃಪೆಗೆ ನಾವು ಹೊರತೆ ?
ಏನು ನಮ್ಮ ಕೊರತೆಯು ?
ನಿನ್ನ ಸವಿಯ ಸವಿಯದಂತೆ
ಬರತು ಇಹುದೆ ಒರತೆಯು ?

ಏನನುಸುರುತಿಹುದು ನಿನ್ನ
ಗುಡುಗು ಬೆಡಗು ನುಡಿಯಲಿ ?
ನಿನ್ನ ಪಡೆಯಲರ್ಹರಲ್ಲ
ನಾವು ಎಂದೆ ಕಿಡಿಯಲಿ ?

‘ರಸವ ಪಡೆದು ತಿಳಿಯ ತೊಳಪ
ಝರಿಯು ತೊರೆಯು ಆಗದೆ

ಮಲಿತ ಕೊಳಗಳಾಗಿಯುಳಿಯೆ
ಮಾಡಲೇನು ಸಾಗದೆ ? '

ಎಂಬುದಿದೇ ನಿನ್ನ ವೊಳಗೆ
  ಏನು ಹೇಳು ನೀರದ !
ಬರವುಹೋಗು ಬರಿಲಹರಿಯೆ
  ಸ್ವೈರಗತಿಯ ನಾರದ !

ಬಂದು ಬೆರೆತು ಎಲ್ಲಿ ಏನೊ
ತೋರಿದಲ್ಲಿ ಸುರಿಯುತ
ಮರೆಗೆ ಸಾರಿ ಇರುವೆಯೇನೊ
ಲೀಲೆಯಲ್ಲಿ ನುರಿಯುತ ?

ರಂ. ಶ್ರೀ. ಮುಗಳಿ.

# ಕನ್ನಡ ನಾಡಿನ ಚಿನ್ನದ ಗಣಿಗಳು

## ಪೀಠಿಕೆ

ಕವಿ ನಮ್ಮ ನಾಡನ್ನು ಚಿನ್ನದ ನಾಡೆಂದು, ಗಂಧದ ಗುಡಿಯೆಂದು, ಹಾಡಿ ವರ್ಣಿಸಿದರು. ಇದು ಬರಿಯ ಅಲಂಕಾರದ ಮಾತಲ್ಲ. ಅಕ್ಷರಶಃ ನಿಜವಾದ ಸಂಗತಿ. ನಮ್ಮ ನಾಡು ನಿಜವಾಗಿಯೂ ಚಿನ್ನದ ನಾಡು; ಗಂಧದ ಗುಡಿ.

ಚಿನ್ನ ಒಂದೇ ಅಲ್ಲ ನಮ್ಮ ನಾಡಿನ ನೆಲದಲ್ಲಿ ದೊರೆಯುವುದು. ಅನೇಕ ಇತರ ಖನಿಜಗಳಿಗೆ ಇಲ್ಲಿನ ಶಿಲೆಗಳು ಭಂಡಾರದಂತಿವೆ. ಚಿನ್ನ ಕೂಡ ಕೋಲಾರ ಪ್ರದೇಶದಲ್ಲಿ ಒಂದೇ ಕಡೆಯೇ ಅಲ್ಲ ದೊರೆಯುವುದು. ದೇಶದ ಉದ್ದಗಲವೂ ಚಿನ್ನಕ್ಕಾಗಿಯೇ ಕೆಲಸಮಾಡಿದ ಅನೇಕ ಹಳೆಯ ಗಣಿಗಳಿವೆ. ತುಂಗಭದ್ರೆ ಹರಿದು ತೊಯಿಸುವ ಪ್ರದೇಶದಲ್ಲೆಲ್ಲ ಚಿನ್ನದ ಸಣ್ಣ ರೇಕುಗಳು ನದಿಯ ಮರಳಿನಲ್ಲಿ ದೊರೆಯುತ್ತವೆ. ಹೊನ್ನಾಳಿ, ಹೊನ್ನೇಹಟ್ಟಿ, ಹೊನ್ನೇಮರಡಿ, ಹೊನ್ನೇಬಾಗಿ, ಹೊನ್ನೂರು, ಹೊನ್ನಾವರ ಈ ಹೆಸರುಗಳೇ ಅಲ್ಲಿ ಚಿನ್ನವಿದೆ ಎನ್ನುವುದಕ್ಕೆ ಸೂಚನೆಯಾಗಿವೆ. ಹೀಗೆ ನಮ್ಮ ದೇಶವೆಲ್ಲ ಹರಡಿರುವ ಈ ಬೆಲೆಬಾಳುವ ಲೋಹ, ನಮ್ಮ ದೇಶದ ಖನಿಜಗಳಲ್ಲೆಲ್ಲ ಅತಿ ಮುಖ್ಯಸ್ಥಾನವನ್ನು ಪಡೆದಿದೆ. ನಮ್ಮ ದೇಶದಲ್ಲಿನ ಚಿನ್ನದ ಚರಿತ್ರೆಯನ್ನು ಚಿತ್ರಿಸುವುದೇ ಈ ಲೇಖನದ ಉದ್ದೇಶ. ಭೂಮಿಯಲ್ಲಿ ಚಿನ್ನ ಸಿಗುವ ರೀತಿ, ಮುಖ್ಯಮುಖ್ಯವಾದ ಗಣಿಗಳು, ಕೋಲಾರದ ಗಣಿಯ ಚರಿತ್ರೆ, ಅಲ್ಲಿನ ಕಾರ್ಯ, ಅದಿರಿನಿಂದ ಚಿನ್ನವನ್ನು ಪಡೆಯುವ ರೀತಿ, ಈ ವಿವರಗಳನ್ನೂ ಇನ್ನು ಮುಂದೆ ನಮ್ಮ ದೇಶದಲ್ಲಿ ಚಿನ್ನಕ್ಕೆ ಯಾವ ಭವಿಷ್ಯ ಕಾದಿದೆ ಎನ್ನುವುದನ್ನೂ ಇಲ್ಲಿ ಪ್ರಸ್ತಾಪಮಾಡಲಾಗಿದೆ.

## ಚಿನ್ನದ ಚರಿತ್ರೆ

**ಚಿನ್ನಕ್ಕಿರುವ ಪ್ರಾಶಸ್ತ್ಯ ಏಕೆ?** ಮಾನವ ಕುಲ ಮೊದಲಾದಂದಿನಿಂದ ಈವರೆಗೂ ಚಿನ್ನಕ್ಕೆ ದೊಡ್ಡ ಸ್ಥಾನ ಉಂಟು. ಚಿನ್ನದ ಮಿರುಗುವ ಹೊಂಬಣ್ಣ ಮೊದಲಿಗೆ ಮನುಷ್ಯನ ಮನಸ್ಸನ್ನು ತನ್ನ ಕಡೆಗೆ ಸೆಳೆಯಿತು. ಆ ಹೊಂಬಣ್ಣ ಎಷ್ಟು ಕಾಲವಾದರೂ ಕಂದದೆ ಕುಂದದೆ ಇದ್ದುದನ್ನು ಕಂಡಮೇಲೆ ಆ ಮೋಹ ಇನ್ನೂ ಬಲಿಯಿತು. ಜೊತೆಗೆ ಚಿನ್ನ ಮೃದುವಾದುದರಿಂದ ಅದನ್ನು ಯಾವ ಆಕಾರಕ್ಕೆ

ಬೇಕಾದರೂ ಬಗ್ಗಿಸಿಕೊಳ್ಳುವುದು ಸಾಧ್ಯವಾಗಿ, ವಿಧವಿಧವಾದ ಆಭರಣಗಳನ್ನು ಮಾಡಿಕೊಂಡು ಸಿಂಗರಿಸಿಕೊಳ್ಳಲು ಸಾಧ್ಯವಾಯಿತು. ಚಿನ್ನ ಬಹು ತೂಕವಾಗಿರುವುದರಿಂದಲೂ, ಬಹು ವಿರಳವಾಗಿ ದೊರೆಯುವುದರಿಂದಲೂ, ಕೆಡದೆ ಇರುವ ಕಾರಣದಿಂದಲೂ ನಾಣ್ಯಕ್ಕೆ ಬಹು ಯೋಗ್ಯವಾದ ಲೋಹವಾಗಿ ಕಂಡಿತು. ಈ ಎಲ್ಲ ಕಾರಣಗಳ ದೆಸೆಯಿಂದ ಇನ್ನು ಯಾವ ಲೋಹವೂ ಪಡೆಯದ ಸ್ಥಾನವನ್ನು ಚಿನ್ನ ಮೊದಲಿಂದಲೇ ಪಡೆಯಿತು.

**ದೇಶದಲ್ಲಿನ ಚಿನ್ನವೆಲ್ಲ ಸ್ಥಳದ ಚಿನ್ನದ ಗಣಿಗಳಿಂದ ಬಂದುದೇ.** ಚಿನ್ನದ ಚರಿತ್ರೆ ಬಹು ಹಳೆಯದು. ನಮ್ಮ ದೇಶದಲ್ಲಿನ ಮೂಲನಿವಾಸಿಗಳು ಚಿನ್ನವನ್ನು ಬಳಸುತ್ತಿದ್ದರು. ಅದರಿಂದ ತರತರದ ಒಡವೆಗಳನ್ನು ಮಾಡುವಷ್ಟು ಚತುರರಾಗಿದ್ದರು. ಆರ್ಯರು ಹಿಂದೂಸ್ಥಾನಕ್ಕೆ ಬರುವ ಮೊದಲೇ ಇಲ್ಲಿ ನೆಲಸಿದ್ದ ದ್ರಾವಿಡರು ಬಹು ಸಂಸ್ಕಾರ ಹೊಂದಿದ್ದವರಾಗಿದ್ದು ಮೆಸೊಪೊಟೇಮಿಯಾ, ಈಜಿಪ್ಟ್ ಮೊದಲಾದ ದೇಶಗಳೊಂದಿಗೆ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿದ್ದರು. ಇಲ್ಲಿಂದ ತೇಗದ ಮರವನ್ನೂ ಬಂಗಾರವನ್ನೂ ಆ ದೇಶಗಳಿಗೆ ಕಳುಹಿಸುತ್ತಿದ್ದರು. ನಮ್ಮ ದೇಶದಲ್ಲಿ ಕಾಣಬರುವ ಅನೇಕ ಹಳೆಯ ಗಣಿಗಳು ಈ ಅತಿ ಪ್ರಾಚೀನಕಾಲಕ್ಕೆ ಸೇರಿದುವೇ. ಮುಂದೆ ಹಿಂದೂಸ್ಥಾನ, ಚರಿತ್ರೆಯ ಉದ್ದಕ್ಕೂ ದೊಡ್ಡ ರಾಷ್ಟ್ರವಾಗಿ ಬಾಳಿತು, ಬೆಳೆಯಿತು. ಮೊಗಲರ ಆಸ್ಥಾನದ ವೈಭವವನ್ನು ವಿಜಯನಗರದ ಅರಸರ ಸಂಪತ್ತನ್ನು ಕಂಡು ಬೆರಗುಗೊಳ್ಳದವರಾರು! ಇಷ್ಟೆಲ್ಲ ಚಿನ್ನ ನಮ್ಮ ದೇಶದಲ್ಲಿಯೇ ದೊರೆಯಿತೆ ಎನ್ನುವುದು ಸಂದೇಹ. ಇಷ್ಟು ಹೇರಳವಾದ ಚಿನ್ನವನ್ನು ಒದಗಿಸಿರಬಹುದಾದ ಹಳೆಯ ಗಣಿ ಅಥವಾ ಗಣಿಗಳು ನಮ್ಮ ದೇಶದ ಗಡಿಯ ಒಳಗೆ ಈವರೆಗೆ ಕಂಡು ಬಂದಿಲ್ಲ. ನಮ್ಮ ಪೂರ್ವಿಕರು ದೇಶದ ಎಲ್ಲ ಗಣಿಗಳಿಂದ ಪಡೆದಿರಬಹುದಾದ ಚಿನ್ನದ ಒಟ್ಟು ಮೊತ್ತ ಮೊದಲ ಮುವ್ವತ್ತು ವರ್ಷಗಳ ಅವಧಿಯಲ್ಲಿ ಕೋಲಾರದ ಗಣಿಯಿಂದ ತೆಗೆದ ಚಿನ್ನದ ಮೊತ್ತವನ್ನು ಮುಟ್ಟಿರಲಾರದೆಂದು ಪಂಡಿತರು ಅಭಿಪ್ರಾಯಪಡುತ್ತಾರೆ.[1]

## ಭೂಮಿಯಲ್ಲಿ ಚಿನ್ನ ಸಿಗುವ ರೀತಿ

ನೀರಿನ ವಸತಿ ಇದ್ದಕಡೆಯೇ ಮೊದಲು ನೆಲಸಿದ ಜನ, ಹಳ್ಳಗಳ ದಂಡೆಯ ಮಣ್ಣಿನಲ್ಲಿ ಸೇರಿದ್ದ ಚಿನ್ನವನ್ನೇ ಮೊದಲು ಗುರುತಿಸಿ ಅದನ್ನು ಸಂಗ್ರಹಿಸಿರಬೇಕು. ಭೂಮಿಯ ಮೇಲುಭಾಗದ ಶಿಲೆಗಳು, ಬಿಸಿಲು ಗಾಳಿ ಮಳೆಗಳ ಹಾವಳಿಗೆ ಸಿಕ್ಕಿ

[1] W. F. Smeeth. *Mineral Resources of Mysore*, Bul. No. 7, 4, (1916) Mysore Geological Department.

ಚೂರುಚೂರಾಗುತ್ತವೆ. ಎಲ್ಲ ಕಲ್ಲಿನಂತೆಯೇ ಚಿನ್ನ ಸೇರಿರುವ ಬೆಣಚುಕಲ್ಲೂ ಚೂರಾಗುತ್ತದೆ. ಹೀಗೆ ಸುಚ್ಛಾದ ಚಿನ್ನ ಬೆರೆತಿರುವ ಕಲ್ಲನ್ನು ಹತ್ತಿರದ ಹಳ್ಳವೋ ನದಿಯೋ ದೂರ ಒಯ್ಯುತ್ತದೆ. ದೂರಹೋದಂತೆ ಕಲ್ಲು ಮತ್ತೂ ಪುಡಿಯಾಗುತ್ತ ಹೋಗಿ, ಕಲ್ಲಿನಲ್ಲಿ ಸೇರಿದ್ದ ಚಿನ್ನ ಬೇರೆಯಾಗಿ ಹಳ್ಳಗಳಲ್ಲಿನ ಮೆಕ್ಕಲುಮಣ್ಣಿನಲ್ಲಿ ಬೆರೆಯುತ್ತದೆ. ಮೂಲಸ್ಥಾನದಿಂದ ದೂರ ಹೋದಂತೆಲ್ಲ ಚಿನ್ನದ ಕಣ ಸಣ್ಣದಾಗುತ್ತ ಹೋಗುತ್ತದೆ; ಹತ್ತಿರ ಬಂದಂತೆ ರಾಗಿಯ ಕಾಳಿನಷ್ಟು, ಜೋಳದ ಕಾಳಿನಷ್ಟು ದೊಡ್ಡ ಚೂರುಗಳು ಸಿಕ್ಕುತ್ತವೆ.

ಮೇಲಿನ ಅಂಶವನ್ನು ಗಮನಕ್ಕೆ ತೆಗೆದುಕೊಂಡರೆ, ಚಿನ್ನ ಭೂಮಿಯಲ್ಲಿ ಸಿಕ್ಕುವ ರೀತಿಯಲ್ಲಿ ಎರಡು ಮುಖ್ಯ ವಿಧಗಳನ್ನು ನಾವು ಗುರುತಿಸಬಹುದು. ಒಂದನೆಯದು ಕಲ್ಲಿನಲ್ಲಿ ಸೇರಿರುವ **ಮೂಲಚಿನ್ನ.** ಎರಡನೆಯದು ಕಲ್ಲಿನಿಂದ ಬೇರೆಯಾಗಿ ಹಳ್ಳದ ಮಣ್ಣಿನಲ್ಲಿ, ನದಿಯ ಮೆಕ್ಕಲಿನಲ್ಲಿ ಸೇರಿರುವ **ಮೆಕ್ಕಲುಚಿನ್ನ.**

i. **ಮೂಲಚಿನ್ನ**—ಮೂಲಚಿನ್ನ ಕಲ್ಲಿನಲ್ಲಿ ಬೆರೆತಿರುತ್ತದೆ. ಇನ್ನು ಆ ಕಲ್ಲಿನ ಕುಲವೇನು? ನೆಲೆಯೇನು? ತಿಳಿಯೋಣ. ಬೆಣಚುಕಲ್ಲು ಸಾಮಾನ್ಯವಾಗಿ ಎಲ್ಲರೂ ನೋಡಿರುವ, ಗುರುತಿಸುವ ಕಲ್ಲು. ಮೂಲಚಿನ್ನವೆಲ್ಲ ಮುಖ್ಯವಾಗಿ ಈ ಬೆಣಚು ಕಲ್ಲಿನಲ್ಲಿ ಬೆರೆತಿರುತ್ತದೆ. ಎಲ್ಲ ಬೆಣಚುಕಲ್ಲಿನಲ್ಲಿಯೂ ಚಿನ್ನ ಬೆರೆತಿದೆ ಎಂದರ್ಥವಲ್ಲ. ಕೆಲವು ವಿಶೇಷ ಸಂದರ್ಭಗಳಲ್ಲಿ ರೂಪುಹೊಂದಿದ ಬೆಣಚಿನಲ್ಲಿ ಮಾತ್ರ ಚಿನ್ನ ಸೇರಿರುತ್ತದೆ. ಈ ಸಂದರ್ಭಗಳು ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯವು. ನಮ್ಮ ದೇಶದಲ್ಲಿನ ಸ್ಥಿತಿಯನ್ನು ಮಾತ್ರ ಇಲ್ಲಿ ವಿವರಿಸಿದೆ.

**ಧಾರವಾಡ ಪದರುಶಿಲೆಗಳು.** ನಮ್ಮ ದೇಶದಲ್ಲಿ ಕಾಣಬರುವ ಅತಿ ಪುರಾತನವಾದ ಶಿಲಾಸಮುದಾಯಕ್ಕೆ ಧಾರವಾಡ ಪದರುಶಿಲೆ (Dharwar Schists) ಎಂದು ನಾಮಕರಣಮಾಡಿದಾರೆ. ಶ್ರೀರಂಗಪಟ್ಟಣದಿಂದ ಹಿಡಿದು ಧಾರವಾಡದ ಆಚೆಗೂ ಅಲ್ಲೊಂದು ಇಲ್ಲೊಂದರಂತೆ ಹಂಚಿಹೋಗಿ ಹಬ್ಬಿರುವ ವಿಶೇಷತರದ ಶಿಲಾಸಮುದಾಯಕ್ಕೆ ಈ ಹೆಸರು ಅನ್ವಯಿಸುತ್ತದೆ. ಧಾರವಾಡ ಪದರುಶಿಲೆಗಳ ಹರವನ್ನು ಪಕ್ಕದ ನಕ್ಷೆಯಲ್ಲಿ ತೋರಿಸಿದೆ (ನಕ್ಷೆ 1). ಮೊದಲು ಈ ಶಿಲೆಗಳನ್ನು ಧಾರವಾಡದ ಹತ್ತಿರ ಗುರುತಿಸಿದ್ದಾದ್ದರಿಂದ ಧಾರವಾಡದ ನಂಟು ಮೈಸೂರಿಗೂ ಅಂಟಿತು. ಸಾಮಾನ್ಯವಾಗಿ ಈ ಸಮುದಾಯಕ್ಕೆ ಸೇರಿದ ಶಿಲೆಗಳು ಪದರಪದರವಾಗಿ, ಹಾಳೆಹಾಳೆಯಾಗಿ ಬಿಟ್ಟುಕೊಳ್ಳುವ ಕಾರಣದಿಂದ ಈ ತರದ ಶಿಲೆಗಳನ್ನು ಪದರುಶಿಲೆ ಎಂದು ಕರೆಯುತ್ತಾರೆ. ಈ ಪದರುಶಿಲೆಗಳಲ್ಲಿ ಎರಡು ಮುಖ್ಯ ಶಿಲಾರೂಪಗಳನ್ನು ನಾವು ಗುರುತಿಸಬಹುದು. ಒಂದು ಕಪ್ಪಗಿರುವ ಹಾರನ್‌ಬ್ಲೆಂಡ್ (hornblende) ಇಂದ ಕೂಡಿದ ಶಿಲೆ.

ಇದು ಮುಖ್ಯವಾಗಿ ಕೋಲಾರ ಪ್ರಾಂತದಲ್ಲಿ ವಿಶೇಷವಾಗಿ ಹರಡಿದೆ. ಎರಡನೆಯ ಶಿಲಾ ರೂಪ ತಿಳಿ ಹಸುರುಬಣ್ಣದ ಕ್ಲೋರೈಟಿನಿಂದ (chlorite) ಕೂಡಿದುದು. ಇದು ವಿಶೇಷವಾಗಿ ಶಿವಮೊಗ್ಗ, ಚಿತ್ರದುರ್ಗ ಪ್ರಾಂತಗಳಲ್ಲಿ ಕಾಣುತ್ತದೆ.

**ಬೆಣಚುಕಲ್ಲಿನ ಸಿರಗಳ ಲಕ್ಷಣ.** ಬೆಣಚುಕಲ್ಲಿನ ಸಿರಗಳು ಸಾಮಾನ್ಯವಾಗಿ ಎಲ್ಲ ಕಾಲದ ಎಲ್ಲ ತರದ ಶಿಲೆಗಳಲ್ಲಿ ಹರಡಿದ್ದರೂ, ಚಿನ್ನ ಸಿಗುವ ದೃಷ್ಟಿಯಿಂದ ಧಾರವಾಡ ಪದರುಶಿಲೆಗಳಲ್ಲಿ ಕಂಡುಬರುವ ಬೆಣಚಿನ ಸಿರಗಳು ಮಾತ್ರ ಮುಖ್ಯ ವಾದುವು. ಚಿನ್ನವನ್ನು ಹುಡುಕಹೋಗುವವರ ಗಮನವೆಲ್ಲ ಈ ಪದರುಶಿಲೆಗಳಲ್ಲಿ ಸೇರಿರುವ ಬೆಣಚುಕಲ್ಲಿನ ಸಿರಗಳ ಕಡೆಗೇ ಇರುತ್ತದೆ. ಈ ಸಿರಗಳಲ್ಲಿಯೂ ನಾವು ಎರಡುತರದವನ್ನು ಗುರುತಿಸಬಹುದು. ಕಪ್ಪು ಹಾರನ್‌ಬ್ಲೆಂಡ್ ಪದರುಶಿಲೆಯೊಂದಿಗೆ ಕಾಣುವ ಬೆಣಚಿನ ಸಿರಗಳು ಸಾಮಾನ್ಯವಾಗಿ ಬೂದುಬಣ್ಣದವಾಗಿರುತ್ತವೆ. ಕೋಲಾರ ಪ್ರಾಂತದ ಬೆಣಚೆಲ್ಲವೂ ಈ ಬಗೆಯದು. ಶಿವಮೊಗ್ಗ, ಚಿತ್ರದುರ್ಗ ಪ್ರಾಂತ ಗಳಲ್ಲಿ ಹರಡಿರುವ ಕ್ಲೋರೈಟಿನಿಂದ ಕೂಡಿದ ಹಸುರು ಕಲ್ಲುಗಳೊಡನಿರುವ ಬೆಣಚು ಬಿಳುಪಾಗಿರುತ್ತದೆ. ಈ ಎರಡುತರದ ಬೆಣಚಿನಲ್ಲಿಯೂ ಬಂಗಾರ ಸೇರಿರುತ್ತದೆ.

**ಬಂಗಾರ ಕಲ್ಲಿನಲ್ಲಿ ಯಾವರೀತಿ ಸೇರಿರುತ್ತದೆ.** ಸಾಮಾನ್ಯವಾಗಿ ಕಲ್ಲಿನಲ್ಲಿ ಸೇರಿರುವ ಬಂಗಾರ ಕಣ್ಣಿಗೆ ಕಾಣುವುದಿಲ್ಲ. ಸಮೃದ್ಧಿಯಾದ ಪ್ರದೇಶಗಳಿಂದ ಬಂದ ಬೆಣಚಿನಲ್ಲಿ ಮಾತ್ರ ಚಿನ್ನ ಕೂದಲು ಎಳೆಯಷ್ಟು ಸಣ್ಣಗೆ, ಸಣ್ಣ ಸಣ್ಣ ರೇಕುಗಳಾಗಿ ಕಾಣುತ್ತದೆ. ಒಂದು ಟನ್ ಬೆಣಚುಕಲ್ಲಿನಲ್ಲಿ ಆರು ಪೆನಿವೇಟು (೧ ಪೆನಿವೇಟು = ೨೪ ಗುಲಗಂಜಿ ತೂಕ)ಗಳಷ್ಟು ಬಂಗಾರ ಇದ್ದರೆ ಅದನ್ನು ಒಳ್ಳೆಯ ಅದಿರೆಂದು ಎಣಿಸುತ್ತಾರೆ. ಒಂದು ಟನ್ ಕಲ್ಲಿನಲ್ಲಿ ಆರು ಪೆನಿವೇಟು ಚಿನ್ನ ಎಂದರೆ ಸುಮಾರು ಒಂದುಲಕ್ಷ ಜನಸಮೂಹದಲ್ಲಿ ಒಬ್ಬ ಸಾಹುಕಾರ ಇದ್ದಂತೆ ಎಂದಿಟ್ಟು ಕೊಳ್ಳಬಹುದು. ಇಷ್ಟು ಅಲ್ಪಪ್ರಮಾಣದಲ್ಲಿ ಚಿನ್ನ ಕಲ್ಲಿನಲ್ಲಿ ಸೇರಿರುವ ಕಾರಣದಿಂದ ಅದನ್ನು ಕಣ್ಣಿನಿಂದ ಗುರುತಿಸುವುದು ಕಷ್ಟ. ಕೋಲಾರದ ಗಣಿಯಿಂದ ಮೇಲೆ ಬರುವ ಬಹುಭಾಗದ ಕಲ್ಲಿನಲ್ಲಿ ಚಿನ್ನ ಕಣ್ಣಿಗೆ ಕಾಣುವುದೇ ಇಲ್ಲ!

**ಚಿನ್ನದ ಕಲ್ಲು.** ಎರಡು ವರ್ಷಗಳ ಕೆಳಗೆ ಹೊನ್ನಾಳಿ ತಾಲೂಕಿನ ಪಲವನ ಹಳ್ಳಿ ಗ್ರಾಮದ ಹತ್ತಿರ ಮೆಕ್ಕಲುಮಣ್ಣಿನಿಂದ ಚಿನ್ನವನ್ನು ಪಡೆಯಲು ಶೋಧನೆ ನಡೆಸುತ್ತಿದ್ದಾಗ ಒಂದು ಚಿನ್ನದ ಕಲ್ಲು ನಿಧಿ ಸಿಕ್ಕಿತು.[1] ಸಿಕ್ಕಿದ ಕಲ್ಲು ಒಂದು ತೆಂಗಿನಕಾಯಷ್ಟು ಗಾತ್ರವಿದೆ. ಈ ಕಲ್ಲಿನ ತುಂಬ ಥಳಥಳಿಸುವ ಚಿನ್ನವೇ. ತಿರಿತಿರಿ

[1] B. P. Radhakrishna—'Notes on Prospecting for alluvial gold round Kudurekonda and Palavanhalli, Honnali Taluk, Shimoga Dt.'—Rec. Mysore Geological Department, Vol. XXXIX, 168-169 and plate XXIV (1941).

ಯಾಗಿ ಹೊಡೆಹೊಡೆಯಾಗಿ ಒಡೆದಿದೆ ಕಲ್ಲಿನಲ್ಲಿ ಚಿನ್ನ. ಅಷ್ಟು ಸಣ್ಣ ಕಲ್ಲಿನಲ್ಲಿ ನಾಲ್ಕೂವರೆ ಸೇರು ಬಂಗಾರವೇ ಸೇರಿದೆಯೆಂದರೆ ಕಲ್ಲಿನಲ್ಲಿ ಯಾವರೀತಿ ಚಿನ್ನ ಹರಡಿದೆ ಎನ್ನುವುದನ್ನು ಊಹಿಸಿಕೊಳ್ಳಬಹುದು. ಇಂಥದೊಂದು ಬೆಲೆಯುಳ್ಳ ಕಲ್ಲು ಸಿಕ್ಕಿದ ಮಾತ್ರದಿಂದ ಆ ಪ್ರಾಂತದ ಬೆಣಚೆಲ್ಲದರಲ್ಲಿಯೂ ಇದೇ ರೀತಿ ಚಿನ್ನ ಹರಡಿದೆ ಯೆಂದು ತಿಳಿಯಬಾರದು. ಜಗತ್ತಿನ ಯಾವುದೋ ಹಳ್ಳಿಯೊಂದರಲ್ಲಿ ಒಬ್ಬಾಕೆ ಐದು ಮಕ್ಕಳನ್ನು ಒಂದೇಬಾರಿಗೆ ಹಡೆದಳೆಂದರೆ ಅದು ಎಲ್ಲ ತಾಯಂದಿರಿಗೂ ಅನ್ವಯಿಸುವ ಮಾತಾದೀತೆ? ಅದರಂತೆಯೇ ಇಲ್ಲಿಯೂ — ಇದೂ ಒಂದು ಸೃಷ್ಟಿಯ ವಿಪರೀತ. ವಾಸ್ತವವಾಗಿ ಚಿನ್ನದ ಕಲ್ಲು ಸಿಕ್ಕಿದ ಸುತ್ತಮುತ್ತಲಿನ ಪ್ರದೇಶದ ಬೆಣಚೆಲ್ಲವನ್ನೂ ಪರೀಕ್ಷೆಮಾಡಿದಾಗ ಅವುಗಳಲ್ಲಿ ಚಿನ್ನ ಸ್ವಲ್ಪವೂ ಕಾಣಲಿಲ್ಲ. ಬೆಣಚುಕಲ್ಲಿನ ಬಹುಭಾಗ ಬಂಜರಾಗಿದ್ದರೂ ಚಿನ್ನ ಒಂದೊಂದುಕಡೆ ಅಧಿಕವಾಗಿ ಶೇಖರವಾಗಿರುವ ಸಂದರ್ಭಗಳು ಕಂಡುಬರುವುದುಂಟು. ಪಲವನಹಳ್ಳಿಯ ಹತ್ತಿರ ಸಿಕ್ಕಿದ ಚಿನ್ನದ ಕಲ್ಲು ಈ ರೀತಿ ರೂಪುಹೊಂದಿರಬೇಕು.

ಮುಖ್ಯವಾಗಿ ಮೂಲಚಿನ್ನ ಬೆಣಚುಕಲ್ಲಿನಲ್ಲಿ ಅದರಲ್ಲಿಯೂ ಧಾರವಾಡ ಪದರು ಶಿಲೆಗಳಲ್ಲಿ ಕಂಡುಬರುವ ಬೂದು ಮತ್ತು ಬಿಳಿಯ ಬಣ್ಣದ ಬೆಣಚಿನ ಸಿರಗಳಲ್ಲಿ ಸೇರಿರುತ್ತದೆಯೆಂದು ತಿಳಿದರೆ ಸಾಕು.

ii. **ಮೆಕ್ಕಲುಮಣ್ಣಿನಲ್ಲಿ ಚಿನ್ನ.** ಎಂಥ ಗಟ್ಟಿ ಕಲ್ಲಾಗಲಿ ಗಾಳಿಮಳೆಗಳ ಹಾವಳಿಗೆ ಸಿಕ್ಕಿದಮೇಲೆ ಕ್ಷಯಿಸುತ್ತದೆ. ಬೆಂಗಳೂರಿನ ಕಣ್ಣಾಸ್ಪತ್ರೆಯ ಕಟ್ಟಡದ ಕಲ್ಲಿಗೂ, ಹೊಸದಾಗಿ ಕಟ್ಟಿದ ಹೆರಿಗೆ ಆಸ್ಪತ್ರೆಯ ಕಟ್ಟಡದ ಕಲ್ಲಿಗೂ ವ್ಯತ್ಯಾಸ ಕಾಣುವುದಿಲ್ಲವೆ? ಒಂದು ಹೊಚ್ಚಹೊಸತಾಗಿ ಮಿರುಗುಟ್ಟುತ್ತಿದ್ದರೆ ಇನ್ನೊಂದು ಕಾಂತಿಗೆಟ್ಟು ಮಣ್ಣಿನ ಬಣ್ಣವಾಗಿ ಕಾಣುತ್ತದೆ. ಇಪ್ಪತ್ತು ಮುವ್ವತ್ತು ವರ್ಷಗಳ ಅವಧಿಯಲ್ಲಿ ಕಲ್ಲು ಇಷ್ಟು ಬದಲಾವಣೆ ಹೊಂದಬೇಕಾಗಿದ್ದರೆ ಕೋಟ್ಯಂತರ ವರ್ಷ ಗಳಲ್ಲಿ ಕಲ್ಲುಬಂಡೆಗಳೇ ದೂಳೆದ್ದು ಹೋಗುವುದೇನಾಶ್ಚರ್ಯ.

**ಚಿನ್ನದ ನಿಕ್ಷೇಪಗಳು ಮಣ್ಣಿನಲ್ಲಿ ಒಟ್ಟುಗೂಡುವ ರೀತಿ.** ಮಿಕ್ಕೆಲ್ಲ ಕಲ್ಲುಗಳಂತೆಯೇ ಚೂರಾದ ಚಿನ್ನದ ಕಲ್ಲನ್ನೂ ಹತ್ತಿರದ ಹಳ್ಳವೋ ನದಿಯೋ ದೂರ ಸಾಗಿಸಿಬಿಡುತ್ತದೆ. ನೀರಿನ ವೇಗ ಕಡಿಮೆಯಾದ ಕಡೆ ಹೆಚ್ಚು ತೂಕವುಳ್ಳ ಕಲ್ಲು ಗುಂಡುಗಳೂ, ಚಿನ್ನವೂ ಕೆಳಗೆ ತಂಗುತ್ತವೆ. ಲಕ್ಷಾಂತರ ವರ್ಷಗಳು ಈ ವ್ಯಾಪಾರ ತಪೆಯಿಲ್ಲದೆ ನಡೆದರೆ ಕೆಲವು ಕಡೆಗಳಲ್ಲಿ ಚಿನ್ನ ವಿಶೇಷವಾಗಿ ಶೇಖರವಾಗುತ್ತದೆ. ಇವೇ ಮೆಕ್ಕಲುಮಣ್ಣಿನಲ್ಲಿ ಶೇಖರವಾದ ಚಿನ್ನದ ನಿಕ್ಷೇಪಗಳು. ಮೇಲೆ ವಿವರಿಸಿದ ಪ್ರಕೃತಿ ವ್ಯಾಪಾರಗಳ ದೆಸೆಯಿಂದ ಕಲ್ಲಿನಲ್ಲಿ ಬೆರೆತಿರುವ ಚಿನ್ನ ತನಗೆ ತಾನೇ ಬೇರೆ

ಯಾಗಿ ಒಂದು ಗೊತ್ತಾದ ಕಡೆ ಒಟ್ಟುಗೂಡುತ್ತದೆ. ಕಲ್ಲನ್ನು ಪುಡಿಮಾಡುವ, ಪುಡಿಯಿಂದ ಚಿನ್ನವನ್ನು ಪ್ರತ್ಯೇಕಿಸುವ, ಕೂಡಿಸುವ ಒಟ್ಟು ಎಲ್ಲ ಕಾರ್ಯವನ್ನೂ ಪ್ರಕೃತಿಯೇ ಮಾಡಿ ಮುಗಿಸಿರುವುದರಿಂದ, ಇಂಥ ನಿಕ್ಷೇಪಗಳಿಂದ ವಿಶೇಷ ಕಷ್ಟ ಎಲ್ಲದೆ ಲಾಭದಾಯಕವಾಗಿ ಚಿನ್ನವನ್ನು ಪಡೆಯಬಹುದು. ನದಿಯ ದಂಡೆಗಳಲ್ಲಿ ಮೇಲೆ ಮೇಲೆಯೇ ಈ ತರದ ನಿಕ್ಷೇಪಗಳು ದೊರೆಯುವುದರಿಂದ ಗಣಿಗಳನ್ನು ತೋಡುವ ಕಷ್ಟ ಕೂಡ ಇರುವುದಿಲ್ಲ.

**ನಿಕ್ಷೇಪಗಳು ಸೇರುವುದಕ್ಕೆ ಅನುಕೂಲ ವಾತಾವರಣ ಬೇಕು.** ಇಂಥ ನಿಕ್ಷೇಪಗಳು ಶೇಖರವಾಗುವುದಕ್ಕೆ ಅನುಕೂಲವಾದ ವಾತಾವರಣವಿರಬೇಕು. ನದಿಯ ನೀರು ಸದಾಕಾಲದಲ್ಲಿಯೂ ಒಂದೇ ಸಮನಾಗಿ ಹರಿಯುತ್ತಿದ್ದು, ದಿನದಿನವೂ ಹೊಸ ಹೊಸ ಮಣ್ಣನ್ನು ತರುತ್ತಿದ್ದರೆ ಗೊತ್ತಾದ ಸ್ಥಳದಲ್ಲಿ ಚಿನ್ನವೂ ಶೇಖರ ವಾಗುತ್ತ ಹೋಗುತ್ತದೆ. ಅದಕ್ಕೆ ಬದಲು ಬೇಸಗೆಯಲ್ಲಿ ಬತ್ತಿಹೋಗಿ ಮಳೆಗಾಲದಲ್ಲಿ ಮೇರೆವರಿದು ತುಂಬುಹೊಳೆ ಹರಿದರೆ ಶೇಖರವಾದ ಅಲ್ಪಸ್ವಲ್ಪ ಚಿನ್ನವೂ ಕೊಚ್ಚಿ ಹೋಗಿ ಸಾಗರದ ಪಾಲಾಗುತ್ತದೆ. ಹಿಂಗಾರು ಮುಂಗಾರುಗಳ ಹಾವಳಿಗೆ ಸಿಕ್ಕಿದ ನಮ್ಮ ದೇಶದಲ್ಲಿ ಈ ರೀತಿ ಚಿನ್ನ ಸೇರಲು ಅವಕಾಶವಾಗದೆ ಹೋಯಿತು. ಆದರೆ ಚಿನ್ನ ಸೇರದೆಯೇ ಹೋಗಲಿಲ್ಲ; ಆಫ್ರಿಕಾ, ಅಮೆರಿಕಾ ಖಂಡಗಳಲ್ಲಿನಂತೆ ಹೆಚ್ಚು ಸೇರಲಿಲ್ಲ, ಅಷ್ಟೆ. ಈಗಲೂ ಶಿವಮೊಗ್ಗೆಯ ಹೊನ್ನಾಳಿ ತಾಲೂಕಿನ ನ್ಯಾಮತಿ, ಕುದುರೆಕೊಂಡ, ಪಲವನಹಳ್ಳಿ, ಈ ಗ್ರಾಮಗಳ ಸುತ್ತಮುತ್ತಿನ ಹಳ್ಳಗಳ ಮಣ್ಣನ್ನು ಜಾಲಿಸಿ, ಚಿನ್ನ ಪಡೆಯುವುದನ್ನು ನೋಡಬಹುದು. ಮಣ್ಣು ಜಾಲಿಸಿ ಚಿನ್ನ ತೆಗೆಯುವವರನ್ನು "ಜಾಲಗಾರರು" ಎಂದು ಕರೆಯುತ್ತಾರೆ. ಪಲವನಹಳ್ಳಿಯ ಲಂಬಾಣಿ ಗೃಹಸ್ಥರು ಈ ಕೆಲಸದಲ್ಲಿ ತುಂಬಾ ನುರಿತವರು. ಈಚೆಗೆ ಅದೇ ಗ್ರಾಮದ ಬೆಸ್ತರೂ ಈ ಕಸಬನ್ನು ಅಭ್ಯಾಸಮಾಡಿಕೊಂಡಿದಾರೆ.

**ಜಾಲಗಾರರು—ಅವರ ಕೆಲಸ.** ಜಾಲಗಾರನ ಸಾಧನಗಳು ತೀರ ಸಾಮಾನ್ಯವಾದುವು. ಅವನೆಲ್ಲ ಸಾಮಗ್ರಿಯೂ ಎರಡು ಮೂರು ರೂಪಾಯಿ ಬೆಲೆ ಬಾಳಲಾರವು. ಒಂದು ಮೇಲುಹಲಗೆಯಿಲ್ಲದ ಉದ್ದನೆಯ ಮರದ ಪೆಟ್ಟಿಗೆ. ಇದೇ ಅವನ ಮುಖ್ಯ ಸಾಧನವಾದ ದೋಣಿ; ಮಧ್ಯೆ ತಗ್ಗಾಗಿರುವ ಒಂದು ಮರದ ಸುತ್ತು ತಟ್ಟೆ; ನೀರನ್ನು ಮೊಗೆದು ಹುಯ್ಯುವುದಕ್ಕೆ ಅರ್ಧವಾಗಿ ಸೀಳಿದ ಒಂದು ಸೋರೆ ಬುರುಡೆಯ ಹೋಳು. ಬಂದ ಚಿನ್ನವನ್ನು ಶೇಖರಿಸುವುದಕ್ಕೆ ಒಂದು ತೆಂಗಿನಕಾಯಿ ಚಿಪ್ಪು; ಇವೇ ಅವನ ಸರ್ವಸ್ವ. ಚಿನ್ನ ಇಂಥ ಹಳ್ಳಗಳಲ್ಲಿ ಇದೆ, ಇಲ್ಲ ಎನ್ನುವುದಕ್ಕೆ ಅವನ ಸುತ್ತು ತಟ್ಟೆ ಸಹಾಯಮಾಡುತ್ತದೆ. ಮೊದಲು ಆ ತಟ್ಟೆಯು ತುಂಬುವಷ್ಟು

ಹಳ್ಳದ ಮಣ್ಣನ್ನು ಸೇರಿಸುತ್ತಾನೆ. ಆ ಮೇಲೆ ತಟ್ಟೆಯ ಮೇಲೆಯೇ ಮಣ್ಣೆಲ್ಲವನ್ನೂ ನೀರಿನಲ್ಲಿ ತೊಳೆದು ತೊಳೆದು ದಪ್ಪ ಸಣ್ಣ ಕಲ್ಲುಗುಂಡುಗಳನ್ನೂ ತೆಗೆದುಹಾಕುತ್ತಾನೆ. ಕೈಚಳಕದಿಂದ ಅವನು ತಟ್ಟೆಯನ್ನು ಸುತ್ತುತ್ತ ಹೋದಂತೆ ಹಗುರವಾದ ಕಲ್ಲು ಮಣ್ಣೆಲ್ಲವೂ ತೊಳೆದುಹೋಗಿ ಕೊನೆಯಲ್ಲಿ ತೂಕವಾದ ಕಪ್ಪುಗಸಿ ಉಳಿಯುತ್ತದೆ. ತೊಳೆದ ಮಣ್ಣಿನಲ್ಲಿ ಚಿನ್ನ ಇದ್ದಿದ್ದರೆ ಅದು ಗಸಿಯಲ್ಲಿ ಉಳಿದು ಥಳಥಳನೆ ಕಣ್ಣಿಗೆ ಕಾಣುತ್ತದೆ. ಈ ಕೆಲಸಕ್ಕೆ "ಮಚ್ಚೆ" ನೋಡುವುದು ಎಂದು ಹೇಳುತ್ತಾರೆ. ಗಸಿಯಲ್ಲಿ ಕಾಣುವ ಒಂದೊಂದು ಚಿನ್ನದ ಹಳುಕೂ ಒಂದೊಂದು ಮಚ್ಚೆ. ಹೆಚ್ಚು ಮಚ್ಚೆ ದೊರೆತರೆ ಅವನು ದೋಣಿಯನ್ನು ಅಲ್ಲೇ ಕಟ್ಟುತ್ತಾನೆ. ಸಾಮಾನ್ಯವಾಗಿ ಹರಿಯುವ ನೀರಿನ ವೇಗ ಕಡಿಮೆಯಾಗುತ್ತದೆಂದು ತೋರಿಬಂದ ಕಡೆಗಳಲ್ಲಿ ಎಂದರೆ, ಹಳ್ಳದ ತಿರುಗಣೆಗಳಲ್ಲಿ ನೀರಿನ ದುಮುಕಲುಗಳಲ್ಲಿ ಅವನು ಮಚ್ಚೆ ನೋಡುತ್ತಾನೆ. ಮಚ್ಚೆ ನೋಡುವುದರಿಂದಲೇ ಜಾಲಗಾರನು ಅನುಭವಸ್ಥನೇ ಅಲ್ಲವೆ ಎಂದು ಹೇಳಿ ಬಿಡಬಹುದು. ಮುಂದಿನ ಕೆಲಸ ಸುಲಭ. ದೋಣಿ ಕಟ್ಟಿದ್ದಾದಮೇಲೆ ಹಳ್ಳದ ಮಣ್ಣೆಲ್ಲವನ್ನೂ ಕೆರೆದುತಂದು ಒಬ್ಬನು ದೋಣಿಯೊಳಗೆ ಸುರಿಯುತ್ತಾನೆ. ದೋಣಿಯಲ್ಲಿ ಮಣ್ಣು ಸುಮಾರಾಗಿ ಸೇರಿದಮೇಲೆ ಜಾಲಗಾರ ತನ್ನ ಸೋರೆಬುರುಡೆಯಿಂದ ನೀರನ್ನು ಮೊಗೆದು ಮಣ್ಣಿನ ಮೇಲೆ ಹುಯ್ದು, ಕಲ್ಲು, ಮಣ್ಣು, ಹೆಂಟೆ ಎಲ್ಲವನ್ನೂ ತೆಗೆಯುತ್ತ ಹೋಗುತ್ತಾನೆ. ಈ ರೀತಿ ಇಪ್ಪತ್ತು ಮುವ್ವತ್ತು ಬಾಣಲೆಯಷ್ಟು ಮಣ್ಣು ತೊಳೆದಮೇಲೆ ದೋಣಿಯ ತಳದಲ್ಲಿ ಸಾಕಾದಷ್ಟು ಗಸಿ ಸೇರಿರುತ್ತದೆ. ಈ ಗಸಿಯೆಲ್ಲವನ್ನೂ ತನ್ನ ಸುತ್ತು ತಟ್ಟೆಗೆ ತೊಳೆದುಕೊಂಡು ಜಾಲಿಸುತ್ತಾನೆ. ಕಡಿಮೆ ತೂಕದ ಗಸಿಯೂ ಆಗ ತೊಳೆದುಹೋಗಿ ಕೊನೆಯಲ್ಲಿ ಚಿನ್ನದಪುಡಿ ಉಳಿಯುತ್ತದೆ. ಬಂದ ಚಿನ್ನವನ್ನು ತನ್ನ ತೆಂಗಿನ ಚಿಪ್ಪಿಗೆ ತೊಳೆದುಕೊಳ್ಳುತ್ತಾನೆ. ಹಗಲಿನಿಂದ ಸಾಯಂಕಾಲದ ವರೆಗೆ ಇದೇ ತಂದೆಮಕ್ಕಳ ಕೆಲಸ. ಒಳ್ಳೆಯ ದಿನದ ಕೆಲಸವಾದರೆ ಸುಮಾರು ಎರಡರಿಂದ ಹಿಡಿದು ನಾಲ್ಕು ರೂಪಾಯಿವರೆಗೂ ಬಾಳುವ ಬಂಗಾರ ದೊರೆಯುತ್ತದೆ. ಸಾಧಾರಣವಾಗಿ ನಾಲ್ಕು ಐದು ಗುಂಜಿ ಬಂಗಾರ, ಎಂದರೆ ರೂಪಾಯಿ, ರೂಪಾಯಿವರೆ ಬಾಳುವ ಬಂಗಾರ ಸಿಕ್ಕಿದರೆ ಹೆಚ್ಚು. ಈಚೆಗೆ ಈ ಕಸಬನ್ನು ಬಹಳ ಜನ ಬಿಟ್ಟುಬಿಟ್ಟಿದಾರೆ. ಕುಶಲವಾದ ಕೆಲಸ ಮೂಲೆಪಾಲಾಗಿದೆ.

## ಚಿನ್ನದ ಕೈಗಾರಿಕೆ—ಕರ್ನಾಟಕದ ಗತವೈಭವ

ಮೆಕ್ಕಲುಮಣ್ಣಿನಲ್ಲಿ ಸೇರಿರುವ ಚಿನ್ನವನ್ನೇ ಮೊಟ್ಟಮೊದಲಿಗರು ಗುರುತಿಸಿ ಪಡೆದರೆಂದೂ, ಆಮೇಲೆ ಆ ಚಿನ್ನದ ಜಾಡನ್ನೇ ಅನುಸರಿಸಿ ಮೂಲಚಿನ್ನದ ನೆಲೆಯಾದ

ಬೆಣಚುಕಲ್ಲಿನ ಸಿರಗಳನ್ನು ಗುರುತಿಸಿದರೆಂದೂ ಮೇಲೆಯೇ ತಿಳಿಸಿದೆ. ಬೆಣಚುಕಲ್ಲಿನ ಸಿರಗಳು ಸಾಮಾನ್ಯವಾಗಿ ಐದಾರು ಅಡಿಗಳಿಗಿಂತ ಹೆಚ್ಚು ಅಗಲವಿರುವುದಿಲ್ಲ. ಉದ್ದದಲ್ಲಿ ಅವು ನಾಲ್ಕು ಐದು ಮೈಲಿಗಳ ದೂರ ಹಬ್ಬಿರಬಹುದು. ಕಲ್ಲಿನಲ್ಲಿ ಚಿನ್ನ ಸೇರಿರುವುದನ್ನು ಕಂಡಮೇಲೆ, ಕಲ್ಲನ್ನು ಒಡೆದು, ಬಂದ ಪುಡಿಯೆಲ್ಲವನ್ನೂ ನೀರಿನಲ್ಲಿ ಜಾಲಿಸಿ ಚಿನ್ನ ಪಡೆಯಬೇಕಾಯಿತು. ಕಲ್ಲು ಎಲ್ಲಿಯತನಕ ಮೇಲೆಮೇಲೆಯೇ ಸಿಕ್ಕೀತು? ಕಲ್ಲನ್ನು ಹೆಚ್ಚು ಪಡೆಯುವುದಕ್ಕಾಗಿ ಆಳವಾದ ಕೂಪಗಳನ್ನೇ ಕೊರೆಯಬೇಕಾಯಿತು. ಹೀಗೆ ನಮ್ಮ ಪುರಾತನರು ತೆಗೆದ ಗಣಿಗಳನ್ನು ಕನ್ನಡ ನಾಡಿನಲ್ಲೆಲ್ಲಾ ಗುರುತಿಸಬಹುದು.

**ಪುರಾತನ ಗಣಿಗಳು ಯಾವ ಕಾಲಕ್ಕೆ ಸೇರಿದವು?** ಈ ಹಳೆಯ ಗಣಿಗಳು ಯಾವ ಕಾಲಕ್ಕೆ ಸೇರಿದವು? ಅವುಗಳಲ್ಲಿ ಕೆಲಸಮಾಡಿದ ಜನ ಯಾರು? ಈ ಗಣಿಗಳಲ್ಲಿನ ಕೆಲಸ ಯಾವಾಗ, ಏಕೆ ನಿಂತಿತು? ಈ ಪ್ರಶ್ನೆಗಳಿಗೆ ಚರಿತ್ರೆಯಲ್ಲಿ ಉತ್ತರ ಸಿಕ್ಕುವುದಿಲ್ಲ. ಗ್ರೀಕ್ ಚರಿತ್ರಕಾರರಿಂದ ಹಿಡಿದು ೧೯ನೆಯ ಶತಮಾನದವರೆಗೆ ಈ ಗಣಿಗಳ ಪ್ರಸ್ತಾಪ ಎಲ್ಲಿಯೂ ಬರುವುದಿಲ್ಲ. ಕ್ರಿ.ಶ. ೭೭ರಲ್ಲಿದ್ದ ಪ್ಲಿನಿ (Pliny) ಎಂಬ ಗ್ರೀಕ್ ಯಾತ್ರಿಕ ಹೀಗೆ ಬರೆದಿದ್ದಾನೆ:[1]

> 'In the country of the Nareae, beyond the mountain Capitalia (Mount Abu in Rajputana) there are numerous mines of gold and silver in which the Indians work very extensively.'

ರಾಜಪುತಾನ ಮತ್ತು ಅದರ ಸುತ್ತಿನ ಪ್ರದೇಶಗಳಲ್ಲಿ ಚಿನ್ನಕ್ಕಾಗಿ ಕೆಲಸಮಾಡಿದ ಯಾವ ಹಳೆಯ ಗಣಿಗಳೂ ಕಂಡಿಲ್ಲವಾದ್ದರಿಂದ ಪ್ಲಿನಿ, ಹೈದರಾಬಾದು, ಮೈಸೂರು ಪ್ರಾಂತಗಳಲ್ಲಿನ ಗಣಿಗಳ ವಿಚಾರವನ್ನೇ ಇಲ್ಲಿ ಪ್ರಸ್ತಾಪಮಾಡಿದಾನೆಂದು ನಾವು ಊಹಿಸಬಹುದಾಗಿದೆ. ಈ ಗಣಿಗಳ ಪ್ರಸ್ತಾಪ ಬರುವುದು ಅದೇ ಮೊದಲು. ವಿಜಯನಗರದ ಆಸ್ಥಾನಕ್ಕೆ ಹೋಗಿಬಂದ ವಿದೇಶೀಯ ಯಾತ್ರಿಕರಲ್ಲಿ ಒಬ್ಬನೂ ಚಿನ್ನದ ಗಣಿಗಳ ವಿಷಯ ಬರೆಯದೆ ಇರುವುದರಿಂದ ಆ ಕಾಲಕ್ಕೆ ಕನ್ನಡನಾಡಿನಲ್ಲಿ ಚಿನ್ನದ ಗಣಿಗಳಿದ್ದುದೇ ಮರೆತುಹೋದಂತೆ ಕಾಣುತ್ತದೆ.

ಯಾವುದೋ ಅತಿ ಪ್ರಾಚೀನ ಕಾಲದಲ್ಲಿ ಅತಿ ಕುಶಲರಾದ ಕೆಲಸಗಾರರ ತಂಡ ದೇಶವನ್ನೆಲ್ಲಾ ಸಂಚರಿಸಿ, ಚಿನ್ನವಿರುವ ಕಲ್ಲೆಲ್ಲವನ್ನೂ ಒಂದೂ ಬಿಡದಂತೆ ಪತ್ತೆಮಾಡಿ, ಚಿನ್ನ ಹೆಚ್ಚು ಸೇರಿದೆಯೆಂದು ಕಂಡುಬಂದ ಕಡೆಗಳಲ್ಲೆಲ್ಲಾ ಆಳವಾದ ಗಣಿಗಳನ್ನು ತೋಡಿ ಕೆಲಸಮಾಡಿದ್ದಾರೆನ್ನುವುದು ಸ್ಪಷ್ಟವಾಗಿದೆ. ಈ ಹಳಬರು

[1] Malcolm Maclaren, 'Gold' The Mining Journal, 241, (1908).

ಗಣಿ ತೋಡುವ ಕೆಲಸ ಒಂದರಲ್ಲೇ ಅಲ್ಲ ನುರಿತಿರುವುದು. ಅವರು ಆ ಪ್ರಾಚೀನ ಕಾಲದಲ್ಲಿ ಕಲ್ಲಿನಿಂದ ಚಿನ್ನವನ್ನು ಪ್ರತ್ಯೇಕಿಸುತ್ತಿದ್ದ ರೀತಿ ನಾವು ನವೀನರು ಮಾಡು ವಂತೆಯೇ ಇದೆ. ಆ ಕಾಲದಲ್ಲಿಯೇ ಅವರಿಗೆ ಪಾದರಸದ ಉಪಯೋಗ ಚೆನ್ನಾಗಿ ಗೊತ್ತಿತ್ತು.[1] ಕ್ರಿ.ಪೂ. ೩೦೦೦ ಸುಮಾರಿಗೆ ಸೇರಿದ ಮೊಹೆಂಜೊದಾರೊವಿನಲ್ಲಿ Cinnabar ಎಂಬ ಪಾದರಸದ ಮುಖ್ಯ ಖನಿಜ ದೊರೆತಿರುವುದಾಗಿ ಸರ್ ಜಾನ್ ಮಾರ್ಷಲ್ ಅವರು ವರದಿಮಾಡಿದ್ದಾರೆ. ಈಗಲೂ ಹಳೆಯ ಗಣಿಗಳ ಹತ್ತಿರದ ಮಣ್ಣನ್ನು ತೊಳೆದರೆ ಪಾದರಸದ ಕಣಗಳು ದೊರೆಯುತ್ತವೆ.

**ಪುರಾತನರು ಗಣಿ ತೋಡಿರುವ ರೀತಿ.** ಗಣಿಗಳಲ್ಲಿ ನೀರಿನ ಮಟ್ಟ ಸಿಕ್ಕಿದ ಮೇಲೆ ಕೆಲಸ ಕೈಬಿಟ್ಟಂತೆ ಕಾಣುತ್ತದೆ. ಕೋಲಾರದ ಹಳೆಯ ಗಣಿಗಳ ಆಳ ೨೦೦ ಅಡಿಗಳಿಗೂ ಹೆಚ್ಚಿತ್ತು. ಹೈದರಾಬಾದಿನ ಹಟ್ಟಿಯ ಹಳೆಯ ಗಣಿಗಳು ೬೪೦ ಅಡಿ ಗಳಿಗೂ ಕೆಳಗೆ ಇಳಿದಿದ್ದುವಂತೆ.[2] ಈ ಆಳವಾದ ಗಣಿಗಳಿಂದ ನೀರನ್ನು ಸಾಗಿಸಲು ಮಡಕೆಗಳನ್ನು ಉಪಯೋಗಿಸುತ್ತಿದ್ದರು. ಕೋಲಾರ ಮತ್ತು ಹಟ್ಟಿಯ ಹಳೆಯ ಗಣಿಗಳನ್ನು ಮೊದಲು ಶೋಧಿಸಿದಾಗ ತಳದಲ್ಲಿ ಸುಮಾರು ಹತ್ತು ಅಡಿಗಳಷ್ಟು ಎತ್ತರ ಮಡಕೆ ಚೂರುಗಳು ಕಂಡುಬಂದಿತು. ಗಟ್ಟಿ ಕಲ್ಲಿಗೆ ಬೆಂಕಿ ಹಚ್ಚಿ ಆರಿದಾಗ ಅದನ್ನು ಕಲ್ಲುಸುತ್ತಿಗೆಗಳಿಂದ ಒಡೆದು ಕಲ್ಲು ಕೀಳುತ್ತಿದ್ದರು. ಹಟ್ಟಿ ಮತ್ತು ಇತರ ಹಳೆಯ ಗಣಿಗಳಲ್ಲಿ ತಳಗಡೆ ಸುಟ್ಟ ಮರದ ತುಂಡುಗಳು, ಬೂದಿ, ಇದ್ದಲು ವಿಶೇಷ ವಾಗಿ ಕಂಡುಬಂದಿತು.

ಗಣಿ ಆಳಕ್ಕೆ ಇಳಿದಂತೆಲ್ಲ ಗೋಡೆ ಕುಸಿದುಬೀಳದಂತೆ ತಡೆಯಲು ಮರದ ದಿಮ್ಮಿಗಳನ್ನು ಜೋಡಿಸುತ್ತಾರೆ. ಹಟ್ಟಿ, ಕೋಲಾರದ ಗಣಿಗಳಲ್ಲಿ ಸಿಕ್ಕಿದ ಕರಿಜಾಲಿ (ಬಾಬುಲ್—Acacia Arabica) ಮರದ ತುಂಡುಗಳನ್ನು ನೋಡಿದರೆ ನಮ್ಮ ಪುರಾತನ ರಿಗೆ ಗಣಿಯ ಭದ್ರತೆಗೋಸ್ಕರ ಮರಜೋಡಿಸುವ ಕ್ರಮ ಚೆನ್ನಾಗಿ ತಿಳಿದಿತ್ತೆಂದು ವ್ಯಕ್ತಪಡುತ್ತದೆ.

**ಕಲ್ಲಿನಿಂದ ಚಿನ್ನವನ್ನು ಪ್ರತ್ಯೇಕಿಸುತ್ತಿದ್ದ ಬಗೆ.** ಚಿನ್ನ ಸೇರಿರುವ ಕಲ್ಲನ್ನು ಗಣಿಯಿಂದ ಮೇಲೆ ತಂದಮೇಲೆ ಅದನ್ನು ಸಣ್ಣ ಸಣ್ಣ ಕಾಳಿನಷ್ಟು ಗಾತ್ರಕ್ಕೆ ಪುಡಿ

[1] L. Munn—'Observations and Notes on the method of Ancient Gold Mining in Southern India, with special reference to the Raichur and Shorpur Districts of Hyderabad State.'—*Transactions of the Mining and Geological Institute of India*. XXX, 105 (1936).

[2] 'At the Hutti Mine in Raichur District all payable quartz, save for a few pillars, was extracted to the depth of 640 ft.—a record, not only for India, but, I believe, for the World.'—L. Munn. Ibid, 104.

ಮಾಡುತ್ತಿದ್ದರು. ಹಳೆಯ ಗಣಿಗಳ ಹತ್ತಿರ ಕಲ್ಲುಬಂಡೆಗಳು ಕುಳಿಬಿದ್ದಿರುವುದನ್ನೂ ಗುರುತಿಸಬಹುದು. ಈ ಸಣ್ಣ ಕಾಳಿನಂಥ ಚಿನ್ನದ ಕಲ್ಲನ್ನು ಭಾರಿ ಗುಂಡುಕಲ್ಲುಗಳ ಕೆಳಗೆ ಕೊಟ್ಟು ಮತ್ತೂ ಪುಡಿಮಾಡುತ್ತಿದ್ದರು. ಇಂಥ ಕಲ್ಲುಗುಂಡುಗಳು ವಿಶೇಷವಾಗಿ ಚಿನ್ನದ ಪ್ರದೇಶದಲ್ಲಿ ಬಿದ್ದಿರುತ್ತವೆ. ಪುಡಿಯಾದ ಕಲ್ಲೆಲ್ಲವನ್ನೂ ನೀರು ಹತ್ತಿರ ಇರುವ ಕಡೆ ಕೊಂಡುಹೋಗಿ ಅಲ್ಲಿ ಜಾಲಿಸಿ ಚಿನ್ನ ಪಡೆಯುತ್ತಿದ್ದರು.

**ಈ ಕೈಗಾರಿಕೆ ನಡೆಸಿದ ಜನ ಯಾರು?** ಇಷ್ಟೆಲ್ಲ ಕೆಲಸ ಮಾಡಿದ ಜನ ಯಾರು? ನಾಡೆಲ್ಲವನ್ನೂ ಸಂಚರಿಸಿ, ಯಾವೊಂದು ಚಿನ್ನದ ಪ್ರದೇಶವನ್ನೂ ಬಿಡದೆ ಶೋಧಿಸಿದವರು ಯಾವ ನಾಡವರು? ಕೆಲಸ ನಡೆದಿರುವ ಪ್ರದೇಶದ ವೈಶಾಲ್ಯವನ್ನು ನೋಡಿದರೆ, ಮತ್ತು ಗಣಿ ತೋಡುವ ಕೆಲಸ ಎಷ್ಟು ಸಿಧಾನದ ಕೆಲಸ ಎನ್ನುವುದನ್ನು ನಾವು ಗಮನಿಸಿದರೆ, ದಂಡೆತ್ತಿ ಬಂದ ಯಾವ ಜನಾಂಗವೂ ಈ ಎಲ್ಲ ಕೆಲಸವನ್ನೂ ಸಾಧಿಸಿರಲಾರದೆನ್ನುವುದು ಸ್ಪಷ್ಟಪಡುತ್ತದೆ. ನಮ್ಮ ದೇಶದಲ್ಲಿ ಚಿನ್ನದ ಗಣಿಗಳನ್ನು ತೋಡಿ ಕೆಲಸಮಾಡಿದವರು ಈಜಿಪ್ಷಿಯನರು, ಇಲ್ಲವೆ ಅವರೊಡನೆ ಸಂಪರ್ಕವಿಟ್ಟುಕೊಂಡಿದ್ದವರೆಂದು ಶ್ರೀಯುತ ಎಲಿಯಟ್ ಸ್ಮಿತ್ತರು ಅಭಿಪ್ರಾಯಪಡುತ್ತಾರೆ.[1] ಈ ಅಭಿಪ್ರಾಯಕ್ಕೆ ಪುರಾತನ ಈಜಿಪ್ಷಿಯನರೂ ಚಿನ್ನದ ಕೈಗಾರಿಕೆಯಲ್ಲಿ ನುರಿತ ಜನ ಎನ್ನುವ ಆಧಾರದ ಹೊರತು ಬೇರೆ ಯಾವ ಆಧಾರವೂ ಇದ್ದಂತೆ ಕಾಣುವುದಿಲ್ಲ. ಹೈದರಾಬಾದು ಪ್ರಾಂತದ ಪುರಾತನ ಗಣಿಗಳ ಶೋಧನೆ ನಡೆಸಿದ ಶ್ರೀ ಮನ್ನರು ಹೊರಗೆಡಹಿರುವ ಸಾಕ್ಷ್ಯಗಳು ಮೇಲಿನ ಅಭಿಪ್ರಾಯ ತಪ್ಪೆನ್ನುವುದನ್ನು ತೋರಿಸುತ್ತವೆ. ಆಫ್ರಿಕಾ ಖಂಡದ ದಕ್ಷಿಣ ರೊಡೀಷಿಯಾ ಪ್ರಾಂತದಲ್ಲೆಲ್ಲ, ಸುಮಾರು ನಮ್ಮ ದಕ್ಷಿಣ ಇಂಡಿಯದಲ್ಲಿರುವಂಥ ಶಿಲೆಗಳೇ ಹರಡಿವೆ. ಅಲ್ಲಿಯೂ ಇಲ್ಲಿನಂತೆಯೇ ಸಣ್ಣ ಸಣ್ಣ ಗಣಿಗಳು ವಿಶೇಷವಾಗಿ ಕಂಡುಬರುತ್ತವೆ. ಅಲ್ಲಿ ಗಣಿ ತೋಡಿರುವ ರೀತಿ, ಒಳಗೆ ನಡೆದಿರುವ ಕೆಲಸ ನಮ್ಮ ದೇಶದಲ್ಲಿ ನಡೆದಂತೆಯೇ ಇದೆ. ನಮ್ಮ ದೇಶದ ಹುಣಿಸೆ ಮರ (Tamarind Indicas) ಮತ್ತು ಕಾಡುಹತ್ತಿಯ ಮರಗಳು ರೊಡೀಷಿಯದ ಗಣಿಗಳ ಸುತ್ತ ಬೆಳೆದಿವೆಯಂತೆ. ಈ ಸಸ್ಯಗಳು ಆ ದೇಶದಲ್ಲಿ ಬೆಳೆಯತಕ್ಕುವಲ್ಲ. ಈ ಮರಗಳೇ ಅಲ್ಲದೆ ಆಫ್ರಿಕನರು Mahobohobo ಎಂದು ಕರೆಯುವ ಬೇರೆ ಒಂದು ಮರವಿದೆಯಂತೆ. ಈ ಮರದ ಮಾತೃಸ್ಥಾನವೂ ದಕ್ಷಿಣ ಇಂಡಿಯಾ ಮತ್ತು ಮಲಯ. ಈ ಮರದ ವಿಷಯವಾಗಿ ರೊಡೀಷಿಯದ ಗಣಿಗಳ ಅನುಭವವಿರುವಾತ ಹೇಳಿದ ಮಾತು ಗಮನಾರ್ಹವಾಗಿದೆ —

> In Rhodesia this tree is found on the area of the Prehistoric Rock Mines, but the vast extent of the country now covered by

[1] Elliot Smith, *Human History*.

its forests demonstrate that it arrived in some extremely remote times. Being an Indian fruit tree it was in all probability introduced by Indians. (*Guide to Rhodesia*, 2nd Edn.) issued by the Beira and Mashonaland Railways.[1]

ಈ ಎಲ್ಲ ಮರಗಳೂ ಹಳೆಯ ಚಿನ್ನದ ಗಣಿಗಳ ಹತ್ತಿರವೇ ಇರುವುದರಿಂದ ರೊಡೀಷಿಯದ ಗಣಿಗಳನ್ನು ಪತ್ತೆಮಾಡಿ ಕೆಲಸಮಾಡಿದವರು ನಮ್ಮ ದೇಶೀಯರೆ ಇರಬಹುದೆ ಎಂಬ ಅನುಮಾನ ಬರುತ್ತದೆ. ಹೈದರಾಬಾದು ಮತ್ತು ರೊಡೀಷಿಯದ ಗಣಿಗಳ ಪರಿಚಯು ಚೆನ್ನಾಗಿ ಉಳ್ಳ ಮೇಜರ್ ಲೈಟ್‌ಫುಟ್ (Major Lightfoot) ಅವರು ಶ್ರೀ ಲಿಯೊನಾರ್ಡ್ ಮನ್ನರಿಗೆ ಬರೆದ ಕಾಗದದಲ್ಲಿ — "The ancient workings here are very similar to those in Hyderabad as I can vouch by personal observation" . . . . ಎಂದು ಬರೆದಿದಾರೆ. ಆಫ್ರಿಕಾದ ಪುರಾತನ ಗಣಿಗಳ ವಿಷಯವನ್ನು ಸಂಗ್ರಹಿಸಿದ ಯೂರೋಪಿಯನರು ಸೆಸಿಲ್ ರೋಡ್ಸ್‌ನಿಗೆ (Cecil Rhodes) The finest rock mines in Rhodesia are undoubtedly of Asiatic Origin[2] ಎಂದು ವರದಿಮಾಡಿದಾರೆ.

ಹಳೆಯ ಗಣಿಗಳಲ್ಲಿ ಸಿಕ್ಕಿದ ಕಲ್ಲುಸುತ್ತಿಗೆ ಮತ್ತು ಇತರ ಕಲ್ಲಿನ ಆಯುಧಗಳು, ಸಲಾಕೆಯಂಥ ಕಬ್ಬಿಣದ ತುಂಡುಗಳು, ಇವುಗಳನ್ನು ನೋಡಿದರೆ, ಗಣಿಗಳಲ್ಲಿ ಕೆಲಸ ಮಾಡಿದ ಜನರು ಉತ್ತರಶಿಲಾಯುಗದ ಕೊನೆ ಅಥವಾ ಕಬ್ಬಿಣಯುಗದ ಮೊದಲಿಗೆ ಸೇರಿದ ಜನರೆಂದು ಊಹಿಸಬಹುದು. ಎಂದರೆ ಇವರ ಕಾಲವು ಕ್ರಿ.ಪೂ. ೧೩೦೦ ಕ್ಕೂ ಹಿಂದಿನದೆಂದಾಯಿತು.

**ಮಾಸ್ಕಿಯ ಬಳಿಯ ಸುವರ್ಣನಗರಿ (?)** ಇಷ್ಟು ಪ್ರಾಚೀನಕಾಲದಲ್ಲಿ ಮೊದಲಾದ ಕೈಗಾರಿಕೆ ಎಲ್ಲಿಯತನಕ ಮುಂದುವರಿಯಿತು? ಇದನ್ನು ಕೈಬಿಡಲು ಕಾರಣ ವೇನು ? ಈ ಪ್ರಶ್ನೆಗಳಿಗೆ ಉತ್ತರ ಖಂಡಿತವಾಗಿ ಹೇಳುವುದು ಕಷ್ಟ. ಹೈದರಾಬಾದು ಸಂಸ್ಥಾನದ ಮಾಸ್ಕಿಯ ಹತ್ತಿರ ಅಶೋಕನ ಶಾಸನ ಇದೆ. ಇದರ ಬಳಿ, ಬುದ್ಧಕಾಲದ ಇಟ್ಟಿಗೆಗಳು, ಬಣ್ಣದ ಮಡಕೆಗಳು, ಸುಣ್ಣ, ಚಿಪ್ಪು ಉಂಗುರಗಳು ದೊರೆಯುತ್ತವಂತೆ. ಅಶೋಕ ಮಹಾರಾಜನ ದಕ್ಷಿಣ ರಾಜಧಾನಿಯಾದ 'ಸುವರ್ಣನಗರಿ' ಇದೇ ಇದ್ದಿರಬಹುದೇ ಎಂದು ಶ್ರೀ ಮನ್ನರು ಅನುಮಾನಿಸುತ್ತಾರೆ. ಹೆಸರಿಗೆ ತಕ್ಕಹಾಗೆ ಈ ನಿವೇಶನಕ್ಕೆ ಅನತಿದೂರದಲ್ಲಿಯೇ ಪುರಾತನ ಚಿನ್ನದ ಗಣಿಗಳಿರುವುದನ್ನೂ

[1] Quoted by Leonard Munn. Ibid, 107.
[2] Ibid, 107.

ಸುತ್ತಮುತ್ತ ಚಿನ್ನದ ಕಲ್ಲನ್ನು ಕುಟ್ಟಲು ಉಪಯೋಗಿಸುವ ಕಲ್ಲುಗುಂಡುಗಳು ಬಿದ್ದಿರುವುದನ್ನೂ ನೋಡಿದರೆ ಇದೇ ಸುವರ್ಣನಗರಿ ಆಗಿರಬಹುದೆಂದು ತೋರುತ್ತದೆ. ಇಲ್ಲಿ ಇನ್ನೂ ಹೆಚ್ಚಿನ ಶೋಧನೆ ನಡೆಸಿದರೆ ಮೇಲಿನ ಅನುಮಾನ ಸ್ಥಿರಪಟ್ಟೀತು. ಅಂತೂ ಮೌರ್ಯರ ಕಾಲದಲ್ಲಿ, ಗೋದಾವರಿಯ ದಕ್ಷಿಣಕ್ಕಿರುವ ನಾಡಿನಲ್ಲಿ ಚಿನ್ನದ ಕೈಗಾರಿಕೆ ವಿಶೇಷವಾಗಿ ನಡೆಯುತ್ತಿತ್ತೆಂದು ಊಹಿಸಬಹುದು.

**ಕೈಗಾರಿಕೆ ಯಾವ ಕಾಲದ ವರೆಗೆ ಮುಂದುವರಿಯಿತು?** ಮುಂದೆ ಯಾವ ಕಾಲದವರೆಗೆ ಚಿನ್ನದ ಕೈಗಾರಿಕೆ ಮುಂದುವರಿಯಿತೆನ್ನುವುದನ್ನು ನಿರ್ಧರಿಸುವುದು ಕಷ್ಟ. ಹೈದರಾಬಾದಿನ ಹಟ್ಟಿ ಮತ್ತು ಅದರ ಸುತ್ತಿನ ಗಣಿಗಳನ್ನು ಶೋಧನೆ ಮಾಡಿದಾಗ ಒಂದಂಶ ಹೊರಬಿದ್ದಿತು. ಆ ಎಲ್ಲ ಗಣಿಗಳು ಪ್ರಕೃತಿ ವ್ಯಾಪಾರಗಳ ದೆಸೆಯಿಂದ ಕಾಲನ ಬಾಯಿಗೆ ತುತ್ತಾಗಿ ಮುಚ್ಚಿಹೋದುವಾಗಿ ಕಂಡುಬರಲಿಲ್ಲ. ಬೇಕೆಂದೇ ಪೂರ್ವಿಕರು ಕಲ್ಲುಗುಂಡು, ಮಣ್ಣೆಲ್ಲವನ್ನೂ ಗಣಿಯೊಳಗೆ ಉರುಳಿಸಿ ಮುಚ್ಚಿರುವುದಾಗಿ ಕಂಡುಬಂದಿತು. ಪ್ರಾಯಶಃ ದಂಡೆತ್ತಿ ಬಂದ ಹಗೆಗಳಿಗೆ ಸೆಲೆ ಕಾಣಸಿಗಬಾರದೆಂದು ಗಣಿಗಳನ್ನು ಮುಚ್ಚಿಬಿಟ್ಟಹಾಗೆ ಕಾಣುತ್ತದೆ. ಹೈದರಾಬಾದು ಪ್ರಾಂತದ ಗಣಿಗಳ ಕಥೆ ಅಂದಿಗೇ, ಎಂದರೆ ಮಹಮದೀಯರು ದಂಡೆತ್ತಿಬಂದ ಕಾಲಕ್ಕೇ ಮುಗಿಯಿತು. ಮುಂದೆ ದಂಡೆತ್ತಿ ಬಂದವರಿಗಾಗಲಿ, ವಿಜಯನಗರದ ಅರಸುಗಳಿಗಾಗಲಿ ಚಿನ್ನದ ಗಣಿಗಳು ಆ ಪ್ರದೇಶದಲ್ಲಿದ್ದುದೇ ಮನವರಿಕೆಯಾಗದೆ ಹೋಯಿತು. ಚಿನ್ನದ ಕೈಗಾರಿಕೆಗೆ ಅದೇ ಕೊನೆಯಾಯಿತು.

**ಈ ವಿಷಯವಾಗಿ ಮುಂದೆ ಶೋಧನೆ ನಡೆಯಬೇಕಾದ ಅಗತ್ಯ.** ನಮ್ಮ ದೇಶದ ಗಣಿಗಳನ್ನು ತೋಡಿದವರು ಈಜಿಪ್ಷಿಯನರೆಂದು ಎಲಿಯಟ್ ಸ್ಮಿತ್ತರೂ, ಚೀಣೀಯರೆಂದು ಷ್ವಾರ್ಸ್ (Schwarz) ಅವರೂ ಅಭಿಪ್ರಾಯಪಟ್ಟಿದಾರೆ. ಯಾವ ದಂಡೆತ್ತಿ ಬಂದ ಜನಾಂಗವಾಗಲಿ, ವ್ಯಾಪಾರಕ್ಕಾಗಿ ಬಂದ ವಿದೇಶೀಯರಾಗಲಿ ಇಲ್ಲಿಯ ಚಿನ್ನದ ಗಣಿಗಳನ್ನು ತೋಡಿದರೆನ್ನುವುದನ್ನು ನಂಬುವುದು ಕಷ್ಟ. ನೂರಾರು ಮೈಲಿ ದೇಶವನ್ನೆಲ್ಲಾ ಸಂಚರಿಸಿ, ಒಂದೂಬಿಡದಂತೆ ಚಿನ್ನದ ನೆಲೆಯೆಲ್ಲವನ್ನೂ ಪತ್ತೆಮಾಡಿ ೫೦೦–೬೦೦ ಅಡಿಗಳವರೆಗೂ ಕೂಪಗಳನ್ನಿಳಿಸಿ ಕೆಲಸಮಾಡಿದ ಜನ ಇಂದಿದ್ದು ನಾಳೆ ಹೋಗುವ ವಿದೇಶಿಗಳದಲ್ಲ ಎನ್ನುವುದು ಸ್ಪಷ್ಟ. ನೂರಾರು ವರ್ಷಗಳ ಪರಿಶ್ರಮ ಎದ್ದು ಕಾಣುತ್ತದೆ ಅವರು ಮಾಡಿದ ಕೆಲಸದಲ್ಲಿ. ಈ ಎಲ್ಲ ಕೆಲಸ ದೇಶದಲ್ಲಿನ ಮೂಲನಿವಾಸಿಗಳದೇ ಎನ್ನುವ ವಾದವನ್ನು ನಾವು ಒಪ್ಪಬಹುದಾಗಿದೆ. ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಚಿನ್ನದ ಕೈಗಾರಿಕೆಯ ವಿಷಯವಾಗಿ ಎಲ್ಲಿಯಾದರೂ ಪ್ರಸ್ತಾಪ ಬಂದಿದ್ದರೆ ಪಂಡಿತರು ಅದನ್ನು ಎತ್ತಿ ತೋರಿ ಈಗ ಅಸ್ಪಷ್ಟವಾಗಿ

ತೋರುತ್ತಿರುವ ನಮ್ಮ ಪುರಾತನರ ಕಲೆಯ ಇತಿಹಾಸದ ಮೇಲೆ ಇನ್ನೂ ಹೆಚ್ಚಿನ ಬೆಳಕು ಬೀಳುವಂತೆ ಮಾಡಬೇಕು.[1]

## ಕನ್ನಡನಾಡಿನ ಚಿನ್ನದ ಗಣಿಗಳು

ಗೋದಾವರಿಯಿಂದ ಹಿಡಿದು ಕಾವೇರಿಯವರೆಗಿನ ನಡುವಣ ನಾಡು ಕನ್ನಡ ನಾಡು ಹೇಗೊ ಹಾಗೆ ಚಿನ್ನದ ನಾಡೂ ಹೌದು. ನಮ್ಮ ಭಾರತದ ಎಲ್ಲ ಚಿನ್ನದ ಗಣಿಗಳಿರುವುದೂ ಈ ಸರಹದ್ದಿನೊಳಗೇ. ಈ ಎಲ್ಲೆಯೊಳಗೆ ಕಂಡುಬರುವ ಮುಖ್ಯ ಮುಖ್ಯವಾದ ಗಣಿಗಳಿರುವ ಸ್ಥಳಗಳನ್ನು ನಕ್ಷೆಯಲ್ಲಿ ತೋರಿಸಿದೆ. ನಾಡಲ್ಲೆಲ್ಲ ಚಿನ್ನದ ಗಣಿಗಳಿದ್ದರೂ ಹೆಚ್ಚಿನ ಕೆಲಸ ನಡೆದಿರುವುದು ಮೈಸೂರು ಪ್ರಾಂತದ ಗಣಿಗಳಲ್ಲಿ ಮಾತ್ರ. ಆದುದರಿಂದ ಮೈಸೂರು ಪ್ರಾಂತದ ಗಣಿಗಳ ವಿಷಯವನ್ನು ಮುಂದೆ ವಿಸ್ತರಿಸಿ ಬರೆಯಲಾಗಿದೆ. ಮೈಸೂರಿನ ಹೊರಗೆ ಮುಖ್ಯವಾಗಿ ಕೆಲಸ ನಡೆದಿರುವುದು ಹೈದರಾಬಾದು ಸಂಸ್ಥಾನದ ಲಿಂಗಸುಗೂರು ಮತ್ತು ರಾಯಿಚೂರು ಜಿಲ್ಲೆ, ಧಾರವಾಡ ಜಿಲ್ಲೆ ಮತ್ತು ಅನಂತಪುರದ ಜಿಲ್ಲೆಗಳಲ್ಲಿ.

**ಹೈದರಾಬಾದು ಸಂಸ್ಥಾನ.** ಕೋಲಾರದ ಗಣಿಗಳಲ್ಲಿ ಬಿಟ್ಟರೆ ಹೆಚ್ಚಿನ ಕೆಲಸ ನಡೆದಿರುವುದು ಲಿಂಗಸುಗೂರು ಜಿಲ್ಲೆಗೆ ಸೇರಿದ **ಹಟ್ಟಿ** ಗ್ರಾಮದ ಹತ್ತಿರ. ೧೯೦೧ನೆಯ ಇಸವಿಯಲ್ಲಿ ಮೊದಲಾದ ಕೆಲಸ ೧೯೨೦ರ ಕೊನೆಯವರೆಗೂ ನಡೆಯಿತು. ೧,೦೧೦,೭೫೦ ಪೌಂಡುಗಳು ಬೆಲೆಬಾಳುವ ೨೫೬,೪೨೪ ಔನ್ಸು (ಎಂದರೆ ೬೪೧,೦೬೦ ತೊಲ) ಚಿನ್ನ ಈ ಗಣಿಗಳಿಂದ ಬಂದಿದೆ. ೧೯೨೦ರಿಂದ ಈ ಗಣಿಯಲ್ಲಿ ಕೆಲಸ ನಡೆಯಲಿಲ್ಲ. ಈಚೆಗೆ ಈ ಗಣಿಯನ್ನು ಪುನಃ ಉದ್ಧಾರಮಾಡುವ ಪ್ರಯತ್ನಗಳು ನಡೆಯುತ್ತಿವೆ.

ರಾಯಿಚೂರು ಜಿಲ್ಲೆಗೆ ಸೇರಿದ **ತೊಪ್ಪಲುದೊಡ್ಡಿ**ಯ ಹತ್ತಿರ ೧೯೦೫ರಲ್ಲಿ ಸ್ವಲ್ಪ ಕೆಲಸ ನಡೆಯಿತು. ಆದರೆ ಕಲ್ಲಿನಲ್ಲಿ ಚಿನ್ನ ಹೆಚ್ಚು ಪ್ರಮಾಣದಲ್ಲಿ ಸೇರಿದ್ದಂತೆ ಕಾಣಲಿಲ್ಲವಾದ್ದರಿಂದ ೧೯೦೮ರಲ್ಲಿ ಇಲ್ಲಿ ನಡೆಯುತ್ತಿದ್ದ ಕೆಲಸ ನಿಂತುಹೋಯಿತು.

**ಧಾರವಾಡ ಜಿಲ್ಲೆ.** ಧಾರವಾಡ ಜಿಲ್ಲೆಯ ಗದಗಿನ ಹತ್ತಿರವೂ ೧೯೦೫ರಿಂದ ೧೯೧೧ರ ವರೆಗೆ ಕೆಲಸ ನಡೆಯಿತು. ಇಲ್ಲಿ ಸಹ ಕಲ್ಲಿನಲ್ಲಿ ಸೇರಿರುವ ಚಿನ್ನ ಹೆಚ್ಚಿಲ್ಲವೆಂದು ಕೆಲಸವನ್ನು ಕೈಬಿಟ್ಟರು.

**ಅನಂತಪುರ ಜಿಲ್ಲೆ**ಯಲ್ಲಿ ಧರ್ಮಾವರ ತಾಲ್ಲೂಕಿನ ರಾಮಗಿರಿಯ ಬಳಿ ಹಳೆಯ ಗಣಿಗಳಿವೆ. ಇಲ್ಲಿಯೂ ಹೆಚ್ಚು ಕೆಲಸ ನಡೆದಿಲ್ಲ.

---

[1] ಜರಗುಗರ್ಚು — ಎಂಬ ಮಾತು ಸಾಹಿತ್ಯದಲ್ಲಿ ಬಳಕೆಯಲ್ಲಿದೆ. ಅದು ಚಿನ್ನವನ್ನು ತೊಳೆಯುವ ಕಾರ್ಯವನ್ನು ಸೂಚಿಸುವುದು — ಡಿ.ಎಲ್.ಎನ್.

## ಕೋಲಾರದ ಚಿನ್ನದ ಪ್ರದೇಶ

ಹಿಂದೂದೇಶದ ಚಿನ್ನದ ವಾರ್ಷಿಕ ಉತ್ಪತ್ತಿಯಲ್ಲಿ ಶೇಕಡ ೯೯ ಕ್ಕೂ ಹೆಚ್ಚಿನ ಭಾಗ ಮೈಸೂರಿನಿಂದ, ಅದರಲ್ಲೂ ಕೋಲಾರದ ಚಿನ್ನದ ಪ್ರದೇಶದಿಂದ ಬರುತ್ತದೆ. ಈ ಪ್ರದೇಶದಲ್ಲಿ ಈಗ ಕೆಲಸಮಾಡುತ್ತಿರುವ ಗಣಿಗಳು ನಾಲ್ಕು : ಮೈಸೂರು ಗಣಿ, ಛಾಂಪಿಯನ್ ಗಣಿ, ಉರಿಗಂ ಗಣಿ ಮತ್ತು ನಂದಿದುರ್ಗ ಗಣಿ. ಈ ನಾಲ್ಕು ಗಣಿಗಳಿಂದ ಒಟ್ಟುಗೂಡಿ ವರ್ಷ ಒಂದಕ್ಕೆ ಸರಾಸರಿ ೩,೨೫,೦೦೦ ಔನ್ಸು ಎಂದರೆ ಸುಮಾರು ೮೧೦,೦೦೦ ತೊಲ ಬಂಗಾರ ಹುಟ್ಟುತ್ತದೆ. (ಕಳೆದ ಎರಡು ವರ್ಷಗಳಲ್ಲಿ ಉತ್ಪತ್ತಿ ಸ್ವಲ್ಪ ಕಡಿಮೆಯಾಗಿದೆ. ಕೋಲಾರದ ಗಣಿಯಲ್ಲಿ ಕೆಲಸವನ್ನು ಯೂರೋಪಿಯನರು ಮೊದಲು ಮಾಡಿದಂದಿನಿಂದ ೧೯೪೨ರ ಕೊನೆಯ ವರೆಗೆ ಸುಮಾರು ೧೪೮ ಕೋಟಿ ರೂಪಾಯಿಗಳ ಬೆಲೆ ಬಾಳುವ ಚಿನ್ನ ಈ ಗಣಿಗಳಿಂದ ಬಂದಿದೆ. ಹಿಂದೆ ನಮ್ಮ ಪುರಾತನರು ಎಷ್ಟು ಚಿನ್ನ ಪಡೆದಿದ್ದರೆನ್ನುವುದು ನಮಗೆ ತಿಳಿಯದು. ನಮ್ಮ ದೇಶದ ಸಂಪತ್ತಿನ ಒಂದು ಹಿರಿಯ ಅಂಗವಾದ ಈ ಕೋಲಾರದ ಗಣಿಗಳ ಹಿಂದಿನ ಚರಿತ್ರೆಯನ್ನೂ ಅಲ್ಲಿನ ಕಾರ್ಯಕಲಾಪಗಳ ವಿವರವನ್ನೂ ತಿಳಿಯುವುದು ಆವಶ್ಯಕ.

**ಕೋಲಾರದ ಗಣಿಯ ಚರಿತ್ರೆ.** ಕೋಲಾರದ ಗಣಿಯ ಇತಿಹಾಸ ಬಹು ಹಳೆಯದಾದರೂ ಚರಿತ್ರಾಂಶ ಯಾವುದೂ ಈ ವರೆಗೆ ದೊರೆತಿಲ್ಲ. ಶಾಸನಗಳಲ್ಲಿಯೂ ಅದರ ಉಲ್ಲೇಖವಿಲ್ಲ. ಗ್ರೀಕ್ ಚರಿತ್ರಕಾರನಾದ ಪ್ಲಿನಿ ಹೇಳಿದುದೇ ಕೊನೆಯ ಮಾತು. ವಿಜಯನಗರ ಸಾಮ್ರಾಜ್ಯದ ಸರಹದ್ದಿನೊಳಗಿದ್ದರೂ ಅದರ ಪ್ರಸ್ತಾಪ ಎಲ್ಲಿಯೂ ಇಲ್ಲ. ಟಿಪ್ಪೂಸುಲ್ತಾನನು ಒಬ್ಬ ಬ್ರಾಹ್ಮಣನ ಉಮೇದುವಾರಿಕೆಯಲ್ಲಿ ಕೆಲಸ ನಡೆಸಿದನೆಂದೂ, ಆದರೆ ಬ್ರಾಹ್ಮಣ ಮಹಾಶಯನು ಆಸಕ್ತಿಯಿಂದ ಕೆಲಸ ಮಾಡಿಸಲಿಲ್ಲವೆಂದೂ ಅದರ ಫಲವಾಗಿ ಕೆಲಸ ಅಲ್ಲಿಗೇ ನಿಂತುಹೋಯಿತೆಂದೂ ಸ್ಥಳ ಚರಿತ್ರೆಯಿದೆ.

ಕೋಲಾರದ ಗಣಿಯ ಈಚಿನ ಚರಿತ್ರೆ ೧೮೦೦ರಿಂದ ಮೊದಲಾಗುತ್ತದೆ. ಲೆಫ್ಟಿನೆಂಟ್ ವಾರೆನ್ (Lt. Warren) ಎಂಬಾತ ಬೇತಮಂಗಲದ ಕೆರೆಯ ಹತ್ತಿರ ಬೀಡುಬಿಟ್ಟಿದ್ದಾಗ ಸುತ್ತಮುತ್ತಲಿನ ಹಳ್ಳಿಯವರು ಚಿನ್ನದ ವಿಷಯ ಮಾತನಾಡುವುದನ್ನು ಕೇಳಿ, ಉರಿಗಂ ಮತ್ತು ಮಾರಿಕುಪ್ಪಗಳ ಬಳಿ ಕೆಲಸ ನಡೆಸಿ ಸ್ವಲ್ಪ ಚಿನ್ನ ಪಡೆದನಂತೆ. ಅಲ್ಲಿನ ಹಳ್ಳಿಗರೂ ಆಗಾಗ ಒಟ್ಟು ಸೇರಿ ಕೆಲಸ ನಡೆಸಿ ಬಂದ ಚಿನ್ನವನ್ನು ಹಂಚಿಕೊಳ್ಳುತಿದ್ದರಂತೆ. ಆದರೆ ಅವರು ಬಹಳ ಅಪಾಯಕರವಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದರೆಂದು ಹೇಳಿ ಸರ್ ಮಾರ್ಕ್ ಕಬ್ಬನ್ ಒಂದು ಶಾಸನವನ್ನು ಹೊರಡಿಸಿ ಅಲ್ಲಿ ನಡೆಯುತ್ತಿದ್ದ ಕೆಲಸವನ್ನು ನಿಲ್ಲಿಸಿಬಿಟ್ಟನು.

ಕೋಲಾರದ ಗಣಿಯನ್ನು ಯೂರೋಪಿಯನರ ಕಣ್ಣಿಗೆ ಬೀಳುವಂತೆ ಮಾಡಿ, ಈಚಿನ ಚಿನ್ನದ ಕೈಗಾರಿಕೆಗೆ ಕಾರಣನಾದವನು ಲೆವೆಲ್ (Lavelle). ಈತ ಸರಕಾರದವರಿಗೆ ತನ್ನುದ್ದೇಶ ತಿಳಿಯಬಾರದೆಂದೊ ಏನೊ, ಕೋಲಾರದ ಪ್ರದೇಶದಲ್ಲಿ ಕಲ್ಲಿದ್ದಲನ್ನು ಪಡೆಯುವುದಕ್ಕೆ ೧೮೭೫ರಲ್ಲಿ ರಹದಾರಿ ಕೇಳಿದನು. ೧೮೭೫–೭೬ರಲ್ಲಿ ಸ್ವಲ್ಪ ಕೆಲಸ ನಡೆಸಿ, ಕೊನೆಗೆ ೫,೦೦೦ ಪೌಂಡು ಬಂಡವಾಳವಿರುವ ಲಂಡನಿನ ಒಂದು ಕಂಪೆನಿಗೆ ತನ್ನ ಹಕ್ಕನ್ನು ಮಾರಿದನು. ಮೊದಲಲ್ಲಿ ಹೆಚ್ಚು ಚಿನ್ನ ಸಿಕ್ಕಿದುದನ್ನು ಕಂಡು ಬೇರೆಬೇರೆ ಕಂಪನಿಯವರು ವಿಶೇಷ ಬಂಡವಾಳ ಹಾಕಿಕೊಂಡು ಬಂದರು. ಆದರೆ ಅವರು ಸ್ಥಳದ ಪರಿಶೋಧನೆಗೆ ಗಮನಕೊಡದೆ ತಮ್ಮ ದೇಶೀಯರಿಗೆ ಹೆಚ್ಚು ಸಂಬಳ ಕೊಟ್ಟು ಕರೆಸಿಕೊಳ್ಳುವುದರಲ್ಲೂ, ಸೊಗಸಾದ ಭವನಗಳನ್ನು ಕಟ್ಟುವುದರಲ್ಲೂ, ಕುಟ್ಟುವ ಯಂತ್ರಗಳನ್ನು ತರಿಸುವುದರಲ್ಲೂ ತಮ್ಮ ಬಂಡವಾಳವನ್ನೆಲ್ಲ ಕರಗಿಸಿದರು. ಇವರೇನುಮಾಡಿದರೂ ಕೆಳಗಿನಿಂದ ಚಿನ್ನ ಬೇರೆ ಬರಲಿಲ್ಲ. ತತ್ಫಲವಾಗಿ ಕಂಪನಿಗಳೆಲ್ಲವೂ ದಿವಾಳಿಯೆದ್ದುಹೋದುವು. ೧೮೮೭ರಲ್ಲಿ ಎಲ್ಲರೂ ಲಂಡನಿನಲ್ಲಿ ಸಭೆ ಸೇರಿ ಮುಂದೇನು ಮಾಡಬೇಕೆಂದು ಆಲೋಚನೆ ನಡೆಸಿದರು. ಗಣಿಗಳಲ್ಲಿ ಕೆಲಸ ಮಾಡಿ ಪರಿಶ್ರಮವಿದ್ದ ಕ್ಯಾಪ್ಟನ್ ಪ್ಲುಮರನು (Capt. Plumer) ಅಳಿದುಳಿದಿದ್ದ ಬಂಡವಾಳವನ್ನು ಖರ್ಚುಮಾಡಿ ನೋಡೋಣವೆಂದು ಹೇಳಿದಮೇಲೆ ಕೆಲಸವನ್ನು ಮುಂದುವರಿಸಬೇಕೆಂಬ ನಿರ್ಣಯವಾಯಿತು. ಪ್ಲುಮರನ ಅದೃಷ್ಟದಿಂದ ಮೊದಲಿನ ಹಳೆಯ ಗಣಿಗಳ ತಳದಲ್ಲಿ ಚಿನ್ನ ವಿಶೇಷವಾಗಿ ಸೇರಿದ್ದ ಛಾಂಪಿಯನ್ ಸಿರ (Champion Lode) ಸಿಕ್ಕಿತು. ಪ್ಲುಮರನ ಕಂಪನಿಗೆ ಬಂದ ಲಾಭದಿಂದ ಉತ್ತೇಜಿತರಾಗಿ ಮಿಕ್ಕ ಕಂಪನಿಯವರೂ ಬಂದು ಕೆಲಸಮಾಡಲು ತೊಡಗಿದರು. ಅಂದಿನಿಂದ ಇಂದಿನವರೆಗೂ ಗಣಿಗಳಲ್ಲಿ ಯಾವೊಂದು ತೊಂದರೆಯೂ ಇಲ್ಲದೆ ಸುಸೂತ್ರವಾಗಿ ಕೆಲಸ ನಡೆಯುತ್ತಿದೆ. ೧೯೦೨ರಲ್ಲಿ ವಿದ್ಯುತ್ತಿನ ಸಹಾಯವೂ ದೊರೆತು, ವೆಚ್ಚ ಕಡಿಮೆಯಾಗಿ, ಗಣಿಗಳು ಮತ್ತೂ ಅಭಿವೃದ್ಧಿಹೊಂದಲು ಕಾರಣವಾಯಿತು.

**ಭೂವಿನ್ಯಾಸ.** ಕೋಲಾರದ ಚಿನ್ನದ ಪ್ರದೇಶದಲ್ಲಿನ ಶಿಲಾಸಮುದಾಯಗಳ ರಚನೆ, ಅವುಗಳ ಹರವು ಮತ್ತು ಪರಸ್ಪರ ಸಂಬಂಧ ಇವೆಲ್ಲವನ್ನೂ ತೋರಿಸುವ ನಕ್ಷೆಯನ್ನು ಪಕ್ಕದಲ್ಲಿ ಕೊಟ್ಟಿದೆ. ಈ ಪ್ರದೇಶದ ಶಿಲೆಗಳೆಲ್ಲವನ್ನೂ ಪರೀಕ್ಷಿಸಿ, ಪರಿಶೋಧನೆಮಾಡಿ, ನಕ್ಷೆಯನ್ನು ಮೊದಲು ತಯಾರಿಸಿದ ಕೀರ್ತಿ ದಿವಂಗತರಾದ ಶ್ರೀಯುತ ಬೆಂಗಳೂರು ಜಯರಾಮರವರಿಗೆ ಸಲ್ಲತಕ್ಕದ್ದು. ಅವರು ತಯಾರಿಸಿದ ನಕ್ಷೆಯ ಆಧಾರದ ಮೇಲೆ ಇಲ್ಲಿ ಕೊಟ್ಟಿರುವ ನಕ್ಷೆಯನ್ನು ರಚಿಸಲಾಗಿದೆ.

ಧಾರವಾಡ ಪದರು ಶಿಲೆಯೆಂದು ನಾಮಕರಣ ಮಾಡಿರುವ ಶಿಲಾಸಮುದಾಯ

ಮೊದಲಿಗೆ ಏಕವಾಗಿದ್ದು ದಕ್ಷಿಣ ಖಂಡವನ್ನೆಲ್ಲ ಆಕ್ರಮಿಸಿಕೊಂಡಿತ್ತು. ಶಿಲೆಗಳು ರೂಪುಹೊಂದಿದನಂತರ ಕೆಳಗಿನಿಂದ ಉಕ್ಕಿಬಂದ ಗ್ರಾನೈಟುಗಳು ವಿಶಾಲವಾಗಿ ಹರಡಿದ್ದ ಧಾರವಾಡ ಶಿಲೆಗಳನ್ನು ತುಂಡರಿಸಿ, ದೂರ ದೂರ ಚೆದರಿಸಿಬಿಟ್ಟವು. ಹೀಗೆ ಚೆದರಿಹೋದ ಬೇರೆ ಬೇರೆ ಪದರು ಶಿಲಾವಲಯಗಳನ್ನು ನಕ್ಷೆಯಲ್ಲಿ ತೋರಿಸಿದೆ. (ನಕ್ಷೆ ೩) ಕೋಲಾರದ ಪದರು ಶಿಲಾವಲಯ ಇಂಥದೊಂದು ಹರಿದುಹೋಗಿ ಉಳಿದಿರುವ ತುಂಡು ಈ ಪದರು ಶಿಲೆಗಳನ್ನು ಉತ್ತರ ದಕ್ಷಿಣ ಸುಮಾರು ನಲವತ್ತು ಮೈಲಿಗಳು ಗುರುತಿಸಬಹುದು. ವಲಯದ ಸರಾಸರಿ ಅಗಲ ನಾಲ್ಕು ಮೈಲಿಗಳು, ಒಟ್ಟು ವಿಸ್ತೀರ್ಣ ಸುಮಾರು ೧೦೦ ಚದರ ಮೈಲಿಗಳು. ಕೋಲಾರ ಪದರು ಶಿಲಾವಲಯ ಕಿರಿದಾದರೂ ನಮ್ಮ ನಾಡಿನದೇ ಏಕೆ, ಒಟ್ಟು ಇಂಡಿಯಾದ ಚಿನ್ನವೆಲ್ಲ ಇಲ್ಲಿಂದಲೇ ಬರುವುದರಿಂದ, ಈ ವಲಯಕ್ಕೆ ಭೂಶಾಸ್ತ್ರಜ್ಞರು ವಿಶೇಷ ಪ್ರಾಶಸ್ತ್ಯ ಕೊಟ್ಟಿದಾರೆ.

ಹಾರನ್‌ಬ್ಲೆಂಡ್ ಪದರುಶಿಲೆಗಳೇ ವಲಯದ ಬಹುಭಾಗವನ್ನು ಆಕ್ರಮಿಸಿವೆ. ವಲಯದ ಪಶ್ಚಿಮ ಅಂಚಿನಲ್ಲಿ ಕಬ್ಬಿಣ ಸೇರಿರುವ ಬೆಳುಗಲ್ಲುಗಳ ಸಾಲುಗಳು ಹಲವಿವೆ. ಇವುಗಳ ಮೇಲೆಯೂ ಕೆಲವು ಹಳೆಯ ಗಣಿಗಳನ್ನು ತೋಡಿದ್ದಾರೆ. ಹಾರನ್ ಬ್ಲೆಂಡ್ ಪದರುಶಿಲೆಯ ಪೂರ್ವಕ್ಕೆ ಸಣ್ಣ ಸಣ್ಣ ಕಲ್ಲುಗುಂಡುಗಳನ್ನು ತೋರಿಸುವ ಒಂದರೊಡನೊಂದು ಕಲಸಿಕೊಂಡು ಸುಚ್ಚುಗುಚ್ಛಾದಂತಿರುವ ಕದಂಬ ಶಿಲೆಗಳು ಕಾಣುತ್ತವೆ.

**ಛಾಂಪಿಯನ್ ಸಿರ—ಅದರ ಮುಖ್ಯ ಲಕ್ಷಣಗಳು.** ಚಿನ್ನದ ಸಿರಗಳಿರುವ ದೃಷ್ಟಿಯಿಂದ ನಮಗೆ ಹಾರನ್‌ಬ್ಲೆಂಡ್ ಪದರು ಶಿಲೆಗಳೇ ಮುಖ್ಯ. ಈ ಶಿಲೆಗಳನ್ನು ಭೇದಿಸಿಕೊಂಡು ಬಂದಿರುವ ಬೆಣಚು ಕಲ್ಲಿನ ಸಿರಗಳ ಸಾಲುಗಳು ಹಲವಿವೆ. ಈ ಸಿರಗಳೆಲ್ಲದರಲ್ಲಿಯೂ ಚಿನ್ನವಿಲ್ಲ. ಇವುಗಳಲ್ಲೊಂದಾದ ಛಾಂಪಿಯನ್ ಸಿರ ಒಂದರಲ್ಲೇ ಚಿನ್ನ ವಿಶೇಷವಾಗಿ ಸೇರಿರುವುದು. ಪುರಾತನರು ಕೆಲಸಮಾಡಿದ್ದ ಹಳೆಯ ಗಣಿಗಳೆಲ್ಲವೂ ಈ ಛಾಂಪಿಯನ್ ಸಿರದ ಮೇಲೆಯೇ ಇದ್ದುದು. ಈಗ ಕೆಲಸ ನಡೆಯುತ್ತಿರುವ ಮುಖ್ಯ ಗಣಿಗಳಾದ, ಮೈಸೂರು, ಛಾಂಪಿಯನ್, ಉರಿಗಂ ಮತ್ತು ನಂದಿದುರ್ಗ ಗಣಿಗಳಿರುವುದಾದರೂ ಈ ಛಾಂಪಿಯನ್ ಸಿರದ ಮೇಲೆಯೇ. ಸುಮಾರು ನಾಲ್ಕು ಮೈಲಿಗಳಷ್ಟು ದೂರ ಈ ಸಿರವನ್ನು ಚೆನ್ನಾಗಿ ಗುರುತಿಸಬಹುದು. ಉತ್ತರಕ್ಕೆ ಎಂದರೆ ಬಾಲಘಾಟು ಗಣಿಗೂ ಆ ಕಡೆ ಸಿರ ಒಡೆದುಹೋಗುತ್ತದೆ. ಮೈಸೂರು ಗಣಿಯ ದಕ್ಷಿಣಕ್ಕೂ ಸಿರ ಸ್ಥಿರವಾಗಿ ಕಾಣುವುದಿಲ್ಲ. ದಕ್ಷಿಣದಲ್ಲಿ ಮೈಸೂರು ಗಣಿಯಿಂದ ಹಿಡಿದು ಉತ್ತರದಲ್ಲಿ ಬಾಲಘಾಟು ಗಣಿಯವರೆಗೆ, ಎಂದರೆ ಸುಮಾರು

ನಾಲ್ಕು ಮೈಲಿಗಳ ದೂರ ಸಿರವನ್ನು ಗುರುತಿಸಬಹುದು. ಈ ಉದ್ದಕ್ಕೂ ಸಿರದ ಸರಾಸರಿ ಅಗಲ ನಾಲ್ಕು ಅಡಿ. ಒಂದೊಂದು ಕಡೆ ಮಾತ್ರ ಸಿರ ಮಡಿಕೆಬಿದ್ದು ಅಗಲ ಹೆಚ್ಚಿದಂತೆ ಕಾಣುತ್ತದೆ. ಹೀಗೆ ಮಡಿಕೆಬಿದ್ದ ಪ್ರದೇಶದಳ್ಳಲ್ಲಿ ಚಿನ್ನ ವಿಶೇಷವಾಗಿ ಸೇರಿರುವುದಾಗಿ ತೋರುತ್ತದೆ. ಸಿರದ ಉದ್ದಕ್ಕೂ ಅಲ್ಲಲ್ಲೇ ಇಂಥ ಸಮೃದ್ಧಿಯಾದ ಪ್ರದೇಶಗಳು ಸಿಗುತ್ತವೆ. ಇದಕ್ಕೆ ಗಣಿಯವರು 'ಷೂಟ್' (shoot) — ಕುಡಿ, ಚಿಗುರು — ಎಂದು ಕರೆಯುತ್ತಾರೆ. ಇಂಥ ಎರಡು ಸಮೃದ್ಧಿಯಾದ ಪ್ರದೇಶಗಳ ನಡುವೆ ಬಂಜರು ಕಲ್ಲಿರುತ್ತದೆ. ಇದರಲ್ಲಿ ಚಿನ್ನವಿರುವುದಿಲ್ಲ; ಇದ್ದರೂ ತೀರ ಅಲ್ಪಪ್ರಮಾಣದಲ್ಲಿರುತ್ತದೆ. ಒಂದು ಸಮೃದ್ಧಿಯಾದ ಪ್ರದೇಶ ಬರಿದಾಗುವುದರೊಳಗಾಗಿ ಅಂಥದೇ ಮತ್ತೊಂದು ದೊರೆಯುವುದರಿಂದ ಗಣಿಯಲ್ಲಿನ ಕೆಲಸ ಸುಸೂತ್ರವಾಗಿ ನಡೆಯುತ್ತ ಹೋಗುತ್ತದೆ. ಛಾಂಪಿಯನ್ ಸಿರದ ಈ ಎಲ್ಲ ಲಕ್ಷಣಗಳು ಮೊದಲಿಗೆ ಗಣಿಗಳನ್ನು ತೋಡಿದ ಪುರಾತನರಿಗೆ ತಿಳಿದಿತ್ತೆಂದು ಕಾಣುತ್ತದೆ. ಅವರು ತೋಡಿದ ಅತಿ ಆಳವಾದ ಗಣಿ (ಸುಮಾರು ೨೬೦ ಅಡಿಗಳು) ಇಂಥದೊಂದು ಸಮೃದ್ಧಿಯಾದ ಪ್ರದೇಶದ ಮೇಲೆ ತೆಗೆದುದು. ಇದೇ ವಿಷಯವಾಗಿ ಪ್ರಪಂಚದ ಚಿನ್ನದ ಗಣಿಗಳ ಇತಿಹಾಸಕಾರನಾದ Maclaren ಪಂಡಿತನು ಹೀಗೆ ಬರೆಯುತ್ತಾನೆ: —

> 'The rich shoot of the Mysore Mine had been worked to a depth of 236 ft. by the ancients who had apparently grasped the intricacies of Kolar gold deposition. This great shoot had a stoping length of 800 ft. with a maximum width of 35 ft. . . . . and is certainly the most notable shoot in the history of gold mining.'

ಕೋಲಾರದ ಗಣಿ ನಮ್ಮ ಪಾಲಿಗೆ 'ದಿನದಿನದಲೆಂಟೆಂಟು ಭಾರದ ಕನಕ'ವನ್ನು ಕೊಡುವ ಸ್ಯಮಂತಕ ಮಣಿ. ಈ ಕನಕವನ್ನು ಪಡೆಯಲು ದಿನವೂ ಸುಮಾರು ೨೪,೦೦೦ ಜನರು ಕೆಲಸಮಾಡುತ್ತಾರೆ. ಇವರಲ್ಲಿ ಸುಮಾರು ೩೦೦ ಮಂದಿ ಯೂರೋಪಿಯನರು, ಮಿಕ್ಕವರೆಲ್ಲ ಭಾರತೀಯರು. ಇಷ್ಟೊಂದು ಜನ ಹಗಲಿರುಳೂ ಕೆಲಸಮಾಡಬೇಕಾದ ಅಗತ್ಯವಿರುವ ಈ ಗಣಿಗಳಲ್ಲಿನ ಕೆಲಸ ಎಷ್ಟು ಅಗಾಧ ಎನ್ನುವುದನ್ನು ಊಹಿಸಿಕೊಳ್ಳಬಹುದು.

ಚಿನ್ನ ಸೇರಿರುವುದು ಬೆಣಚುಕಲ್ಲಿನ ಸಿರಗಳಲ್ಲಷ್ಟೆ. ಈ ಸಿರಗಳ ಉದ್ದ ಹೆಚ್ಚು, ಅಗಲ ಕಡಿಮೆ; ಅಲ್ಲದೆ ಅವು ಬಹು ಆಳದವರೆಗೂ ಹಬ್ಬಿರುತ್ತವೆ. ಅದರಿಂದ ಚಿನ್ನ ಪಡೆಯಬೇಕಾದರೆ ಗಣಿ ಕೆಳಗೆ ಇಳಿಯುತ್ತ ಹೋಗಬೇಕು. ಪ್ರಪಂಚದ ಆಳವಾದ ಗಣಿಗಳೆಲ್ಲವೂ ಚಿನ್ನದ ಗಣಿಗಳೇ ಆಗಿರುವುದು ಈ ಕಾರಣದಿಂದಲೇ.

**ಗಣಿ ತೋಡುವ ರೀತಿ.** ಕೋಲಾರದ ಛಾಂಫಿಯನ್ ಸಿರ ಬಹು ಆಳದವರೆಗೂ ಕಂಡುಬರುತ್ತದೆ. ಭೂಮಿಯ ಮೇಲುಗಡೆ ಈ ಸಿರದ ಇಳಿವು (Dip) ಸುಮಾರು ೩೫°. ಕೆಳಗೆ ಇಳಿದಂತೆಲ್ಲಾ ಸಿರ ನೆಟ್ಟಗಾಗುತ್ತ ಬಂದು ತಳದ ಮಟ್ಟಗಳಲ್ಲಿ ಗೋಡೆ ನಿಂತಂತೆ ನಿಲ್ಲುತ್ತದೆ. ಚಿನ್ನದ ಅದಿರನ್ನು ಪಡೆಯುವುದಕ್ಕೆ ಸಿರದ ಮೇಲೆ ಮುಖ್ಯ ಕೂಪವನ್ನೂ, ಸಣ್ಣ ಸಣ್ಣ ಕೂಪಗಳನ್ನೂ ಇಳಿಸುತ್ತಾರೆ. ಇಂಥ ಎರಡು ಮೂರು ಕೂಪಗಳ ನಡುವೆ ಸುರಂಗಗಳನ್ನು ಕೊರೆದು ಒಂದಕ್ಕೊಂದು ಸಂಬಂಧ ಕಲ್ಪಿಸುತ್ತಾರೆ. ಸಾಮಾನ್ಯವಾಗಿ ನೂರಡಿಗೆ ಒಂದೊಂದು ಮಟ್ಟದಂತೆ ಮುಖ್ಯಕೂಪದ ಎರಡೂ ಪಕ್ಕಗಳಲ್ಲಿ ಸುರಂಗಗಳನ್ನು ಕೊರೆಯುತ್ತಾರೆ. ಹೀಗೆ ಕೊರೆದ ಮಟ್ಟಗಳು ಸಿರದ ಜಾಡನ್ನೇ ಅನುಸರಿಸಿ ಹೋಗುತ್ತವೆ. ಮುಖ್ಯ ಕೂಪಗಳು, ಸುರಂಗಗಳು ಮಟ್ಟಗಳು ಇವುಗಳನ್ನು ತೋರಿಸುವ ಚಿತ್ರವನ್ನಿಲ್ಲಿಕೊಟ್ಟಿದೆ (ಚಿತ್ರ ೪). ಒಂದೊಂದು ಮಟ್ಟದಿಂದ ಬಂದ ಚಿನ್ನದ ಕಲ್ಲೆಲ್ಲವೂ, ಮುಖ್ಯ ಕೂಪದ ಮಾರ್ಗವಾಗಿ ತೊಟ್ಟಿಲುಗಳಲ್ಲಿ ಮೇಲಕ್ಕೆ ಬರುತ್ತದೆ.

**ಗಣಿಗಳ ಆಳ, ಅಲ್ಲಿಯ ಉಷ್ಣಪ್ರಮಾಣ.** ಗಣಿಯ ಕೆಲಸದಲ್ಲಿ ಕಾರ್ಯಕುಶಲತೆಯಲ್ಲಿ, ನೈರ್ಮಲ್ಯದಲ್ಲಿ ಕೋಲಾರದ ಗಣಿಗಳು ಪ್ರಪಂಚದ ಗಣಿಗಳಲ್ಲೆಲ್ಲಾ ಮುಖ್ಯವಾದ ಸ್ಥಾನವನ್ನು ಪಡೆದುಕೊಂಡಿವೆ. ಭೂಮಟ್ಟದಿಂದ ೮,೬೦೦ ಅಡಿಗಳಿಗೂ ಮೀರಿ ಕೆಳಗಿಳಿದಿರುವ ಕೋಲಾರದ ಗಣಿಗಳು ಪ್ರಪಂಚದಲ್ಲೆಲ್ಲಾ ಅತಿ ಆಳವಾದ ಗಣಿಗಳಾಗಿವೆ. ಇಷ್ಟು ಆಳದಲ್ಲಿ ಕೆಲಸಮಾಡುವುದು ಬಹಳ ಕಷ್ಟ. ಆ ಆಳಗಳಲ್ಲಿ ಉಷ್ಣದ ಪ್ರಮಾಣವು ೧೩೪° F ಇರುತ್ತವೆಯೆಂದರೆ ಅಲ್ಲಿನ ಸ್ಥಿತಿಯನ್ನು ಊಹಿಸಿಕೊಳ್ಳಬಹುದು. ಈ ಉಷ್ಣವನ್ನು ಆದಷ್ಟು ಕಡಿಮೆಮಾಡುವುದಕ್ಕಾಗಿ ಮೇಲಿನಿಂದ ತಂಪಾದ ಗಾಳಿಯನ್ನು ಕೆಳಮಟ್ಟಗಳಿಗೆ ಕಳುಹಿಸುತ್ತಾರೆ. ಅಲ್ಲದೆ ವಿದ್ಯುತ್ ಬೀಸಣಿಗೆಗಳನ್ನು ಹಾಕಿ ಅಲ್ಲಿನ ಬೇಗೆಯನ್ನು ತಾಳಿಕೊಳ್ಳುವಂತೆ ಮಾಡಿದಾರೆ.

**ಗಣಿಗಳಲ್ಲುಂಟಾಗುವ ಕಲ್ಲುಸಿಡಿತಗಳು.** ಗಣಿಗಳ ಕೆಲಸದಲ್ಲಿ ಇನ್ನೊಂದು ಕಷ್ಟ ಬೆರೆತಿದೆ. ಗಣಿಗಳೊಳಗೆ ಕಲ್ಲು ಸಿಡಿಯಿತೆಂದೂ, ಅದರ ಪರಿಣಾಮವಾಗಿ ಪ್ರಾಣಹಾನಿಯಾಯಿತೆಂದೂ ಒಮ್ಮೊಮ್ಮೆ ಪತ್ರಿಕೆಗಳಲ್ಲಿ ವರದಿಗಳನ್ನು ನೋಡುತ್ತಿರುತ್ತೇವೆ. ಈ ಕಲ್ಲುಸಿಡಿತಗಳು ಏಕೆ ಆಗುವುವೆನ್ನುವುದನ್ನು ತಿಳಿಯುವುದು ಆವಶ್ಯಕ. ಭೂಮಿಯ ಒಳಗೆ ಆಳವಾಗಿ ಹೋದಂತೆಲ್ಲ ಉಷ್ಣ ಹೆಚ್ಚಿದಂತೆ ಕಲ್ಲುಗಳ ಮೇಲಿನ ಒತ್ತಡವೂ ಹೆಚ್ಚುತ್ತದೆ. ಗಣಿಗಳನ್ನು ಆಳ ಇಳಿಸುರಂಗಳನ್ನು ಕೊರೆದು ಹೇರಳವಾಗಿ ಕಲ್ಲೆಲ್ಲವನ್ನೂ ಮೇಲೆ ತೆಗೆದಾಗ ಗಣಿಯಲ್ಲಿನ ಕೆಲವು ಪ್ರದೇಶಗಳು ಟೊಳ್ಳಾಗುತ್ತವೆ.

---

M. Maclaren, 'Gold' The Mining Journal, 255 (1908).

ಸುರಂಗಗಳನ್ನು ಕೊರೆದು ಕಲ್ಲೆಲ್ಲವನ್ನೂ ತೆಗೆಯುವ ಮೊದಲು ಸಮನಾಗಿ ಪ್ರಸರಿಸಿದ್ದ ಒತ್ತಡ, ಅಲ್ಲಲ್ಲೆ ಟೊಳ್ಳುಪ್ರದೇಶಗಳು ಉಂಟಾದಾಗ ವ್ಯತ್ಯಾಸವಾಗುತ್ತದೆ. ಇದರ ಪರಿಣಾಮವಾಗಿ, ಗಣಿಯ ಗೋಡೆಗಳು ಧಡೀರನೆ ಉರುಳಿ, ಕೆಲವುವೇಳೆ ಗಣಿಯಲ್ಲಿ ಕೆಲಸ ನಡೆಯುತ್ತಿದ್ದ ಭಾಗಗಳು ಸಂಪೂರ್ಣವಾಗಿ ಮುಚ್ಚಿಹೋಗುತ್ತವೆ.

ಹೀಗೆ ಕಲ್ಲುಗಳು ಸಿಡಿದು ಗೋಡೆಗಳು ಉರುಳಿಬೀಳುವುದನ್ನು ಆದಷ್ಟುಮಟ್ಟಿಗೆ ತಪ್ಪಿಸಲು ಒಂದು ಮಾರ್ಗವಿದೆ. ಅದೇನೆಂದರೆ ಗಣಿಗಳಲ್ಲಿರುವ ಟೊಳ್ಳು ಪ್ರದೇಶಗಳನ್ನು ಕಡಿಮೆಮಾಡುವುದು. ಚಿನ್ನದ ಕಲ್ಲೆಲ್ಲವನ್ನೂ ತಗೆದುಕೊಂಡು ಬಂದು ಭಾಗವನ್ನು ಸಂಪೂರ್ಣವಾಗಿ ಬರಿದುಮಾಡಿದಮೇಲೆ, ಅಂಥ ಶೂನ್ಯಪ್ರದೇಶಗಳನ್ನು ಕಲ್ಲುಜಲ್ಲಿ, ಇಟ್ಟಿಗೆ, ಸಿಮೆಂಟು ಇವುಗಳಿಂದ ಭದ್ರಮಾಡುತ್ತಾರೆ. ಕೆಲಸಮಾಡುತ್ತಿರುವ ಪ್ರದೇಶಗಳನ್ನು ಸಹ ಮರದ ದಿಮ್ಮಿಗಳನ್ನು ಆಸರೆ ಕೊಡುವುದರಿಂದಲೊ, ಇಲ್ಲವೆ ಕಾಂಕ್ರೀಟು ಕಂಭಗಳನ್ನು ನಿಲ್ಲಿಸುವುದರಿಂದಲೊ ಭದ್ರಮಾಡುತ್ತಾರೆ. ಹೀಗೆ ಮಾಡುವುದರಿಂದ ವ್ಯತ್ಯಸ್ತವಾಗಿದ್ದ ಒತ್ತಡ ಮತ್ತೆ ಸಮವಾಗಿ ಪ್ರಸರಿಸುತ್ತದೆ. ಈ ಕಾರ್ಯಕ್ರಮಗಳನ್ನು ಕೈಕೊಂಡು ಕಲ್ಲುಸಿಡಿತಗಳನ್ನು ಆದಷ್ಟು ಕಡಿಮೆಮಾಡಲು ಗಣಿಯವರು ಪ್ರಯತ್ನಿಸುತ್ತಿದಾರೆ.

**ಕಲ್ಲಿನಿಂದ ಚಿನ್ನ ಪ್ರತ್ಯೇಕಿಸುವ ಬಗೆ.** ಗಣಿಯೊಳಗೆ ಸಿಡಿಮದ್ದಿನ ಸಹಾಯದಿಂದ ಕಿತ್ತ ಕಲ್ಲೆಲ್ಲವನ್ನೂ ಒಳಗೇ ದಪ್ಪ ದಪ್ಪ ಗುಂಡುಗಳಾಗಿ ಒಡೆದು ಕೂಪಗಳ ಮೂಲಕ ಮೇಲೆ ಕಳುಹಿಸುತ್ತಾರೆ. ಈ ಕಲ್ಲೆಲ್ಲವೂ ಕೂಪಮುಖದಲ್ಲಿರುವ ಜರಡಿಗಳ ಮೂಲಕ ಹಾಯುತ್ತವೆ. ಜರಡಿಗಳಿಂದ ಹಾದುಹೋಗುವ ಕಲ್ಲೆಲ್ಲವೂ ಸೋಸುವ ಸ್ಥಳಕ್ಕೆ (Sorting Station) ಹೋಗುತ್ತದೆ. ಅಲ್ಲಿ ಶೇಕಡ ೧೦ ರ ವರೆಗೆ ಕಳಪೆ ಕಲ್ಲೆಂದು (Waste rock) ತ್ಯಜಿಸಿಬಿಡುತ್ತಾರೆ. ಒಳ್ಳೆಯ ಕಲ್ಲೆಲ್ಲವೂ ಅಲ್ಲಿಂದ ಕುಟ್ಟುವ ಯಂತ್ರಕ್ಕೆ (Stamping Mill) ಹೋಗುತ್ತದೆ. ಈ ಯಂತ್ರಾಲಯದಲ್ಲಿ ಐದು ಐದು ಒನಕೆಗಳು ಒಟ್ಟುಗೂಡಿರುವಂಥ ಹಲವು ಬತೇರಿ (Battery) ಗಳಿವೆ. ಬತೇರಿಗಳಲ್ಲಿ ಸೇರಿರುವ ಒಂದೊಂದು ಒನಕೆಯೂ ಸುಮಾರು ೧,೩೦೦ ಪೌಂಡುಗಳು (ಎಂದರೆ ೫೪ ಮಣಗಳು) ತೂಕವಿರುತ್ತದೆ. ಕಲ್ಲು ಮಿಲ್ಲಿಗೆ ಬಂದಾಗ ಈ ಒನಕೆಗಳು ಒಂದಾದ ಮೇಲೆ ಒಂದು ಕಲ್ಲಿನ ಮೇಲೆ ಬೀಳುತ್ತವೆ. ಇದರ ಫಲವಾಗಿ ಕಲ್ಲೆಲ್ಲವೂ ಹಿಟ್ಟಿನಂತಾಗುತ್ತದೆ. ಈ ಹಿಟ್ಟಾದ ಕಲ್ಲೆಲ್ಲ ನೀರಿನ ಸಹಾಯದಿಂದ ಚದರ ಅಂಗುಲಕ್ಕೆ ಒಂಬತ್ತು ತೂತುಗಳಿರುವಂಥ ಜರಡಿಗಳ ಮೂಲಕ ಹಾದು, ಕಂಬಳಿ ಹಾಸಿರುವ ಇಳು ಮೇಜುಗಳ ಮೇಲೆ ಹರಿಯುತ್ತದೆ. ಚಿನ್ನ ತೂಕವಾಗಿರುವ ಕಾರಣ ಕಲ್ಲುಹಿಟ್ಟಿನಲ್ಲಿ ಸೇರಿರುವ ಚಿನ್ನವೆಲ್ಲ ಕಂಬಳಿಯ ಎಳೆಗಳಿಗೆ ಸಿಕ್ಕಿ ಅಲ್ಲಿಯೇ ಉಳಿಯುತ್ತದೆ. ಉಳಿದ

ಕಲ್ಲೆಲ್ಲವೂ ಇಳಿಮೇಜುಗಳಿಂದ ಕೆಳಗೆ ಜಾರುತ್ತದೆ. ಹೀಗೆ ಇಳಿಮೇಜುಗಳಿಂದ ಜಾರಿದ ಸಾಮಗ್ರಿಯೆಲ್ಲವನ್ನೂ ಮತ್ತೂ ಪುಡಿಮಾಡಿ, ಇನ್ನೊಂದು ಸಲ ಕಂಬಳಿಗಳ ಮೇಲೆ ಹಾಯಿಸುತ್ತಾರೆ. ಆಗ ಕಲ್ಲಿನಲ್ಲಿ ಉಳಿದಿರಬಹುದಾದ ಸ್ವಲ್ಪ ಚಿನ್ನ ಕೂಡ ಕಂಬಳಿಗಳಿಗೆ ಹತ್ತಿಕೊಳ್ಳುತ್ತದೆ. ಈ ರೀತಿಯಾಗಿ, ಕಲ್ಲಿನಲ್ಲಿ ಸೇರಿರುವ ಬಹುಭಾಗದ ಚಿನ್ನವನ್ನು ಕಂಬಳಿಗಳ ಮೂಲಕ ಹಾಯಿಸುವುದರಿಂದಲೇ (Blanketing Process) ಪಡೆಯುತ್ತಾರೆ. ಪ್ರಯೋಜನಕ್ಕೆ ಬಾರದ ಕಲ್ಲೆಲ್ಲವೂ ಹೋಗಿ ಉಳಿದ "ಸಾರ" (Concentrate) ಮಾತ್ರ ಕಂಬಳಿಗಳ ಮೇಲೆ ಉಳಿದಿರುತ್ತದೆ. ಈ ಸಾರವನ್ನು ಪಾದರಸದೊಂದಿಗೆ ಬೆರೆಸುತ್ತಾರೆ. ಚಿನ್ನವೆಲ್ಲ ಪಾದರಸದೊಂದಿಗೆ ಬೆರೆತು ಮಿಶ್ರಣ (Amalgam) ಆಗುತ್ತದೆ. ಈ ಮಿಶ್ರಣವನ್ನು ನಿಯತ ಕಾಲಕ್ಕೊಮ್ಮೆ ಕಂಬಳಿಗಳ ಮೇಲಿನಿಂದ ಹೆರೆದು, ಒಟ್ಟುಗೂಡಿಸಿ ಕೋವಿಗಳಲ್ಲಿಟ್ಟು ಕಾಯಿಸುತ್ತಾರೆ. ಆಗ ಪಾದರಸವೆಲ್ಲವೂ ಆವಿಯಾಗಿ ಹೋಗಿ ಸ್ಪಂಜಿನಂಥ ಚಿನ್ನ ಕೋವಿಯಲ್ಲಿ ಉಳಿಯುತ್ತದೆ. ಸ್ಪಂಜು ಚಿನ್ನವನ್ನು ಕರಗಿಸಿ, ಸ್ವಚ್ಛಮಾಡಿ, ಇಟ್ಟಿಗೆ ರೂಪದಲ್ಲಿ ಎರಕ ಹುಯ್ಯುತ್ತಾರೆ. ಈ ಇಟ್ಟಿಗೆಯಲ್ಲಿ ೯೩ ರಷ್ಟು ಭಾಗ ಚಿನ್ನ, ೬ ಭಾಗ ಬೆಳ್ಳಿ, ಮಿಕ್ಕ ಒಂದು ಭಾಗ ಇತರ ವಸ್ತುಗಳು ಸೇರಿರುತ್ತವೆ.

**ಸಯನೈಡ್ ವಿಧಾನ** (Cyanidation). ಕಂಬಳಿಗಳ ಮೇಲೆ ಎರಡನೆಯ ಬಾರಿ ಹಾದುಹೋದ ರೊಚ್ಚಿನಲ್ಲಿ ಬಹು ಸಣ್ಣ ಚಿನ್ನ ಸ್ವಲ್ಪ ಬೆರೆತಿರುತ್ತದೆ. ಅದನ್ನು ಸಯನೈಡ್ ವಿಧಾನದಿಂದ ಪಡೆಯುತ್ತಾರೆ. ಕಂಬಳಿಯಿಂದ ಹಾದುಬಂದ ರೊಚ್ಚೆಲ್ಲವನ್ನೂ ಮತ್ತೂ ದೂಳಾಗುವಂತೆ ಮಾಡಿ, ಎಲ್ಲವನ್ನೂ ದೊಡ್ಡ ಕಡಾಯಿಗಳಿಗೆ ಕಳುಹಿಸುತ್ತಾರೆ. ಈ ರೊಚ್ಚಿಗೆ ಸಾಕಾಗುವಷ್ಟು ಸೋಡಿಯಂ ಸಯನೈಡ್ (Sod. Cyanide) ದ್ರಾವಕವನ್ನು ಬೆರೆಸಿ, ಎಲ್ಲವನ್ನೂ ಚೆನ್ನಾಗಿ ಕಡೆಯುತ್ತಾರೆ. ಸುಮಾರು ೮ ರಿಂದ ೧೨ ಗಂಟೆಗಳ ಕಾಲ ಹೀಗೆ ಕಡೆದ ಮೇಲೆ ಚಿನ್ನವೆಲ್ಲವೂ ಸೋ. ಸಯನೈಡಿನೊಂದಿಗೆ ಬೆರೆತು ಚಿನ್ನದ ಸಯನೈಡಾಗುತ್ತದೆ. ಈ ಚಿನ್ನದ ಸಯನೈಡ್ ದ್ರಾವಕವೆಲ್ಲವನ್ನೂ ಸತುವು (Zinc) ತುಂಬಿದ ಪೆಟ್ಟಿಗೆಗಳಿಗೆ ಕಳುಹಿಸುತ್ತಾರೆ. ಅಲ್ಲಿ ಚಿನ್ನ ದ್ರಾವಕದಿಂದ ಬೇರೆಯಾಗಿ ಕೆಳಗೆ ತಂಗುತ್ತದೆ. ಹೀಗೆ ತಂಗಿದ ಚಿನ್ನವೆಲ್ಲವನ್ನೂ ಮೂಸೆಗಳಲ್ಲಿಟ್ಟು ಕಾಯಿಸಿ ಇಟ್ಟಿಗೆ ರೂಪಕ್ಕೆ ಎರಕ ಹುಯ್ಯುತ್ತಾರೆ. ಇವೇ ಚಿನ್ನದ ಗಟ್ಟಿಗಳು (Ingots).

ಈಗ ಕೆಲಸ ನಡೆಯುತ್ತಿರುವ ನಾಲ್ಕು ಮುಖ್ಯ ಗಣಿಗಳಲ್ಲೂ ಚಿನ್ನ ಪಡೆಯಲು ಮೇಲಿನ ವಿಧಾನವನ್ನೇ ಬಳಸುತ್ತಾರೆ. ಎಲ್ಲ ಗಣಿಗಳೂ ಒಟ್ಟು ಸೇರಿ ವರ್ಷ ಒಂದಕ್ಕೆ ಸರಾಸರಿ ೬೫೦,೦೦೦ ಟನ್ ಕಲ್ಲನ್ನು ಪುಡಿಮಾಡುತ್ತಾರೆ. ಇದರ ಫಲವಾಗಿ ಬರುವ ಚಿನ್ನ ಸುಮಾರು ೩,೨೦,೦೦೦ ಔನ್ಸುಗಳು (೮೦೦,೦೦೦ ತೊಲ ಬಂಗಾರ).

ಕೋಲಾರದ ಗಣಿಗಳಲ್ಲಿ ಭೂಮಿಯೊಳಗೆ ನಡೆದಿರುವ ಕೆಲಸ ಎಷ್ಟು ಅಗಾಧ ವಾದುದು ಎನ್ನುವುದನ್ನು ತಿಳಿಯಹೇಳುವುದು ಕಷ್ಟ. ಗಣಿಯ ಮೇಲ್ವಿಚಾರಕರು ಸಂಗ್ರಹಿಸಿರುವ ಈ ಕೆಲವು ಅಂಕಿ ಅಂಶಗಳು ಸ್ವಲ್ಪವಾದರೂ ಅಲ್ಲಿನ ಕೆಲಸದ ಪ್ರಮಾಣವನ್ನು ತಿಳಿಸಬಲ್ಲವು. ಭೂಮಿಯ ಒಳಗೆ ಚಿನ್ನದ ಜಾಡನ್ನೇ ಅನುಸರಿಸಿ ಕೊರೆದಿರುವ ಸುರಂಗಗಳ ಒಟ್ಟು ದೂರ ೫೧೯೧ ವೈಲಿ! ಇಳಿಸಿರುವ ಕೂಪಗಳ ಒಟ್ಟು ಆಳ ೩೪ ಮೈಲಿ! ಅತಿ ಆಳವಾಗಿ ಇಳಿದಿರುವ ಉರಿಗಂ ಗಣಿಯ ಆಳ ೮,೯೧೦ ಅಡಿಗಳಿಗೂ ಸ್ವಲ್ಪ ಹೆಚ್ಚು! ಎರಡು ಮೈಲಿಗಳಷ್ಟು ಇಳಿದಿರುವ ಒಂದೇ ಒಂದು ಕೂಪ ಬೇರೆ ಎಲ್ಲಿಯೂ ಇಲ್ಲ.

**ಚಿನ್ನದ ಉತ್ಪತ್ತಿಯ ವಿವರ.** ಕೋಲಾರದ ಗಣಿಗಳು ಸರಿಯಾಗಿ ಕೆಲಸ ವನ್ನು ಆರಂಭಿಸಿದಂದಿನಿಂದ, ಎಂದರೆ ೧೮೮೨ ರಿಂದ ಹಿಡಿದು ಈ ವರೆಗೆ, ಅರವತ್ತು ವರ್ಷದ ಅವಧಿಯಲ್ಲಿ (ಸುಮಾರು ೧೪೮ ಕೋಟಿ ರೂಪಾಯಿ ಬಾಳುವ) ೨೦೩.೭ ಲಕ್ಷ ಔನ್ಸು ಚಿನ್ನ ಉತ್ಪತ್ತಿಯಾಗಿದೆ. ಗಣಿ ಮೊದಲಾದಂದಿನಿಂದ ೧೯೪೦ ನೆ ಇಸವಿಯ ಕೊನೆಗೆ ಉತ್ಪತ್ತಿಯಾದ ಚಿನ್ನದ ಬೆಲೆ, ಅಷ್ಟು ಚಿನ್ನವನ್ನು ಪಡೆಯಲು ಗಣಿಯ ಒಡೆಯರಿಗೆ ತಗಲಿರುವ ಖರ್ಚು, ಅವರಿಗೆ ಬಂದ ಲಾಭ, ಷೇರುದಾರರಿಗೆ ಕೊಟ್ಟ ಡಿವಿಡೆಂಡುಗಳು ಮತ್ತು ಮೈಸೂರು ಸರಕಾರಕ್ಕೆ ಅವರು ಸಲ್ಲಿಸಿರುವ ರಾಜಾದಾಯ ಈ ಅಂಶಗಳನ್ನು ಸುಲಭವಾಗಿ ಗ್ರಹಿಸುವಂತೆ ಚಿತ್ರದಲ್ಲಿ ತೋರಿಸಿದೆ.[1] (ಚಿತ್ರ ೫೪).

ನೇರವಾಗಿ ಸರಕಾರಕ್ಕೆ ಸಲ್ಲುವ ರಾಜಾದಾಯವಲ್ಲದೆ ವಿದ್ಯುಚ್ಛಕ್ತಿ ಮತ್ತು ನೀರಿನ ಸರಬರಾಯಿಗಾಗಿ ಖರ್ಚು ಕಳೆದು ಸರಕಾರಕ್ಕೆ ೨೮,೧೫,೦೦೦ ರೂಪಾಯಿಗಳ ಆದಾಯವಿದೆ.

**ಅಧಿಕಬೆಲೆಯ ತೆರಿಗೆ.** ಈಚಿನ ಆರ್ಥಿಕ ಪರಿಸ್ಥಿತಿಯಿಂದ ಚಿನ್ನದ ಬೆಲೆ ಬಹಳವಾಗಿ ಏರಿಹೋಗಿರುವುದು ಸರಿಯಷ್ಟೆ. ಅಧಿಕವಾದ ಬೆಲೆಯಿಂದ ಗಣಿಯವರಿಗೆ ಸಲ್ಲುವ ಲಾಭದಲ್ಲಿ ಸರಕಾರಕ್ಕೂ ಒಂದಂಶ ಸೇರಬೇಕೆಂಬ ಉದ್ದೇಶದಿಂದ ಮೈಸೂರು ಸರಕಾರದವರು ೧೯೪೦ನೆಯ ಮಾರ್ಚಿ ತಿಂಗಳಲ್ಲಿ ಹೊಸತೊಂದು ಕಾನೂನನ್ನು ಜಾರಿಗೆ ತಂದರು. ಈ ಕಾನೂನಿನ ಪ್ರಕಾರ ಒಂದು ಔನ್ಸು ಎಂದರೆ ೨⅔ ತೊಲ ಬಂಗಾರದ ಬೆಲೆ ನೂರು ರೂಪಾಯಿಗಳಿಗೂ ಮೇಲೇರಿದರೆ ಆ ಮೀರಿದ ಭಾಗದಲ್ಲಿ ಶೇಕಡ ೭೫ರ ಭಾಗವನ್ನು ಗಣಿಯವರು ಸರಕಾರಕ್ಕೆ ಸಂದಾಯಮಾಡಬೇಕಾಗುತ್ತದೆ. ಈ ಅಧಿಕಬೆಲೆಯ ತೆರಿಗೆಯ ಕಾನೂನಿನ ಪ್ರಕಾರ ೧೯೪೨-೪೩ರ ಸಾಲಿನಲ್ಲಿ ಸರಕಾರಕ್ಕೆ ೧,೦೧,೭೭,೦೦೦ ರೂಪಾಯಿಗಳು ಸಂದಾಯವಾಯಿತು.

[1] *Chief Inspector of Explosives in Mysore, Report 1940-41*, 5, (1942).

**ಗಣಿಗಳಿಂದ ಸರಕಾರಕ್ಕಿರುವ ಆದಾಯ.** ಚಿನ್ನದ ಗಣಿಗಳಿಂದ ಸರಕಾರಕ್ಕೆ ನೇರವಾಗಿ ಬರುವ ಆದಾಯವನ್ನು ಈ ಕೆಳಗಿನ ಪಟ್ಟಿಯಲ್ಲಿ ಕಾಣಿಸಿದೆ*:—

| | |
|---|---|
| ರಾಜಾದಾಯ .... | ೧೭,೨೩,೦೦೦ ರೂಪಾಯಿಗಳು |
| ಅಧಿಕಬೆಲೆಯ ಸುಂಕದ ಕಾನೂನಿನ ಪ್ರಕಾರ ಸಂದ ಮೊಬಲಗು .... | ೧,೦೧,೭೭,೦೦೦ ,, |
| ವಿದ್ಯುಚ್ಛಕ್ತಿಯ ಸರಬರಾಜಿಗೆ (ಖರ್ಚು ಕಳೆದು) .... | ೨೬,೬೫,೦೦೦ ,, |
| ನೀರಿನ ಸರಬರಾಜಿಗಾಗಿ (ಖರ್ಚು ಕಳೆದು) | ೧,೫೦,೦೦೦ ,, |
| ಆದಾಯದ ತೆರಿಗೆಗಳ ಮೂಲಕ .... | ೧೯,೫೯,೦೦೦ ,, |
| ಒಟ್ಟು .... | ೧,೬೬,೭೪,೦೦೦ ರೂಪಾಯಿಗಳು |

**ಕೋಲಾರದ ಗಣಿಯ ಆಯುಸ್ಸು.** ನಮ್ಮ ದೇಶಕ್ಕೆ ಇಷ್ಟು ಹೆಚ್ಚಿನ ಲಾಭವನ್ನೂ ಸಾವಿರಾರು ಮಂದಿಗೆ ಜೀವನಸೌಕರ್ಯವನ್ನೂ ಕೊಡುವ ಈ ಚಿನ್ನದ ಕೈಗಾರಿಕೆ ಹೀಗೆಯೇ ಇನ್ನೆಷ್ಟು ವರ್ಷಗಳ ಕಾಲ ಮುಂದುವರಿದೀತು ಎನ್ನುವ ಅಂದಾಜನ್ನು ಕೊಡುವುದು ಸೂಕ್ತವಾಗಿ ಕಾಣುತ್ತದೆ.

ಧಾರವಾಡ ಪದರುಶಿಲೆಗಳಲ್ಲಿ ಕಂಡುಬರುವ ಬೆಣಚಿನ ಸಿರಗಳಲ್ಲಿ ಮಾತ್ರ ಚಿನ್ನವಿರುವುದೆನ್ನುವುದನ್ನು ಹಿಂದೆಯೇ ನಾವು ತಿಳಿದೆವು. ಆದುದರಿಂದ ಧಾರವಾಡ ಶಿಲೆಗಳು ಯಾವ ಕೆಳಮಟ್ಟದವರೆಗೂ ಕಂಡುಬರುವುವೋ ಅಲ್ಲಿಯವರೆಗೂ ಚಿನ್ನ ಸೇರಿರುವ ಬೆಣಚಿನ ಸಿರಗಳೂ ಇಳಿಯುವುವೆಂದು ಅಂದಾಜುಮಾಡಬಹುದು. ಮೇಲಿನ ಶಿಲೆಗಳ ವಿನ್ಯಾಸದಿಂದ ಈ ಕೆಳಮಟ್ಟ ಹದಿನೇಳು ಹದಿನೆಂಟುಸಾವಿರ ಅಡಿಗಳಿಗೂ ಈಚೆಗೆ ಸಿಗಲಾರದೆಂದು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ.[1] ಹೆಚ್ಚೆಂದರೆ ಈಗ ಇಳಿದಿರುವ ಆಳವಾದ ಗಣಿಯ ಆಳ ೯,೦೦೦ ಅಡಿಗಳು ಅಂದಮೇಲೆ ಇನ್ನು ೯,೦೦೦ ಅಡಿಗಳವರೆಗೆ ಚಿನ್ನದ ಸಿರ ಕಂಡುಬರುವುದೆಂದು ಊಹಿಸಲವಕಾಶವಿದೆ. ಆದರೆ ಗಣಿಯ ಒಡೆಯರ ಮುಂದಿರುವ ಪ್ರಶ್ನೆ ಎಷ್ಟು ಆಳದವರೆಗೆ ಚಿನ್ನ ಸಿಕ್ಕೀತು ಎನ್ನುವುದಲ್ಲ; ಯಾವ ಕೆಳಮಟ್ಟದವರೆಗೆ ತಾವು ಲಾಭದಾಯಕವಾಗಿ ಕೆಲಸ

* ೧೯೪೨-೪೩ ರ ಬಡ್ಜೆಟ್ ವರದಿಯಿಂದ ಸಂಗ್ರಹಿಸಿದ್ದು.

[1] B. Rama Rao, 'Mineral deposits of Mysore'—Geo. Mining and *Metallurgical Society of India*, Presidential Address, 1942.

ಮಾಡಲು ಸಾಧ್ಯ ಎನ್ನುವುದು. ಆಳ ಇಳಿದಂತೆಲ್ಲ ಉಷ್ಣ ಹೆಚ್ಚುತ್ತದೆ. ಈಗ ಮುಟ್ಟಿರುವ ಆಳದಲ್ಲೇ ಉಷ್ಣ ಅತ್ಯಧಿಕವಾಗಿದೆ. ಅದನ್ನು ನಿವಾರಿಸಲು ಮೇಲಿನಿಂದ ತಣ್ಣನೆ ಗಾಳಿಯನ್ನು ಕಳುಹಿಸಿ ಬೇಗೆಯನ್ನು ತಾಳಿಕೊಳ್ಳುವಂತೆ ಮಾಡಿದಾರೆ. ಹೀಗೆ ಕೆಳಮಟ್ಟಗಳಲ್ಲಿನ ಅಧಿಕ ಉಷ್ಣವನ್ನು ಹತೋಟಿಗೆ ತಂದುಕೊಂಡು ಆ ಆಳಗಳಲ್ಲಿಯೂ ಗಾಳಿ ಆಡುವಂತೆ ಮಾಡಿದರೆ ಇನ್ನೂ ಹೆಚ್ಚಿನ ಆಳಗಳಿಗೆ ಹೋಗುವುದು ಸಾಧ್ಯವಾಗುತ್ತದೆ.

ಚಿನ್ನದ ಬೆಲೆ ಈಗ ಬಹುಮಟ್ಟಿಗೆ ಏರಿದೆಯಾದ್ದರಿಂದ ಈಗ ಒಂದು ಟನ್ ಕಲ್ಲಿನಲ್ಲಿ ನಾಲ್ಕು-ಐದು ಪೆನಿವೇಟುಗಳ ಪ್ರಮಾಣದಲ್ಲಿ ಸೇರಿದ್ದರೂ ಅದನ್ನು ಲಾಭಕರವಾಗಿ ಪಡೆಯಲು ಸಾಧ್ಯವಾಗಿದೆ. ಇದೆಲ್ಲವನ್ನೂ ಪರಿಶೀಲಿಸಿಯೇ ಗಣಿಯನ್ನು ನಡೆಸುವ ಕಂಪನಿಯವರು ೧೯೪೦ರಲ್ಲಿ ಮತ್ತೆ ಮುವ್ವತ್ತು ವರ್ಷ ಎಂದರೆ ೧೯೭೦ರ ವರೆಗೆ ಕೆಲಸಮಾಡಲು ರಹದಾರಿಯನ್ನು ಮೈಸೂರು ಸರಕಾರದಿಂದ ಪಡೆದರು.

## ದೇಶದ ಇತರ ಚಿನ್ನದ ಪ್ರದೇಶಗಳು

ಚಿನ್ನವೇನೋ ದೇಶದಲ್ಲೆಲ್ಲ ಹರಡಿದೆ. ಪ್ರತಿಜಿಲ್ಲೆಯಲ್ಲಿಯೂ ಅಲ್ಲೊಂದು ಇಲ್ಲೊಂದರಂತೆ ಹಳೆಯ ಗಣಿಗಳು ಕಂಡುಬರುತ್ತವೆ. ಈ ಹಳೆಯ ಗಣಿಗಳ ಶೋಧನೆ ಮುವ್ವತ್ತು ವರ್ಷಗಳ ಕೆಳಗೆ ನಡೆಯಿತು. ೧೯೦೦ ರಿಂದ ಹಿಡಿದು ೧೯೧೫ ರ ವರೆಗೆ ಒಂದಲ್ಲ ಒಂದು ಕಡೆ ಶೋಧನಕಾರ್ಯ ಮುಂದುವರಿಯಿತು. ಆಗ ನಡೆದ ಕೆಲಸಗಳ ವಿವರ ಭೂಶೋಧನಾ ಇಲಾಖೆಯ ಡೈರೆಕ್ಟರವರ ವರದಿಗಳಲ್ಲಿಯೂ, ಮೈಸೂರು ದೇಶದ ಗಣಿಗಳ ಮುಖ್ಯ ಮೇಲ್ವಿಚಾರಕರ ವರದಿಗಳಲ್ಲಿಯೂ ದೊರೆಯುತ್ತದೆ.

ನಮ್ಮ ದೇಶದ ಮುಖ್ಯಾಮುಖ್ಯವಾದ ಹಳೆಯ ಗಣಿಗಳ ಪರಿಚಯವನ್ನೂ ಅವುಗಳಲ್ಲಿ ಈ ವರೆಗೆ ನಡೆದಿರುವ ಶೋಧಸ ಕಾರ್ಯಗಳ ವಿವರವನ್ನೂ ಸಂಕ್ಷೇಪವಾಗಿ ಇಲ್ಲಿ ಕೊಟ್ಟಿದೆ.

**ಹೊನ್ನಾಳಿ ಚಿನ್ನದ ಪ್ರದೇಶ.** ಶಿವಮೊಗ್ಗ ಜಿಲ್ಲೆಗೆ ಸೇರಿರುವ ಹೊನ್ನಾಳಿ ತಾಲೂಕು ಹೆಸರೇ ಸೂಚಿಸುವಂತೆ ಚಿನ್ನದ ನೆಲೆ. ಹೊನ್ನಾಳಿಗೆ ಪಶ್ಚಿಮಕ್ಕಿರುವ ನ್ಯಾಮತಿ, ಕುದುರೆಕೊಂಡ, ಪಲವನಹಳ್ಳಿ ಗ್ರಾಮಗಳ ಸುತ್ತಮುತ್ತಲಿನ ಹಳ್ಳಗಳ ಮಣ್ಣಿನಲ್ಲೆಲ್ಲ ಸಣ್ಣ ಚಿನ್ನ ಬೆರೆತಿದೆ. ಗ್ರಾಮಸ್ಥರು ಮಳೆಗಾಲದ ದಿವಸಗಳಲ್ಲಿ ಮಣ್ಣು ತೊಳೆದು ಚಿನ್ನವನ್ನು ಪಡೆಯುತ್ತಾರೆ. ಹಿಂದೆ ಹೆಚ್ಚಾಗಿಯೇ ಈ ರೀತಿ ಚಿನ್ನವನ್ನು ಪಡೆಯುತ್ತಿದ್ದರೆಂದು ತೋರುತ್ತದೆ. ಈಚೆಗೆ ಈ ಕಸಬಿನವರು ಕಡಿಮೆಯಾಗಿದಾರೆ. ಇರುವ ಕೆಲವರೂ ಸಹ ವ್ಯವಸಾಯದೊಂದಿಗೆ ಮಣ್ಣು ಜಾಲಿಸು

ವುದನ್ನು ಅಭ್ಯಾಸಮಾಡಿರುವರೇ ಹೊರತು ಅದನ್ನೂ ಮೊದಲಿನಂತೆ ಮುಖ್ಯ ಕಸಬನ್ನಾಗಿ ಇಟ್ಟುಕೊಂಡವರಲ್ಲ. ಮಣ್ಣಿನಿಂದ ಜಾಲಿಸಿ ಪಡೆದ ಬಂಗಾರವೆಲ್ಲವೂ ಸ್ಥಳದ ಅಕ್ಕಸಾಲಿಗರ ಕೈಸೇರುವುದರಿಂದ, ಈ ಬಯಲಿನಿಂದ ಎಷ್ಟು ಬಂಗಾರ ಉತ್ಪತ್ತಿಯಾಯಿತೆನ್ನುವ ಲೆಕ್ಕ ಸಿಕ್ಕುವುದಿಲ್ಲ.

ಮಣ್ಣಿನಲ್ಲಿ ಹೆಚ್ಚಿನ ಬಂಗಾರ ಸೇರಿರಬೇಕಾದರೆ ಹತ್ತಿರದಲ್ಲಿಯೇ ಮೂಲ ಬಂಗಾರದ ನೆಲೆಯಾದ ಬೆಣಚು ಕಲ್ಲಿನ ಸಿರಗಳು ಇರಬೇಕಷ್ಟೆ. ಬೆಣಚುಕಲ್ಲಿನ ಸಿರಗಳು ಕುದುರೆಕೊಂಡ, ನ್ಯಾಮತಿ ಮತ್ತು ಪಲವನಹಳ್ಳಿಗಳ ಸುತ್ತ ಕಂಡುಬರುತ್ತವೆ. ಅಲ್ಲಲ್ಲೇ ಪುರಾತನರು ಕೆಲಸಮಾಡಿ ಕೈಬಿಟ್ಟ ಹಳೆಯ ಗಣಿಗಳೂ ಇವೆ. ಚಿನ್ನವನ್ನು ಹುಡುಕಲು ಬಂದ ಇಂಗ್ಲಿಷರ ಗಮನ ಈ ಕಡೆ ಬಿದ್ದುದು ೧೮೮೦ ರಲ್ಲಿ. ಮಣ್ಣಿನಲ್ಲಿ ವಿಶೇಷವಾಗಿ ಚಿನ್ನ ಸೇರಿದುದನ್ನು ಕಂಡು ಉತ್ತೇಜಿತರಾಗಿ ಕುದುರೆಕೊಂಡದ ಸಮೀಪದಲ್ಲಿ ಕೆಲಸವನ್ನಾರಂಭಿಸಿದರು. ಮೊದಮೊದಲು ವಿಶೇಷವಾಗಿಯೇ ಚಿನ್ನ ದೊರೆಯಿತು. ಆದರೆ ಬರಬರುತ್ತ ಚಿನ್ನದ ಸಿರ ಕೆಳಗೆ ಇಳಿದಂತೆ ಕಿರಿದಾಗುತ್ತ ಹೋದುದರಿಂದಲೂ, ಕೆಲಸವನ್ನು ಮುಂದುವರಿಸಲು ಬಂಡವಾಳ ದೊರೆಯದೆ ಹೋದುದರಿಂದಲೂ, ಕಳೆದ ಮಹಾ ಯುದ್ಧದ ಹೊತ್ತಿಗೆ ಸರಿಯಾಗಿ ಗಣಿಗಳಲ್ಲಿನ ಕೆಲಸ ಒಮ್ಮೆಗೇ ನಿಂತುಹೋಯಿತು. ಈ ಪ್ರಾಂತದ ದಕ್ಷಿಣಕ್ಕಿರುವ ಪಲವನಹಳ್ಳಿಯ ಹತ್ತಿರ ನಡೆಯುತ್ತಿದ್ದ ಕೆಲಸವೂ ಇದೇ ಸುಮಾರಿಗೆ ನಿಂತುಹೋಯಿತು. ಬಹುಕಾಲದಿಂದ ಕೆಲಸ ನಿಂತುಹೋಗಿರುವ ಈ ಗಣಿಗಳಿಂದ ಚಿನ್ನವನ್ನು ಲಾಭದಾಯಕವಾಗಿ ಪಡೆಯಬಹುದೇ ಇಲ್ಲವೆ ಎಂದು ತಿಳಿಯಲು ಇನ್ನೂ ಹೆಚ್ಚಿನ ಶೋಧನೆ ನಡೆಯಬೇಕಾಗಿದೆ.

**ಪಲವನಹಳ್ಳಿಯ ಸುತ್ತ ನಡೆದ ಕೆಲಸ.** ಎರಡು ವರ್ಷಕ್ಕೆ ಹಿಂದೆ ಇದೇ ಪ್ರಾಂತದಲ್ಲಿ ನಾಲ್ಕೂವರೆ ಸೇರು ಚಿನ್ನ ಬೆರೆತಿರುವ ಒಂದು ಚಿನ್ನದ ಕಲ್ಲು ದೊರೆಯಿತು. ದೊರೆತ ಕಲ್ಲು ಹುಟ್ಟುಕಲ್ಲಲ್ಲ; ಹತ್ತಿರ ಎಲ್ಲಿಂದಲೋ ಉರುಟಿಕೊಂಡು ಬಂದ ಚೂರು ಕಲ್ಲು ಮಾತ್ರ. ಪಲವನಹಳ್ಳಿಯ ಹತ್ತಿರ ಹಳ್ಳದ ಮಣ್ಣನ್ನು ಜಾಲಿಸುತ್ತಿದ್ದಾಗ ಸಿಕ್ಕಿದ ಕಲ್ಲು ಇದು. ಇದರ ನೆಲೆಯನ್ನು ಪತ್ತೆಮಾಡಲು ಸರ್ಕಾರದವರು ಸ್ಥಳ ಶೋಧನೆಗಾಗಿ ೫೦,೦೦೦ ರೂಪಾಯಿಗಳನ್ನು ಮೀಸಲಾಗಿಟ್ಟರು. ಶೋಧನಕಾರ್ಯವೂ ಮುಂದುವರಿಯಿತು. ಆದರೆ ಕಾರ್ಯಾರಂಭದಲ್ಲಿಯೇ ಯುದ್ಧದ ಮೋಡ ಕವಿದು, ದೂರದೇಶದಿಂದ ಬರಬೇಕಾದ ಯಂತ್ರಸಾಧನಗಳೊದಗದೆ ಹೋಗಿ ಕೆಲಸವನ್ನು ಅನಿವಾರ್ಯವಾಗಿ ನಿಲ್ಲಿಸಬೇಕಾಗಿ ಬಂತು. ಯುದ್ಧಾನಂತರದಲ್ಲಿ ಈ ಬಯಲಿನಲ್ಲಿ ಹೆಚ್ಚಿನ ಶೋಧನೆಗಳನ್ನು ನಡೆಸಲು ಸಾಧ್ಯವಾದೀತು.

**ತುಂಗಭದ್ರೆ ಮತ್ತು ಅದರ ಉಪನದಿಗಳ ಮೆಕ್ಕಲಿನಲ್ಲಿ ಚಿನ್ನ.** ಬೆಣಚು ಕಲ್ಲಿನ ಸಿರಗಳಲ್ಲಿ ಸೇರಿರುವ ಮೂಲಚಿನ್ನವೇ ಅಲ್ಲದೆ ಹೊನ್ನಾಳಿ ಚಿನ್ನದ ಪ್ರದೇಶದಲ್ಲಿ ಹರಿಯುವ ತುಂಗಭದ್ರೆ ಮತ್ತು ಅದರ ಉಪನದಿಗಳ ಮೆಕ್ಕಲು ಮಣ್ಣಿನಲ್ಲಿಯೂ ಚಿನ್ನ ಬೆರೆತಿರುತ್ತದೆ. ಮೆಕ್ಕಲು ಮಣ್ಣಿನಲ್ಲಿ ಸೇರಿರುವ ಚಿನ್ನದ ಪ್ರಮಾಣ ಎಷ್ಟಿರ ಬಹುದೆನ್ನುವುದನ್ನು ತಿಳಿಯಲು ಕಳೆದ ಕೆಲವು ವರ್ಷಗಳಿಂದ ಶೋಧನೆ ನಡೆಯುತ್ತಾ ಇದೆ. ನಮ್ಮ ನದಿಗಳ ಮೆಕ್ಕಲಿನಲ್ಲಿ ಚಿನ್ನ ಹೆಚ್ಚು ಸೇರುವುದಕ್ಕೆ ವಾತಾವರಣ ಸರಿಯಾಗಿಲ್ಲವೆನ್ನುವುದನ್ನು ಹಿಂದೆಯೇ ತಿಳಿಸಲಾಯಿತು. ಹೊಳಲೂರು, ನಾಗ ಸಮುದ್ರ, ಅನ್ವೇರಿ, ಮಳಲಿ, ಗೋವಿನಕೋವಿ, ಈ ಪ್ರದೇಶಗಳಲ್ಲಿ ತುಂಗಭದ್ರಾ ತೀರದ ಮರಳನ್ನು ತೊಳೆದು ನೋಡಲಾಯಿತು.[1] ಕುದುರೆಕೊಂಡ, ಪಲವನಹಳ್ಳಿಯ ಸುತ್ತಲಿನ ಹಳ್ಳಿಗಳ ಮಣ್ಣನ್ನೂ ಜಾಲಿಸಿ ನೋಡಿಯಾಯಿತು.[2] ಆದರೆ ಎಲ್ಲಿಯೂ ದೊಡ್ಡ ಕೈಗಾರಿಕೆಯನ್ನು ಸ್ಥಾಪಿಸುವಷ್ಟು ಹಿರಿದಾದ ನಿಕ್ಷೇಪಗಳು ದೊರೆಯಲಿಲ್ಲ. ಒಂದು ಗಜ ಮಣ್ಣನ್ನು ತೊಳೆದರೆ ಸರಾಸರಿ ಎರಡು ಗುಂಜಿಗಳಿಗೆ ಮೇಲೆ ಬಂಗಾರ ದೊರೆಯದೆ ಹೋಯಿತು. ದೊಡ್ಡದಾಗಿ ಕೈಗಾರಿಕೆ ಸ್ಥಾಪಿಸಲು ಉತ್ತೇಜನ ಸಾಲದಿದ್ದರೂ ಸಣ್ಣ ರೀತಿಯಲ್ಲಿ ಗ್ರಾಮ ಕೈಗಾರಿಕೆಯನ್ನು ಸ್ಥಾಪಿಸಬಹುದಾಗಿದೆ. ಇದೇ ಉದ್ದೇಶವಾಗಿ ಮುಂದೆಯೂ ಶೋಧನೆಗಳು ನಡೆಯಬೇಕಾಗಿವೆ.

## ಶಿವಮೊಗ್ಗ ಜಿಲ್ಲೆಯಲ್ಲಿನ ಹಳೆಯ ಗಣಿಗಳು

**ಶಿವಮೊಗ್ಗ ಜಿಲ್ಲೆ**ಯಲ್ಲಿ, ಹೊನ್ನಾಳಿ ಪ್ರದೇಶವನ್ನು ಬಿಟ್ಟರೆ ಹಳೆಯ ಗಣಿಗಳು ತರೀಕೆರೆ, ಭದ್ರಾವತಿಯ ಸುತ್ತ ವಿಶೇಷವಾಗಿ ಕಾಣುತ್ತವೆ. ಇಲ್ಲೆಲ್ಲಾ ಬಹು ಕಡೆ ಕಾಡು ಬೆಳೆದುಹೋಗಿರುವುದರಿಂದ ಗಣಿಗಳ ನೆಲೆಯೇ ಸಿಕ್ಕದಂತಾಗಿದೆ. ಮುಖ್ಯವಾದ ಹಳೆಯ ಗಣಿಗಳು ಭದ್ರಾವತಿಯ ದಕ್ಷಿಣಕ್ಕಿರುವ ಹೊನ್ನೆಹಟ್ಟಿ, ಜಲಗಾರಗುಂಡಿ, ತಮ್ಮಡಿಹಳ್ಳಿಗಳ ಹತ್ತಿರವೂ, ತರೀಕೆರೆಯ ದಕ್ಷಿಣಕ್ಕಿರುವ ಸಿದ್ದರ ಹಳ್ಳಿ, ನಂದಿಹೊಸಳ್ಳಿಯ ಹತ್ತಿರವೂ ಇವೆ.

## ಚಿತ್ರದುರ್ಗ ಜಿಲ್ಲೆಯಲ್ಲಿನ ಹಳೆಯ ಗಣಿಗಳು

**ಚಿತ್ರದುರ್ಗ ಜಿಲ್ಲೆ**ಯಲ್ಲಿ, ಹಳೆಯ ಗಣಿಗಳು, ದುರ್ಗದ ಉತ್ತರಕ್ಕಿರುವ ಗೋಣೂರು, ಕೋಟೆಮರಡಿ, ಮಾರಿಕಣಿವೆಗೆ ಏಳು ಮೈಲಿ ದೂರದಲ್ಲಿರುವ ಬೋಡಿ

[1] S. Lakshmana Rao. Gold bearing alluvium in the Tungabhadra and its tributaries in the Shimoga and Honnali taluks. Rec. Mys. Geo. Dept. XXXV, 33-47.

[2] B. P. Radhakrishna. Ibid, XXXIX 166-179 (1941).

ಮರಡಿ, ಇಪ್ಪಾರ ಗುಡ್ಡಗಳು, ಜಾವಗೊಂಡನಹಳ್ಳಿ ಹತ್ತಿರವಿರುವ ಅಜ್ಜನಹಳ್ಳಿ, ಏಂಡಿವಾರ ಈ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇಲ್ಲಿ ಹೆಸರಿಸಿರುವ ಯಾವ ಪ್ರದೇಶದಲ್ಲಿಯೂ ಸಹ ಹೆಚ್ಚಿನ ಕೆಲಸ ನಡೆದಿರುವುದು ಕಂಡುಬಂದಿಲ್ಲ. ಎಲ್ಲ ಕಡೆಯೂ ಮೇಲೆ ಮೇಲೆ ದೊರೆತ ಬಂಗಾರದ ಕಲ್ಲನ್ನು ಮಾತ್ರ ತೆಗೆದಂತೆ ಕಾಣುತ್ತದೆ. ಈಗ ಉಳಿದಿರುವುದು ಬರಿಯ ಬಂಜರುಕಲ್ಲು, ಇಲ್ಲವೆ ತೀರ ಅಲ್ಪಪ್ರಮಾಣದಲ್ಲಿ ಚಿನ್ನ ಸೇರಿರುವ ಬೆಣಚು.

## ತುಮುಕೂರು ಜಿಲ್ಲೆಯಲ್ಲಿನ ಹಳೆಯ ಗಣಿಗಳು

**ತುಮುಕೂರು ಜಿಲ್ಲೆ**ಯಲ್ಲಿ ಮುಖ್ಯವಾದ ಗಣಿ ಬೆಳ್ಳಾರದ ಹತ್ತಿರವಿದೆ. ಬುಕ್ಕಾಪಟ್ಟಣದಿಂದ ಹುಳಿಯಾರಿಗೆ ಹೋಗುವ ರಸ್ತೆಯಲ್ಲಿ ಬೆಳ್ಳಾರ ಸಿಗುತ್ತದೆ. ಈ ಊರಿನ ಉತ್ತರಕ್ಕಿರುವ ಸಣ್ಣ ಗುಡ್ಡಗಳಲ್ಲೇ ಮುಖ್ಯವಾದ ಹಳೆಯ ಗಣಿಗಳಿರುವುದು. ೧೯೦೦ ಇಸವಿಯ ಸುಮಾರಿಗೆ ಈ ಪ್ರದೇಶದಲ್ಲಿ ವಿಶೇಷ ಕೆಲಸ ನಡೆಯಿತು. ಇಲ್ಲಿನ ಮುಖ್ಯಕೂಪ ನಾನ್ನೂರು ಅಡಿಗೂ ಕೆಳಗೆ ಇಳಿದಿದೆ. ಇಲ್ಲಿನ ಬೆಣಚುಕಲ್ಲಿನಲ್ಲಿ ಚಿನ್ನ ಹೆಚ್ಚು ಪ್ರಮಾಣದಲ್ಲಿ ಸೇರಿದ್ದರೂ, ಸಿರದ ಅಗಲ ಹೆಚ್ಚಿರಲಿಲ್ಲ. ಅಲ್ಲದೆ ಬೆಣಚಿನ ಸಿರ ಕೆಳಗೆ ಇಳಿದಂತೆ ಕಿರಿದಾಗುತ್ತ ಹೋಯಿತಂತೆ. ಮುಂದೆ ಕೆಲಸಮಾಡಿದರೂ ಗಣಿಯಿಂದ ಪಡೆಯಬಹುದಾದ ಚಿನ್ನ ಸೇರಿರುವ ಬೆಣಚು ತೀರ ಅಲ್ಪವೆಂದು ೧೯೦೫ ರ ಸಮಾರಿಗೆ ಈ ಗಣಿಗಳಲ್ಲಿನ ಕೆಲಸವನ್ನು ನಿಲ್ಲಿಸಿಬಿಟ್ಟರು. ಗಣಿಗಳಿಂದ ಎತ್ತಿಹಾಕಿದ್ದ ಮಣ್ಣು ಕಲ್ಲುಗುಡ್ಡೆಗಳನ್ನು ಹುಡುಕಾಡಿ, ಚಿನ್ನ ಹತ್ತಿರುವ ಬೆಣಚುಕಲ್ಲನ್ನು ಪಡೆಯುತ್ತಾರೆ. ಮೇಲೆ ಬಿದ್ದಿದ್ದ ಗುಡ್ಡೆಗಳೆಲ್ಲವನ್ನೂ ಜಾಲಿಸಿದುದರ ಫಲವಾಗಿ ಈ ವರ್ಷ ೨೦ ತೊಲ ಬಂಗಾರ ಬಂದಿತು. ಮುಂದೆ ಈ ಪ್ರದೇಶದಲ್ಲಿ ಕೆಲಸ ಹೆಚ್ಚು ನಡೆಯುವ ಸಂಭವವಿದೆ.

## ಮೈಸೂರು ಜಿಲ್ಲೆಯಲ್ಲಿನ ಹಳೆಯ ಗಣಿಗಳು

**ಮೈಸೂರು ಜಿಲ್ಲೆ**ಯಲ್ಲಿ ಹಳೆಯ ಚಿನ್ನದ ಗಣಿಗಳು ನಂಜನಗೂಡಿಗೆ ದಕ್ಷಿಣಕ್ಕಿರುವ ಒಳಗೆರೆ ಮತ್ತು ಅಂಬಳೆಯ ಸಮೀಪವೂ, ಶ್ರೀರಂಗಪಟ್ಟಣದ ಮೂಡುಗಡೆ ಇರುವ ಹುಂಚನಕೆರೆಯ ಹತ್ತಿರವೂ ಇವೆ. ಈ ಎರಡು ಪ್ರದೇಶಗಳಲ್ಲಿ, ೧೯೦೦ ರಿಂದ ಹಿಡಿದು ೧೯೧೦ರ ವರೆಗೆ, ಹತ್ತು ವರ್ಷಗಳಕಾಲ ವಿಶೇಷ ರೀತಿಯ ಶೋಧನಕಾರ್ಯ ನಡೆಯಿತು. ಹುಂಚನಕೆರೆಯ ಹತ್ತಿರ ಅಧಿಕಪ್ರಮಾಣದಲ್ಲಿ ಚಿನ್ನ ಸೇರಿರುವ ಬೆಣಚಿನ ಸಿರಗಳು ಪತ್ತೆಯಾದವು. ಆದರೆ ಅವು ತೀರ ಚಿಕ್ಕವಾದ್ದರಿಂದ ಕೆಲಸ ಮುಂದುವರಿಯದೆ ಅಲ್ಲಿಗೇ ನಿಂತುಹೋಯಿತು.

ಹತ್ತು ವರ್ಷಗಳ ಅವಧಿಯಲ್ಲಿ ವಿಶೇಷವಾಗಿ ಕೆಲಸ ನಡೆದದ್ದು ಅಂಬಳೆ ಮತ್ತು ಒಳಗೆರೆಗಳ ಹತ್ತಿರ. ಒಳಗೆರೆಯ ಸಮೀಪದಲ್ಲಿ ಪುರಾತನರು ಕೆಲಸಮಾಡಿ ಬಿಟ್ಟ ದೊಡ್ಡದೊಂದು ಗಣಿ ಇತ್ತು. ಈ ನಿವೇಶನದಲ್ಲಿ ಕೆಲಸಮಾಡಿದವರಿಗೆ ಮೊದಲು ಚಿನ್ನ ಹೆಚ್ಚಿನ ಪ್ರಮಾಣದಲ್ಲಿಯೇ ಸಿಕ್ಕಿತು. ೧೯೧೦ರಲ್ಲಿ ಒಂದು ಕಂಪನಿಯುವರು ಕೆಲಸ ಕೈಹಿಡಿದು ಒಂದು ಕಡೆ ೨೦೦ ಅಡಿ ಆಳ ಒಂದು ಕೂಪವನ್ನಿಳಿಸಿದರು. ಮೇಲುಗಡೆ ಸುಮಾರು ೨೦ ಅಡಿ ಅಗಲವಾಗಿ ಕಂಡುಬಂದ ಬೆಣಚಿನ ಸಿರ ಕೆಳಗೆ ಹೋದಂತೆ ಕಿರಿದಾಗುತ್ತ ಹೋಯಿತು. ಒಂದೊಂದು ಕಡೆ ಚಿನ್ನ ವಿಶೇಷವಾಗಿ ಸೇರಿದ್ದಂತೆ ಕಂಡುಬಂದರೂ, ಒಟ್ಟು ಕಲ್ಲಿನಲ್ಲಿ ಚಿನ್ನ ಸೇರಿರುವ ಪ್ರಮಾಣವು ಅಲ್ಪವಾಗಿ (ಟನ್ನಿಗೆ ನಾಲ್ಕು ಪೆನಿವೇಟಿನಷ್ಟು) ಕಂಡಿತು. ಆಶಾಜನಕವಾದ ವರದಿ ಬರಲಿಲ್ಲವಾದ್ದರಿಂದ ೧೯೧೩ರಲ್ಲಿ ಈ ಗಣಿಗಳಲ್ಲಿ ನಡೆಯುತ್ತಿದ್ದ ಕೆಲಸ ನಿಂತುಹೋಯಿತು.

## ಹಾಸನ ಜಿಲ್ಲೆಯಲ್ಲಿನ ಹಳೆಯ ಗಣಿಗಳು


**ಹಾಸನ ಜಿಲ್ಲೆಯಲ್ಲಿ** ಹಳೆಯ ಗಣಿಗಳು ಹಾರನಹಳ್ಳಿಯ ಸಮೀಪವಿರುವ ಎಳವಾರಿಯ ಹತ್ತಿರವೂ, ಸುಗ್ಗಿಹಳ್ಳಿಗೆ ದಕ್ಷಿಣಕ್ಕಿರುವ ಕೆಂಪಿನಕೋಟೆಯ ಹತ್ತಿರವೂ ಇವೆ. ಕೆಂಪಿನಕೋಟೆಯ ಹತ್ತಿರ ಪುರಾತನರು ಕೆಲಸಮಾಡಿ ಕೈಬಿಟ್ಟ ಗಣಿ ಭಾರಿಯದು. ಇಲ್ಲಿ ಶೋಧನೆಗಳು ೧೮೯೩ರಿಂದ ಹಿಡಿದು ಒಟ್ಟು ಮೂರು ವರ್ಷಕಾಲ ನಡೆದವು. ಆಗ ಐನೂರು ಅಡಿ ಆಳಕ್ಕೆ ಎರಡು ಮುಖ್ಯಕೂಪಗಳನ್ನು ತೋಡಿ, ಹಳೆಯ ಗಣಿಗಳ ತಳಗಿನ ಪ್ರದೇಶವನ್ನೆಲ್ಲ ಶೋಧಿಸಿದರು. ಬೆಣಚುಕಲ್ಲಿನ ಸಿರ ಯಾವುದೂ ಪತ್ತೆಯಾಗಲಿಲ್ಲವಾದರೂ ಪದರುಶಿಲೆಗಳೊಂದಿಗೆ ಎಳೆಎಳೆಯಾಗಿ ಬೆರೆತಿದ್ದ ಬೆಣಚಿನಲ್ಲಿ ಚಿನ್ನ ಸೇರಿರುವುದು ಕಂಡುಬಂದಿತು. ಕೆಲವು ಭಾಗಗಳಲ್ಲಿ ಎಂಟು ಹತ್ತು ಪೆನಿವೇಟಿನಷ್ಟು ಚಿನ್ನ ದೊರೆಯಿತು. ಆದರೆ ಬಹುಭಾಗದ ಕಲ್ಲಿನಲ್ಲಿ ಟನ್ನಿಗೆ ಒಂದೆರಡು ಪೆನಿವೇಟುಗಳಿಗಿಂತ ಹೆಚ್ಚು ದೊರೆಯುವಂತೆ ಕಾಣಲಿಲ್ಲ. ಅದೇ ಕಾರಣವಾಗಿ ಕೆಂಪಿನಕೋಟೆಯ ಹತ್ತಿರ ನಡೆಯುತ್ತಿದ್ದ ಕೆಲಸ ಅಲ್ಲಿಗೇ ನಿಂತುಹೋಯಿತು. ಚಿನ್ನ ಸೇರಿರುವ ಕಲ್ಲನ್ನೆ ಆಯ್ದು ಬಂಜರು ಕಲ್ಲಿನಿಂದ ಪ್ರತ್ಯೇಕಿಸಿದ್ದಾದರೆ, ಕಲ್ಲಿನಲ್ಲಿ ಚಿನ್ನ ಸೇರಿರುವ ಪ್ರಮಾಣವನ್ನು ಹೆಚ್ಚಿಸಬಹುದು. ಆದುದರಿಂದ ಕೆಂಪಿನಕೋಟೆಯ ಹತ್ತಿರದ ಗಣಿಗಳನ್ನು ಪುನಃ ಶೋಧನೆಮಾಡುವ ಅಗತ್ಯವಿದೆ.

**ಶೋಧನಕಾರ್ಯಗಳ ಫಲಿತಾಂಶ ವಿಮರ್ಶೆ.** ಚಿನ್ನಕ್ಕೆಂದೇ ನಮ್ಮ ಪೂರ್ವಿಕರು ತೋಡಿದ ಗಣಿಗಳ ಪರಿಚಯವನ್ನೂ ೧೯೦೦ರಿಂದ ಹಿಡಿದು ೧೯೧೪ರ ವರೆಗೆ ನಡೆದ ಪರಿಶೋಧನಕಾರ್ಯಗಳ ವಿವರವನ್ನೂ, ಫಲಿತಾಂಶವನ್ನೂ ಅರಿತದ್ದಾಯಿತು.

ಕೋಲಾರ ಚಿನ್ನದ ಪ್ರದೇಶದಲ್ಲಿ ಚಿನ್ನ ಸೇರಿರುವ ಬೆಣಚಿನ ಸಿರಗಳು ನಾಲ್ಕು ಐದು ಮೈಲಿ ದೂರ ಹಬ್ಬಿವೆ. ಆ ಉದ್ದಕ್ಕೂ ಚಿನ್ನ ವಿಶೇಷವಾಗಿ ಸೇರಿದೆ. ಮೇಲಾಗಿ ಅಲ್ಲಲ್ಲೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಚಿನ್ನ ಸೇರಿರುವ ಸಮೃದ್ಧಿಯಾದ ಪ್ರದೇಶಗಳಿವೆ. ಕೋಲಾರದ ಗಣಿಗಳ ವೈಶಿಷ್ಟ್ಯವೇ ಇದು. ಇಂಥ ವಿಶೇಷರೀತಿಯ ವಿನ್ಯಾಸ, ಹಳೆಯ ಗಣಿಗಳಿರುವ ಮಿಕ್ಕ ಯಾವೆಡೆಗಳಲ್ಲೂ ಕಂಡುಬರಲಿಲ್ಲ. ಹಳೆಯ ಗಣಿಗಳಲ್ಲಿ ಬಹುಮಟ್ಟಿನವು ಬೆಣಚುಕಲ್ಲಿನ ತುಕಡಿಗಳ ಮೇಲೆಯೇ ಇರುವುದಾಗಿ ಕಂಡುವು. ಬೆಣಚುಕಲ್ಲಿನ ಸಿರ ಆಕಡೆ ಈಕಡೆ ಹಬ್ಬಿರಲಿಲ್ಲ; ಹಬ್ಬಿದಹಾಗೆ ಕಂಡುಬಂದರೂ ಅಂಥ ಬೆಣಚು ಬಂಜರುಬೆಣಚಾಗಿ ಕಾಣಿಸಿತು. ಬೆಣಚುಕಲ್ಲಿನ ಸಿರಗಳು ಎಷ್ಟೋಕಡೆ ಮೇಲೆ ಇದ್ದಷ್ಟು ಅಗಲವಾಗಿ ಕೆಳಗೆ ಇರಲಿಲ್ಲ. ಈ ಎಲ್ಲ ಕಾರಣಗಳ ಪರಿಣಾಮವಾಗಿ ಕೋಲಾರದ ಗಣಿಯ ಪ್ರದೇಶ ಒಂದನ್ನು ಬಿಟ್ಟು ಬೇರೆ ಯಾವ ಕಡೆಯೂ ಕೆಲಸ ಸುಸೂತ್ರವಾಗಿ ನಡೆಯದೆ ಹೋಯಿತು.

**ಪರಿಸ್ಥಿತಿಯಲ್ಲಿ ಬದಲಾವಣೆ — ಮುಂದೆ ಶೋಧನೆ ನಡೆಯುವ ಅಗತ್ಯ.** ಮೇಲೆ ತಿಳಿಸಿದ ಶೋಧನಕಾರ್ಯಗಳು ನಡೆದು ಈಗ ಮುವ್ವತ್ತು ವರ್ಷಗಳು ಸಂದಿವೆ. ಆಗಿನ ಕಾಲಕ್ಕೂ ಈಗ್ಗೂ ಪರಿಸ್ಥಿತಿ ಬಹುವಾಗಿ ಬದಲಾಯಿಸಿದೆ. ಪ್ರಯಾಣ ಸೌಕರ್ಯಗಳು ಈಗ ಹೆಚ್ಚಿವೆ. ಶಿವಮೊಗ್ಗ ಪ್ರಾಂತದಲ್ಲಿ ರೈಲುಮಾರ್ಗಗಳ ಅನುಕೂಲತೆ ಹೆಚ್ಚಿದೆ. ಚಿನ್ನವನ್ನು ಕಲ್ಲಿನಿಂದ ಪ್ರತ್ಯೇಕಿಸಿ ಶುದ್ಧಮಾಡುವ ರೀತಿಯಲ್ಲಿ ನವೀನವಾದ ವಿಧಾನಗಳು ಬಳಕೆಗೆ ಬಂದಿವೆ. ೧೦೦ರಲ್ಲಿ ೯೯ಕ್ಕೂ ಹೆಚ್ಚಿನಭಾಗದ ಚಿನ್ನವನ್ನು ಈಗ ಪಡೆಯಲು ಸಾಧ್ಯವಾಗಿದೆ. ಮೇಲಾಗಿ ಕೆಲವು ವರ್ಷಗಳಿಂದೀಚೆಗೆ ಚಿನ್ನದ ಧಾರಣೆ ಒಂದಕ್ಕೆ ನಾಲ್ಕರಷ್ಟು ಏರಿಹೋಗಿದೆ. ಈಗಿನ ಪರಿಸ್ಥಿತಿಯಲ್ಲಿ ನಮ್ಮ ದೇಶದ ಹಳೆಯ ಗಣಿಗಳನ್ನು ಊರ್ಜಿತಮಾಡಲು ವಿಶೇಷ ಅನುಕೂಲತೆಗಳಿವೆ. ಹೊನ್ನಾಳಿ ಚಿನ್ನದ ಪ್ರದೇಶ, ಜಲಗಾರಗುಂಡಿ, ಬೆಳ್ಳಾರ, ಕೆಂಪಿನಕೋಟೆ, ಒಳಗೆರೆ ಈ ಸ್ಥಳಗಳಲ್ಲಿ ಹೆಚ್ಚಿನ ಕೆಲಸ ನಡೆಯಬೇಕಾಗಿದೆ. ಯುದ್ಧದ ಕಾರ್ಮೋಡಗಳು ತೊಲಗಿ, ಬೇಕಾಗುವ ಯಂತ್ರಸಾಧನಗಳು ಕಷ್ಟವಿಲ್ಲದೆ ದೊರೆಯುವಂತಾಗಬೇಕು. ಬಂಡವಾಳ ಸುಲಭವಾಗಿ ಕೂಡಬೇಕು. ಚಿನ್ನದ ಕೈಗಾರಿಕೆಯಲ್ಲಿ ಲಕ್ಷಗಳು ಲೆಕ್ಕಕ್ಕಿಲ್ಲ. ಅದಕ್ಕೆ ವಿಶೇಷ ಹಣಬೇಕು. ಕಣ್ಣೊರಸುವ ಸಣ್ಣ ಸಣ್ಣ ಪ್ರಯತ್ನಗಳಿಂದ ಯಾವುದೂ ನಿಶ್ಚಯವಾಗಲಾರದು. ದುಡ್ಡಿದ್ದ ದೊಡ್ಡಪ್ಪಸವರುಗಳು ಬಂದು ತಮ್ಮ ಅದೃಷ್ಟದ ತೊಲೆಯನ್ನು ತೂಗಿ ನೋಡಬೇಕು. ವಿದ್ಯುಚ್ಛಕ್ತಿಯ ಸಹಾಯ ಮನೆ ಬಾಗಿಲಿಗೆ ಬಂದಿರುವಾಗ, ಚಿನ್ನದ ಬೆಲೆ ಹೆಚ್ಚಿರುವಾಗ, ಒಂದೆರಡು ಪ್ರದೇಶಗಳಲ್ಲಿ ಯಾದರೂ ಸಣ್ಣ ರೀತಿಯಲ್ಲಿ ಚಿನ್ನವನ್ನು ಲಾಭದಾಯಕವಾಗಿ ಪಡೆಯಲು ಸಾಧ್ಯವಿದೆ.



ಮೈಸೂರು
ಪುರಾತನ ಚಿನ್ನದ ಗಣಿಗಳನ್ನು ತೋರಿಸುವ ನಕ್ಷೆ
ಮೈಲುಗಳು
ಬಂಗಾರದ ಗಣಿಗಳು
ಧಾರವಾಡ ಶಿಲೆಗಳು
75°
76°
77°
78°
14°
13°
12°
ಶಿವಮೊಗ್ಗ
ಚಿತ್ರದುರ್ಗ
ಕಡೂರು
ಚಿಕ್ಕಮಗಳೂರು
ತುಮಕೂರು
ಹಾಸನ
ಬೆಂಗಳೂರು
ಕೋಲಾರ
ಮಂಡ್ಯ
ಮೈಸೂರು


£ 96,000,000.
88,000,000
80,000,000
72,000.000
64,000,000.
56,000,000.
48,000,000.
40,000,000.
32,000,000.
24,000,000.
16,000,000.
8,000,000.
ಚಿನ್ನದ ಉತ್ಪತ್ತಿ £ 93,609,612.
ಖರ್ಚು £ 50,400,539.
ಲಾಭ £ 37,645,038
ಡಿವಿಡೆಂಡುಗಳು £ 26,786,981.
ರಾಜಾದಾಯ £. 5,393,406.

ಉತ್ಪತ್ತಿ


ಹಳೆಯ ಗಣಿಗಳು.
ಚಿನ್ನದಕಲ್ಲು ತೆಗೆದು ಬರಿದಾದ ಪ್ರದೇಶ.
ಮುಂದೆತೆಗೆಯ ಬೇಕಾ ದ ಅದಿರು.

ಗಣಿಗಳು




III. ಕೋಲಾರದ ಪದರು ಶಿಲಾವಲಯದ ನಕ್ಷೆ

ಹಾರನ್‌ಬ್ಲೆಂಡ್ ಪದರು ಶಿಲೆ -


ಪುರಾತನರು ಕೆಲಸಮಾಡಿ ಬಿಟ್ಟ ಹಳೆಯ ಗಣಿಗಳ ಸಾಲು. - - -

ಡೈಕುಗಳು - - - - - - - - - -

ಕದಂಬ ಶಿಲೆ - - - - - - - -

ಕಬ್ಬಿಣ ಸೇರಿರುವ ಬೆಳ್ಳುಗಲ್ಲಿನ ಸಾಲು } - - -

ನೈಸುಗಳು - - - - - - -


ಬೆಳಗಾಂವಿ
ಗೋವ
ಹಟ್ಟಿ
ಕೃಷ್ಣಾ
ತುಂಗಭದ್ರೆ
ಧಾರವಾಡ
ಗದಗು
ಹುಬ್ಬಳ್ಳಿ
ಸೊಂಡೂರು
ಬಳ್ಳಾರಿ
ಅನಂತಪುರ
ಹೊನ್ನಾಳಿ
ಚಿತ್ರದುರ್ಗ
ಶಿವಮೊಗ್ಗ
ಪೆನುಕೊಂಡ
ಚಿಕ್ಕನಾಯಕನಹಳ್ಳಿ
ಮಂಗಳೂರು
ಬೆಂಗಳೂರು
ಕೋಲಾರ
ಶ್ರೀರಂಗಪಟ್ಟಣ
ಮೈಸೂರು
ಕಾವೇರಿ
ವೈನಾಡು
ಕಲ್ಲಿಕೋಟೆ
ನೀಲಗಿರಿ
ಧಾರವಾಡ ಶಿಲೆಗಳು

ಚಿನ್ನದ ಪ್ರದೇಶಗಳು

## ಚಿನ್ನದ ಕೈಗಾರಿಕೆಗಿರುವ ಭವಿಷ್ಯ

ನಮ್ಮ ದೇಶದಲ್ಲಿ ಚಿನ್ನದ ಕೈಗಾರಿಕೆಯ ಭವಿಷ್ಯ ಆಶಾಜನಕವಾಗಿದೆಯೆಂದು ಖಚಿತವಾಗಿ ಹೇಳಲಾಗದಿದ್ದರೂ ನಿರಾಶಗೆ ಎಡೆಯೇ ಇಲ್ಲ. ಕೋಲಾರ ಪ್ರದೇಶದಲ್ಲಿನ ಗಣಿಗಳು ಇನ್ನು ಇಪ್ಪತ್ತು ಮುವ್ವತ್ತು ವರ್ಷಗಳ ಕಾಲ ಸುಸೂತ್ರವಾಗಿ ನಡೆಯು ವುದರಲ್ಲಿ ಸಂದೇಹವಿಲ್ಲ. ಹೊನ್ನಾಳಿ ಗಣಿಗಳು, ಜಲಗಾರಗುಂಡಿ, ಕೆಂಪಿನಕೋಟೆ, ಬೆಳ್ಳಾರ ಈ ಎಡೆಗಳಲ್ಲಿ ಕಲ್ಲಿನಲ್ಲಿ ಚಿನ್ನ ಸೇರಿರುವ ಪ್ರಮಾಣ ತೀರ ಅಲ್ಪವೆಂದು ಚಿನ್ನವನ್ನು ಕಲ್ಲಿನಿಂದ ಪ್ರತ್ಯೇಕಿಸಲು ತಗಲುವ ಖರ್ಚು ಹೆಚ್ಚೆಂದು, ಒಂದಲ್ಲ ಒಂದು ಕಾರಣದಿಂದ ಈಗ ಮುವ್ವತ್ತು ವರ್ಷಕ್ಕೆ ಹಿಂದೆ ಕೆಲಸಮಾಡಿದವರು ಕೆಲಸ ಮುಂದು ವರಿಸುವುದನ್ನು ಬಿಟ್ಟರು. ಈಗ ಪರಿಸ್ಥಿತಿ ಎಲ್ಲ ರೀತಿಯಲ್ಲೂ ಉತ್ತಮಗೊಂಡಿರುವುದ ರಿಂದ ಮೇಲಿನ ಗಣಿಗಳಿಂದ ಚಿನ್ನವನ್ನು ಲಾಭದಾಯಕವಾಗಿ ಪಡೆಯಲು ಸಾಧ್ಯ ವಾಗಬಹುದು.

## ಕೊನೆಯ ಮಾತು

ಚಿನ್ನದ ಕೈಗಾರಿಕೆಯಲ್ಲಿ ಹೆಸರು ಗಳಿಸಿದ್ದವರು ನಮ್ಮ ಪುರಾತನರು. ನಮ್ಮ ದುರದೃಷ್ಟದಿಂದ ಮಿಕ್ಕೆಲ್ಲ ಕಲೆಗಳಂತೆ ಈ ಕಲೆಯೂ ಮರೆತುಹೋಯಿತು. ಕೋಲಾರ ದಂಥ ದೊಡ್ಡ ಗಣಿಗಳಲ್ಲಿ ಕೆಲಸಮಾಡುವುದು ನಮಗೆ ಈಗ ಸಾಧ್ಯವಾಗದಿದ್ದರೂ ದೇಶದಲ್ಲಿನ ಮಿಕ್ಕ ಗಣಿಗಳಲ್ಲಿ ನಮ್ಮವರೇ ಕೆಲಸಮಾಡುವಂತಾಗಿ ನಾಡಿನ ಸಂಪತ್ತು ಒಳಗೆ ಉಳಿಯುವಂಥ ಕಾಲಬರಲಿ.

"ಏನು ಚೆಲುವಿನ ನಾಡು ! ಚೆಲುವು ಚೆಲ್ಲುವ ನಾಡು ! ಕನ್ನಡದ ನಾಡು !
ಏನು ಚಿನ್ನದ ನಾಡು ! ನಮ್ಮೊಲುಮೆಯಾ ನಾಡು ! ನಮ್ಮಿನಿಯ ನಾಡು."

ಬಿ. ಪಿ. ರಾಧಾಕೃಷ್ಣ.

# ಗಂಧರ್ವಲೋಕ

ಎವೆಯನಿಕ್ಕಿ ಕಣ್ಣಿಂದಕಂಡೆ ನಾ ರವಿಯ ತೇಜದಾಟ;
ಬಣ್ಣಬಣ್ಣದಾಕೃತಿಗಳಲ್ಲಿ ಕುಣಿಕುಣಿವ ಮೋಡಿ ಮಾಟ.
ಏಳು ಬಣ್ಣ ಉರುಳುರುಳಿ ಉರುಳಿಯಾದಂತೆ ತಿರುಗುತಿಹವು;
ಇಂದ್ರಚಾಪನೆ ತಂತಿಮಾಡಿ ಹೆಣೆವಂತೆ ಮರಳಿಬಹವು. ೧

ಎಂಥ ಮಂಜು ಇದು? ಏನು ಹೊಗೆಯು? ಅಹ, ಯಾವಮೋಡದೊಡ್ಡು?
ಬಗೆಯ ಹಗೆಯವನೆ ಹೊಕ್ಕಹಾಗೆ ಹರಹುವದು ಮಬ್ಬುಗೊಡ್ಡು!
ಅದರ ಹೊಂಚಿನಲಿ ಮಿಂಚುವೊಂದು ಚಂಚಲಿಸಿ ಆಡಲುಂಟು:
ಬೆಳಕು ಕತ್ತಲೆಗೆ ಯಾವ ಗಂಟೊ! ಒಂಜೆಯಲಿ ಬೆಸಲಿನಂಟು. ೨

ರಂಗವಲ್ಲಿಯೊಳಗಿಟ್ಟ ಅಕ್ಕಿಗಳು ಜಿಚ್ಚಿ ಕುಣಿವಹಾಗೆ
ಅತ್ತ ಸರಿಯುವವು, ಇತ್ತ ಸರಿಯುವವು, ಎತ್ತೊಕೆಳಗೆ ಮೇಗೆ.
ತಪ್ತಕಾಂಚನದ ತಗಡಿನಲ್ಲಿ ಬರೆದಂಥ ಜಂತ್ರದಂತೆ
ಯಾವ ಲಿಪಿಯೊ ಇದು, ಏಕೆ ಬಂತೊ, ಇಲ್ಲಾವ ತಂತ್ರದಂತೆ? ೩

ಮೂರ್ತಿಗೊಂಡ ರೂಪಕವು ಕಾಣದಿದೆ: ಊನನ್ಯೂನವೇನೋ!
ತರಳಉಪಮೆ ಲವಲವಿಕೆಯಲ್ಲಿ ಉತ್ಪ್ರೇಕ್ಷೆಯಾಯಿತೇನೊ!
ತೇಜವೊಡೆದು ಪರಪುಷ್ಟವಾದ ಗ್ರಹಮಾಲೆಯಾದ ಹಾಗೆ
ಉತ್ಪ್ರೇಕ್ಷೆಯಂತೆ ಕ್ಷಣಕೊಂದರಂತೆ ತೋರುವದಿದೇಕೊ ನನಗೆ! ೪

* * *

ಬಿಳಿಯ ಮೋಡಗಳು ಒಟ್ಟುತಿಹವು ಹಿಮಶೈಲ ಕಟ್ಟಿದಂತೆ;
ಕರಿಯಮೋಡ ಏರಿಮಿಂಚುತಿಹವು ನವನೀಲ ಹುಟ್ಟಿದಂತೆ;
ಇಲ್ಲಿ ಬಣ್ಣಗಳ ನುಂಗುವಂಥ ಬಿಳಿಬೆಳಕು ಬಂತು ಒಂದು
ನೆನೆಸಿದಂಥ ರೂಪವನು ತೋರುವದು ಕ್ಷಣವೆ ಕಟ್ಟಿತಂದು. ೫

ಅದೊ ಕರ್ಣದಲ್ಲಿ ಒಳುವರ್ಣದಲ್ಲಿ ಸ್ವರಸ್ವರ್ಣವಲ್ಲಿ ಅರಳಿ
ರಸರಾಗದಲ್ಲಿ ಅನುರಾಗವಲ್ಲಿ ಹೊಸ ಒಲವು ಲಹರಿ ಮರಳಿ
ಕರೆಯುತಿಹದು ಬಗೆಬಗೆಯ ನಗೆಯು ಒಗುಮಿಗುವ ನಾಕದಲ್ಲಿ
ಗಿಣಿಗಿಣಿಲುಗಂಟಿ ಮಧುರಸವನೀಂಟಿ ಗಂಧರ್ವಲೋಕದಲ್ಲಿ. ೬

—ಅಂಬಿಕಾತನಯದತ್ತ

# ಪ್ರತಿಮಾ ಮತ್ತು ಪ್ರತಿಕೃತಿ

ಪರಿಚಿತನಾದ ಮನುಷ್ಯ ವ್ಯಕ್ತಿಯೊಬ್ಬನ ಆಕೃತಿಯನ್ನು ಎಷ್ಟುಮಂದಿ ಚಿತ್ರಕಾರರು ಚಿತ್ರಿಸಿದರೂ ಆ ಎಲ್ಲ ಚಿತ್ರಗಳಲ್ಲಿಯೂ ಒಬ್ಬನ ರೂಪವನ್ನೇ ಕಾಣುತ್ತೇವೆ. ರೇಖಾ ರಚನೆಯಲ್ಲಿ, ವರ್ಣಪ್ರದರ್ಶನದಲ್ಲಿ, ಭಾವಪ್ರಕಾಶನದ ವಿಧಾನದಲ್ಲಿ ಅವರವರ ಕಲೆಗಳಿಗೆ ವ್ಯತ್ಯಾಸವಿರಬಹುದು. ಆದರೆ ಒಟ್ಟಿನ ಮುಖಮುದ್ರೆಯಲ್ಲಿ, ವ್ಯಕ್ತಿರೂಪದಲ್ಲಿ, ವ್ಯತ್ಯಾಸವಿರುವುದಿಲ್ಲ. ಹಾಗೇನಾದರೂ ಬದಲಾವಣೆ ಕಂಡುಬಂದರೆ ಅಂತಹ ಚಿತ್ರವನ್ನು ನಾವು ಹುಸಿ ಎಂದು ತಿರಸ್ಕರಿಸುತ್ತೇವೆ. ಮೂಲದೊಂದಿಗಾಗಲಿ ಅಥವಾ ಮೂಲದ ಸ್ಮೃತಿಯೊಂದಿಗಾಗಲಿ ಹೋಲಿಸಿ ಅದರ ಮಿಥ್ಯೆಯನ್ನು ಸ್ಥಾಪಿಸಲು ಸಮರ್ಥರಾಗುತ್ತೇವೆ. ಮೂಲಕೃತಿಗೆ ಸರಿಯಾದ ಪ್ರತಿಕೃತಿಯಲ್ಲವೆಂದು ನಿಸ್ಸಂದೇಹವಾದ ನಿರ್ವಿವಾದವಾದ ಇತ್ಯರ್ಥಕ್ಕೆ ಬರುತ್ತೇವೆ.

ಚರಿತ್ರೆಯ ಒಬ್ಬ ವ್ಯಕ್ತಿಯನ್ನು ಆತನ ನಿಜರೂಪದಲ್ಲಿ ಚಿತ್ರಿಸುತ್ತೇನೆಂದು ಹೊರಡುವ ವರ್ಣಶಿಲ್ಪಿ ತನ್ನ ಕೃತಿಯ ಸತ್ಯತೆಗೆ ಬಾಹ್ಯಪ್ರಮಾಣಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಹಾಗಲ್ಲದೆ, ಅಕ್‌ಬರ್ ಎಂದೋ ಮಹಾತ್ಮಾಗಾಂಧಿ ಎಂದೋ ಹೆಸರು ಕೊಡುವುದಕ್ಕೆ ಬದಲಾಗಿ, ತನ್ನ ಕೃತಿಗೆ 'ವಾಯುದೇವ' ಎಂದು ಹೆಸರಿಡುವ ಚಿತ್ರಕಾರನನ್ನು ಯಥಾರ್ಥತೆಯ ಅಥವಾ ವಾಸ್ತವತೆಯ ಒರೆಗಲ್ಲಿಗೆ ಹಚ್ಚುವುದು ಹೇಗೆ ಸಾಧ್ಯ? ಯಾವ ಮೂಲವನ್ನಿಟ್ಟುಕೊಂಡು ಅವನ 'ವಾಯುದೇವ'ನನ್ನು ಹೋಲಿಸೋಣ? ಅವನ ಚಿತ್ರದ 'ವಾಯುದೇವ' ಯಾವ ನಿಜವಾದ ವಾಯುದೇವನ ಪ್ರತಿಕೃತಿ?

ಪ್ರಕೃತಿಯಲ್ಲಿ ವಾಯುವನ್ನೇನೋ ಅನುಭವಿಸುತ್ತೇವೆ, ಅದರ ಅರೂಪಾವಸ್ಥೆಯಲ್ಲಿ. ಅದನ್ನೇ ನೋಡಲಾಗದಿದ್ದರೂ ಸರೂಪದ ಮೇಲೆ ಗಾಳಿ ತನ್ನ ವಿವಿಧಸ್ಥಿತಿಗಳಲ್ಲಿ ಉಂಟುಮಾಡುವ ಪರಿಣಾಮದ ಚಿತ್ರಗಳಲ್ಲಿ ಅದು ಗೋಚರವಾಗುತ್ತದೆ: ತನ್ನ ಗರಿಗಳನ್ನೆಲ್ಲ ಒಕ್ಕಡೆಗೆ ಚಾಚಿ, ಬಾಗಿ, ತೂಗಾಡುತ್ತಿರುವ ತೆಂಗಿನ ಮರದ ಚಿತ್ರದಲ್ಲಿ. ಉಲ್ಲೋಲ ಕಲ್ಲೋಲವಾಗಿ ಹೆದ್ದೆರೆಗಳಿಂದ ತೀರವನ್ನಪ್ಪಳಿಸುತ್ತಿರುವ ಕಡಲಿನ ಚಿತ್ರದಲ್ಲಿ. ಗುಡಿಸಲಿನ ಮೇಲುಹೊದಿಕೆಯಿಂದ ತೂರಿ, ಚಿಮ್ಮಿ, ಅಂತರ ಪಿಶಾಚಗಳಂತೆ ಅಂತರಿಕ್ಷದಲ್ಲಿ ರಿಂಗಣಗುಣಿಯುತ್ತಿರುವ ಹುಲ್ಲಿನ ಚಿಂದಿಗಳ ಚಿತ್ರದಲ್ಲಿ. ದಿಗಂತದಿಂದೆದ್ದು ಬಾಂದಳವನ್ನೆಲ್ಲ ಆಕ್ರಮಿಸುವ ಕಾರ್ಮೋಡಗಳ ವೇಗಗಮನದ

ಚಿತ್ರದಲ್ಲಿ. ಸುಗ್ಗಿಯ ಹೂದೋಟದಲ್ಲಿ ಒಯ್ಯೊಯ್ಯನೆ ತಲೆಯೊಲೆಯುವ ಬಣ್ಣಬಣ್ಣದ ಹೂಗಳ ಲಾಸ್ಯದೃಶ್ಯದಲ್ಲಿ.— ಇಂತಹ ಸೂರಾರು ಚಿತ್ರಗಳಲ್ಲಿ, ಬಲ್ಗಾಳಿಯಾಗಿ, ಕಾರ್ಗ್ಗಾಳಿಯಾಗಿ, ಬಿರುಗಾಳಿಯಾಗಿ, ತಿರಿಗಾಳಿಯಾಗಿ, ತಂಗಾಳಿಯಾಗಿ, ಮೇಲ್ಗಾಳಿಯಾಗಿ, ಅನೇಕಾವಸ್ಥೆಗಳಲ್ಲಿ ವಾಯು ನಮ್ಮ ಅನುಭವಕ್ಕೆ ಬರುತ್ತದೆ. ಆದರೆ ಮೇಲೆ ಹೇಳಿದ ಚಿತ್ರದ "ವಾಯುದೇವ"ನನ್ನು ಯಾರು ಕಂಡಿದ್ದಾರೆ? ಅಂತಹ ವ್ಯಕ್ತಿ ಇದ್ದಾನೆಯೆ? ಇರದಿದ್ದರೆ ಚಿತ್ರಕಾರನು ಸುಳ್ಳುಗಾರನೋ ಮೋಸಗಾರನೋ ಆಗಬೇಕಲ್ಲವೆ?

ಚಿತ್ರಕಾರನು ತನ್ನ ಕೃತಿಯನ್ನು ಪ್ರತಿಕೃತಿ ಎಂದು ಕರೆದಿದ್ದರೆ ಅದು ಹುಸಿಯೂ ಮೋಸವೂ ಆಗುತ್ತಿತ್ತು. ಆದರೆ ಅವನು ತನ್ನ ಚಿತ್ರವನ್ನು ಕಣ್ಣಿಗೆ ಕಾಣುವ ಪ್ರಕೃತಿಯ ಪ್ರತಿಕೃತಿ ಎಂದು ತಿಳಿಯುವುದಿಲ್ಲ. ಅವನ ಚಿತ್ರಕೃತಿ ಯಾವೊಬ್ಬ ವ್ಯಕ್ತಿಯ ರೂಪಕ್ಕೂ ಕನ್ನಡಿ ಹಿಡಿಯುವುದಿಲ್ಲ. ಅವನದು ಬರಿಯ ರೂಪಕಲೆಯಲ್ಲ; ಭಾವಕಲೆ. ಎಂದರೆ ಭಾವಕ್ಕೆ ರೂಪಕಲ್ಪನೆಯಾಗಿದೆ, ಅಷ್ಟೆ. ಗಾಳಿಯನ್ನು ಅದರ ನಾನಾ ಸ್ಥಿತಿಗಳಲ್ಲಿ ಅನುಭವಿಸಿ ಅದರ ಅನೇಕಾನೇಕ ದೃಶ್ಯಗಳನ್ನೂ ಅವುಗಳಿಂದ ಪ್ರೇರಿತವಾದ ಬಹುಸಂಖ್ಯೆಯ ಭಾವಗಳನ್ನೂ ತನ್ನ ರಸಗರ್ಭದಲ್ಲಿ ಧಾರಣೆಮಾಡಿಕೊಂಡ ವರ್ಣಶಿಲ್ಪಿ ತನ್ನ ರಸಾನುಭೂತಿಗೆ ರೂಪದಾನಗೈದು, ಕಾಲತುಂಬಿದ ಮೇಲೆ ಅದನ್ನು ಪ್ರಕಟಿಸಿ, ಅದಕ್ಕೆ "ವಾಯುದೇವ" ಎಂದು ನಾಮಕರಣ ಮಾಡುತ್ತಾನೆ.

ಹೊಸದಾಗಿ ಹುಟ್ಟಿದ ಶಿಶು ಯಾವುದರ ಪ್ರತಿಕೃತಿ? ಅದು ಸತ್ಯವೋ ಮಿಥ್ಯೆಯೋ ಎಂಬ ಪ್ರಶ್ನೆಗೆ ಅರ್ಥವೇನು? ಬದುಕಿದೆಯೊ ಸತ್ತಿದೆಯೊ? ತಾಯಿಯಂತಿದೆಯೊ ತಂದೆಯಂತಿದೆಯೊ? ಸುರೂಪಿಯೊ ಕುರೂಪಿಯೋ? ಅಳುತ್ತದೆಯೆ? ಉಸಿರಾಡುತ್ತದೆಯೆ? ಎಂದು ಮೊದಲಾಗಿ ಕೇಳುವ ಪ್ರಶ್ನೆಗಳು ಅಪ್ರಕೃತವಲ್ಲ. ಆದರೆ ಅದರ ಸತ್ಯಾಸತ್ಯವನ್ನು ಕುರಿತ ಪ್ರಶ್ನೆಗೆ ಏನುತ್ತರ ಹೇಳಬಹುದು? ನಮ್ಮಂತೆಯೆ ಅಸ್ತಿತ್ವಪಡೆದು ನಮ್ಮ ಅನುಭವಕ್ಕೆ ಗೋಚರವಾಗುವುದು ಒಂದು ವೇಳೆ ಮಿಥ್ಯೆಯಾಗಿದ್ದರೆ ನಮಗಿಂತಲೂ ಹೆಚ್ಚೇನೂ ಮಿಥ್ಯೆಯಲ್ಲ. ಆದ್ದರಿಂದಲೆ 'ನಮ್ಮ' ಸತ್ಯತೆಯ ವಿಚಾರದಲ್ಲಿ ನಮಗೆಷ್ಟು ಶ್ರದ್ಧೆಯೋ 'ಅದರ' ಸತ್ಯತೆಯ ವಿಚಾರದಲ್ಲಿಯೂ ನಮಗೆ ಅಷ್ಟೇ ಶ್ರದ್ಧೆ.

ಶಿಶುವಿನ ಸತ್ಯತೆ ಸ್ಥಾಪಿತವಾಗುವುದು ತಾನು ಅವತರಿಸಿದ ಪ್ರಪಂಚದಲ್ಲಿ ತನ್ನ ಸಮಗ್ರವರ್ತನೆಯ ಸಮಂಜಸತೆಯಿಂದ. ಅದು ಹುಟ್ಟಿದ ಭೂಮಿಕೆಯನ್ನು ಬಿಟ್ಟು ಬೇರೆ ಭೂಮಿಕೆಯ ಪ್ರಮಾಣಗಳಿಂದ ನಾವು ಅದರ ಸತ್ಯನಿರ್ಣಯಕ್ಕೆ ಹೋಗು

ವುದಿಲ್ಲ.[1] ಆಯಾ ಭೂಮಿಕೆಯ ಅಥವಾ ಸತ್ತೆಯ ವಸ್ತುಗಳ ಸತ್ಯಕ್ಕೆ ಆಯಾ ಭೂಮಿಕೆಗೆ ಅಥವಾ ಸತ್ತೆಗೆ ಅಧೀನವಾಗಿರುವ ಪ್ರಮಾಣಗಳೇ ಸಾಕ್ಷಿ.

ಚಿತ್ರಕಾರನ "ವಾಯುದೇವ" ಒಂದು ಹೊಸಸೃಷ್ಟಿ. ಅದನ್ನು ಪ್ರತಿಮಾ ಎಂದು ಕರೆಯುತ್ತೇವೆಯೆ ಹೊರತು ಪ್ರತಿಕೃತಿ ಎಂದು ಕರೆಯುವುದಿಲ್ಲ. ಆ ಪ್ರತಿಮೆ ಸಟೆಯೋ ದಿಟವೋ ಎಂದು ಕೇಳುವ ಪ್ರಶ್ನೆ ವಿಫಲ. ಯಾವ ಅನುಭವದ ಪ್ರಚೋದನೆಯ ಫಲವಾಗಿ ಸೃಷ್ಟಿಶೀಲವಾದ ವರ್ಣಶಿಲ್ಪಿಯ ಪ್ರತಿಭೆ ರೂಪರಚನೆ ಮಾಡುತ್ತದೆಯೋ ಆ ರೂಪದ ಅಥವಾ ಪ್ರತಿಮೆಯ ವಿಚಾರವಾಗಿ ನಾವು ಕೇಳುವ ಪ್ರಶ್ನೆಗಳೆಂದರೆ, ಅದು ಸಜೀವವಾಗಿದೆಯೆ? ಸುಂದರವಾಗಿದೆಯೆ? ಪ್ರೇಕ್ಷಕರಲ್ಲಿ ತನಗೆ ಆಧಾರವಾಗಿದ್ದ ಆ ಮೂಲಾನುಭವವನ್ನು ಪ್ರಚೋದಿಸುತ್ತಯೆ?[2]—ಎಷ್ಟೆಷ್ಟು ಮಟ್ಟಿಗೆ ಆ ಮೂಲಾನುಭವವನ್ನು ಪ್ರಚೋದಿಸಲು ಸಮರ್ಥವಾಗುತ್ತದೆಯೋ ಅಷ್ಟಷ್ಟು ಮಟ್ಟಿಗೆ ಅದು ಸತ್ಯವಾಗುತ್ತದೆ; ಸುಂದರವೂ ಆಗುತ್ತದೆ. ಹಾಗೆ ಸತ್ಯವಾಗಿರುವಿಕೆಯಲ್ಲಿಯೆ ಅದರ ಸುಂದರವಾಗಿರುವಿಕೆಯೂ ಒಡಗೂಡಿರುತ್ತದೆ. ಆದ್ದರಿಂದಲೆ ಅಲ್ಲಿ ಸತ್ಯ ಮತ್ತು ಸೌಂದರ್ಯಗಳಿಗೆ ನಾವು ಮಾಡುವ ಕೇವಲ ಭೇದ ಕಲ್ಪನೆ ಅರ್ಥರಹಿತ.

"ವಾಯುದೇವ" ಎಂದು ಹೆಸರಿಟ್ಟು ಹತ್ತು ಚಿತ್ರಕಾರರು ಹತ್ತು ಚಿತ್ರಗಳನ್ನು ಬರೆಯಬಹುದು. ಯಾವೊಂದೂ ಮತ್ತೊಂದಕ್ಕೆ ಸದೃಶರೂಪಿಯಾಗದಿರಬಹುದು. ಒಂದೊಂದನ್ನೇ ಬೇರೆ ಬೇರೆಯಾಗಿ ಪರಿಶೀಲಿಸಿದರೆ ಪ್ರತಿಯೊಂದೂ ಸತ್ಯ. ಆದರೆ ಒಂದನ್ನು ಮತ್ತೊಂದರೊಡನೆ ಹೋಲಿಸಿದರೆ ಒಂದಕ್ಕಿಂತ ಮತ್ತೊಂದು ಹೆಚ್ಚಿನ ಅಥವಾ ಕಡಮೆಯ ಸತ್ಯವಾಗಬಹುದು. ಏಕೆಂದರೆ ಒಂದೇ ಕಲೆಯ ಒಂದೇ ಭೂಮಿಕೆಯಲ್ಲಿ, ಸತ್ಯದಲ್ಲಿ ಸಮಾನತೆಗೆ ಹೋರಾಡುವ ಬಹುಸಂಖ್ಯೆಯ ಸಮವಿಷಯ ಕೃತಿಗಳನ್ನು ಪರಸ್ಪರ ಹೋಲಿಸಿ, ಯಾವ ಕೃತಿ ತನ್ನ ಪ್ರಚೋದಕಾನುಭವವನ್ನು ಅತ್ಯಂತ ಪೂರ್ಣವಾಗಿ, ಸಮರ್ಪಕವಾಗಿ ಮತ್ತು ರಸವತ್ತಾಗಿ ಸಹೃದಯರ ಹೃದಯಾನುಭವವಾಗುವಂತೆ ಮಾಡಲು ಸಮರ್ಥವಾಗುತ್ತದೆಯೋ ಅದನ್ನು ಉಳಿದೆಲ್ಲವುಗಳಿಗಿಂತಲೂ ಹೆಚ್ಚಿನ ಸತ್ಯವೆಂದೂ ಸೌಂದರ್ಯವೆಂದೂ ಸ್ವೀಕರಿಸುತ್ತೇವೆ.

---

[1] In art we submit to ourselves the shows of things. We create an autonomous world, a blending of the physical with ourselves, and therefore a new reality within the so-called real world.—*Beauty and Other Forms of Value*—by S. Alexander.

[2] It is not the image but the delight of the image, not the event but the joy of the event that exalts Sensation to Poetry. In a similar way emotion fuses the poet with ideas.—*The Inspiration of Poetry*—by Woodberry.

ಕಲೆಯಲ್ಲಿ ಸತ್ಯ ಮೈದೋರುವುದು ಬಹುಮಟ್ಟಿಗೆ ಪ್ರತಿಮಾ ವಿಧಾನದಿಂದಲ್ಲದೆ ಪ್ರತಿಕೃತಿವಿಧಾನದಿಂದಲ್ಲ.

ಸ್ವಪ್ನ ಸತ್ತೆಯಲ್ಲಿ ಪ್ರತಿಮಾವಿಧಾನದ ಈ ಸೃಷ್ಟಿ ಎಲ್ಲರ ಅನುಭವಕ್ಕೂ ಬಂದಿರುವುದರಿಂದ ಅದನ್ನು ನಿದರ್ಶನವನ್ನಾಗಿ ತೆಗೆದುಕೊಂಡರೆ ಮೇಲೆ ಹೇಳಿದ ವಿಚಾರವು ಇನ್ನೂ ಸ್ಪಷ್ಟತರವಾಗುತ್ತದೆ. ಜಾಗ್ರದವಸ್ಥೆಯ ಅನುಭವಸಾಮಗ್ರಿಯ ಆಧಾರದ ಮೇಲೆಯೆ ನಿಂತಿರುತ್ತದೆ ಸ್ವಪ್ನಾವಸ್ಥೆಯ ಸಕಲ ಸೃಷ್ಟಿ. ಕನಸಿನ ವಸ್ತುಗಳು ಎಷ್ಟು ವಿಚಿತ್ರಗಳಾಗಲಿ, ಎಷ್ಟು ಅತಿಲೌಕಿಕಗಳಾಗಿರಲಿ, ಮತ್ತೆಷ್ಟು ಅಸ್ವಾಭಾವಿಕವಾಗಿ ತೋರಲಿ ಅವೆಲ್ಲಕ್ಕೂ ಎಚ್ಚರಿಕೆಯ ಜಗತ್ತಿನ ಅನುಭವಗಳೇ ಮೂಲಸಾಮಗ್ರಿ. ಸ್ವಪ್ನವು ಜಾಗ್ರದವಸ್ಥೆಯ ಅನುಭವಗಳಿಗೆ ಜಾಗ್ರಜ್ಜಗತ್ತಿನ ಆಕಾರಗಳನ್ನೇ ಕಲ್ಪಿಸಿದರೆ ಆಗ ಆ ಸೃಷ್ಟಿ ಪ್ರತಿಕೃತಿಯಾಗುತ್ತದೆ. ಹಾಗಲ್ಲದೆ ಜಾಗ್ರದವಸ್ಥೆಯ ಅನುಭವಕ್ಕೆ ಸಾಂಕೇತಿಕಪ್ರತಿಯನ್ನು ನಿರ್ಮಿಸಿದರೆ ಆಗ ಆ ಸೃಷ್ಟಿ ಪ್ರತಿಮೆಯಾಗುತ್ತದೆ. ಆ ಪ್ರತಿಮೆಯಂತಹ ಆಕೃತಿಯನ್ನು ನಾವು ಜಾಗ್ರದವಸ್ಥೆಯ ಜಗತ್ತಿನಲ್ಲಿ ಎಲ್ಲಿಯೂ ಎಂದೂ ಕಾಣದಿದ್ದರೂ ಅದನ್ನು "ಸುಳ್ಳು" ಎನ್ನಲಾಗುವುದಿಲ್ಲ. ಕನಸೂ ಎಚ್ಚರೂ ಬೇರೆಬೇರೆ ಭೂಮಿಕೆಗಳು. ಒಂದಿರುವಾಗ ಮತ್ತೊಂದಿರುವುದಿಲ್ಲ. ಅವುಗಳಲ್ಲಿ ಯಾವೊಂದರಲ್ಲಿ ನಾವಿರುವಾಗಲಾಗಲಿ ನಮ್ಮ ಅನುಭವವು ಮತ್ತೊಂದರಿಂದ ಅಬಾಧಿತ. ಒಂದರ ಆಳಿಕೆ ಮತ್ತೊಂದಕ್ಕಿಲ್ಲ. ಅದರದರ ಶಾಸನ ಅದರದರ ನೆಲದಲ್ಲಿ ಮಾತ್ರ ಮಾನ್ಯ. ಇದು ಅದಕ್ಕೆ, ಅದು ಇದಕ್ಕೆ ಶೂನ್ಯ. ಆದ್ದರಿಂದಲೆ ಒಂದರ ಸತ್ಯಮಾನದಿಂದ ಮತ್ತೊಂದನ್ನು ಅಳೆಯಲಳವಲ್ಲ. ಜಾಗ್ರತ್ ಸತ್ತೆಯ ಒರೆಗಲ್ಲಿಗೆ ತಿಕ್ಕಿ ಸ್ವಪ್ನದ ಸೃಷ್ಟಿಯನ್ನು "ಮಿಥ್ಯೆ" ಎನ್ನುವುದು ಏಕಪಕ್ಷೀಯ ಇತ್ಯರ್ಥ. ಸ್ವಪ್ನ ಸತ್ತೆಯ ಪ್ರತಿಮೆಯ ಸತ್ಯತೆ ಇರುವುದು ಅದರ ಹೊರಮೈಯಲ್ಲಲ್ಲ; ಅದಕ್ಕೆ ಕಾರಣವಾದ ಅನುಭವದಲ್ಲಿ. ಆ ಅನುಭವ ಕನಸಿಗೂ ಎಚ್ಚರಿಗೂ ಎರಡಕ್ಕೂ ಸತ್ಯ. ಆ ಅನುಭವದ ದೃಷ್ಟಿಗೆ ಎಚ್ಚರು ಕನಸುಗಳೆರಡೂ ಸಮಪ್ರಮಾಣದ ಸತ್ಯಗಳು.

ಉದಾಹರಣೆಗಾಗಿ, ಒಬ್ಬನಿಗೆ ಈ ಕನಸು ಬೀಳುತ್ತದೆ: ಅವನೂ ಅವನ ಮಿತ್ರರೂ ಒಂದು ಕಡಿದಾದ ಬೆಟ್ಟವನ್ನೇರುತ್ತಿದ್ದಾರೆ. ಗೆಳೆಯರೆಲ್ಲರಿಗಿಂತಲೂ ತಾನು ಮುಂದಾಗಬೇಕೆಂದು ಬೇಗಬೇಗನೆ ಹತ್ತುತ್ತಿದ್ದಾನೆ. ಬಹುಬೇಗನೆ, ಆದರೂ ಪ್ರಯಾಸದಿಂದ, ಎಲ್ಲರಿಗಿಂತಲೂ ಮುಂದಾಗಿ, ಬಹಳ ಎತ್ತರದಲ್ಲಿ, ಬಹಳ ಕಡಿದಾದ ಓರೆಯಲ್ಲಿ, ಮುಂಬರಿಯುತಿದ್ದಾನೆ. ಇದ್ದಕ್ಕಿದ್ದ ಹಾಗೆ ಫಕ್ಕನೆ ಕಾಲು ಜಾರುತ್ತದೆ. ಎಷ್ಟು ಪ್ರಯತ್ನಿಸಿದರೂ ನಿತ್ತರಿಸಲಾಗುವುದಿಲ್ಲ. ಬೆಟ್ಟದೋರೆಯೋ ಬಲು ಕಡಿದು. ಕೆಳಗೆ ನೇರವಾಗಿ ಒಂದು ಸರೋವರವಿದೆ. ಬಿದ್ದರೆ ಮುಳುಗಿಯೇ ಹೋಗುತ್ತಾನೆ. ದಡ

ದಡ ದಡನೆ ಉರುಳತೊಡಗುತ್ತಾನೆ. ಅಯ್ಯೋ ಎನ್ನುತ್ತಿರುವಾಗಲೆ ಎಚ್ಚರಾಗುತ್ತದೆ. ಕನಸು ಒಡೆಯುತ್ತದೆ. ಮೈ ಬೆವರಿದೆ! ಎದೆ ಡವಗುಡುತ್ತಿದೆ! ತಿದಿಯೊತ್ತುತ್ತಿದೆ ಉಸಿರು!

ಆ ಕನಸು ಸಟೆಯೋ ದಿಟವೋ? ಆಗತಾನೆ ತಾನು ಸಾಕ್ಷಾತ್ತಾಗಿ ಅನುಭವಿಸಿದುದನ್ನು ಸಟೆ ಎನ್ನುವುದು ಹೇಗೆ? ಜಾಗ್ರಜ್ಜಗತ್ತಿನಲ್ಲಿ ಎಲ್ಲಿಯೂ ಇರದುದನ್ನು, ಯಾರೂ ಕಾಣದುದನ್ನು ದಿಟ ಎನ್ನುವುದಾದರೂ ಹೇಗೆ?

ಬೆಟ್ಟವೇರುತ್ತಿದ್ದ ಉದ್ವೇಗದ ಅನುಭವ ಇನ್ನೂ ಇದೆ. ಜಾಗ್ರಜ್ಜಗತ್ತಿನಲ್ಲಿ ಒಮ್ಮೆ ಕಂಡದ್ದನ್ನು ಮತ್ತೆ ಹೇಗೆ ಬಗೆಯಲ್ಲಿ ಚಿತ್ರಿಸಿಕೊಳ್ಳಬಹುದೋ ಹಾಗೆಯೆ ಆ ಬೆಟ್ಟದ, ಆ ಸರೋವರದ, ಆ ಏರಿಕೆಯ, ಆ ಜಾರಿಕೆಯ ಚಿತ್ರ ಕಣ್ಣಿಗೆ ಕಟ್ಟಿದಂತಿದೆ. ಅದಿರಲಿ. ಮೈ ಬೆವರಿರುವುದೂ ಎದೆ ಹೊಡೆದುಕೊಳ್ಳುತ್ತಿರುವುದೂ ಉಸಿರು ತಿದಿಯೊತ್ತುತಿರುವುದೂ ಕನಸಿನ ಸತ್ಯಕ್ಕೆ ಎಚ್ಚರೂ ಸಾಕ್ಷಿ ಹೇಳುವಂತಿವೆಯಲ್ಲಾ! ಹೀಗಿರುವಾಗ ಆ ಕನಸಿನ ಅನುಭವಗಳನ್ನು ಸಟೆ ಎನ್ನುವುದೆಂತು?

ಇಲ್ಲಿಯೆ ಕೋಣೆಯಲ್ಲಿ ಮಲಗಿದ್ದಾನೆ. ಹಾಕಿದ ಅಗಣಿ ಹಾಕಿದಂತೆಯೆ ಇದೆ. ಅವನೆಲ್ಲಿಯೂ ಹೊರಗೆ ಹೋಗಿಲ್ಲ. ಆ ಬೆಟ್ಟ ಸರೋವರಗಳು ಕೋಣೆಯೊಳಗೆ ಬರುವುದು ಅಸಾಧ್ಯ. ಅವನ ಕಾಲಿಗೆ ಮಣ್ಣು ಹಿಡಿದಿಲ್ಲ. ಜಾರಿದಾಗ ಕೈ ಕೀಸಿಲ್ಲ. ಮೈ ಗಾಯಗೊಂಡಿಲ್ಲ; ನೋಯುತ್ತಲೂ ಇಲ್ಲ. ಅವನು ಅಂತಹ ಸಾಹಸದಿಂದ ಮರಳಿದುದಕ್ಕೆ ಜಾಗ್ರತ್‌ಪ್ರಾಪಂಚಿಕವಾದ ಯಾವ ಕುರುಹೂ ಕಂಡುಬರುವುದಿಲ್ಲ. ಹೀಗಿರುವಲ್ಲಿ ಆ ಕನಸು ದಿಟ ಎನ್ನುವುದೆಂತು?

ಕನಸಿನ ಹೊರಮೈಯನ್ನು ಮಾತ್ರ ಲಕ್ಷಿಸಿದರೆ ಈ ತೊಡಕು ಏಳುತ್ತದೆ. ಅನುಭವವನ್ನು ಗಮನಿಸಿದರೆ ಸಮಸ್ಯೆ ಪರಿಹಾರವಾಗುತ್ತದೆ. ಯಾವ ಮೂಲಾನುಭವವು ಅಥವಾ ಮೂಲವಾಸನೆಯು ಕನಸು ಮೈಗೊಳ್ಳುವುದಕ್ಕೆ ಕಾರಣವಾಯಿತೋ ಅದು ಎಚ್ಚರಿಗೂ ಕನಸಿಗೂ ಸಮಸತ್ಯ. ಆತ್ಮದಲ್ಲಿ ಅಂತರ್ನಿಗೂಢವಾಗಿರುವ ಆ ಮೂಲವಾಸನೆಗೆ ಕನಸಿನಲ್ಲಿ ಪ್ರತಿಮಾರೂಪವಾದ ಅಭಿವ್ಯಕ್ತಿ ದೊರೆಕೊಂಡಿದೆ. ಆ ಪ್ರತಿಮೆ ಸ್ವಪ್ನಾವಸ್ಥೆಗೆ ಸತ್ಯ; ಜಾಗ್ರದವಸ್ಥೆಗೆ ಮಿಥ್ಯೆ. ಆದರೆ, ತಾನು ಎಲ್ಲರನ್ನೂ ಮೀರಿಸಿ ಮುಂದುವರಿಯಬೇಕೆಂಬ ಮಹತ್ವಾಕಾಂಕ್ಷೆ, ಅದು ಬಹಳ ಕಷ್ಟಸಾಧ್ಯ ಎಂಬ ಅರಿವು, ಆ ಮೇಲಾಟದಲ್ಲಿ ತಾನೆಲ್ಲಿ ಹಿಂದೆ ಬೀಳುವೆನೋ ಕೆಳಗುರುಳುವೆನೋ ಎಂಬ ಅಳುಕು,— ಇವೇ ಮೊದಲಾದುವುಗಳ ಮೂಲವಾಸನೆಯ ಸಂಸ್ಕಾರವು ಎರಡು ಅವಸ್ಥೆಗಳಿಗೂ ಏಕಮಾತ್ರ ಸತ್ಯ. ಅಂದರೆ, ಆ ಕಡಿದಾದ ಬೆಟ್ಟವು ಕನಸಿಗೆ ನಿಜವಾಗಬಹುದು; ಎಚ್ಚರಿಗೆ ಸುಳ್ಳಾಗಬಹುದು. ಆದರೆ ಆ ಕಡಿವೂ ಆ ಬೆಟ್ಟವೂ

ಯಾವ ಭಾವಗಳಿಗೆ, ಎಂದರೆ ಕಷ್ಟಸಾಧ್ಯತೆ ಮತ್ತು ಅಭ್ಯುದಯಕಾಂಕ್ಷೆಗಳಿಗೆ, ಪ್ರತಿಮೆಗಳೋ ಆ ಭಾವಗಳೂ ಅವುಗಳನ್ನು ಆಶ್ರಯಿಸಿ ಹೊಮ್ಮುವ ಎಲ್ಲ ಅನುಭವಗಳೂ ಎರಡು ಸತ್ತೆಗಳಿಗೂ ಸತ್ಯ. ಈ ಭಾವಸತ್ಯದ ಮತ್ತು ಅದು ವ್ಯಕ್ತಗೊಳ್ಳುವ ಪ್ರತಿಮಾವಿಧಾನದ ಮರ್ಮವನ್ನು ಗ್ರಹಿಸಿದರೆ, ಸ್ವಪ್ನಜಗತ್ತಿಗೂ ಜಾಗ್ರಜ್ಜಗತ್ತಿಗೂ ನಡುವೆಯೆಂಬಂತಿದ್ದು ಆ ಎರಡು ಸತ್ತೆಗಳ ಲಕ್ಷಣಗಳನ್ನೂ ಒಳಕೊಂಡಿರುವ ಕಾವ್ಯಸತ್ತೆಯ ಮಹಿಮೆಯನ್ನರಿತು ಕ್ರಮೇಣ ಕೇವಲ ರಸವಾದ ಬ್ರಹ್ಮವನ್ನು ಸಾಕ್ಷಾತ್ಕರಿಸಲು ಸಮರ್ಥರಾಗುತ್ತೇವೆ.[1]

ದಶಗ್ರೀವನಿಂದ ಅಶೋಕವನದಲ್ಲಿ ಬಂಧಿತಳಾಗಿದ್ದ ಸೀತಾದೇವಿಯನ್ನು ಹುಡುಕುವ ಮಹತ್ಕಾರ್ಯಕ್ಕೆ ಹೊರಟ ಅಲಘುಪರಾಕ್ರಮಿ ಆಂಜನೇಯನು ತನ್ನ ಪ್ರಯತ್ನದಲ್ಲಿ ಸಫಲನಾಗಿ ಹಿಂತಿರುಗಿದನಷ್ಟೆ? ಕಡಲ ನಡುವೆಯಿದ್ದ ಆ ರಾಕ್ಷಸ ದ್ವೀಪಕ್ಕೆ ಅವನು ದಾಟಿದ್ದು ಹೇಗೆ? ಈಜಿ ದಾಟಿದನೆ? ತೆಪ್ಪವೇರಿ ಹೋದನೆ? ದೋಣಿಯ ಸಹಾಯದಿಂದ ಪಾರಾವಾರದ ಅಪಾಯಗಳಿಂದ ಪಾರಾದನೆ?—ಚರಿತ್ರಕಾರನು ತನ್ನ ಸಮಸ್ತ ಸಂಶೋಧನ ಶಕ್ತಿಯನ್ನು ಆಂಜನೇಯನು ವಾಸ್ತವವಾಗಿ ಯಾವ ಸಲಕರಣೆಯ ಸಹಾಯದಿಂದ ಸಮುದ್ರವನ್ನು ದಾಟಲು ಸಮರ್ಥನಾದನು ಎಂಬ ಪ್ರಾಪಂಚಿಕ ಸತ್ಯದ ನಿರ್ಣಯಕ್ಕಾಗಿ ವಿನಿಯೋಗಿಸುತ್ತಾನೆ. ಅವನಿಗೆ ಬೇಕಾದುದು ವಾಸ್ತವವಾಗಿಯೂ ನಡೆದ ಘಟನೆಯ ಪ್ರತಿಕೃತಿ. ಆದರೆ ಕಾವ್ಯದ ರೀತಿ ಪ್ರತಿಕೃತಿಯ ರೀತಿಯಲ್ಲ.

ಕಾವ್ಯವೂ ಸತ್ಯಶೀಲವಾದುದೇ. ಕಾವ್ಯವೂ ಸತ್ಯವನ್ನೇ ಪ್ರತಿಪಾದಿಸುತ್ತದೆ. ಆದರೆ ಅದು ಹಿಡಿಯುವ ಸತ್ಯ ಭಾವಸತ್ಯ. ಬಹಿರ್ಲೌಕಿಕ ಸತ್ಯಕ್ಕಿಂತಲೂ ಸತ್ಯತರವಾದ ಅನುಭವಸತ್ಯ. ಚರಿತ್ರಕಾರನಂತೆಯೆ ವಾಲ್ಮೀಕಿ ಆಂಜನೇಯನು ಲಂಕೆಗೆ ಹೋಗಿ ಹಿಂತಿರುಗಿದುದನ್ನು ಒಪ್ಪಿಕೊಳ್ಳುತ್ತಾನೆ. ಆಂಜನೇಯನ ಆ ಸಾಹಸವನ್ನು ಮನನಮಾಡುತ್ತಾನೆ. ಅವನು ಉತ್ತರಿಸಿರಬಹುದಾದ ಭಯಂಕವಾದ ಅಪಾಯಗಳನ್ನು ಊಹಿಸುತ್ತಾನೆ. ಕೃತಕಾರ್ಯನಾದ ಆತನ ಆತ್ಮದ ಅದ್ಭುತಶಕ್ತಿ, ಅಪಾರ ಮಹಿಮೆ, ಅದಮ್ಯ ಧೈರ್ಯ, ಸಾಗರೋಪಮ ಸಾಹಸಗಳನ್ನು ಭಾವಿಸುತ್ತಾನೆ. ಉಂಟಾಗುವ ಅನುಭವವೊ ರೋಮಾಂಚನಕಾರಿ! ಆಂಜನೇಯನು ಲಂಕೆಗೆ ಹೋಗಿ

[1] The worlds are only frames for our experience, the senses only instruments of experience and conveniences. Consciousness is the great underlying fact, the universal witness for whom the world is a field, the senses instruments. To that witness the worlds and the objects appeal for their reality.—*The Life Divine*, ch. *III*—Sri Aurobindo.

ಬಂದ ಚರಿತ್ರವಿಷಯದ ಜೀವಕ್ಕೆ ಆ ರೋಮಾಂಚನಕಾರಿಯಾದ ಅನುಭವವೆ ಹೃದಯ. ಅದಿಲ್ಲದೆ ಉಳಿದುದೆಲ್ಲ, ಅದು ಎಂತಹ ಲೆಕ್ಕಾಚಾರವಾಗಿ ಅಳೆದು ತೂಗಿದ ಚರಿತ್ರಸತ್ಯವಾದರೂ, ಬರಿಯ ಕಳೇಬರ. ಯಥಾರ್ಥವೆನ್ನಿಸಿಕೊಳ್ಳುವ ಚಾರಿತ್ರಕ ಘಟನೆಗಳಿಗಿಂತಲೂ ಆ ಘಟನೆಗೆ ಕಾರಕಪ್ರೇರಕಗಳಾದ ಆತ್ಮಾನುಭವಗಳೇ ಕವಿ ದೃಷ್ಟಿಗೆ ಸತ್ಯತರ ಯಥಾರ್ಥಗಳಾಗುತ್ತವೆ. ಆದ್ದರಿಂದ ಅವನ ಕೃತಿ ಪ್ರಯತ್ನಿಸು ವುದು ಚರಿತ್ರಸತ್ಯ ಪ್ರತಿಪಾದನೆಯನ್ನಲ್ಲ, ಅನುಭವಸತ್ಯ ಪ್ರತಿಪಾದನೆಯನ್ನು. ಚಾರಿತ್ರಕಸತ್ಯವನ್ನೆಲ್ಲ ನಿಷ್ಕೃಷ್ಟವಾಗಿ ಕಂಡುಹಿಡಿದು ಹೇಳಿದಮೇಲೆಯೂ ತತ್ಕಾರ್ಯ ಸಿದ್ಧನಾದ ಅಂಜನಾಸುತನ ಸತ್ಯತರವಾದ ಮಹದ್‌ಮಹಿಮೆಯ ಅನುಭೂತಿ ಸಹೃದಯ ವಾಚಕರಲ್ಲಿ ಆವಿರ್ಭವಿಸದಿದ್ದರೆ ಕವಿಯ ಭಾಗಕ್ಕೆ ಆ ಪ್ರಯತ್ನವೆಲ್ಲ ವ್ಯರ್ಥ. ಅದರ ಸತ್ಯ ಸುಳ್ಳಿಗಿಂತಲೂ ಕೀಳಾದ ಶವಸತ್ಯ. ಆದ್ದರಿಂದಲೇ ಕವಿ ಆಂಜನೇಯನು ಸಮುದ್ರವನ್ನು ವಾಸ್ತವವಾಗಿ ಹೇಗೆ ದಾಟಿದನೆಂಬ ಚರಿತ್ರಸತ್ಯದ ಸಂಶೋಧನೆಯ ಮೋಘಕಾರ್ಯಕ್ಕೆ ಕೈಹಾಕದೆ ಸಾಗರೋಲ್ಲಂಘನದ ಮಹಾ ಪ್ರತಿಮಾರಚನೆಗೆ ತನ್ನ ಪ್ರತಿಭಾಸಮಸ್ತವನ್ನು ನಿವೇದಿಸಿದ್ದಾನೆ. ಆ ಪ್ರತಿಮೆ ರಾಮದೂತನ ವ್ಯೋಮ ಸಾಹಸದ ಸಂಪೂರ್ಣಾನುಭೂತಿಯನ್ನು ಅದನ್ನು ಓದಿದವರೆಲ್ಲರಿಗೂ ದಾನಮಾಡು ತ್ತದೆಯಾದ್ದರಿಂದ ಅದೇ ನಿಜತರವಾದ ಸತ್ಯ, ಅಂತಸ್ಸತ್ಯ, ಅನುಭವಸತ್ಯ.[1]

ಪ್ರತಿಕೃತಿಯಿಂದ ಸಾಧ್ಯವಲ್ಲದಿರುವಾಗ ಪ್ರತಿಮೆಯ ಮೂಲಕ ಸತ್ಯಸ್ಯ ಸತ್ಯ ವಾದ ಅನುಭೂತಿಯನ್ನು ಸಹೃದಯರಲ್ಲಿ ಮೂಡಿಸುತ್ತದೆ ಕವಿಕೃತಿ.

ಮೇಲಣ ಸಮಾಲೋಚನೆ—ಪ್ರತಿಮಾರಚನೆ ಪ್ರಜ್ಞಾಪೂರ್ವಕವಾದ ಬುದ್ಧಿಪ್ರಯತ್ನ ದಿಂದ ಸಿದ್ಧವಾಗುತ್ತದೆ — ಎಂಬ ಭಾವನೆಗೆ ಅವಕಾಶವಿತ್ತಿದ್ದರೆ ಆ ತಪ್ಪನ್ನು ತಿದ್ದಿ ಕೊಳ್ಳುವುದು ಅವಶ್ಯ ಕರ್ತವ್ಯ. ಕಾವ್ಯಾಭಿವ್ಯಕ್ತಿಗೆ ಅಥವಾ ಭಾವಪ್ರಕಾಶನಕ್ಕೆ ಆವಶ್ಯಕವಾದ ಸಾಮಗ್ರಿ ಸಂವಿಧಾನಗಳು ಕವಿಪ್ರತಿಭೆಗೆ ಬಾಹ್ಯಜಗತ್ತಿನಿಂದ ಬುದ್ಧಿಯ ಮೂಲಕ ದೊರೆಯುತ್ತವಾದರೂ ಆ ಅಭಿವ್ಯಕ್ತಿಯ ಅಥವಾ ಪ್ರಕಾಶನದ ಸೃಷ್ಟಿಮುಹೂರ್ತವು ಬುದ್ಧಿಗತವಾಗಿರದೆ ಅದಕ್ಕೆ ಅತೀತವೂ ಭಿತ್ತಿರೂಪವೂ ಆಗಿರುವ ‘ಅಪ್ರಜ್ಞಾವಲಯ’ಕ್ಕೆ ಸೇರಿರುತ್ತದೆ. ಏಕೆಂದರೆ ಅನುಭವಕ್ಕೆ ಸಾಂಕೇತಿಕವಾದ ಪ್ರತಿಮಾರಚನೆ ಸುಪ್ತಚಿತ್ತದಲ್ಲಿ ಸಾಗುವ ಗುಪ್ತಕರ್ಮ. ವಾಸನಾ ಸಂಸ್ಕಾರಗಳಿಗೆ ಪ್ರತಿಮಾಲೋಕಗಳನ್ನು ಸೃಜಿಸುವ ಸ್ವಪ್ನವು ಹೇಗೆ ನಮ್ಮ ಜಾಗ್ರತ್ತಿನ ಬುದ್ಧಿಗೆ

---

[1] Form and matter can be valid only as shape and substance of manifestation for the incorporeal and immaterial. They are in their nature an act of divine consciousness, in their aim the representation of a status of the spirit.

—*The Life Divine*, p. 55, Sri Aurobindo.

ಒಳಗಾಗುವುದಿಲ್ಲವೋ ಹಾಗೆಯೇ ಕಾವ್ಯದಲ್ಲಿ ಕವೀಂದ್ರನ ಮಹದನುಭವಗಳಿಗೆ ಪ್ರತಿಮಾಭುವನಗಳನ್ನು ಕೃತಿಗೆಯ್ಯುವ ಕಲಾಪ್ರತಿಭೆಯೂ ಬುದ್ಧಿತಂತ್ರವಾಗಿರುವುದಿಲ್ಲ. ಹಾಗೆ ಬುದ್ಧಿತಂತ್ರವಲ್ಲದಿರುವುದರಿಂದಲೇ ಜನ್ಮತಃ ವರಕವಿಯಲ್ಲದ ಯಾವನೂ ಪಾಂಡಿತ್ಯಬಲದಿಂದ ಪ್ರಯತ್ನಪೂರ್ವಕವಾಗಿ ಮಹತ್ಕಾವ್ಯಗಳನ್ನಾಗಲಿ ಅಥವಾ ಇನ್ನಾವ ಕಲಾವಲಯದ ಮಹದ್‌ಪ್ರತಿಮೆಗಳನ್ನಾಗಲಿ ಸೃಷ್ಟಿಸಲು ಅಸಮರ್ಥನಾಗುತ್ತಾನೆ.

ಮೂಲಾನುಭವಕ್ಕೂ ಅದರ ಸಾಂಕೇತಿಕ ಪ್ರತಿಮೆಗೂ ಅತ್ಯಂತನಿಕಟವೂ ವಿಶ್ಲೇಷಣವಿದೂರವೂ ಆದ ಜೀವಸಂಬಂಧವಿರುತ್ತದೆ. ಪ್ರತಿಮೆ ಎಂಬುದು ಮೂಲಾನುಭವಕ್ಕೆ 'ನಾವು' ನೀಡುವ ಆಕಾರವಲ್ಲ. ಅದು ಮೂಲಾನುಭವವು ತನಗೆ ಅನಿವಾರ್ಯವೂ ಆವಶ್ಯಕವೂ ಆಗಿರುವ ಸಹಜಧರ್ಮದ ಪ್ರೇರಣಶಕ್ತಿಯಿಂದ ಪಡೆಯುವ ರೂಪಧಾರಣೆ. ಅದೊಂದು ಅವತರಣಕ್ರಿಯೆ.

ತತ್ತ್ವಶಾಸ್ತ್ರವೂ ವಿಜ್ಞಾನಶಾಸ್ತ್ರವೂ ಇಂದ್ರಿಯ ಗ್ರಾಹ್ಯವಾದ ಈ ಪ್ರಪಂಚವನ್ನೇ ಪ್ರತಿಮಾಕ್ರಿಯೆ ಎಂದು ಸಾರುತ್ತಿವೆ. ತತ್ತ್ವಶಾಸ್ತ್ರದಲ್ಲಿ ಅದು ಮಾಯಾವಾದದಿಂದ ಸೂಚಿತವಾಗಿದೆ. ನವೀನ ವಿಜ್ಞಾನವೂ ಇಂದ್ರಿಯ ಗ್ರಾಹ್ಯವಾದ ವರ್ಣಶಬ್ದಾದಿಗಳಿಂದ ನಮಗೆ ಅತ್ಯಂತ ವಾಸ್ತವವಾಗಿ ತೋರುತ್ತಿರುವ ಈ ಭೌತ ವಿಶ್ವವು ವಿದ್ಯುದಣುಗಳ ವರ್ತುಲನರ್ತನಕ್ಕೂ ಕಾಲದೇಶದ ವಂಕಿಮತೆಗೂ ಪಂಚೇಂದ್ರಿಯಾತ್ಮಕವಾದ ನಮ್ಮ "ಮೂಲಾವಿದ್ಯೆ" ನೀಡುವ ಪ್ರತಿಮಾ ಸಮುದಾಯಗಳ ಫಲ ಎಂದು ವಾದಿಸುತ್ತಿದೆ. ಆ ದೃಷ್ಟಿಯಿಂದ ವಿಚಾರಿಸಿದರೆ ಯಥಾರ್ಥವಾಗಿ, ಸ್ಥೂಲವಾಗಿ, ಸತ್ಯವಾಗಿ, ಶಾಶ್ವತವಾಗಿ ತೋರುತ್ತಿರುವ ಈ ಬೃಹಜ್ಜಗತ್ತೂ ಆತ್ಮದ ಸಂಸ್ಕಾರಕೋಟಿಯ ಅವಶ್ಯ ನಿಯಮಗಳಿಗನುಗುಣವಾಗಿ ಅನಿವಾರ್ಯವಾಗಿ ಮೂಡಿರುವ ಒಂದು ಮಹದ್‌ಪ್ರತಿಮೆಯಾಗುತ್ತದೆ.[1]

ಸ್ವಪ್ನಸತ್ತೆ ಒಂದು ಪ್ರತಿಮಾಪ್ರಪಂಚ ಎಂಬುದನ್ನು ಹಿಂದೆ ವಿವರಿಸಿದ್ದೇವೆ. ಜಾಗ್ರತ್ತಿನ ಈ ಪ್ರಪಂಚವೂ ಒಂದು ಮಹಾ ಪ್ರತಿಮಾಸೃಷ್ಟಿ ಎಂಬುದನ್ನು ಗಣ್ಯವೂ ಅಗ್ರಗಣ್ಯವೂ ಆಗಿರುವ ತತ್ತ್ವ ಮತ್ತು ವಿಜ್ಞಾನ ಶಾಸ್ತ್ರಗಳೆರಡೂ ಒಪ್ಪಿಕೊಳ್ಳುತ್ತವೆ. ಕಾವ್ಯಸತ್ತೆ ಸ್ವಪ್ನ ಮತ್ತು ಜಾಗ್ರತ್ ಸತ್ತೆಗಳೆರಡರ ಲಕ್ಷಣಗಳನ್ನೂ ಒಳಗೊಂಡು ಅವೆರಡರ ನಡುವೆ ನಿಲ್ಲುವ ಮತ್ತೊಂದು ಪ್ರತಿಮಾಪ್ರಪಂಚವಾಗುತ್ತದೆ.

---

[1] ಯ ಏಕೋಽವರ್ಣೋ ಬಹುಧಾ ಶಕ್ತಿಯೋಗಾತ್ |
ವರ್ಣಾನನೇಕಾನ್ನಿಹಿತಾರ್ಥೋ ದಧಾತಿ ||

— ಶ್ವೇತಾಶ್ವತರೋಪನಿಷತ್

ಎಂದರೆ, ಸ್ವಪ್ನ ಸತ್ಯ, ಕಾವ್ಯಸತ್ಯ ಮತ್ತು ಜಾಗ್ರತ್‌ಸತ್ಯ ಇವು ಮೂರೂ ಒಂದೇ ಮೂಲಾನುಭವವು ಬೇರೆ ಬೇರೆ ಭೂಮಿಕೆಗಳಲ್ಲಿ ಮೈದೋರುವ ಬೇರೆ ಬೇರೆ ಪ್ರತಿಮಾ ವಿಧಾನಗಳಾಗುತ್ತವೆ. ಅದರದರ ಪ್ರತಿಮಾಸತ್ಯ ಅದರದರ ಭೂಮಿಕೆಗೆ ಮಾತ್ರ ಅಬಾಧಿತವಾಗಿ ಅನ್ವಯವಾಗುತ್ತದೆ. ಆತ್ಮಾನುಭವ ಮಾತ್ರ ಎಲ್ಲ ಭೂಮಿಕೆಗಳಿಗೂ ಸಾಮಾನ್ಯ.

ಸ್ವಪ್ನಪ್ರಪಂಚವನ್ನು ಕಾವ್ಯಪ್ರಪಂಚದ ಒರೆಗಲ್ಲಿಗೆ ತಿಕ್ಕಿದರೆ ಸ್ವಪ್ನವು ಹುಸಿಯಾಗಿ ತೋರಬಹುದು. ಕಾವ್ಯಪ್ರಪಂಚವನ್ನು ಜಾಗ್ರತ್ ಪ್ರಪಂಚದ ಬೀದಿ ಗೆಳೆದರೆ ಅದೂ ಮಿಥ್ಯೆಯಾಗಿ ತೋರಬಹುದು. ಬ್ರಹ್ಮಾನುಭೂತಿಯ ಕೇವಲ ಸತ್ಯಕ್ಕೆ ಉಳಿದುವೆಲ್ಲವೂ ಮಾಯೆಯಾಗುತ್ತವೆ ಎಂಬುದು ಸಿದ್ಧಪುರುಷರೆಲ್ಲರ ನಿತ್ಯ ಪಲ್ಲವಿಯಾಗಿದೆ.

ಜಾಗ್ರಜ್ಜಗತ್ತಿನ ಪಂಚೇಂದ್ರಿಯ ಪ್ರತಿಮೆಗಳಿಗೂ ಸ್ವಪ್ನಜಗತ್ತಿನ ಪ್ರತಿಮೆಗಳಿಗೂ ವ್ಯಕ್ತಿ ಹೇಗೆ ಆತ್ಮತಂತ್ರ—ಅಸ್ವತಂತ್ರ ಕಾರಣನೋ ಹಾಗೆಯೆ ಕವಿಪ್ರತಿಭೆ ಕಾವ್ಯಜಗತ್ತಿನ ಪ್ರತಿಮೆಗಳಿಗೆ ಆತ್ಮತಂತ್ರ ಅಸ್ವತಂತ್ರ ಕಾರಣವಾಗುತ್ತದೆ.

ಆತ್ಮತಂತ್ರ ಏಕೆಂದರೆ, ಅನುಭವವು ತನ್ನ ಆತ್ಮಧರ್ಮದ ಕಟ್ಟಳೆಗಳಿಗೆ ಒಳಗಾಗಿ, ತನ್ನ ಅಂತರಾವಶ್ಯಕತೆಗಳಿಗೆ ಅನುರೂಪವಾಗಿ, ಪ್ರಕಾಶನದ ಸ್ವರೂಪವನ್ನೂ ನಾಮ ರೂಪಗಳನ್ನೂ ನಿರ್ಣಯಿಸಿಕೊಳ್ಳುತ್ತದೆ. ಅಸ್ವತಂತ್ರ ಏಕೆಂದರೆ, ಅಂತಹ ನಿರ್ಣಯದ ಫಲವಾಗಿ ಮೈದೋರುವ ಪ್ರತಿಮಾಲೋಕದ ಅನೇಕಾಂಶಗಳಲ್ಲಿ ಒಂದಂಶವಾಗಿರುವ ನಮ್ಮ ಬುದ್ಧಿ ಮತ್ತು ಅದರ ಪ್ರಯತ್ನಗಳು ತಮಗೇ ಕಾರಣವಾದ ಆ ಪ್ರತಿಮಾ ಸೃಷ್ಟಿಗೇ ಕಾರಣವಾಗಲು ಸಾಧ್ಯವಲ್ಲ.

ಆದ್ದರಿಂದ ಮಹಾಕವಿ ಸೃಷ್ಟಿಯ ಪ್ರತಿಮಾ ಜಗತ್ತು, ಭಾವಸತ್ಯಾನುಭವದ ದೃಷ್ಟಿಯಿಂದ, ಬ್ರಹ್ಮಸೃಷ್ಟಿಯ ಪ್ರತಿಮಾಜಗತ್ತಿನಷ್ಟೇ ಸತ್ಯ ಅಥವಾ ಮಿಥ್ಯೆ.[1] ಇನ್ನೂ ಒಂದು ಹೆಜ್ಜೆ ಮುಂದುವರಿದು ಹೇಳುವುದಾದರೆ, ನಾಮರೂಪಗಳ ದೃಷ್ಟಿಯಿಂದಲೂ, ಕವಿಕೃತಿ ಲೋಕವು ಪ್ರಕೃತಿ ಲೋಕಕ್ಕಿಂತಲೂ ಹೆಚ್ಚು ಸ್ಥಿರ, ಮತ್ತು ಸತ್ಯಕರ. ಕವಿಪ್ರತಿಭೆಯ ರಸಕ್ರಿಯೆ ಲೌಕಿಕ ನಶ್ವರಕ್ಕೆ ಅಮೃತತ್ವವನ್ನು ದಯಪಾಲಿಸುತ್ತದೆ; ಕಾಲದೇಶದ ಮೃತ್ಯುಪಂಜರದಿಂದ ಪಾರುಮಾಡಿ, ವಿಸ್ಮೃತಿಯ ವೈತರಣಿಯಲ್ಲಿ ಅದನ್ನು ಮುಳುಗಲೀಯದೆ ಉದ್ಧಾರಮಾಡುತ್ತದೆ. ಸ್ವಲ್ಪ ಸಂಖ್ಯೆಯ ಜನದ, ಸ್ವಲ್ಪ ಕಾಲದ ಮತ್ತು ಪರಿಮಿತ ದೇಶದ ಸ್ವಾರ್ಥತಾಸಂಕುಚಿತವಲಯಬದ್ಧವಾದ ಭಾವಾನು

[1] Its nature is to be not a part, nor yet a copy of the real world (as we commonly understand that phrase) but to be a world by itself, independent, complete, autonomous.—A. C. Bradley.

ಭವಗಳನ್ನು ಅಸಂಖ್ಯಾತ ಮಾನವರ ಸಾರ್ವಕಾಲಿಕ ಮತ್ತು ಸಾರ್ವದೇಶಿಕವೂ, ಸ್ವಾರ್ಥತಾವಿಮುಕ್ತವೂ, ವಿಶ್ವವಿಶಾಲವೂ ಆದ ಭಾವಾನುಭವಗಳನ್ನಾಗಿ ಮಾಡಿ, ಅಚಿರವೂ ಪ್ರಾಪಂಚಿಕವೂ ಆದ ನಾಮರೂಪಕ ಸತ್ಯಗಳನ್ನು ಅಲೌಕಿಕವೂ ನಿತ್ಯವೂ ಆದ ಚಿರಾನುಭವ ಸತ್ಯಕ್ಕೆ ಪರಿವರ್ತಿಸುತ್ತದೆ.

ಆದ್ದರಿಂದಲೆ ಸಾಹಿತ್ಯಸೀಮೆಯಲ್ಲಿ ಮಾತ್ರವಲ್ಲದೆ ಇತರ ಕಲಾವಲಯಗಳಲ್ಲಿಯೂ ಮತ್ತು ಮತಪ್ರಪಂಚಗಳಲ್ಲಿಯೂ ಅಲ್ಪವೂ ಮಿತವೂ ಆಗಿರುವ ಪ್ರತಿಕೃತಿಯ ವಿಧಾನಕ್ಕೆ ಅಗಮ್ಯವಾದುದನ್ನು ಮಹಾದ್ಭುತವಾಗಿ ಸಾಧಿಸಿ, ಸರ್ವಜನಾದರಣೀಯವೂ ಸಕಲ ಸಹೃದಯ ಸಂಪೂಜ್ಯವೂ ಆಗಿ ಶೋಭಿಸುತ್ತಿದೆ ಪ್ರತಿಮಾವಿಧಾನ.[1]

ಕು.ವೆಂ.ಪು.



---

[1] "ಸಾಹಿತ್ಯದಲ್ಲಿ ಪ್ರತಿಮಾ" ಎಂಬ ಲೇಖನದಲ್ಲಿ ನಿದರ್ಶನಸಹಿತವಾದ ಇದರ ವಿವರಣೆ ದೊರೆಯುವುದು.

# ಅಂತರರಾಷ್ಟ್ರೀಯ ಶಾಂತಿಯ ಇತಿಹಾಸ[1]

## ಅಂತರರಾಷ್ಟ್ರೀಯ ಸಮಾಜದ ಆವಿರ್ಭಾವ

೧೮ನೆಯ ಶತಮಾನದ ಉತ್ತರಾರ್ಧದಲ್ಲಿ ಯೂರೋಪಿನಲ್ಲಿ ಪ್ರಾರಂಭವಾದ ಕೈಗಾರಿಕೆಯ ಕ್ರಾಂತಿಯ ಪರಿಣಾಮ ಅತ್ಯದ್ಭುತವಾದುದು. ಇದಕ್ಕೆ ಮುಂಚೆ ಅಂತರರಾಷ್ಟ್ರೀಯ ವ್ಯಾಪಾರವು ತೀರ ಕಡಿಮೆಯಾಗಿತ್ತು; ಪ್ರತಿಯೊಂದು ದೇಶವೂ ತನಗೆ ಬೇಕಾದ ಎಲ್ಲ ಪದಾರ್ಥಗಳನ್ನೂ ತಾನೇ ತಯಾರಿಸಿಕೊಳ್ಳುತ್ತಿತ್ತು. ಆದರೆ ಕೈಗಾರಿಕೆಯ ಕ್ರಾಂತಿಯಾದ ಮೇಲೆ ಪ್ರತಿಯೊಂದು ದೇಶವೂ ಅಂತರ ರಾಷ್ಟ್ರೀಯ ವ್ಯಾಪಾರದ ದೃಷ್ಟಿಯಿಂದ ಯಾವ ಪದಾರ್ಥಗಳನ್ನು ತಯಾರಿಸಿದರೆ ಹೆಚ್ಚಿನ ಲಾಭ ಬರುವಂತೆ ಕಂಡುಬಂತೋ ಆ ಪದಾರ್ಥಗಳ ಕಡೆಯೇ ಹೆಚ್ಚಿನ ಗಮನ ಕೊಡಲಾರಂಭಿಸಿತು. ಇತರ ಪದಾರ್ಥಗಳನ್ನು ಸುಲಭ ಬೆಲೆಗೆ ಪರದೇಶಗಳಿಂದ ಕೊಳ್ಳಲಾರಂಭಿಸಿತು. ಒಟ್ಟಿನಲ್ಲಿ ಆರ್ಥಿಕ ವಿಷಯಗಳಲ್ಲಿ ಸ್ವಾವಲಂಬನ ಹೋಗಿ ದೇಶಗಳಲ್ಲಿ ಪರಸ್ಪರ ಆಶ್ರಯ ಹೆಚ್ಚಿತು. ಆರ್ಥಿಕ ವಿಷಯಗಳಲ್ಲಿ ಪ್ರಪಂಚವೆಲ್ಲ ಒಂದೆಂಬಂತಾಯಿತು. ಆರ್ಥಿಕ ವಿಷಯಗಳಲ್ಲಿ ಹುಟ್ಟಿದ ಈ ಹೊಸ ಸಂಬಂಧ ದಿಂದಲೇ ಅಂತರರಾಷ್ಟ್ರೀಯ ಸಮಾಜ ಹುಟ್ಟಿತೆಂದು ಹೇಳಬಹುದು.

೧೯ನೆಯ ಶತಮಾನದಲ್ಲಿ ಅಂತರರಾಷ್ಟ್ರೀಯ ಸಮಾಜ ಹುಟ್ಟಲು ಇತರ ಕಾರಣ ಗಳು ಇವೆ. ವಿದ್ಯುಚ್ಛಕ್ತಿ ಮತ್ತು ಹಬೆಯ ಸಹಾಯದಿಂದ ಯಾನ ವಾಹನ ಸೌಕ ರ್ಯಗಳು, ಟೆಲಿಫೋನ್, ಟೆಲಿಗ್ರಾಫ್, ವೃತ್ತಪತ್ರಿಕೆಗಳು ಇವೇ ಮುಂತಾದ ಸೌಕರ್ಯ ಗಳು ಏರ್ಪಟ್ಟುದರಿಂದ ಅಂತರರಾಷ್ಟ್ರೀಯ ಸಂಬಂಧ ಹೆಚ್ಚಿತು. ಅನೇಕ ರಾಷ್ಟ್ರ ಗಳಲ್ಲಿ ಜನರ ಸಂಪತ್ತೂ ಜೀವನಸುಖದ ಮಟ್ಟವೂ ಹೆಚ್ಚಿ ಗ್ರಂಥಗಳೂ ಪತ್ರಿಕೆ ಗಳೂ ಹೆಚ್ಚು ಪ್ರಚಾರಕ್ಕೆ ಬಂದು ಇತರ ದೇಶಗಳ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಹುಟ್ಟಿತು. ಈ ಕಾಲದಲ್ಲಿ ಪ್ರಪಂಚದ ಜನಾಂಗಗಳಲ್ಲಿ ಹುಟ್ಟಿದ ಪರಸ್ಪರ ಸಂಬಂಧ ಹಿಂದೆ ಎಂದೂ ಇರಲಿಲ್ಲ.

ಈ ರೀತಿಯಲ್ಲಿ ಅಂತರರಾಷ್ಟ್ರೀಯ ಸಂಬಂಧ ಹೆಚ್ಚಿದುದರಿಂದ ವಿಶ್ವಭ್ರಾತೃತ್ವ ಭಾವನೆಯೂ ಪರಸ್ಪರ ಸಹಕಾರಬುದ್ಧಿಯೂ ಬೆಳೆಯಲು ಅವಕಾಶವಾಯಿತು. ಆದರೆ ಇದರಿಂದ ಅಂತರರಾಷ್ಟ್ರೀಯ ಕಲಹಗಳಿಗೂ ಹೆಚ್ಚಿನ ಅಸ್ಪದವಾಯಿತು. ಈಗಿನ

[1] ದೀಪಾವಳಿ ಸಂಚಿಕೆಯಿಂದ ಮುಂದುವರಿದದ್ದು.

ಸನ್ನಿವೇಶದಲ್ಲಿ ಪ್ರಪಂಚದಲ್ಲಿ ಎಲ್ಲಿ ಯುದ್ಧ ಹುಟ್ಟಲಿ ಪ್ರತಿಯೊಂದು ದೇಶಕ್ಕೂ ಯುದ್ಧದ ಕಾವು ಒಂದಲ್ಲ ಒಂದು ವಿಧದಲ್ಲಿ ತಟ್ಟುತ್ತದೆ. ಏನಿಲ್ಲದಿದ್ದರೂ ಪೆಟ್ರೋಲ್, ಸೀಮೆಯೆಣ್ಣೆ, ರಬ್ಬರ್, ಲೋಹಗಳು, ರಸಾಯನ ದ್ರವ್ಯಗಳು ಮುಂತಾದ ಸಾಮಗ್ರಿಗಳು ಸಿಕ್ಕದೆ ಒದ್ದಾಡಬೇಕಾಗುತ್ತದೆ. ಇದಲ್ಲದೆ ಆಧುನಿಕ ಯುದ್ಧದ ಸ್ವಭಾವವೇ ಸೆಂದರೆ ಪ್ರಪಂಚದ ಎಲ್ಲ ರಾಷ್ಟ್ರಗಳನ್ನೂ ರಣರಂಗಕ್ಕೆ ಸೆಳೆಯುವುದು. ಈ ಸೆಳೆತವನ್ನು ತಪ್ಪಿಸಿಕೊಂಡು ತಟಸ್ಥವಾಗಿರುವುದು ಯಾವ ರಾಷ್ಟ್ರಕ್ಕೂ ಕಷ್ಟ. ಅಂತು ೨೦ ನೆಯ ಶತಮಾನದಲ್ಲಿ ಎಲ್ಲ ಜನಾಂಗಗಳೂ ಕಷ್ಟದಲ್ಲಾಗಲಿ ಸುಖದಲ್ಲಾಗಲಿ ಸಮಭಾಗಿಗಳೆಂದು ಹೇಳಬಹುದು. ಇದೇ ಹೊಸದಾಗಿ ಉದಯಿಸಿರುವ ಅಂತರ ರಾಷ್ಟ್ರೀಯ ಸಮಾಜದ ಜೀವಲಕ್ಷಣ.

## ಶಾಂತಿ ಚಳವಳಿಯ ಮುನ್ನಡೆ

ವಿಜ್ಞಾನಯುಗದ ಆವಿರ್ಭಾವದಿಂದ ಯುದ್ಧದ ರೀತಿ ಬಹುಮಟ್ಟಿಗೆ ಬದಲಾಯಿಸಿದೆ. ಆಧುನಿಕ ಯುದ್ಧಗಳೊಡನೆ ಹೋಲಿಸಿ ನೋಡಿದರೆ ೧೮ ನೆಯ ಶತಮಾನದ ಯುದ್ಧಗಳು ಮಕ್ಕಳಾಟದಂತೆ ಕಂಡುಬರುತ್ತದೆ. ಆಧುನಿಕ ಯುದ್ಧಗಳ ನಾಶಕಶಕ್ತಿ ಅತ್ಯದ್ಭುತವಾದುದು. ಒಂದೊಂದು ಯುದ್ಧವೂ ಪ್ರಳಯವಾಗಿ ಪರಿಣಮಿಸುತ್ತಿದೆ. ನೈತಿಕದೃಷ್ಟಿಯಿಂದ ಮಾತ್ರವಲ್ಲ, ಪ್ರಪಂಚದ ಇರುವಿಕೆಗೇ ವಿಶ್ವಶಾಂತಿ ಅಗತ್ಯವೆಂಬ ಭಾವನೆ ಎಲ್ಲರ ಮನಸ್ಸಿಗೂ ಬರುತ್ತಿದೆ. ಈಗಿನ ಸ್ಥಿತಿ ಹೀಗಿರುವಲ್ಲಿ ೧೯ ನೆಯ ಶತಮಾನ ಮುಂದುವರಿದಂತೆಲ್ಲ ಶಾಂತಿ ಚಳುವಳಿಯೂ ಮುಂದುವರಿದುದರಲ್ಲೇನೂ ಆಶ್ಚರ್ಯವಿಲ್ಲ. ಕ್ರಿ. ಶ. ೧೮೧೫ ರಲ್ಲಿ ನೆಪೋಲಿಯನ್ನಿನ ಯುದ್ಧವಾದ ಮೇಲೆ ಡೇವಿಡ್ ಲಾ ಡಾಡ್ಜ್ ಎಂಬಾತನು "ನ್ಯೂಯಾರ್ಕಿನ ಶಾಂತಿ ಸಂಘ"ವನ್ನು ಸ್ಥಾಪಿಸಿದನು. ಇತಿಹಾಸದಲ್ಲಿ ಇದೇ ಮೊಟ್ಟಮೊದಲಿನ ಶಾಂತಿಪ್ರಚಾರ ಸಂಸ್ಥೆ. ಇದು ಮೊದಲು ಯೂರೋಪ್ ಮತ್ತು ಅಮೆರಿಕಾ ಖಂಡಗಳಲ್ಲಿ ನೂರಾರು ಶಾಂತಿ ಪ್ರಚಾರ ಸಂಸ್ಥೆಗಳು ಸ್ಥಾಪಿಸಲ್ಪಟ್ಟವು. ಈ ಶಾಂತಿಪ್ರಚಾರ ಕಾರ್ಯದಲ್ಲಿ ಹೆಚ್ಚಿನ ಪ್ರಸಿದ್ಧಿ ಹೊಂದಿರುವವರು ಇಂಗ್ಲೆಂಡಿನ ಕಾಬ್ಡೆನ್, ಫ್ರಾನ್ಸಿನ ಪ್ರಸಿದ್ಧ ಸಾಹಿತಿಯಾದ ವಿಕ್ಟರ್ ಹ್ಯೂಗೋ, ವಿಶ್ವಶಾಂತಿಯ ಕಾರ್ಯದಲ್ಲಿ ಅಗ್ರಗಣ್ಯರಾದವರಿಗೆ ವಾರ್ಷಿಕಬಹುಮಾನವನ್ನು ಸ್ಥಾಪಿಸಿದ ಸ್ವೀಡನ್ನಿನ ಆಲ್ಫ್ರೆಡ್ ನೊಬೆಲ್ ಮತ್ತು ವಿಶ್ವಶಾಂತಿಯ ಪ್ರಚಾರಕಾರ್ಯ ನಡೆಸಲು ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಸಂಸ್ಥೆಯನ್ನು ಸ್ಥಾಪಿಸಿದ ಸಂಯುಕ್ತಸಂಸ್ಥಾನದ ಆಲ್ಫ್ರೆಡ್ ಕಾರ್ನೆಗೀ. ಇದಲ್ಲದೆ ಅನೇಕ ವಿದ್ವಾಂಸರೂ ತತ್ವಜ್ಞರೂ ಶಾಂತಿಯ ಆವಶ್ಯಕತೆಯನ್ನು ತೋರಿ

ಸಲು ಅನೇಕ ಗ್ರಂಥಗಳನ್ನು ಬರೆದರು. ಇವರಲ್ಲಿ ಪ್ರಸಿದ್ಧರಾದವರು ಇಂಗ್ಲೆಂಡಿನ ಜಾನ್‌ಸ್ಟೂವರ್ಟ್ ಮಿಲ್, ಜರ್ಮನಿಯ ಬ್ಲಂಟ್‌ಷ್ಲಿ, ಮತ್ತು ಸಂಯುಕ್ತಸಂಸ್ಥಾನದ ವಿಲಿಯಂ ಲಾಡ್; ಆಧುನಿಕ ಲೇಖಕರಲ್ಲಿ ಅತ್ಯಂತ ಪ್ರಸಿದ್ಧಿಹೊಂದಿರುವವರು ಇಂಗ್ಲೆಂಡಿನ ನಾರ್ಮನ್ ಏಂಜೆಲ್ ಎಂಬವರು. ಮೇಲ್ಕಂಡ ಶಾಂತಿವಿಷಯ ಲೇಖಕರಿಗೂ ಹಿಂದಿನ ಲೇಖಕರಿಗೂ ಒಂದು ಮುಖ್ಯ ವ್ಯತ್ಯಾಸವಿದೆ: ಗ್ರೋಟಿಯಸ್, ಸೇಂಟ್‌ಪೇರ್, ಕ್ಯಾಂಟ್, ಇತ್ಯಾದಿ ೧೭-೧೮ನೆಯ ಶತಮಾನಗಳ ತತ್ವಜ್ಞರು ವಿಶ್ವಶಾಂತಿಯ ಆವಶ್ಯಕತೆಯನ್ನು ನೈತಿಕ ಮತ್ತು ತತ್ವದೃಷ್ಟಿಯಿಂದ ಪ್ರತಿಪಾದಿಸಿದರು. ಈಚಿನ ಲೇಖಕರು, ಮುಖ್ಯವಾಗಿ ನಾರ್ಮನ್ ಏಂಜೆಲ್ ಅವರು, ಶಾಂತಿ ನೈತಿಕದೃಷ್ಟಿಯಿಂದ ಮಾತ್ರವಲ್ಲ, ಆರ್ಥಿಕದೃಷ್ಟಿಯಿಂದಲೂ ಆವಶ್ಯಕವೆಂಬುದನ್ನು ತೋರಿಸಿಕೊಟ್ಟಿದ್ದಾರೆ.

## ಹೋಲಿ ಅಲೈಯನ್ಸ್

ಈ ರೀತಿಯಲ್ಲಿ ಜನಸಾಮಾನ್ಯರಲ್ಲಿ ಶಾಂತಿಪ್ರಚಾರಕಾರ್ಯ ನಡೆಯುತ್ತಿರಲು ವಿವಿಧ ರಾಜ್ಯಗಳ ಆಳರಸರು ಈ ಶಾಂತಿಭಾವನೆಗಳನ್ನು ಎಷ್ಟರಮಟ್ಟಿಗೆ ಒಪ್ಪಿಕೊಂಡರೆಂದು ನೋಡೋಣ. ನೆಪೋಲಿಯನ್ನಿನ ಯುದ್ಧವಾದ ಮೇಲೆ ಕ್ರಿ.ಶ. ೧೮೧೫ರಲ್ಲಿ ರಷ್ಯಾದೇಶದ ಚಕ್ರವರ್ತಿಯಾದ ಅಲೆಕ್ಸಾಂಡರನು ಸದಾಕಾಲಕ್ಕೂ ಶಾಂತಿ ನೆಲಸುವಂತೆ ಮಾಡುವುದಕ್ಕಾಗಿ ಹೋಲಿ ಅಲೈಯನ್ಸ್ ಎಂಬ ಅಂತರರಾಷ್ಟ್ರೀಯ ಒಪ್ಪಂದವನ್ನು ಏರ್ಪಡಿಸಿದನು. ಈ ಒಪ್ಪಂದಕ್ಕೆ ಪೋಪರೂ ತುರ್ಕಿ ಮತ್ತು ಇಂಗ್ಲೆಂಡ್ ದೇಶಗಳೂ ಹೊರತು ಉಳಿದೆಲ್ಲ ರಾಷ್ಟ್ರಗಳೂ ಸಹಿಹಾಕಿದವು. ಇಂಗ್ಲೆಂಡಿನ ರೀಜೆಂಟು ಕಾರಣಾಂತರದಿಂದ ಈ ಒಪ್ಪಂದಕ್ಕೆ ಸಹಿ ಹಾಕದಿದ್ದರೂ ಇದರಲ್ಲಿ ಅಡಗಿದ ತತ್ವಕ್ಕೆ ತನ್ನ ಒಪ್ಪಿಗೆಯನ್ನು ಸೂಚಿಸಿದನು. ಈ ರೀತಿಯಲ್ಲಿ ಈ ಒಪ್ಪಂದಕ್ಕೆ ಬಹುಮತ ದೊರಕಿದರೂ ಯಾವ ರಾಷ್ಟ್ರಕ್ಕೂ ಇದರಲ್ಲಿ ಒಳಗೆ ವಿಶ್ವಾಸವಿರಲಿಲ್ಲ. ಆದ್ದರಿಂದ ಏನೂ ಪ್ರಯೋಜನವಾಗಲಿಲ್ಲ. ಇದು ಹೇಗೇ ಇರಲಿ ಯೂರೋಪಿನ ರಾಜರು ಶಾಂತಿರಕ್ಷಣೆಯ ಕಾರ್ಯಕ್ಕೆ ಒಪ್ಪಿದುದು ಇದೇ ಮೊದಲು.

## ಕಾನ್ಸರ್ಟ್ ಆಫ್ ಯೂರೋಪ್

ಹೋಲಿ ಅಲೈಯನ್ಸ್ ಒಪ್ಪಂದವಾದ ಕಾಲದಲ್ಲಿಯೇ ಕಾನ್ಸರ್ಟ್ ಆಫ್ ಯೂರೋಪ್ ಎಂಬ ಪ್ರಬಲ ರಾಷ್ಟ್ರಗಳ ಸಭೆಯೊಂದು ಏರ್ಪಟ್ಟಿತು. ಮೊದಲು ಈ ಸಭೆಯಲ್ಲಿ ನೆಪೋಲಿಯನ್ನಿನ ಯುದ್ಧದಲ್ಲಿ ಜಯಹೊಂದಿದ ರಷ್ಯ, ಪ್ರಷ್ಯ, ಆಸ್ಟ್ರಿಯಾ ಮತ್ತು ಇಂಗ್ಲೆಂಡ್ ದೇಶಗಳಿಗೆ ಮಾತ್ರ ಸ್ಥಾನವಿತ್ತು. ಕ್ರಮೇಣ

ಫ್ರಾನ್ಸ್, ಇಟಲಿ, ಚೀನಾ, ಜಪಾನ್, ಸಂಯುಕ್ತಸಂಸ್ಥಾನ ಇವುಗಳಿಗೂ ಸ್ಥಳ ದೊರಕಿತು. ಈ ಸಭೆಯು ಲೀಗ್ ಆಫ್ ನೇಷನ್ಸಿನಂತೆ ಸ್ಥಾಯಿಯಾದ ಸಂಸ್ಥೆಯಾಗಿರಲಿಲ್ಲ; ಆಗಿಂದಾಗ್ಗೆ ಅಗತ್ಯಬಿದ್ದಾಗ ಮಾತ್ರ ಸೇರುತ್ತಿತ್ತು. ಇದರ ಧ್ಯೇಯ ಶಾಂತಿಸಂರಕ್ಷಣೆ. ಆದರೆ ಇದು ವಾಸ್ತವವಾಗಿಯೂ ಅನುಸರಿಸುತ್ತಿದ್ದ ಮಾರ್ಗವು ನೈತಿಕದೃಷ್ಟಿಯಿಂದ ಸ್ವಲ್ಪವೂ ಒಪ್ಪತಕ್ಕದ್ದಾಗಿರಲಿಲ್ಲ. ಈ ಸಭೆಗೆ ಸೇರಿದ ಪ್ರಬಲ ರಾಷ್ಟ್ರಗಳು ಪ್ರಜಾಸತ್ತಾತ್ಮಕ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಗಳನ್ನು ತಡೆಗಟ್ಟಿ ನಿರಂಕುಶಪ್ರಭುತ್ವಗಳಿಗೆ ಸಹಾಯಮಾಡುತ್ತಿದ್ದವು. ಅಲ್ಲದೆ ದುರ್ಬಲ ರಾಷ್ಟ್ರಗಳ ಹಕ್ಕುಬಾಧ್ಯತೆಗಳನ್ನು ಗಮನಿಸದೆ ಸ್ವಾರ್ಥದೃಷ್ಟಿಯಿಂದ ಹೇಗೆ ಅನುಕೂಲವೋ ಹಾಗೆ ವ್ಯಾಪಾರ ಸೌಕರ್ಯಗಳು, ಭೂಭಾಗಗಳು ಇವೇ ಮುಂತಾದುವನ್ನು ತಮ್ಮ ತಮ್ಮಲ್ಲಿ ಹಂಚಿಕೊಳ್ಳುತ್ತಿದ್ದವು. ಇವರ ಕಾರ್ಯಕಲಾಪಗಳಲ್ಲಿ ಸಮಾನವಾಗಿ ಭಾಗ ವಹಿಸುವ ಅಧಿಕಾರವಿಲ್ಲದಿದ್ದರೂ ಇವರ ತೀರ್ಮಾನಗಳಿಗೆ ದುರ್ಬಲ ರಾಷ್ಟ್ರಗಳು ತಲೆಬಾಗಬೇಕಾಗಿತ್ತು. ಈ ರೀತಿಯಲ್ಲಿ ಕಾನ್ಸರ್ಟ್ ಆಫ್ ಯೂರೋಪು ದರೋಡೆಕಾರರ ಗುಂಪಿನಂತೆ ವರ್ತಿಸುತ್ತಿದ್ದರೂ ಒಂದು ಶತಮಾನದ ಕಾಲ ಯಾವ ದೊಡ್ಡ ಯುದ್ಧವೂ ಹುಟ್ಟದಂತೆ ಯೂರೋಪಿನ ಶಾಂತಿಯನ್ನು ಕಾಪಾಡಿಕೊಂಡು ಬಂತು. ಕ್ರಿ.ಶ. ೧೮೫೬ ರಲ್ಲಿ ಕ್ರೈಮಿಯಾ ಯುದ್ಧವಾದ ಮೇಲೆ ರಷ್ಯಾಕ್ಕೂ ತುರ್ಕಿಗೂ ಇದ್ದ ಭೇದಗಳನ್ನು ಸರಿಪಡಿಸಿತು. ಕ್ರಿ.ಶ. ೧೯೦೬ ರಲ್ಲಿ ಆಲ್ಜಿಯರ್ಸ್ ಕಾಂಗ್ರೆಸಿನಲ್ಲಿ ಮೊರಾಕೋ ದೇಶದ ವಿಷಯವಾಗಿ ಯೂರೋಪಿನ ರಾಷ್ಟ್ರಗಳಲ್ಲಿ ಹುಟ್ಟಿದ ವ್ಯಾಜ್ಯಗಳನ್ನು ಎಲ್ಲರಿಗೂ ಒಪ್ಪುವಂತೆ ತೀರ್ಮಾನಮಾಡಿತು. ಮತ್ತೆ ಆಫ್ರಿಕಾ ಖಂಡದಂತಹ ದೊಡ್ಡ ಭೂಭಾಗವನ್ನು ಯೂರೋಪಿನ ಪ್ರಬಲ ರಾಷ್ಟ್ರಗಳು ಯುದ್ಧವಿಲ್ಲದೆ ತಮ್ಮತಮ್ಮಲ್ಲಿ ಹಂಚಿಕೊಳ್ಳಲು ಸಹಾಯಮಾಡಿತು. ಈ ರೀತಿಯಲ್ಲಿ ಅನೇಕಸಲ ಅಂತರರಾಷ್ಟ್ರೀಯ ವೈಮನಸ್ಯದಿಂದ ಯುದ್ಧ ಹುಟ್ಟದ ಹಾಗೆ ಮಾಡಿತು. ಆದರೆ ೧೯೧೪ ರಲ್ಲಿ ಇಂಗ್ಲೆಂಡ್ ಮತ್ತು ಜರ್ಮನಿಯಂತಹ ಪ್ರಬಲ ರಾಷ್ಟ್ರಗಳಲ್ಲೇ ಜಗಳ ಹುಟ್ಟಿ, ಆರ್ಥಿಕ ಮತ್ತು ರಾಜಕೀಯ ಹಿರಿಮೆಗಾಗಿ ಹೋರಾಟ ಆರಂಭವಾದಾಗ ಮಾತ್ರ ಇದರ ಕೈಯಲ್ಲಿ ಏನೂ ಸಾಗಲಿಲ್ಲ.

## ಅಂತರರಾಷ್ಟ್ರೀಯ ಸಹಕಾರದ ಬೆಳವಣಿಗೆ

೧೯ನೆಯ ಶತಮಾನದಲ್ಲಿ ಪ್ರಬಲ ರಾಷ್ಟ್ರಗಳಲ್ಲಿ ತಿಕ್ಕಾಟ ಹೆಚ್ಚಿ ಕೊನೆಗೆ ಕಳೆದ ಮಹಾಯುದ್ಧ ಆರಂಭವಾದರೂ ಈ ಕಾಲದಲ್ಲಿ ಹಲವಾರು ವಿಷಯಗಳಲ್ಲಿ ಅಂತರರಾಷ್ಟ್ರೀಯ ಸಹಕಾರ ಬಹುಮಟ್ಟಿಗೆ ಹೆಚ್ಚಿತು. ಯುದ್ಧಕಾಲದಲ್ಲಿ ಎಷ್ಟು ವೈಷಮ್ಯ ಇದ್ದರೂ ಶಾಂತಿಕಾಲದಲ್ಲಿ ಪರಸ್ಪರ ಸಹಕಾರ ಇದ್ದೇ ಇರಬೇಕು.

ಇಲ್ಲದಿದ್ದರೆ ಎಲ್ಲ ರಾಷ್ಟ್ರಗಳಿಗೂ ಅತ್ಯಗತ್ಯವಾದ ಅನೇಕ ಕೆಲಸಗಳು ಸಾಗಲಾರವು. ಉದಾಹರಣೆಗೆ ಎರಡು ದೇಶಗಳಿಗೆ ಪರಸ್ಪರ ಅಂಚೆ ತಂತಿಸಂಬಂಧ ಬೆಳೆಯಬೇಕಾದರೆ ಆ ದೇಶಗಳ ಸರ್ಕಾರಗಳು ಅನೇಕ ವಿಷಯಗಳಲ್ಲಿ ಪರಸ್ಪರ ಒಪ್ಪಂದಕ್ಕೆ ಬರಬೇಕು; ಒಪ್ಪಿದ ನಿಯಮಗಳನ್ನು ಇಬ್ಬರೂ ಸರಿಯಾಗಿ ಪಾಲಿಸಿಕೊಂಡು ಬರಬೇಕು. ಈ ಕಾಲದಲ್ಲಿ ಇಂತಹ ವಿಷಯಗಳಲ್ಲಿ ರಾಷ್ಟ್ರಗಳಲ್ಲಿ ಪರಸ್ಪರ ನೂರಾರು ಕರಾರುಗಳೂ ಒಪ್ಪಂದಗಳೂ ಆದವು. ಇವು ಮುಖ್ಯವಾಗಿ ಸಮುದ್ರಯಾನ, ಗ್ರಂಥಸ್ವಾಮ್ಯ, ವಿಮೆ, ಪರದೇಶೀಯ ಅಪರಾಧಿಗಳನ್ನು ಆ ದೇಶದ ತಕ್ಕ ಅಧಿಕಾರಿಗಳ ವಶಕ್ಕೆ ಒಪ್ಪಿಸುವುದು, ಇವೇ ಮುಂತಾದ ವಿಷಯಗಳಿಗೆ ಸಂಬಂಧಪಟ್ಟವು. ಇವಲ್ಲದೆ ಸಮಾಜ ಸುಧಾರಣೆಯ ದೃಷ್ಟಿಯಿಂದ ಸೆರೆಮನೆಗಳು, ಗುಲಾಮರ ವ್ಯಾಪಾರ, ಅಫೀಮು ಮೊದಲಾದ ಮಾದಕದ್ರವ್ಯಗಳ ವ್ಯಾಪಾರ, ಈ ವಿಷಯಗಳಲ್ಲಿಯೂ ಪರಸ್ಪರ ಒಪ್ಪಂದಗಳು ಆದವು. ಮತ್ತು ರಾಜಕೀಯವಲ್ಲದ ಎಲ್ಲ ರಾಷ್ಟ್ರಗಳಿಗೂ ಸಂಬಂಧಿಸಿದ ಆಡಳಿತ ಕಾರ್ಯಗಳನ್ನು ನಿರ್ವಹಿಸುವುದಕ್ಕೆ "ಅಂತರರಾಷ್ಟ್ರೀಯ ಅಂಚೆಯ ಸಂಘ"ದಂತಹ ೩೦ ಸಂಸ್ಥೆಗಳ ಸ್ಥಾಪನೆಯಾಯಿತು. ಇವು ಯಾವ ತೊಂದರೆಗಳಿಗೂ ಅವಕಾಶ ಕೊಡದೆ ಬಹು ದಕ್ಷತೆಯಿಂದ ಕೆಲಸಮಾಡುತ್ತಿದ್ದವು.

## ಅಂತರರಾಷ್ಟ್ರೀಯ ಪಂಚಾಯಿತಿ ಪದ್ಧತಿಯ ಬೆಳವಣಿಗೆ

ಇದೇ ಕಾಲದಲ್ಲಿ ರಾಷ್ಟ್ರಗಳಲ್ಲಿ ಪರಸ್ಪರ ಹುಟ್ಟಿದ ವ್ಯಾಜ್ಯಗಳನ್ನೂ ವ್ಯವಹಾರಗಳನ್ನೂ ಪಂಚಾಯಿತಿಯ ಮೂಲಕ ತೀರ್ಮಾನಮಾಡಿಕೊಳ್ಳುವ ಪದ್ಧತಿ ಕ್ರಮೇಣ ಹೆಚ್ಚು ಹೆಚ್ಚಿನ ಬಳಕೆಗೆ ಬಂತು. ೧೮೨೦-೪೦ ರಲ್ಲಿ ೮ ವ್ಯವಹಾರಗಳೂ, ೧೮೪೦-೬೦ ರಲ್ಲಿ ೩೦ ವ್ಯವಹಾರಗಳೂ, ೧೮೬೦-೮೦ ರಲ್ಲಿ ೪೪ ವ್ಯವಹಾರಗಳೂ, ೧೮೮೦-೧೯೦೦ ರಲ್ಲಿ ೯೦ ವ್ಯವಹಾರಗಳೂ ಈ ರೀತಿಯಲ್ಲಿ ಇತ್ಯರ್ಥವಾದುವು. ಪ್ರಬಲರಾಷ್ಟ್ರಗಳೂ ಅನೇಕ ಸಲ ಈ ಪದ್ಧತಿಯನ್ನು ಅನುಸರಿಸಿದವು. ಇದಕ್ಕೆ ಒಂದೆರಡು ನಿದರ್ಶನಗಳನ್ನು ಕೊಡಬಹುದು. ೧೮೬೧-೬೫ ರಲ್ಲಿ ಸಂಯುಕ್ತ ಸಂಸ್ಥಾನದಲ್ಲಿ ದಕ್ಷಿಣ ಪ್ರಾಂತಗಳಿಗೂ ಉತ್ತರ ಪ್ರಾಂತಗಳಿಗೂ ಯುದ್ಧ ನಡೆಯಿತು. ಈ ಸಂದರ್ಭದಲ್ಲಿ ಇಂಗ್ಲೆಂಡು "ಅಲಬಾಮ" ಎಂಬ ಯುದ್ಧದ ಹಡಗನ್ನು ತಯಾರಿಸಿ ದಕ್ಷಿಣ ಪ್ರಾಂತದವರಿಗೆ ಮಾರಿತು. ಯುದ್ಧ ಮುಗಿದು ಶಾಂತಿಸ್ಥಾಪನೆಯಾದ ಮೇಲೆ ಬ್ರಿಟನರ ನಡತೆ ಅಂತರರಾಷ್ಟ್ರೀಯ ಸಂಪ್ರದಾಯಕ್ಕೆ ವಿರೋಧವೆಂದು "ಅಲಬಾಮ" ಯುದ್ಧದ ಹಡಗಿನಿಂದ ಅಮೇರಿಕನರಿಗೆ ಆದ ಕಷ್ಟನಷ್ಟಗಳಿಗೆ ಬ್ರಿಟಿಷ್ ಸರ್ಕಾರವೇ ಹೊಣೆಯಾಗಬೇಕೆಂದೂ ವ್ಯಾಜ್ಯ ಎತ್ತಿದ್ದರು. ಈ ವ್ಯಾಜ್ಯ ಪಂಚಾಯಿತಿಗಾರರ ಮುಂದೆ

ಹೋಯಿತು. ತೀರ್ಮಾನ ತಮಗೆ ವಿರೋಧವಾಗಿದ್ದರೂ ಬ್ರಿಟಿಷ್ ಸರ್ಕಾರ ಸಂಯುಕ್ತ ಸಂಸ್ಥಾನಕ್ಕೆ ಲಕ್ಷಾಂತರ ರೂಪಾಯಿ ದಂಡವನ್ನು ಕೊಟ್ಟಿತು. ಮತ್ತೆ ಒರೆಗಾನ್ (Oregon) ಗಡಿಯ ವಿಷಯದಲ್ಲಿ ಇಂಗ್ಲೆಂಡ್ ಮತ್ತು ಸಂಯುಕ್ತ ಸಂಸ್ಥಾನಗಳಿಗಿದ್ದ ವ್ಯಾಜ್ಯವೂ ಬ್ರಿಟಿಷ್ ಗಿನಿಯ ಮತ್ತು ವೆನಿಜೂಲಾ ಇವೆರಡಕ್ಕೂ ಗಡಿಯ ವಿಷಯದಲ್ಲಿ ಹುಟ್ಟಿದ ವ್ಯಾಜ್ಯವೂ ಪಂಚಾಯಿತಿಯ ಮೂಲಕ ತೀರ್ಮಾನ ವಾದವು.

ಈ ರೀತಿ ಅಂತರರಾಷ್ಟ್ರೀಯ ವ್ಯವಹಾರಗಳನ್ನು ಪಂಚಾಯಿತಿಗೆ ಒಪ್ಪಿಸುವ ಪದ್ಧತಿ ಹೆಚ್ಚಿನ ಪ್ರಚಾರಕ್ಕೆ ಬರಲು ವ್ಯವಹಾರ ಹುಟ್ಟಿದ ಹಾಗೆಲ್ಲ ತತ್ಕಾಲಕ್ಕೆ ಪಂಚಾಯಿತಿದಾರರನ್ನು ನಿಯಮಿಸುವ ಪದ್ಧತಿಯಲ್ಲಿ ಅನೇಕ ತೊಂದರೆಗಳು ಕಂಡು ಬಂದುವು. ಇದರ ಮೇಲೆ ಕ್ರಿ.ಶ. ೧೮೯೯ರಲ್ಲಿ ಹೇಗ್ ಕಾನ್ಫರೆನ್ಸಿನ ಪರಿಣಾಮ ವಾಗಿ ಒಂದು ಸ್ಥಾಯಿ ನ್ಯಾಯಸ್ಥಾನ ಏರ್ಪಾಡಾಯಿತು. ಈ ನ್ಯಾಯಸ್ಥಾನ ಅಂತರರಾಷ್ಟ್ರೀಯ ಸಂಪ್ರದಾಯ ಅಥವಾ ನ್ಯಾಯದ ವಿಷಯದಲ್ಲಿ ವಿವಾದ ಹುಟ್ಟಿದರೆ ಅವುಗಳನ್ನು ಮಾತ್ರ ಪರಿಶೀಲಿಸುತ್ತಿತ್ತು. ಯುದ್ಧಕ್ಕೆ ಮೂಲವಾದ ರಾಜಕೀಯ ಮತ್ತು ಆರ್ಥಿಕ ವಿಷಯಗಳಲ್ಲಿ ಹುಟ್ಟಿದ ವ್ಯಾಜ್ಯಗಳನ್ನು ಪರಿಶೀಲಿಸಲು ಇದಕ್ಕೆ ಅಧಿಕಾರವಿರಲಿಲ್ಲ. ಇದಾದ ಮೇಲೆ ಕ್ರಿ.ಶ. ೧೯೦೭ರಲ್ಲಿ ಎರಡನೆಯ ಹೇಗ್ ಕಾನ್‌ಫರೆನ್ಸ್ ನಿರ್ಣಯಗಳ ಪರಿಣಾಮವಾಗಿ ಇಂಟರ್‌ನ್ಯಾಷನಲ್ ಪ್ರೈಸ್ ಕೋರ್ಟ್ ಎಂಬ ಸಂಸ್ಥೆ ಸ್ಥಾಪಿತವಾಯಿತು. ಇದರ ಉದ್ದೇಶ ಯುದ್ಧ ಕಾಲದಲ್ಲಿ ಶತ್ರುವಿಗೆ ಸೇರದಿರಲೆಂದು ತಟಸ್ಥರಾಷ್ಟ್ರಗಳ ಹಡಗುಗಳಿಂದ ಹಿಡಿದ ಸಾಮಾನುಗಳ ವಿಷಯದಲ್ಲಿ ಅಂತರರಾಷ್ಟ್ರೀಯ ಸಂಪ್ರದಾಯ ಪ್ರಕಾರ ನ್ಯಾಯ ವಿಮರ್ಶೆ ಮಾಡುವುದು. ಮೇಲ್ಕಂಡ ಕೋರ್ಟುಗಳ ಮುಂದೆ ಅಂತರರಾಷ್ಟ್ರೀಯ ವಿವಾದಗಳನ್ನು ತರಲೇಬೇಕೆಂಬ ಯಾವ ನಿಯಮವೂ ಇರಲಿಲ್ಲ. ವಿವಾದಮಾಡುವ ರಾಷ್ಟ್ರಗಳು ತಾವಾಗಿ ಸಮ್ಮತಿಸಿದರೆ ಮಾತ್ರ ಈ ಕೋರ್ಟುಗಳಿಗೆ ಈ ವಿಷಯಗಳಲ್ಲಿ ಪ್ರವೇಶವಿರುತ್ತಿತ್ತು. ಮತ್ತೊಂದು ಕೊರತೆ ಏನೆಂದರೆ ಈ ಕೋರ್ಟುಗಳ ತೀರ್ಪನ್ನು ಯಾವ ರಾಷ್ಟ್ರವಾದರೂ ಒಪ್ಪಿಕೊಳ್ಳಲು ನಿರಾಕರಿಸಿದರೆ ಇದನ್ನು ಕಾರ್ಯಕಾರಿ ಯಾಗಿ ಮಾಡುವುದಕ್ಕೆ ಯಾವ ದಂಡನಾಶಕ್ತಿಯೂ ಇರಲಿಲ್ಲ. ತಮ್ಮ ತೀರ್ಪು ಗಳನ್ನು ವಿವಾದಕ್ಕೆ ಸಂಬಂಧಿಸಿದ ರಾಷ್ಟ್ರಗಳು ಒಪ್ಪಿಕೊಳ್ಳುವಂತೆ ಮಾಡುವುದಕ್ಕೆ ಈ ಕೋರ್ಟುಗಳಿಗೆ ಇದ್ದುದು ನೈತಿಕ ಬಲಮಾತ್ರ. ಈ ರೀತಿಯಲ್ಲಿ ಹೇಗ್ ಕೋರ್ಟು ಹಲವಾರು ನಿರ್ಬಂಧಗಳಿಗೆ ಒಳಪಟ್ಟು ಕೆಲಸಮಾಡಬೇಕಾದರೂ ಕಳೆದ ಮಹಾ ಯುದ್ಧಕ್ಕೆ ಮುಂಚೆ ೧೪ ವ್ಯವಹಾರಗಳಲ್ಲಿ ತೀರ್ಪು ಕೊಟ್ಟಿತು.

## ಶಸ್ತ್ರತ್ಯಾಗ ಚಳವಳಿ

ಅಂತರರಾಷ್ಟ್ರೀಯ ಸಹಕಾರ, ಪಂಚಾಯಿತಿ ಪದ್ಧತಿ, ಇವು ಮುಂದುವರಿದರೂ ಯುದ್ಧಕ್ಕೆ ಕಾರಣಗಳೇನೂ ಕಡಮೆಯಾಗಲಿಲ್ಲ. ಪ್ರತಿಯೊಂದು ರಾಷ್ಟ್ರವೂ ಯುದ್ಧ ಸನ್ನಾಹಗಳನ್ನು ಹೆಚ್ಚಿಸುತ್ತಲೇ ಇತ್ತು. ಸೈನ್ಯದ ಬಲವನ್ನು ಹೆಚ್ಚಿಸುವ ಸ್ಪರ್ಧೆಯಿಂದಲೇ ಯುದ್ಧ ಹುಟ್ಟುವ ಸಂಭವವೂ ಹೆಚ್ಚಾಯಿತು. ಆದುದರಿಂದ ಎಲ್ಲ ರಾಷ್ಟ್ರಗಳೂ ಒಪ್ಪಂದಕ್ಕೆ ಬಂದು ಶಸ್ತ್ರತ್ಯಾಗಮಾಡಬೇಕೆಂಬ, ಕೊನೆಯ ಪಕ್ಷ ಸೈನ್ಯಬಲವನ್ನು ಕಡಿಮೆಮಾಡಬೇಕೆಂಬ ಭಾವನೆ ಜನರಲ್ಲಿ ಬೇರೂರಿತು. ಇದಕ್ಕಾಗಿ ಶಾಂತಿಸಂಘಗಳು ಪ್ರಚಾರಕಾರ್ಯಮಾಡಿದವು. ಇದರ ಫಲಿತಾಂಶವಾಗಿ ೧೮೫೬ ರಲ್ಲಿ ಪ್ಯಾರಿಸ್ ಒಪ್ಪಂದದಲ್ಲಿ ಈ ವಿಷಯವಾಗಿ ಒಂದು ಷರತ್ತನ್ನು ಸೇರಿಸಿದರು. ಇದರ ಪ್ರಕಾರ ಯಾವ ರಾಷ್ಟ್ರವಾಗಲಿ ಇತರ ರಾಷ್ಟ್ರಗಳೊಡನೆ ವ್ಯಾಜ್ಯ ಹುಟ್ಟಿದಲ್ಲಿ **ಸಾಧ್ಯವಾದಷ್ಟು ಮಟ್ಟಿಗೆ** ರಣಕ್ಕೆ ಇಳಿಯುವುದಕ್ಕೆ ಮುಂಚೆ ಮಿತ್ರ ರಾಷ್ಟ್ರಗಳ ಸಹಾಯದಿಂದ ರಾಜಿಯಾಗಲು ಪ್ರಯತ್ನಪಡಬೇಕಿತ್ತು. "ಸಾಧ್ಯವಾದಷ್ಟು ಮಟ್ಟಿಗೆ" ಎಂದು ಹೇಳಿದುದರಿಂದ ಈ ಷರತ್ತಿಗೆ ಬೆಲೆ ಇಲ್ಲದಂತಾಯಿತು. ಆದರೆ ಇಂಗ್ಲೆಂಡಿನ ಮಂತ್ರಿಯಾದ ಗ್ಲಾಡ್‌ಸ್ಟನ್ ಹೇಳಿದಂತೆ ಯೂರೋಪಿನ ಮುಖ್ಯ ರಾಷ್ಟ್ರಗಳು ಯುದ್ಧದ ಮಾರ್ಗ ತಪ್ಪುಮಾರ್ಗವೆಂದೂ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ನ್ಯಾಯಧರ್ಮಗಳ ಆಧಿಪತ್ಯವಿರಬೇಕೆಂದೂ ಸ್ವಲ್ಪ ಮಟ್ಟಿಗಾದರೂ ಒಪ್ಪಿಕೊಂಡದ್ದು ಪ್ರಪಂಚದ ಇತಿಹಾಸದಲ್ಲಿ ಇದೇ ಮೊದಲು.

ಮತ್ತೆ ಕ್ರಿ.ಶ. ೧೮೯೯ರಲ್ಲಿ ಮೊದಲನೆಯ ಹೇಗ್ ಸಮ್ಮೇಳನದಲ್ಲಿ ಯುದ್ಧಕ್ಕೆ ಮುಂಚೆಯಾಗಲಿ ಯುದ್ಧ ಆರಂಭವಾದ ಮೇಲೆಯಾಗಲಿ **ಸಾಧ್ಯವಾದಷ್ಟು ಮಟ್ಟಿಗೆ** ಮಧ್ಯಸ್ಥಗಾರರ ಮೂಲಕ ರಾಜಿಹೊಂದಲು ಯತ್ನಿಸುತ್ತೇವೆಂದು ಎಲ್ಲ ರಾಷ್ಟ್ರಗಳೂ ಒಪ್ಪಿದವು. ಅಲ್ಲದೆ ಯುದ್ಧದ ಕ್ರೌರ್ಯವನ್ನು ಕಡಮೆಮಾಡುವುದಕ್ಕಾಗಿ ಕೆಲವು ಶಸ್ತ್ರಗಳನ್ನು ಉಪಯೋಗಿಸುವುದಿಲ್ಲವೆಂದೂ ಮಾತುಕೊಟ್ಟವು. ಆದರೆ ಎಲ್ಲ ರಾಷ್ಟ್ರಗಳ ಸೈನ್ಯಬಲಗಳನ್ನು ಏಕಕಾಲದಲ್ಲಿ ಕಡಮೆ ಮಾಡಿಸಬೇಕೆಂಬ ಸನ್ನಾಹಗಳು ಯಾವ ರಾಷ್ಟ್ರಕ್ಕೂ ನಿಜವಾಗಿ ಬೇಕಿಲ್ಲದುದರಿಂದ ವಿಫಲವಾದವು. ಕ್ರಿ.ಶ. ೧೯೦೭ರಲ್ಲಿ ನಡೆದ ಎರಡನೆಯ ಹೇಗ್ ಸಮ್ಮೇಳನದಲ್ಲೂ ಇದೇ ಕತೆಯಾಯಿತು.

ಕೊನೆಯದಾಗಿ ಕ್ರಿ.ಶ. ೧೯೧೩ರಲ್ಲಿ "ಬ್ರೈಯಾನ್ ಯೋಜನೆ" ಎಂದು ಪ್ರಸಿದ್ಧವಾದ ಯುದ್ಧವನ್ನು ತಡೆಗಟ್ಟುವ ಪ್ರಯತ್ನ ನಡೆಯಿತು. ಈ ಯೋಜನೆಯ ಪ್ರಕಾರ ರಾಷ್ಟ್ರಗಳಲ್ಲಿ ಪರಸ್ಪರ ವಿವಾದಗಳು ಹುಟ್ಟಿದರೆ ವಿವಾದಕ್ಕೆ ಸಂಬಂಧಪಟ್ಟ ರಾಷ್ಟ್ರಗಳು ಯುದ್ಧಕ್ಕೆ ಇಳಿಯುವುದಕ್ಕೆ ಮುಂಚೆ ಒಂದು ವರ್ಷಕಾಲ ಕಾಯ

ಬೇಕಿತ್ತು. ಈ ನಡುವೆ ಒಂದು ಅಂತರರಾಷ್ಟ್ರೀಯನಿಯೋಗಗೋಷ್ಠಿಯು ವಿವಾದ ವಿಷಯಗಳನ್ನು ವಿಮರ್ಶಿಸಿ ತನ್ನ ವರದಿಯನ್ನು ಕೊಡಬೇಕಿತ್ತು. ವರದಿಯಲ್ಲಿ ಮಾಡಿದ ಸಲಹೆಗಳು ಈ ರಾಷ್ಟ್ರಗಳಿಗೆ ಸಮರ್ಪಕವಿಲ್ಲದಿದ್ದಲ್ಲಿ ಇವು ಯಾವ ನಿರ್ಬಂಧಕ್ಕೂ ಒಳಗಾಗದೆ ಯುದ್ಧಮಾಡುವ ಹಕ್ಕಿತ್ತು. ಈ ಯೋಜನೆಯನ್ನು ರಚಿಸಿದವರ ಆಸೆ, ಈ ಒಂದು ವರ್ಷದ ಗಡುವಿನೊಳಗೆ ಹೇಗಾದರೂ ರಾಜಿಮಾಡಿಸಿ ಯುದ್ಧನಿವಾರಣೆಮಾಡಬಹುದೆಂಬುದು. ಈ ಯೋಜನೆಯ ಆಧಾರದ ಮೇಲೆ ಸಂಯುಕ್ತಸಂಸ್ಥಾನವು ೨೧ ರಾಷ್ಟ್ರಗಳೊಡನೆ ವೈಯಕ್ತಿಕವಾಗಿ ಒಪ್ಪಂದಗಳನ್ನು ಮಾಡಿಕೊಂಡಿತು.

ಒಟ್ಟಿನಲ್ಲಿ ಹೆನ್ರಿ ಬಾರ್ನ್ಸ್‌ರವರು ಹೇಳಿದಂತೆ "ಕಳೆದ ಮಹಾಯುದ್ಧ ಆರಂಭವಾದ ಕೆಲವು ವರ್ಷಗಳ ಮುಂಚೆ ವಿಶ್ವಶಾಂತಿಯ ಕಡೆ ಜನಾಭಿಪ್ರಾಯ ಅನುಕೂಲವಾಗಿದ್ದಷ್ಟು ಹಿಂದೆ ಎಂದೂ ಇರಲಿಲ್ಲ; ತಮ್ಮ ಆಸೆ ಫಲಿಸೀತೆಂಬ ಶಾಂತಿವಾದಿಗಳ ಉತ್ಸಾಹವೂ ಹಿಂದೆ ಎಂದೂ ಇಷ್ಟರ ಮಟ್ಟಿಗೆ ಇರಲಿಲ್ಲ. ಜನಾಭಿಪ್ರಾಯ ಹೀಗೆ ಯುದ್ಧಕ್ಕೆ ವಿರೋಧವಾಗಿರುವಾಗ ಯುದ್ಧ ಖಂಡಿತ ಹುಟ್ಟುವುದಿಲ್ಲವೆಂದು ಎಲ್ಲರೂ ತಿಳಿದಿದ್ದರು." ಆದರೂ ಕಳೆದ ಮಹಾಯುದ್ಧ ಆರಂಭವಾಯಿತು.

ಎಸ್. ವೆಂಕಟದೇಶಿಕಾಚಾರ್.

# ಛಂದಃಶಾಸ್ತ್ರದ ಸಂಕ್ಷಿಪ್ತ ಇತಿಹಾಸ

## ಉತ್ಪಲನ ವಿವೃತಿ

ಭಟ್ಟ ಉತ್ಪಲನು ಹತ್ತನೆಯ ಶತಮಾನದವನು. ವರಾಹಮಿಹಿರನ ಬೃಹತ್ಸಂಹಿತೆಯ ಮೇಲೆ ಈತನ ವಿವೃತಿ ಇದೆ. ೧೦೪ನೆಯ ಅಧ್ಯಾಯದ ಟೀಕೆಯಲ್ಲಿ ಪಿಂಗಳ ಪದ್ಧತಿಯ ಸುಧಾರಣೆ ಕಂಡುಬರುತ್ತದೆ. ವೃತ್ತ ಲಕ್ಷಣಗಳನ್ನು ಪಿಂಗಳನ ಪರಿಭಾಷೆ ಯಿಂದ ಹೇಳುತ್ತಾನೆ. ಒಂದೊಂದು ಸೂತ್ರವನ್ನೂ ಅದು ಸೂಚಿಸುವ ವೃತ್ತದ ಕೊನೆಯ ಚರಣವನ್ನಾಗಿ ರಚಿಸಿದ್ದಾನೆ. ಉದಾಹರಣೆ:

'ಲಕ್ಷ್ಮೀರಿಯಂ ತಭಸಜಗೈರುದಾಹೃತಾ'' ಅಥವಾ ''ದ್ರುತಪದಂ ನಭಜಯ್ಯೈಃ ಕಥಿತಂ ತತ್.''

ಈ ಸುಧಾರಿತ ಪದ್ಧತಿಯ ಸೂತ್ರಗಳನ್ನು ಮುಂದೆ ಕೇದಾರಭಟ್ಟ ಮುಂತಾದ ಛಂದಃಶಾಸ್ತ್ರಕಾರರೂ ಮಲ್ಲಿನಾಥ ಮುಂತಾದ ಟೀಕಾಕಾರರೂ ಕೊಡುತ್ತಾರೆ.

## ಕ್ಷೇಮೇಂದ್ರನ ಸುವೃತ್ತತಿಲಕ

ಸುವೃತ್ತತಿಲಕದಲ್ಲಿ ಅನೇಕಕಡೆ ಪ್ರಖ್ಯಾತ ವೃತ್ತಗಳ ವಿಚಾರವಿದೆ. ಅದರಲ್ಲಿಯೂ ತನುಮಧ್ಯಾ, ಕುಮಾರಲಲಿತಾ, ಭುಜಗಶಿಶುಸೃತಾ—ಈ ಕ್ಷುದ್ರವೃತ್ತಗಳಿಗೆ ಮೊದ ಲಲ್ಲೆ ಎಡೆಗೊಟ್ಟಿದ್ದಾನೆ. ಆದರೆ ಹ್ರಸ್ವವೃತ್ತ ವಿಷಯದಲ್ಲಿ ಈತನ ಅಭಿಪ್ರಾಯವು ವಿನೋದವಾಗಿದೆ.

ನಷಟ್ ಸಪ್ತಾಕ್ಷರೇ ವೃತ್ತೇ ವಿಶ್ರಾಮ್ಯತಿ ಸರಸ್ವತೀ
ಭೃಂಗೀವ ಮಲ್ಲಿಕಾಬಾಲಕಲಿಕಾಕೋಟಿ ಸಂಕಟೇ || (ಕ್ಷೇ. ಸು. ೨/೨)

ಸುವೃತ್ತತಿಲಕದಲ್ಲಿ ಮೂರು ವಿನ್ಯಾಸಗಳಿವೆ. ಮೊದಲನೆಯ ವಿನ್ಯಾಸದಲ್ಲಿ ಪ್ರಖ್ಯಾತ ವೃತ್ತಗಳ ಲಕ್ಷಣಗಳನ್ನು ಪೈಂಗಳ ಪದ್ಧತಿಯಂತೆ (ಆದರೆ ಅನುಷ್ಟುಭ್ ಶ್ಲೋಕ ಗಳಲ್ಲಿ) ಕೊಟ್ಟು ತನ್ನಿಂದಲೇ ರಚಿತವಾದ ಉದಾಹರಣೆಗಳನ್ನು ಭರತನಂತೆ ಕೊಟ್ಟಿ ದ್ದಾನೆ. ಎರಡನೆಯ ವಿನ್ಯಾಸದಲ್ಲಿ ಅನೇಕ ವಿಧವಾದ ವೃತ್ತಗಳಲ್ಲಿ ಅಕ್ಷರರಚನೆ ಹೇಗಿರಬೇಕೆಂಬುದನ್ನು ತಿಳಿಸಿದ್ದಾನೆ. ಗುಣದೋಷಗಳನ್ನು ತೋರಿಸುವುದಕ್ಕಾಗಿ ಅನೇಕ ಕವಿಗಳ ಕೃತಿಗಳಿಂದ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಈತನು ತನ್ನ ತಪ್ಪನ್ನು ಸಹ ತೋರಿಸಲು ಹಿಂಜರಿಯುವುದಿಲ್ಲ. ಒಟ್ಟಿನಲ್ಲಿ ನೋಡಿದರೆ ಕ್ಷೇಮೇಂದ್ರನ ಈ ವಿಚಾರಸರಣಿ ವಿಚಿತ್ರವಾದ್ದು, ನಿರಾಧಾರವಾದ್ದು. ಮೂರನೆಯ ವಿನ್ಯಾಸದಲ್ಲಿ ಯಾವ ವೃತ್ತ ಯಾವ ವಿಷಯಕ್ಕೆ ಮತ್ತು ಯಾವ ರಸಕ್ಕೆ ಯೋಗ್ಯ ಎಂಬುದನ್ನು ತಿಳಿಸುತ್ತಾನೆ. ಉದಾ:

ಸಾಕ್ಷೇಪ ಕ್ರೋಧ ಧಿಕ್ಕಾರೇ ಪರಂ ಪೃಥ್ವೀ ಭರಕ್ಷಮಾ
ಪ್ರಾವೃಟ್ ಪ್ರವಾಸ ವ್ಯಸನೇ ಮಂದಾಕ್ರಾಂತಾ ವಿರಾಜತೇ ॥ (ಕ್ಷೇ. ಸು. ೩/೨೧)

ಆದರೆ ಈ ಮಾತು ಅಷ್ಟು ರುಚಿಸುವುದಿಲ್ಲ. ಈ ವಿನ್ಯಾಸದ ಕೊನೆಯಲ್ಲಿ ಯಾರು ಯಾವ ವೃತ್ತ ರಚಿಸುವುದರಲ್ಲಿ ಸಮರ್ಥರಿದ್ದಾರೆಂಬುದನ್ನು ಕ್ಷೇಮೇಂದ್ರನು ತಿಳಿಸುತ್ತಾನೆ. ಇಲ್ಲಿಯೂ ಈತನ ಮಾತು ಸಮಾಧಾನವನ್ನುಂಟುಮಾಡದು.

ಸುವಶಾ ಕಾಳಿದಾಸಸ್ಯ ಮಂದಾಕ್ರಾಂತಾ ಪ್ರವಲ್ಗತಿ
ಸದಶ್ವದಮಕಸ್ಯೇವ ಕಾಂಭೋಜತುರಗಾಂಗನಾ ॥ (ಕ್ಷೇ. ಸು. ೩/೩೪)

ಎಂದು ಹೇಳುತ್ತಾನೆ. ಕಾಳಿದಾಸನ ಸರಸ ಪದ್ಯಪ್ರಭುತ್ವ ಮೇಘದೂತದಲ್ಲಿ ಎಷ್ಟು ಕಾಣುತ್ತದೆಯೋ ಅಷ್ಟು ಅನೇಕ ವೃತ್ತಗಳಿಂದ ಕೂಡಿದ ರಘುವಂಶಕಾವ್ಯದಲ್ಲಿ ಕಾಣುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ರಘುವಂಶದಲ್ಲಿ ಅಜವಿಲಾಪವನ್ನು ಓದಿದವರು ಕಾಳಿದಾಸನಿಗೆ ವಿಯೋಗಿನೀ ವೃತ್ತನ್ನು ವಿಶೇಷ ಸರಸತೆಯಿಂದ ಉಪಯೋಗಿಸಲು ಬರಲಿಲ್ಲವೆಂದು ಹೇಳಲು ಬಂದೀತೆ?

## ನಾಗವರ್ಮನ ಛಂದೋಂಬುಧಿ (ಕನ್ನಡ)

ಕರ್ಣಾಟಕದಲ್ಲಿ ನಾಗವರ್ಮನು ಛಂದೋಂಬುಧಿ ಗ್ರಂಥವನ್ನು ರಚಿಸಿದ್ದು ಕ್ರಿ.ಶ. ಸುಮಾರು ೧೦೦೦ದಲ್ಲಿ. ಈ ಗ್ರಂಥದ ಆಂಗ್ಲ ಕನ್ನಡ ಆವೃತ್ತಿಯನ್ನು ಡಾ|| ಕಿಟೆಲರು 'ನಾಗವರ್ಮನ ಛಂದಸ್ಸು' ಎಂಬ ಹೆಸರಿನಲ್ಲಿ ಪ್ರಕಾಶಪಡಿಸಿದರು. ಮೈಸೂರು ಕಾವ್ಯಕಲಾನಿಧಿ ಗ್ರಂಥಮಾಲೆಯಲ್ಲಿ ಛಂದೋಂಬುಧಿ ಎಂಬ ಹೆಸರಿನಲ್ಲಿ ಇದು ಪ್ರಕಾಶಿತವಾಗಿದೆ. ನಾಗವರ್ಮನು ಸ್ವತಂತ್ರರೀತಿಯಲ್ಲಿ ಯತಿ ಹೇಳುತ್ತಾನೆ. ರಥೋದ್ಧತದಲ್ಲಿ ಆರನೆಯ ಅಕ್ಷರದ ಮೇಲೆ ಯತಿ ಹೇಳುತ್ತಾನೆ. ಸ್ವಾಗತಾವೃತ್ತದಲ್ಲಿ ಹಾಗೆ ಯತಿ ಹೇಳುವುದಿಲ್ಲ. ಕೆಲವು ಹೊಸ ವೃತ್ತಗಳನ್ನೂ ಕೊಡುತ್ತಾನೆ. ಈತನು ಕೊಟ್ಟಿರುವ ಅಂಗರುಚಿ ಮುಂತಾದ ಕೆಲವು ವೃತ್ತಗಳನ್ನು ಹೇಮಚಂದ್ರನು ತನ್ನ ಛಂದೋನುಶಾಸನದಲ್ಲಿ ಹೇಳುತ್ತಾನೆ. ಆದರೆ ನಾಗವರ್ಮನ ಹೆಸರನ್ನು ಹೇಮಚಂದ್ರನು ಏಕೆ ಉಲ್ಲೇಖಿಸುವುದಿಲ್ಲವೊ ತಿಳಿಯದು. ನಾಗವರ್ಮನು ಪಿಂಗಳನು ಹೇಳುವ ಗಣ ಪದ್ಧತಿಯನ್ನು ಉಪಯೋಗಿಸುತ್ತಾನೆ.

## ಹೇಮಚಂದ್ರನ ಛಂದೋನುಶಾಸನ

ಹೇಮಚಂದ್ರ ಛಂದೋನುಶಾಸನದಲ್ಲಿ ವೃತ್ತಜಾತಿಗಳ ಸಂಗ್ರಹವನ್ನೇ ಮಾಡಿದ್ದಾನೆ. ಈತನು ಅವಲಂಬಿಸುವುದು ಸೂತ್ರಪದ್ಧತಿಯನ್ನು. ಉದಾಹರಣೆ:

" ಮತ್ನಾಯಿಃ ಕುಸುಮಿತಲತಾ ವೇಲ್ಲಿತಾಜ್ಚೈಃ "

ಯಗಣ ಅನುಕ್ರಮವಾಗಿ ಮೂರಾವರ್ತಿ ಬರುತ್ತಾಗಿ ಯಕಾರ ಮೂರನೆಯ ಸ್ವರ ದೊಡನೆ ಸೇರಿಕೊಂಡಿದೆ. ಕಕಾರದಿಂದ ಜ ಐದನೆಯ ಅಕ್ಷರವಾಗುತ್ತದೆ. ಚ ಆರನೆಯ ಅಕ್ಷರ. ಜ್ ಚೈಃ ಎಂದು, ಈ ವೃತ್ತದಲ್ಲಿ ಯತಿಯಿಂದ ಮೊದಲನೆಯ ಐದು ಅಕ್ಷರಗಳ ಮತ್ತು ಎರಡನೆಯ ಆರು ಅಕ್ಷರಗಳ ತುಂಡುಗಳಾಗುತ್ತವೆಂದು ತಿಳಿಸುತ್ತದೆ. ಸೂತ್ರಪದ್ಧತಿಯಲ್ಲಿ ಈ ವಿಧವಾದ ಒಂದು ಪ್ರತ್ಯೇಕಮಾರ್ಗ ಮತ್ತು ವೃತ್ತಜಾತಿ ಸಂಗ್ರಹದ ದೊಡ್ಡತನ ಇವೆರಡನ್ನು ಬಿಟ್ಟರೆ ಛಂದೋನುಶಾಸನದಲ್ಲಿ ವಿಶೇಷವೇನೂ ಇಲ್ಲ. ವೃತ್ತಗಳಿಗೆ ತಾನು ಕೊಟ್ಟಿರುವ ಹೆಸರಿಗಿಂತ ಬೇರೆ ಹೆಸರುಗಳಿದ್ದರೆ ಅವುಗಳನ್ನೂ ತಿಳಿಸುತ್ತಾನೆ. ಆ ಹೆಸರುಗಳನ್ನು ಯಾರು ಕೊಟ್ಟರೆಂಬುದನ್ನೂ ಕೆಲವು ಸ್ಥಳಗಳಲ್ಲಿ ತಿಳಿಸುತ್ತಾನೆ. ಹೀಗೆ ಈತನಲ್ಲಿ ಭರತ, ಜಯದೇವ, ಸ್ವಯಂಭೂ ಇವರ ಹೆಸರುಗಳ ಉಲ್ಲೇಖವಾಗಿದೆ. ದೋಹಾಜಾತಿಯ ಲಕ್ಷಣ ವಿರಹಾಂಕನ ರೀತ್ಯಾ ಇದೆ.

## ಕವಿದರ್ಪಣ

ಪ್ರೊ|| ವೇಲಣಕರರು ಈ ಪುಸ್ತಕವನ್ನು ಸಂಪಾದಿಸಿ ಪ್ರಕಾಶಪಡಿಸಿದ್ದಾರೆ. ಈ ಗ್ರಂಥವನ್ನು ಯಾರು ರಚಿಸಿದರೆಂಬುದು ತಿಳಿಯುವ ಹಾಗಿಲ್ಲ. ಕವಿದರ್ಪಣ ಕಾರನು ಪ್ರಾಕೃತದಲ್ಲಿ ವಿಶೇಷವಾಗಿ ಅಪಭ್ರಂಶ ಜಾತಿಗಳ ವಿವೇಚನೆಯನ್ನು ಮಾಡಿದ್ದಾನೆ. ಈತನು ಹೇಮಚಂದ್ರನನ್ನು ಉಲ್ಲೇಖಿಸಿರುವುದರಿಂದ ಹೇಮಚಂದ್ರನ ತರುವಾಯ ಇದ್ದಿರಬೇಕು. ನಾಲ್ಕನೆಯ ಉದ್ದೇಶದಲ್ಲಿ ಕೆಲವು ವೃತ್ತಗಳ ವಿವೇಚನೆ ಇದೆ. ಸ್ವಯಂಭೂ ಅಂತೆ ವೃತ್ತಗಳ ಹೆಸರನ್ನೂ ಲಕ್ಷಣವನ್ನೂ ಪ್ರಾಕೃತದಲ್ಲಿ ಕೊಡುತ್ತಾನೆ.

"ರಸೇಹಿಂ ನಿದಿಟ್ಠಾ ಯಮನಸಭಲಾ ಗೋ ಸಿಹರಿಣೀ"

ಎಂದು ಶಿಖರಿಣೀ ವೃತ್ತಕ್ಕೆ ಲಕ್ಷಣ ಹೇಳುವನು. ಹೀಗೆ ಲಕ್ಷಣ ಸೂತ್ರ ಹೇಳು ವಾಗ ಉತ್ಪಲನ ಅನುಕರಣೆ ಕಾಣುತ್ತದೆ.

## ಕೇದಾರಭಟ್ಟನ ವೃತ್ತರತ್ನಾಕರ

ಇದು ಛಂದಃಶಾಸ್ತ್ರದ ಮೇಲಿನ ಮಹತ್ವದ ಗ್ರಂಥ. ಟೀಕಾಕಾರರಿಗೆ ಹೆಚ್ಚು ಪರಿಚಿತವಾದ್ದು. ಕ್ರಿ.ಶ. ೧೨೦೦ ಮೊದಲೇ ಈ ಗ್ರಂಥ ರಚಿತವಾಗಿರಬೇಕೆಂದು ಶ್ರೀ. ಪಿ. ಕೆ. ಗೋಡೆಯವರ ಅಭಿಪ್ರಾಯ[1]. ಈ ಗ್ರಂಥದಲ್ಲಿ ಒಟ್ಟು ಆರು ಅಧ್ಯಾಯ ಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಅಕ್ಷರ, ಗಣ, ಯತಿ ಮುಂತಾದವುಗಳ ವಿವೇಚನೆ ಅನುಷ್ಟುಭ್ ಛಂದದಲ್ಲಿ ಇದೆ. ಎರಡನೆಯ ಅಧ್ಯಾಯ ಜಾತಿ ಸದೃಶ ಪದ್ಯ

[1] Date of Vrttaratnakara—*Annals B.O.R.I.* XVII, p. 398—P. K. Gode.

ಪ್ರಕಾರ ವಿಷಯಕ್ಕೆ ಸಂಬಂಧಪಟ್ಟದ್ದು. ಮೂರನೆಯದು ಏಕಾಕ್ಷರೀವೃತ್ತ ಮೊದಲುಗೊಂಡು ದಂಡಕದ ವರೆಗೆ ಸುಮಾರು ೧೨೫ ಸಮವೃತ್ತಲಕ್ಷಣಗಳನ್ನು ಹೇಳುತ್ತದೆ. ನಾಲ್ಕರಲ್ಲಿ ಅರ್ಧಸಮವೃತ್ತಗಳ ಲಕ್ಷಣಸೂತ್ರಗಳ ವಿಷಯವಿದೆ. ಐದನೆಯ ಅಧ್ಯಾಯದಲ್ಲಿ ವಿಷಮವೃತ್ತಗಳನ್ನೂ ಹೇಳಿ ಕೊನೆಯ ಅಧ್ಯಾಯದಲ್ಲಿ ಪ್ರಸ್ತಾರ ವಿಷಯ ವಿವೇಚನೆ ಹೇಳಿದೆ.

ಪ್ರಾಕೃತಪದ್ಯ ಪ್ರಕಾರದ ಕಡೆ ಕೇದಾರಭಟ್ಟನು ಪೂರ್ಣವಾಗಿ ದುರ್ಲಕ್ಷ್ಯ ಮಾಡಿದ್ದಾನೆ. ಈತನು ಪಿಂಗಳಾನುಯಾಯಿಯಾದರೂ ಪಿಂಗಳನ ಕನಕಪ್ರಭಾ ಮತ್ತು ವರಸುಂದರೀ ವೃತ್ತಗಳನ್ನು ಕ್ರಮವಾಗಿ ಮಂಜುಭಾಷಿಣೀ ಮತ್ತು ಇಂದುವದನಾ ಎನ್ನುತ್ತಾನೆ. ಮಂಜುಭಾಷಿಣೀ ಮತ್ತು ಇಂದುವದನಾ ಈ ಹೆಸರಿನ ವೃತ್ತಗಳನ್ನು ಪ್ರತ್ಯೇಕವಾಗಿ ಹೇಮಚಂದ್ರನು ಹೇಳಿದ್ದರೂ ಕನಕಪ್ರಭಾವೃತ್ತಕ್ಕೆ ಮಂಜುಭಾಷಿಣೀ ಎಂಬ, ವರಸುಂದರೀ ವೃತ್ತಕ್ಕೆ ಇಂದುವದನಾ ಎಂಬ ಹೆಸರುಗಳೇ ರೂಢವಾಗಿವೆಯೆಂದು ಕಾವ್ಯಟೀಕಾ ಗ್ರಂಥಗಳಿಂದ ಕಂಡುಬರುತ್ತದೆ. ಪಣವ ಮತ್ತು ಪಂಚಚಾಮರ ವೃತ್ತಗಳ ಲಕ್ಷಣ ವೃತ್ತರತ್ನಾಕರದಲ್ಲಿ ಈ ರೀತಿಯಾಗಿದೆ:

ಮ್ನೌ ಗ್ಜೌ ಚೇತಿಪಣವನಾಮಕಂ" (ಕೆ. ೩-೨೨)
ಜಭೌಜಕೌ ವದಂತಿ ಪಂಚಚಾಮರಂ (ಕೆ. ೩-೬೭)

ಕೇದಾರಭಟ್ಟನು — ವರಾಹಮಿಹಿರನು ಕೊಡುವ — ಮೇಘವಿತಾನ, ಅನವಸಿತಾ ದ್ರುತಪದಾ, ಲಕ್ಷ್ಮಿ, ವೀರಲಲಿತಾ, ಸಮದವಿಲಾಸಿನೀ, ಸುವೃತ್ತಾ (ವಿಸ್ಮಿತಾ) ಈ ವೃತ್ತಗಳನ್ನು ಕೊಡುವುದಿಲ್ಲ. ಪಿಂಗಳನು ಹೇಳುವ ವಿಲಾಸಿನೀ, (ಸುರ) ಲಲನಾ, ತತ, ಕಾಂತೋತ್ಪೀಡಾ, ವಾಹಿನೀ, ಗೌರೀ, ಕುಟಿಲಾ, (ಹಂಸ ಶ್ಯೇನೀ), ಶೈಲಶಿಖಾ, ಅತಿಶಾಯಿನೀ, ವಿಬುಧಪ್ರಿಯಾ, ನಾರಾಚಕ, ವಿಸ್ಮಿತಾ ಮತ್ತು ಶಶಿವದನಾ ವೃತ್ತಗಳನ್ನೂ ಹೇಳುವುದಿಲ್ಲ. ಉಪೇಂದ್ರವಜ್ರಾ, ಪ್ರಹರ್ಷಿಣೀ ವಂಶಪತ್ರಪತಿತ ಈ ವೃತ್ತಗಳ ಮೇಲೆ ಕೇದಾರಭಟ್ಟ ಕೊಟ್ಟಿರುವ ಸೂತ್ರಗಳು ಉತ್ಪಲನ ಸೂತ್ರಗಳಂತಿವೆ. ಹೆಚ್ಚಾಗಿ ಕೇದಾರಭಟ್ಟನು ಸೂತ್ರಗಳನ್ನು ಸ್ವತಂತ್ರವಾಗಿ ರಚಿಸಿರುವಂತೆ ಕಾಣುತ್ತದೆ.

ಕೇದಾರಭಟ್ಟನು ವಿಯೋಗಿನೀ ವೃತ್ತವನ್ನು ಹೇಳುವುದಿಲ್ಲ. ಕುಮಾರ ಸಂಭವದ ತನ್ನ ಟೀಕೆಯಲ್ಲಿ (೪-೬) ಮಲ್ಲಿನಾಥನು

"ವಿಷಮೇ ಸಸಜಾ ಗುರುಃ ಸಮೇಸಭರಾ ಲೋಥ ಗುರುರ್ವಿಯೋಗಿನೀ"

ಎಂಬ ಸೂತ್ರವನ್ನೂ ಉದಾಹರಿಸಿ ಛಂದಃಶಾಸ್ತ್ರದ ಇತಿಹಾಸದಲ್ಲಿ ಒಂದು ಸುಪ್ರಸಿದ್ಧ ವೃತ್ತದ ಪ್ರಥಮೋಲ್ಲೇಖವನ್ನು ಮಾಡಿದ್ದಾನೆ. ಈಚೆಗೆ ಸುಪರಿಚಿತವಾದ ಈ

ಹೆಸರು ಆತನಿಗೆ ಹೇಗೆ ತಿಳಿಯಿತು? ಕ್ಷೇಮೇಂದ್ರನೂ ಈ ವೃತ್ತವನ್ನು ಮರೆತಿದ್ದಾನೆ. ಛಂದೋನುಶಾಸನದಲ್ಲಿ ಪ್ರಬೋಧಿತಾ ಎಂದೂ ಪ್ರಾಕೃತ ಪೈಂಗಳದಲ್ಲಿ ಸುಂದರೀ ಎಂದೂ ಬೇರೆ ಬೇರೆ ಹೆಸರಿವೆ. ಈ ಹೆಸರನ್ನು ಒಂದುವೇಳೆ ದಾಕ್ಷಿಣಾತ್ಯ ಛಂದಃ ಶಾಸ್ತ್ರಕಾರನು ಕೊಟ್ಟಿರಬೇಕು. ಮಂದಾರಮರಂದ ಚಂಪೂಕರ್ತನಾದ ಶ್ರೀ ಕೃಷ್ಣ ಕವಿ ಮಾತ್ರ ವಿಯೋಗಿನೀ ವೃತ್ತದ ಹೆಸರನ್ನು ಕೊಟ್ಟಿರುವನು. ವೃತ್ತರತ್ನಾಕರದ ಮೇಲೆ ಮಹಾರಾಷ್ಟ್ರೀ ಪಂಡಿತ ಭಟ್ಟ ರಾಮೇಶ್ವರಸೂನುಭಟ್ಟನಾರಾಯಣನ ಟೀಕೆ ಇದೆ. ಈ ಟೀಕೆ ಮೂಲಗ್ರಂಥಕ್ಕೆ ಪೂರಕ.

## ಪ್ರಾಕೃತ ಪೈಂಗಳ

ವೃತ್ತರತ್ನಾಕರದ ತರುವಾಯ ಮಹತ್ವದ ಮತ್ತು ಸುಪರಿಚಿತವಾದ ಗ್ರಂಥ ಪ್ರಾಕೃತ ಪೈಂಗಳ, ಛಂದಃಸೂತ್ರಕಾರ ಪಿಂಗಳನಿಗೂ ಈತನಿಗೂ ಯಾವ ಸಂಬಂಧವೂ ಇಲ್ಲ. ಯಾವ ಪದ್ಯಪ್ರಕಾರವೇ ಇರಲಿ 'ಪಿಂಗಳ ಹೀಗೆ ಹೇಳುತ್ತಾನೆ' ಎಂದು ಹೇಳಿ ಆತನ ಪದ್ಧತಿಯನ್ನೇ ಅನುಸರಿಸಿರಬೇಕು.

ಇದರಲ್ಲಿ ಎರಡು ಪರಿಚ್ಛೇದಗಳಿವೆ. ಮೊದಲಲ್ಲಿ ಜಾತಿ ಸದೃಶ ಪದ್ಯಪ್ರಕಾರ ಗಳ ವಿವೇಚನೆ ಇದೆ. ಎರಡನೆಯದರಲ್ಲಿ ವೃತ್ತಿ ವಿವೇಚನೆ ಇದೆ. ಹೀರ — ಜಾತಿ ಅಲ್ಲ; ವೃತ್ತ. ಆದರೆ ಇದನ್ನು ಮೊದಲನೆಯ ಪರಿಚ್ಛೇದದಲ್ಲೇ ಸೇರಿಸಿದ್ದಾನೆ. ಈ ಗ್ರಂಥವೆಲ್ಲ ಸ್ವಯಂಭೂಛಂದ ಮತ್ತು ಕವಿದರ್ಪಣಗಳಂತೆ ಪ್ರಾಕೃತದಲ್ಲಿದೆ. ಕೆಲವು ಶ್ಲೋಕಗಳಲ್ಲಿ ಹಮ್ಮೀರ ದೊರೆಯ ಹೆಸರು ಕಂಡುಬರುತ್ತದೆ. ಈತ ಮೇವಾಡದ ರಜಪೂತ ದೊರೆ. ಈತನ ಕಾಲ ಕ್ರಿ.ಶ. ೧೩೦೨. ಆದ್ದರಿಂದ ಪ್ರಾಕೃತ ಪೈಂಗಳದ ಕಾಲ ೧೪ನೆಯ ಶತಮಾನಕ್ಕೆ ಹಿಂದೆ ಹೋಗಲಾರದು. ಈ ಗ್ರಂಥದಲ್ಲಿ ಕರ್ಪೂರ ಮಂಜರೀ ನಾಟಕದ ಕೆಲವು ಶ್ಲೋಕಗಳಿವೆ. ಶಾಲಿನೀ ವೃತ್ತಕ್ಕೆ ಉದಾಹರಣೆಯನ್ನು ಕರ್ಪೂರ ಮಂಜರಿಯಿಂದ ಕೊಟ್ಟಿದ್ದಾನೆ. ಆದರೆ 'ಚಲುರಂಸಾ' ಎಂಬ ದುರ್ಮಿಳ ವೃತ್ತಕ್ಕೆ ಅದೇ ನಾಟಕದಿಂದ 'ದಿಸಬಹು — ತಂಸೊ' ಎಂಬ ಉದಾಹರಣೆಯನ್ನು ತೆಗೆದುಕೊಂಡಿಲ್ಲ. ಉದಾಹರಣೆಗಳು ಹೆಚ್ಚಾಗಿ ಯಮಕ ಉಳ್ಳವು. ಗ್ರಂಥಕಾರನು ಸ್ವತಃ ಅವನ್ನು ರಚಿಸಿಲ್ಲವೆಂದು ಕೆಲವರು ಹೇಳುತ್ತಾರೆ. ಈ ಮಾತು ಚಿಂತನೀಯ, ಒಬ್ಬ ಲೇಖಕನ ಕೈಯಿಂದ ಆಗಿಲ್ಲ, ಆಗಿಂದಾಗ್ಗೆ ಈ ಗ್ರಂಥ ಬೆಳೆದುಬಂದಿದೆ ಎಂದು ಈ ಗ್ರಂಥದ ವಿಷಯದಲ್ಲಿ ಒಂದು ಮತವುಂಟು. ಉಪಜಾತಿಯಲ್ಲಿ ೧೪ ಪ್ರಕಾರಗಳನ್ನು ಕಲ್ಪಿಸಿ ಅವಕ್ಕೆ ಹೆಸರನ್ನು ಕೊಟ್ಟಿದ್ದು ಮೊಟ್ಟಮೊದಲು ಪ್ರಾಕೃತ ಪೈಂಗಳದಲ್ಲಿ.

ವೃತ್ತಲಕ್ಷಣವನ್ನು ಹೇಳುವಾಗ ವಿರಹಾಂಕನ ಪ್ರಾಕೃತ ಪದ್ಧತಿಯ ಅವ ಲಂಬನವಿದೆ. ಶಾಲೂರ, ನರೇಂದ್ರಗೀತಾ, ಮಾಲಾಧರ, ನಿಶಿಪಾಲಕ ಮುಂತಾದ

ವೃತ್ತಗಳು ಮೊದಲು ಪ್ರಾಕೃತ ಪೈಂಗಳದಲ್ಲಿ ಕಂಡುಬರುತ್ತವೆ. ಆಶ್ಚರ್ಯದ ಮಾತೆಂದರೆ ಶಿಖರಿಣೀ ವೃತ್ತಕ್ಕೆ ಈ ಗ್ರಂಥದಲ್ಲಿ ಸ್ಥಳವಿಲ್ಲ.

ವೃತ್ತಗಳಿಗೆ ತಾನೇ ಹೊಸ ಹೆಸರನ್ನು ಕೊಟ್ಟು ಗೊಂದಲಮಾಡಿದ್ದಾನೆ. ದೋಧಕ ಮತ್ತು ಶಾರ್ದೂಲವಿಕ್ರೀಡಿತ ವೃತ್ತಗಳ ಲಕ್ಷಣವನ್ನು ಮತ್ತೊಂದಾವರ್ತಿ ಬೇರೆ ಶಬ್ದಗಳಿಂದ ಹೇಳಿ ಆ ವೃತ್ತಗಳಿಗೆ ಅನುಕ್ರಮವಾಗಿ 'ಬಂಧು' ಮತ್ತು 'ಸದ್ದೂಲಸಟ್ಟಾ' ಎಂಬ ಹೆಸರನ್ನು ಕೊಟ್ಟಿದ್ದಾನೆ. ಪ್ರಾಕೃತ ಉದಾಹರಣೆಗಳನ್ನು ನೋಡಿದರೆ ಅವುಗಳಲ್ಲಿ ಅಂತರ್ಗತವಾಗಿರುವ ಯಮಕಗಳಿಂದ ಯತಿವಿವೇಚನೆ ಆವಶ್ಯಕವಾಗಿ ತೋರಬೇಕಾಗಿತ್ತು. ತೋರುವುದಿಲ್ಲ. ಆದ್ದರಿಂದ ಪ್ರಾಕೃತ ಪೈಂಗಳದಲ್ಲಿ ಬ್ರಹ್ಮರೂಪಕದ ಉದಾಹರಣೆಯ ಬಿಡಿಸುವಿಕೆ ಈ ರೀತಿಯಾಗಿ ಬರುತ್ತದೆ:

[—|—————|—————|—————|———||]

ಇದೇ ಗ್ರಂಥವನ್ನು ಅನುಸರಿಸಿರುವ ವಾಣೀಭೂಷಣದಲ್ಲಿ ಬ್ರಹ್ಮರೂಪಕ ವೃತ್ತ ಬಿಡಿಸುವ ರೀತಿ [|—————|—————|—————|—————] ಹೀಗಿದೆ.

## ಗಂಗಾದಾಸಕೃತ ಛಂದೋಮಂಜರೀ

ವೃತ್ತರತ್ನಾಕರದಂತೆ ಛಂದೋಮಂಜರೀ ಸುಪರಿಚಿತವಾದ್ದು. ಉದ್ಗತಾ, ಭುಜಂಗ ಪ್ರಯಾತ, ಮಣಿಗುಣನಿಕರ, ಶಾಲಿನೀ, ರುಚಿರಾ, ಈ ವೃತ್ತಗಳ ಲಕ್ಷಣ ಸೂತ್ರಗಳನ್ನು ಗಂಗಾದಾಸನು ಉತ್ಪಲನಿಂದ ತೆಗೆದುಕೊಂಡಿರುವಂತಿದೆ. ಕೆಲವನ್ನು ಕೇದಾರಭಟ್ಟನಿಂದಲೂ ತೆಗೆದುಕೊಂಡಿದ್ದಾನೆ. ಕೆಲವನ್ನು ತಾನೇ ರಚಿಸಿದ್ದಾನೆ. ಅಲ್ಲಲ್ಲಿ ಮೂಲಸೂತ್ರಗಳನ್ನು ಸ್ವಲ್ಪ ವ್ಯತ್ಯಾಸಮಾಡಿ ತೆಗೆದುಕೊಳ್ಳುತ್ತಾನೆ. ಈ ಗ್ರಂಥದಲ್ಲಿ ಆರು ಸ್ತಬಕಗಳಿವೆ. ಆರನೆಯ ಸ್ತಬಕದಲ್ಲಿ ಮೂರು ಗದ್ಯಪ್ರಕಾರಗಳನ್ನು ಹೇಳಿರುವನು. ಇದು ಈ ಗ್ರಂಥದ ವಿಶೇಷ.

ಅಕಠೋರಾಕ್ಷರಂ ಸ್ವಲ್ಪಸಮಾಸಂ ಚೂರ್ಣಕಂ ವಿದುಃ |
ತತ್ತು ವೈದರ್ಭರೀತಿಸ್ಥಂ ಗದ್ಯಂ ಹೃದ್ಯತರಂ ಭವೇತ್ ||
ಭವೇ 'ದುತ್ಕಲಿಕಾ'ಪ್ರಾಯಂ ಸಮಾಸಾಢ್ಯಂ ದೃಢಾಕ್ಷರಂ |
ವೃತ್ತೈಕದೇಶಸಂಬಂಧಾತ್ 'ವೃತ್ತಗಂಧಿ' ಪುನಃಸ್ಮೃತಂ ||

ಮುಂದೆ ಛಂದಃಶಾಸ್ತ್ರದ ಮೇಲೆ ಉತ್ತಮ ಗ್ರಂಥಗಳ್ಯಾವುವೂ ಇಲ್ಲ. ಇದ್ದರೂ ಪ್ರಾಕೃತ ಪೈಂಗಳ ಮತ್ತು ವೃತ್ತರತ್ನಾಕರಗಳನ್ನು ಅನುಸರಿಸುವುವು. ದಾಮೋದರ ಮಿಶ್ರಕೃತ ವಾಣೀಭೂಷಣಕ್ಕೆ ಆಧಾರ ಪ್ರಾಕೃತಪೈಂಗಳ. ಪ್ರಾಕೃತಪೈಂಗಳದಲ್ಲಿ ಯತಿವಾದವಿಲ್ಲ. ಆದರೆ ದಾಮೋದರ ಮಿಶ್ರನು ಪಿಂಗಳ ಹೇಳದೆ ಇರುವ ಶಿಖರಿಣೀ

ವೃತ್ತದಲ್ಲಿ ಮಾತ್ರ ಯತಿಯನ್ನು ಹೇಳುತ್ತಾನೆ. ವೃತ್ತಸಾರ ಮತ್ತು ಛಂದಃಕೌಸ್ತುಭ ಗ್ರಂಥಗಳು ಅಷ್ಟು ಪ್ರಸಿದ್ಧವಲ್ಲ.

## ಶ್ರೀ ಕೃಷ್ಣಕವಿಯ ಮಂದಾರ ಮರಂದಚಂಪೂ

ಈ ಗ್ರಂಥದ ಮೊದಲನೆಯ ಬಿಂದುವಿನಲ್ಲಿ ಕೆಲವು ವೃತ್ತಗಳನ್ನು ಹೇಳಿದೆ. ಇಂದ್ರವಜ್ರಾ, ಉಪೇಂದ್ರವಜ್ರಾ, ವಂಶಸ್ಥ, ಹಂಸೀ ಮುಂತಾದ ವೃತ್ತಗಳಿಗೆ ಯತಿಯನ್ನು ಕವಿ ಹೇಳುತ್ತಾನೆ. ಯತಿ ಇಲ್ಲದಿರುವಾಗ ಆ ಮಾತನ್ನು ಸ್ಪಷ್ಟವಾಗಿ 'ಪಾದಮಧ್ಯೆ ಯತಿರ್ನಹಿ' ಎಂದು ಹೇಳುತ್ತಾನೆ. ಮರಾಠಿಯಲ್ಲಿ ಯಾವ ವೃತ್ತಕ್ಕೆ ಕಾಮದಾ ಎಂದು ಹೇಳುತ್ತಾರೆಯೊ ಯಾವುದರ ಉಗಮ ಸಿಕ್ಕುವುದಿಲ್ಲವೋ, ಆ ವೃತ್ತಕ್ಕೆ ಮರಾಲಿಕಾ ಎಂದು ಹೇಳುತ್ತಾನೆ. ಉದಾಹರಣೆಗಳನ್ನು ಕೇವಲ ಕೆಲವು ವೃತ್ತಗಳಿಗೆ ಕೊಟ್ಟಿರುವುದರಿಂದ ಮುದ್ರಣದೋಷವನ್ನು ಹುಡುಕಿ ತೆಗೆಯುವುದು ಅಶಕ್ಯ. "ಆಂದೋಲಿಕಾತತರಗಾಃ ಸಾಯಕೈಃ ಸಾಯಕೈರ್ಯತಿ" (ಮಮಚ ೧೬) ಈ ಲಕ್ಷಣದಲ್ಲಿ ಮೊದಲನೆಯ ಗಣ 'ತ' ವಾಗಿರದೆ 'ಜ' ಇರಬೇಕೆಂದು ತೋರುತ್ತದೆ. ಆದರೆ ನಿರ್ಣಯಮಾಡುವುದಕ್ಕೆ ಯಾವ ಮಾರ್ಗವೂ ಇಲ್ಲ.

"ಮೋ ಲೌ ಯೌ ಯಃ ಕುಸುಮಿತಲತಾ ಭೂತರ್ತ್ವಗೈರ್ಯತಿಃ" (ಮಮಚ. ೧೮) ಈ ಲಕ್ಷಣದಲ್ಲಿ ಲೌ ಸ್ಥಳದಲ್ಲಿ ತ್ನೌ ಇರಬೇಕು. ಅಕ್ಷರ ಸಂಖ್ಯೆ, ಯತಿ ಬಿಡಿಸುವಿಕೆ ಇವುಗಳನ್ನು ಧ್ಯಾನದಲ್ಲಿಡದೆ ಇದನ್ನು ತಿಳಿಯಲು ಸಾಧ್ಯವಿಲ್ಲ. ಈ ತೊಂದರೆಯಿಂದಲೇ ವೇಶ್ಯಾಪ್ರೀತಿ, ಚೇಟೀಗತಿ, ಬಾಲಿಕಾ ಮುಂತಾದ ವೃತ್ತಗಳ ರಚನೆಯು ಚೆನ್ನಾಗಿ ತಿಳಿಯುವುದಿಲ್ಲ.

ಕೌಲಗಿ. ಶೇಷಾಚಾರ್ಯ.

# ವಚನ

ಗಗನಕೊಂದು ಹೆಮ್ಮೆ : ಸೂರ್ಯ, ಚಂದ್ರಮ, ತಾರಗೆ
    ಗಳು ತನ್ನನು ವೀಧಿಯನೇ ಮಾಡಿರ್ಪವೆಂದು ;
ಮುಗಿಲಿಗೊಂದು ಹೆಮ್ಮೆ : ಜಗಕೆ ತಂಪನೀವಮೃತ
    ಧಾರೆ ತನ್ನವಿಹುದೆಂದು ;
ಹೂವಿಗೊಂದು ಹೆಮ್ಮೆ : ಬಣ್ಣ-ಸೌಗಂಧಗಳು
    ತನ್ನಲ್ಲಿ ಮನೆಮಾಡಿರುವವೆಂದು ;
ಕಿರಣಕೊಂದು ಹೆಮ್ಮೆ : ಎಲ್ಲ ವಸ್ತು ಚಮತ್ಕೃತಿ-
    ಶೋಭೆಗಳ ತೋರಿಸುವವ ತಾನೆಂದು ;
ಗಾಳಿಗೊಂದು ಹೆಮ್ಮೆ : ಊರೂರ
    ನಾಡನಾಡ ಸಂಚರಿಸುವಾ
    ವಿಶ್ವವ್ಯಾಪಿ ತಾನೆಂದು ;
ನನಗೂ ಒಂದು ಹೆಮ್ಮೆ : ವಿಶ್ವಾತ್ಮನಿಂ ಹೊರಹೊಮ್ಮಿದ
    ತುಣುಕು ನಾನೆಂದು.
ನಿನಗೂ ಒಂದು ಹೆಮ್ಮೆ : ಈಯೆಲ್ಲ ಹೆಮ್ಮೆಗಳ
    ನೀರ್ಗುಳ್ಳೆಗಳತೆರದಲೊಡೆದುಹಾಕುವ
    ಜಾಣ್ಮೆ ನಿನ್ನದೆಂದು.

ಕಿಶೋರ

# ಸಮಾಜ ಸುರಕ್ಷಣೆ

## (Social Security)

ಒಂದುದೇಶವು ಪ್ರಗತಿಹೊಂದಬೇಕಾದರೆ ಅದು ಸನ್ನಿವೇಶಕ್ಕೆ ತಕ್ಕಂತೆ ಉತ್ತಮರೀತಿಯಲ್ಲಿ ಹೊಂದಿಕೊಂಡು ಹೋಗಬೇಕು. ತನ್ನೆಲ್ಲ ಸಂಪತ್ತೂ ಯಾವ ರೀತಿಯೂ ವ್ಯರ್ಥವಾಗದಂತೆ ನೋಡಿಕೊಳ್ಳಬೇಕು; ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಪ್ರಕೃತಿದತ್ತವಾದ ಸಂಪತ್ತನ್ನು ಮಾತ್ರವೇ ಅಲ್ಲ, ಮನುಷ್ಯ ಸಂಪತ್ತನ್ನು ಕೂಡ. ಈ ಮನುಷ್ಯಸಂಪತ್ತು ಹೇಗೆ ವ್ಯರ್ಥವಾಗಬಹುದೆಂಬುದನ್ನು ಅರಿತರೆ, ಆಗ ನಾವು ತಕ್ಕ ಉಪಾಯಗಳನ್ನು ಕಂಡುಹಿಡಿದು ಸಮಾಜಕ್ಕಾಗಬಹುದಾದ ನಷ್ಟವನ್ನು ತಡೆಗಟ್ಟಲು ಶಕ್ಯವಾಗುವುದು. ಜೀವನ ಸೌಕರ್ಯದ ಮಟ್ಟವನ್ನು ಮೇಲೆತ್ತಬಹುದು. ಜೀವನವನ್ನು ಹೆಚ್ಚು ಸುಖಮಯವಾಗಿ ಮಾಡಬಹುದು.

ಇದು ವಿಜ್ಞಾನದ ಕಾಲ, ಯಂತ್ರಗಳ ಯುಗ. ಮಾನವನು ತನ್ನ ನಿತ್ಯಜೀವನದ ಅನೇಕ ಕಾರ್ಯಗಳನ್ನೂ ಯಂತ್ರಗಳಿಂದ ಮಾಡಿಸಿಕೊಳ್ಳುತ್ತಿದ್ದಾನೆ. ಈ ಯಂತ್ರಗಳ ಸಹಾಯದಿಂದಲೂ ಕರ್ಮ ಅಥವಾ ಶ್ರಮ ವಿಭಜನೆಯಿಂದಲೂ ದೊಡ್ಡ ಪ್ರಮಾಣದ ಉತ್ಪತ್ತಿ ಸಾಧ್ಯವಾಗಿದೆ. ಈ ಕ್ರಾಂತಿಯಿಂದ ಮನುಷ್ಯನ ಜೀವನದ ಮಟ್ಟ ಏರಿದೆ. ಅವನ ಆವಶ್ಯಕತೆಗಳೂ ಹೆಚ್ಚಾಗಿವೆ. ಜೊತೆಗೆ ಭೋಗಸಾಮಗ್ರಿಗಳೂ ಅವನ ಜೀವನದಲ್ಲಿ ಒಂದು ಸ್ಥಾನವನ್ನು ಗಳಿಸಿವೆ. ಆದರೆ ಈ ಪ್ರಮಾಣದ ಉತ್ಪತ್ತಿ ಕ್ರಮವು ಸುಖದ ಜೊತೆಗೆ ಅನೇಕ ಕಷ್ಟಗಳನ್ನೂ ತಂದಿದೆ. ಜನರು ಆರ್ಥಿಕ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದಾರೆ. ಆರ್ಥಿಕ ಅನಿಶ್ಚಿತತೆ ಹೆಚ್ಚಾಗಿದೆ. ದೊಡ್ಡ ದೊಡ್ಡ ಕೈಗಾರಿಕೆಯ ಕೇಂದ್ರಗಳಲ್ಲಿ ಜನಸಾಂದ್ರತೆ ಹೆಚ್ಚಿ ಜನರು ಅನೇಕ ರೋಗಗಳಿಗೆ ತುತ್ತಾಗಿದ್ದಾರೆ; ಅವರ ಆರೋಗ್ಯ, ಬಲ ಕುಗ್ಗುತ್ತಿವೆ. ಜನರು ರೋಗಕ್ಕೆ ಸಿಕ್ಕಿ ನರಳುವುದರಿಂದ ಸಮಾಜಕ್ಕೆ ಅಪಾರ ನಷ್ಟವುಂಟಾಗುತ್ತದೆ. ರೋಗಪೀಡಿತರನ್ನು ಉಪಚರಿಸಿ ಗುಣಪಡಿಸಲು ಆಗುವ ವೆಚ್ಚ ಮಾತ್ರವೇ ಅಲ್ಲದೆ ಅವರು ಮೊದಲು ಎಷ್ಟು ಸಂಪಾದಿಸುತ್ತಿದ್ದರೋ ಅಷ್ಟು ಸಂಪತ್ತು ಸಮಾಜಕ್ಕೆ ಇಲ್ಲವಾಗುತ್ತದೆ. ಅಮೆರಿಕದ ಸಂಯುಕ್ತ ಸಂಸ್ಥಾನದಲ್ಲಿ ಕ್ಷಯರೋಗ ಒಂದರಿಂದ ಸಾಯುವವರ ವರಮಾನದ ನಷ್ಟ ಮತ್ತು ಅದರ ನಿವಾರಣೆಯ ವೆಚ್ಚ ವರ್ಷಕ್ಕೆ ಸುಮಾರು ಮುನ್ನೂರು ಮೂವತ್ತು ಕೋಟಿ ರೂಪಾಯಿ ($ ೧೦೦ಕೋಟಿ)ಆಗುತ್ತದೆ. ಹೀಗೆಯೇ ಟೈಫಾಯಿಡ್ ಮಲೇರಿಯ ರೋಗಗಳ ನಿವಾರಣೆಗೋಸ್ಕರ ಸುಮಾರು ಇನ್ನೂರು

ಇಪ್ಪತ್ತು ಕೋಟಿ ರೂಪಾಯಿ ($ ೬೫ ಕೋಟಿ) ವೆಚ್ಚವಾಗುತ್ತದೆ. ಈ ಪರಿಸ್ಥಿತಿ ಅಮೆರಿಕದಲ್ಲಿ ಮಾತ್ರವಲ್ಲ, ಎಲ್ಲ ದೇಶಗಳಲ್ಲಿಯೂ ಇದೆ. ಇದರಿಂದ ಸಮಾಜಕ್ಕೆ ಹೆಚ್ಚು ನಷ್ಟವುಂಟಾಗುತ್ತದೆಯೆಂದು ಮತ್ತೆ ಹೇಳಬೇಕಾಗಿಲ್ಲ. ಜನ ಎಷ್ಟು ಸುಖವಾಗಿರಬಹುದೋ ಅಷ್ಟು ಸುಖವಾಗಿರಲು ಸಾಧ್ಯವಾಗಿಲ್ಲ.

ಕೆಲಸಗಾರರು ಗಿರಣಿಗಳಲ್ಲಿ ಕೆಲಸಮಾಡುವಾಗ ಅನೇಕ ಆಕಸ್ಮಿಕಗಳಿಗೆ ತುತ್ತಾಗುತ್ತಾರೆ. ಇವುಗಳಿಂದ ಅವರು ಅಂಗವಿಹೀನರಾಗಿ ಕೆಲಸಮಾಡಲು ಅನರ್ಹರಾಗುತ್ತಾರೆ; ಇಲ್ಲವೆ ಆ ಅಪಘಾತಗಳಿಂದ ಮಡಿಯುತ್ತಾರೆ. ಇದರಿಂದ ರಾಷ್ಟ್ರದ ಕಾರ್ಯಬಲ ಕುಗ್ಗುತ್ತದೆ. ಅವರ ಆಶ್ರಿತರು ನಿರ್ಗತಿಕರಾಗಿ ಸಮಾಜಕ್ಕೆ ಹೊರೆಯಾಗುತ್ತಾರೆ. ಮುಪ್ಪು ಒದಗಿದಾಗ ಕೂಡ ಕೆಲಸಗಾರನು ಸಾಕಷ್ಟು ವರಮಾನವಿಲ್ಲದೆ ತಾನೂ ತನ್ನ ಸಂಸಾರವೂ ಬಹು ಶೋಚನೀಯವಾದ ಸ್ಥಿತಿಯಲ್ಲಿ ಜೀವನವನ್ನು ನಡೆಸುತ್ತಾನೆ; ಬೀದಿ ಅಲೆಯುತ್ತಾನೆ; ಭಿಕ್ಷೆ ಬೇಡುತ್ತಾನೆ; ಕಾಲ ಕಳೆಯುತ್ತಾನೆ.

ನಿರುದ್ಯೋಗತೆ ಇಂದಿನ ಆರ್ಥಿಕರಂಗದ ನಿತ್ಯಸುದ್ದಿ. ನಮ್ಮ ಕೈಗಾರಿಕೆ ವ್ಯವಸ್ಥೆಯಲ್ಲಿ ಯಾವಾಗಲೂ ಆಗುವ ಬದಲಾವಣೆಗಳಿಂದ ನಿರುದ್ಯೋಗ ಉಂಟಾಗುತ್ತದೆ. ಈ ನಿರುದ್ಯೋಗಪೀಡೆಯಿಂದ ಸಮಾಜಕ್ಕೆ ಅಪಾರ ನಷ್ಟವುಂಟು. ಶೇಕಡ ೧೦ ಅಥವಾ ೧೨ರಷ್ಟು ಕೆಲಸಮಾಡಲರ್ಹತೆಯುಳ್ಳ ಜನರು ಸಾಮಾನ್ಯ ಕಾಲದಲ್ಲಿ ಕೂಡ ಕೆಲಸವಿಲ್ಲದೆ ಕಾಲಹರಣ ಮಾಡುತ್ತಾರೆ. ಕೆಲಸ ಸಿಕ್ಕಿದಾಗ ಕೂಡ ಅದು ಎಂದು ತಮಗೆ ಇಲ್ಲದಾಗುವುದೋ ಎಂಬ ಭೀತಿ ಜನರ ಉತ್ಸಾಹವನ್ನೂ ಧೈರ್ಯವನ್ನೂ ಕುಗ್ಗಿಸುತ್ತದೆ. ನಿರುದ್ಯೋಗತೆಯೂ ಅದರ ಭೀತಿಯೂ ಸಮಾಜಕ್ಕೆ ಅಪಾರ ನಷ್ಟವನ್ನುಂಟುಮಾಡುತ್ತಿದೆ ಎಂಬುದೂ ಎಲ್ಲರಿಗೂ ಗೊತ್ತಾಗುವ ಸಂಗತಿಯೇ.

ನಮ್ಮ ಆರ್ಥಿಕ ರಚನೆಯು ಯಂತ್ರಯುಗದ ಕ್ರಾಂತಿಯಿಂದ ಬದಲಾವಣೆಯಾಯಿತು. ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸಲು ಹಣವಂತರಿಗೆ ಮಾತ್ರ ಸಾಧ್ಯವಾದುದರಿಂದ ದಣಿಗಳು ಕಾರ್ಮಿಕರು ಎಂಬ ಎರಡು ಪಂಗಡಗಳಾದುವು. ಬಂಡವಾಳಸ್ಥರು ಹೆಚ್ಚು ಲಾಭ ಪಡೆಯಬೇಕೆಂಬ ಆಶೆಯಿಂದ ಬಹು ಕಡಿಮೆ ವೇತನ ಕೊಟ್ಟು ಜನರನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದು, ಅವೇಳೆ ಹೊತ್ತಿನವರೆಗೂ ಅವರಿಂದ ಕೆಲಸ ಮಾಡಿಸಿಕೊಳ್ಳುವುದು ಮತ್ತು ಇತರ ವಿಧಗಳಲ್ಲಿ ಕಾರ್ಮಿಕರ ಕಾರ್ಯಬಲವನ್ನು ಅತಿ ದುಡಿಸಿಕೊಳ್ಳುವುದು ವಾಡಿಕೆಯಾಯಿತು. ಈ ಸ್ಥಿತಿ ಈಗ ಇಲ್ಲದೆ ಇಲ್ಲ. ಬಂಡವಾಳಸ್ಥರು ಸ್ವಾರ್ಥಕ್ಕೋಸ್ಕರ ತಮ್ಮನ್ನು ಉಪಯೋಗಿಸಿಕೊಳ್ಳುತ್ತಿರುವರೆಂಬ ಅರಿವು ಕೆಲಸಗಾರರಿಗೆ ಆಯಿತು. ಆ ನೂತನ ಆರ್ಥಿಕ ವ್ಯವಸ್ಥೆಯಲ್ಲಿ ತಮ್ಮ ಸ್ಥಿತಿ ಶೋಚನೀಯವೆಂಬುದನ್ನು ಅವರು ಅರಿತರು. ಅದನ್ನು ಉತ್ತಮಪಡಿಸಿಕೊಳ್ಳ

ಬೇಕೆಂಬ ಆಶೆಯುಂಟಾಯಿತು. ಒಗ್ಗಟ್ಟಿನ ಬಲವನ್ನರಿತು ಕೆಲಸಗಾರರ ಸಂಘಗಳನ್ನು ಸ್ಥಾಪಿಸಿ ಬಂಡವಾಳಸ್ಥರ ಮೇಲೆ ಕಷ್ಟದಿಂದ ಜಗಳವಾಡಿ ಕೊನೆಗೆ ತಮ್ಮ ಬೇಡಿಕೆಗಳನ್ನು ಬಹುಮಟ್ಟಿಗೆ ಅವರು ಒಪ್ಪಿಕೊಳ್ಳುವಂತೆ ಮಾಡಿದರು. ಬಹಳಕಾಲ ತಟಸ್ಥಭಾವದಿಂದಿದ್ದ ಸರ್ಕಾರ ಕೂಡ ಕೊನೆಗೆ ಸಾರ್ವಜನಿಕರ ಅಭಿಪ್ರಾಯಕ್ಕೆ ಕಿವಿಗೊಡಬೇಕಾಯಿತು. ಅದು ಕಾರ್ಮಿಕರ ಸಹಾಯಕ್ಕೆ ಬಂದಿತು. ಪರಿಸ್ಥಿತಿ ಉತ್ತಮಗೊಂಡಿತು.

ಒಂದು ಕಡೆ ಕಾರ್ಮಿಕರ ಒತ್ತಾಯ ಬಲವಾಗುತ್ತ ಬಂದರೆ ಮತ್ತೊಂದು ಕಡೆ ಸರ್ಕಾರದ ಮನೋವೃತ್ತಿ ಬದಲಾಯಿಸುತ್ತ ಬಂದಿತು. ಸಾರ್ವಜನಿಕ ಕ್ಷೇಮವೇ ನಾಗರಿಕತೆಗೆ ಮೂಲ, ಸರ್ಕಾರವು ಸಾರ್ವಜನ ರಕ್ಷಣೆಗೆ ಇರುವ ಸಂಸ್ಥೆ— ಎಂಬ ತತ್ವವನ್ನು ಎಲ್ಲಾ ಸರ್ಕಾರಗಳೂ ಮನಗಂಡವು. ಜನಜೀವನದ ರಕ್ಷಣೆಗಾಗಿ ಒಂದು ಕಾರ್ಯಕ್ರಮವನ್ನು ಕೈಗೊಳ್ಳುವುದು ಕರ್ತವ್ಯವೆಂಬ ಅರಿವಾಯಿತು. ಹೀಗೆ ಕೈಕೊಂಡ ಸರ್ಕಾರದ ಮುಖ್ಯ ಕಾರ್ಯಕ್ರಮವೆಂದರೆ ಸಾಮಾಜಿಕ ವಿಮೆ. ಆಧುನಿಕ ಜೀವನ ಪಥದಲ್ಲಿ ವ್ಯಕ್ತಿಗಳಿಗೆ ಒದಗಬಹುದಾದ ಮುಖ್ಯ ಗಂಡಾಂತರಗಳಿಂದ ಅವರನ್ನು ರಕ್ಷಿಸುವ ಒಂದು ಸಾಮುದಾಯಿಕ ಸಹಕಾರ ವ್ಯವಸ್ಥೆಗೆ ಸಾಮಾಜಿಕ ವಿಮೆಯೆಂದು ಹೆಸರು. ವೈಯಕ್ತಿಕ ಸಂದರ್ಭಗಳಲ್ಲಿ ಈ ಆಕಸ್ಮಿಕಗಳ ಘಟನೆಯನ್ನು ನಾವು ಲೆಕ್ಕಿಸಲಾಗದಿದ್ದರೂ, ಸಾಮುದಾಯಿಕವಾಗಿ ಈ ಆಕಸ್ಮಿಕಗಳು ವಿಲಕ್ಷಣನೇಮದಿಂದ ಸಂಭವಿಸುವುದರಿಂದ ಅವನ್ನು ಮುಂದಾಗಿ ತಿಳಿದು ಹೆಚ್ಚು ಕಡಿಮೆ ಅವುಗಳ ಪರಿಮಾಣವನ್ನು ಕಂಡು ಹಿಡಿಯಲು ಸಾಧ್ಯ. ಸಾಮಾಜಿಕ ವಿಮೆಯಲ್ಲಿ ಅನೇಕ ಶಾಖೆಗಳಿವೆ. ಇವುಗಳಲ್ಲಿ ಮುಖ್ಯವಾದುವು ಕೆಲಸಗಾರರ ನಷ್ಟ ಪರಿಹಾರ, ಮುಪ್ಪಿನ ವೇತನಗಳು, ರೋಗ ವಿಮೆ ಮತ್ತು ನಿರುದ್ಯೋಗ ವಿಮೆ, ವೈದ್ಯೋಪಚಾರ, ಕಾಯಿಲೆ ವಾಸಿಯಾಗಿ ಹಿಂತಿರುಗಿ ಕೆಲಸಕ್ಕೆ ಬರುವ ವರೆಗೂ ಸಂಬಳ, ಶವ ಸಂಸ್ಕಾರಕ್ಕೆ ಹಣ, ಅಂಗ ಊನವಾದ ಕಾರಣದಿಂದ ಕೆಲಸ ಮಾಡಲಾಗದಿದ್ದರೆ ಪರಿಹಾರ, ವಿಧವೆಯರಿಗೂ ದಿಕ್ಕಿಲ್ಲದ ಮಕ್ಕಳಿಗೂ ವೇತನ— ಇವೆಲ್ಲವೂ ಕೆಲಸಗಾರರ ಪರಿಹಾರ ಕ್ರಮದೊಳಗೆ ಸೇರುತ್ತವೆ. ವಯಸ್ಸಾದ ಮೇಲೆ ಕೂಡ ಕೆಲಸಗಾರರಿಗೆ ಸಾಕಾದಷ್ಟು ಆಸರೆಯಿರಲೆಂದು ಮುಪ್ಪಿನ ವೇತನಗಳು ಏರ್ಪಾಡಾಯಿತು. ಕೆಲಸಗಾರರು ತಮ್ಮ ಇಚ್ಛೆಗೆ ಮೀರಿ ನಿರುದ್ಯೋಗಿಗಳಾದರೆ ಅವರಿಗೆ ಸಾಕಾದಷ್ಟು ವೇತನಕೊಟ್ಟು ಕೆಲಸಗಳನ್ನು ಹುಡುಕಿ ಕೊಡುವುದೇ ನಿರುದ್ಯೋಗ ವಿಮಾಕಚೇರಿ ಮುಖ್ಯಕಾರ್ಯ. ಈ ಎಲ್ಲ ಬಗೆಯ ವಿಮೆಗಳಿಗೂ ಹಣಬೇಕಾಗುವುದು. ಸಾಮಾನ್ಯವಾಗಿ ಈ ಹಣವನ್ನು ಚಂದಾರೂಪವಾಗಿ ಶೇಖರಿಸುವುದುಂಟು. ದಣಿಗಳೂ, ಕೆಲಸ

ಗಾರರೂ ಸರ್ಕಾರವೂ ಚಂದಾ ತೆರುವುವು. ಹೀಗೆ ಸಂಗ್ರಹಿಸಿದ ಹಣದಿಂದ ಸಾಮಾಜಿಕ ವಿಮೆಯನ್ನು ನಡಸುವುದು ವಾಡಿಕೆ.

ಪ್ರಪಂಚದ ಅನೇಕ ನಾಗರಿಕ ದೇಶಗಳಲ್ಲಿ ಸಾಮಾಜಿಕ ವಿಮೆ ದಿನೇ ದಿನೇ ಪ್ರಾಮುಖ್ಯತೆಯನ್ನು ಪಡೆಯುತ್ತಿರುವುದು ಒಂದು ಸಂತೋಷದ ವಿಷಯವೇ ಸರಿ. ಪಶ್ಚಿಮ ದೇಶಗಳಲ್ಲಿ ಸಮಾಜವಿಮೆ ಪದ್ಧತಿ ಮೊದಲು ಮೂಡಿತು. ಕಾರಣವೇ ಸಂದರೆ—ಯಂತ್ರಕ್ರಾಂತಿಯ ದಾಳಿಗೆ ಸಿಕ್ಕಿದ ರಾಷ್ಟ್ರಗಳಲ್ಲಿ ಇವು ಮೊದಲನೆಯವು. ಜರ್ಮನಿ, ಇಂಗ್ಲೆಂಡ್, ಅಮೆರಿಕ ಮೊದಲಾದ ದೇಶಗಳು ಸಮಾಜಜೀವನದ ರಕ್ಷಣಾ ಕಾರ್ಯದಲ್ಲಿ ಬಹಳ ಮುಂದುವರಿದಿವೆ. ಅಲ್ಲಿ ಸಾಮಾಜಿಕವಿಮಾ ಪರೀಕ್ಷಾ ಪ್ರಯೋಗ ಗಳು ನಡೆದು ಫಲಕಾರಿಯಾಗಿವೆ. ಅಖಿಲಪ್ರಪಂಚಕ್ಕೆ ಸಮಾಜರಕ್ಷಣೆಯನ್ನುಂಟು ಮಾಡಬೇಕು. ಇದು ಅತ್ಯಾವಶ್ಯಕ ಎಂದು ಈ ಪ್ರಯೋಗಗಳು ಆದ್ಯಂತಿಕವಾಗಿ ಸಾರುತ್ತಿವೆ.

ಎಲ್ಲಕ್ಕೂ ಮೊದಲು ಇಂಗ್ಲೆಂಡಿನ ಸರ್ಕಾರವು ಸಮಾಜ ಸುರಕ್ಷಣೆಗಾಗಿ ೧೬೦೧ ರಲ್ಲಿ ಬಡತನದ ಪರಿಹಾರ ಕಾಯಿದೆಯನ್ನು (Poor Relief Act) ಕಾರ್ಯಕ್ಕೆ ತಂದಿತು. ಎಲಿಜಬೆತ್ ರಾಣಿ ಈ ವಿಧವಾದ ಕಾಯಿದೆಗಳಿಂದ ಬಡವರ ಸೇವೆಮಾಡಿ ದುದರಿಂದ ಆಕೆಯ ಆಳಿಕೆ ಹೆಸರುವಾಸಿಯಾಗಿದೆ. ಆದರೆ ಸರ್ಕಾರದ ಮೂಲಕ ಸಾಮಾಜಿಕ ವಿಮಾವ್ಯವಸ್ಥೆಯನ್ನು ಕೈಕೊಂಡ ರಾಷ್ಟ್ರಗಳಲ್ಲಿ ಜರ್ಮನಿಗೇ ಮೊದಲ ಸ್ಥಾನ. ಜರ್ಮನಿ ಬಹು ನಿಧಾನವಾಗಿ ಯಂತ್ರಯುಗಕ್ಕೆ ಮಾರ್ಪಟ್ಟರೂ, ಬಹು ಬೇಗ ಅದರ ದೋಷಗಳನ್ನರಿತು ಅವನ್ನು ನಿವಾರಿಸಲು ಯತ್ನಿಸಿತು. ನಾಗರಿಕ ಜೀವನ ಸುಗಮವಾಗಿ ಮುಂದುವರಿಯಬೇಕಾದರೆ, ದೇಶ ಮುನ್ನಡೆಯಬೇಕಾದರೆ ಸರ್ಕಾರ, ಸಾಮಾಜಿಕ ವಿಮೆಯ ಮೂಲಕ, ಪ್ರಜೆಗಳಿಗೆ ಅವರ ಆರೋಗ್ಯ ಮತ್ತು ಜೀವನದ ಮಟ್ಟ ಇವುಗಳ ವಿಷಯವಾಗಿ ಭರವಸೆಯನ್ನು ಕೊಡಬೇಕು ಎಂಬ ತತ್ವ ವನ್ನು ಜರ್ಮನಿ ಬಹುಬೇಗ ತಿಳಿದುಕೊಂಡಿತು. ಕೈಗಾರಿಕೆಯ ಪ್ರಪಂಚದಲ್ಲಿ ಶ್ರಮ ಜೀವಿಗಳು ಹೇಗೆ ಒತ್ತಟ್ಟಿಗೆ ವಾಸಮಾಡಬೇಕು, ಇದರಿಂದ ಅವರು ಹೇಗೆ ಅನೇಕ ರೋಗಗಳಿಗೆ ತುತ್ತಾಗುತ್ತಾರೆ, ಸ್ವರಕ್ಷಣೆಯನ್ನು ಮಾಡಿಕೊಳ್ಳಲು ಅವರಿಗೆ ಹೇಗೆ ಸ್ವಾತಂತ್ರ್ಯವೂ ಶಕ್ತಿಯೂ ಇಲ್ಲ ಎಂಬೀ ವಿಷಯಗಳನ್ನು ಮನನಮಾಡಿ ಸಮಾಜ ಸುರಕ್ಷಣೆಗಾಗಿ ಹಟತೊಟ್ಟು ಕಾರ್ಯವನ್ನು ಕೈಕೊಂಡಿತು. ಕೌಂಟ್ ಪೊಸ್‌ಡೊವ್ಸಿಕ ೧೯೦೯ ರಲ್ಲಿ ಈ ರೀತಿ ಅಭಿಪ್ರಾಯಪಟ್ಟನು: "ಈಗ ಜರ್ಮನಿ ಅಪರಿಮಿತ ಕೈಗಾ ರಿಕೆಯ ಅಭಿವೃದ್ಧಿಯನ್ನು ಹೊಂದಿದ್ದರೆ ಅದಕ್ಕೆ ಮುಖ್ಯಕಾರಣ ಜರ್ಮನಿಯ ಶ್ರಮಜೀವಿಗಳ ಸಾಮರ್ಥ್ಯ. ಆದರೆ ಈಚಿನ ಸಾಮಾಜಿಕ ಕಾನೂನುಗಳಿಂದ ನಾವು

ನಮ್ಮ ಶ್ರಮಜೀವಿಗಳಿಗೆ ತಕ್ಕಮಟ್ಟಿನ ಜೀವನಮಟ್ಟವನ್ನು ದೊರಕಿಸದಿದ್ದರೆ ಮತ್ತು ನಮ್ಮ ಕೈಲಾದಮಟ್ಟಿಗೆ ಅವರ ದೇಹಾರೋಗ್ಯವನ್ನು ಕಾಪಾಡದೆ ಇದ್ದಿದ್ದರೆ ಅವರಲ್ಲಿ ಈ ಸಾಮರ್ಥ್ಯ ಇರುತ್ತಿರಲಿಲ್ಲ!" ಈ ಮಾತು ಅಕ್ಷರಶಃ ನಿಜ. ೧೯ನೆಯ ಶತಮಾನದಲ್ಲಿ ಇತರ ರಾಷ್ಟ್ರಗಳ ಸರ್ಕಾರಗಳು ತಟಸ್ಥ ನೀತಿಯನ್ನು ಅನುಸರಿಸುತ್ತಿದ್ದುದರಿಂದ ಸಮಾಜಸುರಕ್ಷಣೆಯ ಕಾರ್ಯಗಳು ಅಷ್ಟಾಗಿ ಮುಂದುವರಿಯಲಿಲ್ಲ.

ಜರ್ಮನಿಯ ರಾಷ್ಟ್ರಪಾಲನೆಯ ಕ್ರಮದ ತಳಹದಿಯಾಗಿ ಸಾರ್ವಜನಿಕ ವಿದ್ಯಾಭ್ಯಾಸ ಏರ್ಪಟ್ಟಿತ್ತು. ತಾನು ಯಾವ ಪ್ರಾಂತದಲ್ಲಿರಲಿ ಪ್ರತಿಯೊಬ್ಬ ಜರ್ಮನ್ ಪ್ರಜೆಯೂ ಸಾರ್ವಜನಿಕ ವೆಚ್ಚದಲ್ಲಿ ವಿದ್ಯಾರ್ಜನೆಮಾಡಬಹುದು, ಈ ಹಕ್ಕನ್ನು ಪ್ರತಿಯೊಬ್ಬ ಪ್ರಜೆಯೂ ಉಪಯೋಗಿಸಿಕೊಳ್ಳಬೇಕು ಎಂದು ಕಡ್ಡಾಯವಾಯಿತು. ಪ್ರತಿಯೊಬ್ಬ ಪ್ರಜೆಯೂ ರಾಷ್ಟ್ರದ ಏಳಿಗೆಗೆ ಸಹಕಾರವನ್ನೀಯಲು ಶಕ್ತನಾಗುವಂತೆ ಮಾಡುವುದು ತನ್ನ ಕರ್ತವ್ಯವೆಂದು ಜರ್ಮನ್ ಸರ್ಕಾರ ತಿಳಿಯಿತು. ಪ್ರತಿಯೊಬ್ಬ ಪ್ರಜೆಯೂ ರಾಷ್ಟ್ರದ ಸ್ವತ್ತು. ಸೋಮಾರಿಯಾಗಿದ್ದಾಗ ಆತನು ದೇಶದ ಕೈಗಾರಿಕೆಯ ಸಂಪದಭಿವೃದ್ಧಿಗೆ ಸಹಾಯಕೊಡದಿರುವುದಲ್ಲದೆ, ಸಮಾಜದ ಪ್ರಗತಿಗೆ ಆತಂಕವುಂಟುಮಾಡುವನು. ಅವನು ತಿರುಗಾಲಿಯಾದರೆ ಸಮಾಜಕ್ಕೆ ಹೊರೆ; ಸತ್ತರೆ ದೇಶಕ್ಕೆ ನಷ್ಟ. ಲಾಭದಾಯಕವಾದ ಉದ್ಯೋಗದಲ್ಲಿದ್ದರೆ ತನ್ನನ್ನೂ, ತನ್ನ ಆಶ್ರಿತರನ್ನೂ ತಾನು ಪಾಲಿಸುವುದಲ್ಲದೆ ರಾಷ್ಟ್ರದ ಸಂಪದಭಿವೃದ್ಧಿಗೆ ಸಹಾಯ ಕೊಟ್ಟು ಅದರ ಉನ್ನತಿಗೆ ಕಾರಣನಾಗುವನು—ಎಂಬುದು ಆ ಜನದ ನಂಬಿಕೆಯಾಯಿತು.

ಬಿಸ್ಮಾರ್ಕ್ ಜರ್ಮನಿಯ ಸಾಮಾಜಿಕ ವಿಮಾವ್ಯವಸ್ಥೆಯ ಮೂಲಪುರುಷ. ನೂತನ ಆರ್ಥಿಕ ವ್ಯವಸ್ಥೆಯಲ್ಲಿ ಅವರು ಈಡಾಗುವ ವಿಪತ್ತುಗಳಿಂದ ಶಕ್ತಿಹೀನರನ್ನು ಪಾರುಮಾಡಿ ಅವರನ್ನು ಪರಿಪಾಲಿಸುವುದು ಜರ್ಮನಿಯ ರಾಜನ ಮುಖ್ಯಕರ್ತವ್ಯವೆಂದು ಆತನು ಹೇಳಿದ್ದಾನೆ. ಆತನ ಸತ್‌ಪ್ರಯತ್ನಗಳ ಫಲವಾಗಿ ರೋಗ, ಮುಪ್ಪು ಮತ್ತು ಆಕಸ್ಮಿಕಗಳ ನಿವಾರಣೆಗೆ ಒಂದು ತ್ರಿಗುಣಾತ್ಮಕ ಸಾಮಾಜಿಕ ವಿಮಾ ಪದ್ಧತಿಯ ಸ್ಥಾಪನೆಯಾಯಿತು. ಜರ್ಮನಿಯಲ್ಲಿ ಆಗತಾನೆ ತಲೆಯೆತ್ತುತ್ತಿದ್ದ ಸಮಾಜ ಸಮತಾವಾದವನ್ನು ಸಮಾಜವಿಮೆಯ ಮೂಲಕ ನಿವಾರಿಸಬೇಕೆಂಬುದು ಬಿಸ್ಮಾರ್ಕನ ಇಷ್ಟವಾಗಿತ್ತು. ೧೮೮೪ ರ ಆಕಸ್ಮಿಕ ವಿಮಾ ಕಾನೂನಿನ ಪ್ರಕಾರ ಈ ವಿಮಾಕ್ರಮವನ್ನು ನೆರವೇರಿಸುವ ಕೆಲಸವನ್ನು ಬಂಡವಾಳಗಾರರಿಗೆ ಕೊಟ್ಟರು. ಇವರು ಸರ್ಕಾರದಿಂದ ನಿಯಮಿತವಾದ ವಿಮಾಕಚೇರಿಯ ಮೇಲ್ವಿಚಾರಣೆಗೆ ಒಳಪಟ್ಟಿರಬೇಕೆಂದು ನಿರ್ಧರವಾಯಿತು. ಈ ಕಾನೂನಿನ ಪ್ರಕಾರ ಎಲ್ಲಾ ರೈಲು,

ಗಣಿ, ಗಿರಣಿಗಳ ಒಡೆಯರೂ ಆಕಸ್ಮಿಕಗಳ ನಿವಾರಣೆಗೋಸ್ಕರ ತಮ್ಮ ನೌಕರರಿಗೆ ವಿಮೆಮಾಡಿಸಬೇಕೆಂದು ಕಟ್ಟುಪಾಡಾಯಿತು. ಬಿಸ್ಮಾರ್ಕನು ಇಷ್ಟಕ್ಕೇ ತೃಪ್ತಿಗೊಳ್ಳದೆ ಮುಪ್ಪಿನಿಂದ ಕೆಲಸಮಾಡಲು ಅಶಕ್ತರಾದವರಿಗೂ ಸಹಾಯವೀಯಲು ವಿಮಾವ್ಯವಸ್ಥೆಯನ್ನು ರಚಿಸಿದನು. ನಿರುದ್ಯೋಗವೂ ಜರ್ಮನ್ ವಿಮಾಕ್ರಮದಲ್ಲಿ ಒಂದು ಮುಖ್ಯವಾದ ಪ್ರಶ್ನೆ. ಉದ್ಯೋಗ ದೊರಕಿಸಿಕೊಡಲು ಕಾರ್ಮಿಕ ವಿನಿಮಯ ಸಮಿತಿಗಳು ಸ್ಥಾಪಿತವಾದುವು. ನಿರುದ್ಯೋಗ ವಿಮಾಕಾನೂನು ಜರ್ಮನ್ ಪ್ರಜೆಗಳನ್ನು ವಿಪತ್ತಿನಿಂದ ಬಹುಮಟ್ಟಿಗೆ ರಕ್ಷಿಸಿತು. ೧೮೮೩ರಲ್ಲಿ ಸ್ಥಾಪಿತವಾದ ಕೆಲಸಗಾರರ ಸಂಸ್ಥೆಗಳ ಕೇಂದ್ರ ಸಂಘವು ಸಮಾಜ ವಿಮಾಕಾರ್ಯಗಳಿಗೆ ಸಹಕಾರ ಕೊಡುತ್ತಿದೆ.

ಇಂಗ್ಲೆಂಡಿನಲ್ಲಿ ಸಮಾಜರಕ್ಷಣೆಯು ಯಂತ್ರಕ್ರಾಂತಿ ಆರಂಭವಾದ ಸ್ವಲ್ಪ ಕಾಲದಲ್ಲಿಯೇ ಹುಟ್ಟಿತು. ಆದರೆ ಅದರ ಪರಿಣಾಮ ೧೯ನೆಯ ಶತಮಾನದವರೆಗೂ ತೀವ್ರವಾಗಿರಲಿಲ್ಲ. ಸ್ನೇಹ ಸಂಘಗಳು (Friendly Societies) ೧೮ನೆಯ ಶತಮಾನದಿಂದಲೂ ಕೆಲಸಮಾಡುತ್ತಿದ್ದುವು. ಆದರೆ ಅವುಗಳ ಕೆಲಸ ಮರುಭೂಮಿಯಲ್ಲಿ ಹನಿಮಳೆ ಬಿದ್ದಂತೆ ಮಾತ್ರ ಆಗಿತ್ತು. ಒವೆನ್ ಮುಂತಾದವರ ಪ್ರಯತ್ನಗಳ ಫಲವಾಗಿ "ಟ್ರೇಡ್ ಯೂನಿಯನ್" ಚಳುವಳಿ ಹುಟ್ಟಿತು. ಇಂಗ್ಲೆಂಡಿನ ಪಾರ್ಲಿಮೆಂಟು ಈ ಚಳುವಳಿಯ ಕಡೆಗೆ ಉದಾರಭಾವವನ್ನೇ ತೋರುತ್ತಬಂದಿದೆ. ಕಾರ್ಖಾನೆಗಳ ಕಾನೂನುಗಳೂ, ಕೆಲಸಗಾರರ ಪರಿಹಾರದ ಕಾನೂನುಗಳೂ ಶ್ರಮಜೀವಿಗಳ ಸ್ಥಿತಿಯನ್ನು ಉತ್ತಮಗೊಳಿಸಿ ಸುಧಾರಿಸುವುದರಲ್ಲಿ ಬಹುದೂರ ಹೋಗಿವೆ. ೧೯೧೧ರ ಆರೋಗ್ಯ ಮತ್ತು ನಿರುದ್ಯೋಗ ವಿಮಾಕಾನೂನು, ೧೯೨೫ರ ವಿಧವೆಯರ, ಅನಾಥರ, ಮತ್ತು ವಿಶ್ರಾಂತಿವೇತನದ ಕಾನೂನು — ಇವೆರಡೂ ದೊಡ್ಡ ಸಮಸ್ಯೆಗಳನ್ನು ಬಹುಮಟ್ಟಿಗೆ ಎದುರಿಸಿವೆ. ಆದರೆ ಈಗಿನ ಬಿವರಿಜ್ ಯೋಜನೆ ಹಳೆಯ ಸಂಪ್ರದಾಯಗಳನ್ನೆಲ್ಲಾ ಮೀರಿಸಿ ಒಂದು ಕ್ರಾಂತಿಯನ್ನೇ ಎಬ್ಬಿಸಿದೆ.

ಫ್ರಾನ್ಸ್ ದೇಶ ಸಾಮಾಜಿಕ ಜೀವನ ವ್ಯವಸ್ಥೆಯ ಕಾರ್ಯದಲ್ಲಿ ಹೆಚ್ಚು ಮುಂದುವರಿದಿಲ್ಲ. ಆ ದೇಶದ ವಿಮಾ ಚಳುವಳಿಯಲ್ಲಿ ಎರಡು ಅಂಶಗಳು ಎದ್ದು ಕಾಣುತ್ತವೆ: ಸದಸ್ಯತ್ವ ಬಹು ಕಡಿಮೆ; ಹಣಕಾಸಿನ ಅಭಾವ ಹೆಚ್ಚು.

ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಸಾಮಾಜಿಕ ರಕ್ಷಣಾವ್ಯವಸ್ಥೆ ೧೯೩೩ರ ವರೆಗೂ ಬಹಳ ಹಿಂದುಳಿದಿತ್ತು. ಇದಕ್ಕೆ ಅಲ್ಲಿನ ವಿಶೇಷ ಸ್ಥಿತಿಗತಿಗಳೇ ಕಾರಣ. ಅಮೆರಿಕದ ಕೆಲಸಗಾರರ ಜೀವನಮಟ್ಟ ಇತರ ರಾಷ್ಟ್ರಗಳಿಗಿಂತ

ಹೆಚ್ಚು. ಅಲ್ಲದೆ ವೈಯಕ್ತಿಕ ತತ್ವಕ್ಕೆ ಅಲ್ಲಿ ಹೆಚ್ಚು ಪ್ರಾಮುಖ್ಯತೆ. ಈ ಕಾರಣ ಗಳಿಂದ ಅಮೆರಿಕದ ಕೆಲಸಗಾರರು ವಿಮಾವ್ಯವಸ್ಥೆಗೆ ಸುಲಭವಾಗಿ ಒಂಡಂಬಡು ತ್ತಿರಲಿಲ್ಲ. ೧೯೩೩ ರಲ್ಲಿ ರೂಸ್‌ವೆಲ್ಟರು ಅಧಿಕಾರಕ್ಕೆ ಬಂದಾಗ ಸಂಯುಕ್ತ ಸಂಸ್ಥಾನದ ಆರ್ಥಿಕ ವ್ಯವಸ್ಥೆ ತುಂಬ ಹದಗೆಟ್ಟಿತ್ತು. ಕೆಲಸಮಾಡಲು ಶಕ್ತರಾದ ಸುಮಾರು ೧೪೦ ಲಕ್ಷ ಪ್ರಜೆಗಳು ನಿರುದ್ಯೋಗಿಗಳಾಗಿದ್ದರು. ಕೆಲಸಮಾಡು ತ್ತಿದ್ದವರಿಗೆ ಕೂಡ ತಮ್ಮ ಕೈಲಾಗುವಷ್ಟು ಮಾಡಲು ಕೆಲಸವಿರಲಿಲ್ಲ. ಈ ದುಃಸ್ಥಿತಿ ಯನ್ನು ಉತ್ತಮಗೊಳಿಸಲು ಅನೇಕ ತಗಾದೆ ಕಾನೂನುಗಳನ್ನು ಬಳಕೆಗೆ ತಂದರು. ಸರ್ಕಾರವೇ ಸಾರ್ವಜನಿಕ ಕೆಲಸಗಳಲ್ಲಿ ಹೆಚ್ಚು ಜನರಿಗೆ ಉದ್ಯೋಗ ಒದಗಿಸಲು ಯತ್ನಿಸಿತು. ಆದರೆ ಪರಿಸ್ಥಿತಿ ಸಾಕಷ್ಟು ಉತ್ತಮಗೊಳ್ಳಲಿಲ್ಲ. ಆಗ ಸರ್ಕಾರ ೧೯೩೫ ರಲ್ಲಿ ಸಮಾಜಸುರಕ್ಷಣೆಯ ಕಾನೂನನ್ನು ಕಾರ್ಯಕ್ಕೆ ತಂದಿತು. ಇದರ ಪ್ರಕಾರ ಅಂಗಹೀನರಿಗೂ, ಕುರುಡರಿಗೂ, ಗರ್ಭಿಣಿಯರಿಗೂ ಮಕ್ಕಳಿಗೂ ಪರಿಹಾರದ್ರವ್ಯ ಸಲ್ಲುವಂತೆ ಏರ್ಪಾಡುಮಾಡಿದ ಸಂಸ್ಥಾನಗಳಿಗೆ ಕೇಂದ್ರಸರ್ಕಾರ ಧನಸಹಾಯ ಮಾಡುವುದು; ವಯಸ್ಕರ ವಿಮೆ ಯೋಜನೆಯನ್ನು ನಡಸುವ ಸಂಸ್ಥಾನ ಗಳಿಗೂ ಇದೇ ರೀತಿ ಧನಸಹಾಯ ದೊರಕಿಸುವುದು. ಅಲ್ಲದೆ ನಿರುದ್ಯೋಗ ವಿಮೆ ಯನ್ನು ಚಂದಾಹಣದ ಆಧಾರದ ಮೇಲೆ ಎಲ್ಲಾ ಸಂಸ್ಥಾನಗಳೂ ಜಾರಿಗೆ ತರುವಂತಾಯಿತು. ಈ ರೀತಿ ಸಮಾಜಸುರಕ್ಷಣೆಯು ಸಂಯುಕ್ತ ಸಂಸ್ಥಾನದಲ್ಲಿ ಬಹಳವಾಗಿ ಮುಂದುವರಿಯಿತು.

ರಷ್ಯಾ ದೇಶ, ಮಹಾಕ್ರಾಂತಿಯಾದ ಮೇಲೆ, ಸಮಾಜಸುರಕ್ಷಣೆಯ ಕಾರ್ಯ ದಲ್ಲಿ ಮುಖ್ಯಪಾತ್ರವನ್ನು ವಹಿಸಿದೆ. ಸರ್ವತೋಮುಖವಾದ ಸಮಾಜ ರಕ್ಷಣಾ ಯೋಜನೆಯನ್ನು ರಷ್ಯಾ ದೇಶ ಮಾತ್ರ ಜಾರಿಗೆ ತಂದಿದೆ. ಇತರ ದೇಶಗಳಲ್ಲಿ ಪ್ರಚಲಿತವಾಗಿರುವ ವಿಮಾ ಪದ್ಧತಿ ನೌಕರರನ್ನು ಮಾತ್ರ ಒಳಗೊಂಡಿದೆ. ಆದರೆ ರಷ್ಯಾ ದೇಶದ ಯೋಜನೆ ಎಲ್ಲ ಪ್ರಜೆಗಳನ್ನೂ ಒಳಗೊಂಡಿದೆ. ಇದಕ್ಕೆ ಆ ದೇಶದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯೇ ಕಾರಣ. ಶ್ಲಾಘನೀಯವಾದ ಒಂದು ಸಂಗತಿಯೆಂದರೆ ರಷ್ಯದಲ್ಲಿ ೧೯೩೦ ರಿಂದೀಚೆಗೆ ನಿರುದ್ಯೋಗವಿಲ್ಲ.

ಆಸ್ಟ್ರೇಲಿಯ, ಕೆನಡಾ, ಬಲ್ಗೇರಿಯ, ಡೆನ್‌ಮಾರ್ಕ್, ದಕ್ಷಿಣ ಆಫ್ರಿಕ ಮತ್ತು ನ್ಯೂಜೀಲೆಂಡ್ ದೇಶಗಳಲ್ಲಿಯೂ ಸಾಮಾಜಿಕ ವಿಮಾ ಪದ್ಧತಿ ಜಾರಿಯಲ್ಲಿದೆ.

ಈಗ ನಡೆಯುತ್ತಿರುವ ಘೋರ ಯುದ್ಧವು ಪ್ರಜೆಗಳನ್ನು ಅನೇಕ ವಿಧವಾದ ಹೆಚ್ಚಿನ ಲೋಪಗಳಿಗೆ ಗುರಿಮಾಡಿದೆ. ಈ ಲೋಪಗಳಿಗೆ ಪ್ರತಿಫಲವಾಗಿ ಯುದ್ಧಾ ನಂತರ ಜೀವನ ಪರಿಸ್ಥಿತಿಯು ಉತ್ತಮಗೊಳ್ಳಲೇಬೇಕು. ಜನಸಾಮಾನ್ಯವು

ಯುದ್ಧಕ್ಕೆ ಮೊದಲಿದ್ದ ಆರ್ಥಿಕ ಅನಿಶ್ಚಯ, ನಿರುದ್ಯೋಗ ಮತ್ತು ಸಾಮಾಜಿಕ ಮೇಲು ಕೀಳುಗಳೆಂಬ ಭೇದಭಾವದ ಸ್ಥಿತಿಗೆ ಹಿಂತಿರುಗಲಿಚ್ಛಿಸುವುದಿಲ್ಲ. ಯುದ್ಧಾನಂತರ ಪುನರ್‌ರಚಿತವಾಗುವ ಪ್ರಪಂಚದಲ್ಲಿ ನಿರ್ದುಷ್ಟವಾದ ಜೀವನಗಳಿಗೆ ಎಡೆಯಿರದಂತೆ ಮಾಡಲು ಪ್ರತಿಯೊಂದು ರಾಷ್ಟ್ರವೂ ಸಮಾಜ ಸುರಕ್ಷಣಾ ಯೋಜನೆಗಳನ್ನು ಈಗಲೇ ಸಿದ್ಧಪಡಿಸಿಕೊಳ್ಳಬೇಕು. ಈ ರೀತಿಯಾಗಿ ಜನರಿಗೆ ಭರವಸೆ ಕೊಡುವುದರಿಂದ ಈಗಿನ ಯುದ್ಧೋದ್ಯಮಕ್ಕೂ ಅನುಕೂಲವಾಗುವುದು; ಮುಂದಿನ ಜೀವನವೂ ಸುಖಮಯವಾಗುವುದು. ಆದುದರಿಂದ ಸಮಾಜಸುರಕ್ಷಣಾ ಸಮಸ್ಯೆಗೆ ಹಿಂದಿಗಿಂತ ಈಗ ಹೆಚ್ಚು ಪ್ರಾಮುಖ್ಯತೆ ಉಂಟಾಗಿದೆ.

ಇದರ ಪ್ರಾಮುಖ್ಯತೆಯನ್ನರಿತು ಬ್ರಿಟಿಷ್ ಸರ್ಕಾರವು ತನ್ನ ಪ್ರಜೆಗಳಿಗೆ ಒಂದು ಯೋಜನೆಯನ್ನು ಗೊತ್ತುಹಚ್ಚುವ ಕೆಲಸವನ್ನು ಬ್ರಿಟನ್ನಿನ ಉತ್ತಮ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರಾದ ಸರ್ ವಿಲಿಯಂ ಬೆವರಿಜ್ ಅವರಿಗೆ ವಹಿಸಿತು. ಬೆವರಿಜ್ ಅವರು ದೇಶದ ಆರ್ಥಿಕ ಸ್ಥಿತಿಗತಿಗಳನ್ನು ಸಮಸ್ತ ದೃಕ್ಕೋಣಗಳಿಂದಲೂ ಅಳೆದು, ಜೀವತಾಪಹಾರಕವಾದ, ಸಮಾಜಹಿತಸಾಧಕವಾದ, ದೂರದರ್ಶಿಯಾದ, ಸುಷ್ಠುವಾದ ಒಂದು ಯೋಜನೆಯನ್ನು ರಚಿಸಿ ೧೯೪೨ನೆಯ ಡಿಸೆಂಬರನಲ್ಲಿ ಸರ್ಕಾರಕ್ಕೆ ವರದಿಮಾಡಿದರು. ಅಂದಿನಿಂದ ಅವರ ಯೋಜನೆಯ ಗುಣದೋಷಗಳ ವಿಮರ್ಶೆ ನಡೆದಿದೆ.

ಬೆವರಿಜ್ ಯೋಜನೆಯು ಬ್ರಿಟನ್ನಿನಲ್ಲಿ ಈಗ ಇರುವ ವ್ಯವಸ್ಥೆಯನ್ನು ನಾಲ್ಕು ವಿಧದಲ್ಲಿ ಬದಲಾಯಿಸಲು ಯತ್ನಿಸುತ್ತದೆ. ಈಗಿರುವ ನಾನಾ ಸಾಮಾಜಿಕ ವಿಮಾ ಸಂಸ್ಥೆಗಳೆಲ್ಲವನ್ನೂ ಒಟ್ಟುಗೂಡಿಸಿ ಒಂದೇ ಸಂಸ್ಥೆಯನ್ನಾಗಿ ಮಾಡುತ್ತದೆ. ಎಲ್ಲ ಪ್ರಜೆಗಳನ್ನೂ ಒಳಗೊಳ್ಳುವಂತೆ ವಿಮೆಯ ಕ್ಷೇತ್ರವನ್ನು ವಿಸ್ತರಿಸುತ್ತದೆ; ಪ್ರತಿಯೊಬ್ಬ ಪ್ರಜೆಯ ವರಮಾನವನ್ನೂ ಜೀವನಕ್ಕೆ ಕನಿಷ್ಠವೆಂದರೆ ಇಷ್ಟಾದರೂ ಆವಶ್ಯಕವೆಂಬ ಒಂದು ಮಟ್ಟಕ್ಕೆ ಏರಿಸುತ್ತದೆ. ಇತರ ಪರಿಹಾರಗಳಿಗೂ ಅವಕಾಶ ಕಲ್ಪಿಸುತ್ತದೆ.

ಈ ಯೋಜನೆ ಪ್ರಜೆಗಳನ್ನು ಆರು ಗುಂಪುಗಳನ್ನಾಗಿ ವಿಂಗಡಿಸಿದೆ: ನೌಕರರು, ಲಾಭದಾಯಕವಾದ ಉದ್ಯೋಗದಲ್ಲಿ ತೊಡಗಿರುವ ಇತರರು; ಗೃಹಿಣಿಯರು; ಕೆಲಸಮಾಡುವ ವಯಸ್ಸಿನ ನಿರುದ್ಯೋಗಿಗಳು; ಇನ್ನೂ ಕೆಲಸಮಾಡುವ ವಯಸ್ಸಿಲ್ಲದ ಚಿಕ್ಕವರು; ಮುದುಕರು. ಮಕ್ಕಳು ವೃದ್ಧರು ಎಂಬ ಎರಡು ವರ್ಗಗಳವರಿಗೆ ಮಕ್ಕಳ ಪಾಲನಾದ್ರವ್ಯ ವೃದ್ಧರ ವಿಶ್ರಾಂತಿವೇತನ ಎಂಬ ಹೆಸರಲ್ಲಿ ನೆರವು ಸಿಕ್ಕುವುದು. ಉಳಿದ ನಾಲ್ಕು ಪಂಗಡಗಳ ಪ್ರತಿಯೊಬ್ಬ ಪ್ರಜೆಗೂ ಸಮಾಜ ಸುರಕ್ಷಣ ವಿಮಾ ಸಂಸ್ಥೆಯಿಂದ, ಅವನು ನಿರುದ್ಯೋಗಿಯಾದಾಗ, ಕಾಯಿಲೆಬಿದ್ದಾಗ, ಆಕಸ್ಮಿಕದಿಂದ

ಅಂಗಹೀನನಾಗಿ ಸಂಪಾದನೆಗೆ ಅವಕಾಶವಿಲ್ಲದಾದಾಗ, ವೃದ್ಧನಾದಾಗ, ಹೆಣ್ಣಿಗೆ ವೈಧವ್ಯ ಪ್ರಾಪ್ತವಾದಾಗ, ಮನೆಯಲ್ಲಿ ಮಕ್ಕಳು ಹುಟ್ಟಿದಾಗ, ಯಾರಾದರೂ ಮೃತರಾದಾಗ ಧನಸಹಾಯ ದೊರಕುತ್ತದೆ. ಈ ರೀತಿಯಾಗಿ ಪ್ರತಿಯೊಬ್ಬರಿಗೂ ಹುಟ್ಟಿದ ಮೊದಲು ಸಾಯುವ ವರೆಗೂ ಒಂದಲ್ಲ ಒಂದು ರೀತಿ ಈ ವಿಮೆಯ ಪ್ರಯೋಜನಗಳು ದೊರೆಯುತ್ತಿರುತ್ತವೆ. ಎಲ್ಲ ವಿಧವಾದ ವೈದ್ಯದ ಮತ್ತು ಆಸ್ಪತ್ರೆ ಅನುಕೂಲತೆಗಳೂ ಪ್ರತಿಯೊಬ್ಬ ಪ್ರಜೆಗೂ ಉಚಿತವಾಗಿ ಒದಗುತ್ತವೆ.

ಮೇಲೆ ಹೇಳಿದವುಗಳಲ್ಲಿ ಗೃಹಿಣಿಯರದು ಒಂದು ಗುಂಪು. ಮಾನವ ಇತಿಹಾಸದಲ್ಲಿ ಇದೇ ಮೊದಲ ಸಾರಿ ಗೃಹಿಣಿಯರು ಸಮಾಜದ ಒಂದು ಗುಂಪಾಗಿ ಪರಿಗಣಿತರಾಗಿರುವುದು. ಈ ಯೋಜನೆಯು ಮದುವೆಯ ನೆರವು, ಹೆರಿಗೆಯ ಕಾಲದ ಹೆಚ್ಚಿನ ನೆರವು, ವಿಧವೆಯರ ಪೆನ್‌ಷನ್ ಇವುಗಳನ್ನೊಳಗೊಂಡ ಒಂದು "ಪತ್ನಿಯರ ಪ್ರಯೋಜನಶಾಸನ"ಕ್ಕೆ ಎಡೆ. ಈ ಸಮಾಜ ವಿಮಾಕ್ರಮವು ಕೇಂದ್ರದಲ್ಲಿ ರಚನೆಯಾಗುವ ಸಮಾಜ ಸುರಕ್ಷಕ ಮಂತ್ರಿಯ ಆಡಳಿತಕ್ಕೆ ಒಳಪಡುತ್ತದೆ. ವಿಮಾಸಂಸ್ಥೆಯು ವಿಮಾದಾರರಿಗೆ ಉಂಟುಮಾಡುವ ಸಮಸ್ತ ಸೌಕರ್ಯಗಳಿಗಾಗಿ ಸಂಪಾದನೆಮಾಡುವ ಪ್ರತಿಯೊಬ್ಬನೂ ಪ್ರತಿವಾರವೂ ನಿರ್ದಿಷ್ಟವಾದ ವಿಮೆಯ ಕಂತನ್ನು ಸಂದಾಯ ಮಾಡುತ್ತ ಬರಬೇಕು. ಇನ್ನು ಮುಂದೆ ಈ ದ್ರವ್ಯಗಳಿಗೆ ಅರ್ಹತೆಯನ್ನು ಪಡೆಯಲು ಯಾವ ವ್ಯಕ್ತಿಯೂ ತನ್ನ ಉತ್ಪತ್ತಿ ಅಥವಾ ದ್ರವ್ಯಾನುಕೂಲತೆಯ ಬಗ್ಗೆ ಪರೀಕ್ಷೆ ಕೊಡಬೇಕಾಗುವುದಿಲ್ಲ. ಸೌಕರ್ಯಗಳ ಲಾಭ ಕೇವಲ ಒಂದು ಮಟ್ಟದ ವರಮಾನದೊಳಗೆ ಇರತಕ್ಕವರಿಗೆ ಮಾತ್ರ ಎಂಬ ನಿರ್ಬಂಧವಿಲ್ಲ. ಎಲ್ಲ ವರಮಾನದ ದರ್ಜೆಯವರಿಗೂ ಪರಿಹಾರ ಪಡೆಯಲು ಅರ್ಹತೆಯುಂಟು. ಕೇವಲ ಅಲ್ಪ ವರಮಾನವಿರುವ ಕೂಲಿಯವನು ಮೊದಲ್ಗೊಂಡು ಕೋಟ್ಯಧೀಶನ ವರೆಗೆ ಪ್ರತಿಯೊಬ್ಬನೂ ತನ್ನ ದರ್ಜೆಗೆ ಅನುಸಾರವಾಗಿ ವಿಮಾ ಕಂತುಗಳನ್ನು ಪಾವತಿ ಮಾಡುತ್ತಿರಬೇಕು. ಕೆಲಸಗಾರರ ವಿಷಯದಲ್ಲಿ ಪ್ರತಿಯೊಬ್ಬ ದಣಿಯೂ ಚಂದಾಹಣವನ್ನು ಕೊಡಬೇಕು. ಹೀಗೆ ವರಮಾನವಿರುವ ವಿಮಾಸಂಸ್ಥೆ ವಿಮಾದಾರರಿಗೆ ಮೇಲೆ ಹೇಳಿರುವ ಸಂದರ್ಭಗಳಲ್ಲಿ ಅವರ ವಿಮಾ ಮೊಬಲಗಿಗೆ ಅನುಸಾರವಾಗಿ ಸೌಲಭ್ಯಗಳನ್ನುಂಟುಮಾಡುತ್ತದೆ.

ಈ ಯೋಜನೆಯ ಒಟ್ಟು ವ್ಯಯ ೧೯೪೫ರಲ್ಲಿ ೬೯ ಕೋಟಿ ೭೦ ಲಕ್ಷ ಪೌಂಡುಗಳೆಂದೂ, (೧ ಪೌಂಡು = ರೂ. ೧೩-೫-೪ ಅಂತೆ ರೂ. ೯೩೦ ಕೋಟಿ.) ೧೯೬೫ರಲ್ಲಿ ೮೫ ಕೋಟಿ ೮೦ ಲಕ್ಷ ಪೌಂಡು (ರೂ. ೧,೧೪೪ ಕೋಟಿ) ಆಗಬಹುದೆಂದೂ ಅಂದಾಜುಮಾಡಲಾಗಿದೆ. ಈ ಸಂಬಂಧದಲ್ಲಿ ಸರ್ಕಾರದ ಪಾಲಿಗೆ ವರ್ಷಕ್ಕೆ ೫೦ ಕೋಟಿ ಪೌಂಡುಗಳಷ್ಟು (ರೂ. ೬೭೦ ಕೋಟಿ) ವೆಚ್ಚವಾಗಬಹುದು.

ಇದನ್ನು ಒದಗಿಸಬೇಕಾದರೆ ಈಗ ಇರುವ ತೆರಿಗೆಗಳ ಜೊತೆಗೆ ಪೌಂಡಿನಲ್ಲಿ ೭ ಅಥವಾ ೮ ಶಿಲಿಂಗ್ ಆದಾಯ ತೆರಿಗೆಯನ್ನು ಖಾಯಂ ಮಾಡಬೇಕಾಗುತ್ತದೆ, ಅಷ್ಟೇ.[1]

ಬೆವರಿಜ್ ಯೋಜನೆಯಲ್ಲಿ ಅಡಗಿರುವ ಸಲಹೆಗಳು ಕ್ರಾಂತಿಕಾರಕವಾಗಿವೆ. ಅದನ್ನು ಅನುಷ್ಠಾನಕ್ಕೆ ತಂದದ್ದೇ ಆದರೆ ಬ್ರಿಟನ್ನಿನಲ್ಲಿ ಒಂದು ಧರ್ಮರಾಜ್ಯವನ್ನೇ ಸ್ಥಾಪಿಸಿದಂತಾಗುತ್ತದೆ. ಈ ಯೋಜನೆಯ ಪ್ರಕಾರ ಬ್ರಿಟನ್ನಿನ ಯಾವ ಗಂಡಸು, ಹೆಂಗಸು ಮಗು ಆಗಲಿ, ಯಾವ ಕಾರಣದಿಂದಲೂ ಜೀವನ ಸೌಕರ್ಯದಿಂದ ವಂಚಿತರಾಗುವಂತಿಲ್ಲ. ಯಾವ ಪ್ರಜೆಗೂ ಜೀವಿಸುವ ಹಕ್ಕುಂಟು; ಉದ್ಯೋಗಮಾಡುವ ಹಕ್ಕುಂಟು; ಬದುಕಿಗೆ ಅತ್ಯಾವಶ್ಯಕವಾದ ಕನಿಷ್ಠ ವರಮಾನ ನಿಶ್ಚಯತೆಯನ್ನು ಒಂದು ಹಕ್ಕಾಗಿ ಒದಗಿಸಿಕೊಡುತ್ತದೆ. ಈಗ ರಷ್ಯಾದಲ್ಲಿ ಬಳಕೆಯಲ್ಲಿರುವ ವ್ಯವಸ್ಥಾಕ್ರಮವೊಂದನ್ನು ಬಿಟ್ಟರೆ ಪ್ರಪಂಚದ ಮತ್ತಾವ ರಾಷ್ಟ್ರದಲ್ಲಿಯೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಪ್ರಜಾಹಿತವನ್ನು ಸಾಧಿಸುವ ಯೋಜನೆಯಿಲ್ಲ. ಬೆವರಿಜ್ ಅವರ ಹೇಳಿಕೆಯಂತೆ, ಈ ಯೋಜನೆ ಸರ್ಕಾರದ ಒಂದೇ ಒಂದು ಸಾಮಾಜಿಕ ವಿಮಾ ವ್ಯವಸ್ಥೆಯ ಮೂಲಕ ಇಂಗ್ಲೆಂಡಿನ ಗಂಡಸು, ಹೆಂಗಸು, ಮಕ್ಕಳೆಂಬ ಭೇದವಿಲ್ಲದೆ ಸಮಸ್ತರನ್ನೂ ಬಡತನದ ಬಂಧನದಿಂದ ಬಿಡಿಸಲು ಪ್ರಯತ್ನಿಸುತ್ತದೆ. ವಾಗ್ರೂಪದಲ್ಲಿರುವ ಅಟ್ಲಾಂಟಿಕ್ ಘೋಷಣೆಯನ್ನು ಕಾರ್ಯರೂಪಕ್ಕೆ ತರಲು ಈ ಯೋಜನೆ ಪ್ರಯತ್ನಿಸಿದೆ ಎಂದು ಸರ್ ವಿಲಿಯಂ ಬೆವರಿಜ್ ಅವರು ಹೇಳಿದ್ದಾರೆ.

ಇದು ಜನತೆಯ ಗಮನವನ್ನು ಬಹಳವಾಗಿ ಸೆಳೆದಿದೆ. ಹೊರಬಿದ್ದ ಕೇವಲ ಮೂರು ಘಂಟೆಗಳೊಳಗಾಗಿ ಇದರ ೭೦,೦೦೦ ಪ್ರತಿಗಳನ್ನು ಜನ ಕೊಂಡುಕೊಂಡರು. ಈ ಯೋಜನೆ ಅರ್ಥಶಾಸ್ತ್ರಜ್ಞರಲ್ಲಿಯೂ ರಾಜಕಾರಣ ಪಟುಗಳಲ್ಲಿಯೂ ಭಿನ್ನಾಭಿಪ್ರಾಯಗಳಿಗೆ ಎಡೆಮಾಡಿತು. ಕಾಮನ್ಸ್ ಸಭೆಯಲ್ಲಿ ಸ್ವಾರಸ್ಯವಾದ ಚರ್ಚೆ ಭಾಷಣಗಳು ನಡೆದವು. ಕೆಲವರು ಇಷ್ಟು ವೆಚ್ಚದ ಯೋಜನೆಯನ್ನು ಅನುಷ್ಠಾನಕ್ಕೆ ತರುವುದು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಮತ್ತೆ ಕೆಲವರು ಈ ವೆಚ್ಚವನ್ನು ದೇಶವು ವಹಿಸಬಹುದು, ವಹಿಸಬಲ್ಲದು ಎಂದೂ ಇದಕ್ಕೆ ಅಡ್ಡಿಬರುವ ಕಷ್ಟಗಳು ಎದುರಿಸಲಸಾಧ್ಯವೇನೂ ಅಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ.

ಬ್ರಿಟಿಷ್ ಸರ್ಕಾರವು ಈ ಯೋಜನೆಯನ್ನು ಪರಿಶೀಲಿಸಿ ಮೂಲತತ್ವಗಳಿಗೆ ಒಪ್ಪಿಗೆಯಿತ್ತಿದೆ. ಆದರೆ ಮಕ್ಕಳಿಗೆ ನೆರವು ದ್ರವ್ಯ ಮತ್ತು ಸರ್ವವಿಧ ಉಚಿತ ವೈದ್ಯಸಹಾಯ ಈ ಎರಡು ಮುಖ್ಯಾಂಶಗಳನ್ನು ಮಾತ್ರ ಕಾರ್ಯರೂಪಕ್ಕೆ

[1] ಅಥವಾ, ಬೀರ್ ತೆರಿಗೆಗೆ ಇನ್ನೂ ೧ ಪೆನ್ನಿ, ವರಮಾನದ ತೆರಿಗೆಗೆ ಇನ್ನೂ ೬ ಪೆನ್ನಿ, ಸೇರೀತು. ಇದು ಎಲ್ಲ ವರ್ಗಗಳವರ ಸರಾಸರಿ ವರಮಾನದಲ್ಲಿ ೧·೨% ಗಿಂತ ಕಮ್ಮಿ ವೆಚ್ಚ.

ತರಲೊಪ್ಪಿದೆ. ಸರ್ವರಿಗೂ ಅನ್ವಯಿಸುವ ನಿರುದ್ಯೋಗ ಮತ್ತು ರೋಗ ವಿಮೆಗಳನ್ನು ಸರ್ಕಾರವು ಹೆಚ್ಚು ಕಡಿಮೆ ಬಿವರಿಜ್ ಸಲಹೆಯಂತೆಯೇ ನಡಸಲು ಒಪ್ಪಿದೆ. ಶವಸಂಸ್ಕಾರಕ್ಕೆ ಬೇಕಾಗುವ ದ್ರವ್ಯ ಸಹಾಯಕ್ಕೂ ಸಮ್ಮತಿಯನ್ನು ಸೂಚಿಸಿದೆ. ಈಗ ಇರುವ ವಿಮಾಸಂಸ್ಥೆಗಳನ್ನು ಒಟ್ಟುಕೂಡಿಸಿ ಸಮಾಜ ವಿಮೆಸಂಸ್ಥೆಯನ್ನು ಸಮಾಜ ಸುರಕ್ಷಣಾ ಮಂತ್ರಿಯ ಅಧಿಕಾರಕ್ಕೆ ಒಳಪಡಿಸಬೇಕೆಂಬ ಸಲಹೆಯನ್ನು ನಿರಾಕರಿಸಿದೆ. ವಿಶ್ರಾಂತಿ ವೇತನಕ್ಕೂ ಒಪ್ಪಿಗೆಯಿತ್ತಿಲ್ಲ. ಒಟ್ಟಿನಲ್ಲಿ ಟೈಮ್ಸ್ ಪತ್ರಿಕೆ ಹೇಳಿದಂತೆ ಶೇಕಡ ೭೦ ಭಾಗ ಸಲಹೆಗಳಿಗೆ ಒಪ್ಪಿದೆಯೆಂದು ಹೇಳಬಹುದು. ಕಾರ್ಮಿಕ ಪಕ್ಷದವರು ಸರ್ಕಾರದ ನೀತಿಯ ಬಗ್ಗೆ ತಮ್ಮ ಅಸಮಧಾನವನ್ನು ಸೂಚಿಸಿದ್ದಾರೆ. ಇಷ್ಟುಮಾತ್ರ ಹೇಳಬಹುದು: ಸರ್ಕಾರ ಇಷ್ಟು ಉದಾರಭಾವದಿಂದ ಬಿವರಿಜ್ ಅವರ ಅನೇಕ ಸಲಹೆಗಳಿಗೆ ಒಪ್ಪಿಗೆ ಕೊಟ್ಟಿರುವುದು ಪ್ರಶಂಸನೀಯವಾದ್ದು. ಈಗ ನಿರಾಕರಿಸಲ್ಪಟ್ಟಿರುವ ಸಲಹೆಗಳನ್ನು ಕೂಡ ಕಾಲಕ್ರಮದಲ್ಲಿ ಕಾರ್ಯರೂಪಕ್ಕೆ ತರಬಹುದು. ಈಗಿನ ಪರಿಸ್ಥಿತಿಯಲ್ಲಿ ವೆಚ್ಚದ ದೃಷ್ಟಿಯಿಂದ ನೋಡಿದರೆ ಎಲ್ಲ ಸಲಹೆಗಳನ್ನೂ ಒಪ್ಪುವುದು ಕಷ್ಟ.

ಪ್ರಪಂಚದ ಎಲ್ಲ ನಾಗರಿಕ ದೇಶಗಳೂ ಹಿಂದಿನಿಂದಲೂ ಸಮಾಜ ವಿಮಾಪದ್ಧತಿಯನ್ನು ಒಂದಲ್ಲ ಒಂದು ವಿಧದಲ್ಲಿ ಅನುರಿಸುತ್ತ ಬಂದಿವೆ. ಅಲ್ಲದೆ ಯುದ್ಧಾನಂತರ ಪುನರ್‌ರಚಿತವಾಗುವ ವ್ಯವಸ್ಥೆಯಲ್ಲಿ ಅನುಸರಿಸಲು ಯೋಜನೆಗಳನ್ನು ಈಗಿನಿಂದ ಸಿದ್ಧಪಡಿಸಿಕೊಳ್ಳುತ್ತಿವೆ. ಇದನ್ನೆಲ್ಲ ನೋಡುತ್ತಿರುವ ನಮ್ಮ ಇಂಡಿಯಾ ದೇಶದ ಪರಿಸ್ಥಿತಿಯೇನು ಎಂಬ ಪ್ರಶ್ನೆ ಮೂಡುವುದು ಸಹಜ.

ನಮ್ಮ ದೇಶದಲ್ಲಿ ಕೂಡ ಸಮಾಜ ವಿಮಾಪದ್ಧತಿಯು ಬುದ್ಧಿವಂತರ ಮತ್ತು ಸರ್ಕಾರದ ಗಮನಕ್ಕೆ ಬಂದಿದೆ. ೧೯೨೭ರಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಮಿತಿಯು ಸ್ಥಾಪನೆಯಾದಂದೀಚೆಗೆ ಸಾಮಾಜಿಕ ವಿಮಾಪ್ರಶ್ನೆ ಇಂಡಿಯಾ ರಕಾರ್ರದ ದೃಷ್ಟಿಗೆ ಬಿದ್ದಿದೆ. ಆದರೆ ಈ ವಿಷಯದಲ್ಲಿ ನಮ್ಮ ದೇಶ ಹೆಚ್ಚು ಮುಂದುವರಿದಿಲ್ಲ. ಇಲ್ಲಿನವರೆಗೆ ಈ ದೇಶದ ಕೆಲವು ತರಗತಿಯ ಶ್ರಮಜೀವಿಗಳಿಗೆ ಮಾತ್ರ ಕೈಗಾರಿಕೆಗೆ ಸಂಬಂಧಪಟ್ಟ ನಷ್ಟ ಮತ್ತು ಸಾವುಗಳಿಗೆ ಪರಿಹಾರದ್ರವ್ಯವನ್ನು ಕೊಡುವುದನ್ನು ಬಿಟ್ಟರೆ ಸಾಮಾಜಿಕ ವಿಮೆಯ ದೃಷ್ಟಿಯಿಂದ ಯಾವ ಕಾರ್ಯವನ್ನೂ ಕೈಕೊಂಡಿಲ್ಲ. ಬೊಂಬಾಯಿ ಪ್ರಾಂತ ಸರ್ಕಾರವು ಮಾತ್ರ ಕಾಂಗ್ರೆಸ್ ಮಂತ್ರಿಗಳ ಕಾಲದಲ್ಲಿ ರೋಗ ವಿಮೆಯನ್ನು ಬಳಕೆಗೆ ತಂದಿತು. ಪರಿಹಾರದ್ರವ್ಯವನ್ನೂ ಕೊಡಲು ಮೊದಲುಮಾಡಿತು. ಈಗ ಕೇಂದ್ರ ಸರ್ಕಾರವು ರೋಗವಿಮೆ ಯೋಜನೆಯನ್ನು ಕಂಡುಹಿಡಿದು ಸಲಹೆಗೊಡಲು ಒಂದು ಸಮಿತಿಯನ್ನು ನೇಮಿಸಿದೆ. ಈ ವಿಷಯದಲ್ಲಿ ವಿಚಾರಣೆ ನಡೆಯುತ್ತಿದೆ.

ಮೈಸೂರು ಸಂಸ್ಥಾನದಲ್ಲಿ ಸರ್ಕಾರಿ ನೌಕರರಿಗೆಲ್ಲ ಕಡ್ಡಾಯವಾದ ವಿಮಾ ವ್ಯವಸ್ಥೆ ಏರ್ಪಟ್ಟಿದೆ. ಇತ್ತೀಚೆಗೆ ಭಿಕ್ಷುಕರ ಪರಿಸ್ಥಿತಿಯನ್ನು ಪರಿಶೀಲಿಸಿ ವರದಿ ಮಾಡಲು ನೇಮಿಸಿದ್ದ ಬಾಲಕೃಷ್ಣಯ್ಯ ಸಮಿತಿ ಸರ್ಕಾರಕ್ಕೆ ತನ್ನ ವರದಿಯನ್ನು ಒಪ್ಪಿಸಿದೆ. ಸರ್ಕಾರವೂ ಇದನ್ನು ಪರಿಶೀಲಿಸಿದೆ. ಅಲ್ಲದೆ ಈ ಸಲಹೆಗಳಿಗೆ ನ್ಯಾಯ ವಿಧಾಯಕ ಸಭೆಯ ಒಪ್ಪಿಗೆಯೂ ದೊರೆಯುವಂತಿದೆ. ಇದರಿಂದ ಭಿಕ್ಷುಕರ ಸಮಸ್ಯೆಯು ಬಗೆಹರಿವಂತಾಗಿದೆ. ಇದರಿಂದ ನಮ್ಮ ಸಂಸ್ಥಾನ ಈ ವಿಷಯದಲ್ಲಿ ಬ್ರಿಟಿಷ್ ಪ್ರಾಂತಗಳಿಗಿಂತ ಮುಂದೆ ಹೋಗಿದೆಯೆನ್ನಬಹುದು.

ನಮ್ಮ ದೇಶದಲ್ಲಿ ಹಸಿವಿನ ಕೂಗಿನಿಂದ ಜನರನ್ನು ಪಾರುಮಾಡುವುದು ಉಳಿದೆಲ್ಲ ದೇಶಗಳಿಗಿಂತ ಹೆಚ್ಚು ಮುಖ್ಯವಾದುದು. ಏಕೆಂದರೆ ಇಲ್ಲಿ ಕೋಟ್ಯನುಕೋಟಿ ಜನ ಜೀವನವನ್ನು ನಡಸಲು ಅತಿಮುಖ್ಯವಾಗಿ ಬೇಕಾದ ಅನ್ನಬಟ್ಟೆಗಳು ಸಾಕಷ್ಟು ಪ್ರಮಾಣದಲ್ಲಿಲ್ಲದೆ ತೊಳಲಿ ಬಳಲಿ ತಮ್ಮ ಕಷ್ಟವು ದೈವೇಚ್ಛೆಯೇನೊ ಎಂಬ ಭಾವನೆಯಿಂದ ಬಹುಜನ ಕಾಲಕಳೆಯುತ್ತಾರೆ. ಈ ಅನ್ನದಾರಿದ್ರ್ಯವೊಂದೇ ಅಲ್ಲ, ಕಾಯಿಲೆ, ಮೂಢನಂಬಿಕೆ, ಸೋಮಾರಿತನ ಮುಂತಾದುವೂ ನಮ್ಮ ಆರ್ಥಿಕಸುಖಕ್ಕೆ ಅಡ್ಡಿಯಾಗಿವೆ. ಇವನ್ನೆಲ್ಲಾ ಹೋಗಲಾಡಿಸಲು ಬೆವರಿಜ್ ಯೋಜನೆಯಂಥ ಒಂದು ಸಮಾಜ ವಿಮಾಕ್ರಮವನ್ನು ಅನುಷ್ಠಾನಕ್ಕೆ ತಂದರೆ ಜನರ ಆರ್ಥಿಕಬಲ ಹೆಚ್ಚಾಗಿ ದೇಶದ ಕೈಗಾರಿಕೆಯೂ ವ್ಯಾಪಾರಗಳೂ ಬೆಳೆಯುವುದಕ್ಕೆ ಹೆಚ್ಚು ಅವಕಾಶ ಸಿಕ್ಕುತ್ತದೆ. ಕೈಗಾರಿಕೆಗಳು ಬೆಳೆದಹಾಗೆಲ್ಲ ಜನರಿಗೆ ಹೆಚ್ಚು ಕೆಲಸ ಸಿಕ್ಕಿ ದೇಶದ ಉತ್ಪತ್ತಿ ಹೆಚ್ಚಾಗುತ್ತದೆ. ದೇಶ ಪ್ರಗತಿಹೊಂದುತ್ತದೆ. ಪ್ರಪಂಚದ ಮುಂದುವರಿದ ರಾಷ್ಟ್ರಗಳಿಗೆ ಸರಿಸಮನಾಗಿ ನಿಲ್ಲುತ್ತದೆ.

ಆದರೆ ಬೆವರಿಜ್ ಯೋಜನೆಯಂಥ ಸಾಮೂಹಿಕ ವಿಮಾಯೋಜನೆಯನ್ನು ನಮ್ಮ ದೇಶದಲ್ಲಿ ಅನುಷ್ಠಾನಕ್ಕೆ ತರಲು ಸಾಧ್ಯವೆ? ಅಂಥ ಯೋಜನೆ ರೋಗ, ನಿರುದ್ಯೋಗ, ಆಕಸ್ಮಿಕಗಳು, ವೃದ್ಧಾಪ್ಯ ಮತ್ತು ಇತರ ಎಲ್ಲ ಜೀವನದ ಅನಿಶ್ಚಯಗಳನ್ನೂ ಒಳಗೊಂಡಿರಬೇಕು. ಇದಕ್ಕೆ ಬಹು ಹೆಚ್ಚು ಹಣ ಬೇಕಾಗುತ್ತದೆ. ಈ ಹಣದ ಪ್ರಮಾಣವನ್ನು ಅರಿವುಮಾಡಿಕೊಳ್ಳಬೇಕಾದರೆ ನಿರುದ್ಯೋಗದ ಪ್ರಶ್ನೆಯೊಂದನ್ನು ಮಾತ್ರ ತೆಗೆದುಕೊಂಡು ನೋಡೋಣ. ನಮ್ಮ ದೇಶದಲ್ಲಿ ನಿರುದ್ಯೋಗಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳಿಲ್ಲ. ಸರ್. ಎಂ. ವಿಶ್ವೇಶ್ವರಯ್ಯನವರು ಸುಮಾರು ನಾಲ್ಕೈದು ಕೋಟಿ ಜನ ಕೆಲಸವಿಲ್ಲದೆ ಸೋಮಾರಿಗಳಾಗಿ ಕಾಲಕಳೆಯುತ್ತಾರೆಂದು ಎಣಿಸಿದ್ದಾರೆ. ನಮ್ಮಲ್ಲಿ ಸುಮಾರು ನಾಲ್ಕು ಕೋಟಿ ನಿರುದ್ಯೋಗಿಗಳಿರುವರೆಂದು ಇಟ್ಟುಕೊಳ್ಳೋಣ. ತಲೆ ಒಂದಕ್ಕೆ ತಿಂಗಳಿಗೆ ಏಳೂವರೆ ರೂಪಾಯಂತೆ (ಅಂದರೆ ದಿನಕ್ಕೆ

ನಾಲ್ಕಾಣೆಯಂತೆ) ಪರಿಹಾರ ಕೊಡಬೇಕಾದರೆ ವರ್ಷಕ್ಕೆ ೩೬೦ ಕೋಟಿ ರೂ. ಬೇಕಾಗುತ್ತದೆ! ಸಂಸ್ಥಾನಗಳನ್ನು ಬಿಟ್ಟು ಬ್ರಿಟಿಷ್ ಪ್ರಾಂತಗಳನ್ನು ಮಾತ್ರ ತೆಗೆದುಕೊಂಡರೆ ೨೭೦ ಕೋಟಿ ರೂಪಾಯಿ ಬೇಕಾಗುತ್ತದೆ. ಇಷ್ಟೊಂದು ಹಣವನ್ನು ಯಾವ ಮಾರ್ಗದಿಂದ ಪಡೆಯಬೇಕು? ನಿರುದ್ಯೋಗಿಗಳಿಗೆ ವರಮಾನವಿಲ್ಲದಿರುವುದರಿಂದ ಅವರಿಂದ ಚಂದಾ ಹಣ ಅಪೇಕ್ಷಿಸಲಾಗುವುದಿಲ್ಲ. ಆದುದರಿಂದ ಈ ಹಣವನ್ನು ಕೂಡಿಸುವ ಭಾರವೆಲ್ಲ ತೆರಿಗೆ ತೆರುವ ಪ್ರಜೆಗಳ ಮೇಲೆ ಬೀಳುವುದು. ಆದರೆ ಇಷ್ಟು ಹೆಚ್ಚು ಹಣವನ್ನು ತೆರಿಗೆ ಹೆಚ್ಚಿಸಿ ಪಡೆಯಲು ಸಾಧ್ಯವೆ? ಜನಪ್ರಿಯವಾದ ನಮ್ಮದೇ ಸರ್ಕಾರವಾದರೂ ಈ ಕೆಲಸವನ್ನು ಕೈಗೊಳ್ಳಲಾರದು. ಅದು ಸಾಧ್ಯವಿಲ್ಲದ ಕೆಲಸ. ಪರಿಸ್ಥಿತಿಯನ್ನು ಸ್ವಲ್ಪ ಪರೀಕ್ಷಿಸಿ ನೋಡಿದರೆ ಕಾರಣ ಗೊತ್ತಾಗುತ್ತದೆ. ಬ್ರಿಟಿಷ್ ಪ್ರಾಂತಗಳ ಪ್ರಜೆಗಳ ಒಟ್ಟು ವರಮಾನ ಸು. ೧,೭೦೦ ಕೋಟಿ ರೂಪಾಯಿ. ಇದರಲ್ಲಿ ೨೬೦ ಕೋಟಿ ರೂಪಾಯಿಗಳು ಸರ್ಕಾರದ ಮತ್ತು ಇತರ ಸ್ಥಳೀಯ ಸಂಸ್ಥೆಗಳ ತೆರಿಗೆ ರೂಪವಾಗಿ ಹೋಗುತ್ತದೆ. ನಿರುದ್ಯೋಗ ವಿಮೆಗೆ ೨೭೦ ಕೋಟಿ ರೂ. ಹೆಚ್ಚು ತೆರಿಗೆ ಹಾಕಬೇಕು. ಅಂದರೆ ಒಟ್ಟಿನ ವರಮಾನದಲ್ಲಿ ೫೩೦ ಕೋಟಿ ರೂ. ಗಳನ್ನು ಕೊಟ್ಟು ಉಳಿದ ಕೇವಲ ೧.೧೭೦ ಕೋಟಿ ರೂಪಾಯಲ್ಲಿ ಜನಜೀವನವನ್ನು ನಡಸಬೇಕಾಗುತ್ತದೆ. ಗಿರಣಿಗಳ ಮಾಲೀಕರಿಗೂ ವ್ಯಾಪಾರಗಾರರಿಗೂ ದೊಡ್ಡ ಜಮೀನುದಾರರಿಗೂ ಹೆಚ್ಚು ತೆರಿಗೆ ಹಾಕಬೇಕಾಗುವುದು. ತೆರಿಗೆಯ ಮಾರ್ಗದಿಂದ ಇಷ್ಟು ಹೆಚ್ಚು ಹಣವನ್ನು ಕೂಡಿಸುವುದು ಶಕ್ಯವಿಲ್ಲ. ಸಾಧ್ಯವೆಂದಿಟ್ಟುಕೊಂಡರೂ ಫಲಿತಾಂಶವೇನು? ಇಂದಿನ ಸ್ಥಿತಿಯಲ್ಲಿ ಸೋಮಾರಿತನ ಹೆಚ್ಚಾಗುತ್ತದೆ. ಕೂಡುಕುಟುಂಬದ ನ್ಯೂನತೆಗಳು ಹೆಚ್ಚಾಗುತ್ತವೆ.

ಹೀಗೆ ನಿರುದ್ಯೋಗತೆಯೆಂಬ ಸಮಾಜದ ಒಂದು ನ್ಯೂನತೆಯನ್ನು ಹೋಗಲಾಡಿಸಲು ವಿಮಾಯೋಜನೆಯನ್ನು ಕೈಕೊಳ್ಳಬೇಕಾದರೆ ಇಷ್ಟು ಅಪಾರ ಹಣಬೇಕು, ಇತರ ಅನಿಶ್ಚಯತೆಗಳನ್ನು ಹೋಗಲಾಡಿಸಲು ಇನ್ನೆಷ್ಟು ಬೇಕಾಗುವುದೆಂಬುದನ್ನು ಊಹಿಸಬಹುದು. ವೈದ್ಯಸಹಾಯವನ್ನು ಹೆಚ್ಚಿಸಬೇಕಾದರೆ ಈಗಿನ ವೆಚ್ಚದ ಜೊತೆಗೆ ೫೦ ಕೋಟಿ ರೂಪಾಯಿ ಸೇರಿಸಬೇಕಾಗುತ್ತದೆ. ಅನರಕ್ಷತೆಯನ್ನು ಹೋಗಲಾಡಿಸಿ ಜನರನ್ನು ವಿದ್ಯಾವಂತರನ್ನಾಗಿ ಮಾಡಲು ಮತ್ತಷ್ಟು ಹಣ ಬೇಕಾಗುತ್ತದೆ. ಈ ಅಂಶಗಳೆಲ್ಲವೂ ನಮ್ಮ ದೇಶದ ಹಣಕಾಸಿನ ಸ್ಥಿತಿಯನ್ನು ತಲೆಕೆಳಗು ಮಾಡುವುವು. ಹೀಗೆ ನಮ್ಮ ಸ್ಥಿತಿಗತಿಗಳೂ ನಾವು ಎದುರಿಸಬೇಕಾದ ಸಮಸ್ಯೆಗಳೂ ಬಹು ಕಠಿಣವಾದವು. ಸರ್ವಜನ ವಿಮಾಯೋಜನೆಯನ್ನು ಅನುಷ್ಠಾನಕ್ಕೆ ತರಬೇಕಾದರೆ ದೇಶದ ವರಮಾನವನ್ನು ಹೆಚ್ಚಿಸಬೇಕು. ದೇಶದ ಜನರ ಕಾರ್ಯಶಕ್ತಿ ಹೆಚ್ಚಾಗ

ಬೇಕು. ನಿರುದ್ಯೋಗಿಗಳ ಸಂಖ್ಯೆ ಕಡಿಮೆಯಾಗಬೇಕು. ನಮ್ಮ ದೇಶದ ಒಬ್ಬ ಪ್ರಜೆಯ ವರ್ಷದ ವರಮಾನ ಕೇವಲ ೬೨ ರೂ. (ಇಂಗ್ಲೆಂಡಿನಲ್ಲಿ ೧,೪೦೦ ರೂ.) ಇಷ್ಟು ಕಡಿಮೆ ವರಮಾನವಿರುವಾಗ ಬಿವರಿಜ್ ಯೋಜನೆಯಂಥ ಸರ್ವಜನ ಸಮೂಹವಿಮಾ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು ಸಾಧ್ಯವೆ?

ಹಾಗಾದರೆ ನಾವು ಕೈಕೊಳ್ಳಬೇಕಾದ ಕಾರ್ಯಕ್ರಮವೇನು? ನಮ್ಮ ದೇಶದ ಉತ್ಪತ್ತಿಯನ್ನು ಎಲ್ಲ ವಿಧಗಳಿಂದಲೂ ಹೆಚ್ಚಾಗುವಂತೆ ಮಾಡಬೇಕು. ನಾವು ಕೈಕೊಳ್ಳಬೇಕಾದ ಕಾರ್ಯಕ್ರಮವನ್ನು ಸರ್ ಬಿವರಿಜ್ ಅವರೇ ಸೂಚಿಸಿದ್ದಾರೆ. ನಮ್ಮ ದೇಶದ ಮುಖ್ಯ ಕಸಬಾದ ವ್ಯವಸಾಯವನ್ನು ಆಧುನಿಕ ರೀತಿಯಲ್ಲಿ ನಡಸುತ್ತ ಅದರ ಉತ್ಪತ್ತಿಯನ್ನು ಹೆಚ್ಚಿಸಬೇಕು. ನಮ್ಮ ಜನಸಂಖ್ಯೆಯು ಬಹಳ ಹೆಚ್ಚಾಗುತ್ತಿದೆ. ಇದನ್ನು ತಕ್ಕ ಅಂಕೆ ಮಿತಿಗೆ ತಂದುಕೊಳ್ಳಬೇಕು. ಇದಕ್ಕಾಗಿ ನಮ್ಮ ದೇಶದಲ್ಲಿ ಜನನದ ಪ್ರಮಾಣವನ್ನು ಮಿತಿಗೆ ತರಬೇಕು. ಜೊತೆಗೆ ನಮ್ಮ ರೈತರು ವರ್ಷದಲ್ಲಿ ಸುಮಾರು ಐದು ತಿಂಗಳ ಕಾಲ ಕೆಲಸವಿಲ್ಲದೆ ಕಾಲಹರಣ ಮಾಡುತ್ತಾರೆ. ಈ ಕಾಲದಲ್ಲಿ ಅವರನ್ನು ನೂಲುವುದು, ನೇಯುವುದು, ಚಾಪೆ ಹೆಣೆಯುವುದು, ಜೇನು ಸಾಕುವುದು, ಕೋಳಿ ಸಾಕುವುದು ಮುಂತಾದ ಉಪಕಸಬುಗಳಲ್ಲಿ ತೊಡಗಿಸಬೇಕು. ಈಗಿರುವ ಕೈಗಾರಿಕೆಗಳನ್ನು ವಿಸ್ತರಿಸಬೇಕು. ಹೊಸ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಹೀಗೆ ಮಾಡುವುದರಿಂದ ನಿರುದ್ಯೋಗಿಗಳ ಸಂಖ್ಯೆಯನ್ನೂ ಕಡಿಮೆ ಮಾಡಬಹುದು. ಈ ಎಲ್ಲ ಮಾರ್ಗಗಳಿಂದ ದೇಶದ ಉತ್ಪತ್ತಿಯನ್ನೂ ವರಮಾನವನ್ನೂ ಮೊದಲು ಹೆಚ್ಚಿಸಬೇಕು. ವರಮಾನವೇ ಇಲ್ಲದೆ ಯಾವ ಸಾಮಾಜಿಕ ವಿಮಾ ಯೋಜನೆಯನ್ನೂ ಅನುಷ್ಠಾನಕ್ಕೆ ತರಲಾಗುವುದಿಲ್ಲ.

ಇಂಗ್ಲೆಂಡ್ ಮತ್ತು ಇಂಡಿಯ ದೇಶದ ಆರ್ಥಿಕಸ್ಥಿತಿಗತಿಗಳು ಬೇರೆ ಬೇರೆಯಾಗಿರುವುದರಿಂದ ಬಿವರಿಜ್ ಯೋಜನೆ ನಮ್ಮ ದೇಶಕ್ಕೆ ಅನ್ವಯಿಸದು. ಹೀಗೆಂದ ಮಾತ್ರಕ್ಕೆ ಇಂಡಿಯ ದೇಶಕ್ಕೂ ಆ ಯೋಜನೆಗೂ ಯಾವ ಸಂಬಂಧವೂ ಇಲ್ಲವೆಂದಲ್ಲ. ನಮ್ಮ ದೇಶದಲ್ಲಿ ಕೈಗಾರಿಕೆಗಳು ಈಗಾಗಲೆ ಹೆಚ್ಚಾಗುತ್ತಿವೆ. ಆದುದರಿಂದ ಕೈಗಾರಿಕೆಗೆ ಸಂಬಂಧಪಟ್ಟ ಆಕಸ್ಮಿಕಗಳ ನಿವಾರಣೆಗೆ ತಕ್ಕ ಏರ್ಪಾಟು ಮಾಡಬೇಕು. ಇದಕ್ಕಾಗಿ, ಬಿವರಿಜ್ ಅವರೇ ಹೇಳಿರುವಂತೆ, ಕೈಗಾರಿಕೆ ಕೆಲಸಗಾರರನ್ನೆಲ್ಲ ಮಾತ್ರ— ಒಳಗೊಂಡಿರುವ ವಿಮಾ ಯೋಜನೆಯನ್ನು ಮಾಡಿಕೊಳ್ಳಬೇಕು. ಅದು ಚಂದಾ ಪದ್ಧತಿಯನ್ನು ಅನುಸರಿಸಬೇಕು. ಇದಕ್ಕೆ ಎರಡು ಕಾರಣಗಳುಂಟು. ಕೆಲಸಗಾರರು ತಮ್ಮ ಕಡೆಯಿಂದ ತ್ಯಾಗವೇನೂ ಇಲ್ಲದ ಹಾಗೆ ಪರಿಹಾರವನ್ನು ಪಡೆಯಬಾರದು. ಪಡೆದರೆ ಸೋಮಾರಿಗಳಾಗುತ್ತಾರೆ; ವರಮಾನವನ್ನೆಲ್ಲ ದುಂದುಮಾಡುತ್ತಾರೆ.

ಅಲ್ಲದೆ ಕೈಗಾರಿಕೆ ಕೆಲಸಗಾರರಿಗೆ ಮಾತ್ರ ಅನುಕೂಲವೊದಗಿಸುವ ವೆಚ್ಚದ ಭಾರವನ್ನು ಒಟ್ಟು ಜನರ ಮೇಲೆ ಹಾಕುವುದು ನ್ಯಾಯವಲ್ಲ. ಇದೇ ರೀತಿ ರೋಗ ನಿವಾರಣೆಗಾಗಿಯೂ ವಿಮಾ ಮಾರ್ಗವನ್ನು ಅನುಸರಿಸಬೇಕು. ಈ ವಿಮೆಯಿಂದ ಪ್ರಾರಂಭಮಾಡಿಕೊಂಡು ಸಮಸ್ಯೆಯಿಂದ ಸಮಸ್ಯೆಗೆ ಕೈಹಾಕಬೇಕೇ ಹೊರತು ಎಲ್ಲವನ್ನೂ ಒಟ್ಟಿಗೆ ಒಂದು ಸಮೂಹವಿಮಾ ಯೋಜನೆಯಿಂದ ಸದ್ಯಕ್ಕೆ ಎದುರಿಸ ಲಾಗುವುದಿಲ್ಲ. ಇಷ್ಟು ಮಾಡಬೇಕಾದರೂ ಉತ್ಪತ್ತಿಯನ್ನೂ ವರಮಾನವನ್ನೂ ಹೆಚ್ಚಿಸಬೇಕು. ಅದನ್ನು ಪ್ರಪಂಚದ ಮುಂದುವರಿದ ರಾಷ್ಟ್ರಗಳ ಮಟ್ಟಕ್ಕೆ ಎತ್ತಬೇಕು. ಇದಕ್ಕಾಗಿ ಜನರು ತಮ್ಮ ಸ್ಥಿತಿಗತಿಗಳನ್ನರಿತು ಎಚ್ಚತ್ತು ಹೆಚ್ಚು ಉತ್ಸಾಹದಿಂದ ಕೆಲಸಮಾಡಬೇಕು. ಧೈರ್ಯದಿಂದ ಮುಂದೆ ಸಾಗಬೇಕು. ಸರ್ಕಾರ ಸಹ ತನ್ನ ನೆರವುಗೈ ನೀಡಬೇಕು. ಔದಾರ್ಯದಿಂದ ಕಾರ್ಯಕ್ಕೆ ಕೈಹಾಕಬೇಕು. ಈ ರೀತಿಯ ಪ್ರಜೆಗಳ ಮತ್ತು ಸರ್ಕಾರದ ಸಹಕಾರದಿಂದ ದೇಶದ ವರಮಾನ ಹೆಚ್ಚುತ್ತದೆ. ನಾಡು ಮುಂದುವರಿಯುತ್ತದೆ. ಜನರು ಸುಖಿಗಳಾಗುತ್ತಾರೆ. ಭಾರತ ದೇಶ ಇತರ ರಾಷ್ಟ್ರಗಳಿಗೆ ಸಮನಾಗಿ ನಿಲ್ಲುವಂತಾಗುತ್ತದೆ.

ಅರ್ಥಶಾಸ್ತ್ರಸಂಘ,
ಮಹಾರಾಜರವರ ಕಾಲೇಜು, ಮೈಸೂರು.

# ಪ್ರೇತವಾಣಿ

“ ಜಲ ತರ್ಪಣ, ತಿಲತರ್ಪಣ ;—
  ಸಾಕಾಯಿತು ಭಂಗ :
ಅನುರಾಗವೆ ಇಲ್ಲದ ಈ
  ಬರಿ ನಟನೆ : ಅಭಂಗ !
  ಹಸಿದಿರುವುದು ಹೊಟ್ಟೆ !
  ಬಾಯಾರಿದೆ ; ಕೆಟ್ಟೆ !
ಎದೆಸೆತ್ತರ ಬಲಿದರ್ಪಣ-
  ವರ್ಪಿಸೆಯಾ ಸೂನು ?
ಪೌರುಷಕೇಂ ನೀ ಸೊನ್ನೆಯೆ,
  ಹೆಣ್ಣಾದೆಯ, ಏನು ?
ಎನ್ನುದ್ಧಾರಕೆ, ಜಗದು—
ದ್ಧಾರಕೆ, ನಿನ್ನುದ್ಧಾರಕೆ,
ಆತ್ಮಾಂಜಲಿಯರ್ಪಿಸದಿರೆ
  ವೇಣೆಲ್ಲದೆ ಗತಿಯು ?
ವೈಕುಂಠವೊ, ಕೈಲಾಸವೊ,
ಸಾಯುಜ್ಯವೊ, ವರಮುಕ್ತಿಯೊ,—
ಪೌರುಷ ತ್ಯಾಗಗಳಿಲ್ಲದೆ
  ದೊರೆವುದೆ ? ಬರಿಭ್ರಮೆಯು ! ”
—ಕೇಳುತಲಿದೆ ಮಸಣದಲಿ,
ಚೀರುತಲಿಹ ಪ್ರೇತದುಲಿ ;
ದಿಕ್ತಟವನು ಸೀಳಿ :
ಆಲಿಸಿ, ಅದೊಕೇಳಿ !

ಟಿ. ಎನ್. ಶ್ರೀನಿವಾಸಮೂರ್ತಿ.

# ಧರ್ಮದ ಸಾಪೇಕ್ಷತೆ

## (Ethical Relativity)

ಧರ್ಮವೆಂದರೆ ಸಾಧಾರಣವಾಗಿ ಎರಡು ಅರ್ಥಗಳು ಮನಸ್ಸಿಗೆ ತೋರುತ್ತವೆ. ಧರ್ಮವು 'ಮತ'ವೆಂಬ ಶಬ್ದಕ್ಕೆ ಪರ್ಯಾಯ. ಅದರಿಂದ ಬುದ್ಧ, ಮಹಾವೀರ, ಯೇಸುಕ್ರಿಸ್ತ, ಮಹಮ್ಮದ್‌ಪೈಗಂಬರ್ ಮುಂತಾದ ಮಹಾಪುರುಷರು ಬೋಧಿಸಿದ ಆಧ್ಯಾತ್ಮಿಕ ಸಂಪ್ರದಾಯಗಳು ವಾಚ್ಯವಾಗುತ್ತವೆ. ಎರಡನೆಯ ಅರ್ಥ: 'ನೀತಿ' ಅಥವಾ ಸಮಾಜದ ಮತ್ತು ವ್ಯಕ್ತಿಯ ಜೀವನದಲ್ಲಿ ಧ್ಯೇಯವೆಂದು ಶ್ಲಾಘಿಸುವ ಮಾರ್ಗ. ಪ್ರತಿ ಮತವೂ ನೀತಿಯನ್ನು ಒಳಗೊಂಡಿರಬಹುದು. ಆದರೆ ಪ್ರತಿ ಬಗೆಯ ನೀತಿ ಜೀವನವೂ ಮತಬದ್ಧವಾಗಿರಬೇಕಾಗಿಲ್ಲ. ಈ ಪ್ರಬಂಧದಲ್ಲಿ ಧರ್ಮ ಶಬ್ದವನ್ನು ಈ ಎರಡನೆಯ ಅರ್ಥದಲ್ಲಿ ಉಪಯೋಗಿಸಿದೆ. ನಮ್ಮ ಧರ್ಮಶಾಸ್ತ್ರಗಳಲ್ಲಿ 'ರಾಜಧರ್ಮ, ಸಾಮಾನ್ಯಧರ್ಮ, ವಿಶೇಷಧರ್ಮ', ಮೊದಲಾದ ಶಬ್ದಪ್ರಯೋಗ ಗಳಲ್ಲಿ ಈ ಅರ್ಥವೇ ಪ್ರಚುರ.

ಸಾಪೇಕ್ಷ ಎಂದರೆ ಸ್ವತಂತ್ರವಲ್ಲದ, ಸ್ವಸಂಪೂರ್ಣವಲ್ಲದ ಎಂದರ್ಥ. ಯಾವ ಪದಾರ್ಥದ ಸ್ವರೂಪ ಅಥವಾ ಸ್ವಭಾವವು ಮುಖ್ಯವಾಗಿ ಇತರ ಪದಾರ್ಥ ಗಳ ಸಹಾಯದಿಂದಲೇ ಉಂಟಾಗುತ್ತದೆಯೋ ಪೂರ್ಣವೋ ಆ ಪದಾರ್ಥವು ಸಾಪೇಕ್ಷವೆಂದು ವ್ಯವಹಾರ. ನಾಗಾರ್ಜುನರ ಮಾಧ್ಯಮಿಕ ಸೂತ್ರದಲ್ಲಿ ಎಲ್ಲ ಪದಾರ್ಥಗಳೂ ಸಾಪೇಕ್ಷವೆಂದು ಸಿದ್ಧಾಂತಿಸುವಾಗ ಅದಕ್ಕೆ ಯಾವ ಅರ್ಥ ಇದೆಯೋ ಅದೇ ಅರ್ಥವನ್ನು ಇಲ್ಲಿಯೂ ಇಟ್ಟುಕೊಂಡಿದೆ.

ನಾವು ಒಬ್ಬ ಮನುಷ್ಯನ ಅಥವಾ ಒಂದು ಸಮಾಜದ ನಡೆನುಡಿಗಳನ್ನು ವಿಮರ್ಶಿಸುತ್ತೇವೆ. ಸರಿ ತಪ್ಪು ಎಂದು ನಿರ್ಧರಿಸುತ್ತೇವೆ. ಒಟ್ಟು ನಡತೆಯನ್ನಲ್ಲದೆ ಕೇವಲ ಒಂದೇ ಒಂದು ವ್ಯಾಪಾರವನ್ನಾಗಲಿ ಸಂಪ್ರದಾಯವನ್ನಾಗಲಿ ತೂಕ ಮಾಡಲು ಪ್ರಯತ್ನಪಡುತ್ತೇವೆ. ಈ ನಿರ್ಣಯದಲ್ಲಿ ಧರ್ಮ ಅಥವಾ ಅಧರ್ಮ ಎನ್ನುವ ವಿಶೇಷಣವನ್ನು ಪ್ರಯೋಗಿಸುತ್ತೇವೆ. ಸನ್ಮಾರ್ಗವೆಂದು ತಿಳಿದದ್ದನ್ನು ಧರ್ಮವೆನ್ನುತ್ತೇವೆ. ಅಸನ್ಮಾರ್ಗಕ್ಕೆ ಅಧರ್ಮವೆನ್ನುತ್ತೇವೆ. ಈ ರೀತಿಯ ವಿಮರ್ಶೆ ಸಾಧ್ಯವಾಗಬೇಕಾದರೆ ಧರ್ಮವೆಂಬುದೊಂದು ಅಂಗೀಕಾರವಾಗಬೇಕು. ಧರ್ಮ ಕೇವಲ ಕಲ್ಪಿತವಾಗಿಯಾಗಲಿ ಭಾವನಾನುಸಾರಿಯಾಗಲಿ, ನಮ್ಮ ಇಚ್ಛೆಯ ಫಲ

ವಾಗಿಯಾಗಲಿ ಇದ್ದರೆ ಎಲ್ಲ ಕರ್ಮಗಳೂ ಧರ್ಮವಾಗಬೇಕಾಗುವುದು. ಒಂದು ಜ್ಞಾನವಿಶೇಷವನ್ನು ಪ್ರಮಾ ಎಂದು ಕರೆಯಬೇಕಾದರೆ, ಆ ಜ್ಞಾನವನ್ನು ಪ್ರಮೆ ಎನ್ನುವವನ ಪ್ರಮಾಭಿಮಾನವೇ ನಿರ್ಣಾಯಕವಲ್ಲ. ಹಾಗೆಯೇ ಒಂದು ವ್ಯಾಪಾರವನ್ನೊ ಸಂಪ್ರದಾಯವನ್ನೊ ಧರ್ಮ ಎನ್ನಬೇಕಾದರೆ ಆ ವ್ಯಾಪಾರ ಅಥವಾ ಸಂಪ್ರದಾಯವು ಅದಕ್ಕೆ ವ್ಯತಿರಿಕ್ತವಾದ ಬೇರೊಂದು ತತ್ವಕ್ಕೆ, ಬೇರೊಂದು ನಿರ್ಣಾಯಕ ಸಾಮಗ್ರಿಗೆ, ಬೇರೊಂದು ಅಳತೆಯ ಕಡ್ಡಿಗೆ ಒಪ್ಪಬೇಕು. ವ್ಯಾಪಾರಗಳು ಪರೀಕ್ಷ್ಯಗಳು ಮಾತ್ರ. ಪರೀಕ್ಷಕಗಳಾದರೆ ಎಲ್ಲ ವ್ಯಾಪಾರವೂ ಧಾರ್ಮಿಕವಾಗುತ್ತದೆ.

ಈ ಧರ್ಮದ ಲಕ್ಷಣ ನಿಶ್ಚಯವಾಗಿರಬೇಕು. ಪರಸ್ಪರ ವಿರೋಧವಾದ ಅನೇಕ ಲಕ್ಷಣಗಳಿದ್ದು, ಅವೆಲ್ಲ ಉಪಪನ್ನವಾದರೆ ನೀತಿನಿರ್ಣಯ ಅಸಾಧ್ಯ. ಒಂದು ಲಕ್ಷಣದ ಪ್ರಕಾರ ಧರ್ಮವಾದುದು ಬೇರೊಂದು ಲಕ್ಷಣ ದೃಷ್ಟಿಯಿಂದ ಅಧರ್ಮವಾದರೆ ಒಂದು ಮಾರ್ಗವನ್ನು ಸತ್ ಎಂದಾಗಲಿ ಅಸತ್ ಎಂದಾಗಲಿ ನಿಷ್ಕರ್ಷಿಸುವುದಕ್ಕಾಗುವುದಿಲ್ಲ. ಆ ನಿರ್ಣಯವಿಲ್ಲದೆ ಧರ್ಮಾಧರ್ಮವಿವೇಚನೆ ಕೇವಲ ಭ್ರಾಂತಿಯಾಗುವುದು. ಒಟ್ಟಿನಲ್ಲಿ, ಧರ್ಮಾಧರ್ಮ ನಿರ್ಣಯಮಾಡಲು ಬೇಕಾದ ಮುಖ್ಯ ತತ್ವಗಳು ಎರಡು: (೧) ನಮ್ಮ ಸಂಪ್ರದಾಯಗಳನ್ನೂ ವ್ಯಾಪಾರಗಳನ್ನೂ ಮೀರಿದ ಒಂದು ಧರ್ಮವೆಂಬ ಒರೆಗಲ್ಲು ಬೇಕು; (೨) ಈ ಒರೆಗಲ್ಲು ನಿಶ್ಚಯರೂಪವಾದ ಲಕ್ಷಣಕ್ಕೆ ಗೋಚರವಾಗಬೇಕು.

ಈ ಸಂದರ್ಭದಲ್ಲಿ ಬರಬಹುದಾದ ಒಂದು ಸಂಶಯವನ್ನು ವಿಚಾರಮಾಡಬೇಕು. ಒಂದೇ ಧ್ಯೇಯಸಾಧನೆಗೆ ಒಂದು ಸನ್ನಿವೇಶದಲ್ಲಿ ಒಂದು ಮಾರ್ಗವು ಸಾಧಕವಾಗುತ್ತದೆ. ಅದೇ ಮಾರ್ಗ ಬೇರೆಯ ಸನ್ನಿವೇಶದಲ್ಲಿ ಬಾಧಕವಾಗಬಹುದು. ಧರ್ಮಕ್ಕೆ ಏಕರೂಪವಾದ ನಿಶ್ಚಯ ಲಕ್ಷಣವನ್ನು ಒತ್ತಿ ಹೇಳಿದರೆ ಸನ್ನಿವೇಶಕ್ಕೆ ಅನುಗುಣವಲ್ಲದ ಒಂದು ಮಾರ್ಗವು ಸರ್ವದಾ ಸರ್ವತ್ರ ಧರ್ಮವಾಗಿಯೋ ಅಧರ್ಮವಾಗಿಯೋ ಇರಬೇಕಾಗುವುದು. ಈ ವಿಧವಾದ ಯಾವ ಸನ್ನಿವೇಶದ ಪ್ರಯೋಜನಕ್ಕೂ ಒದಗದಿರುವ ತತ್ವ ಎಷ್ಟೇ ಸಮಗ್ರವಾದ್ದಾದರೂ ನಿಷ್ಫಲ; ಅದರಿಂದ ಬದುಕಿಗೆ ಯಾವ ನಿರ್ದೇಶನೆಯೂ ಇಲ್ಲ. ಇದಕ್ಕೆ ಉತ್ತರ ಪ್ರಶ್ನೆಯಲ್ಲೇ ಅಡಗಿದೆ. ಧ್ಯೇಯವು ಒಂದೇ ಅಲ್ಲದಿದ್ದರೆ, ನಿಶ್ಚಯ ಲಕ್ಷಣ ಗ್ರಾಹ್ಯವಲ್ಲದಿದ್ದರೆ ಧರ್ಮವೇ ಇರಲಾರದು ಎಂದು ನಾವು ಸಾಧಿಸುತ್ತೇವೆಯೇ ಹೊರತು ಧ್ಯೇಯಸಾಧನೆಗೆ ಸರ್ವತ್ರ, ಸರ್ವದಾ ಒಂದೇ ಒಂದು ಮಾರ್ಗವೆಂಬುದು ನಮ್ಮ ತತ್ವವಲ್ಲ. ಮಾರ್ಗರೂಪವಾದ ಆಚಾರಗಳು ಅನೇಕವಿರಬಹುದು. ಆದರೆ ಗುರಿ ಒಂದಿರಬೇಕು. ಯಾವ ಗುರಿಯನ್ನೇ

ದೃಷ್ಟಿಯಲ್ಲಿಟ್ಟುಕೊಂಡು ಮಾರ್ಗಗಳು ಉತ್ತಮ, ಮಧ್ಯಮ ಮತ್ತು ಅಧಮ ಎಂದು ಸನ್ನಿವೇಶಕ್ಕೆ ತಕ್ಕಂತೆ ನಿರ್ಣಯಿಸಬೇಕೋ, ಆ ಗುರಿಯೂ ಅನಿಶ್ಚಿತವಾದರೆ, ಅನೇಕವಾದರೆ, ಜನರ ರುಚಿಗೆ ಒಳಪಟ್ಟರೆ ಧರ್ಮ ಸಾಧ್ಯವಲ್ಲ. ಮಾರ್ಗದ ಗುಣ ದೋಷಗಳು ಸನ್ನಿವೇಶದ ಮೇಲೆ ಹೊಂದಿರಬಹುದು. ಅದು ಧರ್ಮನಿರ್ಣಯಕ್ಕೆ ವಿರೋಧಿಯಲ್ಲ. ಆದರೆ ಆ ಗುಣದೋಷಗಳು, ಸನ್ನಿವೇಶವನ್ನು ಮೀರಿದ ಒಂದು ಧ್ಯೇಯವನ್ನು ಸಾಧಿಸುವವೋ ಬಾಧಿಸುವುವೋ ಎಂಬುದರಿಂದ ನಿರ್ಣೀತವಾಗಬೇಕು.

ಹೀಗೆ ನಾವು ಮಾಡುವ ಪ್ರತಿ ಕೆಲಸಕ್ಕೂ ನಾವು ಅನುಸರಿಸುವ ಪ್ರತಿ ಆಚಾರಕ್ಕೂ ನಮ್ಮಲ್ಲಿ ಬೆಳೆದುಬಂದಿರುವ ಪ್ರತಿ ಸಂಪ್ರದಾಯಕ್ಕೂ ಗುರಿಯಾಗಿ ಒರೆಗಲ್ಲಾಗಿ ಇರುವ ಒಂದು ತತ್ವವೂ ಅವಿಷಯಕವಾಗಿ ನಿಶ್ಚಯರೂಪವಾದ ಒಂದು ಲಕ್ಷಣವೂ ಆವಶ್ಯಕ. ಆ ಲಕ್ಷಣ ಮನುಷ್ಯನ ಬುದ್ಧಿಗೆ ಸಿಕ್ಕುವಂತಿರಬೇಕು. ಈ ಎರಡು ಅಂಶಗಳಲ್ಲಿ ಯಾವುದನ್ನು ತಿರಸ್ಕರಿಸಿದರೂ ಧರ್ಮಾಧರ್ಮ ನಿರ್ಣಯ ಅಸಾಧ್ಯ; ಅಸಂಭವ.

ಈ ಸಿದ್ಧಾಂತವನ್ನು ಪ್ರಾಯಶಃ ಧರ್ಮವನ್ನು ಧ್ಯೇಯವನ್ನಾಗಿ ಎತ್ತಿ ಹಿಡಿಯುವ ಪ್ರತಿ ದರ್ಶನದವರೂ ಪ್ರತಿಪಾದಿಸಿದ್ದಾರೆ. ನಾವು ಮಾಡುವ ಪ್ರತಿ ಧಾರ್ಮಿಕ ನಿರ್ಣಯದಲ್ಲಿಯೂ ಇದು ಸೇರಿಕೊಂಡಿದೆ. ಧರ್ಮಜೀವನವನ್ನು ಅನು ಸರಿಸುತ್ತಿರುವೆನೆಂದು ತಿಳಿದಿರುವ ಪ್ರತಿವ್ಯಕ್ತಿಯ ಮತ್ತು ಸಮಾಜದ ಪ್ರಜ್ಞೆಯಲ್ಲಿಯೂ ಸೂಕ್ಷ್ಮವಾಗಿ ಇಲ್ಲವೆ ಸ್ಥೂಲವಾಗಿ ಈ ಅಂಶಗಳು ಸ್ವೀಕೃತವಾಗಿರಬೇಕು. ಈ ಸಿದ್ಧಾಂತಕ್ಕೆ ವಿರೋಧವಾಗಿ ಬಹುಕಾಲದಿಂದಲೂ ಬೆಳೆದುಬಂದಿರುವ ಮತ್ತೊಂದು ಮಾರ್ಗವಿದೆ. ಮತ್ತೊಂದು ವೈಜ್ಞಾನಿಕ ಸಂಪ್ರದಾಯವಿದೆ. ಇದನ್ನು ಧಾರ್ಮಿಕ ಸಾಪೇಕ್ಷತಾವಾದ ಎನ್ನಬಹುದು.

ಈ ಸಂಪ್ರದಾಯವನ್ನು ಮೊಟ್ಟಮೊದಲು ಪಾಶ್ಚಾತ್ಯ ದೇಶದಲ್ಲಿ ಹೂಡಿದವರು ಗ್ರೀಸ್ ದೇಶದ ಸೋಫಿಸ್ಟ್ ಪಂಗಡದವರು. ಈಚೆಗೆ ವೈಜ್ಞಾನಿಕ ದೃಷ್ಟಿಯಿಂದ ಅನೇಕ ಸಮಾಜಗಳ ನೀತಿ ಪಂಥಗಳನ್ನು ಪರಿಶೀಲಿಸಲು ಹೊರಟ ಸಮಾಜಶಾಸ್ತ್ರ ಜ್ಞರು ಇದನ್ನು ಮೇಲೆತ್ತಿದ್ದಾರೆ. ಇವರಲ್ಲಿ ಪ್ರಸಿದ್ಧರಾದ ವೆಸ್ಟರ್‌ಮಾರ್ಕರು ಈ ಸಿದ್ಧಾಂತ ಸ್ಥಾಪನೆಯನ್ನು ತಮ್ಮ 'ಧರ್ಮದ ಸಾಪೇಕ್ಷತೆ' (*Ethical Relativity*) ಎಂಬ ಗ್ರಂಥದಲ್ಲಿ ಪ್ರಮಾಣ ಪುರಸ್ಸರವಾಗಿ ಮಾಡಿದ್ದಾರೆ. ಇತಿಹಾಸ ವಿಮರ್ಶೆಯಲ್ಲಿ ಒಂದು ನವೀನ ದರ್ಶನವನ್ನೇ ಸ್ಥಾಪನೆಮಾಡಿದ ಸ್ಪೆಂಗ್ಲರವರು ಪ್ರತಿಯೊಂದು ದೇಶದ ಸಂಸ್ಕೃತಿಯೂ ಒಂದೊಂದು ಅಸಾಧಾರಣವಾದ, ಅನುಪಮವಾದ, ಆತ್ಮವನ್ನು ಹೊಂದಿದೆ ಎಂದು ವಾದಿಸಿ, ಧರ್ಮಮಾರ್ಗದಲ್ಲೂ ಈ ರೀತಿಯ ಅಸಾಧಾರಣತೆ

ಯನ್ನು— ಅಂದರೆ ಸಾಪೇಕ್ಷತೆಯನ್ನು— ಎತ್ತಿ ಹಿಡಿದಿದ್ದಾರೆ. ಇಲ್ಲಿ ಈ ಸಾಪೇಕ್ಷ ವಾದದ ಮುಖ್ಯಾಂಶವನ್ನು ಪ್ರತಿಪಾದಿಸಲಾಗುವುದು; ಅದರ ವಿಮರ್ಶೆ ನಡೆಯುವುದು.

ಸಮಾಜವು ಧರ್ಮಭಾವನೆ ಹುಟ್ಟುವ ಕ್ಷೇತ್ರ. ಸಮಾಜಗಳು ವಿಧವಿಧವಾಗಿವೆ. ವಾಸಮಾಡುವ ದೇಶದ ಪ್ರಕೃತಿ ಲಕ್ಷಣಗಳು; ಜನತೆಯ ರಕ್ತಗುಣ — ಅಂದರೆ, ಅದರಲ್ಲಿ ವಂಶಪಾರಂಪರ್ಯವಾಗಿ, ರಕ್ತಗತವಾಗಿ ಬರುವ ಕೆಲವು ಗುಣಗಳು; ಆ ಜನತೆಯ ಇತಿಹಾಸದ ಬೆಳವಣಿಗೆಯ ಅಸಾಧಾರಣಾಂಶಗಳು ಇವುಗಳ ಆಧಾರದ ಮೇಲೆ ಪ್ರತಿ ಒಂದು ಸಮಾಜವೂ ಒಂದು ಸಂಸ್ಕೃತಿ ಎಂಬ ಕಟ್ಟಡವನ್ನು ಕಟ್ಟುತ್ತದೆ. ಅದರ ಮತ, ಧರ್ಮಜೀವನ, ವಿಜ್ಞಾನ, ತತ್ವಜ್ಞಾನ, ರಾಜಕೀಯ ಸಾಮಾಜಿಕ ಸಂಪ್ರದಾಯಗಳು, ಕಲೆಗಳು, ಮುಂತಾದ ಸಮಸ್ತ ಬಗೆಯ ಸಂಸ್ಕೃತಿ ಪ್ರವಾಹವೂ ಪ್ರತಿ ಸಮಾಜಕ್ಕೂ ವಿಶಿಷ್ಟವಾಗಿ ಅಸಾಧಾರಣವಾಗಿ, ತನ್ನದೇ ಒಂದು ಸ್ವರೂಪವನ್ನೂ ಆತ್ಮವನ್ನೂ ಉಳ್ಳದ್ದಾಗಿ ಹರಿಯುತ್ತದೆ. ಸಂಸ್ಕೃತಿಯಲ್ಲಿರುವ ವಿವಿಧತೆಯು ಸಮಾಜಶಾಸ್ತ್ರಜ್ಞರನ್ನು ಅಚ್ಚರಿಗೊಳಿಸುತ್ತದೆ. ಯಾವ ವಿಷಯದಲ್ಲೂ ಇಲ್ಲದಷ್ಟು ವೈವಿಧ್ಯ ಧಾರ್ಮಿಕಜೀವನ ಮತ್ತು ಅಭಿಪ್ರಾಯಗಳಲ್ಲಿ ಕಂಡುಬರುತ್ತದೆ. ಪ್ರತಿ ವ್ಯಕ್ತಿಯೂ ಧರ್ಮ ಮತ್ತು ಅಧರ್ಮಗಳ ವಿಷಯದಲ್ಲಿ ತನ್ನ ಅಭಿಪ್ರಾಯಗಳನ್ನು ತನ್ನ ಸಮಾಜದ ವಾತಾವರಣದಿಂದ, ಅದರ ಸಂಪ್ರದಾಯಗಳ ಪ್ರಕಾಶದಿಂದ ಸೃಷ್ಟಿಸಿಕೊಳ್ಳುತ್ತಾನೆ. ಯಾವ ವ್ಯಕ್ತಿಯೂ ಎಲ್ಲ ವಿಧದಲ್ಲಿಯೂ ತನ್ನ ಧರ್ಮಜೀವನವನ್ನು ತನ್ನದೇ ಪ್ರಕಾಶದಿಂದ ರಚಿಸಲಾರನು. ನವೀನ ಮಾರ್ಗಗಳು ಕೂಡ ಸಮಾಜದ ವಿಶೇಷ ಸ್ವರೂಪವನ್ನು ಅನುಸರಿಸುತ್ತವೆ. ಅಂದರೆ ಬೌದ್ಧಧರ್ಮವು ಹಿಂದೂ ದೇಶದಲ್ಲಿ ಹುಟ್ಟಿದ ಒಂದು ಹೊಸ ಧರ್ಮವೆಂದರೆ, ಅದು ತೀರ ಹೊಸದಲ್ಲ. ಹಿಂದೂಧರ್ಮದಲ್ಲಿನ ಅನೇಕ ಅಭಿಪ್ರಾಯಗಳು, ಮುಖ್ಯವಾಗಿ 'ಕರ್ಮವಾದ'ವು, ಬೌದ್ಧಧರ್ಮಕ್ಕೆ ಪ್ರಧಾನಾಂಶಗಳಾಗಿ ಸೇರಿಹೋಗಿವೆ. ಮತ್ತು ಒಂದು ಹಳೆಯ ಸಂಪ್ರದಾಯವನ್ನು ಒಂದು ನೂತನ ಮಾರ್ಗವು ವಿರೋಧಿಸಿದ್ದೇ ಆದರೆ, ಆ ಸಂಪ್ರದಾಯವನ್ನು ವಿರೋಧಿಸಬೇಕಾದ್ದರಿಂದಲೇ ಅದರಲ್ಲಿ ವಿಶೇಷಾಂಶಗಳು ಬೆಳೆಯುತ್ತವೆ. ಅಂದರೆ ಒಂದು ಧರ್ಮ ಸಂಪ್ರದಾಯವು ತನ್ನ ವಿರೋಧಿಗೆ ಸರಿಯಾಗಿ ಉತ್ತರವಾಗತಕ್ಕ ಅಂಶಗಳನ್ನು ಬೆಳೆಸಿಕೊಳ್ಳಬೇಕಾಗುವದು. ಹೀಗೆಂದ ಮೇಲೆ ಸಂಪ್ರದಾಯ ಶರಣರಾಗಲಿ, ಕ್ರಾಂತಿಕಾರರಾಗಲಿ, ಪುರಾತನ ಧರ್ಮಪ್ರವರ್ತಕರಾಗಲಿ, ನವೀನ ಮಾರ್ಗ ಪ್ರವರ್ತಕರಾಗಲಿ ಪ್ರತಿಯೊಬ್ಬರೂ ತಮ್ಮ ಸಮಾಜದಿಂದ ಅದರ ಮೂಲತತ್ವದಿಂದ, ಅದರ ಐತಿಹಾಸಿಕ ವಾತಾವರಣದಿಂದ, ತಮ್ಮ ಧ್ಯೇಯಗಳನ್ನೂ, ನೀತಿ ನಿರ್ಣಯಗಳನ್ನೂ ತೆಗೆದುಕೊಳ್ಳುತ್ತಾರೆ. ವ್ಯಕ್ತಿಯು ಒಂದು

ಪ್ರತ್ಯೇಕ ಪರಮಾಣುವಲ್ಲ. ಸಮಾಜನೆಂಬ ಸರೋವರದ ಒಂದು ತರಂಗ. ಅದರ ಧರ್ಮವೇ ಅವನ ಧರ್ಮ. ಅದರ ಅಧರ್ಮವೇ ಅವನ ಅಧರ್ಮ. ಅದರ ಕಾಲ, ದೇಶ, ಮನಸ್ಸಿನ ಜಾಗೃತಿ, ಇವು ಅವನ ಧ್ಯೇಯಗಳನ್ನು ಚಿತ್ರಿಸುತ್ತವೆ. ಹೀಗೆಂದ ಮೇಲೆ ಏಕರೂಪವಾದ ಧರ್ಮತತ್ವವು ನಿರ್ಮೂಲವಾಗುವುದು. ಮುಖ್ಯವಾಗಿ (೧) ಸಮಾಜದಿಂದ ವ್ಯಕ್ತಿಯು ತನ್ನ ಧರ್ಮಭಾವನೆಗಳನ್ನು ತೆಗೆದುಕೊಳ್ಳುತ್ತಾನೆ. (೨) ಪ್ರಪಂಚದಲ್ಲಿ ಇಲ್ಲಿಯ ವರೆಗೆ ವಿಚಿತ್ರವಾದ ವಿವಿಧವಾದ ಸಮಾಜಗಳು ಹುಟ್ಟಿ ಬೆಳೆದುಬಂದಿವೆ. (೩) ಆದ್ದರಿಂದ ಏಕರೂಪವಾದ, ಸರ್ವಸಾಮಾನ್ಯವಾದ, ನಿಶ್ಚಯಲಕ್ಷಣ ಗಮ್ಯವಾದ ಧರ್ಮವಿಲ್ಲವೇ ಇಲ್ಲ. ಇದ್ದರೂ ಗೋಚರವಾಗು ವಂತಿಲ್ಲ. ಲಕ್ಷಣವು ಸಮಾಜವನ್ನನುಸರಿಸುವುದು ಸ್ವತಂತ್ರವಲ್ಲ. ಆದುದರಿಂದ ಧರ್ಮಾಧರ್ಮ ನಿರ್ಣಯವು ಅಶಕ್ಯ. ಇದೇ ಧಾರ್ಮಿಕ ಸಾಪೇಕ್ಷತೆ. ಪರಿಮಿತ ವಾದ ನಿರ್ಣಯಗಳನ್ನು ಬೇಕಾದರೆ ಮಾಡಬಹುದು. ಅಂದರೆ 'ಈ ಸಮಾಜದ ಧ್ಯೇಯಗಳಿಗೆ ಸರಿಯಾಗಿ ಈ ವ್ಯಕ್ತಿ ವ್ಯವಹರಿಸುತ್ತಿದಾನೆಯೆ'? ಎಂದು ಚರ್ಚಿಸ ಬಹುದು. ಆದರೆ ಸಮಾಜ ನಿರಪೇಕ್ಷವಾಗಿ, 'ಈ ಸಂಪ್ರದಾಯವು ಧರ್ಮವೆ? ಈ ವ್ಯಕ್ತಿಯ ನಡೆನುಡಿ ಯುಕ್ತವೆ?' ಎಂದು ನಾವು ಎಂದೂ ಪ್ರಶ್ನಿಸಕೂಡದು. ಪ್ರಶ್ನಿಸಿದರೆ ಉತ್ತರ ಸಿಕ್ಕುವಂತಿಲ್ಲ. ಉತ್ತರ ಹೇಳುವವರೆಲ್ಲ ತಮ್ಮ ತಮ್ಮ ಸಮಾಜದ ಧಾರ್ಮಿಕ ಸಂಪ್ರದಾಯಗಳ ಬಂದಿಗಳು. ಧಾರ್ಮಿಕ ಪ್ರಪಂಚದಲ್ಲಿ ಸಾಮಾನ್ಯಗಳಿಲ್ಲ; ಎಲ್ಲ ವಿಶೇಷಗಳೇ. ಅವು ಸಾಮಾನ್ಯಗಳೆಂದು ಅವುಗಳ ಬಂದಿ ಗಳಿಗೆ ಭ್ರಮೆಬರುವುದೂ ಸಹಜ.

ಈ ಸಿದ್ಧಾಂತವನ್ನು ಅನೇಕ ಉದಾಹರಣೆಗಳಿಂದ ಪುಷ್ಟಿಗೊಳಿಸಬಹುದು. ಬೇರೆ ಬೇರೆ ಸಮಾಜಗಳ ವಿವಾಹನಿಯಮಗಳು, ರಾಜಕೀಯ ನೀತಿಗಳು, ಆರ್ಥಿಕ ವ್ಯವಸ್ಥೆ ಗಳು, ಮತನಿಯಮಗಳು, ಇವನ್ನು ಸ್ವಲ್ಪ ತಿಳಿದರೆ ಸಾಕು; — ಧರ್ಮಸಾಪೇಕ್ಷ ವೆಂಬುದು ಸ್ಪಷ್ಟವಾಗುತ್ತದೆ. ಹಿಂದೂ ಧರ್ಮಶಾಸ್ತ್ರಗಳಲ್ಲಿ ಈ ಸಾಪೇಕ್ಷತೆ ಭದ್ರ ಪಟ್ಟಿದೆ. ಮುಖ್ಯವಾಗಿ ಧರ್ಮಶಾಸ್ತ್ರಗಳು ವರ್ಣಾಶ್ರಮ ಧರ್ಮವನ್ನು ಹೇಳುತ್ತವೆ. ಅಂದರೆ ವರ್ಣಾಶ್ರಮ ಧರ್ಮವನ್ನು ಅನುಸರಿಸದ ಸಮಾಜಕ್ಕೆ ಅನ್ವಯಿಸುವುದಿಲ್ಲ. ಈ ಪರಿಸ್ಥಿತಿಯನ್ನು ಮನಸ್ಸಿನಲ್ಲಿಟ್ಟುಕೊಂಡೇ ಶಂಕರಾಚಾರ್ಯರು ಶಾಸ್ತ್ರಪ್ರಾಮಾಣ್ಯ ವನ್ನು ಒತ್ತಿ ಒತ್ತಿ ಹೇಳುತ್ತಾರೆ. ಅವರ ಅಭಿಪ್ರಾಯದಲ್ಲಿ ಲೌಕಿಕ ಅನುಭವದಿಂದಲೂ ಯುಕ್ತಿಯಿಂದಲೂ ಧರ್ಮನಿರ್ಣಯ (ಈ ಸಾಪೇಕ್ಷತೆಯ ಕಾರಣದಿಂದ) ಅಶಕ್ಯ. ಆದ್ದರಿಂದ ಶಾಸ್ತ್ರವನ್ನು ನಂಬಬೇಕು. ಆದರೆ ಶಾಸ್ತ್ರಾರ್ಥ ಕೂಡ ಈ ಸಾಪೇಕ್ಷತೆಯ ಒಳಗೆ ಬಿದ್ದಿರುವುದು. ಒಂದು ಸಂದರ್ಭದಲ್ಲಿ ಒಂದು ಸಮಾಜಕ್ಕೆ ಶಾಸ್ತ್ರ ಒಂದು

ಅರ್ಥಕೊಡುತ್ತದೆ. ಬೇರೆ ಸನ್ನಿವೇಶದಲ್ಲಿ ಮತ್ತೊಂದು ಅರ್ಥ ಕೊಡುತ್ತದೆ. ಬೇರೆ ಬೇರೆ ಸಮಾಜಗಳು ಬೇರೆ ಬೇರೆ ಶಾಸ್ತ್ರಗಳನ್ನು ಅನುಸರಿಸುತ್ತಿರುವಾಗ ಪ್ರತ್ಯಕ್ಷಾನುಮಾನಗಳಿಂದ ಬರುವ ಸಾಪೇಕ್ಷತೆಯನ್ನು ಶಾಸ್ತ್ರದಿಂದ ದಾಟುವುದು ಹೇಗೆ? ಈ ಕೆಳಗಿನ ವಾಕ್ಯಗಳು ಆಚಾರ್ಯರ ಅಭಿಪ್ರಾಯವನ್ನು ತಿಳಿಸುತ್ತವೆ.

> "ಯಸ್ಮಿನ್ ದೇಶೇ ಕಾಲೇ ನಿಮಿತ್ತೇ ಚ ಯೋಧರ್ಮೋಽನುಷ್ಠೀಯತೆ ಸ ಏವ ದೇಶಕಾಲ ನಿಮಿತ್ತಾಂತರೇಷ್ವಧರ್ಮೋಭವತಿ | ತೇನಶಾಸ್ತ್ರಾದೃತೆ ಧರ್ಮಾಧರ್ಮ ವಿಷಯಂ ವಿಜ್ಞಾನಂ ನಕಸ್ಯಚಿದಸ್ತಿ"
>
> ಬ್ರಹ್ಮಸೂತ್ರಭಾಷ್ಯ. ೩–೧–೨೫

ಈ ಸಾಪೇಕ್ಷತಾವಾದ ಅನಿವಾರ್ಯವಾಗಿ ಕಾಣುತ್ತದೆ. ಅಜ್ಞಾನದಿಂದ ಅದನ್ನು ದೂಷಿಸಬಹುದು. ವ್ಯಕ್ತಿಗಳ ಅಭಿಪ್ರಾಯಗಳೂ ಧ್ಯೇಯಗಳೂ ಸಮಾಜದಲ್ಲಿರುವಿಕೆಯ ಅಧೀನವೆನ್ನುವುದನ್ನು ತಿಳಿಯದೆಯೋ, ಸಮಾಜಗಳೆಂಬ ಬೃಹನ್ಮೂರ್ತಿಗಳ ವಿವಿಧಸ್ವರೂಪವನ್ನು ತಿಳಿಯದೆಯೋ, ಏಕರೂಪವಾದ, ಸರ್ವತೋವೇದ್ಯವಾದ, ಲಕ್ಷಣಗಮ್ಯವಾದ ಧರ್ಮವಿದೆ ಎಂದು ವಾದಿಸಬಹುದು. ಸಮಾಜಶಾಸ್ತ್ರವು ಬುಡವಿಲ್ಲದ ಈ ಭ್ರಾಂತಿಯನ್ನು ನಾಶಪಡಿಸುತ್ತದೆ.

ಸ್ಥೂಲವಾಗಿ ನಿರೂಪಿಸಿರುವ ಈ ಧಾರ್ಮಿಕ ಸಾಪೇಕ್ಷತೆ ನಿಜವಾದರೆ ಧರ್ಮನಿರ್ಣಯವಾಗಲಿ ಆಚಾರವಾಗಲಿ ಅಸಂಭವವಾಗುವುದು. ತಾತ್ಕಾಲಿಕವಾಗಿ ಬೇರೆ ಬೇರೆ ಸಮಾಜಗಳು ಏರ್ಪಡಿಸಿಕೊಂಡಿರುವ ಸಮಯವೇ ಧರ್ಮವಾಗುವುದೇ ಹೊರತು ಉಪಾಧಿ ಇಲ್ಲದ ಧರ್ಮತತ್ತ್ವ ಬೇರೆ ಇಲ್ಲ ಎಂದಾಗುವುದು. ಆದರೆ ಅಷ್ಟು ಸುಲಭವಾಗಿ ಧರ್ಮತತ್ತ್ವವನ್ನು ತ್ಯಜಿಸಲು ಆಗದು. ಧಾರ್ಮಿಕ ಸಾಪೇಕ್ಷತೆಗೆ ವಿರೋಧವಾಗಿ ಕೆಲವು ಪ್ರಬಲವಾದ ಯುಕ್ತಿಗಳಿವೆ. ಅವುಗಳನ್ನು ಸಂಗ್ರಹಿಸುವುದು ಆವಶ್ಯಕ.

೧. ಬೇರೆ ಬೇರೆ ಧರ್ಮಸಂಪ್ರದಾಯಗಳಿದ್ದ ಮಾತ್ರಕ್ಕೆ ಧರ್ಮವೇ ಅನಿರ್ದೇಶ್ಯ, ಅನಿರ್ವಚನೀಯ ಎಂದು ಹೇಳುವುದು ಅಸಂಗತ. ಧರ್ಮದ ಲಕ್ಷಣಗಳು ಪರಸ್ಪರ ವಿಪರೀತವಾಗಿರಬಹುದು. ಅದರಿಂದ ಸೂಚಿತವಾಗುವುದೇನಂದರೆ ನಿಷ್ಕೃಷ್ಟವಾದ ಸರ್ವಾಭಿಮತವುಳ್ಳ ಧರ್ಮಲಕ್ಷಣ ಇನ್ನೂ ಪ್ರತಿಪಾದಿತವಾಗಿಲ್ಲವೆಂದು. ಅದರಿಂದ ಧರ್ಮ ಎಂದೆಂದಿಗೂ ಲಕ್ಷಣಕ್ಕೆ ಸಿಕ್ಕುವುದಿಲ್ಲ. ಮನುಷ್ಯನ ಬುದ್ಧಿ ಅಲ್ಪಶಕ್ತಿಯುಳ್ಳದ್ದು. ಅಪೂರ್ಣವಾದ್ದು. ಕ್ರಮಶಃ ಅದು ವಸ್ತು ಅಥವಾ ಧ್ಯೇಯಗಳನ್ನು ತಿಳಿದುಕೊಳ್ಳಬೇಕು. ಸದ್ಯದಲ್ಲಿ ಈ ಅಪೂರ್ಣಶಕ್ತಿಯ ಕಾರಣದಿಂದ ಅಜ್ಞಾತವಾದ ಮತ್ತು ಅಲಕ್ಷಿತವಾದ ತತ್ತ್ವ ಎಂದೆಂದಿಗೂ ತಿಳಿಯಲಾಗದದು ಅಥವಾ

ನುಡಿದು ಹೇಳಲಾಗದುದು—ಎಂದು ವಾದಿಸಿದರೆ ಅದು ಅತಿವಾದವಾಗುವುದು. ಆದುದರಿಂದ ಧಾರ್ಮಿಕ ಸಾಪೇಕ್ಷತೆ ಬೇರೆ ಬೇರೆ ಸಮಾಜಗಳ ಮಾನವನ ವೈಜ್ಞಾನಿಕ ಅಸಂಪೂರ್ಣತೆಯನ್ನು ವ್ಯಕ್ತಗೊಳಿಸುವುದೇ ಹೊರತು ಧರ್ಮದ ಅತ್ಯಂತ ಅಜ್ಞೇಯತ್ವವನ್ನಾಗಲಿ ನಿಶ್ಚಯರೂಪವಾದ ಲಕ್ಷಣಕ್ಕೆ ಎಂದಿಗೂ ಅದು ಸಿಕ್ಕದೆಂದಾಗಲಿ ಸ್ಥಾಪಿಸಲಾರದು.

೨. ಧರ್ಮದ ಜ್ಞಾನವೂ ಅನುಷ್ಠಾನವೂ ಪ್ರತಿಯೊಂದು ಸಮಾಜದಲ್ಲೂ ಅಪೂರ್ಣವೆಂಬುದು ಬೇರೊಂದು ವಾದ. ಯಾವ ಸಮಾಜವಾಗಲಿ ಒಂದೇ ಲಕ್ಷಣವನ್ನು, ಒಂದೇ ಧ್ಯೇಯವನ್ನು, ಒಂದೇ ಅನುಷ್ಠಾನ ಮಾರ್ಗವನ್ನು ಸರ್ವದಾ ಅನುಸರಿಸಿಲ್ಲ. ಪ್ರತಿಯೊಂದು ಸಮಾಜದಲ್ಲಿನ ಧರ್ಮವೂ ಸದಾ ಪರಿಣಾಮ ಪರಂಪರೆಯನ್ನು ಹೊಂದುತ್ತಿದೆ. ಪೂರ್ಣ ಧರ್ಮಸ್ಥಾಯಿಯಾಗಿರಬೇಕು. ಸಮ್ಯಕ್ ಜ್ಞಾನವು ಅಬಾಧಿತವಾಗಿರಬೇಕು. ಆದರೆ ಪ್ರತಿ ಸಮಾಜದ ಧರ್ಮಭಾವನೆಯಲ್ಲಿಯೂ ನಿರಂತರ ವಿಕಾರವಿದೆ; ಅದು ವ್ಯತ್ಯಾಸ ತೋರಿಸುತ್ತಿದೆ. ಎರಡು ಸಮಾಜಗಳು ಬೇರೆ ಬೇರೆ ಧರ್ಮ ವ್ಯವಹಾರಗಳನ್ನು ಹೇಗೆ ವ್ಯಕ್ತಪಡಿಸುತ್ತವೆಯೋ ಹಾಗೆಯೇ ಪ್ರತಿಸಮಾಜದ ಧರ್ಮಜೀವನವೂ ಕಾಲಚಕ್ರ ಸುತ್ತಿದಂತೆಲ್ಲ ಸ್ವರೂಪವಿಕಾರವನ್ನು ಹೊಂದುತ್ತಿದೆ. ಹಳೆಯ ಮಾರ್ಗದ ಅನೇಕ ಅಂಶಗಳು ವಿಚ್ಛಿನ್ನವಾಗುವುದೂ ಕೇವಲ ನೂತನ ಅಂಶಗಳು ಹುಟ್ಟಿಬರುವುದೂ ವಿಜ್ಞಾನಿಯ ದೃಷ್ಟಿಪಥಕ್ಕೆ ಬರುತ್ತವೆ. ಈ ಬಗೆಯ ವಿಕಾರವು ಧರ್ಮಜೀವನದ ಅಪೂರ್ಣತೆಯನ್ನೂ ಪೂರ್ಣತೆಯನ್ನು ಅರಸುವ ನಿರಂತರ ಪ್ರಯತ್ನವನ್ನೂ ತೋರಿಸುತ್ತದೆ. ಹಾಗಿದ್ದ ಮೇಲೆ ಪ್ರತಿಸಮಾಜವೂ ಯಾವ ಕಾಲದಲ್ಲಿ ನೋಡಿದರೂ ಅಪೂರ್ಣವೂ ಪೂರ್ಣತಾನ್ವೇಷಿಯೂ ಆದ ಧರ್ಮವನ್ನೊಳಗೊಂಡಿದೆ ಎಂಬುದು ಪ್ರತ್ಯಕ್ಷ. ಈ ಅಪೂರ್ಣತೆಯಿಂದಲೇ ಧರ್ಮ ಸಾಪೇಕ್ಷವಾಗುವುದು. ಪೂರ್ಣಧರ್ಮ ಜೀವನವೂ ಸ್ಥಾಯಿಯಾದ ಧರ್ಮದರ್ಶನವೂ ಇದ್ದು ಧರ್ಮ ಸಾಪೇಕ್ಷವಲ್ಲ. ಅಂದರೆ, ಇಲ್ಲಿಯವರೆಗೆ ಧರ್ಮಲಕ್ಷಣ ಅನಿಶ್ಚಿತವಾಗಿದ್ದರೆ ಅದು ಅಪೂರ್ಣತೆಯ ಕಾರ್ಯವೇ ಹೊರತು ಧರ್ಮ ಅನಿರ್ವಚನೀಯವೆಂಬ ವಾದಕ್ಕೆ ಪ್ರಮಾಣವಲ್ಲ. ಯಾವ ಸಮಾಜದಲ್ಲಿ ಆಗಲಿ ಧರ್ಮಕ್ಕೆ ಒಂದು ಸ್ಥಾಯಿರೂಪವಿಲ್ಲದೆ ಇರುವದರಿಂದಲೇ ಆದಕ್ಕೆ ಈ ಅಪೂರ್ಣತೆಯೆಂದು ತಿಳಿಯಬಹುದು.

೩. ಮಾನವನ ಈ ಅಪೂರ್ಣತೆ ಅನಂತವಲ್ಲವೆ? ಇದಕ್ಕೆ ಕೊನೆಯೆಲ್ಲಿ? ಆದ್ದರಿಂದಲೇ ಪೂರ್ಣಜ್ಞಾನ ಮತ್ತು ಜೀವನದಿಂದಲೇ ಲಭ್ಯವಾಗಬೇಕಾದ ಧರ್ಮದ ನಿಜವಾದ ಏಕರೂಪವಾದ ಲಕ್ಷಣ ನಮಗೆ ಎಂದೆಂದಿಗೂ ಅಲಭ್ಯ ಎಂದು ವಾದಿಸಬಹುದು. ಇದಕ್ಕೆ ಉತ್ತರ ಹೇಳುವುದು ಕಷ್ಟ. **ಆದರೆ ನಮ್ಮ ಅಪೂರ್ಣತೆಯಿಂದ**

ಧರ್ಮಸಾಪೇಕ್ಷವಾಗಿದೆ ಎಂದು ಸಾಧಿಸುವುದಕ್ಕೆ ಈ ಪ್ರಶ್ನೆಗಳಿಗೆ ಉತ್ತರ ಹೇಳಬೇಕಾಗಿಲ್ಲ. ಉತ್ತರ ಅಶಕ್ಯವಲ್ಲ. ನಮಗೆ ತಿಳಿದಮಟ್ಟಿಗೆ ಸಮಾಜಗಳು ಎಲ್ಲ ಅವಸ್ಥೆಯಲ್ಲಿಯೂ ಅಪೂರ್ಣಧರ್ಮ ಉಳ್ಳವುಗಳಾಗಿದ್ದರೂ ಅವಸ್ಥೆಯಿಂದ ಅವಸ್ಥೆಗೆ ಅಪೂರ್ಣತೆಯು ಕಡಿಮೆಯಾಗಿದೆ; ಪೂರ್ಣತೆಯ ಸಾಮೀಪ್ಯ ಹೆಚ್ಚಿದೆ. ಅಂದರೆ ಮುನ್ನಡೆಯೆಂಬುದು ಭ್ರಾಂತಿಯಲ್ಲ. ಯಾವ ಸಮಾಜವೂ ಹಿಂದಿನ ಸಾಂಸ್ಕೃತಿಕ ಭಾಗಗಳನ್ನು ಒಂದೇ ರೀತಿ ಸ್ವಲ್ಪವೂ ವೃದ್ಧಿಯಿಲ್ಲದೆ ಪುನಶ್ಚರ್ವಣೆ ಮಾಡಿಲ್ಲ. ಹಿಂದಿನ ಅವಸ್ಥೆಯ ಎಲ್ಲ ಸಂಸ್ಕೃತಿಯನ್ನೂ ನಿಶ್ಶೇಷವಾಗಿ ನಾಶ ಮಾಡಿಲ್ಲ. ಸಮಾಜಗಳು ಪ್ರವಾಹದಂತೆ: ಹಿಂದಿನಿಂದ ಬರುವ ನೀರಿಗೆ ಮತ್ತಿಷ್ಟು ನೀರನ್ನು ಸೇರಿಸಿ ಮುಂದಕ್ಕೆ ಹರಿಯುವ ನದಿಯಂತೆ ಸಮಾಜಗಳು ಪುರಾತನ ಸಂಪ್ರದಾಯಗಳಿಗೆ ಬೇರೆ ಹೊಸ ಸಂಪ್ರದಾಯಗಳನ್ನು ಸೇರಿಸಿ ಮುಂದಿನ ಸಂಪ್ರದಾಯಗಳಿಗೆ ಆಧಾರ ಒದಗಿಸುತ್ತವೆ. ಇದೇ ಜೀವನದ ಮೂಲತತ್ವ. ಬರ್ಗ್‌ಸನ್ನರು ಹೇಳುವಂತೆ ಭೂತಕಾಲವು ವರ್ತಮಾನಕಾಲದೊಳಕ್ಕೆ ಹರಿದುಬಂದು ಅದರೊಡನೆ ಭವಿಷ್ಯತ್ತಿನೊಳಕ್ಕೆ ನುಗ್ಗುವುದು. ಸಂಪೂರ್ಣ ನಾಶವಾಗಲಿ, ಸಂಪೂರ್ಣ ಪುನರಾವೃತ್ತಿಯಾಗಲಿ ಜೀವನದ ತತ್ವವಲ್ಲ. ವೃದ್ಧಿಸಹಿತ ಪುನರುತ್ಥಾನವೇ ಜೀವನದ ಮತ್ತು ಸಮಾಜದ ಸಾರ; ಸರಣಿ. ಹೀಗೆ ವಾದಿಸಿದರೆ ನಾವು ಸದಾ ಅಪೂರ್ಣರಾಗಿದ್ದರೂ, ನಮ್ಮ ಅಪೂರ್ಣತೆ ಕ್ರಮಕ್ರಮವಾಗಿ ನಷ್ಟಹೊಂದುತ್ತಿದೆ. ನಾವು ದಿನೇ ದಿನೇ ಧರ್ಮದ ವಾಸ್ತವಿಕ ಲಕ್ಷಣದ ಬಳಿಗೆ ಸಾರುತ್ತಿದ್ದೇವೆ.

ಈ ರೀತಿಯ ಬೆಳವಣಿಗೆ ನಡೆಯುತ್ತಿದೆ ಎನ್ನುವುದಕ್ಕೆ ಅನೇಕ ನಿರ್ವಿವಾದವಾದ ಆಧಾರಗಳಿವೆ; ಮುಖ್ಯವಾಗಿ ವಿಜ್ಞಾನದ ಬೆಳವಣಿಗೆ. ಆಧುನಿಕ ವೈಜ್ಞಾನಿಕರು ಸಂಪೂರ್ಣವಾಗಿ ಪ್ರಕೃತಿದೇವಿಯ ಮರ್ಮವನ್ನು ಸಂಶೋಧಿಸಿರುವರೆಂದು ಪ್ರತಿಜ್ಞೆ ಮಾಡಲು ಸಾಧ್ಯವಲ್ಲ. ಆದರೂ ಆ ಮರ್ಮಗಳ ವಿಷಯದಲ್ಲಿ ಪೂರ್ವಕಾಲದ ವೈಜ್ಞಾನಿಕರಿಗಿಂತ ಹೆಚ್ಚಿನ ಜ್ಞಾನ ಈಗ ಲಭಿಸಿದೆ ಎಂಬುದು ಸಿದ್ಧವಾದ ಸಂಗತಿ.

೪. ಈ ತೆರನಾದ ನಿರಂತರ ಆಧ್ಯಾತ್ಮಿಕವೃದ್ಧಿಯು ತಿಳಿದರೆ ಆ ವೃದ್ಧಿಯಿಂದ ಧಾರ್ಮಿಕಜೀವನದಲ್ಲಿ ಅನುಸರಿಸಿ ಬರುವ ನಿಯಮ ವ್ಯಕ್ತವಾಗುತ್ತದೆ. ಕ್ರಮಕ್ರಮವಾಗಿ ಧರ್ಮಜೀವನದಲ್ಲಿ ವೈವಿಧ್ಯ ತೊಲಗಿ ಸಾಮರಸ್ಯ ಬೆಳೆಯುತ್ತಿದೆ. ಅಖಿಲ ಜಗತ್ತೂ ಏಕರೂಪವಾದ ಒಂದು ಧರ್ಮತತ್ವವನ್ನು ಒಪ್ಪದಿರಬಹುದು. ಆದರೂ ಆ ಪೂರ್ಣ ಸಾಮರಸ್ಯದ ಕಡೆಗೆ ಬೇರೆಬೇರೆ ಜನರು ನಡೆಯುತ್ತಿರುವರೆಂಬುದನ್ನು ತಿಳಿಯಬಹುದು. ಈ ಅಭಿಪ್ರಾಯಕ್ಕೆ ಬೆಂಬಲಕೊಡುವ ಅಂಶಗಳು ಎರಡು: (೧) ಪ್ರತಿ ವ್ಯಕ್ತಿಯೂ ತನ್ನದೇ ಆದ ಧರ್ಮಜೀವನವನ್ನು ನಡೆಸುತ್ತಿಲ್ಲ. ಅವನ

ಧರ್ಮಜೀವನವೂ, ಧಾರ್ಮಿಕಜ್ಞಾನವೂ ಇತರ ವ್ಯಕ್ತಿಗಳ ಜೀವನಕ್ಕೂ ಜ್ಞಾನಕ್ಕೂ ಸ್ವರೂಪತಃ ಕೂಡಿರುತ್ತದೆ. ಒಂದು ಸಮಾಜದ ಎಲ್ಲ ವ್ಯಕ್ತಿಗಳ ಧರ್ಮಜೀವನವೂ ಜ್ಞಾನವೂ ಒಂದಕ್ಕೊಂದು ಪೋಷಕವಾಗಿಯೂ ಪೋಷ್ಯವಾಗಿಯೂ ಆಗಿ ಸಮಾಜದ ಧರ್ಮದೇವತೆ ನಿರ್ಮಿತವಾಗಿರುವುದು. ಆದ್ದರಿಂದಲೇ ಧಾರ್ಮಿಕ ಸಾಪೇಕ್ಷತೆ ಯುಕ್ತವಾಗಿ ಕಾಣುತ್ತದೆ. ಇದರಿಂದ ವ್ಯಕ್ತವಾಗುವ ನಿಯಮವನ್ನು ಸಾಪೇಕ್ಷತಾವಾದಿಗಳು ಮರೆತಂತೆ ಕಾಣುವುದು. ವ್ಯಕ್ತಿಗಳು ಸಮಾಜದಿಂದ ಧರ್ಮವನ್ನು ತೆಗೆದುಕೊಳ್ಳುತ್ತಾರೆಂಬುದನ್ನು ಅವರು ಒತ್ತಿ ಹೇಳುವರೇ ಹೊರತು, ವೈಯಕ್ತಿಕ ಸಾಪೇಕ್ಷತೆ ಹೋಗಿ ಸಮಾಜದಲ್ಲಿ ಏಕರೂಪವಾದ, ವ್ಯಕ್ತಿಗೆ ಮೀರಿದ ಧರ್ಮನಿರ್ಣಯ ಸ್ಥಿರಪಟ್ಟಿರುವದನ್ನು ಅವರು ಗಮನಿಸುವುದಿಲ್ಲ. ಅಂದರೆ ವ್ಯಕ್ತಿ ಸಾಪೇಕ್ಷತೆ ಹೋಗಿ ಸಮಾಜದಲ್ಲಿ ಧರ್ಮ ಸಾಮರಸ್ಯ ಸ್ಥಾಪಿತವಾದಂತೆಯೇ ಸಮಾಜ ಧರ್ಮದ ಸಾಪೇಕ್ಷತೆ ಹೋಗಿ ಮಾನವ ಧರ್ಮನಿರ್ಣಯವಾಗುವುದು. ವ್ಯಕ್ತಿ ತನ್ನ ಪ್ರತ್ಯೇಕತೆಯನ್ನು ತ್ಯಜಿಸಿ ಸಮಾಜದ ಅಂಗವಾದಂತೆಯೇ ಸಮಾಜಗಳೂ ತಮ್ಮ ಪ್ರತ್ಯೇಕತೆಯನ್ನು ತ್ಯಜಿಸಿ ಇಡಿ ಮಾನವಜಾತಿಯ ಅಂಗವಾಗಬಹುದು. ಕ್ರಮಶಃ ಧಾರ್ಮಿಕ ಸಾಮರಸ್ಯವು ಬೆಳೆಯುವದರಲ್ಲಿ ವ್ಯಕ್ತಿಯಿಂದ ಸಮಾಜದ ಅಂತಸ್ತಿಗೆ ಬರುವುದು ಒಂದು ಬೆಳವಣಿಗೆ. ಈ ಬೆಳವಣಿಗೆಯಿಂದ ವ್ಯಕ್ತಿ ವೈವಿಧ್ಯ ತಗ್ಗಿದೆ. ಅದರಂತೆ ಮುಂದೆಯೂ ಸಾಮಾಜದಲ್ಲಿನ ವೈವಿಧ್ಯವು ತಗ್ಗಿ ಧರ್ಮಸಾಮರಸ್ಯವು ಸಮಾಜಗಳನ್ನೆಲ್ಲಾ ವ್ಯಾಪಿಸಿ ಬೆಳೆಯುವುದು ಸಂಭವ. (೨) ಇತಿಹಾಸದ ದೃಷ್ಟಿಯಿಂದ ನೋಡಿದರೆ ಎಲ್ಲ ಸಮಾಜಗಳೂ ಯಾವಾಗಲೂ ಅತ್ಯಂತ ಪ್ರತ್ಯೇಕವಾಗಿಲ್ಲ. ಎಷ್ಟೋ ಬೆರೆತುಹೋಗಿವೆ. ಅನಾಗರಿಕರಲ್ಲಿ ಇರುವಷ್ಟು ಪ್ರತ್ಯೇಕತೆ ನಾಗರಿಕರಲ್ಲಿ ಕಂಡುಬಂದಿಲ್ಲ. ಈಜಿಪ್ಟ್ ಸಂಸ್ಕೃತಿ, ಬ್ಯಾಬಿಲೋನಿಯನ್ ಸಂಸ್ಕೃತಿ, ಗ್ರೀಕರ ಸಂಸ್ಕೃತಿ, ರೋಮನರ ಸಂಸ್ಕೃತಿ, ಆಧುನಿಕ ಯೂರೋಪಿನ ಸಂಸ್ಕೃತಿ ಇವು ಅನೇಕ ಜನಾಂಗಗಳ ಸಂಪ್ರದಾಯ, ಮತ, ಆಧ್ಯಾತ್ಮಿಕ ಸ್ಫೂರ್ತಿಗಳ ಸಂಗಮದಿಂದ ಉಂಟಾಗಿವೆ. ಭಾರತದಲ್ಲಿಯೂ ಆರ್ಯದ್ರಾವಿಡ ಸಂಗಮ, ಹಿಂದೂಮುಸ್ಲಿಮ, ಹಿಂದೂ ಐರೋಪ್ಯಸಂಗಮ, ಇವು ಪರಿಣಾಮಕಾರಿಗಳಾದ ಘಟನೆಗಳೇ. ಚೀನಾದಲ್ಲಿ ಪುರಾತನ ಬುದ್ಧಧರ್ಮ, ಕನ್‌ಫೂಸಿಯಸನ ಧರ್ಮ ಮತ್ತು ಆಧುನಿಕ ಪಾಶ್ಚಾತ್ಯಸಂಸ್ಕೃತಿ ಇವು ಜೀವನದ ಚಲನವಲನಗಳಿಗೆ ಕಾರಣವಾಗಿವೆ. ಜಪಾನಿನಲ್ಲಿ ಮೊದಲಿದ್ದ ಸಂಪ್ರದಾಯಗಳು ಆಧುನಿಕ ಪಶ್ಚಿಮ ದೇಶಗಳ ಪದ್ಧತಿಯೊಡನೆ ಬೆರೆತು ಹೊಸ ರೂಪವನ್ನು ಹೊಂದಿವೆ. ಹೀಗೆ ಸಮಾಜಗಳು, ಸಂಸ್ಕೃತಿಗಳು, ಧರ್ಮಭಾವನೆಗಳು ಪರಸ್ಪರ ಮಿಶ್ರವಾಗಿ ಹೊಸ

ರೂಪಗಳನ್ನು ತಾಳುತ್ತವೆ. ಇರುವ ಸಾಂಸ್ಕೃತಿಕ ವೈವಿಧ್ಯವನ್ನು ಕಡಿಮೆಮಾಡುತ್ತವೆ. ಧರ್ಮಭಾವನೆಯಾಗಲಿ ಸಂಸ್ಕೃತಿಯಾಗಲಿ ತನ್ನ ಸಾಪೇಕ್ಷತೆಯನ್ನು ಹೋಗಲಾಡಿಸಿಕೊಳ್ಳುವುದು ಇತಿಹಾಸರಂಗದಲ್ಲಿ ವಿಶೇಷವಾಗಿ ನಿರ್ದೇಶಗೊಂಡಿದೆ. ವೈಯಕ್ತಿಕ ಸಾಪೇಕ್ಷತೆ ಸಮಾಜ ಧರ್ಮಸಾಮರಸ್ಯದಲ್ಲಿ ಹೇಗೆ ಕೊನೆಗೊಳ್ಳುವುದೊ ಹಾಗೆಯೇ ಸಾಮಾಜಿಕ ಸಾಪೇಕ್ಷತೆ ಮಾನವಧರ್ಮ ಸಾಮರಸ್ಯದಲ್ಲಿ ಕೊನೆಗೊಳ್ಳುವ ಮಾರ್ಗ. ಈ ಐತಿಹಾಸಿಕ ಸಂಗಮಗಳಿಂದ ಸೂಚಿತವಾಗುವ ತೀರ್ಮಾನ ಹೀಗೆ: **ಜೀವನದ ಮೂಲತತ್ವವನ್ನನುಸರಿಸಿ ಧರ್ಮಜೀವನ ವೃದ್ಧಿಹೊಂದುತ್ತಿದೆ. ಈ ವೃದ್ಧಿಯಲ್ಲಿ ಕ್ರಮವಾಗಿ ವೈವಿಧ್ಯ ಹೋಗುವುದೇ ನಿಯಮ. ಅಂದ ಮೇಲೆ ಧಾರ್ಮಿಕ ಸಾಪೇಕ್ಷತೆ ಮಾನವನ ಅಪೂರ್ಣತೆಯ ಕಾರ್ಯ. ಈ ಅಪೂರ್ಣತೆಯನ್ನು ನಾವು ಗೆದ್ದಂತೆಲ್ಲ ಏಕರೂಪವಾದ ಧರ್ಮ ನಮ್ಮ ಲಕ್ಷಣಗಮ್ಯವಾಗುವುದು.**

೪. ಸಾಪೇಕ್ಷತಾವಾದಿಗಳು ಬೇರೆಬೇರೆ ಸಮಾಜಗಳ ಧರ್ಮ ಸಂಪ್ರದಾಯಗಳ ಭೇದಗಳನ್ನು ನ್ಯಾಯವಲ್ಲದಷ್ಟು ಒತ್ತಿ ಹೇಳಿದ್ದಾರೆ. ಎಷ್ಟೇ ಭೇದವಿದ್ದರೂ ಕೆಲವು ಮುಖ್ಯವಾದ ಅಭಿನ್ನಾಂಶಗಳು ಎಲ್ಲ ಧರ್ಮಮಾರ್ಗಗಳಲ್ಲಿಯೂ ಕಂಡುಬರುತ್ತವೆ. ಕೆಲವು ಉದಾಹರಣೆಗಳಿಂದ ಇದು ಸ್ಪಷ್ಟಗೊಳ್ಳುವುದು. ಪುರಾತನ ಚೀನಾ ದೇಶದ ಲೊಟ್ಸಿಯವರ ಧರ್ಮಮಾರ್ಗಕ್ಕೂ ಬಹಳ ಕಾಲಾನಂತರ ಗ್ರೀಸ್ ರೋಮ್ ದೇಶಗಳಲ್ಲಿ ಪ್ರಸಿದ್ಧಿಗೆ ಬಂದ ಸ್ಟೋಯಿಕ್ ಪಂಥಕ್ಕೂ ಅನೇಕ ಸಮಾನಾಂಶಗಳಿವೆ. ಬುದ್ಧದೇವನ ಅಷ್ಟಾಂಗಮಾರ್ಗ ಹಿಂದೂಧರ್ಮಶಾಸ್ತ್ರಗಳಲ್ಲಿ ಸಾಧಾರಣ ಧರ್ಮಗಳೆಂದು ಪ್ರಸಿದ್ಧವಾದ ಧರ್ಮಗಳೊಡನೆ ಹೋಲುವುದಲ್ಲದೆ ಕ್ರಿಸ್ತಧರ್ಮದ ಅನೇಕ ಅಂಶಗಳೊಡನೆ ಹೋಲುತ್ತದೆ. ಯೇಸು ಕ್ರಿಸ್ತನ ಪ್ರೇಮವಾದಕ್ಕೂ — ಮುಖ್ಯವಾಗಿ ಯೋಹಾನನ ಸುವಾರ್ತೆಯಲ್ಲಿರುವಂತೆ — ನಮ್ಮ ಭಕ್ತ ಪಂಥಗಳ ಧರ್ಮಕ್ಕೂ ಅಧಿಕ ಸಾಮ್ಯವಿದೆ. ಪ್ಲೇಟೊ ಧರ್ಮಸಿದ್ಧಾಂತಕ್ಕೂ ವೇದಾಂತಿಗಳ ಧರ್ಮವಾದಕ್ಕೂ ಸಮೀಪ. ಮಧ್ಯಕಾಲದ ಯೂರೋಪಿನಲ್ಲಿ ಸನ್ಯಾಸಿಗಳಿಗೆ ನಿರೂಪಿತವಾದ ಧರ್ಮಗಳು ನಮ್ಮ ಹಿಂದೂ, ಬೌದ್ಧ ಮತ್ತು ಜೈನ ಸನ್ಯಾಸಿಗಳ ಧರ್ಮಸಮಯಗಳನ್ನು ಹೋಲುತ್ತವೆ. ಭಗವದ್ಗೀತೆಯ ಧರ್ಮವಾದವು ಆಧುನಿಕ ತತ್ವಶಾಸ್ತ್ರ ಪ್ರತಿಷ್ಠಾಪನಾಚಾರ್ಯನಾದ ಕ್ಯಾಂಟ್ ಮತ್ತು ಅವನ ಅನುಯಾಯಿ ಥಾಮಸ್ ಹಿಲ್ ಗ್ರೀನರ ಧರ್ಮವಾದವನ್ನು ಬಹಳವಾಗಿ ಹೋಲುತ್ತವೆ. ಗೀತೆಯಲ್ಲಿ ಉಕ್ತವಾಗಿರುವ ಸ್ವಧರ್ಮದ ಶ್ರೇಷ್ಠತೆಯು ಹೇಗಲ್ ಮತ್ತು ಎಫ್. ಎಚ್. ಬ್ರೇಡ್ಲೆಯವರ 'My Station and Its Duties' ಎಂಬ ತತ್ವಕ್ಕೆ ಬೇರೆಯಾದ್ದಲ್ಲ.

ಪರೋಪಕಾರ ಮತ್ತು ಸತ್ಯಜೀವನ (ಅಂದರೆ ಋಜುಜೀವನ)ಗಳನ್ನು ಪ್ರತಿಯೊಂದು ಉತ್ಕೃಷ್ಟ ಧರ್ಮಸಂಪ್ರದಾಯವೂ ಶ್ಲಾಘಿಸಿದೆ. ಇತರರನ್ನು ತನ್ನಂತೆಯೇ ಕಾಣಬೇಕೆಂಬ ಧರ್ಮಶಾಸ್ತ್ರದ ಮೂಲತತ್ವ ಯಾವ ಜನಾಂಗಕ್ಕೂ ತಿಳಿಯದ ತತ್ವವಲ್ಲ. ಆತ್ಮಸಂಯಮವನ್ನೂ ಕಾಮಕ್ರೋಧ ವರ್ಜನೆಗಳನ್ನೂ ಪ್ರತಿಯೊಂದು ಆಧ್ಯಾತ್ಮಿಕ ದರ್ಶನವೂ ಎತ್ತಿ ಹಿಡಿದಿದೆ. ಧರ್ಮವು ಶಾಶ್ವತವಾದ ಶಾಂತಿಯನ್ನು ಕೊಡುತ್ತದೆ. ತಕ್ಷಣಕ್ಕೆ ಪ್ರಿಯವಾದರೂ ಅಧರ್ಮ ಅಂತ್ಯದಲ್ಲಿ ಶ್ರೇಯೋವಿರೋಧಿ ಎಂಬುದು ಯಾವ ಜನಾಂಗದ ವಿಶೇಷ ತತ್ವವೂ ಅಲ್ಲ. ಎಲ್ಲಕ್ಕೂ ಸಾಮಾನ್ಯ. ಸ್ವಾರ್ಥಪರರೂ ಇಂದ್ರಿಯಾರಾಮರೂ ಶ್ರೇಷ್ಠರೆಂದು ಯಾವ ಪಂಥವೂ, ಸಮಾಜವೂ, ಉದ್ಘೋಷಿಸಿಲ್ಲ. ಈ ಮೂಲತತ್ವಗಳ ಆಳವನ್ನೂ ಅವುಗಳ ವಿಶ್ವತೋಪ್ರಾಧಾನ್ಯವನ್ನೂ ಎಲ್ಲ ಜನಾಂಗಗಳೂ ಒಂದೇ ರೀತಿಯ ಉತ್ಸಾಹದಿಂದ ಜಾಗೃತಿಯಿಂದ ಗ್ರಹಿಸಿಲ್ಲದೆ ಇರಬಹುದು. ಆದರೆ ಆ ತತ್ವಗಳು ದಿವ್ಯವೆಂದೂ ಮುಖ್ಯವೆಂದೂ ಪ್ರತಿಯೊಂದು ಜನಾಂಗಕ್ಕೂ ತಿಳಿದಿದೆ.

೬. ಸಾಪೇಕ್ಷತಾವಾದಿಗಳು ಧರ್ಮಾನುಷ್ಠಾನವೆಲ್ಲ ಒಂದೇ ಜಾತಿಗೆ ಸೇರಿದ್ದೆಂದು ಭ್ರಮಿಸುತ್ತಾರೆ. ಪ್ರತಿಯೊಂದು ಜನತೆಯ ಧರ್ಮಜೀವನವೂ ಸಂಪ್ರದಾಯದಿಂದ ಹುಟ್ಟಿ ಬುದ್ಧಿಯಲ್ಲಿ ಕೊನೆಗೆ ನಿಲ್ಲುವುದು. ಧಾರ್ಮಿಕರು ಸಂಪ್ರದಾಯ ಶರಣರಾಗಿರಬಹುದು, ಬುದ್ಧಿ ಶರಣರಾಗಿರಬಹುದು. ಧರ್ಮದ ಈ ಎರಡು ಅಂತಸ್ತುಗಳನ್ನು ಸಾಪೇಕ್ಷತಾವಾದಿಗಳು ಸ್ಫುಟವಾಗಿ ವಿವೇಚಿಸಿದಂತೆ ತೋರುವುದಿಲ್ಲ. ಸಂಪ್ರದಾಯಗಳು ಭಿನ್ನಭಿನ್ನವಾಗಿರಬಹುದು. ಆದರೆ ಸಂಪ್ರದಾಯದಲ್ಲಿ ಅತೃಪ್ತಿ ಹೊಂದಿ ಅದು ಅಯುಕ್ತವೆಂದು ತಿಳಿಯುವ ಅನೇಕ ವ್ಯಕ್ತಿಗಳು ಎಲ್ಲ ದೇಶಗಳಲ್ಲಿಯೂ ಹುಟ್ಟುತ್ತಾರೆ. ಅಧರ್ಮದಿಂದಲೇ ಸಂಪ್ರದಾಯ ವಿರೋಧಿಗಳಾಗುವರು ಸಂಪ್ರದಾಯಕ್ಕಿಂತ ನೀಚರು. ಸಂಪ್ರದಾಯವು ಬೇಕಾದಷ್ಟು ನ್ಯಾಯವಾದಷ್ಟು ಧರ್ಮಿಷ್ಠವಾಗಿಲ್ಲವೆಂದು ಬೇರೆ ಮಾರ್ಗವನ್ನು ಅನುಸರಿಸುವವರು ಸಂಪ್ರದಾಯಕ್ಕಿಂತ ಶ್ರೇಷ್ಠರು. ಕ್ರಾಂತಿಕಾರರಲ್ಲಿ ಎರಡು ವಿಧ: ಸಂಪ್ರದಾಯವನ್ನು ಅಂಧ ದ್ವೇಷದಿಂದ ನೋಡುವವರು ವಿರೋಧವೇ ಪರಮಪುರುಷಾರ್ಥವೆಂದು ತಿಳಿಯಬಹುದು. ಹೊಸದೆಲ್ಲ ಒಳ್ಳೆಯದು, ಹಳೆಯದೆಲ್ಲ ತಪ್ಪೆಂದು ಒರಲಬಹುದು. ಅಂಥವರ ತತ್ವಗಳು ಸಾಪೇಕ್ಷತಾವಾದಿಗಳು ಹೇಳುವಂತೆ ನಿರಪೇಕ್ಷವಲ್ಲ. ನಿಸ್ಸ್ವಾರ್ಥವಲ್ಲ ಸ್ವತಂತ್ರವಲ್ಲ. ಯಾವ ಯಾವುದನ್ನು ವಿರೋಧಿಸಬೇಕೊ ಅದಕ್ಕೆ ಪ್ರತಿಕಕ್ಷಿಯಾದ ತತ್ವಗಳನ್ನು ಅವರು ಪ್ರಚಾರಮಾಡುತ್ತಾರೆ. ಸ್ವತಂತ್ರರೆಂದು ಹೆಮ್ಮೆಪಟ್ಟರೂ ಅವರ ಸಿದ್ಧಾಂತವು ಅವರ ಪೂರ್ವಪಕ್ಷದ ಅಧೀನ. ಅವರ ಪೂರ್ವ ಪಕ್ಷದಲ್ಲಿ

ಇಲ್ಲದಿರುವದನ್ನು ಸೇರಿಸಿ ಅದರ ಹೇಳಿಕೆಯಲ್ಲಿರುವದನ್ನು ಬಿಟ್ಟರೆ ಅವರು ಪ್ರತಿವಾದಿಸುವ ಸಮಗ್ರತತ್ವವೂ ಸಿಕ್ಕುವುದು. ಸಂಪ್ರದಾಯವಿಲ್ಲದೆ ಅವರ ವಾದವೇ ಇಲ್ಲ. ಆದರೆ ಮತ್ತೊಂದು ವಿಧವಾದ ಧಾರ್ಮಿಕ ಕ್ರಾಂತಿ ಸಾಧ್ಯ. ನಮ್ಮ ವಿವೇಚನಾ ಸಾಮರ್ಥ್ಯದಿಂದ ಸಂಪ್ರದಾಯವನ್ನು ಪರಿಶೀಲಿಸಿ ಅದು ಅಪೂರ್ಣವೆಂದೂ ಅಶುದ್ಧವೆಂದೂ ನಿರ್ಣಯಿಸಿ ಬುದ್ಧಿಗಮ್ಯವಾದ ಧರ್ಮತತ್ವಕ್ಕೆ ಅನುಕೂಲವಾದ ಬೇರೆ ಮಾರ್ಗವನ್ನು ಅನುಷ್ಠಾನಕ್ಕೆ ತರುವುದು. ಮೊದಲಿನದು ಕೇವಲ ನಿಷೇಧಮಾರ್ಗ; ಆದುದರಿಂದ ಅಸ್ವತಂತ್ರ. ಇದು ವಿಧಿಮಾರ್ಗ; ಆದುದರಿಂದ ಸ್ವತಂತ್ರ. ತಮ್ಮ ದಾರ್ಶನಿಕ ಮತ್ತು ವೈಜ್ಞಾನಿಕ ಬುದ್ಧಿ ಬಲದಿಂದ ಧರ್ಮವೆಂದು ತೋರಿದ ತತ್ವಕ್ಕೆ ಸಂಪ್ರದಾಯವನ್ನು ಹೋಲಿಸಿ ಅದರ ದೋಷವನ್ನು ತಿಳಿದು, ಆ ದೋಷವಿಲ್ಲದ ಮತ್ತು ನಮಗೆ ತೋರಿದ ಧರ್ಮತತ್ವಕ್ಕೆ ಸರಿಯಾದ ಬೇರೊಂದು ಪಂಥವನ್ನು ಸ್ಥಾಪಿಸುವುದು ಸತ್ಯವಾದ, ಸದ್ರೂಪವಾದ ಕ್ರಾಂತಿ. ಇದು ಸಂಪ್ರದಾಯದ ಅಧೀನವಲ್ಲ. **ಕೇವಲ ಸಂಪ್ರದಾಯ ಶರಣರ ಮಾರ್ಗ ಸ್ವತಂತ್ರವಾದ್ದಲ್ಲ. ಅಂಥ ಕ್ರಾಂತಿಕಾರರ ಮಾರ್ಗವೂ ಸ್ವತಂತ್ರ ಮಾರ್ಗವಲ್ಲ.** ಸಂಪ್ರದಾಯ ವಿರೋಧವೇ ಅದರ ಜೀವವಾದುದರಿಂದ ವಿರೋಧಿಗೆ ಪ್ರತಿಸ್ಪರ್ಧಿಯಲ್ಲದ ತತ್ವಗಳನ್ನು ಅದು ತಿಳಿಯಲಾರದು. **ವಿರೋಧವು ಅದರ ಸೃಷ್ಟಿಯ ಪರಿಚ್ಛೇದವನ್ನು ನಿಯಮಿಸುತ್ತದೆ.**[1]

ವಿಧಿರೂಪವಾದ ಕ್ರಾಂತಿ ಬುದ್ಧಿ ಪ್ರಧಾನವಾದ್ದು. ಸಾಕ್ರೇಟಿಸ್, ಬುದ್ಧ ಇವರು ಇದಕ್ಕೆ ಪ್ರಮುಖ ನಿದರ್ಶನಗಳು. ಬುದ್ಧಿಯು ಸಾಮರಸ್ಯ ಸಾಧಕ. ಯಾವ ಧರ್ಮಮಾರ್ಗವು ಬುದ್ಧಿಪ್ರಧಾನವೊ ಅದು ಏಕರೂಪವಾದ, ಸಂಪ್ರದಾಯ ನಿರಪೇಕ್ಷವಾದ ಧರ್ಮತತ್ವವನ್ನು ನಿರ್ಣಯಿಸಬೇಕು. ಆದರೆ ಬುದ್ಧಿಯೂ ಸಾಪೇಕ್ಷವೆಂದು ಏಕೆ ವಾದಿಸಕೂಡದು? ನಮ್ಮ ಯುಕ್ತಿಗಳೂ ನಮ್ಮ ಸಮಾಜದಿಂದ ಬಂದಿಲ್ಲವೆ? ಬುದ್ಧಿ ಸಾಪೇಕ್ಷವಾದರೆ ಯಥಾರ್ಥಜ್ಞಾನವೆಂಬುದು ಅಸಂಭವವಾಗುವುದು. ಆದರೆ ಏನು? ಭ್ರಮಪ್ರಮಾವ್ಯವಸ್ಥೆಯೇ ನಾಶವಾಗುವುದು. ಇದು ಸ್ವನಾಶಕವಾದ ಮಾರ್ಗ. ಎಲ್ಲಬುದ್ಧಿಯೂ ಸಾಪೇಕ್ಷವಾದರೆ, ಸಾಪೇಕ್ಷವಾದವೂ ಪ್ರಮೆಯಲ್ಲ. ಅದೂ ವೈಜ್ಞಾನಿಕರ, ಸಾಪೇಕ್ಷವಾದಿಗಳ ಸಮಾಜ ವ್ಯವಸ್ಥೆಯ ಆಧಾರದಿಂದ ಬಂದಿರುವದರಿಂದ, ಅದರಲ್ಲೂ ಸತ್ಯವಿಲ್ಲ. ಅದರಲ್ಲೂ ನಿರಪೇಕ್ಷವಾದ ಸತ್ಯವಿಲ್ಲ. **ಅಂದರೆ ಸಾಪೇಕ್ಷವಾದಿಗಳು ಬುದ್ಧಿಯು ನಿರಪೇಕ್ಷ ತತ್ವಗ್ರಾಹಕ ವೆಂದು ಒಪ್ಪಬೇಕು. ಇಲ್ಲದಿದ್ದರೆ ತಮ್ಮ ಧರ್ಮ ಸಾಪೇಕ್ಷತಾವಾದವೂ**

[1] The requirements of opposition condition its creative effort.

**ಸಾಪೇಕ್ಷವೆಂದು ಒಪ್ಪಬೇಕು.** ಈ ಎರಡನೆಯ ದೋಷದಿಂದ ಬಿಡಿಸಿಕೊಳ್ಳಬೇಕಾದರೆ ಬುದ್ಧಿಯ ಸಾಮರ್ಥ್ಯದಿಂದ ಏಕರೂಪವಾದ ಧರ್ಮಲಕ್ಷಣವು ಸಾಧ್ಯವೆಂದು ಒಪ್ಪಬೇಕು. ಆದುದರಿಂದ ಬುದ್ಧಿ ಪ್ರಧಾನವಾದ ಧರ್ಮೋಪದೇಶಗಳೂ ಧರ್ಮಾನುಷ್ಠಾನಗಳೂ ಸಾಪೇಕ್ಷವಲ್ಲ.

೭. ಸ್ಥೂಲವಾಗಿ ಭಾಸವಾಗುವ ಧರ್ಮಸ್ವರೂಪವು ಸಾಪೇಕ್ಷವಾಗಿದ್ದರೂ, ಸೂಕ್ಷ್ಮವಾಗಿ ವಿಮರ್ಶಿಸಿದರೆ ಎಲ್ಲ ಧರ್ಮದರ್ಶನಗಳಿಗೂ ಧರ್ಮಸಂಪ್ರದಾಯಗಳಿಗೂ ಸಾಧಾರಣವಾದ ಧರ್ಮದ ಅತ್ಯಂತ ಮುಖ್ಯವಾದ ಸ್ವರೂಪ ಒಂದಿದೆಯೆಂಬುದು ತಿಳಿದುಬರುತ್ತದೆ. ಇಲ್ಲಿ ಈ ಸ್ವರೂಪವನ್ನು ಸೂಚಿಸಲು ಮಾತ್ರ ಅವಕಾಶವಿದೆ. ಈಶ್ವರವಾದಿಗಳಿಗೆ ಪ್ರಪಂಚದಲ್ಲಿ ಈಶ್ವರನ ಸ್ಥಿತಿ ವ್ಯಾಪಾರಗಳು ಹೇಗೆ ತೋರುವುವೋ ಅದೇ ರೀತಿ ಧರ್ಮವಾದಿಗಳಿಗೆ ಧರ್ಮವು ಜೀವನದಲ್ಲಿ ತೋರುವುದು. ಈಶ್ವರನು ಜಗತ್ತಿಗೆ ಒಂದು ಐಕ್ಯವನ್ನು, ನಿಯಮವನ್ನು, ಒಂದು ಕ್ರಮವನ್ನು, ಒಂದು ಸಾಮರಸ್ಯವನ್ನು ನೀಡುವನೆಂದು ಈಶ್ವರವಾದಿಗಳು ಪ್ರತಿಪಾದಿಸುತ್ತಾರೆ. ಹಾಗೆಯೇ ಧರ್ಮವು ಜೀವನಕ್ಕೆ ಒಂದು ಕ್ರಮವನ್ನೂ ಒಂದು ಐಕ್ಯವನ್ನೂ ಕೊಡುತ್ತದೆ. ನಿರೀಶ್ವರವಾದಿಗಳ ಮತದಲ್ಲಿ ಜಗತ್ತು ಅಪ್ರತಿಷ್ಠಿತವಾಗುವುದೆಂದು ಈಶ್ವರವಾದಿಗಳು ಆಕ್ಷೇಪಿಸುವುದಿಲ್ಲವೆ? ಹಾಗೆಯೇ ಧರ್ಮದ್ರಷ್ಟಾರರು ಧರ್ಮವಿಲ್ಲದಿದ್ದರೆ ಜೀವನವು ಅಪ್ರತಿಷ್ಠಿತವಾಗುವುದು, ಉನ್ಮತ್ತವಾಗುವುದು—ಎಂದು ವಾದಿಸುತ್ತಾರೆ. ಈ ಎರಡು ವಾದಗಳೂ ಒಂದೇ ಎಂದಾಗಲಿ, ನಿಕಟಸಂಬಂಧವುಳ್ಳವೆಂದಾಗಲಿ, ಈಶ್ವರವಾದದಿಂದ ಧರ್ಮವಾದವು ಸ್ಥಾಪಿತವಾಗುವುದೆಂದಾಗಲಿ ನನ್ನ ಅಭಿಪ್ರಾಯವಲ್ಲ. **ಈಶ್ವರನು ಜಗತ್ತನ್ನು ಹೇಗೆ ವ್ಯಾಪಿಸಿ ನಿಯಮಿಸುವನೋ ಹಾಗೆ ಧರ್ಮವು ಜೀವನವನ್ನು ವ್ಯಾಪಿಸಿ ನಿಯಮಿಸಬೇಕು ಎಂಬುದು ಉಪಮಾನ ಮಾತ್ರ.** ಧರ್ಮವು ಬದುಕು ಏಕಮುಖವಾಗುವಂತೆ ಮಾಡುವುದು; ಜೀವನದ ಭಿನ್ನಭಿನ್ನ ವ್ಯಾಪಾರಗಳಿಗೆ ಏಕಧ್ಯೇಯಸಾಧಕತೆಯನ್ನು ಕೊಡುವುದು. ಒಂದು ಕಾವ್ಯದಲ್ಲಿ ಪ್ರತಿಪಾದಿತವಾದ ರಸವು ಏಕಮುಖವಾಗಿರುವಂತೆ, ಒಂದು ಸಿದ್ಧಾಂತವು ಸ್ವವ್ಯಾಹತಿ ಇಲ್ಲದೆ ಪರಸ್ಪರ ಪೋಷಕವಾದ ಪ್ರಮೇಯಗಳನ್ನು ಸಾಧಿಸುವಂತೆ ಜೀವನವು ಒಂದೇ ಪ್ರವಾಹ ವಾಗಬೇಕು. ಅಂದರೆ ಬೇರೆಬೇರೆ ಭಾಗಗಳೆಲ್ಲ ಒಂದು ಇಚ್ಛೆಗೆ ಅಥವಾ ಒಂದು ಶ್ರದ್ಧೆಗೆ ಸ್ಥಾನವನ್ನು ಕೊಟ್ಟು ತಾವು ನಶಿಸಬೇಕೆಂದಲ್ಲ. ಎಲ್ಲ ವ್ಯಾಪಾರಗಳೂ ಒಂದೇ ಶ್ರದ್ಧೆ, ಒಂದೇ ಧ್ಯೇಯಸಾಧನೆಯಲ್ಲಿ, ವಿಧಿಮಾರ್ಗದಲ್ಲಿ ಕೂಡಬೇಕು. ಧರ್ಮವೆಂದರೆ ಆತ್ಮಸಮುಚ್ಚಯವೆನ್ನಬಹುದು. **ಒಂದು ವ್ಯಕ್ತಿಯ ಜೀವನದಲ್ಲಿ ಧರ್ಮವು ಅವನ ಅನೇಕ ಭಾವಗಳ, ಚಿತ್ತವೃತ್ತಿಗಳ, ಸಂಕಲ್ಪಗಳ ಐಕ್ಯ**

**ವನ್ನು, ಅವಿರೋಧವನ್ನು, ಪರಸ್ಪರ ಪೋಷಕತೆಯನ್ನು ಸಾಧಿಸುತ್ತದೆ. ಒಂದು ಸಮಾಜದಲ್ಲಿ ಧರ್ಮವು ಅನೇಕ ವ್ಯಕ್ತಿಗಳ ಐಕ್ಯವನ್ನು, ಅವಿರೋಧ ವನ್ನು, ಪರಸ್ಪರ ಪೋಷಕತೆಯನ್ನು ಸಾಧಿಸುತ್ತದೆ.** ಈ ವಿಧವಾದ ಐಕ್ಯಕ್ಕೆ ಮಾನವನ ಆತ್ಮದಲ್ಲಿ ಒಂದು ಅನಿರ್ವಚನೀಯವಾದ, ಅಸ್ಪಷ್ಟವಾದ ಆದರೆ ನಿವಾರಿಸ ಲಾಗದ ಆಸೆ ಇದೆ, ಉತ್ಸಾಹವಿದೆ. ಆ ಐಕ್ಯವಿಲ್ಲದಿರುವಾಗ ತೀವ್ರವಾದ ಅಶಾಂತಿ ಇರುತ್ತದೆ. ಪ್ರತಿಯೊಂದು ಧರ್ಮಮಾರ್ಗವೂ ಈ ಅಶಾಂತಿಗೆ ಉತ್ತರರೂಪವಾಗಿ ಹುಟ್ಟಿದೆ. ಪ್ರತಿಯೊಂದು ಸಮಾಜದ ಧರ್ಮಸಂಪ್ರದಾಯವೂ ತನ್ನ ಸನ್ನಿವೇಶಗಳಿಗೆ ಅನುಸಾರವಾಗಿ ತನ್ನ ಪರಿಮಿತಿಗೊಳಪಟ್ಟಂತೆ ಈ ಆಸೆಯನ್ನು ಪೂರ್ತಿಮಾಡಲು ಪ್ರಯತ್ನಪಟ್ಟಿದೆ. ಅದರ ವಿಧಿನಿಷೇಧಗಳು ಬೇರೆ ಸಮಾಜಗಳ ವಿಧಿನಿಷೇಧಗಳಿಂದ ಭಿನ್ನವಾಗಿರಬಹುದು. ಆದರೆ ಅದು ಒಂದು ಮಾನವಜಾತಿಗೇ ಸಾಮಾನ್ಯವಾದ ಅಶಾಂತಿಗೆ ಉತ್ತರ. ಆತ್ಮೈಕ್ಯಾನ್ವೇಷಣೆಯು ಮಾನವನ ಒಂದು ದಿವ್ಯ ದುಃಖ. ಧರ್ಮಪದ್ಧತಿಗಳ ಹೊರರೂಪಗಳು ವಿವಿಧವಾಗಿರಬಹುದು. ಅವುಗಳ ಈ ಅಂತರಾರ್ಥ ಮಾತ್ರ ಏಕರೂಪವಾದದ್ದು.

ಎಸ್. ಎಸ್. ರಾಘವಾಚಾರ್.

---

# ಅಶ್ವತ್ಥಾಮನ್

## ವ ಥ

ಗ್ರೀಕ್ ನಾಟಕಕಾರರಲ್ಲಿ ಪ್ರಖ್ಯಾತನಾದ ಸಾಫೋಕ್ಲಿಸ್ ಎಂಬಾತನ 'ಏಜಾಕ್ಸ್' ನಾಟಕದ ರೂಪಾಂತರ, ಅಶ್ವತ್ಥಾಮನ್. ಗ್ರೀಕರ ರುದ್ರ ನಾಟಕದ ರೀತಿಯೂ ರೂಪಲಕ್ಷಣಗಳೂ ಅಚ್ಚಳಿಯದೆ ಇಲ್ಲಿ ನಿಲ್ಲುವುವು ; ಕಥಾವಸ್ತು ಮಹಾಭಾರತದ ಕಥೆಗೆ ಹೊಂದಿಕೊಳ್ಳುವುದು. ಹೊಸ ಕನ್ನಡ ಸಾಹಿತ್ಯಕ್ಕೆ ಹಲವು ಬಗೆಗಳಲ್ಲಿ ಪರಮೋಪಕಾರ ಮಾಡಿರುವ ಪ್ರೊ. ಬಿ. ಎಂ. ಶ್ರೀಕಂಠಯ್ಯನವರು ಕನ್ನಡದಲ್ಲಿ ಈ ವರೆಗೂ ಇಲ್ಲದಿದ್ದ ಕೃತಿಪದ್ಧತಿಯೊಂದನ್ನು ನಿರ್ಮಾಣಮಾಡಿ ಈ ನಾಟಕವನ್ನು ಕನ್ನಡ ಪ್ರಪಂಚಕ್ಕೆ ದಾನಮಾಡಿರುತ್ತಾರೆ.

ಏಜಾಕ್ಸನು ಮಹಾವೀರ, ಪರಾಕ್ರಮಿ, ದೈವವನ್ನೆದುರಿಸಿ ವಿಧಿವಶದಿಂದ ಕಾಲ್ತೊಡರಿ ಬಿದ್ದವನು. ಅವನ ಗತಿಯು ಎಂತಹವರಿಗಾದರೂ ಭಯವನ್ನೂ ಅನುಕಂಪವನ್ನೂ ಉಂಟುಮಾಡುತ್ತದೆ. ಟ್ರೋಜನ್ ದಂಡಯಾತ್ರೆಯಲ್ಲಿ ತೀರಿಹೋದ ಅಕಿಲಿಸ್ಸನ ಅಸ್ತ್ರಗಳನ್ನು ಗ್ರೀಕರು ತನಗೆ ಕೊಡದೆ ಒಡಿಸಿಯಸ್ಸಿನಿಗೆ ಕೊಟ್ಟು ಅವಮಾನಮಾಡಿದುದರಿಂದ ಏಜಾಕ್ಸನು ರೋಷಭೀಷಣನಾಗಿ ತನ್ನ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ನಿದ್ರೆಯಲ್ಲಿದ್ದ ಪ್ರತಿಪಕ್ಷದವರಾದ ಅಗಮೆಮ್ನಾನ್, ಮೆನಿಲೇಯಸ್ ಮೊದಲಾದವರನ್ನು ಸಂಹಾರಮಾಡಲು ಪ್ರಯತ್ನಪಡುವನು. ಆದರೆ ಉಭಯಪಕ್ಷದವರಿಗೂ ಅಧಿದೇವತೆಯಾದ ಅಥೆನೆಯು ಏಜಾಕ್ಸನನ್ನು ಮರುಳ್ಗೊಳಿಸಿ ಮೂಕಪಶುಗಳನ್ನು ಸಂಹಾರಮಾಡುವ ಹಾಗೆ ಮಾಡುವಳು. ಪ್ರಜ್ಞೆ ಬಂದ ಮೇಲೆ ಏಜಾಕ್ಸನು ತನ್ನ ದುಷ್ಕಾರ್ಯವನ್ನೂ ಅದರಿಂದ ತನಗುಂಟಾದ ಅಪಯಶಸ್ಸನ್ನೂ ನೆನೆದು ದುಃಖಿಸಿ ಬಾಳಲಿಷ್ಟಪಡದೆ ತನ್ನ ಸ್ನೇಹಿತರನ್ನೂ—ಮೇಳದವರಾದ ಸಾಲಾಮಿಸ್ಸಿನ ಯೋಧರು, ಹೆಂಡತಿಯಾದ—ಟ್ರೋಜನ್ ದಂಡಯಾತ್ರೆಯಲ್ಲಿ ಸೆರೆಸಿಕ್ಕಿ ಕೆಲವು ಕಾಲದ ಮೇಲೆ ಅವನನ್ನು ವರಿಸಿ ಅವನಿಗೆ ಮಗುವೊಂದನ್ನು ಹಡೆದಿದ್ದ—ಟೆಕ್ಮೇಸಳನ್ನು ಮೋಸಪಡಿಸಿ ಸಮುದ್ರದ ಕರೆಗೆ ಓಡಿ ತನ್ನ ಕತ್ತಿಯ ಮೇಲೆಯೇ ಬಿದ್ದು ಆತ್ಮಹತ್ಯಮಾಡಿಕೊಳ್ಳುವನು. ಆ ಕಾಲಕ್ಕೆ ಸರಿಯಾಗಿ ಅವನ ಸಹೋದರನಾದ ಟ್ಯೂಸರನು ಓಡಿಬಂದು ಏಜಾಕ್ಸಿನ ಶವಸಂಸ್ಕಾರಕ್ಕೆ ಅಡ್ಡಿಬಂದ ಮೆನಿಲೇಯಸ್ ಮತ್ತೂ ಅಗಮೆಮ್ನಾನ್ ಇವರನ್ನು ಎದುರಿಸುವನು. ಅಷ್ಟರಲ್ಲಿ ಒಡಿಸಿಯಸ್ಸನು ಬಂದು ಅಗಮೆಮ್ನಾನನ್ನು ಸಮಾಧಾನಮಾಡಿ ಕರೆದುಕೊಂಡು ಹೋಗುವನು. ಉತ್ತರಕ್ರಿಯೆಯೊಂದಿಗೆ ನಾಟಕವು ಮುಗಿಯುವುದು.

ವಿವರಗಳಲ್ಲಿ ಪೂರ್ಣವಾದ ಐಕ್ಯತೆಯಿಲ್ಲದಿದ್ದರೂ ಮೂಲರೇಖೆಗಳಲ್ಲಿ ಇದರಂತೆಯೇ ಇರುವ ಕತೆಯು ಮಹಾಭಾರತದ ಸೌಪ್ತಿಕಪರ್ವದಲ್ಲಿ ಸಿಕ್ಕುತ್ತದೆ. ಗದಾಯುದ್ಧದಲ್ಲಿ ತೊಡೆಯುಡಿದು ಬಿದ್ದು ಅಂತ್ಯಾವಸ್ಥೆಯಲ್ಲಿದ್ದ ದುರ್ಯೋಧನನ ಚರಮ ಪ್ರಾರ್ಥನೆಯ ಪ್ರಕಾರ ಅಶ್ವತ್ಥಾಮನು ನಿದ್ರಿಸುತ್ತಿದ್ದ ಪಾಂಡವರನ್ನು ಧ್ವಂಸ ಮಾಡುವುದಕ್ಕಾಗಿ ಅರ್ಧರಾತ್ರಿಯಲ್ಲಿ ಹೊರಡುವನು. ದಾರಿಯಲ್ಲಿ ಭೂತಗಣಗಳು ಅಡ್ಡಲಾಗಿ ಬರುವುವು. ಅಶ್ವತ್ಥಾಮನು ರುದ್ರಪ್ರಾರ್ಥನೆಮಾಡಿ ಅವನ ತೃಪ್ತಿಗಾಗಿ ತನ್ನ ಶರೀರವನ್ನೇ ಅಗ್ನಿಯಲ್ಲಿ ಆಹುತಿಮಾಡುವನು. ತೃಪ್ತನಾದ ರುದ್ರನು ಅವನಲ್ಲಿ ಪ್ರಸನ್ನನಾಗಿ ಅವನ ಶರೀರವನ್ನು ಪ್ರವೇಶಿಸಿ ಅಂದು ಅವನು ಅದೃಶ್ಯನಾಗುವಂತೆ ವರವಿತ್ತು ಅಜೇಯವಾದ ಕತ್ತಿಯೊಂದನ್ನು ಅನುಗ್ರಹಿಸುವನು. ಅಶ್ವತ್ಥಾಮನು ಅಲ್ಲಿಂದ ಹೊರಟು ಕೃಪಕೃತವರ್ಮರು ಕೋಟೆಯ ಬಾಗಿಲನ್ನು ಕಾಯುತ್ತಿರಲು ಶಿಬಿರದೊಳಕ್ಕೆ ಪ್ರವೇಶಿಸುವನು. ಇದನ್ನು ತಿಳಿದು ಕೃಷ್ಣನು ಪಾಂಡವರನ್ನು ಶಿಬಿರದ ಹೊರಕ್ಕೊಯ್ಯುವನು. ಅಶ್ವತ್ಥಾಮನು ತನ್ನ ಆವೇಶದಲ್ಲಿ ವಿವೇಕಶೂನ್ಯನಾಗಿ ಧೃಷ್ಟದ್ಯುಮ್ನನ ಕತ್ತನ್ನು ಹಿಂಡಿ ಕೊಂದು ಉಪಪಾಂಡವರನ್ನು ಪಾಂಡವರೆಂದೇ ಭ್ರಮಿಸಿ ಅಳಿದು ಶತ್ರುವೀರರನ್ನೆಲ್ಲ ನಿರ್ಮೂಲಮಾಡಿರುವೆನೆಂಬ ಹೆಮ್ಮೆಯಿಂದ ದುರ್ಯೋಧನನಲ್ಲಿಗೆ ಹೋಗಿ ಆ ವಿಷಯವನ್ನು ಅವನಿಗೆ ತಿಳಿಸುವನು. ಇದರಿಂದ ಸಂತುಷ್ಟನಾದ ಕೌರವನು ಅಶ್ವತ್ಥಾಮನನ್ನು ಭೀಷ್ಮ ದ್ರೋಣ ಕರ್ಣರಿಗಿಂತ ಪ್ರಿಯತಮನೆಂದು ಪ್ರಶಂಸಿಸಿ ಪ್ರಾಣಬಿಡುವನು. ಅಶ್ವತ್ಥಾಮನು ಪಾಂಡವರಿಗೆ ಹೆದರಿ ಓಡುವನು. ಈ ಮಧ್ಯೆ ಪುತ್ರಶೋಕಪೀಡಿತಳಾದ ದ್ರೌಪದಿಯಿಂದ ಪ್ರೇರಿತನಾದ ಭೀಮನು ಅಶ್ವತ್ಥಾಮನನ್ನು ಕೊಲ್ಲಲು ಹೊರಡುವನು. ಅವನನ್ನು ನಿವಾರಿಸಲು ಅವನ ಹಿಂದೆಯೇ ಹೊರಟ ಕೃಷ್ಣಾರ್ಜುನರು ಭೀಮನನ್ನೂ ಅಶ್ವತ್ಥಾಮನನ್ನೂ ಗಂಗಾತೀರದಲ್ಲಿ ಕಾಣುವರು. ಅರ್ಜುನಾಶ್ವತ್ಥಾಮರಿಗೆ ಯುದ್ಧವು ಪ್ರಾರಂಭವಾಗುವುದು. ಈ ಮಧ್ಯೆ ವ್ಯಾಸರು ಪ್ರತ್ಯಕ್ಷರಾಗಿ ಸಮಾಧಾನ ಮಾಡುವರು. ಕೃಷ್ಣನು ಅವನ ಪಾಪಕೃತ್ಯಗಳಿಗಾಗಿ ಅಶ್ವತ್ಥಾಮನನ್ನು ಮುಂದಿನ ಶ್ಲೋಕಗಳಿಂದ ಶಪಿಸುವನು.

ತ್ವಾಂ ತು ಕಾಪುರುಷಂ ಪಾಪಂ ವಿದುಃ ಸರ್ವೇ ಮನೀಷಿಣಃ |
ಅಸಕೃತ್‌ಪಾಪಕರ್ಮಾಣಂ ಬಾಲಜೀವಿತಘಾತಕಮ್ ||

ತಸ್ಮಾತ್ತ್ವಮಸ್ಯ ಪಾಪಸ್ಯ ಕರ್ಮಣಃ ಫಲಮಾಪ್ನುಹಿ |
ತ್ರೀಣಿವರ್ಷ ಸಹಸ್ರಾಣಿ ಚರಿಷ್ಯಸಿ ಮಹೀಮಿಮಾಂ ||

ಅಪ್ರಾಪ್ನುವನ್ ಕ್ವಚಿತ್ ಕಾಂಚಿತ್ ಸಂವಿದಂ ಜಾತು ಕೇನಚಿತ್ |
ನಿರ್ಜನಾನಸಹಾಯಸ್ತ್ವಂ ದೇಶಾನ್ ಪ್ರವಿಚರಿಷ್ಯಸಿ ||

> ಭವಿತ್ರೀ ನ ಹಿ ತೇ ಕ್ಷುದ್ರಜನಮಧ್ಯೇಷು ಸಂಸ್ಥಿತಿಃ |
> ಪೂಯಶೋಣಿತಗಂಧೀ ಚ ದುರ್ಗಕಾಂತಾರಸಂಶ್ರಯಃ ||
> ವಿಚರಿಷ್ಯಸಿ ಪಾಪಾತ್ಮಾ ಸರ್ವವ್ಯಾಧಿ ಸಮನ್ವಿತಃ |

ಅಶ್ವತ್ಥಾಮನು ವ್ಯಾಸರ ಬುದ್ಧಿವಾದದ ಮೇರೆಗೆ ತನ್ನ ಶಿರೋರತ್ನವನ್ನು ಕೊಟ್ಟು ವನವಾಸಕ್ಕೆ ತೆರಳುವನು.

ನಾಯಕನ ಉದಾತ್ತತೆ, ಅವನ ಸೇಡು ತೀರಿಸಿಕೊಳ್ಳುವ ಪ್ರಯತ್ನ, ವಿಧಿವಿಲಾಸ, ನಾಯಕನು ವಿಧಿನಿಯಮಗಳಿಗೆ ವಿರೋಧವಾಗಿ ನಡೆದುದರಿಂದ ಉಂಟಾದ ದುರಂತ ಮೊದಲಾದುವುಗಳಲ್ಲಿ ಎರಡಕ್ಕೂ ಇರುವ ಸಾಮ್ಯವನ್ನು ನೋಡಿ ಗ್ರಂಥಕರ್ತರು ಗ್ರೀಕ್ ರುದ್ರನಾಟಕವನ್ನು ಮಹಾಭಾರತದ ಕತೆಗೆ ಹೊಂದಿಸಿಕೊಂಡು ಭಾರತೀಯ ಸಾಹಿತ್ಯಕ್ಕೆ ಅಪೂರ್ವವಾದ ರುದ್ರನಾಟಕವನ್ನು ಅಶ್ವತ್ಥಾಮನೆಂಬ ಹೆಸರಿನಿಂದ ಕನ್ನಡದಲ್ಲಿ ರಚಿಸಿದ್ದಾರೆ. ಹೀಗೆ ಮಾಡುವುದರಲ್ಲಿ ಅಲ್ಲಿಯ ಪಾತ್ರಗಳು ಭಾರತೀಯರ ಕಲ್ಪನೆಗೆ ಸರಿಹೋಗುವಂತೆ ಮಾರ್ಪಾಡಾಗಿವೆ. ಅವರ ಪರಸ್ಪರ ಸಂಬಂಧವೂ ಬಾಂಧವ್ಯವೂ ವ್ಯತ್ಯಾಸವಾಗಿದೆ. ಈ ಕಾರ್ಯದಲ್ಲಿ ಯಾವ ಒಂದು ಕತೆಯನ್ನೂ ಪೂರ್ಣವಾಗಿ ಅನುಕರಣಮಾಡಿಲ್ಲ. ಆದುದರಿಂದಲೇ ಪಾತ್ರಗಳ ಸ್ವರೂಪದಲ್ಲಿ ಅವುಗಳ ಬೆಳವಣಿಗೆಯಲ್ಲಿ ಎರಡು ಕಡೆಯಲ್ಲಿಯೂ ಇಲ್ಲದ ಹೊಸ ಅಂಶಗಳು ಕಂಡುಬರುವುವು. ಸಾಫೋಕ್ಲಿಸ್ಸಿನ ಪಾತ್ರಗಳನ್ನೇ ತೆಗೆದುಕೊಂಡಿದ್ದರೂ ಅವು ಹೊಸ ಹೆಸರುಗಳಿಂದ ಹೊಸ ಸನ್ನಿವೇಶಕ್ಕೆ ಹೊಂದಿಕೊಂಡು ಮೂಲದಲ್ಲಿರುವುದಕ್ಕಿಂತ ಅತ್ಯಂತ ಉದಾತ್ತವಾಗಿ ಪ್ರಕಾಶಿಸುವುವು. ಅಲ್ಲದೆ ಪರಿವರ್ತಿತ ಪಾತ್ರಗಳು ಮಹಾಭಾರತದ ಕತೆಯ ದೃಷ್ಟಿಯಿಂದಲೂ ವಿಶೇಷ ವ್ಯತ್ಯಾಸವನ್ನು ಹೊಂದಿವೆ. ಮಹಾಭಾರತದಲ್ಲಿ ಕುಂಭಸಂಭವನೆಂದು ಪ್ರಸಿದ್ಧನಾದ ದ್ರೋಣನು ಈ ನಾಟಕದಲ್ಲಿ ಜಮದಗ್ನಿಯ ಮಗಳೂ ಪರಶುರಾಮನ ತಂಗಿಯೂ ಆದ ಭಾರ್ಗವಿಯ ಮಗ. ಮೂಲನಾಟಕದಲ್ಲಿ ಬರುವ ಏಜಾಕ್ಸಿನ ಹೆಂಡತಿಯಾದ ಟೆಕ್ಮೇಸಳ ಸ್ಥಾನವನ್ನು ಆಕ್ರಮಿಸುವವಳು ಭಾರ್ಗವಿ. ದ್ರೋಣ, ಅಶ್ವತ್ಥಾಮ, ಏಕಲವ್ಯರು ಕ್ರಮವಾಗಿ ಮೂಲನಾಟಕದ ಟೆಲಿಮಾನ್, ಏಜಾಕ್ಸ್ ಮತ್ತು ಅವನ ಬಲತಮ್ಮನಾದ ಟ್ಯೂಸರ್. ಗ್ರೀಕ್ ನಾಟಕದ ಸಲಾಮಿಸ್ ಕನ್ನಡದ ಬನವಾಸಿ. ನೌಕದವರಾದ ಅಲ್ಲಿಯ ಯೋಧರು ಇಲ್ಲಿ ಏಕಲವ್ಯನ ಸೈನ್ಯದವರಾದ ಬೇಡಪಡೆಯವರು. ಭಾರತಯುದ್ಧಕ್ಕೆ ಮೊದಲೇ ತೀರಿಹೋದ ಏಕಲವ್ಯನು ಅಶ್ವತ್ಥಾಮನಿಗೆ ಮಿತ್ರನಾಗಿ ಅವನ ಉತ್ತರಕ್ರಿಯಾದಿಗಳನ್ನು ನಡೆಸಿದಂತೆ ಊಹಿಸಿಕೊಂಡಿದೆ. ಗ್ರೀಕ್ ಮೂಲದ ಅಥೇನಿಯೇ ಕನ್ನಡದ ರುದ್ರ. ಮಹಾಭಾರತದ ಸರ್ವಶಕ್ತನಾದ ಕೃಷ್ಣನು ಮೂಲದ ಒಡಿಸಿಯಸ್ಸಿನ ಸ್ಥಾನವನ್ನು ಆಕ್ರಮಿಸಿ

ಸಾಮಾನ್ಯಮಾನವನೂ ರುದ್ರಭಕ್ತನೂ ಆಗಿದ್ದಾನೆ. ಸಾಫೋಕ್ಲಿಸ್ಸಿನ ಆಗಮೆಮ್ನಾನ್ ಮತ್ತು ಮೆನಿಲೇಯಸ್—ಇವರಿಬ್ಬರ ಸ್ಥಾನವನ್ನೂ ಹೊಸ ನಾಟಕದಲ್ಲಿ ಭೀಮನೊಬ್ಬನೇ ಆಶ್ರಯಿಸಿದ್ದಾನೆ. ಭಾರತದಲ್ಲಿ ಬ್ರಹ್ಮಚಾರಿಯಾದ ಅಶ್ವತ್ಥಾಮನಿಗೆ ಈ ನಾಟಕದಲ್ಲಿ — ಅವನ ಹೆಂಡತಿಯ ಹೆಸರನ್ನು ಹೇಳದಿದ್ದರೂ — ರುದ್ರಶಕ್ತಿಯೆಂಬ ಮಗನಿದ್ದಾನೆ.

ಕಥಾವಸ್ತುವಿನಲ್ಲಿಯೂ ಅಶ್ವತ್ಥಾಮನ್ ನಾಟಕವು ಯಾವ ಒಂದು ಮೂಲದ ಅಂಧಾನುಕರಣವಲ್ಲ. ಕಲಾದೃಷ್ಟಿಯಿಂದ ಉತ್ತಮಫಲಗಳನ್ನು ಕೊಡುವ ಭಾಗಗಳ ಸಮೀಕರಣಮಾತ್ರ. ಕತೆಯ ಬಹುಭಾಗವೂ ಅದರ ರೀತಿಯೂ ಆಕಾರವೂ ಗ್ರೀಕ್ ನಾಟಕದ ಹಾಗೆಯೇ ಇದೆ. ಮಹಾಭಾರತದಿಂದ ಸಮಂಜಸವಾಗಿ ಸೇರಿಕೊಳ್ಳುವ ಭಾಗವನ್ನೆಲ್ಲ ಸೇರಿಸಿಕೊಂಡಿದೆ. ಎರಡರಲ್ಲಿಯೂ ಅನವಶ್ಯಕವಾಗಿ ಕಂಡಭಾಗವನ್ನು ಬಿಟ್ಟಿದೆ. ಅಶ್ವತ್ಥಾಮನ ಆತ್ಮಹತ್ಯದ ದೃಷ್ಟಿಯಿಂದ ಭಾರತದಲ್ಲಿ ಬರುವ ದ್ರೌಪದಿಯು ಅರ್ಜುನನನ್ನು ಸಮಾಧಾನಮಾಡುವ ಭಾಗವು ಅನವಶ್ಯಕವಾದುದರಿಂದ ಅದನ್ನು ಬಿಟ್ಟಿದೆ. ಹಾಗೆಯೇ ಗ್ರೀಕ್ ನಾಟಕದ ಉತ್ತರಾರ್ಧದಲ್ಲಿ ಬರುವ ಟ್ಯೂಸರಿಗೂ ಆಗಮೆಮ್ನಾನ್ ಮತ್ತು ಮೆನಿಲೇಯಸ್ — ಇವರಿಗೂ ನಡೆದ ಕಲಹವು ಕಲಾದೃಷ್ಟಿಯಿಂದ ನೀರಸವಾಗಿ ಕಾಣುವುದರಿಂದ ಅದರ ಬಹುಭಾಗವು ಕನ್ನಡನಾಟಕದಲ್ಲಿ ಲುಪ್ತವಾಗಿದೆ. ಇತಿಹಾಸಗಳೆರಡರಲ್ಲಿಯೂ ಪ್ರಧಾನವಾಗಿರುವ ವಿಧಿಪಾರಮ್ಯವೂ ಧಾರ್ಮಿಕ ಆವರಣವೂ ಇಲ್ಲಿ ಪೂರ್ಣವಾಗಿ ಉಳಿದುಬಂದಿದೆ. ಅಲ್ಲದೆ ಗ್ರೀಕ್ ನಾಟಕದ ವೈಶಿಷ್ಟ್ಯವಾದ ಮೇಳವು ಕನ್ನಡ ನಾಟಕದಲ್ಲಿ ಬಹು ಸಹಜವಾಗಿ ಸರಳವಾಗಿ ಸಾಮರಸ್ಯದಿಂದ ಸೇರಿಕೊಂಡಿದೆ.

ಸಾಮೂಹಿಕ ಸಾಮರಸ್ಯವೇ ಗ್ರೀಕ್ ನಾಟಕಗಳ ಜೀವ. ಅಶ್ವತ್ಥಾಮನ್ ನಾಟಕವು ಈ ಗುಣದಿಂದ ಪರಿಪೂರ್ಣವಾಗಿ ಉತ್ತಮ ಕಲಾಕೃತಿಯಾಗಿದೆ. ನಾಟಕದ ಪ್ರಾರಂಭದಿಂದ ಕ್ರಿಯೆಯೆಲ್ಲವೂ ಒಮ್ಮುಖವಾಗಿ ನಡೆದು ದೃಷ್ಟಿಯೆಲ್ಲವೂ ಪ್ರಧಾನವ್ಯಕ್ತಿಯಾದ ಅಶ್ವತ್ಥಾಮನಲ್ಲಿ ಕೇಂದ್ರೀಕೃತವಾಗಿದೆ. ಕತೆಯ ಪ್ರತಿಯೊಂದು ಭಾಗವೂ ಮತ್ತೊಂದರೊಡನೆ ಸಮಪ್ರಮಾಣದಲ್ಲಿ ಹೊಂದಿಕೊಂಡಿದೆ. ಪಾತ್ರರಚನೆ, ಸಂಭಾಷಣೆ, ಮೇಳ, ಗೀತ ಮೊದಲಾದುವುಗಳಲ್ಲಿ ಸಮತೂಕವಿದೆ. ನಾಟಕದ ಯಾವ ಭಾಗವೂ ಗುರಿತಪ್ಪಿ ನಡೆಯುವುದಿಲ್ಲ. ಅಪ್ರಾಸಂಗಿಕವಾದ ಯಾವ ಭಾಗವೂ ಕಂಡುಬರುವುದಿಲ್ಲ. ಕ್ರಿಯೆಯು ಬಿಂದುರೂಪವಾಗಿ ಪ್ರಾರಂಭವಾಗಿ ಕ್ರಮಶಃ ಬೃಹದಾಕಾರವನ್ನು ತಾಳಿ ಕೊನೆಗೆ ಪ್ರಾರಂಭವಾದ ರೀತಿಯಲ್ಲಿಯೇ ನಿಧಾನವಾಗಿ ಮುಗಿಯುವುದು. ಕಥಾವಸ್ತುವು ಅಶ್ವತ್ಥಾಮನ ದುಷ್ಕಾರ್ಯ ಕಥನ

ರೂಪವಾದ ರುದ್ರಕೃಷ್ಣರ ಸಂವಾದದಲ್ಲಿ ಆರಂಭವಾಗಿ ಅಶ್ವತ್ಥಾಮ, ಭಾರ್ಗವಿ, ಮೇಳ — ಮೊದಲಾದವರ ಕಾರ್ಯಗಳಿಂದ ಅಭಿವೃದ್ಧಿಯಾಗಿ ಅಶ್ವತ್ಥಾಮನ ಆತ್ಮ ಹತ್ಯದಲ್ಲಿ ಉಚ್ಚಸ್ಥಾನವನ್ನು ಸೇರಿ ಪುನಃ ಶವಸಂಸ್ಕಾರ ಪ್ರಸಂಗದಲ್ಲಿ ಸ್ವಲ್ಪ ಸ್ವಲ್ಪವಾಗಿ ಇಳಿದು ಶಾಂತಿಯಿಂದ ಕೊನೆಗಾಣುವುದು. ಒಟ್ಟಿನಲ್ಲಿಯೇ ಅಲ್ಲದೆ ಸೂಕ್ಷ್ಮಾಂಶಗಳಲ್ಲಿಯೂ ಸಾಮರಸ್ಯವು ಎದ್ದು ಕಾಣುವುದು. ಏಕಲವ್ಯಭೀಮರ ಸಂವಾದ ಇದಕ್ಕೆ ಉತ್ತಮ ನಿದರ್ಶನ. ನಾಟಕದಲ್ಲಿ ಕ್ರಿಯೈಕ್ಯದಂತೆ ಕಾಲೈಕ್ಯವೂ ಇದೆ. ಕಥೆಯ ವಿಷಯವು ಪ್ರಾತಃಕಾಲ ಪ್ರಾರಂಭವಾಗಿ ಸಂಜೆಯೊಳಗಾಗಿ ಮುಗಿಯುವುದು. ಸ್ಥಳದಲ್ಲಿ ಗೂಡಾರದಿಂದ ಸಮುದ್ರದ ಕರೆಗೆ ಬದಲಾಯಿಸಿದ್ದರೂ ನಾಟಕದ ಐಕ್ಯತೆಗೆ ಯಾವ ಕುಂದೂ ಉಂಟಾಗಿಲ್ಲ.

ಪ್ರಾಚೀನ ಇತಿಹಾಸಗಳೆರಡರ ಮೇಲನದ ಫಲವಾಗಿ ಅಶ್ವತ್ಥಾಮನ್ ನಾಟಕದ ಪಾತ್ರಗಳ ಘನತೆಯು ಬಹುಮಟ್ಟಿಗೆ ಹೆಚ್ಚಿದೆ. ನಾಯಕನಾದ ಅಶ್ವತ್ಥಾಮನು ಮಹಾಭಾರತದ ಪ್ರಕಾರ ತನ್ನ ಸರ್ವಸ್ವವಾದ ಶಿರೋರತ್ನವನ್ನು ಕಳೆದುಕೊಂಡು ಅವಮಾನದಿಂದ ತಲೆತಪ್ಪಿಸಿಕೊಂಡು ಅಲೆಯುವುದಕ್ಕೆ ಬದಲು ತನ್ನ ಆತ್ಮಹತ್ಯದ ಮೂಲಕ ಮನುಷ್ಯತ್ವದಿಂದ ದೇವತ್ವಕ್ಕೆ ಏರಿದ್ದಾನೆ. ಪಾತ್ರರಚನಾದೃಷ್ಟಿಯಿಂದ ಈ ಪಾತ್ರವು ಬಹು ತೃಪ್ತಿಕರವಾಗಿದೆ. ಈತನು 'ವೀರಸಿರಿಯ ಮಂಗಳದ ಕಳಶವಾಗಿದ್ದ ಲೋಕೈಕಬಾಣನಾದ ದ್ರೋಣನ' ಒಬ್ಬನೇ ಮಗ. ಬಾಲ್ಯದಲ್ಲಿಯೇ ತಾಯಿಯನ್ನು ತಿಂದುಕೊಂಡ. ಬಡತನದಲ್ಲಲೆಯುವ ತಂದೆಯೊಡನಿದ್ದು ಅಸ್ತ್ರವಿದ್ಯಾಪಾರಂಗತನಾಗಿ ರುದ್ರನ ಪ್ರಿಯಶಿಷ್ಯನಾದ. ಆದರೂ ಮೊದಲಿಂದಲೂ ಯಾರ ನೆರವನ್ನು ಬಯಸದೆ ಸ್ವಶಕ್ತಿಯಲ್ಲಿಯೇ ಪೂರ್ಣ ನಂಬಿಕೆಯನ್ನಿಟ್ಟದ್ದವನು. ಆತ್ಮಾಭಿಮಾನ ಹಿರಿದು. ಬಾಲ್ಯದಲ್ಲಿ ತಂದೆ ಪರಸಿ 'ಬಿಲ್ ಜಾಣನಾದೆ, ಗೆಲ್ ಮೊದಲೆಱಗಿ ದೇವತೆಗಳಿಗೆ — ಪೌರುಷದೆ ಗೆಲ್' ಎನಲು 'ದೇವತೆಯ ಬಲಮಿರ್ದೊಡಯ್ಯ್ಯಾ ಪೇಡಿಯುಂ ಗೆಲ್ದಪನ್, ಅವರ್ಗಳ ನೆರಂಬಾರದೆ ಆ ಗೆಲ್ಲವೆಣ್ಣ ಮುಂದಲೆಯನ್ ಈಡ್ವೆನ್,' ಎಂದು ತನ್ನ ಆತ್ಮಪೌರುಷವನ್ನೇ ಬಲ್ವಿಡಿವಿಡಿದು ನುಡಿದವನು. ಆತನು ಕೆಚ್ಚೆರ್ದೆಯ ಶೂರ, ಪಗೆಗೆ ತೆಗೆಯದಾ ರಣದ ಧೀರ, ರುದ್ರಾವತಾರ; ತಂದೆಯೊಡನೆ ಬಾಲ್ಯದಲ್ಲಿಯೇ ಕುರುಕ್ಷೇತ್ರಕ್ಕೆ ಬಂದು ದುರ್ಯೋಧನನ ಆಶ್ರಯವನ್ನು ಪಡೆದು ಮಹಾಭಾರತದ ಯುದ್ಧದಲ್ಲಿ ಪರಾಕ್ರಮದಿಂದ ಕಾದಿದ. ಪ್ರಯೋಜನವೇನೂ ಆಗಲಿಲ್ಲ. ತಂದೆಯು ಭಸ್ಮನಾದ. ಸ್ವಾಮಿಯಾದ ದುರ್ಯೋಧನನು ಗದಾಯುದ್ಧದಲ್ಲಿ ತೊಡೆಯುಡಿದು ಗತಪ್ರಾಣನಾದ. ಅಶ್ವತ್ಥಾಮನು ಆ ದುಃಖವನ್ನು ತಡೆದುಕೊಂಡು ಸ್ವಾಮಿಯ ಬಳಿ ಕುಳಿತು ದುಃಖಿಸಿ ಕೊನೆಯಸಲ ನಮಸ್ಕಾರಮಾಡಿ

ಆತನ ತೃಪ್ತಿಗಾಗಿ ಹಗೆಯನ್ನು ರಾತ್ರಿಯವೇಳೆ ಮಲಗಿರುವಾಗ ತೀರಿಸಲು ಹೊರಡು
ವನು. ರುದ್ರನು ಪ್ರತ್ಯಕ್ಷನಾಗಿ ಕೆಲರನ್ನುಳಿದು ಪಾಂಡವಲೋಕಕ್ಕೆ ಪ್ರಳಯವ
ನ್ನುಂಟುಮಾಡಬಹುದೆನ್ನಲು ಅಶ್ವತ್ಥಾಮನು ಕೆರಳಿ ತನ್ನ ಎಲ್ಲೆಯನ್ನು ಮೀರಿ ರುದ್ರ
ನನ್ನು ಕುರಿತು 'ನೋಡುತಿರು, ನೋಡುತಿರು ಎಲೆ ರುದ್ರ, ದೂರದೊಳ್ ನೋಡುತಿರು,
ವೀರ್ಯಂ ಮಾನುಷಂ ಅದೆಂತಿರ್ಕುಮೆಂಬುದಂ' ಎಂದು ಹೇಳಿ ಮದಿಸಿ ನಗುವನು.—
ಅಶ್ವತ್ಥಾಮನು ಎಂದೂ ಹೀಗೆಯೆ. ಹಿಂದೊಂದುಸಲ ಇದೇ ಮಹಾದೇವ ರುದ್ರನು
ಯುದ್ಧದಲ್ಲಿ ಮೇಲಿದ್ದು 'ಇತ್ತ ಪಗೆ, ಇತ್ತ ಪೊಯ್, ಕೊಳ್ ಗೆಲವನಿತ್ತೆನ್'
ಎಂದುಬ್ಬಿಸುತ್ತಿರಲಾಗಿ ಸಿಡುಕಿನಿಂದಾಳ್ ಆಡಬಾರದುದನಾಡಿ 'ಎಲೆರುದ್ರ ಅದೊ
ಅಪರ ಬೆಂಬಲಂ ಪೋಗು, ಅಶ್ವತ್ಥಾಮನಿರ್ದ ಮೊನೆ ಮುಱಿಯದು' ಎಂದಾಡಿ
ಅಳಾಗಿ ಪುಟ್ಟಿ ಆಳ್ಗೆ ಮೀರಿದ ಪೆರ್ಮೆಬಗೆಗಳಿಂದ ರುದ್ರನ ಕನಲ್ಕೆಯನ್ನು ತಲೆಗೆ ತಂದು
ಕೊಂಡ —. ರುದ್ರನೂ ನಕ್ಕು ಅವನಿಗೆ ಮಾಯವನ್ನು ಬೀಸಿ ಕಣ್ಮುಸುಕಿ ಹೊರಗಡೆ
ಪಶುಗಳಿದ್ದೆಡೆಗೆ ತಿರುಗಿಸುವನು. ಅಶ್ವತ್ಥಾಮನು ಜ್ಞಾನಶೂನ್ಯನಾಗಿ ಪಾಂಡವರಿಗೆ
ಕೃಷ್ಣನಿಗೆ ತೀರಿಸುವ ಮೂದಲೆಗಳನ್ನು ಕೀರಿ ಮೂಕಪಶುಗಳ ರಕ್ತದಲ್ಲಿ ತನ್ನ ಖಡ್ಗ
ವನ್ನು ತೊಯ್ಯಿಸುವನು. ಸ್ವಲ್ಪ ಕಾಲವಾದ ಮೇಲೆ ಕಿರುಕಿರಿದಾಗಿ ಪ್ರಜ್ಞೆ
ಮರಳಿಬರಲು ಸುತ್ತಲೂ ಇದ್ದ ಘೋರದೃಶ್ಯವನ್ನು ನೋಡಿ ಕೂಗಿಕೊಳ್ಳುವನು.
ತಲೆಯ ಕೂದಲುಗಳನ್ನು ಕೀಳುವನು. ತನ್ನ ಮುಂದಿದ್ದ ಹೆಣದ ರಾಶಿಯ ಮೇಲೆ
ದೊಪ್ಪನೆ ಬೀಳುವನು. ತನ್ನ ದುಷ್ಕಾರ್ಯವನ್ನು ನೆನೆನೆನೆದು ನಾನಾ ರೀತಿಯಾಗಿ
ಹಂಬಲಿಸುವನು. ಕೆಚ್ಚೆದೆಯ ಶೂರನಾದ ತಾನು ಅರಿಯದ ಪಶುಗಳನ್ನು ಇರಿದುದು
ಬಹು ಹೇಯವಾಗಿ ಕಾಣುವುದು. ಅಲ್ಲದೆ ಪರಮನೀಚರಾದ ಕೃಷ್ಣಭೀಮರು
ನುಣುಚಿಕೊಂಡರು — ಅವರನ್ನು ಸಂಹಾರಮಾಡುವುದೇ ಅವನ ಪರಮೋದ್ದೇಶ.
ಅದಕ್ಕಾಗಿಯೇ ಅವನು ಮಾಯಾವಿಯಾದ ಕೃಷ್ಣನನ್ನೂ ಕ್ಷುದ್ರನಾದ ಭೀಮನನ್ನೂ
ಕೊಲೆ ಕೊಡೆಂದು ರುದ್ರನನ್ನು ಪ್ರಾರ್ಥಿಸುವುದು. ಅದು ಕೈಗೂಡಿದ ಪಕ್ಷದಲ್ಲಿ ಅದಾದ
ಮೇಲೆ ತನ್ನನ್ನೂ ಬಲಿಕೊಡಲು ಸಿದ್ಧನಾಗಿದ್ದಾನೆ. ಆದರೆ ಅದು ಆಗುವಂತಿಲ್ಲ—
ಪ್ರಭುವಿನ ಶತ್ರುವನ್ನು ಸಂಹಾರಮಾಡಲು ಹೊರಟು ವಿಧಿತೊಡರಿಕೊಳ್ಳಲು ಪಟಿಯ
ಕೆಸರಿನಲ್ಲಿ ಮುಳುಗಿಹೋಗಿದ್ದಾನೆ. ಬಾನವರ ಮಾನವರ ಕಣ್ಣಿನಲ್ಲಿ ಇನ್ನೊಪ್ಪು
ವಂತಿಲ್ಲ. ಪ್ರಿಯತಮ ಸ್ವಾಮಿಯಾದ ರುದ್ರನೂ ನಾನಾ ರೀತಿಯಲ್ಲಿ ಕಾಡುತ್ತಿದ್ದಾನೆ.
ಅಂತ್ಯಕಾಲದಲ್ಲಿ ತಾಯ್ನಾಡಾದ ಕನ್ನಡನಾಡಿನಲ್ಲಿ ಕಣ್ಮುಚ್ಚಲೆಂದಿದ್ದ ಆಶೆಯೂ
ನೆರವೇರುವಂತಿಲ್ಲ. ಬಾಲ್ಯದಲ್ಲಿ ತಂದೆಯೊಡನೆ ಕುರುಕ್ಷೇತ್ರಕ್ಕೆ ಬಂದು ಇಂತಪ್ಪನಿಲ್ಲ
ವೆಂದೆನಿಸಿಕೊಂಡಿದ್ದವನು ಈಗ ಇಂತಪ್ಪನಿಲ್ಲವೆಂದೇ ಆಗಿದ್ದಾನೆ. ಪುಡಿಯೊಳಗೆ

ಪುಡಿಯ ಪುಡಿಯಾಗಿದ್ದಾನೆ. ನಾಣಸುಡಿಯಾಗಿದ್ದಾನೆ. ತನ್ನ ಅದೃಷ್ಟವು ಹೀಗಾದರೆ ಪೂಜ್ಯರಲ್ಲಿ ಪೂಜ್ಯರಾದ ರಾಜಗುರುವಾದ ಧರ್ಮರುಚಿಯಾದ ಯೋಧಾಗ್ರಗಣ್ಯನಾದ ತನ್ನ ತಂಪೆ ದ್ರೋಣಾಚಾರ್ಯರ ಪುಣ್ಯವಾಗಲಿ ಅಪಯಶಸ್ಸಿನಿಂದ ರಕ್ಷಿಸಬಾರದಾಗಿತ್ತೆ? ಅದೂ ಇಲ್ಲ. ನಂಬಿದ ದೇವನೂ ಕೈಬಿಟ್ಟ. ಇಲ್ಲ; ಬದುಕಿನಲ್ಲಾದರೂ ಸುಖವನ್ನು ಕಂಡನೇ? ಅದೂ ಇಲ್ಲ. ಆತ್ಮಕಲ್ಯಾಣವನ್ನೂ ದೂರಮಾಡಿ ಯಾವ ಸ್ವಾಮಿಗಾಗಿ ಪ್ರಾಣವನ್ನು ತೆರಲು ಸಿದ್ಧನಾಗಿದ್ದನೋ ಆ ಸ್ವಾಮಿಯ ಪ್ರಥಮ ಪ್ರೇಮಕ್ಕೆ ತಾನು ಪಾತ್ರನಲ್ಲ; ಕರ್ಣ, ಸೇನಾಧಿಪತ್ಯ, ಶೃಂಗಾರ — ಎಲ್ಲದರಲ್ಲಿಯೂ ಮೊದಲು ಕರ್ಣ; ಉಳಿದ ಎಂಜಲು ಇವನಿಗೆ. ಆದುದರಿಂದ ಈಗ ಅಶ್ವತ್ಥಾಮ ಕಂಡಂತೆ ದೇವರಿಗೆ ಬೇಡದವನು. ವೀರರು ನಗುವ ಪಾಡಾದವನು. ಎಲ್ಲರನ್ನೂ ಪೊರೆಯುವ ಭೂದೇವಿಯೂ ಕೂಡ ಇವನು ಮುಟ್ಟಿದರೆ ಮುನಿಯುವಳು. ದ್ರೋಣ ಪರಶುರಾಮರ ವಂಶದಲ್ಲಿ ಹುಟ್ಟಿ ಹಿಂದೆ ಅವನಿಗಿದ್ದ ಪೆರ್ಮೆನೆತನವೇನು? ಕಲಿತನ ದುರ್ಕೇನು? ಆಳುಗಳ ಸಾಲಿನಲ್ಲಿ ತಲೆಮೆಟ್ಟಿದ ಸೊಕ್ಕೇನು? ಈಗ ಬಂದಿರುವ ದುಃಸ್ಥಿತಿಯೇನು? ಮರಳನ್ನು ಮೆಯ್ಯಲ್ಲಿ ಕೂಡಿಸಿಕೊಂಡು ಒಳಬೇಕಿಲ್ಲದೆ ಕಣ್ ಕರುಡಾಗಿದ್ದಾನೆ. ಇಂತಹವನು ಮುಂದೇನು ಮಾಡಬಹುದು? ಪಾಳೆಯವನ್ನು ಬಿಟ್ಟು ತವರೂರಿಗೆ ಹೋಗಬಹುದೆ? ತಂದೆಯಿಲ್ಲದೆ ಯಾವ ಗೌರವವೂ ಇಲ್ಲದೆ ಇದಿರುಗೊಳ್ಳಲು ಬರುವ ನಂಟರನ್ನು ಯಾವ ಮುಖದಲ್ಲಿ ನೋಡುವುದು. ಅದು ಸಾಧ್ಯವಿಲ್ಲ. ಅಥವಾ ಏಕಾಂಗಸಾಹಸದಿಂದ ವೈರಿಗಳ ಮಧ್ಯೆ ನೇರವಾಗಿ ನುಗ್ಗಿ ನಾನಾಕಡೆಯಿಂದ ಬರುವ ಬಾಣಗಳಿಂದ ಮಡಿಯಬಹುದೇ? ಅದು ಶತ್ರುಗಳಿಗೆ ಸಂತೋಷವಾದ ಕೆಲಸ. ಬಹುಕಾಲದಿಂದ ಅವರು ಬಯಸುತ್ತಿರುವುದೇ ಅದು. ಅದಕ್ಕೆ ಖಂಡಿತ ಅವಕಾಶ ಕೊಡಕೂಡದು. ಆದುದರಿಂದ ಉಳಿದಿರುವ ಮಾರ್ಗವೊಂದೆ. ಏನಾದರೊಂದು ಸಾಹಸಕೃತ್ಯವನ್ನು ಮಾಡಿ ಮಗ ಬಹು ಪರಾಕ್ರಮಶಾಲಿ; ತನ್ನ ಹೃದಯದ ದುಃಖದಿಂದ ತಾನೇ ತನ್ನ ಸಾವನ್ನು ತಂದುಕೊಂಡಿದ್ದಾನೆ, ಎಂಬುದನ್ನು ತನ್ನ ತಂದೆಗೆ ತೋರಿಸಬೇಕೆಂದು ನಿರ್ಧರಿಸುತ್ತಾನೆ. ಎಡಬಿಡದೆ ದುಃಖಗಳು ಮೇಲೆಮೇಲೆ ಆವರಿಸುತ್ತಿರುವಾಗ ಬಾಳನ್ನು ಮುಂದುವರಿಸಲಿಚ್ಛಿಸುವವನು ಹೇಡಿ. ಯೋಗ್ಯನಾಗಿ ಬಾಳಿದವನು ಯೋಗ್ಯನಾಗಿಯೇ ಸಾಯಬೇಕು. ಈ ಸಂದರ್ಭದಲ್ಲಿ ಯೋಗ್ಯವಾದ ಸಾವು ತನ್ನ ಕಯ್ಯಿನ ಸಾವು. ಅದೇ ತನಗಂಟಿದ ಕಱೆಯನ್ನು ತೊಳೆಯಲು ಯೋಗ್ಯವಾದ ಪ್ರಾಯಶ್ಚಿತ್ತ. ಅದನ್ನು ಸರ್ವಪ್ರಯತ್ನದಿಂದ ಹೇಗಾದರೂ ಸಾಧಿಸಿಯೇ ತೀರಬೇಕು. ಅದಕ್ಕೆ ಭಾಗೀರಥಿಯೂ ಮೇಳದವರೂ ಅಡ್ಡಿಯಾಗಿದ್ದಾರೆ. ಆದುದರಿಂದ ಅವರಿಗೆ ಸಮಾಧಾನ ಮಾಡಲು ಯತ್ನಿಸಿ

ಬಿಡಾರಕ್ಕೆ ಹೋಗಿದ್ದವನು ಪುನಃ ಹಿಂತಿರುಗಿ ತಾನು ತನ್ನ ಅಭಿಪ್ರಾಯವನ್ನು ಬದಲಾಯಿಸಿಕೊಂಡಿರುವಂತೆಯೂ ಆತ್ಮಹತ್ಯಕ್ಕೆ ಬದಲಾಗಿ ಅಲ್ಲಿರುವ ಪುಣ್ಯ ತೀರ್ಥಗಳಲ್ಲಿ ಸ್ನಾನಮಾಡಿ ತನ್ನ ಪಾಪವನ್ನು ತೊಳೆದು ಉಗ್ರದೇವತೆಯ ಕೋಪ ವನ್ನು ಹೋಗಲಾಡಿಸುವಂತೆಯೂ ಅಲ್ಲಿಂದ ಮುಂದೆ ಆಳುವವರೂ ಅಧಿಕಾರಿ ಗಳೂ ಆದ ಪಾಂಡವರಿಗೆ ತಗ್ಗಿ ನಡೆಯುವಂತೆಯೂ ಹೇಳಿ ತನ್ನ ಪೊಸಬಗೆಗೆ ಪೊಸತೊಂದು ಕುರುಪಿಟ್ಟು ಹೊರಟುಹೋಗುವನು. ಮೇಳದವರು ಅದನ್ನು ವಾಸ್ತವ ವೆಂದು ತಿಳಿದು ಹಿಗ್ಗಿ ಕುಣಿಯುವರು. ಅಶ್ವತ್ಥಾಮನು ನಿರ್ಜನಪ್ರದೇಶವೊಂದಕ್ಕೆ ಹೋಗಿ ತನಗೆ ಅಭಿಮನ್ಯುವು ಸಮಯುದ್ಧದಲ್ಲಿ ಕೊಡಿಗೆಯಾಗಿ ಕೊಟ್ಟ ಕತ್ತಿಯನ್ನು ನೆಲದಲ್ಲಿ ನೆಟ್ಟು ಕೌರವಕುಲಕ್ಕೆ ಬಂದ ದುಃಸ್ಥಿತಿಯನ್ನು ಆಳ್ಗಳು ಮಾಡಿದ ಅನ್ಯಾಯವನ್ನೂ ನೆನೆದು ತಾನು ಸತ್ತಮೇಲೆ ತನ್ನ ದೇಹವನ್ನೆತ್ತಲು ಏಕಲವ್ಯನನ್ನು ಬರಮಾಡುವಂತೆ ಅನುಗ್ರಹಿಸಬೇಕೆಂದು ರುದ್ರನನ್ನು ಪ್ರಾರ್ಥಿಸಿ ತನ್ನ ತಾಯ್ನಾಡಾದ ಬನವಾಸಿಯನ್ನು ಕುರಿತು ಹಂಬಲಿಸಿ ತಾನೆ ನೆಟ್ಟಿದ್ದ ಕತ್ತಿಯಮೇಲೆ ಬಿದ್ದು ಪ್ರಾಣ ಬಿಡುವನು. (ಮೇಲಿನ ಕೊನೆಯ ಭಾಗದಲ್ಲಿರುವ ಭಾರ್ಗವೀ ಅಶ್ವತ್ಥಾಮರ ಸಂಭಾ ಷಣೆಯೂ ಅಶ್ವತ್ಥಾಮನ ಆತ್ಮಹತ್ಯಾಪ್ರಕರಣವೂ ಮಹಾಭಾರತದಲ್ಲಿಲ್ಲ. ಏಜಾಕ್ಸ್ ನಾಟಕದ ಆಧಾರದ ಮೇಲೆ ಈ ರೀತಿ ಮಾರ್ಪಡಿಸಿಕೊಂಡಿದೆ.)

ಅಶ್ವತ್ಥಾಮನ ಈ ರೀತಿಯಾದ ಚಿತ್ರವು ಭಾರತದ ಅಶ್ವತ್ಥಾಮನಿಗಿಂತ ಉದಾತ್ತವಾಗಿದೆ. ಭಾರತಕ್ಕಿಂತಲೂ ಇಲ್ಲಿ ಅವನ ಕಟ್ಪೋಲ್ಮೆ, ಕಲಿತನ, ಅಡಿದೆಗೆಯ ದಾಳ್ತನ, ಜಗಮನದಿರಿಪಶಕ್ತಿ, ಸ್ವಾಮಿಯೊಳ್ ನೆಱಿಭಕ್ತಿ, ಪುತ್ರವಾತ್ಸಲ್ಯ, ಪಿತೃಭಕ್ತಿ, ಮಿತ್ರಪ್ರೇಮ ಮೊದಲಾದುವು ಬಹು ಸ್ಫುಟವಾಗಿ ಪ್ರಕಾಶಿತವಾಗಿವೆ. ಆದರೂ ತಾನು ಮಾಡಿದ ದುಷ್ಕಾರ್ಯಕ್ಕೆ ಪಶ್ಚಾತ್ತಾಪ ಪಡುತ್ತಿರುವ ಅವನಿಗೆ ಅವನ ದುರಂತವು ಸಹಜವಾಗಿದೆ.

ಅಶ್ವತ್ಥಾಮನ ಪಾತ್ರವನ್ನು ಬಿಟ್ಟರೆ ನಾಟಕದಲ್ಲಿ ನಮ್ಮ ದೃಷ್ಟಿಯನ್ನು ಸೆಳೆಯುವುದು ಭಾರ್ಗವಿಯ ಪಾತ್ರ. ಮೂಲನಾಟಕದ ಟೆಕ್ಮೆಸಳಿಗೂ ಇಲ್ಲಿಯ ಭಾರ್ಗವಿಗೂ ಅಜಗಜಾಂತರ. ಅಲ್ಲಿ ಅವಳು ಟ್ರೋಜನ್ ಯುದ್ಧದಲ್ಲಿ ಸೆರೆಸಿಕ್ಕಿದ ಸಾಮಾನ್ಯ ಸ್ತ್ರೀ. ಮೋಹದಿಂದ ಮನೆವಿಯಾದವಳು. ಅವಳಾಡುವ ಮಾತುಗಳೆಲ್ಲವೂ ಸ್ವಲ್ಪಮಟ್ಟಿಗೆ ಸ್ವಾರ್ಥದಿಂದ ಕಲುಷಿತವಾಗಿದೆ. ಭಾರ್ಗವಿಯಾದರೋ ಅಬಲಮಗು, ತಾಳ್ಮೆತಾಯ್, ಕಲಿಗಳನ್ ಬೆಳೆಸುವುದೆ ಅವಳ ಪಾಲ್ನಲಿವು. ಭೃಗುವಂಶದ ಜಮದಗ್ನಿಯ ಮಗಳು; ಪರುಶುರಾಮನ ತಂಗಿ, ಋಷಿಯಾದ ಭರದ್ವಾಜನ ಕೈಹಿಡಿದು 'ವೀರಸಿರಿಯ ಮಂಗಳದ ಕಳಶವಾದ ಲೋಕೈಕಬಾಣನಾದ ದ್ರೋಣ' ನನ್ನು ಗರ್ಭ

ದಲ್ಲಿ ಧರಿಸುವಳು. ಮಗನ ಮುಖವನ್ನು ಕಾಣುವುದಕ್ಕೆ ಮೊದಲೇ ಯಮನು ಅವಳ ಇನಿಯನನ್ನೊಯ್ದನು. ಪೊತ್ತಮಗನನ್ನು ಪೆತ್ತು ಸಾಕಿಸಲಹಿ ಒಬ್ಬ ಮನುಷ್ಯ ನನ್ನಾಗಿ ಮಾಡಿದಳು. ಬಡತನದಲ್ಲಿ ಅಲೆಯುತ್ತಿದ್ದ ಮಗನಿಗೆ ಅಶ್ವತ್ಥಾಮ ಹುಟ್ಟಿ ಬಾಲ್ಯದಲ್ಲಿಯೇ ತಾಯಿಯನ್ನು ತಿಂದುಕೊಂಡ. ಅಂದಿನಿಂದ ತಬ್ಬಲಿಯನ್ನು ಸಾಕಿ ದಳು. ಭಾರತದ ಪೆರ್ಗಿಚ್ಚಿನಲ್ಲಿ ಮಗನು ಭಸ್ಮವಾದ. ನಿರಾಶ್ರಯಳಾದ ಅವಳ ಬೆಂದೊಡಲಿಗೆ ಅಶ್ವತ್ಥಾಮನೊಬ್ಬನೇ ಉಳಿದಿರುವವನು. ಅವನಲ್ಲಿಯೇ ಅವಳ ಬಾಳು. ಅವನು ಕಲಿಯಾಗಲಿ, ಹೇಡಿಯಾಗಲಿ, ಪುರುಳಾಗಲಿ, ಮರುಳಾಗಲಿ, ಅವನೇ ಅವಳ ಸರ್ವಸ್ವ. ಅವಳು ಯಾವಾಗಲೂ ಅವನೊಡನೆಯೇ ಇರುವವಳು. ಅರ್ಧರಾತ್ರಿಯಲ್ಲಿ ಅಶ್ವತ್ಥಾಮನು ಇರ್ಬಾಯಖಡ್ಗವನ್ನು ತುಡುಕಿ ಗುರಿಯಿಲ್ಲದೆತ್ತಲೋ ತೆರಳುತ್ತಿರಲು ಅವನನ್ನು ತಡೆದು 'ಏನಿದೀ ಪೊಟ್ತು ಅಶ್ವತ್ಥಾಮ ? ಬಟಿಯಟ್ಟದೆ ಕಾಳೆಕೂಗದೇ ಬಟಲ್ದು ಪಡೆಯೆಲ್ಲಮ್ ಒಱಗಿರ್ಕುಮೇ.' ಈ ಹೊತ್ತಿನಲ್ಲಿ ಹೊರಟಿರುವೆಯಲ್ಲಾ ? ಎನ್ನುವಳು. ಅಶ್ವತ್ಥಾಮನು 'ಪೊಯ್ಸೆತ್ತಪಾವಂತೆ ಮೊರೆದು ಪೆಣ್ಬಲ್ಲ ಮಾತಿನೊಳ್ ಬಾಯ್ಮುಚ್ಚಿರಲ್ ಜೆಲ್ವುಪೆಣ್ಣೆಂದು ಗದಱಿ' ನೂಂಕಿ ಹೊರಡಲು ಸುಮ್ಮನಾಗುವಳು. ಅಲ್ಲಿಂದ ಮುಂದಿನ ಅಶ್ವತ್ಥಾಮನ ಘೋರಕೃತ್ಯವನ್ನು ನೋಡಿ ಹೆದರಿ ಮುಂದಾಲೋಚನೆಯಿಂದ ಅವನ ಮಗನಾದ ರುದ್ರಶಕ್ತಿಯನ್ನು ಅವನ ಕಣ್ಣಿಗೆ ಬೀಳದಂತೆ ಮರೆಯಾಗಿಟ್ಟು ಅಶ್ವತ್ಥಾಮನನ್ನು ಸಮಾಧಾನಮಾಡುವಂತೆ ಅವನ ಸ್ನೇಹಿತರಾದ ಮೇಳದವರನ್ನು ಬೇಡಿಕೊಳ್ಳುವಳು. ಅವರ ಸಮಾಧಾನೋ ಕ್ತಿಯು ಅಶ್ವತ್ಥಾಮನ ಆತ್ಮಹತ್ಯದ ದೃಢಪ್ರತಿಜ್ಞೆಯನ್ನು ಚಲಿಸದಿರಲಾಗಿ ತನ್ನ ದುಃಸ್ಥಿತಿಯನ್ನೂ ಅವನ ಕುಲಗೌರವವನ್ನೂ ಅವನ ಮಗನ ಮುಂದಿನ ನಿರಾಶ್ರಯತ್ವ ವನ್ನೂ 'ವಿಶದವಾಗಿ ಅವನ ಮುಂದಿಟ್ಟು ಅವನನ್ನು ಗುರಿಯಿಂದ ಹಿಂತಿರುಗಿಸಲು ಪ್ರಯತ್ನಪಡುವಳು ; ಬೇಡುವಳು ; ಅವಳ ಮಾತುಗಳು ಹೃದಯದ್ರಾವಕವಾಗಿವೆ. ಅಶ್ವತ್ಥಾಮನು ತಪ್ಪಿಸಿಕೊಂಡು ಹೋಗಲು ವಕ್ರೋಕ್ತಿಯಿಂದ ಸಮಾಧಾನ ಮಾಡಿದರೆ ಅವನಲ್ಲಿರುವ ಸಹಜವಾತ್ಸಲ್ಯದಿಂದ ಅದನ್ನು ನಿಜವೆಂದೇ ನಂಬುವಳು. ಆದರೆ ದೂತನು ಬಂದು ದಿವ್ಯಜ್ಞಾನದಿಂದ ಕೃಷ್ಣನು ಅಶ್ವತ್ಥಾಮನ ವಿಷಯದಲ್ಲಾಡಿದ ಮಾತುಗಳನ್ನು ತಿಳಿಸಲು ಅವಳಿಗೆ ಸಿಡಿಲುಬಡಿದಂತಾಗುವುದು. ಪುಸಿದು ನಂಬಿಸಿ ಓಡಿಹೋದನೆಂಬುದನ್ನು ಆಗ ಅರಿತು ಅವನನ್ನು ಹುಡುಕುವುದಕ್ಕೆ ಮೇಳದವರನ್ನು ಕಳುಹಿಸಿ ತಾನೂ ಕುಳ್ಳಿರಲಾರದೆ ಅವರ ಹಿಂದೆಯೇ ಅಲೆದು ಕೊನೆಗೆ ತಾನೇ ನೆಟ್ಟ ಕತ್ತಿಯಮೇಲೆ ಬಿದ್ದು ಪ್ರಾಣಬಿಟ್ಟಿದ್ದ ಅಶ್ವತ್ಥಾಮನನ್ನು ಅವಳೇ ಮೊದಲು ಕಂಡು 'ಮುಟುಗಿದೆನ್, ಕೆಟ್ಟೆನ್, ಪಾಟಾದೆನ್, ಪೋದೆನ್' ಎಂದು ಹಂಬಲಿಸುವಳು.

ಮೇಳದವರು ಬಂದು ಆ ಘೋರಸಂಕಲ್ಪನ ಶರೀರವನ್ನು ನೋಡಬಯಸಿದಾಗ 'ಇದು ಕಣ್ಗೆ ನೋಟಮೆ? ಮೂಗಿನೊಳ್ ತಾನೆ ಇಱಿದೇರ್ಗಳೊಳ್ ರಕ್ತಮನು ಗುಬ್ಬುವದನ್ ಆರ್ ತಾನೆ ನೋಡುವರ್' ಎಂದು ಹೇಳಿ ಕಾಲಿನಿಂದ ತಲೆಯವರೆಗೆ ತನ್ನ ಮೇಲುಡಿಗೆಯಿಂದ ಮುಚ್ಚುವಳು, ದುಃಖಪಡುವಳು; ದೈವವು ಮಾಡಿದ ಪಕ್ಷಪಾತವನ್ನೂ ಪಾಂಡವರ ಅಹಂಕಾರವನ್ನೂ ನೆನೆದು ಅಶ್ವತ್ಥಾಮನು ಇನ್ನು ಅವರ ಕೈಮೀರಿದನೆಂಬ ಅಭಿಪ್ರಾಯದಿಂದ ಸ್ವಲ್ಪ ಸಮಾಧಾನಗೊಳ್ಳುವಳು. ಕಲಾ ದೃಷ್ಟಿಯಿಂದ ಕೆಲವೆಡೆಗಳಲ್ಲಿ ಭಾರ್ಗವಿಯ ಪಾತ್ರರಚನೆಯು ಅಶ್ವತ್ಥಾಮನ ಪಾತ್ರ ವನ್ನು ಮೀರಿಸಿದೆಯೆಂದು ಹೇಳಬಹುದು.

ಕನ್ನಡ ನಾಟಕದ ಕೃಷ್ಣ ಮನುಷ್ಯಮಾತ್ರ. ರುದ್ರಭಕ್ತ; ಆದರೂ ಅವನಲ್ಲಿ ದೈವಿಕವಾದ ಗುಣಗಳಿಲ್ಲದಿಲ್ಲ. ಅವನು ಎಂದಿಗೂ ಸುಳ್ಳಾಡತಕ್ಕವನಲ್ಲ. ಅಶ್ವತ್ಥಾಮನ ದುಷ್ಕಾರ್ಯವನ್ನು ಕೃಷ್ಣನಿಂದ ಕೇಳಿದ ಮೇಳದವರು ಅದನ್ನು ನಂಬದೇ ಇರಲಾರರು. ಅವನ ರುದ್ರಭಕ್ತಿ ಅಗಾಧವಾದುದು. ಅವನು ಎಂದಿಗೂ ರುದ್ರನನ್ನು ಮೀರಿ ನಡೆದಿಲ್ಲ, ಆದುದರಿಂದಲೇ ರುದ್ರನು ಅಶ್ವತ್ಥಾಮನ ಮನೆದೇವರಾದರೂ ಕೃಷ್ಣನ ಮೇಲಿನ ಪ್ರೇಮದಿಂದ ಅವನ ಕೈಬಿಟ್ಟುದು. ಕೃಷ್ಣನ ವಿನಯವೂ ಕಷ್ಟದಲ್ಲಿರುವವರನ್ನು ನೋಡಿ ಮರುಗುವ ಸಹಾನುಭೂತಿಯೂ ಬಹು ಶ್ಲಾಘ್ಯವಾದುದು. ರುದ್ರನು ಕೃಷ್ಣನನ್ನು ಕುರಿತು 'ಏನ್ ಪಿರಿದು ದೈವಬಲಂ ನೋಡಿದೆಯ ಎಲೆ ಕೃಷ್ಣ, ಆರಿರ್ದರ್ ಈತನಿನ್ ಜ್ಞಾನಿಯುಂ ಶೂರನುಂ' ಎಂಬುದಾಗಿ ಅಶ್ವತ್ಥಾಮನ ವಿಷಯವಾಗಿ ಪ್ರಶ್ನೆಮಾಡಿದಾಗ ಇಲ್ಲವೆಂದು ಹೇಳಿದ್ದಲ್ಲದೆ ಅವನ ಗತಿಯನ್ನು ಕಂಡು ಪಗೆಯಾದರೂ ವಿಧಿವಶದಿಂದ ಕಾಲ್ ತೊಡರ್ದು ಬಿದ್ದವನಿಗಾಗಿ ಮರುಗುವನು. ಮನುಷ್ಯನ ಅಸ್ಥಿರತ್ವ ವನ್ನು ಕುರಿತು 'ಇಂದವನ್ ನಾಳೆ ನಾನ್, ಏನ್ ಪಾಡೊ ಆಳ ಬಾಳ್, ಬೀಸುವ ಬಯಲ್‌ಗಾಳಿ, ಪರದಡಂಗುವ ನೆಬಲ್' ಎನ್ನುವನು. ಅವನ ಶಕ್ತಿ ಅಸಾಧ್ಯ ವಾದುದು; ಪ್ರತಿಪಕ್ಷದಲ್ಲಿ ಅವನದೇ ಕೈವಾಡ. ಎಲ್ಲಿ ನೋಡಿದರೂ ಅವನ ಕಣ್ಣು. ಎಲ್ಲೆಲ್ಲಿಯೂ ಅವನದೇ ಕೈ. ಆದುದರಿಂದಲೇ ಅವನನ್ನು ಕೊಲೆಕೊಡ ಬೇಕೆಂದು ಅಶ್ವತ್ಥಾಮನು ರುದ್ರನನ್ನು ಪ್ರಾರ್ಥಿಸಿಕೊಳ್ಳುತ್ತಿದ್ದುದು. ಆದರೂ ಅವನ ಸೌಜನ್ಯವು ಸ್ತೋತ್ರಾರ್ಹವಾದುದು. ತನ್ನ ದಿವ್ಯಜ್ಞಾನದಿಂದ ಅಶ್ವತ್ಥಾಮನ ಕೇಡನ್ನು ಮೊದಲೇ ತಿಳಿದು ಪಲ್ ಮೊರೆವ ಬೀರರನ್ನು ದೂರಕ್ಕಟ್ಟಿ ಏಕಲವ್ಯ ನೊಡನೆ ಮೈತ್ರಿಯಿಂದ ಬಂದು ಅಶ್ವತ್ಥಾಮನನ್ನು ಉಳಿಸಿಕೊಳ್ಳಲು ಆ ಒಂದುದಿನ ಅವನನ್ನು ಒಳಗೆ ಇರಿಸಿಕೊಳ್ಳುವಂತೆ ಹೇಳುತ್ತಾನೆ. ಆದರೆ ವಿಧಿವಿಲಾಸವು ಬೇರೆ ಯಾಗಿತ್ತು. ಅಶ್ವತ್ಥಾಮ ಆತ್ಮಹತ್ಯಮಾಡಿಕೊಳ್ಳುವನು. ಅವನ ಶವಕ್ಕೆ ಪ್ರೇತ

ಸಂಸ್ಕಾರವನ್ನು ಮಾಡಲು ಯತ್ನಿಸಿದ ಏಕಲವ್ಯನನ್ನು ಭೀಮನು ತಡೆಯುವನು. ವಾಗ್ಯುದ್ಧವಾದ ಮೇಲೆ ಮಲ್ಲಯುದ್ಧವು ಪ್ರಾರಂಭವಾಗುವುದು. ಆಗ ಕೃಷ್ಣನು ಎಡೆಯೊಕ್ಕು 'ತೆಗೆತೆಗೆ, ಏಕಲವ್ಯನ್ ಶೂರನ್, ಗುರುಭಕ್ತನ್, ಧಾರ್ಮಿಕನ್, ನಿನಗವನೊಳೇನ್ ಕಲಹಂ? . . . ಹೃದಯಮನ್ ಕಲ್ಮಾಡಿ ತಡೆಯದಿರ್ ಸತ್ತಂಗೆ ಸಡೆವ ಸಂಸ್ಕಾರಮನ್. ದ್ವೇಷಮೆನಿತಿರ್ದೊಡಂ ತುಳಿಯದಿರು ಧರ್ಮಮನ್. ದ್ವೇಷಿಸಿದನಿವನೆನ್ನನ್, ಎನಗೆ ಒದ್ದ ದ್ವೇಷಿ, ಆದೊಡಂ ಗೌರವಂದೋಱುವೆನ್, ಕಲಿಗಳೊಳ್ ಕಲಿಯೆಂದು ಸಾಱುವೆನ್, ಅಭಿಮನ್ಯು ಅವನೊರ್ವನ್, ಇವನೊರ್ವನ್, ಬೆಂಕೆಗಳ್, ಸಿಡಿಲಮಱಿಗಳ್, ರುದ್ರಸಂಶಂಗಳ್; ಇಂತಪ್ಪ ವೀರರನ್ ಕೆಡೆನುಡಿದು ಲಜ್ಜೆಗೆಡುವುದು ತರಮೆ ನಿನ್ನ ಪೆರ್ಮೆಯು ಕಲಿಗೆ? . . . ಕಲಿ ಸಾಯೆ, ಪಗೆಗಳುಂ ಪೊಗೞ್ವುದದು ಶೀಲಂ, ನೋಯಿಸುವುದಲ್ತು', ಎಂದು ಏಕಲವ್ಯನನ್ನೂ ಅಶ್ವತ್ಥಾಮನನ್ನೂ ಬಾಯ್ತುಂಬ ಹೊಗಳುವನು. ಭೀಮನು ಅಷ್ಟಕ್ಕೂ ತೃಪ್ತನಾಗದೆ ಹಾಗೆ ಮಾಡುವುದರಿಂದ ತನ್ನ ಆತ್ಮಗೌರವಕ್ಕೆ ಕುಂದುಂಟಾಗುವುದೆನಲು ಕೃಷ್ಣನು ಅವನನ್ನು ಕುರಿತು 'ಓ ಭೀಮ, ಕೆಳೆಯಂಗೆ ಸೋಲ್ವುದೆ ಜಯಂ, ಕ್ಷಮೆಯೆ ತಾನ್ ಜಯಂ, ಕ್ರೋಧಮಂ ತುಳಿದಿಟ್ಟು ಬಲ್ವಿಡಿದು ಧರ್ಮಮನ್ ಬಗೆಯೊಡನೆ ಪೋರಾಡುವುದೆ ಜಯಂ, ಬಾ ಭೀಮ ಸರ್ವರುಂ ಪೊಗೞುತಿರೆ ಸತ್ಕರಿಸುವಂ, ಬಾರ, ಪೂಜ್ಯನಶ್ವತ್ಥಾಮನನ್' ಎಂದು ಹೇಳಿ ಅವನನ್ನು ಸಮಾಧಾನಮಾಡಿ ಕಳುಹಿಸಿ ಅಶ್ವತ್ಥಾಮನ ಸಂಸ್ಕಾರಕಾರ್ಯದಲ್ಲಿ ತಾನೂ ಭಾಗಿಯಾಗಲು ಏಕಲವ್ಯನ ಅನುಮತಿಯನ್ನು ಕೇಳುವನು. ಅವನು ಅದಕ್ಕೆ ಒಪ್ಪದಿರಲು ರುದ್ರಶಕ್ತಿಯನ್ನು ಆಶೀರ್ವದಿಸಿ ಭಾರ್ಗವಿಯ ಕ್ಷಮಾಶಕ್ತಿಯನ್ನು ಹೊಗಳಿ ತೆರಳುವನು. ಒಟ್ಟಿನಲ್ಲಿ ಅವನು ಮನುಷ್ಯಮಾತ್ರನಾಗಿಯೇ ಕಂಡರೂ ಅವನ ಸದ್ಗುಣಗಳು ಯಾವ ದೇವತೆಗೂ ಕಡಿಮೆಯಾಗಿಲ್ಲ.

ನಾಟಕದ ಇತರ ಪಾತ್ರಗಳಲ್ಲಿ ಗಮನಾರ್ಹವಾದವರು ಏಕಲವ್ಯ ಮತ್ತು ಭೀಮ. ಏಕಲವ್ಯನ ಪಾತ್ರವು ಮೂಲಕ್ಕಿಂತ ಇಲ್ಲಿ ಘನವಾಗಿದೆ: ಮೂಲನಾಟಕದ ಏಜಾಕ್ಸಿನ ಬಲತಮ್ಮನಾದ ಟ್ಯೂಸರಿನ ಭ್ರಾತೃವಾತ್ಸಲ್ಯಕ್ಕಿಂತ ಕನ್ನಡ ನಾಟಕದ ಏಕಲವ್ಯನ ಭಕ್ತಿಯುತವಾದ ಮಿತ್ರಪ್ರೇಮ ಪವಿತ್ರವಾದುದು. ಏಕಲವ್ಯನು ಅಶ್ವತ್ಥಾಮನ ತಂದೆಯ ಶಿಷ್ಯ. ಭಾರತ ಯುದ್ಧದಲ್ಲಿ ದ್ರೋಣಾಚಾರ್ಯರಿಗೆ ಸಹಾಯ ಮಾಡುವುದಕ್ಕಾಗಿ ಬನವಾಸಿಯಿಂದ ತನ್ನ ಬೇಡಪಡೆಯೊಡನೆ ಕುರುಕ್ಷೇತ್ರಕ್ಕೆ ಬಂದವನು. ಆತನು ಅಶ್ವತ್ಥಾಮನ ಪ್ರಿಯಸ್ನೇಹಿತ. ಅವನನ್ನು ನೆರಳಿನಂತೆ ಅನುಸರಿಸುತ್ತಿದ್ದವನು. ಅವನ ಶಕ್ತಿಯ ವಿಷಯದಲ್ಲಿ ಅಶ್ವತ್ಥಾಮನಿಗೆ ಪೂರ್ಣ ನಂಬಿಕೆಯುಂಟು. ಆದುದರಿಂದಲೇ ತನ್ನ ಅಕ್ಕಱಿನ ಪೊಱೆಯಾದ ರುದ್ರಶಕ್ತಿಯನ್ನು ರಕ್ಷಿ

ಸಲು ಅವನನ್ನು ನೇಮಿಸುವನು. ಮತ್ತು ತನ್ನ ಶವವನ್ನು ಮೊದಲೆತ್ತಲು ಅವಸು ಬರುವಂತೆ ಅನುಗ್ರಹಿಸಬೇಕೆಂದು ರುದ್ರನನ್ನು ಪ್ರಾರ್ಥಿಸುವನು. ಏಕಲವ್ಯನಿಗೂ ಅಶ್ವತ್ಥಾಮನಲ್ಲಿ ಅಚಲವಾದ ಭಕ್ತಿಯುತವಾದ ಪ್ರೇಮ — ಅವನ ಸಿಡುಕೂ ಇವನಿಗೆ ಒಂದು ಚೆಲುವಾಗಿಯೇ ಇತ್ತು. ಅಂದು ಅವನನ್ನು ವಿಧಿಯು ಹೊರಗೆಳೆದುಕೊಂಡು ಹೋದುದಕ್ಕಾಗಿ ವಿಶೇಷವಾಗಿ ಮರುಗಿ ವಿಧಿಪಾರವ್ಯವನ್ನು ಒಪ್ಪಿಕೊಂಡು ಅಶ್ವತ್ಥಾಮನ ದೇಹಸಂಸ್ಕಾರವನ್ನೆಸಗಲು ಪ್ರಾರಂಭಿಸುವನು. ಆ ಸಮಯಕ್ಕೆ ಸರಿಯಾಗಿ ಭೀಮನು ಬಂದು ತಡೆಯುವನು. ಆಗ ಅವರಿಬ್ಬರಿಗೂ ನಡೆಯುವ ಸಂಭಾಷಣೆಯು ಬಹು ನಾಟಕೀಯವಾಗಿಯೂ ಹಾಸ್ಯಯುಕ್ತವಾಗಿಯೂ ಇದೆ. ಅವನ ಧರ್ಮಪ್ರೇಮವೂ ಬಿಲ್ಗಾರತನವೂ ಆತ್ಮಗೌರವವೂ ಅಲ್ಲಿ ವಿಶದವಾಗಿ ವರ್ಣಿತವಾಗಿವೆ.

ಭೀಮನಾದರೊ ಕೃಷ್ಣನು ಹೇಳುವಂತೆ ದ್ರೌಪದಿಯ ಕಣ್ಣೀರನ್ನು ಕಂಡು ದುಃಖವನ್ನು ಕ್ರೋಧವನ್ನಾಗಿ ಮಾಡಿ ಮದ್ದಾನೆಯಂತೆ ತೂಗುತ್ತ ಮೊರೆಯುವುದಕ್ಕೆ ಬಂದಿದ್ದಾನೆ. ಬೀಡಿಗೆ ಕೇಳುತ್ತಿದೆ ಅವನ ಕೂಗು. ತನ್ನ ಗದೆಯ ಬಲ್ಮೆಯಿಂದ ಸೊಕ್ಕಿದ್ದಾನೆ. ಅಶ್ವತ್ಥಾಮನ ಶವವನ್ನು ಸಂಸ್ಕಾರಮಾಡದಂತೆ ತಡೆದು ನಾಯಿನರಿ ಹದ್ದುಗಳಿಗಿಡುವದೇ ಅವನೆಣಿಕೆ. ಏಕಲವ್ಯನ ಬೇಡಿಕೆಗಳಾವವೂ ಅವನ ಉದ್ದೇಶವನ್ನು ಕದಲಿಸವು. ಅವನನ್ನು ಬೇಡಕುನ್ನಿ, ಕಾಡಬಿಲ್ಗಾರ, ಅನಾರ್ಯ ಎಂದು ಮೊದಲಾಗಿ ಬಾಯಿಗೆ ಬಂದಂತೆ ಬಯ್ಯುವನು. ಇವನ ಕೂಗನ್ನು ಕೇಳಿ ಓಡಿಬಂದ ಕೃಷ್ಣನ ಧರ್ಮೋಪದೇಶವೂ ಅವನ ಮೇಲೆ ಯಾವ ಪ್ರಭಾವವನ್ನೂ ಬೀರಲಾರದೇ ಹೋಯಿತು. ಇಷ್ಟವಿಲ್ಲದೆ ಕೃಷ್ಣನ ಮಾತಿನಪ್ರಕಾರ ಅಲ್ಲಿಂದ ಹೋಗಬೇಕಾದಾಗಲೂ 'ನಾನ್ ಕ್ಷಮಿಸಲಾಱೆನ್ ಈ ಘೋರನನ್, ಬಾಡೂಳಿಂತಂತೆಯೇ ಸಾವಿನೊಳಂ ಎನಗೆ ಪಗೆ ಇವನೊಳ್' ಎನ್ನುವನು. ಆದುದರಿಂದಲೇ ಅವನು ಏಕಲವ್ಯನ ದೃಷ್ಟಿಯಲ್ಲಿ ಪಶು, ದೈತ್ಯ, ಮತ್ತನೆಂಬುದಾಗಿ ಕಂಡದ್ದು. ಈ ಪಾತ್ರವು ಕೃಷ್ಣನ ಪಾತ್ರಕ್ಕೆ ನೇರವಿರುದ್ಧವಾಗಿರುವಂತೆ ಕಾಣುತ್ತದೆ.

ಅಶ್ವತ್ಥಾಮನ್ ನಾಟಕದ ಶೈಲಿಯ ವಿಷಯದಲ್ಲಿ ಒಂದೆರಡು ಮಾತುಗಳನ್ನಾಡುವುದು ಇಲ್ಲಿ ಅಪ್ರಕೃತವೆನಿಸದು. ಶೈಲಿಯು ಕವಿಯ ವ್ಯಕ್ತಿತ್ವದ ಕುರುಹೆಂಬುದು ಬಲ್ಲವರ ಮಾತು. ಅದು ಇಲ್ಲಿ ಅಕ್ಷರಶಃ ಸತ್ಯವಾಗಿದೆ. ಶ್ರೀಮಾನ್ ಶ್ರೀಯವರ ಪಾಂಡಿತ್ಯ, ದೇಶಭಕ್ತಿ, ಭಾಷಾಭಿಮಾನ, ಲೋಕಾನುಭವ—ಎಲ್ಲವೂ ಅವರ ಶೈಲಿಯಲ್ಲಿ ಕಾಣುತ್ತಿವೆ. ಹಳಗನ್ನಡದಲ್ಲಿ ಬರೆದಿದ್ದರೂ ಭಾವಗಳು ಬಹು ಸ್ಫುಟವಾಗಿವೆ. ಅರ್ಥಕ್ಕೆ ತಿಣಕಬೇಕಾದುದಿಲ್ಲ. ಸಂಸ್ಕೃತದ ಸೊಂಕಿಲ್ಲ. ಮಾತುಗಳು ಕಿವಿಮನ

ಗಳನ್ನು ತಣಿಸುವಂತಿವೆ. ಹೊಸ ಛಂದಸ್ಸಿನ ೩-೪-೫-೬ ಮಾತ್ರೆಯ ಗಣಗಳು—ಅದರಲ್ಲಿಯೂ ಕೊನೆಯದು—ಶ್ರೀಯವರ ಕಯ್ಯಲ್ಲಿ ಬಹಳ ಪಳಗಿವೆ. ಛಂದಸ್ಸಿನಲ್ಲಿ ಓಟವಿದೆ, ರಸವಿದೆ, ನಯವಿದೆ, ಲಯವಿದೆ, ಮಾತಿನ ಕುಣಿತವಿದೆ, ಕೇಳಿದೊಡನೆಯೇ ಭಾವಪರವಶತೆಯನ್ನುಂಟುಮಾಡುವ ಶಕ್ತಿಯಿದೆ. ಮುಂದಿನ ನಾಲ್ಕು ಸಾಲುಗಳೇ ಸಾಕು ಇದನ್ನು ಸಿದ್ಧಾಂತಮಾಡುವುದಕ್ಕೆ :

ಚೆಲ್ವಿನ ನೆಲೆ, ಕಣ್ಗಳ ಬಲೆ, ಸುಖದೊಱತೆಯ ಬನವಾಸೀ,
ಬಳೆದಲೆದಾ ಕಾನ್ ಮಲೆಗಳನ್ ಆನ್ ಮಱೆವೆನೆ, ಬನವಾಸೀ !
ಪೆರ್ಮೆಯ ನೆಲೆ, ಪಡುಗಡಲಲೆ ಸುಖಮುಱಚುವ ಬನವಾಸೀ,
ನೀನ್ ಕಟಿಪಿದ ಪೇರಾಳ್ಗಳದೇನಾದರ್ ಬನವಾಸಿ.

ಈ ನಾಟಕದಲ್ಲಿ ಬರುವ ಮೇಳವು ಕನ್ನಡ ನಾಟಕಕ್ಕೆ ಹೊಸದು. ಇದು ಗ್ರೀಕ್ ನಾಟಕದ ವೈಶಿಷ್ಟ್ಯ. ಗ್ರೀಕ್ ರುದ್ರನಾಟಕಕ್ಕೆ ಇದೇ ಮೂಲವಾಗಿ ಪ್ರಾರಂಭಕಾಲದಲ್ಲಿ ನಾಟಕದ ಬಹುಭಾಗವನ್ನು ಆಕ್ರಮಿಸಿತ್ತು. ಆದರೆ ಕಾಲ ಕ್ರಮದಲ್ಲಿ ಅದರ ಪ್ರಾಮುಖ್ಯತೆ ಕಡಿಮೆಯಾಗಿ ಸಾಫೋಕ್ಲಿಸ್ಸಿನ ಕಾಲಕ್ಕೆ ಅದೊಂದು ಸಂಪ್ರದಾಯವಾಗಿ ಮಾತ್ರ ಉಳಿದಿತ್ತು. ಆದರೂ ಸಾಫೋಕ್ಲಿಸ್ಸನು ಮೇಳದ ಸಂಖ್ಯೆಯನ್ನು ಹದಿನೈದಕ್ಕೆ ಹೆಚ್ಚಿಸಿದನೆಂಬುದು ಕೆಲವರ ಮತ. ಕನ್ನಡ ನಾಟಕದಲ್ಲಿ ಅದರ ಸಂಖ್ಯೆಯನ್ನು ನಿಷ್ಕರ್ಷಿಸದಿದ್ದರೂ ಮೂಲದಲ್ಲಿರುವ ಹಾಗೆಯೇ ಮೇಳನಾಯಕ, ಮೇಳ, ಅರೆಮೇಳಗಳೆಂಬ ಭಾಗಗಳನ್ನು ಉಳಿಸಿಕೊಂಡಿದೆ. ನಾಟಕ ದಲ್ಲಿ ಮೇಳವು ನಟ, ಪ್ರೇಕ್ಷಕ ಮತ್ತು ವಿಮರ್ಶಕನ ಸ್ಥಾನವನ್ನು ಆಕ್ರಮಿಸಿದೆ. ನಾಯಕನ ಮಹತ್ವವನ್ನು ಪ್ರತಿಪಾದಿಸುತ್ತದೆ. ಅವನ ಕಷ್ಟದಲ್ಲಿ ಸಹಾನುಭೂತಿಯನ್ನು ತೋರಿ ಕಣ್ಣೀರಿಡುತ್ತದೆ. ಸುಖದಲ್ಲಿ ಕುಣಿಯುತ್ತದೆ. ನ್ಯಾಯಾನ್ಯಾಯ ವಿಮರ್ಶೆ ಮಾಡುತ್ತದೆ. ದೇಶಪ್ರೇಮವನ್ನೂ ಸ್ವಾಮಿಭಕ್ತಿಯನ್ನೂ ವಿಶದಗೊಳಿಸುತ್ತದೆ. ಇದು ಗ್ರೀಕ್ ತೋಟದಿಂದ ತಂದು ಕಸಿಮಾಡಿದ್ದಾದರೂ ನಮ್ಮ ವೃಕ್ಷದೊಂದಿಗೆ ಸೇರಿಕೊಂಡು ಸಹಜವಾಗಿ ನಮ್ಮದೇ ಆಗಿರುವಂತೆ ಕಾಣುತ್ತಿದೆ. ಇದರಿಂದ ನಾಟ ಕಕ್ಕೆ ಮಹತ್ವವೂ ಸೌಂದರ್ಯವೂ ಉಂಟಾಗಿದೆ.

ಇಲ್ಲಿ ವರ್ಣಿತವಾಗಿರುವ ದೇಶಪ್ರೇಮವು ತಿಳಿಯಾದುದು. ನಾಡನುಡಿಯ ವಿಷಯವಾಗಿ ಬಾಯಿತುಂಬ ಹಾಡುವುದು ಕನ್ನಡ ಸಾಹಿತ್ಯದಲ್ಲಿ ಪ್ರಾಚೀನಕಾಲ ದಿಂದಲೂ ನಡೆದುಬಂದಿರುವ ಸಂಪ್ರದಾಯ. ನೃಪತುಂಗ ಪಂಪಪೊನ್ನರಾದಿಯಾಗಿ ಆಧುನಿಕ ಕವಿಗಳ ವರೆಗೆ ಪ್ರತಿಯೊಬ್ಬರೂ ಆ ಕಾರ್ಯವನ್ನು ಯಶಸ್ವಿಯಾಗಿ ನಡೆಸಿ ಕೊಂಡು ಬಂದಿದ್ದಾರೆ. ಇಲ್ಲಿ ವರ್ಣಿತವಾಗಿರುವುದು ಹಿಂದಿನವಕ್ಕೆ ಯಾವ ರೀತಿ

ಯಲ್ಲಿಯೂ ಕಡಿಮೆಯಿಲ್ಲ. ಅಶ್ವತ್ಥಾಮ ಮತ್ತು ಅವನ ಸ್ನೇಹಿತರು ದಕ್ಷಿಣದೇಶದವರು; ಕನ್ನಡನಾಡಿನವರು; ಬನವಾಸಿಯವರು. ಆ ನಾಡು ಮುನ್ನೀರ್ವೊಱಂಗು ಕರೆನಾಡು, ಮಲೆನಾಡು, ಬಯಲಪೊನ್ನಾಡು, ಅದು ಚೆಲ್ವಿನ ನೆಲೆ, ಕಣ್ಗಳ ಬಲೆ, ಸುಖದೊಱತೆಯ ಬನವಾಸಿ, ಪೆರ್ಮೆಯ ನೆಲೆ, ಪಡುಗಡಲಲೆ ಸುಱಮೆಱಚುವ ಬನವಾಸಿ, ಅದು ಪುಣ್ಯಭೂಮಿ, ನೆಲಸಱಿವ ಬನವಾಸಿ, ತೆಂಗುಗಱು ಕೊಡೆಯಿರ್ಪ ಕಡುಲುಲಿಯ ಮನೆ, ಅಲ್ಲಿ ಬಳೆದಲೆದ ಎಂತಹವನಿಗಾದರೂ ಅಲ್ಲಿ ಕಣ್ಮುಚ್ಚಬೇಕೆಂಬಾಸೆ ಇರುವುದು ಸಹಜವೇ. 'ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದು ಹಿಂದೆ ಪಂಪನು ಘೋಷಿಸಿಲ್ಲವೇ?

ಅಶ್ವತ್ಥಾಮನ್ ನಾಟಕವು ಚಿರಸ್ಥಾಯಿಯಾಗಿರಬಲ್ಲ ಒಂದು ಕಲಾಕೃತಿ. ಅದರಲ್ಲಿ ಮಧ್ಯೆ ಮಧ್ಯೆ ಉಪಯುಕ್ತವಾಗಿರುವ ವಾಕ್ಯಗಳೂ ವಾಕ್ಯಮಾಲೆಗಳೂ ನೀತಿವಾಕ್ಯಗಳಂತೆಯೂ ನಾಣ್ಣುಡಿಗಳಂತೆಯೂ ಜನಮಧ್ಯದಲ್ಲಿ ತಾಂಡವವಾಡಲು ಯೋಗ್ಯವಾಗಿವೆ. ನಾಟಕವು ಭಾಷಾಂತರವೆಂಬ ಭಾವವನ್ನೇ ಮರಸುವಷ್ಟು ಸಹಜವಾಗಿದೆ. "ಒಂದು ಪಗಲೆತ್ತುವುದು, ಒಂದು ಪಗಲುರುಳಿಪುದು ಮಾನುಷಮನೆಲ್ಲಮನ್, ಮಿತಿಯಱಿದು ನೆಗೞ್ವರ್ಗೆ ದೇವರ್ಕಳೊಸೆದಪರ್, ಮುಳಿದಪರ್ ಮಿಕ್ಕರನ್ — ದೈವಂ ತಪ್ಪಾಗಿ ನಡೆಸುವೊಡೆ ಕಲಿ ಎಡಪುವನ್, ಪೇಡಿ ಬರ್ದುಕುವನ್, ನಗುವನ್ — ತಕ್ಕನ್ ತಕ್ಕವೋಲ್ ಬಾೞ್ಪನ್, ತಕ್ಕವೋಲ್ ಸತ್ತಪನ್ — ಪಗೆವನವನೊರ್ವ ಕೆಳೆಯನಪ್ಪನ್ ಕೆಳೆಯೆ ಪಗೆಯಪ್ಪನ್; ಅದಱಿಂದೆ ಕಟ್ಟೊಲ್ಮೆ ತಗದು, ಕಡುಪಗೆಯುಮಾಗದು; ಮನುಜಂಗೆ ಸ್ನೇಹಮೆಂಬುದು ಪುಸಿಯ ನಚ್ಚು — ಇಂದೇನೊ, ಮುಂದೇನೊ, ಮುನ್ನೆ ಆಳ್ ಕಾಣನ್. ಬಂದುದನೆ ಕೊಂಡುಂಡು ತಾಳ್ದಪನೆ ಜಾಣನ್. ರುದ್ರನೊಲ್ದೊಡೆ ಉಟಿವು, ಒಲ್ಲದೊಡೆ ಒಡನಟಿವು; ತಟ್ಟಿ ನಡೆದೊಡೆ ರುದ್ರನೊಲ್ಲದೆಯೆ ಮಾಣನ್, ಅಳವಱಿತು ನಡೆಯೆ ಶಿವನೊಲ್ಲದೆಯೆ ಮಾಣನ್." ಈ ಮೊದಲಾದ ವಾಕ್ಯಗಳು ವಿಶ್ವನಿಯಮಗಳನ್ನು ಪ್ರತಿಪಾದಿಸತಕ್ಕವು. ಇವುಗಳಿಂದಲೂ ಇದುವರೆಗೂ ಸೂಚಿಸಿರುವ ಇತರ ಉತ್ತಮ ಕಾವ್ಯಗುಣಗಳಿಂದಲೂ ಅಶ್ವತ್ಥಾಮನ್ ನಾಟಕವು ಕನ್ನಡ ಸಾಹಿತ್ಯಪ್ರಪಂಚದಲ್ಲಿ ಅಮರವಾಗಿ ನಿಲ್ಲಲು ಅರ್ಹವಾದ್ದು.

ಎನ್. ಅನಂತರಂಗಾಚಾರ್.

# ಗುರುಗಳ ಮಹಿಮೆ

" ಸ್ವಕರ್ಮಸೂತ್ರ ಗ್ರಥಿತೋ ಹಿ ಲೋಕಃ " — ಅಧ್ಯಾತ್ಮ ರಾಮಾಯಣ

---

[ಒಂದು ಸಂಸಾರದಲ್ಲಿ ಬರಿಯ ಹೆಣ್ಣುಮಕ್ಕಳೇ ಇದ್ದರು. ತಾಯಿಗೆ ಒಂದಾದರೂ ಗಂಡುಮಗುವಾಗಲೆಂಬ ಆಸೆ ಇತ್ತು. ಅದು ನೆರವೇರದ್ದರಿಂದ, ಕಡೆಯ ಮಗಳು ಅಳಿಯ ಇವರನ್ನು ಮನೆಯಲ್ಲಿ ಇಟ್ಟುಕೊಂಡು, ಅಳಿಯನನ್ನೇ ಮಗನಂತೆ ಕಂಡುಕೊಂಡಿದ್ದರು. ಹೀಗಿರಲು, ಒಬ್ಬ ಗುರುಗಳು ಕೋರಿದ್ದನ್ನೆಲ್ಲಾ ಕೊಡುತ್ತಾರೆಂದು ಕೇಳಿ, ಅವರಲ್ಲಿ ಸೇವೆಮಾಡಿ, ಆಕೆ ತನಗೆ ಪುತ್ರಸಂತಾನವಾಗಬೇಕೆಂದು ಹಟಹಿಡಿದಳು. ಅವರು ಎಷ್ಟು ಬೇಡವೆಂದರೂ ಕೇಳಲಿಲ್ಲ. ಒಂದು ಹೋಗಿ ಒಂದಾಯಿತು. ತನ್ನ ಹೊಟ್ಟೆಯಲ್ಲೇ ಮಗುವಾಗುವುದಕ್ಕೆ ಬದಲು, ಮಗಳು ಒಂದು ಗಂಡು ಮಗುವನ್ನು ಹೆತ್ತು ತೀರಿಹೋದಳು; ಅದನ್ನು ಸಾಕಿಕೊಳ್ಳುವ ಭಾರ ಆಕೆಯ ಮೇಲೆ ಬಿತ್ತು. ಇದು ಕಥೆ.

ತಾಯಿಯ ಸಂಕಟ, ಗುರುಗಳ ಸಂತಯಿಕೆ, ಇವುಗಳ ಇರುಕಿನಲ್ಲಿ ಕಥೆ ಕಾಣುವುದು ಕಷ್ಟವಾದೀತೆಂದು ಅದರ ಸಂಗ್ರಹವನ್ನು ಕೊಟ್ಟಿದೆ.]

## (೧)

"ಯಾಕೆ ತಾಯಿ, ಹೀಗೆ ಊರುಬಿಟ್ಟು ಸಂಸಾರಬಿಟ್ಟು ಇಲ್ಲಿ ತಿಂಗಳುಗಟ್ಟಲೆ ಒಪ್ಪತ್ತು ವನವಾಸ ಮಾಡಿಕೊಂಡು ಸವೆಯುತ್ತಿದ್ದೀರಿ ?"

" ನನಗೇನಿದೆ ಸಂಸಾರ ? ಮಾಡಿಕೊಂಡು ಹೋಗುವವರು ಹೋಗುತಾರೆ ! "

"ಅದೇಕೆ ತಾಯಿ ಹಾಗಂತೀರಿ ? ತುಂಬಿದ ಸಂಸಾರ. ಗಂಡ, ಮಕ್ಕಳು, ಮೊಮ್ಮಕ್ಕಳು ಬೇಕಾದ ಹಾಗಿದ್ದಾರಲ್ಲ ! "

" ಯಾರಿದ್ದರೇನು, ನನ್ನದು ಅನ್ನುವ ಪದಾರ್ಥ ಒಂದಿಲ್ಲ ! "

" ಅವರೆಲ್ಲ ನಿಮ್ಮವರಲ್ಲವೇ ? "

"ಅದಕ್ಕೇನು ? ಪ್ರಪಂಚವೆಲ್ಲಾ ನನ್ನದೇ ! "

" ಆಹಾ ! ಅದು ಬಹು ದೊಡ್ಡಮಾತು ! ಸತ್ಯವಾದ ಮಾತು ! "

" ಸತ್ಯ ಅಂತ ಕಂಡುಬಂದ ಮೇಲೆ ತಾನೇ ಸತ್ಯ ! "

" ಅಲ್ಲವೆ ಮತ್ತೆ ! "

" ಕಂಡ ಕಂಡವರೆಲ್ಲ ಇಲ್ಲಿ ತುಂಬ ಸತ್ಯ ಇದೆ ಎಂತ ಹೇಳಿದರು. ಅದಕ್ಕಾಗಿ ಬಂದಿದ್ದೇನೆ. ನನಗೂ ಸತ್ಯ ಕಂಡುಬಂದರೆ ತಾನೇ ಸತ್ಯ ? "

" ಅಡ್ಡಿ ಏನು? ಹಾಗೆಂದು ಎಷ್ಟು ದಿವಸ ಮನೆ ಮಠ ಬಿಟ್ಟು ಇಲ್ಲಿರುತ್ತೀರಮ್ಮ?"

" ನನ್ನ ಕೆಲಸವಾಗುವ ತನಕ ! "

" ಆಗುವ ಕೆಲಸ ಎಲ್ಲಿದ್ದರೂ ಆಗುತ್ತೆ ! "

"ಹಾಗಾದರೆ, ದೇವರು ಗುರುಗಳು, ಯಾತ್ರೆ ತೀರ್ಥ, ಸೇವೆ ಪೂಜೆ ಅಂತ ಯಾಕಾಯಿತು?"

"ಎಲ್ಲಾ ಬರಿಯ ಭ್ರಾಂತಿ ತಾಯಿ!"

"ಮತ್ತೆ, ಎಷ್ಟೋಜನ ನಾನು ಇಲ್ಲಿಗೆ ಬಂದ ಮೇಲೆ ಬಂದು ತಮ್ಮ ತಮ್ಮ ಕೆಲಸ ನೆರವೇರಿತು ಅಂತ ಅವರವರ ಊರಿಗೆ ಹೋದರಲ್ಲ?"

"ಅದು ಅವರವರ ಊರಿನಲ್ಲಿದ್ದರೇ ಆಗುತ್ತಿತ್ತು! ಗಿಡದ ಮೇಲೇ ಹಣ್ಣಾಗುತ್ತಿದ್ದದ್ದನ್ನು ಇಲ್ಲಿಗೆ ತಂದು ಅಡೆ ಹಾಕಿಕೊಂಡು ಹೋದರು. ಅಷ್ಟೇಯೆ."

"ನಾನು ಊರಿನಲ್ಲಿದ್ದು ಮಾಡುವುದನ್ನೆಲ್ಲಾ ಮಾಡಿ ಮಾಡಿ ಸಾಕಾಯಿತು; ಹೇಳಿದ ಕೇಳಿದ ವ್ರತವೆಲ್ಲಾ ಆಯಿತು, ಸೋಮಿಯಾಯಿತು, ಪೂಜೆಯಾಯಿತು—ಏನೂ ಫಲವಾಗಲಿಲ್ಲ. ಅದಕ್ಕೋಸ್ಕರ, ನನ್ನ ಕೆಲಸವಾಗುವ ತನಕ—ಎಷ್ಟೇ ದಿನವಾಗಲಿ—ಇಲ್ಲೇ ಇದ್ದುಬಿಡೋಣ ಅಂತ ಮನಸ್ಸು ಗಟ್ಟಿಮಾಡಿಕೊಂಡು ಬಂದುಬಿಟ್ಟಿದ್ದೀನಿ."

"ಅಗತ್ಯವಾಗಿ ಇರಿ ತಾಯಿ! ನನಗೇನು ಭಾರ! ದೇವರ ಸೇವೆ ಕೆಟ್ಟದೇ? ಆದರೆ, ಮನಸ್ಸಿನ ತುಂಬ ಆಸೆ ತುಂಬಿಕೊಂಡು ಮಾಡಿದ ಸೇವೆ ಫಲಿಸುವುದಿಲ್ಲಮ್ಮ!"

"ಇದು ಒಳ್ಳೆಯ ಚೆನ್ನಾಯಿತು! ಸೇವೆ ಮಾಡುವುದೇ ಆಸೆ ಇಟ್ಟುಕೊಂಡಿರುವುದರಿಂದಲ್ಲವೇ? ಆಸೆ ಇಲ್ಲದಿದ್ದರೆ ಯಾರು ದುಡಿಯುತ್ತಿದ್ದರು?"

"ನೀವು ಹೇಳುವುದು ನಿಜ. ಎಲ್ಲರೂ ದುಡಿಯುವುದು ಆಸೆಯಿಟ್ಟುಕೊಂಡೇ. ಆ ದುಡಿತಕ್ಕೆ ಫಲವೇನೋ ಇರುತ್ತೆ. ಆದರೆ ತಮ್ಮ ಆಸೆಯೇ ನೆರವೇರುತ್ತೆ ಎಂಬ ಭರವಸೆ ಮಾತ್ರ ಹೇಳುವುದಕ್ಕಾಗುವುದಿಲ್ಲ!"

"ಈ ಮಾತು ಕೇಳುವುದಕ್ಕೇ ನಾನು ಇಲ್ಲಿಗೆ ಬಂದದ್ದು? ಇಷ್ಟು ದಿವಸ ಸೇವೆಮಾಡಿ? ಇದೇ ಸತ್ಯ?"

"ಸತ್ಯ ಇರುವುದೊಂದೇ ತಾಯಿ! ಯಾವಾಗಲೂ ಒಂದೇ. ಅದು ಬೇಡದವರಿಗೆ ಹಿತವಾಗಿರುವುದಿಲ್ಲ. ಮಿಥ್ಯ ಹಲವು ರೂಪ; ಹಿತ."

"ಸತ್ಯವೋ ಮಿಥ್ಯವೋ, ಹಿತವೋ ಅಹಿತವೋ ನಾನು ಈ ವೇದಾಂತಬೋಧೆಯನ್ನು ಕೇಳುವುದಕ್ಕಲ್ಲ ಇಲ್ಲಿಗೆ ಬಂದದ್ದು! ನನಗೆ ಅದು ಬೇಡ!"

"ಬೇಡ ಅಂದರೆ ಹೇಗೆ ತಾಯಿ? ಕೊನೆಗೆ ಎಲ್ಲರಿಗೂ ದೊರೆಯುವುದು ಅದೇಯೆ; ನಾವು ಬೇಡವೆಂದರೂ ಅದು ಬಿಡುವ ಹಾಗಿಲ್ಲ."

"ಈಗಂತೂ ನನಗೆ ಇನ್ಯಾವುದೂ ಬೇಡ; ನಾನು ಮತ್ತೇನನ್ನೂ ಕೇಳುವುದಿಲ್ಲ."

"ಹಾಗಾದರೆ ನೀವು ಕೇಳುವುದೇನು?"

"ನಾನಾಗಲೇ ಹೇಳಿದೆನಲ್ಲ! ಮತ್ತೆ ಹೇಳಬೇಕೇ? ಇಲ್ಲಿಗೆ ಬಂದರೆ ಯಾರೂ

ಯಾವುದನ್ನೂ ಕೇಳಲೇಬೇಕಾಗಿಲ್ಲ: ಗುರುಗಳ ದೃಷ್ಟಿಬಿದ್ದರೆ ಸಾಕು, ಕೆಲಸವಾಗಿಬಿಡುತ್ತದೆ; ಗುರುಗಳು ಯಾರೊಡನೆಯೂ ಮಾತೇ ಆಡುವುದಿಲ್ಲ — ಎಂದು ಹೇಳಿದ್ದರು!"

"ನಿಜ ತಾಯಿ! ನಾನು ಇದುವರೆಗೆ ಯಾರೊಡನೆಯೂ ಇಷ್ಟು ಮಾತನಾಡಿದ್ದಿಲ್ಲ. ಎಲ್ಲರೂ ಅವರವರ ಕೆಲಸಮಾಡಿಕೊಂಡು ಪ್ರಸಾದ ಪಡೆದು ಹೊರಟು ಹೋಗುತ್ತಿದ್ದರು. ನಾನು ಯಾರಿಗೆ ಏನುಮಾಡಿದೆ? ಏನು ಮಾಡಬಲ್ಲೆ?"

"ಹಾಗಾದರೆ ನನ್ನ ಕೆಲಸ ಆಗುವುದಿಲ್ಲ ಎಂದು ಹೇಳುವುದಕ್ಕೆ ನನ್ನೊಡನೆ ಇಷ್ಟು ಮಾತನಾಡುತ್ತಿದ್ದೀರಾ?"

"ನಾನೇನು ಮಾಡಲಿ ತಾಯಿ? ಕೆಲಸವಾಗುವುದೂ ಬಿಡುವುದೂ ನನ್ನ ಅಧೀನವೇ?"

"ಮತ್ತೆ ಯಾರ ಅಧೀನ?"

"ಭಗವಂತನ ಅಧೀನ!"

"ಅವನಿಂದಲೇ ಮಾಡಿಸಿಕೊಡಿ!"

"ಅವನು ನನ್ನ ಅಧೀನವೇ?"

"ಮತ್ತೆ ಯಾಕೆ 'ಗುರುಗಳು' 'ಗುರುಗಳು' ಎನ್ನುವುದು?"

"ಅದು ಅವರವರ ವಿಶ್ವಾಸ, ಅಷ್ಟೇಯೆ!"

"ಮತ್ತೆ ನನ್ನ ಸೇವೆಗೆ ಫಲವಿಲ್ಲವೇ?"

"ಶ್ರಮಕ್ಕೆ ಫಲವಿಲ್ಲವೇ? ಇದೆ. ಆದರೆ ಆಸೆ ಇಟ್ಟುಕೊಂಡು ಸೇವೆಮಾಡಿದರೆ ಇನ್ನೂ ಕರ್ಮ ಸುತ್ತುಹಾಕಿಕೊಳ್ಳುತ್ತೆ ಅಷ್ಟೆ."

"ಹಾಕಿಕೊಂಡರೆ ಹಾಕಿಕೊಳ್ಳಲಿ!"

"ಅದರಿಂದ ದೇವರಿಗೂ ತೊಡಕಾಗುತ್ತಮ್ಮ!"

"ಆಗಲಿ! ಅವನು ಸೇವೆಮಾಡಿಸಿಕೊಂಡದ್ದು ಸುಮ್ಮನೆಯೇ?"

"ಹಾಗೆ ವ್ಯಾಪಾರಕ್ಕೆ ಹೊರಟರೆ ಅವನು ಕೋಮಟಿಯಾಗುತ್ತಾನೆ!"

"ಆಗಲೇಳಿ!"

"ನಿಮ್ಮ ಸೇವೆ ಸಾಲದು, ಜೊತೆಗೆ ಇನ್ನೇನಾದರೂ ಗಟ್ಟಿ ಸಾಮಾನು ಕೊಡಿ ಎಂದರೆ?"

"ಕೊಡುವುದು!"

"ಏನು ಕೊಡಬಲ್ಲಿರಿ?"

"ಏನು ಬೇಕಾದರೂ."

"ಏನು ಬೇಕಾದರೂ ಕೊಟ್ಟರೆ ಆಗುತ್ತೆಯೇನಮ್ಮ? ನೀವು ಮಕ್ಕಳ

ಫಲವನ್ನು ಕೇಳುತ್ತೀರಿ. ನಿಮಗೆ ಅದು ಸಲ್ಲುವಷ್ಟನ್ನು ದೇವರು ಕೊಟ್ಟುಬಿಟ್ಟಿದ್ದಾನೆ. ಈಗ ಒಬ್ಬ ಮಗನಾದರೆ ಅವನನ್ನು ದೇವರಿಗೆ ಬಿಟ್ಟುಬಿಡುತ್ತೀರಾ?"

"ದೇವರಿಗೆ ಬಿಟ್ಟುಬಿಡುವುದಕ್ಕೇ ಕೇಳುತ್ತಿರುವುದು?"

"ಮತ್ತೇನು ಮಾಡೋಣವಮ್ಮ? ದೇವರು ನಿಮಗೆ ಸಲ್ಲಬೇಕಾದ ಪಡಿಯನ್ನು ಅಳೆದುಬಿಟ್ಟಿದ್ದಾನೆ!"

"ಇರುವುದರಲ್ಲಿಯೇ ಯಾವುದನ್ನಾದರೂ ಕೊಟ್ಟರಾಗದೇ?"

"ಇರುವ ಮಕ್ಕಳು ಯಾರನ್ನು ಕೊಡುತ್ತೀರಿ? ಅವರು ಈಗ ನಿಮ್ಮ ಸ್ವತ್ತೇ? ಅವರನ್ನೆಲ್ಲಾ ಆಗಲೇ ದಾನಮಾಡಿಬಿಟ್ಟಿಲ್ಲವೇ?"

"ದಾನಮಾಡಿದ್ದರೇನು? ಅವರು ನಮ್ಮ ಪದಾರ್ಥವಲ್ಲವೆ?"

"ಹೌದು; ಅಲ್ಲ."

"ಹಾಗಾದರೆ ನನ್ನ ಆಸೆ ನೆರವೇರುವುದಿಲ್ಲ ಅನ್ನಿ!— ನಾನು ಇಲ್ಲಿಯೇ ಇದ್ದು ದೇಹಕೊನೆಗಾಣಿಸುವುದೇ ಸರಿ! ನಾನು ಊರಿಗೆ ಹೋಗಿ ಆಗಬೇಕಾದದ್ದೇನು?"

"ಚೆನ್ನಾಗಿ ಯೋಚನೆಮಾಡಿ ಹೇಳಿ! ದುಡುಕಬೇಡಿ; ಆಮೇಲೆ ನೀವೂ ನಾನೂ ಇಬ್ಬರೂ ಪಶ್ಚಾತ್ತಾಪ ಪಡಬೇಕಾದೀತು!"

"ಈ ಹೆಣ್ಣುಮಕ್ಕಳಲ್ಲಿ ಒಬ್ಬರು ಇಲ್ಲದೆ ಇದ್ದರೂ ಚಿಂತೆಯಿರುತ್ತಿರಲಿಲ್ಲ. . . . ಒಂದು ಗಂಡು. . . ."

"ರಾಮ ರಾಮ! ಏಕಮ್ಮಾ ಹಾಗಂತೀರಿ? ಹೆಣ್ಣುಮಕ್ಕಳು ಮಕ್ಕಳಲ್ಲವೇ?"

"ಅವರೆಂಥ ಮಕ್ಕಳು! ಮಾಡಿಸಿಕೊಳ್ಳುವ ತನಕ ಮಾಡಿಸಿಕೊಳ್ಳುತ್ತಾರೆ; ಆಮೇಲೆ ಹೊರಟುಹೋಗುತ್ತಾರೆ. ನಮ್ಮ ಸಮಯಕ್ಕೆ ಯಾರೂ ಇಲ್ಲ. ಮೊದಮೊದಲು ನಮ್ಮ ಮನೆಯಲ್ಲಿರುವಾಗ ಮಕ್ಕಳು, ಆ ಮೇಲೆ ಗಂಡನ ಮನೆಗೆ ಹೋದ ಮೇಲೆ ದೊಡ್ಡವರು! ಅವರವರ ಸಂಸಾರ ಅವರಿಗೆ. ಸೊಸೆಯರೇ? — ಮನೆಯಲ್ಲಿ ಬಿದ್ದಿರುತ್ತಾರೆ ಅನ್ನುವುದಕ್ಕೆ?"

"ಗಂಡುಮಕ್ಕಳಾದವರಿಗೆಲ್ಲಾ ಸೊಸೆಯರು ಬರುತ್ತಾರೆಯೇ? ಬಂದವರೆಲ್ಲರೂ ಜೊತೆಯಲ್ಲಿರುತ್ತಾರೆಯೇ? ಇದ್ದರೆ ಅವರಿಂದ ಸುಖವುಂಟೇ? ಅದೆಲ್ಲಾ ಋಣಾನುಬಂಧ ಅಮ್ಮ! ಯಾರಿಗೆ ಯಾರು?"

"ಇರುತ್ತಾರೆ ಅಂತ ಕೇಳುತ್ತಾರೋ, ಇರುವುದಿಲ್ಲ ಅಂತ ಕೇಳುತ್ತಾರೋ?"

"ಅದು ನಮ್ಮ ಇಷ್ಟವೇನಮ್ಮ?"

"ದೇವರ ಇಷ್ಟವೇ ಆಗಲಿ! ಅದಕ್ಕೇ ಅವನನ್ನು ಕೇಳುವುದು; ಕೊಡಿಸಿ ಅಂತ ನಿಮ್ಮನ್ನು ಕೇಳುವುದು. ಇಲ್ಲದಿದ್ದರೆ ಇಲ್ಲಿಗೆ ಯಾಕೆ ಬರಬೇಕಾಗಿತ್ತು?"

"ದೇವರಾದರೂ ಹೊಸದಾಗಿ ಎಲ್ಲಿಂದ ತಂದುಕೊಡುತ್ತಾನಮ್ಮ ? ಇರುವುದರಲ್ಲೇ ಚೌಕಾಶಿ ಮಾಡುತ್ತಾನೆ, ಈಗ ಇದ್ದದ್ದು ಬೇಡವೆಂದರೆ! ತಲೆಯದನ್ನು ತೆಗೆದು ಕಾಲಿಗೆ ಹಾಕುತ್ತಾನೆ, ಕಾಲಿನದನ್ನು ತೆಗೆದು ತಲೆಗೆ ಹಾಕುತ್ತಾನೆ. ಆಗ ಅವಲಕ್ಷಣವಾಗುತ್ತದೆ, ಎಡವಟ್ಟಾಗುತ್ತದೆ. ನಾವು ಅದಕ್ಕೂ ಆಕ್ಷೇಪಿಸುತ್ತೇವೆ."

"ನನಗೆ ಈ ವೇದಾಂತ ಬೇಕಾಗಿಲ್ಲ; ನನ್ನ ಕೋರಿಕೆ ನನ್ನದು. ಏನಾದರೂ ಆಗಲಿ!"

"ಭಗವಂತ, ನಿನ್ನ ಸಂಕಲ್ಪ ಹೀಗೂ ಇದೆಯೇ ? ಈ ಪಾಪಕ್ಕೆ ನನ್ನನ್ನು ಗುರಿ ಮಾಡಬೇಕೇ ? ನಿನ್ನ ಇಚ್ಛೆ! ಆಗಲಿ.—ತಗೊಳ್ಳಿ ಅಮ್ಮ, ಈ ಬಟ್ಟಲಲ್ಲಿರುವ ಕುಂಕುಮ ಇಟ್ಟುಕೊಳ್ಳಿ. ಮುಂದಿನ ವರ್ಷ ಮಗನನ್ನೆತ್ತಿಕೊಂಡು ದೇವರ ದರ್ಶನಕ್ಕೆ ಬನ್ನಿ."

## (೨)

"ಏನು ತಾಯಿ, ಮಗನನ್ನ ಎತ್ತಿಕೊಂಡು ಬಂದಿರಾ ? ಬನ್ನಿ."

"ಅಯ್ಯೋ, ಆ ಪುಣ್ಯವೆಲ್ಲಿ ಬಂತು!"

"ಇದು ಯಾವುದು ಮತ್ತೆ!"

"ಇದೊಂದು ತಬ್ಬಲಿ ಮಗು; ತಾಯಿ ಇಲ್ಲದ ಮಗು!"

"ಯಾಕೇ ? ನೀವಿದ್ದೀರಲ್ಲಾ, ನೀವೇ ತಾಯಿ!"

"ಇದು ನನ್ನದಲ್ಲಪ್ಪ, ನನ್ನ ಮಗಳದು! ಅವಳು ಇದನ್ನೂ ನನ್ನನ್ನೂ ತಬ್ಬಲಿ ಮಾಡಿ ಹೋದಳು!"

"ಅದನ್ನೂ ತಬ್ಬಲಿಮಾಡಲಿಲ್ಲ, ನಿಮ್ಮನ್ನೂ ತಬ್ಬಲಿಮಾಡಲಿಲ್ಲ. ಅದಕ್ಕೆ ನೀವು ದಿಕ್ಕು, ನಿಮಗೆ ಅದು ದಿಕ್ಕು!"

"ಇದನ್ನೇ ನಾನು ಕೇಳಿದ್ದು ?"

"ಮತ್ತೇನನ್ನ ? ಮಗನನ್ನ ಕೇಳಿದಿರಿ; ದೇವರು ಮಗನನ್ನ ಕೊಟ್ಟ!"

"ಮಗಳು ಹೋಗಿ, ತಬ್ಬಲಿ ಮಗುವನ್ನು ಸಾಕಿಕೊ ಎಂತಲೇ ?"

"ಅದನ್ನೂ ನೀವು ಕೇಳಿದಿರಲ್ಲಮ್ಮ! ಹೆಣ್ಣುಮಕ್ಕಳಲ್ಲಿ ಒಬ್ಬರು ಇಲ್ಲದೆ ಯಾದರೂ ಒಂದು ಗಂಡು ಮಗುವಾಗಬಾರದೇ ಎಂದು ಕೇಳಲಿಲ್ಲವೇ ?"

"ಏನೋ ಹಾಗೆಂದುಕೊಂಡೆ!" ಹಾಗೆಂದುಕೊಂಡಾಕ್ಷಣ ಅವಳು ಸತ್ತೇ ಹೋಗಲಿ ಅಂತ ನನ್ನ ಮನಸ್ಸಿನಲ್ಲಿತ್ತೇ ?

"ಅದೇ ಕೇಳಿದ್ದು; ಅದನ್ನೇ ದೇವರು ಕೊಟ್ಟಿದ್ದು."

"ತಾಯಿ ಸತ್ತ ಯಾವುದೋ ತಬ್ಬಲಿ ಮಗು ನನ್ನದಾಗುತ್ತದೆಯೇ ? ಈ ವಯಸ್ಸಿನಲ್ಲಿ ಇದನ್ನು ಬೇರೆ ಕಟ್ಟಿಕೊಂಡು ಗೋಳಾಡಲೇ ?"

"ಮತ್ತೆ, ದೇವರು ತಾನೇ ಏನು ಮಾಡುತಾನಮ್ಮ? ಹೂವಿಲ್ಲದ ಮರ ಹಣ್ಣು ಹೇಗೆ ಬಿಟ್ಟೀತು? ಹೆತ್ತ ಮಗುವಲ್ಲ, ಸಾಕುಮಗು! ಯಾವುದಾದರೇನು? ಮೊಮ್ಮಗು ಮನೆಯ ಮಗುವಲ್ಲವೇ? ಮೊಮ್ಮಕ್ಕಳನ್ನು ದತ್ತು ಕೂಡ ತೆಗೆದುಕೊಳ್ಳುವುದಿಲ್ಲವೇ?"

"ಸಾಕು ಈ ಧರ್ಮಶಾಸ್ತ್ರ! ಈ ಮಗುವನ್ನು ನಾನು ನೋಡಲಾರೆ; ಇದನ್ನು ಯಾರಾದರೂ ಸಾಕಿಕೊಳ್ಳಲಿ; ನಿಮ್ಮ ಮಠಕ್ಕೆ ಇಟ್ಟುಕೊಳ್ಳಿ! ನನ್ನ ಮಗಳನ್ನು ನನಗೆ ಕೊಡಿ. ಅವಳನ್ನು ನಾನು ಮಗಳು ಅಂತ ಸಾಕಿದ್ದೆನೇ? ಮಗಳು ಬೇರೆ ಅಲ್ಲ ಮಗ ಬೇರೆ ಅಲ್ಲ ಅಂತ ಸಾಕಿದ್ದೆನಲ್ಲ!"

"ಹೌದಮ್ಮ, ಅದಕ್ಕೆ ಯಾರೇನು ಮಾಡುತ್ತಾರೆ? ತಾಯಿ ಸತ್ತ ಮಗುವನ್ನು ಅಜ್ಜಿಗಿಂತ ಮತ್ತಾರು ಅಭಿಮಾನದಿಂದ ಸಾಕುತ್ತಾರೆ? ಮತ್ತೆ ಯಾರಿಗೆ ಬೇಕು? ಆ ಮಗುವನ್ನು ಇಟ್ಟುಕೊಂಡು ನಾನೇನು ಮಾಡಲಿ, ಪರದೇಶಿ?"

"ಬೇಡ, ನನಗೆ ಬೇಕಾಗಿಲ್ಲ; ನನ್ನ ಮಗಳು ನನಗೆ ಬೇಕು!"

"ಏನು ಹುಚ್ಚಮ್ಮಾ ಇದು? ಈಗ ನಿಮ್ಮ ಮಗಳು ಬಂದರೆ ಭೂತದ ಹಾಗೆ ಬಂದಾಳು, ಪ್ರೇತದ ಹಾಗೆ ಬಂದಾಳು, ಮೊದಲಿನ ಹಾಗೆ ಬಂದಾಳೇ? ಬಂದರೆ ನೀವೇ ಹೆದರಿಕೊಂಡೀರಿ; 'ಈ ದೆವ್ವವನ್ನು ಓಡಿಸಿ' ಎಂದು ಓಡಿಬಂದೀರಿ! ಬೇಡಿ ತಾಯಿ, ಬೇಡಿ. ಈ ದುಃಖದಲ್ಲಿ ನಿಮಗೆ ಹಾಗೆನ್ನಿಸುತ್ತದೆ. ಆಮೇಲೆ ಸರಿಹೋಗುತ್ತದೆ. ನಾವು ಯಾವುದಕ್ಕೂ ಆಸೆಪಡಬಾರದು; ದೇವರನ್ನು ಇದು ಕೊಡು ಅಂತ ಕೇಳುವುದಕ್ಕೆ ಹೋಗಬಾರದು; ಅವನು ಕೊಟ್ಟದ್ದನ್ನು ಪ್ರಸಾದವಾಗಿ ಸಂತೋಷದಿಂದ ಸಮಾಧಾನದಿಂದ ತೆಗೆದುಕೊಳ್ಳಬೇಕು — ಎಂದು ನಾನು ಹೋದ ವರ್ಷವೇ ಹೇಳಲಿಲ್ಲವೇ? ಬೇಡಿ. ಒಂದುಸಾರಿ ಆಸೆಪಟ್ಟು ಕೇಳಿ, ಎಡವಟ್ಟಾಯಿತು. ಇನ್ನೊಂದುಸಾರಿ ಆಸೆಪಡಬೇಡಿ. ಭಗವಂತನ ಸಂಕಲ್ಪದಲ್ಲಿ, ಕಾರ್ಯಕ್ರಮದಲ್ಲಿ ಏನೇನು ಹೇಗೆ ಹೇಗೆ ನಡೆಯಬೇಕೆಂದಿದೆಯೋ ಅದು ಹಾಗೆ ಹಾಗೆ ನಡೆಯಲಿ. ಅವನೂ ತನ್ನ ಯಂತ್ರದಲ್ಲಿ ಒಂದು ಕಡೆಯ ಕೀಲನ್ನು ಕಿತ್ತುತಾನೇ ಇನ್ನೊಂದು ಕಡೆಗೆ ಹಾಕಬೇಕು — ಇರುವುದು ಸರಿಯಾಗಿಲ್ಲ, ವ್ಯತ್ಯಾಸವಾಗಲೇ ಬೇಕು ಎಂದರೆ?"

"ಇಂಥ ಮಗನ ಪ್ರಾಪ್ತಿಯೇ ನನಗೆ ಇದ್ದರೆ, ಅದು ಮೊದಲೇ ಆಗಬಹುದಾಗಿತ್ತಲ್ಲ!"

"ಅಂಥ ಮಗನೂ ಇದ್ದನಲ್ಲಮ್ಮಾ!"

"ಇರಲಿಲ್ಲವಲ್ಲಾ! ಅದಕ್ಕೆತಾನೇ ಬಂದು ಇಲ್ಲಿ ದೇಹ ತೆಯ್ದದ್ದು!"

"ಮನೆಯಲ್ಲಿಯೇ, ಬೆಳೆದ ಮಗನೇ ಇದ್ದನಲ್ಲಾ, ಏನು ಹೀಗೆನ್ನುತ್ತೀರಿ?"

"ಎಲ್ಲಿ? ಯಾರು?"

"ನಿಮ್ಮ ಅಳಿಯ!"

"ಚೆನ್ನಾಯಿತು! ಈ ಯುಕ್ತಿಯ ಮಾತನ್ನು ಕೇಳುವುದಕ್ಕೇ ಇಲ್ಲಿಗೆ ಬಂದದ್ದು? ಅಳಿಯ ಮಗನಲ್ಲ, ಸೊಸೆ ಮಗಳಲ್ಲ—ಎಂದು ಕೇಳಿಲ್ಲವೇ?"

"ಅವನನ್ನ ಮೆಚ್ಚಿ ಆರಿಸಿ ತಂದಿರಿ. ಮನೆಯಲ್ಲಿಯೇ ಇರುವ ಅಳಿಯನಾಗ ಬೇಕೆಂದು ತಾಯಿ ತಂದೆ ಇಲ್ಲದ ಹುಡುಗನನ್ನು ನೋಡಿ ಕೊಟ್ಟಿರಿ. ಮನೆಯಲ್ಲಿ ಮಗನಿಗಿಂತ ಹೆಚ್ಚಾಗಿ ಸಾಕಿ ಸಲಹಿದಿರಿ. ಅವನೂ ಒಳ್ಳೆಯ ಹುಡುಗನೆನಿಸಿಕೊಂಡ. ಇನ್ನು ಯಾವ ಮಗ ಅದಕ್ಕಿಂತ ಹೆಚ್ಚು ವಿಶ್ವಾಸವನ್ನು ತೋರಿಸಿಯಾನು? ಎಷ್ಟೋ ಜನ, ತಿಳಿಯದವರು, ಅವನನ್ನು ನಿಮ್ಮ ಮಗನೆಂದೇ ಮಾಡಿಕೊಂಡಿದ್ದಾರೆ, ಮಗಳನ್ನು ಸೊಸೆ ಎಂದುಕೊಂಡಿದ್ದಾರೆ!"

"ಹಾಗಿದ್ದರೆ, ಆ ಮಗ ಬೇಡ, ಈ ಮಗ ಹುಟ್ಟಲಿ ಎಂದು ಕೇಳಿದೆನೇ?"

"ಹಾಗೇ ಆಯಿತು!"

"ಅದು ಹೇಗೆ?"

"ಅಳಿಯನೇ ಹೋಗಬೇಕಾಗಿತ್ತು, ಅವನಿಗೆ ಬದಲು ಮಗಳು ಹೋದಳು."

"ಅಳಿಯ ಏಕೆ ಹೋಗಬೇಕಾಗಿತ್ತು?"

"ಅವನ ಕರ್ಮ!"

"ಅವನೇನು ಕರ್ಮ ಮಾಡಿದ್ದ?"

"ಹಿಂದೇನು ಮಾಡಿದ್ದನೋ ಬಿಟ್ಟಿದ್ದನೋ, ಈಗ ನಿಮ್ಮ ಕಣ್ಣೆದುರಿಗೇ ಮಾಡ ಲಿಲ್ಲವೇ? ಮಾಡುತ್ತಿಲ್ಲವೇ? ನೀವೇ ಅದಕ್ಕೆ ಸಹಾಯಮಾಡಲಿಲ್ಲವೇ? ನಗುತ್ತ ನಗುತ್ತ ಮಾಡಿದ್ದನ್ನ ಅಳುತ್ತ ಅಳುತ್ತ ಅನುಭವಿಸಬೇಕು!"

"ಅಂಥ ಪಾಪದ ಕೆಲಸ ಅವನೇನೂ ಮಾಡುತ್ತಿಲ್ಲವಲ್ಲಪ್ಪ! ಅವನೇನು ಪೋಲೀಸಿನವನಲ್ಲ ಜಡ್ಜಿಯಲ್ಲ; ಕಳ್ಳನಲ್ಲ ಕಾಕನಲ್ಲ — ಒಬ್ಬರನ್ನ ಹೊಡೆದವನಲ್ಲ, ಹಿಂಸಿಸಿದವನಲ್ಲ; ಮತ್ತೊಬ್ಬರೊಡನೆ ಗಟ್ಟಿಯಾಗಿ ಮಾತನಾಡಿದವನಲ್ಲ!"

"ನಿಜ, ಅದಕ್ಕೋಸ್ಕರವೇ ಅವನು ಒಳ್ಳೆಯ ಹುಡುಗ ಅಂದಿದ್ದು; ಎಲ್ಲರೂ ಅನ್ನುತ್ತಿರುವುದು! — ಅಯ್ಯೋ ಮಗು ಅಳುತ್ತಿದೆ, ಕರೆದುಕೊಳ್ಳಿ ಸಮದಾಯಿಸಿ!"

"ತಾಯಿ ಇಲ್ಲದ ತಬ್ಬಲಿಯನ್ನ ನಾನು ಏನು ಸಮದಾಯಿಸಲಪ್ಪ! ಮಕ್ಕಳನ್ನು ಎತ್ತಿ ಅಭ್ಯಾಸ ಕೂಡ ತಪ್ಪಿಹೋಗಿದೆಯಲ್ಲ!"

"ಕರೆದುಕೊಳ್ಳಿ, ಅಭ್ಯಾಸವಾಗುತ್ತದೆ; ಈಗ ನೀವು ಎತ್ತಿಕೊಳ್ಳಿ, ನೋಡಿ, ಸುಮ್ಮನಾಗುತ್ತದೆ! ಅದಕ್ಕೆ ನೀವೇ ತಾಯಿ ಎಂಬ ಬುದ್ಧಿ ಇದೆ; ಅದು ನಿಮ್ಮ ಮಗು ಅಂತ ಜ್ಞಾನವನ್ನು ನೀವು ತಂದುಕೊಳ್ಳಬೇಕು — ಹಾಗಾದರೆ ದೇವರ ಸಂಕಲ್ಪ ನೆರವೇರುತ್ತದೆ."

"ಸ್ವಲ್ಪ ಹಾಲಿದ್ದರೆ ತರಿಸಿಕೊಡಿ, ಹಾಕಿ ನೋಡುತ್ತೇನೆ."

"ಭಿಕಾರಿಯ ಹತ್ತಿರ ಹಾಲೆಲ್ಲಿ ಬರಬೇಕಮ್ಮ! ತಗೊಳ್ಳಿ, ಈ ತೀರ್ಥ ತಗೊಳ್ಳಿ! ಏಳಿ, ಎದ್ದು ಬನ್ನಿ, ತಗೊಳ್ಳಿ! — ಹಾಗೇ! ಕುಡಿಯಿರಿ; ಮಗುವಿಗೂ ಕುಡಿಸಿ; ಅದೇ ಹಾಲಾಗುತ್ತದೆ. ಈಗ ಮಗುವನ್ನು ಕರೆದುಕೊಳ್ಳಿ; ಸಮಾಧಾನಮಾಡಿ. ನಿಮ್ಮ ಮಗಳಿಗೆ ಹೇಗೋ, ನಿಮ್ಮ ಅಳಿಯನಿಗೆ ಹೇಗೋ, ಈ ಮಗುವಿಗೂ ಹಾಗೆ, ಅದಕ್ಕಿಂತ ಇನ್ನೂ ಹೆಚ್ಚಾಗಿ, ನೀವು ತಾಯಿ! . . . ಮೊದಲು ನೀವು ಸಮಾಧಾನ ಮಾಡಿಕೊಳ್ಳಿ! ಮಗುವನ್ನು ಸ್ವಲ್ಪ ತಟ್ಟಿ! ನೋಡಿ, ಈಗ ಅದಕ್ಕೆ ಸಮಾಧಾನ ವಾಯಿತು. ಇನ್ನು ನಿದ್ರೆಮಾಡುತ್ತದೆ. ನೀವು ಸಮಾಧಾನಮಾಡಿಕೊಂಡರೆ, ಅದಕ್ಕೆ ಸಮಾಧಾನವಾಗುತ್ತದೆ. ನಾನು ಸಮಾಧಾನವಾಗಿದ್ದರೆ, ನೀವು ಸಮಾಧಾನವಾಗು ತ್ತೀರಿ! ಎಲ್ಲಿ ಈಗ ಕೇಳಿ, ಏನೋ ಹೇಳುತ್ತಿದ್ದಿರಲ್ಲ!"

"ಏನು ಹೇಳುತ್ತಿದ್ದೆ?"

"ಮಗು ಅಳುವುದಕ್ಕೆ ಮೊದಲುಮಾಡಿದಾಗ ಏನೇನೋ ಹೇಳಿಕೊಂಡು ಗೋಳಾಡುತ್ತಿದ್ದಿರಲ್ಲ! . . . ಇಲ್ಲಿಗೆ ಬಂದು ನನ್ನನ್ನು ಏನು ಕೇಳಬೇಕೆಂದಿದ್ದಿರಿ?"

"ನನ್ನ ಮಗಳು ಯಾಕೆ ಸತ್ತಳು ಅಂತ!"

"ಏಕೆ ಅಂತ ಹೇಳಲಿ! ಎಷ್ಟೋ ದಾರಗಳು ಗೋಜಿ, ಗಂಟು ಬಿದ್ದಿತ್ತು. ಅದನ್ನು ಬಿಡಿಸಲು ಹೋಗಿ ಒಂದು ದಾರ ಕಿತ್ತುಹೋಯಿತು!"

"ಇಲ್ಲಿ ದಾರವೇನು ಬಂತು, ಹಗ್ಗ!"

"ಅದೇ ಕರ್ಮಸೂತ್ರ ಅನ್ನುವುದು!"

"ಹಾಗೆಂದರೆ?"

"ಅದನ್ನೂ ನನ್ನ ಬಾಯಲ್ಲಿ ಹೊರಡಿಸಬೇಕೇ? — ಮಾಡಿದವರ ಪಾಪ ಆಡಿದವರ ಬಾಯಲ್ಲಿ ಅಂತ! ಅದೆಲ್ಲಾ ಏಕೆ? ಮುಖ್ಯವಾಗಿ ಭಗವತ್ಸಂಕಲ್ಪ ಅಂತ ಇಟ್ಟುಕೊಳ್ಳಿ!"

"ಒಳ್ಳೆಯ ಭಗವತ್ಸಂಕಲ್ಪವಾಯಿತಲ್ಲ! ಎಲ್ಲದಕ್ಕೂ ಭಗವತ್ಸಂಕಲ್ಪ, ಭಗ ವತ್ಸಂಕಲ್ಪ! ಆ ಹಾಳು ಭಗವಂತ ಎಲ್ಲಿ ಮೂಗು ಹಿಡಿದುಕೊಂಡು ಕೂತಿದ್ದಾನೋ ಕಾಣೆನಲ್ಲ!"

"ಹೌದು ತಾಯಿ! ಭಗವತ್ಸಂಕಲ್ಪವಿಲ್ಲದೆ ಒಂದು ಹುಲ್ಲು ಎಸಳೂ ಅಲು ಗಾಡುವುದಿಲ್ಲ!"

"ನನಗೆ ಅದು ಅರ್ಥವಾಗುವುದಿಲ್ಲ; ನನಗೆ ತಿಳಿಯುವಂಥ ಮಾತೇನಾದರೂ ಇದ್ದರೆ ಹೇಳಿ!"

"ಆಗಲಿ! ನಿಮ್ಮ ಮಗಳು, ಗಂಡನಿಗಾಗಿ ತನ್ನ ಜೀವ ತೆತ್ತಳು!"

"ಇದಕ್ಕೇ ಅವನಿಗೆ ಹೆಣ್ಣುಕೊಟ್ಟು ಮನೆಯಲ್ಲಿ ಸಾಕಿಕೊಂಡದ್ದು?"

"ಮತ್ತೊಬ್ಬರಿಗೆ, ಅದರಲ್ಲಿಯೂ ತನ್ನ ಗಂಡನಿಗೆ, ತನ್ನ ಪ್ರಾಣಕ್ಕಿಂತ ಮತ್ತೇನನ್ನು ಕೊಡಬಹುದು? ಆಕೆ ಇರುವ ತನಕ ಪ್ರೇಮವನ್ನು ಕೊಟ್ಟಳು; ಕೊನೆಗೆ ಪ್ರಾಣವನ್ನು ಕೊಟ್ಟಳು! ಅದು ತಲೆಕೆಳಕಾಗಿ, ಅವಳು ಮನೆಯಲ್ಲಿ ಗೋಳಾಡುತ್ತಾ, ಅವಳನ್ನು ನೋಡಿ ನೀವು ಕೊರಗುತ್ತಾ, ಕೊಟ್ಟವರು ತಂದವರು, ನೆರೆಯವರು ಹೊರೆಯವರು, ಕಂಡವರು ಕೇಳಿದವರು, ಹೋದವರು ಬಂದವರು ಎಲ್ಲರೂ ಅವಳನ್ನು ಶಪಿಸುತ್ತ, ಮನೆಹಾಳಿ ಎಂದು ಮೂತಿಮೂತಿ ತಿವಿಯುತ್ತ ಇದ್ದಿದ್ದರೆ ಅದನ್ನು ನೋಡಿ ನೀವು ಸಹಿಸುತ್ತಿದ್ದಿರಾ?"

"ಏನೋ! ಏನು ಮಾಡುತ್ತಿದ್ದೆನೋ!"

"ರಾಮ ರಾಮ! ಆ ದುಃಖ ಯಾರಿಗೂ ಬೇಡ; ನಮ್ಮ ಜನದಲ್ಲಿ ಮನೆ ತಪ್ಪಿದ ಹೆಣ್ಣು ಮಕ್ಕಳು ಪಡುವ ಪಾಡು ಯಾರುಯಾರಿಗೂ ಬೇಡ! ಈಗಿಗಿಂತಲೂ ಆಗ ಹೆಚ್ಚು ದುಃಖಪಡುತ್ತಿದ್ದಿರಿ! ನಿಮ್ಮ ಜೊತೆಗೆ ಆ ಹುಡುಗಿಯೂ ನಿಮಗಿಂತ ನೂರರಷ್ಟು ದುಃಖಪಡುತ್ತಿದ್ದಳು; ಹುಟ್ಟಿದ ಮೇಲೆ, ಎಲ್ಲರೂ ಸಾಯಬೇಕು; ಕೆಲವರು ಹಿಂಚು, ಕೆಲವರು ಮುಂಚು. ಆಕೆ ಅರಿಸಿನ ಕುಂಕುಮ ಇಟ್ಟುಕೊಂಡು, ಇರುವ ತನಕ ಎಲ್ಲರ ಕೈಯಲ್ಲೂ ಒಳ್ಳೆಯವಳೆನಿಸಿಕೊಂಡು, ಹೋದಳು. ಆ ಪುಣ್ಯ ಎಲ್ಲರಿಗೂ ಎಲ್ಲಿ ಬರುತ್ತೆ?"

"ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಹೋಗಬೇಕೇ? ಬಾಳಲಿಲ್ಲ, ಬದುಕಲಿಲ್ಲ!"

"ಇನ್ನೂ ಬದುಕಿದ್ದಿದ್ದರೆ, ಅವಳೇನೇನು ಕಷ್ಟ ನೋಡಬೇಕಾಗಿತ್ತೋ, ನೀವೇನೇನು ಕಷ್ಟ ನೋಡಬೇಕಾಗಿತ್ತೋ! ಯಾರು ಬಲ್ಲರು?"

"ಬದುಕುವುದು ಕಷ್ಟಪಡುವುದಕ್ಕೇ?"

"ಮತ್ತೇತಕ್ಕಮ್ಮ? ಸಂಸಾರದಲ್ಲಿ ಕಷ್ಟವಲ್ಲದೆ ಮತ್ತೇನಿದೆ!"

"ಎಷ್ಟೋಜನ ಸುಖವಾಗಿಲ್ಲವೇ?"

"ಇದ್ದಾರೆ; ಎಷ್ಟೆಷ್ಟು ಜನರ ಸುಖವನ್ನು ದೋಚಿಹಾಕಿಕೊಂಡು ಒಬ್ಬೊಬ್ಬರು ಅನುಭವಿಸುತ್ತಾರೆಯೋ ನಿಮಗೆ ಗೊತ್ತೇ? ಇದರ ಮೇಲೆ, ಯಾವ ಹುತ್ತದಲ್ಲಿ ಎಂಥ ಹಾವೋ!"

"ತನ್ನ ಗಂಡನಿಗಾಗಿ ಏಕೆ ಜೀವ ತೆರಬೇಕಾಗಿತ್ತು? ಅವನು ಮಾಡಿದ ಪಾಪವೇನು? ಅವನು ಯಾರ ಸುಖವನ್ನು ಕಿತ್ತುಕೊಂಡಿದ್ದಾನೆ? ಯಾರಿಗೆ ಅನ್ಯಾಯ ಮಾಡಿದ್ದಾನೆ? ಅವನಿಗೆ ಇರುವುದು ಒಂದು ಮೇಷ್ಟರ ಕೆಲಸ. ಅದರಲ್ಲೇನು ವಂಚನೆಯೇ ಮೋಸವೇ, ಸುಳ್ಳೇ ತಟವಟವೇ, ಲಂಚವೇ ರುಷುವತ್ತೇ, ಏನೂ ಇಲ್ಲ

ವಲ್ಲ! ಹಾಕಿದ ಹಿಟ್ಟು ಹುಯಿದ ಗಂಜಿ ಅಂತ ಸರ್ಕಾರದವರು ತಾವಾಗಿ ಕೊಟ್ಟ ಸಂಬಳವೆಷ್ಟೋ ಅಷ್ಟು. ಅದರಲ್ಲೇನು ಅವನು ಮಾಡಿದ್ದು ಕರ್ಮ ?"

"ನೀವು ಹೇಳುವುದು ನಿಜ ಅಮ್ಮ ; ಆದರೆ ಅವರು ಹೇಳುವ ಪಾಠ ಏನು ಗೊತ್ತೇ ? ಪಾಠ ಹೇಳುವಾಗ ಮಾಡುವ ಕೆಲಸವೇನು ಗೊತ್ತೇ ?"

"ನನಗೇನು ಗೊತ್ತು ? ಏನೋ ಬಿ.ಎ. ಆದ ಮೇಲೆ ಕಲ್ಕತ್ತಕ್ಕೆ ಹೋಗಿ ಎರಡು ವರ್ಷ ಓದಿಕೊಂಡು ಬಂದ ; ಇಲ್ಲಿ ಕೆಲಸಕ್ಕೆ ಸೇರಿದ !"

"ನಿಮಗೆ ಇನ್ನೇನು ಗೊತ್ತು ಪಾಪ! ಅವರು ಅಲ್ಲಿ ಓದಿದಾಗ, ಇಲ್ಲಿ ಪಾಠ ಹೇಳುವಾಗ, ನಿತ್ಯವೂ ಪ್ರಾಣಿಗಳನ್ನು ಕೊಲ್ಲಬೇಕು, ಕುಯ್ಯಬೇಕು, ಕತ್ತರಿಸಬೇಕು . . ."

"ರಾಮ ರಾಮ !"

"ಹೌದಮ್ಮ, ಕೇಳಿ ಬೇಕಾದರೆ! ಅವುಗಳ ಫಲವೆಲ್ಲಾ ಎಲ್ಲಿಹೋಗಬೇಕು ?"

"ಹಾಗಾದರೆ ಆ ಪಾಠ ಇನ್ನ್ಯಾರೂ ಹೇಳುವುದೇ ಇಲ್ಲವೇ ? ಅವರಿಗೆಲ್ಲಾ ಹೀಗೇ ಆಗುತ್ತದೆಯೇ ? ಕಟುಕರು ನಿತ್ಯ ಹಸು ಕೊಲ್ಲುತ್ತಾರಲ್ಲ, ಅದನ್ನು ತಿನ್ನುವವರು ನಿತ್ಯ ತಿನ್ನುತ್ತಾರಲ್ಲ, ಅವರಿಗೆಲ್ಲಾ ಹೀಗೇ ಆಗುತ್ತದೆಯೇ ?"

"ಅದು ಯಾರಿಗೆ ಒಗ್ಗುತ್ತದೆಯೋ ಅವರಿಗೆ ಒಗ್ಗುತ್ತದೆ. ಅಲ್ಲದೆ, ಯಾರು ಯಾರು, ಏನೇನು ಪಾಪದ ಫಲವನ್ನು, ಎಂದೆಂದು, ಯಾವ ಯಾವ ರೀತಿಯಲ್ಲಿ ಉಣ್ಣುತ್ತಾರೆಯೋ ನನಗೆ ನಿಮಗೆ ಕಾಣುತ್ತದೆಯೇ ತಾಯಿ ?"

"ಅವನು ಮಾಡಿದ ಕರ್ಮಕ್ಕೆ ಅವಳೇಕೆ ಸಾಯಬೇಕು ?"

"ಎಷ್ಟೋ ದಿನ ಸಂಜೆ ಮನೆಗೆ ಬಂದು, ಆತ ತಲೆ ಸಿಡಿಯುತ್ತದೆಂದು ಮಲಗಿಬಿಡುತ್ತಿದ್ದ ; ಏನೋ ಆಯಾಸವೆಂದು ಹೊರಳುತ್ತಿದ್ದ—ಸರಿಯಾಗಿ ಅನ್ನ ತಿನ್ನುತ್ತಿರಲಿಲ್ಲ, ನಿದ್ರೆ ಮಾಡುತ್ತಿರಲಿಲ್ಲ ; ಡಾಕ್ಟರನ್ನು ಕೇಳಿದರೆ 'ಏನೂ ಇಲ್ಲ, ಅವರಿಗೇನು ಆರೋಗ್ಯವಾಗಿದ್ದಾರೆ, ಗಟ್ಟಿಮುಟ್ಟಾಗಿದ್ದಾರೆ' ಎನ್ನುತ್ತಿದ್ದರು. ಹೌದೋ ? ಆ ಹುಡುಗಿ ಮಾತ್ರ ಗಂಡನ ಸಂಕಟ ನೋಡಲಾರದೆ, 'ಅಯ್ಯೋ ಇದು ನನಗಾದರೂ ಬರಬಾರದೆ ? ಅವರು ಆರೋಗ್ಯವಾಗಬಾರದೇ ?' ಎಂದುಕೊಂಡಳು. ಆ ಹುಡುಗಿ ಪತಿವ್ರತೆ, ಸಚ್ಚರಿತ್ರೆ ; ದೇವರು ಅವಳ ಪ್ರಾರ್ಥನೆಯನ್ನು ನಡೆಸಿಕೊಟ್ಟ !"

"ಹೀಗೆ ಅಂತ ಕಂಡಿದ್ದರೆ ಅವನನ್ನು ಕಲ್ಕತ್ತೆಗೆ ಕಳುಹಿಸುತ್ತಲೂ ಇರಲಿಲ್ಲ, ಅವನಿಗಾಗಿ ಸಾವಿರಾರು ರೂಪಾಯಿ ಖರ್ಚುಮಾಡುತ್ತಲೂ ಇರಲಿಲ್ಲ ; ಈ ಕೆಲಸವಲ್ಲದಿದ್ದರೆ ಮತ್ತೊಂದು ಕೆಲಸವಾಗುತ್ತಿತ್ತು !"

"ಮುಂದೆ ಆಗುವುದನ್ನು ಯಾರು ಕಾಣಬಲ್ಲರಮ್ಮ ?"

"ಕಂಡವರೂ ಹೇಳುವುದಿಲ್ಲ !"

" ಕಣ್ಣಿಗೆ ಕಂಡರೂ, ಬಾಯಿಗೆ ಮಾತು ಬರಬೇಕಲ್ಲಮ್ಮ? "

" ಬಾಯಿಗೆ ಬರದೆ ಕೈಗೆ ಬರುತ್ತದೆಯೆ ? "

" ನಿಜ, ಮಾತು ಬರುವುದು ಬಾಯಿಯಿಂದಲೇಯೆ, ಕೈಯಿಂದ ಅಲ್ಲ; ಆದರೆ ಬಾಯಿ ಮಾತನಾಡಬಲ್ಲದೇ ತಾಯಿ? ಆಡಿಸುವವನು ಆಡಿಸಿದರೆ ತಾನೇ ಅದು ಆಡಬಲ್ಲದು? ಅದು ಬರಿಯ ತುತ್ತೂರಿ; ಊದುವವನು ಊದಿದರೆ ತಾನೇ ಅದು ಊದೀತು? "

" ಈ ಚಮತ್ಕಾರದ ಮಾತಿಗೇನು! "

" ಚಮತ್ಕಾರವಲ್ಲವಮ್ಮ, ಯಥಾರ್ಥ! ಭಗವತ್ಸಂಕಲ್ಪವನ್ನು ಯಾರು ಮೀರುವುದಕ್ಕಾದೀತು? ಇದರಮೇಲೆ, ಹೇಳಿದರೆ ತಾನೆ ಅದು ನಮ್ಮ ಕಿವಿಗೆ ಬಿದ್ದೀತೆ? ನಾವು ಕೇಳುತ್ತೇವೆಯೋ? ದೇವರಿಗೆ ಸಾವಿರಾರು ಬಾಯಿ; ಯಾವ ಬಾಯಿಯಿಂದ ಏನು ಆಡುತ್ತಾನೆಯೋ ನಮಗೆ ಕೇಳುವುದಕ್ಕೆ ಕಿವಿ ಬೇಡವೆ? ಅರಿಯುವುದಕ್ಕೆ ಜ್ಞಾನ ಬೇಡವೇ? ನೀವು ಒಂದು ಸಾರಿ ನಿಮ್ಮೂರಿನಿಂದ ಬರುತ್ತಿರುವಾಗ ಚನ್ನಪಟ್ಟಣದಲ್ಲಿ ಒಬ್ಬರು ರೈಲಿಗೆ ಹತ್ತಿ, ಮಾತಿಗೆ ಮಾತು ಬಂದಾಗ, ಕಲ್ಕತ್ತೆಗೆ ಯಾಕೆ ಹೋಗಬೇಕು, ಕೊಡುವ ದೇವರು ಎಲ್ಲಿದ್ದರೂ ಕೊಡುತ್ತಾನೆ ಎನ್ನಲಿಲ್ಲವೇ? ನೀವೇಕೆ ಕೇಳಲಿಲ್ಲ? ಇದೆಲ್ಲಾ ಬ್ರಾಹ್ಮಣರಿಗೆ ಬಂದದ್ದಲ್ಲ, ಎಂದು ನಿಮ್ಮ ಪುರೋಹಿತರು ಎನ್ನಲಿಲ್ಲವೇ, ಅವರ ಮಾತನ್ನೇಕೆ ಲಕ್ಷ್ಯಮಾಡಲಿಲ್ಲ? ಗಾಡಿ ಹೊಡೆಯುವವನು ಹೇ ಹೇ ಎಂದುಕೊಂಡು ಹೋಗುತ್ತಾನೆ. ಅದನ್ನು ಕಿವಿಯ ಮೇಲೆ ಹಾಕಿಕೊಳ್ಳದಿದ್ದರೆ ಗಾಡಿಗೆ ಸಿಕ್ಕಿಕೊಳ್ಳಬೇಕು. . . . ಅಲ್ಲಿ ನೋಡಿ, ಮಗು ಅಳುತ್ತೆ; ಕರೆದುಕೊಳ್ಳಿ! ಪಾಪ, ನೆಲದ ಮೇಲೆ ಹಾಕಿಬಿಟ್ಟಿದ್ದೀರಲ್ಲ ಹಾಗೆ! "

" ಅತ್ತರೆ ಅಳಲಿ! ಯಾರಿಗೆ ಬೇಕು! "

" ಇದಕ್ಕೇ ಅದನ್ನು ನೀವು ಕೇಳಿ ಪಡೆದದ್ದು? "

" ಇದನ್ನೇ ನಾನು ಕೇಳಿದ್ದು? ನಾನು ಪಡೆದೆನೇ? "

" ಇನ್ಯಾರು ಕೇಳಿದ್ದು? ಮತ್ಯಾರು ಪಡೆದದ್ದು? ದೇವರು ಕೊಟ್ಟದ್ದನ್ನ ಚೆನ್ನಾಗಿ ನೋಡಿಕೊಳ್ಳಬೇಕಮ್ಮ! ಇಲ್ಲದಿದ್ದರೆ ಅದು ದಕ್ಕುವುದಿಲ್ಲ."

" ಹಾಗಾದರೆ ನನ್ನ ಮಗಳನ್ನು ನಾನು ನೋಡಿಕೊಳ್ಳಲಿಲ್ಲವೇ? ಅವಳೇಕೆ ದಕ್ಕಲಿಲ್ಲ? "

" ನೋಡಿಕೊಂಡಿರಿ; ಇಲ್ಲವೆನ್ನುವುದಕ್ಕಾಗುತ್ತದೆಯೇ? ಆದರೆ ಎಷ್ಟು ಆದರಿಸಬೇಕೋ ಅಷ್ಟು ಆದರಿಸಲಿಲ್ಲ; ಎಷ್ಟು ವಿಶ್ವಾಸ ತೋರಿಸಬೇಕೋ ಅಷ್ಟು ತೋರಿಸಲಿಲ್ಲ; ಆ ಹುಡುಗಿ ಎಷ್ಟುದಿನ ಕಣ್ಣೀರು ಹಾಕಲಿಲ್ಲ? ಎಷ್ಟುದಿನ ಇವಳು ಏಕೆ ಹುಟ್ಟಿದಳೋ ಎಂದು ನೀವು ಎನ್ನಲಿಲ್ಲ? ನಿಮ್ಮ ಮನೆಯ ಆಳು ತೋಟದಲ್ಲಿರುವ ಗಿಡ

ಗಳನ್ನು ನೋಡಿಕೊಳ್ಳದೆ, ನೀರು ಹಾಕದೆ, ಅವುಗಳನ್ನು ಬಳಲಿಸಿದರೆ ನೀವು ಸುಮ್ಮನೆ ಇರುತ್ತೀರಾ ?"

"ಗಿಡಗಳ ಮನೆ ಹಾಳಾಯಿತು !"

"ಸಂಸಾರವೂ ಒಂದು ತೋಟದ ಹಾಗೆ ತಾಯಿ ! ಬಲಿತ ಮರಗಳು ಬೆಳೆದು ಕೊಂಡು ಹೋಗುತ್ತವೆ ; ಎಳೆಯ ಸಸಿಗಳನ್ನು ನೋಡಿಕೊಳ್ಳದೆ ಒಣಗಿಸಿದರೆ ಹೇಗೆ?"

"ಹಾಗಾದರೆ ಯಾರನ್ನೂ ಏನೂ ಅನ್ನಲೇಕೂಡದೇ ?"

"ಯಾಕೆ ಅನ್ನಬೇಕಮ್ಮ ? ಮತ್ತೊಬ್ಬರು ಅಂದರೆ ಪ್ರತಿಯಾಗಿ ಅನ್ನುವು ದುಂಟು ; ಏನೂ ಇಲ್ಲದೆ ನಮ್ಮ ಯಜಮಾನಿಕೆ, ನಮ್ಮ ದೊಡ್ಡತನ, ನಮ್ಮ ದವಲತ್ತು ತೋರಿಸುವುದಕ್ಕೆ ಮತ್ತೊಬ್ಬರ ಮನಸ್ಸನ್ನು ನೋಯಿಸಬೇಕೇ ? ತಿಳಿದವರು, ಹದ ವಾದವರು, ನೊಂದುಕೊಳ್ಳುವುದಿಲ್ಲ. ಮಿಕ್ಕವರು ? . . . . ಸಮಾಧಾನಮಾಡಿ ಕೊಳ್ಳಿ; ಮಗುವನ್ನು ಸಾಕಿ, ಇರುವವರನ್ನು ನೋಡಿಕೊಂಡು ಸಂತೋಷವಾಗಿರಿ— ತಗೊಳ್ಳಿ ಕುಂಕುಮ ಇಟ್ಟುಕೊಳ್ಳಿ ; ಊರಿಗೆ ಹೋಗಿಬಿಟ್ಟು ಬನ್ನಿ !"

"ನನಗೆ ಕುಂಕುಮವೂ ಬೇಡ, ಏನೂ ಬೇಡ ; ಒಂದು ಸಲ ಇಟ್ಟುಕೊಂಡು ಆಯಿತಲ್ಲ !"

"ಮುತ್ತೈದೆಯರು ಹಾಗೆನ್ನಬಾರದು ; ತಗೊಳ್ಳಿ. ಆ ಪಾಪವನ್ನೂ ನನ್ನ ತಲೆಗೆ ಕಟ್ಟಬೇಡಿ ! ನಮ್ಮನ್ನು ನಾವು ಸಮಾಧಾನ ಮಾಡಿಕೊಳ್ಳದಿದ್ದರೆ ಮತ್ತಾರು ಮಾಡಿಯಾರಮ್ಮ ? ದೇವರು ಒಂದು ಸಮಾಧಾನ ಹೇಳಿದರೂ ಅದು ನಮ್ಮ ಮನಸ್ಸಿಗೆ ಇಳಿದರಲ್ಲವೇ ? ನಮ್ಮ ಮನಸ್ಸು ತಾನೇ ಸಮಾಧಾನವಾಗಬೇಕಾದದ್ದು ? ಕೊನೆಗೆ ಯಾರಿಗೆ ಯಾರು? ನಮಗೆ ನಾವೇ !"

"ಹೌದು; ಕೇಳಿದ್ದನ್ನು ಕೊಡದೆ, ಏನೋ ತಲೆಗೆ ಕಟ್ಟಿ ಸಮಾಧಾನಮಾಡಿಕೋ ಎಂದರೆ ಹೇಗೆ ಸಮಾಧಾನವಾಗುತ್ತೆ ? ಹಿಂದೆ ಯಾರೋ ಒಬ್ಬ ಮೂಗ ತನಗೆ ಹೆಂಡತಿ ಬೇಕು ಅಂತ ಕೇಳಿದ್ದಕ್ಕೆ ಅವನಿಗೆ ಮದುವೆಮಾಡಿಸಲಾರದೆ 'ಮದುವೆ ಮಾಡಿಕೊಳ್ಳುವುದು ಮಕ್ಕಳಾಗುವುದಕ್ಕೆ ತಾನೆ ! ಇಗೋ ಇವು ನಿನ್ನ ಮಕ್ಕಳು. ಒಂದಲ್ಲ, ಎರಡಲ್ಲ, ಮೂರು ; ಇವನ್ನು ಸಾಕು' ಎಂದು ಮೂರು ಗಿಡಗಳನ್ನು ನೆಟ್ಟು ಅವುಗಳಿಗೆ ಅವನ ಕಯ್ಯಲ್ಲಿ ಬೆನ್ನು ಮುರಿಯ ನೀರು ಹೊರಿಸಿದರಂತೆ— ಹಾಗಾಯಿತು!"

"ನಿಜ, ಅಮ್ಮ ; ನಾನೂ ಆ ಕಥೆಯನ್ನು ಕೇಳಿದ್ದೇನೆ. ಆದರೆ, ನಾವು ಕೇಳಿ ಕೇಳಿದ್ದನ್ನೆಲ್ಲಾ ಕೊಟ್ಟುಬಿಡಲು, ಯಾರು ಅದನ್ನು ಸಿದ್ಧವಾಗಿ ಕೈಲಿ ಹಿಡಿದುಕೊಂಡು ಸೊಂಟ ಕಟ್ಟಿಕೊಂಡು ಅಲ್ಲೆಲ್ಲೋ ಆಜ್ಞಾಧಾರಕರಾಗಿ ನಿಂತುಕೊಂಡಿದ್ದಾರೆ ಅಂತ ಮಾಡಿಕೊಂಡಿದ್ದೀರಿ ? ತಗೊಳ್ಳಿ, ಕುಂಕುಮ ಇಟ್ಟುಕೊಳ್ಳಿ ! . . ."

ಗೋಪಾಲ

# ಕೆನ್ಸಿಂಗ್ಟನ್ ಪಾರ್ಕ್

ನಾನು ಬೆಂಗಳೂರಿಗೆ ಹೋಗುವುದು ಬಹುಮಟ್ಟಿಗೆ ಜನಸಂದಣಿಯಲ್ಲಿ ಕಾಲ ಹರಣಮಾಡುವುದಕ್ಕೆ. ಮೈಸೂರಿನಲ್ಲಿ ವರ್ಷಗಟ್ಟಲೆ ನಿರ್ಜನವಾದ ಬೀದಿಗಳಲ್ಲಿ ತಿರುಗಿ, ಕುಕ್ಕನಹಳ್ಳಿ ಕೆರೆಯ ಏರಿಯ ಮೇಲೆ ಒಂಟಿಯಾಗಿ ಕುಳಿತು, ಕವಿಗಳಂತೆ ನಾನೂ ಪ್ರಕೃತಿ ಸೌಂದರ್ಯದಿಂದ ಪ್ರೇರಿತವಾದ ಧ್ಯಾನಸಮಾಧಿಯಲ್ಲಿದ್ದೇನೆಂದು ಭ್ರಾಂತಿಗೊಳ್ಳುವ ಕಾಲ ಕಳೆದುಹೋಯಿತು. ನನ್ನ ಜೀವನವಾಹಿನಿ ದಡದುಂಬಿ ಹರಿಯುವ ಬದಲು ಯಾವುದೋ ಹಳ್ಳದಲ್ಲಿ ಸಿಕ್ಕಿಬಿದ್ದು ಹಸುರುಗಟ್ಟುತ್ತ ಬಂದಿದೆ. ಪ್ರತಿದಿನವೂ ಅದೇ ಸಾಲುಮರಗಳು, ಅದೇ ಸಂಧ್ಯಾರಾಗ ಅದೇ ಕೆರೆಯಲ್ಲಿ ದೀಪಗಳ ಪ್ರತಿಬಿಂಬ, ನಿಶ್ಶಬ್ದತೆ — ಇದನ್ನು ಧ್ಯಾನಿಸಿ ಮುಗ್ಧನಾಗುವ ಕವಿಯ ಅಂತರ್ಮುಖತೆ ಯೆಂದರೆ ನನಗೆ ಜುಗುಪ್ಸೆ ಹುಟ್ಟುತ್ತದೆ. ನನಗೆ ಈಗ ರುಚಿಸುವುದೆಂದರೆ — ಜನನಿಬಿಡ ವಾದ ಬೀದಿಗಳು, ಬೈಸಿಕಲ್ ಮೋಟಾರುಗಳ ಸಂದಣಿ, ಜಟಕಾದವರ ಚಾವಟಿ ಶಬ್ದದ ವೈಖರಿ, ವಿದ್ಯುದ್ದೀಪ ರಂಜಿತವಾದ ಅಂಗಡಿಗಳಲ್ಲಿ ಕಂಗೊಳಿಸುವ ವಸ್ತ್ರ ಭೂಷಣಗಳು, ಬೆಳಕಿಗೆ ವೈವಿಧ್ಯವನ್ನು ಕೊಡುವ ನಿಯಾನ್ ಸೈನುಗಳು, ಅಲ್ಲಲ್ಲಿಯೇ ಕೇಳಿಬರುವ ರೇಡಿಯೋ ಸಂಗೀತ, ಹೋಟೆಲುಗಳಿಂದ ಬರುವ ಭಕ್ಷ್ಯಗಳ ಕಂಪು . . . . ಒಂದುದಿನದ ಮಟ್ಟಿಗಾದರೂ ನಮ್ಮ ಜೀವನದ ಬಿಗುಮಾನವನ್ನು ಮರೆತು ಕೈಯಲ್ಲಿ ಒಂದು ಪೊಟ್ಟಣ ಗರಿಯಾದ ತಿಂಡಿಯನ್ನು ಹಿಡಿದು ಕುರುಕುತ್ತಾ ದೊಡ್ಡ ಪೇಟೆಯಲ್ಲಿ ನಿರಾತಂಕನಾಗಿ ಅಲೆಯಬೇಕೆಂದು, ನಾನು ಮೊನ್ನೆ ಬೆಂಗಳೂರಿಗೆ ಹೊರಟದ್ದು. ಅಲ್ಲಿರುವ ನನ್ನ ಮಿತ್ರರೂ ನನ್ನ ಮನೋವೃತ್ತಿಗೆ ಹೊಂದಿಕೊಳ್ಳತಕ್ಕ ವರೇ; ಆದರೆ ಈ ಬಾರಿಯೇನೋ ಒಬ್ಬೊಬ್ಬರಿಗೆ ಒಂದೊಂದು ತರಹ ಹುಚ್ಚು ಹಿಡಿದಂತೆ ತೋರಿತು.

ನನಗೆ ತಾತ್ಕಾಲಿಕವಾಗಿ ಅನ್ನದಾತರಾಗಿದ್ದ ಭಟ್ಟರು ಆಗ ಸಂಸ್ಕೃತ ವ್ಯಾಸಂಗ ದಲ್ಲಿ ಮುಳುಗಿದ್ದರು; ಆದರೆ ಸಾಹಿತ್ಯಭಾಗದಲ್ಲಲ್ಲ, ಕರ್ಮಕಾಂಡದಲ್ಲಿ. ನಾನು ಬೆಳಗ್ಗೆ ಕಾಫಿ ತೀರಿಸಿಕೊಂಡು ಹೊರಡೋಣವೆಂದಿದ್ದರೆ ಭಟ್ಟರು ವಿವಾಹಾದಿ ಕರ್ಮಗಳ ಮೇಲೆ ಒಂದು ಉಪನ್ಯಾಸವನ್ನಾರಂಭಿಸಿದರು. ಕಾಫಿಯನ್ನು ಹೊಗಳುವುದರಲ್ಲಿ ಉಪನ್ಯಾಸವನ್ನು ಮರೆಯಿಸಿ ತಲೆತಪ್ಪಿಸಿಕೊಂಡು ಹೋಗಬೇಕೆಂದು ಹವಣಿಸುತ್ತಿರು ವಲ್ಲಿ ನನ್ನ ಪ್ರಿಯಮಿತ್ರ ರಾಯರು ಬಂದರು. ರಾಯರು ಉತ್ತಮವರ್ಗದ ಸಾಹಿತಿ ಗಳು, ಕಥೆಗಾರರು.— ಆದರೂ ಅವರನ್ನು ನೋಡಿದಾಗ ನನಗೆ ಸಂತೋಷವೇ

ಆಯಿತು. ಸಾಧಾರಣವಾಗಿ ಸಾಹಿತಿಗಳೆಂದರೆ ಹಸಿದ ಹುಲಿಯಂತೆ ಕಂಡವರ ಮೇಲೆ ಬಿದ್ದು, ತಮ್ಮ ಕೃತಿಗಳನ್ನು ಪ್ರಯೋಗಿಸಿ, ಅವರನ್ನು ಅರೆಜೀವಮಾಡಿ, ಅನಂತರ ಮತ್ತೊಂದು ಸಲದ ಪ್ರಯೋಗಕ್ಕೆ ಉಳಿದಿರಲೆಂದು ಸ್ವಲ್ಪ ಅನ್ನಹಾಕಿ ಹೊರ ದೂಡುತ್ತಾರೆ. "ನಿನ್ನೆ ಸಂಜೆ ಲಂಡನ್ನಿನಲ್ಲಿ ಪ್ರಕಟವಾದ ಪುಸ್ತಕವನ್ನೋದಿದ್ದೀರಾ?" ಎಂದು ಪ್ರಶ್ನೆ ಕೇಳಿ ನಿಮ್ಮ ತೇಜೋವಧೆ ಮಾಡುತ್ತಾರೆ. ರಾಯರು ಹಾಗಲ್ಲ. ಅಲ್ಲದೆ ಅವರ ಮುಖದಲ್ಲಿ ಒಂದುಬಗೆಯ ಆತ್ಮಸಂತೋಷ, ತೃಪ್ತಿ, ಶಾಂತಿ — ಇವು ಯಾವಾಗಲೂ ನಗುತ್ತಿರುತ್ತವೆ. ತುಂಬಿದ ಮುಖ, ತುಂಬಿದ ಧಾರಾಳ — ಅವರನ್ನು ನೋಡಿದೊಡನೆಯೇ ನಿಮಗೆ ಔತಣ ಹೇಳಲು ಬಂದಿದ್ದಾರೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಅವರು ಏರ್ಪಡಿಸುವ ಊಟ ಸಹ ಹಿತವಾದದ್ದು, ಅಲ್ಲದೆ ಮಿತವಾದದ್ದಲ್ಲ. ಊಟಕ್ಕೆ ಕುಳಿತಾಗ ಅವರು ತಮ್ಮ ಕೃತಿಗಳ ವಿಷಯ ಪ್ರಸ್ತಾಪಿಸುವುದೇ ಇಲ್ಲ. ನಾಳೆ ನಡೆಯಲಿರುವ ಸಂಗೀತ ಕಚೇರಿ, ಪ್ರದರ್ಶಿತವಾಗಲಿರುವ ಚಿತ್ರ, ತಾರೆಯರ ಗುಣಾವಗುಣಗಳು — ಮುಂತಾದ ವಿಷಯಗಳಲ್ಲಿ ಟೀಕೆಮಾಡಿ, ಸೂಕ್ತವಾದ ಸಲಹೆಗಳನ್ನು ಕೊಟ್ಟು ನಿಮಗೆ ವ್ಯರ್ಥವಾದ ವೆಚ್ಚವಿಲ್ಲದಂತೆ ಮಾಡುತ್ತಾರೆ; ಅಥವಾ ವೆಚ್ಚವಾಗಬೇಕಾದರೆ ಅದನ್ನು ತಾವೇ ವಹಿಸಿಕೊಳ್ಳುತ್ತಾರೆ. ಒಟ್ಟಿನಲ್ಲಿ ಚಿನ್ನದಂಥ ಮನುಷ್ಯ. ಆ ಚಿನ್ನದ ಉಪಯೋಗ ನಮಗೆ ಅನೇಕವೇಳೆ ದೊರೆತಿದೆ. ಆದ್ದರಿಂದ ಅವರನ್ನು ನೋಡಿದಾಗ ನಿಜವಾಗಿಯೂ ಆನಂದವಾಯಿತು. ಆದರೆ ಅಂದೇನೋ ಅವರು ಔತಣ ಹೇಳುವುದಲ್ಲದೆ ಬೇರೆ ಉದ್ದೇಶವನ್ನು ಇಟ್ಟುಕೊಂಡಿದ್ದಂತೆ ತೋರಿತು. ಅವರ ತಲೆಯನ್ನು ಈ ಕೆನ್ಸಿಂಗ್ಟನ್ ಪಾರ್ಕಿನ ಹುಳು ಕೊರೆದಿತ್ತು.

ಅವರು ಹಿಂದೆ ಆ ಪಾರ್ಕಿನ ವಿಷಯವಾಗಿ ಉತ್ತಮವಾದ ಪ್ರಬಂಧವೊಂದನ್ನು ಬರೆದಿದ್ದರು. ಪ್ರಬಂಧದ ಕಳೆಗೆ ತಾವಲ್ಲದೆ ಆ ಪಾರ್ಕೇ ಕಾರಣವೆಂದು ಅವರಿಗೆ ಹೇಗೋ ಭ್ರಮೆ ಹುಟ್ಟಿರಬೇಕು. ಅಂದಿನಿಂದ ಅವರ ಮನೆಯಲ್ಲಿ ಇತರ ಭಕ್ಷ್ಯಗಳೊಡನೆ ನಂಜಿಕೊಳ್ಳಲು ಕೆನ್ಸಿಂಗ್ಟನ್ ಪಾರ್ಕನ್ನೂ ಬಡಿಸುವ ಪದ್ಧತಿಯಾಗಿ ಹೋಗಿದೆ. ಆ ದಿನವೂ ನಮ್ಮನ್ನು ಊಟಕ್ಕೆ ಬರಹೇಳಿ ಅನಂತರ ಪಾರ್ಕಿಗೆ ಎಳೆದುಕೊಂಡು ಹೋದರು. ನಾನು ಪಾರ್ಕನ್ನು ನೋಡಿದ್ದೇನೆಂದು ಗಿಣಿಗೆ ಹೇಳುವ ಹಾಗೆ ಹೇಳಿದೆ; ಬೇರೆ ಕೆಲಸವಿದೆಯೆಂದು ಅಂಗಲಾಚಿದೆ. ಆದರೂ ರಾಯರ ಸೌಜನ್ಯದ ಹಿಂದೆ ಅಡಗಿರುವ ವಜ್ರಮುಷ್ಟಿಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ.

ನಮ್ಮ ಭಟ್ಟರಲ್ಲಿ ಗೌರವಾರ್ಥವಾಗಿ ಮೋಟಾರು ಎಂದು ಕರೆಸಿಕೊಳ್ಳುವ ಚಿಕ್ಕ ವಾಹನವೊಂದಿದೆ. ಅದರಲ್ಲಿ ನಾವೆಲ್ಲರೂ ಉಸಿರು ಹಿಡಿದುಕೊಂಡು ಕುಳಿತು ಹೊರ

ಟೆವು. ನಮ್ಮ ಮಿತ್ರರಾದ ಆಚಾರ್ಯರಿಗೂ ಕೆನ್ಸಿಂಗ್ಟನ್ ಪಾರ್ಕೆಂದರೆ ಪ್ರಾಣ. ಆದ್ದರಿಂದ ಮಲ್ಲೇಶ್ವರದಲ್ಲಿ ಅವರ ಮನೆಗೆ ಹೋಗಿ ಅವರನ್ನು ತೊಡೆಯ ಮೇಲೆ ಕೂರಿಸಿಕೊಂಡು ದಾರಿಯಲ್ಲಿ ಲಾರಿಗಳ ಗುರಿಗೆ ಸಿಕ್ಕದೆ ಪಾರ್ಕನ್ನು ತಲಪಿದೆವು. ಆಗಲೇ ಬಿಸಿಲೇರಿತ್ತು. ಹೊರಡುವ ಮುನ್ನ ಮಾವಳ್ಳಿಯ ಹೋಟೆಲಿಗೆ ಭೇಟಿ ಕೊಡೋಣವೆಂಬ ನನ್ನ ಸಲಹೆಗೆ ಭಟ್ಟರು 'ವೀಟೊ' ಹಾಕಿದ್ದರು. ಇಷ್ಟೆಲ್ಲಾ ಪಾಡುಪಟ್ಟು ಊರಿಗೆ ಬಹುದೂರದಲ್ಲಿರುವ ಪಾರ್ಕಿಗೆ ಬಂದದ್ದಕ್ಕೆ ಪ್ರತಿಫಲವೂ ಏನೂ ಕಾಣಲಿಲ್ಲ. ಪಾರ್ಕಿನಲ್ಲಿ ಎತ್ತನೋಡಿದರೂ ಜನರ ಸುಳಿವಿಲ್ಲ; ನೆಲದ ಮೇಲೆ ಹಸುರಿನ ಚಿಹ್ನೆಯಿಲ್ಲ; ಹೂವಿನಗಿಡಗಳನ್ನೇನೋ ಬೆಳೆಯಿಸಿದ್ದರೂ ಎಲ್ಲಾ ಒಣಗಿ ನಿಂತಿದ್ದವು. ಅಲ್ಲಲ್ಲಿ ರಸ್ತೆಯಲ್ಲಿ ನಿಂತಿದ್ದ ಲಾರಿಗಳಿಂದ ಪಾರ್ಕಿನ ಅಂದಕ್ಕೆ ಒಪ್ಪ ಕೊಟ್ಟಂತೇನೂ ಆಗಲಿಲ್ಲ. ಆದರೆ ಇದೊಂದೂ ರಾಯರ ಉತ್ಸಾಹವನ್ನು ಉಡುಗಿಸ ಲಿಲ್ಲ. ಪಾರ್ಕಿನ ಸೊಬಗನ್ನು ಮೊದಲ ನೋಟದಲ್ಲಿ ಮನಗಾಣಲಾಗುವುದಿಲ್ಲವೆಂದೂ ಪದೇ ಪದೇ ಬಂದು ಅದರ ಆವರಣದಲ್ಲಿ ನೆನೆಯಬೇಕೆಂದೂ ಅಪ್ಪಣೆಕೊಡಿಸಿದರು. ಆದರೂ ನನ್ನ ಮುಖದಲ್ಲಿ ಉತ್ಸಾಹಕಾಣದೆ ಇದ್ದುದನ್ನು ನೋಡಿ "ಈಗೇನೋ ನೆಲವೆಲ್ಲಾ ಒಣಗಿದೆ. ಆದರೆ ವಸಂತಕಾಲದಲ್ಲಿ ಇದರ ಸೊಬಗನ್ನು ನೋಡಬೇಕಾ ಗಿತ್ತು" ಎಂದರು. ಈಗ ಇಳಿವಯಸ್ಸಾಗಿರುವವರು ಹಿಂದೆ ಯುವತಿಯರಾಗಿದ್ದಿರ ಬೇಕು, ನಿಜ. ಆದರೆ ಕೇವಲ ಆ ನೆನಪು ಮಾತ್ರವಾದರೆ ಯಾರ ಮನಸ್ಸನ್ನೂ ಸೆಳೆಯಲಾರದು.

ನನಗೂ ಪಾರ್ಕಿನ ಹುಚ್ಚು ಹಿಡಿಸುವವರೆಗೆ ಮರಳಿಹೋಗುವುದಿಲ್ಲವೆಂದು ರಾಯರು ಪ್ರತಿಜ್ಞೆಮಾಡಿದ್ದಿರಬೇಕು. ಅಲ್ಲಿಂದ ನಮ್ಮನ್ನು ಹತ್ತಿರವಿರುವ ಕೆರೆಗೆ ಕರೆದುಕೊಂಡು ಹೋದರು. ಅದರಲ್ಲಿ ಒಲೆಯ ಗುಪ್ಪುಗಳಂತೆ ಮೂರು ದಿಣ್ಣೆಗಳಿವೆ. ದೋಣಿಯಲ್ಲಿ ಕುಳಿತು ಆ 'ದ್ವೀಪ'ಗಳಿಗೆ ಹೋಗಬೇಕೆಂದು ನನ್ನ ಮಿತ್ರರೆಲ್ಲಾ ನಿಶ್ಚಯಿಸಿದರು. ನೌಕಾವಿಹಾರದ ವಿಷಯದಲ್ಲಿ ನನಗೆ ಸ್ವಲ್ಪ ಮೊಗಲಬಾದಷಹರ ಅಭಿರುಚಿ. ನೌಕೆಯ ಮಾಟದಲ್ಲಿಯೂ ವರ್ಣವಿನ್ಯಾಸದಲ್ಲಿಯೂ ಕಲೆಯ ಕೌಶಲ ಎದ್ದು ತೋರುತ್ತಿರಬೇಕು; ಅದು ಒರಗುದಿಂಬುಗಳಿಂದಲೂ ರತ್ನಗಂಬಳಿಗಳಿಂದಲೂ ಸುಸಜ್ಜಿತವಾಗಿರಬೇಕು. ಶರತ್ಕಾಲದ ರಾತ್ರಿ, ಚಂದ್ರಿಕೆ, ನನ್ನ ಪ್ರೇಮಾನುವರ್ತಿ ಯಾದ ಗೆಳತಿಯ ಮಧುರ ಸಲ್ಲಾಪ, ಗೀತಗೋವಿಂದದ ಅಷ್ಟಪದಿಗಳ ಸುಶ್ರಾವ್ಯ ವಾದ ಲಯ — ಈ ಬಗೆಯ ಕನಸೇನಿದ್ದರೂ ಅಂದಿನ ಅನುಭವದಿಂದ ಮಣ್ಣು ಪಾಲಾಯಿತು. ಬೇಸಗೆಯ ನಡುಹಗಲಿನ ಬಿಸಿಲು ಶರಚ್ಚಂದ್ರನಂತಿರಲಿಲ್ಲ. ನಮ್ಮ ಆಚಾರ್ಯರ ಕವನಗಳು ಎಂತೇ ಇರಲಿ, ಇನಿಯಳ ಕೊರಳದನಿಗೆ ಸರಿದೂಗಲಾರವು.

ಶಾಸ್ತ್ರವ್ಯಾಖ್ಯಾನದಿಂದ ಕಿವಿಯನ್ನು ಕೊರೆಯುತ್ತಿದ್ದ ಭಟ್ಟರ ಜಲ್ಪನೆಗೂ ಪ್ರೇಮಾಲಾಪಕ್ಕೂ ಯಾವ ಸಾದೃಶ್ಯವೂ ತೋರಲಿಲ್ಲ. ಇದರ ಮೇಲೆ, ವಿಾನು ಹಿಡಿಯುವವನ ದೋಣಿಯೇ ಈ ರಸಿಕರಿಗೆ ಕ್ರೀಡಾನೌಕೆ; ಅದೂ ವರ್ಷಗಟ್ಟಲೆ ಸಾವಿರಾರು ಜನರಿಗೆ ಸೇವೆಮಾಡಿ ಹಣ್ಣಾಗಿತ್ತು. ಅದನ್ನು ನಡೆಸುವುದಕ್ಕೆ ನಾವಿಕನಿರಲಿಲ್ಲ. ತಾವು ಸರಳಜೀವಿಗಳೆಂದೂ ಯಾವ ಕೆಲಸಕ್ಕಾದರೂ ಸಿದ್ಧರೆಂದೂ ಹೆಮ್ಮೆ ಪಡುತ್ತ ರಾಯರೂ ಆಚಾರ್ಯರೂ ತಾವೇ ಹುಟ್ಟು ತೆಗೆದುಕೊಂಡು ಹೊರಟರು. ಕಡೆ ಕವನಗಳನ್ನು ಕಟ್ಟುವುದಕ್ಕೂ ದೋಣಿ ನಡೆಸುವುದಕ್ಕೂ ನಡುವೆ ಸ್ವಲ್ಪ ಅಂತರವಿದೆಯೆಂಬುದನ್ನು ಅವರು ಮರೆತರೂ ನಾನು ಮರೆಯಲಾಗಲಿಲ್ಲ. ನನ್ನ ಜೀವನಕ್ಕೆ ಬೆಲೆಯುಂಟು. ಮೇಲೆ ಬಿಸಿಲಿನ ತಾಪ, ಒಳಗೆ ಹಸಿವಿನ ತಾಪ; ಜೊತೆಗೆ ಅಕಾಲದ ದುರ್ಮರಣ ಭೀತಿ. ಆದರೂ ಬೇರೆ ಪಥವಿಲ್ಲದ್ದರಿಂದ ಹೆಂಡತಿ ಮಕ್ಕಳನ್ನು ಒಂದು ಬಾರಿ ನೆನೆದು, ನಂಬದ ದೈವಗಳಿಗೆಲ್ಲಾ ಮನಸ್ಸಿನಲ್ಲಿಯೇ ಕೈಮುಗಿದು, ಹಣೆಯ ಬರಹವಿದ್ದಂತಾಗಲೆಂದು ದೋಣಿಯಲ್ಲಿ ಕುಳಿತೆ. ಅದು ನಿರ್ದಿಷ್ಟವಾದ ಗುರಿಯಿಲ್ಲದೆ ಸರ್ಪಗಮನದಿಂದ ಮುಂದುವರಿಯಿತು. ಆ ವಕ್ರಗತಿಯನ್ನು ನೋಡಿ ರಾಯರಿಗೆ ಸ್ವಲ್ಪ ನಾಚಿಕೆಯಾಗಿರಬೇಕು. "ಯಾವ ಗುರಿಯೂ ಇಲ್ಲದೆ ನಿಶ್ಚಿಂತೆಯಾಗಿ ದೋಣಿಯನ್ನು ತೇಲುಬಿಡುವುದರಲ್ಲಿಯೂ ಒಂದು ಅಪೂರ್ವವಾದ ಸೌಖ್ಯವಿದೆ" ಎಂದು ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಾ ಹುಟ್ಟಿನಿಂದ ನನಗೆ ತುಷಾರಸ್ನಾನ ಮಾಡಿಸಿದರು. ಆದರೂ ಈ ನಾವಿಕರ ಕೌಶಲವನ್ನು ನೋಡುವುದರಲ್ಲಿ ನನ್ನ ಸಂಕಟ ಮರೆಯಾಯಿತೆಂದೇ ಹೇಳಬೇಕು. ಆಚಾರ್ಯರು ಹುಟ್ಟಿನಿಂದ ತಮ್ಮ ಮುಖವನ್ನೇ ತಿವಿದುಕೊಂಡಾಗಲಂತೂ ನಾನು ಅಲ್ಲಿಗೆ ಬಂದದ್ದು ವ್ಯರ್ಥವಲ್ಲವೆಂದು ದೃಢವಾಯಿತು. ಉಳಿದ ಕಷ್ಟಗಳು ಎಷ್ಟಿದ್ದರೇನು! "ನಹಿ ಸುಖಂ ದುಃಖೈರ್ವಿನಾ ಲಭ್ಯತೆ."

ನಾವಿಕರು ದೋಣಿಯನ್ನು ನಡೆಸಿದರೋ ಅಥವಾ ದೋಣಿಯೇ ನಾವಿಕರನ್ನು ಎಳೆದೊಯ್ದಿತೋ, ಅಂತೂ ಒಂದು ದ್ವೀಪಕ್ಕೆ ಬಂದು ಸೇರಿದೆವು. ನನ್ನ ಮಿತ್ರರು ಉತ್ಸಾಹದಿಂದ ನೆಲಕ್ಕೆ ಹಾರಿ, ನೀರಿಗೆ ಬಿದ್ದು ಒದ್ದೆ ಬಟ್ಟೆಗಳನ್ನು ಹಿಂಡಿಕೊಂಡು ದಡವನ್ನು ಹತ್ತಿದರು. ದ್ವೀಪವೇನೋ ರಮ್ಯವಾಗಿತ್ತೆಂದು ಒಪ್ಪಬೇಕು. ಅಂದವಾಗಿ ರಚಿಸಿದ್ದ ಪುಷ್ಪಶಯ್ಯೆಗಳ ಮೇಲೆ ಮರದ ನೆರಳಿನ ನಡುವೆ ನುಸುಳಿ ನಲಿಯುವ ಸೂರ್ಯರಶ್ಮಿ ಮನೋಹರವಾಗಿತ್ತು. ನೀರಿನ ಅಂಚಿನ ವರೆಗೂ ಹೂವಿನ ಪೊದೆಗಳನ್ನು ಬೆಳೆಯಿಸಿದ್ದರು. ಮಧ್ಯದಲ್ಲಿ ಒಂದು ಸಣ್ಣ ಮಂಟಪದೊಳಗೆ ಪೀಠಗಳಿದ್ದವು. ನಮ್ಮ ಸರಳಜೀವಿ ನಾವಿಕರು ಆಯಾಸದಿಂದ ಏದುತ್ತಾ ಅಲ್ಲಿಗೆ ಹೋಗಿ ಕುಳಿತರು. ನಾನು ದಡದಲ್ಲಿಯೇ ಒಂದು ಲತಾದ್ವಾರದಲ್ಲಿ ನಿಂತು ಕೆರೆಯಲ್ಲಿ ಒಂದನ್ನೊಂದು ಅಟ್ಟಿ

ಬರುತ್ತಿದ್ದ ಅಲೆಗಳ ಸೊಬಗನ್ನು ನೋಡುತ್ತಾ ತಲ್ಲೀನನಾದೆ. ಕ್ಷಣಕಾಲ ಮನಸ್ಸಿಗೆ ನೆಮ್ಮದಿಯಾಯಿತು ಎಂದುಕೊಳ್ಳುವಷ್ಟರಲ್ಲಿಯೇ ಹಿಂದಿನಿಂದ "ಓಹೋಹೋ, ಇಲ್ಲಿ ನೋಡಿ, ವರ್ಡ್ಸ್‌ವರ್ತ್ ನಿಂತಿದ್ದಾನೆ! ಎಂದು ಭಟ್ಟರ ಧ್ವನಿ ಕೇಳಿಬಂತು. ಕವಿವರ್ಯ ಆಚಾರ್ಯರೂ ಹುಸಿನಗೆ ನಗುತ್ತ ಮುಂದೆ ಬಂದರು. ಪ್ರಕೃತಿಯ ಸೊಬಗು ತಮಗೊಬ್ಬರಿಗೇ ಗುತ್ತಿಗೆಯೆಂದು ತಿಳಿದಿದ್ದರೋ ಏನೊ. ಇವರಂತೆ ದಿನಕ್ಕೆ ಇಪ್ಪತ್ತನಾಲ್ಕು ಘಂಟೆ ಕವಿಯಾಗಿರುವ ಹಂಬಲು ನನಗಿಲ್ಲವಾದರೂ ಆ ಘಳಿಗೆಯಲ್ಲೆನೋ ನನಗೆ ನಿಜವಾಗಿಯೂ ವರ್ಡ್ಸ್‌ವರ್ತನ ಮನೋಭಾವವೇ ಇತ್ತು; ಹಾಸ್ಯಕ್ಕೇನೂ ಕಾರಣ ವಿದ್ದಂತೆ ತೋರಲಿಲ್ಲ. ಅಲೆಗಳ ಮತ್ತು ಹೂವುಗಳ ದಿವ್ಯನೃತ್ಯದ ಹಬ್ಬ ಕಣ್ಣೆದುರಿಗಿದ್ದರೂ ನನ್ನ ಮಿತ್ರರಿಗೆ ನನ್ನನ್ನು ಹಾಸ್ಯಮಾಡುವುದರ ಮೇಲೆಯೇ ಜ್ಞಾನ. ಭಟ್ಟರು "ನಮ್ಮ ಅಭಿನವ ವರ್ಡ್ಸ್‌ವರ್ತನ ಫೋಟೋ ತೆಗೆಯುತ್ತೇನೆ" ಎಂದು ತಮ್ಮ ಕ್ಯಾಮೆರಾವನ್ನು ಕ್ಲಿಕ್ಕಿಸಿದರು. ಮೂರು ದಿನವಾದ ಮೇಲೆ ಆ ಚಿತ್ರವನ್ನು ನೋಡಿದೆವು. ಅಷ್ಟೇನೂ ಚೆನ್ನಾಗಿರಲಿಲ್ಲ. ಅದನ್ನು ಕಂಡು ಈ ಮೂವರೂ ಹುಚ್ಚುಹುಚ್ಚಾಗಿ ನಕ್ಕರು. ನಾನೇನೊ ವರ್ಡ್ಸ್‌ವರ್ತ್ ಅಲ್ಲದಿರಬಹುದು, ಆದರೆ ಭಟ್ಟರು ಫೋಟಾಗ್ರಫರೂ ಅಲ್ಲ; ಚಿತ್ರವನ್ನು ನೋಡುವವರು ಇದನ್ನು ಮರೆಯದಿರಲಿ.

ನನ್ನನ್ನು ಹಾಸ್ಯಮಾಡಿ ನಕ್ಕ ಆಚಾರ್ಯರು ಈಗ ತಾವೇ ಅಲ್ಲಿ ನಿಂತು ನಿಮೀಲಿತನೇತ್ರರಾಗಿ, ಒಂದು ಬಗೆಯ "ಕವಿಸಹಜವಾದ" ಅಂತರ್ದೃಷ್ಟಿಯಿಂದ ಸುತ್ತಲೂ ನೊಡುತ್ತಾ, "ಈಗ ಬೆಂಗಾಡಾಗಿರುವ ಈ ಉಪವನವೆಲ್ಲಾ ವಸಂತ ಋತುವಿನಲ್ಲಿ ಪುಷ್ಪಿತವಾದರೆ ಎಂತಹ ಸಂಯಮಿಯ ಮನಸ್ಸನ್ನಾದರೂ ಸೆಳೆಯುವುದು. ಪಟ್ಟಣದ ಗಲಭೆ, ಜನರ ಆತುರ, ಕೇವಲ ಮೃತ್ಸಮಾನವಾದ ಹೊನ್ನಿಗಾಗಿ ಹೋರಾಡುವ ಕರುಬುಜನರ ರಾಗದ್ವೇಷಾದಿಗಳು — ಇವೆಲ್ಲವನ್ನೂ ಬಿಟ್ಟು ಬರಬಾರದೆ ಈ ಶಾಂತಿಯ ನೆಲೆವೀಡಿಗೆ! ಇಲ್ಲಿ ನಿಂತು ಧ್ಯಾನಮಾಡುವವನಿಗೆ, ಪ್ರಕೃತಿಯ ಹೃದಯವನ್ನು ಒಳಹೊಗುವವನಿಗೆ, ಜೀವನದ ರಹಸ್ಯ ಹಸ್ತಗತವಾದೀತು!" ಎಂದು ಉದ್ಗಾರ ತೆಗೆದರು. ಮಾನವನ ಕಷ್ಟನಿಷ್ಠುರಗಳಿಗೆ ಬೆನ್ನುತಿರುಗಿಸಿ ಹಸಿವಿನ ಸಂಕಟವನ್ನು ಮರೆಯುವ ಈ ಬಗೆಯ ಪ್ರಕೃತಿಪ್ರೇಮವನ್ನು ನೋಡಿದರೆ ನನಗೆ ಮೈ ಉರಿಯುತ್ತದೆ. ಹೀಗೆ ಮಾತಾಡುವವರು ನಾನು ಹಿಂದಿನಿಂದ ಬಲ್ಲ ಕರುಣೆಯ ಮೂರ್ತಿಯಾದ ಆಚಾರ್ಯರಿರಬಹುದೆ ಎಂದು ನನಗೆ ಸಂದೇಹವುಂಟಾಯಿತು. ನಾನು ತಟ್ಟನೆ ದೋಣಿಗೆ ಹೋಗಿ ಕುಳಿತು, ಅವರು ಬರದಿದ್ದರೆ ನಾನೊಬ್ಬನೇ ಹೊರಟುಹೋಗುವೆನೆಂದು ಮುಷ್ಕರಹೂಡಿದ ಮೇಲೆ ಈ ಹದಿನಾರಾಣೆ ಕವಿಗಳೆಲ್ಲರೂ ನನ್ನನ್ನು "ಸೌಖ್ಯಘಾತಕ" ಎಂದು ಶಪಿಸುತ್ತ ಇಳಿದು ಬಂದರು. ಅಲ್ಲಿಂದ ನಾವು

ರಾಯರ ಮನೆಯನ್ನೂ ನನ್ನ ತಾಳ್ಮೆಯ ಎಲ್ಲೆಯನ್ನೂ ತಲಪುವ ವೇಳೆಗೆ ಮಧ್ಯಾಹ್ನ ಒಂದು ಘಂಟೆಯಾಗಿತ್ತು.

ಊಟಕ್ಕೆ ಕುಳಿತು ಸ್ವಲ್ಪ ಹೊತ್ತಾದ ಮೇಲೆ ಕೆನ್ಸಿಂಗ್ಟನ್ ಪಾರ್ಕ್ ಪಿಶಾಚ ಗ್ರಸ್ತರಾಗಿದ್ದ ಈ ಮೂವರಿಗೂ ವಿಮೋಚನೆಯ ಕಾಲ ಬಂದಂತೆ ತೋರಿತು. ಆಚಾರ್ಯರು ಶ್ಯಾಮಿಗೆ ಪಾಯಸದ ವಿಷಯದಲ್ಲಿ ತಮ್ಮ ವಿಚಾರಪರಿಪುತವಾದ ಅಭಿಪ್ರಾಯಗಳನ್ನು ಕೊಟ್ಟರು; ರಾಯರು ದೇವಿಕಾರಾಣಿ ಅಭಿನಯ ಕೌಶಲವನ್ನು ವಿಮರ್ಶಿಸಿದರು; ಭಟ್ಟರು ಕಾನನಬಾಲೆಯ ಗಾನವನ್ನು ಹೊಗಳಿದರು. ಇಂಥ ಗಹನವಾದ ವಿಷಯಗಳಲ್ಲಿ ನನ್ನ ಮನಸ್ಸಿಗೂ ವರ್ತನೆ ಹೆಚ್ಚು. ಅಲ್ಲದೆ ಇವರೆಲ್ಲರೂ ಅನುಭವಿಗಳು. ಅವರ ವಿಮರ್ಶೆ ದಿಗ್ದರ್ಶಕವಾದದ್ದು. ನನ್ನ ಅಸಮಾಧಾನ ಮಾಯವಾಗಿ ಉಲ್ಲಾಸ ತಲೆದೋರಿತು. ಮೂರು ಘಂಟೆಯ ಹೊತ್ತಿಗೆ ರಾಯರು ಕಾಫಿ ತಂದುಕೊಟ್ಟಾಗಲಂತೂ ಅವರಿಗೆ ಅರ್ಧರಾಜ್ಯವನ್ನೇ ಕೊಟ್ಟುಬಿಡುವುದರಲ್ಲಿದ್ದೆ.

ಆದರೆ ಬರಸಿಡಲು ಹೊಡೆಯಬೇಕಾದರೆ ಆಕಾಶ ನಿರ್ಮಲವಾಗಿರುವಾಗಲೇ. ನಾವೆಲ್ಲರೂ ಪ್ರಸನ್ನರಾಗಿರುವ ಸಮಯ ನೋಡಿಕೊಂಡು ರಾಯರು ಅದುವರೆಗೂ ಅಡಗಿಸಿಟ್ಟಿದ್ದ ತಮ್ಮ ದುರುದ್ದೇಶವನ್ನು ಹೊರಗೆಡಹಿದರು. ಉಳಿದವರು ಏನೂ ತಿಳಿಯದಂತೆ ಎಲೆ ಅಡಕೆ ಮೆಲ್ಲುತ್ತಿದ್ದರು. ಕೆನ್ಸಿಂಗ್ಟನ್ ಪಾರ್ಕಿನ ವಿಷಯವಾಗಿ ನಾವೆಲ್ಲರೂ ಒಂದೊಂದು ಲೇಖನವನ್ನು ಬರೆಯಬೇಕೆಂದೂ, ಅವೆಲ್ಲವನ್ನೂ ಒಟ್ಟುಗೂಡಿಸಿ ಪುಸ್ತಕರೂಪದಲ್ಲಿ ಪ್ರಕಟಿಸಬೇಕೆಂದೂ ರಾಯರ ಸೂಚನೆ. ಪಾರ್ಕಿನ ಭೂತ ಮತ್ತೆ ಬೃಹದಾಕಾರದಿಂದ ಎದ್ದು ನಿಂತಿತು. ಭಟ್ಟರೇನೊ — ಅವರು ಮೊದಲಿಂದಲೂ ಒಳಸಂಚಿನಲ್ಲಿದ್ದಿರಬಹುದು —“ ರಾಯರು ಇಷ್ಟು ಒಳ್ಳೆಯ ಊಟ ಹಾಕಿಸಿರುವಾಗ ಅವರ ಮಾತಿನಂತೆ ನಡೆಯುವುದು ನಮ್ಮ ಕರ್ತವ್ಯ ” ಎಂದು ಅಭಿಪ್ರಾಯಪಟ್ಟರು. ಇದುವರೆಗೂ ನಿಷ್ಕಪಟಿಗಳಾಗಿದ್ದ ರಾಯರು ಇಂಥ ಅಧೋಗತಿಗೆ ಇಳಿಯಬಲ್ಲರೆಂದು ನಾನು ನಂಬಲಾರದೆ ಹೋದೆ. ಹಸಿದವರಿಗೆ ಅನ್ನವಿಟ್ಟದ್ದಕ್ಕೆ ಈ ರೀತಿ ಪ್ರತಿಫಲವನ್ನು ಅಪೇಕ್ಷಿಸುವಷ್ಟು ಕೆಟ್ಟಿರಲಾರರು. ಕನಸಿನಲ್ಲಾದರೂ ಇಂಥ ಭಾವನೆಗಳನ್ನು ಅವರಿಗೆ ಆರೋಪಿಸಿದವರಿಗೆ ರೌರವಾದಿ ನರಕಪ್ರಾಪ್ತಿಯಾದೀತು. ಹೀಗೆ ನಾನು ಎಷ್ಟು ಹೇಳಿದರೂ ಗಮನಕೊಡದೆ ಭಟ್ಟರು ತಮ್ಮ ವಾದವನ್ನೇ ಸಮರ್ಥಿಸಿದರು. ನನಗೆ ರಾಯರ ಸೂಚನೆಯೂ ಭಟ್ಟರ ವಾದವೂ ವಿಚಿತ್ರವಾಗಿ ಕಂಡವು. ಇವರೆಲ್ಲರೂ ಸಾಹಿತ್ಯಪ್ರೇಮಿಗಳು. ಆದರೂ ರಾಯರು ಇಷ್ಟವಿಲ್ಲದವರಿಂದ ಲೇಖನ ಬರೆಯಿಸಲು ತೊಡಗಿದ್ದರು. ಭಟ್ಟರು ಕೇವಲ ಕೃತಜ್ಞತೆಗಾಗಿ ಬರೆದುಕೊಡಲು ಸಿದ್ಧರಾಗಿದ್ದರು. ಮಧ್ಯೆ ನಾನೇನು ಮಾಡಬೇಕು! ನನಗೆ

ಲೇಖನ ಬರೆಯುವುದೆಂದರೆ ಪ್ರಾಣಸಂಕಟ; ಕರೆದಾಗ ಪ್ರಸನ್ನಳಾಗುವಷ್ಟು ಸುಲಭಳಲ್ಲ, ನನ್ನ ಸ್ಫೂರ್ತಿದೇವಿ. ಅಲ್ಲದೆ ನನಗೆ ಆ ಪಾರ್ಕಿನ ಮೇಲೆ ಪ್ರೇಮವಿಲ್ಲ. ಸಾವಿರಬಾರಿ ಇಲ್ಲ. "ಖಂಡಿತವಾಗಿಯೂ ನಾನು ಒಂದಕ್ಷರವನ್ನೂ ಬರೆಯುವುದಿಲ್ಲ, ಇಂಥ ಪುಸ್ತಕಗಳನ್ನು ಪ್ರಕಟಿಸುವುದರಲ್ಲಿ ನನಗೆ ನಂಬಿಕೆಯಿಲ್ಲ, ವಾಚಕ ವೃಂದ ನನಗೇನೂ ಅಪರಾಧಮಾಡಿಲ್ಲ" ಎಂದು ನಿಷ್ಠುರೋಕ್ತಿಗಳನ್ನಾಡಿ ಅಲ್ಲಿಂದ ಓಡಿಹೋದೆ.

ಮೈಸೂರಿಗೆ ಬಂದ ಮೇಲೆ ರಾಯರಿಂದ ಒಂದು ಪತ್ರಬಂತು: "ನೀವು ವಚನಕೊಟ್ಟಿರುವಂತೆ ಲೇಖನವನ್ನು ಬೇಗ ಕಳುಹಿಸುತ್ತೀರೆಂದು ನಂಬಿದ್ದೇನೆ" ಎಂದು! ನಾನು ಉತ್ತರಕೊಡಲಿಲ್ಲ. ಆದರೆ ಮೊದಲು ವಾರಕ್ಕೊಂದು, ಅನಂತರ ಎರಡು, ಮೂರು — ಕೊನೆಗೆ ಕಾಗದಗಳ ಸುರಿಮಳೆಯೇ ಆರಂಭವಾಯಿತು. ಇನ್ನು ಸುಮ್ಮನಿರಲು ಸಾಧ್ಯವಾಗಲಿಲ್ಲ. ಬೇರೆ ಯಾರಾದರೂ ಆಗಿದ್ದರೆ ಜಗಳವಾಡಬಹುದಾಗಿತ್ತು; ರಾಯರೊಡನೆ ಅದು ಸಾಧ್ಯವಿಲ್ಲ. ಅವರ ಸ್ವಭಾವ ಎಷ್ಟು ಮೃದುವಾಗಿದ್ದರೂ ಒಟ್ಟಿನಲ್ಲಿ ಅವರ ಸೂಚನೆಯೆಂದರೆ ಅವರ ಆಜ್ಞೆ. ಆದ್ದರಿಂದಲೇ ಅವರನ್ನು ಕೊನೆಯವರೆಗೂ ಎದುರಿಸಿ ನಿಲ್ಲಲಾರದೆ ಈ ಲೇಖನವನ್ನು ಬರೆದೆ. ತಪ್ಪು ನನ್ನದಲ್ಲ.

ಎ. ಎನ್. ಮೂರ್ತಿರಾವ್.

## ಒಂದು ಹಾಡು

ಮಂದಮಾರುತ ತಂದ ಚಂದದ ಹಾಡೊಂದ
ಅಂದೇನೆಂದರ ಬಾರದೀ ಬಾಯಿಗೆ
ಬೆಂದು ಬಳಲಿದ ಜನಕೆ ನೊಂದು ನಂದಿದ ಮನಕೆ
ಬಿಂದೊಂದಮೃತದ ಮರುಭೂಮಿಗೆ . . . .

ಕಿವಿಯಾರೆ ಕೇಳಿದೆ ಕಿವಿಯಲ್ಲೆ ಉಳಿದಿದೆ
ಸವಿದೇನೆಂದರೆ ಇಲ್ಲ ನಾಲಿಗೆಗೆ
ಮುದುಡಿದ್ದ ಮನವರಳಿ ಕದಡಿದ್ದ ಬಗೆ ಮರಳಿ
ಹದಗೂಡಿ ಬೆರೆತವು ಆ ಹೊತ್ತಿಗೆ . . . .

ತುಂಬಿದೆ ತಲೆತುಂಬ ದುಂಬಿಯ ಮೃದುಗಾನ
ವೆಂಬಂತೆ ದುಂದುಂಮಿ ತಿರುಗುತಿದೆ
ರಂಬಿಸಿ ಮಗುವನು ಚುಂಬಿಸಿ ಮಲಗಿಸ
ಲೆಂಬ ಜೋಗುಳ ತಾನ ಹೋಲುತಿದೆ . . . .

ಕನಸಲೋಕದೊಳಿದ್ದು ಇನಿಯುಳನರಸುತ
ವನವನ ಅಲೆಯುವ ಗಂಧರ್ವನು
ದಣಿದು ಮಲಗಿರೆ ಕಂಡ ಕನಸ ಸಲ್ಲೆಯ ಸ್ವರವ
ನೆನಸಿ ಕೇಳಿದವೊಲು ಮನ ತಣಿಯಿತು . . . .

ತನುವೀಣೆ ಮನತಂತಿಯಸು ಮಿಾಂಟಿದಂತಾಯ್ತು
ಘನ ಝೇಂಕಾರವು ಜುಂಯ್ ಗೂಡಿತು
ತನು ಮನ ಒಂದಾಗಿ ನೆನೆವ ಭಕ್ತರ ಮೌನ
ವನು ತಂದ ಗಾನದ ಅರಿವಾಯಿತು . . . .

ಗೀತಾಪ್ರಿಯ.

# ಪ್ರಾಚೀನ ತಮಿಳುಶಾಸನಗಳ ವ್ಯಾಕರಣ

## ಮೊದಲ ಮಾತು

ಕಾವ್ಯಾವಲೋಕನದ ಮೊದಲನೆಯ ಅಧ್ಯಾಯವಾದ ಶಬ್ದಸ್ಮೃತಿ, ಕರ್ಣಾಟಕ ಭಾಷಾಭೂಷಣ, ಕರ್ಣಾಟಕ ಶಬ್ದಮಣಿದರ್ಪಣ, ಕರ್ಣಾಟಕ ಶಬ್ದಾನುಶಾಸನ, ಎಂಬಿವು ಹಳಗನ್ನಡದ ವ್ಯಾಕರಣದ ಪ್ರಕ್ರಿಯೆಗಳನ್ನು ವಿವರಿಸುತ್ತವೆ. ಆದರೆ ಇವು ಹಳಗಳನ್ನಡದ ಶಾಸನಗಳಿಗೆ ಸಂಬಂಧಿಸುವ ವ್ಯಾಕರಣದ ವಿಚಾರಗಳನ್ನು ವಿವರಿಸಿಲ್ಲ.

ಶಾಸನಗಳ ಭಾಷೆಗಳ ದೃಷ್ಟಿಯಿಂದ ಪರಿಶೀಲಿಸಿ ಕಾವ್ಯಗಳ ಭಾಷೆ ಮತ್ತು ಶಾಸನಗಳ ಭಾಷೆ ಇವುಗಳಿಗಿರುವ ತಾರತಮ್ಯವನ್ನು ತಿಳಿಯದಿದ್ದರೆ ಕನ್ನಡ ಭಾಷೆಯ ಚರಿತ್ರೆಯ ಜ್ಞಾನವು ಪೂರ್ಣವಾಗುವುದಿಲ್ಲ. ಕ್ರಿ.ಶ. ಆರನೆಯ ಮತ್ತು ಏಳನೆಯ ಶತಮಾನ ಶಾಸನಗಳ ವ್ಯಾಕರಣವನ್ನು ಮೈಸೂರು ವಿಶ್ವವಿದ್ಯಾನಿಲಯದವರು ಮುದ್ರಿಸಿದ್ದಾರೆ. ಕ್ರಿ.ಶ. ಎಂಟು, ಒಂಬತ್ತು, ಹತ್ತು ಈ ಶತಮಾನ ಶಾಸನಗಳ ವ್ಯಾಕರಣವನ್ನು ಇನ್ನೊಬ್ಬ ವಿದ್ವಾಂಸರು ಬರೆದಿದ್ದಾರೆ. ಅದು ಅಚ್ಚಿಗೆ ಸಿದ್ಧವಾಗಿದೆ. ಹೀಗೆಯೇ ೧೧ರಿಂದ ೧೯ನೆಯ ಶತಮಾನಗಳ ವರೆಗಿನ ಶಾಸನಗಳ ವ್ಯಾಕರಣವೂ ಕೂಡಲೇ ಹೊರಬಿದ್ದು ಕನ್ನಡದ ಕಾವ್ಯಶಾಸನಗಳ ಭಾಷಾಸ್ವರೂಪವು ಎಲ್ಲರಿಗೂ ಸುಲಲಿತವಾಗಿ ತಿಳಿಯುವಂತಾಗಬೇಕು.

ತಮಿಳಿನಲ್ಲಿ ಭಾಷಾಸ್ವರೂಪವನ್ನು ವಿವರಿಸುವ ವ್ಯಾಕರಣಗ್ರಂಥಗಳಲ್ಲಿ ನಾಲ್ಕು ಮುಖ್ಯ : ಪೇರಗತ್ತಿಯಂ, ತೋಲಕಾಪ್ಪಿಯಂ, ವೀರಶೋಟಿಯಂ, ನನ್ನೂಲ್.

ಇವೂ ತಮಿಳುಶಾಸನಗಳಲ್ಲಿ ದೊರಕುವ ವ್ಯಾಕರಣ ಪ್ರಕ್ರಿಯೆಗಳ ವಿಷಯವನ್ನು ಪರಿಶೀಲಿಸಿಲ್ಲ. ತಮಿಳುಶಾಸನಗಳ ಭಾಷೆಯ ಸ್ವರೂಪವನ್ನು ತಿಳಿಯದಿದ್ದರೆ ತಮಿಳುಭಾಷೆಯ ಬೆಳೆವಣಿಗೆಯ ಸಂಪೂರ್ಣಜ್ಞಾನವು ಲಭಿಸುವುದಿಲ್ಲವೆಂಬುದನ್ನು ತಿಳಿದ ಡಾಕ್ಟರ್ ಕೆ. ಕಣಪತಿಪಿಳ್ಳೈ, ಎಂ.ಎ., ಪಿಎಚ್.ಡಿ. ಯವರು ಕ್ರಿ.ಶ. ಆರು ಮತ್ತು ಏಳನೆಯ ಶತಮಾನಗಳ ತಮಿಳುಶಾಸನಗಳ ಭಾಷೆಯನ್ನು ಪರಿಶೀಲಿಸಿ, ಈ ಶಾಸನಗಳ ವ್ಯಾಕರಣವನ್ನು ರಚಿಸಿದ್ದಾರೆ. ಅದು ಅಚ್ಚಾಗುವುದು ಇನ್ನೂ ತಡವಾಗುತ್ತದೆ. ಕನ್ನಡ ಶಾಸನಗಳ ವ್ಯಾರಕಣವನ್ನೂ ತಮಿಳುಶಾಸನಗಳ ವ್ಯಾಕರಣವನ್ನೂ ಹೋಲಿಸಿನೋಡುವುದರಿಂದ ತಮಿಳಿಗೂ ಕನ್ನಡಕ್ಕೂ ಇದ್ದ ನಿಕಟ ಸಂಬಂಧವು ಗೊತ್ತಾಗುವುದಲ್ಲದೆ ದ್ರಾವಿಡಭಾಷೆಗಳಲ್ಲಿ ಪ್ರಾಚೀನ ವ್ಯಾಕರಣಗಳ ಸ್ವರೂಪವೆಂತಹುದೆಂಬುದೂ ವಿಶದವಾಗಿ ತಿಳಿಯುತ್ತದೆ. ತೆಲುಗು ಮತ್ತು ಮಲೆಯಾಳ

ಗಳ ಶಾಸನಗಳ ವ್ಯಾಕರಣಗಳೂ ಹೀಗೆಯೇ ಸಿದ್ಧವಾದರೆ ದ್ರಾವಿಡ ವ್ಯಾಕರಣಗಳ ಸ್ವರೂಪವು ಮತ್ತಷ್ಟು ಸ್ಪಷ್ಟವಾಗುವುದು. ಈ ಉದ್ದೇಶದಿಂದ ಈ ಪ್ರಾಚೀನ ತಮಿಳುಶಾಸನಗಳ ವ್ಯಾಕರಣದ ಮುಖ್ಯಾಂಶಗಳನ್ನು ಇಲ್ಲಿ ಸಂಗ್ರಹವಾಗಿ ಕೊಡಲು ಯತ್ನಿಸಿದೆ. ಮುಖ್ಯವಾಗಿ ಪ್ರಾಚೀನ ತಮಿಳು ಶಾಸನಗಳ ಲಿಪಿ, ಅವುಗಳಲ್ಲಿರುವ ಪ್ರಾತಿಪದಿಕ, ನಾಮಪದ, ಗುಣವಾಚಕ, ಸರ್ವನಾಮ, ಸಂಖ್ಯಾವಾಚಕ, ಕ್ರಿಯಾಪದ ಮತ್ತು ಅವ್ಯಯ—ಇವುಗಳನ್ನು ವಿವರಿಸಿ ಆವಶ್ಯಕವಾದೆಡೆಗಳಲ್ಲಿ ಈ ತಮಿಳು ಶಾಸನಗಳಲ್ಲಿರುವ ರೂಪಗಳನ್ನು ಪ್ರಾಚೀನ ತಮಿಳು ವ್ಯಾಕರಣಗಳಲ್ಲಿ ಸಿಕ್ಕುವ ರೂಪಗಳೊಡನೆ ಹೋಲಿಸಲಾಗಿದೆ.

ಹೀಗೆ ವಿಚಾರಮಾಡಲು ಆರಿಸಿರುವ ತಮಿಳು ಶಾಸನಗಳು :—

೧. ದಳವನೂರು ಗುಹಾಶಾಸನಗಳು — ಕ್ರಿ.ಶ. ೬೦೦–೬೩೦.
೨. ಮಹೇಂದ್ರ ಪೋತರಾಜನ ವಲ್ಲಂಶಾಸನ — ಕ್ರಿ.ಶ. ೬೦೦–೬೩೦.
೩. ಕೂರಮ್‌ಪಲ್ಲವ ಶಾಸನ — ಕ್ರಿ.ಶ. ೬೦೦–೬೮೦.
೪. ನಂದಿವರ್ಮನ ಕಾಚಾಕುಟಿ ಶಾಸನಗಳು — ಕ್ರಿ.ಶ. ೭೩೨.
೫. ವಿಕ್ರಮಾದಿತ್ಯಮಾವಳಿ ವಾಣರಾಯಸ ಕಾಲದ ಶಾಸನಗಳು — ಕ್ರಿ.ಶ. ೭೩೩.
೬. ಸಂತಿಪ್ಪೋತರಾಚರ್ ಶಾಸನ — ಕ್ರಿ.ಶ. ೭೬೦.
೭. ನಂದಿವರ್ಮನ ಪಟ್ಟತ್ತಾಳಮಂಕಲಂ ಶಾಸನ — ಕ್ರಿ.ಶ. ೭೭೧.
೮. ದಂತಿವರ್ಮನ ತಿರುವೆಳ್ಳರೈ ಶಾಸನ — ಕ್ರಿ.ಶ. ೭೭೯.
೯. ದಂತಿವರ್ಮನ ತಿರುವಲ್ಲಿಕ್ಕೇಣಿಯ ಶಾಸನ — ಕ್ರಿ.ಶ. ೭೮೭.
೧೦. ವಿಜಯಾದಿತ್ಯ ಮಹಾವಳಿ ವಾಣರಾಯಸ ಕಾಲದ ಶಾಸನ — ಕ್ರಿ.ಶ. ೮೨೪.
೧೧. ಶಿನ್ನಲ್ಯೈ ಸ್ತಂಭಶಾಸನ — ಕ್ರಿ.ಶ. ೮ ನೆಯ ಶತಮಾನದ ಆದಿಭಾಗ.
೧೨. ಸೆಟುನ್‌ಚಟ್ಟೈಯನ ವೇಳ್ವಿಕುಟಿ ಶಾಸನ — ಕ್ರಿ.ಶ. ೭೬೮.
೧೩. ಮಾರನ್ ಚಟ್ಟೈಯನ ಆನ್ಮೈಮಲ್ಯೈ ಶಾಸನ — ಕ್ರಿ.ಶ. ೭೭೦.
೧೪. ,, ನ ತಿರುಪ್ಪರನ್ ಕುನಱಮ್ ಶಾಸನ — ಕ್ರಿ.ಶ. ೭೭೧.
೧೫. ಮದ್ರಾಸ್ ಮ್ಯೂಸ್ಸಿಯುಂಸಲ್ಲಿರುವ ಜಟಿಲವರ್ಮನ ಶಾಸನಗಳು — ಕ್ರಿ.ಶ. ೭೮೨.
೧೬. ಶಿನ್ನಮನ್ನೂರ್ ಸಣ್ಣ ಶಾಸನಗಳು — ಕ್ರಿ.ಶ. ೮ ನೆಯ ಶತಮಾನ.
೧೭. ತಿರುವನಂತಪುರದ ಮ್ಯೂಸ್ಸಿಯುಂಸಲ್ಲಿರುವ ಮಾರನ್ ಚಟ್ಟೈಯನ ಶಾಸನ — ಕ್ರಿ.ಶ. ೭೯೨.

೧೮. ವಿಜಯ ಈಶ್ವರವರ್ಮನ ಹನುಮಂತಪುರದ ವೀರಗಲ್ಲಿನ ಶಾಸನ — ಕ್ರಿ.ಶ. ೮ ನೆಯ ಶತಮಾನ.

ಈ ಶಾಸನಗಳನ್ನು ಅವುಗಳ ಲಿಪಿಗನುಸಾರವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು :—

೧. **ತಮಿಳು—ಗ್ರನ್ಥ—ಪಲ್ಲವರ** ಶಾಸನಗಳು.

೨. **ವಟ್ಟೆಳುತ್ತು—ಪಾಂಡ್ಯರ** ಶಾಸನಗಳು.

ಶ್ರೀ ಗೋಪೀನಾಥರಾಯರು ತಮಿಳು-ಗ್ರನ್ಥ ಲಿಪಿಯು ಬ್ರಾಹ್ಮೀ ಲಿಪಿಯ ಪ್ರಭೇದವೆಂದು ಸಿದ್ಧಾನ್ತಮಾಡಿದ್ದಾರೆ.[1] ವಟ್ಟೆಳುತ್ತಿನ ಮೂಲವಾವುದೆಂಬುದನ್ನು ಇನ್ನೂ ಸಂಪೂರ್ಣವಾಗಿ ವಿಮರ್ಶೆಮಾಡಿಲ್ಲ. ಇದು ಫಿನಿಷಿಯನ್ ಮತ್ತು ಅರಮೆಯ್ಕ್ ಲಿಪಿಯಿಂದ ಬಂದುದೆಂದು ಬರ್ನೆಲ್ ಅಭಿಪ್ರಾಯಪಡುತ್ತಾರೆ.[2] ರಾಯಸದವರೂ ವ್ಯಾಪಾರಿಗಳೂ ಅಜಾಗರೂಕತೆಯಿಂದಲೋ ಧೋರಣೆಯಿಂದಲೋ ಮೋಡಿಯಾಗಿ ಬರೆದ ತಮಿಳು ಲಿಪಿಯೇ ವಟ್ಟೆಳುತ್ತು—ಎಂದು ಬ್ಯೂಲರ್ ಹೇಳುತ್ತಾರೆ.[3] ಆದರೆ ಗೋಪೀನಾಥರಾಯರು, ಇಂಡಿಯಾ ದೇಶದ ಎಲ್ಲಾ ಲಿಪಿಗಳಂತೆಯೇ ಈ ವಟ್ಟೆಳುತ್ತೂ ಬ್ರಾಹ್ಮೀ ಲಿಪಿಯಿಂದಲೇ ಬಂದುದೆಂದೂ ಇದು ರೂಪಾನ್ತರವನ್ನು ಹೊಂದಿದುದಕ್ಕೆ ಬೇರೆ ಕಾರಣಗಳಿವೆಯೆಂದೂ ಹೇಳುತ್ತಾರೆ.[4]

ಏಳು ಮತ್ತು ಎಂಟನೆಯ ಶತಮಾನಗಳಲ್ಲಿ ಈ ಎರಡು ಲಿಪಿಗಳೂ ತಮಿಳು ನಾಡಿನಲ್ಲಿದ್ದುವು: ಉತ್ತರದಲ್ಲಿ ತಮಿಳುಗ್ರಂಥ ದಕ್ಷಿಣದಲ್ಲಿ ವಟ್ಟೆಳುತ್ತು. ಹತ್ತನೆಯ ಶತಮಾನದ ಕೊನೆಯಭಾಗದಲ್ಲಿ ಚೋಳರು ಆಕ್ರಮಿಸುವವರೆಗೂ ಪಾಂಡ್ಯರಾಜ್ಯದಲ್ಲಿ ವಟ್ಟೆಳುತ್ತೇ ಪ್ರಚಾರದಲ್ಲಿದ್ದಿತು. ಚೋಳರ ಪ್ರಾಬಲ್ಯದಿಂದ ತಮಿಳುಗ್ರಂಥ ಲಿಪಿಯನ್ನೇ ಎಲ್ಲೆಲ್ಲಿಯೂ ಎಲ್ಲರೂ ಉಪಯೋಗಿಸಲಾರಂಭಿಸಿದರು.

ಈ ಶತಮಾನಗಳ ಪಲ್ಲವಶಾಸನಗಳು ಸಿಂಹವಿಷ್ಣುವಂಶದವರ, ಪಲ್ಲವಮಲ್ಲ ಮತ್ತು ಅವನಾದ ಮೇಲೆ ಬಂದ ದಂತಿವರ್ಮನ, ಕಾಲದವು. ಇವುಗಳಲ್ಲಿ ಅತಿ ಪ್ರಾಚೀನವಾದ ಎರಡು ಶಾಸನಗಳು ಮಹೇಂದ್ರವರ್ಮನ ವಿಷಯವನ್ನು ಹೇಳಿವೆ. ಈ ಹೆಸರಿನ ರಾಜರಿಬ್ಬರಿದ್ದರು: **ಮೊದಲನೆಯ** ಮಹೇಂದ್ರವರ್ಮನ್ — ಸುಮಾರು ಕ್ರಿ.ಶ. ೬೦೦-೬೩೦ ;[6] **ಎರಡನೆಯ** ಮಹೇಂದ್ರವರ್ಮನ್—ಸುಮಾರು ಕ್ರಿ.ಶ.

---

[1] *Travancore Archæological series.* No. 14, p. 201.

[2] *South Indian Palæography*, p. 51.

[3] *Indian Palæography*, p. 75 (Appendix to Indian Antiquary Vol. 32).

[4] *Travancore Archæological Series.* Vol. I. No. 16, p. 284.

[5] *Pandyan Kingdom*, p. 6. 'About the middle of the 11th cent.' *Annual Reports on Epigraphy*, 1905, p. 51.

[6] Gopalan, *History of the Pallavas*, p. 88.

೬೫೫[1]. ಈ ಶಾಸನಗಳಲ್ಲಿ ಸಂವತ್ಸರಾದಿಗಳನ್ನು ಸೂಚಿಸದಿರುವುದರಿಂದ ಈ ಶಾಸನಗಳು ಯಾರ ಕಾಲದವೆಂಬುದನ್ನು ಖಚಿತವಾಗಿ ಹೇಳುವುದು ಅಸಾಧ್ಯವಾಗಿದೆ. ಆದರೆ ದಳವನೂರಿನ ಗುಹಾಶಾಸನವು **ಮೊದಲನೆಯ** ಮಹೇಂದ್ರವರ್ಮನ ಕಾಲದ್ದೆಂದು ಹುಲ್ಷ್‌ರವರ ಅಭಿಪ್ರಾಯ. ಆ ಶಾಸನದಲ್ಲಿ ಉಪಯೋಗಿಸಿರುವ "ನರೇನ್ದಿರಪ್ಪೋತರೈಯನ್" ಎಂಬುದು "ಮಹೇಂದ್ರವರ್ಮನ್" ಎಂಬ ಹೆಸರಿನ ರೂಪಾಂತರ ಎಂಬುದನ್ನು ಇವರು ತೋರಿಸಿಕೊಟ್ಟಿದ್ದಾರೆ.[2] ಆದರೆ ವೆಂಕಯ್ಯನವರು ಆ ಶಾಸನದ ತಮಿಳು ಲಿಪಿಯೂ ಆ ಶತಮಾನದ್ದಲ್ಲವೆಂದೂ ಬಹಳಕಾಲದ ಮೇಲೆ ಆ ಶಾಸನವು ಕೆತ್ತಲ್ಪಟ್ಟಿರಬಹುದೆಂದೂ ವಾದಿಸಿದ್ದಾರೆ.[3] ಇನ್ನೊಂದು ಶಾಸನವು "ಮಯೇನ್ದಿರಪ್ಪೋತ್ತರೆಚರ್" "ಮಹೇಂದ್ರವರ್ಮನ್" ಎಂಬುದರ ತಮಿಳುರೂಪವೇ. ಅದರ ಲಿಪಿಯೂ ಬಹಳ ಪ್ರಾಚೀನವಾದುದು. ಇದರಲ್ಲಿರುವ "ಪಕಾಪ್ಪಿಟುಕು", "ಲಲಿತಾಙ್ಕುರನ್" ಮುಂತಾದ ಬಿರುದುಗಳು ಮೊದಲನೆಯ ಮಹೇಂದ್ರವರ್ಮನಿಗೇ ಅನ್ವಯಿಸುತ್ತವೆ ಎಂದು ಗೋಪಾಲನ್ ವಾದಿಸಿದ್ದಾರೆ.[4]

ಇನ್ನು ಕೂರಮ್ ಪಲ್ಲವಶಾಸನದ ವಿಚಾರ—"ಪಲ್ಲವ ವಿಚ್ಚಾವಿನೀತ (ವಿದ್ಯಾವಿನೀತ)" ನಿಂದ "ವಿಚ್ಚಾವಿನೀತ ಪಲ್ಲವ ಪರಮೇಚ್ಚುರಕರಮ್" ದೇವಸ್ಥಾನಕ್ಕೆ "ಪರಮೇಚ್ಚುರಮಂಕಲಮ್" ಎಂಬ ಗ್ರಾಮವು ದತ್ತಿಯಾದುದನ್ನು ಈ ಶಾಸನವು ವಿವರಿಸಿದೆ. ಸುಮಾರು ಕ್ರಿ.ಶ. ೬೦೦ರಿಂದ ೬೮೦ ವರೆಗೆ ಆಳಿದ **ಮೊದಲನೆಯ** ಪರಮೇಶ್ವರವರ್ಮನ್ ಎಂಬವನ ಹೆಸರೇ ಇದು.[5] ಇದರಲ್ಲಿಯೂ ಸಂವತ್ಸರಾದಿಗಳನ್ನು ಸೂಚಿಸಿಲ್ಲ. ಇವಾದಮೇಲೆ ಬರುವ ಶಾಸನಗಳು ಪಲ್ಲವಮಲ್ಲನ ಕಾಲದವು. ಎರಡನೆಯ ನಂದಿವರ್ಮನ್—ಪಲ್ಲವಮಲ್ಲನು ಸುಮಾರು ಕ್ರಿ.ಶ. ೭೧೦–೭೭೫ ಅರಸನಾಗಿದ್ದನೆಂಬುದು ಗೋಪಾಲನ್ ಅವರ ಮತ.[6] ಆದರೆ ಫಾದರ್ ಹೀರಾಸವರು ಇವನು ಸಿಂಹಾಸನವನ್ನೇರಿದುದು ಕ್ರಿ.ಶ. ಸುಮಾರು ೭೧೫ರಲ್ಲಿ ಎಂದು ಅಭಿಪ್ರಾಯಪಟ್ಟಿದ್ದಾರೆ.[7] ಈ ಅಭಿಪ್ರಾಯಕ್ಕೆ ಸಾಧಕವಾಗಿ ಸಮರ್ಪಕವಾಗಿರುವ ಕಾರಣಗಳನ್ನು ಅವರು ಕೊಟ್ಟಿಲ್ಲ. ಆದ್ದರಿಂದ ಕ್ರಿ.ಶ. ೭೧೦ರಲ್ಲಿ ಅವನು ರಾಜ್ಯಭಾರವನ್ನು ವಹಿಸಿಕೊಂಡನೆಂದು ಹೇಳುವುದರಿಂದ ತಪ್ಪಾಗುವ ಸಂಭವವಿಲ್ಲ. ಈ ಕೆಳಗಣ ನಾಲ್ಕು ಶಾಸನಗಳೂ ಅವನ ಆಳಿಕೆಯಲ್ಲಿಯೇ ಬೇರೆಬೇರೆ ವರ್ಷಗಳಲ್ಲಿ ಪ್ರಕಟವಾದವು!

[1] Gopalan: *History of the Pallavas*, p. 103.

[2] *Epigraphia Indica*, XII, p. 225.

[3] *Annual Reports on Epigraphy*, 1905, p. 47.

[4] Gopalan: *History of the Pallavas*, p. 172.

[5] ಅದೇ p. 104, p. 107.

[6] ಅದೇ p. 119.

[7] *Studies in Pallava History*, p. 64.

೧. ಕಾಚಾಕುಟಿ ತಾಮ್ರಶಾಸನಗಳು:—ಆಳಿಕೆಯ ೨೨ನೆಯ ವರ್ಷ ಕ್ರಿ.ಶ. ಸುಮಾರು ೭೩೨.

೨. ವಿಕ್ರಮಾದಿತ್ಯಮಾವಳಿ ವಾಣರಾಯನ ಕಾಲದ ಶಾಸನ:—ಆಳಿಕೆಯ ೨೩ನೆಯ ವರ್ಷ, ಕ್ರಿ.ಶ. ಸುಮಾರು ೭೩೩.

೩. ಸಂತಿಪ್ಪೋತರಾಚರ್ ಶಾಸನ:—ಆಳಿಕೆಯ ೫೦ನೆಯ ವರ್ಷ, ಕ್ರಿ.ಶ. ಸುಮಾರು ೭೬೦.

೪. ಪಟ್ಟತ್ತಾಳಮಂಕಲಂ ದತ್ತಿ:—ಆಳಿಕೆಯ ೬೧ನೆಯ ವರ್ಷ, ಕ್ರಿ.ಶ. ಸುಮಾರು ೭೭೧.

ಪಲ್ಲವವರ್ಮನಾದ ಮೇಲೆ ರಾಜ್ಯಪಟ್ಟಕ್ಕೆ ಬಂದವನು ದಂತಿವರ್ಮ. ಇವನು ಆಳಿದ ಕಾಲ ಕ್ರಿ.ಶ. ಸುಮಾರು ೭೭೫–೮೨೬.[1] ಇವನ ಕಾಲದ ಶಾಸನಗಳು ಮೂರು. ಪಲ್ಲವಮಲ್ಲನ ಶಾಸನಗಳಂತೆಯೇ ಇವು ಪ್ರಕಟವಾದ ವರ್ಷಗಳನ್ನು ಇವುಗಳಲ್ಲಿ ಕೊಟ್ಟಿದೆ. ತಿರುವೆಳ್ಳರೈ ಶಾಸನದಲ್ಲಿ ಬಾವಿಯನ್ನು ತನ್ನ ಆಳಿಕೆಯ ನಾಲ್ಕನೆಯ ವರ್ಷದಲ್ಲಿ ಆರಂಭಿಸಿ ಐದನೆಯ ವರ್ಷದಲ್ಲಿ ಮುಗಿಸಲಾಯಿತೆಂದು ಹೇಳಿದೆ. ಇದರಿಂದ ಈ ಶಾಸನದ ಕಾಲವು ಕ್ರಿ.ಶ. ಸುಮಾರು ೭೮೦ ಎಂಬುದು ವ್ಯಕ್ತವಾಗುತ್ತದೆ. ತಿರುವಲ್ಲಿಕ್ಕೇಣಿ ಶಾಸನವು ಅವನ ಆಳಿಕೆಯ ಹನ್ನೆರಡನೆಯ ವರ್ಷದ್ದೆಂದು ಹೇಳಿರುವುದರಿಂದ ಅದರ ಕಾಲವು ಕ್ರಿ.ಶ. ೭೮೭. ಇವನ ಆಳಿಕೆಯ ಕಾಲದ ಒಂದು “**ಬಾಣರ**” ಶಾಸನವು ದೊರೆತಿದೆ. ದನ್ತಿವರ್ಮನ ಆಳಿಕೆಯ ೪೯ನೆಯ ವರ್ಷದಲ್ಲಿ ಕ್ರಿ.ಶ. ಸುಮಾರು ೮೨೪ರಲ್ಲಿ ಪ್ರಕಟವಾದ ವಿಜಯಾದಿತ್ಯ ಮಹಾವಲಿ ವಾಣರಾಯನ” ಕಾಲದ ಶಾಸನವೇ ಇದು.

ಕ್ರಿ.ಶ. ೮ನೆಯ ಶತಮಾನಕ್ಕಿಂತ ಹಿಂದಿನ ವಟ್ಟೆಳುತ್ತಿನ ಶಾಸನಗಳಾವುವೂ ಇದುವರೆಗೂ ದೊರೆತಿಲ್ಲ. ಇತ್ತೀಚಿನ ವರೆಗೂ ಭಾಸ್ಕರ ರವಿವರ್ಮನ ಕೊಚಿನ್[2] ತಾಮ್ರಶಾಸನಗಳನ್ನೇ ಅತ್ಯಂತ ಪ್ರಾಚೀನವಾದವೆಂದು ವಿದ್ವಾಂಸರು ಭಾವಿಸಿದ್ದರು. ಈಚಿನ ಶಿಲಾಲೇಖ ಮತ್ತು ಚರಿತ್ರೆಗಳ ವಿಮರ್ಶೆಗಳಿಂದ, ಭಾಸ್ಕರರವಿವರ್ಮನು ಕ್ರಿ.ಶ. ಹತ್ತನೆಯ ಶತಮಾನದಲ್ಲಿದ್ದನೆಂದು ಸಿದ್ಧಾನ್ತಮಾಡಿದ್ದಾರೆ.[3] ಸ್ವಾಮಿಕಣ್ಣುಪಿಳ್ಳೆ ಅವರು ಖಗೋಳಶಾಸ್ತ್ರದ ದೃಷ್ಟಿಯಿಂದ ಪರಿಗಣಿಸಿ ಇವನ ಕಾಲವು ಕ್ರಿ.ಶ. ಸುಮಾರು ೧೦೦೦ ಎಂದು ನಿರ್ಣಯಿಸಿದ್ದಾರೆ.[4] ಈ ಕಾರಣಗಳಿಂದ ಕೊಚಿನ್ ತಾಮ್ರಶಾಸನಗಳನ್ನೂ ಇಂತಹ ಇನ್ನೂ ಕೆಲವು ಶಾಸನಗಳನ್ನೂ[5] ಇಲ್ಲಿ ವಿಮರ್ಶೆಗೆ ತೆಗೆದುಕೊಂಡಿಲ್ಲ. ಇಲ್ಲಿ ಪರಿಶೀಲಿಸಿರುವ ವಟ್ಟೆಳುತ್ತಿನ ಶಾಸನಗಳೆಲ್ಲವೂ ಪಾಂಡ್ಯರಾಜನದ ನೆಟುನ್ ಚಟ್ಟೈ

[1] Gopalan: *History of the Pallavas*, p. 134.
[2] *South Indian Palæography*: Appendix p. 32*a*.
[3] *Travancore Archæological Series*. Vol. II, p. 32; E.I. Vol. XVI, p. 342.
[4] *Indian Antiquary*. Vol. 58, p. 24.
[5] *Travancore Archæological Researches*, published by Gopinatha Rao.

ಯನ್ ಆಳಿಕೆಯಲ್ಲಿ ಪ್ರಕಟವಾದವು; ನೀಲಕಂಠಶಾಸ್ತ್ರಿಗಳವರು ಇವುಗಳ ಕಾಲವು ಕ್ರಿ.ಶ. ಸುಮಾರು ೭೬೫-೮೧೫ ಎಂದು ನಿರ್ಧರಿಸಿದ್ದಾರೆ.[1] ಈ ಕೆಳಗಣ ಶಾಸನಗಳು ಅವು ಪ್ರಕಟವಾದ ಕಾಲವನ್ನೂ ಆ ರಾಜನ ಆಳಿಕೆಯ ವರ್ಷವನ್ನೂ ತಿಳಿಸುತ್ತವೆ:—

೧. ವೇಳ್ವಿಕುಟಿದತ್ತಿ: ಆಳಿಕೆಯ ೩ನೆಯ ವರ್ಷ. ಸುಮಾರು ಕ್ರಿ.ಶ. ೭೬೮.

೨. ತಿರುಪ್ಪೆರನ್ ಕುನ್ಱಮ್ ಶಾಸನ: ಆಳಿಕೆಯ ೬ನೆಯ ವರ್ಷ. ಸುಮಾರು ಕ್ರಿ.ಶ. ೭೭೧.

೩. ಮದ್ರಾಸ್ ಮ್ಯೂಸಿಯಮ್ ಶಾಸನಗಳು: ಆಳಿಕೆಯ ೧೭ನೆಯ ವರ್ಷ. ಸುಮಾರು ಕ್ರಿ.ಶ. ೭೮೨.

೪. ತಿರುವನಂತಪುರಂ ಮ್ಯೂಸಿಯಮ್ ಶಿಲಾಶಾಸನ: ಆಳಿಕೆಯ ೨೭ನೆಯ ವರ್ಷ. ಸುಮಾರು ಕ್ರಿ.ಶ. ೭೯೨.

ಇತರ ಶಾಸನಗಳ ಸಂವತ್ಸರಾದಿಗಳಿಗಿಂತಲೂ ಆನೈಮಲೈ ಶಾಸನದ ಸಂವತ್ಸರಾದಿಗಳು ಹೆಚ್ಚು ಖಚಿತವಾಗಿ ತಿಳಿದಿವೆ. ಈ ಶಾಸನದ ಸಂಸ್ಕೃತಭಾಗದ ಕಾಲವು ಕಲಿಯುಗಾದಿ ಸಂವತ್ಸರಗಳು ೩೮೭೧ ಅಥವಾ ಕ್ರಿ.ಶ. ಸುಮಾರು ೭೭೦. ಶಿನ್ನಮನೂರು ದತ್ತಿಯ ಕೆಲವು ತಾಮ್ರಶಾಸನ ಭಾಗಗಳು ಸಿಕ್ಕದಿರುವುದರಿಂದ ಇದರ ಖಚಿತವಾದ ಕಾಲವನ್ನು ನಿರ್ಧರಿಸುವುದು ಅಸಾಧ್ಯ. ಆದರೆ ಮದ್ರಾಸ್ ಮ್ಯೂಸಿಯಮ್ ತಾಮ್ರಶಾಸನಗಳೂ ಈ ಶಾಸನವೂ ಈ ಶಾಸನವನ್ನು ಕೆತ್ತಿದ **ಅರಿಕೇಸರಿ** ಎಂಬ ಒಬ್ಬನ ಹೆಸರನ್ನೇ ಹೇಳಿವೆ. ಈ ಶಾಸನಗಳು ವೇಳ್ವಿಕುಟಿ ದತ್ತಿಯ ರಾಜನ ಆಳಿಕೆಯಲ್ಲಿಯೇ ಇದು ಪ್ರಕಟವಾಗಿದೆಯೆಂದು ನೀಲಕಂಠ ಶಾಸ್ತ್ರಿಗಳು ಭಾವಿಸಿದ್ದಾರೆ;[2] **ನೆಟುಂಚಟೈಯನ** ಪಿತಾಮಹನಾದ ಕೋಚ್ಚಟೈಯನ್ ಕಾಲದ್ದೆಂದೂ ಸೂಚಿಸಿದ್ದಾರೆ.[3] ಹೀಗಿದ್ದಲ್ಲಿ ಮದ್ರಾಸ್ ಮ್ಯೂಸಿಯಮ್ ಶಾಸನಗಳನ್ನು ಕೆತ್ತಿದವನ ಪಿತಾಮಹನೇ ಈ ಶಾಸನವನ್ನು ಕೆತ್ತಿದವನೆಂದು ಹೇಳಲವಕಾಶವಿದೆ.

ಇನ್ನು ಶೆಂತಲೈ ಸ್ತಂಭಶಾಸನಗಳ ವಿಚಾರ:

ಮುತ್ತರೈಯನ್ ವಂಶದ ಅರಸರ ಕಾಲವೂ ಚರಿತ್ರೆಯೂ ವಿಶದವಾಗಿ ತಿಳಿಯದೆ ಇರುವುದರಿಂದ, ಈ ಶಾಸನದ ಸಂವತ್ಸರಾದಿಗಳನ್ನು ಖಚಿತವಾಗಿ ತಿಳಿಯುವುದು ಅಸಾಧ್ಯ.

ಈ ರೀತಿ ಶಾಸನಗಳ ಕಾಲವನ್ನು ವಿಮರ್ಶಿಸಿ ಮೇಲೆ ಕೊಟ್ಟಿರುವ ಶಾಸನಗಳನ್ನು ಪರಿಶೀಲಿಸಲು ಆರಿಸಲಾಗಿದೆ.

ಎ. ಎನ್. ನರಸಿಂಹಯ್ಯ.

---

[1] *Pandyan Kingdom*, p. 41.

[2] ಅದೇ p. 44. [3] ಅದೇ p. 42.

# ಕಾವ್ಯಾವಲೋಕನ

**ಕನಸಿನ ಕೆಳದಿ** (ಮನೋಹರ ಗ್ರಂಥಮಾಲೆಯ ೬೩ನೆಯ ಕುಸುಮ) — ಲೇಖಕರು : ಶ್ರೀ ರಂ. ಶ್ರೀ. ಮುಗಳಿ, ಎಂ.ಎ., ಬಿ.ಟಿ. ಅವರು ; ಪ್ರಕಾಶಕರು : ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ ; ಪುಟಗಳು, ೧೪೦ ; ಬೆಲೆ, ರೂ. ೧—೪—೦.

ಇದೊಂದು ಸಣ್ಣ ಕತೆಗಳ ಸಂಗ್ರಹ. ಗ್ರಂಥಕರ್ತರಾದ ಶ್ರೀಮಾನ್ ರಂ. ಶ್ರೀ. ಮುಗಳಿ ಅವರು ನಾಟಕ, ಕಾದಂಬರಿ ಮತ್ತು ಕವಿತೆಗಳನ್ನು ಬರೆದು ಈಗಾಗಲೇ ಕನ್ನಡಿಗರಿಗೆ ಪರಿಚಿತರಾಗಿದ್ದಾರೆ. ಈಗ, ತಾವು ತಮ್ಮ ಸಾಹಿತ್ಯದ ವ್ಯವಸಾಯದಲ್ಲಿ ಬೆಳೆದಿರುವ ಹನ್ನೊಂದು ಸಣ್ಣ ಕಥೆಗಳ ಸಂಗ್ರಹವನ್ನು ನಮ್ಮ ಮುಂದೆ ಇಟ್ಟಿರುತ್ತಾರೆ.

ಇವುಗಳಲ್ಲಿ "ಕನಸಿನ ಕೆಳದಿ" "ನೀರಿನ ನಾರಪ್ಪ" ಮತ್ತು "ಕೂಟ ಪ್ರಶ್ನೆ" ಎಂಬ ಕಥೆಗಳು ನಿಜವಾಗಿಯೂ ಮೇಲ್ತರದವು. ಈ ಮೂರೂ ನಮ್ಮ ಶ್ರೇಷ್ಠ ಸಣ್ಣ ಕಥೆಗಳ ಸಾಲಿನಲ್ಲಿ ಸೇರಲರ್ಹವಾದವುಗಳು. "ಕನಸಿನ ಕೆಳದಿ"ಯ ಒಟ್ಟು ವಸ್ತು ಒಂದು ಸಣ್ಣ ಅಂಶದ ಮೇಲೆ ನಿಂತಿದೆ. ಹೆಣ್ಣುಮಗಳ ನಾಚಿಕೆಯೇ ಅದರ ಅಡಿಗಲ್ಲು. ಗುರುತು ಪರಿಚಯವಿಲ್ಲದ ಹೆಣ್ಣಿನ ಸಂಬಂಧ ಮಾಡಿದರೆ ನಾಚಿಕೆಯು ನಡುವೆ ತಲೆಹಾಕಿ ಬರುವುದೆಂದು ಬೆದರಿ, ಸ್ವಂತ ಸೋದರಮಾವನ ಮಗಳಾದ ಲೀಲುವನ್ನೇ ಕಡು ಬಡತನದ ಮನೆತನವಾದರೂ ಲೆಕ್ಕಿಸದೆ, ಕಂಡು ಕೇಳಿದ ಹುಡುಗಿಯಾದ್ದರಿಂದ, ಆಕೆಯಲ್ಲಿ ಸ್ವಲ್ಪಮಾತ್ರವೂ ಲಜ್ಜೆಗೆ ಆಸ್ಪದವಿಲ್ಲವೆಂದು ಭಾವಿಸಿ, ಮದುವೆಯಾಗಲು ಸಮ್ಮತಿಸುತ್ತಾರೆ. ಆದರೇನು? ಮದುವೆಯ ಪ್ರಸ್ತಾಪವೆತ್ತಿದ ಮರುಕ್ಷಣದಲ್ಲಿಯೇ ಹುಡುಗಿಯನ್ನು ನಾಚಿಕೆಯ ತೆರೆ ಮುಸುಕುತ್ತದೆ. ಮದುವಣಿಗನು ಯಾವುದನ್ನು ದಾಟಲು ಮನಸ್ಸು ಮಾಡಿದನೋ ಆ ನಾಚಿಕೆಯೇ ಪೆಡಂಭೂತವಾಗುವುದು. ಆಗ ಕನಸು ಕನಸೇ ; ನನಸು ನನಸೇ ; ಎಂಬ ಅರಿವು ಮಂದಟ್ಟಾಗುವುದು ಕನಸಿನ ಪ್ರಪಂಚಕ್ಕೂ ನೈಜ ಪ್ರಪಂಚಕ್ಕೂ ಇರುವ ತಾರತಮ್ಯವನ್ನು ಲೇಖಕರು ಈ ಒಂದು ರಮ್ಯವಾದ ಉದಾಹರಣೆಯಿಂದ ಬಹಳ ಮನೋಹರವಾಗಿ ಕಥೆಯ ಮೂಲಕ ಚಿತ್ರಿಸಿದ್ದಾರೆ.

"ನೀರಿನ ನಾರಪ್ಪ" ಎಂಬ ಕಥೆಯ ಮುಖ್ಯಪಾತ್ರ ನಾರಪ್ಪ. ಬದುಕಿನಲ್ಲಿ ಬೇಸರ ಬಂದು, ಯಾವುದೂ ಬೇಕಿಲ್ಲದೆ, ಕಟ್ಟಿಕೊಂಡ ಸಂಸಾರವನ್ನೂ ತ್ಯಜಿಸಿ, ವಕೀಲ ಭಗವಂತರಾಯರ ಮನೆಯ ನೀರಿನ ಸರಬರಾಯಿ ಮೊದಲ್ಗೊಂಡು ಸಮಸ್ತ ವಿಚಾರಗಳ ಮೇಲ್ವಿಚಾರಣೆಯನ್ನೂ ನೋಡಿಕೊಳ್ಳುತ್ತ ನಿಃಸ್ವಾರ್ಥ ಸೇವೆಯಿಂದ

ಉಳಿದ ಜೀವನಕಾಲವನ್ನು ಸಾಗಿಸುತ್ತಿರುವ ಈತನ ವ್ಯಕ್ತಿ ಚಿತ್ರವನ್ನು ಕಥೆಗಾರರು ಬಹಳ ಮೂರ್ತಿಮತ್ತಾಗಿ ಕಡೆದಿಟ್ಟಿದ್ದಾರೆ. ನಾರಪ್ಪನ ಸ್ವಭಾವವನ್ನು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ಉತ್ತಮ ಸಣ್ಣ ಕಥೆಗಳ ಎಲ್ಲ ಗುಣಗಳನ್ನೂ ಒಳಗೊಂಡು ಇಡಿ ಕೃತಿಯು ಪೂರ್ಣ ಪ್ರಭಾವಶಾಲಿಯಾಗಿದೆ.

"ಕೂಟ ಪ್ರಶ್ನೆ" ಇದೇ ಮಟ್ಟವನ್ನು ಮುಟ್ಟುವ ಮತ್ತೊಂದು ಕೃತಿ. ಹತಾಶನಾದ ಗಣೇಶನೆಂಬ ಯುವಕನು ಪೊಲೀಸ್ ಕೆಲಸಕ್ಕೆ ಸೇರುತ್ತಾನೆ. ಸುಖದಲ್ಲಿ ಹುಟ್ಟಿ, ಬೆಳೆದು, ಅದೇ ಸುಖವನ್ನೇ ಜೀವನಾದ್ಯಂತವೂ ಸವಿದು ಜೀವಿಸುವೆನೆಂಬ ಅವನ ನಿರೀಕ್ಷಣೆ ನಿರಾಶೆಯಾಗುವುದು. ಕಥಾವಸ್ತುವಿನಲ್ಲಿ ಒಂದು ಬಗೆಯಾದ ನವೀನತೆ ಮಿಂಚುವುದು. ಬೆಳೆಯುವ ಬಾಳು ಯಾವ ಯಾವ ಸುಳಿಗೆ, ಹೇಗೆ ಹೇಗೆ ಸಿಕ್ಕಿ, ಹಾಳಾಗಿ ಹೋಗುವುದು ಎಂಬ ಅರಿವು, ಈ ಸಣ್ಣ ಕಥೆಯಿಂದ ಚೆನ್ನಾಗಿ ಆಗಿದೆ. ಕಥೆಗೆ ಜೀವಾಳವಾದ ಕುತೂಹಲ ಉದ್ದಕ್ಕೂ ಮಿಡಿಯುತ್ತದೆ.

"ಕಲ್ಯಾಣ ಮಂಟಪ" ಮತ್ತು "ವಿತಂತು — ವೇಶ್ಯೆ" ಎಂಬ ಎರಡು ಕಥೆಗಳೂ ಬಾಲ್ಯವಿವಾಹ ಪದ್ಧತಿಯ ದುಷ್ಪರಿಣಾಮವನ್ನು ಸಾರಿ ಹೇಳುವ ಗುರಿಗಳನ್ನುಳ್ಳವು.

ಉಳಿದ ಕಥೆಗಳಲ್ಲಿ "ವೇದಾಂತಿ" ಎಂಬ ಕಥೆಯ ವಸ್ತು, ಪಾತ್ರ, ಧ್ಯೇಯ ಯಾವುದೂ ಹೊಸದಲ್ಲ. ಬಾಲವಿಧವೆಯೊಬ್ಬಳು ಪುರಾಣ ಹೇಳುವ ಆಚಾರ್ಯನ ಕಾಮದ ದಾಹಕ್ಕೆ ತುತ್ತಾಗುವ ವಿಷಯ ಈಗಾಗಲೇ ನಮ್ಮಲ್ಲಿ ಅನೇಕ ನಾಟಕ ಮತ್ತು ಕಥೆಗಳ ವಸ್ತುವಾಗಿದೆ. ಈ ವಸ್ತು ಮಿತಿಮೀರಿ ವ್ಯಾಪಿಸಿದೆಯೆಂದೇ ಹೇಳಬೇಕು. ಸಮಾಜದಲ್ಲಿ ಇಂಥ ನಿದರ್ಶನಗಳು, ಪುನಃ ಪುನಃ ಒತ್ತಿ ಹೇಳುವಷ್ಟು ಅಸಂಖ್ಯಾತವಾಗಿರುವುವೇ ಎಂಬ ಪ್ರಶ್ನೆಯನ್ನೂ ಕೇಳಿಕೊಳ್ಳಬಹುದು.

"ಮಂಜಿನ ಮನೆ"ಯ ಮುಖ್ಯ ಪ್ರಸಂಗ ವಿಸ್ಮಯಮಿಶ್ರವಾಗಿದೆ. ಶ್ರೀಪಾದನೆಂಬ ತರುಣನು ಕಣ್ಮರೆಯಾಗಿ ಹೋಗಿದ್ದಕ್ಕೆ ನಾಲ್ಕಾರು ಜನರು ನಾಲ್ಕಾರು ಬಗೆಯಾಗಿ ಊಹಿಸುವರು. ಕಡೆಗೆ ಕೊಳವೊಂದರಲ್ಲಿ ಹುಡುಗನ ಹೆಣ ಸಿಕ್ಕುವುದು. ಅಲ್ಲಿಂದ ಮುಂದೆ ಕಲ್ಪನೆಗಳು ನಾನಾ ವಿಧವಾಗಿ ವ್ಯಾಪಿಸಿ ಕಟ್ಟಕಡೆಗೆ ಆತನನ್ನು ಕೊಂದ ಆಪಾದನೆಯನ್ನು ಯಾರ ತಲೆಯ ಮೇಲೆಯೋ ಎತ್ತಿಹಾಕಿ, ನಿರಪರಾಧಿಯೊಬ್ಬನನ್ನು ಶಿಕ್ಷೆಗೆ ಗುರಿಮಾಡುವರು. ಜನರ ಉಹಾಪೋಹಗಳ ವಿವಿಧ ವಿಧಾನಗಳನ್ನು ಕಥೆಗಾರರು ಬಹು ಸ್ವಾರಸ್ಯವಾಗಿ ಚಿತ್ರಿಸಿರುತ್ತಾರೆ. ಮುಕ್ತಾಯ ವಸ್ತುವಿನ ಘನತೆಗೆ ಊನತರುವಂತಿದೆ. ಕಥೆಗೆ ಇಟ್ಟಿರುವ ಹೆಸರು ಸೊಗಸಾಗಿದೆ.

"ಆಯುಷ್ಕರ್ಮ" ಮತ್ತು "ಜಗತ್ತು ಕಂಡವರು ಯಾರು?" ಎಂಬ

ಕಥೆಗಳು ಆದ್ಯಂತವಾಗಿ ನೀತಿಪ್ರಧಾನವಾದವು. ದೀನ ಧನವಂತರ ಬದುಕಿನ ತಾರತಮ್ಯವನ್ನು "ಆಯುಷ್ಕರ್ಮ"ದಲ್ಲಿಯೂ, ಪ್ರಾಣಿದಯೆ, ಪಶ್ಚಾತ್ತಾಪ, ಸಹಾನುಭೂತಿಗಳಲ್ಲಿ ಅಡಗಿರುವ ಜಗತ್ತಿನ ಒಳಗುಟ್ಟನ್ನು "ಜಗತ್ತು ಕಂಡವರು ಯಾರು?" ಎಂಬುದರಲ್ಲಿಯೂ ಲೇಖಕರು ಸಾರಿ ಹೇಳಿದ್ದಾರೆ. ಈ ಧ್ಯೇಯಸಾಧನೆಗಾಗಿಯೇ ಕಥಾವಸ್ತುವನ್ನು ಅಳವಡಿಸಿಕೊಂಡು ಅದರ ಲಕ್ಷ್ಯಕ್ಕೆ ಹೆಚ್ಚು ಗಮನಕೊಟ್ಟಿರುವುದರಿಂದ, ಈ ಕಥೆಗಳಲ್ಲಿ, ಕಥಾಸ್ವಾರಸ್ಯಕ್ಕಿಂತ ಕಥೆಯ ಅಂತ್ಯ ಲಕ್ಷ್ಯ ಹೆಚ್ಚು ಪ್ರಬಲವಾಗಿ ವ್ಯಾಪ್ತವಾಗಿದೆ.

"ವಿರಕ್ತ ಸಂಸಾರಿ"ಯ ವಸ್ತು, ಅರ್ಧಮರ್ಧ ಮೋಹವನ್ನು ಗೆಲ್ಲಲು ಯತ್ನಪಟ್ಟವನೊಬ್ಬನ ಚಿತ್ರ. ದೃಢಚಿತ್ತವಿಲ್ಲದ ಬೂಟಾಟಿಕೆಯ ಸಂನ್ಯಾಸದ ಸ್ವರೂಪವನ್ನು ಚಿತ್ರಿಸಲು ಲೇಖಕರು ಪ್ರಯತ್ನಪಟ್ಟಿರುತ್ತಾರೆ. ಈ ಕಥೆಯ ಬೆಳವಣಿಗೆ ಒಂದು ಕಣ್ಣುಮುಚ್ಚಾಲೆಯ ಆಟದಂತೆ ಸಾಗಿದೆ.

"ಕಚ್ಚು" ಎಂಬ ಕಡೆಯ ಕಥೆ ಒಂದು ಇಂಗ್ಲಿಷ್ ಕಥೆಯ ಭಾಷಾಂತರ. ಹೊಟ್ಟೆಗಿಲ್ಲದ ಬಡತಾಯಿಯ ಬೇನೆಯ ಚಿತ್ರವೇ ಇದರ ಮುಖ್ಯ ವಸ್ತು. ಕಥೆಯ ಅಂತ್ಯದ ದಾರುಣಚಿತ್ರ ಮನಮೆಚ್ಚತಕ್ಕುದು. ಮಗುವಿನ ಹಸಿವಿನ ಉಪಶಮನಾರ್ಥವಾಗಿ ಒಂದು ತೊಟ್ಟೂ ಹಾಲಿಲ್ಲದ ಮೊಲೆಯನ್ನೇ ಊಡುವ ತಾಯಿಯ ವರ್ತನೆ ದಾರಿದ್ರ್ಯದ ಕರಾಳದೃಶ್ಯವನ್ನು ಬಾಯಿಬಿಟ್ಟು ಹೇಳುವಂತಿದೆ.

ಈ ಕಥೆಗಳ ಶೈಲಿಯ ವಿಷಯವಾಗಿ ಒಂದೆರಡುಮಾತುಗಳನ್ನು ಹೇಳಬಹುದು. ಶ್ರೀಯುತರ ಶೈಲಿ ಬಹುಮಟ್ಟಿಗೆ ವರ್ಣನಾತ್ಮಕವಾದುದು. ಸಂಭಾಷಣೆಯ ಚಾಕಚಕ್ಯಕ್ಕಿಂತ ವಿವರಣೆ ಶ್ರೀಯುತರಿಗೆ ಬಹಳ ಪ್ರಿಯವಿದ್ದಂತಿದೆ. ಇವರ ಈ ವರ್ಣನಾತ್ಮಕ ಶೈಲಿಯ ಬೆಡಗನ್ನು "ಕನಸಿನ ಕೆಳದಿ"ಯ ಯಾವ ಪಂಕ್ತಿಯಲ್ಲಿ ಬೇಕಾದರೂ ಕಾಣಬಹುದು. ಆ ಕಥೆಯಲ್ಲಿನ ಅವ್ಯಕ್ತಲೋಕಕ್ಕೆ ಇಲ್ಲವೇ ಆ ಮಿಥ್ಯಲೋಕಕ್ಕೆ ಅವರು ಕೊಟ್ಟಿರುವ ಬಣ್ಣ ಬೆಡಗುಗಳ ವರ್ಣನೆ ಅಸಮಾನವಾದ್ದು. ಆದರೇ ಇದೇ ಬಗೆಯ ವರ್ಣನೆ ಇತರ ಕಥೆಗಳಲ್ಲಿ, ಅದರಲ್ಲಿಯೂ ಮುಖ್ಯವಾಗಿ ಸಾಮಾಜಿಕ ಪ್ರಶ್ನೆಗಳನ್ನು ಬಿಡಿಸಲು ಮೀಸಲಾಗಿರುವ ಸಣ್ಣ ಕಥೆಗಳಲ್ಲಿ ಸ್ವಲ್ಪ ಅತಿಯಾದೀತು — ಒಮ್ಮೊಮ್ಮೆ ಅನಗತ್ಯ ಹಾಗೂ ಕೃತಕವೆನ್ನಿಸುತ್ತದೆ. ಸಹಜತೆಯೇ ಸ್ವಾರಸ್ಯದ ಅಸ್ಥಿಭಾರ. ಸ್ವಾರಸ್ಯವೇ ಸಾಹಿತ್ಯದ ಪರಮ ರಹಸ್ಯ.

ಒಟ್ಟಿನಲ್ಲಿ ಶ್ರೀ. ಮುಗಳಿಯವರ ಕಥೆಗಳೆಲ್ಲ ನಿತ್ಯಜೀವನದ ವಿವಿಧ ಸಮಸ್ಯೆಗಳನ್ನು ಕುರಿತು ಬರೆದುವು. ಸಮಾಜದಲ್ಲಿ ಹುದುಗಿ ಕಂಡೂ ಕಾಣದಂತೆಯೇ ನುಣುಚಿಕೊಳ್ಳುವ ಹಲವಾರು ಲೋಪದೋಷಗಳನ್ನು ಸಣ್ಣ ಕಥೆಗೆ ಅಳವಡಿಸಿಕೊಂಡು

ಹೇಳಿರುವುದು ಶ್ರೀಯುತರ ಜಾಣ್ಮೆಗೆ ಗುರುತು. ಶ್ರೀಯುತರು ಪರಿಚಿತವಾದ ವಸ್ತುವನ್ನು ಪುನರ್ವಿಮರ್ಶೆ ಮಾಡಿರುತ್ತಾರೆ. ನೈಜಲೋಕಕ್ಕೂ ಕನಸಿನ ಲೋಕಕ್ಕೂ ಇರುವ ತಾರತಮ್ಯವನ್ನು ಎತ್ತಿ ತೋರಿದ್ದಾರೆ. ಹತಾಶನ ಬದುಕಿನ ಹೃದಯದಲ್ಲಿನ ಸದ್ದುಗದ್ದಲಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಬಡವ, ಭಾಗ್ಯವಂತರ ಸುಖಸಂತೋಷಗಳನ್ನೂ ಕಷ್ಟನಷ್ಟಗಳನ್ನೂ ತಾಳೆಹಾಕಿ ತೋರಿಸಿದ್ದಾರೆ. ಜನ ಸಾಮಾನ್ಯರ ಹೃದಯಾಂತರ್ಗತ ಮನೋಭಾವವನ್ನು ಸಂಶೋಧಿಸಿ ಸಾರಿ ಹೇಳಿದ್ದಾರೆ. ಇವರ "ನೀರಿನ ನಾರಪ್ಪ"ನನ್ನು ಯಾರೂ ಮರೆಯುವಂತಿಲ್ಲ. ವಸ್ತು, ಪಾತ್ರ, ರಚನೆ ಮತ್ತು ಉದ್ದೇಶಗಳಲ್ಲಿ ಉಚ್ಚ ಆದರ್ಶವನ್ನು ಸಾಧಿಸಲು ಹೊರಟಿರುವ ಈ ಕಥೆಗಳು ವಿದ್ಯಾವಂತರ ವಿಚಾರ ವಿಮರ್ಶೆಗಳಿಗೆ ಪಾತ್ರವಾಗುವುದರಲ್ಲಿ ಆಶ್ಚರ್ಯವಿಲ್ಲ.

—ಜಿ. ವರದರಾಜರಾವ್.

* * *

**ಮುದ್ದಿನ ಕಣಿ ಮತ್ತು ಬೇರೆ ಕತೆಗಳು** — ಸಂಪಾದಕರು ಮತ್ತು ಅನುವಾದಕರು: ಶ್ರೀಮಾನ್ ಗೋವಿಂದ ವೆಂಕಟೇಶ ಚುಳಕಿ ; ಪ್ರಕಾಶಕರು : ಲಲಿತ ಸಾಹಿತ್ಯಮಾಲೆ, ಧಾರವಾಡ ; ಬೆಲೆ, ೧೨ ಆಣೆ.

ಈ ಕತೆಗಳನ್ನು ಮೊದಲು ಬರೆದವರು ರಶಿಯಾ ದೇಶದ ಆಂಟೆನ್ ಚೆಖೊವ್ಹ. ಇಂಗ್ಲಿಷ್ ನುಡಿಗೆ ಬಂದ ಆತನ ಎಲ್ಲ ಕತೆಗಳಲ್ಲಿ ಈ ಕೆಲವು ಇಲ್ಲಿ ಕನ್ನಡಿಸಲ್ಪಟ್ಟಿವೆ. ಇಂಗ್ಲಿಷ್ ನುಡಿ ತಾನು ಬೆಳೆಯುವುದರ ಜತೆಗೆ ಬೇರೆ ಎಲ್ಲ ನುಡಿಗಳ ಉತ್ತಮ ಕೃತಿಗಳನ್ನೂ ಸ್ವಾಗತಿಸಿ ತನ್ನ ಜ್ಞಾನಭಂಡಾರವನ್ನು ವಿಸ್ತರಿಸಿಕೊಳ್ಳುತ್ತಿದೆ. ಬೇರೆ ಬೇರೆ ಭಾಷೆಗಳ, ವಿಶಾಲವಿಶ್ವದ ಮೆಚ್ಚುಗೆಯನ್ನು ಪಡೆದ, ಕೃತಿಗಳ ಸೊಗಸನ್ನು ಮೂಲದಲ್ಲಿಯೇ ನೋಡಿ ಆನಂದಪಡುವ ಪುಣ್ಯಶಾಲಿಗಳು ವಿರಳ. ಆ ಭಾಗ್ಯ ಸಾಮಾನ್ಯರಿಗೆ ಕೂಡ ಕೊರೆಯಾಗಬಾರದೆಂಬುದೇ ಆ ದೇಶದ ಸಾಹಿತ್ಯಪಕ್ಷಪಾತಿಗಳು ನಿರಂತರವಾಗಿ ಸಲ್ಲಿಸುತ್ತಿರುವ ಸೇವೆಗೆ ಸಾಕ್ಷಿ. ಆ ಜನಗಳ ಉತ್ಸಾಹ, ಸಾಹಿತ್ಯ ರಚನೆ — ಪ್ರಕಟಣೆ, ಪ್ರೋತ್ಸಾಹ ಮತ್ತು ಪ್ರಚಾರದ ರೀತಿನೀತಿಗಳು ಯಾವ ಜನಕ್ಕಾದರೂ ಮೇಲ್ಪಂಗ್ತಿ. ನಮ್ಮ ಕನ್ನಡದ ಭಂಡಾರವೂ ಕೂಡ ಹೀಗೆ ಹಿಗ್ಗಬೇಕು, ಹಿರಿದಾಗಬೇಕು. ಇಂಥ ಪ್ರಯತ್ನಗಳಲ್ಲಿ ಲಲಿತ ಸಾಹಿತ್ಯಮಾಲೆಯುವರದು ಒಂದು ಹಜ್ಜೆ.

ಪ್ರಗತಿಪರ ರಾಷ್ಟ್ರಗಳಲ್ಲಿ ಕ್ರಾಂತಿಯನ್ನುಂಟುಮಾಡಿದ ರಶಿಯಾ ದೇಶದ ಸಾಹಿತ್ಯವನ್ನು ಇಲ್ಲಿ ಬರಮಾಡಿಕೊಳ್ಳುತ್ತಿರುವುದು ಪ್ರಚೋದಕವೇ ಸರಿ. ವಿಪ್ಲವ

ಯುಗದ "ಆ ದುರ್ದಮ್ಯಕಾಲದಲ್ಲಿ ಅನೇಕ ಸಾಹಿತ್ಯರತ್ನಗಳು ಬೆಳಗಿದುವು. ಇಂದವು ಜಗತ್ತನ್ನೇ ಹೊಸ ದೃಷ್ಟಿಯಿಂದ ನೋಡಬೇಕೆಂದು ಸಾರುತ್ತಲಿವೆ." ಅವು ಕನ್ನಡಿಗರಿಗೆ ದೊರೆಯಬೇಕೆಂದೇ ಸಂಪಾದಕರ ಆಶಯ.

'ನೀವಲ್ಲ! ಆಕೆ' ಎಂಬುದು ಇಲ್ಲಿಯ ಮೊದಲನೆಯ ಕತೆ. ಲುಶ್‌ಕಾವ್ಣನು ದೀನ, ದರಿದ್ರನು. ತಾನೊಬ್ಬ ಶಿಕ್ಷಕನಾಗಿದ್ದನೆಂದೋ, ಪ್ರತಿಷ್ಠಿತ ಮನುಷ್ಯನಿದ್ದನೆಂದೋ ಅಥವಾ ಬೇರೊಂದು ಕಡೆ ಉಪಾಧ್ಯಾಯ ಕೆಲಸ ಸಿಕ್ಕಿದ್ದರೂ ಅಲ್ಲಿಗೆ ಹೋಗಲು ಹಣವಿಲ್ಲವೆಂದೋ, ಹೇಳಿಕೊಳ್ಳುತ್ತಾ ಒಂದು ದಿನ ಒಬ್ಬ ವಕೀಲನ ಬಳಿಗೆ ಬರುವನು. ಆ ವಕೀಲನು ಇವನನ್ನು ಕೆಲಸಕ್ಕೆ ಹಚ್ಚಿ ಹಣ ಕೊಡುವನು. ಸ್ವಲ್ಪ ದಿನಗಳ ಮೇಲೆ 'ಶಿಫಾರಸು' ಮಾಡಿ ಬೇರೊಬ್ಬ ವಕೀಲನ ಬಳಿಗೆ ಗುಮಾಸ್ತೆಯ ಕೆಲಸಕ್ಕೆ ಕಳುಹಿಸುವನು. ಒಂದುದಿನ ನಾಟ್ಯಗೃಹದ ಬಳಿ ಅವನನ್ನು ಸಂಧಿಸಿ ಮೇಲಟ್ಟದ ತಿಕೀಟನ್ನು ಕೊಂಡಿರುವ ಅವನನ್ನು ಕಂಡು, ವಕೀಲನು ತಾನು ಒಳ್ಳೆಯ ದಾರಿಗೆ ಹಚ್ಚಿದವನೆಂದು ಹಿಗ್ಗುತ್ತಾನೆ. ಆದರೆ ಆ ದಿನ ಅಡಿಗೆಯವಳಾದ 'ಆಕೆ' ಲುಶ್‌ಕಾವ್ಣನಿಗಾಗಿ ತಾನೇ ಸೌದೆ ಕಡಿದದ್ದು, ಈ ಹತಭಾಗ್ಯನಿಗಾಗಿ ಮರುಗಿದ ರೀತಿ, ಆಗಾಗ ಇವನಿಗಾಗಿ ಅವಳೇ ಕೆಲಸಮಾಡುತ್ತಿದ್ದುದು, ಅವಳ ಸೌಜನ್ಯದಿಂದ ಇವನಲ್ಲಾದ ಬದಲಾವಣೆ ಮತ್ತು ಕುಡಿತವನ್ನು ಬಿಟ್ಟದು, ಒಟ್ಟಿನಲ್ಲಿ ಆಕೆ ಹೇಗೆ ಗುರುವಾಗಿ ಇವನನ್ನು ತಿದ್ದಿದಳು ಎಂಬುದೇ ಕಥಾಸೂತ್ರ. ಪದವೀಧರನಾದ ವೊಟೊವ್ರ್ ಫ್ರೆಂಚ್ ಮತ್ತು ಜರ್ಮನ್ ಭಾಷೆಗಳನ್ನು ಕಲಿಯಲು ನಿಶ್ಚಯಿಸಿ ಒಸಿಪೊವ್ನಾ ಎಂಬ ತರುಣಿ ಶಿಕ್ಷಿಕೆಯಲ್ಲಿ ಫ್ರೆಂಚ್ ಆರಂಭಿಸಿ, ಕೊನೆಗೆ ಅವಳಲ್ಲಿ ಪ್ರೇಮಭಿಕ್ಷೆಯನ್ನು ಬೇಡಿ 'ಸ್ಮರಣೆ' ಎಂಬ ಪದವನ್ನು ಮಾತ್ರ ಕಲಿತುದೇ "ಕಲಿತ ಪಾಠ". "ತಿರಸ್ಕಾರ" ಕತೆಯಲ್ಲಿ ಪ್ವಡಾಳ ಕಾಮಜೀವನ, ಆಸ್ಪತ್ರೆಯಿಂದ ಹೊರ ಬಿದ್ದವಳು ತನಗೆ ಸರಿಹೊಂದುವ ವೇಷಭೂಷಣಗಳಾವವೂ ಇಲ್ಲದೆ ಹೇಸಿ, ಯಾವ ನಲ್ಲನನ್ನು ಒಲಿಸಿಕೊಳ್ಳಬೇಕೆಂದು ಯೋಚಿಸುತ್ತ ಫಿಂಕೇಲ್ ಎಂಬ ದಂತವೈದ್ಯನ ನೆನಪಾಗಿ, ಹೋಗಲಾರದೆ ಹೋದವಳು ಗುರುತಿಸಲ್ಪಡದೆ ಹಲ್ಲು ಮುರಿಸಿಕೊಂಡರೂ ಮರಳಿ ಒಬ್ಬ ತರುಣ ವ್ಯಾಪಾರಿಯೊಡನೆ ಬೆಡಗಿನ ಬದುಕು ಬದುಕಿದಳು—ಇವೆಲ್ಲಾ ಚಿತ್ರಿತವಾಗಿದೆ. ಇಂತಹ ಜೀವನದ ಇನ್ನೊಂದು ಮುಖ "ರಾಸಾಯನಿಕನ ಹೆಂಡತಿ". ಅವಳಿನ್ನೂ ತರುಣಿ. ಮುದುಕ ಗಂಡನನ್ನು ಕೈಹಿಡಿದವಳು. ಅವಳಿಗೆ ಮೋಜು ಬೇಕು; ಚೆನ್ನಾಟ ಬೇಕು. ಒಬ್ಬ ಡಾಕ್ಟರೂ ಮತ್ತೊಬ್ಬ ಬಡಕಾಟಿಯೂ ಇವಳನ್ನು ಒಲಿಸಿಕೊಳ್ಳಲು ಒಂದು ರಾತ್ರಿ ಪ್ರಯತ್ನಪಡುತ್ತಾರೆ—ಕೊಳ್ಳುವ ನೆವದಿಂದ ಮರ್ಯಾದೆಮೀರಿ ಮಾತನಾಡುವ ಅವರಿಗೆ ಅವಳು ಹೇಳುವದಾದರೂ ಏನು?—

"ನಿಮ್ಮಂಥ ಕಾಮದಾರ ಜನರು ಹಗಲೆಲ್ಲ ಬರುತ್ತಿರಬೇಕು. ಎಂಥ ಮೋಜು! ನಾನಿದಕ್ಕಾಗಿ ಸಾಯುತ್ತಿರುತ್ತೇನೆ."

'ದುಷೇಚ್ಕಾ' ಕತೆಯ ಭಾಷಾಂತರವೇ 'ಮುದ್ದಿನ ಕಣಿ'. ಕೂಡುವಳಿಯ ಸಂಪ್ರದಾಯದಿಂದ ಜೀವಸದಲ್ಲಿ ಹಿತವೋ ಅಹಿತವೋ ಎಂಬ ಸಮಸ್ಯೆ ಇಲ್ಲಿ ಇದೆ. ಓಲೆಂಕಾಳು ಪತಿವ್ರತೆ ನಿಜ. ಆದರೆ ಸಮಾಜಪದ್ಧತಿಯಂತೆ ಬಹುಪತಿಗಳನ್ನು, ಒಬ್ಬರ ಮೇಲೊಬ್ಬರನ್ನು ಕೂಡಿದಳು. ಪ್ರತಿಯೊಬ್ಬನನ್ನು ಸೇರಿದಾಗಲೂ ತನ್ನ ಹಿಂದಿನ ಜೀವಸವನ್ನು ಜನ್ಮಾಂತರದಂತೆ ಮರೆತು ಆಯಾ ಗಂಡನ ಜೀವನಕ್ಕೆ ಹೊಂದಿಕೊಂಡು ಬದುಕನ್ನು ಸಾಗಿಸಿದಳು. ಮೊದಲು ನಾಟಕದ ಕಂಪೆನಿಯ ಕುಕಿನ್, ಆ ಮೇಲೆ ಮರದ ವ್ಯಾಪಾರಿ ಪುಸ್ಟೊಲವ್: ಬಳಿಕ "ಓಲೆಂಕಾಳು ಗಂಡಸಿಲ್ಲದೆ ವಧುವಾದಳು." ಪಶುವೈದ್ಯ ಸ್ಮಿರ್ನಿನ್‌ಸ ಗಚ್ಚಿನ ಗುಡಿಯಾದಳು. ಅವನ ನಡೆನುಡಿಗಳೆ ಇವಳ ನಡೆನುಡಿಗಳು. ಇಷ್ಟರಲ್ಲಿ ಪ್ರಿಯನಿಗೆ ಸೈಬೀರಿಯಾಕ್ಕೆ ವರ್ಗವಾಯಿತು. ಅವಳ ಬಳಿ ಯಾರೂ ಇಲ್ಲದಾಗ ಚೈತನ್ಯಮಯವಾದ ಸೃಷ್ಟಿಯೇ ಜಡವಾಯಿತು. ಸ್ಮಿರ್ನಿನ್‌ನ ಮೊದಲ ಹೆಂಡತಿಯ ಮಗನಾದ ಶಷಾನನ್ನು ತನ್ನ ಮಗನೆಂತಲೇ ತಿಳಿದು ಪೋಷಿಸಿದಳು. ಅವಳ ಅನ್ಯೋನ್ಯ ಜೀವನ ಪ್ರತಿಯೊಂದು ಘಟ್ಟದಲ್ಲಿಯೂ ಆಶ್ಚರ್ಯವನ್ನುಂಟುಮಾಡುತ್ತದೆ.

ಇವೆಲ್ಲಾ ಕಾಮಜೀವನದ ಕಥಾಲಾಪಗಳಿಂದು ಬೇಸರಪಡಬಹುದಾದ ಸಂಪ್ರದಾಯಶೀಲರಿಗೆಂದೇ ಇರಬಹುದಾದ "ಪಾಸನಿರೋಧ"ವೆಂಬ ಕತೆಯೂ 'ಸಾರಂಗಿ' (Rothschild's Fiddle) ಕತೆಯೂ ಇವೆ. 'ನೀವಲ್ಲ, ಆಕೆ!' ಕತೆಯೂ ಈ ಗುಂಪಿಗೇ ಸೇರಿದ್ದು. ಸಮಾಜದ ಆಕ್ಷೇಪಣೆಯ ಹೊಣೆಯನ್ನು ಹೊತ್ತು, ಮದ್ಯಪಾನವನ್ನು ನಿಷೇಧಿಸಿ, ಗಂಡನ ಶ್ರಾದ್ಧಕ್ಕೆ ಊರಿನ ಪ್ರತಿಷ್ಠಿತರನ್ನು ಆಹ್ವಾನಿಸುವ ಪೆಟ್ರೊವ್ನ್ ಧಾರ್ಮಿಕ ಶಿರೋಮಣಿಯಂಥವರನ್ನೂ ನಾವು ಈ ಸಮಾಜದಲ್ಲಿ ನೋಡಬಹುದು. ಕವನಕಟ್ಟುವ ಕಾಮಿ, ಬ್ರಾಂದಿಯನ್ನು ತಂದಿರುವ ಡಾಕ್ಟರು, ಕಿಲಾಡಿಯಾದ ಉಪಾಧ್ಯಾಯ ಮಹಾರಾಯ — ಇವರೆಲ್ಲಾ ಆ ಮುಗ್ಧೆಯ ದೃಷ್ಟಿಯಲ್ಲಿ ಶೀಲವಂತರು. 'ಮುದ್ದಿನ ಕಣಿ'ಯಂತೆ ಸೊಗಸಾದ ಇನ್ನೊಂದು ಕತೆಯೆಂದರೆ 'ಸಾರಂಗಿ'. ಜೇಕೊಬ್ ಇವಾನೊಫ್ ಒಳ್ಳೆಯ ಕಲಾವಿದ. ಆದರೂ ಜೀವನಕ್ಕಾಗಿ ಹೆಣದ ಪೆಟ್ಟಿಗೆಗಳನ್ನು ಮಾಡಿ ಮಾರುವವನು. ದಾರಿದ್ರ್ಯದ ದಾರುಣತೆಯಿಂದ ಬೆಂದ ಜೀವ ತನ್ನ ಊರೆಗೋಲಾದ ಹೆಂಡತಿಯನ್ನು ಕಳೆದುಕೊಂಡ ಮೇಲೆ ಹಣ್ಣಾಗಿ ದುರಂತತೆಯಲ್ಲಿ ಕೊನೆಗಾಣುವುದು. ಅಂತ್ಯಕಾಲದಲ್ಲಿ ಸಾರಂಗಿಯನ್ನು ರಾಥ್‌ಚೈಲ್ಡನಿಗೆ ಕೊಡುವ ದೃಶ್ಯ ಮರೆಯಲಾಗದ್ದು.

ಮೇಲೆ ಸಾಕಷ್ಟು ಪರಿಚಯಮಾಡಿಕೊಟ್ಟಾಗಿದೆ. ಇನ್ನು ಹೇಳಬೇಕಾದುದು ಸ್ವಲ್ಪ. ಅದು ಗ್ರಂಥದ ಒಪ್ಪಕ್ಕೆ ಸಂಬಂಧಿಸಿದುದು. ಅಚ್ಚಿನ ತಪ್ಪುಗಳು ಬೇಕಾದಷ್ಟು ಇವೆ. ಜತೆಗೆ ಅಶುದ್ಧಪ್ರಯೋಗಗಳೂ ಇವೆ. ಉದಾ.—ರತನಾಗಿರಬಹುದು (೩೫) ಕೆಟ್ಟೆಂದು, ರೀತಿ-ಭಾತಿಗಳು, ಕಿತ್ತಸಲೇಬೇಕು, ಯಣ್ಣೆ, ಬಿಕ್ಕಿಬಿಕ್ಕಿಸಿ, ಮುರುಕುಗೊಂಡು, ವಿಾನಗಳು, ನಾವುಗಳು, ನವಿಯು—ಮುಂತಾದವು. ತನ್ನ ಕೈವಾಡ ಮೆಚ್ಚುವಾಗ "That is a fine job" ಎಂಬುದಕ್ಕೆ "ಬಹು ಸೊಗಸಾದ ಉದ್ಯೋಗವು" ಎಂಬ ಕನ್ನಡೀಕರಣ ಒಪ್ಪುವುದಿಲ್ಲ. ಅದೇ "Get out of my sight" ಎಂಬಲ್ಲಿ "ನನ್ನ ಕಣ್ಣೆದುರಿನಲ್ಲಿ ನಿಲ್ಲಬೇಡ" ಎಂಬುದು ಎಷ್ಟು ಚೆನ್ನಾಗಿದೆ!

ಶ್ರೀಮಾನ್ ಚುಳಕಿಯವರು ಉತ್ತಮವಾದ ಕತೆಗಳನ್ನೇ ಆರಿಸಿದ್ದರೆ ಚೆನ್ನಾಗಿತ್ತು. ಮುಂದೆ ಅವರು ಆಂಟನ್ ಪವ್‌ಲೊವ್‌ಟಿಷ್ ಚೆಖೊವ್ಹನ The Teacher of Literature, On the way, The Lady with the Dog, A Dreary Story, A Misfortune, At the Manor, The Blank Monk, Ward No. 6, The Three Sisters ಮುಂತಾದ ಪ್ರಸಿದ್ಧ ಕತೆಗಳನ್ನು ಕನ್ನಡಕ್ಕೆ ತರಬೇಕೆಂದು ಕೋರುತ್ತೇವೆ.

ಎಂ. ಎಸ್. ಶಾಸ್ತ್ರಿ.

***

**ರೋಹಿಣಿ**—ಕಲಾಕುಮಾರ ಸಾಧನ ಪ್ರಕಟನಾಲಯ. ಸಾಗರ—ಶಿವಮೊಗ್ಗ. (ಡಿಸೆಂಬರ್, ೧೯೪೩) **ಬೆಲೆ**, ೦-೬-೦.

ಈ ಪುಟ್ಟ ಪುಸ್ತಕದಲ್ಲಿ 'ಕಲಾಕುಮಾರ'ರು ಬರೆದ ಇಪ್ಪತ್ತೊಂಬತ್ತು ಕವನಗಳಿವೆ. ಅವುಗಳಲ್ಲಿ ಎರಡು ಇಂಗ್ಲಿಷಿಂದ ಅನುವಾದಗಳು. ರೋಹಿಣಿ ಎಂಬ ಹೆಸರಿನ ಕವನದಿಂದ ಈ **ಪುಸ್ತ**ಕವು ಮೊದಲಾಗುತ್ತದೆ. 'ಭಾವಜೀವಿಯ ಬೆಳಕು', 'ಅವಳ ರೀತಿ', 'ಕವನ', 'ಮನದಾಸೆ' 'ಶಾಂತಿರಸ್ತು' 'ಕಾಯುತಿಹುದು ಬರಿದೆಯಂತೆ', 'ಒಲವು', 'ಗಾನವನ್ನು ಕುರಿತು' — ಇವು ಇಲ್ಲಿನ ಉತ್ತಮ ಕವನಗಳು. ಅನೇಕ ಕಡೆ ಇಲ್ಲಿನ ಕವನಗಳ ವಸ್ತು, ರೀತಿ, ಛಂದಸ್ಸು ಹೊಸಗನ್ನಡದ ಹೆಸರಾದ ಕವಿಗಳ ನೆನಪನ್ನು ತರುತ್ತವೆ.

ಬಹುರೂಪಿ ಪ್ರಕೃತಿಯ ವಿವಿಧ ಸೌಂದರ್ಯದ ಚಿತ್ರವು 'ಅವಳ ರೀತಿ' ಎಂಬ ಕವನದಲ್ಲಿ ಮೂಡಿದೆ. ಪ್ರಕೃತಿಯ ನಿರಂತರ ಆರಾಧನೆ, ಜೀವನದ ಅನುಭವ, ಬ್ರಹ್ಮಾನಂದದ ಅರಿವು ಇವು ಕವಿತೆಯ ಮೂಲವೆಂದು 'ಕವನ'ವು ಸಾರುತ್ತದೆ. 'ಗಾನವನ್ನು ಕುರಿತು' ಎಂಬ ಕವನದಲ್ಲಿ

ಬರಲಿ ಸಹಿಸುವೆ ನಾಕ ನರಕವು
ಗಾನಬಳಿಯೊಳು ನೀನಿರೆ !
ನೀನು ಪ್ರೇಮದ ಮೂಲ ವಿಶ್ವದ
ಶೀಲಸುಮಧುರ ಗಾನವೆ |
ಏರಿಸಿಳಿಸುವೆ ವಿಶ್ವಹೃದಯವ
ಮಾಯೆ ಎನಿಸಿಹ ಗಾನವೆ !

ಎಂದು ಕವಿಯು ಹಾಡಿದ್ದಾನೆ. ಇದು ಈ ಸಂಗ್ರಹದಲ್ಲಿನ ಉತ್ತಮ ಕವನ.

ರೋಹಿಣಿಯಲ್ಲಿ ಬಳಕೆಯಿಂದ ಮಂಕಾದ ಕವನಗಳೇ ಹೆಚ್ಚು. 'ಯಾರು', '— ಗೆ', 'ಮನದಾಸೆ' 'ಕವಿಗೆ', ಮೊದಲಾದ ಕವನಗಳ ವಸ್ತು ಹಿಂದಿನಿಂದಲೂ ಬಂದದ್ದೇ. ನಮ್ಮ ಕವಿಗಳು ನಮ್ಮ ಕಾಲದ ನೋಟಗಳನ್ನೂ ಅನುಭವಗಳನ್ನೂ ಕಾಣಿಸಲು ಪ್ರಯತ್ನಿಸಬೇಕು. ಆಗ ಕವಿಗಳ ಕೆಲಸ ಸಾರ್ಥಕವಾದೀತು.

ರೋಹಿಣಿಯಲ್ಲಿ ಅಲ್ಲಲ್ಲಿ ಸ್ವಲ್ಪ ಛಂದಸ್ಸು ಕೆಟ್ಟಿದೆ. ಉದಾಹರಣೆಗೆ: 'ಕುಳಿತು ಕೋದಿಹೆ ಕೂರಸಿಯ ಮೇಣ್ಸುಮದ ಮಾಲೆ' (೬) — ಇಲ್ಲಿ ಗಣವಿಭಾಗ ಕಷ್ಟ, ಅರ್ಥ ಸಂದಿಗ್ಧ. 'ಶಾಪಿಸಿದ ರಂದವನ ನಿನ್ನೆನಿತೋ !' (೨೨) ಎಂಬಲ್ಲಿ ಕೊನೆಯ ಗುರು ಕಡಮೆಯಾಗಿ ಪಾದ ಕುಂಟುತ್ತಿದೆ. ಇಂತಹ ಸಣ್ಣ ದೋಷಗಳನ್ನೂ ಅಚ್ಚಿನ ಕೆಲವು ಕೊಂಕುಗಳನ್ನೂ ಸರಿಪಡಿಸಿದಲ್ಲಿ ಪುಸ್ತಕ ಹೆಚ್ಚು ಮೆಚ್ಚಾಗುತ್ತದೆ. ರಾಘವೇಂದ್ರರು ರಚಿಸಿದ ಮುಖಚಿತ್ರವು ಪುಸ್ತಕಕ್ಕೆ ಕಳೆಗೊಟ್ಟಿದೆ.

ಎನ್. ಪ್ರಹ್ಲಾದರಾವ್.

# ಸಂಪಾದಕೀಯ

ಈಚಿನ ವಿಶೇಷ ಸಂಗತಿಯೆಂದರೆ ಡಿಸೆಂಬರ್ ಕಡೆಯ ವಾರದಲ್ಲಿ ಶಿವಮೊಗ್ಗೆಯಲ್ಲಿ, ಅಲ್ಲಿನ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನ. ಬಹುಕಾಲವಾದ ಮೇಲೆ ಮೈಸೂರು ಸೀಮೆಯಲ್ಲಿ ನಡೆದ ಈ ಉತ್ಸವ ಬಹಳ ವಿಜೃಂಭಣೆಯಿಂದ ನಡೆಯಿತು. ಚೆಲುವಾದ ಮಲೆನಾಡ ಸೆರಗೂರೊಂದರಲ್ಲಿ ಉದಾರಿಗಳಾದ ಮಾನ್ಯ ಕನ್ನಡಿಗರೊಬ್ಬರು ಕಟ್ಟಿಸಿಕೊಟ್ಟ ಸಭಾಮಂದಿರದ ಆವರಣದಲ್ಲಿ, ಸ್ವಂತವಾಗಿ ಅತಿಶಯ ಕನ್ನಡಸೇವೆ ಸಲ್ಲಿಸಿರುವ ಸಂಘದ ಮತ್ತು ಶ್ರದ್ಧಾಳುಗಳ ನೇತೃತ್ವ ಸಹಕಾರಗಳಲ್ಲಿ, ಶ್ರೀಯುತ ಮಾಸ್ತಿ ವೆಂಕಟೇಶಯ್ಯಂಗಾರ್ಯರ ಪರಿಷದು ಪಾಧ್ಯಕ್ಷತೆಯಲ್ಲಿ, ಅವರ ಸೋದರರಂತೆಯೂ ನಚ್ಚಿನ ಗೆಳೆಯರಾಗಿಯೂ ಹೊಸಕನ್ನಡ ಕವಿತಾಲೋಕದಲ್ಲಿ ಇಂದ್ರಧನು ಪ್ರಕಾಶದಂತೆ ಪ್ರಕಾಶವುಳ್ಳ ಬೆಡಗು ನುಡಿ, ಬೆಡಗು ಬರಹದಿಂದ ವಿಶಿಷ್ಟರಾದ ಶ್ರೀ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಆ ಉತ್ಸವವನ್ನು ಬೇರೆಯಾಗಿ ವರ್ಣಿಸಬೇಕಾಗಿಲ್ಲ. ನಾಡಿನ ಎಲ್ಲ ಭಾಗಗಳಿಂದಲೂ ಪ್ರತಿನಿಧಿಗಳೂ ಪ್ರೇಕ್ಷಕರೂ ದಯಮಾಡಿಸಿದ್ದರು. ಊರಿನ ಮಹಿಳೆಯರೂ ಮಹನೀಯರೂ ಹಗಲೂ ಇರುಳೂ ಕಾರ್ಯಕ್ರಮದ ಸಂತೋಷವನ್ನು ಸವಿಯುವುದಕ್ಕೆ ಕಿಕ್ಕಿರಿದು ನೆರೆಯುತ್ತಿದ್ದರು.

ಉತ್ಸವಕ್ಕೆ ಅಂಗವಾಗಿ ಏರ್ಪಡಿಸಿದ್ದ ಕಲಾಪ್ರದರ್ಶನ, ಮಹಿಳಾ ಸಮ್ಮೇಳನ, ಕಿರಿಯ ಲೇಖಕರ ಸಮ್ಮೇಳನ, ಕರ್ನಾಟಕಸಂಘ ಸಮ್ಮೇಳನ ಮುಂತಾದವು ಯಶಸ್ವಿಯಾಗಿ ನಡೆದವು. ಆಶುಕವಿತಾಸ್ಪರ್ಧೆ, ಆಶುನಾಟಕ ರಚನೆ ಮತ್ತು ಅಭಿನಯ, ಸಂಗೀತ, ನರ್ತನ, ಕರ್ನಾಟಕ ವಿಶ್ವವಿದ್ಯಾನಿಲಯ ಸಂಬಂಧವಾದ ಉಪನ್ಯಾಸಮಾಲೆ, ಅಕ್ಷರತೆಗೂ ಗ್ರಾಮ ವಿದ್ಯಾಪ್ರಚಾರ ಸಂಬಂಧದಲ್ಲಿಯೂ ನಡೆದ ಭಾಷಣಗಳು — ಎಲ್ಲಾ ಸಂಭ್ರಮದಿಂದ ನಡೆದವು. ಮೊದಲು ರೂ. ೫,೦೦೦ ಕೊಡುತ್ತೇವೆಂದು ಮಾತುಕೊಟ್ಟು ಯಾರ ಕೈಯಲ್ಲಿಯೂ ಹೇಳಿಸಿಕೊಳ್ಳದೆ ಸುಮಾರು ರೂ. ೩೦,೦೦೦ ಮುಟ್ಟಿಸಿ ಶಿವಮೊಗ್ಗೆಯ ಕರ್ಣಾಟಕ ಸಂಘದ ಭವ್ಯಕಟ್ಟಡವನ್ನು ಕಟ್ಟಿಸಿಕೊಟ್ಟು ಉಪಕಾರಮಾಡಿದ ಶ್ರೀ ಹಸೂಡಿ ವೆಂಕಟಶಾಸ್ತ್ರಿಗಳವರಿಗೆ ಒಂದು ಮಾನಪತ್ರವನ್ನು ಒಪ್ಪಿಸಿದುದಲ್ಲದೆ ಅವರ ತೈಲಚಿತ್ರವೊಂದನ್ನು ಸಂಘಭವನದ ಅಲಂಕರಣಕ್ಕಾಗಿ ಸಭೆಯಲ್ಲಿ ಅನಾವರಣ ಮಾಡಲಾಯಿತು. ಬಂದ ಜನರೆಲ್ಲರ ಮೂರು ದಿನಗಳ ಸಂಭ್ರಮದಲ್ಲಿ ಉತ್ಸವ ಬಹು ಚೆನ್ನಾಗಿ ನೆರವೇರಿತು. ಕ್ಷಾಮದ ಈ ಕಾಲದಲ್ಲಿಯೂ ಬೇರೆ ಕಾರಣಗಳಿಂದ ಆಯಾಸ

ಹಟ್ಟಿದ್ದ ಹಲವುಮಂದಿ ಊರನಾಯಕರೂ ಗೆಳೆಯರೂ ಇಷ್ಟು ಚೆನ್ನಾಗಿ ಉತ್ಸವವನ್ನು ನಡಸಿದುದಕ್ಕಾಗಿ ಸರ್ವಥಾ ವಂದ್ಯರೂ ಅಭಿನಂದನೀಯರೂ ಆಗಿದ್ದಾರೆ.

ಅಧ್ಯಕ್ಷಭಾಷಣ ವಿಶೇಷ ಕಾಂತಿಯಿಂದ ಎಲ್ಲ ಮನಗಳನ್ನು ಸೆಳೆಯಿತು; ಸುಶ್ರಾವ್ಯವಾಯಿತು. ಅದನ್ನು ಅವರ ಬಾಯಿಂದ ಕೇಳಿ ಸಂತೋಷಪಟ್ಟವರು ಪುಣ್ಯಶಾಲಿಗಳು. ಬೇರೆ ಕಡೆ ಅದರ ಕೆಲವು ಭಾಗಗಳನ್ನು ಅಚ್ಚುಮಾಡಿದೆ.

* * *

ಕನ್ನಡ ವಿಶ್ವವಿದ್ಯಾನಿಲಯದ ಸಂಬಂಧದಲ್ಲಿ ನಾವು ಒಂದು ಮಾತನ್ನು ಹೇಳಲು ಧೈರ್ಯಮಾಡಬಹುದೆನ್ನಿಸುತ್ತದೆ. ಈಗ್ಗೆ ಹತ್ತೆಂಟು ವರ್ಷಗಳಿಂದ ಈ ವಿಷಯ ನಮ್ಮವರ ಮನಸ್ಸಿನಲ್ಲಿ ತುಯ್ಯುತ್ತಿದೆ. ಹಿಂದೆ ಈ ಪ್ರಯತ್ನ ನಡೆಯಿತು. ಶ್ರೀ ಆಲೂರರು, ನಮ್ಮ ವಿಶ್ವವಿದ್ಯಾನಿಲಯದ ಸ್ಥಾನಪತಿಗಳಾಗಿದ್ದು ನಮ್ಮ ದುರ್ದೈವದಿಂದ ಕಳೆದ ವರ್ಷ ಅಕಾಲದಲ್ಲಿ ತೀರಿಕೊಂಡ ಶ್ರೀ ಎನ್. ಎಸ್. ಸುಬ್ಬರಾಯರು ಮುಂತಾದವರು ಆ ಬಗ್ಗೆ ಕಾರ್ಯಯೋಜನೆಯನ್ನು ಮಾಡಲು ಪ್ರಯತ್ನಿಸಿದ್ದರು. ನಮಗೇ ವಿಶೇಷವಾದ ಒಂದು ಮಹಾ ವಿದ್ಯಾಸಂಸ್ಥೆ ಅಗತ್ಯವೆಂದಿಟ್ಟುಕೊಂಡರೆ ಈಗ ಮೈಸೂರು, ಬೊಂಬಾಯಿ, ಹೈದರಾಬಾದು, ಮದರಾಸುಗಳಲ್ಲಿರುವ ಕನ್ನಡ ವಿದ್ಯಾರ್ಥಿಗಳೆಲ್ಲರೂ ಅದಕ್ಕೆ ವಿದ್ಯಾರ್ಥಿಗಳಾಗಿ ಕೂಡುವಂತಾದರೆ ಚೆನ್ನು. ಆದರೆ ಆ ಕಾಲ ಸದ್ಯಕ್ಕೆ ಶಕ್ಯವಾಗುವ ಹಾಗಿಲ್ಲ. ಕಾರಣಗಳು ಕೇವಲ ವಿದ್ಯಾಪ್ರಪಂಚಕ್ಕೂ ಸಂಸ್ಕೃತಿ ಜೀವನಕ್ಕೂ ಸಂಬಂಧಿಸಿದವೇನೂ ಅಲ್ಲ. ಕನ್ನಡನಾಡಿನ ರಾಜಕೀಯಕ್ಕೆ ಸೇರಿಕೊಂಡು ಹಲವು ಬಗೆಯ ಸಿಕ್ಕುಗಳಿಗೆ ಸಿಕ್ಕಿಹಾಕಿಕೊಂಡಿವೆ. ಭಾಷಾ ಪ್ರಕಾರ ಪ್ರಾಂತಗಳನ್ನು ವಿಂಗಡಿಸುವ ತತ್ವವನ್ನು ನಾಳೆಯ ಭಾರತ ರಾಜ್ಯಾಂಗರಚನೆಯಲ್ಲಿ ಒಪ್ಪಿಕೊಂಡು, ಇದನ್ನು ಒಂದು ಅಖಂಡ ಪ್ರಾದೇಶಿಕ ಭಾಗವನ್ನಾಗಿ ಮಾಡಿದರೆ ಒಂದು ಕ್ಷಣದಲ್ಲಿ ಇದನ್ನು ಸಾಧಿಸಬಹುದು. ಇದು ಅಖಂಡ ಪ್ರಾಂತ ಎಂಬ ಭಾವನೆಯನ್ನು ಹುಟ್ಟಿಸಿ ಬೆಳಸಿ ಅದರ ಸೂಚಿಕೆಯೂ ಪ್ರತಿನಿಧಿಯೂ ಆಗಿ ನಿಲ್ಲುವಂತೆ ಇಂತಹ ವಿಶ್ವವಿದ್ಯಾನಿಲಯ ಪೂರ್ವಜೀವಿಯಾಗಬೇಕೆಂಬ ವಾದವೇನೊ ಸಾಧುವೇ,—ತಕ್ಕುದೇ. ಆದರೆ ಆರ್ಥಿಕ, ರಾಜಕೀಯ ಪ್ರಭಾವಗಳು ಇಂದಿನಂತೆಯೇ ಇದ್ದರೆ ಬ್ರಿಟಿಷ್ ಕರ್ನಾಟಕದವರು ಸದ್ಯಕ್ಕೆ ತಮಗೆ ಪ್ರಯೋಜನ ಮಂಡಲವೂ ವ್ಯಾಪ್ತಿಯೂ ಎಲ್ಲಿ ದೊರಕುವುದೋ ಆ ಪ್ರಾಂತದ ವಿಶ್ವವಿದ್ಯಾಲಯಗಳಿಗೆ ಒಲಿದು ಭಕ್ತರಾಗುವುದು ಸಹಜವಾಗುತ್ತದೆ. ಜೊತೆಗೆ ಈ ಮಾತನ್ನು ಹೇಳಬಹುದು. ಬೇರೆಯ ಆಡಳಿತಗಳಿಗೆ ಒಳಪಟ್ಟ ನಮ್ಮ ಮತ್ತು ಹೈದರಾಬಾದಿನ ವಿಶ್ವವಿದ್ಯಾನಿಲಯಗಳ ಕಡೆಗೆ ಆ ಜನದ ಮನಸ್ಸು ಅಷ್ಟಾಗಿ ಧಾರಾಳವಾಗಿ ಒಲಿಯುತ್ತಿಲ್ಲ — ಇಂದಿನ ಪರಿಸ್ಥಿತಿಯಲ್ಲಿ.

ಹೀಗಿರುವಾಗ ಕೊಡಗಿನವರನ್ನು ಹೇಗೆ ಒಲಿಸುವುದು? ಬೊಂಬಾಯಾಧಿಪತ್ಯಕ್ಕೆ ಒಳಪಟ್ಟ ಉತ್ತರ ಕನ್ನಡಜಿಲ್ಲೆಗೆ ಮದರಾಸಿಗೆ ಸೇರಿದ ದಕ್ಷಿಣ ಕನ್ನಡಜಿಲ್ಲೆಯವರ ಸಹಪಾಠ ಶಕ್ಯವಾಗುವುದಿಲ್ಲ. ಬಳ್ಳಾರಿಯವರ ತೊಡಕೂ ಈ ಬಗೆಯದೇ. ಸದ್ಯಕ್ಕೆ ಉತ್ತರ ಕರ್ನಾಟಕದ ಬಂಧುಗಳು ಮಾತ್ರ ಈ ವಿಶ್ವವಿದ್ಯಾನಿಲಯಕ್ಕೆ ಒಕ್ಕಲಾದಾರು. ಕನ್ನಡನಾಡಿನ ಭಾಗ್ಯ ನಾಳೆಗೆ ತೆರೆದರೆ ಈಗ ಪ್ರಾದೇಶಿಕವಾಗಿರುವ ನಾಲ್ಕು ವಿದ್ಯಾಸಂಸ್ಥೆಗಳೂ ಕೂಡಿ ಒಂದು ಅವಯವಿಯಾಗಲು ಅವಕಾಶವಾಗುತ್ತದೆ.

ಇನ್ನೊಂದು ಸಂಗತಿಯನ್ನು ಕನ್ನಡನಾಡಿನಲ್ಲಿ ಪ್ರಧಾನವಾಗಿ ಗಮನದಲ್ಲಿಡಬೇಕು. ರಾಜಕೀಯ ಕಾರಣಗಳ ತೊಡಕಿಗೆ ಸಂಬಂಧಿಸಿದಂತೆ ಆರ್ಥಿಕ ಪ್ರಪಂಚದ ಒಂದೆರಡು ಭಯಗಳೂ ಇತರ ಬಗೆಯ ಶಂಕೆಸಂಶಯಗಳೂ ಇಲ್ಲಿಗೇ ವಿಶೇಷವಾಗಿ ಬೆಳೆದಾವೇನೊ ಎಂದು ಕೆಲವುಸಲ ಭಾಸವಾಗುತ್ತದೆ. ಒಡಕುನುಡಿ ನುಡಿಯುತ್ತ ಶ್ರುತಿ ಕೆಡಿಸುತ್ತಿವೆ. ನಾಡಿನ ಹಿತಚಿಂತಕರಾದವರು ಈ ಅಂಶಗಳ ವಾಸ್ತವಿಕತೆಯನ್ನು ಅರಿಯಬೇಕು. ಅದನ್ನು ನಿವಾರಿಸುವಂತೆಯೂ ಮನಸ್ಸಿನ ಒಳಪದರಗಳಲ್ಲಿದ್ದುಕೊಂಡು, ಮಾತು ನಡತೆ ರೀತಿಗಳನ್ನು ತಡೆಯುತ್ತ ಹದಗೆಡಿಸುತ್ತ ಹೋಗದಂತೆಯೂ ಸೌಮನಸ್ಯದಿಂದ ಕಾರ್ಯಾರಂಭ ಮಾಡಬೇಕು. ಎಂದರೆ ಯಾವ ಅಡ್ಡಿಗಳಿವೆಯೋ, ಯಾರ ವಿರೋಧಬಂದೀತೊ ಅವನ್ನು ನೇರ್ಪಡಿಸಬೇಕು — ಮೊದಲು. ಅಂಥ ಪ್ರಭಾವ ಎಲ್ಲಿಂದ ಬರಬಹುದೊ ಅದನ್ನು ಊಹಿಸಿಕೊಂಡು ಮೊದಲೇ ಪರಿಹಾರಕಾರ್ಯವನ್ನೂ ಸ್ನೇಹದ ಹರಗಿಕೆಲಸವನ್ನೂ ಮಾಡಿ, ಒಂದು ಮಧ್ಯಸ್ಥ ಸರ್ವಸಮ್ಮತ ನಿರ್ಣಯಕ್ಕೆ ಬಂದು ಎಲ್ಲ ಪಂಗಡಗಳವರ ಹರಕೆ, ಹಾರೈಕೆ, ಹಣಬಲ, ಜನಬಲ ಇದಕ್ಕೆ ಒಲಿಯುವಂತೆ ಮಾಡಿಕೊಳ್ಳಬೇಕು. ಅದಕ್ಕಾಗಿ ಆರಿಸಿದ, ಪೂರ್ತಿ ಪ್ರಾತಿನಿಧಿಕವಾದ ಮುಖಂಡರ ಮಂಡಲವೊಂದು ಮುಂದಾಗಿ ಏರ್ಪಟ್ಟು ವಿಚಾರವಿನಿಮಯ ಮಾಡಿಕೊಂಡ ಹೊರತು ದಾರಿಯಿಲ್ಲ. ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿಸಿ ಪದವಿಯ ಪಟ್ಟಿ ಅಂಟಿಸುವ ಇನ್ನೊಂದು ಹೊಸ ಕಾರ್ಖಾನೆ ಹುಟ್ಟಿಕೊಳ್ಳುವದು ಮಾತ್ರ ಗುರಿಯಾಗುವುದಾದರೆ ಅಂಥದು ಸದ್ಯಕ್ಕೆ ಅಗತ್ಯವಿಲ್ಲವೇನೊ ಅನ್ನಿಸುತ್ತದೆ. ಹಣ ವೆತ್ತಬೇಕು, ನಿಜವಾಗಿ ಮನಸ್ಸು, ಯತ್ನ ಆ ಕಡೆಗೆ ಮುಂಬರಿಯಬೇಕು ಎನ್ನುವುದಾದರೆ ಕೇವಲ ಮರಾಟೆಯವರು ತಮ್ಮ ವಿಶ್ವವಿದ್ಯಾನಿಲಯವನ್ನು ಮಾಡಿಕೊಂಡು ಬಿಡುತ್ತಾರೆ, ನಮ್ಮ ಗತಿಯೇನು ಎಂಬ ಭಯ ಸ್ವಲ್ಪ ಹುರುಡು ತಂದೀತೇ ಹೊರತು ನಮ್ಮ ಆಳವಾದ ಆಸೆಗಳಿಗೆ ಆಧಾರವಾಗುವ ಸಾಧಕವಾಗುವ ಪ್ರೇಮಶಕ್ತಿಯನ್ನು ಒದಗಿಸಲಾರದೆ ಹೋದೀತು. ನಮ್ಮ ಮನೆ ಕಟ್ಟಿಕೊಳ್ಳುವ, ನಾವು ಮೇಲಾಗುವ, ಬದುಕುವ, ರಚನಾತ್ಮಕ ಯೋಜನೆಗೇ ಕಾರ್ಯರೀತಿಗೇ ಮೊದಲ ಅವಕಾಶ ಉಂಟಾ

ಗಲಿ. ಎಲ್ಲಕ್ಕಿಂತ ಹೆಚ್ಚಾಗಿ ಮೊದಲು ಲಕ್ಷಗಟ್ಟಲೆ ಹಣಸಂಗ್ರಹದ ಆವಶ್ಯಕತೆಯಿದೆ. ಮನಸ್ಸಿನ ಒಪ್ಪಿಕೆಗಳನ್ನು ಸಾಧಿಸಬೇಕಿದೆ. ಇದನ್ನು ಸಾಧಿಸುವ ಸಲುವಾಗಿ ಎಲ್ಲರ ವಿಶ್ವಾಸವನ್ನೂ ಸೆಳೆಯುವಂತಹ ಪೂರ್ತಿ ಪ್ರಾತಿನಿಧಿಕವಾದ ಕಾರ್ಯಮಂಡಲಿಯನ್ನು ಯೋಜಿಸಿಕೊಂಡು ಕಾರ್ಯ ವಿವರಗಳಿಗೂ ವ್ಯವಸ್ಥೆಗಳಿಗೂ ತೊಡಗುವುದು ಅಗತ್ಯ.

***

ಮೈಸೂರು ಮಹಾರಾಜಾ ಕಾಲೇಜಿನ ಚರಿತ್ರೆಯ ಸಂಘದ ೨೫ನೆಯ ವರ್ಷದ ಉತ್ಸವ ಬಹು ವಿಜೃಂಭಣೆಯಿಂದ ನೆರವೇರಿತು. ಒಟ್ಟು ಮೂರು ದಿನಗಳಕಾಲ ಆರು ಹೊತ್ತು ನಡೆದ ಉತ್ಸವಕ್ಕೆ ಪ್ರಖ್ಯಾತ ವಿದ್ವಾಂಸರಾದ ಮಹಾಮಹೋಪಾಧ್ಯಾಯ, ಅರ್ಥಶಾಸ್ತ್ರವಿಶಾರದ ಡಾ|| ಆರ್. ಶಾಮಶಾಸ್ತ್ರಿಗಳವರು ಅಧ್ಯಕ್ಷರಾಗಿದ್ದರು. ಪ್ರೊ|| ಬಿ. ಎಂ. ಶ್ರೀಕಂಠಯ್ಯನವರು ಇಂಡಿಯಾ ದೇಶದಲ್ಲಿ ಆಳಿದ ಚಕ್ರಾಧಿಪತ್ಯಗಳು ಎಂಬ ಭಾಷಣಮಾಲಾ ಭಾಗಕ್ಕೆ ಅಧ್ಯಕ್ಷರಾಗಿದ್ದರು. ಕನ್ನಡನಾಡಿನ ಜನಪದ ಗೀತಗಳ ಭಾಗಕ್ಕೆ ಶ್ರೀ. ಬಿ. ಪುಟ್ಟಯ್ಯನವರು ಅಧ್ಯಕ್ಷರಾಗಿದ್ದರು. ಭರತಖಂಡದ ಮತ್ತು ಇತರ ಭಾಗಗಳ ಚರಿತ್ರೆಗೂ ಇತಿಹಾಸಶಾಸ್ತ್ರಕ್ಕೂ ಸಂಸ್ಕೃತಿಗೂ ಸಂಬಂಧಿಸಿದ ಅನೇಕ ವಿಷಯಗಳನ್ನು ಕುರಿತು ಮೇಲ್ತರದ ವ್ಯಾಸಂಗ ಮಾಡಿದ ಹತ್ತಾರುಮಂದಿ ಅಧ್ಯಾಪಕರೂ, ವಿದ್ಯಾರ್ಥಿಗಳೂ ಲೇಖನಗಳನ್ನು ಓದಿದರು. ಅವುಗಳಲ್ಲಿ ಮುಖ್ಯವಾದುವಾದರೂ ಬೇಗ ಅಚ್ಚಾದರೆ ಉತ್ತಮವಾದ ಒಂದು ಪುಸ್ತಕ ಹೊರಕ್ಕೆ ಬಂದ ಹಾಗಾಗುತ್ತದೆ. ಇತಿಹಾಸದ ಪ್ರಾಧ್ಯಾಪಕರಾದ ಡಾ|| ಎಂ. ಎಚ್. ಕೃಷ್ಣ ಅವರಿಗೂ ಉತ್ಸವ ಸಮಿತಿಯವರಿಗೂ ಇಷ್ಟು ಮೇಲಾಗಿ ಉತ್ಸವವನ್ನು ನಡಸಿಕೊಟ್ಟ ಕೀರ್ತಿಯೆಲ್ಲ ಸಲ್ಲತಕ್ಕದ್ದು.

ಆ ಸಂದರ್ಭದಲ್ಲಿ ಇಲ್ಲಿನ ಸಂಸ್ಕೃತ ಅಧ್ಯಾಪಕರಾದ ಶ್ರೀ. ಎಂ. ಲಕ್ಷ್ಮೀನರಸಿಂಹಯ್ಯನವರು ಓದಿದ ಕಾಳಿದಾಸನ ಕಾಲವನ್ನು ಕುರಿತ ಲೇಖನದ ಸಂಗ್ರಹವನ್ನು ವಸ್ತುಕೋಶದಲ್ಲಿ ಕೊಟ್ಟಿದೆ.

***

ಈ ಸಲ ಒಂದು ವಿಶೇಷ ಲಕ್ಷಣವನ್ನು ಒದಗಿಸಲು ಈ ಪತ್ರಿಕೆಗೆ ಸಾಧ್ಯವಾಗಿದೆ. ಅದು ಸ್ನೇಹಿತರ ಉಪಕಾರದಿಂದಾದ್ದು. 'ಸಮಾಜ ಸುರಕ್ಷಣೆ' ಎಂಬ ಲೇಖನವನ್ನು ೭-೮ ಮಂದಿ ವಿದ್ಯಾರ್ಥಿಗಳು ಕೂಡಿ ಬರೆದರು. ಅರ್ಥಶಾಸ್ತ್ರ ವ್ಯಾಸಂಗಮಾಡುತ್ತ ಆನರ್ಸ್ ತರಗತಿಗಳಲ್ಲಿರುವವರು ಅವರು. ಗೆಳೆಯರಾದ ಅಧ್ಯಾಪಕರೊಬ್ಬರ ಸಲಹೆಯಂತೆ ವಿಷಯವನ್ನು ಹಂಚಿಕೊಂಡರು. ಮೊದಲು ಬೇರೆ ಬೇರೆ ಭಾಗಗಳನ್ನು ಬರೆದರು. ಆ ಮೇಲೆ ಒಟ್ಟಿಗೆ ಅವನ್ನೆಲ್ಲ ಸೇರಿಸಿ ಒಂದು ರೂಪಕ್ಕೆ ತಂದರು. ಯಾವ ನೇರವಾದ ಕರ್ತೃತ್ವವನ್ನೂ ಯಾರೂ ವಹಿಸಲು ಬಯಸದೆ ಅರ್ಥಶಾಸ್ತ್ರ ಸಂಘದ

ಹೆಸರಿನಲ್ಲಿ ಅದನ್ನು ಪ್ರಕಟಿಸುತ್ತಿದ್ದಾರೆ. ಈ ಸೆರವಿನ ಗುಣ, ಶೀಲ ಉದಾತ್ತ ವಾದವು. ಈ ಮಾದರಿ ಕೆಲಸಕ್ಕೆ ಎಷ್ಟು ವ್ಯಾಪ್ತಿಯನ್ನಾದರೂ ಬಯಸಬಹುದು. ಈ ತಂತ್ರಕ್ಕೆ ಒಳಪಡಲಾರದ ಯಾವ ವ್ಯಾಸಂಗವೂ ಇಲ್ಲ. ಇದರ ಫಲಕಾರಿತೆ ಯನ್ನಂತೂ ಬೇರೆಯಾಗಿ ವಿವರಿಸಬೇಕಿಲ್ಲ. ಈ ಮೂಲಕ ಸ್ಥಾಪಿತವಾಗುವ ಸಂಪ್ರದಾಯ ಅನನ್ಯಸಾಧಾರಣವಾದದ್ದು, ಅಪೂರ್ವವಾದ್ದು. ಅದನ್ನು ಆಗುಮಾಡಿದ ವಿದ್ಯಾರ್ಥಿ ಗೆಳೆಯರಿಗೂ, ಅದರ ಎಲ್ಲ ಮಜಲುಗಳಲ್ಲಿಯೂ ನೋಡಿ, ಬರಸಿ, ತಿದ್ದಿ, ಹುರುಪುತುಂಬಿ, ಸಹಕರಿಸಿದ ಅಧ್ಯಾಪಕರಿಗೂ, ಅರ್ಥಶಾಸ್ತ್ರ ಶಾಖೆಯ ಮತ್ತು ಸಂಘದ ಎಲ್ಲ ಅಧಿಕಾರಿ ಗೆಳೆಯರಿಗೂ ಪ್ರಬುದ್ಧ ಕರ್ಣಾಟಕ ಋಣಿಯಾಗಿದೆ.

## ಕಂಬನಿ

ಕಂಬನಿ ಸುರಿಸದೆ ಈಚಿನ ಯಾವೊಂದು ಸಂಚಿಕೆಯನ್ನೂ ಪ್ರಕಟಿಸುವ ಪುಣ್ಯ ವಿಲ್ಲದುದಕ್ಕಾಗಿ ಮನಸ್ಸಿಗೆ ವ್ಯಥೆಯಾಗುತ್ತದೆ. ಆದರೇನು? ಹಿರಿಯರಾಗಿ ಬದುಕಿ ಕನ್ನಡಸೇವೆ, ಸಂಸ್ಕೃತಿಸೇವೆ ಮಾಡಿದ ಮಹನೀಯರಿಗೆ ನಮ್ಮ ಭಕ್ತಿಯನ್ನು ನಿವೇದಿಸುವುದು ಪರಮ ಕರ್ತವ್ಯ.

ನಮ್ಮ ಪಡೆಯ ಭೀಷ್ಮರಂತಿದ್ದು, ವಿದ್ಯಾ ಇಲಾಖೆಯ ದೊಡ್ಡ ಸ್ಥಾನದಲ್ಲಿ ಕೆಲಸಮಾಡಿ ೯೩ ವರ್ಷಗಳ ಕಾಲ ಶುಚಿಯಾದ ತುಂಬಿದ ಬಾಳು ಬಾಳಿ ೧೯೪೩ ಡಿಸೆಂಬರ್ ೨೫ ರ ದಿನ ದಿವಂಗತರಾದ ಶ್ರೀ ಚೆನ್ನಪಟ್ಟಣದ ವಾಸುದೇವಯ್ಯನವರು ಧನ್ಯರು. ಬದುಕೇ ಎಲ್ಲ ವಿದ್ಯೆಯ ಫಲ ಎನ್ನುವರು. ಅವರ ಬದುಕು ಉತ್ತಮ ಸಂಸ್ಕಾರ ದಿಂದಕೂಡಿ ಸವಿಯಾಗಿತ್ತು, ತಿಳಿಯಾಗಿತ್ತು. ಆರ್ಯಕೀರ್ತಿ, ಭೀಷ್ಮ ಚರಿತೆ ಮುಂತಾದ ಗ್ರಂಥಗಳನ್ನು ಬರೆದು ಒಂದು ಉಜ್ವಲಶೈಲಿಯನ್ನು ಅವರು ಕನ್ನಡಕ್ಕೆ ದಾನಮಾಡಿದರು, ನಮ್ಮಲ್ಲಿ ಹಿಂದಿನ ಅನೇಕ ತಲೆಮಾರಿನವರು ಕಲಿತ ಆಟ, ಊಟ, ಪಾಟವೆಲ್ಲ ಅವರ ಬಾಲ ಬೋಧೆಯಿಂದಾಗಿ, ಮೈಸೂರು ಕನ್ನಡಿಗರ ಅಕ್ಷರತೆಗೆ ಮೊದಲ ಗುರುಗಳವರು. ಅವರನ್ನು ಕಂಡವರಿಗೆಲ್ಲ ಅವರ ಜೀವನದ ಚೆಲುವು, ನಯ, ಶೀಲಸೌಭಾಗ್ಯ ಎಷ್ಟು ಹಿರಿಯವು ಎಂದು ಒಮ್ಮೆಗೇ ಎದ್ದು ಕಾಣುತ್ತಿದ್ದವು. ದೇಹಬಾಧೆ ಅತಿಯಾಗಿದ್ದರೂ ಒಂದು ಕ್ಷಣಕೂಡ ತಾಳ್ಮೆ ಕೆಡದೆ ಪ್ರಶಾಂತರಾಗಿ, ವಿಶದಚಿತ್ತರಾಗಿ, ಭಕ್ತಿಯುತರಾಗಿ ಕಡೆಯ ವರೆಗೂ ಇದ್ದು ಪ್ರಯಾಣಮಾಡಿದ ಅವರಿಗಲ್ಲದೆ ಧನ್ಯರೆಂಬ ಮಾತು ಇನ್ನಾರಿಗೆ ಒಪ್ಪೀತು?

ಅವರ ಸದ್ಗತಿ ಸಿದ್ಧ. ಅವರ ಹಿಂದೆ, ನಮ್ಮ ಒಡನೆ ಉಳಿದಿರುವ ಅವರ ಬಂಧು ಬಾಂಧವರಿಗೆ ನಮ್ಮ ಸಹಾನುಭೂತಿಯನ್ನು ಸಲ್ಲಿಸುತ್ತಿದ್ದೇವೆ.

# ವಸ್ತುಕೋಶ

## 'ರಸೋಽಹಂ'[1]

ನಾಂದಿಯಾಗಿ ಗಾಯತ್ರೀಸೂಕ್ತವನ್ನು ಹೇಳುತ್ತೇನೆ.

ಲಯದ ಬಸಿರ ಬಯಲಲ್ಲಿ ದೇವ-ಭವ ಬೀಜಬಿತ್ತಿದಾಕೆ
ಮೂಕು ಮೊಗ್ಗಿ ಮುಸ್ಕೂಕಿ ಒಂಡಿಸಲಿ ತಲೆಯನೆತ್ತಿದಾಕೆ
ರಸವ ಮೀರಿ ತಾನಾರಿದಾತನಿಗೆ ಹೇಗೊ ರುಚಿಸಿದಾಕೆ
ಸಾಕ್ಷಿಪುರುಷನಾ ಅಕ್ಷಿಯಲ್ಲೆ ಪ್ರತ್ಯಕ್ಷ ರಚಿಸಿದಾಕೆ || ೧ ||

ಜಡದ ಪ್ರಾಣಗತಿ ಜಡಿದು ಮಿಡಿದು ಸ್ವರಮೇಳ ಕೋದಿದಾಕೆ
ಕೋಟಿಚಿಕ್ಕೆ ಪುಟಕಿರುವ ಬಯಲ ಹೊತ್ತಿಗೆಯನೋದಿದಾಕೆ
ಪಿಂಡಗಳನು ಬ್ರಹ್ಮಾಂಡಗಳನು ಮಣಿಮಾಲೆ ಮಾಡಿದಾಕೆ
ನಿನ್ನ ತಾಳಗತಿಯಲ್ಲಿ ವಿಶ್ವಗಳ ಗೀತ ಹಾಡಿದಾಕೆ || ೨ ||

ಕೀಟಕೀಟದಲಿ ಮಾಟಮಾಡಿ ಹಲಚೆಲುವು ತೂರಿದಾಕೆ
ಪಶುವಿನಿದಿರು ಮರಿದೂಡಿ ಮೋಡಿಯಲಿ ಒಲವ ಹೀರಿದಾಕೆ
ಹಾವ ಭಾವದಲಿ ಭೋಗ ಯೋಗದಲಿ ನಲಿವ ತೋರಿದಾಕೆ
ಸಕಲ ವಿಕಲಗಳ ಕಲೆಯ ಜಾಲದಲಿ ಒಲವ ಮಿೂರಿದಾಕೆ || ೩ ||

ಚತುರ್ಮುಖನ ನಾಲಗೆಯ ಹಾಸಿ ತುಟಿದಿಂಬು ಮಾಡಿದಾಕೆ
ವತ್ಸಲಾಂಛನದ ಹೃದಯಕಮಲದಲಿ ಮನೆಯ ಹೂಡಿದಾಕೆ
ಹರನ ಮೈಯನರೆದುಂಬಿ ಲೀಲೆಯಲಿ ತಲೆಯನೇರಿದಾಕೆ
ಹೀಗೆ ಕುಣಿಯೆ ಆನಂದಲಹರಿ ಈ ಜೀವ ಸೇರಿದಾಕೆ || ೪ ||

ಹಾಡಿದವನ ಕಾಪಾಡಲೆಂದು ಕೈಹತ್ತು ಎತ್ತಿದಾಕೆ
ಎತ್ತ ಕಿವಿಯನಿರುವಿದರು ಅತ್ತ ಐಮೊಗದಿ ಮುತ್ತಿದಾಕೆ
ತಮವು ಹಬ್ಬಿದತ್ತತ್ತ ನಿನ್ನ ಸುಳಿ ಬೆಳಕು ಸುತ್ತಿದಾಕೆ
ಇರುಳಕೋಟಿ ಹೆಡೆ ಮೆಟ್ಟಿ ಮಣಿಗಳೊಲು ಚಿಕ್ಕೆಯೊತ್ತಿದಾಕೆ || ೫ ||

---

[1] ಶ್ರೀ. ದ. ರಾ. ಬೇಂದ್ರೆಯವರ ಅಧ್ಯಕ್ಷಭಾಷಣದ ಭಾಗಗಳು.

ಮುತ್ತು ಹವಳ ಬಂಗಾರ ನೀಲಮಣಿ ಸ್ಫಟಿಕ ಛಾಯೆಯಾಕೆ
ಕಣ್ಣನಡುವೆ ಒಳಗಣ್ಣು ತೆರೆಯುವಾ ದಿವ್ಯ ಮಾಯೆಯಾಕೆ
ಬೆಳೆವ ಚಂದ್ರಕಳೆ ಮುಕುಟದವಳೆ ತಂತನದ ಬಣ್ಣದಾಕೆ
ವರದ ಅಭಯಕರವಿರುವ ತಾಯಿ ಬಾ, ಬೇರೆ ಕರೆಯಬೇಕೆ? || ೬ ||

* * *

ಸಾಹಿತ್ಯವು ಸಂಜೀವನ ವಿದ್ಯೆ. ಆ ಸಂಜೀವಿನಿಗೆ ನಾವು ನಾವೆಲ್ಲರೂ ಶರಣಾಗತರಾಗಿದ್ದೇವೆ.

ಸಾಹಿತ್ಯದ ಸಂಜೀವನವು ಏತರಲ್ಲಿದೆ? ಮೊದಲೇ ತಿಳಿದುಕೊಳ್ಳುವ. ಪ್ರಪಂಚದಲ್ಲಿ ಸಾಮಾನ್ಯವಾಗಿ ಜನವೆಲ್ಲವೂ ಪ್ರಾಣಿಗಳಂತೆ ಜೀವಿಸುತ್ತಿದೆ. ಒಂದನ್ನೊಂದು ಕೊಂದು ಬದುಕುತ್ತಿದೆ. ಇದಕ್ಕೆ ಬದುಕಿನ ಯುದ್ಧ (struggle for existence) ಎಂದು ಹೆಸರಾದ ಹೆಸರು. ನಮ್ಮ ಸಿಟ್ಟು, ಅಳುವು, ಹೆದರಿಕೆ, ಹೇಸಿಕೆಗಳು ಹೇಳಿಕೇಳಿ ನರಕದ ದ್ವಾರಗಳು. ನಮ್ಮ ಬೆರಗು ನಗೆಗಳು ಹೆಚ್ಚಾಗಿ ಅಜ್ಞಾನದ ವಿಲಾಸಗಳಲ್ಲದೆ ಬೇರೆ ಏನು? ನಮ್ಮ ರತಿಯೂ ಉತ್ಸಾಹವೂ ಹೆಚ್ಚಾಗಿ ರತ್ಯುತ್ಸಾಹವಾಗಿಯೇ ಪರಿಣಮಿಸುವವು. ಬೇರೆ ಕಡೆಗೆ ಹೊರಳಿದರೆ ರಣಾಂಗಣಕ್ಕೆಳೆಯುತ್ತಿವೆ. ಇದೇ ಪ್ರಾಣಿಜೀವನದ ಸಾರಸರ್ವಸ್ವ. ಸಾಹಿತ್ಯವು ತನ್ನ ರಸತಂತ್ರದಿಂದ ಇದನ್ನು ಮೇಲಕ್ಕೆತ್ತಲು ಹವಣಿಸುವದು. ಒಂದನ್ನೊಂದು ತಿಂದು ಬದುಕುವದು ಬದುಕಲ್ಲ, ಸಾವು; ಒಂದನ್ನೊಂದು ತಿಳಿದು ಬದುಕುವದು ಬಾಳು; ಎಂದು ಸಾಹಿತ್ಯ ಸಾರುತ್ತದೆ. ಪ್ರಾಣಿಗಳಂತೆ ಬದುಕಬೇಡಿರಿ, ಜೀವಗಳಂತೆ ಬಾಳಿರಿ; ಪ್ರಾಣ ಹಿಂಡಿ ಜೀವ ತಿನ್ನಬೇಡಿ; ಜೀವಕ್ಕೆ ಜೀವ ಕೊಟ್ಟು ಜೀವಿಸಿರಿ;—ಇದು ಸಾಹಿತ್ಯದ ಧ್ವನಿ. ಹಾಗಾದರೆ ನಮ್ಮ ಬದುಕಿನ ಕೊರತೆಯೇನು? ನಮ್ಮ ಪ್ರಾಣಕ್ಕೆ ಸಹನೆಯಿಲ್ಲ, ನಮ್ಮ ಬುದ್ಧಿಗೆ ವಿವೇಕ ಕಡಮೆ, ನಮ್ಮ ಹೃದಯಕ್ಕೆ ರಸಿಕತೆ ಇನ್ನೂ ಬೇಕು. ಪ್ರಾಣಿಜೀವನದ ವೈಷಮ್ಯದಿಂದ ಸಹನೆ ಅಸಹನೆಯಾಗುವದು, ಇಲ್ಲವೆ ಹೆದರಿಹೇಡಿಯ ಅತಿಸಹನೆಯಾಗುವದು. ಪ್ರಾಣಿಬುದ್ಧಿ ಅವಿವೇಕಕ್ಕೆ ಎಳೆಯುವದು, ಇಲ್ಲದಿದ್ದರೆ ದೀರ್ಘಪಾಂಡಿತ್ಯದ ಅತಿವಿವೇಕದಲ್ಲಿ ಹಾಳಾಗುವದು. ಪ್ರಾಣಿಹೃದಯವು ಮಾಡಿದ್ದೆಲ್ಲ ರುಚಿಯೆಂದು ಕಾಮನ ಹಬ್ಬಕ್ಕೆಳಸುವದು, ಅದಿಲ್ಲದಿದ್ದರೆ ಅರಸಿಕನಾಗಿ ವೈರಾಗಿಯ ಬೂದಿಯಲ್ಲಡಗುವದು. ಈ ವೈಷಮ್ಯವನ್ನು ತಪ್ಪಿಸಿ ಸಮತೂಕದ ಜೀವನವು ಬರಬೇಕಾದರೆ ನಾವು ಜೀವಗಳೆಂಬ ಎಚ್ಚರದಲ್ಲಿ ಬಾಳಬೇಕು. ಭಾವಗಳಲ್ಲಿ ರಸದೃಷ್ಟಿ ಬೇಕು. ನಮ್ಮ ದುಃಖವೂ ಕಃಪದಾರ್ಥವೆನಿಸಿ ರುಚಿಯ ದ್ರವ್ಯವಾಗಬೇಕು, ಪ್ರಾಣಿಮಾತ್ರದ ಸುಖವೂ ತನ್ನ ಆನಂದದ ಲಹರಿಯೇ ಆಗಿ ಲಾಸ್ಯವಾಡಬೇಕು. ವಿಚಾರದ ತೊಡಕಿನಲ್ಲಿಯೂ ವಿವೇಕದ ಎಳೆ ತಪ್ಪಿಹೋಗಬಾರದು.

ನಮ್ಮ ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಸಂಜೀವನವನ್ನುಣ್ಣದೆ ನಾವು ಕನ್ನಡಿಗರಾಗಲಾರೆವು. ಕರ್ಣಾಟಕಸ್ಥರಾಗುವದು ಬೇರೆ, ಕನ್ನಡಿಗರಾಗುವದು ಬೇರೆ. ನಮ್ಮ ಸಾಹಿತ್ಯ ನಮ್ಮ ದಿನದ ಮಾತು, ಜನದ ಮಾತು, ಮನದ ಮಾತು ಆಗಬೇಕು. ನಮ್ಮ ಮನೆಯ ಮಾತು ಏನೇ ಇರಲಿ . . . ಅಭಿನವ ಕರ್ಣಾಟಕದ ಹೊಟ್ಟೆ ದೊಡ್ಡದು, ಹೃದಯ ಅದಕ್ಕೂ ಉನ್ನತ, ಕಣ್ಣು ಅದಕ್ಕೂ ವಿಶಾಲ! ವೈವಿಧ್ಯಾನುಕೂಲ ಐಕ್ಯದಲ್ಲಿ, ಐಕ್ಯಾನುಕೂಲ ವೈವಿಧ್ಯದಲ್ಲಿ. ಕನ್ನಡ ರಾಷ್ಟ್ರ ನವಜನ್ಮವನ್ನು ತಾಳುತ್ತಿದೆ. ನಮ್ಮ ಸಾಹಿತ್ಯದ ಪುರಾತನರು ಕಂಡ ಕಣಿಗಳನ್ನು ಅದ್ಯತನರಾದ ನಾವು ನಿಜವಾಗಿ ಕಟ್ಟಬೇಕಾಗಿದೆ. ಕನ್ನಡಿಗರೆಲ್ಲರಿಗೆ ಜಾತಿ ಕುಲ ಮನೆಮಟ್ಟಿಗೆ: ಮತ ಗಿತ ಮನದ ಮಟ್ಟಿಗೆ; ಕನ್ನಡ ಧರ್ಮ ಮಾತ್ರ ನಮ್ಮ ನೇತ್ರ ಸೂತ್ರವಾಗಿ ಉಳಿಯಬೇಕು.

ಈ ಸೂತ್ರವನ್ನು ಹಿಡಿದು ನಾವು ಮುಂದೆ ಹೊರಟರೆ ನಮಗೆ ಮೂರು ಏಕೀಕರಣಗಳು ಬೇಕು. ಕನ್ನಡದ ಏಕೀಕರಣ, ಕನ್ನಡಿಗರ ಏಕೀಕರಣ, ಕರ್ಣಾಟಕದ ಏಕೀಕರಣ. ನಮ್ಮ ಮಾತೇ ಮನಸ್ಸಿನಲ್ಲಿ ನೆಲೆಯೂರಿದೆ, ಮನಸ್ಸು ಮಾತಿನಲ್ಲಿ ನೆಲೆಯೂರಿದೆ.- 'ವಾಙ್ ಮೇ ಮನಸಿ ಪ್ರತಿಷ್ಠಿತಾ, ಮನೋ ಮೇ ವಾಚಿ ಪ್ರತಿಷ್ಠಿತಂ' — ಎನ್ನುವಂತಾಗಬೇಕಾದರೆ ಹೊಸ ಕನ್ನಡವು ಹೊಸ ಹಾದಿಯನ್ನು ಹಾಕಬೇಕು. ತುಳು, ಕೊಡಗು, ಕೊಂಕಣಿ, ತೊದ, ಕೋಲ, ಬಡಗ, ಇರುಳ, ಸೋಲಿಗರ ನುಡಿಯು ಪಸರವು ಕನ್ನಡ ಶಬ್ದಕೋಶದಲ್ಲಿ ಹೊಂದಿಕೆಯಾಗಿ ಸೇರಬೇಕು. ಈ ಕೋಶ ಸಿದ್ಧಿಯಾಗಬೇಕು; ವಿದ್ಯಾರ್ಥಿಗಳಿಗೆ ದೊರೆಯಬೇಕು. ಬೇಸಿಕ್ ಹಿಂದಿ, ಉರ್ದು, ಇಂಗ್ಲೀಷುಗಳೊಡನೆಯೂ ತನ್ನ ಸಾಮಂಜಸ್ಯವನ್ನು ಕಂಡುಕೊಳ್ಳಬೇಕು ಕನ್ನಡ. ಸಂಸ್ಕೃತವನ್ನು ಕನ್ನಡ ಮರೆಯಲಾರದು, ಬಾರದು. ಅದಕ್ಕೂ ಹೆಚ್ಚಾಗಿ ತೆಲುಗು ತಮಿಳಿನೊಡನೆ ತನ್ನ ಮೂಲಬಾಂಧವ್ಯವನ್ನು ಕಂಡುಕೊಳ್ಳುವ ದ್ರಾವಿಡ ಧಾತುಕೋಶವೊಂದು ಕನ್ನಡದಲ್ಲಿ ಪ್ರಕಟವಾಗಬೇಕು. ಕನ್ನಡದ ಉಸಿರಿನ ಮಂತ್ರ ಶಕ್ತಿ ತಲೆಯೆತ್ತಬೇಕಾದರೆ ನಮಗೆ ಇದು ತೀರ ಅಗತ್ಯ. ಆದರೆ, ಈ ಎಲ್ಲ ಮಾತಿನ ಸಂತೆಯಲ್ಲಿ ಕರ್ನಾಟಕದ ಮಟ್ಟಿಗೆ ಕನ್ನಡವೆ ಸಾರ್ವಭೌಮವೆಂಬುದನ್ನು ನಾವು ಆಚರಣೆಗೆ ತರದಿದ್ದರೆ, ಕಟ್ಟೆಯಿಲ್ಲದ ಕೆರೆಯಂತೆ, ದಂಡೆಯೊಡೆದ ನದಿಯಂತೆ ಕನ್ನಡವು ಹುಚ್ಚು ಹೊಳೆಯಾದೀತು. "ಕನ್ನಡದ ಮನೆಯಲ್ಲಿ ಕನ್ನಡಿತಿ ಯಜಮಾನಿ; ಮಿಕ್ಕ ಹೆಂಗಸರೆಲ್ಲ ಒಕ್ಕಲಷ್ಟೇ" ಎಂಬುದರ ನಿಜವನ್ನು ಅರಿತರೆ ಎಲ್ಲರಿಗೂ ಸುಖವಾದೀತು. ಯಜಮಾನಿತಿ ಮಾತ್ರ ತಾನು ಧರ್ಮಪತ್ನಿ ಎಂಬ ಜಂಭದಲ್ಲಿಯೇ ನಿದ್ದೆ ಮಾಡಿದರೆ, ಊಳಿಗಗಿತ್ತಿಯರೂ ಯಜಮಾನರನ್ನು ಲೂಟಿ ಮಾಡುತ್ತಾರೆಂಬುದನ್ನು ನಾವು

ನೋಡಿಲ್ಲವೇ ? ಕನ್ನಡಿತಿ ಯಜಮಾನಿತಿ ಹೌದು. ಯಜಮಾನನಾದ ಆತ್ಮನಿಗೆ ಪತ್ನಿಯಾಗಿ ಶ್ರದ್ಧೆಯಿರುವಂತೆ, ಕನ್ನಡಿಗರ ಲಲಿತಾಂಗವನ್ನು ಕನ್ನಡವು ಸ್ವಯಂಪ್ರಭೆಯಾಗಿ ಸುತ್ತಿಮುತ್ತಿಕೊಳ್ಳಬೇಕು; ಆಗ ಜನ್ಮಜನ್ಮಾಂತರದಲ್ಲಿ ಆ ಸ್ನೇಹವು ವಿವರ್ಧಮಾನವಾಗುವದು. ಆಗ ಕನ್ನಡವು ಜನದ ವ್ಯವಹಾರವಾಣಿಯಾಗಿ, ಜ್ಞಾನಿಗಳ ಶಾಸ್ತ್ರವಾಣಿಯಾಗಿ, ಕರ್ಮವೀರರ ಧೀರವಾಣಿಯಾಗಿ, ಜೀವ ಜೀವಗಳ ರಸವಾಣಿಯಾಗುವದು; ಕವಿಗಳ ಮಂತ್ರವಾಣಿಯಾಗುವದು. ಅಂಥ ವಾಣಿ "ಅಹಂ ರಾಷ್ಟ್ರೀ ಸಂಗಮನೀ ವಸೂನಾಂ, ಚಿಕಿತುಷೀ ಪ್ರಥಮಾ ಯಜ್ಞಿಯಾನಾಂ. ಯಂ ಕಾಮಯೇ ತಂ ತಮುಗ್ರಂ ಕೃಣೋಮಿ, ತಂ ಬ್ರಹ್ಮಾಣಂ, ತಂ ಋಷಿಂ, ತಂ ಸುಮೇಧಾಂ, ಅಹಂ ರುದ್ರಾಯ ಧನುರಾತನೋಮಿ, ಬ್ರಹ್ಮದ್ವಿಷೇಶರವೇ ಹಂತವಾ ಉ ಅಹಂ ಜನಾಯ ಸಮದಂ ಕೃಣೋಮಿ, ಅಹಂ ದ್ಯಾವಾ ಪೃಥಿವೀ ಆವಿವೇಶ" ಎಂದು ಗುಡುಗು ಹಾಕುವದು. ಮೈದುಂಬುವ ವಾಣಿಯಾಗಬೇಕು ಕನ್ನಡ.

ಕನ್ನಡವು ಪ್ರಾಣಸಂಹಾರಕವಲ್ಲ, ಜೀವದಾಯಕ ಎಂಬ ಸೊಲ್ಲು ಒಡಸುಡಿದು ಪಡಿಸುಡಿಯಲು ಪ್ರಾರಂಭಿಸಿದಾಗ ಕನ್ನಡಿಗರ ಏಕೀಕರಣಕ್ಕೆ ಆರಂಭವಾಗುವದು. ಜಾತಿಭೇದ, ಮತಭೇದ, ಮಾತಿನಭೇದ, ಕಾಯಕದ ಭೇದ, ಸ್ಥಿತಿ ಪರಿಸ್ಥಿತಿಗಳ ಭೇದದಿಂದ ಕನ್ನಡಿಗರು ಗಾಳಿಯ ಗಂಟಾಗಿದ್ದಾರೆ. ಇದರ ಒಪ್ಪಂದವನ್ನು ಹುಡುಕಬೇಕು, ಆಚರಿಸಬೇಕು. ಇದನ್ನೇ ಸಾಹಿತ್ಯವು ಕಾಣಬೇಕು, ತೋರಿಸಬೇಕು. ಇರುವದರ ಹೊಟ್ಟೆಯಲ್ಲಿ ಆಗುವದರ ಧ್ವನಿ ಹೇಗೆ ಮೊಳುಗುತ್ತಿದೆ ಎಂಬುದನ್ನು ಸಾಹಿತ್ಯ ರೂಪು ಕೊಟ್ಟು ಪ್ರಕಾಶಿಸಬೇಕು. ನಮ್ಮ ಜನದ ದುಡ್ಡು ದುಡಿತ ದೊಡ್ಡಸ್ತಿಕೆ ಇವು ಮೂರೂ ಸಾಹಿತ್ಯ, ವಾಙ್ಮಯ, ಕಲೆ, ಕೌಶಲ್ಯ ವಿದ್ಯೆಗಳಿಗೆ ಬೆಂಬಲ ಮುಂಬಲವಾಗಬೇಕು. ಸಾಹಿತ್ಯವು ಸಾಮೂಹಿಕ ಯೋಗ; ಮೂಗು ಹಿಡಿದು ಕೊಳ್ಳುವ, ಹಿಡಿಯುವ ವ್ಯಕ್ತಿಗಳ ಪ್ರಾಣಾಯಾಮವಲ್ಲ. ನಮ್ಮ ದುಡ್ಡು ಬಹಿರ್ಮುಖವಾಗಿ ಹರಿಚೆಲ್ಲುತ್ತಿದೆ. ನಮ್ಮ ವ್ಯಾಪಾರ ಯಾರೋ ಹೊಡೆದುಕೊಂಡು ಹೋಗುತ್ತಿದ್ದಾರೆ. ನಮ್ಮ ದುಡಿತಕ್ಕೆ ಕೌಶಲ್ಯದ ಬೆಲೆಯಿಲ್ಲ. ಶಿಸ್ತಿನ ಸಂಘಟನೆಯಿಲ್ಲದ್ದರಿಂದ ಕೂಲಿಕುಂಬಳಿಗೆ ಇಳಿದಿದೆ. ಕಲಿತವ ಕಾರಕೂನ, ಕಲಿಯದವ ಕೂಲಿ ! ಈ ಕಂಸಿನೊಳಗೆ ನಮ್ಮ ದುಡಿತವೆಲ್ಲ ಮುಗ್ಗಿಹೋಗುತ್ತಿದೆ. ನಮ್ಮ ದೊಡ್ಡಸ್ತಿಕೆ ಇನ್ನೂ ಒಮ್ಮುಖವಾಗಿಲ್ಲ, ದಶಮುಖವಾಗಿದೆ. ಜನರಿಗೆ ನಾವು ಒಗ್ಗಟ್ಟು ಉಪದೇಶಿಸುತ್ತೇವೆ; ನಮ್ಮ ಮಹಾಜನರು ಮಾತ್ರ ಪಂಗಡಮಾಡಿ ಬಾಳುತ್ತಾರೆ. ವ್ಯಕ್ತಿತ್ವ ಮುರಿಯುವ ಐಕ್ಯ ಬಕಾಸುರನ ಬಾರಿಯೆಂಬುದನ್ನು ನಾನು ಒಪ್ಪುತ್ತೇನೆ. ಆದರೆ, ಐಕ್ಯವರಿಯದ ವ್ಯಕ್ತಿತ್ವ ಸಂತೆಯ ನೆರವಿಯೆಂಬುದನ್ನು ನಾಡಿನ ಮಹಾ

ಜನರು ಮರೆಯಬಾರದು. ನಮ್ಮ ದುಃಖಾಂತ ಸುಖಾಂತ ನಾಟಕಗಳೆಲ್ಲ ಮಹಾ ಜನರ ಮಲ್ಲಯುದ್ಧಗಳಲ್ಲಿವೆ. ಮಹಾಜನರ ಗತಿಯೆ ಹೀಗಾದರೆ ಇತರೇ ಜನರ ಕಥೆ ಯೇನು? ಈ ಜನಜೀವನವೆ ಸಾಹಿತ್ಯದ ವಿಷಯ. ಸಾಹಿತ್ಯವು ಜನಜೀವನದ ಪ್ರತಿ ಬಿಂಬವಷ್ಟೇ ಆಗಲಾರದು; ಮಾಡಿದ್ದನ್ನೇ ಹೊಗಳಲಾರದು; ಹೊಸದೆಂದೇ ತೆಗಳ ಲಾರದು. ಸಾಹಿತ್ಯವು ಆತ್ಮಬಿಂಬವನ್ನು ತೆರೆದು ತೋರಿಸುವದು. ಇದನ್ನೇ ತೋರಿ ಸಲು ವೇದ ದಣಿದವು. ರಾಮಾಯಣ ಭಾರತ ಭಾಗವತಗಳು, ಜಿನಾಗಮ ಶಿವಾಗ ಮಗಳು ಇದನ್ನೇ ಮಾಡುತ್ತಿವೆ. ನಮ್ಮ ಕವಿಗಳು ಅದನ್ನೇ ಕನ್ನಡದಲ್ಲಿ ಮಾಡಿದರು; ಈಗ ಮಾಡುತ್ತಲಿದ್ದಾರೆ. ಸಾಹಿತ್ಯವು ಸಮಾಜನಿರಪೇಕ್ಷವಲ್ಲ. ವಾಲ್ಮೀಕಿ, ವ್ಯಾಸ, ಕಾಲಿದಾಸ, ಶೇಕ್ಸಪಿಯರ್, ಹೋಮರ್, ಗಯಟೆ, ಪಂಪ, ಹರಿಹರ, ಕುಮಾರ ವ್ಯಾಸ, ರತ್ನಾಕರ, ಪುರಂದರದಾಸರು ಹಾಳು ಸಮಾಜದಲ್ಲಿ ಹುಟ್ಟಲಾರರು. ಸಾಮಾ ಜಿಕ ಮನಃಸ್ಥಿತಿ ಪರಿಸ್ಥಿತಿಗಳಲ್ಲಿ ಜೀವಂತ ಬದಲಾವಣೆ ನಡೆಯುವಾಗಲೇ ಸಾಹಿತ್ಯವು ಜೀವಂತವಾಗುವದು. ಆದರೆ ಸಾಹಿತ್ಯ ಯಾವ ಪಕ್ಷಕ್ಕೂ ಸೇರಲಾರದು. ಸಾಹಿತ್ಯಕ್ಕೆ ಪಕ್ಷಪಾತವು ಪಕ್ಷಪಾತವಿದ್ದಂತೆ. Executive ದಿಂದ Judiciary ಬೇರೆ ಇರುವಂತೆ ಸಾಹಿತ್ಯವು ಉಪಜೀವನದ ಎಲ್ಲ ಪಕ್ಷಗಳಿಂದ ತಟಸ್ಥವಾಗಿ ರಸಸಾಕ್ಷಿಯಾಗಿ ಕಾರ್ಯ ಮಾಡಬೇಕು. ಅದು ಯಾರ ಆಳೂ ಆಗಲಾರದು; ಅದನ್ನು ಮಾಡ ಬಾರದು. ಹಾಗೆ ಮಾಡುವದು ಜನಜೀವನಕ್ಕೆ ಹಿತವಲ್ಲ. ಮತಕ್ಕೆ ಮಣಿಯಬಾರದು; ರಾಜಕಾರಣಕ್ಕೆ ಹಣಿಯಬಾರದು; ಹೊಸ ನಾಗರಿಕತೆ, ಜಡವಾದ ಮೊದಲಾದವು ಗಳಿಗೆ ದಣಿಯಬಾರದು. ಸಾಹಿತ್ಯವು ಸಮ್ಯಕ್ ಜೀವನಕ್ಕೆ ಸಂಬಂಧಿಸಿದೆ. ಪಕ್ಷೋಪ ಪಕ್ಷಗಳ ವಿಕೃತಿಪ್ರಕೃತಿಗಳಿಗೆ ಕನ್ನಡಿ ಹಿಡಿಯುವದು ಅದರ ಕೆಲಸವೇನೊ ಹೌದು. ಮುಖಕ್ಕೆ ಕನ್ನಡಿ ಹಿಡಿದು, ಕ್ಷೌರಮಾಡಿದರೆ ಆಯುಷ್ಕರ್ಮ ತೀರಲಿಲ್ಲ. ಕನ್ನಡಿಯ ಇದಿರು ಅಲಂಕರಣವೂ ನಡೆಯಬೇಕು. ಜೀವನದ ಪೂರ್ತತೆಯ ಹವಣಿಕೆ ಹೋರಾ ಟವು ಜೀವನದಲ್ಲಿ ಹೇಗೆ ನಡೆದಿದೆ, ಇದನ್ನು ತೆರೆದು ತೋರಿಸಬೇಕು ಸಾಹಿತ್ಯ. ಜನಜನಗಳ ಒಂದಾವಣೆಯಲ್ಲಿ ಇದು ಬೇಕಾಗಿದೆ. ಕನ್ನಡಿಗರು ಕನ್ನಡ ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಲದಿಂದ ಕನ್ನಡ ಮಾತಿನ ಮಂತ್ರದಿಂದ ವಚನಗಳಿಂದ ಸಹಸ್ರಶೀರ್ಷ ಸಹಸ್ರಾಕ್ಷನಾದ ಏಕಪುರುಷ ಅನೇಕ ಪುರುಷ ಅನಂತಪುರುಷನು ಆಗಬೇಕಾದರೆ ಕನ್ನಡದ ವಿರಾಟ್-ಆತ್ಮನ ದರ್ಶನ, ವರ್ಣನ ಬೇಕು ಸಾಹಿತ್ಯದಲ್ಲಿ. ಅದನ್ನು ತಿಳಿದುಕೊಳ್ಳುವ ಬುದ್ಧಿ ಬೇಕು ಜನರಲ್ಲಿ. ಅಂತಹ ಶಿಕ್ಷಣ ಬೇಕು. ಹೀಗೆ ಅನೇಕ ಮುಖವಾದ ವಾಙ್ಮಯ ಬೇಕು. ಸಾಹಿತ್ಯದ ರಣರಂಗವು ಇಲ್ಲಿದೆ. ಇಲ್ಲಿಯೇ ಸಾಹಿತ್ಯವು ಕಾದುತ್ತದೆ, ಅಮರವಾಗುತ್ತದೆ. ತಿಂದು ಹಾಳಾಗುವ ಸಾಹಿತ್ಯವಿದೆ.

ತಿಂದರೂ ತೀರದ ಸಾಹಿತ್ಯವಿದೆ. ಎಲ್ಲ ಸಾಹಿತ್ಯವೂ ಬೇಕು. ಇಂಥ ಸಾಹಿತ್ಯ ಬೇಕು ಅಂಥ ಸಾಹಿತ್ಯಬೇಡ ಎಂದು ಹೇಳುವದು ವಿಮರ್ಶೆಯ ವಿವೇಕವಲ್ಲದೆ ಕೃತಿಗೆ ಆಜ್ಞೆಯಲ್ಲ. ಪ್ರತಿಯೊಬ್ಬರೂ ಅವರವರ ಸ್ವಭಾವದಂತೆ ರಚಿಸುತ್ತಾರೆ. . . .

ಇಂಥ ಜನ ಅವಶ್ಯವಾಗಿ ಒಂದು ನಾಡಿನವರಾಗಿರುವದು ಒಳಿತು. ಇಲ್ಲಿಯೇ ದಿನದಿನದ ರಾಜಕಾರಣವೆನಿಸಿಕೊಳ್ಳುವ ಹೊಲ ಮನೆಯ ನ್ಯಾಯ ಅಡ್ಡಬರುವದು. ಗಡಿನಾಡಿನ ಪ್ರಶ್ನೆಯಿದು, ಏಕೀಕರಣದ ಪ್ರಶ್ನೆಯಿದು. ಅನೇಕೀಕರಣದ ಸಂಧಿಯೂ ಇದೇ ಆಗಿದೆ. ಸಾಹಿತ್ಯವು ಇಲ್ಲಿಯೂ ಮೈತುಂಬ ಎಚ್ಚರದಿಂದ ಸಾಗಬೇಕಾಗಿದೆ. ಕರ್ನಾಟಕ ಏಕೀಕರಣವು ಸಾಹಿತ್ಯದ ಕಾರ್ಯವಲ್ಲ; ಅದು ಅದರ ಕಾರಣ, ಪರಿಣಾಮ, ಸಿದ್ಧಿ. ಒಂದೇ ಆತ್ಮವಾದ ಜೀವಗಳ, ಒಂದೇ ಮನಸ್ಸಾದ ಮಾತಿನ, ಒಂದೇ ಜೀವನವೆಂಬುವ ಜನಗಳ ಜೀವಕ್ಕೊಂದು ದೇಹವೆಂಬಂತೆ ಜನಕ್ಕೆ ಒಂದು ದೇಶ ಸಿದ್ಧಿ ಆಗದಿದ್ದರೆ, ಅದೇನು ಸಾಧನೆ? ಕನ್ನಡ ದೇಶವು ಕನ್ನಡದ ಶಕ್ತಿಪೀಠ; ಕನ್ನಡ ನಟರಾಜನ ನಾಟ್ಯರಂಗ; ಕನ್ನಡ ಕೃಷ್ಣನ ರಾಸಲೀಲೆಯ ವೃಂದಾವನ; ಕನ್ನಡ ಜಿನನ ಸಮವಸರಣ ಭೂಮಿ. ಇಲ್ಲಿಯೇ ಭಿಕ್ಷಾಟನಲೀಲೆಯೂ ನಡೆದೀತು, ಕುರು ಕ್ಷೇತ್ರವೂ ಆದೀತು. ಗೊಮ್ಮಟನ ಮಹಾ ತ್ಯಾಗ, ಭರತನ ಮಹಾ ಭೋಗ ಇಲ್ಲಿಯೇ ಸಾಗಬೇಕಾದೀತು. ಕನ್ನಡಿಗರ ಕನ್ನಡನಾಡು ಇನ್ನೂ ಪಂಚತ್ವದಲ್ಲಿಯೆ ಇದೆ. ಪಂಚಪ್ರಾಣ ಒಂದಾಗಿಲ್ಲ. ಪಂಚರೊಳಗಿನ ಪರಮೇಶ್ವರ ಆವಿರ್ಭವಿಸಿಲ್ಲ. ನಮ್ಮ ನಾಡು ಇನ್ನೂ ನಮ್ಮದಾಗಿಲ್ಲ. ಒತ್ತೆಯ ಮನೆಯಲ್ಲಿ ಒಕ್ಕಲಂತೆ ನಾವು ಬದುಕು ಮಾಡುತ್ತಿದ್ದೇವೆ. . . . ಕನ್ನಡದ ಕನ್ನಡಿ ಒಡೆದಿದೆ. ಒಂದಾಗುವ ಬಗೆಯಾವುದು? ಸುತ್ತಲಿನವರಿಂದ ಬೇರೆ ಒಂದು ದೇಶವಾಗಬೇಕು; ನಮ್ಮೊಳಗೆ ನಾವೇ ಒಂದಾಗ ಬೇಕು; ಎಲ್ಲರೊಡನೆ ಕೂಡಿ ಕಾರ್ಯ ಮಾಡಬೇಕು. ಇವು ಮೂರೂ ಸಾಧಿಸ ಬೇಕಾಗಿದೆ. ಕೂಡಿಕೂಡಿಯೇ ಸಾಧಿಸಬೇಕು. ಒಂದಾದಮೇಲೆ ಒಂದಲ್ಲ. ಒಂದಾದರೆ ಆಗಲಿ, ಒಂದು ಬಿಟ್ಟರೆ ಬಿಡಲಿ ಎಂದಲ್ಲ. ಏಕಕಾಲದ ಯುಗಪತ್-ಸಿದ್ಧಿಯ ಇಕ್ಕಟ್ಟಿನ ಮುಕ್ಕಟ್ಟಿನ ಹಾದಿ ನಮ್ಮದಾಗಿದೆ. ಇದನ್ನು ಜೋಕೆಯಿಂದಲೂ ತೂಕದಿಂದಲೂ ಸಾಧಿಸಬೇಕು. ಇಂದು ನಮ್ಮದೊಂದೇ ಪ್ರಶ್ನೆಯಲ್ಲ, ಮಹಾ ಮಹಾ ಸಾಮ್ರಾಜ್ಯ ಗಳಿಗೂ ಇದೇ ಪ್ರಶ್ನೆ ಬಂದಿದೆ. ಇದನ್ನು ಸಾಧಿಸಬೇಕಾದರೆ ಕನ್ನಡಿಗರು ಹೊಸ ವ್ಯಕ್ತಿಗಳಾಗಬೇಕು. ವಿಶ್ವಾತ್ಮಭಾವ, ವಸುಧೈವ ಕುಟುಂಬಕ ಭಾವ, ಆತ್ಮೈಕ್ಯದ ಬಂಧುಭಾವ ಒಡಮೂಡಬೇಕು ನಮ್ಮಲ್ಲಿ. ಇದೇನು ಸಾಹಿತ್ಯದ ಉಪನ್ಯಾಸವೋ, ಧರ್ಮಪ್ರಚಾರವೋ ಎಂದು ಶಂಕೆಗೊಳ್ಳಬೇಡಿ. ಸಾಹಿತ್ಯದ ಜೀವಾಳವು ದಿವ್ಯ ಮಾನವಧರ್ಮದ ಸಾರವೇ ಆಗಿದೆ.

ಸಾಹಿತ್ಯವು ದೇವತೆಗಳ ಸ್ವರ್ಗವನ್ನು ಮಾನವತೆಯ ಬಯಲಲ್ಲಿ ಕಟ್ಟಿ ಹೊರಟಿದೆ. ರೂಢಿಯಾದ ಸ್ವಾರ್ಣಧರ್ಮವು ಮಾನವನನ್ನು ನರಕಕ್ಕೆ ಎಳೆಯುತ್ತಿದೆ. ನಮಗೆ ನರಕ ಬೇಕೋ, ಸ್ವರ್ಗ ಬೇಕೋ ನಿಶ್ಚಯಿಸಬೇಕು. 'ಸ್ವರ್ಗ ನರಕ ಬೇರಿಲ್ಲ ಕಾಣಿರೊ' ಎಂಬ ಮಾತು ಸುಳ್ಳಲ್ಲ. ಕೆಳಗೆ ಬಿದ್ದರೆ ನರಕ, ಮೇಲೆದ್ದರೆ ಸ್ವರ್ಗ. ನರಕ ದ್ವಾರಗಳನ್ನು ನಾವೆಲ್ಲರೂ ಬಲ್ಲೆವು. ಕಟ್ಟುನಿಟ್ಟಿಲ್ಲದ ದುರ್ಭೋಗೇಚ್ಛೆ, ಎಲ್ಲವನ್ನೂ ನಾನೇ ಇಟ್ಟುಕೊಳ್ಳತಕ್ಕವನೆಂಬ ಜೀನಹಂಕತನ, ತನ್ನ ಸುಖಕ್ಕಾಗಿ ಇನ್ನೊಬ್ಬರನ್ನು ಪೀಡಿಸುವೆನೆಂಬ ದೌರಾತ್ಮ್ಯ, ಈ ತ್ರಿಪುರಾಸುರರ ಕೈಯಲ್ಲಿ ನಾವೆಲ್ಲರೂ ಬಳಲುತ್ತಿದ್ದೇವೆ. ಈ ದುರ್ಗುಣಗಳಿಗೆ ನಮ್ಮ ಪ್ರಾಣಿಜೀವನವು ನೆಲೆಯಾಗಿರುವವರೆಗೂ ಸ್ವರ್ಗ ನಮ್ಮ ಅಂಗಳದಲ್ಲಿದ್ದರೂ ನರಕ ನಮ್ಮ ನಡುಮನೆ ಬಿಟ್ಟು ಹೊರಗಿಲ್ಲ. ನಮ್ಮಲ್ಲಿರುವ ಸ್ವರ್ಗದ ರುಚಿಯನ್ನು ಸಾಹಿತ್ಯದ ನವರಸವು, ನವೋ ನವರಸವು, ಅಭ್ಯಾಸಮಾಡಿಸುವದು; ಆ ಪೌರುಷವನ್ನು ನಮ್ಮಲ್ಲಿ ನಿರಾಯಾಸವಾಗಿ ತುಂಬುವದು. ಪಕ್ಷಪಾತಿ ಸಾಹಿತ್ಯಕ್ಕೆ ಈ ಗುಣ ಬರಲಾರದು. ಅನಂತವ್ಯಕ್ತಿಗಳ ಜೀವನದ ರಮ್ಯ ಭಯಾನಕವಾದ ರಸಸೌಂದರ್ಯವನ್ನು ತೆರೆದು ತೋರಿಸುವ ಸಾಹಿತ್ಯವು ಪುಣ್ಯವಂತರ ಪತನದ್ವಾರಗಳನ್ನೂ ತೋರಿಸೀತು; ಪಾಪಿಗಳ ಉದ್ಧಾರದ ಸೋಪಾನವನ್ನೂ ರಚಿಸೀತು. ದುರ್ಬಲರ ಅಜೇಯ ಬಲವನ್ನೂ ಬಲದರ್ಪಿತರ ನಿರಾಲಂಬವಾದ ಕಾರ್ಪಣ್ಯವನ್ನೂ ಕಾಣುವ ಕಣ್ಣು ಕೊಟ್ಟೀತು ಸಾಹಿತ್ಯ. . . .

ಸಾಹಿತ್ಯವು ಸುಳ್ಳಿನ ಸಂತೆಯೆಂದು ಪದಾರ್ಥವಿಜ್ಞಾನಿಗಳು, ಭ್ರಮೆಯ ಕತೆಯೆಂದು ತತ್ವಜ್ಞರು, ಮೋಹದ ಮಾಯಾಜಾಲವೆಂದು ಮತವಾದಿಗಳು, ವಚನಶೂರರ ಹಾಳುಹರಟೆಯೆಂದು ರಾಜಕೀಯರು, ಸಲ್ಲದ ಸಲ್ಲಾಪವೆಂದು ಕೌಟುಂಬಿಕ ಮಡಿವಂತರು, ತಿಳಿಯದ ಕಗ್ಗವೆಂದು ಸಾಮಾನ್ಯ ಜನಪ್ರಮುಖರು ಹೇಳಿಕೊಂಡರೂ ಇಂದಾಗುತ್ತಿರುವ ಸಾಹಿತ್ಯ ವಾಙ್ಮಯ ನಿರ್ಮಿತಿಯು ಕಡೆಗೆ ಈ ಜನರ ಸರಿಯಾದ ಲಕ್ಷ್ಯವಿಲ್ಲವೆಂದೇ ಹೇಳಬೇಕು. ಹೋದ ಎರಡು ವರ್ಷಗಳಲ್ಲಿ ಸುಮಾರು ನಾನೂರು ಐನೂರು ಸಣ್ಣದೊಡ್ಡ ಗ್ರಂಥಗಳು ಹೊರಬಿದ್ದಿರಬೇಕು. ಇದೇನು ಮಹಾ ಸಂಖ್ಯೆಯಲ್ಲ; ಇದು ನಮ್ಮ ಲೇಖಕರಿಗೂ ಭೂಷಣವಲ್ಲ, ವಾಚಕರಿಗೂ ಅಲ್ಲ. . . .

ತರುಣರ ದಂಡೇನೋ ಬರುತ್ತಲಿದೆ. ಅದಕ್ಕೆ ಕನ್ನಡ ಜನತೆ ಸರಿಯಾಗಿ ಇಂಬುಗೊಟ್ಟರೆ ಅದು ತನ್ನ ಭವಿತವ್ಯದ ಬಗ್ಗೆ ಹೆದರಬೇಕಾಗಿಲ್ಲ. ಹೊಸ ಜನ ಬರುತ್ತಿಲ್ಲ ಎಂದು ಆಗೀಗ ಜನ ನಿಟ್ಟುಸಿರು ಬಿಟ್ಟುದನ್ನು ನಾನು ಕೇಳಿದ್ದೇನೆ. ಅದಕ್ಕೆ ಅವಕಾಶವಿಲ್ಲ ಎಂದು ನಾನು ಹೇಳಬಲ್ಲೆ. ನಾಡಿನ ಆರ್ಥಿಕ ಜೀವನವು ಹದವಾದರೆ, ನಮ್ಮ ಜನ ಯಾವ ಜನಕ್ಕೂ ಹಿಂದುಳಿಯದಂತೆ ಮುಂದಾಗುವುದೆಂದು ನಾನು ನಂಬಿದ್ದೇನೆ. ಈ ಹದಮಾಡುವ ಕೆಲಸದಲ್ಲಿಯೂ ಅವರ ಕೈ ಹಿಂಜರಿಯಲಾರದು. . . .

ಇದೇ ಕಾಲಕ್ಕೆ ನಾವು ನೆರೆಹೊರೆಯ, ಸುತ್ತುಮುತ್ತಲಿನ ದೇಶಬಾಂಧವರೊಡನೆ ಒಂದಾಗಬೇಕು. ಶ್ರೀ ಶೈಲ, ಪಂಢರಪುರ, ಗೋಕರ್ಣ, ತಲಕಾವೇರಿ, ಉಡುಪಿ, ಗಿರಿಗಳು ನಮಗೆ ನಮ್ಮ ಬಾಂಧವರೊಡನೆ ಒಂದಾಗುವದನ್ನು ಅಭ್ಯಾಸಮಾಡಿಸುವ ಪುಣ್ಯಕ್ಷೇತ್ರಗಳಾಗಬೇಕು. ಪರಾಕ್ರಮಣದ ಯುಗ ಆಗಿಹೋಯಿತು. ಆಕ್ರಮಣ ಮಾಡಬಾರದು, ಮಾಡಿಸಕೊಡಬಾರದು. ಇದೇ ನಮ್ಮ ಬಿರುದಾಗಬೇಕು. ಯಾರ ನಾಶವೂ ಬೇಡ. ಜೀವದ ನಾಶವೇ ಸಾಹಿತ್ಯಕ್ಕೆ ಒಪ್ಪಿಗೆಯಿಲ್ಲ. ದೇಶನಾಶ ಹೇಗೆ ಒಪ್ಪಿಗೆಯಾದೀತು? ನೆರೆಹೊರೆಯವರೊಡನೆ ಸಾಮರಸ್ಯವಿಲ್ಲದಿದ್ದರೆ, ಸುಖ ನಮಗೆಲ್ಲಿ; ಅವರಿಗೆಲ್ಲಿ? ತಾನು ಮುಳುಗಿದರೆ ಜಗ ಮುಳುಗಿತು ಎಂದು ಸಾಹಿತ್ಯ ತಿಳಿದರೂ, ಜೀವೋ ಜೀವಸ್ಯ ಜೀವನಂ ಎಂಬ ಪ್ರಾಣಿಶಾಸ್ತ್ರದ ಗಾದೆ ಮಾತು ಅದಕ್ಕೆ ಒಪ್ಪಿಗೆ ಯಿಲ್ಲ. ಜೀವೋ ಜೀವಸ್ಯ ಪೂರಕಃ ಎಂದು ಅದರ ಸುಭಾಷಿತ. 'ಸಹನಾವವತು, ಸಹನೌ ಭುನಕ್ತು, ಸಹವೀರ್ಯಂ ಕರವಾವಹೈ, ತೇಜಸ್ವಿನಾವಧೀತಮಸ್ತು, ಮಾ ವಿದ್ವಿ ಷಾವಹೈ' ಎಂಬುದು ಅದರ ಮಂತ್ರ. ಸಹರಕ್ಷಣ, ಸಹಭೋಗ, ಸಹಶೌರ್ಯ, ಸಹ ಕಾರ್ಯ, ಸಹಜ್ಞಾನ ಬೇಕು. ದ್ವೇಷದ ಲವಲೇಶ ಬೇಡ ಎಂಬುದೇ ಅದರ ಪ್ರಾರ್ಥನೆ. ಈ ಸಹೇಚ್ಛೆಯೇ ಸಾಹಿತ್ಯದ ಅಂತರಾಳದಲ್ಲಿ ಪರಾವಾಣಿಯಾಗಿ ಪ್ರೇರಿಸುತ್ತಿದೆ. ಎಲ್ಲ ಸಾಹಿತ್ಯವೂ ಇದನ್ನೇ ತನ್ನ ವೈಖರಿಯಲ್ಲಿ ತೊದಲು ನುಡಿಯುತ್ತಿದೆ. ನಮ್ಮ ಸಾಹಿತ್ಯಕ್ಕೆ ಇನ್ನೂ ಆಮಂತ್ರ ಸಾಮರ್ಥ್ಯ ಬಂದಿಲ್ಲ. ಅಥವಾ ಬಂದ ಸಾಮರ್ಥ್ಯ ತಿಳಿದಿಲ್ಲ. ಅಂತೆಯೇ 'ಮಾತೆ ಜ್ಯೋತಿರ್ಲಿಂಗ' ಎಂದು ಅಲ್ಲಮಪ್ರಭು ಹೇಳಿದರೆ, ಅದೊಂದು ಅಲಂಕಾರ ಎಂದು ನಮಗೆ ಭಾಸವಾಗುತ್ತದೆ. ನಮ್ಮ ಸಾಹಿತ್ಯವು ಸಹಜೀವನದ ಮಂತ್ರವಾಗಲಿ, ನಮ್ಮ ಏಕೀಕರಣವು ಅದರ ತಂತ್ರವಾಗಲಿ, ನಮ್ಮ ಜನ ಅದರ ಯಂತ್ರವಾಗಲಿ. ಮೈಸೂರು ನಮಗೆ ಈ ಸಹಜೀವನಕ್ಕೆ ಅಧ್ವರ್ಯು ವಾಗಲಿ, ವ್ಯಕ್ತಿತ್ವ ಕಲಿಸಲಿ, ಸಂಯುಕ್ತತ್ವ ಕಲಿಸಲಿ, ಸಮಗ್ರತ್ವ ಕಲಿಸಲಿ.

ಇದು ತಾನಾಗಿಯೇ ಆಗುವ ಮಾತಲ್ಲ. ನಮ್ಮ ವಿಶ್ವವಿದ್ಯಾಲಯ ಇದರ ಆಚಾರ ಪೀಠವಾಗಲಿ; ನಮ್ಮ ಪರಿಷತ್ತು ಅದರ ಪ್ರಚಾರ ಪೀಠವಾಗಲಿ. ನಾಡಿನ ತರುಣರು ವಿಶ್ವವಿದ್ಯಾಲಯದ ಅಂಗಗಳಾಗುವಂತೆ, ಹಿರಿಯರು ಪರಿಷತ್ತಿನ ಸದಸ್ಯ ರಾಗಲಿ. ಏನಿಲ್ಲೆಂದರೂ ಪರಿಷತ್ತಿಗೆ ಒಂದು ಲಕ್ಷ ಜನ ಸದಸ್ಯರು ಬೇಕು. ಕಾರ್ಯ ವಾಗುವದಿದ್ದರೆ ಜನರ ನೆರವು ಬೇಕು. ಜನರ ಕೆಲಸ ಜನದಿಂದಲೇ ಆಗಬೇಕು. ಪರಿಷತ್ತಿನಲ್ಲಿ ಎಲ್ಲರೂ ಸೇರ್ಪಡೆಯಾಗಬೇಕು. ದೂರದ ಶರಸಂಧಾನವು ಕರ್ಮ ಕೌಶಲ್ಯವಾಗಲಾರದು. ಪರಿಷತ್ತು ಕನ್ನಡದ ಹೃದಯ. ಅದು ಬರಿಯ ಯಂತ್ರವಾಗ ಬಾರದು; ಒಂದು ಸಂಸ್ಥೆಯೆನಿಸಿಕೊಳ್ಳಬಾರದು. ಎಂಟು ದಿಕ್ಕಿನ ಕನ್ನಡಿಗರಿಂದ

ಕೂಡಿ ಅದು ಎಂಟು ಭುಜ, ಎಂಟೆದೆ ಪಡೆಯಬೇಕು. ಈ ಎಂಟರ ಗಂಟಿನಲ್ಲಿ ಹೃದಯವೂ ಎಂಟೆಂಟಾಗಬಾರದು. ಹೃದಯವು ಸಾಹಿತ್ಯದ ಗರ್ಭಗುಡಿ. ಸಾಹಿತ್ಯವು ಜನಾಂಗಹೃದಯದ ಮಹಾದ್ವಾರ. ವಿಶ್ವಕ್ಕೆ ಪೂಜೆಯನ್ನು ಇಲ್ಲಿ ಸಲ್ಲಿಸಬೇಕಾಗಿದೆ ನಾವೆಲ್ಲರೂ. ಈ ವಿದ್ಯೆಯನ್ನು ಕಲಿಯಲು ನಮಗೆ ಕನ್ನಡ ವಿಶ್ವವಿದ್ಯಾಲಯ ಬೇಕು. . . .

ನಾಡಗಲವಾಗಿ ಈ ಕಾರ್ಯ ನಡೆದರೆ ಮಾತ್ರ ಆಗಬೇಕಾದ ಎಚ್ಚರ ಹುಟ್ಟೀತು. ಸಾಹಿತ್ಯ ಸಾರ್ಥಕತೆಯನ್ನು ಪಡೆದೀತು. ಸಾಹಿತ್ಯದ ಕುರುಕ್ಷೇತ್ರವು ಶಾಲೆಯಷ್ಟೇ ಅಲ್ಲ, ಮನೆಯಲ್ಲಿ ಸೇರಿ, ಮಠದಲ್ಲಿ ನುಗ್ಗಿ, ಸಮಾಜವನ್ನು ಕಟ್ಟಿ, ಸರಕಾರದಲ್ಲಿ ಪ್ರತಿಷ್ಠೆ ಹೊಂದಬೇಕು. ಯಾಕೆಂದರೆ ಜೀವನದ ಒಂದು ಸಿದ್ಧಿ ಸಾಹಿತ್ಯದಲ್ಲಿದ್ದಂತೆ ಸಾಹಿತ್ಯದ ಒಂದು ಸಿದ್ಧಿ ಜೀವನದಲ್ಲಿದೆ. ಎಲ್ಲೆಲ್ಲಿಯೂ ಹಾಗೆ ನೋಡಿದರೆ ಧರ್ಮ ಯುದ್ಧ, ಹೀಗೆ ನೋಡಿದರೆ ರಾಸಲೀಲೆ ನಡೆಯಬೇಕು. ರುದ್ರನ ತಾಂಡವದೊಡನೆ ಪಾರ್ವತಿಯ ಲಾಸ್ಯವಾಗಬೇಕು. ಈ ಇಮ್ಮುಖದ ಬಾಳನ್ನು ಒಮ್ಮುಖವಾಗಿ ಹವಣಾಗಿ ಕುಣಿಸುವ ತಂತ್ರವನ್ನು ಸಾಹಿತ್ಯದ ವಿರಾಟ್ ಕಲೆಯೇ ತೋರಿಸೀತು. ಪಾಪಪುಣ್ಯ ವಿಚಾರ, ಸುಖದುಃಖ ವಿಚಾರ, ಹಿತಾಹಿತ ವಿಚಾರ, ಸಾಹಿತ್ಯದ ರಸದಲ್ಲಿ ನೋಸಿಬರಬೇಕು. ವಿರಾಟ್ ರೂಪಿಯಾಗಿ ಸಾಹಿತ್ಯ ಎಲ್ಲವನ್ನೂ ಒಳಗೊಳ್ಳಬೇಕು. ಆದರೆ ಇದೆಲ್ಲವೂ ಸಾಹಿತ್ಯದ ರೀತಿಯಲ್ಲಿ ಜರುಗಬೇಕು. ಜೀವನ ಪ್ರತಿಬಿಂಬವಾಗುವ ಭರದಲ್ಲಿ ಅಧಿಕಾರಾರೂಢ ಪಕ್ಷಗಳನ್ನು ಎತ್ತಿ ಹಿಡಿಯಲಾಗದು. ಭೂತದಯೆಯ ಹೆಸರಿನಲ್ಲಿ ಬಿದ್ದ ಎತ್ತಿನ ಬಾಲ ಹಿಡಿದು ಕುಣಿಯಲಾಗದು. ಸಾಹಿತ್ಯವು ಜೀವನದಲ್ಲಿ ಧೀರ ಪ್ರಶಾಂತಿಯನ್ನು ನೆಲೆಗೊಳಿಸಲು ಹವಣಿಸುತ್ತಿದೆ. ವಿಷಯಗಳ ಮಧ್ಯದಲ್ಲಿ ನಿರ್ವಿಷಯಕ ಆನಂದಹೊಂದುವ ಯೋಗವನ್ನು ವೈ ಉಣಿಸಲೆಳಸುತ್ತಿದೆ. ರತಿ ಹಾಸ್ಯ ಉತ್ಸಾಹ ವಿಸ್ಮಯ ಕ್ರೋಧ ಶೋಕ ಭಯ ಜುಗುಪ್ಸೆಗಳ ಅಷ್ಟಭಾವಕ್ಕೆ ಸಹೃದಯನ ಶಾಂತಿಯಿಂದ ರಸಿಕ ಉತ್ತರವನ್ನು ಕೊಡಲು ಕಲಿಸುತ್ತಿದೆ. ವಿಶ್ವ ಕಲ್ಯಾಣದ ಪುರುಷೋತ್ತಮ ಶಕ್ತಿಗೆ ದಾಸಾನುದಾಸನಾಗಿ, ಕೂಸಾಗಿ, ಗೆಳೆಯನಾಗಿ ಸರ್ವಸಮರ್ಪಣದ ನಲ್ಲೆಯಾಗಿ ಲೀಲಾವತಾರಿಯಾಗಿ ಬಾಳುವ ರಹಸ್ಯವನ್ನು ಕಿವಿಯಲ್ಲಿ ಊದುತ್ತಿದೆ, ಎದೆಯಲ್ಲಿ ಬಿತ್ತುತ್ತಿದೆ, ರಸಶರೀರವನ್ನು ಕಟ್ಟುತ್ತಿದೆ. ಅದೇ ಸರಿ, ಇದೇ ಸರಿ ಎಂಬ ಹಟಯೋಗ ಸಾಹಿತ್ಯಕ್ಕೆ ಹೊರತು. ಸಾಹಿತ್ಯವು ಹಟ ಯೋಗವಲ್ಲ, ರಸಯೋಗ. ರಸ ಮತ್ತು ಜನ್ಮ ಬೇರೆಯಲ್ಲ, ವಿರಸ ಮತ್ತು ಮರಣ ಬೇರೆಯಲ್ಲ, ಸಮರಸ ಮತ್ತು ಜೀವನ ಬೇರೆಯಲ್ಲ ಸಾಹಿತ್ಯ ದೃಷ್ಟಿಗೆ. ಹೀಗಾಗ ಬೇಕಾದರೆ ಮಾತು ಮಂತ್ರವಾಗಬೇಕು. ಜೀವನವು ಸ್ವತಂತ್ರವಾಗಬೇಕು. ಸತ್ಯದ ಉಪಾಸನೆ ಇದಕ್ಕೆ ನಿತ್ಯವಾಗಬೇಕು. ಮಂಗಲಕರವಲ್ಲದುದು ಆನಂದ ಪರಿಪೂರ್ಣ

ವಾಗದುದು ಸಾಹಿತ್ಯಕ್ಕೆ ಪಕ್ವಾನ್ನವಲ್ಲ, ಕಸುಕುಕಾಯಿ. ಸಾಹಿತ್ಯದಲ್ಲಿ ಅಸತ್ಯವೂ ಸತ್ಯವನ್ನು ಸೂಚಿಸಲು ಸಮರ್ಥವಾಗಿರಬೇಕು. ಅಸಡ್ಡಾಳವೂ ಸೌಂದರ್ಯ ದೀಪಿಕೆಯಾಗದಿದ್ದರೂ ಅದರ ಪ್ರಣತಿಯಾಗಬೇಕು. ದುಃಖದ ಕಡಲು ಆನಂದದ ಮುತ್ತುಗಳ ತವರುಮನೆಯಾಗಿ ತೆರೆಯಬೇಕು. ಜೀವನದ ನದಿ ಮಹಾಜೀವನದ ಮುನ್ನೀರಿಗೆ ಹಾತೊರೆಯಬೇಕು.

ಸಾಹಿತ್ಯವು ಸತ್ಯ ಸೂರ್ಯೋಪಾಸನೆಯನ್ನೆ ಮಾಡಬೇಕೆಂದು ನಾನು ಹೇಳಿದೆ. ಆದರೆ, ಸತ್ಯೋಪಾಸನೆ ಅಷ್ಟು ಸುಲಭವಲ್ಲ ಎಂಬುದನ್ನೂ ವಿಶದಪಡಿಸಬೇಕಾಗಿದೆ. ನಮ್ಮ ಸಾಮಾಜಿಕ ರಾಜಕೀಯ ಬಾಳುವೆಯೇ ಅಸತ್ಯ ಪ್ರತಿಷ್ಠಿತವಾಗಿದೆ. ಎಂದರೆ ಅಸಮಗ್ರ ಸತ್ಯ ಪ್ರತಿಷ್ಠಿತವಾಗಿದೆ. ಅದಕ್ಕೆ ಧರ್ಮಶಾಸ್ತ್ರದ, ಕಾಯಿದೆ ಕಾನೂನಿನ ನ್ಯಾಯದ ಮುದ್ರೆ ಬಿದ್ದಿದೆ. ಸತ್ಯದ ಪ್ರಶ್ನೆ ನ್ಯಾಯಕ್ಕೆ ಗೌಣವೆನಿಸುತ್ತದೆ. ಮಡಿವಂತರಿಗೆ ಸತ್ಯವು ಭಯಾನಕವಾಗಿ ಕಾಣುತ್ತಿದೆ; ಬೀಭತ್ಸವಾಗಿ ಕಾಣುತ್ತಿದೆ. ವರ್ಣಿಸಿದರೆ ರೌದ್ರಕ್ಕೂ ಕರುಣಾರಸಕ್ಕೂ ಕಾರಣವಾಗುತ್ತಿದೆ. ಸಾಹಿತ್ಯವು ಇದೆಲ್ಲವನ್ನೂ ಧ್ವನಿಯಿಂದ, ವ್ಯಂಗ್ಯದಿಂದ ಹೇಳುತ್ತಲೇ ಬಂದಿದೆ; ಕಾಂತಾ ಸಂಮಿತಿಯಾದದ್ದು ಹೆಚ್ಚೇನು ಮಾಡೀತು? ಕಾಂತೆಯರ ಗತಿ, ಲಲಿತ ಸಾಹಿತ್ಯದ ಗತಿ ಒಂದೇ ಆಗಿದೆ. ಬಿಚ್ಚಿ ಹೇಳಿದರೆ ತಡೆಯುವದಿಲ್ಲ; ಮುಚ್ಚಿ ಹೇಳಿದರೆ ತಿಳಿಯುವದಿಲ್ಲ. ಸಮಾಜ ಪುರುಷನಿಗೆ ಮಂಕು ಕವಿದಿದೆ. ರಾಜಾ ಕಾಲಸ್ಯ ಕಾರಣಂ; ಆಳುವವರಂತೆ ಕಾಲ ಎಂಬುದನ್ನು ಎಲ್ಲರೂ ಬಲ್ಲರು. ಪ್ರಜಾನುರಂಜನಾತ್‌ರಾಜಾ; ಪ್ರಜೆಗಳ ಜೀವನವನ್ನರಳಿಸಿ ಗಮಗಮಿಸುವಂತೆ ಮಾಡುವದೇ ರಾಜಕಾರ್ಯ: ಈ ಸುಭಾಷಿತವೂ ಪ್ರಖ್ಯಾತವೇ. ಆದರೆ, 'ನೃಪತಿ ಜನಪದಾನಾಂ ದುರ್ಲಭಃ ಕಾರ್ಯಕರ್ತಾ'. ಆಳುವವರಿಗೂ ಸೇರಬೇಕು; ಆಳುಗಳಿಗೂ ಹಿತವಾಗಬೇಕು; ಹೀಗೆ ಕೆಲಸ ಮಾಡುವದೇ ಕಷ್ಟ. ಕೆಲಸವಿರಲಿ 'ಅಪ್ರಿಯಸ್ಯಾಪಿ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ' ರೋಗಿಯ ರುಚಿಗೆ ತಕ್ಕಂತೆ ಔಷಧ ಕೊಡುವ ವೈದ್ಯ ಅಪರೂಪ. 'ಹರನೇ ಸತ್ಯ, ಸತ್ಯವೇ ಹರ' ಎಂಬುದು ನಿಜ; ಆದರೆ ಅದಕ್ಕೆ ಹರಿಶ್ಚಂದ್ರನೇ ಬೇಕು, ಚಂದ್ರಮತಿ ಬೇಕು, ರೋಹಿತಾಶ್ವ ಬೇಕು, ವಸಿಷ್ಠ ಬೇಕು; ಕುಟುಂಬದ ಹದವೇ ಬೇಕು. ಉಳಿದವರು 'ಸತ್ಯವನು ಬಲ್ಲವನು ಸತ್ತಂತೆ ಇರಬೇಕು' ಎಂಬ ಸರ್ವಜ್ಞೋಕ್ತಿಗೆ ತಮಗೆ ತಿಳಿದ ಅರ್ಥಮಾಡಬೇಕು, ಇಲ್ಲವೆ ಅನರ್ಥಮಾಡಬೇಕು. ಅದನ್ನು ಮೀರಿದರೆ 'ಸತ್ಯ ಹೇಳಿದವರಿಗೆ ಸುಡುಗಾಡೇ ಗತಿ' ಎಂಬ ಕೈಲಾಸಂ ಉಕ್ತಿಯನ್ನು ನೆನಪಿಡಬೇಕು. ಸತ್ಯ ಯಾರಿಗೆ ಬೇಕಾಗಿದೆ? ಎರಡು ಸತ್ಯಗಳ ಹೊಟ್ಟೆಯಲ್ಲಿ ಅಸತ್ಯ ಹುದುಗಿ ಬರುತ್ತದೆ ಎಂದು ಉಪನಿಷತ್ತೂ ನುಡಿದು ಹಳೆ ಮಾತಾಯಿತು. 'Thus truth

and falsehood mingle in life and to what God creates man adds his own' ಎಂದು ರವೀಂದ್ರರು ಹೇಳಿದುದು ಯಥಾರ್ಥವಾಗಿದೆ. ಅನ್ನದ ಅನ್ಯಾಯುವೇ ಸದ್ಯದ ಯುದ್ಧಗಳ ಮೂಲ, ಹೆಣ್ಣಿನ ಅನ್ಯಾಯುವೇ ಮನೆಮುರುಕ ಸಂಸಾರಕ್ಕೆ ಕಾರಣ, ಅಹಂಕಾರದ ಅನ್ಯಾಯುವೇ ಧರ್ಮಗಳ ಕುರುಕ್ಷೇತ್ರ ಎಂದು ಹೇಳಿದರೆ ಜನರು ತಲೆದೂಗಬಹುದು. ಆದರೆ ಈ ಸತ್ಯವನ್ನು ಬಿಚ್ಚಿ ಹೇಳಿದರೆ ಕಾಯಿದೆ ಕೆರಳುವದು, ಕುಟುಂಬ ಶಪಿಸುವದು, ಮತ ಬಹಿಷ್ಕರಿಸುವದು, ಸಾಲೆ ಸುಮ್ಮನಿರುವದು, ಸಮಾಜ ಅಡ್ಡ ಹಾದಿ ಹಿಡಿಯುವದು. ಸತ್ಯವನ್ನು ಹೇಳಬೇಕಾದರೆ ಕೇಳಬೇಕಾದರೆ ಹೊಸ ಮನಸ್ಸೇ, ಹೊಸ ಮನುಷ್ಯರೇ ಬೇಕು; ಹೊಸ ಸಮಾಜ ಬೇಕು. ಸಾಹಿತ್ಯದ ದಿವ್ಯಧ್ವನಿ ತನ್ನ ಮೂಕ ಮಾತಿನಿಂದ ಶಂಖ ಊದುತ್ತಿದೆ; 'ಕೇಳುವವರೇ ಇಲ್ಲ ಗೋವಿಂದ' ಎನ್ನುತ್ತಿದೆ. "ಊರ್ಧ್ವಬಾಹುಃ ವಿರೋಮ್ಯೇಷಃ ನ ಚ ಕಶ್ಚಿತ್ ಶೃಣೋತಿ ಮಾಂ" ಎಂದು ವ್ಯಾಸರು ಬೊಬ್ಬೆಯಿಟ್ಟರೂ ಜನರಿಗೆ ಕೇಳಿಸಿಲ್ಲ. ಕವಿತಾ ಶಾಖೆಯನ್ನೇರಿ ಕೋಕಿಲ ಕೂಗಿದರೆ ಕೇಳುವವರಾರು? ಅನ್ನದಂಥ ಒಂದು ಸಣ್ಣ ಪ್ರಶ್ನೆಯೂ ಇನ್ನೂ ಆಧ್ಯಾತ್ಮಿಕ ವಿಭೂತಿಗಳ, ಅವತಾರಿಗಳ ಹಾದಿ ಕಾಯಬೇಕಾಗಿದೆ. ಆಹಾರದಾನ, ಅಭಯದಾನ, ಶಾಸ್ತ್ರದಾನ, ಭೈಷಜ್ಯದಾನ, ಇವು ಸಾಮಾಜಿಕ ಜೀವನದ ತಳಹದಿ ಎಂಬುದನ್ನು ನಮ್ಮ ಹಳೆಯ ಶಾಸನಗಳು ಸಾರಿವೆ; ಪಂಪ ಮೊದಲಾಗಿ ಕವಿಗಳು ಹೇಳಿದ್ದಾರೆ. Four Freedoms ದ ಮಾತು ಹೊಸದಲ್ಲ; ಕೃತಿಯಾದರೆ ಮಾತ್ರ ಹೊಸದು. ಸಾಹಿತ್ಯವು ಇದರ ರೌದ್ರಭಯಾನಕವನ್ನು ವರ್ಣಿಸಿದೆ. ತುತ್ತಿನ ಚೀಲದ ಒಳಗಿನ ಒಳದನಿ ಪ್ರಳಯಕ್ಕೆ ಆಹ್ವಾನ. ದಿನಾಲು ನಾವು ಇದನ್ನೆ ಭೋಗಿಸುತ್ತಿದೇವೆ. ಅನ್ನವಿಲ್ಲದ ಸುದಾಮರು, ಸೀರೆ ಸೆಳೆದ ದ್ರೌಪದಿಯರು, ಸ್ನೇಹದ ಪಟ್ಟ ಬೇಡುವ ಧ್ರುವರು, ವಾಕ್ ಸ್ವಾತಂತ್ರ್ಯ ಕೇಳುವ ಪ್ರಹ್ಲಾದರು ಹಾದಿಬೀದಿಗೂ ಹರಿಬಿದ್ದಿದಾರೆ. ಸದ್ಯಕ್ಕೆ Four Freedoms ದ ಬಗ್ಗೆ ವಿಶ್ವಸಾಹಿತಿಗಳ ಹೊರಸಂಚು (open conspiracy) ಬೇಕಾಗಿದೆ. ಆದರೆ, ಅದು propaganda ಆದರೆ ಸರಿಯಲ್ಲ. . . . ವಿಶ್ವತೋಮುಖ ವಿಶ್ವತೋಚಕ್ಷುವಾಗಿ ಸಾಮಾಜಿಕರು ಎಚ್ಚರಾಗದಿದ್ದರೆ ಸಾಹಿತ್ಯದ ಧ್ವನಿ ನಿದ್ದೆ ಹೊಡೆಯುವವರ ಗೊರಕೆಯಾಗುವದು. ಸಾಹಿತ್ಯವು ಶೈಲಿಯ ಸೊಗಸಲ್ಲ, ರಂಜನೆಯ ರಸವಲ್ಲ, ಸಿಂಗಾರದ ಸಡಗರವಲ್ಲ; ಮಹಾಪುರುಷ ಮಹಾಪ್ರಕೃತಿಯ, ಆತ್ಮರತಿ ಆತ್ಮಕ್ರೀಡೆಯ, ಮಹಾರಸಗಳ ನಲಿದಾಟ ಒಲಿದಾಟ. ವಿಶ್ವಸಾಹಿತ್ಯದ ಅಚ್ಚುಕೂಟ ಇಲ್ಲಿದೆ. ಸತ್ಯವು ಅಮೃತವಾಗುವದು ಇಲ್ಲಿ. ಈ ಸತ್ಯೋಪಾಸನೆಯೂ ಬೇಕು, ನಿತ್ಯೋಪಾಸನೆಯೂ ಬೇಕು.

ಸಾಹಿತ್ಯವೇ ಸರ್ವಜ್ಞಾನದ ಸಾರ್ವಭೌಮನೆಂಬ ಹೆಮ್ಮೆ ನನಗಿಲ್ಲ. ಸತ್ಯವನ್ನು

ವಿವಿಧ ಮುಖವಾಗಿ ಗ್ರಹಿಸಬೇಕು, ನಾನು ಬಲ್ಲೆ. ಪದಾರ್ಥ ವಿಜ್ಞಾನಿಗಳ ಸತ್ಯ ಜ್ಞಾನವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಬೇಕಾಗಿದೆ. ಆದರೆ, ಅದು ತತ್ತ್ವಜ್ಞಾನ ಕಟ್ಟಲು ಹೊರಟರೆ ಅದರ ಕೆಲಸ ಅದಲ್ಲ ಎಂದು ನಾವು ವಿವೇಕ ತಾಳಬೇಕು. ಅನಂತಮುಖ ಸತ್ಯದ ಪರಸ್ಪರ ಸಂಬಂಧದಲ್ಲಿಯೇ ಒಂದು ಸತ್ಯಲೋಕವಿದೆ. ಆ ಸತ್ಯ ಲೋಕಕ್ಕೆ ವಿವಿಧವಾದ ಸಂಚಿದೆ. ಅದನ್ನು ತತ್ತ್ವಜ್ಞಾನವು ಸ್ಪಷ್ಟಪಡಿಸುವುದು. ಆದರೆ ಯಾವ ಬರಿಯ ತತ್ತ್ವಜ್ಞಾನವೂ ಶ್ರದ್ಧಾಪೂರ್ವಕವಾದ ಜೀವ ಪ್ರವೃತ್ತಿಗೆ ಸಾಕಾಗದು. ಅಲ್ಲಿ ಯೋಗಯುಕ್ತವಾದ ಧರ್ಮ ಬೇಕಾಗುವದು. ಇದೆಲ್ಲವನ್ನೂ ಸಾಹಿತ್ಯವು ಒಪ್ಪಿಕೊಳ್ಳುತ್ತದೆ. ಇವಾವುದಕ್ಕೂ ಅಲ್ಲ ಹೌದು ಎಂದು ಅದು ವಾದಿಸುವದಿಲ್ಲ. ವಾದ ಅದರ ಕಾರ್ಯವಲ್ಲ. ಸಾಹಿತ್ಯಕ್ಕೆ ಜೀವನವೆಲ್ಲವೂ ಸತ್ಯ. ಆಲಂಬನ ಉದ್ದೀಪನ ವಿಭಾವಗಳ ಸತ್ಯ; ವಾಚಿಕ, ಆಂಗಿಕ, ಆಹಾರ್ಯ ಅನುಭಾವಗಳ ಸತ್ಯ; ಸಂಚಾರಿ ಭಾವಗಳ ಸತ್ಯ; ಸಾತ್ವಿಕ ಭಾವಗಳ ಸತ್ಯ; ಸ್ಥಾಯಿ ಭಾವಗಳ ಸತ್ಯ; ಪುರುಷ ಪ್ರಕೃತಿ ಭಾವಗಳ ಸತ್ಯ; ವ್ಯಷ್ಟಿ, ಸಮಷ್ಟಿ, ಪಾರಮೇಷ್ಟಿಕ ಭಾವಗಳ ಸತ್ಯ; ಈ ಬಹುಮುಖ ಸತ್ಯವನ್ನು ಇದಿರಾಗುವ ಅವರವರ ಚಿತ್ತಶುದ್ಧಿಯ ಮತ್ತು ಶುದ್ಧಚಿತ್ತದ ಸತ್ಯ; ಅಲ್ಲಿಯ ಚೈತ್ಯ ಪ್ರಕೃತಿಯ ಮತ್ತು ಚೈತ್ಯ ಪುರುಷನ ಸತ್ಯ—ಇದೇ ಸಾಹಿತ್ಯದ ಮೌಲಿಕ ಸತ್ಯ. ಅದನ್ನು ನಂಬಿ ಅದು ಕೃತಿಪ್ರವೃತ್ತವಾಗುವದು. ಅದಕ್ಕೆ ಅದರದೊಂದು ಸತ್ಯಲೋಕವಿದೆ. ಅದು ಜೀವನ ವ್ಯಾಪಿ, ಜೀವನ ಗ್ರಾಸಿ, ಉಜ್ಜೀವನಕಾರಿ ಆಗಿದೆ. ಸಾಹಿತ್ಯಕ್ಕೆ ಜೀವನವು ಬಿಂಬ, ಜೀವನಕ್ಕೆ ಸಾಹಿತ್ಯವು ಬಿಂಬ. ಸಾಹಿತ್ಯ ಜೀವನಗಳೆರಡೂ ಶ್ವಾಸೋಚ್ಛ್ವಾಸಕ್ರಿಯೆಯ ಹೃದಯದ ಪಕ್ಷಗಳು. ಜೀವದ ಚೈತ್ಯ ಪುರುಷನು, ಕ್ಷೇತ್ರಜ್ಞನು ಈ ಗರುಡನನ್ನೇರಿ ಸೋಮಾಭಿಮುಖನಾಗುತ್ತಾನೆ. ಅಲ್ಲಿ ಸತ್ಯವನ್ನು ಸೌಂದರ್ಯ ಚುಂಬಿಸುತ್ತದೆ. ಸೌಂದರ್ಯವೆ ಸತ್ಯದ ಪಾತ್ರವಾಗುತ್ತದೆ. ಆನಂದಮಂದಾಕಿನಿ ಆಪಾದಮಸ್ತಕವಾಗಿ ಅಲ್ಲಿ ಹರಿಯುತ್ತಾಳೆ; ಮೂರು ಲೋಕ ಮುಳುಗಿಸುತ್ತಾಳೆ, ಉದ್ಧರಿಸುತ್ತಾಳೆ. . . .

ಇದನ್ನು ಬಿಟ್ಟು ವಾದ — ಗೀದ, ತತ್ವ — ಮತ, ರಾಜಕಾರಣ — ಸಮಾಜಕಾರಣಗಳ ನೀರು ಸಾಹಿತ್ಯಕ್ಕೆ ಉದ್ದ ನೀರು. ಸಾಹಿತ್ಯದ ನೀರು ರಸ, ಅಮೃತ.

***

## ಕಾಳಿದಾಸನ ಕಾಲ[1]

"ಕಾಳಿದಾಸನು ಗುಪ್ತರ (ಅದರಲ್ಲೂ ಎರಡನೆಯ ಚಂದ್ರಗುಪ್ತ ವಿಕ್ರಮಾದಿತ್ಯನ) ಕಾಲದವನೆಂಬ ವಾದ ಸರ್ವಸಾಧಾರಣವಾದರೂ ಇದಕ್ಕೆ ಕೊಡಲಾಗಿರುವ ಆಧಾರಗಳು ಬಲವಾಗಿಲ್ಲ. ಸಮುದ್ರ, ಚಂದ್ರ, ಸ್ಕಂದ ಮೊದಲಾದ ಪದಗಳನ್ನು

[1] ೧೬೬ ನೆಯ ಪುಟ ನೋಡಿ.

ಕಾವ್ಯಗಳಲ್ಲಿ ಪ್ರಯೋಗಿಸಿ ಕಾಳಿದಾಸನು ಗುಪ್ತ ಸಂತತಿಯ ರಾಜರನ್ನು ಸೂಚಿಸುವನೆಂದು ಹೇಳುವುದು ಯುಕ್ತವಲ್ಲ. ಈ ಪದಗಳ ಪ್ರಯೋಗವು ಇತರ ಕಾವ್ಯಗಳಲ್ಲಿಯೂ ಸ್ವಾಭಾವಿಕವಾಗಿ ಕಂಡುಬರುತ್ತದೆ. ಆಗ ಅವುಗಳನ್ನು ರಚಿಸಿದವರನ್ನೆಲ್ಲ ಗುಪ್ತರ ಸಮಕಾಲೀನರೆನ್ನಬೇಕಾದೀತು. ರಘು, ಅಜ, ದಶರಥ, ರಾಮ ಇವರ ವರ್ಣನೆಯಲ್ಲಿ ಗುಪ್ತಸಂತತಿಯ ರಾಜರನ್ನು ಸೂಚಿಸಿ ಹೊಗಳುವುದು ಕಾಳಿದಾಸನ ಅಭಿಪ್ರಾಯವಾಗಿತ್ತೆಂದು ಹೇಳಿದಲ್ಲಿ ಅವನ ಗುಪ್ತ ಸಮಕಾಲೀನತೆಗೆ ಮತ್ತೊಂದು ತೊಂದರೆ ಬರುವುದು. ರಘುವಂಶವು ಅಗ್ನಿವರ್ಣನೆಂಬ ದುರ್ವೃತ್ತನಾದ ದೊರೆಯ ವರ್ಣನೆಯಿಂದ ಕೊನೆಗಾಣುವುದು. ಕವಿಯು ಗುಪ್ತರ ಸಮಕಾಲೀನನಾಗಿದ್ದಲ್ಲಿ ವಂಶಕ್ಷಯ ಸೂಚನೆಯಾಗುವಂತೆ ಕಾವ್ಯವನ್ನು ಕೊನೆಗಾಣಿಸುವುದು ಸ್ವಾಭಾವಿಕವೆ?

ಶ್ರೀ ಎಂ. ಲಕ್ಷ್ಮೀನರಸಿಂಹಯ್ಯ, ಎಂ.ಎ. ಅವರ ವಾದಗಳ ಸಾರಾಂಶ

ಇದಲ್ಲದೆ, ಕ್ರಿ.ಶ. ೩೪೦ ರ ವೇಳೆಗೆ ಸೇರಿದ 'ಕೌಮುದೀ ಮಹೋತ್ಸವ'ವೆಂಬ ನಾಟಕದಲ್ಲಿ ಕಾಳಿದಾಸನ ಅನುಕರಣವು ಸ್ಪಷ್ಟವಾಗಿದೆಯೆಂದು ಸಾಮಾನ್ಯವಾಗಿ ಎಲ್ಲರೂ ಒಪ್ಪುವುದರಿಂದ ಕಾಳಿದಾಸನು ಇದಕ್ಕೆ ಒಂದೆರಡು ಶತಮಾನಗಳಾದರೂ ಹಿಂದೆ ಇದ್ದಿರಬೇಕು. 'ಕೌಮುದೀ ಮಹೋತ್ಸವ'ವು ಒದಗಿಸುವ ಆಧಾರದ ವಿಷಯವಾಗಿ ಬಹಳ ಚರ್ಚೆ ನಡೆದಿದೆ. ಇಷ್ಟನ್ನು ಮಾತ್ರ ಯಾರಾದರೂ ಒಪ್ಪಬೇಕು: ಕಲ್ಯಾಣವರ್ಮನೆಂಬ ದೊರೆಯು ವಿಜಯೋತ್ಸವವನ್ನು ನೆರವೇರಿಸುತ್ತಿದ್ದಾಗ ಈ ನಾಟಕವನ್ನು ರಚಿಸಿ ಅಭಿನಯಿಸಲಾಯಿತೆಂದು ಪ್ರಸ್ತಾವನೆಯಲ್ಲಿ ನಿರೂಪಿಸಿರುವ ಐತಿಹಾಸಿಕ ಹಿನ್ನೆಲೆಯು ಸ್ಫುಟ. 'ಮಾಲವಿಕಾಗ್ನಿಮಿತ್ರ'ದಲ್ಲಿರುವಂತೆ ಹೊಸ ನಾಟಕ ಉಪಾದೇಯವೇ ಎಂಬ ಪ್ರಶ್ನೆ ಕೌಮುದೀ ಮಹೋತ್ಸವದಲ್ಲಿ ಬಂದಾಗ 'ಪುರಾಣಮಿತ್ಯೇವ . . .' ಎಂಬ ವಾದಕ್ಕೆ ಬದಲು 'ಯದಸ್ಯೈವರಾಜ್ಞಃ . . .' ಎಂಬ ವಾಕ್ಯವಿದೆ. ನಾಟಕವು ಸಮಕಾಲೀನ ದೊರೆಯ ವಿಷಯವಾಗಿ ರಚಿತವಾಗಿರುವುದರಿಂದ ಗ್ರಾಹ್ಯವೆಂದು ಸೂತ್ರಧಾರನು ಇದರಿಂದ ಸಮರ್ಥಿಸುವನು. ಇದೊಂದರಿಂದಲೇ 'ಕೌಮುದೀ ಮಹೋತ್ಸವ'ದ ಐತಿಹಾಸಿಕ ಸತ್ಯತೆ ಸಿದ್ಧವಾಗುವುದು.[1] ಹೀಗೆ, ಕಾಳಿದಾಸನು ಗುಪ್ತರ ಸಮಕಾಲೀನನೆಂಬ ವಾದವು ಹೀಗೆ ಮುರಿದುಬೀಳುವುದು. ಕಾಳಿದಾಸನು ಅಶ್ವಘೋಷನಿಗಿಂತ ಹಿಂದಿನವನಾಗಿರಬೇಕೆಂಬುದೂ ಸ್ಪಷ್ಟಪಡುವುದು. ಇವರಿಬ್ಬರ ಗ್ರಂಥಗಳ ಪರಸ್ಪರ ಹೋಲಿಕೆಯಿಂದ ಇದು ಸಿದ್ಧವಾಗುವುದೆಂದು ಅನೇಕರ ಅಭಿಪ್ರಾಯ. ಹೀಗಿರುವಾಗ, ಕಾಳಿದಾಸನು ಕ್ರಿ.ಪೂ. ೫೭ರ ವೇಳೆ

[1] ಕೌಮುದೀ ಮಹೋತ್ಸವವು ವಿಜ್ಜಕೆಯಿಂದ (ಕ್ರಿ.ಶ. ಏಳನೆಯ ಶತಮಾನ) ರಚಿತವೆಂಬುದು ಊಹೆ ಮಾತ್ರ. ಕಲ್ಯಾಣವರ್ಮನ ಕಾಲವನ್ನು ಕೆ. ಪಿ. ಜಯಸ್ವಾಲರು ನಿರ್ಧರಿಸಿರುವರು.

ಯಲ್ಲಿದ್ದ ಶಕಾರಿ ವಿಕ್ರಮಾದಿತ್ಯನ ಸಮಕಾಲೀನನೆಂದು ಹೇಳುವುದಕ್ಕೆ ಅಡ್ಡಿಯೇನಿದೆ? ಈ ವಾದಕ್ಕೆ ಕಾಳಿದಾಸನು ವಿಕ್ರಮನ ಆಸ್ಥಾನದಲ್ಲಿದ್ದನೆಂಬ ಭಾರತೀಯ ಸಂಪ್ರದಾಯದ ಆಧಾರವೂ ಇದೆ. ಮತ್ತಾವ ತೊಡಕಿಗೂ ಅವಕಾಶವಿಲ್ಲ. ಮೊದಮೊದಲು ವಿಕ್ರಮನು ಒಬ್ಬ ಐತಿಹಾಸಿಕ ವ್ಯಕ್ತಿಯೆಂದು ನಿರ್ಧರಿಸುವುದಕ್ಕೆ ಅವಕಾಶ ಸಾಲದಾಗಿತ್ತು. ಈಚಿನ ಸಂಶೋಧನೆಗಳ ಫಲವಾಗಿ ಕ್ರಿ.ಪೂ. ಒಂದನೆಯ ಶತಮಾನದಲ್ಲಿ ಶಕಾರಿ ವಿಕ್ರಮಾದಿತ್ಯನೆಂಬ ದೊರೆಯು ಪ್ರಸಿದ್ಧನಾಗಿದ್ದನೆಂದು ತಿಳಿದುಬಂದಿದೆ. ಇತರ ಅನೇಕ ಆಧುನಿಕರಿಗೆ 'ವಿಕ್ರಮ' ಅಥವಾ 'ವಿಕ್ರಮಾದಿತ್ಯ'ನೆಂಬುದು ಬಿರುದಾಗಿದ್ದರೆ, ಇವನ ಹೆಸರೇ ಅದು ಆಗಿತ್ತೆಂದೂ ತಿಳಿದುಬಂದಿದೆ. ಅವನು ಸ್ಥಾಪಿಸಿದ 'ವಿಕ್ರಮ ಶಕೆ'ಯ ಸ್ಮರಣೆ ನಿಂತು ಅದರ ದ್ವಿಸಹಸ್ರಾಬ್ದೋತ್ಸವಕ್ಕೆ ಸಿದ್ಧತೆಗಳು ನಡೆಯುತ್ತಿವೆ. ಆದುದರಿಂದ ಕಾಳಿದಾಸನು ಇವನ ಆಸ್ಥಾನದವನೆಂಬ ಸಾಂಪ್ರದಾಯಿಕ ಕತೆಯನ್ನು ನಿರಾಧಾರವೆನ್ನುವಂತಿಲ್ಲ.

ಕಾಳಿದಾಸನು ಕ್ರಿ.ಪೂ. ಒಂದನೆಯ ಶತಮಾನದವನೆನ್ನುವುದಕ್ಕೆ ಬದಲಾಗಿ ಕ್ರಿ.ಪೂ. ಎರಡನೆಯ ಶತಮಾನದ ಅಗ್ನಿಮಿತ್ರನ ಕಾಲದವನೆಂದು ಏಕೆ ಹೇಳಬಾರದು? ಎಂಬ ಆಕ್ಷೇಪವು ಏಳಬಹುದು. ಈ ವಾದಕ್ಕೆ ಪುರಸ್ಕಾರ ಕೊಟ್ಟಿರುವ ಡಾ|| ಕುನ್ಹನ್‌ರಾಜರವರು ಈ ವಿಷಯದಲ್ಲಿ ಕೊಟ್ಟಿರುವ ಯುಕ್ತಿಗಳು ತೀರ ಅಸಮರ್ಪಕವಾಗಿವೆ. ಅಗ್ನಿಮಿತ್ರನು ಕಾಳಿದಾಸನ ಅಚ್ಚುಮೆಚ್ಚಿನ ನಾಯಕನೆಂಬುದನ್ನಂತೂ ಖಂಡಿಸದೆ ವಿಧಿಯಿಲ್ಲ. ಯುಕ್ತಿಗೇನಾದರೂ ಅವಕಾಶವಿದ್ದಲ್ಲಿ 'ಮಾಲವಿಕಾಗ್ನಿಮಿತ್ರ'ವು ದುರ್ವೃತ್ತನಾದ ಅಗ್ನಿಮಿತ್ರನ ವಿಡಂಬನವೆಂದು ಹೇಳಬೇಕಾಗುವುದು. ಈ ಅಭಿಪ್ರಾಯವೇ ಅನೇಕರಿಂದ ಅಂಗೀಕೃತವಾಗಿದೆ. ಇದರಿಂದ ಕಾಳಿದಾಸನು ಅಗ್ನಿಮಿತ್ರನಿಗಿಂತ ಈಚಿನವನಾದರೂ ಅವನ ವಿಷಯದಲ್ಲಿ ವಿಶದವಾದ ತಿಳಿವಳಿಕೆ ಹೊಂದಿದ್ದನೆಂಬುದು ವ್ಯಕ್ತವಾಗುತ್ತದೆ. ಶಕೆಯ ಸ್ಥಾಪಕನಾಗಿ ಪ್ರಸಿದ್ಧನೂ ಪ್ರಜಾನುರಾಗಕ್ಕೆ ಪಾತ್ರನೂ ಆಗಿದ್ದ ವಿಕ್ರಮನ ಆಸ್ಥಾನದಲ್ಲಿ ಕಾಳಿದಾಸನಿದ್ದನೆಂದು ಒಪ್ಪಿದರೆ ಹಿಂದಿನ ಆದರೂ ಸನ್ನಿಹಿತನಾದ ಅಗ್ನಿಮಿತ್ರನ ದೋಷಗಳನ್ನು ಈ ವಿಡಂಬನ ಕಾವ್ಯದ ಮೂಲಕ ಹೊರಗೆಡಹಿರುವುದಕ್ಕೆ ಸಮಂಜಸವಾದ ಉಪಪತ್ತಿಯನ್ನು ಕೊಡಬಹುದು. ಮಾಲವಿಕಾಗ್ನಿಮಿತ್ರದಲ್ಲಿ ಅಗ್ನಿಮಿತ್ರನ ದೋಷೋದ್ಘಾಟನೆಯು ನಡೆದಿದೆಯೆಂದು ಒಪ್ಪುವುದು ಯುಕ್ತವಾಗಿರುವುದರಿಂದ[1] ಕಾಳಿದಾಸನು ಕ್ರಿ.ಪೂ. ೫೭ರಲ್ಲಿ ಪ್ರಸಿದ್ಧನಾಗಿದ್ದ ವಿಕ್ರಮರಾಜನ ಸಮಕಾಲಿಕನೆಂದು ಸಿದ್ಧಾಂತ ಮಾಡಿದಲ್ಲಿ ಯಾವ ತೊಂದರೆಗೂ ಅವಕಾಶವಿಲ್ಲ.

ಶ್ರೀನಿವಾಸ ರಾಘವಾಚಾರ್.

---

[1] ಇದನ್ನು ಒಪ್ಪದಿದ್ದರೂ ಕಾಳಿದಾಸನ ವಿಕ್ರಮ ಸಮಕಾಲೀನತೆಗೆ ಕುಂದುಬರುವುದಿಲ್ಲ. ಅಗ್ನಿಮಿತ್ರನ ವಿಷಯವಾಗಿ ನಾಟಕವನ್ನು ರಚಿಸಿದ ಮಾತ್ರಕ್ಕೆ ಅವನ ಸಮಕಾಲಿಕನೇ ಆಗಿರಬೇಕೆಂದು ಹೇಳುವಂತಿಲ್ಲ.

# ಪ್ರಾಚ್ಯಲೇಖನಮಾಲೆ

**Journal of the Annamalai University**—XII, 1. December, 1942.

'Some Aspects of Bahmani Culture'—H. K. SHERWANI.

**The Indian Historical Quarterly**—XIX, 3. September, 1943.

1. Yādavaprakāśa on the Ancient Geography of India, (*c.* 2nd. half of the 11th Cy.)—Dr. D. C. GANGULY, M.A., Ph.D.

Has written a book on Sanskrit vocabulary Vaijayanti. The Dēśādhyāya in Bhūmikāṇḍa and Purādhyāya in Pātāḷakāṇḍa of the Prayayabhaga of this work throws light on the ancient Geography of India.

**Miscellaneous**—

(i) 'Pāśupatasutra'—CHINTAHARAN CHAKRAVARTI.

Notes variants in the readings of the printed edition and the R.A.S.B.'s MS. of this earliest and most authoritative text-book of the Nakulīsa Pāśupata School of the Saivas.

(ii) 'Evidence of the Nalanda Seals'—D. C. SIRCAR.

- Seal of (1) Budha Gupta—Is a son of Puru Gupta. Mother, however, not Candradevi.
  (2) Seal of Vainya Gupta—His reign period is intimately associated with the history of the downfal of the Imperial Guptas finally in the middle of the 6th century A.D.
  (3) Seal of Bhaskara Varman—King of Kāmarūpa in the 1st half of 7th Cy. A.D. indicating relations between the later Guptas and Harsha; and dealing with B's stay in Bihar in 643 A.D.

**Journal of the R.A.S. of Great Britain and Ireland**—1943, 1 and 2.

1. 'The Mysterious Paisaci'—ALFRED MASTER.

Piśācas could not denote a particular race nor could the term Paiśaci denote a particular type of language connected with their vernacular. The people may be using a language which was unintelligible. Literary evidence is collected on the nature of the language of Brhatkatha. Piśāca = Dravidian root meaning confusion of mind.

**Journal of Indian History**—XXII, 2-3. Aug.—Dec., 1943.

1. 'The Imperial Pratiharas' A revised study—DASARATHA SHARMA.

Esp'ly the early Pratiharas, from Nagabhata I to Nagabhata II.—

2. 'Tuḷuva Usurpation'—DR. P. SRINIVASACHAR.

There were at least two rulers by name Narasimha between the year A.D. 1492 and 1502. And that one was the son of the Saluva Usurper and the other of the famous Tuluva General Narasa Nayaka. The evidence of Nunniz clearly supports this statement. He says that both the sons of the Saluva Usurper ruled before Narasa Usurped the throne, which was continued by two of his five sons, 'Busbal Rao and Krishna Rao'—This agrees completely with the explicit statement in the Aragal Inscription of Vira Narasimha 26 1-1509 regarding the order of succession. Vira Narasimha was raised to be king sometime before the 8th July, 1505.

**Journal of the Bombay Branch of the R.A.S.**—XIX, 1943.

1. 'Chandonusasana of Hemacandra'—H. D. VELANKAR.

Chs. IV (Latter half) to VIII—Deal with

Prakrta Metres:—Publishes wholly the "Paryaya Commentary H. begins treatment of Prakrt metres in the latter half of Chapter IV after defining Giti, Upagiti and Udgiti which are but variations of the Arya or Gatha. He divides Prakrt Metres under four main heads, viz. Arya (25 kinds) Galitaka (23 kinds) Khanjaka (30 ?) and Sirshaka (2).

Chs. V to VII are about Apabhramsa Metres.

Ch. VIII describes the six Pratyayas.

It does not distinguish between Tala Vrtta and a pure Matra Vrtta. Indeed no writer on Prakrt Metres has done this even though the distinction is quite obvious and was certainly understood and maintained by the Apabhramsa bards. Naturally the original Tala Vrttas were comparatively few. They must have been degraded into pure Matra Vrttas and swollen to their present bulk at the hands of educated poets who were deeply learned in the SKt. and Pkt. languages, but who had no ear for Tala music. Many of these poets were naturally poets and versifiers but not singers. (Possibly the fondness for thoroughness of classification on the part of (many) of the metricians was responsible for the invention and codification of a few metres of this type.) Even the large number of Sanskritic names given to the different varieties of metres suggests the hand of a learned pandit. Besides, the tendency to give different but closely allied names to different variations of a metre or its derivatives does not probably belong to the Apabhramsa bards who . . . . employed the same name for widely different metres like Galitaka, Sirshaka, Vastuka and Rasaka being some of such names.

**Miscellanea**—

'Udyota on Vyavahara'—P. V. KANE.

**Poona Orientalist—**

'Sanskrit Theory of Poetry'—K. KRISHNA MOORTY.

'Kaumudi—The commentary on Abhinava Gupta's Locana on Dhvanyaloka—Its author and Date'—DR. L. KUNHAN RAJA.

King Udoya wrote it. He had the title of Srikantha or Kantan Kota of Chittilappetti, a hill, which is even now borne by a royal family in Malabar. Date beginning of 15th Cy.

'Indian Culture Outside India'—PROF. P. V. BAPAT.

'Chronology of Kali Dynasties'—D. R. MANKAD.

Nine possible dates for Kali start; but three for Kali end: 2001 B.C., 1976 B.C., 1936 B.C.; Mankad says the real one is 1976 B.C.

**Annals of Oriental Research, University of Madras**—Vol. VII 2.

Tamil—'Change of consonants'—(Contd.) V. VENKATA RAJULU REDDIAR.


Telugu—'Inflexion in Dravidian Languages'—K. RAMAKRISHNAYYA.

Kannada—'Chandassaram of Gunachandra'—R. C. 1650, M. MARIAPPA BHAT.

'On Pampa's Works'—H. SESHA AYYANGAR.

Malayalam—'Some stages of love in the views of Alankarikas'—P. KRISHNAN NAIR.

Sanskrit—'Poetic Beauty'—DR. C. KUNHAN RAJA.



ತಂದೆ, ಕ್ಷಮಿಸು.
ಮಗು, ನೀನು ಕ್ಷಮಿಸಮ್ಮ.

ಪ್ರಬುದ್ಧ

# ಕರ್ಣಾಟಕ

ಸ್ವಭಾನು ಸಂವತ್ಸರ — ೯೮ — ಕಾಮುನ ಸಂಚಿಕೆ

## ಪ್ರಾರ್ಥನೆ

ಹೇರಡವಿಯಂತರದೊಳೋಲೈಸಿ ಮೇಳವಿಪ
    ಹಿರಿಮೌನವೆನ್ನೆದೆಯೊಳಿರಲಿ.
ಮೇರೆಗಾಣದಿಹ ಮರಳುಕಾಡಿನ ಹರಹಿನಾ
    ಚಿನ್ಮೌನ ವೆನ್ನದಾಗಿರಲಿ.
ಜಗವ ರಕ್ಷಿಪ ನೀಲಿಯಾಗಸದ ವಿಸ್ತೃತೆಯು
    ಮನೆಮಾಡಲೆನ್ನ ಮನಸಿನಲಿ.
ಮೊರೆಮೊರೆದು ಭೋರ್ಗರೆವ ಸಾಗರದ ಗಾಂಭೀರ್ಯ
    ನೆಲಸಲೀ ನನ್ನ ಹೃದಯದಲಿ.
ಹುಣ್ಣಿಮೆಯ ರಾತ್ರಿಯಲಿ ಬೆಳ್ದಿಂಗಳೂಟದಲಿ
    ತಣಿವ ಹೂದೋಟಗಳ ಶಾಂತಿ
ಬರಲೆನಗೆ ಲೋಕದೀ ಕೋಟಲೆಯನಾರಿಸುವ
    ಅಪರೂಪ ಪ್ರೇಮವಿಭ್ರಾಂತಿ!

ಎಂ. ರಾಮರಾವ್.

# ೩೫,೦೦,೦೦೦

ಹೊಸದಿಲ್ಲಿ (ತಾ. ೨೪-೧-೪೪): ಬಂಗಾಲದಲ್ಲಿ ಒಟ್ಟು ೨೫ ಲಕ್ಷ ಜನರು ಬರಗಾಲ ಮಾರಿಗೆ ಆಹುತಿಯಾದರೆಂದೂ ಇದಲ್ಲದೆ ರೋಗರುಜೆಗಳಿಗೆ ತುತ್ತಾದವರ ಸಂಖ್ಯೆ ೧೦ ಲಕ್ಷವೆಂದೂ ಡಾ|| ಶ್ಯಾಮಾಪ್ರಸಾದ ಮೂಕರ್ಜಿಯವರು ಪತ್ರಿಕೋದ್ಯಮಿಗಳ ಸಭೆಯಲ್ಲಿ ಹೇಳಿದರು.— ಸಂಯುಕ್ತ ಕರ್ನಾಟಕ (ಹುಬ್ಬಳ್ಳಿ), ೨೬-೧-೧೯೪೪ (ಪು. ೧).

ಸತ್ತರೇ ಅಕಟ! ಮೂವತ್ತಯಿದು ಲಕ್ಷ
ಬಂಗಾಲದೊಳಗೆಮ್ಮ ಕಂಗಾಲ ಬಳಗಂ?
ಬೋನದಾ ದುರ್ಭಿಕ್ಷ, ಬೇನೆಯ ಸುಭಿಕ್ಷ-
ಕರು ಉಂಡಿತೇ ಹಾಲ ತುರು ಹಿಂಡೆ ಕೊಳಗಂ?
ಇಳೆ ಭಾರವನ್ನಿಂತೆ ಇಳುಹುದೆನೆ ತನ್ನ,
ಹೌರಕ್ಕೆ ಹೌರ ಗಡ ಭಾರತರೊ ಭಾರ?
ವಡಬಾಗ್ನಿಯಿಂ ತನ್ನ ಕಡಲಿಗೆನೆ ಬನ್ನ,
ಯೂರೋಪದೌರ್ವದಿಂ ಭಾರತಕೊ ಘೋರ?

ಯಾರ ಸೊಕ್ಕಿಗೆ ದೇವ ಯಾರ ತಲೆ ದಂಡ?
ಸಾಲದೆನೆ ನಮ್ಮ ಏಗಾಲದೀ ಅಡಿಮೆ
ಮತ್ತೆ ಲೋಕದ ಪಾಪಹೊತ್ತ ಕುರಿವಿಂಡ
ಬೇನೆ ಬರ ಮುಕ್ಕೆ ಇನ್ನೇನೆಮಗೆ ಕಡಿಮೆ?
ಇನಿಸೆ ಭಾಗ್ಯಕೆ ಜೀಯ ಜನಿಸಿದೆವೆ ನಾವು?—
ಕೂಳಿದ್ದು ಉಪವಾಸ, ಬಾಳಿದ್ದು ಸಾವು.

ಗೋವಿಂದ ಪೈ.

# ವ್ಯಂಗ್ಯಚಿತ್ರಗಳು

ಈ ಯುಗವನ್ನು ವ್ಯಂಗ್ಯಚಿತ್ರಗಳ ಸ್ವರ್ಣಯುಗವೆಂದು ಕರೆಯಬಹುದು. ಯೂರೋಪಿನ ಪ್ರತಿಯೊಂದು ದಿನಪತ್ರಿಕೆಯಲ್ಲೂ ಇವನ್ನು ನಾವು ಕಾಣಬಹುದು. ಈ ಚಿತ್ರಗಳಿಗೆ ಆ ಪತ್ರಿಕೆಗಳಲ್ಲಿ ಪ್ರಮುಖಸ್ಥಾನವನ್ನು ಕೊಟ್ಟಿರುತ್ತಾರೆ. ಮುಖ್ಯ ವಾಗಿ ಇವು ರಾಜಕೀಯಕ್ಕೆ ಸಂಬಂಧಪಟ್ಟವು. ಇವುಗಳಿಂದ ಒಂದೇ ಕ್ಷಣದಲ್ಲಿ ಒಂದು ದೇಶದ ಅಥವಾ ಪ್ರಪಂಚದ ರಾಜಕೀಯ ಪರಿಸ್ಥಿತಿಯನ್ನು ಗ್ರಹಿಸ ಬಹುದು. ಎಷ್ಟೋ ಜನರಿಗೆ ನಾಲ್ಕಾರು ಪುಟಗಳನ್ನೋದಿ ವಿಷಯಗ್ರಹಣ ಮಾಡಲು ಹೊತ್ತಿರಲಾರದು. ತಾಳ್ಮೆಯೂ ಇರಲಾರದು. ವ್ಯಂಗ್ಯಚಿತ್ರಕಾರನು ತನ್ನ ಸ್ಫೂರ್ತಿಯಿಂದಲೂ ಕಲಾಕೌಶಲದಿಂದಲೂ ಅವರನ್ನು ಮೋಹಗೊಳಿಸು ವನು. ಈಗ ಸದ್ಯದಲ್ಲಿ ನಮ್ಮ ದೇಶದ ವ್ಯಂಗ್ಯ ಚಿತ್ರಕಾರರಲ್ಲಿ ಎರಡೇ ಹೆಸರುಗಳು ಪ್ರಸಿದ್ಧವಾಗಿವೆ. ವಾಸು, ಮಾಲಿ, ಶಂಕರ್— ಇವರು ಮೂವರೂ 'ಹಿಂದುಸ್ಥಾನ್ ಟೈಂಸ್' 'ಇಂಡಿಯನ್ ಎಕ್ಸ್‌ಪ್ರೆಸ್' ಮುಂತಾದ ಪತ್ರಿಕೆಗಳ ಮೂಲಕ ತಮ್ಮ ಕಲಾಕೌಶಲವನ್ನು ತೋರಿಸುತ್ತಿದ್ದಾರೆ. ಇವರ ಸ್ಫೂರ್ತಿಯೆಷ್ಟಿದ್ದರೂ ಅದು ಯೂರೋಪಿನವರ ಬೆಳೆದ ಕಲಾಕೌಶಲಕ್ಕಿಂತ ಬಹು ಕಡಿಮೆಯಾದುದು. ಇನ್ನೂ ಇವರಿಗೆ ಅನುಭವ ಬೇಕು. ಅಲ್ಲದೆ ದಿನಪತ್ರಿಕೆಗಳನ್ನೋದುವವರಿಗೆ ತಿಳಿವಳಿಕೆಯೂ ಹೆಚ್ಚಬೇಕು. ವ್ಯಂಗ್ಯಚಿತ್ರಗಳನ್ನು ನೋಡಿ ಆನಂದಿಸುವುದು ನಾಗರಿಕತೆಯ ಒಂದು ಲಕ್ಷಣ.

ಇದರ ಚರಿತ್ರೆಯನ್ನು ಕೆಲವು ಮಾತುಗಳಲ್ಲಿ ಹೇಳಲು ಯತ್ನಿಸುತ್ತೇನೆ. ಈ ವ್ಯಂಗ್ಯಚಿತ್ರ ರಚನಾಕ್ರಮವು ಇಂಗ್ಲೆಂಡ್ ದೇಶದಲ್ಲಿ ಹುಟ್ಟಿತು. ಹದಿನಾರನೆಯ ಶತಮಾನದ ಇಂಗ್ಲೆಂಡಿನ ಯುವಕರು ವ್ಯಾಸಂಗವನ್ನು ಮುಗಿಸಿದಮೇಲೆ ಯೂರೋ ಪಿನ ಇತರ ದೇಶಗಳಿಗೆ, ಅದರಲ್ಲೂ ಇಟಲಿಗೆ ಹೋಗಿ ಬರುವುದು ವಾಡಿಕೆಯಾಗಿ ದ್ದಿತು. ಈ ರೀತಿಯಲ್ಲಿ ಇಟಲಿಗೆ ಹೋಗಿ ಅಲ್ಲಿನ ಭಾಷಾಪದ್ಧತಿ, ನಾಗರಿಕತೆಗಳ ಪರಿಚಯವನ್ನು ಪಡೆದು, ಸ್ವದೇಶಕ್ಕೆ ಹಿಂತಿರುಗಿದವರಿಗೆ ವಿಶೇಷ ಮರ್ಯಾದೆಯಿದ್ದಿತು. ಇಂಗ್ಲೆಂಡ್ ಅಮೇರಿಕಾಗಳಿಗೆ ಹೋಗಿ ಬಂದವರ ವಿಷಯವಾಗಿ ನಮ್ಮ ದೇಶ ದವರಲ್ಲಿ ಹೇಗೆ ಒಂದು ಭಾವನೆಯಿದೆಯೋ, ಹಾಗೆಯೇ ಆಗ ಇಟಲಿಗೆ ಹೋಗಿ ಬಂದವರಿಗೆ ಇಂಗ್ಲೆಂಡಿನ ಜನರ ಮೆಚ್ಚಿಕೆ ಸಲ್ಲುತ್ತಿತ್ತು. ಆದರೆ ಹೀಗೆ ಹೋಗಿ

ಬಂದವರಲ್ಲಿ ಅನೇಕರು ವಕ್ರಮಾರ್ಗವನ್ನು ಅನುಸರಿಸಿದರು. ಇಟಲಿಯ ನಾಗರಿಕತೆಯ ತಿರುಳನ್ನು ಕಾಣದೆ, ಅಲ್ಲಿಯ ಜನರ ಡಂಬಾಚಾರಗಳನ್ನು ಮಾತ್ರ ಕಲಿತು, ಸ್ವದೇಶಕ್ಕೆ ಬಂದು ಶೇಂಕಾರಕ್ಕೆ ಇಳಿದು ತಮ್ಮ ಜನರ ಅಪಹಾಸ್ಯಕ್ಕೆ ಗುರಿಯಾದರು. ಅವರ ವೇಷ, ಭಾಷೆಗಳ ವೈಚಿತ್ರ್ಯವೂ ಜಂಬದಕೋಳಿ ರೀತಿಯೂ, ಜನರ ಅಪಹಾಸ್ಯಕ್ಕೆ ಗುರಿಯಾದವು. ಈ ವಿಷಯದಲ್ಲಿ ಬೇಕಾದಷ್ಟು ವಿಡಂಬನ ಗ್ರಂಥಗಳು ಹುಟ್ಟಿದವು. "The Italianate Englishman" ಎಂಬ ಪರಿಹಾಸಭಾವನೆ ರೂಢಿಗೆ ಬಂದಿತು. ಇಷ್ಟೇ ಅಲ್ಲ; ಈ ಗ್ರಂಥಗಳ ಜತೆಗೆ ಕೆಲವು ಚಿತ್ರಗಳೂ ಹುಟ್ಟಿಕೊಂಡುವು. ಅವುಗಳಿಗೆ "The Grand Macaroni" ಎಂಬ ಹೆಸರುಕೊಟ್ಟು, ಅಂಗಡಿಗಳಲ್ಲಿ ಪ್ರದರ್ಶಿಸುತ್ತಿದ್ದರು. ಈ ಹೆಸರಿನ ಒಂದು ಸ್ವಾರಸ್ಯವೇನೆಂದರೆ, "Macaroni" ಎಂಬುದು ಇಟಾಲಿಯನ್ನರ ಒಂದು ಆಹಾರಪದಾರ್ಥ. ಈ ಆಹಾರದ ಹೆಸರೂ, ಕೆಲವು ಇಟಾಲಿಯನ್ನರ ಹೆಸರಿನಂತೆಯೇ ಕಿವಿಗೆ ಕೇಳುವುದು. ಇದೇ ವ್ಯಂಗ್ಯಚಿತ್ರಗಳ ಆರಂಭ.

ಈ ವ್ಯಂಗ್ಯಚಿತ್ರಗಳ ಹಿಂದಿರುವ ಮನೋಧರ್ಮದಲ್ಲಿ ಒಂದು ವಿಶೇಷ ಗುಣವುಂಟು. ಯಾವ ಮನುಷ್ಯನನ್ನೇ ಆಗಲಿ, ಯಾವ ರೀತಿಯನ್ನೇ ಆಗಲಿ, ನಾಗರಿಕ ಸ್ವಭಾವದವನು ಕುರುಡು ನಂಬಿಕೆಯಿಂದ ಅನುಸರಿಸುವುದಿಲ್ಲ. ಹಾಸ್ಯ ನಾಗರಿಕನ ಒಂದು ದೊಡ್ಡ ಸಂಪತ್ತು. "ಆಚಾರಗಳ ಅತಿನಿಷ್ಠೆ ಅಸಹನೆಗಳನ್ನು ನಿವಾರಿಸಬೇಕಾದರೆ ಒಂದು ಹದದ ಅಮರ್ಯಾದೆಯು ಅಗತ್ಯ" "A healthy irreverence prevents fanaticism" ಎಂದು ಇಂಗ್ಲಿಷಿನಲ್ಲಿ ಹೇಳುವುದುಂಟು. ನಾಗರಿಕನಿಗೆ ಯಾವ ಆಡಂಬರವನ್ನು ಕಂಡರೂ ಮರ್‍ಯಾದೆಯಿಲ್ಲ. ಏಕೆಂದರೆ ಅವನಲ್ಲಿ ಹಾಸ್ಯದೃಷ್ಟಿ ವಿಪುಲವಾಗಿರುತ್ತದೆ. ಒಬ್ಬ ದಪ್ಪ ಮನುಷ್ಯ ಠೀವಿಯಿಂದ ನಡೆಯುತ್ತ, ಬಾಳೆಯ ಹಣ್ಣಿನ ಸಿಪ್ಪೆಯಮೇಲೆ ಕಾಲಿಟ್ಟು ಜಾರಿಬಿದ್ದರೆ, ಮನುಷ್ಯರು ನಗುವುದು ಸಹಜ. ಈ ನಗುವಿನ ಮೂಲವೇನೆಂದರೆ, ಅಷ್ಟು ದೊಡ್ಡ ದೇಹವೂ ಠೀವಿಯ ನಡಗೆಯೂ ಇಷ್ಟು ಅಲ್ಪ ಕಾರಣದಿಂದ ಈ ಸ್ಥಿತಿಗೆ ಬಂತಲ್ಲಾ ಎಂದು. ಆಡಂಬರಕ್ಕೆ ಭಂಗ ಬಂದುದರಿಂದ ನಮಗೆ ಒಂದು ಸಂತೋಷ. ಅವನ ಗಾಂಭೀರ್ಯವೂ, ಗಾತ್ರವೂ ಲೋಕದ ಸಾಧಾರಣ ರೀತಿಗೆ ತೀರ ಮೀರಿದುವು. ದೇವರೇನೋ ಅವನನ್ನು ಸೃಷ್ಟಿಸಿರಬಹುದು. ಆದರೂ ಜಾರಿದಾಗ ಸಾಧಾರಣ ಜನರ ಒಂದು ಮಟ್ಟಕ್ಕೆ ಅವನೂ ಇಳಿದಂತಾಯಿತು.

ಕೆಲವುಕಾಲ ಈ ಡಂಬಾಚಾರಗಳನ್ನೇ ಹಾಸ್ಯಮಾಡುತ್ತಿದ್ದ ವ್ಯಂಗ್ಯಚಿತ್ರಗಳು ದೇಶದ ಪ್ರಮುಖ ವ್ಯಕ್ತಿಗಳನ್ನು ಹಾಸ್ಯಮಾಡಲಾರಂಭಿಸಿದವು. ಇದು ತಿಳಿದವರ ಕೈಯಲ್ಲಿ ಒಂದು ಉತ್ತಮ ಕಲೆಯಾಗಿ ಪರಿಣಮಿಸಿತು. ಮತ್ತೆ ಕೆಲವರ ಕೈಯಲ್ಲಿ ಬಹಳ




TRUTH COMES TO FLEET STREET



Henrik Ibsen.

ಹೀನಸ್ಥಿತಿಗೆ ಇಳಿಯಿತು. ನಕ್ಕರೆ, ನಗುವಿನಲ್ಲಿ ಯಾವಾಗಲೂ ಒಂದು ಗಾಂಭೀರ್ಯ ವಿರಬೇಕು. ಸರಿಯಾದ ವ್ಯಂಗ್ಯ ಚಿತ್ರಕಾರನು ಯಾವಾಗಲೂ ಗಟ್ಟಿಯಾಗಿ ನಗುವುದೇ ಇಲ್ಲ. ಅವನದು ನಸುನಗೆ. ಇದನ್ನು ಬಿಟ್ಟು ಯಾವನಾದರೊಬ್ಬ ವ್ಯಕ್ತಿಯನ್ನು ಅವಮಾನಗೊಳಿಸಿ ಅವನನ್ನು 'ಇಲಿ' ಅಥವಾ ಇನ್ನಾವುದಾದರೂ ಕೀಳು ಜಂತುವಿನ ರೂಪದಲ್ಲಿ ನಿರೂಪಿಸಿದರೆ ಕಲೆಯು ಕೆಡುವುದು. ಹದಿನೆಂಟನೆಯ ಶತಮಾನದಲ್ಲಿ ಈ ಕಲೆಗೆ ಕೊಂಚ ಹೀನಸ್ಥಿತಿಯೇ ಬಂದಿತು. ಅಲೆಕ್ಸಾಂಡರ್ ಪೋಪ್ ಮತ್ತು ಇತರ ಮಹಾ ವ್ಯಕ್ತಿಗಳನ್ನು ಕೀಳುಪ್ರಾಣಿಗಳ ರೂಪದಲ್ಲಿ ಚಿತ್ರಿಸಲಾರಂಭಿಸಿದರು. ಈ ದುಃಸ್ಥಿತಿ ಬೇಗ ಪರಿಹಾರವಾಯಿತು. ನಡುವೆ ಹೋಗಾರ್ತ್ ಎಂಬ ಮಹಾ ವ್ಯಂಗ್ಯ ಚಿತ್ರಕಾರನ ಜೀವನವಿಮರ್ಶೆಯ ಕಾಲ ನಡೆಯಿತು. ಮುಂದಿನ ಶತಮಾನದಲ್ಲಿ ಸ್ಫೂರ್ತಿಯುತರಾದ ಕಲೆಗಾರರು ಉದಿಸಿ ಈ ಕಲೆಗೆ ಒಂದು ಪ್ರಾಶಸ್ತ್ಯವನ್ನು ಕಲ್ಪಿಸಿದರು. ಮ್ಯಾಕ್ಸ್ ಬೀರ್‌ಬಾಮ್ (Max Beerbohm), ಸ್ಪೈ (Spy) ಮುಂತಾದವರು ವ್ಯಕ್ತಿವಿಡಂಬನ ಚಿತ್ರರಚನೆಯಲ್ಲಿ ಧುರೀಣರು. ಕೇವಲ ನಾಲ್ಕಾರು ಗೆರೆಗಳನ್ನೆಳೆದು ಮನುಷ್ಯನ ವ್ಯಕ್ತಿತ್ವದ ಸಾರವನ್ನು ಹಿಂಡಿಬಿಡುವುದೇ ಇವರ ಕಲೆಯ ವೈಶಿಷ್ಟ್ಯವಾಗಿರುತ್ತಿತ್ತು. ಮನುಷ್ಯನ ಮುಖದಲ್ಲಿರುವ ಒಂದು ಮಡವೆ ಸಹಾ 'ಫೋಟೋ'ದಲ್ಲಿ ಬಿದ್ದಿರುತ್ತದೆ. ಅದನ್ನು ನೋಡಿ ನಾವು ಆ ಮನುಷ್ಯನು ಯಾರೆಂದು ಗೊತ್ತುಮಾಡಬಹುದೇ ಹೊರತು, ಅವನ ಗುಣಾವಗುಣಗಳನ್ನು ಕಂಡು ಹಿಡಿಯಲಾಗುವುದಿಲ್ಲ. ಈಚೆಗೆ ಈ ಫೋಟೋ ಕಲೆಯು ಅಭಿವೃದ್ಧಿ ಗೊಂಡು ವ್ಯಕ್ತಿತ್ವವನ್ನು ರೂಪಿಸಲು ಯತ್ನಿಸುತ್ತಿದೆ. ಆದರೆ ಈ ವಿಷಯದಲ್ಲಿ ಅದು ಎಂದಿಗೂ ವ್ಯಂಗ್ಯಚಿತ್ರದ ಮಟ್ಟಕ್ಕೆ ಬರಲಾರದು. ಮುಂದೆ 'ಇಬ್ಸೆನ್' ಮಹಾ ಕವಿಯ ಒಂದು ಚಿತ್ರವನ್ನು (ಚಿ : ೧.) ಕೊಟ್ಟಿದೆ. ಅದನ್ನು ಗಮನಿಸಿದಾಗ ನಮಗೆ ಕಂಡುಬರುವುದೇನೆಂದರೆ ಚಿತ್ರಕಾರನು ಕೆಲವು ಗೆರೆಗಳಲ್ಲೇ, ಆ ಕವಿಯ ಸ್ವಭಾವ ವನ್ನು ವ್ಯಕ್ತಗೊಳಿಸಿರುವುದು. ಇಬ್ಸೆನ್ ತನ್ನ ಜೀವಮಾನವನ್ನೆಲ್ಲ ಸಮಾಜದ ಕಟ್ಟುನಿಟ್ಟುಗಳ ಮೇಲಿನ ಹೋರಾಟದಲ್ಲಿ ಕಳೆದವನು. ಹೋರಾಟವೇ ಅವನ ಸ್ವಭಾವ. ಅಲ್ಲದೆ ಸಮಾಜದ ದೌರ್ಜನ್ಯಗಳನ್ನು ಕಂಡರೆ ಸಿಡಿದು ಬೀಳುವವನು. ಯಾವಾಗಲೂ ಮತ್ತೊಬ್ಬರಿಗೆ ತಲೆಬಾಗಿದವನಲ್ಲ. ಇವೆಲ್ಲವನ್ನೂ ಈ ಚಿತ್ರದಿಂದ ನಾವು ಊಹಿಸ ಬಹುದು. ಈ ಚಿತ್ರವು ಯೂರೋಪಿನ "ಗುಲ್‌ಬ್ರಾನ್ಸನ್" ಎಂಬವನು ಬರೆದುದು. ಹತ್ತೊಂಬತ್ತನೆಯ ಶತಮಾನದಲ್ಲಿ ಗ್ಲಾಡ್‌ಸ್ಟನ್ ಡಿಸ್ರೇಲಿಗಳ ರಾಜಕೀಯ ಹೋರಾಟಗಳನ್ನು 'ಪಂಚ್' (Punch) ಎಂಬ ಪತ್ರಿಕೆಯು ನಾನಾ ವಿಧದಲ್ಲಿ ನಿರೂಪಿಸಿದೆ. ಈ ಶತಮಾನದವರಿಗೆ ರಾಜಕೀಯಕ್ಕೂ, ವ್ಯಂಗ್ಯಚಿತ್ರಕ್ಕೂ ಹೆಚ್ಚು

ಸಂಬಂಧವಿರಲಿಲ್ಲ. ಈ ಚಿತ್ರಕಾರರಿಗಿದ್ದ ದೊಡ್ಡ ಸಂತೋಷವೇನೆಂದರೆ, ಗ್ಲಾಡ್‌ಸ್ಟನ್, ಡಿಸ್ರೇಲಿ, ಇವರಿಬ್ಬರೂ ಸೋಟಕ್ಕೆ ವಿಚಿತ್ರಪುರುಷರಾಗಿದ್ದುದು. ಡಿಸ್ರೇಲಿಯ ಮುಂಗುರುಳೂ, ಗ್ಲಾಡ್‌ಸ್ಟನ್ನಿನ ಹಂಡೆಯಂತಹ ತಲೆಯೂ, ಅವನ ಕೆನ್ನೆ ಮೀಸೆಗಳೂ (Side Whiskers) ಅವರಿಗೆ ಬಹಳ ವಿನೋದಕರವಾಗಿದ್ದವು.

ಇದೇ ಕಾಲದಲ್ಲಿ ಇಂಗ್ಲೆಂಡ್, ಇಂಡಿಯಾ, ಆಸ್ಟ್ರೇಲಿಯಾ ಮೊದಲಾದ ದೇಶಗಳನ್ನು ಒಂದೊಂದು ಪ್ರಾಣಿಯ ರೂಪಿನಿಂದ ನಿರ್ದೇಶಿಸುತ್ತಿದ್ದರು. ಇಂಗ್ಲೆಂಡ್ ಯಾವಾಗಲೂ ಸಿಂಹ, ಇಂಡಿಯಾ ಆನೆ, ರಷ್ಯಾ ಕರಡಿ, ಆಸ್ಟ್ರೇಲಿಯಾ ಕಾಂಗರು—ಹೀಗೆ. ಇಲ್ಲದಿದ್ದರೆ ಇಂಗ್ಲೆಂಡ್ ಎಂದರೆ ಯೂನಿಯನ್ ಜಾಕ್, ವೇಸ್ಟ್ ಕೋಟು, ಕೈಯಲ್ಲಿ ಕೋಲು, ತಲೆಯ ಮೇಲೆ ಟಾಪ್ ಹ್ಯಾಟು, ಕಾಲುಗಳಿಗೆ ಗೆಯಿಟರ್ಸ್ (Gaiters), ಕೆನ್ನೆ ಮೀಸೆಗಳು ಇವುಗಳನ್ನು ಧರಿಸಿದ ಪುಷ್ಟನಾದ ಭಾರಿಯ ವ್ಯಕ್ತಿ. ಜರ್ಮನಿ ಎಂದರೆ, ಎರಡು ಜಡೆಗಳನ್ನುಳ್ಳ, ದಪ್ಪಕೆನ್ನೆಯ ಒಬ್ಬ ಹೆಂಗಸು. ಅಮೇರಿಕಾ ಎಂದರೆ ಜೂಪುಗಡ್ಡದ, ದೊಡ್ಡ ಕಾಲುಗಳುಳ್ಳ, ನಕ್ಷತ್ರ ಮತ್ತು ಪಟ್ಟಿಗಳುಳ್ಳ ವೇಸ್ಟ್‌ಕೋಟನ್ನು ಧರಿಸಿದ ವ್ಯಕ್ತಿ. ಹೀಗೆಯೇ ಕೆಲವು ಸಂಕೇತಗಳೇರ್ಪಟ್ಟವು. ಹೊಸದರಲ್ಲಿ ಇವುಗಳಲ್ಲಿ ಒಂದು ಸ್ವಾರಸ್ಯವಿದ್ದಿತು. ಆದರೆ ಬರುಬರುತ್ತ, ಕೆಲಸಕ್ಕೆ ಬಾರದ ಚಿತ್ರಗಾರನು ಸಹ ಈ ಸಂಪ್ರದಾಯವನ್ನನುಸರಿಸತೊಡಗಿದಾಗ ವ್ಯಂಗ್ಯ ಚಿತ್ರದ ವೈಶಿಷ್ಟ್ಯಕ್ಕೆ ಕುಂದುಂಟಾಯಿತು. ಈ ಕಲೆಯು ಕೇವಲ 'ಯಾಂತ್ರಿಕವಾದ ಪಡಿಯಚ್ಚಿನಂತೆ' ಆಯಿತು. ಹೌದು. ಈ ಚಿತ್ರಗಳೆಲ್ಲವೂ ಪಡಿಯಚ್ಚಾದವೇ ಹೊರತು ಅವುಗಳಲ್ಲಿ ಸ್ಫೂರ್ತಿಯಿರಲಿಲ್ಲವೆನ್ನಬೇಕು.

ಕೆಲವು ವರ್ಷಗಳು ಕಳೆದ ಮೇಲೆ ಆಸ್ಟ್ರೇಲಿಯಾ ದೇಶದಲ್ಲಿ ಮಹಾವ್ಯಕ್ತಿಗಳು ಹುಟ್ಟಿಕೊಂಡು ಕಲೆಗೆ ಒಂದು ವಿಶೇಷವನ್ನು ಕಲ್ಪಿಸಿದರು. ಈ ಕಲೆಯು ಇಂಗ್ಲೆಂಡಿನಲ್ಲಿ ಹುಟ್ಟಿ ಯೂರೋಪ್ ಆಸ್ಟ್ರೇಲಿಯಾಗಳಲ್ಲೆಲ್ಲ ಹರಡಿತು. ಆದರೆ ಸದ್ಯದಲ್ಲಿ ಆಸ್ಟ್ರೇಲಿಯಾ ಒಂದೇ ಗಣ್ಯಸ್ಥಾನವನ್ನು ಹೊಂದಿದೆ. 'ವಿಲ್ ಡೈಸನ್ (Will Dyson) ಮತ್ತು ಲೋ (Low)' ಎಂಬ ಎರಡು ಹೆಸರುಗಳನ್ನು ಮಾತ್ರ ನಾವು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ವಿಲ್ ಡೈಸನ್ ವಿಷಯದಲ್ಲಿ ಎಷ್ಟು ಹೇಳಿದರೂ ಸಾಲದು. ಅವನು ವ್ಯಂಗ್ಯಚಿತ್ರಗಳನ್ನು ರಾಜಕೀಯ ಆವರಣದಿಂದ ಮೇಲಕ್ಕೆತ್ತಿ ಉದಾತ್ತ ಧ್ಯೇಯಪೂರಿತವಾಗಿ ಮಾಡಿದನು. ಯಾವ ಶತಮಾನದಲ್ಲಿಯಾದರೂ ಅಂಥವನ ಚಿತ್ರಗಳಿಗೆ ಯಶಸ್ಸುಂಟು. ಮುಂದೆ ಅಚ್ಚಾಗಿರುವ ಚಿತ್ರ (೨) ನ್ನೇ ನೋಡಿ. ಜೀವನದ ಒಂದು ಸಮಸ್ಯೆಯನ್ನು ಅಲ್ಲಿ ಮೂಡಿಸಿದ್ದಾನೆ. ವ್ಯಭಿಚಾರವು ಪ್ರಪಂಚದಲ್ಲಿ ಹಳೆಯದು ಸರಿ. ಅದು ಯಾರ ತಪ್ಪು? ಸಮಾಜದಲ್ಲಿ ವ್ಯಭಿಚಾರದಿಂದಲೇ



(ನ್ಯೂಯಾರ್ಕ್ ಪಟ್ಟಣವನ್ನು ನೋಡಿ)

ಸೈತಾನ— ಬದುಕಿದ್ದರೆ ಕಲಿಯುಬಹುದು. ಬದುಕಿದ್ದರೆ ಕಲಿಯುಬಹುದು. . .

ಜೀವನವನ್ನು ಸಾಗಿಸಬೇಕಾದರೆ ಅದು ಸಮಾಜದ ತಪ್ಪೋ ಅಥವಾ ವ್ಯಭಿಚಾರಿಯದೊ? ಈ ವಿಷಯದಲ್ಲಿ ಎಷ್ಟು ಹೇಳಿದರೆ ತಾನೆ ಸಮಸ್ಯೆಯು ಮಂದಟ್ಟಾಗುವುದು? ಇದನ್ನು ಒಂದು ಚಿತ್ರದಲ್ಲಿ ನಿರೂಪಿಸಿ ನಮಗೆ ಮನಮುಟ್ಟುವಂತೆ ಮಾಡಿದ್ದಾನೆ. ಈ ಚಿತ್ರದ ಕೆಳಗೆ ಬರೆದಿರುವಂತೆ "ತಂದೆ, ಕ್ಷಮಿಸು", "ಮಗಳೆ ಕ್ಷಮಿಸು" ಎಂಬ ಮಾತುಗಳು ಬಹಳ ಸ್ಫೂರ್ತಿಯುಳ್ಳವು. ಇನ್ನೊಂದು ಚಿತ್ರವನ್ನು (೩) ನೋಡಿ: ಅದು ಡೈಸನ್ 'ನ್ಯೂಯಾರ್ಕಿ'ಗೆ ಹೋದ ಎರಡನೆಯ ದಿನ ಬರೆದುದು. ಅವನನ್ನು ಪತ್ರಿಕೋದ್ಯೋಗಿಗಳು 'ನ್ಯೂಯಾರ್ಕಿನ ವಿಷಯ ಏನಾದರೂ ಹೇಳಿ' ಎಂದಾಗ, ಅವನು 'ನಾಳೆಯ ತನಕ ಕಾಯಿರಿ, ಪತ್ರಿಕೆಯಲ್ಲಿ ಚಿತ್ರರೂಪವಾಗಿ ಹೇಳುವೆನು' ಎಂದು ಹೇಳಿ ಇದನ್ನು ಬರೆದನು. ಅವನು ಹೋದಾಗ ನ್ಯೂಯಾರ್ಕಿನಲ್ಲಿ ಬಹಳವಾಗಿ ದುರಾಚಾರಗಳು ನಡೆಯುತ್ತಿದ್ದವು. ಪ್ರಪಂಚದ ಯಾವ ಪಟ್ಟಣದಲ್ಲೂ ಕಾಣಲಾಗದಂತಹ ಮಹಾಪಾತಕಗಳನ್ನು ನ್ಯೂಯಾರ್ಕಿನಲ್ಲೇ ನೋಡಬಹುದಾಗಿತ್ತು. ಎಲ್ಲ ಪಾತಕಗಳಿಗೂ ಮೂಲವಾದ 'ಸೈತಾನ'ನು ನ್ಯೂಯಾರ್ಕಿಗೆ ಬಂದಾಗ ಅಲ್ಲಿ ನಡೆಯುತ್ತಿರುವುದನ್ನು ನೋಡಿ ವಿಸ್ಮಯಗೊಂಡು, ತನಗೂ ಇಲ್ಲಿ ಕಲಿಯುವ ಅವಕಾಶವಿದೆಯೆಂದು ಗಡ್ಡವನ್ನು ನೀವುತ್ತಾ ಹೇಳುವುದನ್ನು ಎಂದಿಗೂ ಮರೆಯಲಸಾಧ್ಯ. ಅದನ್ನು ಬರೆದುದಕ್ಕಾಗಿ ಅವನನ್ನು ಬಹಳವಾಗಿ ಬೈದರು. ಸಾವಿರಾರು ಪುಟಗಳುಳ್ಳ ಪುಸ್ತಕವನ್ನು ಬರೆಯುವುದಕ್ಕಿಂತ ಇಂಥ ಒಂದು ಚಿತ್ರವನ್ನು ಬರೆದರೆ ಹೆಚ್ಚು ಪರಿಣಾಮವುಂಟಾಗುತ್ತದೆ.

'ಲೋ' ಹೆಚ್ಚಾಗಿ ಸಾಮಾಜಿಕ ವಿಷಯಗಳನ್ನೊಳಗೊಂಡ ಚಿತ್ರಗಳನ್ನು ಬರೆಯುವವನು. ಈಗ ಆತನು ಲಾರ್ಡ್ ಬೀವರ್‌ಬ್ರೂಕ್ ಅವರ "Evening Standard" ಪತ್ರಿಕೆಗೆ ಕೆಲಸಮಾಡುತ್ತಿದ್ದಾನೆ. ಆತನು ಸರ್ವತಂತ್ರ ಸ್ವತಂತ್ರ. ಯಾರ ಹಂಗಿಗೂ ಒಳಪಡುವವನಲ್ಲ. ಆತನ "Dead-lock in Indian Politics", "Japanese Balancing Act", "Hitler and other European Statesmen" ಮತ್ತು "Stepping-Stones to Glory" ಎಂಬ ಚಿತ್ರಗಳನ್ನು ನೋಡಿದಾಗ ನಮಗೆ ಆತನ ಪ್ರತಿಭೆಯ ಪರಿಚಯವಾಗುತ್ತದೆ. ಸ್ಥಳ ಸಂಕೋಚದಿಂದ ಲೋವಿನ ವ್ಯಂಗ್ಯಚಿತ್ರಗಳನ್ನು ಇಲ್ಲಿ ಕೊಟ್ಟಿಲ್ಲ. ಕೈಗೆ ಬಂದ ಚಿತ್ರಕಾರರ ರೂಢಿಯನ್ನು ಅನುಸರಿಸದೆ, ಸ್ಫೂರ್ತಿಯುತವಾದ ಸ್ವಂತ ಅಭಿಪ್ರಾಯಗಳನ್ನಿಟ್ಟುಕೊಂಡು ಚಿತ್ರಗಳನ್ನು ಬರೆಯುವುದು ಆತನ ಮಹಿಮೆ. ಈ ಚಿತ್ರಗಳನ್ನು ಗ್ರಹಿಸಬೇಕಾದರೆ, ರಾಜಕೀಯ ವಿಷಯದಲ್ಲಿಯೂ ಪ್ರಪಂಚದ ವಿಧವಿಧವಾದ ನಡತೆಗಳಲ್ಲಿಯೂ ಜನರಿಗೆ ಹೆಚ್ಚು ಪರಿಜ್ಞಾನವಿರಬೇಕು. ಇಲ್ಲದವರಿಗೆ ಅರ್ಥವಾಗುವುದು ಕಷ್ಟ. ಆದರೆ

ಸಾಧಾರಣ ಜನರಿಗೆ ಈ ಕಲೆಯಿಂದ ಉಪಯೋಗವಿಲ್ಲವೇ ಎಂಬ ಒಂದು ಪ್ರಶ್ನೆ ಏಳಬಹುದು? ಈಗ ಪತ್ರಿಕೆಗಳನ್ನೋದುವವರಲ್ಲಿ ನೂರಕ್ಕೆ ಮೂವತ್ತೆರಡರಂತೆ ಜನ ಈ ಕಲೆಯ ರುಚಿಯನ್ನು ಕಂಡಿದ್ದಾರೆ. ಕಾಲಕ್ರಮದಲ್ಲಿ ಈ ಸಂಖ್ಯೆ ಹೆಚ್ಚಬಹುದೆಂಬ ನಂಬಿಕೆಯಿದೆ. ಈ ನಂಬಿಕೆಗೆ ಸಾಕಾದಷ್ಟು ಕಾರಣವೂ ಇದೆ. ಹತ್ತಾರು ವರ್ಷಗಳ ಹಿಂದೆ ಈ ಚಿತ್ರಗಳನ್ನು ನೋಡುವವರು ನೂರಕ್ಕೆ ಒಬ್ಬರಾದರೂ ಇರಲಿಲ್ಲ. ಈಗ ಅದೇ ಸಂಖ್ಯೆ ಮೂವತ್ತೆರಡಕ್ಕೇರಿದೆ. ಯೂರೋಪಿನಲ್ಲಿ ಸಾಧಾರಣವಾಗಿ ಪತ್ರಿಕೆಯನ್ನೋದುವವರ ತಿಳಿವಳಿಕೆಯೂ ಕೊಂಚಮಟ್ಟಿಗೆ ರಾಜಕೀಯ ವಿಷಯಗಳಲ್ಲಿ ಹೆಚ್ಚಾಗಿದೆಯೆಂದೇ ಹೇಳಬೇಕು.

ಈ ಕಲೆಯಲ್ಲಿ ಜಾತಿದ್ವೇಷ, ಮತದ್ವೇಷಾದಿಗಳು ಕಂಡುಬರುವುದಿಲ್ಲ. ಜನರು ಯಾವುದೊಂದನ್ನು ಗೌರವದಿಂದ ಕಾಣುವರೊ ಅದನ್ನು ಹೀಯಾಳಿಸುವುದಿಲ್ಲ. 'ಸಾಹಿತ್ಯದಲ್ಲಿ ವಿಡಂಬನೆಯು ಹೇಗೋ, ಚಿತ್ರಕಲೆಯಲ್ಲಿ ವ್ಯಂಗ್ಯಚಿತ್ರಕಲೆಯು ಹಾಗೆ. ಆದರೆ ನಾವು ನೋಡಿದಂತೆ ವಿಲ್ ಡೈಸನ್ ಅಂತಹವರ ಕೈಯಲ್ಲಿ ಅದು ಹಾಸ್ಯವನ್ನು ಮೀರಿ, ಮಹದ್ಗಾಂಭೀರ್ಯವನ್ನು ತಾಳುತ್ತದೆ. ಮೊನೆಯುಳ್ಳ ಜೀವನ-ವಿಮರ್ಶೆಯಾಗುತ್ತದೆ. ವ್ಯಂಗ್ಯಚಿತ್ರಕಾರನ ಬುದ್ಧಿಯ ಮಟ್ಟ ಬಹಳ ಮೇಲಿನದು. ಅದು ಕವಿಯ ಮಟ್ಟವೆಂದೇ ಹೇಳಬೇಕು. ಇಂತಹ ಚಿತ್ರಗಳನ್ನು ಗ್ರಹಿಸುವ ಶಕ್ತಿ ನಾಗರಿಕನೊಬ್ಬನಿಗೇ. ವ್ಯಂಗ್ಯಚಿತ್ರಕಲೆಯು ಆಧುನಿಕ ಸಮಾಜದ ವೈಚಿತ್ರ್ಯದ ಒಂದು ಪರಿಣಾಮ. ಈ ಕಲೆಯಲ್ಲಿ ಒಂದೇ ಮಾರ್ಗವಲ್ಲ; ಲೋ ಅವರು ಹೇಳುವಂತೆ ಸರಿಯಾದ ಮಾರ್ಗಗಳು ಬಹು ಸಂಖ್ಯೆಯವುಂಟು. ಇದು ಒಂದು ಕಡೆ ಚಿತ್ರವಿಶೇಷ, ಒಂದು ಕಡೆ ವಿನೋದ, ಅಥವಾ ವಿಡಂಬನ; ಮತ್ತೊಂದು ಕಡೆ ವಿಷಯಗಳನ್ನು ಕುರಿತ ವ್ಯಾಖ್ಯಾನ ಮತ್ತು ಬಾಳಿನ ವಿಮರ್ಶೆ. ಹೀಗಾಗಿ ಇದರಿಂದ ಸಮಾಜವು ಎಚ್ಚರಗೊಂಡು ಶುದ್ಧವಾಗಿ ಬೆಳೆಯಲು ಅವಕಾಶವುಂಟಾಗುವುದು.

ಬಿ. ಎಸ್. ಕೇಶವನ್.

## ಚಿರದುಃಖಿನಿ

ಭಾರತದ ಸತ್ಕಥೆಯನಿದುವರೆಗೆ ಅರಿಯದಿಹ
ಭಾರತೀಯರೊಳಾವನೊರ್ವನಿಲ್ಲ।
ಭಾರತವನೋದಿರ್ಪೊಡಾತನಿಗೆ ನಾರಿಮಣಿ
ಗಾಂಧಾರಿ ಎನ್ನುವಳ ಹೆಸರು ಹೊಸದಲ್ಲ॥

ಆದರಾಕೆಯ ಅಂತರಂಗದೊಳು ಸಂತತವು
ಕುದಿವಳಲ ಪರಿಯ ಗಮನಿಸುವರಿಲ್ಲ।
ಕುಂತಿದೇವಿಗೆ ಮರುಗುವಂದದಲಿ ಗಾಂಧಾರಿ
ಗಿನಿತು ಮನಕರಗುವರು ಬಹಳ ಜನರಿಲ್ಲ॥

ವಿಶ್ವದೊಳಗಿನ ಅಳಲು ರಾಶಿರಾಶಿಯು ಸೇರಿ
ಮೂರ್ತಿಯೇ ಇವಳೆಂಬವೊಲು ಜನಕೆ ತೋರಿ।
ಸಂತೋಷ ಲೇಶವನು ಕಡೆತನಕ ಕಾಣದೆಯೆ
ತೊಳಲಿದಳು ಜೀವನದಿ ನಾರಿ ಗಾಂಧಾರಿ॥

ಬುದ್ಧಿಯರಿಯುವ ಮುನ್ನ ತಾಯನಗಲಿದ ಅಳಲು
ಸೋದರನ ಮಾತಿನಲಿ ನಂಬುಗೆಯನಿಟ್ಟು।
ಭಾವಚಿತ್ರವಮೆಚ್ಚಿ ನಿಜವನರಿಯದ ಅಳಲು
ಅಂಧನನು ಕೈವಿಡಿಯೆ ವಿಧಿಗ್ಗೈದ ಗುಟ್ಟು॥

ಅಂದೆ ಕಡೆಯಾದುದವಳಾಸೆ ಸುಖಸಂತೋಷ
ವಂದೆ ಹುಡಿಯಾಯ್ತುವಳ ಕಲ್ಪನೆಯ ನನಸು।
ಅಂದಿನಿಂದಾಕೆಗೈಶ್ವರ್ಯ ಸುಖಸಾಮ್ರಾಜ್ಯ
ವೆಂಬವುಗಳಾಯ್ತು ಬರಿಹಗಲುಗನಸು॥

ತುಟಿಯಲ್ಲೆ ಅಡಗಿದುದು ಸಹಜತರದೆಳನಗೆಯು
ಸುಮ್ಮನೇ ಮಿಡುಕುತಿಹುದವಳ ಜೀವ।

ಏರು ಜೌವನದಾಸೆ ತನುವನೇ ಸುಡುತಿರಲು
ಹೇಳಲಾರಿಗು ತನ್ನ ಮನದ ನೋವ ||

ಆರೊಡನೆ ನುಡಿಯಳುಲ್ಲಾಸದಲಿ ಸಿಂಗರಿಸಿ
ಹಬ್ಬ ಉತ್ಸವವೆಂದು ನಲಿಯದಿಹಳು |
ಆವದೈವವ ಬೇಡಳಾವ ಕೋರಿಕೆಗಳನು
ಆವುದನು ನಿಟ್ಟಿಸದೆ ಕುರುಡಿಯಂತಿಹಳು ||

ಲೇಶಸುಖವರಿಯದಿಹ ತನ್ನ ಬಾಳನು ಜರೆದು
ಮರಣವನು ನಿಶ್ಚಯಿಸಿ ಯಮುನೆಗೈತಹಳು |
ಮರುಗಳಿಗೆಯಲಿ ಪತಿಗೆ ಮೋಸಮಾಳ್ಪುದೆ ಎನುತ
ಚಿಂತಿಸುತ ಹಿಂಜರಿದು ಹಿಂದಿರುಗಿ ಬಹಳು ||

ಕುರುಕುಲದ ವೈಭವಕೆ ಹಿಗ್ಗದಾಕೆಯ ಮನವು
ತಾಯ್ತನದ ಹೆಚ್ಚಳಕೆ ನಲಿಯದಿಹುದು |
ಎಳೆಯತನದಲಿ ತನ್ನ ಕೆಳದಿಯರ ಕೂಡೊಂದು
ದಿನ ನಡೆದ ದೃಶ್ಯವನು ನೆನೆಯುತಿಹುದು ||

ಚಿತ್ರಶಾಲೆಯೊಳಂದು ಪಂಥವೊಂದಿಹುದೆಂದು
ಅಧಿಕ ಉತ್ಸಾಹದಲಿ ಕೆಳದಿಯರು ಕೂಡಿ |
ಬಾ, ನಿನ್ನ ಕೈಚಳಕವನು ತೋರಿಸೆಂದೆನುತ
ಕರೆಯೆ ತಾನೈತಂದಳವರ ಜೊತೆಗೂಡಿ ||

ತನ್ನವೊಲು ಚಿತ್ರವನು ಬರೆವರಾರೆಂದೆನುತ
ಹೆಮ್ಮೆಯಲಿ ಬೀಗಿ ಪಂಥವನು ಸೇರಿ |
ಎಡಬಲವ ದಿಟ್ಟಿಸದೆ ಬರೆಯುತಿರ್ದಳು ಕೈಯ
ಚಳಕದಲಿ ಚಿತ್ರವನು ಚದುರೆ ಗಾಂಧಾರಿ ||

ಚಿತ್ರವನು ಚಿತ್ರಿಸುವ ಪಂಥವನು ಗೆಲಲೆಂದು
ಆತುರದಿ ಕಂಗಳನು ಬರೆಯೆ ಮರೆದಿರಲು |
ಕೆಳದಿಯರು ಕೈಹೊಯ್ದು ನಿನ್ನ ಚಿತ್ರದಬೊಂಬೆ
ಹುಟ್ಟಂಧ ನೋಡೆನುತ ಗಹಗಹಿಸುತಿರಲು ||

ಅಂದಿನಾ ಹುಡುಗಾಟ ಇಂದು ಬಾಳುವೆಯಾಟ
ಸಂದುದೆಷ್ಟೋ ವರ್ಷ ಆ ದೃಶ್ಯ ನಡೆದು |
ಎಂದೆಂದಿಗದು ಚಿತ್ತದಿಂದೆ ಮಾಸದೆ ಇಹುದು
ಬೇರೊಂದ ನೆನೆವುದಕೆ ಅವಕಾಶ ಕೊಡದು |

ನೂರುಮಕ್ಕಳ ಹಡೆದರೇನಾಯ್ತು ಜಗಕವರು
ಕ್ರೂರಾತ್ಮರೆಂದೆನಿಸಿ ಕಣ್ಣಿದಿರಿನಲ್ಲಿ |
ಹರಣವನು ತಾವ್‌ತೊರೆಯೆ ಅವರ ಸತಿಯರ ಭಾಗ್ಯ
ಹರಿಯೆ ಸಹಿಸುವಳೆಂತು ತನ್ನ ಮನದಲ್ಲಿ ||

ಅಂಧಪತಿ ಜೋಡಾಗಿ ಅಳಲುಗಳ ನಾಡಾಗಿ
ಕಣ್ಣಿದ್ದು ಕುರುಡಾಗಿ ಸುಯ್ವುದಡಿಗಡಿಗೆ |
ಕ್ಲೇಶಗಳ ಬೀಡಾಗಿ ಸುತನಷ್ಟಕೀಡಾಗಿ
ತನುವಿಂದೆ ಮರೆಯಾದುದವಳಾತ್ಮ ಕಡೆಗೆ ||

ಎಂ. ಬಿ. ಗೌರಮ್ಮ ಅಚ್ಯುತರಾವ್.

## ಉಬ್ಬು

ಬಾಸುದ್ದ ಕಡಲಲೆಯ ನೋಡಿಯೂ ನೆಗೆಯುವುದು
ತನ್ನಿರವೆ ಹಿರಿದೆಂದು ಕೊಳದ ತುಂತುರ ಹನಿಯು.
ಮೇರುಪರ್ವತವಿರಲು ಹಾಸರೆಯು ಸೆಟೆಯುವುದು.
ಹಿಮವಂತ ಸುಮ್ಮನಿರೆ ಕಣವೆದ್ದು ಕುಣಿಯುವುದು.
ಬಾನೆ ಮೌನದೊಳಿರಲು ಗಿಣಿಲಬಾಯ್ ಮೊಳಗುವುದು.
ಫಲಪುಷ್ಪಭರಿತವಹ ನಂದನವು ಸುಮ್ಮನಿರೆ
ಮರ್ಮರ ನಿನಾದದಿಂ ಹೆಗ್ಗಳಿಕೆ ಕೊಚ್ಚುವುದು
ಬಿದಿರ ಬನ ಹಗಲಿರುಳು. ಲೋಕಕನ್ನವನೀವ
ಭೂಮಿಯಡಿಯೊಳಗಿರಲು ಲೋಕಕಂಟಕವಾದ
ಕಾಡಬಳಗಕೆ ತೌರು ಹೆಚ್ಚೆಟ್ಟು ಉಬ್ಬುವುದು.
ವಿಂಧ್ಯೆ ವಂದಿಸುತಿರಲು ಗಂಗೆ ನೆಲಕಿಳಿಯುತಿರೆ
ಧೂಳು ಗಗನಕೆ ಜಿಗಿದು ಉಗಿಯು ಮುಗಿಲಿಗೆ ನೆಗೆದು
ಹೆಮ್ಮೆ ಕೊಚ್ಚುತ್ತಿಹವು. ಉಬ್ಬು ಉಸಿರಿನ ಅಂಗ;
ಅದಕಿದ್ದ ತಲೆ ಬುಗುಟೆ; ಮಿತಿಮೀರೆ ಒಡೆಯುವುದು.

ಮಾಸ್ತಿ

# ನಮ್ಮ ಸಾಹಿತ್ಯ

(ಒಂದು ಭಗೀರಥ-ವಿಮರ್ಶೆ)

೧

ಇಪ್ಪತ್ತು ವರ್ಷಗಳ ಹಿಂದೆ ಕನ್ನಡ ಪುಸ್ತಕಗಳು ಪ್ರಕಟವಾಗುವ ನಿರೀಕ್ಷಣೆಯನ್ನು ಮಾಡುವಷ್ಟು ಕುತೂಹಲಿಯಾಗಿದ್ದೆ; ಹತ್ತು ವರುಷಗಳ ಹಿಂದೆ ಕನ್ನಡ ಪುಸ್ತಕಗಳನ್ನು ಓದುವುದು ನನ್ನ ಕರ್ತವ್ಯವೆಂದು ತಿಳಿಯುತ್ತಿದ್ದೆ; ಇಂದು ಕನ್ನಡ ಪುಸ್ತಕಗಳನ್ನು ಕಣ್ಣಾರೆ ನೋಡುತ್ತಲಿದ್ದೇನೆ; ಇಷ್ಟೆ. ಅನುಭವಗಳ ಇಂತಹ ಬದಲಾವಣೆಗಳಾಗುವುದಕ್ಕೆ ಅನೇಕ ಕಾರಣಗಳಿವೆ ಎಂಬುದನ್ನು ನಾನು ಬಲ್ಲೆ. ಮೊದಲು ಪುಸ್ತಕಗಳನ್ನು ಕೊಂಡುಕೊಳ್ಳುವ ಹೊಣೆ ನನ್ನದಿರಲಿಲ್ಲ, ನನ್ನ ಹಿರಿಯರದಿದ್ದಿತು. ಮುಂದೆ, ಓದುವಂತೆ ಬರೆಯುವ ಚಟವೂ ಬೆಳೆಯತೊಡಗಿತು. ಈಗ, ಓದುವ ಚಟವಿಲ್ಲ, ಬರೆದುದರ ಲಾಭವಿಲ್ಲ. ಇದೇನೊ ಸಮರ್ಪಕವೆನಿಸಬಹುದಾದ ಕಾರಣಪರಂಪರೆ. ಆದರೆ ಅದನ್ನೆ ಬೇರೊಂದು ದೃಷ್ಟಿಯಿಂದಲೂ ನೋಡಬಹುದಾಗಿದೆ. ಮುಂಚೆ ಹಣದ ಹೊಣೆ ನನ್ನದಿದ್ದಿರಲಿಲ್ಲವಾದ್ದರಿಂದ ಪುಸ್ತಕಗಳನ್ನು ಅಷ್ಟೊಂದು ಪರೀಕ್ಷಿಸಿ ಕೊಂಡುಕೊಳ್ಳಬೇಕಾಗಿರಲಿಲ್ಲ; ಮುಂದೆ ಸ್ವತಃ ಬರೆಯುವವನಾದೆನಾದ್ದರಿಂದ ಪುಸ್ತಕಗಳನ್ನು ತುಲನಾತ್ಮಕ ದೃಷ್ಟಿಯಿಂದ ನೋಡತೊಡಗಿದೆ; ಈಗ ಬರೆದಂತೆ ಹೆಸರು ಗಳಿಸುತ್ತಿರುವೆನಾದ್ದರಿಂದ ಭ್ರಮ-ನಿರಸನೆಯಾಗಲೂ ಪುರಸೊತ್ತಿದೆ. ಅಥವಾ ಇನ್ನೂ ಒಂದು ದೃಷ್ಟಿಯಿಂದ ನೋಡಬಹುದು. ಮುಂಚೆ ಓದುವುದೊಂದು ಹೊಸ ಅನುಭವ ಮಾತ್ರ; ತರುವಾಯ ಹೊಸ ಅನುಭವವನ್ನು ಪಡೆಯಲು ಮಾತ್ರ ಓದುವುದು; ಈಗ ಹೊಸತು ನಿಜವಾಗಿ ಹಳೆಯದೆ ಎಂಬ ಶೋಧ!

ಇಪ್ಪತ್ತು ವರುಷಗಳ ಹಿಂದೆ ನಾನು ಕನ್ನಡ ಪುಸ್ತಕಗಳನ್ನು ಓದುವ ಹಂಬಲವನ್ನಿಟ್ಟುಕೊಂಡಾಗ ಕನ್ನಡದಲ್ಲಿ ಹೊಸ ಸಾಹಿತ್ಯವೆ ನಿರ್ಮಾಣವಾಗುತ್ತಲಿದ್ದಿತು — ಎಂದುಕೊಂಡಿದ್ದೆ. ಆ ಮಾತು ನಿಜವಾಗಿದ್ದಿತು. ಅಂತಹ ಶೈಲಿ, ಅಂತಹ ಕವನ, ಅಂತಹ ಕಲೆ, ಆ ಹುಮ್ಮಸ, ಆ ಎದೆಗಾರಿಕೆ — ಅಂದಿನ ವರೆಗೆ ಕನ್ನಡದಲ್ಲಿರಲಿಲ್ಲ. ಇವೇ ಮೊದಲಾದ ಅನೇಕ ಕಾರಣಗಳಿಗಾಗಿ ಪ್ರಾಂತದ ತುಂಬ ಕನ್ನಡತನ ತಲೆ ಎತ್ತಿತು. ಅದರ ಫಲವಾಗಿ ಕನ್ನಡ ಸಾಹಿತ್ಯವನ್ನು ಅಭಿಮಾನದಿಂದ ಓದತೊಡಗಿದೆ. ಇಂದಿಗೂ ಕನ್ನಡತನ ಹಾಗೆಯೆ ತಲೆ ಎತ್ತಿದೆ. ಆದರೆ ಆ ತಲೆಯ ಕೆಳಗಿನ ಕತ್ತು ಮಾತ್ರ ದಣಿದಂತಾಗಿದೆ. ಅದಕ್ಕಾಗಿ ಇಂದಿನ ಈ ನನ್ನ ಅನಾಸ್ಥೆ.

೨

ಈ ನನ್ನ ಅನುಭವವನ್ನು ಪ್ರಚಾರಕ್ಕಾಗಿ ನಾನಿಲ್ಲಿ ಹೇಳುವುದಿಲ್ಲ. ಆ ಅನುಭವದಿಂದ ನನ್ನ ಮನಸ್ಸಿಗೆ ಎಳ್ಳಷ್ಟೂ ಶಾಂತಿ ಇಲ್ಲ; ಈ ಸಮಯದಲ್ಲಿ ಅಲ್ಲೊಬ್ಬ–ಇಲ್ಲೊಬ್ಬ ಕನ್ನಡಿಗ ನನ್ನ ಅನಾಸ್ಥೆಯನ್ನು ಪಡಿದನಿಸುವಂತೆ ಉಸಿರುವನು. ಅದಕಾಗಿ ಈ ಅನಾಸ್ಥೆಯನ್ನು ಮೂಲತಃ ಚಿಕಿತ್ಸಿಸಬೇಕೆಂದು ನಿರ್ಧರಿಸಿ ಈ ಮಾತುಗಳನ್ನು ಬರೆಯುತ್ತಿದ್ದೇನೆ. ಎಲ್ಲರಂತೆ ನಾನೂ ಒಬ್ಬ ಸಾಮಾನ್ಯ ಕನ್ನಡಿಗ. ಆದ್ದರಿಂದ ಇಂದಿನ ನನ್ನ ಅನಾಸ್ಥೆ ಇಂದಿಲ್ಲ ನಾಳೆ ಮಿಕ್ಕವರಲ್ಲೂ ಮೂಡಬಹುದೆ ಎಂದು ಸಂದೇಹ. ಮೇಲೆ ಕಾಣಿಸಿದ ವೈಯಕ್ತಿಕ ಕಾರಣಗಳಿಗೆ ನಾನು ಹೆಚ್ಚು ಮಹತ್ವವನ್ನು ಕೊಡುವುದಿಲ್ಲ; ಯಾಕೆಂದರೆ, ಇಂದು ಸಾಹಿತ್ಯದ ವಿಷಯಕ್ಕಿದ್ದ ಅನಾಸ್ಥೆ ಇಲ್ಲವೆ ಅಸಂತೋಷ ವೈಯಕ್ತಿಕವಾಗಿ ನನ್ನದೊಬ್ಬನದೆ ಅಲ್ಲ. ಒಂದೆಡೆ ಪ್ರಕಟವಾಗುವ ಪುಸ್ತಕಗಳ ಸಂಖ್ಯೆ, ಇನ್ನೊಂದೆಡೆ ಪ್ರಕಟವಾಗುತ್ತಿರುವ ಗ್ರಂಥಗಳ ಗುಣಯೋಗ್ಯತೆ — ಇವೆರಡೂ ಈ ಅಸಂತೋಷವನ್ನು ಹಬ್ಬಿಸಲು ಪ್ರೋತ್ಸಾಹಕವಾಗಿವೆ.

ಕಳೆದ ಇಪ್ಪತ್ತು ವರ್ಷಗಳಲ್ಲಿ ನಮ್ಮ ಸಾಮಾಜಿಕ ಜೀವನವು ಕ್ರಾಂತಿಕಾರವೃತ್ತಿಯವನನ್ನು ಕೂಡ ಬೆರಗುಗೊಳಿಸುವಷ್ಟು ಬದಲಾಯಿಸಿದೆ. ಸಂಪ್ರದಾಯದ ಸೌಭಾಗ್ಯದಲ್ಲಿ ಶಾಂತಮಯವಾಗಿ ಹಳ್ಳಿಗಳಲ್ಲಿ ಸಾಗುತ್ತಿದ್ದ ಜೀವನವು ಇಂದು ಸಂಪ್ರದಾಯವನ್ನು ಸಡಿಲಿಸಿ, ಅಸಂತೋಷವನ್ನು ಹೆಚ್ಚಿಸಿ, ನಗರದ ಉಸಿರುಗಟ್ಟುವ ರಭಸವನ್ನು ತಾಳಿದೆ. ಹಿಂದಿನಿಂದ ವೈಭವವನ್ನು ನಡೆಸಿಕೊಂಡು ಬಂದು ಸುಖವಾಗಿ ಜೀವನವನ್ನು ಸಾಗಿಸುವವರು ಇಂದು ಆ ವೈಭವವನ್ನು ದುಡಿಮೆಯ ಸಾಸಿಗರ ಕೈಯಲ್ಲಿರಿಸಿ ಹಿಂದು – ಮುಂದಿಲ್ಲದಂತಾಗಿದ್ದಾರೆ. ಇಂದು ಸಿರಿವಂತರ ಜಾತಿ ಬದಲಾಗಿದೆ. ಬಡವರ ಜಾತಿ ದೊಡ್ಡದಾಗಿದೆ. ಆರ್ಥಿಕ ಜೀವನವು ಹಳ್ಳಿಯ ಒಕ್ಕಟ್ಟನ್ನು ಮುರಿದೊಗೆದು ಜಾತಿಯ ಜಗಳಗಂಟುತನಕ್ಕೆ ಸಂಬಂಧಿಸುತ್ತಲಿದೆ. ದೊಡ್ಡ ಮನಸ್ಸು, ದೊಡ್ಡ ಕುಟುಂಬ, ದೊಡ್ಡ ಸಂಪತ್ತು, ದೊಡ್ಡ ಧರ್ಮ — ಪ್ರತಿಯೊಂದೂ ಚಿಕ್ಕದಾಗತೊಡಗಿದೆ. ಇಂದು ದೊಡ್ಡ ಪ್ರಮಾಣದ್ದೆಂದರೆ ರೋಗ ಇಲ್ಲವೆ ಬರಗಾಲ; ಇದು ಇಂದಿನ ನಮ್ಮ ಜೀವನದ ದ್ಯೋತಕವಾಗಿದೆ.

೩

ಜೀವನದ ತಳಹದಿ ಮತ್ತು ಪ್ರಪಂಚ ಇವೆರಡೂ ಹೀಗೆ ಬದಲಾಯಿಸಿದಾಗ ಸಾಹಿತ್ಯ ಯಾವ ರೀತಿಯಲ್ಲಿ ಬದಲಾಯಿಸಿದೆ? ಸಾಹಿತ್ಯವು ಬದಲಾಯಿಸಬೇಕೆಂಬ ಹಟ ನನಗಿಲ್ಲ. ಆದರೆ ಜೀವನಕ್ಕೂ ಸಾಹಿತ್ಯಕ್ಕೂ ನಿಕಟಸಂಬಂಧವಿದೆ ಎಂದು ತಜ್ಞರೂ ಹಿರಿಯರೂ ಕಿವಿ ಗಡುಚಾಗುವಂತೆ ಹೇಳುತ್ತಲಿದ್ದಾರೆ. ಅವರ ಅಭಿಪ್ರಾಯದ

ಆಧಾರಕ್ಕಾಗಿ ನನಗೆ ಮೇಲಿನಂತೆ ಪ್ರಶ್ನೆ ಕೇಳುವ ಧೈರ್ಯ. ಸಾಹಿತ್ಯ ಬದಲಾಯಿಸಿದ್ದನ್ನು ನೋಡೋಣ. ಇಪ್ಪತ್ತು ವರ್ಷಗಳ ಹಿಂದಿನ ಶೈಲಿಯೆ ಇಂದಿಗೂ ಇದೆ; ಅಂದಿನ ಕತೆಗಳು, ಅಂದಿನ ಕವನಗಳು, ಅಂದಿನ ಆ ಎಲ್ಲವೂ ಇಂದಿಗೂ ಕೆಲಮಟ್ಟಿಗೆ ಹಾಗೆಯೇ ಇದೆ, ಕೆಲಮಟ್ಟಿಗೆ ಅನುಕರಣಗೆಟ್ಟಿದೆ. ನಾಗರಿಕ ಜೀವನ, ಆರ್ಥಿಕ ಸಮಸ್ಯೆ, ಸಾಮಾಜಿಕ ಜೀವನದ ಕ್ರಾಂತಿ, ದೇಶಾಭಿಮಾನಕ್ಕಾಗಿ ಇರಬಹುದಾದ ಭಾರತೀಯ ದೃಷ್ಟಿ, ಇಂದಿನ ಕಷ್ಟ—ನಿನ್ನಿನ ನಷ್ಟ; ಇವುಗಳ ಸಂಪರ್ಕವೆ ಇಂದು ನಮ್ಮ ಸಾಹಿತ್ಯಕ್ಕಿಲ್ಲವಲ್ಲ! ಜೀವನವು ಬದಲಾಯಿಸುವಂತೆ ಅದನ್ನು ಚಿತ್ರಿಸಲು ಸಾಹಿತ್ಯವೆಂದರೆ ಫೋಟೊಗ್ರಾಫಿ ಅಲ್ಲ ಎಂದು ಕೆಲವರು ವಾದಿಸಬಹುದು. ಆದರೆ ಸಾಹಿತಿಯಾದವನು ಸಮಕಾಲೀನನು, ಅವನಿಗೆ ಹೃದಯವಿದೆ ಎಂಬ ಕಲ್ಪನೆಯಿಂದ ನಾನು ಹೀಗೆ ಹೇಳುತ್ತಿದ್ದೇನೆ. ನನ್ನ ಆ ಕಲ್ಪನೆಯೇ ತಪ್ಪಿದರೆ ನನ್ನ ಮಾತು ನಿಂತಿತು. ಅಲ್ಲವೆಂದರೆ, ಸಮಾಧಾನಕಾರಕವಾದ ಉತ್ತರ ದೊರೆವವರೆಗೆ ಅದನ್ನೆ ಮತ್ತೆ ಮತ್ತೆ ಕೇಳುವೆ.

ಈ ಸಂದರ್ಭದಲ್ಲಿ ಒಂದು ಮಾತು ನಮ್ಮ ಲಕ್ಷ್ಯವನ್ನೆಳೆಯುವುದು. ಇತ್ತೀಚೆಗೆ ಕನ್ನಡಕ್ಕೆ ವಿಶ್ವಸಾಹಿತ್ಯದಲ್ಲಿರಬೇಕಾದ ಸ್ಥಾನದ ಬಗ್ಗೆ ನಮ್ಮವರಿಗೆ ಹೆಚ್ಚು ವಿವಂಚನೆಯಾದಂತಿದೆ. ಈ ಮಾತಿನಲ್ಲಿ ನಿರ್ಣಯಕೊಡುವ ಅಧಿಕಾರ ನನಗಿದ್ದರೆ ಕನ್ನಡಕ್ಕೆ ಅಗತ್ಯವಾಗಿ ವಿಶ್ವಸಾಹಿತ್ಯದಲ್ಲಿ ಸ್ಥಾನ ದೊರೆಯಬೇಕು ಎನ್ನುವೆ. ಅದಕ್ಕೆ ಕಾರಣವನ್ನೂ ಹೇಳುವೆ: ಅಂದಿನಿಂದ ಇಂದಿನವರೆಗೆ, ಜೀವನ ಬದಲಾಯಿಸಿದರೂ ಕೂಡ, ಹಾಗೆಯೆ ಉಳಿದುಕೊಂಡ ಸಾಹಿತ್ಯ ನಮ್ಮದು. ಎಂದರೆ ಕಾಲಾತೀತ ಇಲ್ಲವೆ ತ್ರಿಕಾಲಾಬಾಧಿತ ಸಾಹಿತ್ಯ ನಮ್ಮದು. ಇಂತಹದಕ್ಕೆ 'ವಿಶ್ವಸಾಹಿತ್ಯ' ಎನ್ನಿಸಿಕೊಳ್ಳುವ ಯೋಗ್ಯತೆ ಇಲ್ಲವೆನ್ನುವುದೆ? ಇದು ಕೇವಲ ನನ್ನದೊಂದು ಮೂದಲಿಕೆಯ ಮಾತು ಎಂದು ಯಾರಾದರೂ ವಾದವನ್ನು ತಪ್ಪಿಸಿಕೊಳ್ಳಬಹುದಾಗಿದೆ. ಅಂತಹರಿಗಾಗಿಯೆ ಸದ್ಯದ ನನ್ನ ಸಮಾಲೋಚನೆಗೆ 'ಭಗೀರಥ-ವಿಮರ್ಶೆ' ಎಂದು ಹೆಸರು ಕೊಟ್ಟದ್ದು. ನಮ್ಮ ಸಾಹಿತ್ಯಗಂಗೆಯನ್ನು 'ಅಧೋಧಃಪದ'ಕ್ಕಿಳಿಸಿದ ಭಗೀರಥನ ಕತೆ ಇದು. ತತ್ತ್ವವನ್ನು, ಸತ್ಯವನ್ನು ಹುಡುಕಲು ಸಾಹಿತ್ಯ ಹೊರಟಿದೆ ಎಂದರೆ ನೀರಿನಂತೆ ಸಮನೆಲವನ್ನು ಹುಡುಕುತ್ತ ಕೊನೆಗೆ ಪಾತಾಳಕ್ಕಿಳಿಯುತ್ತಲಿದೆ ಎಂದು ನನ್ನ ಹೆದರಿಕೆ.

೪

ಇನ್ನು ಮತ್ತೆ ಮೊದಲಿಗೆ ಹೇಳಿದ ಮಾತನ್ನು ಪರೀಕ್ಷಿಸಿ ನೋಡೋಣ. ಇಪ್ಪತ್ತು ವರ್ಷಗಳ ಹಿಂದೆ ಕನ್ನಡ ಸಾಹಿತ್ಯದಲ್ಲಿ ಹೊಸ ಕಳೆ ಬಂದಿತ್ತೆಂದು ನನ್ನ ಅಭಿಪ್ರಾಯವಿದ್ದಿತೆಂದು ಹೇಳಿದೆನಲ್ಲವೆ? ಆಗಿನ ಆ ನನ್ನ ಅಭಿಪ್ರಾಯ ತಪ್ಪಾದುದು,

ಅಂದಿನ ಅನುಭವಶೂನ್ಯತೆಗಾಗಿ ತಪ್ಪುದಾರಿಯನ್ನು ಹಿಡಿಯಿತು ಎಂದು ನಾನೀಗ ಹೇಳುತ್ತಲಿದ್ದೇನೆ. ಇಲ್ಲವಾದರೆ ಇಂದಿನ ಈ ಅಧೋಗಂಗೆಯ ಅವತರಣವೆ ಶಕ್ಯವಿರಲಿಲ್ಲ. ಅಂದಿನ ನಮ್ಮ ಸಾಹಿತ್ಯವು ಚೈತನ್ಯವುಳ್ಳುದಾಗಿದ್ದರೆ ಇಂದು ಸೃಷ್ಟಿಯಲ್ಲಿಯ ಚೇತನಜೀವಿಗಳ ನಿಯಮದಂತೆ ಅದು ಬೇರೊಂದು ಚೈತನ್ಯಜೀವಿಯನ್ನು ಹುಟ್ಟಿಸುತ್ತಿದ್ದಿತು? ಅಂದಿನ ಸಾಹಿತ್ಯವು ಇಂದು ಶವಪ್ರಾಯವಾದರೆ ನನಗೆ ಆಶ್ಚರ್ಯವಿಲ್ಲ, ಅಸಹ್ಯವಿಲ್ಲ, ಅವಹೇಳನವಿಲ್ಲ. ಆದರೆ ತಾನು ಸಾಯುವ ಮುಂಚೆ ಬೇರೊಂದು ಚೈತನ್ಯಯುತ ಸಾಹಿತ್ಯವನ್ನು ನಿರ್ಮಿಸುವಂತೆ ಮಾಡದೆಯೆ ಅದು ಸತ್ತರೆ — ಆಗ ಮಾತ್ರ ಆ ಮುಂಚಿನ ಸಾಹಿತ್ಯವೆ ಸಜೀವವಾಗಿರಲಿಲ್ಲ ಎಂದು ಹೇಳಬೇಕಾಗುವುದು. ಇಂದಿನ ಯುವಕರು ಬರೆಯುವ ಸಾಹಿತ್ಯವೆಂತಹದು? ಹಿಂದಿನ ಹಿರಿಯರು ಗೀಚಿದಂತೆಯೆ! ಇಂದಿನವರು ಕವಿತಿಸುವುದು, ಕತೆಯಿಸುವುದು, ಆಡಿಸುವುದು — ಎಲ್ಲವೂ ಹಿಂದಿನವರ ಅನುಭವಗಳನ್ನೆ! ಹೀಗಿರುವಾಗ ಹಿಂದಿನ — ಇಪ್ಪತ್ತು ವರ್ಷಗಳ ಹಿಂದಿನ — ಸಾಹಿತ್ಯದಲ್ಲಿ ಹೊಸ ಕಳೆ, ನವಚೈತನ್ಯ ಇದ್ದಿತೆಂದು ಹೇಳುವುದು ಹೇಗೆ?

ಆಗ ನಾವು ತಪ್ಪಿದ್ದು ಒಂದು ವಿಷಯದಲ್ಲಿ. ಪುಸ್ತಕಗಳು ಕನ್ನಡದಲ್ಲಿ ಪ್ರಕಟವಾಗುತ್ತಲಿವೆ ಎಂಬುದರಲ್ಲಿ ಮಾತ್ರ ಹೊಸತನವಿದ್ದಿತೆಂಬುದನ್ನು ಮರೆತು ಆ ಪುಸ್ತಕಗಳಲ್ಲಿಯೆ ಏನೊ ಹೊಸ ಜೀವವಿದೆ ಎಂದು ತಿಳಿದುಕೊಂಡೆವು. ಆದರೆ ಕ್ರಮೇಣ ಬೇರೆ ಸಾಹಿತ್ಯಗಳನ್ನು ನೋಡಿದಂತೆ ನಮ್ಮ ಸಾಹಿತ್ಯದಲ್ಲಿ ಹೊಸತನವಿಲ್ಲ ಎಂಬ ಅಸಮಾಧಾನದ ಅನುಭವ ಬಂದಿತು. ಅದನ್ನು ಹಿಂದೊತ್ತಿ ನಮ್ಮ ಸಾಹಿತ್ಯ ಎಂದಿಷ್ಟೆ ವಿಚಾರವನ್ನು ಮುಂದೆ ಮಾಡಿಕೊಂಡು ಅಸಮಾಧಾನವನ್ನು ತೋರಗೊಡದಂತೆ ಎದೆಯುಬ್ಬಿಸಿ ನಡೆದೆವು. ಅಧೋಗಂಗೆಯ ಅವತರಣಕ್ಕೆ ಪ್ರಾರಂಭವಾದುದು ಇಲ್ಲಿಯೆ. ನಮ್ಮ ಸಾಹಿತ್ಯ ಎಂದು '**ನಮ್ಮ**' ಪದದ ಮೇಲೆಯೆ ಜೋರು ಹೆಚ್ಚಾದಂತೆ 'ನಮ್ಮವರ' ಸಂಖ್ಯೆಯೂ ಹೆಚ್ಚಾಯಿತು. ಸಾಹಿತಿಗಳೆಂದು ಮುಂದೆ ಬಾರದೆ 'ನಮ್ಮವರು' ಎಂಬ ಅಭಿಮಾನದ ಆಣೆಯನ್ನಿಟ್ಟುಕೊಂಡೇ 'ಸಾಹಿತಿ'ಗಳ ಪಿಡುಗು ಹಬ್ಬಿತು. ಆಗಲೂ ನಮಗೆ ಎಚ್ಚರ ಬರಲಿಲ್ಲ. ಇನ್ನಿಷ್ಟು ಹೆಮ್ಮೆಯಿಂದ 'ನಮ್ಮವರ'ನ್ನು ಉನ್ನತ ಪದವಿಗೇರಿಸಿದೆವು. ಎಷ್ಟೆಷ್ಟು ಅವರನ್ನು ಎತ್ತರದಲ್ಲಿರಿಸಿದೆವೊ ಅಷ್ಟಷ್ಟು ಸಾಹಿತ್ಯ ಕೆಳಗಿಳಿಯಿತು. ಕೊನೆಗೆ ಮೇಲೇರಿದವರಿಗೆ ಕೆಳಗಿನ ಸಂಬಂಧ ಪೂರ್ತಿಯಾಗಿ ಕಡಿದುಹೋಯಿತು!

೫

ನನ್ನ ವಿಮರ್ಶೆ ಅತಿಶಯೋಕ್ತಿಯದೆನ್ನುವ ಮುಂಚೆ ನಮ್ಮ ಸಾಹಿತ್ಯದ ಮತ್ತು ಸಾಹಿತಿಗಳ ರೂಪನಾಮಗಳನ್ನು ನೆನೆದುಕೊಳ್ಳಬೇಕು. ಅಂದಿನಿಂದ ಇಂದಿನ ವರೆಗೆ

ಬರೆಯುವವರೂ ಸಾಮಾನ್ಯವಾಗಿ ಅವರೆ, ಬರೆಯುವ ಸಾಹಿತ್ಯವೂ ಸಾಮಾನ್ಯವಾಗಿ ಅಂತಹದೆ. ಆದರೆ ಈ ಪರಿಸ್ಥಿತಿಯನ್ನು ಕೆಣಕುವ ತನ್ನ ಅಧಿಕಾರವನ್ನು ಮಾತ್ರ ಜನತೆ ಕಳೆದುಕೊಂಡಿದೆ. ನಮಗೆ ಬೇಕಾದುದನ್ನು ಬರೆಯಿರಿ ಎಂಬ ಜನತೆಗೆ, ನಾವು ಬರೆದದ್ದೆ ನಿಮಗೆ ಬೇಕಿರತಕ್ಕದು ಎಂದು ಹೇಳುವ ಶ್ರೇಷ್ಠತೆಗೆ ನಮ್ಮ ಸಾಹಿತಿಗಳು ಮುಟ್ಟಿದ್ದಾರೆ. ಯಾಕೆನ್ನುವಿರಾ? 'ಈ ಮುಂಚೆ ನಾವು ಬರೆದದ್ದು ನಿಮಗೆ ರುಚಿಸಿತಲ್ಲ? ಆದ್ದರಿಂದ ಅದೇ ನಾವು ಈಗ ಬರೆಯುವುದೂ ನಿಮಗೆ ರುಚಿಸಲೇ ಬೇಕು' ಎಂದು ಈ ಸಾಹಿತಿಗಳ ವಾದ. The public does not know what it wants till it gets it ಎಂದು ರಾಬರ್ಟ್ ಲಿಂಡ್ ಎಂಬ ಆಂಗ್ಲಸಾಹಿತಿ ಹೇಳಿಲ್ಲವೆ? ನಾವು ಬರೆಯುವ ಮುಂಚೆ ಇಂತಿಂತಹದೆ ನಿಮಗೆ ರುಚಿಸುವುದೆಂದು ಹೇಳುವ ಅಧಿಕಾರ ಮತ್ತು ಯೋಗ್ಯತೆ ನಿಮಗಿಲ್ಲ ಎಂದು ಜನತೆಗೆಯೆ ಈ ಸಾಹಿತಿಗಳ ಉಪದೇಶ. ತಮ್ಮ ಉಪದೇಶದ ಮಾತನ್ನು ತಾವೇ ನಂಬಿಕೊಂಡು ಬರೆದುದನ್ನೆ ಬರೆಯುವ ಸಾಹಿತಿಗಳದಾದರೂ ತಪ್ಪೇನು ಎಂದು ಕೆಲವರಿಗೆನ್ನಿಸಬಹುದು.

ಒಪ್ಪುತಪ್ಪಿನ ನಿರ್ಣಯಕ್ಕೆ ನಾನಿಲ್ಲಿ ನಿಂತಿಲ್ಲ. ಒಂದು ಸಂಗತಿಯನ್ನು ಲಕ್ಷ್ಯಕ್ಕೆ ತಂದುಕೊಂಡರೆ ನಿರ್ಣಯಕ್ಕೆ ದಾರಿ ಸುಗಮವಾಗಬಹುದು. ಇಂದಿಗೂ ದಾಸ್ಯ, ದಾರಿದ್ರ್ಯ, ಉಪವಾಸ, ಬರಗಾಲ ಇವುಗಳನ್ನು ಕುರಿತು ಯಾರೂ ಬರೆಯುವುದಿಲ್ಲ ವಲ್ಲ ಎಂದು ಕೆಲವರ ಆಕ್ಷೇಪವಿದೆಯಷ್ಟೆ? ಅದಕ್ಕೆ ನನ್ನದೊಂದೇ ಉತ್ತರ. ಇಂದು ಬರೆಯುವವರಿಗೂ ಈ ಉಪವಾಸ-ಬರಗಾಲಗಳಿಗೂ ಸಂಪರ್ಕವೆ ಇಲ್ಲ. ಅನೇಕ ವರ್ಷಗಳಿಂದ ಬರೆಯುತ್ತಲಿದ್ದ ಇವರಿಗೆ ಬೇರೆ ಬೇರೆ ಕಾರಣಗಳಿಗಾಗಿ ಆ ಸಂಪರ್ಕ ತಪ್ಪಿದೆ. ಕೆಲವರು ಸ್ವಂತದ ಜೀವನದಲ್ಲಿ ಉಪವಾಸ-ಬರಗಾಲಗಳನ್ನು ಮೀರಿ ನಿಂತಿದ್ದಾರೆ. ಬೇರೆ ಕೆಲವರು ಬರೆದು ಹೆಸರನ್ನು ಗಳಿಸಿದ್ದರಿಂದ ಸುತ್ತಲಿನ ಪ್ರಪಂಚದ ಸಂಪರ್ಕ ಅವರಿಗೆ ಅಗತ್ಯವಿಲ್ಲ. ಇನ್ನು ಕೆಲವರು ಉಳಿದ ಆಯುಷ್ಯದ ಅಲ್ಪಾವಧಿಯಲ್ಲಿಯೆ ಹೆಸರನ್ನು ಗಳಿಸಿಕೊಳ್ಳಬೇಕೆಂಬ ಅವಸರದಿಂದ ಕ್ಷಣಿಕ, ನಶ್ವರ ಎನ್ನಿಸಬಹುದಾದ ಉಪವಾಸ-ಬರಗಾಲಗಳನ್ನು ಬಿಟ್ಟು ಶಾಶ್ವತವಾದ ಸತ್ಯವನ್ನು ಹುಡುಕಲು, ಆನಂದಮಯವಾದ ಸೌಂದರ್ಯೋಪಾಸನೆಯನ್ನು ಸಾಧಿಸಲು ಹಾತೊರೆಯುತ್ತಲಿದ್ದಾರೆ. ಉಳಿದ ಅನೇಕರು ಹಿರಿಯರು ತೋರಿಸಿದ್ದೇ ಹಾದಿ ಎಂದು ವಾಹನಪಶುಗಳಂತೆ ಕಣ್ಣುಪಟ್ಟಿಗಳನ್ನು ಕಟ್ಟಿಕೊಂಡು ಸುತ್ತುಮುತ್ತಲಿಗೆ ಕುರುಡ ರಾಗಿದ್ದಾರೆ. ಇದಲ್ಲದೆ ಮುಂದಿನ ಜನ್ಮದ ಭರವಸೆ ಇಲ್ಲದವರಂತೆ ವಿಶ್ವಸಾಹಿತ್ಯದಲ್ಲಿ ಇಂದೇ ಸಾಯುಜ್ಯವನ್ನು ಪಡೆಯಬೇಕೆನ್ನುವವರೂ ಇದ್ದಾರೆ.

೬

ಇವೆಲ್ಲ ಅಭಿಪ್ರಾಯಗಳನ್ನೋದಿ ನಾನೊಬ್ಬ ಮತ್ಸರಜೀವಿ ಇಲ್ಲವೆ ನಿರಾಶಾವಾದಿ ಎಂದು ಅನೇಕರಿಗೆ ತೋರಬಹುದಾಗಿದೆ. ಯಾಕೆಂದರೆ, ಇಂದು ಕನ್ನಡ ಸಾಹಿತ್ಯ ನಿಜವಾಗಿಯೆ ಇಂತಹ ಅವದಸೆಗಿಳಿದಿದೆಯೆ? ಬೇಕೆನಿಸಿದರೆ, ಹೊಸಬರಲ್ಲಿಯೆ ಎಷ್ಟು ಜನ ಸಾಹಿತಿಗಳಿಲ್ಲ? ಹೊಸಹೊಸತಾಗಿ ಬರೆಯುವ ಗ್ರಂಥಗಳಿಗಾದರೂ ಕೊರತೆ ಇದೆಯೆ? ಅದೆಲ್ಲ ನಿಜ. ಬರೆಯುವವರಲ್ಲಿ ವಯಸ್ಸಿನಿಂದ ಕಿರಿಯರಾದುದಕ್ಕೆ ಹೊಸಬರೆಷ್ಟೊ ಜನ ಇದ್ದಾರೆ. ಹೊಸ ಗ್ರಂಥಗಳೂ ಇವೆ. ಅಚ್ಚಿನ ವೊಳೆ, ಮೆಚ್ಚಿನ ಮೇಲೋಲೆ — ಇವೂ ಹೊಸಹೊಸತಾಗಿವೆ. ಆದರೆ ಕೇವಲ ಕಿರಿಯರೆ ಬರೆಯಬೇಕೆಂದೂ ಮೊದಲ ಮುದ್ರಣದ ಪ್ರಕಟನೆಗಳೆ ಹೊರಬೀಳಬೇಕೆಂದೂ ನಾನಿಲ್ಲಿ ವಾದಿಸುವುದಿಲ್ಲ. ಇಂದಿನವರು — ಹೊಸಬರು — ಬರೆಯುವುದರಲ್ಲಿ ಯಾವುದು ಹೊಸತಿದೆ? ಒಬ್ಬೊಬ್ಬರು ಹೊಸ ಶೈಲಿಯನ್ನು ಅನುಸರಿಸಿರಬಹುದು; ಒಬ್ಬಿಬ್ಬರು ಹೊಸ ವೃತ್ತವನ್ನು ಸುತ್ತಿರಬಹುದು; ಒಬ್ಬಿಬ್ಬರು ಹೊಸ ಶಬ್ದಯೋಜನೆಗಳನ್ನು ಸಾಧಿಸಿಕೊಂಡಿರಬಹುದು. ಆದರೆ ಅಷ್ಟಕ್ಕೆಯೆ ಸಾಹಿತ್ಯ ಹೊಸತೆನಿಸಬಹುದೆ? ಆಯರ್ಲಂಡದ ಒಬ್ಬ ರಾಜಕಾರಣ ಪಟುವಿನ ಕಡುವಾತಿನಲ್ಲಿ ಹೇಳುವುದಾದರೆ ಹೆಣಕ್ಕೆ ಹೊಸ ಬಟ್ಟೆಯನ್ನು ಸುತ್ತಿದರೆ ಹೊಸತನ ಬಂದೀತೆ? ಹೊಸತನ ಬೇಕಾದುದು ಹೃದಯದಲ್ಲಿ, ಹೇಳಿಕೆಯಲ್ಲಲ್ಲ.

ಹೃದಯದಲ್ಲಿ ಹೊಸತನವಿರಬೇಕಾದರೆ ಆ ಹೃದಯ ಉಸಿರಾಡಿಸುವ ದೇಹದೊಳಗಿನ ಜೀವಂತ ಹೃದಯವಾಗಿರಬೇಕು, ಪ್ರಯೋಗಶಾಲೆಯಲ್ಲಿ ಕಡಿದುಬಿದ್ದ ಬಿಚ್ಚು-ಹೃದಯವಲ್ಲ. ಜೀವಂತ ಹೃದಯವು ಪ್ರತಿಯೊಂದು ಗಳಿಗೆಯಲ್ಲಿ ಹೊಸತನವನ್ನು ತಾಳುತ್ತಿದೆ, ಬಿಸಿ ನೆತ್ತರವನ್ನು ಹರಿದಾಡಿಸುತ್ತಿದೆ. ಹಾಗಿದ್ದ ಹೃದಯಕ್ಕೇನೆ ಸುಖ-ದುಃಖಗಳಿವೆ, ಸಾವು-ನೋವುಗಳಿವೆ, ಆಶೆ-ನಿರಾಶೆಗಳಿವೆ. ಇವೆಲ್ಲ ದ್ವಂದ್ವವೆಂದು ಹೆದರಿದವನಾಗಲಿ, ಇವುಗಳನ್ನು ಮೀರಬೇಕೆಂದು ಹಾರುವ ತತ್ವಜ್ಞಾನಿಯಾಗಲಿ ಮುಂದಿನ ಜನ್ಮದಲ್ಲಿ ಮೋಕ್ಷವನ್ನು ಪಡೆಯಬಹುದಾದರೂ ಇಂದಿನ ಜನ್ಮದಲ್ಲಿ ಸಾಹಿತಿಯಾಗಲಾರನು. ಸಾಹಿತಿಯ ಹೃದಯವು ಜೀವಸಾಮಾನ್ಯವಾಗಿರಬೇಕು. ಬಡವರನ್ನು ಕಂಡು ಹೆಮ್ಮೆಯಿಂದ ಕಿಸೆಯೊಳಗಿನ ನಾಣ್ಯಗಳನ್ನು ತೂರುವ ಸಿರಿವಂತನು ಸಾಹಿತಿಯಾಗಲಾರನು. ಸಾಹಿತಿಯ ಹೃದಯಕ್ಕೆ ಆತ್ಮೀಯತೆಯ ಕಳಕಳಿ ಇರಬೇಕು. ಅನ್ನವಿಲ್ಲದೆ ಜನರು ಸಾಯುವಾಗ ನೀರಿನ ಅರವಟ್ಟಿಗೆಗಳನ್ನು ನಿಲ್ಲಿಸುವವನು ಸಾಹಿತಿಯಾಗಲಾರನು. ಸಾಹಿತಿಯ ಹೃದಯಕ್ಕೆ ಜೀವದ ಹಂಬಲದ ಅರಿವಿರಬೇಕು. ಹೀಗಿಲ್ಲದ ಸಾಹಿತಿ ಹೃದಯವಿಲ್ಲದ ಸಾಹಿತಿ; ಅವನ ಸಾಹಿತ್ಯ ಸತ್ತ ಸಾಹಿತ್ಯ.

ಆರ್. ವ್ಹಿ. ಜಾಗಿರದಾರ.

# ಚತುರಂಗ

ಚತುರಂಗದ ಅನುಪಯುಕ್ತತೆಯು ಕೆಲವರ ಅಭಿಪ್ರಾಯದಲ್ಲಿ ಸ್ವತಃ ಸಿದ್ಧವಾದ ತತ್ವ. ಪ್ರಾಯಶಃ ಆಂಗ್ಲೇಯರಲ್ಲಿ 'ಚತುರಂಗದಂತೆ ಉಪಯೋಗವಿಲ್ಲದ್ದು' ಎಂಬುದು ಒಂದು ಗಾದೆಯಾಗಿರುವಂತೆಯೂ ತೋರುತ್ತದೆ. ಈ ಅಪಯಶಸ್ಸು ಚತುರಂಗಕ್ಕೆ ಸಲ್ಲದು. ಜೀವನದಲ್ಲಿ ವಿಶ್ರಾಂತಿ, ಕ್ರೀಡೆಗಳಿಗೆ ಸ್ಥಾನ ಸಿಕ್ಕುವುದಾದರೆ ಚತುರಂಗವು ತನ್ನ ಅಸ್ತಿತ್ವಕ್ಕಾಗಿ ಕ್ಷಮೆ ಬೇಡಬೇಕಾಗಿಲ್ಲ. ದೇಹದ ಬೆಳವಣಿಗೆಗೆ ವ್ಯಾಯಾಮವು ಬೇಕೆಂದು ಒಪ್ಪುವುದಾದರೆ ಮನಸ್ಸಿನ ಬೆಳವಣಿಗೆಗೆ ಸಹಾಯಕವಾದ ವ್ಯಾಯಾಮವನ್ನೊದಗಿಸುವ ಚತುರಂಗಕ್ರೀಡೆಗೆ ಶಾಸ್ತ್ರಗಳೊಡನೆ ಸಮಾನಸ್ಕಂಧತೆಯೂ ಸಲ್ಲಬೇಕಾಗಬಹುದು.

'ಚತುರಂಗ' ಎಂದರೆ ನಾಲ್ಕು ಅಂಗಗಳು ಎಂದರ್ಥ. ಆನೆ, ಕುದುರೆ, ರಥ, ಕಾಲಾಳು ಎಂಬ ನಾಲ್ಕು ಅಂಗಗಳನ್ನೊಳಗೊಂಡದ್ದರಿಂದ ಈ ಆಟಕ್ಕೆ ಚತುರಂಗವೆಂದು ಹೆಸರು ಬಂದಿತು. ಮನೆಯೊಳಗೆ ಆಡಬಹುದಾದ ಆಟಗಳಲ್ಲಿ ಇದು ಶ್ರೇಷ್ಠವಾದುದು. ಏಕೆಂದರೆ, ಇತರ ಆಟಗಳಂತೆ ವಿಶ್ರಾಂತಿ ವಿನೋದಗಳನ್ನೊದಗಿಸಿ ಬೇಸರವನ್ನು ಹೋಗಲಾಡಿಸುವುದಲ್ಲದೆ ಮನಸ್ಸಿಗೆ ಸಹನಶಕ್ತಿಯನ್ನೂ ಬಲವನ್ನೂ ಕೊಡುತ್ತದೆ. ಓದು ಬರಹದಲ್ಲಿ ಮನಸ್ಸು ಹೆಚ್ಚು ಕೆಲಸಮಾಡಿದಲ್ಲಿ ಬೇಸರ ಹುಟ್ಟುವುದು ಸ್ವಾಭಾವಿಕ. ಆದರೆ ಚತುರಂಗವನ್ನು ಆಡುವಾಗ ಮನಸ್ಸು ಬಹಳ ಕೆಲಸ ಮಾಡಿದರೂ ಬೇಸರ ಹುಟ್ಟುವುದು ಅಪರೂಪ.

ಆಟಗಳಲ್ಲಿ ಕೆಲವು ಅದೃಷ್ಟಾಂಶವನ್ನು ಒಳಗೊಂಡವು, ಕೆಲವು ಕೇವಲ ಬುದ್ಧಿಬಲದಿಂದಲೇ ಆಡತಕ್ಕವು. ಇಸ್ಪೀಟಿನ ಅನೇಕ ಭೇದಗಳು, ಪಗಡೆ, ಕೇರಂ, ಪಿಂಗ್ ಪಾಂಗ್ ಮೊದಲಾದುವು ಮೊದಲನೆಯ ಪಂಗಡಕ್ಕೂ ಚತುರಂಗ, ಅಷ್ಟಾಪದ (Draughts) ಹುಲಿಕಲ್ಲು ಮೊದಲಾದುವು ಎರಡನೆಯ ಪಂಗಡಕ್ಕೂ ಸೇರುತ್ತವೆ. 'ಲೆತ್ತಬಿದ್ದರೆ ಹುಚ್ಚ ಗೆದ್ದಾನು' ಎಂಬ ಗಾದೆಯು ಎರಡನೆಯ ಪಂಗಡದ ಆಟಗಳಿಗೆ ಅನ್ವಯಿಸುವುದಿಲ್ಲ. ಸೋಲು ಗೆಲವುಗಳು ಆಡುವವನ ಅಧೀನದಲ್ಲೇ ಪೂರ್ತಿ ಇರತಕ್ಕುವು. ಇಂತಹ ಆಟಗಳಲ್ಲಿ ಚತುರಂಗದಲ್ಲಿ ಮಾತ್ರ ಹೆಚ್ಚು ವೈವಿಧ್ಯವೂ ಬುದ್ಧಿಗೆ ಮಹತ್ತಮವಾದ ಅವಕಾಶವೂ ಇರುವುವು. ಆದುದರಿಂದ ಇದನ್ನು ಆಟಗಳ ರಾಜನೆಂದು ಹೇಳಬಹುದಾಗಿದೆ.

ಈ ಆಟದ ಇತಿಹಾಸದ ವಿಷಯದಲ್ಲಿ ಎಣಿಸಲಶಕ್ಯವಾದಷ್ಟು ಅಭಿಪ್ರಾಯ

ಗಳಿವೆ. ಇದನ್ನು ಕಂಡುಹಿಡಿದ ಬುದ್ಧಿವೈಭವವು ಯಾವ ದೇಶಕ್ಕಾಗಲಿ ಗೌರವ ತರತಕ್ಕುದು. ಆದುದರಿಂದಲೇ ಒಂದೊಂದು ದೇಶದವರೂ, ಒಂದೊಂದು ಜನಾಂಗದವರೂ[1] ಇದು ತಮ್ಮಲ್ಲಿ ಹುಟ್ಟಿದ್ದೆಂದು ಹೆಮ್ಮೆ ಪಡುತ್ತಾರೆ. ಇನ್ನು ಕೆಲವರು ಇದನ್ನು ಕಂಡುಹಿಡಿದ ಹಿರಿಮೆಯನ್ನು ಕೆಲವು ಪ್ರಸಿದ್ಧ ವ್ಯಕ್ತಿಗಳಿಗೆ[2] ಆರೋಪಿಸುತ್ತಾರೆ. ಈ ವಿವಿಧ ಮತಗಳ ವಿಷಯವಾಗಿಯೂ ಅವುಗಳಿಗಿರುವ ಆಧಾರ ಬಲದ ವಿಷಯವಾಗಿಯೂ ಅನೇಕ ಲೇಖನಗಳೂ ಗ್ರಂಥಗಳೂ ಹೊರಬಿದ್ದಿವೆ.[3] ಇವುಗಳ ಪರಿಶೀಲನದಿಂದ ಚತುರಂಗದ ಹುಟ್ಟು ಬೆಳವಣಿಗೆಗಳ ವಿಚಾರವಾಗಿ ಕೆಲವು ಸಂಗತಿಗಳನ್ನು ಇಲ್ಲಿ ತಿಳಿಸಲು ಪ್ರಯತ್ನಿಸಿದೆ.

ಚತುರಂಗವು ಹಿಂದೂಸ್ಥಾನದಲ್ಲಿ ಹುಟ್ಟಿತೆಂಬ ವಾದಕ್ಕೇ ಆಧಾರ ಪುಷ್ಕಲ್ಯವಿದೆ. ಗ್ರೀಸ್, ರೋಮ್, ಬ್ಯಾಬಿಲೋನಿಯ ಮೊದಲಾದ ಸ್ಥಳಗಳಲ್ಲಿ ಇದು ಹುಟ್ಟಿತೆಂಬ ವಾದಗಳನ್ನು ಬಿಡಬಹುದು. ಇವು ವಿಚಾರಾರ್ಹವೂ ಅಲ್ಲವೆಂದು ಈಗಾಗಲೇ ತೀರ್ಮಾನವಾಗಿದೆ.[4] ಆದರೆ ಎನ್. ಬ್ಲಾಂಡ್ ಎಂಬವರು ತಮ್ಮ 'ಪರ್ಷಿಯದ ಚತುರಂಗ' ಎಂಬ ಗ್ರಂಥದಲ್ಲಿ ಚತುರಂಗವು ಪರ್ಷಿಯದಲ್ಲಿ ಹುಟ್ಟಿತೆಂದೂ ಅಲ್ಲಿಂದ ಹಿಂದೂಸ್ಥಾನಕ್ಕೆ ಪ್ರವೇಶಿಸಿ ಬಹಳ ಕಾಲದನಂತರ ಪುನಃ ಅಲ್ಲಿಗೇ ಹೋಯಿತೆಂದೂ ಪ್ರತಿಪಾದಿಸಿದರು. ಸರ್ ವಿಲಿಯಂ ಜೋನ್ಸ್, ಹೆಚ್. ಜೆ. ಆರ್. ಮರ್ರೀ ಮೊದಲಾದವರು ಈ ವಿಷಯವನ್ನು ಪುನರ್ವಿಮರ್ಶೆಮಾಡಿ ಚತುರಂಗವು ಹಿಂದೂಸ್ಥಾನದಿಂದಲೇ ಮೊಟ್ಟಮೊದಲು ಪರ್ಷಿಯಕ್ಕೆ ಹೋಯಿತೆಂದು ಭಾಷಾಶಾಸ್ತ್ರದ ಆಧಾರಗಳಿಂದಲೂ ಇತರ ಪರ್ಷಿಯದ ವಾಙ್ಮಯದ ಆಧಾರಗಳಿಂದಲೂ ತೀರ್ಮಾನಿಸಿರುವರು. ಹಿಂದೂಸ್ಥಾನದಲ್ಲಿ ಚತುರಂಗವು ಹುಟ್ಟಿದ ಸಂದರ್ಭವನ್ನೂ ನಾನಾ ವಿಧವಾಗಿ ವರ್ಣಿಸುವುದುಂಟು. ರಾಮನು ಲಂಕೆಯನ್ನು ಮುತ್ತಿದಾಗ ಕಾತರ

---

[1] ಗ್ರೀಕರು, ರೋಮನರು, ಬ್ಯಾಬಿಲೋನಿಯದವರು, ಸಿಥಿಯನರು, ಈಜಿಪ್ಟಿನವರು, ಯೆಹೂದ್ಯರು, ಪರ್ಷಿಯದವರು, ಚೀಣೀಯರು, ಹಿಂದುಗಳು, ಅರೇಬಿಯನರು ಮೊದಲಾದವರು.

[2] ಇವರಲ್ಲಿ ದೊರೆ ಸಾಲೊಮನ್, ಮಂಡೋದರಿ, ಜರ್‌ಕ್ಸೆಸ್ (Xerxes), ಪಾಲಮೆಡಿಸ್ ಎಂಬ ಯವನ ಸೇನಾಧಿಪತಿ, ಹರ್ಮಿಸ್, ಅರಿಸ್ಟಾಟಲ್, ಸಿಸ್ಸನೆಂಬ ಬ್ರಾಹ್ಮಣ, ಪರ್ಷಿಯದ ಜ್ಯೋತಿಷ್ಕ ಪಟ್ರೇನ್ಸ್‌ಚ ಇವರು ಮುಖ್ಯರಾದವರು.

[3] N. Bland : *Persian Chess*; H. J. R. Murray—'*History of Chess*'; Sir Willam Jones in *Asiatic Researches* Vol. II; Van der Linde—*Geschichte und Litteratur Des schachspiels*; *Encyclopaedia Brittanica on Chess; Hindu Chess Columns*, A. A. Macdonell, *J.R.A.S.* 1898 p. 117-141 *Etc.*,

[4] cf. *Encyclopaedia Brittanica on 'Chess'*.

ಗೊಂಡ ರಾವಣನ ಮನಸ್ಸನ್ನು ಅನ್ಯಾಕ್ರಾಂತವನ್ನಾಗಿ ಮಾಡಿ ರಂಜಿಸುವುದ ಕ್ಕೋಸ್ಕರ ಅವನ ಹೆಂಡತಿ ಮಂಡೋದರಿಯು ಈ ಆಟವನ್ನು ಕಂಡು ಹಿಡಿದಳೆಂದು ಒಂದು ಕತೆ. ಇದನ್ನು ನಂಬಿದಲ್ಲಿ ಚತುರಂಗವು ಯುಗಾಂತರದಿಂದ ಬಂದದ್ದೆನ್ನಬೇ ಕಾಗುವುದು. ಒಂದುಪಕ್ಷ ಇದನ್ನು ಕತೆ ಮಾತ್ರವೆಂದು ತಳ್ಳಿದರೂ ಚತುರಂಗವು ಬೌದ್ಧರಲ್ಲಿ ಹುಟ್ಟಿತೆಂದು ಹೇಳಲು ಅವಕಾಶವಿದೆಯೆಂದು ಜರ್ಮನ್ ಶಾಸ್ತ್ರಜ್ಞ ವಾನ್ ಡರ್ ಲಿಂಡೆ ಅವರ ಅಭಿಪ್ರಾಯ. ಅಹಿಂಸಾಪ್ರಿಯರಾದ ಬೌದ್ಧರು ಯುದ್ಧಕ್ಕೆ ಬದಲಾಗಿ ಇದನ್ನು ಕಂಡುಹಿಡಿದು ಸ್ವೀಕರಿಸಿದರೆಂದು ಇವರು ಊಹಿಸುತ್ತಾರೆ. ಯಾವ ಕಾಲದಲ್ಲಿ ಇದು ನಡೆಯಿತೆಂದು ಹೇಳಲು ಕಷ್ಟವೆಂದೂ ಕ್ರಿ.ಶ. ಎಂಟನೆಯ ಶತಮಾನದಲ್ಲಿ ಚತುರಂಗವು ಭಾರತದಲ್ಲಿ ಇದ್ದೇ ಇತ್ತೆಂದೂ ನಿರ್ಣಯಿಸಿರುತ್ತಾರೆ. ಚತುರಂಗವು ಬೌದ್ಧರಲ್ಲಿ ಹುಟ್ಟಿದ್ದೆಂಬ ವಾದಕ್ಕೆ ಒಂದು ಆಧಾರವಿದೆ. ಈ ಆಟದ ವಿಷಯವಾಗಿ ಸಿಕ್ಕುವ ಪ್ರಾಚೀನತಮವಾದ ಗ್ರಂಥವು ಭವಿಷ್ಯಪುರಾಣಾಂತರ್ಗತ ವಾಗಿದೆ.[1] ಅಲ್ಲಿ ಚತುರಂಗವು ವ್ಯಾಸರಿಂದ ಯುಧಿಷ್ಠಿರನಿಗೆ ವರ್ಣಿತವಾಗಿದೆ. ಆ ವರ್ಣನೆಯ ಎರಡು ವಾಕ್ಯಗಳಲ್ಲಿ[2] ಗೌತಮ (ಗೋತಮ) ನ ಹೆಸರು ಬರುವುದರಿಂದ ಗೌತಮನು ಹಿಂದಿನ ಚತುರಂಗದ ಆಚಾರ್ಯರಲ್ಲೊಬ್ಬನಾಗಿದ್ದಿರಬಹುದು. ಕಡೆಯ ಪಕ್ಷ ಬುದ್ಧನ ಅನುಯಾಯಿಗಳೇ ಇದನ್ನು ಕಂಡುಹಿಡಿದು ಪೂಜ್ಯನಾದ ಮೂಲ ಪುರುಷನ ಹೆಸರಿನಲ್ಲಿ ಪ್ರಚಾರಕ್ಕೆ ತಂದಿದ್ದಿರಬೇಕು.

ಸರ್ ವಿಲಿಯಂ ಜೋನ್ಸರವರ ಶೋಧನೆಯು ಇನ್ನೂ ಫಲಕಾರಿಯಾಗಿದೆ. ಭವಿಷ್ಯಪುರಾಣದಲ್ಲಿ ಸಿಕ್ಕುವ ಚತುರಂಗ ವರ್ಣನೆಯನ್ನು ಮೊಟ್ಟಮೊದಲು ಬೆಳಕಿಗೆ ತಂದವರು ಇವರು. ಪಂಡಿತ ರಾಧಾಕಾಂತರವರ ಸಹಾಯವನ್ನು ಪಡೆದು ಅದರ ಅರ್ಥವನ್ನು ಗೊತ್ತುಹಚ್ಚಿ ಇವರು ಚತುರಂಗದ ವಿಚಾರವಾಗಿ ಕ್ರಿ.ಶ. ೧೭೮೫ರಲ್ಲಿ ಒಂದು ಲೇಖನವನ್ನು ಬರೆದರು.[3] ಇದರಿಂದ ಚತುರಂಗವು ಭಾರತೀಯರಲ್ಲೇ

---

[1] ಇದು ಶಬ್ದಕಲ್ಪದ್ರುಮ, ಮತ್ತು ವಾಚಸ್ಪತ್ಯ ಕೋಶಗಳಲ್ಲಿ 'ಚತುರಂಗ' ಎಂಬಲ್ಲಿ ಉದ್ಧೃತವಾಗಿದೆ. ರಘುನಂದನನ 'ತಿಥಿತತ್ವ' ಗ್ರಂಥದಲ್ಲಿ ಸಿಕ್ಕುವ ವರ್ಣನೆಯೂ ಇದೇ ಎಂದು ತೋರುತ್ತದೆ.

[2] ಷಟ್ಪದಂ ನಭವತ್ಯೇವ ಇತಿಗೋತಮ ಭಾಷಿತಮ್ |

. . . . . . . . . . . . .

ಕರಿಷ್ಯತಿ ತಥಾರಾಜನ್ನಿತಿ ಗೋತಮ ಭಾಷಿತಮ್ |

ಈ ಎರಡು ವಾಕ್ಯಗಳಲ್ಲಿ.

[3] cf. *Complete Works*, Vol. iv. ಈ ಗ್ರಂಥಭಾಗವು ಪ್ರೊ. ವೆಬರ್ (Weber) ರವರಿಂದ ಜರ್ಮನ್ ಭಾಷೆಗೂ ಹರಪ್ರಸಾದ ಶಾಸ್ತ್ರಿಗಳವರಿಂದ ಆಂಗ್ಲಭಾಷೆಗೂ ಪರಿವರ್ತನೆ ಹೊಂದಿದೆ.

ಹುಟ್ಟಿದ್ದೆಂದು ಖಂಡಿತವಾಗಿ ಹೇಳುವಂತಾಯಿತು. ಭವಿಷ್ಯಪುರಾಣವು ಹುಟ್ಟುವ ವೇಳೆಗೆ ಚತುರಂಗವು ಪ್ರಚಾರದಲ್ಲಿದ್ದಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಆದರೆ ಭವಿಷ್ಯಪುರಾಣದ ಕಾಲವನ್ನು ನಿಶ್ಚಯಿಸುವುದಕ್ಕೇ ಆಧಾರಗಳು ಸಾಲವು ![1] ಸದ್ಯಕ್ಕೆ ಕ್ರಿ.ಶ. ೪೭೫ರ ವೇಳೆಗೆ ಸೇರಿದ ದಾನಪತ್ರವೊಂದರಲ್ಲಿ ಭವಿಷ್ಯಪುರಾಣದ ವಿಷಯ ಒರುವುದೆಂದೂ ಆಂತರ ಆಧಾರಗಳಿಂದ ಅದನ್ನು ಕ್ರಿ.ಶ. ಮೂರನೆಯ ಶತಮಾನದ್ದೆಂದು ಹೇಳಬಹುದೆಂದೂ ಡಾ. ಎಫ್. ಪಾರ್ಗಿಟರ್‌ರವರು ಅಭಿಪ್ರಾಯಪಡುವುದರಿಂದ[2] ಚತುರಂಗವು ಕ್ರಿ.ಶ. ಮೂರನೆಯ ಶತಮಾನಕ್ಕೆ ಹಿಂದೆ ಹುಟ್ಟಿರಬೇಕೆನ್ನಲು ಯಾವ ತೊಂದರೆಯೂ ಇಲ್ಲ. ಮತ್ತೊಂದು ವಿಚಾರವಿದೆ. ಭವಿಷ್ಯಪುರಾಣದ ಚತುರಂಗವರ್ಣನೆಯು ಈಗಿನ ಚತುರಂಗಕ್ಕೆ ಅನ್ವಯಿಸುವುದಿಲ್ಲ. (ಇದನ್ನು ಮುಂದೆ ವಿಶದಪಡಿಸಲಾಗುವುದು.) ಪ್ರಕೃತ ಇದರಿಂದ ಆಧುನಿಕ ಚತುರಂಗವು ಹೊರಗಿನಿಂದ ಬಂದದ್ದೇ ? ಭಾರತೀಯ ಚತುರಂಗವು ಬೇರೆಯೇ ? ಅದು ಈಗ ಬಳಕೆಯಲ್ಲಿಲ್ಲದಿರುವುದಕ್ಕೆ ಕಾರಣವೇನು ? ಎಂಬೀ ಪ್ರಶ್ನೆಗಳು ಹುಟ್ಟುವುದು ಸಹಜ. ಸರ್ ವಿಲಿಯಂ ಅವರೇನೊ ಸಂಪೂರ್ಣವಾಗಿ ಭವಿಷ್ಯಪುರಾಣವನ್ನೇ ಅವಲಂಬಿಸದೆ ಪರ್ಷಿಯನ್ ಸಾಹಿತ್ಯ ಮತ್ತು ಭಾಷಾಶಾಸ್ತ್ರಗಳ ಆಧಾರದಿಂದಲೂ ಆಧುನಿಕ ಚತುರಂಗವು ಭಾರತೀಯರಲ್ಲೇ ಹುಟ್ಟಿತೆಂದು ಪ್ರತಿಪಾದಿಸಿರುವರು. ಅವರು ಹೇಳುವ ಒಂದು ವಾಕ್ಯವನ್ನು ಇಲ್ಲಿ ಗಮನಿಸಬಹುದು :— . . . . . . the Persians who though as much inclined as other nations to appropriate the ingenious inventions of a foreign people, unanimously agree that the game was imported from the west of India together with the fables of Visṇuśarman in the fifth century A.D.[3] ಇದಲ್ಲದೆ ಫಿರ್ದೂಸಿಯೂ ತನ್ನ ಷಾಹನಾಮಾ ಗ್ರಂಥದಲ್ಲಿ ಚತುರಂಗದ ವಿಷಯವನ್ನೆತ್ತಿ ಅದು ಮೊದಲನೆಯ ಖೊಸ್ರೋ ಅನುಷೀರ್ವನ್ (Chosroes I Anushirvan) ಎಂಬ ದೊರೆಯ ಕಾಲದಲ್ಲಿ ಪರ್ಷಿಯಕ್ಕೆ ವ್ಯಾಪಿಸಿದ್ದನ್ನು ವರ್ಣಿಸಿರುವನು. ಚತ್ರಂಗ್, ಷಟ್ರಂಜ್, ಚೆಸ್ ಮೊದಲಾದ ಪದಗಳು ಚತುರಂಗಪದದಿಂದ ನಿಷ್ಪನ್ನವಾಗುವುವೆಂದು ವಿಲಿಯಂ ಜೋನ್ಸ್ ತೋರಿಸಿದ್ದಾರೆ. ಆದುದರಿಂದ ಈ ಎಲ್ಲ ಆಧಾರಗಳನ್ನೂ ಒಟ್ಟಿಗೆ ವಿಚಾರಮಾಡಿದಲ್ಲಿ

[1] ಆಪಸ್ತಂಬ ಸೂತ್ರದಲ್ಲಿ ಇದರ ವಿಚಾರ ಬರುವುದರಿಂದ ಭವಿಷ್ಯಪುರಾಣವು ಕ್ರಿ.ಪೂ. ೫ನೆಯ ಶತಮಾನಕ್ಕೆ ಸೇರುವುದೆಂದು ಕೆಲವರ ಅಭಿಪ್ರಾಯ. ಆಪಸ್ತಂಬೋಕ್ತವಾದ ಭವಿಷ್ಯಪುರಾಣವು ಈಗ ಉಪಲಬ್ಧವಲ್ಲವೆಂದೂ ಈಗಿನದು ಬೇರೆ ಆಧುನಿಕ ಪುರಾಣವೆಂದೂ ಇತರರ ಅಭಿಪ್ರಾಯ.

[2] *Ancient Indian Historical Tradition.*

[3] Complete Works—Vol. iv. "*On the Indian Game of Chess*".

ಚತುರಂಗವು ಭಾರತೀಯಪ್ರತಿಭಾನಿರ್ಮಿತವೆಂಬುದರಲ್ಲಿ ಯಾವ ಸಂದೇಹವೂ ಉಳಿಯುವುದಿಲ್ಲ.

ಈಗ ಚತುರಂಗದ ಉತ್ಕ್ರಾಂತಿಯು (Evolution) ಹಿಂದೂಸ್ಥಾನದಲ್ಲಿ ಹೇಗೆ ನಡೆಯಿತೆಂಬುದನ್ನು ಪರಿಶೀಲಿಸಬಹುದು. ಭವಿಷ್ಯಪುರಾಣದ ವರ್ಣನೆಯಿಂದ ಪ್ರಾಚೀನ ಚತುರಂಗವು ಹೇಗಿತ್ತೆಂಬುದನ್ನು ಊಹಿಸಲು ಮಾತ್ರ ಸಾಧ್ಯ. ಹೀಗೆಯೇ ಈ ಆಟವನ್ನು ಆಡುತ್ತಿದ್ದಿರಬೇಕೆಂದು ನಿರ್ಣಯಿಸಲು ಸಾಧ್ಯವಿಲ್ಲ. ಹಿಂದಿನ ಚತುರಂಗವನ್ನು ನಾಲ್ಕು ಜನ ಆಡುತ್ತಿದ್ದಿರಬೇಕು.[1] ಒಬ್ಬೊಬ್ಬರೂ ನಾಲ್ಕು ಕಾಲಾಳುಗಳು, ಒಂದು ಆನೆ, ಒಂದು ಕುದುರೆ, ಒಂದು ಹಡಗು, ಒಬ್ಬ ರಾಜ ಇಷ್ಟುಮಾತ್ರದಿಂದ[2] ಆಡುತ್ತಿದ್ದರೆಂದು ಊಹಿಸಬಹುದು. ನಾಲ್ಕು ಪಕ್ಷಗಳಿದ್ದುದರಿಂದ ಪ್ರತಿಯೊಬ್ಬ ಆಟಗಾರನಿಗೂ ಮಿತ್ರಪಕ್ಷ, ಶತ್ರುಪಕ್ಷಗಳು ಇದ್ದಿರಬೇಕು.[3] ಆನೆಯೇ ಹೆಚ್ಚು ಬಲವುಳ್ಳದ್ದೆಂದೂ ಆದುದರಿಂದ (ರಾಜನು ಅರ್ಥಾತ್ ಆಟಗಾರನು) ಎಲ್ಲ ಪ್ರಯತ್ನದಿಂದಲೂ ಆನೆಯನ್ನು ರಕ್ಷಿಸಬೇಕೆಂದೂ ಹೇಳಿದೆ.[4] ಕಾಯಿಂದ ಕಾಯನ್ನು ಕೊಲ್ಲುವ ವಿಧಾನವೂ ಅಲ್ಲಲ್ಲಿ ಸೂಚಿತವಾಗಿದೆ.[5] ಜಯಾಪಜಯಗಳು ದೊರೆಯ ಸಂರಕ್ಷಣೆಯಿಂದ ನಿರ್ಣಯಿಸಲ್ಪಡುತ್ತಿದ್ದುವು. ಆಧುನಿಕ ಚತುರಂಗದಲ್ಲಿ ದೊರೆಯ ಕೊಲೆಯೆಂಬುದಿಲ್ಲ. ಆದರೆ ಹಿಂದೆ ಇದೂ ಇದ್ದಂತೆ ತೋರುತ್ತದೆ.[6] ಪ್ರತಿಪಕ್ಷದ ದೊರೆಯನ್ನು ಕೊಂದು ಅವನ ಸ್ಥಾನವನ್ನು ಆಕ್ರಮಿಸುವುದು ಉದ್ದಿಶ್ಯವಾಗಿದ್ದಂತೆ ತೋರುತ್ತದೆ. ಈ ರೀತಿ ಸ್ವಪಕ್ಷದ ದೊರೆಯು ಮಿತ್ರ ಮತ್ತು ಶತ್ರುಪಕ್ಷಗಳು ಸೇರಿ

---

[1] ಅಷ್ಟಾ ಕೋಷ್ಟಾನ್ ಸಮಾಲಿಖ್ಯ ಪ್ರದಕ್ಷಿಣಕ್ರಮೇಣ ತು
ಅರುಣಂ ಪೂರ್ವತಃ ಕೃತ್ವಾ ದಕ್ಷಿಣೆ ಹರಿತಂ ಬಲಂ ||
ಪಾರ್ಥ ಪಶ್ಚಿಮತಃ ಪೀತಮುತ್ತರೆ ಶ್ಯಾಮಲಂ ಬಲಂ — ಇತ್ಯಾದಿ.

[2] ರಾಜ್ಞೋ ವಾಮೆ ಗಜಂ ಕುರ್ಯಾತ್ತಸ್ಮಾದಶ್ವಂ ತತಸ್ತರಿಮ್
ಕುರ್ಯಾತ್ಕೌಂತೇಯ ಪುರತೋ ಯುದ್ಧೆ ಪತ್ತಿ ಚತುಷ್ಟಯಮ್ ||

ಈಗ ಬಳಕೆಯಲ್ಲಿರುವ ರಥ ಅಥವಾ ಒಂಟೆಗೆ ಬದಲಾಗಿ 'ಹಡಗು' ಚತುರಂಗಗಳಲ್ಲಿ ಒಂದಾಗಿರುವುದು ಗಮನಾರ್ಹ.

[3] ಮಿತ್ರಸಿಂಹಾಸನಂ ಪಾರ್ಥ ಯದಾರೋಹತಿ ಭೂಪತಿಃ

[4] ಮತಂಗಜಸ್ಯಗರ್ವೇಣ ರಾಜಾಕ್ರೀಡತಿ ನಿರ್ಭರಮ್
ತಸ್ಮಾತ್ಸರ್ವಬಲಂ ದತ್ವಾ ರಕ್ಷ್ಯಕೌಂತೇಯ ಕುಂಜರಂ ||

[5] ಅಗ್ರೆ ಏವವಟೀಯಾತಿ ಬಲಂಹಂತ್ಯಗ್ರಕೋಣಗಮ್

[6] ನೃಪೇಣೈವನೃಪಂ ಹತ್ವಾ ಚತೂರಾಜೀಯದಾಭವೇತ್
. . . ಸ್ವಪದಸ್ಥಂ ಯದಾರಾಜಾ ರಾಜಾನಂ ಹಂತಿಪಾರ್ಥಿವ—ಇತ್ಯಾದಿ.

ಒಟ್ಟು ಮೂವರು ದೊರೆಗಳ ಸ್ಥಾನವನ್ನು (ಸಿಂಹಾಸನವನ್ನು) ಆಕ್ರಮಿಸಬಹುದಾಗಿತ್ತು. ಕಡೆಯದಾಗಿ, ಚತುರಂಗವನ್ನು ದಾಳದ ಸಹಾಯದಿಂದ ಆಡಬಹುದಾಗಿತ್ತೆಂದೂ ಇದರಲ್ಲಿ ಅದೃಷ್ಟಾಂಶವು ಕೂಡಿತ್ತೆಂದೂ ಹೇಳಲಾಗಿದೆ.[1]

ಹೀಗೆ ಜೂಜಿನ ಒಂದು ಪ್ರಕಾರ ಮಾತ್ರವಾಗಿದ್ದ ಪ್ರಾಚೀನ ಚತುರಂಗವು ಬದಲಾಯಿಸಿ ಆಲೋಚನಾ ಪ್ರಧಾನವಾದ ಕ್ರೀಡೆಯಾಗಲು ಬಹುಕಾಲ ಹಿಡಿದಿರಬೇಕೆಂದು ಊಹಿಸಲಾಗಿದೆ. ಈ ಬದಲಾವಣೆಗೆ ಕಾರಣವನ್ನು ನಿರ್ಧರವಾಗಿ ಹೇಳುವಂತಿಲ್ಲ. ಬಹುಶಃ ಮನುಧರ್ಮಶಾಸ್ತ್ರದಲ್ಲಿ ಜೂಜನ್ನು ನಿಷೇಧಿಸಿದೀಚೆಗೆ ಚತುರಂಗದ ಸ್ವರೂಪವು ಬದಲಾಯಿಸಿತೆಂದೂ ಹಿಂದೆ ದೈವಬಲದಿಂದ ಆಡಬೇಕಾಗಿದ್ದ ಆಟವು ಬುದ್ಧಿಬಲದಿಂದ ಆಡುವಂತೆ ಪರಿಷ್ಕಾರಗೊಂಡು ಶಾಸ್ತ್ರವಚನವಿರೋಧದ ಪರಿಹಾರವಾಯಿತೆಂದೂ ಹೇಳಲಾಗಿದೆ. ಹೇಗೂ ಈ ಬದಲಾವಣೆಯ ವಿವರಗಳನ್ನೂ ಕ್ರಮವನ್ನೂ ತಿಳಿಯಲು ಆಧಾರಗಳು ಸಾಲವು. ಸ್ವಲ್ಪಕಾಲದ ಮೇಲೆ ಚತುರಂಗಕ್ಕೆ 'ಬುದ್ಧಿಬಲ', 'ಸಾರೀ', 'ಶಾರೀ', 'ಅಷ್ಟಕೋಶೀ' ಎಂಬ ಹೆಸರುಗಳು ಬಳಕೆಗೆ ಬಂದುವು.[2] ಪರಿಷ್ಕೃತವೆಂದು ಹೇಳಲಾಗಿರುವ 'ಬುದ್ಧಿಬಲ'ವೇ ಪಾಶ್ಚಾತ್ಯ ದೇಶಗಳಿಗೆ ಹೋದರೂ ಈ ಆಟಕ್ಕೆ ಅಲ್ಲೆಲ್ಲ 'ಚತುರಂಗ' ಶಬ್ದದಿಂದ ನಿಷ್ಪನ್ನವಾದ ಹೆಸರುಗಳೇ ಬಳಕೆಗೆ ಬಂದಿರುವುದರಿಂದ ಹಿಂದೂಸ್ಥಾನದಲ್ಲಿಯೂ 'ಚತುರಂಗ' ಎಂಬ ಹೆಸರೇ ಪ್ರಧಾನವಾಗಿತ್ತೆಂದು ಹೇಳಬಹುದು.

ಚತುರಂಗ ಅಥವಾ ಬುದ್ಧಿಬಲವು ಕ್ರಿ.ಶ. ಐದನೆಯ ಶತಮಾನದಲ್ಲಿ ಹಿಂದೂಸ್ಥಾನದಿಂದ ಪರ್ಷಿಯಕ್ಕೆ ತಿಳಿಸಲ್ಪಟ್ಟಿತು. ಕನ್ಯಾಕುಬ್ಜದ ಪ್ರಸಿದ್ಧ ವೈದ್ಯನಾದ ಬೊರ್ಜು ಎಂಬುವನ ಮೂಲಕ ಇದು ನಡೆಯಿತೆಂದು ಫಿರ್ದೂಸಿಯು ತಿಳಿಸುತ್ತಾನೆ.[3] ಕ್ರಿ.ಶ. ೯೫೦ರಲ್ಲಿ ಪ್ರಸಿದ್ಧನಾಗಿದ್ದ ಅರೇಬಿಯದ ಸಾಹಿತಿ ಮಸೂದಿಯು ಚತುರಂಗದ ಪ್ರಸ್ತಾಪವನ್ನೆತ್ತಿ ಇದು ಬಹಳ ಹಿಂದಿನಿಂದ ಬಳಕೆಯಲ್ಲಿತ್ತೆಂದು ಹೇಳಿರುವುದು ಮೇಲಿನ ಊಹೆಯನ್ನು ಬಲಗೊಳಿಸುವುದು. ಪರ್ಷಿಯದಲ್ಲಿ ಚತುರಂಗದ ಹೆಸರು 'ಚತ್ರಂಗ್' ಆಯಿತು. 'ರಥ'ದ ಹೆಸರು 'ರೋಖ್' ಆಯಿತು. ಷಾ (= ದೊರೆ), ಮಾತ್ (= ಸತ್ತ) ಮೊದಲಾದ ಶಬ್ದಗಳು ಬಳಕೆಗೆ ಬಂದವು. ಕ್ರಿ.ಶ.

---

[1] ದ್ವಿಗುಣಂ ವಾಹಯೇತ್ಪಣ್ಯಂ, . . . ವಾಹಯೇಚ್ಚ ಚತುರ್ಗುಣಂ, ಇತ್ಯಾದಿ.

[2] ಡಾ. ಮನೋಮೋಹನ್ ಘೋಷ್ ಮತ್ತು ಪ್ರೊ. ಚಿಂತಾಹರಣ್ ಚಕ್ರವರ್ತಿ ಇವರ ಸಂಶೋಧನೆಗಳು ಇದಕ್ಕೆ ಸಹಕರಿಸುತ್ತವೆ. ವಿಕ್ರಮಾಂಕದೇವಚರಿತೆಯಲ್ಲಿ ಚತುರಂಗಕ್ಕೆ 'ಬುದ್ಧಿಬಲ'ವೆಂದು ವ್ಯವಹಾರವಿದೆ.

[3] ವಿವರಗಳಿಗೆ *J.B.B.R.A.S.* xix ಪುಟ ೨೨೮–೨೩೬ ನೋಡಿ.

ಏಳನೆಯ ಶತಮಾನದಲ್ಲಿ ಪರ್ಶಿಯವನ್ನು ಅರೇಬಿಯದ ಕಲೀಫರು ಆಕ್ರಮಿಸಿದಾಗ ಚತುರಂಗವು ಅರೇಬಿಯಕ್ಕೆ ಹಬ್ಬಿತು. 'ಚತ್ರಂಗ್' 'ಷಟ್ರಂಜ್' ಆಯಿತು. ಅಲ್ಲಿಂದಾಚೆ ಯಾವ ಯಾವ ಸಂದರ್ಭಗಳಲ್ಲೋ,.ಸುಮಾರು ಹತ್ತನೆಯ ಶತಮಾನದ ವರೆಗಿನ ಅವಧಿಯಲ್ಲಿ ಯೂರೋಪಿನ ಅನೇಕ ಭಾಗಗಳಿಗೆ ವ್ಯಾಪಿಸಿತು. ಮಹಮದೀಯ ಯೋಧರ ಮೂಲಕ ಸ್ಪೇಯಿನಿಗೂ, ಬೈಜ಼ಾಂಟೈನರಿಂದ ಇಟಲಿಗೂ ಅಲ್ಲಿಂದ ಇತರ ಸ್ಥಳಗಳಿಗೂ ಹರಡಿರಬೇಕು. ಪರ್ಶಿಯದ ಷಾ, ಮತ್‌ಗಳು ಯೂರೋಪಿನಲ್ಲಿ ಚೆಕ್ (Check) ಮೇಟ್ (Mate) ಎಂದೂ 'ರೋಖ್' ಎಂಬುದು 'ರುಕ್' (Rook) ಎಂದೂ ಆದುವು. ಹೀಗೆಯೇ 'ಷಟ್ರಂಜ್' ಎಂಬುದು 'ಚೆಸ್' (Chess) ಎಂದು ಬದಲಾದುದಕ್ಕೂ ಉಪಪತ್ತಿ ಹೇಳುವುದುಂಟು. ಈ ಸಂಚಾರದ ಪರಿಣಾಮವಾಗಿ ಚತುರಂಗದ ಆಟದಲ್ಲಿ ಉಂಟಾದ ಬದಲಾವಣೆಗಳಲ್ಲಿ ಮುಖ್ಯವಾದುವನ್ನು ಇಲ್ಲಿ ಗಮನಿಸಬಹುದು.

ಹಿಂದೂಸ್ಥಾನದ ಪ್ರಾಚೀನ ಚತುರಂಗದಲ್ಲಿ ರಾಣಿ (ಮಂತ್ರಿ ಎಂದೂ ಕರೆಯುವುದುಂಟು) ಇರಲಿಲ್ಲ.[1] ಬಲಗಳಲ್ಲಿ ಆನೆಯು ಎಲ್ಲಕ್ಕಿಂತ ಮುಖ್ಯವಾಗಿದ್ದಂತೆ ತೋರುತ್ತದೆ. ಆದರೆ ಪಾಶ್ಚಿಮಾತ್ಯ ದೇಶಗಳಲ್ಲಿ ರಾಣಿಯೊಂದು ಸೇರಿಸಲ್ಪಟ್ಟು ಆಟದಲ್ಲಿ ಹೊಸಹೊಸ ವೈವಿಧ್ಯಗಳಿಗೆ ಅವಕಾಶವಾಯಿತು. ಇಲ್ಲಿನ ಸಂಪ್ರದಾಯಕ್ಕನುಸಾರವಾಗಿ ರಾಜನಿಗೆ ಕೊಡಬಹುದಾಗಿದ್ದ 'ಅಶ್ವಗತಿ'[2]ಗೆ ಬದಲಾಗಿ 'ಕ್ಯಾಸಲಿಂಗ್'[3] ವಿಧಾನವು ಅಂಗೀಕೃತವಾಯಿತು. ದೊರೆಯನ್ನು ಕೊಲ್ಲಕೂಡದೆಂದೂ ಕೊಲೆಯಿಂದ ತಪ್ಪಿಸಿಕೊಳ್ಳಲಾಗದೆ ಆಗುವುದೇ ಸೋಲೆಂದೂ ಒಪ್ಪಲಾಯಿತು. ಕುದುರೆ, ದೊರೆ ಇವುಗಳನ್ನು ಬಿಟ್ಟು ಮಿಕ್ಕ ಕಾಯಿಗಳ ನಡೆಯಲ್ಲಿ ಸ್ವಲ್ಪ ಬದಲಾವಣೆಗಳಾದುವು. ಒಟ್ಟಿನಲ್ಲಿ ಆಟವು ಹೆಚ್ಚು ಚಮತ್ಕಾರಕರವಾಗಿ ಪರಿಣಮಿಸಿದ್ದರೂ ಪ್ರಾಚೀನ ಆಟದಲ್ಲಿದ್ದ ಬಿಗಿಯು ಸ್ವಲ್ಪ ಕಡಿಮೆಯಾದಂತಾಗಿ ಆಟವು ಜಾಗ್ರತೆ ಮುಗಿಯುವಂತೆಯೂ ಸೋಲು ಗೆಲವು ನಿಖರವಾಗಿ ನಿಶ್ಚಿತವಾಗುವುದಕ್ಕೆ ಹೆಚ್ಚು ಅನುಕೂಲವಾಗು

---

[1] ಈಚೆಗೆ ಸ್ವಲ್ಪಕಾಲ ಎರಡು ದೊರೆಗಳನ್ನಿಟ್ಟುಕೊಂಡು ಆಡುವ ಸಂಪ್ರದಾಯವಿತ್ತೆಂದೂ ಅನಂತರ ಒಂದು ಮಂತ್ರಿಯಾಯಿತೆಂದೂ ಹೇಳಲಾಗಿದೆ.

[2] 'ಅಶ್ವಗತಿ'ಯೆಂದರೆ ಕುದುರೆಯಂತೆ ನಡೆಯುವ ಶಕ್ತಿ. ದೊರೆಯು ಸ್ಥಾನಚ್ಯುತವಾಗುವುದಕ್ಕೆ ಮುಂಚೆ ಒಂದು ಆಟದಲ್ಲಿ ಒಂದುಸಲ ಕುದುರೆಯಂತೆ ನಡೆಯಬಹುದಾಗಿತ್ತು.

[3] ದೊರೆಯಾಗಲಿ ಆನೆಯಾಗಲಿ ಸ್ಥಾನಚ್ಯುತಿ ಹೊಂದುವುದಕ್ಕೆ ಮುಂಚೆ ಒಂದು ಆಟದಲ್ಲಿ ಒಂದೇ ಸಲಕ್ಕೆ ದೊರೆಯು ಎರಡು ಮನೆ, ಆನೆಯು ಎರಡು ಅಥವಾ ಮೂರು ಮನೆ, ನಡೆಯುವಿಕೆ. ದೊರೆ ಬಲಗಡೆಗೆ ಎರಡು ಮನೆ ನಡೆದಾಗ ಆನೆಗೂ ಎಡಗಡೆಗೆ ಎರಡು ಮನೆ; ಎಡಗಡೆಗೆ ಎರಡು ಮನೆ ನಡೆದಾಗ ಆನೆಗೆ ಬಲಗಡೆಗೆ ಮೂರು ಮನೆ ಎಂದು ನಿರ್ಣಯ. ಇದಕ್ಕೆ ದೊರೆಗೂ ಆನೆಗೂ ಮಧ್ಯದ ಮನೆಗಳು ಬಿಡುವಾಗಿರಬೇಕು.

ವಂತೆಯೂ ನಿಯಮಗಳು ಸಡಿಲವಾದಂತೆ ತೋರುತ್ತದೆ.[1] ನಮ್ಮ ದೇಶದಲ್ಲಿ ಒಂದೊಂದು ಆಟವನ್ನೂ ಬಹು ದೀರ್ಘಕಾಲ[2] ಆಡಿದ ವರದಿಗಳು ಇವೆ. ನಿಯಮಗಳು ಕಠಿನ ವಾಗಿದ್ದು ಆಟವು ಅಭಿಪ್ರೇತವಾದ ಮಾರ್ಗದಲ್ಲಿಯೇ ಕೊನೆಗಾಣಬೇಕೆಂಬ ಹಟದಿಂದ ಸಾಗುತ್ತಿದ್ದು ವಿಜಯ, ಈಷದ್ವಿಜಯ,[3] ಅನಿಶ್ಚಯ,[4] ಸೋಲು ಎಂಬ ನಾಲ್ಕು ಪ್ರಕಾರಗಳಲ್ಲೊಂದರಿಂದ ಕೊನೆಗಾಣುತ್ತಿದ್ದುದಕ್ಕೂ ಆಧಾರಗಳಿವೆ.

ಹಿಂದೂಸ್ಥಾನದಲ್ಲಿ ಚತುರಂಗದ ಮಧ್ಯಕಾಲದ ಬೆಳವಣಿಗೆಯನ್ನು ರೇಖಿಸು ವುದಕ್ಕೆ ಆಧಾರಗಳು ಸಾಲವು. ಚತುರಂಗ ಅಥವಾ ಬುದ್ಧಿಬಲವು ಎಲ್ಲೆಲ್ಲೂ ಪ್ರಚಾರದಲ್ಲಿತ್ತೆಂದೂ ಯಾವ ನಿಯಮಗಳಿಂದಲೂ ಇದಕ್ಕೆ ಪ್ರತಿಬಂಧಕವಿರಲಿಲ್ಲ ವೆಂದೂ ಹೇಳಬಹುದು. ಜೂಜಿನ ಆಟಗಳಿಗೆ ಮಾತ್ರ ಪ್ರತಿಬಂಧಕವಿದ್ದಿರಬೇಕು. ಚತುರಂಗವು ಈ ದಶೆಯನ್ನು ದಾಟಿದ್ದರಿಂದ ಇದಕ್ಕೆ ಮೇಲ್ಮೆ ಬಂತು. ಬುದ್ಧಿಯು ಚುರುಕಾಗುವುದಕ್ಕೆ ಇದು ಸಹಾಯಮಾಡುತ್ತದೆಂಬುದು ಅಂಗೀಕೃತವಾಯಿತು. ಸುಮಾರು ೧೦, ೧೨, ೧೫, ೧೬ನೆಯ ಶತಮಾನಗಳಿಗೆ ಸೇರಿದ ಕೆಲವು ಚತುರಂಗ ಗ್ರಂಥಗಳೂ ಈಚೆಗೆ ಸಿಕ್ಕಿವೆ. ಕೆಲವು ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿ ರಚಿತ ವಾಗಿ ಉತ್ಕೃಷ್ಟವಾದ ವ್ಯಾಖ್ಯಾನಗಳಿಂದಲೂ ಕೂಡಿವೆ. ಇವುಗಳಲ್ಲಿ ಚತುರಂಗ ದೀಪಿಕೆ, ಚತುರಂಗ ತರಂಗಿಣೀ, ವಿಲಾಸಮಣಿಮಂಜರೀ ಮೊದಲಾದುವು ಪ್ರಸಿದ್ಧ ವಾಗಿವೆ. ಚತುರಂಗದ ಇಲ್ಲಿನ ಬೆಳವಣಿಗೆಯಲ್ಲಿ ಒಂದೆರಡು ಮುಖ್ಯಾಂಶಗಳಿವೆ. ಇಬ್ಬರು ಕುಳಿತು ಆಟವಾಡಿ ಸೋಲುಗೆಲವುಗಳನ್ನು ನಿಶ್ಚಯಿಸಿಕೊಳ್ಳುವುದರ ಜೊತೆಗೆ ವಿವಿಧವಾದ ಸಮಸ್ಯೆಗಳನ್ನು ಕಂಡುಹಿಡಿಯುವುದೂ ಅವುಗಳ ಪೂರಣದಲ್ಲಿ ಸ್ಪರ್ಧೆಯೂ ಬಳಕೆಗೆ ಬಂದುವು. ೬೪ ಮನೆಯ ಚತುರಂಗದ[5] ಜೊತೆಗೆ ೧೦೦ ಮತ್ತು ೧೪೪ ಮನೆಯ ಚತುರಂಗಗಳೂ ಆಡುವವರ ಮನಸ್ಸನ್ನಾಕರ್ಷಿಸಿದುವು. ತ್ರೈಮೂರ

[1] ಇದಕ್ಕೆ ಒಂದು ನಿದರ್ಶನವನ್ನು ಮಾತ್ರ ಇಲ್ಲಿ ಗಮನಿಸಬಹುದು. ಭಾರತೀಯ ಸಂಪ್ರ ದಾಯದಲ್ಲಿ ದೊರೆಗೆ ಅಂಗರಕ್ಷಣೆಗಾಗಿ ಎರಡು ಕಾಲಾಳುಗಳನ್ನೋ ಒಂದು ಬಲವನ್ನೋ ಬಿಡಬೇ ಕೆಂದೂ ಮಿಕ್ಕದ್ದೆಲ್ಲ ಅಳಿದಮೇಲೆ ಇವನ್ನು ಯಾವ ಕಾರಣದಿಂದಲೂ ಕೊಲ್ಲಕೂಡದೆಂದೂ ನಿಯಮ ವಿತ್ತು. ಆದರೆ ಈಗಿನ ಆಟದಲ್ಲಿ ದೊರೆಗೆ ಈ ಗೌರವವಿಲ್ಲದಿರುವುದರಿಂದ ಒಂದು ಕಾಯನ್ನೂ ಬಿಡದೆ ಎಲ್ಲವನ್ನೂ ಕೊಂದು ಪ್ರತಿಪಕ್ಷದವನನ್ನು ಸುಲಭವಾಗಿ ಸೋಲಿಸುವುದಕ್ಕೆ ಅವಕಾಶವಾಗಿದೆ.

[2] ತಿಂಗಳುಗಟ್ಟಲೆ, ಕೆಲವುವೇಳೆ ವರ್ಷಾಂತರ ಕೂಡ.

[3] ಅಭಿಪ್ರೇತವಾದ ರೀತಿಯಲ್ಲಿ ವಿಜಯವು ಸಾಧ್ಯವಾಗದಿದ್ದರೂ ಇತರ ವಿಧವಾಗಿಯಾದರೂ ವಿಜಯವು ಲಭಿಸುವಂತಿದ್ದರೆ ಅದು ಈಷದ್ವಿಜಯ.

[4] Drawn ಎಂಬ ಸಮ ಆಟ, ಆಟವು ಮುಂದುವರಿಯಲು ಸಾಧ್ಯವಿಲ್ಲದೆ ಹೋಗುವುದು— ಈ ಎರಡೂ ಅನಿಶ್ಚಯದ ಪ್ರಕಾರಗಳು.

[5] ೮ × ೮ = ೬೪ ಮನೆಯುಳ್ಳ ಹಾಸಿನಲ್ಲಿ ಆಡುವುದು.

ನಿಗೆ ೧೦೦ ಮನೆ ಚತುರಂಗದಲ್ಲಿ ಬಹಳ ಅಭಿರುಚಿ ಇತ್ತಂತೆ. ಇದಲ್ಲದೆ, ಆಟದಲ್ಲಿ ದೊರೆಯನ್ನು ಕಟ್ಟಿಹಾಕಿ ಸೋಲಿಸುವುದಕ್ಕೆ ಅನೇಕ ಮಾರ್ಗಗಳಿದ್ದರೂ ಕಾಲಾಳಿನಿಂದ ಧೊರೆಯನ್ನು ಕಟ್ಟಿಹಾಕುವುದರಲ್ಲೇ[1] ಕುಶಲತೆಯೆಂದು ಸಂಬಲಾಯಿತು. ಅದರಲ್ಲೂ ಮೊದಲೇ ನಿರ್ಧರಿಸಿದ[2] ಯಾವುದಾದರೊಂದು ಕಾಲಾಳಿಂದಲೇ ಕಟ್ಟಿಹಾಕುವುದೂ ಸ್ಪರ್ಧೆಯ ಅಂಶವಾಗುತ್ತಿತ್ತು. ಕೌಶಲ ಪ್ರದರ್ಶನಮಾಡುವ ಧೋರಣೆಯಿಂದ ಒಂದು ಅಥವಾ ಎರಡು ಬಲಗಳನ್ನೋ ಕಡೆಗೆ ಮಂತ್ರಿಯನ್ನೋ ಬಿಟ್ಟು ಆಡುವುದೂ ಪ್ರಚಾರದಲ್ಲಿತ್ತು. ಸಮಸ್ಯೆಗಳ ಪೈಕಿ ಹಾಸಿನ ಮನೆಗಳನ್ನು ಕುದುರೆ ನಡೆಯಿಂದ ತುಂಬುವುದು ಬಹಳ ಮುಖ್ಯವಾಗಿತ್ತು. ಹಾಸಿನಲ್ಲಿ ಗೊತ್ತಾದ ಕೆಲವು ಮನೆಗಳಿಗೆ ಕುದುರೆಯ ನಡೆಯು ಸಾಧ್ಯವಾಗಬೇಕಾದರೆ ಎಲ್ಲಿಂದ ಪ್ರಾರಂಭಿಸಬೇಕು ? ಹೇಗೆ ಮುಂದುವರಿಯಬೇಕು ? ಎಂಬ ವಿಷಯಗಳನ್ನು ನಿರ್ಧರಿಸುವುದಕ್ಕೆ ಬಹಳ ಚಾತುರ್ಯ ಬೇಕಾಗುತ್ತದೆ. ಇದರಲ್ಲಿ ಕೂಡ ಹಾಸಿನಲ್ಲಿ ಯಾವುದಾದರೊಂದು ಚಿತ್ರದ ಆಕಾರಕ್ಕೆ[3] ಎಷ್ಟು ಮನೆಗಳು ಸೇರುತ್ತವೆಯೋ ಅವುಗಳಲ್ಲಿ ಮಾತ್ರ ಅಶ್ವಗತಿಯನ್ನು ನಡೆಸುವುದು ಸೂಕ್ಷ್ಮತರವಾದ ಕೆಲಸ. ಇದು ಕಷ್ಟಸಾಧ್ಯ. ನಾನಾ ವಿಧವಾದ ಹಾಸುಗಳಲ್ಲಿ ಇಂತಹ ಅಶ್ವಗತಿ ಸಮಸ್ಯೆಗಳನ್ನು ಪೂರ್ಣಗೊಳಿಸಿ ಅನೇಕ ಗ್ರಂಥಗಳನ್ನು ರಚಿಸಲಾಗಿದೆ. ಒಟ್ಟಿನಲ್ಲಿ ಅಶ್ವಗತಿ ಸಮಸ್ಯೆಯು ಸಾಹಿತ್ಯದ ಚಿತ್ರಬಂಧ ಕೌಶಲವನ್ನು ನೆನಪಿಗೆ ತರುತ್ತದೆ.

ಮೈಸೂರಿನಲ್ಲಿ ಕಳೆದ ಶತಮಾನದಲ್ಲಿ ಚತುರಂಗವು ಬಹಳ ಆದರಣೀಯವಾಗಿತ್ತೆಂದು ಹೇಳಬಹುದು. ಕೀರ್ತಿಶೇಷರಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ಈ ಆಟದಲ್ಲಿ ವಿಶೇಷವಾದ ಅಭಿರುಚಿ ಇದ್ದುದಕ್ಕೆ ಈಗಲೂ ಅನೇಕ ಕುರುಹುಗಳು ಸಿಕ್ಕುತ್ತವೆ.[4] ಅಶ್ವಗತಿ ಸಮಸ್ಯೆಗಳನ್ನು ಪೂರ್ಣಗೊಳಿಸುವುದರಲ್ಲಿ ವಿಶೇಷವಾದ ಪಾಂಡಿತ್ಯವೂ ವಿವಿಧವಾದ ಸಮಸ್ಯೆಗಳನ್ನು ಪೂರ್ಣಗೊಳಿಸಿ ತಂದ ಅಭಿಜ್ಞರಿಗೆ ಉದಾರವಾದ ಬಹುಮಾನ ಕೊಡುವ ರಸಿಕತೆಯೂ ಇವರ ಅಸಾಧಾರಣವಾದ

[1] Pawn-mate (ಪ್ಯಾದೆ ಮಾತು) ಎಂಬ ವಿಧಾನ.

[2] ಕಾಲಾಳಿನ ಮೇಲೆ ಒಂದು ಸುಣ್ಣದ ಬೊಟ್ಟನ್ನಿಟ್ಟು ಇದನ್ನು ಸೂಚಿಸುತ್ತಿದ್ದರು. ಇದಲ್ಲದೆ ಗೊತ್ತಾದ ಒಂದು ಮನೆಯಲ್ಲೇ Pawn-mate ಅನ್ನು ಮಾಡುವುದಾಗಿಯೂ ಪ್ರತಿಜ್ಞೆಮಾಡಬಹುದಾಗಿತ್ತು.

[3] ಹಸು, ಕಲ್ಪವೃಕ್ಷ, ಹಾವು, ಶ್ರೀಕೃಷ್ಣ, ಶಿವಲಿಂಗ, ಬಸವೇಶ್ವರ, ಕಾಮಧೇನು ಮೊದಲಾದುವನ್ನು ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರವರ ಚತುರಂಗ ಸಾರಸರ್ವಸ್ವದಲ್ಲಿ ನೋಡಬಹುದು.

[4] ಮೈಸೂರು ಜಗನ್ಮೋಹನ ಬಂಗಲೆಯ ಚಿತ್ರಶಾಲೆಯ ಮೇಲಿನ ಮಹಡಿಯಲ್ಲಿ ಅನೇಕ ಚತುರಂಗಚಕ್ರಗಳು ರಚಿತವಾಗಿವೆ.

ಗುಣಗಳಾಗಿದ್ದುವು. ಇದಲ್ಲದೆ ಇವರ ಹೆಸರಿನಲ್ಲಿ ಸಂಖ್ಯಾರತ್ನಕೋಶ, ಚತುರಂಗ ಚಕ್ರ[1] ಮೊದಲಾದ ಕೆಲವು ಗ್ರಂಥಗಳೂ ಸಿಕ್ಕುತ್ತವೆ.

ವಿದೇಶಗಳಲ್ಲಿ ಪ್ರಚಾರಹೊಂದಿದ ಮೇಲೆ ಈ ಆಟದ ಚರಿತ್ರೆಯು ಬಹಳ ಬದಲಾಯಿಸಿತೆನ್ನಬಹುದು. ಹೋದೆಡೆಗಳಲ್ಲೆಲ್ಲ ಮನ್ನಣೆಯನ್ನು ಪಡೆದು, ಇದು ಉನ್ನತವಾದ ಪ್ರತಿಭೆಯಿಂದ ಆಡಬೇಕಾದ ಆಟವೆಂಬುದು ಅಂಗೀಕೃತವಾಯಿತು. ಈ ಆಟದ ಪುರುಳನ್ನು ಕಂಡುಹಿಡಿಯುವುದಕ್ಕೆ ಪ್ರಸಿದ್ಧರಾದ ಪಾಶ್ಚಾತ್ಯರನೇಕರು ಆಜೀವ ಶ್ರಮಿಸಿರುತ್ತಾರೆ. ಇದರ ಇತಿಹಾಸವು ಬಹಳ ಆಕರ್ಷಕವೂ ಆಹ್ಲಾದಕರವೂ ಆಗಿದೆ. ಆಧುನಿಕ ಪಾಶ್ಚಾತ್ಯ ಗ್ರಂಥಕರ್ತರಲ್ಲಿ ಮೊದಲನೆಯವನು ರೈ ಲೊಪೆಜ್ ಡೆ ಸೆಗುರ (Ruy Lopez De Segura) ಎಂಬ ಹೆಸರಾದ ಆಟಗಾರ. ಇವನು ಕ್ರಿ.ಶ. ಹದಿನಾರನೆಯ ಶತಮಾನದವನು. ಇವನ ಅನಂತರ ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಅನೇಕರು ಪ್ರಸಿದ್ಧಿಗೆ ಬಂದರು. ಇವರಲ್ಲಿ ಫಿಲಿಡೋರ್ (Philidor—೧೭೨೬–೧೭೯೫), ಅಲೇಜಿಯರ್ (Allagaier—೧೭೬೩–೧೮೨೩), ಇವಾನ್ಸ್ (Evans—ಸುಮಾರು ೧೮೩೦), ಸ್ಟೇನಿಟ್ಸ್ (Steinitz—ಹು. ಸುಮಾರು ೧೮೩೬), ಪಾಲ್ ಮಾರ್ಫಿ (Paul Morphy–೧೮೩೭–೧೮೮೪) ಮೊದಲಾದವರು ಅಗ್ರಗಣ್ಯರು. ಪಾಶ್ಚಾತ್ಯ ಚತುರಂಗದ ಇತಿಹಾಸವು ಈ ಕೆಲವರಿಂದ ರಚಿತವಾಯಿತೆಂದರೆ ತಪ್ಪಾಗದು. ಕ್ರಿ.ಶ. ೧೮೩೦–೪೦ರ ಅವಧಿಯಲ್ಲಿ ಪ್ರಸಿದ್ಧರಾಗಿದ್ದ ಏಳುಜನ ಜರ್ಮನಿಯ ಆಟಗಾರರು 'ಸಪ್ತರ್ಷಿ'ಗಳೆನ್ನಿಸಿಕೊಳ್ಳುವಷ್ಟು ಪ್ರಭಾವ ಬೀರಿದ್ದಾರೆ; ಇವರು ಚತುರಂಗದಲ್ಲಿ ಒಂದು ಹೊಸ ಸಂಪ್ರದಾಯವನ್ನೇ ಉಂಟುಮಾಡಿದರು. ಹೀಗೆಯೇ ಇತರ ದೇಶಗಳಲ್ಲಿಯೂ ಚತುರಂಗದ ಉದ್ಧಾರಕ್ಕಾಗಿ ಅನೇಕ ಸಂಸ್ಥೆಗಳು ಹುಟ್ಟಿ ಒಂದೊಂದೂ ಒಂದೊಂದು ಸಂಪ್ರದಾಯಕ್ಕೆ ನೆಲೆಯಾಯಿತು. ಕ್ರಿ.ಶ. ೧೮೭೫ರಿಂದ ಈಚೆಗೆ ಸುಮಾರು ೧೦೦ ಸಂಸ್ಥೆಗಳು ಇಂಗ್ಲೆಂಡೊಂದರಲ್ಲೇ ಹುಟ್ಟಿಕೊಂಡುವು. ಈಗ ಎಲ್ಲವೂ ಬ್ರಿಟಿಷ್ ಚೆಸ್ ಫೆಡರೇಷನ್ (British Chess Federation) ಎಂಬ ಮೂಲಸಂಸ್ಥೆಯ ಅಂಗಗಳಾಗಿವೆ. ಇಂತಹ ಮೂಲಸಂಸ್ಥೆಗಳ[2] ಆಶ್ರಯದಲ್ಲಿ ಪ್ರತಿವರ್ಷವೂ ಅಂತರರಾಷ್ಟ್ರೀಯ ಸ್ಪರ್ಧೆಗಳು ನಡೆಯುತ್ತಿವೆ.[3]

[1] ಇದನ್ನೇ ಚತುರಂಗ ಸಾರಸರ್ವಸ್ವವೆಂದೂ ಕರೆಯುವುದುಂಟು. ಈ ಗ್ರಂಥವು ಮರಾಠಿ ಭಾಷೆಗೂ ಪರಿವರ್ತಿತವಾಗಿದೆ.

[2] ಇತರ ದೇಶಗಳಲ್ಲಿಯೂ ಇಂತಹ ಮೂಲಸಂಸ್ಥೆಗಳೂ ಅಂಗಸಂಸ್ಥೆಗಳೂ ಇವೆ.

[3] ವಿವಿಧ ಸಂಘಗಳ ಮತ್ತು ಸ್ಪರ್ಧೆಗಳ ವರದಿಯು ಎಲ್ಲರಿಗೂ ತಿಳಿಯುವುದಕ್ಕಾಗಿ 'ಚತುರಂಗ' (Chess) ಎಂಬ ಪತ್ರಿಕೆ ಹೊರಡುತ್ತದೆ. ಜರ್ಮನಿಯಲ್ಲಿ ತಯಾರಿಸಿದ ಚತುರಂಗಗ್ರಂಥಗಳ ಪಟ್ಟಿಯಲ್ಲಿ ಚತುರಂಗದ ವಿಷಯಗಳಿಗೆ ಅವಕಾಶಕೊಟ್ಟಿರುವ ನೂರು ಪತ್ರಿಕೆಗಳ ಹೆಸರಿದೆ.

ಇಪ್ಪತ್ತನೆಯ ಶತಮಾನದ ಆಟಗಾರರಲ್ಲಿ ಡಾ. ಲಾಸ್ಕರ್, ಕೆಪಬ್ಲಾಂಕ, ಡಾ. ಆಲೆಖೈನ್, ಡಾ. ಆಯ್‌ವೆ ಮೊದಲಾದವರು ಪ್ರಸಿದ್ಧರು.

ಪಾಶ್ಚಾತ್ಯರ ಚತುರಂಗವಿಜ್ಞಾನದಲ್ಲಿ ಒಂದು ವಿಚಾರವನ್ನು ಗಮನಿಸಬೇಕಾಗಿದೆ. ಇವರಲ್ಲಿ ಆಲೋಚನಪರರಾದ ಕೆಲವರು ಚತುರಂಗವನ್ನು ವೈಜ್ಞಾನಿಕ ದೃಷ್ಟಿಯಿಂದ ಪರಿಶೋಧಿಸುವುದಕ್ಕೆ ತೊಡಗಿ ಈ ಆಟದ ಸತ್ವವನ್ನು ಪರೀಕ್ಷೆಮಾಡತೊಡಗಿದರು. ಆಟದಲ್ಲಿ ಅದೃಷ್ಟಾಂಶವು ಲುಪ್ತವಾಗಿದ್ದುದರಿಂದ ಇದನ್ನು ಆಡುವುದಕ್ಕೆ ಸರಿಯಾದ ಕೆಲವು ನಿಯಮಗಳನ್ನು ಕಂಡುಹಿಡಿದರೆ ಪ್ರತಿಯೊಂದು ಆಟದಲ್ಲೂ ಇಚ್ಛಾನುಸಾರವಾಗಿ ವಿಜಯವೋ, ಅನಿಶ್ಚಯವೋ ಉಂಟಾಗುವಂತೆ ಮಾಡಬಹುದೆಂಬ ಆಸೆಯು ಹಲವರಲ್ಲಿ ಮೂಡಿತು. ಕೆಪಬ್ಲಾಂಕ ಅವರು ಇದಕ್ಕಾಗಿ ಬಹಳ ಹೊಡೆದಾಡಿದರು. ಆದರೆ ಇವರ ಪ್ರಯತ್ನವು ಸಫಲವಾಗಲಿಲ್ಲ. ಈಚೀಚಿನ ಪ್ರತಿಯೊಬ್ಬ ಆಟಗಾರನೂ ಹಿಂದಿನ ಸಿದ್ಧಾಂತಗಳಿಗೆ ಅಪವಾದರೂಪವಾದ ಆಟವನ್ನೂ ಸಿದ್ಧಾಂತವನ್ನೂ ಪ್ರದರ್ಶಿಸತೊಡಗಿದನು. ಚತುರಂಗವು ವೈಜ್ಞಾನಿಕ ನಿಯಮಗಳನ್ನು ಮೀರಿದ್ದು ಕೇವಲ ಬುದ್ಧಿಬಲ, ಪ್ರತಿಭೆಗಳಿಂದಲೇ ಆಡತಕ್ಕುದೆಂದು ಸಿದ್ಧಾಂತವಾಯಿತು. ಈ ಆಟದ ವೈವಿಧ್ಯವು ಅಸದೃಶವೆಂದೂ ಹೇಗೆಯೇ ಆಡಿದರೂ ಒಂದು ಆಟದಂತೆ ಮತ್ತೊಂದು ಆಟ ಬರುವುದಿಲ್ಲವೆಂದೂ ಕಂಡುಬಂದಿತು. ಮಾನವ ಬುದ್ಧಿಶಕ್ತಿಯ ಮೇಲ್ಮೆಯು ಹೊರಪಡುವುದಕ್ಕೆ ಚತುರಂಗವೂ ಸಹಾಯಮಾಡಿತು. ಇದರ ಒಂದೊಂದು ಆಟವೂ ಆಡುವವನ ಬುದ್ಧಿಶಕ್ತಿಯ ಒಂದೊಂದು ಪ್ರಕಾರದ ಮೂರ್ತಿಮತ್ತಾದ ಪ್ರತಿಬಿಂಬವೆಂದು ಹೇಳಬಹುದಾಯಿತು. ಒಬ್ಬೊಬ್ಬನ ಆಟದಲ್ಲೇ ಅಸದೃಶವಾದ ವೈವಿಧ್ಯವು ತೋರಿಬಂದಿತು. ಒಂದುಸಲ ಅಸಾಧ್ಯವಾಗಿ ಕಂಡುಬಂದುದು ಮತ್ತೊಂದು ಸಲ ಬುದ್ಧಿಯು ಕೆಲಸಮಾಡಿದಾಗ ಸಾಧ್ಯವಾಗುವುದೂ, ಒಬ್ಬನಿಗೆ ಅಸಾಧ್ಯವಾದುದು ಮತ್ತೊಬ್ಬನಿಗೆ ಸುಸಾಧ್ಯವಾಗುವುದೂ, ಒಂದೊಂದು ಸಲ ತನಗೇ ನಂಬಲಾರದಂತಹ ರೀತಿಯಲ್ಲಿ ಆಟಗಾರನಿಗೆ ಆಡುವ ಶಕ್ತಿ ಕೂಡುವುದೂ ಅನುಭವಸಿದ್ಧವಾದುವು. ಪ್ರತಿಭೆಯು ಕವಿತೆಯಲ್ಲಿ ಕೆಲಸಮಾಡುವ ರೀತಿಯಲ್ಲಿ ಚತುರಂಗದಲ್ಲಿಯೂ ಕೆಲಸಮಾಡುವುದೆಂದು ಹೇಳಬಹುದಾಯಿತು. ಮಾನವನ ಪ್ರತಿಭೆಯು ಅಥವಾ ಶುದ್ಧ ಚೈತನ್ಯವು ಎಲ್ಲ ನಿಯಮಗಳನ್ನೂ ಮೀರಿದ್ದೆಂದೂ ಐಂದ್ರಜಾಲಿಕ ಶಕ್ತಿಯುಳ್ಳದ್ದೆಂದೂ ಚತುರಂಗದ ನಿದರ್ಶನದಿಂದಲೂ ತೋರಿಸಬಹುದಾಯಿತು.

ಪಾಶ್ಚಾತ್ಯರಲ್ಲಿ ಚತುರಂಗವು ಬೆಳೆಯುತ್ತ ಬೆಳೆಯುತ್ತ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಹೊಸ ಕಳೆ ಮೂಡಿತು. ಅಗ್ರಗಣ್ಯ ಪದವಿಗಾಗಿ ಹೋರಾಟವು ಬಲ

ವಾಯಿತು. ಈಗ ಚತುರಂಗ ಪ್ರಪಂಚದಲ್ಲಿ ಅಗ್ರಗಣ್ಯ ಪದವಿಯನ್ನು ಡಾ|| ಆಲೆಖೈನರು ಅಲಂಕರಿಸಿದ್ದಾರೆ. ಇವರು, ಈಚೆಗೆ ಚತುರಂಗಕ್ಕೆ ತೌರುಮನೆಯೆನಿಸಿಕೊಂಡಿರುವ ರಷ್ಯ ದೇಶದವರು. ಈಗಲೂ ರಷ್ಯದ ಸೇನಾಧಿಪತಿಗಳು ವಿರಾಮ ಸಿಕ್ಕಿದಾಗ ಚತುರಂಗವನ್ನು ಆಡುವುದು ವೃತ್ತಪತ್ರಿಕೆಗಳ ಮೂಲಕ ತಿಳಿದುಬರುತ್ತಿದೆ. ಇದರಿಂದ ರಷ್ಯನರ ಚತುರಂಗಾಸಕ್ತಿಯನ್ನು ಸುಲಭವಾಗಿ ಊಹಿಸಬಹುದು. ಡಾ. ಆಲೆಖೈನರು ರಾಜಕೀಯ ಕಾರಣಗಳ ದೆಸೆಯಿಂದ ರಷ್ಯವನ್ನು ತ್ಯಜಿಸಬೇಕಾಗಿ ಬಂದು ಫ್ರಾನ್ಸಿನ ಸಾಮಾಜಿಕರಾಗಿರುತ್ತಾರೆ. ಇವರ ವಿಷಯದಲ್ಲಿ ಒಂದು ಐತಿಹಾಸಿಕ ಘಟನೆಯೂ ತಿಳಿದುಬರುತ್ತದೆ. ರಷ್ಯದ ಮಹಾಕ್ರಾಂತಿಯ ಸಮಯದಲ್ಲಿ ವಿದೇಶಾಂಗ ಕಚೇರಿಯಲ್ಲಿದ್ದ ಆಲೆಖೈನರು ಸೆರೆಮನೆಯಲ್ಲಿರಬೇಕಾಗಿ ಬಂತಂತೆ. ಅಲ್ಲಿ ಕೂಡ ಈ ಚತುರಂಗ ಪ್ರೇಮಿಯು ಚತುರಂಗವನ್ನು ಬಿಡಲೇ ಇಲ್ಲ. ಹಾಸು, ಕಾಯಿಗಳಿಲ್ಲದಿದ್ದರೂ ಗೋಡೆಯೊಂದರ ಪಕ್ಕದಲ್ಲಿ ನಿಂತು ತಲೆಗೆ ಕೈಊರೆ ಮಾಡಿಕೊಂಡು ತನಗೆ ತಾನೇ ಮಾತನಾಡಿಕೊಳ್ಳುತ್ತ ಎರಡು ಪಕ್ಷದ ನಡೆಗಳನ್ನೂ ತಾನೇ ನಡೆಸಿಕೊಳ್ಳುತ್ತ ವಿಚಿತ್ರವಾಗಿ ತೋರುವಂತೆ ಇವನು ಚತುರಂಗವನ್ನು ಆಡುತ್ತಿದ್ದನಂತೆ. ಈಗ ಮಹಾಪ್ರಧಾನರಾಗಿರುವ ಸ್ಟಾಲಿನ್ ಅವರು ಸೆರೆಮನೆಯನ್ನು ಸ್ವತಃ ಪರಿಶೀಲಿಸುವ ತಮ್ಮ ನಿತ್ಯಚರ್ಯೆಯನ್ನು ಪಾಲಿಸುತ್ತ ಇವನ ಕೊಠಡಿಯಲ್ಲಿಗೆ ಬಂದಾಗ ಒಳಗೆ ಪಿಸುಮಾತು ಕೇಳಿಬಂತಂತೆ. ಸಂಶಯಗ್ರಸ್ತರಾದ ಸ್ಟಾಲಿನ್ನರು ಹಾಗೆಯೇ ನಿಂತು ಆಲಿಸಲಾಗಿ ಅಸ್ಪಷ್ಟವಾದ ಆಲೆಖೈನರ ಆಟದ ವೈಖರಿಯು ಕೇಳಿಬರಲು ಕೂಡಲೇ ಬಾಗಿಲು ತೆರೆಯಿಸಿ 'ನಿನಗೆ ಚತುರಂಗ ಬರುತ್ತದೆಯೆ?' ಎಂದು ಕೇಳಿದರಂತೆ.

"ಹೌದು"


"ನನ್ನೊಡನೆ ಆಡುವೆಯ?"

"ಏನು ಪಣ?"

"ನೀನೇ ಹೇಳು" ಎಂದರು ಸ್ಟಾಲಿನ್ನರು, ಗರ್ವದಿಂದ.

"ಸೋತರೆ ಜೀವವನ್ನು ಬಲಿಯೊಪ್ಪಿಸಲು ಸಿದ್ಧನಿದ್ದೇನೆ; ಗೆದ್ದರೆ ಇಲ್ಲಿಂದ ಬಿಡುಗಡೆಯೆ?" ಎಂದು ಆಲೆಖೈನರು ಕೇಳಲು ಸ್ಟಾಲಿನ್ನರು ಒಪ್ಪಿ ಆಡಲು ಪ್ರಾರಂಭಿಸಿದರಂತೆ. ಪ್ರಪಂಚದಲ್ಲೇ ಅಗ್ರಗಣ್ಯನಾಗಬೇಕಾಗಿದ್ದ ಆಲೆಖೈನರು ಸೋಲುವುದು ಸಂಭವವೆ? ಚತುರಂಗ ಕೌಶಲದಿಂದ ಜೀವವನ್ನುಳಿಸಿಕೊಂಡು ರಷ್ಯದ ಸೆರೆಮನೆಯಿಂದ ಬಿಡುಗಡೆಹೊಂದಿ ಇವರು ಫ್ರಾನ್ಸಿಗೆ ಹೋದರೆಂದು ತಿಳಿದುಬರುತ್ತದೆ.

ಪಾಶ್ಚಾತ್ಯರಲ್ಲಿಯೂ ಕೆಲವು ಚತುರಂಗ ಸಮಸ್ಯೆಗಳು ಹುಟ್ಟಿಕೊಂಡಿವೆ.



ಚತುರಂಗದ ಮಣೆ ಮತ್ತು ಕಾಯಿಗಳು

ಆಟದ ಕೊನೆಯಲ್ಲಿ ಸಂಭವಿಸಬಹುದಾದ ನಾನಾ ವಿಧ ಸನ್ನಿವೇಶಗಳನ್ನು ಮುಂದಿಟ್ಟು ಎರಡು, ಮೂರು, ನಾಲ್ಕು ಹೀಗೆ ನಿರ್ದಿಷ್ಟವಾದ ನಡೆಗಳಲ್ಲಿ ದೊರೆಯನ್ನು ಕಟ್ಟಿ ಹಾಕುವ ಸಮಸ್ಯೆಗಳು[1] ಅವರಲ್ಲಿ ಹೇರಳವಾಗಿವೆ. ಇವುಗಳ ವಿಷಯವಾಗಿಯೇ ಅನೇಕ ಗ್ರಂಥಗಳೂ ರಚಿತವಾಗಿವೆ. ಇದಲ್ಲದೆ ಕಣ್ಣು ಕಟ್ಟಿಕೊಂಡು ಚತುರಂಗ ಆಡುವುದು (Blind-folded Chess) ಇವರ ಒಂದು ವಿಚಿತ್ರವಾದ ಸಾಧನೆ. ಪಾಲ್ ಮಾರ್ಫಿ, ಕೆಪಬ್ಲಾಂಕ, ಡಾ. ಆಲೆಖೈನ್ ಮೊದಲಾದವರು ಇದರಲ್ಲಿ ಪ್ರಸಿದ್ಧರು. ಮಾರ್ಫಿಯು ಹತ್ತು ವರ್ಷದ ಹುಡುಗನಾಗಿದ್ದಾಗಲೇ ಚತುರಂಗವನ್ನು ತಿಳಿದು ಕೊಂಡು ಇಪ್ಪತ್ತು ವರ್ಷದವನಾಗುವ ವೇಳೆಗೆ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಜಯಶೀಲನಾದನಂತೆ. ಇವನು ಕಣ್ಣುಕಟ್ಟಿಕೊಂಡು ಎಂಟು ಜನರೊಡನೆ ಒಟ್ಟಿಗೇ ಆಡುತ್ತ ಬಹಳ ಮಟ್ಟಿನ ಜಯ ಪಡೆಯುತ್ತಿದ್ದನಂತೆ. ಹೀಗೆಯೇ ಕೆಪಬ್ಲಾಂಕನೂ ನಾಲ್ಕು ವರ್ಷದ ಬಾಲಕನಾಗಿದ್ದಾಗಲೇ ಚತುರಂಗದಲ್ಲಿ ಪರಿಶ್ರಮಹೊಂದಿ ಅಗ್ರಗಣ್ಯನಾದನು. ಕಳೆದ ವರುಷ ಇವನು ಗತಿಸಿದಾಗ ಚತುರಂಗ ಪ್ರಪಂಚಕ್ಕೆ ಅಪಾರ ನಷ್ಟಸಂಭವಿಸಿದಂತಾಯಿತು. ಸದ್ಯಕ್ಕೆ ಎರಡು ವಿಧವಾದ ಆಟದಲ್ಲೂ ಆಲೆಖೈನರು ಅಗ್ರಗಣ್ಯರೆನಿಸಿಕೊಂಡು ಹಿಂದಿನ ಸಾಹಸಗಳನ್ನೆಲ್ಲ ಮೀರಿಸಿರುವರು.

ಚತುರಂಗದಲ್ಲಿ ಒಟ್ಟು ಮೂವತ್ತೆರಡು (ಹದಿನಾರು ಬಿಳಿಯವು, ಹದಿನಾರು ಕಪ್ಪು) ಕಾಯಿಗಳ ಉಪಯೋಗವಿದೆ. ಒಂದೊಂದು ಕಡೆಯಲ್ಲೂ ಒಬ್ಬ ದೊರೆ ಅವನಿಗೆ ಸಹಾಯಕ್ಕೆ ಮಂತ್ರಿ, ಎರಡು ಆನೆ, ಎರಡು ಕುದುರೆ, ಎರಡು ಒಂಟೆ, ಈ ಪ್ರಕಾರ ಏಳು 'ಬಲ'ಗಳೂ ಜೊತೆಗೆ ಎಂಟು ಕಾಲಾಳುಗಳೂ ಇರುತ್ತವೆ. ಆಟಗಾರರು ತಮ್ಮ ಕಡೆ ಬಲದ ಕೊನೆಗೆ ಬಿಳಿಯ ಮನೆ ಬರುವಂತೆ ಹಾಸನ್ನು ಅಥವಾ ಚತುರಂಗದ ಹಲಗೆಯನ್ನು ಇಟ್ಟುಕೊಳ್ಳತಕ್ಕದ್ದು. ಚಿತ್ರದಲ್ಲಿ ಕಾಣುವಂತೆ ಎರಡು ಪಕ್ಷದ ದೊರೆ ಮಂತ್ರಿಗಳು ಎದುರೆದುರಾಗಿ ನಿಲ್ಲುವಂತೆಯೂ ಬಿಳಿಯ ಮಂತ್ರಿಯು ಬಿಳಿಯ ಮನೆಯಲ್ಲೇ ನಿಲ್ಲುವಂತೆಯೂ ಕಾಯಿಗಳನ್ನು ಜೋಡಿಸಬೇಕು.

ಪ್ರತಿಪಕ್ಷದ ದೊರೆಯನ್ನು ಹಿಡಿಯುವುದೇ ಉದ್ದೇಶ ಅಥವಾ ವಿಜಯ. ದೊರೆಯನ್ನು ಕೊಲ್ಲಲಾಗದು. ಆದುದರಿಂದ ಕೊಲೆಯ ಹೆದರಿಕೆ (ಷಾ, ಅಥವಾ check) ಉಂಟುಮಾಡಿದಾಗ ಅದನ್ನು ತಪ್ಪಿಸಲು ಸಾಧ್ಯವಾಗದೆ ಹೋದಲ್ಲಿ ಸೋಲಾಗುವುದು. ಇದಕ್ಕೆ 'ಷಾಮಾತ್' (check-mate) ಎಂದು ಹೆಸರು. ಕಾಲಾಳಿ

---

[1] 'Chess Problems' ಎಂಬುದು ಅನೇಕರಿಗೆ ಪರಿಚಿತವಾಗಿರಬೇಕು 'White to move and mate in two; White to move and mate in three' ಈ ರೀತಿ ಆಂಗ್ಲ ಭಾಷೆಯಲ್ಲಿ ಬರುತ್ತದೆ.

ಸಿಂದ ಇದು ನಡೆದರೆ ಶ್ರೇಷ್ಠವೆಂದು ಭಾವಿಸಲಾಗಿದೆ. ಈ ಹೋರಾಟದಲ್ಲಿ ದೊರೆಯನ್ನು ಹಿಡಿಯುವುದಕ್ಕೆ ಬಹಳ ಯುಕ್ತಿಗಳನ್ನು ಉಪಯೋಗಿಸಬೇಕಾಗುತ್ತದೆ. ಪ್ರಾರಂಭ ವಿಧಾನದಿಂದ ಹಿಡಿದು ಪರಿಸಮಾಪ್ತಿ ವಿಧಾನದವರೆಗೆ ಒಂದೊಂದು ದಶೆಯಲ್ಲೂ ಒಂದೊಂದು ವಿಧವಾದ ಉಪಾಯಗಳನ್ನು ಹೂಡಬೇಕಾಗುತ್ತದೆ.

**ಆಟದ ಸಾಮಾನ್ಯ ನಿಯಮಗಳು—**

(೧) ಯಾವ ಎರಡು ಕಾಯಿಗಳಾಗಲಿ ಒಂದೇ ಮನೆಯನ್ನು ಆಕ್ರಮಿಸುವಂತಿಲ್ಲ.

(೨) 'ಕ್ಯಾಸಲಿಂಗ್'[1] ಅಲ್ಲಿ ಹೊರತು ಒಂದು ನಡೆಗೆ ಒಂದೇ ಕಾಯನ್ನು ನಡೆಸತಕ್ಕದ್ದು.

(೩) (ಮುಂದೆ ಹೇಳುವ ಒಂದು ಸನ್ನಿವೇಶದಲ್ಲಿ ಹೊರತು) ಕೊಲ್ಲುವ ಕಾಯಿ ಕೊಲೆಯಾದುದರ ಸ್ಥಳವನ್ನು ಆಕ್ರಮಿಸುವುದು.

(೪) ಷಾ ಬಂದಾಗ ಮೊದಲು ಅದನ್ನು ತಪ್ಪಿಸಬೇಕು.

(೫) ಷಾ ಬರುವಂತೆ ಯಾವ ನಡೆಯನ್ನೂ ಮಾಡಕೂಡದು.

(೬) ಕುದುರೆ ಒಂದು ಹೊರತು ಮಿಕ್ಕ 'ಬಲ'ಗಳು ಕಾಯಿಗಳನ್ನು ದಾಟಿ ನಡೆಯಬಾರದು. ಎಂದರೆ ಅವು ಬಿಡುವಾದ ಮಾರ್ಗದಲ್ಲಿ ಮಾತ್ರ ಸಂಚರಿಸತಕ್ಕದ್ದು.

(೭) ಷಾ ಇಲ್ಲದೆ ದೊರೆಯು ಬಂಧಿತನಾಗಿ ಯಾವ ನಡೆ ನಡೆಸಿದರೂ ಷಾ ಬರುವಂತಾದರೆ ಆಟ 'ಸೀಕಲು' (Stalemate) ಆಗುವುದು. ಇದು (Drawn Game) ಸಮ ಆಟಕ್ಕಿಂತ ಕಡೆ.

(೮) ಕಾಲಾಳು ಮಾತ್ರ ಮುಂದೆ ನಡೆದಮೇಲೆ ಹಿಂತಿರುಗುವಂತಿಲ್ಲ.

(೯) ಕೊಲ್ಲಬಹುದಾದ ಕಾಯನ್ನು ಕೊಲ್ಲುವುದೂ ಬಿಡುವುದೂ ಆಟಗಾರರ ಇಷ್ಟಕ್ಕೆ ಸೇರಿದ್ದು.

**ವಿಶೇಷ ನಿಯಮಗಳು—**

(೧) ಕಾಲಾಳು ಇರುವ ಸ್ಥಳದಿಂದ ಮೊದಲು ಹೊರಡುವಾಗ ಅವಶ್ಯಬಿದ್ದಂತೆ ನೇರ ಮೇಲೆ (vertically) ಒಂದು ಅಥವಾ ಎರಡು ಮನೆ ನಡೆಯಬಹುದು. ಅನಂತರ ಒಂದೊಂದು ಮನೆಯಂತೆಯೇ ಮುಂದುವರಿಯಬೇಕು. ಹೀಗೆ ಅದು ಕಡೆಯ ಸಾಲನ್ನು ಸೇರಿದರೆ ಅದಕ್ಕೆ ಬದಲು ಯಾವ 'ಬಲ'ವನ್ನು ಬೇಕಾದರೂ ಹೊಂದಬಹುದು. ('ಬಲ'ಗಳಲ್ಲಿ ಅತ್ಯುತ್ತಮವಾದ ಮಂತ್ರಿಯನ್ನು ತೆಗೆದುಕೊಳ್ಳುವುದೇ ವಾಡಿಕೆ. ಹೀಗೆ ಎಷ್ಟು ಮಂತ್ರಿಗಳನ್ನು ಬೇಕಾದರೂ ಸೃಷ್ಟಿಸಿಕೊಳ್ಳುವುದಕ್ಕೆ ಅವಕಾಶವಿದೆ.) ಕಾಲಾಳು ಕೊಲ್ಲಬೇಕಾದ ಕಾಯಿ ಕಾಲಾಳಿನ ಮನೆಗೆ ಸೇರಿದ

[1] ಕ್ಯಾಸಲಿಂಗಿಗೆ ಪು. ೨೫ ಟಿಪ್ಪಣಿ ೩ ನೋಡಿ.

ಮೂಲೆಯ (diagonal) ಮನೆಯಲ್ಲಿರಬೇಕು. ಹೀಗೆ ನಡಗೆ ನೇರಮೇಲೆ; ಕೊಲೆ ಮೂಲೆ ಮನೆಯಲ್ಲಿ. ಆದುದರಿಂದ ಎದುರುಬದುರಾಗಿ ಎರಡು ಕಾಲಾಳು ಬಂದರೆ ಎರಡರ ಮುನ್ನಡೆಯೂ ತಡೆಹೊಂದುವುದು. ಒಂದನ್ನೊಂದು ಕೊಲ್ಲುವಂತಿಲ್ಲ. ಕಾಲಾಳು ನೇರ ಮೇಲೆ (vertically) ಐದನೆಯ ಮನೆಯಲ್ಲಿರುವಾಗ ಶತ್ರುಕಾಲಾಳು ಕೊಲೆಹೊಂದಬಹುಹಾದ ಮೂಲೆಯ ಮನೆಯನ್ನು ದಾಟಿ ಮುಂದಕ್ಕೆ ಹೋಗಲು ಅವಕಾಶವಿದೆ. ಆಗ ಮುಂದಿನ ನಡೆಯಲ್ಲೇ ದಾಟಿಹೋದ ಕಾಲಾಳನ್ನು ಕೊಂದು, ಮೂಲೆಮನೆಗಲ್ಲ, ನೇರವಾಗಿ ಒಂದು ಮನೆ ಮುಂದೆ ನಡೆಯಬಹುದು. ಈ ಅವಕಾಶ ವನ್ನು ಕೂಡಲೆ ಉಪಯೋಗಿಸದಿದ್ದರೆ ಕಳೆದುಕೊಳ್ಳಬೇಕಾಗುವುದು. (ಸಾ. ನಿಯಮ ೩, ನೋಡಿ.)

(೨) ಆನೆಯು ನೇರವಾಗಿಯಾಗಲಿ ಅಡ್ಡಡ್ಡವಾಗಲಿ ಸಾಮಾನ್ಯ ನಿಯಮ ಗಳನ್ನು ಮೀರದೆ ಎಷ್ಟು ಮನೆ ಬೇಕಾದರೂ ನಡೆಯಬಹುದು.

(೩) ಒಂಟೆಯೂ ಹಾಗೆಯೇ ಮೂಲೆಯುಮೇಲೆ (diagonally) ಎಷ್ಟು ಮನೆ ಬೇಕಾದರೂ ನಡೆಯಬಹುದು.

(೪) ಕುದುರೆ ಒಂದು ನಡೆಗೆ ನೇರವಾಗಿ ಒಂದು ಮನೆ ನಡೆದು ಆಮೇಲೆ ಒಂದು ಮನೆ ಮೂಲೆಯಾಗಿ ತಿರುಗುವುದು.

(೫) ಮಂತ್ರಿಯು ಆನೆಯಂತೆಯೂ ನಡೆಯಬಹುದು, ಒಂಟೆಯಂತೆಯೂ ನಡೆಯಬಹುದು. ಆದರೆ ಎರಡು ಬಗೆಯ ಚಲನಗಳನ್ನೂ ಒಂದೇ ನಡೆ (move)ಯಲ್ಲಿ ಬೆರಸುವಂತಿಲ್ಲ.

(೬) ದೊರೆಯು ಯಾವ ಕಡೆಗೆ ಬೇಕಾದರೂ ಒಂದೊಂದೇ ಮನೆ ಸಂಚರಿಸ ಬಹುದು. (ಕ್ಯಾಸಲಿಂಗ್ ನಿಯಮಗಳಿಗೆ ಪುಟ ೨೫ ನೋಡಿ).

**ಕೆಲವು ಮುಖ್ಯ ಸಲಹೆಗಳು—**

ಪ್ರತಿ ಕಾಯಿಗೂ ಸಾಮಾನ್ಯವಾಗಿ ಒತ್ತಾಸೆ (support) ಇಟ್ಟುಕೊಂಡೇ ಆಟವನ್ನು ಮುಂದುವರಿಸಬೇಕು. ಕೊಲ್ಲುವ ಕಾಯನ್ನು ಪುನಃ ಕೊಲ್ಲುವುದಕ್ಕೆ ಸಹಾಯಮಾಡುವ ಕಾಯಿಗೆ ಒತ್ತಾಸೆಯೆಂದು ಹೆಸರು. ಹೀಗೆ ಒಂದೊಂದು ಮುಖ್ಯವಾದ ಕಾಯಿಗೂ ಅನೇಕ ಒತ್ತಾಸೆಗಳನ್ನು ಇಟ್ಟುಕೊಳ್ಳುವ ವಾಡಿಕೆ. ಕೊಲ್ಲುವಾಗ ಲಾಭ ನಷ್ಟ ಪರಿಜ್ಞಾನ ಅತ್ಯಾವಶ್ಯಕ. ಅಲ್ಪಕ್ಕಾಗಿ ಹೆಚ್ಚು ಬಲಿಷ್ಠವಾ ದದ್ದನ್ನು ಬಲಿ ಕೊಡಬಾರದು. ಕಾಯಿಗಳಲ್ಲಿ ಕಾಲಾಳು, ಒಂಟೆ, ಕುದುರೆ,[1]—ಆನೆ

[1] ಕುದುರೆ ಒಂಟೆಗಳ ಶಕ್ತಿಯ ವಿಚಾರದಲ್ಲಿ ವಿವಾದಗಳಿವೆ.

ಮಂತ್ರಿ, ಎಂಬ ಕ್ರಮದಲ್ಲಿ ಈಚೀಚಿನದು ಹೆಚ್ಚು ಹೆಚ್ಚು ಬಲವುಳ್ಳದ್ದೆಂದು ಒಂದು ಸಂಕೇತವಿದೆ. ಅದಕ್ಕೆ ತಕ್ಕಂತೆ ಲಾಭನಷ್ಟಗಳನ್ನು ನಿರ್ಣಯಿಸಿಕೊಳ್ಳಬೇಕು. ಕಡೆಯ ಗುರಿ ಷಾಮಾತ್ ಆದುದರಿಂದ ಅದಕ್ಕೆ ಉಪಯೋಗವಾಗುವಲ್ಲಿ ಈ ಸಂಕೇತ ಗಳನ್ನೆಲ್ಲ ಮೀರಬೇಕಾಗಬಹುದು. ಯಾವುದನ್ನೂ "ಇದೇ ಸರಿ" ಎಂದು ನಿರ್ಣ ಯಿಸುವಂತಿಲ್ಲ. ಆಯಾ ಸಂದರ್ಭಕ್ಕೆ ತಕ್ಕಂತೆ ದೂರಾಲೋಚನೆಯಿಂದ ನಡೆಗಳನ್ನು ನಿರ್ಧರಿಸಬೇಕು.

ಕಡೆಯದಾಗಿ ಒಂದು ವಿಚಾರ. ಚತುರಂಗದ ಆಧುನಿಕ ಅಭಿವೃದ್ಧಿಯಲ್ಲಿ ಅದಕ್ಕೆ ಜನ್ಮದಾತೃಗಳಾದ ಭಾರತೀಯರು ಸಮರ್ಪಕವಾದ ರೀತಿಯಲ್ಲಿ ಭಾಗವಹಿಸದಿರು ವುದು ವಿಷಾದಕರವೂ ವಿಚಿತ್ರವೂ ಆಗಿದೆ. ಇಷ್ಟು ವರ್ಷಗಳ ಕಾಲ ನಡೆದಿರುವ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಒಂದು ಸಲವಾದರೂ ಬಹುಮಾನ ಹೊಂದುವ ಅವಕಾಶ ಗೌರವಗಳು ಭಾರತೀಯರಿಗೆ ಬಂದಿಲ್ಲ. ಚತುರಂಗ ಆಡುವುದನ್ನು ಅತಿಯಾಗ ದಂತೆ ಬಳಕೆಯಲ್ಲಿಟ್ಟರೆ ಬುದ್ಧಿವಿಕಾಸವು ಉಂಟಾಗುವುದೆಂಬ ವಿಚಾರವು ಇಲ್ಲಿನವರಿಗೆ ಮರೆತಂತೆ ಕಾಣುತ್ತದೆ.[1] ಇಂಗ್ಲೆಂಡ್ ಜರ್ಮನಿ ಮೊದಲಾದ ದೇಶಗಳ ಅನೇಕ ಪಾಠಶಾಲೆಗಳಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ವಿರಾಮಕಾಲದಲ್ಲಿ ಚತುರಂಗ ಆಡುವುದು ಗಮನಕ್ಕೆ ಬಂದಿದೆ. ಇಲ್ಲಿನ ವಿದ್ಯಾರ್ಥಿಗಳ ಜೀವನವು (ಇತರರ ಜೀವನ ದಂತೆಯೇ) ಯಾವುದಾದರೊಂದು ಅಂಶದಲ್ಲಿ ಮಾತ್ರ ಅಭಿವೃದ್ಧಿ ಹೊಂದುತ್ತ ಇತರ ಕಾರ್ಯಕ್ಷೇತ್ರಗಳಲ್ಲಿ ಸರ್ವಥಾ ವ್ಯರ್ಥವೆನಿಸಿಕೊಳ್ಳುವುದು ಸ್ವಾಭಾವಿಕವಾಗಿ ಹೋಗಿದೆ. ಸಾಹಿತ್ಯಾಭಿರುಚಿ, ವಿಜ್ಞಾನಕೌಶಲ, ಕಲಾಭಿಮಾನ, ನಿರ್ದುಷ್ಟವಾದ ಸ್ವದೇಶಸ್ವಸಂಸ್ಕೃತಿಪ್ರೇಮ, ಕ್ರೀಡಾಕೌಶಲ, ವ್ಯವಹಾರಜ್ಞಾನ, ಆಧ್ಯಾತ್ಮಿಕ ಭಾವನೆ ಮೊದಲಾದುವೆಲ್ಲ ಸಮತೂಕದಲ್ಲಿ ಬೆರೆತಿದ್ದರೆ ಜೀವನವು ಪೂರ್ಣವೂ ಹೊಂದಿಕೆಯುಳ್ಳುದೂ ಆಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಬಹುವಿಷಯಜ್ಞಾನ ವನ್ನು ಹೊಂದಿ ಒಂದರಲ್ಲಿಯಾದರೂ ಅಗ್ರಗಣ್ಯ ಪದವಿಯನ್ನು ಹೊಂದಬೇಕೆಂಬುದು ಮುಖ್ಯ ಧ್ಯೇಯವಾಗಬೇಕು. ಒಂದೊಂದು ಸಲ ಎನ್ನಿಸುತ್ತದೆ: ಸಾಹಿತ್ಯ, ಸಂಗೀತ, ಶಿಲ್ಪ, ಚಿತ್ರ, ಚತುರಂಗ ಮೊದಲಾದ ಉತ್ತಮ ಕ್ರೀಡೆಗಳು, ತತ್ವಶಾಸ್ತ್ರ, ಮತಾಚಾರ ಮೊದಲಾದ ಸಂಸ್ಕೃತಿಯ ಮುಖ್ಯ ಅಂಶಗಳನ್ನೆಲ್ಲ ಬಿಟ್ಟು ಭಾರತದ ಪುನರುದ್ಧಾರ ಕ್ಕಾಗಿ ದುಡಿಯುವೆವೆಂದು ಕೂಗುತ್ತ ಹೊರಟರೆ ಗಳಿಸಬಹುದಾದುದೇನು ?—ಎಂದು. ಆ ಕೂಗಿನ ಜೊತೆಗೆ ಸ್ವಲ್ಪ ಜ್ಞಾನವೂ ಬೆರೆತಿದ್ದರೆ ಲೇಸಲ್ಲವೆ? ಪ್ರಕೃತ, ಒಡೆದು ಚೂರಾಗಿ ಲುಪ್ತವೆನಿಸಿಕೊಂಡಿರುವ ಭಾರತೀಯ ಸಂಸ್ಕೃತಿಯ ಅನೇಕ ಅಂಶಗಳಲ್ಲಿ

[1] ಹಿಂದೂ (*Hindu*) ಪತ್ರಿಕೆಯವರು ವಾರಕ್ಕೊಂದು ಸಲ ಚತುರಂಗಕ್ಕಾಗಿ ಸ್ವಲ್ಪ ಸ್ಥಳ ಮೀಸಲಾಗಿಟ್ಟು ಈ ಆಟವನ್ನು ಪ್ರಚುರಗೊಳಿಸುತ್ತಿರುವುದು ಶ್ಲಾಘನೀಯ.

ಚತುರಂಗ ಕೌಶಲವೂ ಒಂದೆಂದರೆ ತಪ್ಪಾಗದು. ಜೀವನವು ಮೊದಲಿನಂತೆ ಪೂರ್ಣವೂ ಸರ್ವತೋಮುಖವೂ ಆಗುವುದು; ಸಂಸ್ಕೃತಿಯ ಪುನರುಜ್ಜೀವನವು ನಡೆದೇ ನಡೆಯುತ್ತದೆ; ಎಂಬ ಆಶಾವಾದದಲ್ಲಿ ಚತುರಂಗದ ಪುನರುಜ್ಜೀವನವೂ ಒಂದು ಅಂಶವಾಗಲು ಅರ್ಹವೆನ್ನಬಹುದೆ?

**ಉತ್ತರ ಲೇಖನ:**—ಪು. ೨೧-೨೩ ರ ಜೊತೆಗೆ—

ಸರ್ ವಿಲಿಯಂ ಜೋನ್ಸ್ ಅವರ ಸ್ಪಷ್ಟೋಕ್ತಿಯ ಆಧಾರದ ಮೇಲೆ ಚತುರಂಗ ವಿಷಯಕವಾದ ಪ್ರಾಚೀನ ಗ್ರಂಥವು ಭವಿಷ್ಯಪುರಾಣದ್ದೆಂದು ನಂಬಿತ್ತು. ಈಚಿನ ಶೋಧನೆಯಿಂದ ಈ ಗ್ರಂಥಭಾಗವು ಅಲ್ಲಿ ಸಿಕ್ಕದೆಂದು ತಿಳಿದುಬಂದಿದೆ. ಯಾವ (ಮಾತೃಕೆಗಳ?) ಆಧಾರದ ಮೇಲೆ ಅವರು ಹಾಗೆ ಬರೆದರೊ ತಿಳಿಯದು. ಪ್ರಸಕ್ತ ವರ್ಣನೆಯ ಶೈಲಿಯು ಪೌರಾಣಿಕವಾಗಿ ತೋರುವುದರಿಂದ ಚತುರಂಗದ ಪ್ರಾಚೀನತೆಯನ್ನು ಇದರಿಂದ ತಕ್ಕಮಟ್ಟಿಗೆ ಸ್ಥಾಪಿಸಬಹುದು. ಇತರ ಯುಕ್ತಿಗಳೂ ಇದನ್ನೇ ಬಲಪಡಿಸುವುವು. ಒಟ್ಟಿನಲ್ಲಿ ಚತುರಂಗವು ಭರತಖಂಡದಲ್ಲಿ ಬಹು ಹಿಂದೆ ಹುಟ್ಟಿದ್ದೆಂದು ಖಂಡಿತವಾಗಿ ಹೇಳಬಹುದು. ಹೊರ ದೇಶಗಳಲ್ಲಿ ಯಾವ ಪ್ರಾಚೀನತಮ ಕಾಲದಿಂದ ಚತುರಂಗದ ಹೆಸರು ಕೇಳಬರುತ್ತಿದೆಯೋ ಅದಕ್ಕಿಂತ ಹಿಂದೆ ಅದು ಇಲ್ಲಿ ಪ್ರಚಾರದಲ್ಲಿತ್ತೆಂದು ಹೇಳಲು ಸಾಕಷ್ಟು ಆಧಾರಗಳಿವೆ. ಉದಾ: 'ಅಷ್ಟಾಪದ' ಶಬ್ದವು '೬೪ ಮನೆಗಳುಳ್ಳ ಆಟದ ಹಲಗೆ' ಎಂಬ ಅರ್ಥದಲ್ಲಿ ರಾಮಾಯಣ, ಪತಂಜಲಿಯ ಮಹಾಭಾಷ್ಯ, ಮತ್ತು ಅನೇಕ ಬೌದ್ಧ ಗ್ರಂಥಗಳಲ್ಲಿ ಪ್ರಚುರವಾಗಿದೆ. ಕೆಲವು ಕಡೆಗಳಲ್ಲಿ "ಅಟ್ಠಪದ" ಎಂದು ಕ್ರೀಡಾ ವಿಶೇಷವನ್ನು ಸೂಚಿಸುವಂತೆಯೂ ಪ್ರಯುಕ್ತವಾಗಿದೆ. ಇದರ ಜೊತೆಗೆ ಬಾಣಭಟ್ಟನ 'ಅಷ್ಟಾಪದಾನಾಂ ಚತುರಂಗ ಕಲ್ಪನಾ' (ಹ.ಚ., ಪುಟ. ೭೮.) 'ಅಷ್ಟಾಪದ ವ್ಯಾಪಾರ ಮಾಸ್ಫಾಲಯತಾ' (ಕಾ., ಪುಟ ೧೭೧) ಮೊದಲಾದ ವಾಕ್ಯಗಳನ್ನೂ ಗಮನಿಸಬಹುದು. ಹಿಂದಿನ ಆಟದ ಕ್ರಮದಲ್ಲಿ ವ್ಯತ್ಯಾಸಗಳಿದ್ದಿರಬಹುದು. ಒಂದೊಂದು ಪ್ರಾಂತದಲ್ಲಿ ಒಂದೊಂದು ವಿಧವಾದ ಚತುರಂಗ ಪ್ರಚಾರದಲ್ಲಿದ್ದು ಆಧುನಿಕ ಚತುರಂಗವು ಕ್ರಮವಾಗಿ ರೂಪುಗೊಂಡಿರಬಹುದು. ಹೇಗೂ ಮೂಲಭೂತವಾದ ಆಟದ ಪ್ರಕಾರವು ಭರತಖಂಡದ್ದೆಂದು ಹೇಳಲು ತೊಂದರೆ ಇಲ್ಲ. ಆಧುನಿಕ ಚತುರಂಗದ ವಿಚಾರದಲ್ಲಿಯೂ ಇಲ್ಲಿ ಗ್ರಂಥಗಳು ಅನೇಕವಿರುವುದರಿಂದ ಆಧುನಿಕ ಚತುರಂಗವು ಹೊರಗಿನಿಂದ ಬಂದದ್ದೆಂದೂ ಹೇಳುವಂತಿಲ್ಲ. ಎರಡು ವಿಧವಾದ ಆಟಗಳಿಗೂ ವ್ಯತ್ಯಾಸಗಳಿದ್ದರೂ ಸಾಮ್ಯವೂ ಅನೇಕ ವಿಷಯಗಳಲ್ಲಿ ಇದ್ದೇ ಇದೆ.

ಎಸ್. ವಿ. ಶ್ರೀನಿವಾಸ ರಾಘವಾಚಾರ್.

## ಅಂತರಾಲದಾಚೆ

ಆ ದಂಡೆ ನೀನು ; ಈ ದಂಡೆ ನಾನು ;
ನನ್ನ ನಿನ್ನಯ ನಡುವೆ ಹರಿಯುವದೊಂದವಿರತ ಸ್ರೋತವು ;
ಅದರ ಮಡುವುಗಳಲ್ಲಿ ಜಗದೆದೆ ಸುತ್ತಿ ದಣಿದವು, ಮಣಿದವು !

ಆ ತೀರ ನೀನು ; ಈ ತೀರ ನಾನು ;
ನನ್ನ ನಿನ್ನಯ ನಡುವೆ ಹಬ್ಬಿಹುದೊಂದಖಂಡಿತ ಖಂಡವು ;
ಅಲ್ಲಿ ವಿರಹಜ್ವಾಲೆ ಭೂಕಂಪಗಳು ರಿಂಗಣ ಗುಣಿವವು !

ಆ ಕ್ಷಿತಿಜ ನೀನು ; ಈ ಕ್ಷಿತಿಜ ನಾನು ;
ನಮ್ಮ ನಿಡುವಿದೆ ಚಿರಪುರಾತನದಂತರಿಕ್ಷದನಂತವು ;
ಸಿಡಿಲು ಮಳೆಹೊಯ್ಲುಗಳು ಅದರಲಿ ವಿಧುರವೇದನೆಯಾದವು !

ಆ ಕರೆಯು ನೀನು ; ಈ ಕರೆಯು ನಾನು ;
ನಮ್ಮ ನಡುಪಿಹುದೊಂದು ಪ್ರೇಮದಪಾರ ಪಾರಾವಾರವು ;
ಪ್ರಣಯ ಝುಂಝಾವಾತವದರಲಿ ನಾವನೆನಿತೋ ನುಂಗಿತು !

ಆ ಶಿಖರ ನೀನು ; ಈ ಶಿಖರ ನಾನು ;
ನಮ್ಮ ನಡುವಿದೆ ಸ್ವರ್ಣಸಿದ್ಧಿಯ ಗಿರಿಯ ದರಿಕಂದರಗಳು ;
ಅಲ್ಲಿ ಶೋಧಕ ಸಾಸಿಗರ ಕಂಕಾಲಗಳು ಹರವಿರುವವು !

ಆ ಅಂಚು ನೀನು ; ಈ ಅಂಚು ನಾನು ;
ನಮ್ಮ ನಡುವಿದೆ ಸೀಮೆಸೀಮೆಯ ಸುರುಳಿ ಬಿಚ್ಚಿದ ಬಯಲದು ;
ಅಲ್ಲಿ ತೃಷಿತರ ಜೀವಸೆಳೆಯುವ ಬಿಸಿಲುಗುದುರೆಗಳಲೆವವು !

ಆ ತುದಿಯು ನೀನು ; ಈ ತುದಿಯು ನಾನು ;
ನಮ್ಮ ನಡುವಿಹುದೊಂದಪೂರ್ವದ ಕರ್ಮಜೇಡನ ಜಾಲವು ;
ವಿಧಿಗೆ ಬಾಗಿದರಸ್ಥಿಪಂಜರವಲ್ಲಿ ನೇತಾಡಿರುವವು !

ಆ ಆದಿ ನೀನು ; ಈ ಆದಿ ನಾನು ;
ನಮ್ಮ ನಡುವೆದೆದೆರೆದು ಮಲಗಿಹುದೊಂದನಂತದ ನಾಗವು ;
ಅದರ ಹೆಡೆಮಣಿ ಎನಿತೊ ಧೀರರ ಮೃತ್ಯುಪಾಶಕ್ಕೆಳೆಯಿತು !

ಆ ಗುರಿಯು ನೀನು ; ಈ ನಿರಿಯು ನಾನು ;
ನಮ್ಮ ನಡುಹಾಯ್ದೂರ್ಧ್ವಪಥದಲಿ ಅಳಿದುಳಿದು ನಡೆವಾತ್ಮದಾ
ಧರ್ಮಯಾನದ ಜೊತೆಗೆ ಪ್ರಾಣದ ಶ್ವಾನ ಸಾಗಿದೆ ತೇಕುತಾ !

ಆ ಸೆರಗು ನೀನು ; ಈ ಸೆರಗು ನಾನು ;
ಆದರೆಮ್ಮೆದೆ ನಿರವಧಿಯ ಹಡದಿಯಲಿ ಸಪ್ತಪದಿಗಳನು ;
ಒಂದೆ ಸೆರಗಿನ ಎಳೆತದಲಿ ಬಿಗಿಗೊಂಡು ನಡೆಯುತ್ತಿರುವವು !

ಕುಮಾರ.

# ಲೀಗ್ ಆಫ್ ನೇಷನ್ಸ್ ಜನನ*

ಪ್ರಗತಿಯ ದೃಷ್ಟಿಯಿಂದ, ೧೯೧೪ರಿಂದ ೧೮ರ ವರೆಗೆ ನಡೆದ ನಾಲ್ಕು ವರ್ಷಗಳ ಘೋರ ಯುದ್ಧದ ಮುಖ್ಯ ಫಲವೇನೆಂದರೆ, ಲೀಗ್ ಆಫ್ ನೇಷನ್ಸ್ ಎಂಬ ಅಂತರ ರಾಷ್ಟ್ರೀಯ ಸಂಘದ ಜನನ. ಈ ಸಂಘವು ಹುಟ್ಟಲು ಅನೇಕ ಕಾರಣಗಳಿಂದ ಅವಕಾಶವಾಯಿತು. ಹಿಂದೆ ಹೇಳಿದಂತೆ ೧೯ನೆಯ ಶತಮಾನದಲ್ಲಿ ಕೈಗಾರಿಕೆಗಳ ಕ್ರಾಂತಿ ಮತ್ತು ವಿಜ್ಞಾನಶಾಸ್ತ್ರಗಳ ಬೆಳವಣಿಗೆಯ ಪರಿಣಾಮ ವಾಗಿ ಅಂತರರಾಷ್ಟ್ರೀಯ ಸಮಾಜ ಉದಯಿಸಿತು; ರಾಷ್ಟ್ರಗಳಲ್ಲಿ ಪರಸ್ಪರ ಸಹಕಾರ ಬೆಳೆಯುತ್ತ ಬಂತು; ಪ್ರಪಂಚದ ಒಟ್ಟು ಏಳ್ಗೆಗೆ ಬೇಕಾದ ವ್ಯವಸ್ಥೆಗಳನ್ನು ಮಾಡುವುದಕ್ಕೆ ಅಂತರರಾಷ್ಟ್ರೀಯ ಸಂಸ್ಥೆಯೊಂದು ಇರಬೇಕೆಂಬ ಅಂಶ ಜನರ ಮನಸ್ಸಿಗೆ ನಾಟಿತು. ಮತ್ತೆ ಯುದ್ಧ ಆರಂಭವಾದ ಮೇಲೆ ಯುದ್ಧ ಮತ್ತು ಆಹಾರ ಪದಾರ್ಥಗಳ ಸರಬರಾಜು, ಸಮುದ್ರಯಾನ ಇತ್ಯಾದಿ ವಿಷಯಗಳಲ್ಲಿ ಹತೋಟಿ ಕ್ರಮಗಳನ್ನು ಆಚರಣೆಗೆ ತರಲು ಮಿತ್ರ ರಾಷ್ಟ್ರಗಳು ಜೊತೆ ಸಮಿತಿಗಳನ್ನು ಏರ್ಪಡಿಸಿದರು; ಮಿತ್ರವರ್ಗದವರಲ್ಲಿ ಹಿಂದೆ ಎಂದೂ ಇಲ್ಲದಷ್ಟು ಪರಸ್ಪರ ಸಹಾನು ಭೂತಿ ಮತ್ತು ಸಹಕಾರ ಹುಟ್ಟಿತು. ಯುದ್ಧ ನಡೆಸಲು ಜನಾಂಗಗಳು ಒಂದಾಗ ಬಲ್ಲವಾದರೆ ಶಾಂತಿಸ್ಥಾಪನೆಗೆ ಏಕೆ ಒಂದಾಗಬಾರದೆಂಬ ಭಾವನೆ ಮೂಡಿತು. ಎಲ್ಲಕ್ಕಿಂತ ಮುಖ್ಯವಾಗಿ ಯುದ್ಧದ ಸಾವುನೋವುಗಳು ಜನರಲ್ಲಿ ಶಾಂತಿಯ ಹಂಬಲನ್ನು ಹೆಚ್ಚಿಸಿತು. ಇದು "ಯುದ್ಧವನ್ನು ಎಂದೆಂದಿಗೂ ಕೊನೆಗಾಣಿಸುವ ಯುದ್ಧ" (A War to End War) ಆಗಬೇಕು ಎಂಬ ಕೂಗು ಹಬ್ಬಿತು. ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ "ಲೀಗ್ ಟು ಎನ್‌ಫೋರ್ಸ್ ಪೀಸ್" ಎಂಬ ಸಂಸ್ಥೆಯೂ ಇಂಗ್ಲೆಂಡಿನಲ್ಲಿ ಲೀಗ್ ಆಫ್ ನೇಷನ್ಸ್ ಸೊಸೈಟಿ ಎಂಬ ಸಂಸ್ಥೆಯೂ ಶಾಂತಿ ಪ್ರಚಾರ ನಡೆಸಿದವು. ಇದರ ಪರಿಣಾಮವಾಗಿ ಮಿತ್ರವರ್ಗದ ಆಳರಸರ ಗಮನವೂ ಯುದ್ಧವಾದ ಮೇಲೆ ಏರ್ಪಡಿಸಬೇಕಾದ ಅಂತರರಾಷ್ಟ್ರೀಯ ವ್ಯವಸ್ಥೆಯ ಕಡೆ ತಿರುಗಿತು. ಬ್ರಿಟಿಷ್ ಸರ್ಕಾರವು ಲಾರ್ಡ್ ರಾಬರ್ಟ್ ಸೆಸಿಲ್ ಅವರ ಪ್ರೇರಣೆಯ ಮೇಲೆ ಈ ವಿಷಯುವನ್ನು ಪರಿಶೀಲಿಸಲು ಫಿಲ್ಲಿಮೋರ್ ಸಮಿತಿಯನ್ನು ನಿಯಮಿಸಿತು. ಇದೇ ವಿಷಯದಲ್ಲಿ ದಕ್ಷಿಣ ಆಫ್ರಿಕದ ಜನರಲ್ ಸ್ಮಟ್ಸ್ ಅವರೂ ಫ್ರಾನ್ಸಿನ ಲಿಯಾ ಬೂರ್‌ಜ್ವಾ ಅವರೂ ತಮ್ಮ ತಮ್ಮ ಯೋಜನೆಗಳನ್ನು ಜನರ ಮುಂದಿಟ್ಟರು. ಕೊನೆಗೆ

* ಸಂಕ್ರಾಂತಿ ಸಂಚಿಕೆಯಿಂದ ಮುಂದುವರಿದುದು.

ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾದ ವುಡ್ರೊ ವಿಲ್ಸನ್ ಅವರು ತಮ್ಮ ಪ್ರಸಿದ್ಧ ವಾದ "೧೪ ಅಂಶ"ಗಳ (Fourteen Points) ಒಂದರಲ್ಲಿ ಪ್ರಪಂಚದ ಶಾಂತಿಯನ್ನು ಕಾಯಲು ಒಂದು ಅಂತರರಾಷ್ಟ್ರೀಯ ಸಂಸ್ಥೆ ಇರಬೇಕೆಂಬ ಅಂಶವನ್ನು ಸೂಚಿಸಿದರು. ಅಲ್ಲದೆ ಎಷ್ಟು ಅಡಚಣೆಗಳು ಒದಗಿದರೂ ಎದೆಗುಂದದೆ ಹಲವಾರು ರಾಷ್ಟ್ರಗಳ ಒಪ್ಪಿಗೆಯನ್ನು ಪಡೆದು ಲೀಗ್ ಆಫ್ ನೇಷನ್ಸ್ ಎಂಬ ಅಂತರರಾಷ್ಟ್ರೀಯ ಸಂಘವನ್ನು ಸ್ಥಾಪಿಸಿದರು.

## ಲೀಗಿನ ಅಂಗರಚನೆ

ಲೀಗ್ ಆಫ್ ನೇಷನ್ಸಿನ ಮುಖ್ಯಾಂಗಗಳು ಯಾವುವೆಂದರೆ: (೧) ಅಂತರರಾಷ್ಟ್ರೀಯ ಪ್ರತಿನಿಧಿಸಭೆ (The Assembly of the League), (೨) ಕಾರ್ಯಕಾರಿ ಮಂಡಲಿ (The Council of the League) ಮತ್ತು (೩) ಅಂತರರಾಷ್ಟ್ರೀಯ ಕಚೇರಿ (The Secretariat of the League). ಪ್ರತಿನಿಧಿ ಸಭೆಯಲ್ಲಿ ಚಿಕ್ಕವಾಗಲಿ ದೊಡ್ಡವಾಗಲಿ ಎಲ್ಲ ರಾಷ್ಟ್ರಗಳಿಗೂ ಸಮಾನ ಸ್ಥಾನವಿತ್ತು; ಪ್ರತಿಯೊಂದು ರಾಷ್ಟ್ರಕ್ಕೂ ಒಂದೇ ಒಂದು ವೋಟಿನ ಅಧಿಕಾರವಿತ್ತು. ಕಾರ್ಯಕಾರಿ ಮಂಡಲಿಗೆ ಬ್ರಿಟಿಷ್ ಚಕ್ರಾಧಿಪತ್ಯ, ಜರ್ಮನಿ, ಫ್ರೆನ್ಸ್, ಇಟಲಿ, ಜಪಾನ್, ಸಂಯುಕ್ತ ಸಂಸ್ಥಾನ ಮತ್ತು ಸೋವಿಯೆಟ್ ರಷ್ಯ ಈ ರಾಷ್ಟ್ರಗಳು ಒಬ್ಬೊಬ್ಬ ಪ್ರತ್ಯೇಕ ಪ್ರತಿನಿಧಿಯನ್ನು ಕಳುಹಿಸುತ್ತಿದ್ದವು. ಇತರ ರಾಷ್ಟ್ರಗಳು ೯ ಜನ ಸದಸ್ಯರನ್ನು ಒಟ್ಟಿನಲ್ಲಿ ಆರಿಸಿ ಕಳುಹಿಸುತ್ತಿದ್ದವು. ಒಟ್ಟಿನಲ್ಲಿ ಹೇಳಬಹುದಾದರೆ ಪ್ರತಿನಿಧಿ ಸಭೆಯಲ್ಲಿ ಅಲ್ಪ ರಾಷ್ಟ್ರಗಳೂ ಕಾರ್ಯಕಾರಿ ಮಂಡಲಿಯಲ್ಲಿ ಪ್ರಬಲ ರಾಷ್ಟ್ರಗಳೂ ಬಲವಾಗಿದ್ದವು. ಆದರೆ ಯಾವ ಮುಖ್ಯ ವಿಷಯದಲ್ಲಾಗಲಿ ತೀರ್ಮಾನಕ್ಕೆ ಮುಂಚೆ ಎಲ್ಲ ರಾಷ್ಟ್ರಗಳ ಒಪ್ಪಿಗೆಯೂ ಬೇಕಿದ್ದುದರಿಂದ **ರಾಷ್ಟ್ರೀಯ ಸ್ವಾಮ್ಯಕ್ಕೆ** (National Sovereignty) ಯಾವ ಕುಂದೂ ಬರುವಂತಿರಲಿಲ್ಲ.

ಈ ಲೀಗಿನ ಮುಖ್ಯ ಅಂಗಗಳು ಅಲ್ಲದೆ ಇದರ ಧ್ಯೇಯವನ್ನು ಸಾಧಿಸಲು ಇದರ ಆಶ್ರಯದಲ್ಲಿ ಆರೋಗ್ಯಸಂಸ್ಥೆ. ಆರ್ಥಿಕಸಂಸ್ಥೆ, ಸ್ಥಾಯಿ ಮ್ಯಾಂಡೇಟ್ಸ್ ಸಮಿತಿ ಇವೇ ಮೊದಲಾದ ಸಮಿತಿಗಳೂ ಉಪಸಂಸ್ಥೆಗಳೂ ಹುಟ್ಟಿದವು. ಇವೂ ಅಲ್ಲದೆ ಲೀಗಿನ ಅಧಿಕಾರಕ್ಕೆ ಒಳಪಡದ ಅಂತರರಾಷ್ಟ್ರೀಯ ಕಾರ್ಮಿಕ ಸಂಘವೂ (International Labour Organization), ಅಂತರರಾಷ್ಟ್ರೀಯ ಸ್ಥಾಯಿ ನ್ಯಾಯಾಸ್ಥಾನವೂ (The Permanent Court of International Justice) ಹುಟ್ಟಿದವು.

ಲೀಗಿನ ಮತ್ತು ಇದರ ಉಪಸಮಿತಿಗಳ ಧ್ಯೇಯ ಮುಖ್ಯವಾಗಿ ಮೂರು: (೧) ಅಂತರರಾಷ್ಟ್ರೀಯ ಸಹಕಾರವನ್ನು ಬೆಳಸುವುದು, (೨) ಅಂತರರಾಷ್ಟ್ರೀಯ

ವ್ಯವಹಾರಗಳನ್ನೂ ವಿವಾದಗಳನ್ನೂ ಶಾಂತರೀತಿಯಲ್ಲಿ ತೀರ್ಮಾನಗೊಳಿಸುವುದು, ಮತ್ತು (೩) ಯುದ್ಧಕ್ಕೆ ಕಾರಣವಾದ ಅಂಶಗಳನ್ನು ನಿವಾರಿಸುವುದು. ಲೀಗು ಈ ಧ್ಯೇಯಗಳನ್ನು ಎಷ್ಟರಮಟ್ಟಿಗೆ ಸಾಧಿಸಿದೆ ಎಂಬುದನ್ನು ನೋಡೋಣ.

## ಅಂತರರಾಷ್ಟ್ರೀಯ ಸಹಕಾರ

ಲೀಗ್ ಆಫ್ ನೇಷನ್ಸಿನ ಸ್ಥಾಪನೆಯಾದುದು ಮುಖ್ಯವಾಗಿ ಯುದ್ಧವನ್ನು ನಿವಾರಿಸುವುದಕ್ಕಾಗಿ. ಈ ಯತ್ನದಲ್ಲಿ ಇದು ವಿಫಲವಾಗಿ ಈ ಎರಡನೆಯ ಮಹಾ ಯುದ್ಧ ಒದಗಿರುವುದರಿಂದ ಇದರಿಂದ ಯಾವ ಪ್ರಯೋಜನವೂ ಆಗಿಲ್ಲವೆಂಬ ಭಾವನೆ ಹುಟ್ಟಿದೆ. ವಿಚಾರಮಾಡಿ ನೋಡಿದರೆ ಇದು ಅಂತರರಾಷ್ಟ್ರೀಯ ಶಾಂತಿಯ ಧ್ಯೇಯ ಸಾಧನೆಗೆ ಬಹುಮಟ್ಟಿಗೆ ಸಹಾಯಕವಾಗಿದೆಯೆಂದು ಕಂಡುಬರುತ್ತದೆ. ಮುಖ್ಯವಾಗಿ ಲೀಗು ರಾಷ್ಟ್ರಗಳು ಪರಸ್ಪರ ಸಹಕರಿಸಲು ಅವಕಾಶವನ್ನು ಕಲ್ಪಿಸಿಕೊಟ್ಟು ಇಡಿಯ ಮಾನವವರ್ಗದ ಹಿತವನ್ನು ಬಹುಮಟ್ಟಿಗೆ ಸಾಧಿಸಿರುವ ಸಂಗತಿ ತಿಳಿದುಬರುತ್ತದೆ. ಅಂತರರಾಷ್ಟ್ರೀಯ ಸಹಕಾರದ ಬೆಳವಣಿಗೆಯಲ್ಲಿ ಲೀಗಿನ ಪಾತ್ರವನ್ನು ಸಂಪೂರ್ಣವಾಗಿ ವಿವರಿಸಲು ಈ ಪುಟ್ಟ ಲೇಖನದಲ್ಲಿ ಸಾಧ್ಯವಿಲ್ಲ; ಒಂದೆರಡು ಅಂಶಗಳನ್ನು ಮಾತ್ರ ಎತ್ತಿ ಹೇಳಲಾಗುತ್ತದೆ.

**ಅಂತರರಾಷ್ಟ್ರೀಯ ಆಪತ್ಸಹಾಯ ಸಂಘ**—ಕಳೆದ ಮಹಾ ಯುದ್ಧವಾದ ಮೇಲೆ ಕಷ್ಟನಿಷ್ಠುರಗಳಿಗೆ ಸಿಕ್ಕಿ ನರಳುತ್ತಿದ್ದ ಜನಾಂಗಗಳಿಗೆ ಲೀಗು ಮಾಡಿದ ಸಹಾಯ ಪ್ರಶಂಸನೀಯವಾದುದು. ಯುದ್ಧದ ಬಂದಿಗಳನ್ನು ಅವರವರ ದೇಶಗಳಿಗೆ ಕಳುಹಿಸಿಕೊಡುವುದು ಆ ಕಾಲದ ಸ್ಥಿತಿಯಲ್ಲಿ ಬಹು ಕಷ್ಟವಾಗಿತ್ತು. ಲೀಗು ಈ ಕಾರ್ಯವನ್ನು ತನ್ನ ಕೈಗೆ ತೆಗೆದುಕೊಂಡು ೪,೨೭,೦೦೦ ಜನ ಯುದ್ಧದ ಬಂದಿಗಳನ್ನು ತಮ್ಮ ತಮ್ಮ ದೇಶಕ್ಕೆ ಕಳುಹಿಸಿಕೊಟ್ಟಿತು. ಮತ್ತೆ ಮಧ್ಯ ಯೂರೋಪು, ರಷ್ಯ, ಆಲ್ಬೇನಿಯಾ ದೇಶಗಳಲ್ಲಿ ದೊಡ್ಡ ಕ್ಷಾಮ ಒದಗಿ ಲಕ್ಷಾಂತರ ಜನ ಸಾವಿಗೆ ಈಡಾದರು. ಲೀಗು ನಾರ್ವೇ ದೇಶದ ಡಾಕ್ಟರ್ ನ್ಯಾನ್ಸೆನ್ ಎಂಬ ಮಹಾನುಭಾವನ ನಾಯಕತ್ವದಲ್ಲಿ ಈ ದೇಶಗಳಲ್ಲಿ ಕ್ಷಾಮನಿವಾರಣೆಗೆ ಬಹುಮಟ್ಟಿನ ಸಹಾಯಮಾಡಿತು. ಮತ್ತೆ ರಷ್ಯದಿಂದ ಆ ದೇಶದಲ್ಲಿ ಉಂಟಾದ ಕ್ರಾಂತಿಯ ಪರಿಣಾಮವಾಗಿ ೪ ಲಕ್ಷ ಜನ ಇತರ ದೇಶಗಳಿಗೆ ಓಡಿಬಂದರು. ತುರ್ಕಿಯಿಂದ ಅನ್ಯದೇಶದವರೆಂದು ಓಡಿಸಲ್ಪಟ್ಟವರಲ್ಲಿ ೧೫ ಲಕ್ಷ ಗ್ರೀಕರು ಗ್ರೀಸಿಗೂ, ಮೂರುಲಕ್ಷ ಆರ್ಮೀನಿಯನರು ಆರ್ಮೀನಿಯಾಕ್ಕೂ, ೨ ಲಕ್ಷ ಬಲ್ಗೇರಿಯನರು ಬಲ್ಗೇರಿಯಾಕ್ಕೂ ಬಂದರು. ಇವರೆಲ್ಲರಿಗೂ ವಸತಿಗಳನ್ನು ಏರ್ಪಡಿಸಿ ಜೀವನೋಪಾಯವನ್ನು ಕಲ್ಪಿಸುವುದು ಬಹು ಕಷ್ಟವಾದ ಕೆಲಸವಾಗಿತ್ತು. ಈ ವಿಪತ್ತಿಗೆ ಸಿಕ್ಕಿಬಿದ್ದ ರಾಷ್ಟ್ರಗಳಿಗೆ ಲೀಗು ತನ್ನ

ಜವಾಬ್ದಾರಿಯ ಮೇಲೆ ಕೋಟ್ಯಂತರ ರೂಪಾಯಿ ಸಾಲ ಕೊಡಿಸಿತು. ಈ ಕೆಲಸದಲ್ಲಿ ಕೈ ನುರಿತ ಅಧಿಕಾರಿಗಳನ್ನು ಕಳುಹಿಸಿ ತಕ್ಕ ಸಲಹೆಗಳನ್ನು ಕೊಟ್ಟಿತು. ಕೊನೆಯ ದಾಗಿ ೧೯೨೭ರಲ್ಲಿ ಯಾವ ದೇಶಕ್ಕಾದರೂ ಕ್ಷಾಮ, ಭೂಕಂಪ ಇತ್ಯಾದಿ ಅನಿರೀಕ್ಷಿತ ವಿಪತ್ತು ಒದಗಿದರೆ ಸಹಾಯಮಾಡಲು ಇಂಟರ್‌ನ್ಯಾಷನಲ್ ರಿಲೀಫ್ ಯೂನಿಯನ್ ಎಂಬ ಆಪತ್ಸಹಾಯ ಸಂಘವನ್ನು ಸ್ಥಾಪಿಸಿತು.

**ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ**—ಯಾವುದಾದರೂ ಒಂದು ರಾಷ್ಟ್ರ ತಾನು ಮಾತ್ರ ಮಾದರಿಯ ವ್ಯವಸ್ಥೆಗಳನ್ನು ಮಾಡುವೆನೆಂದು ಹೊರಟರೆ ಅದರಿಂದ ಅದಕ್ಕೆ ಅನೇಕ ತೊಂದರೆಗಳು ಒದಗುತ್ತವೆ. ಕೂಲಿಗಾರರಿಗೆ ಸರಿಯಾದ ಜೀವನ ಸೌಕರ್ಯಗಳನ್ನು ಕಲ್ಪಿಸಲು ಹೆಚ್ಚಿನ ಹಣ ಖರ್ಚಾಗುತ್ತದೆ; ಇದರಿಂದ ಕೈಗಾರಿಕೆ ಸಾಮಾನುಗಳ ತಯಾರಿಕೆಯ ಬೆಲೆ ಏರುತ್ತದೆ. ಎಲ್ಲ ರಾಷ್ಟ್ರಗಳೂ ಒಂದೇ ರೀತಿಯಲ್ಲಿ ನಡೆದುಕೊಂಡರೆ ಯಾವ ತೊಂದರೆಯೂ ಇರುವುದಿಲ್ಲ. ಆದರೆ ಕೆಲವು ದೇಶದ ಬಂಡವಾಳಗಾರರು ಕೂಲಿಗಾರರನ್ನು ಅತಿಯಾಗಿ ದುಡಿಸಿಕೊಂಡು ಸಾಮಾನು ಗಳನ್ನು ಸುಲಭಬೆಲೆಗೆ ತಯಾರಿಸಿ ಮಾರಾಟಮಾಡಿದರೆ ಆ ದೇಶದವರಿಗೇ ಅಂತರ ರಾಷ್ಟ್ರೀಯ ವ್ಯಾಪಾರದಲ್ಲಿ ಹಿರಿಮೆಯೂ ಲಾಭವೂ ದೊರಕುತ್ತವೆ. ಕೂಲಿಗಾರರನ್ನು ಮಾದರಿಯ ರೀತಿಯಲ್ಲಿ ನೋಡಿಕೊಂಡ ರಾಷ್ಟ್ರಗಳ ವ್ಯಾಪಾರಬಲ ಕುಗ್ಗುತ್ತದೆ. ಆದುದರಿಂದ ಕೂಲಿಗಾರರ ಹಿತಸಾಧನೆಗೆ ಅಂತರರಾಷ್ಟ್ರೀಯ ಒಪ್ಪಂದಗಳು ಬಹು ಮುಖ್ಯ. ಇದಕ್ಕಾಗಿ ಇಂಟರ್‌ನ್ಯಾಷನಲ್ ಲೇಬರ್ ಆರ್ಗ್ಯಾನಿಜೇಷನ್ ಎಂಬ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸ್ಥಾಪನೆಯಾಯಿತು. ಇದರಲ್ಲಿ ಪ್ರತಿ ಯೊಂದು ರಾಷ್ಟ್ರದ ಸರ್ಕಾರಕ್ಕೂ ಬಂಡವಾಳಗಾರ ಮತ್ತು ಕೂಲಿಗಾರ ಪಂಗಡ ದವರಿಗೂ ಪ್ರಾತಿನಿಧ್ಯವಿತ್ತು. ಇದು ತನ್ನ ಮೊದಲ ೧೦ ವರ್ಷಗಳ ಕಾರ್ಯಾಚರಣೆ ಯಲ್ಲಿ ೨೭ ಒಪ್ಪಂದಗಳಿಗೆ ಹಲವಾರು ರಾಷ್ಟ್ರಗಳ ಸಮ್ಮತಿಯನ್ನು ಪಡೆಯಿತು. ಈ ಒಪ್ಪಂದಗಳಲ್ಲಿ ಮುಖ್ಯವಾದುವು ಯಾವುವೆಂದರೆ: ಕೂಲಿಗಾರರಿಂದ ದಿನಕ್ಕೆ ೮ ಘಂಟೆ ಮತ್ತು ವಾರಕ್ಕೆ ೪೮ ಘಂಟೆಗಳಿಗೆ ಮೇಲ್ಪಟ್ಟು ಕೆಲಸ ಮಾಡಿಸಿಕೊಳ್ಳಬಾರದು; ವಾರಕ್ಕೆ ಒಂದು ದಿನ ೨೪ ಘಂಟೆಗಳ ಪೂರ್ತಿ ರಜ ಕೊಡಬೇಕು; ಅವರು ಪ್ರಸವಿಸಿದ ಮೇಲೆ ಆರು ವಾರಗಳು ಕಳೆಯುವ ವರೆಗೂ ಹೆಂಗಸರಿಂದ ಕೆಲಸ ತೆಗೆದುಕೊಳ್ಳ ಕೂಡದು; ೧೪ ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗರನ್ನು ಕೆಲಸಕ್ಕಿಟ್ಟುಕೊಳ್ಳ ಕೂಡದು. ಈ ಒಪ್ಪಂದಗಳಲ್ಲಿ ಆಯಾ ದೇಶಗಳ ಸ್ಥಿತಿಗಳಿಗನುಸಾರವಾಗಿ ಕೆಲವು ಮಾರ್ಪಾಡುಗಳು ಮಾಡಲ್ಪಟ್ಟವು.

**ಅಂತರರಾಷ್ಟ್ರೀಯ ಆರೋಗ್ಯ ಸಂಸ್ಥೆ**—ಪ್ರಪಂಚದ ಆರೋಗ್ಯವನ್ನು

ಕಾಪಾಡಲು ಅಂತರರಾಷ್ಟ್ರೀಯ ಸಹಕಾರ ಇರಬೇಕೆಂಬ ಅಂಶ ಕಳೆದ ಮಹಾ ಯುದ್ಧಕ್ಕೆ ಮುಂಚೆಯೇ ಜನರ ಮನಸ್ಸಿಗೆ ಬಂದುದರಿಂದ ೧೯೦೭ರಲ್ಲಿ ಅಂತರ ರಾಷ್ಟ್ರೀಯ ಆರೋಗ್ಯ ಸಂಸ್ಥೆಯೊಂದು ತೆರೆಯಲ್ಪಟ್ಟಿತ್ತು. ಲೀಗ್ ಆಫ್ ನೇಷನ್ಸಿನ ಆವಿರ್ಭಾವವಾದ ಮೇಲೆ ಇದರ ಆಶ್ರಯದಲ್ಲಿ ೧೯೨೩ ರಲ್ಲಿ ಬೇರೊಂದು ಅಂತರ ರಾಷ್ಟ್ರೀಯ ಆರೋಗ್ಯಸಂಸ್ಥೆಯ ಸ್ಥಾಪನೆಯಾಯಿತು. ಇದರಿಂದ ಪ್ರಪಂಚಕ್ಕೆ ಅನೇಕ ವಿಧಗಳಲ್ಲಿ ಸಹಾಯವಾಯಿತು. ಇದು ಜಿನೀವಾದಲ್ಲಿಯೂ ಸಿಂಗಪುರದಲ್ಲಿಯೂ ಸಾಂಕ್ರಾಮಿಕ ರೋಗದ ಸುದ್ದಿಯ ಪ್ರಕಟನ ಕೇಂದ್ರಗಳನ್ನು ಸ್ಥಾಪಿಸಿತು. ಈ ಕೇಂದ್ರಗಳ ಅಧಿಕಾರಿಗಳು ಪ್ರಪಂಚದ ನಾನಾ ಭಾಗಗಳಿಂದ ಸುದ್ದಿ ತರಿಸಿ ಎಲ್ಲೆಲ್ಲಿ ಸಾಂಕ್ರಾಮಿಕ ರೋಗಗಳು ಹುಟ್ಟಿವೆ, ಯಾವ ಕಡೆ ಹಬ್ಬುತ್ತಿವೆ ಎಂದು ಜನರಿಗೆ ಎಚ್ಚರಿಕೆ ಕೊಡುತ್ತಿದ್ದರು. ಲೀಗಿನ ಆರೋಗ್ಯಸಂಸ್ಥೆಯು ಪ್ರಪಂಚದ ಆರೋಗ್ಯ ಹೇಗಿದೆ, ನಾನಾ ರಾಷ್ಟ್ರಗಳ ಆರೋಗ್ಯ ಇಲಾಖೆಗಳ ಸ್ಥಿತಿಗತಿಗಳೇನು, ಎಂಬುದನ್ನು ತಿಳಿಸುವುದಕ್ಕೆ ಒಂದು ಪುಸ್ತಕಮಾಲೆಯನ್ನೂ, ಒಂದು ವಾರ್ಷಿಕ ಪತ್ರಿಕೆಯನ್ನೂ ಪ್ರಕಟಿಸುತ್ತಿತ್ತು. ಮತ್ತೆ ಕ್ಷಯ, ಮಲೇರಿಯಾ, ಕುಷ್ಠ, ಕ್ಯಾನ್ಸರ್, ನಿದ್ರೆರೋಗ (Sleeping Sickness) ಇತ್ಯಾದಿ ರೋಗಗಳಿಗೆ ಚಿಕಿತ್ಸಾಮಾರ್ಗವನ್ನು ಕಂಡುಹಿಡಿಯಲು ಪ್ರಪಂಚದಲ್ಲೆಲ್ಲ ಪ್ರಸಿದ್ಧರಾದ ವೈದ್ಯರ ಸಮಿತಿಗಳನ್ನು ನಿಯಮಿಸಿತು. ಈ ಕಾರ್ಯಕ್ಕೆ ಅಮೇರಿಕದ ರಾಕ್‌ಫೆಲರ್ ಎಂಬವರು ಸ್ಥಾಪಿಸಿದ ನಿಧಿಯಿಂದ ಬಹು ಹೆಚ್ಚಿನ ಸಹಾಯವಾಯಿತು. ಮತ್ತು, ಯಾವ ದೇಶವಾದರೂ ಮತ್ತೊಂದು ದೇಶದ ವೈದ್ಯರ ಸಹಾಯವನ್ನು ಅಪೇಕ್ಷಿಸಿದಲ್ಲಿ ಅದು ದೊರಕುವಂತೆ ಮಾಡಲು ಲೀಗಿನ ಆರೋಗ್ಯ ಇಲಾಖೆ ಸಹಾಯಮಾಡಿತು. ೧೯೩೦ ರೊಳಗೆ ಲೀಗು ಒಂದು ದೇಶದ ೬೦೦ ಜನ ವೈದ್ಯರನ್ನು ಮತ್ತೊಂದು ದೇಶಕ್ಕೆ ಕಳುಹಿಸಿಕೊಟ್ಟಿತು. ಮತ್ತೆ ೧೯೨೮ ರಲ್ಲಿ ಗ್ರೀಸ್ ದೇಶವೂ ೧೯೨೯ ರಲ್ಲಿ ಬೊಲೀವಿಯಾ ಮತ್ತು ಚೀನಾ ದೇಶಗಳೂ ತಮ್ಮ ದೇಶಗಳ ಆರೋಗ್ಯ ಇಲಾಖೆಗಳನ್ನು ಸರಿಯಾದ ತಹಬಂದಿಗೆ ತರುವುದಕ್ಕೆ ಲೀಗನ್ನು ಆಶ್ರಯಿಸಿ ಅದು ಕಳುಹಿಸಿಕೊಟ್ಟ ವೈದ್ಯಸಮಿತಿಗಳ ಸಲಹೆಗಳನ್ನು ತೆಗೆದುಕೊಂಡವು.

**ಇತರ ವಿಧಗಳಲ್ಲಿ ಸಹಕಾರ**— ಲೀಗು ಈ ಮೇಲ್ಕಂಡ ವಿಷಯಗಳಲ್ಲಿ ಅಲ್ಲದೆ ಇನ್ನೂ ಅನೇಕ ವಿಧಗಳಲ್ಲಿ ಅಂತರರಾಷ್ಟ್ರೀಯ ಸಹಕಾರ ಹೆಚ್ಚುವಂತೆ ಮಾಡಿತು. ಇವುಗಳಲ್ಲಿ ಮುಖ್ಯವಾದುವು ಯಾವುವೆಂದರೆ: ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೆಂಗಸರನ್ನು ಕೊಂಡೊಯ್ದು ವೇಶ್ಯಾವೃತ್ತಿಗೆ ಹಾಕುವ ವ್ಯಾಪಾರವನ್ನು ತಡೆಗಟ್ಟುವುದು; ಅಫೀಮು ಇತ್ಯಾದಿ ಮಾದಕ ದ್ರವ್ಯಗಳ ತಯಾರಿಕೆ ಮತ್ತು

ಮಾರಾಟವನ್ನು ತಡೆಗಟ್ಟುವುದು; ಒಂದಲ್ಲ ಒಂದು ವಿಧದಲ್ಲಿ ಹಲವಾರು ದೇಶಗಳಲ್ಲಿ ಉಳಿದುಕೊಂಡು ಬಂದಿರುವ ಗುಲಾಮ ಪದ್ಧತಿಯನ್ನು ನಿರ್ಮೂಲಮಾಡುವುದು; ಅಂತರರಾಷ್ಟ್ರೀಯ ಕಾನೂನುಗಳನ್ನೂ ಒಪ್ಪಂದಗಳನ್ನೂ ಕ್ರೋಡೀಕರಿಸುವುದು; ಮತ್ತು ನಾನಾ ದೇಶಗಳ ವಿದ್ವಾಂಸರಲ್ಲಿ ಹೆಚ್ಚಿನ ಸಂಪರ್ಕ ಬೆಳಸಿ ಜ್ಞಾನಾಭಿವೃದ್ಧಿಗೆ ಸಹಾಯಮಾಡುವುದು.

## ಅಂತರರಾಷ್ಟ್ರೀಯ ವ್ಯವಹಾರಗಳ ತೀರ್ಮಾನ

ಲೀಗ್ ಆಫ್ ನೇಷನ್ಸ್ ಒಡಂಬಡಿಕೆಯ ಪ್ರಕಾರ ಲೀಗಿನ ಸದಸ್ಯರು ಯುದ್ಧಕ್ಕೆ ಕಾರಣವಾಗಬಹುದಾದ ವಿವಾದಗಳು ಪರಸ್ಪರ ಹುಟ್ಟಿದಲ್ಲಿ ಅವನ್ನು ಪಂಚಾಯಿತಿಗಾಗಲಿ, ಅಂತರರಾಷ್ಟ್ರೀಯ ನ್ಯಾಯಾಸ್ಥಾನದ ತೀರ್ಪಿಗಾಗಲಿ, ಲೀಗಿನ ಕಾರ್ಯಕಾರಿ ಮಂಡಲಿಯ ಪರಿಶೀಲನೆಗಾಗಲಿ ತರಬೇಕಿತ್ತು; ತೀರ್ಪುಕೊಟ್ಟ ಮೂರು ತಿಂಗಳವರೆಗೂ ಯುದ್ಧಮಾಡುವುದಿಲ್ಲವೆಂದು ಒಪ್ಪಬೇಕಿತ್ತು.

೧೯೨೨ ರಲ್ಲಿ ಅಂತರರಾಷ್ಟ್ರೀಯ ನ್ಯಾಯ ಮತ್ತು ಸಂಪ್ರದಾಯದ ವಿಷಯದಲ್ಲಿ ಹುಟ್ಟಿದ ವ್ಯವಹಾರಗಳಲ್ಲಿ ತೀರ್ಪುಕೊಡಲು ಅಂತರರಾಷ್ಟ್ರೀಯ ನ್ಯಾಯಾಸ್ಥಾನದ (The Permanent Court of International Justice) ಸ್ಥಾಪನೆಯಾಯಿತು. ಇದು ಲೀಗಿನಿಂದ ಪ್ರತ್ಯೇಕವಾಗಿಯೂ ಪೂರ್ತಿ ಸ್ವತಂತ್ರವಾಗಿಯೂ ಇತ್ತು. ಆದರೆ ಇದರ ನ್ಯಾಯಾಧೀಶರನ್ನು ಲೀಗಿನ ಪ್ರತಿನಿಧಿ ಸಭೆ ಮತ್ತು ಕಾರ್ಯಕಾರಿ ಮಂಡಲಿ ಇವು ನಿಯಮಿಸುತ್ತಿದ್ದವು. ಇದಕ್ಕೆ ನಾಲ್ಕು ಸಂದರ್ಭಗಳಲ್ಲಿ ಅಂತರರಾಷ್ಟ್ರೀಯ ವಿವಾದಗಳಲ್ಲಿ ಕೈಹಾಕಲು ಅಧಿಕಾರವಿತ್ತು: (೧) ಲೀಗಿನ ಕಾರ್ಯಕಾರಿ ಮಂಡಲಿಯು ಯಾವುದಾದರೂ ವಿಷಯದಲ್ಲಿ ಇದರ ಅಭಿಪ್ರಾಯವನ್ನು ಕೇಳಿದಾಗ; (೨) ವ್ಯವಹಾರಕ್ಕೆ ಸಂಬಂಧಿಸಿದ ರಾಷ್ಟ್ರಗಳು ತಾವಾಗಿ ಸಮ್ಮತಿಸಿ ವಿವಾದವನ್ನು ಇದರ ವಿಮರ್ಶೆಗೆ ತಂದಾಗ; (೩) ಯಾವುದಾದರೂ ರಾಷ್ಟ್ರ ತಾನು ಮಾಡಿಕೊಂಡ ಕೌಲಿನ ಒಂದು ಷರತ್ತಿನ ಪ್ರಕಾರ ಅದಕ್ಕೆ ಸಂಬಂಧಿಸಿದ ವ್ಯವಹಾರವನ್ನು ಇದರ ವಿಮರ್ಶೆಗೆ ತಂದಾಗ; ಮತ್ತು (೪) ಪರಸ್ಪರ ಹುಟ್ಟಿದ ನ್ಯಾಯ ವಿಷಯಕ ವ್ಯವಹಾರಗಳನ್ನು ಇದರ ವಿಮರ್ಶೆಗೆ ತರುತ್ತೇವೆಂದು ಒಪ್ಪಿಕೊಂಡ ರಾಷ್ಟ್ರಗಳ ವ್ಯವಹಾರ ವಿಷಯಗಳಲ್ಲಿ. ಈ ನ್ಯಾಯಾಸ್ಥಾನವು ೧೯೩೫ ರೊಳಗೆ ೫೦ ವ್ಯವಹಾರಗಳನ್ನು ಪರಿಶೀಲಿಸಿತು. ೧೯೩೧ ರಲ್ಲಿ ಆಸ್ಟ್ರಿಯಾ ಮತ್ತು ಜರ್ಮನಿ ಇವನ್ನು ಒಂದುಗೂಡಿಸುವ ಸುಂಕದ ಸಮಿತಿಯ ಯೋಜನೆಯ ವಿಷಯದಲ್ಲಿ ಇದು ಕೊಟ್ಟ ತೀರ್ಪೊಂದನ್ನು ಬಿಟ್ಟರೆ ಇದರ ತೀರ್ಪುಗಳಿಗೆ ಎಲ್ಲರಿಂದಲೂ ಬಹುಮಟ್ಟಿನ ಮನ್ನಣೆ ದೊರಕುತ್ತಿತ್ತು. ಈ ರೀತಿಯಲ್ಲಿ ಇದು ಬಹು ಯಶಸ್ವಿಯಾಗಿ ಕೆಲಸ

ಮಾಡಿಕೊಂಡು ಬಂದರೂ ಇದಕ್ಕಿದ್ದುದು ಬರಿಯ ನೈತಿಕ ಬಲ. ಯುದ್ಧಕ್ಕೆ ಕಾರಣ ಭೂತವಾದ ರಾಜಕೀಯ ವಿವಾದಗಳಲ್ಲಿ ಕೈಹಾಕಲು ಇದಕ್ಕೆ ಅಧಿಕಾರವಿರಲಿಲ್ಲ ಎಂಬ ಅಂಶವನ್ನು ಮರೆಯಬಾರದು.

ರಾಜಕೀಯ ವಿವಾದಗಳು ಲೀಗಿನ ಕಾರ್ಯಕಾರಿ ಮಂಡಲಿಯ ಪರಿಶೀಲನೆಗೆ ಬರುತ್ತಿದ್ದವು. ೧೯೩೫ರೊಳಗೆ ಸುಮಾರು ೪೦ ವಿವಾದಗಳು ಹೀಗೆ ಪರಿಶೀಲನೆಗೆ ಬಂದವು. ಜಪಾನರು ಮಂಚೂರಿಯಾವನ್ನು ಆಕ್ರಮಿಸಿದುದರಿಂದಲೂ, ಇಟಲಿಯವರು ಅಬಿಸೀನಿಯಾವನ್ನು ಆಕ್ರಮಿಸಿದುದರಿಂದಲೂ, ಜರ್ಮನರು ಯೂರೋಪಿನ ಹಲವಾರು ರಾಷ್ಟ್ರಗಳನ್ನು ವರ್ಸೈ ಒಪ್ಪಂದಕ್ಕೆ ವಿರೋಧವಾಗಿ ಆಕ್ರಮಿಸಿದುದರಿಂದಲೂ ಹುಟ್ಟಿದ ವಿವಾದಗಳಲ್ಲಿ ಲೀಗು ಏನೂ ಮಾಡಲಾರದಾಗಿ ಈಗಿನ ಯುದ್ಧ ಸಂಭವಿಸಿರುವುದು ಎಲ್ಲರಿಗೂ ತಿಳಿದ ಅಂಶವಾಗಿಯೇ ಇದೆ. ಆದರೂ ಲೀಗು ಅಲ್ಪ ರಾಷ್ಟ್ರಗಳಲ್ಲಿ ಹುಟ್ಟಿದ ವಿವಾದಗಳನ್ನು ಸರಿಪಡಿಸಿ ಸಣ್ಣಪುಟ್ಟ ಕದನಗಳನ್ನು ಆಗದಂತೆ ೨೦ ವರ್ಷಗಳ ಕಾಲ ಶಾಂತಿಯನ್ನು ಕಾಯ್ದ ಅಂಶವನ್ನು ಮರೆಯಬಾರದು. ಈ ವಿವಾದಗಳಲ್ಲಿ ನಾಲ್ಕು ಬಾರಿ ಹೊಡೆದಾಟಗಳು ಕೂಡ ಆರಂಭವಾಗಿದ್ದವು ಇಷ್ಟರಮಟ್ಟಿನ ಕಟ್ಟುಪಾಡಿಗೆ ಕೂಡ ರಾಷ್ಟ್ರಗಳು ಹಿಂದೆ ಎಂದೂ ಒಳಪಟ್ಟಿರಲಿಲ್ಲ.

## ಯುದ್ಧದ ಮೂಲಕಾರಣಗಳ ನಿವಾರಣೆ

ಯುದ್ಧ ತರಬಹುದಾದ ವಿವಾದಗಳನ್ನು ಪಂಚಾಯಿತಿಯ ಮೂಲಕ ಇತ್ಯರ್ಥ ಮಾಡುವುದು ಮಾತ್ರವಲ್ಲ, ಅಂತರರಾಷ್ಟ್ರೀಯ ವೈಮನಸ್ಯತೆಗೆ ಕಾರಣಭೂತವಾದ ವಿಷಯಗಳನ್ನು ಪರಿಶೀಲಿಸಿ ಯುದ್ಧ ಒದಗುವ ಸನ್ನಿವೇಶವೇ ಒದಗದಂತೆ ಮಾಡಲೂ ಲೀಗು ಯತ್ನಿಸಿತು. ಯುದ್ಧಕ್ಕೆ ಒಂದು ಮುಖ್ಯ ಕಾರಣವೇನೆಂದರೆ ಕಾಲೊನಿ ಅಥವಾ ವಸಾಹತುಗಳಿಗಾಗಿ ಪ್ರಬಲರಾಷ್ಟ್ರಗಳಲ್ಲಿ ಹೋರಾಟ. ಇದನ್ನು ತಪ್ಪಿಸಲು ಸೋತ ರಾಷ್ಟ್ರಗಳ ವಸಾಹತುಗಳನ್ನು ಹಿಂದಿನ ಸಂಪ್ರದಾಯದಂತೆ ಗೆದ್ದ ರಾಷ್ಟ್ರಗಳಿಗೆ ಯಾವ ನಿರ್ಬಂಧವೂ ಇಲ್ಲದಂತೆ ಹಂಚಲಿಲ್ಲ. ಇದಕ್ಕೆ ಪ್ರತಿಯಾಗಿ ಲೀಗು ಹೊಸದಾದ ಮ್ಯಾಂಡೇಟ್ಸ್ ಪದ್ಧತಿಯನ್ನು ಜಾರಿಗೆ ತಂದಿತು. ಇದರ ಪ್ರಕಾರ ಲೀಗು ಸೋತ ರಾಷ್ಟ್ರಗಳ ವಸಾಹತುಗಳನ್ನು ಒಂದಲ್ಲ ಒಂದು ಪ್ರಬಲರಾಷ್ಟ್ರದ ರಕ್ಷಣೆಗೆ ಒಪ್ಪಿಸಿತು; ಇದಕ್ಕೆ ಈ ವಸಾಹತುಗಳು ಆರ್ಥಿಕ ಮತ್ತು ರಾಜಕೀಯ ಜೀವನದಲ್ಲಿ ಹಿಂದುಳಿದುದೇ ಕಾರಣ. ರಕ್ಷಣೆಯ ಭಾರವನ್ನು ಹೊತ್ತ ರಾಷ್ಟ್ರವು ಲೀಗಿನ ಪರವಾಗಿ ಮ್ಯಾಂಡೇಟನ್ನು ಹೊತ್ತು ಆಳಬೇಕಿತ್ತು; ಪ್ರತಿವರ್ಷವೂ ಲೀಗಿನ ಪರ್ಮನೆಂಟ್ ಮ್ಯಾಂಡೇಟ್ಸ್ ಕಮಿಷನ್ ಎಂಬ ಸಮಿತಿಗೆ ಮ್ಯಾಂಡೇಟುಗಳ ಆಡಳಿತ ವಿಷಯದಲ್ಲಿ ವರದಿ ಒಪ್ಪಿಸಬೇಕಿತ್ತು. ಅಲ್ಲದೆ ಲೀಗು ಮ್ಯಾಂಡೇಟುಗಳ ಪ್ರಜೆಗಳ

ಹಿತವನ್ನು ರಕ್ಷಿಸಲು ಅನೇಕ ಕಟ್ಟಲೆಗಳನ್ನು ಮಾಡಿತು. ಈ ಮ್ಯಾಂಡೇಟ್ಸ್ ಪದ್ಧತಿಯು ಪ್ರಬಲ ರಾಷ್ಟ್ರಗಳು ತಾವು ಧರ್ಮಿಷ್ಠರೆನಿಸಿಕೊಂಡು ವಸಾಹತುಗಳನ್ನು ಎಂದಿನಂತೆ ತಮ್ಮಲ್ಲಿ ಹಂಚಿಕೊಳ್ಳಲು ಹೂಡಿದ ಕುತಂತ್ರವೆಂದು ಹಲವರ ಅಭಿಪ್ರಾಯ. ಇದರಲ್ಲಿ ಬಹುಮಟ್ಟಿನ ಸತ್ಯಾಂಶವಿದ್ದರೂ ಇದು ವಸಾಹತು ಪದ್ಧತಿಗಿಂತ ಉತ್ತಮವಾದ್ದು. ಉದಾಹರಣೆಗೆ ಬ್ರಿಟಿಷರ ರಕ್ಷಣೆಯಲ್ಲಿರುವ ಕೀನಿಯ ಎಂಬ ವಸಾಹತಿಗಿಂತ ತಾಂಗನೀಕ ಎಂಬ ಮ್ಯಾಂಡೇಟಿನಲ್ಲಿರುವ ನೀಗ್ರೋಜನರ ಸ್ಥಿತಿ ಬಹುಮಟ್ಟಿಗೆ ಉತ್ತಮವಾಗಿತ್ತು. ಅಲ್ಲದೆ ಮ್ಯಾಂಡೇಟು ದೇಶಗಳಲ್ಲಿ ವ್ಯಾಪಾರ ಮಾಡಲು ಲೀಗಿನ ಎಲ್ಲ ಸದಸ್ಯರಾಷ್ಟ್ರಗಳಿಗೂ ಸಮಾನ ಅಧಿಕಾರವಿದ್ದುದರಿಂದ ವ್ಯಾಪಾರದಲ್ಲಿ ಪರಸ್ಪರ ವೈಷಮ್ಯ ಸ್ವಲ್ಪಮಟ್ಟಿಗೆ ಕಡಿಮೆಯಾಯಿತು.

ಮತ್ತೆ ೧೯ನೆಯ ಶತಮಾನದಲ್ಲಿ ಯೂರೋಪಿನಲ್ಲಿ ಒಂದೊಂದು ಭಾಷೆಯಾಡುವ ಜನವೂ ಒಂದೊಂದು ರಾಷ್ಟ್ರವನ್ನು ಕಟ್ಟಿಕೊಳ್ಳಬೇಕೆಂಬ ಭಾವನೆ ಬಹಳ ಪ್ರಬಲವಾಯಿತು. ಇದರಿಂದ ಯೂರೋಪಿನ ರಾಷ್ಟ್ರಗಳಲ್ಲಿ ವೈಷಮ್ಯ ಹೆಚ್ಚಿ ಒಂದೆರಡು ಯುದ್ಧಗಳಿಗೂ ಇದು ಕಾರಣವಾಯಿತು. ೧೯೧೯ರಲ್ಲಿ ವರ್ಸೈ ಒಪ್ಪಂದದ ಪ್ರಕಾರ ಭಾಷೆಗೊಂದು ರಾಷ್ಟ್ರ ರಚಿತವಾಯಿತು. ಇದರಿಂದ ಪ್ರತಿಯೊಂದು ರಾಷ್ಟ್ರದಲ್ಲಿಯೂ ಅಲ್ಪಸಂಖ್ಯಾತರಾದ ಬೇರೆ ಹಲವಾರು ಜನಾಂಗದವರು ಉಳಿದುಕೊಂಡರು. ಇವರ ಹಿತವನ್ನು ರಕ್ಷಿಸಲೂ, ಇವರ ಹಿತವನ್ನು ರಕ್ಷಿಸುವ ನೆವದಿಂದ ಹುಟ್ಟಬಹುದಾದ ಅಂತರರಾಷ್ಟ್ರೀಯ ವೈಷಮ್ಯವನ್ನು ಹೋಗಲಾಡಿಸಲೂ ಅನೇಕ ಕೌಲುಗಳಾದವು; ಅಲ್ಪಸಂಖ್ಯಾತರನ್ನು ರಕ್ಷಿಸುವ ಅಧಿಕಾರ ಲೀಗಿಗೆ ಸೇರಿತು. ಆದರೆ ೨೦ ವರ್ಷದ ಲೀಗಿನ ಕಾರುಬಾರಿನಲ್ಲಿ ಅಲ್ಪಸಂಖ್ಯಾತ ಜನಾಂಗದವರಿಗೆ ಹೆಚ್ಚಿನ ಸಹಾಯ ದೊರಕಿದೆಯೆಂದು ಹೇಳಲು ಸಾಧ್ಯವಿಲ್ಲ.

ಯುದ್ಧಕ್ಕೆ ಮತ್ತೊಂದು ಕಾರಣವೇನೆಂದರೆ ವ್ಯಾಪಾರಸೌಕರ್ಯಗಳಿಗಾಗಿ ಹೋರಾಟ. ಕಳೆದ ಮಹಾಯುದ್ಧ ಹುಟ್ಟುವುದಕ್ಕೆ ಬ್ರಿಟಿಷರಿಗೂ ಜರ್ಮನರಿಗೂ ಈ ವಿಷಯದಲ್ಲಿ ಇದ್ದ ವೈಮನಸ್ಯ. ಎಲ್ಲ ರಾಷ್ಟ್ರಗಳಿಗೂ ವ್ಯಾಪಾರಕ್ಕೆ ಮತ್ತು ಆರ್ಥಿಕ ಬೆಳವಣಿಗೆಗೆ ಸಮಾನ ಅವಕಾಶ ದೊರಕಿದರೆ ಯುದ್ಧವನ್ನು ತಡೆಯುವುದು ಬಹು ಸುಲಭವೆಂದು ಲೀಗಿನ ನಂಬಿಕೆ. ಆದರೆ ಬಂಡವಾಳ ಪದ್ಧತಿಯನ್ನು ಹೋಗಲಾಡಿಸುವುದು ಎಷ್ಟು ಕಷ್ಟದ ಕೆಲಸವೋ ಇದೂ ಅಷ್ಟೇ ಕಷ್ಟದ ಕೆಲಸ. ಲೀಗು ತನ್ನ ಕೈಯಲ್ಲಾದುದನ್ನೆಲ್ಲ ಮಾಡಿತು. ೧೯೨೭ರಲ್ಲಿ ಅಂತರರಾಷ್ಟ್ರೀಯ ಆರ್ಥಿಕ ಸಮ್ಮೇಳನವನ್ನು ಕೂಡಿಸಿತು. ಇದು ದೇಶದೇಶಗಳ ನಡುವೆ ಎದ್ದ ತೆರಿಗೆಯ ಕೋಟೆಗಳನ್ನು ಕೆಡಹುವ ಕಾಲ ಬಂತೆಂದು ಘೋಷಿಸಿತು. ಆದರೆ ೧೯೨೯ರ ಮೇಲೆ

ಸಾಮಾನುಗಳ ಬೆಲೆ ತೀರ ಇಳಿದು ಪ್ರಪಂಚದ ಆರ್ಥಿಕಸ್ಥಿತಿ ಹದಗೆಟ್ಟಿತು; ತೆರಿಗೆಯ ಕೋಟೆ ಗೋಡೆಗಳು ಉರುಳುವ ಬದಲು ಮತ್ತಷ್ಟು ಎತ್ತರಕ್ಕೆ ಏರಿದವು; ಅಂತರ ರಾಷ್ಟ್ರೀಯ ವೈಷಮ್ಯ ಮತ್ತಷ್ಟು ಪ್ರಬಲವಾಯಿತು. ಇದೇ ಸಮಯದಲ್ಲಿ ರಾಜಕೀಯ ರಂಗದಲ್ಲೂ ಪ್ರಬಲ ರಾಷ್ಟ್ರಗಳಲ್ಲಿ ಹೋರಾಟ ಹುಟ್ಟಿದುದರಿಂದ ಲೀಗು ಏನೂ ಮಾಡಲಾರದಾಯಿತು.

ಮತ್ತೆ ರಾಷ್ಟ್ರಗಳ ಯುದ್ಧ ಸಿದ್ಧತೆಗಳೇ ಯುದ್ಧಕ್ಕೆ ಒಂದು ಮುಖ್ಯ ಕಾರಣ ವೆಂದು ಲೀಗು ತಿಳಿದಿತ್ತು. ಆದರೆ ಯಾವ ರಾಷ್ಟ್ರವನ್ನು ಕೇಳಿದರೂ ತನ್ನ ಸಿದ್ಧತೆ ಆಕ್ರಮಣಕ್ಕಾಗಿಯಲ್ಲ, ಆತ್ಮರಕ್ಷಣೆಗಾಗಿ ಎಂದು ಹೇಳುತ್ತಿತ್ತು. ಶಸ್ತ್ರಸನ್ನಾಹದಿಂದ ಯುದ್ಧಭೀತಿಯೆಂದು ಒಂದು ಪಕ್ಷ, ಯುದ್ಧಭೀತಿಯಿಂದ ಶಸ್ತ್ರಸನ್ನಾಹವೆಂದು ಮತ್ತೊಂದು ಪಕ್ಷ. ಹುಚ್ಚು ಬಿಡುವವರೆಗೂ ಮದುವೆಯಿಲ್ಲ, ಮದುವೆಯಾಗುವ ವರೆಗೂ ಹುಚ್ಚು ಬಿಡುವುದಿಲ್ಲ,—ಇದೇ ಲೀಗು ಪರಹರಿಸಬೇಕಾಗಿ ಬಂದ ಸಮಸ್ಯೆ.

ಲೀಗು ಯುದ್ಧಭೀತಿಯನ್ನು ಪರಿಹರಿಸುವುದು, ಶಸ್ತ್ರಸನ್ನಾಹವನ್ನು ತಡೆಯು ವುದು ಈ ಎರಡು ಮಾರ್ಗಗಳನ್ನೂ ಅನುಸರಿಸಿತು. ಯುದ್ಧಭೀತಿಯನ್ನು ಹೋಗ ಲಾಡಿಸಿ ರಾಷ್ಟ್ರಗಳ ಮನಸ್ಸಿಗೆ ನೆಮ್ಮದಿಕೊಡಲು ಮಾಡಿದ ಯತ್ನಗಳಲ್ಲಿ ಮುಖ್ಯ ವಾದುದು ೧೯೨೫ರಲ್ಲಿ ಜರ್ಮನಿಗೂ ಫ್ರಾನ್ಸ್, ಬೆಲ್ಜಿಯಂ, ಪೋಲೆಂಡ್ ಮತ್ತು ಜೆಕೋಸ್ಲೋವೇಕಿಯಾಗೂ ಆದ ಲೊಕಾರ್ನೊ ಒಪ್ಪಂದಗಳು. ಈ ಒಪ್ಪಂದಗಳ ಮುಖ್ಯ ಉದ್ದೇಶ ಜರ್ಮನಿಯಿಂದ ಈ ಮೇಲ್ಕಂಡ ದೇಶಗಳಿಗಿದ್ದ ಯುದ್ಧಭೀತಿ ಯನ್ನು ಹೋಗಲಾಡಿಸುವುದು. ಮತ್ತೆ ೧೯೨೮ರಲ್ಲಿ "ಕೆಲ್ಲಾಗ್ ಒಡಂಬಡಿಕೆ" ಹುಟ್ಟಿತು. ಇದಕ್ಕೆ ಪ್ರಪಂಚದ ಎಲ್ಲ ಪ್ರಬಲರಾಷ್ಟ್ರಗಳೂ ಸಹಿ ಹಾಕಿದವು. ಇದರ ಪ್ರಕಾರ ಇದಕ್ಕೆ ಸಹಿ ಹಾಕಿದ ರಾಷ್ಟ್ರಗಳು ಅಂತರರಾಷ್ಟ್ರೀಯ ವಿವಾದ ಗಳನ್ನು ಇತ್ಯರ್ಥಮಾಡಿಕೊಳ್ಳಲು ಯುದ್ಧಕ್ಕೆ ದುಮುಕುವುದು ತಪ್ಪೆಂದೂ ಇತರ ರಾಷ್ಟ್ರಗಳೊಡನೆ ತಮ್ಮ ವ್ಯವಹಾರಗಳಲ್ಲಿ ಈ ರೀತಿ ನಡೆದುಕೊಳ್ಳುವುದಿಲ್ಲವೆಂದೂ ಒಪ್ಪಿಕೊಂಡವು. ತಮ್ಮಲ್ಲಿ ಪರಸ್ಪರ ಯಾವ ಕಾರಣಗಳಿಂದಾಗಲಿ ಯಾವ ವಿವಾದ ಹುಟ್ಟಿದರೂ ಶಾಂತರೀತಿಯಲ್ಲಿ ಸರಿಪಡಿಸಿಕೊಳ್ಳುವೆವೆಂದು ಒಪ್ಪಿಕೊಂಡವು. ಮೇಲ್ಕಂಡ ಒಪ್ಪಂದಗಳು ನೋಡುವುದಕ್ಕೆ ಯುದ್ಧಭೀತಿಯನ್ನು ತಪ್ಪಿಸುವಂತಿದ್ದವು ಮಾತ್ರ ಇವುಗಳಿಂದ ಏನೇನೂ ಪ್ರಯೋಜನವಾಗಲಿಲ್ಲ.

ಕಳೆದ ಮಹಾ ಯುದ್ಧವಾದ ಮೇಲೆ ಜರ್ಮನಿ ಮತ್ತು ಇತರ ಸೋತ ರಾಷ್ಟ್ರಗಳು ತಮ್ಮಲ್ಲಿದ್ದ ಯುದ್ಧಶಸ್ತ್ರಗಳನ್ನು ತ್ಯಜಿಸಿ ಮತ್ತೆ ಯುದ್ಧ ಸಿದ್ಧತೆಗಳನ್ನು ಮಾಡುವುದಿಲ್ಲವೆಂದು ಒಪ್ಪಿಕೊಂಡವು. ವುಡ್ರೊ ವಿಲ್ಸನರ ಅಭಿಪ್ರಾಯ ಆದಷ್ಟು

ಶೀಘ್ರದಲ್ಲಿ ಗೆದ್ದ ರಾಷ್ಟ್ರಗಳೂ ಶಸ್ತ್ರತ್ಯಾಗವಮಾಡಿ ಚಿರಶಾಂತಿಗೆ ಅಡಿಪಾಯ ಹಾಕಬೇಕೆಂಬುದು. ಇದೇ ಉದ್ದೇಶದಿಂದ "ಲೀಗ್ ಆಫ್ ನೇಷನ್ಸ್ ಒಡಂಬಡಿಕೆ"ಯ ಪ್ರಕಾರ ಲೀಗಿನ ಸದಸ್ಯರು ತಮ್ಮ ದೇಶಗಳ ರಕ್ಷಣೆಗೆ ಕುಂದುಬರದೆ ತಮ್ಮ ಯುದ್ಧ ಸನ್ನಾಹಗಳನ್ನು ಆದಷ್ಟು ಕಡಿಮೆಮಾಡುವುದು ಶಾಂತಿಸಾಧನೆಗೆ ಅಗತ್ಯವೆಂದು ಒಪ್ಪಿಕೊಂಡರು. ಲೀಗು ಸಾರ್ವತ್ರಿಕ ಶಸ್ತ್ರತ್ಯಾಗದ ಯೋಜನೆಯನ್ನು ಹೂಡುವ ಹೊರೆಯನ್ನು ಹೊತ್ತುಕೊಂಡಿತು. ಲೀಗು ಶಸ್ತ್ರತ್ಯಾಗಕ್ಕಾಗಿ ಹಲವಾರು ಯತ್ನಗಳನ್ನು ಮಾಡಿತು. ಯುದ್ಧಭೀತಿ ತಪ್ಪುವವರೆಗೂ ಶಸ್ತ್ರತ್ಯಾಗ ಸಾಧ್ಯವಿಲ್ಲವೆಂದು ಹೇಳುತ್ತಿದ್ದವರನ್ನು ಒಡಂಬಡಿಸುವುದಕ್ಕಾಗಿ ಒಂದೆರಡು ಯುದ್ಧಭೀತಿ ತಪ್ಪಿಸುವ ಯೋಜನೆಗಳನ್ನೂ ಹೂಡಿತು. ಆದರೆ ಇವುಗಳಿಂದ ಏನೂ ಪ್ರಯೋಜನವಾಗಲಿಲ್ಲ. ೧೯೨೬ ರಲ್ಲಿ ಶಸ್ತ್ರತ್ಯಾಗ ಸಮ್ಮೇಳನವನ್ನು ಕೂಡಿಸಲು ಒಂದು ಸಮಿತಿ ಏರ್ಪಟ್ಟಿತು. ರಷ್ಯದ ಸಂಪೂರ್ಣ ಶಸ್ತ್ರತ್ಯಾಗ ಯೋಜನೆಗೆ ಮತ್ತೆ ಯಾವ ರಾಷ್ಟ್ರದ ಬೆಂಬಲವೂ ಸಿಗಲಿಲ್ಲ. ಜರ್ಮನಿಯು ತನ್ನನ್ನು ಮಾತ್ರ ಶಸ್ತ್ರತ್ಯಾಗ ಮಾಡುವಂತೆ ಮಾಡಿ ಇತರ ರಾಷ್ಟ್ರಗಳು ಶಸ್ತ್ರತ್ಯಾಗಮಾಡದಿರುವುದು ವರ್ಸೈ ಒಪ್ಪಂದಕ್ಕೆ ವಿರೋಧವೆಂದು ಕೂಗತೊಡಗಿತು. ಕೊನೆಗೆ ಜರ್ಮನಿ, ರಷ್ಯ ಮತ್ತು ಅಲ್ಪ ರಾಷ್ಟ್ರಗಳ ಬಲವಂತ ಹೆಚ್ಚಿದುದರಿಂದ ೧೯೩೨ ರಲ್ಲಿ "ಜಗತ್ತಿನ ಶಸ್ತ್ರತ್ಯಾಗ ಸಮ್ಮೇಳನ"ವೂ ಕೂಡಿತು. ಎರಡು ವರ್ಷಗಳ ಕಾಲ ಆಗಿಂದಾಗ್ಗೆ ಕೂಡುತ್ತಿತ್ತು. ಆದರೆ ಒಂದುಕಡೆ ಆರ್ಥಿಕ ಮುಗ್ಗಟ್ಟು, ಮತ್ತೊಂದು ಕಡೆ ಪ್ರಬಲರಾಷ್ಟ್ರಗಳಲ್ಲಿ ಹಿರಿಮೆಗಾಗಿ ಹೋರಾಟ, ಹೀಗಾಗಿ ಈ ಸಮ್ಮೇಳನದಿಂದ ಏನೊಂದೂ ಪ್ರಯೋಜನವಾಗಲಿಲ್ಲ. ಯಾವಾಗ ಶಸ್ತ್ರತ್ಯಾಗ ಸಮ್ಮೇಳನ ಫಲಕಾರಿಯಾಗಲಿಲ್ಲವೋ ಆಗ ಜರ್ಮನಿಯು ತಾನೂ ಶಸ್ತ್ರಸನ್ನಾಹಕಾರ್ಯವನ್ನು ಆರಂಭಿಸುವುದಾಗಿ ೧೯೩೨ ರಲ್ಲಿ ಘೋಷಿಸಿತು. ಅದು ಮೊದಲು ಎಲ್ಲೆಲ್ಲೂ ಶಸ್ತ್ರತ್ಯಾಗದ ಮಾತು ಹೋಗಿ ಶಸ್ತ್ರಸನ್ನಾಹಕಾರ್ಯಗಳು ಆರಂಭವಾದವು. ಜರ್ಮನಿಯ ಬಲ ಕ್ರಮೇಣ ಹೆಚ್ಚಿ ಕೊನೆಗೆ ೧೯೩೯ ರಲ್ಲಿ ಇನ್ನೊಂದು ಮಹಾ ಯುದ್ಧ ಆರಂಭವಾಯಿತು.

## ಲೀಗಿನಿಂದ ಆದ ಪ್ರಯೋಜನ

ಜಪಾನು ಮಂಚೂರಿಯಾವನ್ನು ಆಕ್ರಮಿಸಿದಾಗ ಲೀಗು ನಿಸ್ಸಹಾಯವಾಗಿ ನಿಂತಂದಿನಿಂದ ಅದರ ಗಣ್ಯತೆ ಕುಗ್ಗುತ್ತಾ ಬಂದು ಕೊನೆಗೆ ಈಗಿನ ಪ್ರಳಯಾಂತಕ ಹೋರಾಟದಲ್ಲಿ ಅದರ ಇರವು ಕೂಡ ಮರೆತುಹೋಗಿದೆ. ಇದುವರೆಗೆ ಲೀಗಿನಿಂದ ಆಗಿರುವ ಪ್ರಯೋಜನ ಏನೆಂಬುದನ್ನು ಒಂದೆರಡು ಮಾತುಗಳಲ್ಲಿ ಹೇಳಬಹುದು. ಲೀಗು ಯುದ್ಧದ ಮೂಲಕಾರಣಗಳನ್ನು ನಿವಾರಿಸುವುದರಲ್ಲಿಯೂ ರಾಜಕೀಯ ವಿವಾದಗ

ಳನ್ನು ಇತ್ಯರ್ಥಮಾಡುವುದರಲ್ಲಿಯೂ ಸಂಪೂರ್ಣ ನಿಷ್ಫಲತೆಯನ್ನು ಹೊಂದಿತು. ಆದರೆ ನ್ಯಾಯವಿಷಯದಲ್ಲಿ ಹುಟ್ಟಿದ ವಿವಾದಗಳನ್ನು ಇತ್ಯರ್ಥಮಾಡುವುದರಲ್ಲಿ ಅಂತರ ರಾಷ್ಟ್ರೀಯ ನ್ಯಾಯಾಸ್ಥಾನವೂ, ಆರೋಗ್ಯ ಇತ್ಯಾದಿ ವಿಷಯಗಳಲ್ಲಿ ಅಂತರರಾಷ್ಟ್ರೀಯ ಸಹಕಾರಬೆಳೆಸುವುದರಲ್ಲಿ ಲೀಗೂ ಬಹು ಯಶಸ್ವಿಯಾಗಿ ಕೆಲಸಮಾಡಿದವು.

ಪ್ರಪಂಚದ ಸುಖ, ಶಾಂತಿ, ಆರೋಗ್ಯ, ಸ್ನೇಹಬಾಂಧವ್ಯ, ವ್ಯಾಪಾರ ವ್ಯವಹಾರ, ರಾಜಕೀಯ ಸಾಮಾಜಿಕ ಸಂಬಂಧಗಳು ಈ ಎಲ್ಲಕ್ಕೂ ಸೇರಿದ ಅಂಕಿ ಅಂಶಗಳು — ಇವುಗಳನ್ನು ತಜ್ಞರು ಸಂಗ್ರಹಿಸಿದರು. ವಿಮರ್ಶೆಮಾಡಿದರು. ಅನೇಕ ವರದಿಗಳನ್ನು ಒಪ್ಪಿಸಿದರು. ಲೇವಾದೇವಿಗೆ ಸಂಬಂಧಿಸಿದ ಹಲವಾರು ಕಾರ್ಯಗಳಲ್ಲಿ ನೆರವಾದರು. ಶಾಂತಿಗಾಗಿಯೂ ಒಟ್ಟು ಪ್ರಪಂಚದ ಸೌಖ್ಯಕ್ಕಾಗಿಯೂ ದುಡಿಯುವ ಬುದ್ಧಿ ಒಂದುಂಟು, ಅದರ ಕಾರ್ಯ ಪ್ರಪಂಚ, ಲಕ್ಷಣಗಳು ಇಂತಹವು ಎಂಬ ಸಂಗತಿಗಳು ಪ್ರಚಾರವಾದವು. ಅದು ಸಾಧಿಸಲಾಗದ ಕಾರ್ಯ ಅನಂತವಾದರೂ ಸಾಧಿಸಲಾದಷ್ಟು ಕೂಡ ಪ್ರಯೋಜನವನ್ನುಂಟುಮಾಡಿತು. ಇಂಥಾ ಕಾರ್ಯದಲ್ಲಿ ಜಯಶಾಲಿಯಾಗಬೇಕಾದರೆ ಜಗತ್ತಿನಲ್ಲಿ ಶಾಂತಿ ದೃಷ್ಟಿ, ಶಾಂತಮತಿ ಬೆಳೆಯಬೇಕು. ತಮಗೆ ಆಗುವ ಪ್ರಯೋಜನವೇನು ಎಂಬ ಲಕ್ಷ್ಯ ಎಣಿಕೆಗಳಿಗಿಂತ ತಾವೇನು ನೆರವು ಕೊಟ್ಟೇವು ಎಂಬ ಬುದ್ಧಿ ಬೇಕು; ವ್ಯಕ್ತಿಗಳಲ್ಲಿಯೂ ಸಂಸ್ಥೆಗಳಲ್ಲಿಯೂ ರಾಷ್ಟ್ರಗಳಲ್ಲಿಯೂ ಅದಕ್ಕೆ ತಕ್ಕ ಮನಶ್ಶಿಕ್ಷಣ ಬೆಳೆಯಬೇಕು; ಆ ಒಂದು ಕಾರ್ಯಯೋಜನೆಯನ್ನು ಕೈಕೊಂಡು ಸೌಮನಸ್ಯ ಸೋದರತೆಗಳ ಭಾವವನ್ನು ಬೆಳಸಿದ ಹೊರತು ಲೋಕಶಾಂತಿ ಹೇಗೆ ಶಕ್ಯವಾದೀತು? ರಾಗದ್ವೇಷದ, ಸಂಶಯಗಳ ದಾರಿಯೂ ಉದ್ವೇಗದ ರೀತಿಯೂ ನೀತಿಯಲ್ಲ ಎಂಬುದು ಗೊತ್ತಾಗಿ ಕಾರ್ಯಪ್ರವೃತ್ತಿಗಳನ್ನು ಬದಲು ಮಾಡುವಂತಹ ವಿದ್ಯೆ, ಸಹನೆ, ಧರ್ಮದೃಷ್ಟಿ, ಲೋಕಹಿತಪಕ್ಷಪಾತ ಇವು ಎಂದಿಗೆ ಶಕ್ಯವಾದಾವೊ ಅಂದು ಲೋಕಶಾಂತಿಯ ಸ್ಥಾಪನೆಗೆ ಅವಕಾಶವಾಗುತ್ತದೆ. ಲೀಗು ಮಾಡಿದ್ದೇನು ಎಂದು ಕೇಳಿ ಅದನ್ನು ಕುರಿತು ಅಡ್ಡ ಮಾತಾಡುವುದು ಎಲ್ಲರಿಗೂ ಅಪಮಾನಕರವಾದ ಸಂಗತಿಯೇ. ಸ್ವಂತವಾಗಿ ಕಾರ್ಯಶಕ್ತಿಯಿಲ್ಲದ, ಮತ್ತು ಅಂತರರಾಷ್ಟ್ರೀಯ ಮಂತ್ರ ತಂತ್ರಗಳಲ್ಲಿ ಪ್ರಭಾವವಿಲ್ಲದ, ಸೋತ ಅಥವಾ ಕೆಳಗೆ ಬಿದ್ದ ಅಥವಾ ದುರ್ಬಲವಾದ ರಾಷ್ಟ್ರಗಳವರು ಯೋಚಿಸುವ ರೀತಿ ಅದು. ಸ್ವಂತ ಲಾಭದೃಷ್ಟಿ ಎಲ್ಲರಿಗೂ ಇದೆ. ಪ್ರಬಲವಾದ ರಾಷ್ಟ್ರಗಳು ಲೋಕಹಿತ ತಂತ್ರವನ್ನು ಒಪ್ಪಿ ನಡಸಿಕೊಡದಿದ್ದರೆ ಎಂದಿಗೇ ಆಗಲಿ ಲೋಕಶಾಂತಿ ಹೇಗೆ ಸಾಧ್ಯವಾದೀತು? ಅವರು ನಡಸಿಕೊಟ್ಟರೆ ಶಾಂತಿ. ಅವರು ಹಿಂದೇಟು ಹಾಕಿದರೆ ಶಾಂತಿಯೂ ಇಲ್ಲ, ದಾಂತಿಯೂ ಇಲ್ಲ. ಅವರನ್ನು

ಈ ಲೋಕಧರ್ಮಕ್ಕೆ ತಿರುಗಿಸಿ ಅದಕ್ಕೆ ಕಟ್ಟಿ ನಿಲ್ಲಿಸುವಂತೆ ಆ ರಾಷ್ಟ್ರಗಳಲ್ಲಿ ಜನ ಜೀವನವೂ ಅಭಿಪ್ರಾಯಸಂಪತ್ತಿಯೂ ಬೆಳೆಯುವಂತಾಗಬೇಕು. ಜೊತೆಗೆ ಎಂತಹ ಪ್ರಬಲ ರಾಷ್ಟ್ರವೇ ಆಗಲಿ ಲೋಕಹಿತಕ್ಕೆ ವಿರೋಧವಾದ ಕಾರ್ಯ ಮಾಡಿದರೆ ಉಳಿದೆಲ್ಲ ದೇಶಗಳವರಿಂದಲೂ ಧೈರ್ಯವಾಗಿ ಪ್ರತಿಭಟನೆ ಬಂದು ಕಾರ್ಯ ಕಾರಿಯಾಗಬೇಕು. ಅದನ್ನು ಧರ್ಮಭ್ರಷ್ಟ ದೇಶವೆಂದು ಹೊರಹಾಕಿ ಅದರೊಡನೆ ಅಸಹಕಾರಮಾಡಿ ಅದನ್ನು ಹಣ್ಣುಮಾಡುವಂತಾಗಬೇಕು. ಆದರೆ ಈ ಪರಿಣಾಮ ವಾಗಿ ಅದು ಯುದ್ಧ ಹೂಡಿದರೆ ಲೋಕದ ಇತರ ರಾಷ್ಟ್ರಗಳೆಲ್ಲ ಸೇರಿ ಅದನ್ನು ಬಡಿದುಹಾಕಬಲ್ಲ ಶಕ್ತಿ ದೊರೆಯುವಂತೆ ಶಸ್ತ್ರಶಕ್ತಿ ಆರ್ಥಿಕಶಕ್ತಿ ರಚನೆಮಾಡಿಕೊಳ್ಳ ಬೇಕು. ಅದಾದ ಹೊರತು ಲೋಕಶಾಂತಿ ದೊರಕದು. ಇವನ್ನು ಸಾಧಿಸಬೇಕಾದ ಪ್ರಬಲ ರಾಷ್ಟ್ರಗಳೇ ದುರ್ಮದವಾದರೆ 'ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತು' ಎಂದಂತಾಗಿ ಲೋಕಕ್ಕೆ ಬೇರೆ ಶರಣೇ ಇಲ್ಲದಾಗುವುದು. ಇದನ್ನು ಯಾರೂ ಮರೆಯಲಾಗದು. ಲೀಗಿಗೆ ಬಲ ಜನ ಅದಕ್ಕೆ ಕೊಟ್ಟದ್ದು; ರಾಷ್ಟ್ರಗಳು ಸ್ವಂತ ಇಷ್ಟದಿಂದ ದೊರಕಿಸಿಕೊಟ್ಟದ್ದು. ಎಂದಿಗೇ ಆಗಲಿ ಲೋಕಮೈತ್ರಿ, ಲೋಕ ಹಿತ ಸ್ಥಾಪಿತವಾಗಬೇಕಾದರೆ ಇಂತಹ ಒಂದು ಮೈತ್ರೀಮಂಡಳದ ಮೂಲಕವೇ ಆಗ ಬೇಕು. ಆದೀತು ಎಂಬ ನಂಬಿಕೆಯನ್ನಾದರೂ ಬೆಳಸಬಲ್ಲೆವಾದರೆ ಅದೇ ಮುನ್ನಡೆ. ನಿರಾಶೆಪಟ್ಟವರಿಗೆ ಧೈರ್ಯವಿಲ್ಲ, ಶಕ್ತಿಯಿಲ್ಲ, ಧರ್ಮದಲ್ಲಿ ನಂಬಿಕೆಯಿಲ್ಲ ಎಂದರ್ಥ.

ಪ್ರಬಲರಾದ ದುಷ್ಟರಿಗೆ ಹೆದರಿ ಅಡಗಿ ನಡೆಯುವುದೇ ನಡತೆ ಎಂದೊಪ್ಪುವ, ತುಳಿ ತಕ್ಕೆ ಪ್ರತಿಭಟಿಸದ, ಧರ್ಮವೆಂಬುದು ಭ್ರಾಂತಿಯೆಂದೂ ಅಸಾಧ್ಯವೆಂದೂ ಅನಾಸಕ್ತಿ ಯಿಂದಿರಲು ಒಪ್ಪುವ ಜನತೆಗಳಿಗೆ ಲೋಕಶಾಂತಿ ಲೋಕಹಿತಗಳ ಮಾತು ಸಲ್ಲದು.

ಒಟ್ಟಿನಲ್ಲಿ ಒಂದು ಮಾತನ್ನು ಹೇಳಬಹುದು. ಲೋಕದ ಜನ ಧರ್ಮ, ಅರ್ಥ, ಕ್ಷಾತ್ರಗಳಲ್ಲಿ ಎಷ್ಟು ದೊಡ್ಡವರಾಗಬಲ್ಲರೊ, ತಮ್ಮ ಶಕ್ತಿಯನ್ನೆಲ್ಲ ಪ್ರಯೋಗಿಸಿ ದೊಡ್ಡ ಹಿತಗಳನ್ನು ಸಾಧಿಸಲು ಎಷ್ಟು ಹಿರಿಮೆಯಿಂದ ದುಡಿಯಲು ಸಿದ್ಧರಾಗಬಲ್ಲರೊ, ದುಷ್ಟರಿಗೆ ವಿರೋಧವಾದ ಪ್ರಪಂಚವನ್ನು ಎಷ್ಟು ಪ್ರಚಂಡತೆಯಿಂದ ಬೆಳಸಿ ಅವರ ನ್ನೆದುರಿಸುವ ವ್ರತವನ್ನು ಎಷ್ಟು ಮೇಲಾಗಿ ಕಾರ್ಯಕಾರಿಯಾಗಿ ಹಿಡಿದು ನಿಲ್ಲಬಲ್ಲರೊ ಅಷ್ಟೊ ಅಷ್ಟು ಈ ಕಾರ್ಯದ ದಾರಿ ಸುಗಮವಾಗುವುದು. ಬಣ್ಣಗಳವರ ದ್ವೇಷ, ಪೂರ್ವ ಪಶ್ಚಿಮಗಳ ದ್ವೇಷ, ಮತ, ಭಾಷೆ, ಜೀವನ ತತ್ವ, ಆರ್ಥಿಕ ಮಂಡಲಗಳ ಹುರುಡು, ಲೋಭ, ದರ್ಪ, ಸ್ವಪ್ರಯೋಜನ ಬುದ್ಧಿ, ಮುಯ್ಯಿಮನಸ್ಸು ಇವು ಗಳನ್ನು ನಿವಾರಿಸಲು ಲೋಕವೆಲ್ಲ ತೊಡಗಿದ ಹೊರತು ಇದು ಶಕ್ಯವಾಗದು.— ಎಂದಿಗೂ, ಹೇಗೂ.

ಈ ಯುದ್ಧ ಮುಗಿದ ಮೇಲೆ ಕೂಡ ಯಾವ ಬಗೆಯ ಕಾರ್ಯ ಪ್ರಪಂಚ ಹುಟ್ಟುವುದು, ಯಾವ ಶಾಂತಿತಂತ್ರ ಏರ್ಪಡುವುದು, ಯಾವ ಮಂತ್ರಗಳಿಗೆ ಗಣ್ಯತೆ ಬರುವುದು ಎಂಬುದು ವಿಜಯಿಗಳ ದೂರದೃಷ್ಟಿಗೆ ಹೊಂದಿಕೊಳ್ಳುತ್ತದೆ. ನಮ್ಮಂತಹ ರಾಷ್ಟ್ರಗಳಿಗೆ ಇಂದಿನ ಸ್ಥಿತಿಯಲ್ಲಿ ಸ್ಥಾನವೇ ಇಲ್ಲದಂತಾಗಿರುವುದು ನಮ್ಮ ದೌರ್ಭಾಗ್ಯ.

ಯುದ್ಧದ ಮಾರ್ಗ ಸಲ್ಲದು ; ಅದು ಅಧರ್ಮ ಎಂದು ಲೋಕವೆಲ್ಲ ಅರಿತು, ಸಮಾಧಾನದ ಮಾರ್ಗವೇ ಸರಿ ಎಂದು ಸ್ವೀಕರಿಸಿ ನಡೆವವರೆಗೂ ದುರ್ಬಲರಿಗೆ ಗತಿಯಿಲ್ಲ ; ಪ್ರಬಲರ ದೌರಾತ್ಮ್ಯಕ್ಕೆ ಮಿತಿಯಿಲ್ಲ ; ಲೋಕದ ಮಂಗಳಕ್ಕೆ ಗತಿಯಿಲ್ಲ.

ಎಸ್. ವೆಂಕಟದೇಶಿಕಾಚಾರ್.

---

## ಬಾಳ್ ಮನೆ

ಗೋಡೆ ಗೋಡೆಯನಡುವಣೆಡೆ ಸಾರ್ಥಕಂ
ಗೋಡೆಯಿರ್ಪುದಕೆ;
ಬದುಕೆಲ್ಲ ಬದುಕಲ್ಕೆ ಬಿಯಮಾಗಲಾ
ಬದುಕೊಂದು ಬದುಕೆ?

---

## ಅಶ್ವ-ವಿಶ್ವ

ಕಾಲಿಲ್ಲದಾ ಅಶ್ವ
ಗೂನಾದರೇನು?
ನಾನಿಲ್ಲದಾ ವಿಶ್ವ
ಏನಾದರೇನು?

---

## ನನ್ನ ಕಾದಂಬರಿ

ಕಲೆ ಹದದ ಕಲ್ಪನೆಯ
ಕತ್ತರಿಯು, ಕೇಳ;
ಹಾಳೆ ಹಾಳೆಗಳಾಗಿ
ಕತ್ತರಿಸಿ ಬಾಳ
ರಟ್ಟುಹಾಕಿದೆನೊಟ್ಟು
ಕಾದಂಬರಿಯ ಹುಟ್ಟು
ಗುಟ್ಟೆಲ್ಲ ರಟ್ಟು

ಕುವೆಂಪು.

---

## ಓಡಲೆಳಸುತಿಹುದು ಜೀವ

೧

ಓಡಲೆಳಸುತಿಹುದು ಜೀವ
ದೂರ, ದೂರ, ಜನವಿದೂರ — ವಿಪಿನದೆಡೆಗೆ ;
ಗಾಢಾಂಧಕಾರ ಕವಿದ ಕಗ್ಗವಿಯ ಒಡಲಿಗೆ ;
ಮಿನುಗು ತಾರೆ ನಗುವ ಚಂದ್ರ ಕುಣಿವ ವೀಚಿಮಾಲೆಗೆ ;
ನೇಹ, ಮೋಹ, ನಗುವು, ಅಳುವು ಇಲ್ಲದೊಂದು ಬೀಡಿಗೆ ;
ತನ್ನತನದ ಕೋಟೆಗಿನಿಸು ಲಗ್ಗೆಬಾರದಿರುವೆಡೆ,
ಎದೆಯಹೊಳೆಗೆ ಕೊಳಕುತೊರೆಗಳೊಂದೂ ಸೇರದಿರುವೆಡೆ-
ಓಡಲೆಳಸುತಿಹುದು ಜೀವ.

೨

ಮೌನಶರಧಿ ತಳದಿ ಮುತ್ತಿನಂತೆ ಮಲಗಲೆಳಸಿದೆ
ಗವಿಯೊಡಲಿನ ರನ್ನದಂತೆ ತನ್ನತಾನೆ ಬೆಳಗಬಯಸಿದೆ
ಏಕಾಂತದ ಶಾಂತಿರಸಕೆ ಬಾಯಾರಿ ನಿಂತಿದೆ.
ಕಲಹ, ಕಪಟ, ಕುದಿತ, ಮಿದಿತ
ಅಳಲು, ಅಳುವು, ಕೋಪ, ತಾಪ
ಇವಕೆ ಇಗೋ ಹೇಸಿದೆ ;
ಒಲವು, ನಲವು, ಸರಸ, ಹಾಸ,
ಮಾತು, ಕತೆಯು, ಆಟ, ಬೇಟ,
ಅವೂ ಬೇಸರೆನಿಸಿವೆ.

೩

ಭಾರವಾಗುತಿಹುದು ನೇಹ, ಕೋಳವೆನಿಸುತಿಹುದು ಪ್ರೇಮ,
ಗಾಳವೆನಿಸುತಿಹುದು ಬರುವ ದಯಾದೃಷ್ಟಿಸಂಕುಲ.
ಬೆಳೆಯಲೆಳಸುತಿಹುದು ಮನವು,
ಬೆಳಗಲೆಳಸುತಿರುವುದಾತ್ಮ ;
ಇಲ್ಲಿ ಬಾಳಿ, ಇಲ್ಲಿ ಬದುಕಿ,
ಮೋಹದ ಸುಳಿಯೊಳಗೆ ಸಿಲುಕಿ,

ನೇಹದ ತುಮುಲಕ್ಕೆ ಅಳುಕಿ,
ಎದೆಗೆ ಎದೆಯು ತಾಗಿತಾಗಿ
ಸೆಗೆವ ವಹ್ನಿ ಜ್ವಾಲೆಯಲ್ಲಿ
ಹಿರಿಹಂಬಲವೆಲ್ಲವ,
ಒಳ್ಳು ರಿಗಳನೆಲ್ಲವ
ಸುಟ್ಟುಬಿಡಲೆ, ಕೊಟ್ಟುಬಿಡಲೆ,
ಅವಕೆ ಕೊನೆಯತರ್ಪಣ ?

೪

ಬಾಳಹೂವು ಬಾಡದಿರಲು
ಮನದ ಆಸೆ ಅಳಿಯದಿರಲು
ಕನಸೆಲ್ಲವು ನಸುವಾದರು
ನನಸಿಗಿಳಿದು ಬರುವೊಡೆ —
ಮನದ ಆಳ ತಿಳಿಯಬೇಕು ;
ಆ ಗುಹಾಂತರಾಳದಲ್ಲಿ
ತನ್ನತಸದ ರನ್ನವನ್ನು ಎಂತಾದರು ಪಡೆಯಬೇಕು ;
ಅದಕಾಗಿಯೆ —
ಓಡಲೆಳಸುತಿಹುದು ಜೀವ ದೂರ ದೂರಕೆ —
ಸಣ್ಣಬಲವು, ಸಣ್ಣನೇಹ, ಸಣ್ಣಬಯಕೆ, ಸಣ್ಣಹರಕೆ
ಇವುಗಳಿಂದ ದೂರಕೆ ;
ನೀಲಮುಗಿಲ, ಗಹನವಿಪಿನ, ಹಿರಿಗಡಲಿನ ವಿಸ್ತಾರಕೆ ;
ಓಡಲೆಳಸುತಿಹುದು ಜೀವ
ದೂರ ದೂರಕೆ.

ಎಂ. ಗೋಪಾಲಕೃಷ್ಣ ಅಡಿಗ.

# ರೈಲ್ವೆ ಪ್ರಯಾಣ

ಮೂರ್ತಿರಾಯರ 'ಹಗಲುಗನಸು'ಗಳೊಂದರಲ್ಲಿ "ಗಾಡಿಯಲ್ಲಿನ ಪ್ರವಾಸವು ಇತರ ಯಂತ್ರವಾಹನಗಳಲ್ಲಿನ ಪ್ರಯಾಣಕ್ಕಿಂತ (ಸುಖವಲ್ಲ) ಆನಂದದಾಯಕ ವಾದುದು" ಎಂದು ಅವರು ಪಟ್ಟಿರುವ ಅಭಿಪ್ರಾಯವು ನನಗೂ ಒಪ್ಪಿತವಾಗಿತ್ತು. ಆದರೆ ನಾನು, ಈಗ ಪ್ರಯಾಣಮಾಡುತ್ತಿರುವ ರೈಲುಗಾಡಿಯು, ಆ ಎತ್ತಿನ ಗಾಡಿಗೆ ಏನೂ ಕಡಿಮೆ ಇರಲಿಲ್ಲವೆಂದೇ ನನ್ನ ಭಾವನೆ. 'ಹಲ್ಲುವುಡಿ ಎಕ್ಸ್‌ಪ್ರೆಸ್' ಗಳೆಂದು ಪ್ರಸಿದ್ಧವಾಗಿರುವ, ಮೈಸೂರು-ಚಾಮರಾಜನಗರದ ರೈಲು ಗಾಡಿಗಳೊಂದ ರಲ್ಲಿ ನಾನೂ ಹೆಣಗಾಡುತ್ತ ಹೊರಟಿದ್ದೆನು.

ನಂಜನಗೂಡಿನಲ್ಲಿ ಅಂದು ಹುಣ್ಣಿಮೆಯ ಉತ್ಸವದ ಕಾಲ. ಆದುದರಿಂದ ರೈಲಲ್ಲಿ ಹೇಳಲಸದಳ ಜನದ ಒತ್ತಡವಿದ್ದರೂ ಅಷ್ಟೇನೂ ಹೆಚ್ಚು ಜಾಗವನ್ನಾಕ್ರಮಿ ಸುವ ಯೋಗವಿಲ್ಲದ ನನ್ನಂತಹ 'ನರಪೇತಲ'ನಿಗೆ ಗಾಡಿಯಲ್ಲಿ ಜಾಗಸಿಕ್ಕುವುದೇನೂ ಕಷ್ಟವಾಗಿರಲಿಲ್ಲ. ಕುರುಡನನ್ನು ನೋಡಿ ಹೆಳವನು ತೃಪ್ತಿಪಟ್ಟುಕೊಂಡಂತೆ, ಅಲ್ಲಲ್ಲೇ ನಿಂತು, ಪ್ರಯಾಣ ಮಾಡುತ್ತಿರುವವರನ್ನು ನೋಡಿ, ಇದ್ದಷ್ಟು ಸ್ಥಳದಲ್ಲೇ ತೃಪ್ತಿ ಪಟ್ಟುಕೊಂಡು ಕುಳಿತೆ.

ಆ ಗಾಡಿಯಲ್ಲಿ '೨೪ ಜನರು ಮಾತ್ರ ಕುಳಿತುಕೊಳ್ಳಬೇಕು' ಎಂಬ ಅರ್ಥ ಬರುವಹಾಗೆ ಇಂಗ್ಲೀಷಿನಲ್ಲಿ ಒಂದು ಕಡೆ ಬರೆದಿದ್ದರು. ದುರದೃಷ್ಟವಶಾತ್ ಒಂಟಿ ಪಯಣಿಗನಾದ ನನಗೆ ಬಹು ಬೇಸರವಾಗಿದ್ದುದರಿಂದ, ಆ ಗಾಡಿಯಲ್ಲಿ ತುಂಬಿದ್ದ ತಲೆಗಳನ್ನೆಲ್ಲಾ ಎಣಿಸಹತ್ತಿದೆ. ಐವತ್ನಾಲ್ಕು ತಲೆಗಳು 'ಮಾತ್ರ'ವೇ ಇರುವುದನ್ನು ನೋಡಿ ಅಚ್ಚರಿಯೆನಿಸಿತು. ಗಾಡಿಯು ಇನ್ನೂ ಹಿಸಿದು ಹೋಗಿಲ್ಲವೇಕೆ? ಎನಿಸಿತು. ಆದರೂ ಎಂಜಿನ್ನು ಇಂತಹುದೇ ಇನ್ನೆಂಟು ಗಾಡಿಗಳನ್ನು ಅಂಟು ಹಾಕಿಕೊಂಡು ಕತ್ತೆಯಂತೆ ಎಳೆದುಕೊಂಡು ಹೋಗುತ್ತಿತ್ತು.

ಹೆಂಗಸರು, ಹೆಣ್ಣುಬೊಂಬೆ ಇರುವ ತಗಡನ್ನು ಬಡಿದ ಗಾಡಿಗಳಲ್ಲಿ ಕುಳಿತುಕೊಳ್ಳ ಬೇಕೆಂಬುದು ಒಂದು ನಿಯಮ. ಆದರೆ ಅವರು ಹಾಗೆ ಮಾಡಲೇಬೇಕೆಂಬ ಕಟ್ಟು ಅವರನ್ನು ಬಾಧಿಸುವುದಿಲ್ಲ. ಆ ಗಾಡಿಗಳು ಬಿಡುವಾಗಿ ಬಿದ್ದಿದ್ದರೂ ಗಂಡಸರು ಅಲ್ಲಿಗೆ ಪ್ರವೇಶಿಸಕೂಡದು ಎಂಬುದು ಮಾತ್ರ ಸುಗ್ರೀವಾಜ್ಞೆ. ಹೆಂಗಸರು ಗಂಡಸರ ಗಾಡಿಗಳಲ್ಲೇ ಏಕೆ? ವ್ಯಾಗನ್ನುಗಳಲ್ಲಿ ಕೂಡ ಕುಳಿತುಕೊಳ್ಳಬಹುದೋ ಏನೊ?

ನಮ್ಮ ಗಾಡಿಯಲ್ಲಿ ಸಹ ಹತ್ತು ಹದಿನಾಲ್ಕು ಮಂದಿ ಹೆಂಗಸರು ಬಂದು ಸೇರಿದ್ದರು. ಅವರ ಮರ್ಯಾದೆಗೋಸ್ಕರವೇ, ನಾಲ್ಕಾರು ಜನಗಳಿಗಾಗುವಷ್ಟು ಸ್ಥಳ ಸುಮ್ಮನೆ ಬಿದ್ದಿತ್ತು. ಅವರ ತೊಡೆಗಳ ಮೇಲಿನ ವಂಶೋದ್ಧಾರಕರು ಸಂಗೀತವನ್ನು ಪ್ರಾರಂಭಿಸಿ ಹೊಟೇಲಿನ ರೇಡಿಯೋಗಳನ್ನು ನಾಚಿಸುತ್ತಿದ್ದರು. ಅದಕ್ಕೆ ರೈಲು ತಲೆದೂಗಿ, ತಾಳಹಾಕಿ, ಹಿಮ್ಮೇಳವಿತ್ತು ಸಾಗಿತ್ತು.

ಕಿಟಿಕಿಯ ಬಳಿಯಲ್ಲೇ ಕುಳಿತುಕೊಳ್ಳಬೇಕೆನ್ನುವ ಚಪಲ ಕೇವಲ ಹುಡುಗರಿಗೆ ಮಾತ್ರ ಎನ್ನುವುದು ತಪ್ಪಭಿಪ್ರಾಯ. ದೊಡ್ಡವರಿಗೂ, ಆ ಚಪಲವಿದ್ದೇ ಇರುತ್ತದೆ. ಅದಕ್ಕೆ ಅವರು ಗೌರವದಿಂದ ಹೊಡೆದಾಡುತ್ತಾರೆ, ಮಕ್ಕಳು ಬಾಯಿಬಿಟ್ಟು, ಬೇಡಿ, ಭಂಡಗೇಡೆನಿಸಿಕೊಳ್ಳುತ್ತವೆ. ಮೊದಲನೆಯದು ಸಭ್ಯತನವೆಂತಲೂ, ಎರಡನೆಯದು 'ಕಪಿಮುಷ್ಟಿ' ಎಂತಲೂ ಹೆಸರುಪಡೆಯುತ್ತವೆ, ಅಷ್ಟೆ. ನನ್ನನ್ನೂ ವಿಧಿಯು ಗಾಡಿಯ ಮಧ್ಯಭಾಗದಲ್ಲಿಯೇ ಕುಳ್ಳಿರಿಸಿದ್ದರಿಂದ ನನಗೂ ಕಿಟಿಕಿಯ ಬಳಿ ಕುಳಿತುಕೊಳ್ಳಬೇಕೆಂಬ ಆಸೆಯುಂಟಾದುದು ಆಶ್ಚರ್ಯವೆನಿಸಲಿಲ್ಲ. ನಂಜನಗೂಡಿನ ವರೆಗೂ ಆ ಆಸೆಯು ಹೃದಯದಲ್ಲೇ ಅಡಗಬೇಕಾಗಿತ್ತು. ನಂಜನಗೂಡಿಗೆ ಬಂದಮೇಲೆ ಆ ನನ್ನ ಆಸೆಯು ದೇಹದೊಡನೆ ಹೋಗಿ ಒಂದು ಅಂತಹ 'ಸೀಟ'ದಲ್ಲಿ ಮಂಡಿಸಿತು.

ಗರಳಪುರಿಕ್ಷೇತ್ರವು ದಾಟಿಹೋದ ಮೇಲೆ ಕೊಂಚ ವಿರಾಮವಾಗಿ ಕುಳಿತುಕೊಳ್ಳಬಹುದೆಂದು ಬಗೆದದ್ದು ನನ್ನ ಅಜ್ಞಾನವೆಂದು ತಿಳಿಯಿತು. ಮೊದಲು ಲಕ್ಷಣವಾಗಿ ಕೂದಲುಳ್ಳ ತಲೆಗಳು ಗಾಡಿಯನ್ನು ತುಂಬಿದ್ದವು. ಈಗ ಮಿರುಮಿರುಗುತ್ತಿರುವ ನುಣ್ಣನೆಯ ಬುರುಡೆಗಳು ಎಳನೀರುಗಳು ಉದುರಿದಂತೆ ನಮ್ಮ ಗಾಡಿಯೊಳಕ್ಕೆ ಉದುರಿ, ಸಾಲಾಗಿ ರಂಜಿಸಿದವು. ಹತ್ತಿರದಲ್ಲಿದ್ದ ಒಂದು ಬುರುಡೆಯ ಮುಂದೆ ನನ್ನ ವದನಾರವಿಂದವನ್ನು ಹಿಡಿದರೆ ರಜನೀಕಾಂತದ ಹೊಳೆಯುವ ಭಾಗದಲ್ಲಿ ಮುಖ ತೋರಲು ತೋರುವಂತಹ ಒಂದು ಪ್ರತಿಬಿಂಬ ಕಾಣಿಸಿತು. ಹೀಗೆ ಗಾಡಿಯು ನಂಜುಂಡೇಶ್ವರನಿಗೆ, ಮಾತಿನಪ್ರಕಾರ, — ಬಹುಶಃ ವಿಧಿಯಿಲ್ಲದೆ — ಕೂದಲನ್ನು ಅರ್ಪಿಸಿ ಬಂದಿದ್ದ ಭಕ್ತಾವಳಿಯಿಂದ ತುಂಬಿತು. ನಮ್ಮ ಗಾಡಿಯು ಒಟ್ಟಿನಲ್ಲಿ ಒಂದು ಸಂಸಾರದಂತಿತ್ತು. ಕಣ್ಣು ಮತ್ತು ಸಹಾನುಭೂತಿಗಳಿದ್ದು ಅದನ್ನು ಕಲ್ಪಿಸಿಕೊಂಡರೆ ಹಾಗಾಗಬಹುದಾಗಿತ್ತು. ಅಲ್ಲಿಯ ಕೆಲವು ವ್ಯಕ್ತಿಗಳಿಂದ ಪ್ರಪಂಚದ ಅರಿವನ್ನು ಕೂಡಿಸಿಕೊಳ್ಳಬಹುದಾಗಿತ್ತು. ಅಲ್ಲಿನ ಒಂದು ವ್ಯಕ್ತಿ, ಒಂದು ವಸ್ತು, ಒಂದು ಸಂಭಾಷಣೆ — ಹೀಗೆ ಪ್ರತಿಯೊಂದರಲ್ಲೂ ಒಂದೊಂದು ಅನುಭವ ತುಂಬಿದ್ದಂತಿತ್ತು.

ಎರಡು ಜೊತೆ ದಂಪತಿಗಳು, ತಮ್ಮ ಹೊಸ ತರಹದ ಬಾಳನ್ನು ಸೇರಲು ಎಲ್ಲಿಗೋ ಪ್ರಯಾಣ ಹೊರಟಿದ್ದರು. ಕೆಲವರು, "ನಡೆದುಹೋಗುವ ಕೆಲಸಗಳಿಗಾಗಿ ವ್ಯಥೆ

ಪಡಲೇಕೆ? ಯೋಚನೆ ಏಕೆ?" ಎಂಬಂತೆ ಹಾಯಾಗಿ ನಿದ್ದೆಹೋಗುತ್ತಿದ್ದರು. ಅಲ್ಲಿನ ಒಂದು ವ್ಯಕ್ತಿ ಪ್ರತಿ ನಿಮಿಷಕ್ಕೂ ಪೀಠವನ್ನು ಬದಲಾಯಿಸುತ್ತಾ, ಕಾರಣ ವಿಲ್ಲದೇ ಎಲ್ಲರ ಪರಿಚಯವನ್ನೂ ಮಾಡಿಕೊಳ್ಳುತ್ತಿದ್ದನು. ಇನ್ನೊಂದು ಮೂಲೆಯಲ್ಲಿ ಒಂದು ವೃತ್ತಪತ್ರಿಕೆಯನ್ನು ಆರು ಜನರು ಒಮ್ಮೆಯೇ ಓದಬೇಕೆಂಬ ಹಟದಿಂದ ಎಳೆದಾಡುತ್ತಿದ್ದರು. ಒಂದು ಪುಟ್ಟ ಮಗುವು ಬಾರಿಬಾರಿಗೂ, ಒಬ್ಬ ಮಹಮದೀಯ ವೃದ್ಧನನ್ನು ನೋಡಿ "ತಾತಾ" ಎನ್ನುತ್ತಿತ್ತು. ಅವನು ಗಂಭೀರವಾಗಿ ನಗುತ್ತಿದ್ದನು. ಒಬ್ಬ ಬಡ ಲಾಯರು, "ಇನ್ನಾದರೂ, ನಾನು ಕೋರ್ಟಿಗೆ ಬರಲಾರೆ; ಹಣ ಇಟ್ಟು ಮಾತನಾಡು" ಎನ್ನುತ್ತಿದ್ದರು.

ಹೀಗೇ, ಭಿಕ್ಷುಕರು, ತಾನ್‌ಸೇನ್, ಕಸ್ತೂರಿ-ಮಾತ್ರೆಯವರು, ಕತೆ, ಕಾದಂಬರಿಗಳನ್ನು 'ಅತಿ ಸುಲಭ ಬೆಲೆಗೆ' ಮಾರುವವರೂ, ಆಗಾಗ್ಗೆ ಬಂದು ಹೋಗುತ್ತಿದ್ದರು. ಕೆಲವು ನಿಮಿಷಗಳಿಗೊಂದಾವರ್ತಿ ತಮ್ಮ ಹಸಿವಿನ ಕೂಗನ್ನೇ ಹಾಡು ಮಾಡಿಕೊಂಡು ಹೇಳುವ ಭಿಕ್ಷುಕರ ಹಾಡು ನಮ್ಮ ಗಾಡಿಯನ್ನೆಲ್ಲಾ ತುಂಬುತ್ತಿತ್ತು. ಇದೊಂದನ್ನೂ ಲೆಕ್ಕಿಸದೆ, ಕಾಲದಂತೆ, ಬಂಡಿಯು ನಿಧಾನವಾಗಿ ಹೋಗುತ್ತಿತ್ತು. ನಾನು ನನ್ನ ತಲೆಯನ್ನು ಕಿಟಿಕಿಯ ಆಚೆ ಇಟ್ಟು ಒಂದು ನಿಟ್ಟುಸಿರಿಟ್ಟೆನು.

ಬಯಲು ನಗುತ್ತಿತ್ತು. ಹೊಲಗದ್ದೆ ತೋಟಗಳು ಭಿಕ್ಷುಕನ ಜೋಳಿಗೆಯ ಬಟ್ಟೆಯಂತೆ ಹರಡಿದ್ದವು. ಸೂರ್ಯನು ಮುಳುಗುತ್ತಿದ್ದನು. ಚಂದ್ರನು ನಿರ್ವಿಣ್ಣನಾಗಿ, ತನ್ನ ಪ್ರಭಾವವನ್ನು ಬೀರಲು ಸೂರ್ಯಾಸ್ತಮಯವನ್ನೇ ಕಾಯುತ್ತಿದ್ದನು. ಪಶ್ಚಿಮ ದಿಗಂತವು ಆರುತ್ತ ಬಂದಿದ್ದ ಕಾದ ಕಬ್ಬಿಣದ ಹಾಗಿತ್ತು. ಹಕ್ಕಿಗಳು ತಂತಿ ಕಂಬಗಳ ಮೇಲೆ ಸಾಲಾಗಿ ಕುಳಿತಿದ್ದು, ಚಿಲಿಪಿಲಿ ಎನ್ನುತ್ತಿದ್ದುವು. ಆಗಾಗ ಗೊಬ್ಬಳಿಯ ಹೂವಿನ ವಾಸನೆ ಮನೋಹರವಾಗಿ ಬಂದುಹೋಗುತ್ತಿತ್ತು. ದೂರದ ಕೆರೆಯಲ್ಲಿ ದಿಗಂತದ ಕೆಂಪು ಕಾದ ಹೊನ್ನೂ ಪ್ರತಿಬಿಂಬಿಸಿತ್ತು. ಪ್ರಕೃತಿಯ ಮೇಲಿದ್ದ ಜನ, ದನಗಳು, ನಿಶ್ಶಬ್ದವಾಗಿ ನಡೆದುಹೋಗುತ್ತಿದ್ದರು. ಆದರೆ ಅಕ್ಕಪಕ್ಕದ ಹೊಲ, ಗದ್ದೆಗಳ ನೋಟಗಳು ಜೀವನದ ಕ್ಷಣಭಂಗುರತೆಯನ್ನು ತಿಳಿಯಪಡಿಸುವಂತೆ ಹಿಂದಕ್ಕೆ, ತೋರಿ ಹಾರುತ್ತಿದ್ದವು. ನಮ್ಮ ಬಂಡಿ ತನ್ನ ಕಂಬಿಗಳಿರುವ ಕಡೆಯನ್ನೇ ಹುಡುಕಿಕೊಂಡು ಹೊರಟಿತ್ತು. ಗಾಡಿಯ ಹೊರಗಡೆ ಶಾಂತಿ; ಒಳಗಡೆ ಜೀವನದ ಭ್ರಾಂತಿ.

"ಛೆ, ಛೆ, ಆಶಾವಾದಿಯಾದ ನಾನೇಕೆ ತತ್ತ್ವೋಪಾಸಕನಾದೆ?" ಮೆಲ್ಲಗೆ ನನ್ನ ಮನಸ್ಸೆಂದಿತು. ನಾನು ತಲೆ ಕೊಡವಿಕೊಂಡು "ಈಸಬೇಕು ಇದ್ದು ಜೈಸಬೇಕು" ಎಂದು ಹಾಡಿಕೊಂಡೆ. ಗಾಡಿಯ ಚಕ್ರಗಳು ಅದಕ್ಕೂ ತಾಳಹಾಕಿದವು.

“ ದೇಶ ಸೇವಕರೂ, ಸಾಹಿತ್ಯ ಸೇವಕರೂ, ತಮ್ಮ ಪ್ರಪಂಚ ಜ್ಞಾನವನ್ನಭಿವೃದ್ಧಿ ಪಡಿಸಿಕೊಳ್ಳಬೇಕಾದರೆ ತಮ್ಮ ಜರತಾರಿ ಪೇಟಗಳನ್ನು ತೆಗೆದು, ಗಾಂಧಿ ಟೋಪಿಯನ್ನು ಹಾಕಬೇಕು, ತಮ್ಮ ಮೂಟೆಗಳನ್ನು ತಾವೇ ಹೊರುವ ಅಭ್ಯಾಸಮಾಡಬೇಕು, ‘ ವೈಟಿಂಗ್ ರೂಮಿ ’ನಲ್ಲಿ ಕುಳ್ಳಿರ್ದು ರೈಲು ಬಂದಾಕ್ಷಣ, ಮೊದಲನೆಯ ತರಗತಿಯ ‘ ಭೋಗಿ ’ಗಳನ್ನೇರುವುದನ್ನು ಬಿಟ್ಟು ಮೂರನೆ ತರಗತಿಯ ಗಾಡಿಗಳನ್ನೇರಬೇಕು ” ಎಂದು ಒಂದು ಲೇಖನದಲ್ಲಿ ಶ್ರೀ. ಅ. ನ. ಕೃಷ್ಣರಾಯರು ಹೇಳಿರುವುದು ಅಕ್ಷರಶಃ ನಿಜ. ಅಂತಹ ಒಂದು ಅಮೂಲ್ಯ ಆವರಣವು ನಮ್ಮ ಗಾಡಿಯಲ್ಲಿತ್ತು. “ ಅಷ್ಟಿಲ್ಲದೇ ಅಷ್ಟು ಆಕರ್ಷಕವಾಗಿ, ಶ್ರೀ ಜಾಗಿರದಾರರು ತಮ್ಮ ‘ ವಿಶ್ವಾಮಿತ್ರನ ಸೃಷ್ಟಿಯಲ್ಲಿ ’ ಅರವತ್ತೆರಡು ಪುಟಗಳುಳ್ಳ, ಮೂರನೇ ತರಗತಿಯ ಒಂದು ವರ್ಣನೆಯನ್ನು ಸೃಷ್ಟಿಸುವುದಕ್ಕಾಗುತ್ತಿತ್ತೇ ? ” ಎಂದು ನಾನು ಮನಸ್ಸಿಗೆ ಹೇಳಿಕೊಂಡೆನು. ಅಂತೂ ನಮ್ಮ ಗಾಡಿಯು ಮನುಷ್ಯನ ಪರಿಜ್ಞಾನಶಕ್ತಿಯ ಬೆಳವಣಿಗೆಗೆ ಸಹಾಯಮಾಡುವ ಒಂದು ಸ್ಥಾನವಾಗಿತ್ತು. ಅದಕ್ಕೇ ‘ ದೊಡ್ಡ ದೊಡ್ಡ ಮನುಷ್ಯರು ’ ಅಲ್ಲಿಗೆ ಬರುವುದಿಲ್ಲ. ಇಷ್ಟೇ, ‘ ಬಾಪೂಜಿ ’ಯವರಿಗೂ ಇತರ ಲೋಕಹಿತೈಷಿಗಳಿಗೂ ಇರುವ ವ್ಯತ್ಯಾಸ.

ಚಾಮರಾಜನಗರ ಬಂದಿತು.

ಎಂ. ಎನ್. ಬಾಬು.

# ಕವಿತೆ

[ಶ್ರೀನಿವಾಸ ಮೈಸೂರಿನಲ್ಲಿ ಸರ್ಕಾರಿ ಕೆಲಸದಲ್ಲಿದ್ದ. ಅವನ ಹೆಂಡತಿ ಪದ್ಮಾ. ಪದ್ಮಾ ಹಳ್ಳಿಯ ಹೆಣ್ಣು, ಆದರೆ ಒಳ್ಳೆ ಜಾಣೆ. ನೋಡುವುದಕ್ಕೂ ಸುಂದರಿ. ಶ್ರೀನಿವಾಸ ಕನ್ನಡದಲ್ಲಿ ಕವಿ ಎನ್ನಿಸಿಕೊಳ್ಳಲು ಪ್ರಯತ್ನಪಡುತ್ತಿದ್ದ. ಕೆಲವು ಕವನಗಳನ್ನು ಬರೆದಿದ್ದ. ಅವುಗಳನ್ನು ಪದ್ಮಾಗೆ ಓದಿ ಹೇಳಿದಾಗ ಅವಳಿಗೆ ಅವು ಅರ್ಥವಾಗಲಿಲ್ಲ. ಇವಳಿಗೆ ಸಾಹಿತ್ಯದಲ್ಲಿ ಸ್ವಲ್ಪ ಅಭಿರುಚಿಯುಂಟುಮಾಡಿದರೆ ನನ್ನ ಕವಿತೆ ಇವಳಿಗೆ ಚೆನ್ನಾಗಿ ತಿಳಿಯುತ್ತೆ ಎಂದು ಶ್ರೀನಿವಾಸ ಯೋಚಿಸುತ್ತಿದ್ದ. ತನ್ನ ಕವಿತೆ ಅವಳಿಗೆ ತಿಳಿಯದಿರುವುದರ ತಪ್ಪು ಪದ್ಮಾದಲ್ಲ ಎಂಬುದು ಆ ಪ್ರಾಣಿಗೆ ತಿಳಿಯಲಿಲ್ಲ. ಯಾವ ಕವಿಗೂ ತಿಳಿಯುವುದಿಲ್ಲ. ಅಲ್ಲದೆ ಶ್ರೀನಿವಾಸ ಮೈಸೂರು ಕಾಲೇಜಿನಲ್ಲಿ ತನ್ನ ಕವಿತೆಯನ್ನು ಪಠಿಸುವುದಕ್ಕಾಗಿ ಉಪಾಯಮಾಡುತ್ತಿದ್ದ. ಆ ವೇಳೆಗೆ ಬೆಂಗಳೂರಿನಲ್ಲಿ ಕರ್ನಾಟಕ ವಾಂಗ್ಮಯ ಸಭೆಯ ಆಶ್ರಯದಲ್ಲಿ ವಸಂತ ಸಾಹಿತ್ಯಮಾಲೆ ಪ್ರಾರಂಭವಾಗುವುದಾಗಿದ್ದಿತು. ಅಲ್ಲಿಯ ಉಪನ್ಯಾಸ ಕಾವ್ಯವಾಚನ ಮುಂತಾದುವುಗಳನ್ನು ಕೇಳುವುದು ಸುಲಭವಾದ ಜ್ಞಾನಾರ್ಜನೆಯ ಮಾರ್ಗವೆಂದು ಶ್ರೀನಿವಾಸ ಪದ್ಮಾವನ್ನು ಬೆಂಗಳೂರಿಗೆ ಕಳುಹಿಸಿದ. ಅವಳು ಅಲ್ಲಿ ಹೋಗಿ ತನ್ನ ದೂರದ ಸಂಬಂಧಿ ರಂಗನಾಯಕಿಯ ಮನೆಯಲ್ಲಿ ಇಳಿದುಕೊಂಡು ವಾಂಗ್ಮಯ ಸಭೆಯ ಉತ್ಸವಗಳಿಗೆ ಹೋಗುತ್ತಿದ್ದಳು.]

ಒಂಟಿಕೊಪ್ಪಲು, ಮೈಸೂರು.
೧-೪-೧೯೫೨.

ಪ್ರಿಯೆ ಪದ್ಮಾ,

ನೀನು ಇಲ್ಲಿಂದ ಪ್ರಯಾಣಮಾಡಿದಂದಿನಿಂದ ಬಹಳ ಬೇಜಾರಾಗಿದೆ. ನೀನು ಅಲ್ಲಿ ಖುಷಿಯಾಗಿದ್ದೀಯೆ ತಾನೆ. ಸೌ. ರಂಗನಾಯಕಿಯವರ ಮನೆಯಲ್ಲಿ ನಿನಗೆ ಬೇಕಾದ ಸೌಕರ್ಯಗಳೆಲ್ಲಾ ದೊರೆಯುವುದರಲ್ಲಿ ಸಂದೇಹವಿಲ್ಲ. ವಾಂಗ್ಮಯ ಸಭೆಯ ಎಲ್ಲಾ ಕಾರ್ಯಕಲಾಪಗಳಿಗೂ ತಪ್ಪದೆ ಹೋಗು. ಮುಖ್ಯವಾಗಿ ಕಾವ್ಯವಾಚನ ಕವಿತಾವಿಮರ್ಶೆ ಇವುಗಳಿಗೆ ಹೋಗದೆ ತಪ್ಪಿಸಿಕೊಳ್ಳಲೇಬೇಡ. ಒಳ್ಳೆಯ ಸಂಗೀತವಿರುವ ಸಿನಿಮಾಗಳಿಗೂ ಹೋಗು. ನಿನ್ನ ಕೈಯಲ್ಲಿ ಕೊಟ್ಟಿದ್ದ ರುಪಾಯಿ ಖರ್ಚಾಗಿಬಿಟ್ಟಿದ್ದರೆ ಬರೆ, ಮತ್ತೆ ಬೇಕಾದರೆ ಕಳುಹಿಸುತ್ತೇನೆ.

ಈಗ ಮುಂದಲ ಸಮಾಚಾರ ಕೇಳಿ ನಿನಗೆ ಬಹಳ ಸಂತೋಷವಾಗುವುದರಲ್ಲಿ ಸಂದೇಹವಿಲ್ಲ. ಇಲ್ಲಿಯ ಕಾಲೇಜಿನಲ್ಲಿ ನನ್ನ ಕವಿತೆಗಳನ್ನು ಓದಲು ಆಹ್ವಾನ ಗಿಟ್ಟಿಸಿದೆ. ನಾನು ಅನೇಕ ದಿನಗಳಿಂದ ಬಯಸಿದ ಶುಭ ಬಂದಿದೆ. 'ಸೊಳ್ಳೆಯ ಸುಖ'

ಬೇರಿಲ್ಲದ ಮರ" ಈ ಕವಿತೆಗಳು ಜನರ ಮನಸ್ಸನ್ನು ಅಪಹರಿಸುವುದರಲ್ಲಿ ಸಂದೇಹ ವಿಲ್ಲ. ನಾನು ಹಿಂದೆ ಅವುಗಳನ್ನು ನಿನಗೆ ಓದಿ ಹೇಳಿದಾಗ ನಿನಗೆ ತಿಳಿಯದಿದ್ದರೂ, ಈಗ ಅಲ್ಲಿಯ ಕಾರ್ಯಕಲಾಪಗಳನ್ನು ನೋಡುವುದರಿಂದ ಉಂಟಾಗುವ ಅನುಭವ ದಿಂದ ಈ ಕವಿತೆಗಳು ನೀನು ಇಲ್ಲಿಗೆ ಹಿಂದಿರುಗಿದ ನಂತರ ಹೊಸ ಬೆಳಕಿನೊಡನೆ ಹೊಳೆಯುವುದು ನಿನಗೆ ತೋರುವುದು. ಇವತ್ತು ಬೆಳಿಗ್ಗೆ, ಶೆಲ್ಫಿನ ಮೇಲೆ ನಾನು ನನ್ನ ಕವಿತೆಗಳ ಪುಸ್ತಕ ಇಟ್ಟಿದ್ದ ಸ್ಥಳದಲ್ಲಿ ನೋಡಿದಾಗ ಅದು ಅಲ್ಲಿ ಇರಲಿಲ್ಲ. ಮನೆ ಕೆಲಸದವಳನ್ನು ಕೇಳಿದುದಕ್ಕೆ ನೀನು ಮೊನ್ನೆ ಬೆಳಿಗ್ಗೆ ಇದ್ದಲು ಒಲೆಯ ಮುಂದೆ ಅದನ್ನು ಹಿಡಿದುಕೊಂಡು ಕವಿತೆ ಓದಿಕೊಳ್ಳುತ್ತಿದ್ದೆಯೆಂದು ಗೊತ್ತಾಯಿತು. ಕಾಲೇಜಿಗೆ ರಜಾ ಬರುತ್ತಿರುವುದರಿಂದ ಇನ್ನು ೩-೪ ದಿನಗಳಲ್ಲಿಯೇ ನನ್ನ ಕಾವ್ಯ ವಾಚನ ಇಟ್ಟುಕೊಳ್ಳುತ್ತಾರೆ. ಆದುದರಿಂದ ನೀನು ಆ ಕವಿತೆಗಳ ಪುಸ್ತಕ ಎಲ್ಲಿ ಇಟ್ಟಿದ್ದೀಯೆ ಎಂಬುದನ್ನು ನಾಳೆಯೇ ಬರೆ. ನೀನು ಅಲ್ಲಿ ಇರುವಾಗಲೇ, ವೃತ್ತ ಪತ್ರಿಕೆಗಳಲ್ಲಿ ನನ್ನ ಕಾವ್ಯವಾಚನದ ವಿಮರ್ಶೆ ಬರಬಹುದು. ಆಗ ನಿನಗೆ ನನ್ನ ಕವಿತೆಗಳ ನಿಜವಾದ ಯೋಗ್ಯತೆ ಗೊತ್ತಾಗುವುದು.

ನಿನ್ನ ಪ್ರೀತಿಯ ಶ್ರೀನಿವಾಸ.

---

ಮಲ್ಲೇಶ್ವರಂ, ಬೆಂಗಳೂರು.
೨-೪-೪೨.

ಪ್ರಿಯರೆ,

ನಿಮ್ಮ ಕಾಗದ ಬಂತು. ನೆನ್ನೆಯೇ ವಾಙ್ಮಯ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾದವು.

ನನ್ನ ಸ್ನೇಹಿತೆ ರಂಗನಾಯಕಿಗೆ ಅವಳ ಗಂಡ ಈಗ ಎಂಟು ದಿವಸಗಳ ಕೆಳಗೆ ಒಂದು ಹೊಸ ಪಾಚಿ ಬಣ್ಣದ ಸೀರೆ ತೆಗೆದುಕೊಟ್ಟಿದ್ದಾರೆ. ಸೀರೆ ಬಹಳ ಚೆನ್ನಾಗಿದೆ. ನೀವು, "ನಿನಗೆ ಪಾಚಿ ಬಣ್ಣದ ಸೀರೆ ಬಹಳ ಚೆನ್ನಾಗಿ ಒಪ್ಪುತ್ತೆ" ಎಂದು ಅನೇಕ ಸಲ ಹೇಳಿದ್ದಿರಿ. ಈ ತಗ್ಗು ಕಾಲದಲ್ಲಿಯೂ ಸೀರೆಯ ಬೆಲೆ ನೂರ ಅರವತ್ತೇ ರುಪಾಯಿ. ಈ ಬೆಲೆ ಕಡಿಮೆ ಎಂದೇ ಹೇಳಬೇಕು. ಇವತ್ತು ಇನ್ನೂ ಎರಡನೆಯ ತಾರೀಖು. ನೆನ್ನೆ ನಿಮ್ಮ ಸಂಬಳ ಬಂದಿರಬೇಕು. ಸಂಸಾರ ಹೇಗೋ ನಡೆಯುತ್ತೆ. ಮಹಾಲಕ್ಷ್ಮಿ ಹಾಲ್ ಅಲ್ಲಿ ಇನ್ನು ಇಂತಹ ಸೀರೆ ಒಂದೇ ಇರುವುದು. ಹಣ ಒದಗಿದರೆ ಒಂದು ಪಾಚಿ ಬಣ್ಣದ ಸೀರೆ ತೆಗೆದುಕೊಳ್ಳೋಣ ಅಂತ ಮಾಡಿದ್ದೇನೆ. ತೆಗೆದುಕೊಂಡು ಹೋಗು, 'ಊರಿಗೆ ಹೋಗಿ ದುಡ್ಡು ಕಳುಹಿಸುವಿಯಂತೆ' ಎಂದು

ರಂಗನಾಯಕಿ ಹೇಳುತ್ತಾಳೆ. ಆದರೆ ಸ್ನೇಹಿತೆಯರಿಂದ ಸಾಲ ತೆಗೆದುಕೊಳ್ಳುವುದು ನಿಮ್ಮ ಗೌರವಕ್ಕೆ ತಕ್ಕದ್ದಲ್ಲವೆಂದು ಯೋಚಿಸುತ್ತಿದ್ದೇನೆ.

ನೀವು ಕೊಟ್ಟಿದ್ದ ರುಪಾಯಿ ಖರ್ಚಾಗಿ ಹೋಯಿತು. ಇನ್ನೊಂದು ಹತ್ತು ರುಪಾಯಿ ಕೇಳೋಣ ಅಂತ ಮಾಡಿದ್ದೆ. ಆದರೆ ಸೀರೆಗೆ ಬೇರೆ ಹಣ ಕೊಡಬೇಕಲ್ಲ. ಖರ್ಚನ್ನೇ ಕಡಿಮೆ ಮಾಡಿಕೊಂಡು ನನ್ನ ಕೈಯಲ್ಲಿರುವ ರುಪಾಯಿಯಲ್ಲಿಯೇ ಸರಿಮಾಡಿಕೊಳ್ಳುತ್ತೇನೆ.

ನಿತ್ಯಾ ಒಂದು ಸಿನಿಮಾಕ್ಕೆ ಹೋಗುತ್ತಿದ್ದೇನೆ. ಇಲ್ಲಿ ಎಲ್ಲಾ ಹೆಂಗಸರೂ ನಿತ್ಯಾ ಸಿನಿಮಾಕ್ಕೆ ಹೋಗುತ್ತಾರೆ. ಗಂಡಸರೆಲ್ಲಾ ಕಂಟೋನ್ಮೆಂಟ್ ಸಿನಿಮಾಗಳಿಗೆ ಹೋಗುತ್ತಾರೆ. ಹೆಂಗಸರು ಸಿಟಿ ಸಿನಿಮಾಗಳಿಗೆ ಹೋಗುತ್ತಾರೆ. ನಾನು ಇಲ್ಲಿ ಇರುವವರೆಗೆ ನಿತ್ಯಾ ಒಂದೊಂದು ಸಿನಿಮಾಕ್ಕೆ ಹೋಗೋಣವೆಂದು ರಂಗನಾಯಕಿ ಹೇಳುತ್ತಿದ್ದಾಳೆ.

ನಿಮ್ಮ ಪ್ರೀತಿಯ ಪದ್ಮಾ.

---

ಒಂಟಿಕೊಪ್ಪಲು
೩-೪-೪೩.

ಪದ್ಮಾ,

ನಿನ್ನ ಕಾಗದ ಬಂತು. ವಾಙ್ಮಯ ಸಂಘದ ವಿಚಾರದಲ್ಲಿಯೂ ಸಿನಿಮಾಗಳನ್ನು ಕುರಿತೂ ನೀನು ಹೇಳಿರುವುದು ತಿಳಿಯಿತು. ನಿನ್ನ ಸ್ನೇಹಿತೆಯ ಪಾಚಿ ಬಣ್ಣದ ಸೀರೆ ಕುರಿತು ಬಹಳವಾಗಿ ಹೇಳಿದ್ದೀಯೆ ಸರಿ. ಆದರೆ ನನ್ನ ಕವಿತೆಯ ಪುಸ್ತಕ ಎಲ್ಲಿ ಇಟ್ಟಿದ್ದೀಯೆ ಎಂಬುದನ್ನು ಬರೆಯಲೇ ಇಲ್ಲ. ಇಲ್ಲಿ ಕಾಲೇಜಿನ ಸಂಘದ ಕಾರ್ಯದರ್ಶಿ ಕವಿತೆ ಮೊದಲು ಅಧ್ಯಕ್ಷರಿಗೆ ಓದಿ ಹೇಳಬೇಕೆಂದು ಹೇಳುತ್ತಿದ್ದಾರೆ. ನೀನು ಮಾತ್ರ ಅದನ್ನು ಎಲ್ಲಿ ಇಟ್ಟು ಹೋದೆ ಎಂಬುದನ್ನು ಬರೆಯಲಿಲ್ಲ. ಈ ಸಮಯಕ್ಕಾಗಿ ನಾಲ್ಕು ವರುಷಗಳಿಂದ ಕಾಯುತ್ತಿದ್ದೆ. ಸಾವಕಾಶವಾದರೆ ಮಿಂಚಿಹೋಗುತ್ತೆ. ನಾಳೆಯೇ ಆ ಕವಿತೆಗಳ ಪುಸ್ತಕ ಎಲ್ಲಿ ಇಟ್ಟಿದ್ದೀಯೇ ಎಂಬುದನ್ನು ಬರೆ. ನನಗೆ ಹುಡುಕಿ ಹುಡುಕಿ ಸಾಕಾಗಿ ಹೋಯಿತು. ನೀನು ಮರೆತು ಅದನ್ನು ಕಾಫೀ ಒಲೆಗೆ ಹಾಕಲಿಲ್ಲವಷ್ಟೆ. ನನಗಂತೂ, ಮತ್ತೆ ಕವಿತೆ ಬರೆಯೋಣ ಅಂದರೆ ಅದರ ಭಾವ ಸಹ ಮರೆತು ಹೋಗಿದೆ. ನಿನ್ನ ಕಾಗದದಲ್ಲಿ, ಕೇಳಿದ ಮಾತಿಗೆ ಜವಾಬ್ ಬೇಡವೆ?

ಶ್ರೀನಿವಾಸ.

ಮಲ್ಲೇಶ್ವರಂ, ಬೆಂಗಳೂರು.

೪-೪-೪೨.

ನಿಮ್ಮ ಕಾಗದ ಬಂತು. ಸ್ವಲ್ಪ ಬೇಜಾರಿನಿಂದ ಬರೆದಿರುವಂತೆ ಇದೆ. ಒಂದು ನಾಲ್ಕು ದಿನ ನಿರ್ಯೋಚನೆಯಾಗಿ ಇರೋಣ, — ತಾಪತ್ರಯಗಳನ್ನು ಮರೆತು ಅಂತ ಇಲ್ಲಿ ಬಂದೆ. ಇಲ್ಲಿಗೂ ನನ್ನ ದುರದೃಷ್ಟ ನನ್ನ ಬೆನ್ನ ಬಿಡಲಿಲ್ಲ.

ಹೌದು ಹೋದ ಕಾಗದದಲ್ಲಿ ನಿಮ್ಮ ಪುಸ್ತಕ ಏನಾಯಿತೆಂಬುದನ್ನು ಕುರಿತು ಬರೆಯಬೇಕೆಂದೇ ಪ್ರಾರಂಭಿಸಿದ್ದೆ, ಆದರೆ ಮಧ್ಯೆ ಮರೆತುಹೋಯಿತು. ಅದಕ್ಕೆ ನಾನೇನು ಮಾಡಲಿ. ಅದೂ ನನ್ನ ತಪ್ಪೆ? ಮರೆವು ಯಾರಿಗಾದರೂ ಸ್ವಾಭಾವಿಕ ತಾನೆ. ಸ್ವಲ್ಪ ನಿಮ್ಮ ಮಾತನ್ನೇ ನೆನೆಸಿಕೊಳ್ಳಿ. ನಿಮಗೆ ಮಾತ್ರ ಮರೆವು ಇಲ್ಲವೆ? ನೀವು ಮಾರ್ಕೆಟ್ಟಿಗೆ ಹೋದಾಗ, ನಾನು ಹೇಳಿದ್ದ ಸಾಮಾನನ್ನು ಯಾವತ್ತಾದರೂ ಮರೆಯದೆ ತಂದುದು ಉಂಟೆ? ಹಿಂದೆ ನಿಮ್ಮ ತಮ್ಮನನ್ನು ಒಂದು ಅಂಗಡಿಯಲ್ಲಿ ಕೂರಿಸಿ ನೀವು ಮತ್ತಾವುದೋ ಅಂಗಡಿಗೆ ಹೋಗಿದ್ದು, ಬರುವಾಗ ತಮ್ಮನನ್ನು ಮರೆತು ಒಬ್ಬರೇ ಮನೆಗೆ ಬರಲಿಲ್ಲವೆ? ಬಸ್ಸಿನವನಿಗೆ ಒಂದು ದಿನ, ಒಂಬತ್ತುಕಾಸಿನ ಟಿಕೆಟ್ಟಿಗೆ ಒಂದು ರುಪಾಯಿ ಕೊಟ್ಟು ಚಿಲ್ಲರೆ ವಾಪಸು ತೆಗೆದುಕೊಳ್ಳದೆ ಬರಲಿಲ್ಲವೆ? ನಿಮ್ಮ ಮರವಿನಿಂದ ಹಾಳಾಗಿರುವ ಫೌಂಟೆನ್‌ಪೆನ್‌ಗಳೆಷ್ಟು. ಆದರೆ ನಾನು ಅದಕ್ಕೆಲ್ಲಾ ನಿಮ್ಮನ್ನು ಆಕ್ಷೇಪಿಸಿದೆನೆ? ಏನೋ ಮರೆವು ಅಂತ ಸಹಿಸಿಕೊಳ್ಳಲಿಲ್ಲವೆ? ಈಗ ನನ್ನಿಂದ ಏನೋ ಅನಾಹುತವಾದಂತೆ ನನ್ನ ತಪ್ಪು ಕಂಡುಹಿಡಿಯಲು ಪ್ರಾರಂಭಿಸಿಬಿಟ್ಟಿರಿ. ಗುಲಗಂಜಿಯ ತಪ್ಪು ಗುಲಗಂಜಿಗೆ ತಿಳಿಯುವುದಿಲ್ಲ. ನಿಮ್ಮ ಸ್ವಭಾವ ಯಾವತ್ತೂ ಹೀಗೆಯೆ.

ನಿಮ್ಮ ಕೋಪಕ್ಕೆ ಕಾರಣ ನನಗೆ ಚೆನ್ನಾಗಿ ಗೊತ್ತು. ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ನೋಡುವವರಿಗೆ ಗೊತ್ತಾಗುವುದಿಲ್ಲವೆ? ಪಾಚಿ ಬಣ್ಣದ ಸೀರೆಗಾಗಿ ನಿಮ್ಮನ್ನು ಕೇಳಿದ್ದು ನಿಮಗೆ ಮೆಣಸಿನಕಾಯಿ ಹೊಗೆ ಕೊಟ್ಟಂತೆ ಆಯಿತು. ಈಗ ನಾಲ್ಕು ತಿಂಗಳ ಹಿಂದೆ ನೀವು ಕೈಗಡಿಯಾರ ಕೊಂಡುಕೊಂಡಾಗ ನಾನು ಕೇಳದೆ ಇದ್ದರೂ ನೀವಾಗಿಯೇ ನಿನಗೆ ಒಂದು ಪಾಚಿ ಬಣ್ಣದ ಸೀರೆ ತೆಗೆದುಕೊಡುತ್ತೇನೆ ಎಂದು ಹೇಳಿದಿರಿ. ಪಾಚಿ ಬಣ್ಣದ ಸೀರೆ ಉಟ್ಕೊಂಡು ನಿಮ್ಮ ಮುಂದೆ ಮೆರೆಯಬೇಕು ಅಂತ ನಾನು ಕೇಳಿಕೊಂಡೆನೆ? ಬೇಡಿ. ಖಂಡಿತ ಭಯಪಡ ಬೇಡಿ. ನಿಮ್ಮನ್ನು ಒಂದು ಕಾಸನ್ನೂ ಕೇಳುವುದಿಲ್ಲ. ನೀವು ಪಾಚಿ ಬಣ್ಣದ ಸೀರೆ ಯನ್ನು ನನಗಾಗಿ ಕೊಂಡುಕೊಳ್ಳುವುದು ಬೇಡ.

ಪದ್ಮಾ.

ಒಂಟಿಕೊಪ್ಪಲು, ಮೈಸೂರು.
೪-೪-೪೨.

ಪದ್ಮಾ !!!

ನಿನ್ನ ಕಾಗದ ನಲವತ್ತು ಸಲ ಓದಿದೆ. ಆದರೆ ಅದರಲ್ಲಿ ಸೊಳ್ಳೆಯ ಸುಖ, ಬೇರಿಲ್ಲದ ಮರ ಇವುಗಳನ್ನು ಬರೆದಿದ್ದ ನನ್ನ ಕವಿತೆಯ ಪುಸ್ತಕ ಎಲ್ಲಿ ಎಂಬುದು ತಿಳಿಯಲಿಲ್ಲ. ನನ್ನ ಸ್ನೇಹಿತ ಆ ಮುಟ್ಠಾಳ ವಾಸುವಿಗೆ ಮೊನ್ನೆ ಈ ವಿಚಾರ ಹೇಳಿದೆ. ಅವನು ಸಂಘದ ಕಾರ್ಯದರ್ಶಿಗೆ ಹೇಳಿ ಕವಿತಾವಾಚನಕ್ಕೆ ಒಂದು ದಿನವನ್ನು ಗೊತ್ತುಮಾಡಿ ಬಿಟ್ಟ. ಹಸ್ತಪತ್ರಿಕೆಗಳೆಲ್ಲ ಅಚ್ಚಾಗಿ ಎಲ್ಲಾ ಸ್ಕೂಲು ಕಾಲೇಜುಗಳ ನೋಟೀಸು ಬೋರ್ಡುಗಳಲ್ಲಿಯೂ ಕಾಣುತ್ತಿವೆ. ಇವತ್ತು ಸಂಘದ ಅಧ್ಯಕ್ಷರು ನನ್ನನ್ನು ಕಂಡು ಎಲ್ಲಿ, ಕವಿತೆಗಳನ್ನು ಮೊದಲು ಇಲ್ಲಿ ಕೊಡಿ, ನೀವು ಯಾವ ಯಾವದನ್ನು ಓದಬೇಕೆಂಬು ದನ್ನು ಆರಿಸಿ ಕೊಡುತ್ತೇನೆ. ಮತ್ತು ನಾನು ಅದರ ಮೇಲೆ ವಿಮರ್ಶೆಮಾಡಬೇಕಾದು ದರಿಂದಲೂ, ನಿಮ್ಮ ಪರಿಚಯವನ್ನು ಸಭಿಕರಿಗೆ ಮಾಡಿಕೊಡಬೇಕಾಗುವುದರಿಂದಲೂ ಮೊದಲು ಅದನ್ನು ಓದಿಕೊಳ್ಳಬೇಕು ಎಂದರು. ನಿಮ್ಮ ಮನೆಗೇ ತಂದುಕೊಡುತ್ತೇನೆ ಅಂತ ಹೇಳಿಕಳುಹಿಸಿದೆ. ನೀನೋ ಎಷ್ಟು ಬಡಕೊಂಡರೂ ನನ್ನ ಕವಿತೆಗಳನ್ನು ಎಲ್ಲಿ ಇಟ್ಟೆ ಎಂಬುದನ್ನು ಬರೆಯುವುದೇ ಇಲ್ಲ. ೬ ನೇ ತಾರೀಖು ಸಂಜೆ ೫ತ್ತಿ ಗಂಟೆಗೆ ವಾಚನ ಇಟ್ಟಿದ್ದಾರೆ. ಅಷ್ಟು ಹೊತ್ತಿಗೆ ಕವಿತೆಗಳು ನನ್ನ ಕೈಗೆ ಸಿಗದಿದ್ದರೆ ನನಗೆ ಹುಚ್ಚು ಹತ್ತುತ್ತೆ. ಆತ್ಮಹತ್ಯ ಮಾಡಿಕೊಳ್ಳಬೇಕಾಗುತ್ತೆ. ಇಲ್ಲವೇ ಬೈರಾಗಿಯಾಗಿ ದೇಶದಲ್ಲಿ ಅಲೆಯಬೇಕಾಗುತ್ತೆ. ಆದುದರಿಂದ ಕೂಡಲೆ ಬರೆ. ಈ ಸಲ ಏನಾದರೂ ನೀನು ನನ್ನ ಕವಿತೆಯ ಪುಸ್ತಕ ಎಲ್ಲಿದೆ ಎಂಬುದನ್ನು ಬರೆಯದೆ ಹೋದರೆ, ನೀನು ಹಿಂದಿರುಗಿದಾಗ ನಿನ್ನ ಕಣ್ಣಿಗೆ ಬೀಳುವುದು ಹಿಂದಲ ಶ್ರೀನಿವಾಸನಲ್ಲ ಪಿಶಾಚಿ.

ಶ್ರೀನಿವಾಸ.

---

ಮಲ್ಲೇಶ್ವರಂ, ಬೆಂಗಳೂರು.
೫-೪-೪೨.

ನಿಮ್ಮ ಕಾಗದ ಬಂತು. ಎಲ್ಲಾ ನಾನು ನಿರೀಕ್ಷಿಸಿದಂತೆಯೇ ಆಯಿತು. ನಾನು ಮೈಸೂರು ಬಿಟ್ಟ ಈಚೆಗೆ ನನ್ನನ್ನು ಕಂಡರೆ ನಿಮಗೆ ಇಷ್ಟರಮಟ್ಟಿಗೆ ಆಗದೆ ಹೋಯಿತಲ್ಲ. ಮುಖ್ಯ ನನ್ನ ಅದೃಷ್ಟ. ನಾನು ಹಿಂದೆ ಯಾರೋ ಗಂಡಹೆಂಡಿರನ್ನು ಅಗಲಿಸಿದ್ದಿರಬೇಕು. ನನ್ನ ಹದಿನೆಂಟನೆಯ ವಯಸ್ಸಿನಲ್ಲಿ ನನಗೆ ಒಂದು ಗಂಡಾಂತರ

ವಿದೆಯೆಂದು ಜ್ಯೋತಿಷವನ್ನು ಬಲ್ಲ ನಮ್ಮ ತಂದೆ ಹೇಳಿದ್ದರು. ಇದೇ ಆ ಗಂಡಾಂತರ ವೆಂದು ಭಾವಿಸುತ್ತೇನೆ.

ನೀವು ಹೇಳಿರುವುದನ್ನೆಲ್ಲಾ ಚೆನ್ನಾಗಿ ಯೋಚಿಸಿದೆ. ನನ್ನೊಂದಿಗೆ ಸಂಸಾರ ಮಾಡುವುದು ಸೊಳ್ಳೆಯ ಸುಖ ಅಂತ ಹೇಳಿದಿರಿ. ನಾನು ಬೇರಿಲ್ಲದ ಮರವಲ್ಲವೆ? ಯಾಕೆ ನೆರಳಿಲ್ಲದ ಮರ ಬುದ್ಧಿಯಿಲ್ಲದ ಹೆಣ್ಣು ಎಂದೇ ಹೇಳಿ. ಹೌದು ಹೋದ ಕಾಗದದಲ್ಲಿಯೂ ನಿಮ್ಮ ಪುಸ್ತಕ ಏನಾಯಿತೆಂಬುದನ್ನು ಬರೆಯುವುದು ಮರೆತು ಹೋಯಿತು. ಆದರೆ ಅದು ಅಂತಹ ಪ್ರಮಾದವಾದ ತಪ್ಪೇ. “ನಿಮಗೆ ಹುಚ್ಚು ಹತ್ತಿದೆ. ಆತ್ಮಹತ್ಯೆ ಮಾಡಿಕೊಳ್ಳಿ” ಎಂದು ನಾನು ಹೇಳಿದೆನೆ? ನಿಮ್ಮ ಕಣ್ಣಿಗೆ ನಾನು ಪಿಶಾಚಿಯಾಗಿ ಕಾಣುತ್ತೇನೆಯಲ್ಲವೆ? ಎಲ್ಲಾ ನನ್ನ ಹಣೆಬರಹ. ಹೊ! ಹೊ! ಹೊ! ಯಾಕೆ ಹೀಗೆ ನನ್ನನ್ನು ಗೋಳು ಹುಯ್ದುಕೊಳ್ಳುತ್ತೀರಿ. ಎದುರಿಗೆ ಇದ್ದಾಗ ಕೊಂದದ್ದು ಸಾಲದೆ? ಇಲ್ಲೂ ಬೆನ್ನುಹತ್ತಬೇಕೆ?

ಪದ್ಮಾ.

ಗೊರೂರು ರಾಮಸ್ವಾಮಿ ಐಯಂಗಾರ್.

# ಭಾವಸ್ವರೂಪ ಮತ್ತು ರಸೋತ್ಪತ್ತಿ[1]

ಮೆಕ್‌ಡೂಗಲ್ಲಿನ ಅಭಿಪ್ರಾಯಾನುಸಾರ ಪ್ರತಿಯೊಂದು ಹುಟ್ಟುಗುಣದ ಜೊತೆಗೂ ಭಾವವೊಂದು ಹೊರಬೀಳುತ್ತದೆ; ಈ ಭಾವವು ಹುಟ್ಟುಗುಣದೊಡನೆ ಮಿಳಿತವಾಗಿ ಅದನ್ನನುಸರಿಸಿ ಬರುವ ಒಂದು ಮಾದರಿಯ ಉದ್ವೇಗ ಅಥವಾ ವೇದನೆ. ಆದುದರಿಂದ ಹುಟ್ಟುಗುಣಗಳು ಎಷ್ಟಿವೆಯೋ ಭಾವಗಳೂ ಅಷ್ಟೇ ಇವೆ ಎಂದು ಹೇಳಿದಂತಾಯಿತು. ಇವನ ಅಭಿಪ್ರಾಯಾನುಸಾರ ಮಾನವನಲ್ಲಿ ಹುಟ್ಟುಗುಣಗಳು ಹದಿನಾಲ್ಕು. ಆದುದರಿಂದ ಭಾವಗಳೂ ಹದಿನಾಲ್ಕು. ಹುಟ್ಟುಗುಣಗಳು ಮನಸ್ಸಿನ ಒಂದು ಮಾದರಿಯ ಒತ್ತಾಯದಿಂದ ಉದ್ಬುದ್ಧವಾದುವು. ಸನ್ನಿವೇಶದಲ್ಲಿ, ಪ್ರಚೋದನಾ ವಸ್ತುವಿದ್ದುದನ್ನು ಮನಗಂಡ ಒಡನೆಯೇ ತದಣಗುಣವಾಗಿ ಪ್ರತಿಕ್ರಿಯೆಯನ್ನು ನಡೆಸಬೇಕೆಂದು ಒಂದು ಮನೋಬೋಧೆಯೂ, ಈ ಮನೋಬೋಧೆಯೊಡನೆ ಮಿಳಿತವಾಗಿ ಭಾವವೂ ಬರುತ್ತವೆ.

ಮೆಕ್‌ಡೂಗಲ್ ಹೀಗೆ ಹೇಳುವುದಕ್ಕೆ ಮುಖ್ಯವಾದ ಕಾರಣವೂ ಇದೆ. ಮಾನವನ ವರ್ತನೆಗೆಲ್ಲಾ ಮುಖ್ಯವಾದ ತಳಹದಿ ಮನಸ್ಸು ಎಂದು ಹೇಳುವ ಮನಶ್ಶಾಸ್ತ್ರಿಗಳಲ್ಲಿ ಮೆಕ್‌ಡೂಗಲ್ ಮುಖ್ಯನಾದವನು. ಪ್ರಾಣಿಯು ಬರಿಯ ನರ, ಮಾಂಸಗಳಿಂದ ಮಾಡಿದ ಯಂತ್ರದ ಬೊಂಬೆಯಲ್ಲ; ಇದರಲ್ಲಿ ಮನಸ್ಸೆಂಬ ಸೂಕ್ಷ್ಮವಾದ ವಸ್ತುವೊಂದಿದೆ. ವರ್ತನೆಯೆಲ್ಲವೂ ಸಾಧಾರಣವಾಗಿ ಮನಸ್ಸಿನ ಆಡಳಿತಕ್ಕೆ ಒಳಪಟ್ಟಿದೆ — ಎಂದು ಈ ಗುಂಪಿನ ಮನಶ್ಶಾಸ್ತ್ರಿಗಳು ಹೇಳುತ್ತಾರೆ. ಪ್ರಾಣಿಯ ವರ್ತನೆಯನ್ನು ಪರಿಶೀಲಿಸಿ ನೋಡಿದರೆ, ಆ ವರ್ತನೆಯೆಲ್ಲವೂ ಯಾವುದೋ ಒಂದು ಗುರಿಯನ್ನು ಸಾಧಿಸುವುದಕ್ಕೋಸ್ಕರವೆಂಬುದು ಗೊತ್ತಾಗುತ್ತದೆ. ಅಂದರೆ ಮನಸ್ಸಿನ ಒತ್ತಾಯದ ಮುಖ್ಯ ಗುಣವೇನೆಂದರೆ ಯೋಗ್ಯವಾದ ಗುರಿಯನ್ನು ಸಾಧಿಸಲು ವರ್ತನೆಯು ಸಹಾಯಕವಾಗಬೇಕೆಂಬುದು. ಆದುದರಿಂದ, ಸನ್ನಿವೇಶದಲ್ಲಿ ಪ್ರಬೋಧಕ ವಸ್ತುವನ್ನು ಕಂಡಾಗ, ಆ ಅನುಭವಕ್ಕೆ ಯೋಗ್ಯವಾದ ಗುರಿಯನ್ನು ಸಾಧಿಸಬೇಕೆಂಬ ಪ್ರಬಲವಾದ ಒತ್ತಾಯವೂ ತಲೆದೋರುವುದು. ಉದಾಹರಣೆಗಾಗಿ, ನಾವು ಹೊಲದಲ್ಲಿ ಹೋಗುತ್ತಿದ್ದಾಗ, ಎದುರಿನಲ್ಲಿ ಕೋಪಗೊಂಡಿರುವ ಒಂದು ಸರ್ಪವನ್ನು ಕಂಡರೆ — ಮನಗಂಡರೆ — ಆಗ ಆ ಸನ್ನಿವೇಶ, ಆ ಅನುಭವ, ಇವುಗಳಿಗೆ ಯೋಗ್ಯವಾದ ರೀತಿಯಲ್ಲಿ ವರ್ತಿಸಬೇಕು. ಆ ಸನ್ನಿವೇಶ ಆ ಅನುಭವಗಳಿಗೆ

[1] ದೀಪಾವಳಿ ಸಂಚಿಕೆಯಿಂದ ಮುಂದುವರಿದದ್ದು.

ಅನುಸಾರವಾಗಿ ಯೋಗ್ಯವಾದ ಗುರಿಯನ್ನು ಸಾಧಿಸಬೇಕು. ಅಂದರೆ ಆಗ ಅಲ್ಲಿಂದ ನಾವು ಪಲಾಯನಮಾಡಬೇಕೆಂದು ಇಟ್ಟುಕೊಳ್ಳೋಣ. ಅದೇ ಗುರಿ. ಆ ಗುರಿಯ ಸಾಧನೆಗೆ ಮನಸ್ಸಿನ ಒತ್ತಾಯವೇ ಕಾರಣ.

ಇಂತಹ ಸಂದರ್ಭದಲ್ಲಿ, ನಾವು ಓಡಿಹೋಗಲು ಆಗದಿರುವಂತೆ, ನಮ್ಮ ದಾರಿಗೆ ಅಡ್ಡವಾಗಿ ಒಂದು ಅಗಲವಾದ ಹಳ್ಳವಿದೆ ಎಂದು ಇಟ್ಟುಕೊಳ್ಳೋಣ. ಈ ಹಳ್ಳವನ್ನು ಒಂದೇ ಏಟಿಗೆ ನಾವು ನೆಗೆದು ಹಾರಿಹೋಗಬೇಕು. ಉಳಿದ ಸಮಯಗಳಲ್ಲಿ ಈ ಹಳ್ಳಕ್ಕಿಂತಲೂ ಕಿರಿದಾದ ಹಳ್ಳವನ್ನೂ ನಾವು ಹಾರಲಾರೆವು. ಆದರೂ ಈಗ ಮಾತ್ರ ಈ ಅಗಲವಾದ ಹಳ್ಳವನ್ನೇ ನಾವು ನೆಗೆದು ಹಾರಬೇಕಾಗಿದೆ. ಹಾಗೆ ಮಾಡಿಯೇ ಆಗ ನಾವು, ಆ ಸನ್ನಿವೇಶಕ್ಕೆ ಯೋಗ್ಯವಾದ ಗುರಿಯನ್ನು ಸಾಧಿಸಿದಂತಾಗುತ್ತದೆ. ಹೀಗೆ ಈ ಗುರಿಯನ್ನು ಸಾಧಿಸಿ, ಆ ಮೂಲಕ ಸನ್ನಿವೇಶಕ್ಕೆ ಯೋಗ್ಯವಾದ ರೀತಿಯಲ್ಲಿ ನಾವು ಹೊಂದಿಕೊಂಡು ಹೋದಂತೆ ಆಗುತ್ತದೆ. ಹಾಗಾಗಬೇಕೆಂದು ಹುಟ್ಟುಗುಣಾನುಸಾರವಾಗಿ, ಪ್ರಚಂಡವಾದ ಮನೋಬೋಧೆಯೊಂದು ತಲೆದೋರಿದೆ. ಈ ಕ್ರಿಯೆಯನ್ನು ಮಾಡಬೇಕಾದುದು ಅತ್ಯಾವಶ್ಯಕ; ಆದರೆ ಅಷ್ಟು ಶಕ್ತಿ ನಮ್ಮಲ್ಲಿ ಸಾಧಾರಣವಾಗಿ ಇರುವುದಿಲ್ಲ.

ಇಂತಹ ಸಂದರ್ಭಗಳಲ್ಲಿ, ಹುಟ್ಟುಗುಣಾನುಸಾರ ವರ್ತಿಸಿ, ಯೋಗ್ಯವಾದ ಗುರಿಯನ್ನು ಸಾಧಿಸಲು ಅನುಕೂಲವಾಗುವಂತೆ, ಅಕಸ್ಮಾತ್ತಾಗಿ ನಮ್ಮ ದೇಹದಲ್ಲಿ ಪ್ರಚಂಡಶಕ್ತಿಯೊಂದು ಉದ್ಭವಿಸುತ್ತದೆ. ಇದೇ ಭಾವ. ಭಾವವಿಲ್ಲದಿದ್ದರೆ, ಮಾನವನಿಗೆ, ಗುರಿಸಾಧನೆ ಅಸಾಧ್ಯವಾಗಬಹುದು. ಆದುದರಿಂದಲೇ ಹುಟ್ಟುಗುಣಾನುಸಾರವಾಗಿ ಬಂದ ಮನೋಬೋಧೆಯು ಸಾರ್ಥಕ್ಯವನ್ನು ಹೊಂದಲು ಕಾರಣವಾಗಿ ಭಾವವೂ ಬರುತ್ತದೆ.

ಹುಟ್ಟುಗುಣಾನುಸಾರ ವರ್ತಿಸುವುದರಿಂದ, ಸಾಧಾರಣವಾಗಿ ಪ್ರಾಣಿಗೆ ಬಾಳು ಸುಸೂತ್ರವಾಗಿ ನಡೆಯುತ್ತದೆ. ಪ್ರತಿಯೊಂದು ಹುಟ್ಟುಗುಣವೂ ಜೀವನವನ್ನು ನಡೆಯಿಸಲು ಅನುಕೂಲವಾದುದು, ಸಹಾಯಕವಾದುದು. ಜೀವನದ ದೃಷ್ಟಿಯಿಂದ ಪ್ರತಿಯೊಂದು ಹುಟ್ಟುಗುಣಕ್ಕೂ—(Biological Value) ಕ್ರಿಯಾತ್ಮಕ ಮೌಲ್ಯ—ಒಂದು ಬೆಲೆಯುಂಟು. ಹುಟ್ಟುಗುಣದೊಡನೆ ಮಿಳಿತವಾಗಿರುವುದರಿಂದ ಪ್ರತಿಯೊಂದು ಭಾವಕ್ಕೂ ಇದೇ ವಿಧವಾದ—ಜೀವನಕ್ರಿಯೆಯನ್ನು ನಡೆಯಿಸಲು ಯೋಗ್ಯವಾದ—ಬೆಲೆಯುಂಟು. ಆದುದರಿಂದಲೇ ಪ್ರತಿಯೊಂದು ಭಾವವೂ ಲೌಕಿಕ ಪ್ರಯೋಜನವನ್ನು ಹೊಂದಿದೆ. ಇದು ಭಾವದ ಮುಖ್ಯ ಲಕ್ಷಣ.

ಇಷ್ಟೆಲ್ಲ ಹೇಳಿದ ಮೆಕ್‌ಡೂಗಲ್ ಇಲ್ಲಿಯೇ ನಿಲ್ಲಲಿಲ್ಲ; ಪ್ರತಿಯೊಂದು ಹುಟ್ಟು

ಗುಣವೂ ಪ್ರಾಣಿಯ ಸುಗಮ ಜೀವನಕ್ಕೆ ಕಾರಣವಾದುದರಿಂದ — ಆಯಾ ಸನ್ನಿವೇಶಗಳಿಗೆ ಅನುಗುಣವಾಗಿ ಬೇರೆ ಬೇರೆ ಹುಟ್ಟುಗುಣಗಳು ಉತ್ಪತ್ತಿಯಾಗಬಹುದು. ಒಂದು ಸನ್ನಿವೇಶದಲ್ಲಿ ಓಡಿಹೋಗಬೇಕೆಂಬ ಮನೋಬೋಧೆಯೂ ಇನ್ನೊಂದು ಸನ್ನಿವೇಶದಲ್ಲಿ ಎದುರಾಳಿಯೊಡನೆ ಹೋರಾಡಬೇಕೆಂಬ ಹುರುಪೂ, ಮತ್ತೊಂದು ಸನ್ನಿವೇಶದಲ್ಲಿ ಮಗುವನ್ನು ಮುದ್ದಾಡಬೇಕೆಂಬ ತವಕವೂ ಉತ್ಪತ್ತಿಯಾಗಬಹುದು. ಈ ವಿಧವಿಧವಾದ ಮನೋಬೋಧೆಗಳಿಗೆ ಅನುಸಾರವಾಗಿ — ವಿಧವಿಧವಾದ ಹುಟ್ಟುಗುಣಗಳು ವರ್ತನೆಯಲ್ಲಿ ತಲೆದೋರುವಾಗ — ವಿಧವಿಧವಾದ ಸ್ನಾಯುಗಳಲ್ಲಿಯೂ ಮಾಂಸಭಿತ್ತಿಗಳಲ್ಲಿಯೂ ಶಕ್ತಿಯು ಪ್ರವಹಿಸಿ, ಪ್ರಾಣಿಯು ಓಡಿಹೋಗುವಂತೆಯೋ, ಹೋರಾಡುವಂತೆಯೋ, ಮುದ್ದಾಡುವಂತೆಯೋ ಮಾಡುತ್ತದೆ. ಹಾಗೆ ಮಾಡಲು ಅಂತಹ ಸಂದರ್ಭಗಳಲ್ಲಿ ಹೊರಬೀಳುವ ಭಾವಗಳು ಸಹಾಯ ಮಾಡುವುದರಿಂದ ಈ ಭಾವಗಳ ಸ್ವರೂಪವೂ ವಿಧವಿಧವಾಗಿರುವುದು. ಅಂದರೆ, ಪ್ರಾಣಿಯು ಓಡಿಹೋಗುವಾಗ ಇರುವ ಭಾವವೂ, ಹೋರಾಡುವಾಗ ಇರುವ ಭಾವವೂ, ಮುದ್ದಾಡುವಾಗ ಇರುವ ಭಾವವೂ, ಸ್ವಭಾವತಃ ಸ್ವರೂಪದಲ್ಲಿ ಸಹ ಭಿನ್ನಭಿನ್ನವಾದುವು. ಓಡಿಹೋಗುವಾಗ ಕಾರಣವಾದ ಭಾವ ಭಯ, ಹೋರಾಡುವಾಗ ಕೋಪ, ಮುದ್ದಾಡುವಾಗ ವಾತ್ಸಲ್ಯ ಎಂದು ಹೇಳಬಹುದು. ಹುಟ್ಟುಗುಣಗಳು ಹದಿನಾಲ್ಕೆಂದು ಮೆಕ್‌ಡೂಗಲ್ ಹೇಳಿರುವುದು. ಇವು ಯಾವುವೆಂದರೆ:— (೧) ಆಹಾರಾನ್ವೇಷಣೆ, (೨) ಜುಗುಪ್ಸೆಯಿಂದ ತ್ಯಜಿಸುವುದು, (೩) ಸಂಭೋಗಕ್ರಿಯೆ, (೪) ಅಪಾಯದಿಂದ ದೂರವಾಗಲು ಪಲಾಯನ, (೫) ಹೊಸ ಸ್ಥಳ, ವಿಷಯಗಳ ಅರಿವಿಗಾಗಿ ಪ್ರಯತ್ನಿಸುವುದು, (೬) ಚಿಕ್ಕಮಕ್ಕಳನ್ನು ಪೋಷಿಸಿ ಕಾಪಾಡುವುದು, (೭) ಸಂಘಜೀವನಕ್ಕಾಗಿ ಪ್ರಯತ್ನಿಸುವುದು, (೮) ಸ್ವಪ್ರತಿಷ್ಠೆಯನ್ನು ಹೊರಗಾಣಿಸುವುದು, (೯) ವಿಧೇಯನಾಗಿ ವರ್ತಿಸುವುದು, (೧೦) ಅಡಚಣೆಯನ್ನು ನಿರ್ಮೂಲಮಾಡಲು ಪ್ರಯತ್ನಿಸುವುದು, (೧೧) ತಲೆಮರೆಯನ್ನೋ ಆಯುಧವನ್ನೋ ರಚಿಸುವುದು, (೧೨) ಮೊರೆಯಿಡುವುದು, (೧೩) ವಸ್ತುಸಂಗ್ರಹಣ ಮತ್ತು (೧೪) ನಗುವುದು. ಈ ಹುಟ್ಟುಗುಣಗಳು, ಸನ್ನಿವೇಶದಲ್ಲಿ ಯೋಗ್ಯವಾದ ಪ್ರಚೋದನೆಯಿದ್ದಾಗಲೆಲ್ಲಾ ಮನೋಬೋಧೆಗೆ ಅನುಸಾರವಾಗಿ ತಲೆದೋರಿ ವರ್ತನೆಯಲ್ಲಿ ಸಾರ್ಥಕ್ಯವನ್ನು ಹೊಂದುತ್ತವೆ. ಇವುಗಳೊಡನೆ ಮಿಳಿತವಾಗಿ ಬರುವ ಭಾವಗಳು ಕ್ರಮವಾಗಿ ಹೀಗಿರುತ್ತವೆ:— (೧) ಕ್ಷುಧೆ, (೨) ಜುಗುಪ್ಸೆ, (೩) ಕಾಮ, (೪) ಭಯ, (೫) ಕುತೂಹಲ (೬) ವಾತ್ಸಲ್ಯ, (೭) ಸಂಘಾಪೇಕ್ಷೆ, (೮) ಪ್ರತಿಷ್ಠೆ, (೯) ವಿಧೇಯತೆ (ದಾಸ್ಯ), (೧೦) ಕೋಪ, (೧೧) ರಚನೆ,

(೧೨) ಪ್ರಾರ್ಥನೆ (ಮೊರೆಯಿಡುವುದು), (೧೪) ಸಂಗ್ರಹಣ (ಶೇಖರಣ), ಮತ್ತು (೧೪) ಹಾಸ್ಯ.

ಸನ್ನಿವೇಶದಲ್ಲಿರುವ ಪ್ರಚೋದಕ ವಸ್ತುವು ಒಂದೇ ಜಾತಿಯ ಅರ್ಥದ್ದಾಗಿಲ್ಲದೆ, ಎರಡು ಮೂರು ಅರ್ಥಗಳನ್ನು ಕೊಡುವ ಬೇರೆಬೇರೆ ವಸ್ತುಗಳೂ ಸನ್ನಿವೇಶದಲ್ಲಿರ ಬಹುದು. ಉದಾಹರಣೆಗಾಗಿ, ಸನ್ನಿವೇಶದಲ್ಲಿ ಭಯೋತ್ಪಾದಕವಾದ ಹಾವು, ಅದರ ಬಳಿಯಲ್ಲಿಯೇ ವಾತ್ಸಲ್ಯೋತ್ಪಾದಕವಾದ ಶಿಶುವೂ ಇರಬಹುದು. ಈಗ ಒಂದೇ ಸಲ ಎರಡು ವಿಧವಾದ ಹುಟ್ಟುಗುಣಗಳು ತಲೆದೋರಿ ಎರಡು ಭಿನ್ನವಾದ ಭಾವಗಳೂ (ಭಯ ಮತ್ತು ವಾತ್ಸಲ್ಯ) ಉತ್ಪನ್ನವಾಗಬಹುದು. ಆಗ ಈ ಭಾವಗಳೆರಡೂ ಮಿಳಿತ ವಾಗಿ ಬೇರೆಯದಾದ ಮಿಶ್ರಭಾವವೂ ಹೊರಬೀಳಬಹುದು.

ಭಾವಕ್ಕೂ ವೇದನೆಗೂ (Feeling) ವ್ಯತ್ಯಾಸವುಂಟೆಂಬುದು ಮೆಕ್‌ಡೂಗಲ್ಲಿನ ಮತ. ಭಾವಗಳೆಲ್ಲವೂ ಹುಟ್ಟುಗುಣಾನುಸಾರ ತಲೆದೋರಿ ವರ್ತನೆಯಲ್ಲಿ ಗುರಿಯು ಸಾಧ್ಯವಾಗುವ ರೀತಿಯಲ್ಲಿ ಪ್ರಾಣಿಯು ಬಿರುಸಿನಿಂದ ಪ್ರವರ್ತಿಸುವಂತೆ ಮಾಡುವುವು. ಆದರೆ ವೇದನೆಯ ಸಂವೇಗದ ರೀತಿಯೇ ಬೇರೆ. ಹರ್ಷವು ವೇದನೆಯನ್ನು ಸೂಚಿಸು ತ್ತದೆ, ಹರ್ಷವೆಂಬ ಭಾವವಿಲ್ಲ. ಸುಖ-ದುಃಖ, ಉದ್ವೇಗ-ಶಾಂತಿ, ಇವೆಲ್ಲವೂ ವೇದನೆಯ ಮುಖಗಳು. ಕೆಲಸಂದರ್ಭಗಳಲ್ಲಿ ಯಾವುದೋ ಒಂದು ಭಾವವೂ ಅದರೊಡನೆ ಮಿಳಿತವಾಗಿ ವೇದನೆಯೂ ಸೇರಿರುವುದುಂಟು. ಪ್ರತಿಭಾವದ ಸ್ವರೂಪಕ್ಕೆ ಯೋಗ್ಯ ವಾಗಿ ವರ್ತನೆಯಾಗುತ್ತಿರುವಾಗಲೆಲ್ಲಾ — ಆ ವರ್ತನೆಯ ಓಟಕ್ಕೆ ಅನುಸಾರವಾಗಿ ವೇದನೆಯಲ್ಲಿಯೂ ಬದಲಾವಣೆಯಾಗಬಹುದು. ಭಯವೆಂಬ ಭಾವಕ್ಕೆ ಅನುಸಾರ ವಾಗಿ ನಾವು ಓಡುತ್ತಿದ್ದರೆ — ಆ ಓಟ ನಮಗೆ (ನಮ್ಮ ಶತ್ರುವಿಗಲ್ಲ) ಅನುಕೂಲ ವಾಗುತ್ತಿದ್ದರೆ ಆ ಭಯವೆಂಬ ಭಾವದ ಜೊತೆಗೆ ಮಿಳಿತವಾಗಿ ಸುಖವೂ ಬೋಧ ವಾಗುವುದು. ಹಾಗಲ್ಲದೆ ಅದೇ ಓಟವೇ ನಮಗೆ ಪ್ರತಿಕೂಲವಾಗಿ — ನಮ್ಮ ಶತ್ರುವಿಗೆ ಅನುಕೂಲವಾಗುತ್ತಿದ್ದರೆ — ಆಗ ವೇದನೆಯು ದುಃಖವಾಗುತ್ತಿತ್ತು. ಹೀಗೆ ಭಾವಾನುಗುಣವಾದ ಕ್ರಿಯೆಯು ನಡೆಯುವಾಗಲೆಲ್ಲಾ ವರ್ತನೆಯ ಓಟವನ್ನು ಅನುಸರಿಸಿ ವೇದನೆಯಲ್ಲಿಯೂ ವ್ಯತ್ಯಾಸವು ಕಂಡುಬರುತ್ತದೆ.

ಮೆಕ್‌ಡೂಗಲ್ಲಿನ ಅಭಿಪ್ರಾಯಾನುಸಾರ ಭಾವದ ಸ್ವರೂಪವನ್ನೂ ವೇದನೆಯ ಸ್ವರೂಪವನ್ನೂ ನಾವು ಮುಖ್ಯವಾಗಿ ಗಮನಿಸಬೇಕು. ಇನ್ನೊಂದು ಉದಾಹರಣೆ ಯನ್ನು ಅವನೇ ಕೊಟ್ಟಿದ್ದಾನೆ. ನೀವು ಈ ಕಾಗದವನ್ನು ಬರೆದಿರೆಂದು ಇಟ್ಟು ಕೊಳ್ಳೋಣ :— ಶ್ರೀ ಬಿ. . . ಯವರಿಗೆ, ನಾಳೆ ಮಂಗಳವಾರ ನಾನು ನಿಮ್ಮೂರಿಗೆ ಬರುವ ಕೆಲಸವಿದೆ. ನಿಮ್ಮ ಕಚೇರಿಯಲ್ಲಿ ನಾನು ನಿಮ್ಮನ್ನು ನೋಡಲು ಆಗದಿದ್ದಲ್ಲಿ, ಸುಮಾರು ಎಂಟುಗಂಟೆ ಸಮಯಕ್ಕೆ ನಿಮ್ಮ ಮನೆಯಲ್ಲಿ ನೋಡುತ್ತೇನೆ. ಇತಿ

ತಮ್ಮ . . . ಇತ್ಯಾದಿ. ಈ ಕಾಗದದಲ್ಲಿ ಭಾವವೂ ಕಾಣುವುದಿಲ್ಲ ವೇದನೆಯೂ ಇಲ್ಲ. ಆದರೆ, ಈ ಕಾಗದವನ್ನು ನೀವು ನಿಮ್ಮ ಅತ್ಯಂತ ಪ್ರೀತ್ಯಾಸ್ಪದರಾದವರೊಬ್ಬರಿಗೋ ಅಥವಾ ನಿಮ್ಮಿಂದ ಬಹಳ ದಿನಗಳ ಹಿಂದೆ ಹಣವನ್ನು ಪಡೆದು, ಎಷ್ಟು ಕೇಳಿದರೂ ಹಿಂತಿರುಗಿಕೊಡದೆ 'ದಗಾ' ಹಾಕಲು ಪ್ರಯತ್ನಿಸುತ್ತಿದ್ದ ಒಬ್ಬ 'ಆಸಾಮಿ'ಗೊ ಬರೆದಿರುವಿರಿ ಎಂದು ಇಟ್ಟುಕೊಳ್ಳೋಣ. ಇಂತಹ ಸಂದರ್ಭದಲ್ಲಿ ಮೇಲೆ ಕಂಡ ನಾಲ್ಕಾರು ಶಬ್ದಗಳು ವಿಪುಲಪ್ರೇಮವನ್ನೋ ಅತಿಶಯ ಕೋಪವನ್ನೋ ಹೊರ ಸೂಸುವುಗಳಾಗಿರುತ್ತವೆ. ಈಗ, ಇಂತಹ ಕಾಗದವನ್ನು ಯಾವುದೋ ಒಂದು ಅರ್ಥ ವಿಲ್ಲದೆ ಬರೆಯುವುದಿಲ್ಲ. ಹಾಗೆ ಬರೆಯುವಾಗ ಮನಸ್ಸು ಉದ್ವೇಗಪೂರಿತವಾಗಿದೆ. ಆ ಉದ್ವೇಗದಲ್ಲಿ ಭಾವವೂ ವೇದನೆಯೂ ತುಂಬಿದೆ. ಹಣಕೊಡದವನ ವಿಷಯದಲ್ಲಿ ತಿರಸ್ಕಾರವೋ ಕೋಪವೋ ಇರಬಹುದು—ಭಾವಪೂರಿತವಾಗಿರಬಹುದು. ಈಗ ಲಾದರೂ ಹಣವನ್ನು ಕೊಟ್ಟಾನೆಂಬ ಆಶೆಯೋ — ಅಥವಾ ಏನೂ ಪ್ರಯೋಜನ ವಿಲ್ಲವೆಂಬ ನಿರಾಶೆಯೋ ವೇದನೆಯಾಗಿರಬಹುದು. ಹಾಗೆ ವೇದನೆಯೂ ಭಾವವೂ ಮಿಳಿತವಾಗಿರಬಹುದು.

ಆದುದರಿಂದ ಮೆಕ್‌ಡೂಗಲ್ಲಿನ ಅಭಿಪ್ರಾಯಗಳ ಸಾರಾಂಶವೇ ಇಷ್ಟು:— ಪಿತೃದತ್ತವಾಗಿ ಕೆಲವು ಹುಟ್ಟುಗುಣಗಳಿವೆ. ಇವು ಸನ್ನಿವೇಶದಲ್ಲಿ ಯೋಗ್ಯ ಪ್ರಚೋದನವಸ್ತುಗಳಿದ್ದಾಗ ವರ್ತನೆಗೆ ತಳಹದಿಯಾಗಿರುತ್ತವೆ. ಈ ಹುಟ್ಟುಗುಣ ಗಳಿಗೆ ಅನುಸಾರವಾಗಿ ಮನೋಬೋಧೆಯೊಡನೆ ಮಿಳಿತವಾಗಿ ಒಂದು ಮಾದರಿಯ ವೈಶಿಷ್ಟ್ಯವನ್ನು ಹೊಂದಿರುವ ಉದ್ವೇಗವೂ ಹೊರಬೀಳುತ್ತದೆ. ಇದೇ ಭಾವ. ಭಾವಸ್ವರೂಪ ನಿರ್ಣಯವು ಹುಟ್ಟುಗುಣಾನುಸಾರ. ಭಾವದೊಡನೆ ಸೇರಿ — ಅದರ ಸಾರ್ಥಕ್ಯದ ಉಬ್ಬರವಿಳಿತಗಳಿಗೆ ಅನುಸಾರವಾಗಿ ವೇದನೆಯೂ ಬರುತ್ತದೆ.

ಮೆಕ್‌ಡೂಗಲ್, ನಾವು ಮುಖ್ಯವಾಗಿ ಗಮನಿಸಬೇಕಾದ ಮನಶ್ಶಾಸ್ತ್ರಿ. ಅವನ ಅನುಯಾಯಿಗಳೇ ಬಹಳ. ಅವನ ಮಾತೇ ಅನೇಕರಿಗೆ ಗುರುವಾಕ್. ಆದುದರಿಂದ ಅವನ ಮತವನ್ನು ಸ್ವಲ್ಪ ವಿಳಂಬವಾಗಿ ವರ್ಣಿಸಬೇಕಾಯಿತು.

ಇವನ ಅಭಿಪ್ರಾಯಾನುಸಾರ ಭಾವಗಳು ಭಿನ್ನಭಿನ್ನವಾದುವು. ಅವುಗಳ ಸ್ವರೂಪನಿರ್ಣಯಕ್ಕೆ ಹುಟ್ಟುಗುಣಗಳ ಸಹಾಯವು ಬೇಕು. ಆಗ ಅದು ಸಾಧ್ಯ.

ಹಿಂದೆ ದೇಹಕೇಂದ್ರ ತತ್ತ್ವಗಳನ್ನು ಪರಿಶೀಲಿಸಿದ್ದಾಗ — ಆ ತತ್ತ್ವ ಪ್ರತಿಪಾದನೆ ಯನ್ನು ಒಪ್ಪಿಕೊಳ್ಳುವುದು ಸಾಧ್ಯವಲ್ಲವೆಂಬುದನ್ನು ನೋಡಿದೆವು. ಮನೋಕೇಂದ್ರ ತತ್ತ್ವಗಳಲ್ಲಿ ಮುಖ್ಯವಾದ ಮೆಕ್‌ಡೂಗಲ್ಲಿನ ಮತವನ್ನು ವಿಚಾರನಿಷ್ಠವಾದ ದೃಷ್ಟಿ ಯಿಂದ ನೋಡಿದರೆ ಅವನ ತತ್ತ್ವವನ್ನು ಸಂಪೂರ್ಣವಾಗಿ ಒಪ್ಪಲಾಗುವುದಿಲ್ಲ.


ಅವನ ಬರೆವಣಿಗೆಯಲ್ಲಿಯೇ ಮೆಕ್‌ಡೂಗಲ್ ಅನೇಕ ಸಂದರ್ಭಗಳಲ್ಲಿ ಭಾವದ ಸ್ವರೂಪದ ಅರಿವಿಗೆ ಹುಟ್ಟುಗುಣಗಳು ಹೆಚ್ಚು ಸಹಾಯಕವಾಗಲಾರವೆಂಬ ಸಂಶಯ ವನ್ನು ತೋರಿಸಿದ್ದಾನೆ. ದೇಹಕೇಂದ್ರ ತತ್ವವಿರೋಧಿಗಳಾದ ವಿಜ್ಞಾನಿಗಳು ಅನೇಕ ವೇಳೆ ಪ್ರಯೋಗಬಲದಿಂದ, ದೈಹಿಕವ್ಯಾಪಾರಗಳಲ್ಲಿ ಉಂಟಾಗುವ ವ್ಯತ್ಯಾಸಗಳ ತಳಹದಿಯ ಮೇಲೆಯೇ ಭಾವಭಿನ್ನತೆಯನ್ನು ಸ್ಪಷ್ಟೀಕರಿಸಲು ಸಾಧ್ಯವಲ್ಲವೆಂದು ಹೇಳಿದ್ದಾರೆ.

ಒಂದೇ ಪ್ರಚೋದನೆಯು ಅರ್ಥವ್ಯತ್ಯಾಸದಿಂದ ಬೇರೆ ಬೇರೆ ಹುಟ್ಟುಗುಣಾನು ವರ್ತಿಗಳಾದ ನಡವಳಿಕೆಗಳಿಗೆ ಕಾರಣವಾಗಬಹುದಾದುದರಿಂದ ಪ್ರಚೋದನಾ ವಸ್ತುವಿಗೆ ಅನುಸಾರವಾಗಿ ಭಾವಸ್ವರೂಪವನ್ನು ನಿರ್ದಿಷ್ಟಮಾಡುವುದೂ ಸಾಧ್ಯವಿಲ್ಲ. ಹಾವನ್ನು ಕಂಡಾಗಲೆಲ್ಲಾ ಭಯವೇ ಇರುತ್ತದೆ ಎಂದು ಹೇಳಲಾಗುವುದಿಲ್ಲ.

ಅಥವಾ, ವರ್ತನೆಯಿಂದಲೇ ಭಾವಸ್ವರೂಪವನ್ನೂ ಕಂಡುಹಿಡಿಯುವುದ ಕ್ಕಾಗುವುದಿಲ್ಲ. ಓಡುತ್ತಿರುವ ಮನುಷ್ಯನನ್ನು, ಓಡುತ್ತಿರುವಾಗ ಮಾತ್ರ ನಾವು ನೋಡಿದರೆ — ಅವನ ಭಾವದ ಅನುಭವದ ಅರಿವು ನಮಗಾಗುವುದಿಲ್ಲ. ಕರ್ತೃವನ್ನು ಕೇಳಿದಾಗ ಸಹ ಭಾವಸ್ವರೂಪದ ನಿರ್ಣಯಕ್ಕೆ ಸಾಧ್ಯವಾಗುವಷ್ಟು ಅವನ ಮನೋ ವೃತ್ತಿಯು ನಮಗೆ ತಿಳಿಯುವುದಿಲ್ಲ. ಭಾವದ ಉಲ್ಬಣತೆಯನ್ನು ಅಳೆವ ಯಂತ್ರಗಳಲ್ಲಿ ಸ್ವರೂಪನಿರ್ದಿಷ್ಟತೆಗೆ ಸಾಧ್ಯವಿಲ್ಲ. ಹೀಗೆ, ಭಾವಸ್ವರೂಪವನ್ನು ಗೊತ್ತು ಹಚ್ಚುವುದು ಸಾಧ್ಯವಾಗುವುದಿಲ್ಲ.

ಶಿಶುಜೀವನವನ್ನೂ ಮೃಗಜೀವನವನ್ನೂ ಪರಿಶೀಲಿಸಿದರೆ ಆಗಲೂ ಭಾವ ಸ್ವರೂಪದ ಭಿನ್ನತೆಗೆ ತಕ್ಕಷ್ಟು ನಿದರ್ಶನಗಳು ಸಿಕ್ಕುವುದಿಲ್ಲ. ತೀರ ಚಿಕ್ಕ ಶಿಶುಗಳ ವರ್ತನೆಯನ್ನು ನೋಡಿದರೆ ಅವುಗಳಲ್ಲಿ ಕಂಡುಬರುವ ಭಿನ್ನತೆಯಿಲ್ಲದ ವರ್ತನೆಯಿಂದ ಭಾವಭಿನ್ನತೆಯ ಅರಿವು ಆಗುವುದಿಲ್ಲ. ವಾಡಿಕೆಯಾಗಿ, ವರ್ತನೆಯ ಭಿನ್ನತೆಯನ್ನು ನಾವು ಮುಂದಿಟ್ಟುಕೊಂಡೇ ಭಾವದಲ್ಲಿ ಭಿನ್ನತೆಯನ್ನು ನಿರ್ದಿಷ್ಟಮಾಡಲು ಪ್ರಯತ್ನಿ ಸಿರುವುದು. ಒಬ್ಬ ಮನುಷ್ಯನು ಹೋರಾಡಿದ್ದರಿಂದ ಭಾವವು ಕೋಪವಾಗಿರ ಬೇಕೆಂದೂ, ಓಡಿಹೋದುದರಿಂದ ಭಯವೆಂದೂ ಹೇಳುತ್ತೇವೆ. ಆತನನ್ನು ಕೇಳಿದರೆ ಆಗ ಅವನು ಆ ಸಮಯದಲ್ಲಿ ಹೋರಾಡಬೇಕೆಂದೂ, ಈ ಸಮಯದಲ್ಲಿ ಓಡಿಹೋಗ ಬೇಕೆಂದೂ ಮನಸ್ಸಾಯಿತು ಎನ್ನುತ್ತಾನೆ. ಅವನಿಗೆ ಹಾಗೆ ಮನಸ್ಸಾಗಲು ಕಾರಣ ವೇನಿರಬಹುದು? ಒಂದು ಸಮಯದಲ್ಲಿ ಅವನ ಸುಗಮ ಜೀವನಕ್ರಿಯೆಗೆ ಅಡಚಣೆ ಯುಂಟಾಗಿರಬೇಕು. ಇನ್ನೊಂದು ಸಮಯದಲ್ಲಿ ಪ್ರಾಣಾಪಾಯದ ಸಲಕರಣೆ ಯಿರಬೇಕು. ಸ್ವಭಾವತಃ ನೋಡಿದಲ್ಲಿ ಉದ್ವೇಗದಲ್ಲಿ ವ್ಯತ್ಯಾಸವೇನೂ ಇರಲಾರದು.

# ಭಾವವು ರಸವಾಗುವ ಬಗೆ




I. ಎಲ್ಲಕ್ಕೂ ಮೂಲವಾಗಿ ವೇದನಾತ್ಮಕವಾದ ಪ್ರಚಂಡ ಶಕ್ತಿ ಇಲ್ಲಿದೆ.

II. ಹುಟ್ಟುಗುಣಗಳು: ಪ್ರಚೋದನೆಗಳಿಗೆ ಅನುಸಾರವಾಗಿ ವರ್ತನೆಗೆ ತಳಹದಿ ಇವು. ಇವುಗಳಲ್ಲಿ ಪ್ರಚಂಡ ಶಕ್ತಿ ಪ್ರವಹಿಸುತ್ತದೆ.

III. ವರ್ತನಾನುಗುಣಭಾವ: ಇಲ್ಲಿ ಪ್ರಚಂಡ ಶಕ್ತಿಯು ಭಾವವಾಗಿದೆ.

IV. ಕಲೆಯಲ್ಲಿ, ಹುಟ್ಟುಗುಣಗಳ ಸಂಬಂಧವನ್ನು ತ್ಯಜಿಸಿದ ಭಾವಗಳು ರಸವಾಗಿರುವುದು—ವರ್ತನಾ ರೂಪರಹಿತ ಭಾವ ಅಥವಾ ರಸ.

V. ರಸವೆಲ್ಲ ಪುನಃ ಒಂದಾಗಿ ರೂಪರಹಿತವಾದ ವೇದನೆ ಮಾತ್ರ.

ಮಾದರಿಗಾಗಿ ಏಳೇ ಹುಟ್ಟುಗುಣಗಳನ್ನು ತೋರಿಸಿದೆ.

ಉದ್ವೇಗವು ವೇದನೆಯೊಡಗೂಡಿ ಕೆಲವು ಅಂಗಾಂಗಗಳಲ್ಲಿ ಪ್ರವಹಿಸಿ, ಪ್ರಾಣಿಯು ಸನ್ನಿವೇಶಕ್ಕೆ ಸರಿಯಾದ ರೀತಿಯಲ್ಲಿ ಹೊಂದಿಕೊಂಡು ಹೋಗಲು ಸಹಾಯಕವಾದಾಗ ಅದಕ್ಕೆ ಕೋಪವೆನ್ನುತ್ತೇವೆ. ಅದೇ ಉದ್ವೇಗವು ಬೇರೆ ಅಂಗಾಂಗಗಳಲ್ಲಿ ಪ್ರವಹಿಸಿ — ಆ ಸನ್ನಿವೇಶಕ್ಕೆ ಯೋಗ್ಯರೀತಿಯಲ್ಲಿ ಹೊಂದಿಕೊಂಡು ಹೋಗುವಂತೆ ಸಹಾಯಕವಾದರೆ ಆಗ ನಾವು ಅದನ್ನು ಭಯವೆನ್ನುತ್ತೇವೆ. ಮೂಲತಃ ಈ ಬೇರೆ ಬೇರೆ ಭಾವಗಳಿಗೆ ಭಿನ್ನತೆಯಿಲ್ಲ. ನೀರನ್ನು ಬೇರೆ ಬೇರೆ ಪಾತ್ರೆಗಳಲ್ಲಿಟ್ಟರೆ ಅದಕ್ಕೆ ಬೇರೆ ಬೇರೆ ಆಕಾರಗಳು ಕಾಣಬಹುದು. ಆದರೆ ನೀರು ಒಂದೇ.

ಅಂದರೆ, ಭಾವವು ಹುಟ್ಟುಗುಣಗಳ ಕ್ಷೇತ್ರಕ್ಕೆ ಕಟ್ಟುಬಿದ್ದಾಗ — ಹುಟ್ಟುಗುಣಾನುಸಾರ ಭಿನ್ನತೆಯನ್ನು ಹೊಂದುತ್ತದೆಯೇ ವಿನಾ ಸ್ವಭಾವತಃ ಭಾವಭಾವಕ್ಕೆ ಭಿನ್ನತೆಯಿಲ್ಲ. ಆಕಾರದಲ್ಲಿ, ಪರ್ಯವಸಾನದಲ್ಲಿ, ಲೌಕಿಕ ಜೀವನ ಮೌಲ್ಯದಲ್ಲಿ ಭಿನ್ನತೆ ಇರಬಹುದು. ಅದಕ್ಕೆ ಕಾರಣ ಆ ಭಾವವು ಕಟ್ಟುಬಿದ್ದ ಹುಟ್ಟುಗುಣ. ಯಾವುದಾದರೊಂದು ಮಾರ್ಗದಿಂದ, ಉಪಾಯದಿಂದ ನಾವು ಹುಟ್ಟುಗುಣಕ್ಕೂ ಭಾವಕ್ಕೂ ಇರುವ ಸಂಬಂಧವನ್ನು ಕಿತ್ತೆಸೆಂದರೆ, ಭಾವದ ಈ ಲೌಕಿಕ ಮೌಲ್ಯವು ಅಳಿಸಿ ಹೋಗುವಂತೆ ಮಾಡಿದೆವೆಂದರೆ, ಆಗ ಭಿನ್ನತೆಯೂ ಹೋಗುತ್ತದೆ. ಆಗ ಭಾವದ ನಿಜಸ್ವರೂಪದ ಅರಿವು ಆಗಬೇಕು. ಹಾಗೆ ಮಾಡಲು ಸಾಧ್ಯ; ಆ ಉಪಾಯವನ್ನು ಮಾನವನು ಬಹಳ ಹಿಂದಿನ ಕಾಲದಿಂದಲೂ ಕಂಡುಹಿಡಿದಿರುವಂತೆ ತೋರುತ್ತದೆ.

ಇಲ್ಲಿ ಕೊಟ್ಟಿರುವ ಚಿತ್ರವನ್ನು ಪರಿಶೀಲಿಸೋಣ. ಪ್ರಾಣಿವರ್ಗದ ಮನಸ್ಸಿನಲ್ಲಿ ನಿಗೂಢವಾಗಿ ಹುದುಗಿಹೋಗಿರುವ ಒಂದು ಕ್ರಿಯಾಶಕ್ತಿಯಿದೆ. ತದನುಗುಣವಾಗಿ ಪ್ರಾಣಿಯು ಅವಕಾಶವೊದಗಿದಾಗಲೆಲ್ಲ ಈ ಕ್ರಿಯಾಶಕ್ತಿಯನ್ನು ಹೊರಗೆಡಹುತ್ತದೆ. ಇದೇ ಪ್ರಚಂಡಶಕ್ತಿ. ಇದು ರೂಪರಹಿತವಾದುದು. ಆದರೆ ಯಾವುದಾದರೊಂದು ಪಾತ್ರವನ್ನು ಹೊಕ್ಕು ತದನುಗುಣವಾದ ರೂಪನ್ನು ತಾಳಬಹುದು. ಹಾಗೆ ಈ ಶಕ್ತಿಯು ಯಾವುದಾದರೊಂದು ಹುಟ್ಟುಗುಣದ ಸಾರ್ಥಕ್ಯಕ್ಕೋಸ್ಕರ ಆ ಹುಟ್ಟುಗುಣಾನುಸಾರವಾದ ವರ್ತನೆಯನ್ನು ಹೊಕ್ಕು — ಆ ವರ್ತನೆಗೆ ಶಕ್ತಿ ಕೊಟ್ಟು ಅದು ಫಲಕಾರಿಯಾಗುವಂತೆ ಮಾಡಬಹುದು. ಉದಾಹರಣೆಗಾಗಿ ಈ ಶಕ್ತಿಯು ನಮ್ಮ ಚಿತ್ರದಲ್ಲಿ ಮೊದಲನೆಯದಾಗಿರುವ ಅಡಚಣೆಯನ್ನು ನಿವಾರಣೆಮಾಡಬೇಕೆನ್ನುವ ಹುಟ್ಟುಗುಣದೊಳಗೆ ಪ್ರವಹಿಸಿ ಮನುಷ್ಯನು ಹೋರಾಡುವುದಕ್ಕೆ ಸಹಾಯಕವಾಗಬಹುದು. ಈ ವರ್ತನೆಗೆ ಸಹಾಯಕವಾಗಿ ಬಂದ ಈ ಶಕ್ತಿಯನ್ನು ನಾವು ಕೋಪವೆಂದು ಕರೆಯುತ್ತೇವೆ. ಅಂದರೆ ರೂಪರಹಿತವಾದ ಈ ಶಕ್ತಿಯು ಈ ವರ್ತನೆಗೆ ಸಹಾಯಕವಾಗಿ ರೂಪನ್ನು ಹೊಂದಿತು. ಅದೇ ಭಾವ. ಭಾವದ ನೈಜಾವಸ್ಥೆಯಲ್ಲಿ

ರೂಪಭೇದವಿಲ್ಲ. ಆದರೆ ಅದು ಹುಟ್ಟುಗುಣಾನುಸಾರವಾಗಿ ಬಂದ ವರ್ತನೆಯಲ್ಲಿ ಪ್ರವಹಿಸುವುದರಿಂದ — ಒಂದು ಲೌಕಿಕ ಅಥವಾ ಜೀವನಸಂಬಂಧವಾದ ಮೌಲ್ಯವನ್ನು ಪಡೆಯುವುದರಿಂದ — ಭಾವವಾಗುತ್ತದೆ. ಹೀಗೆಯೇ, ಅನುಕೂಲವರಿತು ಅದು ಭಯವಾಗಬಹುದು, ಜುಗುಪ್ಸೆಯಾಗಬಹುದು, ಕ್ಷುಧೆಯಾಗಬಹುದು.

ಹೀಗೆ ರೂಪರಹಿತವಾಗಿ, ಸ್ವತಂತ್ರವಾಗಿದ್ದ ಶಕ್ತಿಯು — ಹುಟ್ಟುಗುಣಾನುಸಾರವಾದ ವರ್ತನೆಯಲ್ಲಿ — ಜೀವನಪಥವನ್ನು ಪ್ರಾಣಿಯು ಸಾಗಿಸುವ ಸಲುವಾಗಿ ಪ್ರವಹಿಸಿ, ತಾತ್ಕಾಲಿಕವಾದ, ತನ್ನದಲ್ಲದ ಒಂದು ರೂಪನ್ನೂ, ರೂಪಕ್ಕೆ ತಕ್ಕ ನಾಮವನ್ನೂ ಹೊಂದಿತು. ಇದು ಭಾವದ ಭಿನ್ನತೆಯ ಹುಟ್ಟಿನ ಗುಟ್ಟು.

ಈಗ ಇನ್ನೊಂದು ಹೆಜ್ಜೆ ಮುಂದೆ ಹೋಗೋಣ. ಮಾನವನಿಗೆ ಪ್ರಾಣಿಗಳಲ್ಲಿಲ್ಲದ ಒಂದು ಅತಿಶಯ ಗುಣವಿದೆ. ಪ್ರಾಣಿಸಾಮಾನ್ಯಕ್ಕಾದರೋ ಸನ್ನಿವೇಶದಲ್ಲಿ ಪ್ರಚೋದನವಸ್ತುವು ಸಾಕ್ಷಾತ್ತಾಗಿ ಇರಬೇಕು. ಅದನ್ನು ಕಂಡಮೇಲೆ ಪ್ರಾಣಿಯು, ಹುಟ್ಟುಗುಣಾನುಸಾರ ಉತ್ಪನ್ನವಾಗುವ ಮನೋಬೋಧೆಗೆ ಅನುಸಾರವಾಗಿ ವರ್ತಿಸಲು ಪ್ರಾರಂಭಿಸುವುದು—ಅಲ್ಲದೆ ಆ ಹುಟ್ಟುಗುಣಾನುಸಾರವಾದ ಭಾವವನ್ನೂ ಅನುಭವಿಸುವುದು. ಆದರೆ ಮನುಷ್ಯನಿಗೆ ಹಾಗಲ್ಲ; ಸನ್ನಿವೇಶದಲ್ಲಿ ಪ್ರಚೋದನವಸ್ತುವು ಸಾಕ್ಷಾತ್ತಾಗಿ ಇರಬೇಕಾಗಿಲ್ಲ, — ಇಂದ್ರಿಯ ಮುಖೇನ ಅದನ್ನು ಮನಗಾಣಬೇಕಾಗಿಲ್ಲ. ಮಾನಸಿಕವಾಗಿ ಅದರ ಅರಿವಾದರೂ — ಅದರ ನೆನಪಾದರೂ — ಆಗ ನಾವು ಅದರ ಅರ್ಥಕ್ಕೆ ಅನುಸಾರವಾದ ಮನೋಬೋಧೆಗೆ ಒಳಗಾಗಿ ಹುಟ್ಟುಗುಣಾನುಸಾರ ವರ್ತಿಸಲೂ, ಭಾವವನ್ನು ಅನುಭವಿಸಲೂ ಪ್ರಾರಂಭಿಸುತ್ತೇವೆ. ಉಪ್ಪಿನಕಾಯಿಯ ವರ್ಣನೆಯನ್ನೋ ನೆನಪನ್ನೋ ನಮಗೆ ಯಾರಾದರೂ ಉಂಟುಮಾಡಿದರೆ ಬಾಯಲ್ಲಿ ನೀರೂರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಹಾಗೆಯೇ ಯಾವುದಾದರೊಂದು ವಿಷಯ, ಅನುಭವ, ವಸ್ತುವನ್ನು ನಾವು ಅಂತರಿಂದ್ರಿಯವಾದ ಮನಸ್ಸಿನ ಮುಖಾಂತರವೋ, ಅಥವಾ ಬೇರೊಂದು ರೀತಿಯಲ್ಲಿಯೋ ಕಂಡೆವೆಂದರೆ ಕೂಡಲೆ ತದನುಗುಣವಾದ ಹುಟ್ಟುಗುಣವೂ ಭಾವವೂ ಅನುಭವಕ್ಕೆ ಬರುವುವು.

ಸೊಗಸಾದ ಮಾವಿನ ಹಣ್ಣಿನ ವರ್ಣನೆಯನ್ನು ನಾವು ಓದಿದೆವೆಂದು ಇಟ್ಟುಕೊಳ್ಳೋಣ. ಆಗ ನೇರವಾಗಿ ಮನಸ್ಸಿಗೆ ಬೋಧವಾದ ಆ ಅನುಭವಕ್ಕೆ ಅನುಸಾರವಾಗಿ ನಮ್ಮಲ್ಲಿ ಹುಟ್ಟುಗುಣವೂ ಭಾವವೂ ತಲೆದೋರುವುವು. ಆದರೆ ಪ್ರಚೋದಕ ವಸ್ತುವು ನಿಜವಾದ ಮಾವಿನ ಹಣ್ಣಲ್ಲ, ಅದರ ಪ್ರತಿಬಿಂಬ ಮಾತ್ರ. ವರ್ಣನೆಯ ಮಾವಿನ ಹಣ್ಣು ಅದು — ಪುಸ್ತಕದ ಬದನೆಕಾಯಿಯಂತೆ. ಈ ಬಣ್ಣದ ಮಾತಿನ ಮಾವನ್ನು ಕಂಡು, ನಮ್ಮಲ್ಲಿ ಹುಟ್ಟುಗುಣವು ಉತ್ಪನ್ನವಾದರೂ, ನಿಜವಾದ

ಮಾವಿನ ಹಣ್ಣನ್ನು ಕಂಡಾಗ ಆಗುವಂತೆ ಸ್ಪಷ್ಟವಾದ ಬಲಿಷ್ಠವಾದ ವರ್ತನೆಯು ಇರುವುದಿಲ್ಲ. ಕೋಪೋದ್ರೇಕದಿಂದ ಕೂಡಿದ ಸರ್ಪದ ವರ್ಣನೆಯನ್ನು ಕೇಳಿ ನಾವು ಎದ್ದು ಓಡಿಹೋಗುವುದಿಲ್ಲ. ಹುಟ್ಟುಗುಣಾನುಸಾರವಾಗಿ ವರ್ತನೆಯು ಉತ್ಪನ್ನ ವಾದರೂ ಅದು ಸೂಕ್ಷ್ಮವಾಗಿರುತ್ತದೆ. ಕೇವಲ ಕೆಲವು ಸ್ನಾಯುಗಳ ಸ್ಪಂದನೆ ಯಲ್ಲಿಯೂ, ಗ್ರಂಥಿರಹಿತ ಗ್ರಂಥಿಗಳ ಕೆಲಸದ ವ್ಯತ್ಯಾಸದಲ್ಲಿಯೂ ಪರ್ಯವಸಾನ ವನ್ನು ಹೊಂದುತ್ತದೆ. ವರ್ತನೆಯು ಸೂಕ್ಷ್ಮವಾದ ಛಾಯೆ ಮಾತ್ರವಿರುತ್ತದೆ.

ಆದರೆ, ಈ ವರ್ತನೆಗೆ ಮುಖ್ಯ ಸಹಾಯಕವಾದ ಭಾವವು ಬಿಸಿ ಆರದೆ ಬರುವು ದುಂಟು. ಸಾಕ್ಷಾತ್ತಾಗಿ ಸರ್ಪವನ್ನು ಕಂಡರೆ ಆಗುವಷ್ಟು ಭಯವು ಅದರ ವರ್ಣನೆಯನ್ನು ಕೇಳಿದುದರಿಂದಲೇ ಆಗಬಹುದು. ರೂಪರಹಿತವಾದ ಶಕ್ತಿಯನ್ನು ಎಬ್ಬಿಸಿ, ಅದು ಯಾವುದೋ ಒಂದು ವರ್ತನೆಯ ರೂಪಿನಲ್ಲಿ ಪ್ರವಹಿಸುವಂತೆ ಮಾಡಿ, ಆ ವರ್ತನೆಗೆ ವರ್ತನೆಯಲ್ಲಿ ಸಾರ್ಥಕ್ಯವಿಲ್ಲದಿರುವ ಅವಕಾಶದಲ್ಲಿ — ಭಾವವು ಮಾತ್ರ ಸೂಕ್ಷ್ಮತರನಾಗಿಲ್ಲದೆ ಪ್ರಚಂಡ ಉಲ್ಬಣತೆಯನ್ನು ಹೊಂದಿರಬಹುದು. ಅಂದರೆ ಮಾನವನಿಗೆ ಭಾವೋದ್ರೇಕವಾಗಬೇಕಾದರೆ ಸನ್ನಿವೇಶದಲ್ಲಿ ಸಾಕ್ಷಾತ್ತಾಗಿ ಪ್ರಚೋ ದಕ ವಸ್ತುಗಳೇ ಇರಬೇಕೆಂದಿಲ್ಲ. ಅವುಗಳ ಸಂಕೇತಗಳೂ, ಪ್ರತಿಕೃತಿಗಳೂ ಇದ್ದ ರಾಯಿತು. ಸೂಚನೆಗಳಿದ್ದರೂ ಸಾಕು.

ಇಂತಹ ಸಂಕೇತಗಳೂ ಪ್ರತಿಕೃತಿಗಳೂ ನಮಗೆ ಹೇರಳವಾಗಿ ಭಾಷೆಯಲ್ಲಿಯೂ ಶಿಲ್ಪದಲ್ಲಿಯೂ ಸಿಗುತ್ತವೆ. ಭಾಷೆಯಲ್ಲಿ ಸಾಮಾನ್ಯವಾಗಿ ಸಿಗುವ ಶಬ್ದಗಳಲ್ಲಿ ಅನೇ ಕವು ಅನುಭವಗಳ ಅಥವಾ ವಸ್ತುಗಳ ಸಂಕೇತಗಳು. ಕಲೆಯಲ್ಲಿ ಸಿಗುವ ಕೃತಿಗಳೂ ಹಾಗೆಯೇ ಸಾಧಾರಣವಾಗಿ ವಸ್ತುಗಳ ಅಥವಾ ಅನುಭವಗಳ ಪ್ರತಿಕೃತಿಗಳು. ಇವೆರಡೂ ತಮ್ಮದಾದ ಈ ಕೃತಕ ಸನ್ನಿವೇಶದಲ್ಲಿ, ಭಾವಗಳಿಗೆ ಪ್ರಚೋದಕ ಗಳಾಗುತ್ತವೆ.

ಕಲಾಪ್ರಪಂಚವು ಒಂದು ಮಾದರಿಯ ಕೃತಕ ಪ್ರಪಂಚ. ಇದರ ಅರ್ಥ, ನಿಯಮಗಳು ನಿಜವಾದ ಪ್ರಪಂಚದಲ್ಲಿರುವುವುಗಳಿಗಿಂತ ಭಿನ್ನವಾದುವು. ಒಂದು ದೊಡ್ಡ ವ್ಯತ್ಯಾಸವೇನೆಂದರೆ, ಕಲಾ ಪ್ರಪಂಚದಲ್ಲಿಕಾಣುವ ಪ್ರಚೋದಕಗಳೂ ಒಂದು ಮಾದರಿಯ ಕೃತಕಗಳಾಗಿರುವುದರಿಂದ — ತದನುಗುಣವಾಗಿ ಉತ್ಪನ್ನವಾಗುವ ಹುಟ್ಟುಗುಣವೂ ಕೃತಕ. ಭಾವಕ್ಕೂ ಹಾಗೆಯೆ. ಈ ಭಾವಕ್ಕೆ ಯಾವ ವಿಧವಾದ ಜೀವನಕ್ರಿಯೆಯನ್ನೂ ಸಾಧಿಸಬೇಕೆಂಬ ಗುರಿಯಿಲ್ಲ. ಇದಕ್ಕೆ ಲೌಕಿಕ ಮೌಲ್ಯವಿಲ್ಲ.

ನಮ್ಮ ಚಿತ್ರದಲ್ಲಿ, ರೂಪರಹಿತವಾದ ಪ್ರಚಂಡ ಶಕ್ತಿಯು, ಹುಟ್ಟುಗುಣಾನು ಸಾರವಾಗಿ ಬರುವ ವರ್ತನೆಯಲ್ಲಿ ಪ್ರವಹಿಸಿ ಬೇರೆ ಬೇರೆ ರೂಪವನ್ನೂ ನಾಮವನ್ನೂ

ಹೊಂದುತ್ತದೆಂಬುದನ್ನು ಮೊದಲನೆಯ ಅಂತಸ್ತಿನಲ್ಲಿ ತೋರಿಸಿರುವೆವು. ಕಾವ್ಯದಲ್ಲಿ, ಅಥವಾ ಕಲೆಯಲ್ಲಿ, ಪ್ರಚೋದಕ ವಸ್ತುಗಳನ್ನು ಹೊರಗೆಡಹಿ, ಭಾವೋದ್ರೇಕ ವುಂಟಾಗುವಂತೆ ಮಾಡಿ — ಅದು ಬಿಸಿಯಲ್ಲಿ ಬಲಿಯುವಂತೆ ಮಾಡುವುದರಿಂದ ಭಾವವು ಈ ಮೊದಲನೆಯ ಅಂತಸ್ತಿನಲ್ಲಿ ಮಾತ್ರ ನಿಲ್ಲುತ್ತದೆ. ಆಗ ಇದಕ್ಕೆ ಲೌಕಿಕ ಮೌಲ್ಯ ಸಂಪೂರ್ಣವಾಗಿ ಹೋಗಿರುವುದಿಲ್ಲ. ಇದಕ್ಕೊಂದು ಉದಾಹರಣೆಯನ್ನು ಕೊಡಬಹುದು :— ಸೀತಾಪಹರಣವೆಂಬ ನಾಟಕವನ್ನು ನೋಡುತ್ತ ಕುಳಿತಿದ್ದಾಗ — ಸೀತೆಯನ್ನು ರಾವಣನು ಎಳೆದು ಒಯ್ಯುವ ದೃಶ್ಯವು ಕಂಡಿತು. ಸೀತೆಯ ಆರ್ತಾಲಾಪವೂ — ಆಕೆಯು ಅಬಲೆ, ಸ್ತ್ರೀ ಎಂಬ ಭಾವನೆಯೂ — ರಾವಣನ ದೌರ್ಜನ್ಯ ಪ್ರಕಾಶವೂ — ಎಲ್ಲವೂ ಆಕೆಯ ಮೇಲೆ ಮರುಕವನ್ನೂ ರಾವಣನ ವಿಷಯದಲ್ಲಿ ಕೋಪವನ್ನೂ ಉಂಟುಮಾಡಿತು. ಅಂದರೆ ಆ ಕೃತಕ — ಅಲೌಕಿಕ — ಸನ್ನಿವೇಶದಲ್ಲಿ ಕೋಪಕ್ಕೆ ಯೋಗ್ಯವಾದ ಪ್ರಚೋದಕ ವಸ್ತುವು ತೋರಿತು. ತದನುಗುಣವಾಗಿ ನೋಡುತ್ತಿದ್ದ ವ್ಯಕ್ತಿಯೊಬ್ಬನಲ್ಲಿ ಹುಟ್ಟುಗುಣಾನುಸಾರವಾಗಿ ನಿಗ್ರಹಮಾಡಬೇಕೆಂಬ ವರ್ತನಾಕಾಂಕ್ಷೆಯೂ ತದನುಗುಣವಾದ ಕೋಪವೆಂಬ ಭಾವವೂ ತಲೆದೋರಿದವು. ಆದರೆ ಈ ವರ್ತನಾಕಾಂಕ್ಷೆಯು ಕೃತಕಸನ್ನಿವೇಶದಲ್ಲಿ ಉತ್ಪನ್ನವಾದುದರಿಂದ ಅದಕ್ಕೆ ಲೌಕಿಕ ಬೆಲೆಯಿರಬಾರದು — ಅಂದರೆ ಕೋಪವನ್ನು ವರ್ತನೆಯಲ್ಲಿ ತೋರಿಸುವುದು ಆ ವ್ಯಕ್ತಿಗೆ ಸಾಧ್ಯವಾಗಲಿಲ್ಲ. ಇದರಿಂದಲೂ ಬೇರೆ ಕಾರಣಗಳಿಂದಲೂ ಭಾವದ ಬಿಸಿ ಏರಿತು. ಇದೆಲ್ಲವೂ ನಮ್ಮ ಚಿತ್ರದ ಮೊದಲನೆಯ ಅಂತಸ್ತಿನಲ್ಲಿಯೇ ನಡೆದ ಕೆಲಸಗಳು. ಭಾವದ ಬಿಸಿ ಏರಿ ಭಾವವು ಪ್ರಬಲವಾಗಿ — ಸೂಕ್ಷ್ಮವಾಗಿ ಅದು ಹೊಂದಿದ್ದ ಲೌಕಿಕ ಬೆಲೆಯೇ ಹೆಚ್ಚಾಗಿ — ಅದು ಸಂಪೂರ್ಣ ಬಲಕಾರಿಯಾಗಿ — ಆ ವ್ಯಕ್ತಿಗೆ ತಡೆಯಲಾಗದೆ — ಆತನು ರಂಗಸ್ಥಳಕ್ಕೆ ನುಗ್ಗಿ — ರಾವಣ ಪಾತ್ರಧಾರಿಯನ್ನು ನದೆಬಡಿಯಲು ಪ್ರಾರಂಭಿಸಿದನಂತೆ! ಅಂದರೆ ಪ್ರಚೋದನೆಗೆ ಅನುಸಾರವಾಗಿ ಬಂದ ಮನೋಬೋಧೆಗೆ ಅನುಸಾರವಾಗಿ ವರ್ತಿಸಬೇಕೆಂಬ ಆಕಾಂಕ್ಷೆ ತಲೆದೋರಿ, ಆ ವರ್ತನೆಗೆ ಅನುಗುಣವಾದ ಭಾವವೂ ಬಂದಿತು. ಆದರೆ ಇದು ಕಲಾಪ್ರಪಂಚವಾದುದರಿಂದ, ಈ ಭಾವವು ಲೌಕಿಕ ಬೆಲೆಯನ್ನು ಹೊಂದದೆ ವರ್ತನೆಯಲ್ಲಿ ಪರ್ಯವಸಾಯಿಯಾಗಬಾರದಾಗಿತ್ತು. (ಬಾಹ್ಯ) ವರ್ತನೆಯಲ್ಲಿ ಪರ್ಯವಸಾಯಿಯಾಗುವಷ್ಟು ಉಲ್ಬಣತೆಯನ್ನು ಭಾವವು ಭಾವವಾಗಿ ಹೊಂದಿ ಹೊರಬಿದ್ದುದು ಕಲಾದೃಷ್ಟಿಯಿಂದ ದೋಷ.

ಆದುದರಿಂದ ಕಲಾಪ್ರಪಂಚದಲ್ಲಿ ಭಾವವು ಉದ್ರೇಕವಾಗಿ, ಬಲಿತು ಭಾವವಾಗಿ ಮಾತ್ರ ಇದ್ದರೆ ಅದರಿಂದ ಕಲೆಯು ಸಾರ್ಥಕವಾಗುವುದಿಲ್ಲ. ಏಕೆಂದರೆ ಕಲೆಯಲ್ಲಿ

ನಾವು ಸವಿಯುವುದು ಭಾವದ ಬಿಸಿಯನ್ನಲ್ಲ. ಅದನ್ನು ಸವಿಯುವುದೂ ಅನುಭವಿಸುವುದೂ ಲೌಕಿಕ ಪ್ರಪಂಚದಲ್ಲಿ ಹುಟ್ಟುಗುಣಾನುಸಾರವಾಗಿ ಸನ್ನಿವೇಶಕ್ಕೆ ಯೋಗ್ಯವಾದ ರೀತಿಯಲ್ಲಿ ಹೊಂದಿಕೊಳ್ಳುವಂತೆ ವರ್ತಿಸುತ್ತಿರುವಾಗ.

ಆದರೆ ಭಾವವು ತನ್ನ ಬಿಸಿಯನ್ನು ಬಿಟ್ಟು, ಕಹಿಯನ್ನು ಬಿಟ್ಟು ಸವಿಯಲು ಯೋಗ್ಯವಾಗಬಲ್ಲುದೇ? ಇದು ಸಾಧ್ಯವೂ ಹೌದು, ಕಲಾಪ್ರಪಂಚದಲ್ಲಿ ಅಗತ್ಯವೂ ಹೌದು. ಭಿನ್ನಭಿನ್ನವಾದ ಭಾವಗಳು ತಮ್ಮ ಭಿನ್ನತೆಗೆ ಕಾರಣವಾದ ವರ್ತನಾನುಗುಣ್ಯವಾದ ಹೊಂದಿಕೆಗಳನ್ನು ಬಿಟ್ಟಲ್ಲಿ ಆಗ ಭಿನ್ನತೆಯು ಅಳಿಯುತ್ತದೆ. ಅಷ್ಟೇ ಅಲ್ಲ. ಆ ಭಿನ್ನತೆಯು ಅಳಿದು, ಉದ್ವೇಗಪೂರಿತವಾದ ಉರಿಯೂ ಆರಿ ಭಾವವೆಲ್ಲವೂ ಸವಿಯಲನುಕೂಲವಾಗಿ ಶಾಂತವಾಗಿರುತ್ತದೆ. ಅದಿರಲಿ. ಬೇರೆ ಬೇರೆ ಭಾವಗಳನ್ನು ಬೇರೆ ಬೇರೆ ವರ್ತನೆಗಳಿಗೆ ಕಟ್ಟುಹಾಕಿರುವುದರಿಂದ, ಭಾವಗಳಲ್ಲಿ ಭಿನ್ನತೆ ಕಂಡಿರುವುದೇ ವಿನಾ ಬೇರೆಯಲ್ಲ. ಈ ಕಟ್ಟುಗಳನ್ನು ಸಡಿಲಿಸುವುದರಿಂದ ಭಾವವು ಬರಿಯ ಭಾವವಾಗಿರಲು ಸಾಧ್ಯ. ಹಾಗೆ ಆ ಕಟ್ಟುಗಳನ್ನು ಸಡಿಲಿಸುವ ಮಾರ್ಗ ಕಲೆ. ಕಲಾನಿರ್ಮಾಣಕನು ಸಹೃದಯನಿಗೆ ಈ ಕಟ್ಟುಗಳನ್ನು ಸಡಿಲಿಸುವುದಕ್ಕೆ ಸಹಾಯಕನಾಗಬೇಕು. ಇದಕ್ಕೆ ಕಲಾನಿರ್ಮಾಣದಲ್ಲಿಯೇ ಅನೇಕ ಉಪಾಯುಗಳಿವೆ. ಮುಖ್ಯವಾಗಿ ಪ್ರಚೋದಕ ವಸ್ತುವೆಲ್ಲವೂ ಕೃತಕ ಸನ್ನಿವೇಶದಲ್ಲಿ ತೋರ್ಪಡುತ್ತಿದೆ. ಎರಡನೆಯದಾಗಿ, ಲೌಕಿಕ ಮೌಲ್ಯವನ್ನು ತ್ಯಜಿಸಲು ಸಾಧ್ಯವಾಗುವುದಕ್ಕಾಗಿ, ಕವಿಸಮಯ, ಶ್ಲೇಷೆ, ಧ್ವನಿ ಮುಂತಾದ ಸಲಕರಣೆಗಳಿವೆ. ಶಿಲ್ಪದಲ್ಲಿ ಈ ಕಾರ್ಯಸಾಧನೆಗಾಗಿಯೇ ಅಂಗಪ್ರಮಾಣವನ್ನೂ ವ್ಯತ್ಯಾಸಮಾಡುವುದುಂಟು. ಈ ಎಲ್ಲ ಮಾರ್ಗಗಳಿಂದ ಶ್ರೋತೃ ಅಥವಾ ಪ್ರೇಕ್ಷಕನಿಗೆ ಭಾವಗಳು ಹುಟ್ಟುಗುಣಗಳಲ್ಲಿ ಇಳಿಯಬಿಟ್ಟಿರುವ ಬೇರುಗಳನ್ನು ಸಡಿಲಿಸಲು ಸಾಧ್ಯ.

ಹೀಗೆಮಾಡಿ, ಹುಟ್ಟುಗುಣಾನುವರ್ತಿಯಾದ ಲೌಕಿಕ ಬೆಲೆಯು ಭಾವಕ್ಕೆ ಹೋಗುವಂತೆ ಮಾಡುವುದರಿಂದ ಭಾವವು ತನ್ನ ಸ್ವಭಾವಕ್ಕೆ ವಿರುದ್ಧವಾಗಿ ತಾನು ತಾಳಿದ್ದ ರೂಪನ್ನೂ ಬಿಸಿಯನ್ನೂ ಬಿಟ್ಟು — ತನ್ನ ಸರ್ವಸ್ವವಾದ ರಸವನ್ನೇ ಅನುಭವಿಸಲು ಬೀರುತ್ತದೆ. ಭಾವವು ರಸವಾಗಿ ಪರಿಣಮಿಸಲು ಕಲೆಯು ಒಂದು ಕ್ರಿಯಾಮಾರ್ಗ. ಅದು ಸಾಧ್ಯವಾಗಬೇಕಾದರೆ ಹುಟ್ಟುಗುಣದಲ್ಲಿ ಬಿಟ್ಟಿರುವ ಭಾವದ ಬೇರು ಸಡಿಲವಾಗಿ — ಹುಟ್ಟುಗುಣಕ್ಕೂ ಭಾವಕ್ಕೂ ಸಂಬಂಧವು ಹರಿದುಹೋಗಿ, ಭಾವವು ಭಿನ್ನತೆಯನ್ನು ಅಳಿಯಬೇಕು. ಅದು ಸಾಧ್ಯ. ಏಕೆಂದರೆ ಭಿನ್ನತೆಯು ಭಾವಸ್ವರೂಪಕ್ಕೇ ವಿರುದ್ಧವಾದುದು. ಭಾವವೆಲ್ಲವೂ ಒಂದೆ. ಆದರೆ ರೂಪು ಮಾತ್ರ ಬೇರೆ.

ವರ್ತನಾ ರೂಪರಹಿತವಾದ ಭಾವವೇ ರಸ. ಈ ರಸವು ಭಾವದ ಪರಿವರ್ತನೆ ಅಥವಾ ಸಾಕ್ಷಾತ್ಕಾರ. ಆದರೆ ಬೇರೆ ಬೇರೆ ಭಾವಗಳು ಈ ವಿಧವಾದ ಸಾಕ್ಷಾತ್ಕಾರಕ್ಕೆ ಕಾರಣವಾಗುವುದರಿಂದ ಬೇರೆ ಬೇರೆ ರಸವೆಂದು ಭಾವಿಸಬೇಕೇ ಹೊರತು ರಸರಸಗಳಲ್ಲಿ ಭಿನ್ನತೆ ಸ್ವಭಾವತಃ ಇರಲಾರದು.

ನಮ್ಮ ಚಿತ್ರದ ಎರಡನೆಯ ಅಂತಸ್ತಿನಲ್ಲಿ ಇದನ್ನು ಸೂಚಿಸಿದೆ. ವರ್ತನಾನುಗುಣವಾದ ಭಾವವು ಕೋಪವಾಗಿರಬಹುದು. ಆದರೆ ಅದನ್ನು ಕಲಾಪ್ರಪಂಚದಲ್ಲಿ, ಪರಿವರ್ತಿಸುವಂತೆಮಾಡಿ, ಆ ಕೋಪಕ್ಕೂ ಹುಟ್ಟುಗುಣಾನುಸಾರವಾದ ಲೌಕಿಕ ಬೆಲೆಗೂ ಸಂಬಂಧವಿಲ್ಲದಂತೆ ಮಾಡಿ — ಅದರ ಗರ್ಭದೊಳಗಿರುವ ಬರಿಯ ವೇದನೆಯನ್ನು ಮಾತ್ರ ಅನುಭವಿಸುವಂತೆ ನಾವು ಮಾಡುತ್ತೇವೆ. ಭಾವವು ವೇದನಾತ್ಮಕವಾದುದು. ಆದುದರಿಂದ ಕೋಪವೆಂಬ ಭಾವದಲ್ಲಿರುವ ಬಿಸಿ, ಉದ್ವೇಗ, ವಿಭ್ರಮ ಇವೇ ಮುಂತಾದ (ಹುಟ್ಟುಗುಣದ) ಆಡಂಬರಗಳನ್ನು ತೆಗೆದು, ಅದು ಪರಿಶುದ್ಧ ವೇದನೆಯೇ ಆಗಿ, ಅನುಭವಿಸಲು ಯೋಗ್ಯವಾಗುವಂತೆ ಕಲೆಯು ಮಾಡುತ್ತದೆ. ಆದರೂ ಬೇರೆ ಬೇರೆ ವರ್ತನಾನುಗುಣವಾದ ಭಾವಗಳಿಂದ ಬಟ್ಟಿಯಿಳಿಸಿದವಾದುದರಿಂದ ಈ ಭಾವಗಳಿಗೆ ಅನುಗುಣವಾಗಿ ಕಲಾಪ್ರಪಂಚದಲ್ಲಿ ಬರುವ ಅನುಭವ ವಿಶೇಷಗಳನ್ನು, ಭಿನ್ನಭಿನ್ನ ರಸಗಳೆಂದು ಹೇಳಬಹುದು.

ಇನ್ನೂ ಮುಂದೆ ಯೋಚಿಸಬಹುದು. ವರ್ತನಾರೂಪರಹಿತ ಭಾವಗಳೇ ರಸಗಳಾಗಿರುವುದರಿಂದ ಭಾವದ ಸಂಬಂಧ ಕಿಂಚಿತ್ತಾದರೂ ರಸಗಳಿಗಿರಬಹುದು. ಆದುದರಿಂದಲೇ ರತಿ, ಹಾಸ, ಕೋಪ ಮುಂತಾದ ಭಿನ್ನರಸಗಳಿರುವುದು. ಇದೂ ಒಂದು ಅಂತಸ್ತು ಮಾತ್ರ. ಕಲೆಯ ಪರಮಾವಧಿಯ ಅನುಭವದಲ್ಲಿ ಈ ಭಿನ್ನತೆಯೂ ಹೋಗಬೇಕು — ಹೋಗುತ್ತದೆ. ಆಗ ಭಾವೋತ್ಪನ್ನ ರಸಗಳು ಭಾವದ ನಿಜವಾದ ಅವಸ್ಥೆಯಾದ ಭಿನ್ನತಾರಹಿತವಾದ ರೂಪರಹಿತವಾದ ವೇದನೆಯಲ್ಲಿ ಪರಿಣಾಮಕಾರಿಯಾಗುವುವು. ಆಗ ಅಲ್ಲಿ ಇರುವುದು ಆನಂದ ಮಾತ್ರ.

ಪ್ರಾಣಿಯ ಜೀವನವು ಸುಗಮವಾಗಿ ನಡೆಯುವುದಕ್ಕೋಸ್ಕರ ಸನ್ನಿವೇಶದಲ್ಲಿ ನಡೆಯುವ ಬದಲಾವಣೆಗಳಿಗೆ ಯೋಗ್ಯವಾದ ರೀತಿಯಲ್ಲಿ ಪ್ರಾಣಿಗಳು ಹೊಂದಿಕೊಂಡು ಹೋಗಬೇಕು. ಅದು ಸಾಧ್ಯವಾಗುವುದಕ್ಕೋಸ್ಕರ, ಸನ್ನಿವೇಶದಲ್ಲಿ ಯೋಗ್ಯವಾದ ಪ್ರಚೋದಕ ವಸ್ತುವನ್ನು ಪ್ರಾಣಿಯು ಕಂಡೊಡನೆ ಹುಟ್ಟುಗುಣಾನುಸಾರವಾಗಿ ಪ್ರತಿಕ್ರಿಯೆಯನ್ನು ನಡೆಸಬೇಕೆಂಬ ತೀವ್ರವಾದ ಮನೋಬೋಧೆಯುಂಟಾಗುತ್ತದೆ. ತದನುಗುಣವಾದ ವರ್ತನೆಯು ಯಶಸ್ವಿಯಾಗಿ ನಡೆದು ಪ್ರಾಣಿಯು ಸನ್ನಿವೇಶಕ್ಕೆ ಯೋಗ್ಯವಾಗಿ ಹೊಂದಿಕೊಳ್ಳಲು ಸಹಾಯಕವಾಗಿ —

ಭಾವವೆಂಬ ಶಕ್ತಿಯು ಉದ್ಭವಿಸಿ ವರ್ತನೆಯು ತನ್ನ ಗುರಿಯನ್ನು ಸಾಧಿಸಲು ಶಕ್ಯವಾಗುತ್ತದೆ. ಹೀಗೆ ಸನ್ನಿವೇಶಾನುಗುಣ್ಯವಾಗಿ ಪ್ರಚೋದನೆಯಲ್ಲಿ ಭಿನ್ನತೆಯೂ — ಪ್ರಚೋದಕ ವಸ್ತುವಿಗೆ ಅನುಗುಣವಾಗಿ ಹುಟ್ಟುಗುಣದಲ್ಲಿ ಭಿನ್ನತೆಯೂ — ಹುಟ್ಟುಗುಣಗಳ ಬೆನ್ನು ಹಿಡಿದು ಬಂದುದರಿಂದ ಭಾವಗಳಲ್ಲಿ ಭಿನ್ನತೆಯೂ ಕಂಡುಬರುತ್ತವೆ. ಆದರೆ ಪರೀಕ್ಷಿಸಿ ನೋಡಿದಲ್ಲಿ ಭಾವಗಳ ಸ್ವರೂಪದಲ್ಲಿ ಭಿನ್ನತೆಯಿದೆ ಎಂದು ಹೇಳಲು ಸಾಧ್ಯವಿಲ್ಲ. ಎಲ್ಲ ಭಾವಗಳ ಸ್ವರೂಪವೂ ಒಂದೇ, ಆದರೆ ಪ್ರವಹಿಸುವ ಮಾರ್ಗಗಳು ಭಿನ್ನ.

ಕಲಾಪ್ರಪಂಚದಲ್ಲಿ, ತನ್ನದೇ ಆದ ಒಂದು ಚತುರತೆಯಿಂದ ಕಲೆಯು, ಭಾವಗಳಿಗೂ ಹುಟ್ಟುಗುಣಗಳಿಗೂ ಇರುವ ಕಟ್ಟುಗಳನ್ನು ಸಡಿಲಿಸುತ್ತದೆ. ಹುಟ್ಟುಗುಣಗಳಿಗೂ ಭಾವಗಳಿಗೂ ಇರುವ ಸಂಬಂಧವನ್ನು ಬಿಡಿಸಿ, ಭಾವದ ಸಾಕ್ಷಾತ್ಕಾರಮಾಡಿಸುವ ಉಪಾಯವೇ ಕಲೆ. ಹೀಗೆ ಹುಟ್ಟುಗುಣಗಳ ಸಂಬಂಧವನ್ನು ಬಿಡಿಸಿದಾಗ, ಭಾವವು ಪುನಃ ತನ್ನ ನೈಜಾವಸ್ಥೆಗೆ ಹಿಂತಿರುಗುವಾಗ ಉಂಟಾಗುವ ಭಾವಾನುಭವವೇ ರಸ. ರಸವು ಭಾವದ ನಿಜವಾದ ಸ್ವರೂಪಕ್ಕೇ ಸಂಬಂಧಿಸಿರುವುದರಿಂದ ತೋರಿಕೆಯಲ್ಲಿ ಭಿನ್ನತೆಯಿದ್ದರೂ — ರಸವೆಲ್ಲ ಒಂದೆ. ಒಂದಾಗಿಯೇ ಇದ್ದ ಭಾವ, ಕಾರಣಾಂತರಗಳಿಂದ ಭಿನ್ನವಾಗಿ, ಕಲೆಯ ಸಹಾಯದಿಂದ ಭಿನ್ನತೆಯನ್ನು ನೀಗಿ, ಪುನಃ ನಿಜಾವಸ್ಥೆಯಾದ ಅದ್ವೈತವನ್ನೇ ಹೊಂದುತ್ತದೆ.

ಎನ್. ಎಸ್. ನಾರಾಯಣಶಾಸ್ತ್ರಿ.

# ಸ್ಮೃತಿ

ಕಾಳಿಮೆಯ ಹೀಗೆಯಲಿ
ಮೌನ-ಶಿಶು ಸಲುಗೆಯಲಿ
ಬೆಳ್ಳಿರಸದೊಳಗದ್ದಿ ಬರೆಯುವಂತೆ
ಕಾರಿರುಳು ಕಣ್ದೆರೆದು
ಕರಿಕರಿಯ ತೆರೆ ಹರಿದು
ನೆಲಬಾನನಾವರಿಸಿ ಕರೆಯುವಂತೆ. ೧

ಕಡಲಾಳವನೆ ಬಾಚಿ
ತನ್ನ ಪ್ರಭೆಯನು ಚಾಚಿ
ಭೂಗರ್ಭರತ್ನವದು ಮೆರೆಯುವಂತೆ
ಬೀಜದಲಿ ಗಿಡುಕುಳಿತು
ಸ್ವಪ್ನಗಂಧದಿ ಬಲಿತು
ತನ್ನಾಯುವನೆ ಮತ್ತೆ ಒರೆಯುವಂತೆ. ೨

ಸಿತಸ್ಮೃತಿಯು ಮೂಡುತಿದೆ ;
ಮಿಸುಕುತಿದೆ ; ಆಡುತಿದೆ ;
ಹರಿಯುತಿದೆ; ಹಬ್ಬುತಿದೆ; ಹೃದಯದೊಳಗೆ;
ಹೊರಗಣ್ಣಳೊಳಹೊರಳಿ
ಹೃದಯರಾಜ್ಯಕೆ ತೆರಳಿ
ನೋಡುತಿವೆ; ಅದೊ, ಸ್ಮೃತಿಯ ಬೆಳಗೆ ಬೆಳಗೆ.

ಬೆಳಕು ಕಂಪಿಸುವಂತೆ
ಲೀಲೆ ಝೋಂಪಿಸುವಂತೆ
ತರ ತರಲ ತರಲವಾಗಲೆಯುತಿಹುದು ;
ಸೊಪ್ಪುಳಿಲ್ಲದ ಗೆಜ್ಜೆ-
ಗಳಕಟ್ಟಿ, ಹೂಹೆಜ್ಜೆ-
ಗಳನಿಡುತ ಜೊನ್ನದಲಿ ನಲಿಯುತಿಹುದು. ೪

ಏಸೊ ಕಣ್ ; ಏಸೊ ಮುಖ ;
ಏಸೊ ಕಯ್ ; ಎಂಥ ಸುಖ ;
ಹಾ ! ವಿರಾಡ್ರೂಪಿಯೊಲು ಬೆಳೆಯುತಿಹುದು
ಬಯಲುಬಯಲನೆ ತುಂಬಿ
ಗಾಳಿಗಾಳಿಯ ಚುಂಬಿ-
ಸುತೆಯೊಂದೆಯುಸುರಿನಲಿ ಸೆಳೆಯುತಿಹುದು. ೫

ಇಂದ್ರಧನುವನೆ ಮುಡಿದು,
ನವರಸಗಳನೆ ಕುಡಿದು
ಲೋಕದೆದೆಯೆದೆಗಳಲಿ ಮಿರುಗುತಿಹುದು
ಮೂಲೋಕಗಳ ಮಿಕ್ಕಿ
ಶಶಿತಾರೆಗಳ ಹೆಕ್ಕಿ
ಒಂದೆ ಹೃದಯದಿ ಮತ್ತೆ ಕರಗುತಿಹುದು. ೬

ನಿನ್ನಿಂದೆ ಇತಿಹಾಸ ;
ಗತಿಪ್ರಗತಿ-ಮಧುಮಾಸ,
ನೀ ಭವಿಷ್ಯಕ್ಕೆ ಮಣಿದೀಪಹಾಸ,
ಗತಕಾಲ-ದರ್ಪಣವೆ,
ನಿನಗೆ ಎನ್ನರ್ಪಣವು,
ಕಂಡೆ, ನಿನ್ನೊಳಗೆನ್ನ ಯಾದಿವಾಸ. ೭

ಈಶ್ವರ ಸಣಕಲ್ಲ.

# ಕಾವ್ಯಾವಲೋಕನ

**ಸಾಹಿತ್ಯರತ್ನ**—ಲೇಖಕರು: ಶ್ರೀ ಅ. ನ. ಕೃಷ್ಣರಾಯರು. ಪ್ರಕಾಶಕರು: ಲಲಿತ ಸಾಹಿತ್ಯಮಾಲೆ, ಧಾರವಾಡ. ಪುಟ ೨೮೨. ಬೆಲೆ, ರೂ. ೩-೦-೦.

ಶ್ರೀಯುತ ಕೃಷ್ಣರಾಯರು ಈ ಹೊಸ ಕಾದಂಬರಿಯಲ್ಲಿ 'ಗುರಿಬದ್ಧವಾದ ಜೀವನದಲ್ಲಿ ಬರುವ ಸಮಸ್ಯೆಗಳನ್ನು' ಚರ್ಚಿಸುವುದಾಗಿಯೂ, ವಿಚಾರ ಪ್ರಚೋದನವೇ ತಮ್ಮ ಹೆಗ್ಗುರಿಯಾಗಿದೆಯೆಂದೂ ಮುನ್ನುಡಿಯಲ್ಲಿ ಹೇಳಿದ್ದಾರೆ. ತಮ್ಮ ಕಥಾನಾಯಕನನ್ನು ಒಬ್ಬ ಸಾಹಿತಿಯಾಗಿರಿಸಿಕೊಂಡು, ಅವನು 'ತಾನು ಕಂಡುಂಡ ಬಾಳನ್ನು ಬಣ್ಣಿಸುವುದಾಗಿಯೂ', ಸಮಾಜದ ಪುನರ್ನಿರ್ಮಾಣದ ಬಗ್ಗೆ ಸಾಹಿತಿಯು ಮಾಡಬಹುದಾದ ಕೆಲಸವನ್ನು ಸೂಚಿಸುವುದಾಗಿಯೂ ಆಶ್ವಾಸನೆ ಕೊಟ್ಟಿದ್ದಾರೆ. ಗ್ರಂಥವು ಈ ಉದ್ದೇಶಕ್ಕೆ ಸಮನಾದ ಪುಟಬಾಹುಳ್ಯವುಳ್ಳದ್ದಾಗಿದೆ.

ನಾಯಕನಾದ ಕೇಶವಮೂರ್ತಿ, ಇಲ್ಲವೆ ಮೂರ್ತಿಯ ತಾರುಣ್ಯದಿಂದ ತೊಡಗುವ ಕಥೆಯು, ಯೌವನಕ್ಕೆ ಕಾಲಿರಿಸುವಲ್ಲಿನ ತನಕ ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಮೂರ್ತಿಯು ಸಾಮಾನ್ಯ ವಿದ್ಯಾರ್ಥಿಯಲ್ಲ ಎಂಬುದು ನಾವು ಅವಶ್ಯ ತಿಳಿಯಬೇಕಾದ ಸಂಗತಿ. ಸಣ್ಣದರಲ್ಲಿ — ವಿವಿಧ ಆಟದೊಡವೆಗಳ ರಚನೆಯ ರಹಸ್ಯವನ್ನು ಇಣಿಕಿ ನೋಡಿದವನು, ತೋಳಿಗೆ ರೆಕ್ಕೆ ಕಟ್ಟಿಕೊಂಡು ಹಾರಾಡಿ ಬಿದ್ದವನು — ಎಂದು ಹೇಳುತ್ತಾರೆ. ಇದರಿಂದ ಅವನೊಬ್ಬ ಎಂಜಿನಿಯರನೋ, ಶೋಧಕನೋ ಆಗುವನೆಂಬ ನಮ್ಮ ಊಹೆಯನ್ನು ಅವನು ತನ್ನ ವಿದ್ಯಾರ್ಥಿ ದೆಸೆಯಲ್ಲಿ ಸುಳ್ಳುಮಾಡುತ್ತಾನೆ. ಆಗಲೇ ಅಂದರೆ ಬರಿಯ V ಇಲ್ಲವೆ VI ಫಾರ್ಮಿನಲ್ಲಿರುವಾಗಲೇ ಶೆಲ್ಲಿ, ಇಬ್ಸೆನ್, ಶಾ, ಶೇಕ್ಸ್‌ಪಿಯರರ ಬರಹದಲ್ಲಿ ತೇಲಾಡಿದಂತೆ, ಲಂಡನ್ ಮರ್ಕ್ಯುರಿ, ಎಡೆಲ್ಫಿ, ಸ್ಟುಡಿಯೋ ಪತ್ರಿಕೆಗಳನ್ನು ಓದುತ್ತಿರುವಂತೆ ಚಿತ್ರಿಸಿದ್ದಾರೆ. ಆದರೂ ಎರಡಾವೃತ್ತಿ ಮೆಟ್ರಿಕಿನಲ್ಲಿ ನಾಪಾಸಾಗಿ ಶಾಲೆಗೆ ಶರಣು ಹೊಡೆಯುತ್ತಾನೆ. ಅಲ್ಲಿಂದಲೇ ಕಾದಂಬರಿಯ ಆರಂಭವೆನ್ನಬಹುದು. ಆಗ ಅವನಿಗೆ ೧೭-೧೮ ವರ್ಷ ಪ್ರಾಯವಿರಬಹುದೆಂದು ಊಹಿಸಬಹುದಾಗಿದೆ.

ಅವನ ಮುಂದಿನ ಒಂದು ವರ್ಷಕಾಲ ತನ್ನ ಸಚ್ಛಿನ ಗೆಳೆಯರಾದ ಮೆಥಾ, ಕಾಮೇಶರೊಡನೆ ಶಾಂತಿನಿಕೇತನದಲ್ಲಿ ಕಳೆಯುವುದು. ಕನ್ನಡದ ಅಭಿಮಾನ ಅಲ್ಲಿಯೇ ಅವನಲ್ಲಿ ಅಂಕುರಿಸಿತು. ಅಲ್ಲಿ ಅವನು ತನ್ನ ಅಸಾಮಾನ್ಯ ಪ್ರತಿಭೆಯಿಂದ ಚಿಕಾಗೋ ಪಾರ್ಲಿಮೆಂಟ್ ಆಫ್ ರಿಲಿಜನ್ಸ್ ಅಲ್ಲಿ ವಿವೇಕಾನಂದರು ಶೋಭಿಸಿದಂತೆ

ಶೋಭಿಸಿದ್ದು. ಅಲ್ಲದೆ, ಅವನ ಭಾಷಣ ಕೇಳಿದ ವಂಗೀಯರು ಅವನನ್ನು ಕಲ್ಕತ್ತೆಯ ವಂಗೀಯ ಸಾಹಿತ್ಯಮಂಡಲದ ಅಧಿವೇಶನಕ್ಕೂ ಕರೆಯುತ್ತಾರೆ. ಈ ಕಾಲದಲ್ಲಿ ಅವನ ಪ್ರಾಯ (೧೯ ?) ಕ್ಕೆ ಕಡಮೆಯಿರಬಹುದಾದರೂ ಬರವಣಿಗೆ ಮಾತುಗಾರಿಕೆಗಳು ಜಗದ್ವಿಖ್ಯಾತವೆನಿಸುವ ಸ್ಥಿತಿಯಲ್ಲಿದ್ದ ಹಾಗೆ ಚಿತ್ರಿತವಾಗಿದೆ.

ತಂದೆಯಾದ ವೆಂಕಟರಾಯರ ವಕ್ರಬುದ್ಧಿಯಿಂದ ಅವನಿಗೆ ತಿರುಗಿ ಶಾಂತಿನಿಕೇತನಕ್ಕೆ ಹೋಗುವುದು ಸಾಧ್ಯವಾಗಿಲ್ಲವಾದರೂ — ಊರಲ್ಲಿದ್ದು ಅವನು ಕನ್ನಡದ ವ್ಯಾಸಂಗದಲ್ಲಿ ತೊಡಗುವನು. ಈ ಕಾಲ ಸಾಧಾರಣ ೧೯೨೯ನೆಯ ಇಸವಿಯ ಸುಮಾರಿಗೆ ಎನ್ನಬಹುದು. ತನ್ನ ಗೆಳೆಯ ಗುಂಡುರಾಯನ ತಂದೆಯಲ್ಲಿ ಅಹರ್ನಿಶಿ ಕನ್ನಡದ ಪಾಠಮಾಡಿ, (ದಿನಕ್ಕೆ ೧೬ ತಾಸುಗಳ ಕಾಲ) ಕನ್ನಡ ಸಾಹಿತ್ಯ ಪಾರಂಗತನಾಗುವುದಲ್ಲದೆ, 'ಕನ್ನಡದಲ್ಲಿ ಏನುಂಟು ಏನಿಲ್ಲ!' ಎಂಬ ಉಜ್ವಲ ಅಭಿಮಾನ ತಾಳುವನು. ಅವನ ಅಭಿಮಾನವು ಅವನನ್ನು ೧೯೨೯ರ ಬೆಳಗಾವಿಯ ಸಾಹಿತ್ಯ ಸಮ್ಮೇಳನಕ್ಕೂ ಕೊಂಡೊಯ್ಯುವುದು. ಆಗಲೆಲ್ಲ ಅವನು ಕ್ರಾಂತಿಕಾರಕ ಸಾಹಿತ್ಯ ನಿರ್ಮಿಸುತ್ತಿದ್ದನೆಂದು ತಿಳಿಯಬೇಕಾಗುತ್ತದೆ.

ಸಮ್ಮೇಳನಕ್ಕೆ ಹೋಗಲು ಹಣದ ಅನುಕೂಲತೆಯಾಗುವುದೆಂದೋ, ತಂದೆಯ ಇಷ್ಟಪೂರ್ತಿಗೆಂದೋ ಅವನು ಈ ಕಾಲದಲ್ಲಿ ಅಸಿಸ್ಟೆಂಟ್ ಕಮಿಶನರ್ ನಾರಾಯಣರಾಯರ ಮಗಳಾದ ಗಿರಿಜೆಯೊಡನೆ ಲಗ್ನಕ್ಕೆ ಒಡಂಬಡುತ್ತಾನೆ. ಅವನ ಬಂಧುವೊಬ್ಬಳು "ಯಾವ ಹೆಣ್ಣು ಸಿಕ್ಕಿದರೂ ನೀನು ತಿದ್ದಿಕೊಂಡು ನಿನ್ನ ಜೀವನದ ಆದರ್ಶಕ್ಕೆ ಹೊಂದಿಸಿಕೊಳ್ಳಬಹುದಲ್ಲವೇ" ಎಂದಾಗ ಅಹುದೆಂದೂ ಅದಕ್ಕೆ ವ್ಯವಧಾನ ಬೇಕೆಂದೂ ವಾದಿಸಿ ಹಲ್ಲುಕಚ್ಚಿಕೊಂಡು ಮದುವೆಗೆ ಒಪ್ಪುತ್ತಾನೆ.

ಗಿರಿಜೆ V ಫಾರ್ಮು ಓದಿದ ಹುಡುಗಿ. ನಮ್ಮ ಟಾಕಿಗಳು ಜನ್ಮವೆತ್ತುವ ಮೊದಲೇ ಸಿನೆಮಾ ಗೀತೆ ಹಾಡಲು ಕಲಿತಿದ್ದಾಳೆ. ತನ್ನ ರೂಪು ಯೌವನಗಳಿಂದ ಲಗ್ನಮಂಟಪದಲ್ಲಿ ಮೂರ್ತಿಯ ಮನ ಸೆಳೆಯದೆ ಇರಲಿಲ್ಲ. ಮದುವೆಯ ಉರುಟಣೆಯ ಕಾಲದಲ್ಲಿ ನಾಯಕ ಮೂರ್ತಿಯು 'ಬರ್ಟ್ರಾಂಡ್ ರಸೆಲನ 'ಮೆರಿಜ್ ಎಂಡ್ ಮಾರಲ್ಸ್' ಓದುತ್ತಿದ್ದನಂತೆ. ಈ ಕಾಲದಲ್ಲೇ ಅವನ 'ಶಾಂತಿಖಡ್ಗ'ವೆಂಬ ನಾಟಕ, 'ಬೆಲೆಯೆಷ್ಟು' ಎಂಬ — ಅವನ ಮಾವನವರು 'ಅಶ್ಲೀಲ'ವೆಂದು ಆಕ್ಷೇಪಿಸಿದ-ಹೆಸರಾದ ಕಾದಂಬರಿ ಪ್ರಕಟವಾದುವು.

ಗಂಡಹೆಂಡಿರ ಪ್ರಥಮ ಸಂದರ್ಶನದಲ್ಲಿಯೇ ಈ ತರುಣನು ತನ್ನ ಹೆಂಡತಿಗೆ ದಾಂಪತ್ಯಜೀವನದ ಆದರ್ಶವನ್ನು ಕುರಿತು ಬೋಧಿಸಿದಂತೆಯೂ ತಿಳಿದುಬರುತ್ತದೆ. ಗಿರಿಜೆಗೆ ಗ್ರಂಥಾವಲೋಕನದಲ್ಲಿ ಅಭಿರುಚಿಯಿಲ್ಲದುದರಿಂದಲೋ, ಮೂರ್ತಿ

ಬರ್ಟ್ರ್ಯಾಂಡ್ ರಸೆಲ್ ಓದಿದ್ದರಿಂದಲೊ, ಹೆಂಡತಿಯನ್ನು ತಿದ್ದಲು 'ವ್ಯವಧಾನ' ಸಾಲದುದರಿಂದಲೊ ಆರಂಭದಿಂದಲೂ ಗಿರಿಜೆ ಮೂರ್ತಿಯ ಮನಸ್ಸಿಗೆ ಬರಲಿಲ್ಲೆಂಬುದು ಸ್ಪಷ್ಟವಾಗುತ್ತದೆ.

ಮುಂದೆ ಮೂರ್ತಿಯು ಹೊಸ ಕಾದಂಬರಿ ಯುಗಗಳಲ್ಲಿ ಕಾಲಿಡುತ್ತಾನೆ. 'ಇಜ್ಜೋಡು, ಚೋಮನದುಡಿ' ಮೊದಲಾದ ಬರಹಗಳೂ ಬಂದ ಕಾಲ ಅದು ಎನ್ನುವುದರಿಂದ ಸುಮಾರು ೧೯೩೭ರ ಸುಮಾರಿಗೆ ಇರಬೇಕು. ಅವನ ಹೊಸ ಗ್ರಂಥಗಳು ಏನೆಂದು ಅವುಗಳ ಹೆಸರಿನಿಂದಲೇ ನಾವು ಊಹಿಸಬೇಕು. ಈ ಸಮಯದಲ್ಲಿ ಇದಕ್ಕೂ ಹಿಂದೆಯೂ, ರಸೆಲ್ ಮೇಲಿರುವ ಪ್ರೀತಿಗೆ ಕಡಮೆಯಾಗದ ಪ್ರೀತಿಯು— ಅವನಿಗೆ ಕ್ರಿಸ್ತ, ವಿವೇಕಾನಂದ, ರಾಮಕೃಷ್ಣರಲ್ಲಿದ್ದಂತೆ ಹೇಳುತ್ತಾರೆ. ಈ ಕಾಲದಲ್ಲಿ ಅವನಿಗೆ ಪ್ರಸ್ತವಾದಂತೆಯೂ ಪ್ರಸ್ತದ ಪರ್ಯಂಕದ ಬಳಿಯಲ್ಲಿ ಗಿರಿಜೆ ಮೂರ್ತಿಯರಿಗೆ ಕೆಲವೇ ಕ್ಷಣಗಳ ವಾಗ್ಯುದ್ಧವಾದಂತೆಯೂ ತಿಳಿಯುತ್ತದೆ. ಮೂರ್ತಿ ತನಗೆ 'ಬರವಣಿಗೆಯಲ್ಲಿ ಪ್ರೀತಿ' (ನಿನ್ನಲ್ಲಲ್ಲ—?) ಎಂದಂತೆಯೂ, ಗಿರಿಜೆ ಬರವಣಿಗೆಗೆ ಬೆಂಕಿಹಾಕು— ಎಂದಂತೆಯೂ ಕಾಣುತ್ತದೆ.

ಈ ಪ್ರಸ್ತವು ಇವರ ದಾಂಪತ್ಯ ಜೀವನಕ್ಕೆ ಅಪ್ರಶಸ್ತವಾದಾಗಲೇ ಅವನದೊಂದು '೨೫ನೆಯ ಶತಮಾನ' ಎಂಬ ನಾಟಕವನ್ನು ಆ ಊರಿನ ಹುಡುಗಿಯರ ಶಾಲೆಯವರು ಅಭಿನಯಿಸಿದಾಗ ಗೊತ್ತುಪಡಿಸಿಕೊಂಡಿದ್ದರು. ಅದರ ವ್ಯವಸ್ಥಾಪಿಕೆಯು ಲಲಿತಮ್ಮ ಎಂಬ ಆನರ್ಸ್ ಬಿ.ಎ. ಕಲಿತ ಉಪಾಧ್ಯಾಯಿನಿ. ಅವಳಿವನ ಪರಿಚಯವು ಬಲುಬೇಗನೆ ಗಾಢ, ಆದರ್ಶಪ್ರೇಮದಲ್ಲಿ ಪರಿಣಮಿಸಿತು. ಲಲಿತೆ ಗಿರಿಜೆಯಂತಲ್ಲ— ಹನ್ನೊಂದು ವರ್ಷದಲ್ಲೇ ವಿಧವೆಯಾದಳು. ಮುಂದೆ ಓದಿ, ಉಪಾಧ್ಯಾಯಿನಿಯಾಗಿ, ತಾಯಿಯೊಡನೆ ವಾಸವಾಗಿದ್ದಳು. ಮೂರ್ತಿಗೆ ಪ್ರಿಯರಾಗಿದ್ದ ಬರಹಗಾರರು ಅವಳಿಗೂ ಪ್ರಿಯರಾಗಿದ್ದರು. ಜುಗ್ತಾಯಿ, ಪ್ರಮೋದಕುಮಾರರ ಚಿತ್ರಗಳಿಂದ ತನ್ನ ಮನೆಯನ್ನು ಓರಣವಾಗಿರಿಸಿಕೊಂಡಿದ್ದಳು. ಮೇಲಾಗಿ ಮೂರ್ತಿಯ ಭಾವಚಿತ್ರವನ್ನು ಇರಿಸಿಕೊಂಡು ಧ್ಯಾನಿಸುತ್ತಿದ್ದಳು. ಲಲಿತೆಯು ಮೂರ್ತಿಯ ಶಿಷ್ಯೆಯಾದಳು. ಮೂರ್ತಿಗೆ ಲಲಿತೆಯನ್ನು ಕಂಡರೇನೆ ಸ್ಫೂರ್ತಿ. ಆ ಸ್ಫೂರ್ತಿಯಿಂದ ಲಾಲಬಾಗಿನಲ್ಲಿ ಏಕಾಂತವಾಗಿ ಉದ್ದುದ್ದ ಗ್ರಂಥ ಬರೆದುದೂ ಉಂಟು. ಆಕೆಗೆ ಮೂರ್ತಿಗೆ ಸಮನಾದ, ಇಲ್ಲವೆ ಕಡಮೆಯಿಲ್ಲದಷ್ಟು ವಯಸ್ಸು ಎಂದು ಊಹಿಸಬೇಕಾಗುತ್ತದೆ.

ಸರಿ— ಮೂರ್ತಿಯು ತನ್ನ ಬರವಣಿಗೆಯಿಂದಲೂ, ಲಲಿತೆಯ ದಿವ್ಯಸ್ನೇಹದಿಂದಲೂ, ಅಜ್ಞಾನಿಗಳಾದ ತಂದೆ, ಮಾವ, ಹೆಂಡತಿಯರಿಗೆಲ್ಲ ಅಪ್ರಿಯನಾಗುತ್ತಾನೆ. ಗಿರಿಜೆ ನೇರಾಗಿ ಲಲಿತೆಯಲ್ಲಿಗೆ ಹೋಗಿ ರಂಬಾಟಮಾಡುತ್ತಾಳೆ. ಮೂಢ ಪ್ರಪಂಚವು

ಲಲಿತೆಯನ್ನು 'ಸೂಳೆ'ಯಾಗಿ ತಿಳಿಯುತ್ತದೆ. ಆದರೆ ಆಕೆಯು ದಿವ್ಯ ಆದರ್ಶದಿಂದ ಪ್ರೇರಿತಳಾದವಳು. "ಯಾವನೋ ಅನಾಮಧೇಯನ ಹೆಂಡತಿಯಾಗಿ, ಜಗತ್ತಿಗೆ ಬೇಡದ ಮಕ್ಕಳನ್ನು ಹೊತ್ತುಕೊಂಡು ಆಯಿಸ್ಸು ಸವೆಸುವುದಕ್ಕಿಂತ ಮೂರ್ತಿಯಂತಹ ವಿಭೂತಿಯ ಸೂಳೆಯಾಗಿರುವುದು ಲೇಸು" ಎಂದು ಗಿರಿಜೆಗೆ ಉತ್ತರ ವೀಯುತ್ತಾಳೆ. ಅನಾಮಧೇಯರ ಹೆಂಡತಿಯರು ಈ ವಿಷಯದಲ್ಲಿ ಮಹತ್ವದ ಪಾಠ ಕಲಿಯುವಂತಾಗುತ್ತದೆ!

ಇದೇ ಕಾಲಕ್ಕೆ (ಮೂರ್ತಿಗೆ ೨೫ಕ್ಕು ಕಡಮೆ ವಯಸ್ಸಿರಬಹುದು) ಮೂರ್ತಿಯು ಗುಂಟೂರಿನ ಪುರೋಗಾಮಿ ಪರಿಷತ್ತಿಗೆ ಅಧ್ಯಕ್ಷನಾಗಿಬಿಡುತ್ತಾನೆ! ತನ್ನ ಆಂಧ್ರ ದಿಗ್ವಿಜಯದಲ್ಲಿ ಗಳಿಸಿದ ೩೦೦ ರೂಪಾಯಿಯ ಒಂದು ಅಂಶವನ್ನು ವೆನ್‌ಡೈಕ್ ಸ್ಟುಡಿಯೋ ಅವರಿಗೆ ಕೊಟ್ಟು ಲಲಿತೆಯೊಡನೆ, ಫೋಟೋ ತೆಗೆಯಿಸಿಕೊಳ್ಳುತ್ತಾನೆ.

ಮುಂದಿನ ೯೦ ಪುಟಗಳು ನಮ್ಮ ಕಣ್ಣಿಗೆ ಅವನ ಅಜ್ಞಾತಜೀವನವನ್ನು ಚಿತ್ರಿಸುವುದರಲ್ಲಿ ನಿರೂಪಿತವಾಗಿವೆ. ತಂದೆಯ ಮನೆಯಿಂದ ಹೊರಬಿದ್ದ ಮೂರ್ತಿಯು ವಿರಕ್ತನಂತೆ ಮುಂಬಯಿ ಸೇರುತ್ತಾನೆ. ತನಗಾಗಿ ನೌಕರಿ ಬಿಡಲು ಸಿದ್ಧಳಾಗಿದ್ದ ಲಲಿತೆಗೂ ತಿಳಿಸದೆ ಹೋಗುತ್ತಾನೆ. ಅಲ್ಲಿ ನರೇಂದ್ರಪ್ರಸಾದನೆಂಬ ಗುಪ್ತನಾಮದಿಂದ ವಾಸಿಸುತ್ತಾನೆ. ಸೆಂಚುರಿ ಪತ್ರಿಕೆಯನ್ನು ನಡೆಸುತ್ತಾನೆ. ಕಾಮಗಾರರ ಚಳವಳದಲ್ಲಿ ಸಹಾಯಕನಾಗಿ ಜೈಲನ್ನು ಸೇರುತ್ತಾನೆ. ಅವನೆಲ್ಲ ಶ್ರಮಗಳಿಗೆ ಯೋಗ್ಯ ಫಲವೆಂಬಂತೆ, ಕೇವಲ ಅವನ ಬರವಣಿಗೆಯ ಶೈಲಿಯನ್ನು ಪತ್ತೆಮಾಡಿಯೇ ಲಲಿತೆ ಮುಂಬಯಿಗೆ ಬಂದು ಅವನನ್ನು ಲಗ್ನವಾಗುತ್ತಾಳೆ. ಲಲಿತೆಯು ಎಷ್ಟು ಉದಾರ ಮತಿಯೆಂದರೆ—ತನ್ನ ಸವತಿಗೂ ಮುಂಬಯಿಗೆ ಬರಲು ಆಮಂತ್ರಣವೀಯುತ್ತಾಳೆ. ಗಿರಿಜೆಯು ಈ ಕಾಲದಲ್ಲಿ ತನ್ನ ಬಾಲ ಸಹಚರ ನಾಗಭೂಷಣನಲ್ಲಿ ಆಸಕ್ತನಾಗಿರಬೇಕೆಂಬ ಅನುಮಾನವನ್ನು ಲೇಖಕರು ಹುಟ್ಟಿಸಿದ್ದಾರೆ. ಮೂರ್ತಿಯ ಪ್ರಥಮ ದಾಂಪತ್ಯ ಜೀವನದ ಸಮಸ್ಯೆಯನ್ನು ಬಲು ಉಪಾಯವಾಗಿ ಹೀಗೆ ತೇಲಿಸಿಬಿಟ್ಟಿದ್ದಾರೆ.

ಈ ದೀರ್ಘ ಬರಹವನ್ನು ಶೈಲಿಯ ಓಟದಿಂದ, ಚಿತ್ರಣಕ್ರಮದಿಂದ ಮೊಗಚುವುದು ಸಾಧ್ಯವೇ ವಿನಾ, ಲೇಖಕರು ಪ್ರಸ್ತಾವನೆಯಲ್ಲಿ ಕೊಟ್ಟ ಉದ್ದೇಶ ಸಾಧನೆಯಾದೀತೆಂದು ನೋಡಹೋದರೆ ನಿರಾಶೆಯಾದೀತು. ತೀರ ಕೊನೆಯಲ್ಲಿ ಬರುವ, ಅವನು ಗಿರಣಿ ಕಾಮಗಾರರ ಬಾಳಿನಲ್ಲಿ ಬೆರೆತ ಒಂದೆರಡು ಘಟನೆಗಳನ್ನು ಬಿಟ್ಟರೆ, ಈ ಸಾಹಿತಿಯ "ಯಾವ ಕಂಡುಂಡ ಬಾಳೂ" ಇಲ್ಲಿ ಚಿತ್ರಿತವಾಗಿಲ್ಲ. ಅವನು ಸಾಹಿತಿಯಾಗಿ ಬರೆದ ಗ್ರಂಥಗಳ ಹೆಸರು ನಮ್ಮನ್ನು ಇದಿರಿಸುತ್ತವೆಯಾದರೂ, ಅವೇನೆಂದು ಹೆಸರುಗಳಿಂದಲೇ ತಿಳಿಯಬೇಕಾಗುವುದು. ಯಾವ ಗ್ರಂಥಕ್ಕೆ ಯಾವ ಅನುಭವ

ಹಿನ್ನೆಲೆ, ಸಾಹಿತಿಯ ಮನೋಧರ್ಮ ಅದರಿಂದ ಹೇಗೆ ಪರಿಣಾಮಗೊಂಡಿತು, ಕೊನೆಯ ಪಕ್ಷಕ್ಕೆ 'ಅದೆಂಥ ಬರಹ' ಎಂಬುದಾದರೂ ತಿಳಿಸಿದ್ದರೆ ಆಗುತ್ತಿತ್ತು. ಎಳೆಯ ತರುಣನಾಗಿದ್ದಾಗಲೇ ಅವನು ಅಷ್ಟೆಲ್ಲ ಮಹಾಗ್ರಂಥಗಳನ್ನು ಬರೆದನೆಂದೂ ಹೇಳುತ್ತಾರೆ. ಆದರೆ ಅದಕ್ಕೆ ಬೇಕಾದ ಅನುಭವದ ಹಿನ್ನೆಲೆಯು ನಮಗೆ ರವೆಯಷ್ಟೂ ಕಾಣಿಸದಾಗಿದೆ. "ಬೇರು, ಕಾಂಡ, ಕೊಂಬೆ, ಚಿಗುರೊಂದೂ ಇಲ್ಲದ ಮರ ಕುಡಿಕುಡಿಗೂ ಹೀಚುಬಿಟ್ಟು ಹಣ್ಣಾಯಿತು"—ಎಂಬ ಒಡಪು ನಮ್ಮೆದುರು ಬಂದು ನಿಲ್ಲುತ್ತದೆ.

ಅವನ ಕ್ರಾಂತಿಕಾರ ರೀತಿಯು ನಮಗೆ 'ಗಿರಿಜೆ'ಯನ್ನು ಅವನು ವ್ಯವಧಾನವಿಲ್ಲದೆ ನಡೆಯಿಸಿಕೊಂಡ ಬಗೆಯಲ್ಲಿ, ಲಲಿತೆಯೊಡನೆ ಸೇರಿದ ಬಗೆಯಲ್ಲಿ ತಿಳಿಯಬೇಕಾಗುವುದು. ಈ ರೀತಿಯಲ್ಲಿ ದಾಂಪತ್ಯದ ಹೊರಗೆ ಹೆಣ್ಣು ಗಂಡನ್ನು ಆರಿಸಲು, ಗಂಡು ಹೆಣ್ಣನ್ನು ಅರಸಲು — ಯಾವ ಮನಸ್ಸಿನ ವಿಪ್ಲವ ಬೇಕೋ ಅದು ಚಿತ್ರಿತವಾಗಿಲ್ಲ. ಆದುದರಿಂದ ನಮಗೆ ಕಾಣುವ ಕ್ರಾಂತಿಯ ಮಾತು "ಅನಾಮಧೇಯನ ಹೆಂಡತಿಯಾಗಿ . . . ಸೂಳೆಯಾಗಿರುವುದು 'ಲೇಸೆಂಬ' ಲಲಿತೆಯ ತೀರ್ಮಾನ" ಒಂದೇ. ಈ ತೀರ್ಮಾನದಿಂದ ಸಾಮಾನ್ಯ ಡೈವೋರ್ಸ್‌ದಾರಿಯು ಸಹ ಫಲಿಸುವ ಭರವಸೆ ಇಲ್ಲ.

ಶ್ರೀಯುತರು ಗ್ರಂಥದಲ್ಲಿ ನಮ್ಮ ಬುದ್ಧಿಯನ್ನು ಪ್ರಚೋದಿಸುವ ಬದಲು, ತಮ್ಮ ಪಾತ್ರಗಳನ್ನು ಸಿದ್ಧ ತೀರ್ಮಾನಗಳಿಂದ ನಮ್ಮ ಮೇಲೆ ಹೇರಿಸುತ್ತಾರೆ.

ನಾಯಕಮೂರ್ತಿಯ ಪ್ರಾಯದ ಎಳಮೆ, ಜ್ಞಾನದ ಪ್ರೌಢಿಮೆ, ಇತರ ಕಥಾನಿರೂಪಣೆಗಳು ಕೇವಲ ಗಾಳಿರಾಜ್ಯದ ಅರಮನೆಗಳಂತೆ ಕಂಗೊಳಿಸುವುವು.

ಆದರೂ ಬರಹಗಾರರು, ಗ್ರಂಥದ ಅಲ್ಲಲ್ಲಿ ಕನ್ನಡದೇಶ, ನುಡಿಗಳನ್ನು ಹಿರಿದಾಗಿ ಮಾಡಬೇಕೆಂಬ ಹಂಬಲ ತೋರಿಸಿದ್ದಾರೆ. ನಾಡುನುಡಿಗಳನ್ನು ಕುರಿತಾದ ಅಭಿಮಾನಗಳು ನಮ್ಮಲ್ಲಿ ಉಕ್ಕುವಂತೆ ಮಾಡಿರುತ್ತಾರೆ. ಈ ಗುರಿ "ಸಾಹಿತ್ಯರತ್ನ"ದ ಉದ್ದೇಶವಾದಲ್ಲಿ, ಅದು ಕಾದಂಬರಿಯ ರೂಪಕ್ಕಿಂತ ನಿಬಂಧರೂಪವಾಗಿ ಬಂದಲ್ಲಿ ಹೆಚ್ಚು ಸಫಲವಾದೀತೆಂದು ಹೇಳಬಹುದು.

**ಕೋ. ಶಿ. ಕಾರಂತ.**

***

**ಅಕ್ಕ-ತಂಗಿ** — ಬರೆದವರು: ಶ್ರೀ ನಾರಾಯಣ ಸಂಗಮ; ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ; ಕ್ರೌನ್ ೧. ೧೭೬; ಬೆಲೆ, ೨ ರೂಪಾಯಿ.

ಇದು ಶ್ರೀಮತಿ ನಿರುಪಮಾದೇವಿಯವರ 'ದಿದಿ' ಎಂಬ ಬಂಗಾಲಿ ಕಾದಂಬರಿಯನ್ನು ಆಧಾರವಾಗಿಟ್ಟುಕೊಂಡು ಸಂಗ್ರಹಿಸಿ ಬರೆದ ಒಂದು ಸ್ವತಂತ್ರ ಕಾದಂಬರಿ. ಭಾಷಾಂತರವೇ ಆಗಿದ್ದರೆ ಆರುನೂರು ಪುಟಗಳ ತೋರಹೊತ್ತಿಗೆಯ ಬೃಹದಾಕಾರ

ವಾದ ಕಾದಂಬರಿಯಾಗಬೇಕಾಗಿದ್ದುದು ಇದೀಗ ಲೇಖಕರು ಸ್ವಾತಂತ್ರ್ಯ ವಹಿಸಿ ಬಹಳ ಜಾಣ್ಮೆಯಿಂದ ಸಂಗ್ರಹಿಸಿರುವುದರಿಂದ ಕೇವಲ ನೂರ ಎಪ್ಪತ್ತಾರು ಪುಟ ಗಳಲ್ಲಿಯೇ ಹಾಳತವಾಗಿ ಅಡಕಗೊಂಡ 'ಮೋಹಕ ಕಾದಂಬರಿ'ಯಾಗಿ ಪರಿಣಮಿ ಸಿದೆ. ಮುಖ್ಯ ಘಟನೆಗಳಷ್ಟನ್ನೆ ವಿವರಿಸುತ್ತ, ಮುಖ್ಯ ಪಾತ್ರಗಳ ಸ್ವಭಾವಾವಿಷ್ಕರಣ ಗಳಿಗೆ ಮಾತ್ರ ಗಮನಕೊಡುತ್ತ ಅಪ್ರಾಸಂಗಿಕ ಘಟನೆಗಳನ್ನೂ ಅತಿಮುಖ್ಯರಲ್ಲದ ಪಾತ್ರಗಳನ್ನೂ ಬದಿಗೊತ್ತಿರುವುದರಿಂದ ಲೇಖಕರು ತಮ್ಮ ಕಾದಂಬರಿಯಲ್ಲಿ ಒಮ್ಮುಖತೆಯನ್ನೂ ರಸೈಕ್ಯತೆಯನ್ನೂ ಸಾಧಿಸಿದ್ದಾರೆ. ಇದು ಕಲಾದೃಷ್ಟಿಯಿಂದ ಸಾಧಿಸಬಹುದಾದ ಬಹು ದೊಡ್ಡ ಪ್ರಯೋಜನ.

ಹುಟ್ಟಿನ ಕಾರಣದಿಂದ ಅಕ್ಕ ತಂಗಿಯರು ಆಗಿರದಿದ್ದರೂ ಕೂಡಿ ಬಾಳಬೇಕಾದ ಕಾರಣದಿಂದ ಅಕ್ಕತಂಗಿಯರಾಗಿ, ಹುಟ್ಟಿನಿಂದ ಆಗಿದ್ದರೆ ಕಾಣಬಹುದಾಗಿದ್ದುದ ಕ್ಕಿಂತ ನೂರ್ಮಡಿಯಾದ ಪ್ರೀತ್ಯಾದರಗಳಿಂದ ಅಕ್ಕನು ತಂಗಿಯನ್ನೂ, ಭಕ್ತಿಗೌರವ ಗಳಿಂದ ತಂಗಿಯು ಅಕ್ಕನನ್ನೂ ಕಾಣುತ್ತ ಒಬ್ಬರಿಗೊಬ್ಬರು ಹೊರೆಯಾಗದೆ ನೆರವಾಗಿ ಊರೆಯಾಗಿ ಬಾಳುತ್ತ ಜೀವನದ ಕಹಿಸಿಹಿಗಳನ್ನು ಒಂದೇ ರೀತಿಯಲ್ಲಿ ಸವಿದ ಹೆಣ್ಣು ಮಕ್ಕಳಿಬ್ಬರ ಜೀವನ ಚಿತ್ರ—ಅವರ ಬಾಳಿನ ಒಳತೋಟಿ—ಈ ಕಾದಂಬರಿಯಲ್ಲಿ ಬಹಳ ಮಾರ್ಮಿಕವಾಗಿ ಪ್ರತಿಪಾದಿತವಾಗಿದೆ. ಜೊತೆಗೆ ಈ ಒಬ್ಬರಲ್ಲಿ ಅಕ್ಕನಾದ ಸುಧೆಯನ್ನು ಧರ್ಮಸಾಕ್ಷಿಯಾಗಿ ಮದುವೆಯಾಗಿಯೂ ತನ್ನ ಸಹಧರ್ಮಿಣಿಯನ್ನಾಗಿ ಸ್ವೀಕರಿಸದೆ ಅವಳಿಗಿಂತ ಮೊದಲೆ ತನ್ನ ಮನಸ್ಸನ್ನು ಅಪಹರಿಸಿದ ಸ್ನೇಹಳನ್ನು ಹಲವಾರು ಕಾರಣಗಳಿಂದ ಕೈಹಿಡಿಯಬೇಕಾಗಿ ಬಂದು ಆ ಬಳಿಕ ಸ್ನೇಹಳನ್ನೆ ತನ್ನ ಪ್ರಾಣಸರ್ವಸ್ವವೆಂದು ಹೃತ್ಪೂರ್ವಕವಾದ ಪ್ರೇಮದಿಂದ ಆರಾಧಿಸುತ್ತ ಸುಧೆಯನ್ನು ಪರಕೀಯಳೆಂದು ತಿರಸ್ಕರಿಸಿದ ನಿರನುಭವಶಾಲಿಯಾದ ಅರಸಿಕನಾದ ವಿಚಾರಶೂನ್ಯ ಸುಲೇಶನ ಜೀವನದ ಹೊಯ್ದಾಟದ ಚಿತ್ರವೂ ಇಲ್ಲಿ ಹೃದ್ಯವಾಗಿ ನಿರೂಪಿತ ವಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಸುಧೆಯ ನಿರ್ಮಲವಾದ ಚಾರಿತ್ರವೂ ಪರಿಶುದ್ಧ ವಾದ ತ್ಯಾಗವೂ ಕಾದಂಬರಿಗೆ ಕಳಸವಿಟ್ಟಂತೆ ಶೋಭಾಯಮಾನವಾಗಿ ಚಿತ್ರಿತ ವಾಗಿವೆ. ಕಾದಂಬರಿಯನ್ನು ಓದಿ ಕೆಳಗಿರಿಸಿದ ಮೇಲೆ ಯಾರಿಗಾದರೂ ಸುಧಾ ದೇವಗಣಕ್ಕೆ ಸೇರಿದ ಸಾಧ್ವಿಯೆಂದೂ ಕೇವಲ ಪರಾರ್ಥಕ್ಕಾಗಿ ಸ್ವಾರ್ಥವನ್ನು ತೃಣೀಕರಿಸಿದ ವೀರವಿರಾಗಿಣಿ ಎಂದೂ ಭಾಸವಾಗದಿರದು. ಕಾದಂಬರಿಕಾರರ ಮಾತಿನಲ್ಲಿಯೆ ಹೇಳುವುದಾದರೆ ಆಕೆ "ಜೀವನದ ಪ್ರಥಮ ಯೌವನದ ಆಕುಲ ವಾಸನಾ ಕುಸುಮಗಳನ್ನು ಪರಾರ್ಥಪರತೆಯ ದೀಪ್ತಹೋಮಾನಲದಲ್ಲಿ ಭಸ್ಮ ವಾಗಿಸಿ"ದ ಸಾಹಸೀ ಧರ್ಮಾಂಗನೆಯೇ ಸರಿ.

ಸುರೇಶ-ಸ್ನೇಹಲತೆಯರನ್ನು ಒಂದಲ್ಲ ಹತ್ತು ವಿಧದಲ್ಲಿ ಪೀಡಿಸಿ ಸುಧೆ ತನ್ನ ಸವತಿಮಾತ್ಸರ್ಯದ ಸೇಡನ್ನು ತೀರಿಸಿಕೊಳ್ಳಬಹುದಿತ್ತು. ಆದರೆ ಸುಧೆ ಅಂತಹ ವಿಜಿಗೀಷು ಪ್ರವೃತ್ತಿಯವಳಲ್ಲ, ಪ್ರತೀಕಾರೇಚ್ಛೆಯವಳಲ್ಲ ಎಂದೇ ಅವಳು ಸವತಿಯಾಗಲಿಲ್ಲ. 'ಅಕ್ಕ'ನಾದಳು. ಸ್ನೇಹಳಿಗೆ ಮೊದಲಿನಿಂದ ಕೊನೆಯ ವರೆಗೂ ಸುಧೆ ಹೇಗೆ ಪರಾರ್ಥಪರಳಾಗಿ ಹೆರರ ಸುಖಸಂತೋಷಕ್ಕಾಗಿ ದುಡಿದು ದುಡಿದು ತನ್ನ ಸರ್ವವನ್ನೂ ತ್ಯಾಗಮಾಡುತ್ತ ಬಂದಳೆಂಬುದನ್ನು ನಾವು ಕಾದಂಬರಿಯಲ್ಲಿ ಕಾಣುತ್ತೇವೆ. ಮೊದಲು ಸುರೇಶನು ತನ್ನನ್ನೂ ತನ್ನ ಮಾವನನ್ನೂ (ಸುರೇಶನ ತಂದೆ ಸಂತೋಷಬಾಬು) ಏಕಕಾಲದಲ್ಲಿ ತ್ಯಜಿಸಿಹೋದಾಗ ಸಂತೋಷಬಾಬು ಒಡನೆ ಜಮೀನುದಾರಿಯ ಕಾರ್ಯಭಾರಗಳಲ್ಲಿಯೂ ಸಂಸಾರ ನಿರ್ವಹಣೆಯ ಕರ್ತವ್ಯದಲ್ಲಿಯೂ ಒಮ್ಮನದಿಂದ ದುಡಿದು ತನ್ನ ಮಾವನನ್ನು ಆತನ ಚಿಕ್ಕವಯಸ್ಸಿನಲ್ಲಿ ಅತ್ಯಂತ ವಿಶ್ವಾಸದಿಂದ ನೋಡಿಕೊಂಡವಳು ಸುಧೆ! ತಂದೆ ತೀರಿದ ಮೇಲೆ ಸುರೇಶಸ್ನೇಹರ ಮನೆಯಲ್ಲಿಯೆ ವಾಸಿಸುತ್ತಿದ್ದಾಗ ಕಾರಣಾಂತರಗಳಿಂದ ಮೊದ ಮೊದಲು ಅನಾಸ್ಥೆ ತೋರಿದಳಾದರೂ ರೋಗಗ್ರಸ್ತೆಯಾದ ಸ್ನೇಹಳನ್ನು ಮಮತಾ ವಾತ್ಸಲ್ಯಗಳಿಂದ ನೋಡಿಕೊಂಡವಳು ಸುಧೆ! ಮತ್ತೆ ಎಂದಿನಂತೆ ಮನೆಗೆಲಸಗಳನ್ನೂ ಜಮೀನ್ದಾರಿಯ ಆಗುಹೋಗುಗಳನ್ನೂ ಮುಗಿಸಿಕೊಂಡು ಯಜಮಾನಿಯಾಗಿ ನಿಂತು ಸುರೇಶ ಸ್ನೇಹರ ನಿಶ್ಚಲಪ್ರೇಮ ಅರಳುವುದಕ್ಕೆ ಎಡೆಮಾಡಿಕೊಟ್ಟವಳು ಸುಧೆ. ಮುಂದೆ ಸುರೇಶ-ಸ್ನೇಹರ ಮುದ್ದು ಮಗು ಪ್ರಭಾ ಜ್ವರದಿಂದ ನರಳುತ್ತಾ ಹಾಸಿಗೆ ಹಿಡಿದಾಗ ಆ ಮಗುವಿನ ಆರೈಕೆಯನ್ನು ಸಂಪೂರ್ಣವಾಗಿ ವಹಿಸಿಕೊಂಡು ಮಗುವಿಗೆ ಪ್ರಾಣ ದಾನ ಮಾಡಿದವಳಾದರೂ ಸುಧೆಯೇ. ಮತ್ತೆ ಸುರೇಶ ಸ್ನೇಹಲತೆಯರು ಹವಾ ಬದಲಾವಣೆಗೆಂದು ದೇಶಾಂತರ ಹೋದಾಗ ಕೂಡ ರುಗ್ಣಶಯ್ಯೆಯಲ್ಲಿ ನರಳುತ್ತಿದ್ದ ಸುರೇಶನನ್ನು ಉಳಿಸಿಕೊಳ್ಳಲು ಊರಿನಿಂದ ಸುಧೆಯೇ ಬರಬೇಕಾಯಿತು. ಹೀಗೆ ಸಂತೋಷಬಾಬು, ಸ್ನೇಹ, ಪ್ರಭಾತ (ಮಗು) ಸುರೇಶರೆಲ್ಲರಿಗೂ ಬೇಕಾದವಳಾಗಿ ತನ್ನ ಅದ್ಭುತವೂ ಅಪೂರ್ವವೂ ಆದ ತ್ಯಾಗ — ಸಂಯಮಗಳಿಂದ ಅವರೆಲ್ಲರ ಕಷ್ಟಗಳಿಗೂ ದಿಕ್ಕಾಗಿ ಪೊರೆದ ಅಕ್ಕನಾದಳು! ಇಂತಹಳ ಪ್ರೇಮವನ್ನೂ ದಯೆಯನ್ನೂ ಔದಾರ್ಯವನ್ನೂ ಸಹನೆಯನ್ನೂ ನೋಡಿ ಕೊನೆಗೊಮ್ಮೆ ಸುರೇಶ ಅವಳ ಪ್ರೇಮ ಭಿಕ್ಷೆ ಬೇಡಲು ಬಂದರೆ ಸುಧೆ ಕೊಡುವ ಉತ್ತರವೇನು ಗೊತ್ತೆ? "ಅವಳನ್ನುಳಿದು (ಸ್ನೇಹಳನ್ನುಳಿದು) ಇನ್ನೊಬ್ಬಳ ಪ್ರೇಮಚಿಂತನೆಮಾಡಿದೆಯಾದರೆ ಅದು ಅಮಾರ್ಜನೀಯ ಅಪರಾಧವೆಂದೆನಿಸದೆ ನಿನಗೆ?"

ಒಟ್ಟುಗೂಡಿ ಇರುವಷ್ಟು ಕಾಲ ಸ್ನೇಹಳಿಗಾಗಿ, ಪ್ರಭಾತನಿಗಾಗಿ ಸುರೇಶನ

ಮನೆಯಲ್ಲಿ ಇದ್ದು ಸುರೇಶ ತನ್ನಲ್ಲಿ ಪ್ರೇಮಭಿಕ್ಷೆ ಬೇಡಿದ ದಿನ ಸ್ನೇಹಳಿಗಾಗಿಯೆ ಪ್ರಭಾತಸಿಗಾಗಿಯೆ ಆ ಮನೆಬಿಟ್ಟು ತೌರದಾರಿ ಹಿಡಿದಳೆಂದರೆ ಸುಧೆ ಎಂತಹ ಆದರ್ಶ ರಮಣಿ ಎಂಬುದು ವ್ಯಕ್ತವಾಗುವುದಿಲ್ಲವೆ? ಸುಧಾ ಪಾತ್ರ ಕನ್ನಡ ವಾಙ್ಮಯ ಪ್ರಪಂಚಕ್ಕೆ ವಿನೂತನವಾದ ಸೃಷ್ಟಿ. 'ಅಕ್ಕ-ತಂಗಿ'ಯಲ್ಲಿ ಸುಧಾದೇವಿಯ ರುದ್ರ ಮಮತೆಯನ್ನು ಶ್ರೀ ಸಂಗಮರು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಈ ಕಾದಂಬರಿಗೆ ಮುನ್ನುಡಿ ಬರೆದುಕೊಟ್ಟಿರುವ ಶ್ರೀ ವಿ. ಕೃ. ಗೋಕಾಕರವರ ಮೊದಲ ಮಾತುಗಳನ್ನಿಲ್ಲಿ ಉದ್ಧರಿಸಬಹುದು. "ಗ. ಸಂಗಮನಾರಾಯಣರಾಯರು ಬರೆದ ಈ ಮೋಹಕ ಕಾದಂಬರಿಯನ್ನು ಓದಿದ ಹಾಗೆಲ್ಲ ಅಂತಃಕರಣವು ತಳಮಳಿಸುತ್ತದೆ; ಬುದ್ಧಿಯು ಕುಂಠಿತವಾಗುತ್ತದೆ; ಕೊನೆಯ ಪುಟದಲ್ಲಿಯ ವಿಧಿಶಾಸನವೇನಿದೆಯೆಂಬುದನ್ನು ತಿಳಿಯಲು ಲವಲವಿಕೆಯುಂಟಾಗುತ್ತದೆ. ಹೀಗೆ ನೇರವಾಗಿ ಅಂತಃಕರಣವನ್ನು ಮುಟ್ಟುವ ಕಲೆಯೇ ಯಶಸ್ವಿ ಕಲೆ; ಅದೇ ರಸಸಿದ್ಧಿ."

ಕಲೋಪಾಸಕರಾದ ಗೆಳೆಯ ಸಂಗಮನಾರಾಯಣರ ಸೇವೆ ಇದೇ ರೀತಿಯಲ್ಲಿ ಮುಂದುವರಿಯಲಿ.

ಎಸ್. ವಿ. ಪರಮೇಶ್ವರಭಟ್ಟ.

* * *

**ವಿದ್ಯಾರ್ಥಿ ವಿಚಾರವಿಲಾಸ**—ಪ್ರೊ. ವೆಂಕಣ್ಣಯ್ಯ, ವ್ಯಾಸಂಗಗೋಷ್ಠಿ, ಪುಸ್ತಕ ೧. **ಸಂಪಾದಕರು.—ಜಿ. ಪಿ. ರಾಜರತ್ನಂ. ಬೆಲೆ, ಒಂದು ರೂಪಾಯಿ.**

ಈ ಪುಸ್ತಕವನ್ನೋದಿದ ಮೇಲೆ ಹೇಳುವ ಮಾತಾಗಲಿ ಬರೆಯುವುದಾಗಲಿ ಒಂದೇ: ಎಲ್ಲರೂ ಅಗತ್ಯವಾಗಿ ಓದಬೇಕಾದ ಪುಸ್ತಕ ಇದು, ಓದಿ ಎಂದು. ಕನ್ನಡದ ಅಭಿಮಾನಿಗಳು, ವಿದ್ಯಾರ್ಥಿಗಳು, ಅಧ್ಯಾಪಕರು, ಬರಹಗಾರರು, ಕನ್ನಡ ಸಂಘಗಳ ಕಾರ್ಯದರ್ಶಿಗಳು, ಪಾಲಕರು — ಎಲ್ಲರೂ. ವಿದ್ಯಾರ್ಥಿಗಳ ನಾಲ್ಕಾರು ಬರಹಗಳನ್ನು ಅಚ್ಚುಮಾಡಿರುವ ಪುಸ್ತಕ ಅಷ್ಟು ಅದ್ಭುತವೆ? ಎನ್ನಬಹುದು. 'ಓದಿ, ತಿಳಿಯುತ್ತದೆ' ಎಂಬುದು ಉತ್ತರ. ಸಾಧಿಸಿರುವ ಸಿದ್ಧಿಗಿಂತಲೂ ಸಾಧಿಸಲಾಗಬಲ್ಲದರ ಅರಿವಾಗುತ್ತದೆ. ಯಾವ ಬೆಳಸು ಬೆಳಸಿ ಕಣಜ ತುಂಬಿಕೊಳ್ಳಬಲ್ಲೆವು — ಸರಿಯಾಗಿ ಕೃಷಿಮಾಡಿ ಬೆಳೆದರೆ — ಎಂಬ ದೃಷ್ಟಿಯಿಂದ.

ಪುಸ್ತಕದಲ್ಲಿ ಕೊಟ್ಟಿರುವ ಕಾರ್ಯಕ್ರಮದ ಪಟ್ಟಿಯನ್ನು ನೋಡಿದವರಿಗೆ ತಿಳಿಯುತ್ತದೆ! ದಿನದಿನವೂ ವಾರವಾರವೂ ವಿದ್ಯಾರ್ಥಿಗಳ ಮನಸ್ಸು ತೆರೆಯಲು ಅವರ ವಿಚಾರಶಕ್ತಿಯನ್ನು ರಚನಾಶಕ್ತಿಯನ್ನೂ ಸಾಹಿತ್ಯಕ್ಕೆ ತಿರುಗಿಸಲು ಯಾವ ಶಿಸ್ತಿನಿಂದ ಪ್ರಯತ್ನ ನಡೆದಿದೆ ಎಂಬುದು. ಇಲ್ಲಿನ ಪ್ರಯೋಗ ನಾನಾ ಬಗೆಯದು;

ವಿಚಾರಪ್ರೇರಣೆ; ಎರಡು ವಾದ; ಸಣ್ಣ ಕತೆಗಳ ಸ್ಪರ್ಧೆ — ಭಾವನಾವಿಲಾಸ ಸ್ಪರ್ಧೆ; ಆತ್ಮಪರೀಕ್ಷೆ, ಲಘುಪ್ರಬಂಧರಚನೆ, ಕಾವ್ಯಾವಲೋಕನ — ಈ ಎಲ್ಲಬಗೆಯ ಕೆಲಸ ಈ ಪುಸ್ತಕದಲ್ಲಿದೆ. ಮನಶ್ಶಾಸ್ತ್ರವನ್ನು ವ್ಯಾಸಂಗಮಾಡುವವರಿಗೂ ಇಲ್ಲಿನ ಪ್ರಯೋಗ ವಿಶೇಷ ಬಗೆಯಾದ್ದು ಎನ್ನಿಸೀತು.

ಪುಸ್ತಕದ ೫೮ನೆಯ ಪುಟ ಮುಖ್ಯವಾದ್ದು. ಈ ಅಂಕಿಗಳನ್ನು ನೋಡಿ ವಿದ್ಯಾರ್ಥಿಗಳು ತಲೆ ತಗ್ಗಿಸಬೇಕಾಗಿಲ್ಲ. ಪುನಃ ಇಂಥದಕ್ಕೆ ವಸ್ತುವನ್ನೊದಗಿಸದಂತೆ ನಡೆದುಕೊಂಡರೆ ಸಾಕು. ಎಲ್ಲ ಸಂಘಸಂಸ್ಥೆಗಳಲ್ಲಿಯೂ ಆ ಕೊರತೆ ಕಾಣಿಸೀತು. ಯಾರೂ ನಿರುತ್ಸಾಹಗೊಳ್ಳಬೇಕಿಲ್ಲ. ಮಾಡಿದ ಎಲ್ಲ ಪ್ರತಿಜ್ಞೆಗಳೂ ಆಡಿದ ಎಲ್ಲ ಮಾತುಗಳೂ ನೆರವೇರಿದರೆ ಮನುಷ್ಯನನ್ನು ಹಿಡಿವವರು ಯಾರು?

ಈ ಸಣ್ಣ ಲೇಖನಗಳ ಸಂಗ್ರಹದಲ್ಲಿ ಆರು ಬಗೆಯ ಬರವಣಿಗೆಯನ್ನು— ಬರೆದಿರುವವರು ಹೆ. ರಂ. ನಾಗೇಶರಾಯರು. 'ಗಾಂಧಿಜೀಯೊಡನೆ ಒಂದು ಗಂಟೆ'ಯ ಭಾವವಿಲಾಸವನ್ನಾಗಲಿ, 'ಪರೀಕ್ಷಾ ಜ್ವರ'ದ ವಿದ್ಯಾರ್ಥಿಯನ್ನಾಗಲಿ ಮರೆಯುವುದು ಶಕ್ಯವಿಲ್ಲ. ಇವರು ಇನ್ನೂ ಸೀನಿಯರ್ ಇಂಟರ್ ಮುಟ್ಟಿಲ್ಲ. ಗಾಂಧಿಜೀಯವರೊಡನೆ ಒಂದು ಗಂಟೆ ಹೀಗೆ ವಾದಿಸಬಲ್ಲ ವೀರರಿಗೆ ಪರೀಕ್ಷಾ ಜ್ವರ ಹೇಗೆ ಸೋಕೀತು? ಈ ಪ್ರಬಂಧಗಳಲ್ಲಿರುವ ಹಾಸ್ಯವನ್ನು ನೋಡಿ. ಗುಣವಿಶಿಷ್ಟವಾದ್ದು, ಸರಳವಾದ್ದು. ಉಳಿದವರ ಪೈಕಿ ಬಿ. ಎಸ್. ರಾಮಚಂದ್ರರಾವ್ ಮತ್ತು ಟಿ. ರಾಮರಾವ್ ಇವರಿಬ್ಬರ ಹೆಸರನ್ನು ಹೇಳಬಹುದು. ರಾಮಚಂದ್ರರಾಯರಲ್ಲಿ ವಿಚಾರಶಕ್ತಿ ಇದೆ, ಅನುಭವವಿದೆ. ಅವರ ಬರವಣಿಗೆ ಕೇವಲ ಮಾತಿನ ಸರಪಳಿಯಲ್ಲ; ರಾಮರಾಯರಲ್ಲಿ ಮಕ್ಕಳ ಮನಸ್ಸಿನಲ್ಲಿರುವಂತೆ ಒಂದು ಬಗೆಯ ಯಥಾರ್ಥತೆಯೂ ಅದರ ಲಾವಣ್ಯವೂ ಇವೆ. ಬರವಣಿಗೆ ಒಂದು ಕಲೆ. ನಿರಂತರ ಅಭ್ಯಾಸದಿಂದ ಮೇಲ್ಪಡಬಲ್ಲದು. ಈ ನಮ್ಮ ಕಿರಿಯ ಸ್ನೇಹಿತರು ತಮ್ಮ ಅಭ್ಯಾಸವನ್ನು ಮುಂದುವರಿಸಿ ಉತ್ತಮ ಬರಹಗಾರರಾಗುವರೆಂದು ನಾವು ನಂಬಿದ್ದೇವೆ.

ಪ್ರೊ: ವೆಂಕಣ್ಣಯ್ಯನವರ ಹೆಸರನ್ನು ವ್ಯಾಸಂಗಗೋಷ್ಠಿಗೆ ಇಟ್ಟಿರುವುದೂ ಪುಸ್ತಕವನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ರಜತ ಮಹೋತ್ಸವದ ಹೊತ್ತಿಗೆ ಪ್ರಕಟಿಸಿರುವುದೂ ವಿಶೇಷ ಸಂಗತಿಗಳು.

ವಿದ್ಯಾರ್ಥಿಗಳ ಶಕ್ತಿಯನ್ನು ಕೆರಳಿಸಿ, ಅದನ್ನು ಪ್ರಖರಗೊಳಿಸಿ ಹೀಗೆ ಫಲಕಾರಿಯಾಗಿ ಮಾಡುವ ಶ್ರೀ ರಾಜರತ್ನಂ ಅವರ ಜಾಣ್ಮೆ ಶ್ರದ್ಧೆಗಳೂ ತುಮಕೂರು ಅಂತರ ಕಾಲೇಜಿನ ಗೆಳೆಯರ ನೆರವು ಕಾರ್ಯವೂ ಸ್ತುತ್ಯವಾದುವು.

ಮಂ

# ಸಂಪಾದಕೀಯ

## ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಮಾಧ್ಯಮ

ಮೈಸೂರು ವಿಶ್ವವಿದ್ಯಾನಿಲಯವು ಹುಟ್ಟುವುದಕ್ಕೆ ಮುಂಚೆ ಇದ್ದ ಇಲ್ಲಿನ ಪ್ರೌಢ ವಿದ್ಯಾಶಾಲೆಗಳು ಮದರಾಸ್ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಒಳಪಟ್ಟು ಬೆಳೆದು ಕೊಂಡು ಬಂದಿದ್ದುವು. ಆದರೆ ಈ ಎರಡು ಪ್ರಾಂತಗಳಲ್ಲಿಯೂ ಪ್ರೌಢವಿದ್ಯಾರ್ಥಿಗಳ ಸಂಖ್ಯೆ ಬಹುವಾಗಿ ಹೆಚ್ಚಿತು; ಅಲ್ಲದೆ ೧೯೧೦ರ ಸುಮಾರಿಗೆ ಮದರಾಸ್ ವಿಶ್ವವಿದ್ಯಾನಿಲಯದ ವ್ಯಾಸಂಗ ಕ್ರಮದಲ್ಲಿ ಕೆಲವು ಬದಲಾವಣೆಗಳಾಗಿ ದೇಶಭಾಷೆಗಳ ವ್ಯಾಸಂಗ ಹಿಂದಕ್ಕೆ ಬಿತ್ತು. ಅವು ಐಚ್ಛಿಕ ವಿಷಯಗಳಾಗಿ ಪ್ರಾಶಸ್ತ್ಯವನ್ನು ಪಡೆದಂತೆ ತೋರಿದರೂ ನೂರಕ್ಕೆ ಒಬ್ಬ ವಿದ್ಯಾರ್ಥಿಯೂ ಅವನ್ನು ಆ ರೀತಿಯಲ್ಲಿ ಆರಿಸಿಕೊಳ್ಳುತ್ತಿರಲಿಲ್ಲ. ಸಾಮಾನ್ಯವಾಗಿ ಎಲ್ಲರೂ ಅಂತರ ಪರೀಕ್ಷೆಯಲ್ಲಿ ಒಂದು ಪ್ರಬಂಧವನ್ನು ಬರೆದು ತಮ್ಮ ತಮ್ಮ ಭಾಷೆಯಲ್ಲಿ ಮೋಕ್ಷ ಪಡೆಯುತ್ತಿದ್ದರು.

ಮಾತೃಭಾಷೆಯೂ ಅದರ ಸಾಹಿತ್ಯವೂ ಬೆಳೆಯಬೇಕಾದ ಆವಶ್ಯಕತೆಯನ್ನು ಕಂಡುಕೊಂಡಿದ್ದವರಿಗೆ ಸ್ವಾಭಾವಿಕವಾಗಿ ಇದು ತುಂಬ ಅತೃಪ್ತಿಯನ್ನುಂಟುಮಾಡಿತು. ಅಲ್ಲದೆ, ಆಯಾ ಪ್ರಾಂತಗಳ ಅಗತ್ಯಗಳೂ ಅಪೇಕ್ಷೆಗಳೂ ವ್ಯತ್ಯಾಸವಾಗುತ್ತ, ಮೈಸೂರಿಗೆ ಒಂದು ಸ್ವತಂತ್ರವಾದ ವಿದ್ಯಾಪೀಠ ಅವಶ್ಯವಾಯಿತು. ಅಂದು ಇಲ್ಲಿ ಪ್ರಗತಿಪರ ಪ್ರಧಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರ ಸ್ಫೂರ್ತಿಯಿಂದ, ದೇಶದ ಮಿಕ್ಕ ಶಾಖೆಗಳಲ್ಲಿ ನವಚೈತನ್ಯದಿಂದೊಡಗೂಡಿದ ನವೀನ ಸಂಸ್ಥೆಗಳು ಹುಟ್ಟಿದಂತೆ, ವಿದ್ಯಾಶಾಖೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಜನ್ಮತಾಳಿತು.—ಮೈಸೂರಿನ ಮಕ್ಕಳಿಗಾಗಿ "ನಹಿ ಜ್ಞಾನೇನ ಸದೃಶಂ" ಎಂಬ ತಲೆಮಾತನ್ನು ತಳೆದು, ಮೈಸೂರಿನ ಮಹಾರಾಜರಿಂದ ಆರಂಭವಾಯಿತು; "ಭವಿಷ್ಯ ಸ್ವಪ್ನವಾಗಿದ್ದದ್ದು ಸಚೇತನ ಸೃಷ್ಟಿಯಾಯಿತು."

ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರವರು ವಿಶ್ವವಿದ್ಯಾನಿಲಯವನ್ನು ಆರಂಭಿಸುತ್ತಾ, "ಈ ವಿಶ್ವವಿದ್ಯಾನಿಲಯದ ಯೋಜನೆಯಲ್ಲಿ ಸೇರಿಸಿರುವ ಕನ್ನಡ ಸಾಹಿತ್ಯದ ವ್ಯಾಸಂಗಕ್ಕೆ ವಿಶೇಷ ಪ್ರೋತ್ಸಾಹವನ್ನು ಕೊಡಬೇಕೆಂಬ ವಿಚಾರದಲ್ಲಿ ನನಗೆ ಸ್ವಾಭಾವಿಕವಾಗಿ ತುಂಬ ಆಸಕ್ತಿ ಇದೆ. ಈಗಿನ ಕಾಲದಲ್ಲಿ ನಾಡಿನ ನುಡಿಗಳ ವ್ಯಾಸಂಗವನ್ನು ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಉದಾಸೀನ ಮಾಡುತ್ತಿರುವರೆಂಬುದನ್ನು ನಾವೆಲ್ಲ ಬಲ್ಲೆವು. ನಮ್ಮ ವಿಶ್ವವಿದ್ಯಾಲಯವು ಕನ್ನಡದ,

ಮತ್ತು ಮೈಸೂರಿನಲ್ಲಿ ಬಳಕೆಯಲ್ಲಿರುವ ಇತರ ದಾಕ್ಷಿಣಾತ್ಯ ಭಾಷೆಗಳ, ಪೂರ್ಣವೂ ಸಂತತವೂ ಆದ ವ್ಯಾಸಂಗಕ್ಕೆ ಏರ್ಪಾಟುಮಾಡಿರುವುದು ನನಗೆ ತುಂಬ ಸಂತೋಷ ವನ್ನುಂಟುಮಾಡಿದೆ” ಎಂದು ಅಪ್ಪಣೆಕೊಡಿಸಿದರು. ಆಗ ಮೈಸೂರು, ದೇಶಭಾಷಾ ವ್ಯಾಸಂಗದಲ್ಲಿ ಮದರಾಸಿಗೆ ಮೇಲ್ಗೈಯಾಗಿತ್ತು.

ಕಾಲಕ್ರಮದಲ್ಲಿ ಹೊಸನೀರು ಬಂದು, ಅಭಿಪ್ರಾಯಗಳು ಬದಲಾಗಿ, ಭಾಷೆಗಿಂತ ಭಾವ ದೊಡ್ಡದು, ಸಾಹಿತ್ಯಕ್ಕಿಂತ ಶಾಸ್ತ್ರ ಹೆಚ್ಚಿನದು ಎಂಬ ಹೇಳಿಕೆ ಪ್ರಬಲವಾಗಿ ಮತ್ತೆ ಕನ್ನಡ ಹಿಂದಕ್ಕೆ ಬಿತ್ತು — ಕನ್ನಡನಾಡಿನ ಜೀವಸ್ಥಾನದಲ್ಲಿಯೇ, ಅದು ನಿಸ್ಸತ್ವವಾಗಿ ಉಳಿಯಿತು; ಇಷ್ಟು ಹೊತ್ತಿಗೆ ತನ್ನ ತಪ್ಪನ್ನು ತಿದ್ದಿಕೊಂಡ ಮದ ರಾಸ್ ವಿಶ್ವವಿದ್ಯಾನಿಲಯವೂ, ಹೊಸದಾಗಿ ಹುಟ್ಟಿದ ಆಂಧ್ರ, ಅಣ್ಣಾಮಲೆ ಮುಂತಾದ ವಿಶ್ವವಿದ್ಯಾನಿಲಯಗಳೂ ತಮ್ಮಲ್ಲಿ ನಾಡಿನನುಡಿಗೆ ಕೊಟ್ಟ ಸ್ಥಾನ ಎಷ್ಟೋ ಮೇಲು ಎಂದು ಭಾಷಾಭಿಮಾನಿಗಳು ತಲೆತಗ್ಗಿಸಿ ಕೊರಗುವಂತಾ ಯಿತು.

ದೇಶವು ವಿದ್ಯಾಭ್ಯಾಸದಲ್ಲಿ ಮುಂದುವರಿದು, ಸ್ವಸ್ವರೂಪವನ್ನು ತಿಳಿಯುತ್ತ ಬಂದ ಮೇಲೆ ಮತ್ತೆ ಸ್ಥಿತಿಗತಿಗಳು ಬದಲಾಯಿಸುತ್ತಿವೆ. ನಾಡೆಂದರೆ ನೆಲವಲ್ಲ, ಜನ. ಅವರು ಎಚ್ಚತ್ತು ತಮ್ಮ ಮಂಗಳವನ್ನು ತಾವು ಸಾಧಿಸಿಕೊಳ್ಳಲು ಬೇಕಾದ ಸಲಕರಣೆಗಳನ್ನು ಒಮ್ಮುಖವಾಗಿ ಅಪೇಕ್ಷಿಸುತ್ತ, ಅದಕ್ಕಾಗಿ ತಕ್ಕ ಪ್ರಯತ್ನ ಮಾಡುತ್ತ ಹೋದರೆ ಅವರನ್ನು ತಡೆಯಬಲ್ಲವರಾರು? ತಡೆಯುವುದು ಹೇಗೆ? ಯಾವ ನಾಡಿನ ಜನ ತಿಳಿವಳಿಕೆ ಪಡೆಯಬೇಕಾದರೂ ತನ್ನ ನುಡಿಯಿಂದಲೇ ಸಾಧ್ಯ ಎಂಬ ತತ್ತ್ವವನ್ನು ಈಗ ನಿರಾತಂಕವಾಗಿ, ನಿರ್ವಿವಾದವಾಗಿ, ಎಲ್ಲರೂ ಒಪ್ಪಿದ್ದಾರೆ. ಯುದ್ಧಾನಂತರದಲ್ಲಿ ಪ್ರಾಥಮಿಕ ಮಾಧ್ಯಮಿಕ ವಿದ್ಯಾಭ್ಯಾಸಗಳಾದರೂ ಸಾರ್ವ ತ್ರಿಕವಾಗಿ, ನಿರ್ಬಂಧವಾಗಿ, ನಡೆಯಬೇಕೆಂಬುದನ್ನು ಒಪ್ಪಿದರೆ, ಅದು ಮತ್ತಾವ ಭಾಷೆಯಲ್ಲಿ ನಡೆದೀತು? ಅದಿರಲಿ; ಈಗ ಹೈಸ್ಕೂಲಿನಲ್ಲಿ ದೇಶಭಾಷೆಯೇ ಮಾಧ್ಯಮ ವಾಗಿರಬೇಕೆಂಬ ತತ್ತ್ವವನ್ನು ಎಲ್ಲರೂ ಒಪ್ಪಿದ್ದಾರೆ: ನಾವು ಕನ್ನಡವರಿಯದವರಿಗೆಂದು ಇಂಗ್ಲಿಷ್ ಮಾಧ್ಯಮವನ್ನೂ ಕೆಲವು ಕಡೆ ಬಳಕೆಯಲ್ಲಿಟ್ಟುಕೊಂಡಿದ್ದೇವೆ. ದೇಶ ಭಾಷೆಯ ಮಾಧ್ಯಮದ ತತ್ತ್ವದಲ್ಲಿ ಸತ್ಯವಿದ್ದರೆ, ಅದು ಮೇಲಕ್ಕೂ ಏಕೆ ಹಬ್ಬ ಬಾರದು? ಇದು ದೇಶದ ಹಂಬಲು. ಇದು ಈಗ್ಗೆ ಹದಿನೈದು ವರ್ಷಗಳ ಹಿಂದೇ ಹಲವು ಪ್ರಾಂತಗಳ ಅಭಿಮತವಾಗಿದ್ದು, ಅಂತರ ವಿಶ್ವವಿದ್ಯಾನಿಲಯ ಸಮಿತಿ ಮಾತ್ರ ದೇಶವು ಈ ಸುಧಾರಣೆಗೆ ಇನ್ನೂ ತಕ್ಕಷ್ಟು ಮುಂದುವರಿದಿಲ್ಲವೆಂದು ಅಭಿ ಪ್ರಾಯಪಟ್ಟಿತ್ತು. ಆದರೆ, ಆಗಿನಿಂದ ಈಚೆಗೆ ಮುನ್ನಡೆಯ ಹೊಳೆ ಎಷ್ಟೋ ದೂರ

ಹರಿದಿದೆ. ಇನ್ನೊಂದು ಹೆಜ್ಜೆ ಮುಂದೆ ಹೋಗಿ ಪ್ರೌಢಶಾಲೆಗಳಲ್ಲಿಯೂ ನಾಡ ನುಡಿಯನ್ನು ಮಾಧ್ಯಮವಾಗಿ ಮಾಡಬೇಕೆಂಬ ಆಶೆ ಎಲ್ಲೆಲ್ಲಿಯೂ ಬಲವಾಗಿದೆ; ಅದು ದುಸ್ಸಾಧ್ಯವಾದೀತೇನೋ ಎಂಬ ಶಂಕೆ ಜನಕ್ಕೆ ತಪ್ಪಿದೆ. ಈ ವಿಚಾರವಾಗಿ ಮೈಸೂರಿನ ಪ್ರಜಾಸಭೆಯಲ್ಲಿ ಗುಂಡ್ಲುಪೇಟೆಯ ಶ್ರೀಮಾನ್ ಬಿ. ತಿಮ್ಮಾಜಯ್ಯನವರು ಒಂದು ಸೂಚನೆಯನ್ನು ತಂದು, ತೀವ್ರ ಚರ್ಚೆಯಾಗಿ, ಅದು ಹೇಗೆ ಬಹು ಸಮ್ಮತವಾದ ಒಪ್ಪಿಗೆ ಪಡೆಯಿತೆಂಬುದನ್ನು ಎಲ್ಲರೂ ಬಲ್ಲರು. ಆ ಚರ್ಚೆಯನ್ನು ಆಮೂಲಾಗ್ರವಾಗಿ ಈ ಪತ್ರಿಕೆಯ ೯೨ನೆಯ ಸಂಚಿಕೆಯಲ್ಲಿ ಪ್ರಕಟಿಸಿದೆ. ಅದನ್ನು ಕನ್ನಡಿಗರೆಲ್ಲರೂ ಆದರದಿಂದಲೂ ಅಕ್ಕರೆಯಿಂದಲೂ ಓದಿದ್ದಾರೆಂದು ನಾವು ನಂಬುತ್ತೇವೆ. ಅಂದಿನ ವಿದ್ಯಾಮಂತ್ರಿಗಳು ಆ ನಿರ್ಣಯವನ್ನು ವಿಶ್ವವಿದ್ಯಾನಿಲಯದ ಮುಖ್ಯಾಧಿಕಾರಿಗಳಿಗೆ ಕಳುಹಿಸಿಕೊಟ್ಟರು. ಅದು ಸರ್ಕಾರಕ್ಕೂ ಅಲ್ಲಿಂದ, ಅವರ ಸೂಚನೆಯಂತೆ, ಅಂತರ ವಿಶ್ವವಿದ್ಯಾನಿಲಯಸಮಿತಿಗೂ ಹೋಗಿ ಆ ವಿದ್ವನ್ಮಂಡಲಿಯು ಕಳೆದ ಡಿಸೆಂಬರ್ ತಿಂಗಳಿನಲ್ಲಿ, ಹಿಂದಿದ್ದ ವಿರೋಧವನ್ನು ಬಿಟ್ಟು, ಬಹುತರವಾದ ಸಮ್ಮತಿಯನ್ನು ಕೊಟ್ಟಿತು. ಅದರ ಮಾತುಗಳು ಇವು:—

"ಇಂಗ್ಲಿಷನ್ನೂ, ಆವಶ್ಯಕವಾದರೆ ವಿಜ್ಞಾನಗಳನ್ನೂ ವಿನಾಯಿಸಿ, ಅಂತರ ಮತ್ತು ಪದವೀಪರೀಕ್ಷೆಗಳಿಗೆ, ಸಾಧ್ಯವಾದಷ್ಟು ಮಟ್ಟಿಗೆ ಇಂಗ್ಲಿಷಿನೊಡನೆ, ಆಧುನಿಕ ಭಾರತೀಯ ಭಾಷೆಗಳನ್ನು ಕ್ರಮೇಣ ಶಿಕ್ಷಣ ಮಾಧ್ಯಮವಾಗಿ ಒಪ್ಪಿಕೊಳ್ಳಬಹುದು."

ಈ ಮಾತುಗಳು ಒಳಗೊಂಡಿರುವ ಎಚ್ಚರಿಕೆ ನ್ಯಾಯವಾಗಿದೆ; ಆದರೆ ಹೆದರಿಕೆ ಅನಾವಶ್ಯಕ. ಮಾರ್ಚಿ ತಿಂಗಳು ಮೂರನೆಯ ತಾರೀಖಿನ ದಿನ ಸೇರಿದ್ದ ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯಲ್ಲಿ ಶ್ರೀಮಾನ್ ಜೆ. ಮಲ್ಲಾರಾಧ್ಯರು ೧೯೪೮ರಿಂದ ಮೊದಲಾಗಿ ೧೯೫೩ರ ಹೊತ್ತಿಗೆ ನಮ್ಮ ವಿಶ್ವವಿದ್ಯಾನಿಲಯದ ತರಗತಿಗಳಲ್ಲೆಲ್ಲಾ ಭಾಷೇತರ ವಿಷಯಗಳಿಗೆ ಕನ್ನಡವೇ ಮಾಧ್ಯಮವಾಗಿರಬೇಕೆಂದು ಒಂದು ನಿರ್ಣಯವನ್ನು ತರಲು, ಅದು ಬಹುಮತದಿಂದ ಒಪ್ಪಿಗೆ ಪಡೆಯಿತು. ಅದನ್ನು ವಿರೋಧಿಸಿದ ಮೂವರೂ, ಜೊತೆಗೆ, ಈಗ ಹೈಸ್ಕೂಲಿನಲ್ಲಿರುವಂತೆ ಇಂಗ್ಲಿಷ್ ಮಾಧ್ಯಮವು ಐಚ್ಛಿಕವಾಗಿರಬೇಕೆಂದು ಮಾತ್ರ ಅಭಿಪ್ರಾಯಪಟ್ಟಂತಿತ್ತು. ಕನ್ನಡದ ಮಾಧ್ಯಮಕ್ಕೆ ಇರುವ ಆಕ್ಷೇಪಣೆಗಳು ಹೊಸದಾದವು ಯಾವುವೂ ಇಲ್ಲ; ಅವಕ್ಕೆಲ್ಲಾ ಸಮಾಧಾನಗಳನ್ನು ಹೇಳಿಯಾಗಿದೆ. ಅವನ್ನು ಅರಿಯದವರಿಗೆ ಮತ್ತೆ ಮತ್ತೆ, ಅವು ಹಳದಾಗುವವರೆಗೆ, ಹೇಳಬೇಕಾಗಿದೆ. ಹೊಸವು ಇದ್ದರೆ, ಅವು ಹಳೆಯವಕ್ಕಿಂದ ಬಲವಾದವೇನೂ ಅಲ್ಲ. ಕನ್ನಡವು ಹೈಸ್ಕೂಲಿನಲ್ಲಿ ಮಾಧ್ಯಮವಾಗಬೇಕೆಂದು

ನಿರ್ಧರವಾದ ಒಂದು ವರ್ಷದಲ್ಲಿ ವಿಜ್ಞಾನ ಮೊದಲುಗೊಂಡು ಎಲ್ಲ ವಿಷಯಗಳಲ್ಲಿಯೂ ಗ್ರಂಥಗಳು ಹುಟ್ಟಿದ್ದು ಅನೇಕರಿಗೆ ಅಂಜನ ಹಾಕಿದಂತಾಗಿದೆ. ಈಗಾಗಲೇ ಅಂತರಶಾಲೆಯ ಮಟ್ಟದಲ್ಲಿ, ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಪ್ರಕಾಶನ ಸಮಿತಿಯ ಮೂಲಕ ವೈಜ್ಞಾನಿಕ ಗ್ರಂಥಗಳು ಸಿದ್ಧವಾಗಿವೆ, ಸಿದ್ಧವಾಗುತ್ತಿವೆ. ಕನ್ನಡ ನಾಡು ಮಿಕ್ಕ ಪ್ರಾಂತಗಳಿಗಿಂತ ಎಂದೂ ಯಾವುದರಲ್ಲಿಯೂ ಹಿಂದೆ ಬಿದ್ದಿರಲಿಲ್ಲ. ಈಗ, ವಿದ್ಯೆಯಲ್ಲಿ, ಜ್ಞಾನದಲ್ಲಿ, ಹಿಂದೆ ಬೀಳುತ್ತದೆಯೇ? ನಮ್ಮ ನೆರೆಯ ಉಸ್ಮಾನಿಯಾ ವಿಶ್ವವಿದ್ಯಾನಿಲಯವು ಈಗ್ಗೆ ಇಪ್ಪತ್ತೈದು ವರ್ಷಗಳ ಕೆಳಗೆ ಸಾಧಿಸಿದ್ದನ್ನು ನಾವು ಇಂದು ಸಾಧಿಸಲಾರೆವೇ? ಮೈಸೂರಿನವರು, ಕನ್ನಡಿಗರು, ಇಂಡಿಯದ ಎಲ್ಲ ಪ್ರಾಂತಗಳಿಗೂ ಹೋಗಿ ನಾನಾ ಕ್ಷೇತ್ರಗಳಲ್ಲಿ ದಕ್ಷರೆಂದು ಹೆಸರು ಪಡೆದಿದ್ದಾರೆ. ಹೀಗಿರಲು ನಮ್ಮ ನಾಡಿನ ಸೇವೆಗೆ, ಜನದ ನುಡಿಯ ಸೇವೆಗೆ, ಅವರ ಸಾಮರ್ಥ್ಯ ತಕ್ಕಷ್ಟಿಲ್ಲವೆಂದು ಯಾರೂ ಭಾವಿಸಲಾರರು. ಕನ್ನಡನಾಡು ಎಂದಿಗೂ ಹಿಂದೆ ಬೀಳದು. "ಸಿರಿಗನ್ನಡಂ ಗೆಲ್ಗೆ!"

ಎ. ಆರ್. ಕೃ.

***

೧೬-೧-೧೯ಳಳನೆಯ ಭಾನುವಾರ ಬೆಂಗಳೂರು ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘದ ರಜತೋತ್ಸವ ನಡೆಯಿತು. ಅದು ಹುಟ್ಟಿದಂದಿನಿಂದ ಅದರ ಹಿತೈಷಿಗಳೂ ಜನಜೀವನ ವಿಮರ್ಶಕರೂ, ಕನ್ನಡನಾಡಿನ ಹಿರಿಯರಲ್ಲಿ ಒಬ್ಬರೂ ಆದ ಶ್ರೀ ಡಿ. ವಿ. ಗುಂಡಪ್ಪನವರು ಅಗ್ರಾಸನವನ್ನು ವಹಿಸಿದ್ದರು. ಪ್ರಖ್ಯಾತ ಕವಿಗಳೂ, ಪರಿಷತ್ತಿನ ಉಪಾಧ್ಯಕ್ಷರೂ, ಸಂಘದ ಇನ್ನೊಬ್ಬ ಹಿರಿಯ ಹಿತೈಷಿಗಳೂ ಆದ ರಾಜಸೇವಾಪ್ರಸಕ್ತ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರವರು ಉತ್ಸವದ ಆರಂಭ ಭಾಷಣ ಮಾಡಿದರು. ಮೊದಲದಿನ ಭಾಷಣವಾಚನಗಳ ಜೊತೆಗೆ ಸಂಘದ ಮೊದಲ ಅಧ್ಯಕ್ಷರಾದ ರಾಜಸೇವಾಸಕ್ತ ದಿವಂಗತ ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರ ಭಾವಚಿತ್ರದ ಅನಾವರಣವಾಯಿತು. ಎರಡನೆಯ ದಿನ ಸರ್ ಪುಟ್ಟಣ್ಣಶೆಟ್ಟರ ಪುರಭವನದಲ್ಲಿ ನಾಟಕವೊಂದರ ಪ್ರದರ್ಶನವಾಯಿತು.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ ಕನ್ನಡನಾಡಿನ ಅಂಥ ಎಲ್ಲ ಸಂಘಗಳಿಗೆ ತವರು. ಈ ೨೫ ವರ್ಷಗಳಲ್ಲಿ ಅದು ಗಳಿಸಿರುವ ಸಾಹಿತ್ಯಭಾಗ್ಯ ಅಲ್ಪವಾದ್ದಲ್ಲ. ಕನ್ನಡಕ್ಕೆ ನಮ್ಮ ಕಡೆ ಹೊಸತನವೆಂಬುದೇನಾದರೂ ಇಂದು ಬಂದಿದ್ದು ಶಾಸ್ತ್ರ ದರ್ಶನಾದಿಗಳ ಅನುವಾದಕ್ಕೆ ಕನ್ನಡದ ಮೂಲಕ ಪ್ರಚಾರ ನಡೆಯಲು ಮೊದಲ ಪ್ರೋತ್ಸಾಹನ ದೊರಕಿದ್ದರೆ ಅದು ಬಹುಮಟ್ಟಿಗೆ ಈ ಸಂಘದಿಂದ. ಅದನ್ನು ಸ್ಥಾಪಿಸಿದವರೂ ನಡಸಿಕೊಂಡು ಬಂದವರೂ ಒಂದೇ ಬಗೆಯಾದ ಕುಂದದ ಶ್ರದ್ಧೆ

ಯಿಂದ ಈ ಕೆಲಸದಲ್ಲಿ ತೊಡಗಿದ್ದಾರೆ. ಅವಕಾಶವಿದ್ದಷ್ಟೆಲ್ಲ ಕೆಲಸಮಾಡಲು ಶಕ್ಯವಾಗದಿರಬಹುದಾದರೂ ಮಾಡಿರುವಷ್ಟಕ್ಕೆ ಸಲ್ಲಬೇಕಾದ ಕೀರ್ತಿ ದೊಡ್ಡದು. ಅಸಸ್ಸಾಧಾರಣವಾದುದು. ಅದು ಹುಟ್ಟುಹಾಕಿದ ಗಿಡ 'ಪ್ರಬುದ್ಧ ಕರ್ಣಾಟಕ'. ಇಂದು ಇದಕ್ಕೂ ಬೆಳ್ಳಿಹಬ್ಬ ನಡೆಯಬೇಕಾಗಿದೆ. ಮುಂದಿನ ವರ್ಷದಲ್ಲಿ ರಜತ ಸಂಚಿಕೆಯೊಂದನ್ನು ಪ್ರಕಟಿಸಿ, ಪತ್ರಿಕೆಯ ಯೋಗ್ಯತೆಗೂ ಹಬ್ಬದ ಸಾರ್ಥಕತೆಗೂ ತಕ್ಕಂತೆ ಸೇವೆ ಸಲ್ಲಿಸಬೇಕೆಂದೂ, ಕನ್ನಡನಾಡಿಗೆ ತನ್ನ ೧೦೦ನೆಯ ಕಾಣಿಕೆ ಅರ್ಪಿಸಬೇಕೆಂದೂ ಪತ್ರಿಕೆ ಬಯಸಿದೆ. ಪ್ರಬುದ್ಧ ಕರ್ಣಾಟಕ ಮಾಡಿರುವ ಕೆಲಸದ ವಿವರವನ್ನು ಆ ಪ್ರಕರಣದಲ್ಲಿ ತಿಳಿಸುತ್ತೇವೆ. ಅದರಲ್ಲಿ ಅಚ್ಚಾಗುವ ಲೇಖನಗಳ ಪಟ್ಟಿಯೊಂದನ್ನು ಪರಿಶೀಲಿಸಿದರೂ ಅದರ ಬೆಳಸು ಎಂಥದೆಂಬುದು ಗೊತ್ತಾಗುತ್ತದೆ. ಈ ಸಂಘದ ಬದುಕಿನಲ್ಲಿ ಈ ವರೆಗೆ ನಡೆದ ವಾಚನ, ಭಾಷಣ, ಸ್ಪರ್ಧೆ, ಪ್ರಕಟನೆ, ಸಮ್ಮೇಳನ ಸಮಾರಂಭ, ಗೌರವಕೂಟ ಮುಂತಾದವು ಬರಲಿರುವ ಕಾಲು ಶತಮಾನದಲ್ಲಿ ಹತ್ತಾಗಿ ನೂರಾಗಿ ಅನಂತವಾಗಿ ಆಗಲಿ. ಮುಂದಿನ ಶತಮಾನಕ್ಕೆ ಕಾಲಿಡುವಾಗ ಅದಕ್ಕೆ ಅಮೃತಕೀರ್ತಿ ದೊರೆಯಲಿ. ದೇಶ ಹೊಸ ಬದುಕಿಗೆ ಇಂದು ಕಾಲಿಡುತ್ತಿದೆ. ಹೊಸ ಅಗತ್ಯಗಳೂ ಹೊಣೆಗಾರಿಕೆಗಳೂ ಭರತಖಂಡಕ್ಕೂ ಅದರ ಅಂಗವಾದ ಕನ್ನಡನಾಡಿಗೂ ಬರುತ್ತಿವೆ. ಈ ಹೊಸ ಅಗತ್ಯ ಹೊಣೆಗಾರಿಕೆಗಳನ್ನು ಕುಶಲತೆಯಿಂದ ತನ್ನ ಶಕ್ತಿಗೆ ತಕ್ಕಂತೆ ನಿರ್ವಹಿಸುವ ಸುಯೋಗವೂ ಕೃತಕಾರ್ಯತೆಯೂ ಸಂಘಕ್ಕೆ ಉಂಟಾಗಲಿ. ಅದರ ಅಧಿಕಾರಿ ಮಂಡಲಿಗೂ, ಅದಕ್ಕೆ ಆಶ್ರಯ ಕೊಟ್ಟಿರುವ ಮಹಾಪಾಠಶಾಲೆಗೂ ಈ ಬಗೆಗೆ ಶಕ್ತಿ ಸಂಪತ್ತಿಗಳು ದಿನದಿನಕ್ಕೆ ಹೆಚ್ಚಾಗಲಿ.

ಸಂಘದ ಕಾರ್ಯದರ್ಶಿಗಳ ಕೆಲವು ಭಾಗಗಳನ್ನೂ ಅಧ್ಯಕ್ಷ ಭಾಷಣದ ಹಲವು ಭಾಗಗಳನ್ನೂ ವಸ್ತುಕೋಶದಲ್ಲಿ ಕೊಟ್ಟಿದೆ.

* * *

ಈ ಸಂಚಿಕೆಯೊಂದಿಗೆ ಪತ್ರಿಕೆಯ ಈ ವರ್ಷದ ಕೆಲಸ ಸಮಾಪ್ತವಾಗುತ್ತಿದೆ. ಈ ವರ್ಷಕ್ಕೇ ವಿಶೇಷವಾದ ಕೆಲವು ಸಂದರ್ಭಗಳಿಂದ, ಯಾವ ಒಂದು ಸಲವೂ ಪತ್ರಿಕೆ ಸಕಾಲಕ್ಕೆ ಗ್ರಾಹಕರ ಕೈಮುಟ್ಟದೆ ಅವರಿಗೆ ಬೇಸರವುಂಟುಮಾಡಿರಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರ ಪುಸ್ತಕಗಳಿಗೆಲ್ಲ ವಿಮರ್ಶೆ ಪ್ರಕಟವಾಗಿಲ್ಲ. ಕಡೆಗೆ ಸಾದರಸ್ವೀಕಾರವನ್ನು ಮಾಡದ ಅವಿನಯವೂ ನಡೆದಿದೆ. ಅದಕ್ಕಾಗಿ ಸಂಬಂಧಿಸಿದವರೆಲ್ಲರ ಕ್ಷಮಾಪಣೆ ಬೇಡುತ್ತೇವೆ. 'Time is of the Essence of a Contract'—ಯಾವ ಒಪ್ಪಂದದಲ್ಲಿಯೂ ಕಾಲನಿಯತಿ ಪ್ರಧಾನ ಗಣ್ಯ—ಎಂಬುದು ನಿಜ. ಅದನ್ನು ಬಲ್ಲೆವಾದರೂ, ಕಾಗದದ ಕಷ್ಟ, ಮೇಲ್ತೆರದ ಲೇಖನ

ಗಳನ್ನು ಸಂಗ್ರಹಿಸುವ ಕಷ್ಟ, ಆಗಾಗ ಅನುಭವಲೋಪ, ಮುಂತಾದ ಹಲವು ಕಾರಣಗಳಿಂದ ಈ ತಡ ಉಂಟಾಯಿತು. ಕಡೆಯ ಸಂಚಿಕೆಯನ್ನಾದರೂ ಕಾಮನ ಹಬ್ಬಕ್ಕೆ ಸರಿಯಾಗಿ ಕಳಿಸೋಣವೆಂದು ಮಾಡಿದ ಪ್ರಯತ್ನವೂ ಸಾಗಲಿಲ್ಲ. ಸರ್ವಪ್ರಯತ್ನದಿಂದ ಮುಂದಿನ ವಿನಾಯಕನ ಸಂಚಿಕೆಯನ್ನು ಆ ಹೊತ್ತಿಗೆ ಸರಿಯಾಗಿ ಪ್ರಕಟಿಸಬೇಕೆಂದಿದ್ದೇವೆ. ವಿಘ್ನ ನಿವಾರಕನಾದ, ಮೋದಕ ಪ್ರಿಯನಾದ ಆ ದೇವನು, ಅಡ್ಡಿಗಳನ್ನು ಪರಿಹರಿಸಿ, ಆ ಮೋದವನ್ನು ಒದಗಿಸಿಕೊಡಬೇಕು.

ಸ್ವಭಾನುಸಂವತ್ಸರದ ನಾಲ್ಕು ಸಂಚಿಕೆಗಳ ಎಲ್ಲ ಭಾಗದ ಕೆಲಸವನ್ನು ಮಾಡಿ ಕೊಟ್ಟಿರುವ ಎಲ್ಲ ಗೆಳೆಯರಿಗೂ ಹಿರಿಯರಿಗೂ ವಂದನೆಗಳು.

ಮುಂದಿನ ವರ್ಷದ ಚಂದಾದಾರರಿಗೆ ಸಂಬಂಧಿಸಿದಂತೆ ವಿಶೇಷ ಪ್ರಕಟನೆಯೊಂದನ್ನು ಎರಡನೆಯ ಸಾರಿ—ಈ ಸಂಚಿಕೆಯೊಡನೆಯೂ ಕಳಿಸುತ್ತಿದೆ. ಅನಿವಾರ್ಯವಾಗಿ ಚಂದಾ ಮೊಬಲಗನ್ನು ಹೆಚ್ಚಿಸಬೇಕಾಗಿ ಬಂದುದಕ್ಕೆ ಕನ್ನಡಿಗರ ಕ್ಷಮೆಯನ್ನೂ ಔದಾರ್ಯವನ್ನೂ ಬೇಡುತ್ತೇವೆ. ರಜತಸಂಚಿಕೆಯ ಪ್ರತಿಗಳು ಸುಮಾರು ಎಷ್ಟು ಬೇಕಾಗುತ್ತವೆಂಬುದನ್ನು ಮುಂಚೆಯೇ ತಿಳಿಯಬೇಕಾಗಿರುವುದರಿಂದ, ಬರುವ ವರ್ಷದ ಪ್ರ.ಕ. ವನ್ನೂ ಆ ಸಂಚಿಕೆಯನ್ನೂ ಬಯಸುವ ಎಲ್ಲ ಮಾನ್ಯಮಿತ್ರರೂ ಮುಂಗಡವಾಗಿ ತಮ್ಮ ಇಷ್ಟವನ್ನು ತಿಳಿಸಿ, ಚಂದಾಹಣವನ್ನು ಕಳಿಸಬೇಕೆಂದು ಕೋರುತ್ತೇವೆ.

ಮತ್ತೊಂದು ಮಾತನ್ನು ಇಲ್ಲಿ ಹೇಳಬಹುದೇನೊ: ೨೫ ವರ್ಷಗಳಿಂದ ಶಕ್ತಿಯಿರುವಂತೆ ದುಡಿದು ಜನದ ಕಣ್ಣಿಗೂ ಮನಸ್ಸಿಗೂ ಬಿದ್ದ ಈ ಪತ್ರಿಕೆಗೆ ಈಗಿರುವ ಚಂದಾದಾರ ವರ್ಗ ಬಹು ಸ್ವಲ್ಪ. ಇದನ್ನು ಓದುವ ಪ್ರತಿಯೊಬ್ಬರೂ ಚಂದಾದಾರರಾಗಿ, ಅವರಲ್ಲಿ ಒಬ್ಬೊಬ್ಬರೂ ಇನ್ನೊಬ್ಬ ಗೆಳೆಯರನ್ನು ಚಂದಾದಾರರನ್ನಾಗಿ ಮಾಡಿಕೊಟ್ಟರೆ ನಮಗೆ ವಿಶೇಷ ಉತ್ತೇಜನ ದೊರೆಯುತ್ತದೆ. ಇನ್ನೂ ಅಚ್ಚುಕಟ್ಟಾಗಿ ಸೇವೆಯನ್ನು ಸಲ್ಲಿಸಲು ಪತ್ರಿಕೆಗೆ ಅವಕಾಶವಾದೀತು. ಇಂಥ ಪತ್ರಿಕೆಯನ್ನು ಪ್ರೋತ್ಸಾಹಿಸುವುದು ಯೋಗ್ಯವೆಂದು ತಿಳಿಯುವ ಎಲ್ಲ ಸೋದರರೂ ಈ ಕಡೆಗೆ ತಮ್ಮ ವಿಶ್ವಾಸವನ್ನು ಹರಿಸಿ ಮುಂದಿನ ವರ್ಷ ನಮಗೆ ಒಂದು ಸಾವಿರ ಹೊಸ ಚಂದಾದಾರರನ್ನು ದೊರಕಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

೭೦೦ ಪುಟಗಳಷ್ಟಾದರೂ ಗಾತ್ರ ರೂಡಿಸುವ ಈ ಪತ್ರಿಕೆಗೆ ಸಂಸ್ಕೃತಿಯ ಒಂದು ಸಾಧನವಾಗಿ ಉಳಿಯಬೇಕೆಂಬ ಹೆಬ್ಬಯಕೆ ಇದೆ. ಅದಕ್ಕೆ ಮೂರು ರೂಪಾಯಿ ಬೆಲೆ ಹೆಚ್ಚಲ್ಲವೆಂದು ಯಾರೇ ಆಗಲಿ ಒಪ್ಪಬಹುದು. ಉಳಿವುದು ತಮ್ಮೆಲ್ಲರ ಔದಾರ್ಯಕ್ಕೂ ಸಹಾಯ ಬುದ್ಧಿಗೂ ಸಂಬಂಧಪಡುವುದು.

***

ಪ್ರ. ಕ. ದ. ೯೧ ನೆಯ ಸಂಚಿಕೆಯಲ್ಲಿ ಬಸವೇಶ್ವರರನ್ನು ಕುರಿತು ಪ್ರಕಟವಾದ ಒಂದ ಲೇಖನದ ಮೇಲೆ **ನವಸಂದೇಶ**ದಲ್ಲಿ ಬಂದಿರುವ ಒಂದು ಟೀಕೆ ವಿಶೇಷ ಅವಸರದಲ್ಲಿ ನಮ್ಮ ಗಮನಕ್ಕೆ ಬಂದಿದೆ. ನೇರ ಈ ಪತ್ರಿಕೆಯ ಸಂಪಾದಕರಿಗೆ ಬರೆಯದೆ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಬರೆಯುವ ಅನಗತ್ಯಕ್ಕೆ ನವಸಂದೇಶದ ಸಂಪಾದಕರು ಏಕೆ ಮನಸ್ಸು ಮಾಡಿದರೋ ಅದು ಅವರಿಗೇ ತಿಳಿದ ಸಂಗತಿ. ಆ ರೀತಿಯನ್ನು ಕುರಿತು ಹೆಚ್ಚು ಹೇಳಲು ನಮಗೆ ಇಷ್ಟವಿಲ್ಲ. ಮುಂಚೆಯೇ ನಾವು ಅವರ ಅಗ್ರಲೇಖನವನ್ನು ನೋಡಿದ್ದರೆ ಯುಕ್ತವಾದ ಉತ್ತರವನ್ನು ಬರೆಯಬಹುದಿತ್ತು. ಕಾರ್ಯಭರದಲ್ಲಿ ಎಲ್ಲ ಪತ್ರಿಕೆಗಳಲ್ಲಿ ಅಚ್ಚಾಗುವ ಎಲ್ಲ ಬರಹಗಳನ್ನೂ ನೋಡುವ ಅವಕಾಶವಾಗುವುದಿಲ್ಲ. ಟೀಕೆ ಆಕ್ಷೇಪಣೆಗಳನ್ನು ಮಾಡುವ ಮಹನೀಯರು ತಮ್ಮ ಲೇಖನವಿರುವ ಪತ್ರಿಕೆಯನ್ನೂ ಆ ಸಂಗತಿಯನ್ನೂ ನಮಗೂ ಕಳಿಸುವ, ಒಂದು ಮಾತು ತಿಳಿಸುವ ಉಪಕಾರಮಾಡಿದರೆ ಪ್ರಬುದ್ಧ ಕರ್ಣಾಟಕ ಕೃತಜ್ಞವಾಗುತ್ತದೆ.

ಇನ್ನು ಟೀಕೆಯ ವಿಚಾರ: ಶ್ರೀ ಕಪಟರಾಳ ಕೃಷ್ಣರಾಯರು ನುರಿತ ಸಂಶೋಧಕರು. ತಮ್ಮ ಕಡೆಯಲ್ಲಿ ಬಹುಕಾಲದಿಂದ ಕನ್ನಡಕ್ಕಾಗಿ ದುಡಿದಿರುವವರು. ಯಾವ ವಿಷಯದಲ್ಲಾಗಲಿ ಒಂದು ಸಯುಕ್ತಿಕವಾದ ಅನ್ವೇಷಣದೃಷ್ಟಿಯಿಂದ ಕೂಡಿದ ಸಾಧಾರಣವಾದ ಒಂದು ಬರಹವನ್ನು ಯಾರಾದರೂ ಕಳಿಸಿದರೆ ಪತ್ರಿಕೆಗಳು ಅಚ್ಚು ಮಾಡುತ್ತವೆ. ಶ್ರೀ ಬಸವೇಶ್ವರರ ಕಾಲ, ಸ್ಥಳ, ಹುಟ್ಟು, ಬೆಳವಣಿಗೆ, ಸ್ನೇಹಗಳು, ಲಿಂಗೈಕ್ಯ, ಅವರ ಸಮಕಾಲೀನರು ಮುಂತಾದ ಎಲ್ಲ ಸಂಬಂಧದಲ್ಲಿಯೂ ಇನ್ನೂ ಮತಾಂತರಗಳಿವೆ. ವೀರಶೈವರಲ್ಲಿಯೇ ಭಿನ್ನಾಭಿಪ್ರಾಯಗಳಿವೆ. ಹೀಗೆಯೇ ಸರಿ ಎಂದು ತೀರ್ಮಾನವಾಗುವ ವರೆಗೂ ವಿಷಯಗಳನ್ನು ಕುರಿತು ಚರ್ಚೆ ನಡೆಯುತ್ತಿರುತ್ತದೆ; ಸತ್ಯಮಥನಕ್ಕಾಗಿ. ಆ ಸಮಯಕ್ಕೆ ಸಂಬಂಧಿಸಿದವರು ಬೇಸರಪಡದೆ ವಾದಗಳನ್ನು ಕೇಳಬೇಕು. ಅಷ್ಟಾದರೂ ಸಪ್ರಮಾಣವಾದ ಪ್ರತಿವಾದಗಳನ್ನು ಹೂಡಿ ಆಧಾರಗಳನ್ನು ತೋರಿಸಿ ತಮ್ಮ ಸಿದ್ಧಾಂತವನ್ನು ಸ್ಥಾಪಿಸಬಲ್ಲವರಾಗಬೇಕು. ಆ ವರೆಗೂ ಶೋಧಕರ ವಿವೇಚನೆ ನಡೆಯುತ್ತಿರುವುದು. ಶ್ರೀ ಬಸವೇಶ್ವರರು ವೀರಶೈವರಿಗೆ ಒಬ್ಬರಿಗೆ ಮಾತ್ರವಲ್ಲದೆ ಕನ್ನಡನಾಡಿನವರಿಗೆಲ್ಲ ಹಿರಿಯರು, ಪೂಜ್ಯರು. ಒಂದು ಮಹಾ ಸಂಪ್ರದಾಯವನ್ನೂ, ಸಮಾಜವನ್ನೂ ಸ್ಥಾಪಿಸಿ ಕೀರ್ತಿ ಪಡೆದವರು; ಅನುಭವಿಗಳು; ಕಾರಣಪುರುಷರು. ಇಂಥವರ ವಿಷಯದಲ್ಲಿ ಹುಟ್ಟು, ಉಪನಯನ, ಒಂದು ಕಾರ್ಯ ವಿವರ — ಈ ಬಗೆಗೆ ಈಗಿನವರಿಗೆ ಇಷ್ಟವಲ್ಲದ ಒಂದು ಮಾತು ಹೊರಬಿದ್ದರೆ, ಅದು ಶ್ರೀ ಬಸವೇಶ್ವರರ ಯೋಗ್ಯತೆಗೆ ಕುಂದಲ್ಲ. ಅವರಿಗೆ ಗಣ್ಯತೆ ಬಂದಿರುವುದು ಅವರ ಜೀವನಗುಣದಿಂದ; ಅವರ ಸಾಧನೆಯಿಂದ; ಪರಿಶುದ್ಧ ಚಾರಿತ್ರದಿಂದ; ಅವರ ಭಕ್ತಿಯ ಪರಮೋನ್ನತಿಯಿಂದ.

ವ್ಯಕ್ತಿಟೀಕೆ, ಉದ್ವೇಗದ ಬಣ್ಣ, ಅವಹೇಳನ ಬಿಟ್ಟು ಈ ಸಂಬಂಧದಲ್ಲಿ ನವಸಂದೇಶದವರಾದರೂ ರಾಯರ ಉಕ್ತಿಗೆ ಪ್ರತ್ಯುಕ್ತಿಯನ್ನು ಸಂಗ್ರಹವಾಗಿ ಬರೆದು ಕಳಿಸುವ ಉಪಕಾರಮಾಡಿದ್ದ ಪಕ್ಷದಲ್ಲಿ ನಾವು ಅದನ್ನು ಅಚ್ಚುಮಾಡುತ್ತಿದ್ದೆವು. ಈಗಲೂ ಮಾಡುತ್ತೇವೆ. ತಪ್ಪು ನಡೆಯಿತೆಂದ ಸ್ಥಳದಲ್ಲಿಯಲ್ಲವೆ ವಿಚಾರಣೆ ನಡೆಯಬೇಕು? ೩-೪ ಪುಟಗಳಲ್ಲಿ ಅದನ್ನು ಅಡಗಿಸಿ ಕಳಿಸಬೇಕು, ಮಾತ್ರ. ಎಲ್ಲ ಪಂಥ ಎಲ್ಲ ಅಭಿಪ್ರಾಯಗಳಿಗೂ ಪ್ರಬುದ್ಧ ಕರ್ಣಾಟಕದಲ್ಲಿ ಎಡೆ ಉಂಟು. ತನ್ನ ಶಕ್ತಿ ಇರುವ ಮಟ್ಟಿಗೆ ವೀರಶೈವ ಪಂಥವನ್ನೂ ಆ ಮತದ ಮಹನೀಯರನ್ನೂ ಕುರಿತು, ಇತರ ಯಾರಿಗೂ ಕಡಮೆಯಲ್ಲದ ಭಕ್ತಿಯನ್ನು ಈ ಪತ್ರಿಕೆ ತೋರಿಸಿದೆ. ಇಲ್ಲಿನ ಬರಹಗಾರರು — ಹಲವರು ಬೇರೆ ಧರ್ಮಗಳಿಗೆ ಸೇರಿದವರಾದರೂ ಹಾಗೆ ದುಡಿದಿದ್ದಾರೆಂಬುದು ವೀರಶೈವ ಮಿತ್ರರಿಗೆಲ್ಲ ಗೊತ್ತಿದೆ. ಜೊತೆಗೆ ಟೀಕೆಯ ಸಂಗತಿಯನ್ನು ಕೃಷ್ಣರಾಯರಿಗೆ ತಿಳಿವಳಿಕೆಕೊಟ್ಟಿದ್ದೇವೆ. ಅವರ ಉತ್ತರವನ್ನು ನಿರೀಕ್ಷಿಸುತ್ತಿದ್ದೇವೆ. ಈ ವಿವರಣೆಯಿಂದ ಟೀಕಾಕಾರರು ಸದ್ಯಕ್ಕೆ ಸಮಾಧಾನ ಹೊಂದಬೇಕೆಂದು ಬೇಡುತ್ತೇವೆ. ಅಭಿಸಂಧಿಯ ಆರೋಪಣೆಯಿಂದ ಸತ್ಯಕ್ಕೆ ಸೇವೆಯಾಗುವುದಿಲ್ಲ.

***

ಕಳೆದ ಜನವರಿ ೧೯ನೆಯ ತಾರೀಖು ಮೈಸೂರು ವಿಶ್ವವಿದ್ಯಾನಿಲಯ ಸಂಘದ ಸಭಾಮಂದಿರದಲ್ಲಿ ಒಂದು ಸನ್ಮಾನಕೂಟ ಸೇರಿತ್ತು. ಇಲ್ಲಿನ ಪ್ರಖ್ಯಾತ ಕಲಾವಿದರೂ ನಾಟ್ಯಕಾರರೂ ಆದ ಶ್ರೀ ಎಸ್. ಎನ್. ಸ್ವಾಮಿ ಅವರು ತಮಗೆ ನಾಟ್ಯವಿದ್ಯೆ ಕಲಿಸಿದ ಶ್ರೀ ಜಟ್ಟಿ ತಾಯಮ್ಮನವರಿಗೆ ಅಭಿವಂದನ ಸಮಾರಂಭವನ್ನು ಏರ್ಪಡಿಸಿದ್ದರು. ಆಕೆಯಿಂದ ಭರತನಾಟ್ಯದಲ್ಲಿ ವಿದ್ಯಾಶಿಕ್ಷಣಪಡೆದ ಹಲವರು ಶಿಷ್ಯರು ಸೇರಿದ್ದರು. ರಾಜಸೇವಾಪ್ರಸಕ್ತ ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರವರು ಅಗ್ರಾಸನವನ್ನು ವಹಿಸಿ ಬಹು ಸ್ವಾರಸ್ಯವಾದ, ಪ್ರೋತ್ಸಾಹಕವಾದ ನಾಲ್ಕು ಮಾತುಗಳನ್ನಾಡಿದರು. ಸ್ವಾಮಿಯವರ ನರ್ತನವಂತೂ ಆ ದಿನ ಸ್ಫೂರ್ತಿಯಿಂದಲೂ ಭಕ್ತಿಯಿಂದಲೂ ಕೂಡಿತ್ತು. ಒಂದು ವಿಶೇಷ ನಿಷ್ಠೆಯಲ್ಲಿ ಅಭ್ಯಾಸಮಾಡಿದ ಹೊರತು ಯಾವ ಕಲೆಯೂ ಒಲಿಯದು. ತದೇಕನಿಷ್ಠೆಯಿಂದ ೬-೭ ವರ್ಷ ವ್ಯಾಸಂಗಮಾಡಿ, ವೇಷ, ಅಂಗಭಂಗಿ, ಭಾವಾನುಗುಣವಾದ ಚಲನೆಯ ವಿನ್ಯಾಸಗಳು, ಹೆಜ್ಜೆಯ ಕೆಲಸ, ಎಲ್ಲಕ್ಕೂ ಮೇಲಾಗಿ ಒಂದು ಹಗುರವಾದ ಆದರೆ ಅರ್ಥಪೂರ್ಣವಾದ ಸಂಚಾರಗಳ ಮೂಲಕ ತಾವು ಆರಿಸಿಕೊಂಡ ಪ್ರತಿ ಅಭಿನಯಾಂಶವನ್ನೂ ಬಹು ಚೆನ್ನಾಗಿ ರೂಪುಗೊಳಿಸಿದರು. ಯಾವ ಚಾರಿಯಲ್ಲಿಯೇ ಆಗಲಿ ಅಂದು ವಿಶೇಷ ಶಕ್ತಿಯೂ, ಸೌಂದರ್ಯವೂ, ಮೋಹಕತೆಯೂ, ಸಾರ್ಥಕತೆಯೂ ಇದ್ದವು. ಗುರು

ಕಾಣಿಕೆ ಸಲ್ಲಿಸುವ ಸಮಯದಲ್ಲಿ ಇದಕ್ಕಿಂತ ಹೆಚ್ಚಿನದೇನನ್ನು ಆಚಾರ್ಯರು ಬಯಸಿಯಾರು? ೮೫-೯೦ ವರ್ಷಕ್ಕೆ ಕಡಮೆಯಿಲ್ಲದ ವಯಸ್ಸಿನ ತಾಯಮ್ಮನವರು ನಿಂತು ಆ ಉದ್ದಕ್ಕೂ ತಾಳಹಾಕಿ, ಹಾಡಿ ಕುಣಿತಕ್ಕೆ ನೆರವಾದರು. ಭಾವಪ್ರಧಾನ ವಾದ ಈ ಕಲೆಗೆ ಜೀವ — ತಾಳಲಯ; ತಕ್ಕ ಚಲನೆ, ಸಂಚಾರ. ಅಂದು ಇವುಗಳ ಮೇಳನ ಉತ್ಕೃಷ್ಟವಾಗಿತ್ತು.

ಈಗ್ಗೆ ೧೦-೨೦ ವರ್ಷಗಳಿಗೆ ಹಿಂದೆ ನಾಟ್ಯಕ್ಕೆ ವಿದ್ಯಾವಂತರಾದ ಜನ ಸೇರುವುದು ಕಷ್ಟವಾಗುತ್ತಿತ್ತು. ಕಾರಣಗಳೂ ಇದ್ದವು. ಆದರೂ, ಲಲಿತಕಲೆಗಳಲ್ಲಿ ಒಂದಾಗಿ, ಕೃಷ್ಣ ಶಿವಾದಿಗಳ ಹೆಸರಿನಲ್ಲಿಯೂ ದೈವಿಕ ನೇತೃತ್ವದಲ್ಲಿಯೂ ಹುಟ್ಟಿ, ಬೆಳೆದು ಖ್ಯಾತಿಗೊಂಡ ಈ ಕಲೆಗೆ ಬಂದಿದ್ದ ಅಪಪ್ರಥೆ ಹೋಗಿ ಅದು ಪುನಃ ಶಿಕ್ಷಿತ ಮಹಿಳೆಯರು ಮಹನೀಯರು ಎಲ್ಲರೂ ನೋಡಬಹುದಾದ, ಭಾಗವಹಿಸಬಹುದಾದ ಒಂದು ವಿದ್ಯೆಯಾದ್ದು ವಿಶೇಷವೇ ಎನ್ನಬೇಕು. ಊರಿನ ಹಲವು ಮಾನ್ಯ ಮಹನೀಯರು ಪ್ರೇಕ್ಷಕರಾಗಿದ್ದು ಸಂತೋಷಪಟ್ಟರು. ಸಾಹಿತ್ಯದಲ್ಲಿಯೂ ಸತ್‌ಶೀಲದಲ್ಲಿಯೂ ಹಿರಿಯರಾದ ಶ್ರೀ ಮಾಸ್ತಿಯವರ ಅಧ್ಯಕ್ಷತೆಯಲ್ಲಿ ಈ ಉತ್ಸವ ನಡೆದದ್ದು ಕಲೆಗಳ ಪುನರುತ್ಥಾನ ಕಾರ್ಯದಲ್ಲಿ ನಾಡು ಧೈರ್ಯವಾಗಿ ಮುನ್ನಡೆಯಿಡುತ್ತಿದೆ ಎಂದು ಹೇಳಿಸುವ ಸಂಗತಿಯಾಗಿದೆ.

* * *

ಎರಡು ಮೃತಿಕಾಣಿಕೆಗಳಿಂದ ಈ ಸಲದ ಸಂಪಾದಕೀಯ ಮುಗಿಯುವುದು. ಒಂದು ಮಹಾಮಹೋಪಾಧ್ಯಾಯ ಅರ್ಥಶಾಸ್ತ್ರ ವಿಶಾರದ ಶ್ರೀ ಆರ್. ಶ್ಯಾಮ ಶಾಸ್ತ್ರಿಗಳವರ ನಿಧನಕ್ಕಾಗಿ; ಇನ್ನೊಂದು ಬೆಂಗಳೂರಿನ ಸುಪ್ರಸಿದ್ಧ ಸಂಗೀತ ವಿದ್ವಾಂಸರಾದ ತಾಯಪ್ಪನವರ ನಿಧನಕ್ಕೆ.

೧. ಡಾ. ಶ್ಯಾಮಶಾಸ್ತ್ರಿಗಳವರು, ಮೈಸೂರು ವಿದ್ವತ್ತಿಗೆ ಅಖಿಲ ಪ್ರಪಂಚದ ಗೌರವವನ್ನು ಗಳಿಸಿಕೊಟ್ಟಿದ್ದವರು. ಅವರ ವಿದ್ವತ್ತೆಗೆ ಭರತಖಂಡದ ಅನೇಕ ವಿಶ್ವ ವಿದ್ಯಾನಿಲಯಗಳವರು ಬಗೆಬಗೆಯಾಗಿ ನಾವು ತಾವೆಂದು ಮುಂದೆಬಂದು ಪುರಸ್ಕಾರ ಕೊಟ್ಟರು. ಕೌಟಿಲೀಯ ಅರ್ಥಶಾಸ್ತ್ರವನ್ನು ಪ್ರಕಾಶಕ್ಕೆ ತಂದದ್ದು ಚರಿತ್ರಾರ್ಹವಾದ ಸಂಗತಿ. ಆ ಒಂದು ಪುಸ್ತಕ ಪ್ರಕಾಶನದ ಆಧಾರದ ಮೇಲೆ ಒಂದು ಸಾವಿರ ಡಾಕ್ಟರೇಟ್ ಪ್ರಶಸ್ತಿಗಳೂ, ಪುಸ್ತಕಗಳೂ ಲಭ್ಯವಾಗಿವೆಯೆಂದರೆ ಅದು ಮಿತೋಕ್ತಿ ಯಾಗುವುದು. ಅವರು ಭರತಖಂಡದ ಚರಿತ್ರೆಯಲ್ಲಿಯೂ ವೇದಶಾಸ್ತ್ರಾದಿಗಳಲ್ಲಿಯೂ ನಡಸಿದ ಪರಿಶೋಧನೆ ಅದ್ಭುತವಾದುದು. ಉದ್ಯೋಗದಿಂದ ವಿಶ್ರಾಂತಿ ಪಡೆದ ಬಳಿಕವೂ ಶಾಸ್ತ್ರನಿಷ್ಠೆಯಿಂದ ಕೆಲಸಮಾಡುತ್ತಿದ್ದ ನೋಟವೂ ಅನುಭವವೂ ಯಾರಿಗೂ

ಸ್ಫೂರ್ತಿಯನ್ನು ಕೊಡುವಂತಹವೇ. ಇಂತಹ ಸನ್ಮಾನ್ಯರ ನಿರ್ಯಾಣದಿಂದ ವಿದ್ಯಾಪ್ರಪಂಚಕ್ಕೆ ದೊಡ್ಡ ನಷ್ಟವಾಗಿದೆ. ಕರ್ಣಾಟಕಕ್ಕಂತೂ ಅದು ತುಂಬಲಾರದ ನಷ್ಟ.

೨. ಪಿಟೀಲ್ ವಾದನದಲ್ಲಿ ಬೆಂಗಳೂರಲ್ಲಿ ಬಹಳ ಹೆಸರಾದ ವಿದ್ವಾಂಸರೆಂದರೆ ಶ್ರೀ ತಾಯಪ್ಪನವರು. ೫೦-೬೦ ವರ್ಷಗಳ ಕಾಲ ಒಂದೇ ಸಮನಾಗಿ ನಡೆದ ಅವರ ವಾದನಸಾಧನೆ ಅವರ ಕೈಗೆ ಒಂದು ಮೃದುತೆಯನ್ನು ತಂದಿತ್ತು. ವಾದ್ಯದ ಹದಹಿಡಿದು ಅದರ ಜೀವ ಪ್ರಕಾಶಕ್ಕೆ ಬರುವಂತೆಯೂ ಯಾವ ರಾಕ್ಷಸತೆಗೂ ಮರುಳಾಗದೆಯೂ ಎಡೆಕೊಡದೆಯೂ "ಸುಖವಾಗಿ" ಬಾಜಿಸುತ್ತ ಎಲ್ಲರಿಂದಲೂ ವಿಶ್ವಾಸವನ್ನೂ ಗೌರವವನ್ನೂ ಪಡೆದಿದ್ದರು. ಸಂಪ್ರದಾಯಗಳೂ ಎಣಿಕೆಗಳೂ ಶೈಲಿಯ ಅಟ್ಟಹಾಸ ಹೊಸಗಾರಿಕೆಗಳೂ ಬಲಿದಂತೆಲ್ಲ ಅವರ ವಾದನ ಸಪ್ಪೆಯಾಯಿತೆಂದವರು ಕೆಲವರಿದ್ದರು. ಆದರೆ ಸಂಗೀತದಲ್ಲಿ ಎಲ್ಲ ಕಲೆಗಳಲ್ಲಿನಂತೆಯೇ — ಹಳೆಯದು ಹೊಸದು ಎಂಬುದಿಲ್ಲ; ಜೀವಂತ — ಮೃತ ಎಂಬವು ಮಾತ್ರ ಎರಡು ವರ್ಗಗಳು. ರಾಗಭಾವ, ಸಾಹಿತ್ಯಭಾವ, ತಾಳಭಾವಗಳನ್ನು ಹೊಂದಿಸಿ ಅನುಭವಸಂಪತ್ತಿಯನ್ನೆರೆದು, ನಯ ಜೀವದ ವ್ಯಂಜನೆಯನ್ನು ಮಾಡುವ ವಾದ್ಯವಾದನ ದೊಡ್ಡ ಮಟ್ಟದ್ದೆನ್ನುವುದಾದರೆ ಶ್ರೀ ತಾಯಪ್ಪನವರ ವಾದನ ಆ ಮಟ್ಟದ್ದೆನ್ನಬಹುದು.

ನಿಗರ್ವಿಗಳಾಗಿ, ಎಲ್ಲರಿಗೂ ಬೇಕಾದವರಾಗಿ, ನೂರಾರು ಜನಕ್ಕೆ ವಿದ್ಯಾದಾನ ಮಾಡಿ ಒಳ್ಳೆಯ ಬದುಕು ಬದುಕಿ ನಮ್ಮಿಂದ ಕಣ್ಮರೆಯಾದ ಆ ಕಲಾವಿದರಿಗೆ ನಮ್ಮ ನಮಸ್ಕಾರ.

# ವಸ್ತುಕೋಶ

## I ಭರತಖಂಡದ ಭಾಷೆಗಳು ಮತ್ತು ಭಾಷಾಸಮಸ್ಯೆ[1]

ಭರತಖಂಡ ವಿಸ್ತೀರ್ಣದಲ್ಲಿ ರಷ್ಯವನ್ನು ಬಿಟ್ಟು ಯೂರೋಪು ಖಂಡಕ್ಕೆ ಸಮನಾದುದು; ಇದರ ಜನಸಂಖ್ಯೆಯು ಪ್ರಪಂಚದ ಒಟ್ಟು ಜನಸಂಖ್ಯೆಯ ಐದರ ಒಂದು ಭಾಗ. ಇಲ್ಲಿ ಅನೇಕ ಭಾಷೆಗಳು ಬಳಕೆಯಲ್ಲಿವೆ. ಹಿಂದಿನ ಕಾಲದಲ್ಲಿ ಭಾಷಾ ಭೇದಗಳು ಒಂದು ಸಮಸ್ಯೆಯಾಗಿರಲಿಲ್ಲ. ಜನಸಾಮಾನ್ಯವು ತನ್ನ ವ್ಯವಹಾರ ಭಾಷೆಯಿಂದಲೇ ತೃಪ್ತವಾಗಿತ್ತು. ರಾಜಕೀಯ ಕಾರ್ಯಭಾರ ಹೊತ್ತವರು ಹಿಂದೂ ಗಳಾಗಿದ್ದರೆ ಸಂಸ್ಕೃತವೂ ಮುಹಮ್ಮದೀಯರಾಗಿದ್ದರೆ ಪಾರ್ಸಿಯೂ ಸಾಕಾಗಿತ್ತು. ಭಾಷಾವೈವಿಧ್ಯವು ಅಷ್ಟು ವ್ಯಕ್ತವಾಗಿರಲಿಲ್ಲ. ಈಗ ರಾಷ್ಟ್ರೀಯ ದೃಷ್ಟಿಯಿಂದ ಭರತಖಂಡಕ್ಕೆಲ್ಲ ಒಂದು ಸಾರ್ವತ್ರಿಕ ಭಾಷೆಯ ಆವಶ್ಯಕತೆ ತೋರಿಬರುತ್ತದೆ. ಜನ ಸಾಮಾನ್ಯವೆಲ್ಲ ಆಡುವ ಅಥವಾ ಅವರು ಅರ್ಥಮಾಡಿಕೊಳ್ಳಬಲ್ಲ ಒಂದು ಭಾಷೆ ವ್ಯವಹಾರಕ್ಕೆ ಆವಶ್ಯಕವಾಗಿದೆ. ವಿದ್ಯೆ ಕಲಿತವರ ಇಂಗ್ಲಿಷು ಜನಸಾಮಾನ್ಯಕ್ಕೆ ಉಪಯೋಗವಿಲ್ಲ. ಪ್ರಾಂತಗಳಲ್ಲಿನ ಬೇರೆಬೇರೆ ಭಾಷೆಗಳು ಈಗ ಸಾವಿರ ವರ್ಷ ಗಳಿಂದೀಚೆಗೆ ಅಭಿವೃದ್ಧಿ ಹೊಂದಿ ಅವುಗಳಲ್ಲಿ ಸಾಹಿತ್ಯಭಂಡಾರ ಬೆಳೆದು ಪ್ರಾಮು ಖ್ಯಕ್ಕೆ ಬರುತ್ತಿದೆ. ಆದರೆ ರಾಷ್ಟ್ರೀಯತ್ವದ ಗುರುತಾಗಿ ಇಂಡಿಯಕ್ಕೆಲ್ಲ ಒಂದು ಭಾಷೆ ನಮಗೆ ಬೇಕು. ವಿವಿಧ ಭಾಷೆಗಳುಳ್ಳ ಇಂಡಿಯ ಐಕಮತ್ಯವುಳ್ಳ ಒಂದು ರಾಷ್ಟ್ರವಾಗಲಾರದೆಂಬ ಆಕ್ಷೇಪ ಇಂಥಾ ಸಾರ್ವತ್ರಿಕ ಒಂದು ಭಾಷೆಯಿಂದ ಪರಿಹಾರಗೊಳ್ಳುವುದು. ಅಂಥ ಒಂದು ಭಾಷೆಯು ಹಿಂದಿ ಎಂದು ಹೇಳಲಾಗಿದೆ. ಎಷ್ಟರಮಟ್ಟಿಗೆ ಹಿಂದಿಯನ್ನು ಇಂಡಿಯದ ರಾಷ್ಟ್ರಭಾಷೆಯನ್ನಾಗಿ ಮಾಡಬಹು ದೆಂಬುದು ಅನೇಕ ರಾಜಕಾರಣ ಪಟುಗಳ ಮತ್ತು ವಿಚಾರಪರರ ಯೋಚನೆಯಾಗಿದೆ.

ವಾಸ್ತವವಾಗಿ ಭಾಷಾವಿವಿಧತೆ ರಾಷ್ಟ್ರೀಯತ್ವಕ್ಕೆ ಅಡ್ಡಿಯಲ್ಲ. ಸ್ವಿಟ್ಸರ್ಲೆಂಡ್, ಬ್ರಿಟನ್, ಫ್ರಾನ್ಸ್, ಸ್ಪೈಯಿನ್, ರಷ್ಯ, ಚೀನ, ಮಧ್ಯ ಮತ್ತು ದಕ್ಷಿಣ ಅಮೆರಿಕ, ಕೆನಡ — ಇವುಗಳಲ್ಲಿ ಅನೇಕ ಭಾಷೆಗಳು ಪ್ರಚಾರದಲ್ಲಿದ್ದರೂ ಅಲ್ಲಿ ರಾಷ್ಟ್ರೀಯತ್ವಕ್ಕೆ ಅಡ್ಡಿ ಬಂದಿಲ್ಲ. ಇಂಡಿಯದಲ್ಲಿ ೧೭೯ ಗ್ರಂಥಸ್ಥ ಭಾಷೆಗಳೂ ೫೪೪ ವ್ಯಾವಹಾರಿಕ

---

[1] ಶ್ರೀ ಎಸ್. ಕೆ. ಚಟರ್ಜಿಯವರು ಆಕ್ಸ್‌ಫೋರ್ಡ್ ಕಿಬ್ಪೊತ್ತಗೆ ಮಾಲೆಗೆ ಬರೆದುಕೊಟ್ಟಿ ರುವ ಈ ವಿಷಯವನ್ನು ಕುರಿತ ಪುಸ್ತಕ ಬಹು ಮುಖ್ಯವಾದ್ದು. ಅದರ ಸ್ಥೂಲ ಪರಿಚಯವಾಗ ಲೆಂದು ಈ ಸಂಗ್ರಹವನ್ನು ಮಾಡಿದೆ.

ಪ್ರಾಂತಭಾಷೆಗಳೂ ಇವೆ. ಈ ೧೭೯ ಭಾಷೆಗಳಲ್ಲಿ ೧೧೬ ಇಂಡಿಯದ ಉತ್ತರ ಮತ್ತು ಈಶಾನ್ಯ ಅಂಚಿನಲ್ಲಿ ಮಾತ್ರ ಇರುವ ಟಿಬೆಟ್, ಚೀನ ಭಾಷೆಗಳ ಗುಂಪಿಗೆ ಸೇರಿದವು. ಇವು ದೇಶದ ಒಟ್ಟು ಜನಸಂಖ್ಯೆಯಲ್ಲಿ ಸೇಕಡ ಒಂದಕ್ಕಿಂತ ಸ್ವಲ್ಪ ಕಡಿಮೆ. ಇನ್ನೂ ೨೪ ಹಾಗೆಯೇ ಬೇರೆ ಭಾಷಾವರ್ಗಗಳಿಗೆ ಸೇರಿದ ಅಥವಾ ಇಂಡಿಯ ಭಾಷೆಗಳಿಗೇ ಸೇರದ ಕ್ಷುಲ್ಲಕ ಭಾಷೆಗಳು. ಸಾಹಿತ್ಯಕ್ಕೆ, ವಿದ್ಯಾಭ್ಯಾಸಕ್ಕೆ, ಸಾರ್ವಜನಿಕ ಕಾರ್ಯಗಳಿಗೆ ಉಪಯೋಗವಾಗತಕ್ಕ ಮುಖ್ಯ ಭಾಷೆಗಳು ೧೫ ಮಾತ್ರ; (ಇವುಗಳಲ್ಲಿನ ಹತ್ತಿರ ಸಂಬಂಧವನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಹನ್ನೆರಡೇ ಆಗುವುವು.) (೧) ಹಿಂದಿ, (೨) ಉರ್ದು, (೩) ಬಂಗಾಳಿ, (೪) ಉರಿಯ, (೫) ಮರಾಠಿ, (೬) ಗುಜರಾತಿ, (೭) ಸಿಂಧಿ, (೮) ಕಾಶ್ಮೀರಿ, (೯) ಪಂಜಾಬಿ, (೧೦) ನೇಪಾಳಿ (ಇವೆಲ್ಲ ಹಿಂದಿಗೆ ಹತ್ತಿರ ಹೋಲಿಕೆಯುಳ್ಳವು.) (೧೧) ಅಸ್ಸಾಮಿ, (ಬಂಗಾಳಿಗೆ ಸಮೀಪವಾದುದು.) ಮತ್ತು ದ್ರಾವಿಡವರ್ಗಕ್ಕೆ ಸೇರಿದ (೧೨) ತೆಲುಗು, (೧೩) ಕನ್ನಡ, (೧೪) ತಮಿಳು, (೧೫) ಮಲೆಯಾಳ. ಆರ್ಯಭಾಷೆಗಳನ್ನು ಉಪಯೋಗಿಸುವ ಉತ್ತರ ದೇಶದ ಬೇರೆ ಬೇರೆ ಪ್ರಾಂತಗಳನ್ನು ಹಿಂದಿ ಕೂಡಿಸುವುದು. ಆದುದರಿಂದ ಕಾಶ್ಮೀರದಿಂದ ಮೈಸೂರವರೆಗೂ ಪ್ರಯಾಣಕ್ಕೆ ಭಾಷೆಯು ಅಡ್ಡಿಯಾಗಿಲ್ಲ.

ದೇಶದ ಮುಂದಿರುವ ಭಾಷಾಸಮಸ್ಯೆಗಳು ಇವು: ಪ್ರೌಢ ವಿದ್ಯಾಭ್ಯಾಸ ಮತ್ತು ಆಡಳಿತದಲ್ಲಿ ಇಂಗ್ಲಿಷು ಮತ್ತು ತಾಯಿನುಡಿಗಳ ಸ್ಥಾನ; ಸಾಧ್ಯವಾದಷ್ಟು ಭಾಷೆಗಳಿಗೆ ಅನ್ವಯಿಸುವಂತಹ ಸಾರ್ವತ್ರಿಕ ವಿಜ್ಞಾನ ಮತ್ತು ಪಾರಿಭಾಷಿಕ ಶಬ್ದಕೋಶ; ಅಂತರಪ್ರಾಂತೀಯ ಜೀವನದಲ್ಲಿ ಹಿಂದಿಯ ಸ್ಥಾನ; ರಾಜಕೀಯವಾದ ಹಿಂದು-ಮುಸ್ಲಿಂ ಸಮಸ್ಯೆಯ ಭಾಷಾರೂಪವಾದ ಹಿಂದಿ-ಉರ್ದು ಪ್ರಶ್ನೆ.

ಹಿಂದಿ ೨೫.೭ ಕೋಟಿಗೆ ವ್ಯವಹಾರ ಭಾಷೆ; ಅದು ಇನ್ನೂ ಹಲವು ಲಕ್ಷ ಮಂದಿಗೆ ಅರ್ಥವಾಗುವುದು; ಹಿಂದಿಯೂ ಉರ್ದುವೂ ೧೪ ಕೋಟಿಗೆ ಮೇಲ್ಪಟ್ಟವರ ಗ್ರಂಥಭಾಷೆ. ಹೀಗೆ ಅದು ಪ್ರಪಂಚದ ಭಾಷೆಗಳಲ್ಲಿ ಮೂರನೆಯದು — ಚೀನಿ ಇಂಗ್ಲಿಷುಗಳ ತರುವಾಯ ಬರುತ್ತದೆ. ಆ ಬಳಿಕದ ಸ್ಥಾನ ಬಂಗಾಳಿಗೆ. ಬಂಗಾಳಿಯನ್ನು ತಾಯ್ನುಡಿಯಾಗಿ ಬಳಸುವವರ ಸಂಖ್ಯೆಯನ್ನು ನೋಡಿದರೆ ಬಂಗಾಳಿ ಪ್ರಪಂಚದ ಭಾಷೆಗಳಲ್ಲಿ ಏಳನೆಯದಾಗುವುದು. ಹಿಂದಿ ಹಿಂದೂಸ್ಥಾನಿ ಭಾಷೆಗಳು ಲಿಪಿ ಮತ್ತು ಪ್ರೌಢಶಬ್ದ ಸಂಪತ್ತಿಯಿಂದ ಭಿನ್ನವಾಗಿ ಎರಡು ಬೇರೆ ಬೇರೆ ಸಾಹಿತ್ಯಗಳಾಗಿ ಪರಿಣಮಿಸದಿದ್ದಲ್ಲಿ ದೇಶದಲ್ಲಿ ಒಂದು ಸಾರ್ವತ್ರಿಕ ಭಾಷೆಯಿಂದ ಐಕ್ಯತೆಯನ್ನು ಸಾಧಿಸುವುದು ಸುಲಭವಾದ ಕೆಲಸವಾಗಿತ್ತು. ದ್ರಾವಿಡ ಭಾಷೆಗಳನ್ನು ಆಡುವವರು ಅದನ್ನು ಅಂತರಪ್ರಾಂತೀಯ ವ್ಯವಹಾರಕ್ಕೆ ಉಪಯೋಗಿಸಲು ಹೆಚ್ಚು ಕಷ್ಟವಿರುತ್ತಿರಲಿಲ್ಲ.

ದೇಶದ ಸದ್ಯಃಸ್ಥಿತಿಯಲ್ಲಿ ಉನ್ನತ ಸಂಸ್ಕೃತಿಯ ಪರಿಚಯಕ್ಕೆ ಒಂದು ಕಡೆ ಸಂಸ್ಕೃತ, ಪಾರ್ಸಿ, ಅರಬ್ಬಿ ಭಾಷೆಗಳನ್ನೂ ಮತ್ತೊಂದು ಕಡೆ ಇಂಗ್ಲಿಷನ್ನೂ ಆಶ್ರಯಿಸಬೇಕು. ಈಗಿರುವ ಇಂಗ್ಲಿಷಿನ ಸ್ಥಾನ ಅಪೂರ್ವವಾದ್ದು. ಅದು ಆಡಳಿತದ, ಪ್ರೌಢ ವಿದ್ಯೆಯ ಭಾಷೆ; ಆದುದರಿಂದ ಅದು ದೇಶಭಾಷೆಗಳಿಗೆಲ್ಲ ಪ್ರಬಲ ಸ್ಫೂರ್ತಿಯನ್ನೂ ಪ್ರೇರಣೆಗಳನ್ನೂ ಕೊಟ್ಟಿದೆ. ಪರಭಾಷೆಗಳಲ್ಲೆಲ್ಲ ಹೆಚ್ಚು ಬಳಕೆಯಿರುವ ಭಾಷೆ. ೧೯೩೧ ರಲ್ಲಿ ೩೩.೮ ಕೋಟಿ ಪ್ರಜಾಸಂಖ್ಯೆಯ ೨.೮ ಕೋಟಿ ಅಕ್ಷರಸ್ಥರಲ್ಲಿ ೦.೩೫ ಕೋಟಿ ಮಾತ್ರ ಇಂಗ್ಲಿಷ್ ಬಲ್ಲವರು. ಪ್ರಪಂಚದ ಅನೇಕ ಭಾಗಗಳಲ್ಲಿ ಪ್ರಚಲಿತವಾಗಿರುವ ಭಾಷೆ ಇಂಗ್ಲಿಷ್ ನಾಗರಿಕತೆಯ ಪ್ರಚಾರಕ್ಕಿರುವ ಮುಖ್ಯವಾಹನ. ನಮ್ಮ ವಿದ್ಯಾವಂತರ ಮಾನಸಿಕ ಮತ್ತು ಆಧ್ಯಾತ್ಮಿಕ ವಿಚಾರಕ್ಕೆ ಇತರ ಭಾಷೆಗಳಿಗಿಂತ ಮುಖ್ಯವಾದುದಾಗಿ ಅವರ ಎರಡನೆಯ ಭಾಷೆಯಾಗಿದೆ. ಸಾಹಿತ್ಯವನ್ನೂ ವಿಜ್ಞಾನವನ್ನೂ ರಾಜಕೀಯ ಮತ್ತು ಆರ್ಥಿಕ ಹೋರಾಟವನ್ನೂ ಪೋಷಿಸಿದೆ. ದೇಶದ ಹಿತದೃಷ್ಟಿಯಿಂದಲೇ ಇಂಗ್ಲಿಷನ್ನು ಬಿಡಲಾಗದು. ಒಂದು ವೇಳೆ ಆಡಳಿತದ ಆವಶ್ಯಕತೆ ತಪ್ಪಿದರೂ ನಾಗರಿಕತೆಯ ದೃಷ್ಟಿಯಿಂದ ಇಂಗ್ಲಿಷು ಮಾತೃಭಾಷೆಯ ತರುವಾಯದ ಮುಖ್ಯ ಭಾಷೆಯಾಗಿರಬೇಕು. ಅನೇಕ ಭಾರತೀಯರು ಇಂಗ್ಲಿಷನ್ನು ಅಂತರಪ್ರಾಂತೀಯ ವ್ಯವಹಾರ ಭಾಷೆಯಾಗಿ ಅಂಗೀಕರಿಸುತ್ತಾರೆ. ಇದು ಅಸಾಧ್ಯ. ನೇಕಡ ಒಂದಕ್ಕೆ ಸ್ವಲ್ಪ ಮೀರಿದ ಜನ ಮಾತ್ರ ಇಂಗ್ಲಿಷ್ ಅಕ್ಷರಸ್ಥರು. ಪ್ರೌಢ ವಿದ್ಯಾಭ್ಯಾಸವನ್ನು ಅವಲಂಬಿಸದ ಜನಸಾಮಾನ್ಯಕ್ಕೆ ಇಂಗ್ಲಿಷ್ ಭಾಷೆಯ ಬಳಕೆ ಎಂದರೆ ಕಾಲ, ಶಕ್ತಿ, ಅರ್ಥಗಳ ದುರುಪಯೋಗ. ಅಂತರಪ್ರಾಂತೀಯ ವ್ಯವಹಾರಕ್ಕೆ ಹಿಂದಿಯೇ ಸುಲಭ. ಹೈಸ್ಕೂಲು ವಿದ್ಯಾನಂತರ ಇಂಗ್ಲಿಷು ಕಡ್ಡಾಯದ ಭಾಷೆಯಾಗಬೇಕು. ವಿಜ್ಞಾನಕ್ಕೂ ಯಂತ್ರಕರ್ಮ ವ್ಯಾಸಂಗ ಮತ್ತು ಪರಿಶೋಧನೆಗಳಿಗೂ ನೆರವಾಗುವ ಸ್ಥಾನ ಅದಕ್ಕೆ ದೊರೆಯಬೇಕು. ಸಾಮಾನ್ಯ ದರ್ಜೆಯ ಬಾಲಕ ಬಾಲಕಿಯರಿಗೆ ತಾಯ್ನುಡಿಯ ಮೂಲಕದ ವಿದ್ಯಾಭ್ಯಾಸವು (ಕಷ್ಟತರವಾದ ಪರಭಾಷೆಗಳಿಗಾಗಿ ಕಾಲಹರಣ ಮಾಡುವುದಕ್ಕಿಂತ ಹೆಚ್ಚಾಗಿ) ಅವರ ಅಂತಶ್ಶಕ್ತಿಗಳನ್ನು ಬೆಳೆಸಲು ಸಹಾಯವಾಗುವುದು.[1]

ಭಾರತದ ಐಕಮತ್ಯ ದೃಷ್ಟಿಯಿಂದ ಒಂದು ರಾಷ್ಟ್ರಭಾಷೆ ಇರುವುದು ಆವಶ್ಯಕ. ಅಂಥ ಭಾಷೆ ಸಂಸ್ಕೃತಿಯುಳ್ಳ ಭಾಷೆಯಾಗಿರಬೇಕಾಗಿಲ್ಲ. ನಮಗೆ ಇಂಗ್ಲಿಷಾಗಲಿ ಅದರ ಸುಲಭ ರೂಪಾಂತರವಾಗಲಿ ಸರಿಹೋಗದು. ಈಗಿರುವಂತೆ ಹಿಂದಿಗೆ ಮಾತ್ರ

[1] ಆಯಾ ಪ್ರಾಂತಭಾಷೆಗೆ ಈ ಸ್ಥಾನ ಬರಬೇಕೆನ್ನಿಸುತ್ತದೆ. ಇಲ್ಲವಾದರೆ ತೊಡಕುಗಳು ಹಲವು; ನಷ್ಟವೂ ಬಹಳ.— ಸಂ. ಪ್ರ. ಕ.

ಅಂಥ ರಾಷ್ಟ್ರಭಾಷೆಯಾಗಲು ಹೆಚ್ಚು ಯೋಗ್ಯತೆ ಇದೆ. ಇತರ ಯಾವ ಭಾಷೆಯೂ ದೇಶಭಾಷೆಯಾಗಲು ಶಕ್ಯವಿಲ್ಲ. ರಾಷ್ಟ್ರಭಾಷೆಯಾಗಲು ಉತ್ತಮ ಸಾಹಿತ್ಯ ಭಂಡಾರ ಒಂದಿದ್ದರೆ ಸಾಲದು; ಕಾರ್ಯನಿರ್ವಾಹಕರಿಗೆ ಅದು ಒಂದು ಶಕ್ತಿಯನ್ನೊದಗಿಸಬೇಕು. ವ್ಯಾಪಾರಕ್ಕೆ ಒದಗಬೇಕು. ಹಿಂದಿ ಈಗಾಗಲೇ ಐಕ್ಯತೆಯ ಒಂದು ಚಿಹ್ನೆಯಾಗಿದೆ. ವಾಸ್ತವವಾಗಿ ಜನತೆಯ ಭಾಷೆಯಾಗಿದೆ. ಇಂಗ್ಲಿಷ್ ಅರಿಯದ ಬಹುಮಂದಿ ಒಬ್ಬರಸ್ನೊಬ್ಬರು ಮಾತನಾಡಿಸುವುದು ಈ ಭಾಷೆಯಲ್ಲಿ. ಬೊಂಬಾಯಿ ಕಲ್ಕತ್ತೆಯಲ್ಲಿ ತಯಾರಾದ ಹಿಂದಿ ಚಲನಚಿತ್ರಗಳು ಇಂಡಿಯದ ಎಲ್ಲ ಭಾಗಗಳ ಪಟ್ಟಣಗಳಲ್ಲಿಯೂ ವಾರಗಟ್ಟಳೆ ನಡೆಯುವುವು. ಮರಾಠಿ, ಬಂಗಾಳಿ, ಸಿಂಧಿ, ಮೊದಲಾದ ಭಾಷೆಗಳನ್ನಾಡುವವರೂ, ಕನ್ನಡಿಗರೂ, ತಮಿಳರೂ ಕೂಡಿ ಅವುಗಳಿಂದ ವಿನೋದ ಪಡೆಯುವರು.

ಹಿಂದಿ ಅಥವಾ ಹಿಂದೂಸ್ಥಾನಿಯು ರಾಷ್ಟ್ರಭಾಷೆಯಾಗಲು ಇರುವ ದೊಡ್ಡ ಒಂದು ಕೊರತೆಯಿದು: ಪ್ರೌಢ ಹಿಂದಿ ಉರ್ದು ಎರಡೂ ಅಡಿಯಲ್ಲಿಯೂ ಶಬ್ದ ಸಂಪತ್ತಿನಲ್ಲಿಯೂ ಬೇರೆ ಬೇರೆ. ವ್ಯಾಕರಣಗಳು ತೊಡಕು. ಪರಸ್ಪರ ವಿರೋಧವಾದ ಎರಡು ಸಾಹಿತ್ಯ ಭಾಷೆಗಳಾಗಿ ಒಡೆದಿವೆ. ರಾಷ್ಟ್ರಭಾಷೆಯ ಈ ಸಮಸ್ಯೆಯಲ್ಲಿ ಲಿಪಿಯದು ಅಡಗಿದೆ. ಪಾರ್ಸಿ ಲಿಪಿಯನ್ನು ಬಳಸುವ ಉರ್ದು ಇಸ್ಲಾಮಿ ಭಾಷೆಯೆಂದು ಮಹಮ್ಮದೀಯರು ತಿಳಿಯುವರು; ನಾಗರಿ ಲಿಪಿಗೆ ಅವರು ಒಪ್ಪರು; ಹಿಂದುಗಳು ತಮ್ಮ ನಾಗರಿಲಿಪಿಯನ್ನು ಬಿಡಲಾರರು. ಐಕಮತ್ಯಕ್ಕೆ ಬರಲಾರದಷ್ಟು ಭೇದಗಳು ಈ ಭಾಷೆಗಳಲ್ಲಿವೆ. ಒಂದೇ ಸಾರ್ವತ್ರಿಕ ಭಾಷೆಗೆ ಒಂದೇ ಲಿಪಿಯಿರಬೇಕು. ಈ ಲಿಪಿಗಳ ತೊಡಕನ್ನು ದಾಟಲು ರೋಮಕ ಲಿಪಿಯನ್ನು ಆಚರಣೆಗೆ ತರಬಹುದು.

ಉರ್ದು ಅರಬ್ಬಿ ಲಿಪಿಯದು. ಅರಬ್ಬಿ ಲಿಪಿಯು ಚುಕ್ಕೆಗಳಿಂದಲೂ ಸಣ್ಣ ಗೆರೆಗಳಿಂದಲೂ ಕೂಡಿ ವೃತ್ತಾಕಾರವಾಗಿ ಶೀಘ್ರಲಿಪಿಯಂತೆ ಇರುವುದು. ಓದಿಗೆ ಕಷ್ಟ. ಹ್ರಸ್ವ ಸ್ವರಗಳ ಸಂಜ್ಞೆಗಳ ಮತ್ತು ಅವಶ್ಯವಾದ ಸ್ವರಗಳ ಅಭಾವ ಆ ಭಾಷೆಯ ಒಂದು ನ್ಯೂನತೆ. ಲಿಪಿಯೇನೋ ನೋಟಕ್ಕೆ ಸುಂದರವಾಗಿದ್ದರೂ ಭಾಷೆಯನ್ನು ಚೆನ್ನಾಗಿ ಕಲಿತವರಿಗಲ್ಲದೆ ಆ ಲಿಪಿಯ ಓದು ಸುಲಭವಲ್ಲ. ಈ ಲಿಪಿಯು ಇಂಡಿಯಕ್ಕೆ ಪರಕೀಯ; ಈ ಜನತೆ ಅದನ್ನು ಅಂಗೀಕರಿಸಲು ಉತ್ಸಾಹಗೊಳ್ಳದು. ಇಂಡಿಯದ ಭಾಷೆಗಳಲ್ಲೆಲ್ಲ ಹೆಚ್ಚು ಪ್ರಚಾರದಲ್ಲಿರುವುದು ದೇವನಾಗರಿ ಲಿಪಿ. ಅದು ಬಹು ಪ್ರಾಚೀನವಾದ್ದು. ಅದರಲ್ಲಿ ಎಲ್ಲ ವ್ಯಂಜನಗಳಿಗೂ ಸ್ವರಗಳಿಗೂ ಲಿಪಿಯಿದೆ. ಸ್ವರಗಳು ವ್ಯಂಜನಗಳ ಜೊತೆಯಲ್ಲಿಯೇ ಸೇರಿರಲು ಉಚ್ಚಾರವಾಗುವುದು. ಈ ಅಕ್ಷರಗಳನ್ನೆಲ್ಲ ಕಲಿಯುವುದು ಕಷ್ಟ. ಇದರಲ್ಲಿ ೫೦ ಅಕ್ಷರಗಳಿದ್ದು ಅಚ್ಚಿಗೆ,

ಕಡೆಯೆಣಿಕೆಯಲ್ಲಿ, ೪೫೦ ಬೇರೆ ಬೇರೆ ಸಂಜ್ಞೆಗಳು ಬೇಕಾಗುವುವು. ಅಕ್ಷರಗಳ ಆಕಾರವು ತೊಡಕಾಗಿರುವುದರಿಂದ ಜಾಗ್ರತೆ ಬರೆಯುವುದು ಸಾಧ್ಯವಿಲ್ಲ.

ಉರ್ದು ಮತ್ತು ನಾಗರಿ ಲಿಪಿಯು ಸಾರ್ವತ್ರಿಕ ಲಿಪಿಯಾಗಲು ಸೌಲಭ್ಯ ವಿಲ್ಲದ್ದರಿಂದ ಬೇರೆ ಲಿಪಿಯನ್ನು ಯೋಚಿಸಬೇಕಾಗಿದೆ. ಅಂಥ ಒಂದು ಲಿಪಿ ರೋಮಕ ಲಿಪಿ. ರೋಮಕ ಅಕ್ಷರಮಾಲೆಯ ತತ್ವವೂ ಆ ಲಿಪಿಯಲ್ಲಿನ ಸರಳತೆಯೂ ಆ ಲಿಪಿಯ ಅಂಗೀಕಾರಕ್ಕೆ ಸಹಕಾರಿ. ರೋಮಕಲಿಪಿಯಲ್ಲಿ ಅಕ್ಷರಗಳು ದುಂಡಲ್ಲ. ಸ್ವರಗಳಿಗೂ ವ್ಯಂಜನಗಳಿಗೂ ಸಮಸ್ಥಾನವುಂಟು. ಪ್ರಪಂಚದಲ್ಲಿ ಬಹಳ ಪ್ರಚಲಿತವಾಗಿದೆ. ಸುಸಂಸ್ಕೃತವಾದ ದೇಶಭಾಷೆಗಳಿಗೆ ರೋಮಕ ಲಿಪಿ ಸೇರಿದರೆ ಒಂದು ಪರಿಷ್ಕಾರ ವಾದ ವರ್ಣಮಾಲೆಯಾಗುವುದು. ಹೀಗೆ ದೇಶಭಾಷೆಗಳಿಗೆ ಹೊಂದಿಸಿಕೊಂಡ ರೋಮಕ ಲಿಪಿಯಿಂದ ಭಾಷಾಭಿಮಾನ ದೇಶಾಭಿಮಾನಗಳಿಗೆ ಆಘಾತವಾಗುವು ದೆಂದು ಸಂಕೋಚಪಡಬೇಕಾದ್ದಿಲ್ಲ. ಇಂಗ್ಲಿಷ್ ಅಳತೆಯ ನಿಯಮ, ಗಡಿಯಾರ, ಕ್ರಿಸ್ತಕಾಲಮಾನ ಮೊದಲಾದ ಸೌಲಭ್ಯಗಳನ್ನು ಅನುಸರಿಸಿದಂತೆಯೇ ಅದು. ದೇಶಭಾಷೆಗಳ ಲಿಪಿ ತತ್ವವೂ, ಅವುಗಳ ಶಾಸ್ತ್ರೀಯ ವ್ಯವಸ್ಥೆಯೂ, ಅವುಗಳಿಗಿರುವ ಸಂಜ್ಞೆಗಳೂ ಹಾಗೆಯೇ ಇವೆ. ಪ್ರಪಂಚದಲ್ಲೆಲ್ಲ ಪ್ರಚಲಿತವಾಗಿರುವ ಮತ್ತು ಸರಳವಾದ ರೂಪಗಳನ್ನು ಮಾತ್ರ ಉಪಯೋಗಿಸುತ್ತವೆ. ವಿದ್ಯಾಪ್ರಚಾರದಲ್ಲಿ, ಅಚ್ಚಿನಲ್ಲಿ, — ಈ ವಿಚಾರಗಳಲ್ಲಿಯೂ ಅದರ ಉಪಯೋಗವನ್ನು ಪರ್ಯಾಲೋಚಿಸ ಬೇಕು. ಈ ಲಿಪಿಯ ಅನುಸರಣೆ ಪ್ರಯೋಗಾರ್ಹವಾದುದು.

ಇಂಡಿಯದ ರಾಷ್ಟ್ರಭಾಷೆ ಸುಲಭಗೊಂಡ ಹಿಂದಿ ಅಥವಾ ಹಿಂದೂಸ್ತಾನಿ ಯಾಗಿದ್ದು ನಾಗರಿ ಅಕ್ಷರಗಳನ್ನೇ ಅನುಸರಿಸಿದ ರೋಮಕ ಲಿಪಿಯಾಗಿರಬೇಕು. ಮೂಲಹಿಂದಿಯಿಂದಾಗಲಿ ಇಂಗ್ಲಿಷಿಂದಾಗಲಿ ಎರವಲು ತೆಗೆಯಲು ಆಗದಾಗ ಸಂಸ್ಕೃತದಿಂದ ಪದಗಳನ್ನು ತೆಗೆದುಕೊಳ್ಳಬೇಕು. ರೋಮಕ ಭಾಷಾತತ್ವವನ್ನು ಅನುಸರಿಸುವುದು ಮುಖ್ಯ ಅಂಶ. ಈ ರೋಮಕ ತತ್ವದ ಹಿಂದಿಯು ಪಾಠಶಾಲೆ ಕಾಲೇಜುಗಳಲ್ಲಿ ಐಚ್ಛಿಕ ವಿಷಯವಾಗಿ ಏರ್ಪಡಬೇಕು; ಇದಕ್ಕೆ ಸರ್ಕಾರದ ಉತ್ತೇಜನ, ಪ್ರೋತ್ಸಾಹ ದೊರೆಯಬೇಕು.

ಇದನ್ನು ವಿದ್ಯಾಸಂಸ್ಥೆಗಳಲ್ಲಿ ನಿರ್ಬಂಧ ಭಾಷೆಯಾಗಿ ಏರ್ಪಡಿಸಬಾರದು. ಒಂದು ಹೊರೆಯಾಗಿ, ನ್ಯೂನತೆಯಾಗಿ ಪರಿಣಮಿಸೀತು; ಉತ್ಸಾಹವನ್ನು ದ್ವೇಷಕ್ಕೆ ತಿರುಗಿಸೀತು. ಈ ಹೊಸಭಾಷೆಯನ್ನು ಹಿಂದೂಸ್ತಾನಿ ಹೊರತಾದ ಭಾಗಗಳಲ್ಲಿ ರೂಢಿಗೆ ತಂದರೆ ಹಾಗೆಯೇ ಹಿಂದೂಸ್ತಾನಿ ಇರುವ ಭಾಗಗಳಲ್ಲಿ ಮತ್ತೊಂದು ಗ್ರಂಥಸ್ಥ ದೇಶಭಾಷೆಯನ್ನು ನಿರ್ಬಂಧವಾಗಿ ಏರ್ಪಡಿಸಬೇಕು.

ಸಂ — ಡಿ. ವಿ. ಶೇಷಗಿರಿರಾವ್.

## II ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು

# ರಜತಮಹೋತ್ಸವ

### ೧೯೪೪ನೆಯ ಜನವರಿ ೧೬ನೆಯ ಭಾನುವಾರ

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘವು ೧೯೧೮ನೆಯ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ೧೯೪೩ರ ಆಗಸ್ಟ್ ತಿಂಗಳಿಗೆ ಈ ಸಂಘಕ್ಕೆ ೨೫ ವರ್ಷ ತುಂಬುವುದರಿಂದ ಆ ಹೊತ್ತಿಗೇ ರಜತಮಹೋತ್ಸವವನ್ನು ನೆರವೇರಿಸಬೇಕೆಂದು ಹಿಂದಿನ ವರ್ಷದ ಸದಸ್ಯರು ಯೋಚಿಸುತ್ತಿದ್ದರು. ಆಗಿನ ಪರಿಸ್ಥಿತಿಯಲ್ಲಿ ಅದಕ್ಕೆ ಅವಕಾಶವಾಗಲಿಲ್ಲ. ಈಗ ತಕ್ಕಮಟ್ಟಿಗೆ ಶಾಂತಿ ನೆಲಸಿರುವುದರಿಂದ, ಈಗಿನ ಸದಸ್ಯರು ಉತ್ಸವಕಾರ್ಯವನ್ನು ಕೈಕೊಂಡು ನಡಸಬೇಕೆಂದು ಸಂಕಲ್ಪಿಸಿದರು. ೧೯೪೩ನೆಯ ಸೆಪ್ಟೆಂಬರ್ ತಿಂಗಳಲ್ಲಿ ಸಂಘದ ಹಿಂದಿನ ಕಾರ್ಯದರ್ಶಿಗಳು, ಮತ್ತು ಅಧಿಕಾರಿವರ್ಗದವರು ಅಭಿಮಾನಿಗಳ ಸಭೆ ಕರೆದರು. ಎಲ್ಲರೂ ಈ ಕಾರ್ಯಕ್ಕೆ ಉತ್ಸಾಹದಿಂದ ಒಪ್ಪಿಗೆ ಕೊಟ್ಟರು. ಅವರೆಲ್ಲರ ಸಹಾನುಭೂತಿ ಸಹಕಾರಗಳ ಫಲವಾಗಿ ಇಂದು ಉತ್ಸವ ಕಾರ್ಯರೂಪಕ್ಕೆ ಬಂದಿದೆ.

೧೯೧೮ರ ಸುಮಾರಿನಲ್ಲಿ ಕನ್ನಡದ ಸ್ಥಿತಿ ಈಗಿನಷ್ಟು ಹಿತವಾಗಿರಲಿಲ್ಲ. ಕನ್ನಡ ನಮ್ಮ ತಾಯ್ನುಡಿಯಾದರೂ ಅದರಲ್ಲಿ ಜನಕ್ಕೆ ತಕ್ಕಷ್ಟು ಶ್ರದ್ಧೆಯಿರಲಿಲ್ಲ. ಕಲಿತವರು ಕೂಡ ಕನ್ನಡವನ್ನು ಕಡೆಗಣಿಸಿ ಇಂಗ್ಲಿಷಿಗೆ ಮನಸೋಲುತ್ತಿದ್ದ ಕಾಲ ಅದು. ಅಂಥ ಕಾಲದಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳ ಮತ್ತು ಅವರೊಡನೆ ಏಕಜೀವವಾಗಿ ವರ್ತಿಸುತ್ತಿದ್ದ ದಿವಂಗತ ಪ್ರೊ. ಟಿ. ಎಸ್. ವೆಂಕಣ್ಣಯ್ಯನವರ ಸಂತತ ಪ್ರಯತ್ನ, ಕನ್ನಡಕ್ಕಾಗಿ ಹಗಲಿರುಳೂ ದುಡಿದು ಮುಪ್ಪಾಗಿ ಕೆಲವು ತಿಂಗಳ ಹಿಂದೆ ಸ್ವರ್ಗಸ್ಥರಾದ ರಾಜಸೇವಾಸಕ್ತ ಶ್ರೀಮಾನ್ ಬೆಳ್ಳಾವೆ ವೆಂಕಟನಾರಾಯಣಪ್ಪನವರ ಪ್ರೋತ್ಸಾಹ ಮತ್ತು ಆಗಿನ ವಿದ್ಯಾರ್ಥಿಗಳ ಉತ್ಸಾಹ—ಇವುಗಳ ಫಲವಾಗಿ ಸೆಂಟ್ರಲ್ ಕಾಲೇಜಿನಲ್ಲಿ ಕರ್ಣಾಟಕ ಸಂಘ ಹೊಸದಾಗಿ ಜನ್ಮ ತಾಳಿತು. "ಕನ್ನಡ ದೇಶದ ಚರಿತ್ರೆ, ಭಾಷೆ, ಸಾಹಿತ್ಯ ಇವುಗಳನ್ನು ವ್ಯಾಸಂಗಮಾಡುವುದೇ" ಈ ಸಂಘಸ್ಥಾಪನೆಯ ಮುಖ್ಯೋದ್ದೇಶ. ೧೯೧೮ನೆಯ ಡಿಸೆಂಬರ್ ೯ನೆಯ ತಾರೀಖಿನ ದಿನ "ಕನ್ನಡ ಮಾತೇ ಮೂರ್ತೀಭವಿಸಿ ಬಂದಂತೆ ಪ್ರಾಕ್ತನವಿಮರ್ಶ ವಿಚಕ್ಷಣ ರಾವ್ ಬಹದ್ದೂರ್ ಶ್ರೀಮಾನ್ ಆರ್. ನರಸಿಂಹಾಚಾರ್ಯರವರು ದಯಮಾಡಿಸಿ ಸಮಾರಂಭ ಭಾಷಣ ಮಾಡಿದರು. ಅವರ ಆಶೀರ್ವಾದಮಹಿಮೆ ಎಂತಹುದೊ! ಇದಾದ ಸ್ವಲ್ಪ ದಿನದಲ್ಲಿಯೆ

ಸಿ. ಕೆ. ವೆಂಕಟರಾಮಯ್ಯ, ಎಸ್. ವಿ. ರಂಗಣ್ಣ ಎಂಬಿಬ್ಬರು ಬಿ.ಎ. ಕ್ಲಾಸಿನ ವಿದ್ಯಾರ್ಥಿಗಳು 'ಕನ್ನಡಿಗರ ಕರ್ತವ್ಯ', 'ಕನ್ನಡ ಸಾಹಿತ್ಯದ ಗುಣದೋಷಗಳು' ಎಂಬ ಎರಡು ಶ್ಲಾಘ್ಯವಾದ ಉಪನ್ಯಾಸಗಳನ್ನು ಬರೆದು ಓದಿದರು. ಇವುಗಳಲ್ಲಿ ಪ್ರಕಾಶಿತ ವಾದ ಉತ್ಸಾಹ, ಭಾಷಾಭಿಮಾನ, ಪಾಂಡಿತ್ಯ, ರಸಿಕತೆ, ಮನೋಹರವಾದ ಶೈಲಿ ಮುಂತಾದುವನ್ನು ಅನುಭವಕ್ಕೆ ತಂದುಕೊಂಡು, 'ಕರ್ಣಾಟಕ ಸಂಘ'ದ ಸಭಿಕರು ಇವನ್ನು ಅಚ್ಚುಹಾಕಿಸಬೇಕೆಂದು ನಿರ್ಧರಿಸಿದರು." ಆ ಮೇಲೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅವೆರಡು ಮಾತ್ರವೇ ಅಲ್ಲದೆ ಅಂಥ ಹಲವು ಉಪನ್ಯಾಸಗಳ ಪ್ರಯೋಜನ ದೊರೆಯುವಂತಾಗಲೆಂದು 'ಪ್ರಬುದ್ಧ ಕರ್ಣಾಟಕ' ಎಂಬ ಪತ್ರಿಕೆ ಯೊಂದನ್ನು ಸಂಘ ನಡಸಲು ಪ್ರಾರಂಭಿಸಿತು. ಪತ್ರಿಕೆಯ ಮೂಲಕ ಸಂಘದ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾದಷ್ಟು ಶ್ರಮಿಸ ತೊಡಗಿತು.

ಸಂಘದ ಚಟುವಟಿಕೆಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು. ಮೊದಲನೆ ಯದು, ವಿದ್ಯಾರ್ಥಿಗಳಲ್ಲಿ ಉತ್ಸಾಹ ಹುಟ್ಟಿಸಿ, ಕುತೂಹಲವನ್ನು ಕೆರಳಿಸಿ ಅವರ ಸಂಘಟನ ಶಕ್ತಿಯನ್ನೂ ಜ್ಞಾನವನ್ನೂ ಹೆಚ್ಚಿಸುವುದಕ್ಕಾಗಿ ವಿದ್ಯಾರ್ಥಿಗಳಿಗೆ ಮಾತ್ರ ಸಂಬಂಧಿಸಿದಂತೆ ಆಗಾಗ ನಡಸುತ್ತಿದ್ದ ಬಗೆಬಗೆಯ ಸ್ಪರ್ಧೆ, ಚರ್ಚಾಕೂಟ ಮತ್ತು ಅಭ್ಯಾಸಗೋಷ್ಠಿಗಳು. ಎರಡನೆಯದು, ವಿದ್ಯಾರ್ಥಿಗಳ ಪ್ರಯೋಜನವನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡಿದ್ದರೂ ಎಲ್ಲ ಮಹಾಜನರಿಗೂ ಉಪಯೋಗ ವಾಗುವಂತೆ ನಡಸುತ್ತಿದ್ದ ಉಪನ್ಯಾಸ, ಸಭೆ, ಉತ್ಸವ ಮುಂತಾದ ಕೆಲಸಗಳು. ಮೂರನೆಯದು ಗ್ರಂಥಪ್ರಕಟನೆ. ಈ ಮೂರು ರೀತಿಯಲ್ಲಿಯೂ ಸಂಘದಲ್ಲಿ ಇದು ವರೆಗೆ ಆಗಿರುವ ಕಾರ್ಯ ಅಲ್ಪವೇನಲ್ಲ. ವಿದ್ಯಾರ್ಥಿಗಳಿಗೂ ಬೆಂಗಳೂರಿನ ನಾಗರಿ ಕರಿಗೂ ಕನ್ನಡನಾಡಿನ ಜನರಿಗೂ ಸಂಘ ತನ್ನ ಕೈಲಾದ ಮಟ್ಟಿಗೂ ಸೇವೆ ಸಲ್ಲಿಸಿದೆ.

ಸಂಘದ ಪತ್ರಿಕೆಯಾದ 'ಪ್ರಬುದ್ಧ ಕರ್ಣಾಟಕದ ಮೊದಲನೆಯ ಸಂಚಿಕೆ ಯಿಂದ ಮೇಲೆ ಉದ್ಧರಿಸಿರುವ ಭಾಗಗಳಿಂದ ಸಂಘ ತಾನು ಅನುಸರಿಸುವುದಕ್ಕೆ ಹಾಕಿಕೊಂಡಿರುವ ಮಾರ್ಗವು ಸ್ಪಷ್ಟವಾಗುತ್ತದೆ. ಆ ದಾರಿಯಲ್ಲಿ ಎಷ್ಟರಮಟ್ಟಿಗೆ ನಡೆದಿದೆ, ಎಷ್ಟುಮಟ್ಟಿಗೆ ತನ್ನ ಗುರಿಯನ್ನು ಮುಟ್ಟಿದೆ ಎಂಬುದನ್ನು ಈ ೨೫ ವರ್ಷ ಗಳಲ್ಲಿ ಸಂಘ ನಡಸಿರುವ ಕಾರ್ಯಕಲಾಪಗಳಿಂದ ನಾವು ನೋಡಬೇಕಾಗಿದೆ.

(ಕಾರ್ಯದರ್ಶಿಗಳ ವರದಿಯಿಂದ)

* * *

## III ಕನ್ನಡ ಜನತೆಗೋಸ್ಕರ ಕನ್ನಡ[1]

ಈ ಹೊತ್ತು ನಮಗೆಲ್ಲ ಬಹು ಸಂತೋಷದ ದಿವಸ; ಹೇಗೆ ಸಂತೋಷದ ದಿವಸವೋ ಹಾಗೆಯೇ ಕೃತಜ್ಞತೆಯ ದಿವಸ; ಹೇಗೆ ಕೃತಜ್ಞತೆಯ ದಿವಸವೋ ಹಾಗೆಯೇ ಪ್ರತಿಜ್ಞೆಯ ದಿವಸ. ನಮ್ಮ ಸಂಘದ ಇಪ್ಪತ್ತೈದು ವರ್ಷಗಳ ಅಭಿವೃದ್ಧಿಗಾಗಿ ಸಂತೋಷ; ಅದಕ್ಕೆ ಕಾರಣಕರ್ತರೂ ಉಪಕಾರಿಗಳೂ ಆದವರಿಗೆ ಧನ್ಯವಾದ ಸಮರ್ಪಣೆ; ಅದರ ಉದ್ದೇಶಗಳೂ ಸಂಕಲ್ಪಗಳೂ ಮುಂದೆ ಇನ್ನೂ ಚೆನ್ನಾಗಿ ನೆರವೇರಲೆಂದು ದೃಢ ಪ್ರತಿಜ್ಞೆ — ಈ ತೆರನಾದವು ಈ ಹೊತ್ತು ನಮ್ಮೆಲ್ಲರ ಮನಸ್ಸುಗಳಲ್ಲಿ ತುಂಬಿರುವ ಭಾವನೆಗಳು. . . .

### ಯುವಜನ ಪ್ರಯತ್ನ

ಕರ್ಣಾಟಕದ ಪುನರುಜ್ಜೀವನ ಸಂರಂಭ ಬಹು ವಿಸ್ತಾರವಾದದ್ದು; ಬಹು ಮಹತ್ತ್ವದ್ದು, ಅದಕ್ಕೆ ಪ್ರೌಢಪರಿಣತ ಜನರ ಶ್ರದ್ಧೆಯ ಪ್ರಯತ್ನ ಅವಶ್ಯವಾದಂತೆಯೇ ತರುಣ ಜನರ ಉತ್ಸಾಹದ ಸಹಕಾರವೂ ಅವಶ್ಯವೆಂಬುದನ್ನು ಕಂಡುಕೊಂಡವರು ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳು, ಮತ್ತು ಅವರ ಸ್ನೇಹಿತರು ಕೆಲವರು. ಈ ಹೊತ್ತು ನಾಂದೀ ಪೀಠದಲ್ಲಿ ಕುಳಿತು ನಮ್ಮಿಂದ ಅಭಿನಂದನೆಗಳನ್ನು ಪಡೆಯಬೇಕಾದವರು ಕೃಷ್ಣಶಾಸ್ತ್ರಿಗಳು. ಅವರು ಈ ಸಭೆಗೆ ಬರಲು ಅನುಕೂಲಿಸದೆ ಹೋದದ್ದರ ವ್ಯಾಕುಲ ನಮ್ಮೆಲ್ಲರ ಮನಸ್ಸುಗಳಲ್ಲಿ ಆಳವಾಗಿ ತುಂಬಿಕೊಂಡಿದೆ. ಅವರು ನೆಟ್ಟ ಸಸಿ ಈಗ ಬೆಳೆದು, ಹೆಮ್ಮರವಾಗಿ ಹರಡಿ, ಕೊಂಬೆ ಬಿಳಲುಗಳನ್ನು ಹಬ್ಬಿಸಿದೆ. ಅದರ ಬಿತ್ತದಿಂದ ಹತ್ತಾರು ಬೇರೆ ಸಸಿಗಳು ಮೊಳೆತು ಬೆಳೆಯುತ್ತಿವೆ. ಇದನ್ನು ನೋಡುವ ಅವರ ಸಂತೋಷ ಅತಿಶಯವಾದ ಸಂತೋಷ, ಕೃತಾರ್ಥತೆಯ ಸಂತೋಷ. . . .

### ಕೆಲವು ನೆನಪುಗಳು

ಕೃಷ್ಣಶಾಸ್ತ್ರಿಗಳು ಈ ಸಂಘದ ಸ್ಥಾಪನೆಗೂ ಇದರ ಚರಮೂರ್ತಿಯಾದ 'ಪ್ರಬುದ್ಧ ಕರ್ಣಾಟಕ'ದ ಪ್ರಕಟನೆಗೂ ಕೈಹಚ್ಚಿದಾಗ ಅವರಿಗೆ ದೊರೆತ ಪ್ರೋತ್ಸಾಹ ಯಥೇಷ್ಟವಾಗೇನೂ ಇರಲಿಲ್ಲ. . . . ಆದರೆ ಕೃಷ್ಣಶಾಸ್ತ್ರಿಗಳು ತಮ್ಮ ವಿದ್ಯಾರ್ಥಿಗಳ ಮಹಿಮೆಯನ್ನು ನಮಗಿಂತ ಚೆನ್ನಾಗಿ ಕಂಡುಕೊಂಡಿದ್ದರು. ನಾಲ್ಕಾರು ಮಂದಿ ಆಗಿನ ವಿದ್ಯಾರ್ಥಿಗಳು ಮಾಡಿದ ಕೆಲಸವನ್ನು ನಾನು ಕಣ್ಣಾರ ನೋಡಿದ್ದೇನೆ.

[1] ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ರಜತೋತ್ಸವ ಸಭೆಯಲ್ಲಿ ಶ್ರೀಮಾನ್ ಡಿ. ವಿ. ಗುಂಡಪ್ಪನವರು ಮಾಡಿದ ಅಧ್ಯಕ್ಷಭಾಷಣದ ಭಾಗಗಳು.

ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಪ್ರಬುದ್ಧ ಕರ್ಣಾಟಕದ ಮೊದ ಮೊದಲನೆಯ ಸಂಚಿಕೆಗಳಲ್ಲಿ ಬರೆದಿದ್ದುದು ನನಗೆ ಜ್ಞಾಪಕವಿದೆ. ಶ್ರೀ ಎಸ್. ವಿ. ರಂಗಣ್ಣನವರ ಆಗಿನ ಪ್ರಬಂಧಗಳನ್ನು ನಾನು ಮರೆತಿಲ್ಲ. ಈಗ ಸಿಕಂದರಾಬಾದಿನಲ್ಲಿರುವ ಶ್ರೀ ಸಿ. ಎನ್. ರಂಗಾಚಾರ್ಯರವರು ಶ್ರೀಮಾನ್ ಸರ್ ಎಂ. ವಿಶ್ವೇಶ್ವರಯ್ಯನವರ ವರ್ಷ ವರ್ಧಂತಿಗಾಗಿ ಜನೋಪಕಾರಿ ದೊಡ್ಡಣ್ಣಶೆಟ್ಟರವರ ಸಭಾಭವನದಲ್ಲಿ ಉತ್ಸವ ಸಭೆ ಸೇರಿಸಿದ್ದದ್ದೂ, ಆ ಪ್ರಚಂಡ ಸಭೆಯಲ್ಲಿ ದಿವಂಗತ ಕೆ. ಎಚ್. ರಾಮಯ್ಯನವರು ಭಾಷಣ ಮಾಡುತ್ತ, ಶ್ರೀ ವಿಶ್ವೇಶ್ವರಯ್ಯನವರನ್ನು "ಫಿಲಡೆಲ್ಫಿಯ" ರೆಯಿಲ್ವೇ ಎಂಜಿನ್ ಯಂತ್ರಕ್ಕೂ ಮೈಸೂರು ಜನವನ್ನು ಎಮ್ಮೆ ಕೋಣದ ಒಡ್ಡ ಬಂಡಿಗೂ ಹೋಲಿಸಿದ್ದೂ, ಆ ಎಂಜಿನ್ ವೇಗ ಆ ಹಳೆಯ ಬಂಡಿಗೆ ತಗುಲಿದಾಗ ಆದ ಡಕ್ಕಾ ಮುಕ್ಕಿಯನ್ನು ಅನುಕರಣದೊಡನೆ ವರ್ಣಿಸಿದ್ದೂ, ಆಗ ನಾವೆಲ್ಲ ಹೊಟ್ಟೆ ಬಿರಿಯ ನಕ್ಕದ್ದೂ ನನಗೆ ಚೆನ್ನಾಗಿ ಜ್ಞಾಪಕವಿದೆ. ಶ್ರೀ ನಿಟ್ಟೂರು ಶ್ರೀನಿವಾಸರಾಯರು ಪ್ರಬುದ್ಧ ಕರ್ಣಾಟಕದ ಕಟ್ಟುಗಳನ್ನು ಬೈಸಿಕಲ್ಲಿಗೆ ಕಟ್ಟಿಕೊಂಡು ಭೂಮ್ಯಾಕಾಶ ಗಳಲ್ಲೆಲ್ಲ ಸುತ್ತಿ ಸುತ್ತಿ ಚಂದಾ ವಸೂಲು ಮಾಡಿ ತಂದದ್ದೂ ಜ್ಞಾಪಕವಿದೆ. ಶ್ರೀ ಡಿ. ಗುರುರಾಯರ ಭಾರತ ವಾಚನದ ಕುತೂಹಲವೂ ಜ್ಞಾಪಕದಲ್ಲಿದೆ. ಶ್ರೀ ಎಸ್. ಡಿ. ಗಣೇಶರಾಯರು, ಶ್ರೀ ಭೂಪಾಲಂ ಚಂದ್ರಶೇಖರಯ್ಯನವರು, ಡಾಕ್ಟರ್ ಪಿ. ಕೃಷ್ಣ ರಾಯರು, ಶ್ರೀ ಟಿ. ಗೋವಿಂದರಾಯರು, ಶ್ರೀ ಎಂ. ನರಸಿಂಹಮೂರ್ತಿಗಳವರು — ಇನ್ನೂ ಅನೇಕ ಮಂದಿ ಕಾರ್ಯದರ್ಶಿಗಳೂ ಕಾರ್ಯಕರ್ತರೂ ಮಾಡಿದ ಸೇವೆ ಸಾಹಸಗಳು ನನ್ನ ನೆನಪಿನಲ್ಲಿವೆ. . . .

## ಶ್ರೀ ವೆಂಕಟನಾರಣಪ್ಪನವರು

ಸಂಘದ ಮೂಲಪುರುಷರಲ್ಲಿ ಇಬ್ಬರನ್ನು ಪ್ರತ್ಯೇಕ ಸ್ಮರಣೆಗಾಗಿ ಉಳಿಸಿಕೊಂಡಿದ್ದೇನೆ. ಒಬ್ಬರು ಅಧ್ಯಕ್ಷರಾಗಿದ್ದ ಪವಿತ್ರ ಚರಿತ್ರರಾದ ಶ್ರೀಮಾನ್ ಬೆಳ್ಳಾವೆಯ ವೆಂಕಟನಾರಣಪ್ಪನವರು, ಇನ್ನೊಬ್ಬರು ಉಪಾಧ್ಯಕ್ಷರಾಗಿದ್ದ ಸರ್ವಪ್ರಿಯರಾದ ಟಿ. ಎಸ್. ವೆಂಕಣ್ಣಯ್ಯನವರು.

ವೆಂಕಟನಾರಣಪ್ಪನವರು ಪ್ರಾರಂಭದಿಂದ ಸುಮಾರು ೧೨–೧೩ ವರ್ಷ ಅಧ್ಯಕ್ಷರಾಗಿದ್ದವರು. ತಾವು ಸೇರಿದ್ದ ಯಾವ ಸಂಸ್ಥೆಯಲ್ಲಿಯೂ ಅವರು ನಿದ್ರಾ ಮುದ್ರಿತ ಸದಸ್ಯರಾಗಿದ್ದವರಲ್ಲ. ಎಲ್ಲಿದ್ದರೂ ಅವರು ಒಂದು ವಿದ್ಯುತ್ತಿನ ಪಂಜು. ಎಲ್ಲ ಕಾರ್ಯಭಾಗಗಳ ಮೇಲೂ ಅವರ ಕಣ್ಣು; ಎಲ್ಲ ಆಡಳಿತಗಳಲ್ಲಿಯೂ ಅವರ ಕೈವಾಡ. ಯಾವುದರಲ್ಲಿಯಾದರೂ ಸ್ವಲ್ಪ ಚ-ಚು ತಪ್ಪಿತೆಂದರೆ ಶಪಥ; ಸ್ವಲ್ಪ ಪ್ರಮಾದವಾಯಿತೆಂದರೆ ಆತ್ಮಪ್ರಾಯಶ್ಚಿತ್ತ. ಈಗಣ ಕಾಲದ "ಹೇಗೆಂದರೆ ಹಾಗೆ"

ಎನ್ನುವ ನಡವಳಿಕೆಗಳನ್ನು ನೋಡಿದರೆ ಸಮಗೆ ಸಂಬಲಾಗದ್ದೆನ್ನಿಸುವಷ್ಟು ಮಟ್ಟಿನ ಸೂತ್ರನಿಷ್ಠೆ ವೆಂಕಟನಾರಣಪ್ಪನವರದು. ಕೃಷ್ಣಶಾಸ್ತ್ರಿಗಳವರ ಸ್ವಭಾವವೂ ಆ ವಿಚಾರದಲ್ಲಿ ಅದೇ ವೀರ ಪಂಥದ್ದೇ. ಅವರಿಬ್ಬರೂ ಒಟ್ಟುಗೂಡಿದ ಮೇಲೆ ಸಂಘದ ಕಾರ್ಯ ರೀತಿಯಲ್ಲಿ ಕ್ರಮ ವಿಚಕ್ಷಣೆಗಳು ಎದ್ದು ಕಾಣುತ್ತಿದ್ದುದು ನಿರೀಕ್ಷಿತ ವಾಗಿಯೇ ಇತ್ತು. . . . ಅದು ಹೇಗಾದರಿರಲಿ. ಅಂಥವರ ಎದುರಿನಲ್ಲಿ ಕುಳಿತರೆ ತೂಕಡಿಕೆಗೆ ಮಾತ್ರ ಅವಕಾಶ ದೊರೆಯದು. ಸಂಘದ ಒಂದೆರಡು ಪ್ರಕಟನೆಗಳನ್ನು ಅಚ್ಚುಮಾಡಿಸುವ ಕಾಲದಲ್ಲಿ — ಪುಸ್ತಕದ ಆಕಾರ, ಅಕ್ಷರದ ಮಾಟ, ಕಾಗದದ ನುಣುಪು, ರಟ್ಟಿನ ಅಂದ, ಚಿತ್ರಗಳ ಸೊಗಸು, ಕರಡು ಪ್ರತಿಗಳ ಶೋಧನೆ — ಈ ನಾನಾ ಸಣ್ಣ ಸಣ್ಣ ವಿವರಗಳಿಗೆ ಅವರು ಸಲ್ಲಿಸುತ್ತಿದ್ದ ಪೂರ್ವಾಲೋಚನೆ, ಜಾಗರೂಕತೆ, ಮುಹೂರ್ತ ನೇಮ — ಇವು ಯಜ್ಞಶಾಲೆಯ ನಿಯಮ ಕಲಾಪವನ್ನು ಜ್ಞಾಪಕಕ್ಕೆ ತರುತ್ತಿದ್ದವು. ಇಷ್ಟೆಲ್ಲ ಅವರು ಈ ಸಂಘಕ್ಕಾಗಿ ಶ್ರಮಪಡುತ್ತಿದ್ದರೂ ಯಾರಾದರೂ ಅವರ ಅಧ್ಯಕ್ಷ ದಕ್ಷತೆಯನ್ನು ಪ್ರಶಂಸೆ ಮಾಡಿದರೆಂದರೆ, ಅವರು ಕೊಡುತ್ತಿದ್ದ ಜವಾಬೇನು? "ಗುಡಿಯ ಗೋಪುರವನ್ನು ನೋಡಿದ್ದೀರೋ? ಗೋಪುರದ ತಳದಲ್ಲಿ ಶಿಲ್ಪಿ ಗುಜ್ಜು ಭೇತಾಳಗಳ ಸಾಲನ್ನು ಇಟ್ಟಿರುತ್ತಾನೆ. ಗೋಪುರದ ಭಾರವನ್ನೆಲ್ಲ ಆ ಭೇತಾಳ ಬೊಂಬೆಗಳೇ ಹೆಗಲ ಮೇಲೆ ಹೊತ್ತಿರುವಂತೆ ಅವುಗಳ ಮೈಬಾಗು ಕೈಸನ್ನೆಗಳಿಂದ ತೋರುತ್ತದೆ. ನಾನು ಅಂಥ ಗುಜ್ಜು ಗೊಂಬೆ. ಗೋಪುರದ ನಿಜವಾದ ಆಧಾರ ಕೃಷ್ಣಶಾಸ್ತ್ರಿಗಳು, ವೆಂಕಣ್ಣಯ್ಯನವರು." ಹೀಗೆ ಹೇಳುತ್ತಿದ್ದ ನಮ್ರತಾರೂಪದ ದೊಡ್ಡತನ ವೆಂಕಟನಾರಣಪ್ಪನವರದು. ಅಂಥವರ ಸ್ನೇಹಾನುಗ್ರಹದ ಮಹಿಮೆ ಹಾಗಿರಲಿ, ಅವರೊಡನೆ ಆಡಿದ ಜಗಳವೂ ಸಹ ಒಂದು ವಿದ್ಯಾಭ್ಯಾಸ. ಅವರ ಸಹವಾಸವೇ ಪ್ರಾಮಾಣಿಕತೆಯಲ್ಲಿ ಒಂದು ಪಾಠ. ಅವರ ವಿಶ್ವಾಸ ಒಂದು ಭಾಗ್ಯ; ಅವರ ಆಕ್ಷೇಪಣೆಯೂ ಆಶೀರ್ವಾದವೇ. ಅವರ ಈ ಭಾವಚಿತ್ರ ಸಾಂಘಿಕರ ತಲೆಮೊರೆ ತಲೆಮೊರೆಗೂ ಮನಃಪ್ರಸಾದಕರವಾಗಿ, ಕರ್ತವ್ಯನಿಷ್ಠಾ ಪ್ರೇರೇಪಕವಾಗಿ, ಪುಣ್ಯಸ್ಮೃತಿ ಸಾಧನವಾಗಲಿ.

## ಶ್ರೀ ವೆಂಕಣ್ಣಯ್ಯನವರು

ವೆಂಕಣ್ಣಯ್ಯನವರ ಹೆಸರು ಹೇಳುವಾಗ ಕಣ್ಣು ಒದ್ದೆಯಾಗದೆ ಇರುವುದು ನನಗೆ ಇನ್ನೂ ಅಸಾಧ್ಯವಾಗಿದೆ. ನನ್ನ ಜೀವನದ ಒಂದು ಭಾಗಕ್ಕೆ ಆತನ ಪ್ರಭಾವ ಸೂರ್ಯರಶ್ಮಿಯಂತೆ ಇತ್ತು. ಆತ ಸದ್ದು ಗದ್ದಲದ ಮನುಷ್ಯನಲ್ಲ. ಆತನಲ್ಲಿ ಎಲ್ಲ ಸೌಮ್ಯ, ಎಲ್ಲ ಸೌಜನ್ಯ, ಎಲ್ಲ ಸೌಕುಮಾರ್ಯ. ಆತ ಯಾವ ಗೋಷ್ಠಿಗೆ ಬಂದರೂ "ಋತುಗಳ ರಾಜ" ಬಂದ ಹಾಗೆ:

ಶಾಂತಾ ಮಹಾನ್ತೋ ನಿವಸನ್ತಿ ಸನ್ತಃ
ವಸಂತವಲ್ಲೋಕಹಿತಂ ಚರನ್ತಃ

ಮರ ಈಹೊತ್ತೆಲ್ಲ ಒಣಗಿ ಸೌದೆಯಾದಂತೆ ತೋರುತ್ತದೆ; ನಾಳೆ ನೋಡಿದರೆ ಅದರಲ್ಲಿ ಚಿಗುರು ಒಡೆದಿರುತ್ತದೆ. ಬಳ್ಳಿ ಈ ಸಂಜೆ ಕಸದ ಕಡ್ಡಿಯಂತೆ ಕಾಣಿಸುತ್ತದೆ. ಬೆಳಗಾಗ ಅದರಲ್ಲಿ ಮೊಗ್ಗು ಕುಚ್ಚುಕುಚ್ಚಾಗಿ ಹೊಮ್ಮಿರುತ್ತದೆ. ರಾತ್ರಿಯ ಮೌನದಲ್ಲಿ ನಡೆದಿರುತ್ತದೆ ಈ ನೂತನ ಸೃಷ್ಟಿ! ಅದು ವಸಂತ ಮಾಯಿಗನ ಕೈಮಾಟ. ವೆಂಕಣ್ಣಯ್ಯ ಇದ್ದ ಕಡೆ ಹಾಗೆ: ಮೂಕನೂ ಮಾತನಾಡುತ್ತಾನೆ, ಮಂಕನೂ ಗೆಲವಾಗುತ್ತಾನೆ. ವೆಂಕಣ್ಣಯ್ಯನ ಸ್ನೇಹದ ಕಣ್ಣು, ಅರ್ಥ ತುಂಬಿದ ನಗು, ಮರ್ಯಾದೆಯ ಸವುರಿನ ಅಂಗಭಾವ, ಆರಿಸಿದ ತೂಗಿಸಿದ ಆಳದ ಮಾತು — ಇವಿಷ್ಟೇ ಬಹು ಜನದಿಂದ ಬಹು ಸುಕೃತಗಳನ್ನು ಮಾಡಿಸಿವೆ. ಆತನಿಗೆ ಕರ್ಣಾಟಕ ಸಂಘದ ಮತ್ತು ಪ್ರಬುದ್ಧ ಕರ್ಣಾಟಕದ ಋಣ ಎಷ್ಟುಮಟ್ಟಿನದೆಂಬುದು ಎಣಿಕೆಗೆ ಸಿಕ್ಕಲಾರದ ಲೆಕ್ಕ.

ಪ್ರಬುದ್ಧ ಕರ್ಣಾಟಕದ ಪ್ರಸ್ತಾವದಲ್ಲಿ ಶ್ರೀಮಾನ್ ಎನ್. ಎಸ್. ಸುಬ್ಬರಾಯರವರನ್ನು ಸ್ಮರಿಸದಿದ್ದರೆ ಕೃತಜ್ಞತಾಲೋಪವೇ ಸರಿ. . . . ಪತ್ರಿಕೆ ವಿಶ್ವವಿದ್ಯಾನಿಲಯದ್ದಾದ ಮೇಲೆ, ಶ್ರೀಮಾನ್ ಸುಬ್ಬರಾಯರು ವೈಸ್ ಚಾನ್ಸಲರಾಗಿ ಅದರ ವಿಷಯದಲ್ಲಿ ತೋರಿದ ಆದರೌದಾರ್ಯಗಳು ಪ್ರಶಂಸನೀಯವಾಗಿವೆ. ಪ್ರಬುದ್ಧ ಕರ್ಣಾಟಕದ ಸಂಪಾದಕ ಪರಂಪರೆಯ ಮತ್ತು ಅವರ ಸಹೋದ್ಯೋಗಿಗಳ ವಿಚಕ್ಷಣೆಯ ಜೊತೆಗೆ ವಿಶ್ವವಿದ್ಯಾಲಯದ ಸಹಾಯವೂ ಅನುಗೂಡಿದ್ದರಿಂದ, ಪತ್ರಿಕೆ ಪರಿಪುಷ್ಟವಾಗಿ ಬೆಳೆದು, ರೂಪ ಸೌಷ್ಠವದಿಂದಲೂ, ಪ್ರಬಂಧ ವೈವಿಧ್ಯದಿಂದಲೂ, ವಿಷಯ ಸ್ವಾರಸ್ಯದಿಂದಲೂ ಸರ್ವ ಮೋಹಕವಾಗಿ, ಕರ್ಣಾಟಕಕ್ಕೂ ವಿಶ್ವವಿದ್ಯಾನಿಲಯಕ್ಕೂ ಸಹ ಕೀರ್ತಿಕಾರಕವಾಗಿದೆ.

## ಕಾರ್ಯದೀಕ್ಷಾಯುಗ

ಅಭಿನಂದನ ರೂಪವಾಗಿಯೂ ಉಪಕಾರಸ್ಮೃತಿ ಸೂಚನೆಗಾಗಿಯೂ ಇಷ್ಟು ಹೇಳಿ, ನಮ್ಮ ಸದ್ಯದ ಕರ್ತವ್ಯವನ್ನು ಕುರಿತು ಒಂದೆರಡು ಮಾತನ್ನು ವಿಜ್ಞಾಪಿಸಲು ಅನುಮತಿ ಬೇಡುತ್ತೇನೆ.

ಕಳೆದ ೨೫—೩೦ ವರ್ಷಗಳಲ್ಲಿ ಕನ್ನಡಕ್ಕಾಗಿ ಆಗಿರುವ ಕೆಲಸವನ್ನು ಒಂದೇ ಮಾತಿನಲ್ಲಿ ವರ್ಣಿಸಬೇಕೆಂದರೆ, ಅದನ್ನು ಉತ್ಸಾಹದ ಯುಗವೆಂದು ಕರೆಯಬಹುದಾಗಿ ನನಗೆ ತೋರುತ್ತದೆ. ಕನ್ನಡ ಜನದಲ್ಲಿ ಸ್ವಭಾಷಾಪ್ರೇಮವನ್ನು ಜ್ವಾಲೆಯೆಬ್ಬಿಸಬೇಕು; ಅವರಲ್ಲಿ ಸ್ವಾಭಿಮಾನವನ್ನು ನೆಲೆಗೊಳಿಸಬೇಕು; ಅವರಿಗೆ ಸ್ವೇತಿಹಾಸ, ಸ್ವಸಂಸ್ಕೃತಿ, ಸ್ವಜನಾಂಗ ಶಕ್ತಿಗಳ ಹಿರಿಮೆಯನ್ನು ಮನದಟ್ಟುಮಾಡಿಕೊಟ್ಟು,

ಅವರಲ್ಲಿ ಒಂದು ಹೊಸ ಚೈತನ್ಯವೂ ಹೊಸ ಜೀವನೋತ್ಸಾಹವೂ ಅಂಕುರಿಸುವಂತೆ ಪ್ರಚಾರಕಾರ್ಯ ನಡಸಬೇಕು — ಎಂಬುದು ನಮ್ಮ ಇದುವರೆಗಿನ ಆಶಯ ವಾಗಿತ್ತು. . . . ಜನ ಈಗ ಎಚ್ಚತ್ತವರಾಗಿದ್ದಾರೆ. ಇನ್ನು ಪುನಃ ಅವರು ತೂಕಡಿಸಿ ಮೈಮರೆತಾರೆಂಬ ಭೀತಿಗೆ ಕಾರಣ ತೋರುವುದಿಲ್ಲ. ಯಾವ ಆರೋಗ್ಯದ ಹಸಿವು ನಮ್ಮ ಜನತೆಯಲ್ಲಿ ಹುಟ್ಟಬೇಕೆಂದು ನಾಡ ಹಿರಿಯರು ಆಶಿಸಪಟ್ಟುಕೊಂಡಿದ್ದರೋ ಅದರ ಸೂಚನೆಗಳು ಈಗ ವಿಶದವಾಗಿ ಕಾಣಬರುತ್ತಿವೆ. "ಕನ್ನಡದಲ್ಲಿ ಓದಲು ಏನೇನಿದೆ, ಇನ್ನೂ ಏನೇನಿದೆ?" ಎಂದು ಜನ ವಿಚಾರಿಸುವ ದಿನ ಬಂದಿದೆ. ಕನ್ನಡವು ವ್ಯಾಸಂಗಕ್ಕೆ ಅರ್ಹವಾದ ಭಾಷೆ, ಪ್ರಪಂಚದ ಗಮನಕ್ಕೆ ಯೋಗ್ಯವಾದ ಭಾಷೆ — ಎಂಬುದನ್ನು ನಾವು ಈಗ ರುಜುವಾತು ಪಡಿಸಬೇಕಾಗಿದೆ. ಉತ್ಸಾಹಹರಗಳೆಯ ಯುಗ ಮುಗಿದಿದೆ; ವ್ಯವಸಾಯ ದೀಕ್ಷೆಯ ಯುಗ ಆರಂಭಿಸಿದೆ.

## ಕನ್ನಡ ಜನದ ಬದುಕಿಗೆ ಕನ್ನಡ ಸಾಹಿತ್ಯ

ನಮ್ಮ ಕನ್ನಡದ ಉತ್ಸಾಹ ಕೇವಲ Sentiment (ಎಂದರೆ) ಭಾವಗದ್ಗದವಲ್ಲ. ಅದು ವಿಚಾರ ಪೂರ್ವಕವಾದ ತತ್ತ್ವಸಿದ್ಧಾಂತ, ಮತ್ತು ಸದ್ಯಃ ಪ್ರಯೋಜನ ದೃಷ್ಟಿಯುಳ್ಳ ನೀತಿ ನಿರ್ಣಯ. ಈ ವಿಚಾರದಲ್ಲಿ ಮೊಟ್ಟಮೊದಲನೆಯ ಸಂಗತಿಯೇ ನೆಂದರೆ — ಕನ್ನಡ ಈಹೊತ್ತು ಸರಿ ಸುಮಾರು ಎರಡು ಕೋಟಿ ಪ್ರಜೆಯಲ್ಲಿ ಜೀವಂತ ವಾಗಿರುವ ಭಾಷೆ, ಅವರ ದಿನಚರಿಯ ಬದುಕಿನ ಭಾಷೆ. ಇಷ್ಟು ಬಹುತೆಯ ಜನದ ನಿತ್ಯವ್ಯವಹಾರ, ಅವರ ಜ್ಞಾನಾರ್ಜನೆ, ಅವರ ಸುಖಸಂಪತ್ಸಾಧನೆ, ಅವರ ಸಾಹಸ ಶೌರ್ಯಗಳು, ಅವರ ಲೋಕಯಾತ್ರೆ, ಅವರ ಬಂಧವಿಮೋಚನೆ, ಅವರ ಜನ್ಮ ಸಾರ್ಥಕ್ಯ— ಇದೆಲ್ಲ ಕನ್ನಡದ ಮೂಲಕವೇ ಆಗಬೇಕಾಗಿದೆ. ಮನುಷ್ಯ ಪ್ರಪಂಚದ ಇಷ್ಟೊಂದು ದೊಡ್ಡ ಪಂಗಡಕ್ಕೆ ಕನ್ನಡವೇ ಇರುವ ಜೀವನೋತ್ಕೃಷ್ಟತಾ ಸಾಧನ. ನಾವು ಕನ್ನಡಕ್ಕೆ ಬೆಲೆ ಕೊಡತಕ್ಕದ್ದು ಈ ಗಟ್ಟಿ ಕಾರಣದಿಂದ; ಅವಿಚಾರ ಮೋಹ ದಿಂದಲ್ಲ. ನಮ್ಮದು Practical (ಎಂದರೆ) ಪ್ರತ್ಯಕ್ಷಫಲದ ಯೋಚನೆ. ಕನ್ನಡದ ಕೂಗನ್ನು ಬರಿಯ ಮೋಹಭ್ರಾಂತಿಯೆಂದು ತಾತ್ಸಾರಮಾಡುವ ಪದವೀಗರ್ವಿಷ್ಠರು ಈ ತತ್ತ್ವವನ್ನು ಗ್ರಹಿಸಬೇಕು. ನೂರಾರು ಲಕ್ಷ ಸಂಖ್ಯೆಯ ಜನದ ಉದ್ಧಾರಕ್ಕೆ ಕನ್ನಡದ ಹೊರತು ಬೇರೆ ಸಾಧಕವಾವುದೂ ಇಲ್ಲ. ಕನ್ನಡ ಭಾಷೆಯ ಶ್ರೇಯಸ್ಸು ಎಂದರೆ ಕನ್ನಡ ಜನತೆಯ ಶ್ರೇಯಸ್ಸು; ಕನ್ನಡ ಜನದ ಶ್ರೇಯಸ್ಸಿಗಾಗಿ ಕನ್ನಡ ಭಾಷೆಯ ಶ್ರೇಯಸ್ಸು.

## ನಾಲ್ಕು ದೊಡ್ಡ ಕಾರ್ಯಭಾಗಗಳು

ಕನ್ನಡದ ಕ್ಷೇಮಸಂಪಾದನೆಗಾಗಿ ಆಗಬೇಕಾಗಿರುವ ಕಾರ್ಯ ಬಹುಮುಖವಾಗಿದೆ. (೧) ಕನ್ನಡಿಗರ ಸಂಖ್ಯೆಯೂ ಕನ್ನಡ ನಾಡಿನ ವಿಸ್ತೀರ್ಣವೂ ಬೆಳೆಯಬೇಕು. ಗ್ರಂಥೋತ್ಪತ್ತಿಯೂ ಕಲಾಪ್ರಚಾರವೂ ಜನಬಲವನ್ನು ಅವಲಂಬಿಸಿಕೊಂಡಿರುತ್ತವೆ. ವಾಚಕರ ಸಂಖ್ಯೆ ವಿಸ್ತರಿಸಿದಂತೆಲ್ಲ ಲೇಖಕರ ಸಂಖ್ಯೆ ಬೆಳೆದು, ಲೇಖನ ಗುಣವೂ ಮೇಲ್ಮಟ್ಟಕ್ಕೆ ಏರುತ್ತದೆ. (೨) ಕನ್ನಡ ನಾಡಿನ ಸರಕಾರಗಳು ಕನ್ನಡವನ್ನು ಸ್ವಭಾಷೆಯೆಂದು ಅಂಗೀಕರಿಸಿರುವವುಗಳಾಗಬೇಕು. ನಮ್ಮ ರಾಜಕೀಯ ಸಭೆ ಸಂಸ್ಥೆಗಳ ನಡವಳಿಕೆಗಳೂ ಕೋರ್ಟು ಕಚೇರಿಗಳ ಆಡಳಿತಗಳೂ ಕನ್ನಡದಲ್ಲಿಯೇ ನಡೆಯಬೇಕು. ನಮ್ಮ ಸಾರ್ವಜನಿಕ ಜೀವನ ಸುಗಮವಾಗುವುದಕ್ಕೂ, ನಮ್ಮ ಭಾಷೆ ಸಹಸ್ರ ಮುಖವಾಗಿ ಬೆಳೆದು ಬಗೆಬಗೆಯ ಕೆಲಸಗಳಿಗೆ ಒದಗಿಬರುವುದಕ್ಕೂ ಸಹ ಇದು ಅವಶ್ಯ. (೩) ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಕನ್ನಡ ಪ್ರದೇಶಗಳು ಏಕೀಕೃತವಾಗಿ ಒಂದು ರಾಷ್ಟ್ರವೆನಿಸಬೇಕು. ಮೊದಲು ಬ್ರಿಟಿಷ್ ಇಂಡಿಯದ ಕನ್ನಡ ಜಿಲ್ಲೆ ತಾಲ್ಲೂಕು ಹಳ್ಳಿಗಳೆಲ್ಲ ಒಂದು ರಾಜಕೀಯ ಪ್ರಾಂತವಾಗಿ ಒಂದು ಸರಕಾರದಲ್ಲಿ ಸೇರಬೇಕು. (೪) ಕನ್ನಡ ಜನಕ್ಕೆಲ್ಲ ಒಂದು ಪ್ರೌಢ ವಿದ್ಯಾ ಕೇಂದ್ರ ಏರ್ಪಡಬೇಕು. ಇವೆಲ್ಲ ನಮ್ಮ ಹಿರಿಯರ ಗಮನಕ್ಕೆ ತಕ್ಕ ವಿಚಾರಗಳು.

ವಿದ್ಯಾರ್ಥಿಗಳೇ ವಿಶೇಷವಾಗಿ ಸಾಧಿಸಬೇಕಾದ ಕಾರ್ಯ ಬೇರೆ ಇದೆ. ಅದು ಉಪಯೋಗದ ಮುಖ್ಯತೆಯಲ್ಲಿ ಮೇಲೆ ಹೇಳಿದ ನಾಲ್ಕು ಅಂಶಗಳಿಗಿಂತ ಕಡಮೆಯಾದದ್ದಲ್ಲ. ಅದು ಸಾಹಿತ್ಯ ಯೋಗ್ಯತಾ ಸಂಪಾದನೆ.

## ಸರ್ವತೋಮುಖ ಸಾಹಿತ್ಯ

ಸಾಹಿತ್ಯವೆಂದರೆ ಬರಿಯ ಮಾತಿನ ಚಮತ್ಕಾರವೆಂದು ಯಾರೂ ತಿಳಿದುಕೊಂಡಿರಲಾರರು. ಒಂದೆರಡು ಸಣ್ಣ ಕಥೆಗಳನ್ನು ಬರೆದು ಅಥವಾ ಒಂದೆರಡು ಪದ್ಯಗಳನ್ನು ಕಟ್ಟಿ ತನ್ನ ಸಾಹಿತ್ಯಸೇವೆ ಮುಗಿಯಿತೆಂದು ಯಾರೂ ಭಾವಿಸತಕ್ಕದ್ದಲ್ಲ. ಕಥೆ, ಪದ್ಯ, ಹಾಡು, ನಾಟಕ—ಇವೆಲ್ಲ ಸ್ವಾರಸ್ಯವಾದದ್ದೇ. ಅವು ಸಾಹಿತ್ಯವಲ್ಲವೆಂದು ಯಾರೂ ಹೇಳುವುದಿಲ್ಲ. ಸಣ್ಣ ಕಥೆ ಸಣ್ಣ ಪದ್ಯಗಳಲ್ಲಿ ಮಹಾ ಸಾಹಿತ್ಯ ಅಡಗಿರುವುದು ಅಸಂಭವವಲ್ಲ. ಇಂಥ ಕೃತಿಗಳು ಶೀತಾಳಿ ಗಿಡಗಳ (Orchid) ಹೂಗಳಂತೆ. ಅವುಗಳ ಆಕಾರ ಚಿತ್ರವೂ ವರ್ಣರೇಖಾನ್ಯಾಸವೂ ಪರಿಮಳ ಭಾರವೂ ಅತ್ಯಂತ ಮನೋಹರವಾದವು, ಮತ್ತು ಅನೇಕ ದಿನ ನಿಲ್ಲತಕ್ಕವು. ಸಸ್ಯಪ್ರಪಂಚದಲ್ಲಿ ಶೀತಾಳಿಯೇ ರಚನಾ ಚಮತ್ಕೃತಿಯ ಪರಾಕಾಷ್ಠೆಯೆಂದು ಸಸ್ಯಶಾಸ್ತ್ರಜ್ಞರು

ಹೇಳುತ್ತಾರಂತೆ. ಆದರೆ ಬರಿಯ ಶೀತಾಳಿ ಗಿಡಗಳಿಂದ ಮಾತ್ರವೇ ಒಂದು ಮಹಾರಣ್ಯ ವಾಗುವುದಿಲ್ಲ. ಅರಣ್ಯದಲ್ಲಿ ಶೀತಾಳಿಜಾತಿ ಒಂದು ಅಂಶ; ಅಷ್ಟೇ.

ಆದರೆ ಕಲ್ಪನ ಸಾಹಿತ್ಯಮಾತ್ರದಿಂದಲೇ, ಅಥವಾ "ಶುದ್ಧ" ಸಾಹಿತ್ಯಮಾತ್ರ ದಿಂದಲೇ, ಭಾಷಾ ಸಂಪತ್ತಾಗಲಿ ಜನಜೀವಿತವಾಗಲಿ ಮೇಲ್ಮಟ್ಟಕ್ಕೆ ಏರಲಾರದು. ಪ್ರಾಚೀನಕಾಲಕ್ಕೂ ಪ್ರಕೃತಕಾಲಕ್ಕೂ ಇರುವ ಒಂದು ಮಹಾ ವ್ಯತ್ಯಾಸವನ್ನು ನಾವು ಜ್ಞಾಪಕದಲ್ಲಿರಿಸಿಕೊಳ್ಳಬೇಕು. ಮನುಷ್ಯಜೀವನದ ಮಹಾನದೀ ಪ್ರವಾಹ ಬರಬರುತ್ತ ಸಹಸ್ರಮುಖವಾಗುತ್ತಿದೆ. ಹಿಂದೆ ಹತ್ತು ಧಾರೆ ಹರಿಯುತ್ತಿದ್ದದ್ದು ಈಗ ನೂರು ಧಾರೆಯಾಗಿ ಹರಿಯುತ್ತಿದೆ. ಈ ತೆರದ ನಾನಾಮುಖತೆಯೂ ಜಟಿಲತೆಯೂ ಮಾನವ ಪ್ರಗತಿಯ ಲಕ್ಷಣಗಳು. ಹೀಗೆ ಸಹಸ್ರಮುಖವಾಗುತ್ತಿರುವ ಜನಜೀವನಕ್ಕೆ ಅವಶ್ಯವಾದ ಎಲ್ಲ ಜ್ಞಾನಸಾಮಗ್ರಿಯೂ ಕನ್ನಡದಲ್ಲಿ ದೊರೆಯುವಂತಾಗಬೇಕು. ಬುದ್ಧಿಸಂಸ್ಕಾರಪ್ರಧಾನವಾದ ವಿವಿಧ ಶಾಸ್ತ್ರಸಾಹಿತ್ಯ ಬೆಳೆದಾಗಲಲ್ಲವೆ ಕನ್ನಡದ ಉದ್ಧಾರದ ಭರವಸೆ ನಮಗೆ ಸಕಾರಣವೆನಿಸತಕ್ಕದ್ದು ? ಕನ್ನಡ ಜನಕ್ಕೆ ಏನೇನು ಬೇಕೋ, ಅವರ ಪ್ರತಿದಿನದ ಬದುಕಿಗೆ ಏನೇನು ಅವಶ್ಯವೋ ಅದೆಲ್ಲ ಕನ್ನಡ ದಲ್ಲಿರಬೇಕು.

ಈಚೆಗೆ ಇಂಥ ಗ್ರಂಥಗಳೂ ಹುಟ್ಟುತ್ತಿವೆ. ನಮ್ಮ ವಿಶ್ವವಿದ್ಯಾನಿಲಯದ ಕನ್ನಡ ಪ್ರಕಟನಾವಳಿಯಲ್ಲಿಯೂ, ಪ್ರಚಾರೋಪನ್ಯಾಸಮಾಲೆಯಲ್ಲಿಯೂ, ಪುಟ್ಟಣ್ಣಶೆಟ್ಟರ ಪುದುವಟ್ಟಿನ ಲಘು ಗ್ರಂಥಮಾಲೆಯಲ್ಲಿಯೂ ಈ ತೆರದ ಪ್ರಕೃತ ಪ್ರಯೋಜಕವಾದ ಗ್ರಂಥಗಳು ದೊಡ್ಡವೂ ಸಣ್ಣವೂ ಬರುತ್ತಿವೆ. ಈ ಕೆಲಸ ಇನ್ನೂ ಅಪಾರವಾಗಿ ನಡೆಯಬೇಕು. ಅದರಲ್ಲಿ ವಿವಿಧತೆ ಇನ್ನೂ ಹೆಚ್ಚಬೇಕು.

## ಸತ್ಯದಿಂದ ಮಹಾಸಾಹಿತ್ಯ—ತಪಸ್ಸಿನಿಂದ ಸತ್ಯದರ್ಶನ

ಈ ಸಂದರ್ಭದಲ್ಲಿ ಸಂಗತವಾಗಿರುವ ಒಂದು ಮಾತನ್ನು ಈಗಿನ ಪ್ರೌಢ ವಿದ್ಯಾರ್ಥಿಗಳಿಗೆ ನಾನು ವಿಶೇಷವಾಗಿ ಬಿನ್ನಯಿಸಬೇಕಾಗಿದೆ. ಸಾಹಿತ್ಯ ಸೇವೆಗೆ ಅಭಿಮಾನ ಮಾತ್ರವೇ ಸಾಲದು, ಉತ್ಸಾಹ ಮಾತ್ರವೇ ಸಾಲದು. ಅವುಗಳ ಜತೆಗೆ ಅಧ್ಯವಸಾಯವೂ ಸೇರಬೇಕು. ದೊಡ್ಡ ಸಾಹಿತ್ಯವೆಂಬುದು ದೊಡ್ಡ ತಪಸ್ಸಿನ ಫಲ. ಅದರ ಜೀವಾಳ ಸತ್ಯಸಂದರ್ಶನ. ತಪಸ್ಸುಮಾಡದೆ, ಮೆದುಳನ್ನು ಆಯಾಸಪಡಿಸದೆ, ರಾತ್ರಿ ನಿದ್ದೆ ಕೆಡದೆ, ಪುಸ್ತಕದ ಭಾರವನ್ನು ಹೊರದೆ, ಲೀಲಾಜಾಲವಾಗಿ ಮಹಾ ಸಾಹಿತ್ಯವನ್ನು ರಚಿಸುವೆನೆನ್ನುವವನು ಮಹಾಸಾಹಿತ್ಯದ ಸ್ವರೂಪವನ್ನು ಕಾಣ ದವನು. ನಮ್ಮ ಈಗಿನ ದಿವಸದಲ್ಲಿ ಮಹತ್ತ್ವದ್ದನ್ನು ಸುಲಭದಲ್ಲಿ ಸಾಧಿಸುವ ಆಶೆ ಸರ್ವಸಾಮಾನ್ಯವಾಗುತ್ತಿದೆ. ಕೊಂಚಕೊಂಚವಾಗಿ ಕ್ರಮಕ್ರಮವಾಗಿ ಬೆಳಸುವ

ಕಾಲ ಜನಕ್ಕೆ ಮರೆತುಹೋಗುತ್ತಿದೆ. ಕಾಲುನಡಿಗೆ ಅವರಿಗೆ ಬೇಸರ; ಮೋಟಾರು ವೇಗ ವಿಮಾನ ವೇಗಗಳ ಆತುರ ಜನಕ್ಕೆ ಬರುತ್ತಿದೆ. ಆದರೆ ಉತ್ತಮ ಸಾಹಿತ್ಯ ವಿಜ್ಞಾನಸಿದ್ಧಿಗೆ ಇಂಥ ಸುಲಭೋಪಾಯಗಳಿಲ್ಲ. ಆ ರಾಜ್ಯಗಳಲ್ಲಿ ನಾವು ಸಾವಕಾಶ ವಾಗಿಯೇ, ಹೆಜ್ಜೆಯಮೇಲೆ ಹೆಜ್ಜೆಯನ್ನಿಟ್ಟೇ, ನಡೆಯಬೇಕಾಗಿದೆ. ಮಂತ್ರವಾದಿ ಮಾವಿನಕಾಯನ್ನು ತಯಾರುಮಾಡಿದಂತೆ ಕವಿ ಮಹಾಕಾವ್ಯ ರಚಿಸಲಾಗುವುದಿಲ್ಲ; ವಿಜ್ಞಾನಶೋಧಕನು ಅಷ್ಟು ಬೇಗಬೇಗ ನೂತನ ಸಿದ್ಧಾಂತಗಳನ್ನು ನಿರ್ಮಾಣ ಮಾಡಲಾಗುವುದಿಲ್ಲ. ಹುಡುಕಬೇಕು, ಹುಡುಕಾಡಬೇಕು, ಬೇಸರಪಡದೆ ಹುಡುಕ ಬೇಕು, ತಾಳ್ಮೆಯಿಂದ ಹುಡುಕುತ್ತಲೇ ಇರಬೇಕು; ನಿಲುಕಡೆಯಿಲ್ಲದ, ನಿಟ್ಟುಸಿರಿನಿಂದ ಕೂಡಿದ ಹುಡುಕಾಟವೇ ಜ್ಞಾನಾರ್ಥಿಯ ಹಣೆಯಬರಹ. ಅದರಿಂದಲೇ ಸತ್ಯ ಸಂದರ್ಶನ. ವಿಜ್ಞಾನಿಯಾಗಲಿ, ಸಾಹಿತಿಯಾಗಲಿ, ದೊಡ್ಡವನಾಗಬೇಕೆಂದರೆ ತಪ ಶ್ಚರ್ಯೆಯೊಂದೇ ಅವನಿಗಿರುವ ಮಾರ್ಗ.

ಕನ್ನಡ ಸಾಹಿತ್ಯನಿರ್ಮಾಣಕ್ಕೆ ದೀಕ್ಷೆ ತೊಡಬೇಕೆನ್ನುವವರು ನಾಲ್ಕು ತೆರನಾದ ಸಾಧನಸಂಪತ್ತನ್ನು ಪಡೆದುಕೊಳ್ಳಬೇಕು. (೧) ಭಾಷಾಜ್ಞಾನ, (೨) ಶಾಸ್ತ್ರಶಿಕ್ಷೆ, (೩) ಲೋಕಸಂಸರ್ಗ, (೪) ಜೀವನೋದಾತ್ತತೆ.

## ಸಾಧನ ಚತುಷ್ಟಯ

(೧) ಭಾಷಾಪರಿಜ್ಞಾನ ವಿಚಾರದಲ್ಲಿ ಸಂಸ್ಕೃತ ಇಂಗ್ಲಿಷುಗಳ ಸಹಾಯ ಕನ್ನಡ ಲೇಖಕನಿಗೆ ಅಮೂಲ್ಯವಾದದ್ದೆಂಬ ಅಂಶವನ್ನು ಒತ್ತಿ ಹೇಳಬೇಕಾಗಿದೆ. ಅಲ್ಪಸ್ವಲ್ಪ ವಾದರೂ ಸಂಸ್ಕೃತದ ಪರಿಚಯವಿಲ್ಲದಿದ್ದಲ್ಲಿ ಕನ್ನಡದ ಪ್ರಯೋಗಗಳೂ, ಧಾಟಿಯೂ ಸಾಧುವಾಗಲಾರವು. ಸಂಸ್ಕೃತ ವಾಙ್ಮಯ ನಮ್ಮ ಭಾರತೀಯತೆಗೇ ಮಾತೃಭೂತ ವಾದದ್ದೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಈ ದೃಷ್ಟಿಯಿಂದಲೂ ಸಂಸ್ಕೃತ ನಮಗೆ ಪ್ರಿಯತಮವೂ ಪೂಜ್ಯವೂ ಆಗಿದೆ. ಸಂಸ್ಕೃತದಿಂದ ಕನ್ನಡಕ್ಕೆ ತರಬೇಕಾ ಗಿರುವ ಸಾಹಿತ್ಯಭಾಗ ಇನ್ನೂ ಅಪಾರವಾಗಿದೆ.

ಇಂಗ್ಲಿಷಿನ ಬೆಲೆಯನ್ನು ಕುರಿತು ಒಂದು ಮಾತನ್ನು ವಿಶೇಷವಾಗಿ ಹೇಳುವುದು ಅವಶ್ಯವೆಂದು ನನಗೆ ತೋರುತ್ತದೆ. ಇಂಡಿಯ ದೇಶದಲ್ಲಿ ನಾವು ಈಗ ಕಾಣುತ್ತಿರು ವುದು ಇಂಗ್ಲಿಷ್ ಜನದ ಅಧಿಕಾರಸ್ವಭಾವವನ್ನ, ಅವರ ನಿಜವಾದ ಸಂಸ್ಕೃತಿ ಸ್ವರೂಪವನ್ನಲ್ಲ. ನಮಗೆ ಕಾಣಿಸುತ್ತಿರುವ ಗುಣಪ್ರತಾಪ ಪಾಲ್ಯ-ಪಾಲಕಸಂಬಂಧ ದಿಂದ ಅಥವಾ ಅಧಿಕಾರಿ — ಅಧೀನಸಂಬಂಧದಿಂದ, ಉತ್ಪನ್ನವಾದದ್ದು. . . (ಆದರೆ) ನಮ್ಮ ಪಾಲಿಗೆ ಅದು ಸಕಲ ಪ್ರಪಂಚದೊಡನೆ ಮಾತನಾಡುವ ಭಾಷೆ. ಅದು ಸಮಸ್ತ ಜಗತ್ತನ್ನೂ ನಮ್ಮ ಕಣ್ಣೆದುರಿಗೆ ತಂದಿರಿಸುವ ದೂರದರ್ಶಕಯಂತ್ರ. ಇಂಗ್ಲಿಷ್

ಎಂಬ ಕಿಟಕಿಯ ಮೂಲಕ ನಾವು ಸಮಸ್ತ ಮಾನವಲೋಕವನ್ನೂ ನೋಡಲಾಗುತ್ತದೆ. ಈ ಕಾರಣದಿಂದ ಇಂಗ್ಲಿಷಿನ ಬೆಲೆ ನಮಗೆ ಗಣನೆಯನ್ನು ಮೀರುವಷ್ಟಾಗಿದೆ. ತುಲನಾತ್ಮಕವಾದ, ಎಂದರೆ ಹೋಲಿಕೆಯ ಮೂಲಕವಾದ, ವಿಮರ್ಶನವ್ಯಾಸಂಗಕ್ಕೂ ಇಂಗ್ಲಿಷ್ ಸಾಹಿತ್ಯ ಜ್ಞಾನ ಸಹಕಾರಿಯಾಗುತ್ತದೆ. ಕನ್ನಡ ಸಾಹಿತ್ಯಕ್ಕೆ ಉಪಕಾರ ಮಾಡಬೇಕೆಂದಿರುವವರು ತಮ್ಮ ಇಂಗ್ಲಿಷ್ ವಾಙ್ಮಯಜ್ಞಾನವನ್ನು ವೃದ್ಧಿಪಡಿಸಿಕೊಳ್ಳುತ್ತ, ಉತ್ತಮ ಇಂಗ್ಲಿಷ್ ಲೇಖಕರ ವಿಷಯ ನಿರೂಪಣಕ್ರಮವನ್ನೂ ಶಾಸ್ತ್ರಫಕ್ಕಿಯನ್ನೂ ಗುರುತಿಸಿಕೊಳ್ಳಬೇಕು.

## ಬುದ್ಧಿಯ ವ್ಯಾಯಾಮ

(೨) ಶಾಸ್ತ್ರಸಂಸ್ಕಾರ. ಪ್ರತಿಯೊಬ್ಬ ಪ್ರೌಢ ವಿದ್ಯಾರ್ಥಿಯೂ ಯಾವುದಾದರೂ ಒಂದು ಶಾಸ್ತ್ರಭಾಗವನ್ನು ಅಥವಾ ಸಾಹಿತ್ಯಭಾಗವನ್ನು ವಿಶೇಷವಾಗಿ — ತನ್ನ ಅಜೀವವಿದ್ಯೆಯನ್ನಾಗಿ ಅಭ್ಯಾಸಮಾಡಬೇಕು. ವಿಜ್ಞಾನ ಶಾಸ್ತ್ರಗ್ರಂಥದಿಂದ ನೀವು ಸಂಪಾದಿಸುವ ಅಂಶಗಳಲ್ಲಿ ಸಂಗತಿಗಳಲ್ಲ ಅತ್ಯಂತ ಮುಖ್ಯವಾದ ಭಾಗ. ಶಾಸ್ತ್ರಸಂಗತಿಗಳಿಗಿಂತ ಮುಖ್ಯವಾದದ್ದು ಶಾಸ್ತ್ರದೃಷ್ಟಿ, (Scientific attitude and method) ಶಾಸ್ತ್ರದ ಅನ್ವೇಷಣರೀತಿ, ಅದರ ಪರೀಕ್ಷಾಕ್ರಮ, ಅದರ ವಿಷಯದ ಅಂಶಾಂಶ ಶೋಧನೆ ಮತ್ತು ಅಂಶಪ್ರತ್ಯಂಶ ತೋಲನೆ. ಈ ನಿಷ್ಕರ್ಷೆಯ ಗುಣ ಕನ್ನಡದ ಬರವಣಿಗೆಯಲ್ಲಿ ಈಗಿಗಿಂತ ಹೆಚ್ಚು ಹೆಚ್ಚಾಗಿ ಬೇಕಾದದ್ದು. ಈ ಗುಣವಿಲ್ಲದ ಬರವಣಿಗೆ ಬರಿಯ ಜೊಂಡು; ಅಂಥ ಬರವಣಿಗೆಗೆ ಪ್ರಮಾಣ ಯೋಗ್ಯತೆ ಎಂದಿಗೂ ಬರಲಾರದು. ನಮ್ಮ ಕಾಲೇಜುಗಳಲ್ಲಿ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿಗಳು ತಮ್ಮ ಸ್ವಂತ ಅಭ್ಯಾಸಕ್ಕಾಗಿಯಾದರೂ ಯಾವುದಾದರೊಂದು ಶಾಸ್ತ್ರ ವಿಷಯವನ್ನು ಆರಿಸಿಕೊಂಡು, ಅದರ ಮೇಲೆ ಶಾಸ್ತ್ರರೀತಿಯಲ್ಲಿ ಆಗಾಗ ಪ್ರಬಂಧರಚನೆ ಮಾಡುವುದು ಉಪಯೋಗಕರವೆಂದು ನಾನು ಭಾವಿಸಿದ್ದೇನೆ.

## ಲೌಕಿಕ ದಕ್ಷತೆ

(೩) ಲೋಕಸಂಪರ್ಕ. ಎಲ್ಲ ಶಾಸ್ತ್ರ ಸಾಹಿತ್ಯಗಳೂ ಲೋಕಕ್ಕಾಗಿ ಹುಟ್ಟತಕ್ಕವು; ಆದಕಾರಣ ಲೋಕಜೀವನದ ವಾತಾವರಣದಲ್ಲಿ ಬೆಳೆಯಬೇಕಾದವು. ಯಾವ ದಿವಸ ನಮ್ಮ ಸಾಹಿತ್ಯ ಜನಜೀವನದ ಸಂಪರ್ಕವನ್ನು ತೊರೆಯಿತೋ ಅಂದು ಅದು ನಿರ್ಜೀವವಾಗಿ ಒಣಗಿತು. ಸಾಹಿತ್ಯಾಭಿವೃದ್ಧಿಯಲ್ಲಿ ತೊಡಗುವವನಿಗೆ ಲೋಕಜೀವಿತಕ್ಕಿಂತ ದೊಡ್ಡ ಪ್ರೇರಣಬಲ ಯಾವುದೂ ಇರಲಾರದು. ಆದದ್ದರಿಂದ ಕನ್ನಡ ಸಾಹಿತಿಗಳು ನಮ್ಮ ಅನುದಿನದ ಪ್ರತ್ಯಕ್ಷ ಪ್ರಪಂಚದಲ್ಲಿ ಬೆರೆತು ಬಾಳಬೇಕು.

ನಾನು ಈ ಅಂಶವನ್ನು ಇಷ್ಟು ಒತ್ತಿ ಹೇಳುವುದಕ್ಕೆ ನನ್ನ ಮನಸ್ಸಿನಲ್ಲಿ ಬಹು ದಿನದಿಂದ ಅಡಗಿರುವ ಒಂದು ದೊಡ್ಡ ಕೊರತೆ ಕಾರಣ. ಕನ್ನಡಿಗರಲ್ಲಿ ಕಾರ್ಯದಕ್ಷತೆ ಸಾಲದೆಂಬುದು ನನ್ನ ದೂರು. ಕರ್ಣಾಟಕದ ವಾಣಿಜ್ಯ ಕ್ಷೇತ್ರವನ್ನು ನೋಡಿರಿ; ಯಂತ್ರಕರ್ಮ ಕಾರ್ಖಾನೆಗಳ ಕ್ಷೇತ್ರವನ್ನು ನೋಡಿರಿ; ಸಮಾಜ ಸುಧಾರಣೆ ಸಾರ್ವಜನಿಕ ಸಂಸ್ಥೆಗಳ ಕ್ಷೇತ್ರವನ್ನು ನೋಡಿರಿ — ಯಾವ ಮಹೋದ್ಯಮ ರಂಗದಲ್ಲಿ ಯಾದರೂ ಕನ್ನಡಿಗರು ಇತರರಿಗೆ ಸರಿತೂಗತಕ್ಕವರೆಂದು ಈಗ ಹೇಳಿಕೊಳ್ಳುವಂತಿ ದೆಯೆ? ದೊಡ್ಡ ದೊಡ್ಡ ಕಂಪೆನಿಗಳನ್ನು ಕನ್ನಡಿಗರು ಕಟ್ಟಿದ್ದಾರೆಯೆ? ದೊಡ್ಡ ದೊಡ್ಡ ಆಡಳಿತಗಳನ್ನು ನಡಸುತ್ತಿದ್ದಾರೆಯೆ? ದೊಡ್ಡ ದೊಡ್ಡ ಸಂಸ್ಥೆಗಳ ಭಾರವನ್ನು ನಿರ್ವಹಿಸುತ್ತಿದ್ದಾರೆಯೆ? ಇಂಡಿಯದ ಇತರ ಪ್ರಾಂತಗಳೊಡನೆ ಹೋಲಿಸಿನೋಡಿದರೆ, ನಾನಾ ಕಾರ್ಯರಂಗಗಳಲ್ಲಿ ಕನ್ನಡಿಗರ ಪ್ರಭಾವ ಈಗ ಅಷ್ಟೇನೂ ಮಹತ್ತರವಾಗಿ ಕಾಣುತ್ತಿಲ್ಲ. ನಮಗೆ ಕಾರ್ಯತತ್ಪರವಾದ ಬುದ್ಧಿಯೂ ನಿಷ್ಠೆಯೂ ತಕ್ಕಷ್ಟು ವರವಾಗಿ ಬಂದಿಲ್ಲ; ಅಥವಾ ಅಂಥ ವರಕ್ಕಾಗಿ ನಾವು ತಕ್ಕಷ್ಟು ತಪಸ್ಸು ಮಾಡಿಲ್ಲ. ಗೊಣಗಾಟ ಪೇಚಾಟಗಳಿಂದಲೇ ಸ್ವರ್ಗದ್ವಾರ ತೆರೆಯಬಹುದಾಗಿದ್ದಿದ್ದರೆ ಬಹುಶಃ ನಾವೇ ಮೊದಲು ಅಲ್ಲಿ ಸೇರಿರುತ್ತಿದ್ದೆವು. ಆದರೆ ದೇವತೆಗಳ ಕೃಪೆ ಪೌರುಷ ಸಂಪ ತ್ತುಳ್ಳವರಿಗೆ. ವಿದ್ಯಾರ್ಥಿಗಳು ಕಾರ್ಯಸಾಧನ ಶಕ್ತಿಯನ್ನು ಚಿಕ್ಕಂದಿನಿಂದಲೂ ಬೆಳಸಿಕೊಳ್ಳಬೇಕು. ಕನ್ನಡ ಜನದ ಬದುಕಿಗೂ ಕನ್ನಡ ಸಾಹಿತ್ಯದ ಬದುಕಿಗೂ ಕವಿತಾ ಪ್ರತಿಭೆಯೂ, ವಿಜ್ಞಾನಶೋಧನೆಯೂ ಎಷ್ಟು ಹೆಚ್ಚು ಅವಶ್ಯವೋ ಕಾರ್ಯ ದಕ್ಷತೆಯೂ ಅಷ್ಟು ಅವಶ್ಯವಾಗಿದೆ.

## ವ್ರತ ಜೀವನ

(೪) ಎಲ್ಲಕ್ಕಿಂತ ಮೇಲಾದದ್ದು ಜೀವನೋದಾತ್ತತೆ. ಯಾವುದಾದರೂ ಒಂದು ವ್ರತ, ಯಾವುದೋ ಒಂದು ಮಹಾ ಸಂಕಲ್ಪ, ಒಂದಾನೊಂದು ಪವಿತ್ರೋದ್ದೇಶ ನಿಮ್ಮ ಜೀವನವನ್ನು ಸದಾ ಆಕ್ರಮಿಸಿರಲಿ. ನಮ್ಮ ಪೂರ್ವಿಕರು ತಮ್ಮ ಜೀವನದಲ್ಲಿ ಇಂಥ ನೇಮವೊಂದನ್ನಿರಿಸಿಕೊಂಡಿರುತ್ತಿದ್ದರು. ಒಂದು ತೀರ್ಥಯಾತ್ರೆ, ಒಂದು ದೇವತಾ ಸೇವೆ, ಒಂದು ಸಂತರ್ಪಣೆ, ಒಂದು ಸತ್ರಸ್ಥಾಪನೆ — ಇಂಥಾದ್ದಕ್ಕಾಗಿ ಹಗಲು ರಾತ್ರಿ ಚಿಂತಿಸಿ, ಅದು ನಡೆದಾಗ ತಾವು ಕೃತಕೃತ್ಯರೆಂದು ತಿಳಿಯುತ್ತಿದ್ದರು. ಅಂಥಾ ವ್ರತನಿಷ್ಠೆ ಜೀವನೋದ್ಧಾರಕವಾದದ್ದು. ನಿತ್ಯ ಗೃಹಕೃತ್ಯದ ಧಾವಂತದಿಂದ, ಅಶನವಸನ ಸಂಪಾದನೆಯ ಒದ್ದಾಟದಿಂದ, "ನಾನು" "ನನ್ನದು"ಗಳ ನಿತ್ಯಚಿಂತೆ ಯಿಂದ ದೂರವಾದ, ಬಹುಜನೋಪಯೋಗಿಯಾದ, ಎಷ್ಟೇ ಸಣ್ಣದಾದರೂ ಪರಿಶುದ್ಧ

ವಾದ, ಒಂದು ವ್ರತನಿಷ್ಠೆ ಯಾವಾತನನ್ನು ಬಿಡದೆ ಹಿಡಿದಿರುವುದೋ ಆತನೇ ಪರಮ ಧನ್ಯ. ಉತ್ತಮ ಧ್ಯೇಯವು ಜೀವನಕ್ಕೆ ಪಾವನಕರ ಮಾತ್ರವೇ ಅಲ್ಲ, ಪುಷ್ಟಿಕರವೂ ಪೂರ್ಣತಾ ಪ್ರದವೂ ಸಹ ಆದೀತು. ಒಂದು ಉದಾತ್ತವಾದ ಆದರ್ಶ ಸರ್ವದಾ ನಿಮ್ಮ ಹೃದಯಾಂಗಣದಲ್ಲಿ ನಿಂತು, ನಿಮ್ಮ ನಡವಳಿಕೆಯನ್ನು ಅಹಶ್ಚ ರಾತ್ರಿಶ್ಚ ತಿದ್ದುತ್ತಿರಬೇಕು. ಪರಿಶುದ್ಧ ಹೃದಯತೆ ಉತ್ತಮ ಸಾಹಿತ್ಯಕ್ಕೆ ಮೂಲಮಾತೃಕೆ. ವಿದ್ಯಾರ್ಥಿಗಳಾಗಿರುವಾಗ ದೊಡ್ಡ ದೊಡ್ಡ ಧ್ಯೇಯಗಳನ್ನು ಕುರಿತು ಮಾತನಾಡುವುದೂ, ವೀರವ್ರತಗಳನ್ನು ಕೊಚ್ಚುವುದೂ ಅಪರೂಪವಲ್ಲ. ಮುಂದೆ ಬರುತ್ತದೆ ಪರೀಕ್ಷಾ ಸಮಯ, — ಉದ್ಯೋಗಕ್ಕಾಗಿ ಹೆರರ ಮನೆ ಬಾಗಿಲು ಕಾಯಬೇಕಾದ ಕಾಲ, ಸಂಬಳದ ಹೆಚ್ಚಿಕೆಗಾಗಿ ಸ್ನೇಹಿತರ ಮೇಲೆ ಚಾಡಿ ಹೇಳಿಸುವ ಕಾಲ, ಸಣ್ಣ ಸಣ್ಣ ಕಾರಣಗಳ ಮೇಲೆ ದೊಡ್ಡ ದೊಡ್ಡ ಹಕ್ಕುಗಳನ್ನು ಕಟ್ಟಿ ನಿಲ್ಲಿಸಬೇಕೆನಿಸುವ ಕಾಲ, ನಿಮಗೆ ದೊರೆಯಬೇಕೆಂದಿರುವ ಸನ್ಮಾನ ಸಂಭಾವನೆಗಳು ಇನ್ನೊಬ್ಬರ ಕೈಗೆ ಹೋಗುತ್ತಿರುವ ಕಾಲ. — ಆ ಕಾಲಗಳಲ್ಲಿ ನೀವು ಎಷ್ಟು ಶ್ರದ್ಧೆಯಿಂದ ನ್ಯಾಯ ನಿಯಮಗಳನ್ನು ಪಾಲಿಸುವಿರೋ ಅಷ್ಟು ಮಟ್ಟಿನ ಗುಣ ಶಕ್ತಿ ನಿಮ್ಮ ಸಾಹಿತ್ಯದಲ್ಲಿ ಪ್ರತಿಫಲಿಸೀತು. ನಿಮ್ಮ ಹೃದಯದಲ್ಲಿ ಎಷ್ಟು ಔದಾರ್ಯ ಉಂಟೋ ನಿಮ್ಮ ಗ್ರಂಥದಲ್ಲಿ ಅಷ್ಟು ಔನ್ನತ್ಯವಿರುತ್ತದೆ. ಸಾಮಾನ್ಯಸಾಹಿತಿಯ ಚರಿತ್ರೆಯಲ್ಲಿ, ಪುಸ್ತಕ ಅದರ ಮುಖ್ಯಭಾಗ; ಅವನ ಜೀವನ ಆ ಪುಸ್ತಕದ ಅಂಗ. ಮಹಾ ಸಾಹಿತಿಯ ಚರಿತ್ರೆಯಲ್ಲಿ, ಜೀವನ ಮುಖ್ಯಭಾಗ; ಪುಸ್ತಕ ಅದರ ಅಂಗ. ಪವಿತ್ರಾತ್ಮರಾದ ಶ್ರೀಮಾನ್ ಚ. ವಾಸುದೇವಯ್ಯನವರ ಜೀವನವು ವೃಕ್ಷಸದೃಶವಾಗಿತ್ತು. ಅವರ ಗ್ರಂಥಗಳು ಅದರಿಂದ ಹೊರಟ ಕೆಲವು ಹೂಗಳು. ದೊಡ್ಡ ಜೀವನದಿಂದ ದೊಡ್ಡ ಗ್ರಂಥವೆಂಬುದಕ್ಕೆ ಅವರ ಹೆಸರು ಚಿರಸ್ಮರಣೀಯವಾದ ಸಾಕ್ಷಿಯಾಗಿರುತ್ತದೆ.

ಒಟ್ಟಿನ ಮೇಲೆ ಉತ್ತಮ ಜೀವನದಿಂದ ಉತ್ತಮ ಸಾಹಿತ್ಯ. ಉತ್ತಮ ಸಾಹಿತ್ಯದಿಂದ ಉತ್ತಮ ಜೀವನ. ಹೀಗೆ ಜೀವನ ಸಾಹಿತ್ಯಗಳು ಪರಸ್ಪರ ಉದ್ಧಾರಕಗಳು. ಈ ತತ್ತ್ವ ಒಂದೇ ನನಗೆ ತಿಳಿದಿರುವಂಥಾದ್ದು. . . .

## ಸಮಾಪನ-ಪ್ರಾರ್ಥನೆ

ಈ ಸಾಧನ ಸಂಪತ್ತಿಗೆ ಪ್ರತ್ಯಕ್ಷ ನಿದರ್ಶನ ರೂಪರಾದವರು ಈ ಕರ್ಣಾಟಕ ಸಂಘವನ್ನು ಈಗ ೧೦–೧೨ ವರ್ಷದಿಂದ ಅಧ್ಯಕ್ಷರಾಗಿ ಬೆಳೆಸಿಕೊಂಡು ಬಂದಿದ್ದಾರೆ. ಕನ್ನಡದ ನವೀಕರಣ, ಆಧುನಿಕ ಕನ್ನಡ, ಕನ್ನಡದ ಧ್ವಜಾರೋಹಣ — ಈ ನಮ್ಮ ಮಂತ್ರಗಳಿಗೆ ಗುರುಪೀಠದಲ್ಲಿರತಕ್ಕವರು ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು.

ಅವರ ವಿದ್ವತ್ತನ್ನಾಗಲಿ ಪ್ರತಿಭೆಯನ್ನಾಗಲಿ ಆತ್ಮಮಹತ್ತ್ವವನ್ನಾಗಲಿ ಕುರಿತು ಈಗ ನಾನು ಕೊಂಡಾಡಬೇಕಾದದ್ದೇನೂ ಇಲ್ಲ. ಕನ್ನಡದಲ್ಲಿ ಅವರಿಗಿರುವ ಮಮತೆ ಎಂಥಾದ್ದು, ಅದಕ್ಕಾಗಿ ಅವರು ಮಾಡಿರುವ ತ್ಯಾಗ ಆತ್ಮಸಮರ್ಪಣೆಗಳು ಎಂಥವು ಎಂಬುದನ್ನು ನಾನು ಈಗ ವಿವರಿಸಬೇಕಾಗಿಲ್ಲ. ಇನ್ನು ಸ್ವಲ್ಪ ಕಾಲದಲ್ಲಿ ಅವರು ಬೆಂಗಳೂರನ್ನು ಬಿಟ್ಟು ಹೋಗುವ ಸಂಭವ ಬಂದೀತೆಂದು ವರ್ತಮಾನ ಕೇಳಿದ್ದೇನೆ. ಅವರು ಹಾಗೆ ಪರಸ್ಥಳ ಹೋಗುವುದೂ ಕನ್ನಡದ ಸೇವೆಗಾಗಿಯೇ ಎಂಬುದನ್ನೂ ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಅವರ ಸಾನ್ನಿಧ್ಯ ನಮಗೆ ದೂರವಾಗುವುದೆಂಬ ಕೊರತೆಯ ಜೊತೆಗೆ, ಅವರ ಉದ್ದೇಶ ದೇಶಹಿತಕಾರ್ಯವೆಂಬ ಸಮಾಧಾನ ನಮ್ಮಲ್ಲಿ ಬೆರೆತಿರುವುದು ಸ್ವಾಭಾವಿಕವಾಗಿದೆ. ಶ್ರೀ ಶ್ರೀಕಂಠಯ್ಯನವರು ಎಲ್ಲಿದ್ದರೂ ನಮ್ಮವರೇ. ಅವರು ಎಲ್ಲಿದ್ದರೂ ಈ ಕರ್ಣಾಟಕ ಸಂಘ ಅವರದೇ ; ಅವರು ಇದನ್ನು ತಮ್ಮದೆಂದು ಭಾವಿಸತಕ್ಕವರೇ — ಎಂಬ ಭರವಸೆ ನಮಗೆ ಸಂಪೂರ್ಣವಾಗಿದೆ. ಈ ಸಂಘವನ್ನು ಮಮತೆಯಿಂದಲೂ ವಿಚಕ್ಷಣೆಯಿಂದಲೂ ಬೆಳಸಿ ದೊಡ್ಡದನ್ನಾಗಿ ಮಾಡಿದ ಈ ಉಪಕಾರಿಗಳ ಪೋಷಣೆಯ ಭಾಗ್ಯ ನಮ್ಮ ಈ ಸಂಘಕ್ಕೆ ಎಂದೆಂದಿಗೂ ತಪ್ಪಿಹೋಗದೆ ಇರಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಈ ಕರ್ಣಾಟಕ ಸಂಘ ಈಗ ೨೫ ವರ್ಷದ ಪ್ರಾಯದಲ್ಲಿದೆ. ಇಂದಿನ ಹಬ್ಬವನ್ನು ಷಷ್ಟ್ಯಬ್ದಪೂರ್ತಿಗೆ ಹೋಲಿಸಬೇಕೆನಿಸುವಂಥ ಪರಿಸ್ಥಿತಿ ಎಂದೆಂದಿಗೂ ಅದಕ್ಕೆ ಬಾರದಿರಲೆಂದು ನನ್ನ ಪ್ರಾರ್ಥನೆ. ೬೦ನೆಯ ವರ್ಷ ನಮ್ಮ ದೇಶದಲ್ಲಿ ವಿಶ್ರಾಂತಿ ಪ್ರಾರಂಭದ ವರ್ಷ ; ಜಡ್ಜಿಗಳಾದವರಿಗೂ ಕೂಡ ಪೆನ್‌ಷನ್ನಿನ ವಯಸ್ಸು. ನಮ್ಮ ಕರ್ಣಾಟಕ ಸಂಘ ಈ ಹೊತ್ತಿನ ಹಬ್ಬದ ಕಾರಣದಿಂದ ತನಗೆ ವಿಶ್ರಾಂತಿಯ ಅಧಿಕಾರ ದೊರೆಯಿತೆಂದು ಭಾವಿಸಲಾಗದು. ವಾಸ್ತವವಾಗಿ ಈ ಸಂಘಕ್ಕೆ ಈ ಹಬ್ಬ ಇನ್ನೂ ಮೊದಲನೆಯ ಬಹುಮಾನ, — ಲೋಯರ್ ಸೆಕೆಂಡರಿ ಪ್ಯಾಸಿನಂಥಾದ್ದು. ಇಂಥ ಸನ್ಮಾನಗಳನ್ನು ಅದು ಸಾರ್ವಜನಿಕರಿಂದ ಇನ್ನೆಷ್ಟೋ ಗಳಿಸಬೇಕಾಗಿದೆ. ಇದುವರೆಗೆ ಸಂಪಾದಿಸಿರುವ ಯಶಸ್ಸೇ ಸಾಕೆಂದು ಅದು ಈಗ ಹಾಸಿಗೆಯ ಕಡೆ ಕಣ್ಣು ತಿರುಗಿಸತಕ್ಕದ್ದಲ್ಲ. ಈ ಸಂಘದ ಇಂದಿನ ಯಾಜಮಾನ್ಯ ಪ್ರತಿಭಾ ತೇಜಸ್ಸಮನ್ವಿತವಾಗಿದೆ. ಶ್ರೀ ಕೆ. ವಿ. ಪುಟ್ಟಪ್ಪನವರ ಪ್ರಭಾವದಿಂದ ಅದು ಸರ್ವಾಂಗಪರಿಪುಷ್ಟವಾಗಿ ಬೆಳೆದು, ಕನಕಾಭಿಷೇಕ ವಜ್ರಾಭಿಷೇಕ ಮಾಣಿಕ್ಯಾಭಿಷೇಕಗಳಿಂದ ಮೆರೆಯುತ್ತ, ಕರ್ಣಾಟಕಕ್ಕೆ ದಿವ್ಯಜ್ಯೋತಿಯೆನಿಸಿ, ಚಿರಕಾಲ ವಿಜಯಿಯಾಗಿರಲಿ.

* * *

## IV ಭರತಖಂಡದ ಯುದ್ಧವೆಚ್ಚ[1]

ಯುದ್ಧವು ಆರಂಭವಾಗಿ ನಾಲ್ಕು ವರ್ಷಗಳಿಗೆ ಮೇಲಾಯಿತು. ಈ ಅವಧಿಯಲ್ಲಿ ಇಂಡಿಯಾ ಸರ್ಕಾರದ ವೆಚ್ಚವು ವರ್ಷ ವರ್ಷಕ್ಕೆ ಬಹಳವಾಗಿ ಹೆಚ್ಚಿದೆ. ಈ ಅಧಿಕವೆಚ್ಚಕ್ಕೆ ಹಣ ಪಡೆಯಲು ಸರ್ಕಾರವು ಹಳೆಯ ತೆರಿಗೆಗಳನ್ನು ಹೆಚ್ಚಿಸಿದೆ, ಹೊಸ ತೆರಿಗೆಗಳನ್ನು ವಿಧಿಸಿದೆ; ಜನರಿಂದ ಹಣವನ್ನು ಸಾಲ ಎತ್ತಿದೆ. ಸರ್ಕಾರದ ಹಣಕಾಸಿನ ವ್ಯವಸ್ಥೆಯಲ್ಲಿ ಬಹಳಮಟ್ಟಿನ ಬದಲಾವಣೆಯುಂಟಾಗಿದೆ. ಅಲ್ಲದೆ ಸರ್ಕಾರದ ಹಣಸಂಗ್ರಹವೂ ವೆಚ್ಚಗಳೂ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಬಹಳ ಮಟ್ಟಿನ ಪರಿಣಾಮವನ್ನುಂಟುಮಾಡಿವೆ. ಸರ್ಕಾರದ ಹಣ ಕಾರ್ಯಗಳನ್ನೂ ಅವುಗಳ ಪರಿಣಾಮವನ್ನೂ ಅಂಕಿ ಅಂಶಗಳ ಸಹಾಯದಿಂದ ಪರಿಶೀಲಿಸಬಹುದು.

ಯುದ್ಧಕಾಲದಲ್ಲಿ ರಾಷ್ಟ್ರದ ರಕ್ಷಣೆಯನ್ನು ಬಲಪಡಿಸಲು ಸರ್ಕಾರವು ಅನೇಕ ಬಗೆಯ ಕಾರ್ಯಕ್ರಮವನ್ನು ಕೈಗೊಂಡಿದೆ. ಲಕ್ಷಾಂತರ ಮಂದಿಯನ್ನು ಸೈನ್ಯಕ್ಕೆ ಸೇರಿಸಿದೆ. ಮದ್ದುಗುಂಡು, ಫಿರಂಗಿ, ಟ್ಯಾಂಕು, ವಿಮಾನ, ಯುದ್ಧನಾವೆ ಮೊದಲಾದ ಯುದ್ಧಸಲಕರಣೆಗಳನ್ನು ಅತಿಶಯ ಪ್ರಮಾಣದಲ್ಲಿ ಕೊಳ್ಳುತ್ತಿದೆ. ಈ ದೆಸೆಯಿಂದ ರಕ್ಷಣೆಯ ವೆಚ್ಚವು ಬಹುವಾಗಿ ಹೆಚ್ಚಿದೆ. ಅಲ್ಲದೆ ಸರ್ಕಾರದ ಕೆಲಸ ಹೆಚ್ಚಿರುವುದರಿಂದ ಹೊಸ ಇಲಾಖೆಗಳೂ ಹೊಸ ಸಿಬ್ಬಂದಿಯೂ ಏರ್ಪಡಬೇಕಾಗಿ ಬಂದಿತು. ಧಾರಣೆವಾಸಿ ಏರಿರುವುದರಿಂದ ತನ್ನ ನೌಕರರಿಗೆ ತುಟ್ಟಿಬತ್ಯ ಕೊಡುತ್ತಿದೆ. ಹಿಂದೆ ಕೊಳ್ಳುತ್ತಿದ್ದ ಪದಾರ್ಥಗಳಿಗೆ ಈಗ ಹೆಚ್ಚು ಹಣ ತೆರುತ್ತಿದೆ. ಈ ಸಲುವಾಗಿಯೂ ವೆಚ್ಚ ಬಹಳವಾಗಿ ಹೆಚ್ಚಿದೆ. ಕಳೆದ ಐದು ವರ್ಷಗಳಿಂದ ಇಂಡಿಯಾ ಸರ್ಕಾರದ ರಕ್ಷಣಾವೆಚ್ಚವೂ ಒಟ್ಟು ವೆಚ್ಚವೂ ಯಾವ ಪ್ರಮಾಣದಲ್ಲಿ ಏರುತ್ತಿದೆ ಎಂಬುದನ್ನು ಈ ಕೆಳಗಿನ ಪಟ್ಟಿಯಿಂದ ತಿಳಿಯಬಹುದು.

| ವರ್ಷ | ಒಟ್ಟು ವೆಚ್ಚ (ಕೋಟಿ ರೂ.) | ರಕ್ಷಣೆಯ ವೆಚ್ಚ (ಕೋಟಿ ರೂ.) |
|---|---|---|
| ೧೯೩೮–೩೯ .... | ೮೫.೧೫ | ೪೬.೧೮ |
| ೧೯೩೯–೪೦ .... | ೯೪.೫೭ | ೪೯.೫೪ |
| ೧೯೪೦–೪೧ .... | ೧೧೪.೧೮ | ೭೩.೬೧ |
| ೧೯೪೧–೪೨ .... | ೧೪೭.೨೬ | ೧೦೩.೯೩ |
| ೧೯೪೨–೪೩ .... | ೩೬೯.೬೮ | ೨೯೩.೫೦ |
| ೧೯೪೩–೪೪ (ಅಂದಾಜು) .... | ೩೮೩.೯೨ | ೩೦೦.೯೪ |
| ಯುದ್ಧಕಾಲದ ಒಟ್ಟು ವೆಚ್ಚ | ೧,೧೦೯.೬೧ | ೮೨೧.೫೨ |

[1] Indian Information. Feb. 15, 1944 ಇಂದ ಸಂಗ್ರಹಿಸಿ ಬೆಳಸಿದ್ದು.

ಸರ್ಕಾರವು ಯುದ್ಧಕಾಲದಲ್ಲಿಯೂ ತನ್ನ ವೆಚ್ಚವನ್ನು ಯುದ್ಧಕ್ಕೆ ಮುಂಚಿನ ಪರಿಮಿತಿಯಲ್ಲಿ ಮಾಡಿದ್ದ ಪಕ್ಷದಲ್ಲಿ, ಮೇಲೆ ಹೇಳಿದ ಅವಧಿಯಲ್ಲಿ ಒಟ್ಟು ವೆಚ್ಚವು ೪೨೬ ಕೋಟಿ ರೂ. ಗಳೂ, ರಕ್ಷಣೆಯ ವೆಚ್ಚವು ೨೩೧ ಕೋಟಿ ರೂ. ಗಳೂ ಆಗಬೇಕಾಗಿತ್ತು. ಅಂದರೆ ಯುದ್ಧದ ದೆಸೆಯಿಂದ ಸರ್ಕಾರದ ರಕ್ಷಣಾ ವೆಚ್ಚವು ೫೯೧ ಕೋಟಿ ರೂ. ಅಷ್ಟೂ, ಇತರ ವೆಚ್ಚ ೯೩ ಕೋಟಿ ರೂ. ಅಷ್ಟೂ, ಒಟ್ಟು ವೆಚ್ಚವು ೬೮೪ (೫೯೧ + ೯೩) ಕೋಟಿ ರೂ. ಅಷ್ಟು ಏರಿದೆ.

ವೆಚ್ಚಕ್ಕೆ ತಕ್ಕಂತೆ ಸರ್ಕಾರದ ಆದಾಯವೂ ಹೆಚ್ಚಿದೆ. ತೆರಿಗೆಯ ಮೂಲಕ ಸಾಧ್ಯವಾದಷ್ಟು ಹಣ ಪಡೆಯಲು ಪ್ರಯತ್ನ ನಡೆದಿದೆ. ಹಳೆಯ ತೆರಿಗೆಗಳ ದರಗಳನ್ನು ಏರಿಸಿದೆ. ಹೊಸ ತೆರಿಗೆಗಳು ವಿಧಿಸಲ್ಪಟ್ಟಿವೆ. ಯುದ್ಧ ಮೊದಲಾದಾಗಿನಿಂದ ಸರ್ಕಾರವು ಹಾಕಿರುವ ತೆರಿಗೆಗಳ ವಿವರ ಇದು :

(i) ಅಧಿಕ ಲಾಭದ ತೆರಿಗೆ ಹೊಸದು. ದರ ೬೬⅔%.

(ii) ವರಮಾನ ತೆರಿಗೆ ಮತ್ತು ಕಂಪೆನಿಗಳ ಮೇಲಿನ ತೆರಿಗೆ ದರಗಳು ಏರಿಸಲ್ಪಟ್ಟಿವೆ.

(iii) ಸಕ್ಕರೆ ಮೇಲಿನ ಸುಂಕವನ್ನು ಹಂ. ವೇ. ಗೆ ೨ ರೂ.ಇಂದ ೩ ರೂ.ಗೂ, ಪೆಟ್ರೋಲ್ ಮೇಲಿನ ಸುಂಕವನ್ನು ಗ್ಯಾಲನ್ನಿಗೆ ೧೦ ಆಣೆಯಿಂದ ೧೨ ಆಣೆಗೂ, ಬೆಂಕಿಕಡ್ಡಿ ಮೇಲಿನ ಸುಂಕವನ್ನು ೧೦೦% ರಷ್ಟೂ, ರಬ್ಬರು ಟೈರು ಮತ್ತು ಟ್ಯೂಬುಗಳ ಮೇಲಿನ ಸುಂಕವನ್ನು ೧೦% ರಷ್ಟೂ ಹೆಚ್ಚಿಸಿದೆ.

(iv) ಆಮದು ರಫ್ತುಗಳ ಮೇಲಿನ ಸುಂಕದ ದರವನ್ನು ೨೦% ರಷ್ಟು ಹೆಚ್ಚಿಸಿದೆ.

(v) ಹೊಗೆಸೊಪ್ಪು ಮತ್ತು ವನಸ್ಪತಿ ಎಣ್ಣೆಗಳ ಮೇಲೆ ಹಾಕಿದ ಸುಂಕ ಹೊಸದು.

(vi) ಅಂಚೆ, ಟೆಲಿಫೋನ್ ದರಗಳೂ, ರೈಲ್ವೆ ದರಗಳೂ ಹೆಚ್ಚಿವೆ.

ಈ ರೀತಿಯ ಕಾರ್ಯಕ್ರಮದಿಂದ ಸರ್ಕಾರದ ವರಮಾನ ಎಷ್ಟರಮಟ್ಟಿಗೆ ಹೆಚ್ಚಿದೆ ನೋಡೋಣ.

| ವರ್ಷ | ವರಮಾನ ಹುಟ್ಟುವಳಿ (ಕೋಟಿ ರೂ.ಗಳಲ್ಲಿ) |
|---|---|
| ೧೯೩೮–೩೯ .... | ೮೪.೫ |
| ೧೯೩೯–೪೦ .... | ೯೪.೫೭ |
| ೧೯೪೦–೪೧ .... | ೯೯.೮೮ |
| ೧೯೪೧–೪೨ .... | ೧೩೪.೫೭ |
| ೧೯೪೨–೪೩ .... | ೧೭೬.೭೬ |
| ೧೯೪೩–೪೪ (ಅಂದಾಜು) .... | ೨೫೪.೫೦ |
| ಯುದ್ಧಕಾಲದ ಒಟ್ಟು | ೭೬೦.೨೮ |

೧೯೩೮-೩೯ರ ತೆರಿಗೆ ಹುಟ್ಟುವಳಿಯನ್ನು ಆಧಾರವಾಗಿಟ್ಟುಕೊಂಡರೆ, ೧೯೩೯-೪೦ ರಿಂದ ೧೯೪೩-೪೪ ವರೆಗೆ ತೆರಿಗೆ ಹುಟ್ಟುವಳಿ ೪೨೩ ಕೋಟಿ ರೂ. ಆಗಬೇಕು. ವಾಸ್ತವವಾಗಿ ತೆರಿಗೆಯಿಂದ ಸರ್ಕಾರಕ್ಕೆ ೭೬೦ ಕೋಟಿ ರೂ. ಉತ್ಪತ್ತಿಯಾಗಿದೆ. ಹೊಸತೆರಿಗೆ ಶಿಸ್ತಿನಿಂದ ಹೀಗೆ ೩೩೭ ಕೋಟಿ ರೂ. ಹೆಚ್ಚು ವರವಾನ ಬಂದಂತಾಯಿತು.

ಅಂಚೆ ಮತ್ತು ತಂತಿ ಇಲಾಖೆಯೂ, ರೈಲ್ವೆ ಇಲಾಖೆಯೂ ಎಷ್ಟು ಹಣವನ್ನು ಒದಗಿಸುತ್ತಿದೆ ಎಂಬುದನ್ನು ಈ ಕೆಳಗಿನ ಪಟ್ಟಿ ತೋರಿಸುತ್ತದೆ.

| ವರ್ಷ | ರೈಲ್ವೆ ಇಲಾಖೆ ಒಪ್ಪಿಸಿದ ಹಣ (ಕೋಟಿ ರೂ.) | ಅಂಚೆ ಮತ್ತು ತಂತಿ ಇಲಾಖೆ ಒಪ್ಪಿಸಿದ ಹಣ (ಕೋಟಿ ರೂ.) |
|---|---|---|
| ೧೯೩೯—೪೦ .... | ೪.೩೩ | .೮೯ |
| ೧೯೪೦—೪೧ .... | ೧೨.೧೬ | ೧.೨೫ |
| ೧೯೪೧—೪೨ .... | ೨೦.೧೭ | ೩.೪೧ |
| ೧೯೪೨—೪೩ .... | ೨೦.೧೩ | ೫.೫೮ |
| ೧೯೪೩—೪೪ (ಅಂದಾಜು) .... | ೩೨.೨೭ | ೯.೩೮ |
| | ೮೯.೦೬ | ೨೦.೫೧ |

ಯುದ್ಧಕಾಲದಲ್ಲಿ ತೆರಿಗೆ ಹಾಕುವುದರಿಂದಲೇ ಸರ್ಕಾರದ ವೆಚ್ಚಕ್ಕೆ ಬೇಕಾದಷ್ಟು ಹಣ ಬಾರದು. ಜನರಿಂದ ಹಣವನ್ನು ಸಾಲವಾಗಿಯೂ ಪಡೆಯಬೇಕು. ಇಂಡಿಯಾ ಸರ್ಕಾರವೂ ನಾನಾ ಬಗೆಯ ಸಾಲ ಪತ್ರಗಳನ್ನು ಮಾರಿ ಹಣಪಡೆಯುತ್ತಿದೆ. ಕಳೆದ ಐದು ವರ್ಷಗಳಲ್ಲಿ ಸರ್ಕಾರದ ವೆಚ್ಚವು ಆದಾಯಕ್ಕಿಂತ ೩೪೯ ಕೋಟಿ ರೂ. ಅಧಿಕವಾಗಿದೆ. ಈ ಹಣವನ್ನು ಸರ್ಕಾರವು ಈ ದೇಶದ ಜನರಿಂದಲೇ ಸಾಲವಾಗಿ ಎತ್ತಿದೆ. ಇಲ್ಲಿಯ ವರೆಗೆ ಸರ್ಕಾರವು ಒಟ್ಟು ೫೪೭ ಕೋಟಿ ರೂ.ಅಷ್ಟು ಸಾಲ ಪಡೆದಿದೆ.

ಒಟ್ಟಿನಲ್ಲಿ ಇಂಡಿಯಾ ಸರ್ಕಾರದ ವೆಚ್ಚವನ್ನು ಮಾತ್ರ ಗಣನೆಗೆ 'ತೆಗೆದುಕೊಂಡರೆ, ಸರ್ಕಾರದ ಹಣಕಾಸಿನ ನೀತಿಯು ತೃಪ್ತಿಕರವಾಗಿದೆಯೆಂದು ಹೇಳಬೇಕು. ವೆಚ್ಚದ ಸುಮಾರು ೨/೩ ಭಾಗವನ್ನು ತೆರಿಗೆಯ ರೂಪದಲ್ಲಿಯೂ ಉಳಿದುದನ್ನು ಸಾಲದ ರೂಪದಲ್ಲಿಯೂ ಪಡೆದಿದೆ. ದೇಶದಲ್ಲಿ ಹಣದ ಅತಿಪ್ರಸರಣೆ ಇರದಿದ್ದರೆ ಧಾರಣೆವಾಸಿ ಏರುತ್ತಿರಲಿಲ್ಲ. ವಾಸ್ತವವಾಗಿ ಈಗ ನಮ್ಮ ದೇಶದಲ್ಲಿ ಹಣದ ಅತಿಪ್ರಸರಣೆ ಉಂಟಾಗಿ, ಧಾರಣೆವಾಸಿ ಬಹಳವಾಗಿ ಏರಿದೆ. ಇದಕ್ಕೆ ಮುಖ್ಯಕಾರಣ ಇಂಡಿಯಾ

ಸರ್ಕಾರವು ಬ್ರಿಟಿಷ್ ಸರ್ಕಾರದ ಪರವಾಗಿ ಬಹಳವಾಗಿ ಹಣ ವೆಚ್ಚಮಾಡಬೇಕಾಗಿರುವುದು. ದೇಶರಕ್ಷಣೆಗಾಗಿ ಬ್ರಿಟಿಷ್ ಮತ್ತು ಇಂಡಿಯಾ ದೇಶಗಳು ಅನೇಕ ಜೊತೆ ಕಾರ್ಯಕ್ರಮಗಳನ್ನು (Joint War Measures) ಕೈಗೊಂಡಿವೆ. ಈ ವೆಚ್ಚದಲ್ಲಿ ಒಂದು ಭಾಗವನ್ನು ಬ್ರಿಟಿಷ್ ಸರ್ಕಾರವು ವಹಿಸಿಕೊಳ್ಳುವುದು. ಇಂಡಿಯಾ ದೇಶದಲ್ಲಿ ಮತ್ತು ಹೊರಗೆ ಇರುವ ಬ್ರಿಟಿಷ್ ಸೈನ್ಯಗಳಿಗೆ ಆಹಾರ, ಬಟ್ಟೆ ಮತ್ತು ಯುದ್ಧ ಸಲಕರಣೆಗಳನ್ನು ಇಂಡಿಯಾ ಸರ್ಕಾರವು ಸರಬರಾಜು ಮಾಡುತ್ತಿದೆ. ೧೯೩೯-೪೦ ರಿಂದ ೧೯೪೩-೪೪ ಅಂತ್ಯದ ವರೆಗೆ ಇಂಡಿಯಾ ಸರ್ಕಾರವು ಬ್ರಿಟಿಷ್ ಸರ್ಕಾರದ ಪರವಾಗಿ ವೆಚ್ಚಮಾಡಿರುವ ಒಟ್ಟು ಹಣ ಸುಮಾರು ೯೨೬ ಕೋಟಿ ರೂ. ಈ ವೆಚ್ಚವನ್ನು ಬ್ರಿಟಿಷ್ ಸರ್ಕಾರವೇನೋ ವಹಿಸಿಕೊಂಡಿದೆ. ಆದರೆ ಅವರು ಹಣ ಸಂದಾಯಮಾಡುವುದು ಬ್ರಿಟಿಷ್ ದೇಶದಲ್ಲಿ ಚಲಾವಣೆಯಲ್ಲಿರುವ ಪೌಂಡ್ ಸ್ಟರ್ಲಿಂಗ್ ಲೆಕ್ಕದಲ್ಲಿ. ಬ್ರಿಟಿಷ್ ಸರ್ಕಾರಕ್ಕೆ ಸರಬರಾಜು ಮಾಡುವ ನಮ್ಮ ದೇಶದ ವರ್ತಕರಿಗೆ ರೂಪಾಯಿ ಲೆಕ್ಕದಲ್ಲಿ ಹಣ ಸಲ್ಲಬೇಕು. ಆದ್ದರಿಂದ ಇಂಡಿಯಾ ಸರ್ಕಾರವು ಸ್ಟರ್ಲಿಂಗನ್ನು ರೂಪಾಯಿಗೆ ಬದಲಾಯಿಸುವ ಜವಾಬ್ದಾರಿಯನ್ನು ಹೊತ್ತಿದೆ. ನಮ್ಮ ರಿಸರ್ವ್ ಬ್ಯಾಂಕ್ ಶಾಸನಪ್ರಕಾರ ರಿಸರ್ವ್‌ಬ್ಯಾಂಕು ೧ ರೂ. ಗೆ ೧೮ ಪೆನ್ನಿಯಂತೆ ಎಷ್ಟು ಪ್ರಮಾಣದಲ್ಲಿಯಾದರೂ ಸ್ಟರ್ಲಿಂಗಿಗೆ ರೂಪಾಯನ್ನೂ ರೂಪಾಯಿಗೆ ಸ್ಟರ್ಲಿಂಗನ್ನೂ ಕೊಡಬೇಕು. ಆದ್ದರಿಂದ ಸ್ಟರ್ಲಿಂಗ್ ಆಧಾರದ ಮೇಲೆ ರಿಸರ್ವ್ ಬ್ಯಾಂಕು ರೂಪಾಯಿ ನೋಟುಗಳನ್ನು ಅಚ್ಚುಹಾಕಿ ಕೊಡಲು ಉಪಕ್ರಮಿಸಿತು. ನಮ್ಮ ದೇಶದಲ್ಲಿ ನೋಟುಗಳ ಚಲಾವಣೆ ಅಧಿಕವಾಗಲು ಇದು ಮುಖ್ಯಕಾರಣ. ಇನ್ನೊಂದು ಕಾರಣ ನಮ್ಮ ದೇಶದ ಆಮದಿಗಿಂತ ರಫ್ತು ಹೆಚ್ಚಾಗಿರುವುದು. ಆ ಬಗ್ಗೆಯೂ ನಮಗೆ ಸ್ಟರ್ಲಿಂಗ್ ರೂಪದಲ್ಲಿಯೇ ಹಣ ಸಲ್ಲುವುದು. ಸರಿ. ಈ ಸ್ಟರ್ಲಿಂಗ್ ಆಧಾರದ ಮೇಲೆಯೂ ರೂಪಾಯಿ ನೋಟುಗಳು ಚಲಾವಣೆಗೆ ಬರುವುವು. ಮೂರನೆಯದಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನದ ಎರವು-ಮತ್ತು-ಸಾಲಶಾಸನ ಪ್ರಕಾರ ಇಂಡಿಯಾ ಸರ್ಕಾರವು ಇಂಡಿಯಾ ದೇಶದಲ್ಲಿರುವ ಅಮೇರಿಕಾ ಸೈನ್ಯಕ್ಕೆ ಬೇಕಾದ ಆಹಾರ, ಬಟ್ಟೆ ಮತ್ತು ಅನೇಕ ಯುದ್ಧ ಸಾಮಗ್ರಿಗಳನ್ನು ಸರಬರಾಜು ಮಾಡಬೇಕಾಗಿದೆ. ಈ ರೀತಿಯಲ್ಲಿ ೧೯೪೩-೪೪ ಅಂತ್ಯದ ವರೆಗೆ ಸುಮಾರು ೩೮ ಕೋಟಿ ರೂ. ಅಷ್ಟು ಸಾಮಾನು ಸರಬರಾಜಾಗಿದೆ. ಈ ಹಣ ಕೂಡ ನಮಗೆ ಸ್ಟರ್ಲಿಂಗ್ ರೂಪದಲ್ಲಿ ಬರುತ್ತದೆ.

ಹೀಗೆ ಕೈಸೇರುತ್ತಿರುವ ಸ್ಟರ್ಲಿಂಗಿನ ಸಹಾಯದಿಂದ ಇಂಡಿಯಾ ಸರ್ಕಾರವು ಇಂಗ್ಲೆಂಡಿನಲ್ಲಿ ಮಾಡಿದ್ದ ಸ್ಟರ್ಲಿಂಗ್ ಸಾಲಗಳನ್ನು ತೀರಿಸಿತು. ಯುದ್ಧಕ್ಕೆ ಮುಂಚೆ

ನಮ್ಮ ದೇಶದ ತಲೆಯ ಮೇಲಿದ್ದ ಸ್ಟರ್ಲಿಂಗ್ ಸಾಲವು ಸುಮಾರು ೪೭೦ ಕೋಟಿ ರೂ. ಇತ್ತು. ಅದರಲ್ಲಿ ಇಲ್ಲಿಯವರೆಗೆ ಸುಮಾರು ೪೫೦ ಕೋಟಿ ರೂ. ಅಷ್ಟು ಸಾಲ ಈಗ ತೀರಿದೆ. ಸಾಲ ತೀರಿಸಿಯೂ ಈಗ ರಿಸರ್ವ್ ಬ್ಯಾಂಕಿನ ಕೈಸೇರಿರುವ ಸ್ಟರ್ಲಿಂಗ್ ಪತ್ರ ಸಂಗ್ರಹವೂ ರೂಪಾಯಿ ನೋಟುಗಳ ಚಲಾವಣೆಯೂ ಹೇಗೆ ಹೆಚ್ಚುತ್ತಿದೆ ಎಂಬುದನ್ನು ಈ ಕೆಳಗಿನ ಪಟ್ಟಿಯಿಂದ ತಿಳಿಯಬಹುದು. (ಕೋಟಿ ರೂ.)

| | ೧-೯-೩೯ | ೩೦-೬-೪೦ | ೨೫-೯-೪೨ | ೨೫-೯-೪೩ | ೨೫-೨-೪೪ |
|---|---|---|---|---|---|
| ನೋಟು ಚಲಾವಣೆ .... | ೨೧೭.೧೮ | ೨೫೮.೮೩ | ೫೦೩.೩೫ | ೭೭೪.೪೬ | ೯೮೦.೦೪ |
| ಸ್ಟರ್ಲಿಂಗ್ ಪತ್ರಗಳು .... | ೫೯.೫೦ | ೧೩೧.೫ | ೩೨೯.೭೯ | ೬೪೧.೭೮ | ೭೬೩.೮೪ |

ಸ್ಟರ್ಲಿಂಗ್ ಪತ್ರಗಳ ಸಂಗ್ರಹ ಕಡಮೆಯಾಗುವ ಸೂಚನೆ ಕಾಣಬರುವುದಿಲ್ಲ. ೩೧-೩-೧೯೪೪ರ ವೇಳೆಗೆ ಇಂಡಿಯಾ ರಿಸರ್ವ್ ಬ್ಯಾಂಕಿನಲ್ಲಿ ೯೫೦ ಕೋಟಿ ರೂ. ಅಷ್ಟು ಸ್ಟರ್ಲಿಂಗ್ ಪತ್ರಗಳ ಸಂಗ್ರಹವಾಗುವುದೆಂಬುದಾಗಿ ಇಂಡಿಯಾ ದೇಶದ ಹಣಕಾಸಿನ ಸಚಿವರು ಕೇಂದ್ರ ಶಾಸನ ಸಭೆಯ ಈ ಸಲದ ಬಜೆಟ್ ಭಾಷಣದಲ್ಲಿ ತಿಳಿಸಿದರು.

ಈ ಸ್ಟರ್ಲಿಂಗ್ ಪತ್ರಗಳ ಸಂಗ್ರಹದಿಂದ ನೋಟುಗಳು ಚಲಾವಣೆಗೆ ಬಂದು, ಧಾರಣೆವಾಸಿ ಅತಿಯಾಗಿ ಏರಿ, ದೇಶದ ಆರ್ಥಿಕ ಸ್ಥಿತಿ ಬಹು ಕೆಟ್ಟಿದೆ. ಸರ್ಕಾರವು ಹಣದ ಹೆಚ್ಚಳವನ್ನು ಕಡಮೆಮಾಡಲು ಅನೇಕ ತೆರಿಗೆಗಳನ್ನು ವಿಧಿಸಿರುತ್ತಾರೆ. ಜನರಿಂದ ಹೆಚ್ಚು ಹೆಚ್ಚು ಹಣವನ್ನು ಸಾಲವಾಗಿ ಪಡೆಯುತ್ತಿದ್ದಾರೆ. ಪದಾರ್ಥಗಳ ಬೆಲೆ ಹತೋಟಿ ಮಾಡುತ್ತಿದ್ದಾರೆ. ಆದರೆ ಈ ಕಾರ್ಯಕ್ರಮದಿಂದ ಹೆಚ್ಚಿನ ಪ್ರಯೋಜನವಾಗುತ್ತಿಲ್ಲ. ನಮ್ಮ ದೇಶದ ಆರ್ಥಿಕಸ್ಥಿತಿ ಉತ್ತಮಗೊಳ್ಳಬೇಕಾದರೆ,

(i) ಬ್ರಿಟಿಷ್ ಸರ್ಕಾರವು ಇಂಡಿಯಾ ದೇಶದ ಜನರಿಂದ ರೂಪಾಯಿ ಸಾಲ ಪಡೆಯಬೇಕು. ಬರಿಯ ಸ್ಟರ್ಲಿಂಗ್ ಸಂಗ್ರಹ ತಕ್ಷಣವೇ ನಿಲ್ಲಬೇಕು. ಅಮೇರಿಕಾದವರ ವೆಚ್ಚಕ್ಕೆ ಸರಿಯಾಗಿ ಡಾಲರ್ ಪತ್ರಗಳನ್ನು ಒದಗಿಸಬೇಕು.

(ii) ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳು ನಮ್ಮ ದೇಶಕ್ಕೆ, ಆದಷ್ಟು ತ್ವರಿತವಾಗಿ, ಯಂತ್ರೋಪಕರಣಗಳನ್ನೂ ಭೋಗಸಾಧನಗಳನ್ನೂ ಸರಬರಾಜು ಮಾಡಬೇಕು. ಈಗ ಸಂಗ್ರಹವಾಗಿರುವ ಸ್ಟರ್ಲಿಂಗನ್ನು ಆ ಬಗೆಯ ಕೆಲಸಕ್ಕೆ ಮಾತ್ರ ಬಳಸಿ ಅದರ ಪ್ರಯೋಜನ ಪೂರ್ತಿ ನಮಗೆ ದೊರೆಯುವಂತೆ ಮಾಡಿಕೊಡಬೇಕು.

(iii) ಇಂಗ್ಲೆಂಡ್ ದೇಶದ ಬಂಡವಾಳಗಾರರು ನಮ್ಮ ದೇಶದಲ್ಲಿ ಹೊಂದಿರುವ ಕೈಗಾರಿಕೆ ಮತ್ತು ವ್ಯಾಪಾರ ಸಂಸ್ಥೆಗಳನ್ನು ನಮ್ಮ ದೇಶದ ಜನರಿಗೇ ಯುದ್ಧ ಮುಗಿದ ಕೂಡಲೆ ಮಾರಬೇಕು ; ಅಥವಾ ಯುದ್ಧ ಮುಗಿದ ಕೂಡಲೇ ಇಲ್ಲಿಂದ ಹಿಂದಕ್ಕೆ ಕರಸಿಕೊಳ್ಳಬೇಕು.

ನಮಗೆ ಈಗ ಒದಗಿರುವ ಆರ್ಥಿಕ ಕಷ್ಟಕ್ಕೆ ಮುಖ್ಯಕಾರಣ ನಮ್ಮ ಸರ್ಕಾರವು ಬ್ರಿಟಿಷ್ ಸರ್ಕಾರದ ಒಂದು ಉಪಾಂಗದಂತಿರುವುದು. ರಾಜಕೀಯ ಅಧೀನತೆ ಯಿಂದ ಆರ್ಥಿಕ ಅಧೀನತೆಯುಂಟಾಗಿದೆ. ನಮ್ಮ ದೇಶದ ಹಣದ ವ್ಯವಸ್ಥೆಯು ಇಂಗ್ಲೆಂಡಿನ ಹಣದ ವ್ಯವಸ್ಥೆಯ ಕೈಗೊಂಬೆಯಾಗಿದೆ. ಅದರ ಹಿತತಂತ್ರಕ್ಕೆ ಮಣಿಯುತ್ತದೆ. ರಾಜಕೀಯ ಸ್ವಾತಂತ್ರ್ಯ ಆರ್ಥಿಕ ಸ್ವಾತಂತ್ರ್ಯ ಇವು ಹಕ್ಕಿಯ ಎರಡು ರೆಕ್ಕೆಗಳಿದ್ದಂತೆ: ಎರಡೂ ಸಮವಾಗಿ ಬಡಿದ ಹೊರತು ಹಕ್ಕಿಗೆ ಸ್ವತಂತ್ರವಾದ ಚಲನೆ ಶಕ್ಯವಿಲ್ಲ ; ಅದರ ಜೀವ ಊನ.

— ಎನ್. ಲಕ್ಷ್ಮೀನರಸಿಂಹನ್.

## ಪ್ರಾಚ್ಯಲೇಖನಮಾಲೆ

**Indian Historical Quarterly**—December, 1943. XIX, 4.

**Miscellany**—

'Vikramaditya: President of a Republic' two extracts from a MS of a copy of Abhijnana Sakuntala of Kalidasa.

(i) ಆರ್ಯೆ ರಸಭಾವ ವಿಶೇಷ ದೀಕ್ಷಾಗುರೋಃ ವಿಕ್ರಮಾದಿತ್ಯ ಸಾಹಸಾಙ್ಕಸ್ಯಾಭಿರೂಪ ಭೂಯಿಷ್ಠೇಯಂ ಪರಿಷತ್ | ಅಸ್ಯಾಞ್ಚ ಕಾಲಿದಾಸ ಪ್ರಯುಕ್ತೇನಾಭಿಜ್ಞಾನ ಶಾಕುನ್ತಲ ನಾಮ್ನಾ ನವೇನ ನಾಟಕೇನೋಪಸ್ಥಾತವ್ಯಮಸ್ಮಾಭಿಃ (ನಾನ್ದ್ಯನ್ತೇ).

(ii) ಭವತು ತವ ವಿಡೌಜಾಃ ಪ್ರಾಜ್ಯವೃಷ್ಟಿಃ ಪ್ರಜಾಸು | ತ್ವಮಪಿ ವಿತತಯಜ್ಞೋ ವಜ್ರಿಣಂ ಭಾವಯೇಥಾಃ || ಗಣಶತ ಪರಿವರ್ತ್ತೈರೇವಮನ್ಯೋನ್ಯ ಕೃತ್ಯೈಃ | ನಿಯತ ಮುಭಯ ಲೋಕಾನುಗ್ರಹ ಶ್ಲಾಘನೀಯೈಃ || VII, 34.

The patron of K. was a ruler, whose proper name was Vikramaditya and Sahasanka was his title. The second shows that he was connected with a Gana (a republican state) and probably he was at the head of a confederation of a number of republican states.

Vikramaditya (is associated with) Ujjayini, with the defeat of the Sakas and with the foundation of an Era in B.C. 57.

**Select Contents of Oriental Journals:**

*Bulletin of the School of Oriental and African Studies*: XI—1.

1. 'An Indo-Aryan Language of South India'—H. N. RANDLE.

Saurastra Bhasa—Language called Paṇṭūlī. People migrated from Lata or Saurastra: about 5th century; Seem to have come successively under the influence of Rajasthan forms of speech, and then of Marathi, Telugu and Tamil.

2. 'Dravidian Studies' III: Two developments of Indian K—in Dravidian.—T. BURROW.
3. A Note on an Early Indian Coin—Coin Discovered in Champaran District . . . bears a legend of Brahmi Script of about 1st century B.C.—L. D. BURNETT.

*Aya Ritasa.* This Arya Ṛta is conjectured to have been 'a Minor King or Tribal Chieftain of Videha', bearing a name that probably came from a Puranic dynasty of Videha.

**Journal of the Ganganatha Jha Research Institute**—I, 1. November, 1943.

1. 'Kalpa or World Cycle'—R. SHAMA SASTRI.

ಕಲ್ಪ = Eclipse Cycle of nearly 19 years not a period of 1,000 divine Yugas of 4,320,000 Years.

2. The ಚಂಪೂ—S. K. DE.

3. 'Vikramorvasiya'—A Study—K. RAMA PISHAROTI.

**Journal of the Madras University**—XV, 2. January, 1944.

'Chalukyas of Vemulavada'—SRI. K. A. NILAKANTHA SASTRI.

**Bulletin of the Deccan College R. Institute**—IV, 3. March, 1943.

1. 'Studies in Prehistory of the Deccan' (Maharastra): A Survey of the Godavari District and the Kadva near Niphad—H. D. SANKALIA.
2. 'Kinship terminology and kinship usages in Gujerat and Kathiawad'—1. KARVE.
3. 'Unpaninian Forms and Usages in the Critical Edition of the Mahabharata'—2. Participles—E. D. KULKARNI.
4. 'Totality'—C. R. SANKARAN and M. G. VENKATESIAH.

Kannada Terms dealing with Quantity, Number—Whole and part relationships.

Vol. IV, 4. June, 1943.

1. 'The "Spoken Word" in Sanskrit Literature'—V. M. APTE.
2. 'PRACYA—the Dialect of the VIDUSAKA'—D. G. KOPARKAR.

# ಸಾದರ ಸ್ವೀಕಾರ

**ಖಗೇಂದ್ರ ಮಣಿದರ್ಪಣ** — ಸಂಪಾದಕರು : ಶ್ರೀಗಳಾದ ಎ. ವೆಂಕಟರಾವ್, ಎಂ.ಎ. ಮತ್ತು ವಿದ್ವಾನ್ ಎಚ್. ಶೇಷಯ್ಯಂಗಾರ್ ಅವರು ; ಪ್ರ. : ಮದ್ರಾಸು ವಿಶ್ವವಿದ್ಯಾನಿಲಯ ; ರಾಯಲ್ ೧೦ + xvi + xvii + ೩೩೩ ; ಬೆಲೆ, ರೂ. ೫-೦-೦.

**ಕೈವಲ್ಯದರ್ಪಣ** — ಶ್ರೀ ಎಸ್. ಎಸ್. ಬಸವನಾಳ, ಎಂ.ಎ. ; ಧಾರವಾಡ ; ಕ್ರೌನ್ ೧/೧೬ ೧, ೧೪೫ + ೨೦ ; ಬೆಲೆ, ರೂ. ೧-೪-೦.

**ಪೂರ್ವಪುರಾಣಂ** — ಶ್ರೀ ಕೆ. ಜಿ. ಕುಂದಣಗಾರ್, ಎಂ.ಎ. ; ಬೆಲೆ, ರೂ. ೧-೦-೦.

**ಗತಕಾಲದ ಗುರುತುಗಳು** — ಶ್ರೀ ಎಸ್. ಜಿ. ಪಿಯರ್ಸ್ ; O.U.P. ; ಬೆಲೆ, ರೂ. ೨-೮-೦.

**ಆಯ್ದಕ್ಕಿಯ ಮಾರಯ್ಯ** — ಶ್ರೀ ಚೆನ್ನಬಸವ ದೇಶಿಕೇಂದ್ರ ಸ್ವಾಮಿಗಳು ; ಪು. ೪೪ ; ಬೆಲೆ, ೫ ಆಣೆ.

**ಮುದ್ದಿನ ಕಣಿ ಮತ್ತು ಬೇರೆ ಕತೆಗಳು** — ಶ್ರೀ ಗೋ. ವೆಂ. ಚುಳಕಿ ; ಲಲಿತ ಸಾಹಿತ್ಯಮಾಲಾ, ಧಾರವಾಡ ; ಬೆಲೆ, ೧೨ ಆಣೆ.

**ಸಾಹಿತ್ಯ ರತ್ನ** — ಶ್ರೀ ಅ. ನ. ಕೃಷ್ಣರಾಯರು ; ಲಲಿತ ಸಾಹಿತ್ಯಮಾಲಾ, ಧಾರವಾಡ ; ಬೆಲೆ, ರೂ. ೩-೦-೦.

**ರೋಹಿಣಿ** — ಶ್ರೀ ಕಲಾಕುಮಾರ ; ಸಾಧನ ಪ್ರಕಟನಾಲಯ, ಸಾಗರ ; ಬೆಲೆ, ೬ ಆಣೆ.

**ದೊಡ್ಡಯ್ಯನ ದಾಳಿ — ಕರಿಗಡುಬು** — ಸಾಧನ ಪ್ರಕಟನಾಲಯ, ಸಾಗರ.

**ರಾಜ್ಯಾದಾಯವೂ ಬಡತನವೂ** — ಅನುವಾದಕರು : ಶ್ರೀ ಡಿ. ಎಸ್. ಶರ್ಮ ; ಮಿಂಚಿನಬಳ್ಳಿ ಗ್ರಂಥಮಾಲೆ — ೪ ; ಬೆಲೆ, ರೂ. ೧-೮-೦.

**ಕನ್ನಡ ಸಂಸ್ಕೃತಿ** — ಶ್ರೀ ಎ. ಪಿ. ಕರಮರಕರ ಮತ್ತು ನಾರಾಯಣಶರ್ಮ ; ಮಿಂಚಿನ ಬಳ್ಳಿ ಗ್ರಂಥಮಾಲೆ ; ಬೆಲೆ, ರೂ. ೧-೧೨-೦.

**ರಶಿಯಾದ ರಾಜ್ಯಕ್ರಾಂತಿ** — ಪ್ರ. : ಮಿಂಚಿನಬಳ್ಳಿ ಗ್ರಂಥಮಾಲೆ ; ಬೆಲೆ, ರೂ. ೧-೮-೦.

**ಬೆಟ್ಟದ ಜೀವ** — ಶ್ರೀ ಕೋ. ಶಿ. ಕಾರಂತರು ; ಮನೋಹರ ಗ್ರಂಥಮಾಲೆ, ೫೯-೬೦ ; ಬೆಲೆ, ರೂ. ೧-೧೪-೦.

**ಹೂವಿನ ಹಾಸಿಗೆ** — ಶ್ರೀ ಹೊಯ್ಸಳ, ಮನೋಹರ ಗ್ರಂಥಮಾಲೆ ೬೧ ; ಬೆಲೆ, ರೂ. ೧-೦-೦.

**ಕನಸಿನ ಕೆಳದಿ** — ಶ್ರೀ ಆರ್. ಎಸ್. ಮುಗಳಿ, ಎಂ.ಎ., ಎಲ್.ಟಿ. ; ಮನೋಹರ ಗ್ರಂಥಮಾಲೆ ೬೨ ; ಬೆಲೆ, ರೂ. ೧-೪-೦.

**ಕೆನ್ಸಿಂಗ್ಟನ್ ಪಾರ್ಕ್** — ಶ್ರೀ ಕೆ. ಗೋಪಾಲಕೃಷ್ಣರಾಯರು, ಬಿ.ಎ. ; ಮನೋಹರ ಗ್ರಂಥಮಾಲೆ ೬೩ ; ಬೆಲೆ, ರೂ. ೧-೪-೦.

**ಶಿವರಾಮ ಚರಿತೆ**— ವಿದ್ವಾನ್ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ;

**ಮುದ್ದಣ**— ಶ್ರೀ ತ. ಸು. ಶಾಮರಾವ್, ಬಿ.ಎ. (ಆನರ್ಸ್); ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆ ; ಬೆಲೆ, ೩ ಆಣೆ.

**ಅಲೆಗಳು**— ಶ್ರೀ. ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ. ; ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆ ; ಬೆಲೆ, ೩ ಆಣೆ.

**ಕೀಟಗಳು**— ಶ್ರೀ ಡಿ. ಎಚ್. ವೀರಯ್ಯ, ಎಂ.ಎಸ್‌ಸಿ. ; ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆ ; ಬೆಲೆ, ೩ ಆಣೆ.

**ಆರೋಗ್ಯ ಜೀವನ**— ಶ್ರೀ ಎಂ. ವಿ. ಸುಂದರೇಶನ್, ಎಂ.ಎ., ಎಲ್.ಟಿ.; ಬೆಲೆ, ೫ ಆಣೆ.

**ಸರ್ವೋದಯ**— ಪ್ರ.: ಗ್ರಾಮಸೇವಾ ನಿಲಯ — ೪, ಮೈಸೂರು ; ಬೆಲೆ, ೪ ಆಣೆ.

**ಉಪ್ಪು ಹುಳಿ**— ಪ್ರ.: ಬಿ. ಕೆ. ರಾಮಚಂದ್ರರಾವ್.

**ತುಂಬಿ**— ಪ್ರ.: ಕಿರಿಯರ ಬಳಗ, ಬೆಳಗಾಂವಿ.

**ಕಾಶೀನಾಥ ಮತ್ತು ವೃಂದಾವನ**— ಪ್ರ.: ಸಾಹಿತ್ಯಭಂಡಾರ, ಹುಬ್ಬಳ್ಳಿ.

**ಅಖಂಡೇಶ್ವರ ವಚನ**— ಪ್ರ.: ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ — ೨ ; ಬೆಲೆ, ರೂ. ೨-೦-೦.

**ಬುಡುಬುಡುಕೆ**— ಶ್ರೀ ಜಿ. ವರದರಾಜಾರಾವ್, ಎಂ.ಎ.

**ಮಕ್ಕಳೇ ದೇವರು**— ಪ್ರ.: ಸತ್ಯಶೋಧನ ಪುಸ್ತಕಭಂಡಾರ, ಬೆಂಗಳೂರು.

**ಶ್ರೀಮುಖ**— ಕೈಯಾರ ಕಿಂಞ್ಞಣ್ಣ ರೈ ; ಬೆಲೆ, ರೂ. ೧-೦-೦.

**ಜಹನಾರ**— ಶ್ರೀ ಎಸ್. ವಿ. ಪರಮೇಶ್ವರ ಭಟ್ಟ ; ಬೆಲೆ, ೧೨ ಆಣೆ.

**ದೋಣಿಯ ಬಿನದ ಮತ್ತು ಕವಿ**— ಶ್ರೀ ಪು. ತಿ. ನರಸಿಂಹಾಚಾರ್, ಎಂ.ಎ. ; ಪ್ರ.: ಕಾವ್ಯಾಲಯ, ಮೈಸೂರು ; ಬೆಲೆ, ರೂ. ೧-೦-೦.

**ರಾಗಮಿಲನ**— ಶ್ರೀ ಧನ್ವಂತ; ಪ್ರ.: ಎಚ್. ಎನ್. ರಾವ್ ಬ್ರದರ್ಸ್; ಬೆಲೆ, ೧೨ ಆಣೆ.

**ಕ್ಷುಧಿತ ಪಾಷಾಣ**— ಪ್ರ.: ಮಿತ್ರಮಂಡಲಿ, ಮೈಸೂರು ; ಬೆಲೆ, ೪ ಆಣೆ.

ಶ್ರೀಮಾನ್ ಟಿ. ಪಿ. ಕೈಲಾಸಂ ಅವರ ಕೃತಿಗಳು : ಹೊಸ ಸಂಪುಟ ; ಪ್ರ.

| | | | |
|---|---|---|---|
| **ಪೋಲಿಕಿಟ್ಟಿ** | ೦-೧೨-೦ | **ಗಂಡಸ್ಕತ್ರಿ** | ೦-೪-೦ |
| **ಸತ್ತವನ ಸಂತಾಪ** | ೦-೧೨-೦ | **ವೈದ್ಯನ ವ್ಯಾಧಿ** | ೦-೪-೦ |
| **ಅಮ್ಮಾವ್ರ ಗಂಡ** | ೧- ೪-೦ | **ತಾವರೆಕೆರೆ** | ೦-೮-೦ |
| **ಸೀಕರಣೆ ಸಾವಿತ್ರಿ** | ೦- ೨-೦ | **ಹುತ್ತದಲ್ಲಿ ಹುತ್ತ** | ೧-೦-೦ |

**The Tell—Tale Picture Gallery** (Occult Stories) — By Blavatsky and W. Q. Judge; Publishers: International Book House, Bombay; Rs. 2–0–0

**Citizen Tom Paine**— Howard Fast; Publishers: International Book House, Bombay; Rs. 3–0–0.

**The Yoga of the Saints** (Foreword, Prof. R. D. Ranade) — Prof V. H. Date, M.A., Ph.D.; Publishers: The Popular Book Depot, Bombay.